ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.
ತಾ. ೫—೫—೧೯೩೯.
ವಾರ್ಷಿಕ ಚಂದಾ ರೂ. ೩—೮—೦
ಸಂಪುಟ ೧೮] [ಸಂಚಿಕೆ ೪೮

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

SEASON DEPOSITS

repayable after 4 months
are also accepted
at 3½ per cent per annum.

Banking business of every description transacted.

For Particulars Call at or write to any of our Branches.

52-21

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:–ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
ಮೆಡಿಕಲ್ ಪ್ರಾಕ್ಟೀಷನರ್, ವೀರಾಜಪೇಟೆ.

52-10

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಹೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ವಲ್ಕೆನೈಟ್, ಎಂದೂ ತುಂಡಾಗದ ಸೆಲ್ಯುಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕಾಲಂಶದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವವು.

24

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

The Agricultural &
Industrial Bank Ltd

52-52

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-32)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಸ್ಥಾಪಿತವಾದ್ದು 1907.

ಹೆಡ್ ಆಫೀಸು—ಅಜ್ಮೀರ್.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನಪುರ, ಡೆಹ್ರ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

12-28

ಈ ವಾರದ ಕಥೆ.

ಭೂತವೋ?—ಪ್ರೇತವೋ?

(ಒಂದು ವಿನೋದ ಚಿತ್ರ)

ಕತೆಗಾರರು:–ಶ್ರೀ. 'ಸುಭದ್ರಾತನಯ'

ಇಂದು ಆದಿತ್ಯವಾರ. ಮೂರ್ತಿಯು ಶಾಲೆಗೆ ಹೋಗಿರಲಿಲ್ಲ. ನನಗೆ ಅವನು ಮನೆಗೆ ಬರಲು ಆಮಂತ್ರಣವಿತ್ತಿದ್ದ. ಯಾಕೆಂದು ನನಗರಿಯದು. ಅವನ ಆಶೆಯಂತೆ ಹೋದೆ. ನನಗಾಗಿ ಬಾಗಿಲಲ್ಲಿ ಮೂರ್ತಿ ನಿಂತಿದ್ದ. 'ಒಳ್ಳೇದು, ನೀನು ಬರುವುದಿಲ್ಲಾ ಅಂತ ಗ್ರಹಿಸಿದ್ದೆ,' ಎಂದು ನನ್ನ ಕೈ ಹಿಡಿದು ಒಳಗೆ ಕರೆದ್ಕೊಂಡು ಹೋದ. ನನಗೆ ಬೇಕಾದ ಅತಿಥಿ ಸತ್ಕಾರವೆಲ್ಲಾ ಆಯಿತು. ಅನಂತರ ಮೂರ್ತಿಯು ನನ್ನನ್ನು ನೋಡಿ, 'ಗೆಳೆಯಾ! ನಾನೊಂದು ಕಥೆಯನ್ನು ಬರೆದಿರುತ್ತೇನೆ. ಅದನ್ನು ನಿನಗೆ ಹೇಳಲೆಂದು ನಾನಿನ್ನನ್ನು ಆಮಂತ್ರಿಸಿದ್ದಾಗಿರುತ್ತದೆ'. 'ಹೌದೇ! ನನಗೂ ಕಥೆ ಕೇಳುವುದು, ಓದುವುದು ಎಂದರೆ ತುಂಬಾ ಇಷ್ಟ. ಅದರಲ್ಲಿಯೂ ನನ್ನ ಗೆಳೆಯ ಬರೆದುದೆಂದ ಮೇಲೆ ಆಗತ್ಯ ಓದಲೇ ಬೇಕು. ಎಲ್ಲಿದೆ? ಈಚೆ ತೆಗೆ' ಎಂದೆ ನಾನು. 'ನಿನಗದನ್ನು ಓದಲು ಸಾಧ್ಯವಿಲ್ಲ. ಅದೀಗ ಚಿತ್ತು ನಕಲು (Rough copy) ನಾನೇ ಓದಿ ಹೇಳುತ್ತೇನೆ' ಎಂದ. 'ಆಯಿತು ನಿನ್ನ ಇಚ್ಛೆ' ಎಂದು ನಾನು ಈಸೀಚಯರಿನಲ್ಲಿ ಒರಗಿ ಕುಳಿತುಕೊಂಡೆ. ಮೂರ್ತಿಯು ಓದಲು ಮೊದಲು ಮಾಡಿದ.

ರಾಮಪುರವೆಂಬುವುದು ಒಂದು ಚಿಕ್ಕ ಹಳ್ಳಿ. ಆದರೂ ಬಲು ಸೊಗಸಾಗಿತ್ತು. ಅಲ್ಲಿ ಒಂದು ಚಿಕ್ಕ ಶಾಲೆ ಇತ್ತು. ಆ ಹಳ್ಳಿಯಲ್ಲಿ ಸುಮಾರು 20 ಮನೆಗಳಿದ್ದವು. ಎಂಟು ಹತ್ತು ಮಂದಿ ಶ್ರೀಮಂತರಿದ್ದರು. ಅವರೆಲ್ಲಾ ಒಟ್ಟುಕೂಡಿ ಶಾಲೆಯೊಂದನ್ನು ಕಟ್ಟಿಸಿದರು. ದೊಡ್ಡವರು ಮನಸು ಮಾಡಿದಮೇಲೆ ಕೇಳಬೇಕೆ? ಶಾಲೆಗಂತೂ ಮಂಜೂರಾತಿಯೂ ದೊರಕಿತು. ವರ್ಷಕ್ಕೆ 200 ರೂಪಾಯಿಯೂ ಜಿಲ್ಲಾ ಬೋರ್ಡಿನಿಂದ ದೊರಕುವಂತಾಯಿತು. ಇಬ್ಬರು ಉಪಾಧ್ಯಾಯರು ಬೇಕೆಂದು ತೀರ್ಮಾನ ಅಲ್ಲಿಂದಲೇ ಬಂತು. ಶಾಲೆಯಲ್ಲಿ ಹುಡುಗರು ಸುಮಾರು 60–65 ಮಂದಿ ಇದ್ದರು. ಹೆಚ್ಚಿನವರು ಬಡವರಾದ್ದರಿಂದ ಉಪಾಧ್ಯಾಯರ ವೇತನವಲ್ಲವೂ ಶ್ರೀಮಂತರಿಂದಲೇ ಬೀಳುತಿತ್ತು. ಉಪಾಧ್ಯಾಯರಿಬ್ಬರಿಗೂ ಊಟವು ಎರಡು ಜನ ಆ ಊರ ಮುಖಂಡರಲ್ಲಿ ಆಗುತಿತ್ತು. ಹಾಗೂ ಹೀಗೂ ಮುಖ್ಯೋಪಾಧ್ಯಾಯರಿಗೆ ತಿಂಗಳೊಂದರ 15 ರೂಪಾಯಿ ದೊರಕುತಿತ್ತು. ಮತ್ತೊಬ್ಬರಿಗೆ 12 ರೂ. ಸಿಕ್ಕುತ್ತಿತ್ತು.

ಡಿ. ಬೋರ್ಡಿನಿಂದ ಹಣ ತರಲು ಮುಖ್ಯೋಪಾಧ್ಯಾಯರೇ ಹೋಗಬೇಕಾಗಿದ್ದಿತು. ರಾಮಪುರ ಹಳ್ಳಿಯಲ್ಲವೇ? ಅಲ್ಲಿಂದ ಪಟ್ಟಣಕ್ಕೆ ಹೋಗಲು ಕಡೇ ಪಕ್ಷ ಆರು ಹರದಾರಿಯಾದರೂ ನಡಿಯಬೇಕು. ಅಂತೂ ಅವರಿಗೆ ಹೋಗಿ ಬರಲು ಎರಡು ದಿನಗಳ ಕೆಲಸ. ಸಾಲದುದಕ್ಕೆ ಅವರು ಮುದುಕ. ಸುಮಾರು 50 ದಾಟಿದೆ. ಆಗಾಗ ಕೆಮ್ಮು ಬರುವುದರಿಂದ ನಡೆಯಲೂ ಆಗುತ್ತಿರಲಿಲ್ಲ. ಇಂತಿರಲು ಕಷ್ಟವಿನ್ನು ಹೇಳಬೇಕೆ?

ರಾಮಪುರದ ಪುಟ್ಟು ಶೆಟ್ಟರ ಮಗ ಕೋಟಿ ಶೆಟ್ಟಿಯು ಇಲ್ಲಿಂದ ಕಲಿತು ಪಟ್ಟಣದಲ್ಲಿ ಹೈಸ್ಕೂಲು ವಿದ್ಯಾಭ್ಯಾಸಕ್ಕಾಗಿ ಹೋಗಿದ್ದ. ಮಾಸ್ತರರು ಹೋದರೆ ಅವನಲ್ಲಿ ಬಿಡಾರ. ಆದ್ದರಿಂದ ಅವರಿಗೆ ಪಟ್ಟಣಕ್ಕೆ ಹೋದರೂ ನಿದ್ದೆಗಾಗಲೀ ಇನ್ನು ಊಟ ಉಪಚಾರಕ್ಕಾಗಲೀ ಕಷ್ಟವಾಗುತ್ತಿರಲಿಲ್ಲ. ಆದ್ದರಿಂದ ಅವರಿಗೆ ಸಂಬಳ ಬಂತೆಂದರೆ ಸಂತೋಷ. ಇದು ಹೇಗೂ ಮಾಸ್ತರರಿಗಿರುವುದೇ? ಅದರಲ್ಲಿಯೂ ಅದುತರಲು ಹೋಗುವುದೆಂದರೆ ಮತ್ತಿಷ್ಟು ಇಲ್ಲಿ ಮೇಲೆ ಹೇಳಿದುದೇ.

ಮಾಸ್ತರರಿಗೆ ತನ್ನ ಶಿಷ್ಯನು ಹೈಸ್ಕೂಲಿಗೆ ಸೇರಿದ್ದರಿಂದ ಅವನ ಮೇಲೆ ಬಹಳ ಪ್ರೀತಿ. ಅವನನು ನೇರ ಹೋಗ ತಂದೆಯೊಡನೆ ದೇವನನಿಗೆ ಒಂದು ಬಿ. ಎ. ಎಲ್. ಟಿ. ಮಾಡಿಸಿ ಬಿಡಬೇಕು. ಅವನೊಮ್ಮೆ ನಮ್ಮ ಶಾಲೆಗೆ ಇನ್ಸ್ಪೆಕ್ಟರಾಗಿ ಬರಬೇಕು. ಇದನ್ನು ನನ್ನ ಕಣ್ಣಿಂದ ಕಾಣಬೇಕು. ಸ್ವಾಮಿ! ಎನ್ನುತಿದ್ದರು. 'ದೈವೇಚ್ಛೆ ಪರಮಾತ್ಮ ಕಣ್ಣು ತೆರೆಯಲಿ, ಅನ್ನುತ್ತಿದ್ದರು ಪುಟ್ಟು ಶೆಟ್ರು. ಅವರಿನ್ನು ಅಲ್ಲಿ ಹೋದರೆ ಅವನಿಗೆ ಬುದ್ಧಿವಾದ ಹೇಳುವುದು ಕೇಳಬೇಕೆ? 'ನೋಡು ಕೋಟಿ, ನೀನು ಒಂದು ಇನ್ಸ್ಪೆಕ್ಟರಾಗಿ ನಮ್ಮ ಶಾಲೆಗೆ ಬರಬೇಕು. ಆಗ ನಿನಗೆ ಸಿಕ್ಕುವ ಮನ್ನಣೆ, ನನಗೆ ದೊರೆಯುವ ಗೌರವ, ನಿನ್ನ ತಂದೆಗಾಗುವ ಸಂತೋಷ, ಇವುಗಳನ್ನೆಂತು ವರ್ಣಿಸಲಿ' ಎಂದು ಅಂಬರದಲ್ಲಿ ಅರಮನೆ ಕಟ್ಟುತ್ತಿದ್ದರು. ಅದಕ್ಕೆ ಕೋಟಿಯು 'ಆಗಲಿ ನಿಮ್ಮ ಆಶೆಯಂತೆ ಆ ಪರಮಾತ್ಮ ನಡಿಸಲಿ' ಎನ್ನುತ್ತಿದ್ದನು. ಮಾಸ್ತರರಾಗ 'ದೇವರು ನಡಿಸಿಯಾನು. ನಿಮ್ಮಂಥವರ ಮೇಲೆ ಅವನಿಗೆ ದಯೆ ತೋರೀತು'. ಎಂದು ನಗುತ್ತಾ ಹೇಳುತ್ತಿದ್ದರು.

ಹೀಗೆ ಒಂದು ಸಲ ಮಾಸ್ತರರು ಪಟ್ಟಣಕ್ಕೆ ಬಂದಿದ್ದರು. ಇವನು ಹೈಸ್ಕೂಲಿಗೆ ಸೇರಿದ ನಂತರ ನೋಲಿನ ಮಾತುಗಳೆಲ್ಲವೂ ಮನೆಯಲ್ಲಿ ಅವನನ್ನು ಕಂಡಾಗ. ಇಂದು ಬಂದವರು ಸೀದಾ ಅವನಿರುವಲ್ಲೇ ಬಂದರು. ಅಂದು ಶನಿವಾರವಾದ್ದರಿಂದ ಕೋಟಿಗೆ ಶಾಲೆ ಇರಲಿಲ್ಲ. ಅವರು ಬರುವಾಗ ಅವನೊಂದು ದಪ್ಪವಾದ ಇಂಗ್ಲಿಷ್ ಪುಸ್ತಕವನ್ನು ಓದುತ್ತಿದ್ದ. ಇದನ್ನು ಕಂಡ ಮಾಸ್ತರರಿಗೆ ಅರು ಹರದಾರಿ ನಡೆದ ಆಯಾಸವೊಮ್ಮೆಗೆ ಆರಿ ಹೋಯಿತು. ಭಲೇ, ಕೋಟಿ; ಕಲಿ, ಕಲಿ. ನಿನ್ನಪ್ಪ ನಿನ್ನನ್ನು ಹೆಚ್ಚು ಕಲಿಸಲು ಮನಸು ಮಾಡಿರುವನು. ನಮ್ಮ ಗ್ರಾಮದಲ್ಲಿ ಒಂದು ಹೆಸರು ತರಲು ಆಲೋಚಿಸಿರುವನು ಎಂದರು. ಕೋಟಿಯು ಅವರಿಗೆ ಒಂದು ಕುರ್ಚಿ ಎಳೆದುಕೊಟ್ಟು ಕೂತುಕೊಳ್ಳಲು ಹೇಳಿದನು. ಅಲ್ಲದೆ ಮುಖ ತೊಳೆಯಲು ಒಂದು ಚೆಂಬು ನೀರು ತಂದು ಕೊಟ್ಟ. ಮಾಸ್ತರರು ಮುಖ ತೊಳೆದುಕೊಂಡು ಬಂದು ಕೂತರು. ಮನೆಯ ವಿಷಯಗಳನ್ನು ಮಾಸ್ತರರು ಮೊದಲು ಮಾಡಿದರು. ಎಲ್ಲರೂ ಸೌಖ್ಯವೆಂದರು ನಿನ್ನ ತಂಗಿ ಬೀರಕ್ಕನಿಗೆ ಮಾತ್ರ ಸ್ವಲ್ಪ ಜ್ವರ ಬಂದಿತ್ತು ಈಗ ಅದು ಗುಣವಾಗಿದೆ ಎಂದರು. ನನಗೆ ಟಪ್ಪಾಲು ಕಚ್ಚೇರಿಗೆ ಹೋಗಬೇಕು ಎಂದರು. 'ಆಗಲಿ, ಈಗ ಗಂಟೆ 12½ ಆಯಿತು; ಇನ್ನು 3 ಗಂಟೆಗೆ ಆಯಿತು. ಈಗ ಊಟಕ್ಕೆ ಏಳಿರಿ ಎಂದು ಇಬ್ಬರೂ ಒಟ್ಟಿಗೆ ಹೋದರು.

ಮಾಸ್ತರರಿಗೆ ಊಟ ಮಾಡಿದನಂತರ ಒಂದು ಗಂಟೆ ನಿದ್ದೆ ಮಾಡುವ ರೂಢಿ ಅಂತೆಯೇ ಚಾಪೆಯೊಂದನ್ನು ಬಿಡಿಸಿ ಕೊಟ್ಟ. ಬಿಸಿಲಿಗೆ ಬಂದದ್ದರಿಂದ ಅವರಿಗೆ ನಿದ್ದೆ ಬಂತು. ಗಂಟೆ 2½ ಆದಾಗ ಕೋಟಿಯು ಅವರನ್ನು ಎಬ್ಬಿಸಿದನು. ಇಬ್ಬರೂ ಪೇಟೆಗೆ ಹೋದರು. ಮಾಸ್ತರರು ತಾವು ಬಂದ ಕೆಲಸವನ್ನೆಷ್ಟು ಬೇಗ ತೀರಿಸಿಕೊಂಡರು. ಆ ಮೇಲೆ ಅಲ್ಲಿ ಇಲ್ಲಿ ಎಂದು ತಿರುಗುವಾಗ ಗಂಟೆ ಐದು ಆಯಿತು. ಒಂದು ಕಾಫಿ ಹೊಟೆಲಿಗೆ ಕೋಟಿಯು ಅವರನ್ನು ಕೊಂಡ್ಹೋದ. ಮಾಸ್ತರರಿಗೆ ಮನಸಿನಲ್ಲಿ ಸಂತೋಷವಾಯಿತು. ಆದರೂ ಹೊರಗಿನಿಂದ–ಬೇಡ ಕೋಟಿ ನನಗದರ ಅಭ್ಯಾಸವಿಲ್ಲ. ಕಾಫಿ ಕುಡಿದರೆ ರಾತ್ರೆ ನಿದ್ರೆ ಹತ್ತುವುದಿಲ್ಲ. ಎನ್ನುತ್ತಾ ಮೇಜಿ ಮೇಲಿಟ್ಟ ಕಾಫಿಯನ್ನಷ್ಟು ಕೋಟಿಗಿಂತ ಮೊದಲು ಬರಿದು ಮಾಡಿದರು.

ಹಾದಿಯಲ್ಲಿ ಬರುವಾಗ 'ನೋಡು ಕೋಟಿ! ಹೊಟೆಲು ತಿಂಡಿ ಬಹಳ ಹಾಳು. ಕಾಫಿ ಕೇಳುವುದೇ ಬೇಡ. ನೀನೋದಲಿಲ್ಲವೇ? ಹೋಟೇಲು ತಿಂಡಿಯು ರೋಗಕ್ಕೆ ಮೂಲವೆಂದು ಆರೋಗ್ಯ ಗೀತೆಯಲ್ಲಿ.' ಎಂದು ದೀರ್ಘ ಭಾಷಣ ಮಾಡಿದರು. ಗಂಟೆ 6½ಗೆ ಕೋಟಿಯು ಇರುವ ಸ್ಥಳಕ್ಕೆ ಮುಟ್ಟಿದರು. ಅವನೆಂದಿನಂತೆ ಸಿಗರೇಟೊಂದನ್ನು ಹೊರ ತೆಗೆದು ಮೇಜಿನ ಮೇಲೆ ಇಟ್ಟ. ಊಟಕ್ಕಾಗಿದೆಯೋ ಎಂದು ನೋಡಲು ಒಳಗೆ ಹೋದ. ಮಾಸ್ತರರು ಅದನ್ನು ಕೈಯಲ್ಲಿ ತೆಗೆದು ಅದೇನೆಂದು ಪರೀಕ್ಷಿಸತೊಡಗಿದರು. ಅವರಿಗೆ ಅದು ಗೊತ್ತಾಗಲಿಲ್ಲ. ಹಾಗೂ ಹೀಗೂ ಗಂಟೆ ಎಂಟಾಯಿತು. ಊಟವನ್ನಿಬ್ಬರೂ ತೀರಿಸಿದರು. ಕೋಟಿಯು ಮೇಜಿನ ಮೇಲಿಂದ ಸಿಗರೇಟನ್ನು ತೆಗೆದುಕೊಂಡು ಸೇದಲು ಮೊದಲು ಮಾಡಿದ. ಮಾಸ್ತರರು ಕೋಟಿಯು ಮುಖವನ್ನೇ ಪಿಟ ಪಿಟನೆ ನೋಡುತ್ತಿದ್ದರು. ಕೊನೆಗಂದರು, ಇದನ್ನೆಲ್ಲಾ ಸೇದಿಸಬಾರದು–ನಿನಗೆ ನಾನು ಹೇಳಿದ್ದು ನೆನಪಿಲ್ಲವೇ? 'ಬೀಡಿ ಸಿಗರೇಟೆಲ್ಲಾ ದೇಹಕ್ಕೆ ಕೇಡು' ಎಂದು ಆರೋಗ್ಯ ಪಾಠ ಮಾಡುವಾಗ. ಹೌದು ಸರ್, ಇನ್ನಿದನ್ನು ಎಳೆಯಲಾರೆ. ಎಂದು ದೂರಕ್ಕೆಸೆದ. ಮಾಸ್ತರರು ಸಂತೋಷಪಟ್ಟರು.

ಕೋಟಿ ಮತ್ತು ಮಾಸ್ತರರು ಮಲಗುವ ಆಲೋಚನೆ ಮಾಡಿದರು. ಕೋಟಿಯು ತನ್ನ ಹಾಸಿಗೆ ಬಿಚ್ಚಿದ. ಮಾಸ್ತರರಿಗೇನು ಕೊಡಲಿ? ಎಂದು ಯೋಚಿಸುವಾಗ ಮೊನ್ನೆ ಆಸ್ಪತ್ರೆಯಲ್ಲಿ ಏಲಂಗೆ ಸಿಕ್ಕಿದ ಹಾಸಿಗೆ ಆಚೆ ಕೋಟಡಿಯಲ್ಲಿದ್ದುದು ನೆನಪಾಗಿ ಇದನ್ನು ತಂದು ಬಿಚ್ಚಿದ. ಹತ್ತಿರ ಒಂದು ಚೆಂಬು ನೀರು, ಇದಲ್ಲಾ ಇಟ್ಟುಕೊಂಡ. ಇಬ್ಬರೂ ಮಲಗಿದರು. ಕೋಟಿಗೆ ನಿದ್ದೆ ಬಂತು. ಮಾಸ್ತರರಿಗೆ ನಿದ್ದೆ ಬರಲೇ ಇಲ್ಲ. ಸುಮಾರು 12 ಗಂಟೆ ಆಗಬಹುದು. ಮಾಸ್ತರರೆದುರಿಗೆ ಅವ್ಯದೋ ಒಂದು ಹೆಣ್ಣು ವ್ಯಕ್ತಿಯು ಬಂದು ನಿಂತಂತೆ ಕಂಡಿತು. ಕಟ್ಟ ಹುಡುಗ, ರಾತ್ರಿ ಹೆಂಗಸರನ್ನು ಬರಿಸಿಕೊಳ್ಳುವವು. ಎಂದು ಗ್ರಹಿಸುವಷ್ಟರಲ್ಲಿ ಅದು 'ಏಳು ನನ್ನ ಹಾಸಿಗೆಯಿಂದ–ಇಲ್ಲವಾದರೆ ನಿನ್ನ ಪ್ರಾಣವನ್ನೀಗ ಹಿಂಡಿ ಬಿಡುತ್ತೇನೆ' ಎಂದು ಕಣ್ಣು ಕೆರಳಿಸಿತು. ಮಾಸ್ತರರಿಗೆ ಹಣದ ನೆನಪಾಯಿತು. ಥಕ್ಕನೆ ತಲೆ ಮೇಲಿಟ್ಟಿದ್ದ ಕೋಟಿಗೆ ಕೈ ಹಾಕಿದರು. ಆಗ ಕೋಟಿನ ಕಿಸೆಯಲ್ಲಿದ್ದ ಚೂರಿ ಸಿಕ್ಕಿತು. ಅದನ್ನು ಬಿಡಿಸಿ ಧೈರ್ಯ ಮಾಡಿಕೊಂಡು–'ನಿನ್ನನ್ನೀಗ ಇದರಿಂದ ಇರಿಯುತ್ತೇನೆ' ಎಂದು ಅರ್ಭಟಿಸಿ ಎದ್ದು ಕುಳಿತರು. ಜೊತೆಗೆ ಕೋಟಿ ಎಚ್ಚರವಾಗಿ ಲೈಟು ಮಾಡಿದ. ಮಾಸ್ತರರು ಚೂರಿ ಬಿಡಿಸಿ ಹಿಡಿದು ಕಣ್ಣು ಕೆರಳಿಸುತ್ತಾರೆ. ನನ್ನನ್ನು ಈಗಿವರು ಕೊಲ್ಲುತ್ತಾರೆ. ಎಂದು ಗ್ರಹಿಸಿ ಹತ್ತಿರ ನೋಡಲು ಏನು ಕಾಣಲಿಲ್ಲ. ತಲೆ ಹತ್ತಿರವಿದ್ದ ನೀರಿನ ಚೆಂಬಿಗೆ ಕಂಡಿತು. ಇದರಿಂದಲಾದರೂ ಮಾಸ್ತರರ ಕೈಗಂಟೆ ಗೊಂದು ಕೊಡುತ್ತೇನೆ ಎಂದು ಗ್ರಹಿಸಿ ಅದನ್ನು ತೆಗೆದು ಪ್ರಯೋಗಿಸಿದ. ಅದರಲ್ಲಿದ್ದ ನೀರು ಅವರ ಮುಖದ ಮೇಲೆ ಬಿತ್ತು. ಅವರು ದೊಪ್ಪನೆ ಹಾಸಿಗೆಗೆ ಬಿದ್ದರು. ಒಡನೆ ಮುಂಚಿನಂತೆ ಮಲಗಿದರು. ಮಾತಾಡಲಿಲ್ಲ. ಕೋಟಿಗೆ ಭಯವಾಯಿತು. ಹತ್ತಿರ ಹೋಗಿ ದೀಪ ಹಚ್ಚಿದನು. ಬೆಳಗಿನ ತನಕ ಸುಮ್ಮನೆ ಕೂತನು!

ಮಾಸ್ತರರು ಎದ್ದ. ನಡೆದ ಕಥೆ ಕೋಟಿ ಹೇಳಿದನು. ಹೌದು ನನ್ನ ಕಣ್ಣೆದುರಿಗೆ ಒಂದು ಸ್ತ್ರೀಯು ಬಂದು ಜೋರು ಮಾಡಿತು. ಆಗ ತಾನೇ ನನಗ ನಿದ್ದೆ ಬಂದಿತಷ್ಟೆ. ಹೆದರಿದ ಹಾಗಾಯಿತು. ಎಂದರು. ಆಗಿರಬಹುದು, ಆ ಹಾಸಿಗೆಯು ಮೊನ್ನೆ ಏಲಂಗೆ ಆಸ್ಪತ್ರೆಯಿಂದ ಪಡೆದುಕೊಂಡದ್ದು. ಯಾರಾದರೂ ಸತ್ತಿದ್ದರೋ ಏನೋ? ಅದರಲ್ಲಿ! ಎಂದು ಮಾಸ್ತರರು ಹೇಳಿದರು. ಹೇಗೆ ಹೇಳುವುದು? ಕೋಟಿ ಎಂದ. ಹಾಗಾದರೆ ಅದು ಭೂತವೋ–ಅಲ್ಲ ಆ ಹಾಸಿಗೆಯಲ್ಲಿ ಸತ್ತವರ ಪ್ರೇತವೋ? ಎಂದು ಮಾಸ್ತರರು ಬಾಯಿಗೆ ಬಾಯಿ ಬಿಟ್ಟರು.

ಮೂರ್ತಿ ಕೇಳಿದ. ಕಥೆ ಹೇಗಿದೆ? ಎಂದು. ಚೆನ್ನಾಗಿದೆ ಎಂದೆ. ಹೌದು ತಿರುಮಲೇಶ್ವರ, ಇದಕ್ಕೆ ಹೆಸರು ಏನೆಂದು ಕೊಡಲಿ? ಎಂದ ಆಗ ನಾನು ಮಾಸ್ತರರು ಹೇಳಿಲ್ಲವೇ ಕೊನೆಗೆ 'ಅದಿನ್ನು ಭೂತವೋ ಸತ್ತವರ ಪ್ರೇತವೋ? ಎಂದು, ಅದೇ ಹೆಸರು ಕೊಡು ಆಗಲಿ ಎಂದ ಮೂರ್ತಿ. ಹಾಗಾದರೆ ಇದಕ್ಕೆ ಭೂತವೋ?—ಪ್ರೇತವೋ? ಎಂದು ಬರೆ, ಎಂದು ನಿರ್ಧರಿಸಿ ಹೇಳಿದೆ. ಆಗಲಿ ಎಂದು ಹೇಳಿ ಮೂರ್ತಿ ಒಳಗೆ ಹೋದ. ಬರುವಾಗ ಕೈಯಲ್ಲಿ ಎರಡು ದವರಾ ಕಾಫಿ ಇತ್ತು.

—೦೦—

ಹಿಂಸಾ ತತ್ವದಿಂದ ಸ್ವಾತಂತ್ರ್ಯ ಸಾಧ್ಯವೇ?

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಆಧುನಿಕ ನಾಗರೀಕತೆಯ ಅಗ್ರಸ್ಥಾನದಲ್ಲಿರುವ ಬ್ರಿಟಿಷರನ್ನು ಯುದ್ಧೋಪಕರಣಗಳಿಂದ ಎದುರಿಸಬೇಕಾದರೆ ನಾವೂ ಆ ನಾಗರೀಕತೆಯನ್ನು ಪರಿಗ್ರಹಿಸಬೇಕು. ಆದರೆ ಆ ನಾಗರೀಕತೆಯು ಅಧೋಗತಿಗೆ ರಾಜಮಾರ್ಗವೆಂಬುದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಹಿಂಸಾತತ್ವಾವಲಂಬನೆಯಿಂದ ಭಾರತವು ಸ್ವಾತಂತ್ರ್ಯವನ್ನು ಪಡೆದರೂ ಈ ನಾಗರೀಕತೆಯ ಅಂಟು ನಮ್ಮಲ್ಲಿರುವತನಕ ಅದು ಸ್ವಾತಂತ್ರ್ಯವಲ್ಲ, ಏಕೆಂದರೆ ಅದರಿಂದ ಜನತೆಗೆ ಸುಖವಿಲ್ಲ; ಭಾರತಕ್ಕೆ ಶ್ರೇಯಸ್ಸಿಲ್ಲ, ಆರ್ಷೇಯ ಭಾರತ ನಾಗರೀಕತೆಗೆ ಎಡೆಯಿಲ್ಲ.

ಇದು ಹೊಸ ತತ್ವವೇನೂ ಅಲ್ಲ. ಪುರಾತನ ರಾಜಾಧಿರಾಜರ ಕಾಲದಿಂದಲೂ ನಡೆದುಬರುವಂಥಾ ಒಂದು ತತ್ವ. ಈ ತತ್ವವನ್ನವಲಂಭಿಸಿಯೇ ಅನೇಕ ಬಲಾಢ್ಯರು ತಾವೇ ತಾವಾಗಿ ಮೆರೆದರು. ವಿಶಾಲ ಸಾಮ್ರಾಜ್ಯಗಳನ್ನಾಳಿದರು. ಅದರ ಆಧಾರದ ಮೇಲೆಯೇ ಇಂದಾದರೂ ಭಾರತವು ತನ್ನ ಸ್ವಾತಂತ್ರ್ಯವನ್ನು ಗಳಿಸಲಿಕ್ಕೆ ಹಿಂಸಾ ತತ್ವವನ್ನು ಉಪಯೋಗಿಸಬೇಕು. ಬ್ರಿಟಿಷರನ್ನು ಎದುರಿಸಿ ನಮ್ಮ ಮೂಲಭೂತ ಹಕ್ಕನ್ನು ಸಂಪಾದಿಸಬೇಕು. ಇಂದಿನ ಭಾರತದ ಅಹಿಂಸಾ ತತ್ವದಿಂದ ನಮಗೆ ಸ್ವರಾಜ್ಯ ಲಭಿಸುವುದು ಸುಲಭಸಾಧ್ಯವಲ್ಲ. ಮನೆಯಲ್ಲಿ ಕಳ್ಳರು ನುಗ್ಗಿ ದರೋಡೆ ಮಾಡುತ್ತಿರುವಾಗ ಅಹಿಂಸಾ ಎಂದು ಅವರನ್ನೆದುರಿಸದಿದ್ದರೆ ಕಳ್ಳರು ತಾವೇ ಹೋಗುವರೇನು? ಆದ್ದರಿಂದ ಹಿಂಸಾ ತತ್ವದಿಂದಲೇ ಭಾರತಕ್ಕೆ ಶ್ರೇಯಸ್ಸಲ್ಲದೆ ಬೇರಿಲ್ಲ. ನಮ್ಮ ಧ್ಯೇಯ ಸಾಧನೆಯ ಬಗ್ಗೆ ಇರುವ ಈ ಹಿಂಸಾ ಮತ್ತು ಅಹಿಂಸಾ ಮಾರ್ಗಗಳಲ್ಲಿ ಕಷ್ಟತಮವಾದರೂ ಹತ್ತಿರವಿರುವ ಹಿಂಸಾ ಮಾರ್ಗವನ್ನು ಕೈಕೊಂಡರೇನೇ ನಾವು ಗುರಿಯನ್ನು ಮುಟ್ಟುವೆವಲ್ಲದೆ ಅಹಿಂಸಾ ತತ್ವದ ಅರ್ಜಿಗಳನ್ನು ಬರೆಯುವ, ಕಾಯಿದೆ ಭಂಗ ಚಳವಳವನ್ನು ಹೂಡುವ ಕಾರ್ಯಕ್ರಮಗಳಿಂದ ಸ್ವರಾಜ್ಯವು ಖಂಡಿತಾ ಲಭಿಸದೆಂದು ಹೇಳುವವರಿರುವರು. ಯಾರಿಗಾದರೂ ಇದು ನಿಜವೆಂದು ಗೋಚರಿಸುವುದು ಸಾಧ್ಯವು. ಆದರೆ ಅದನ್ನು ಆಳಕ್ಕೆ ವಿಚಾರಿಸಿ ನೋಡಿದರೆ ಅದರ ಭಿನ್ನಗಳು ವಿಶದವಾಗುವವು.

ಅನೇಕ ರಾಷ್ಟ್ರಗಳು ಈ ತತ್ವಾವಲಂಭನೆಯಿಂದ ರಾಜ್ಯವಿಸ್ತರಿಸುತ್ತಿರುವಂತೆ ಯೂ ಬ್ರಿಟಿಷರು ಈ ತತ್ವದಿಂದಲೇ ವಿಶಾಲ ಸಾಮ್ರಾಜ್ಯವನ್ನು ಪಡೆದುಕೊಂಡಂತೆ ಭಾರತವು ಈ ತತ್ವವನ್ನೇ ಅನುಸರಿಸಿ ಸ್ವತಂತ್ರವಾಗಬೇಕಾದರೆ ಸೈನ್ಯವು ತಯಾರಾಗಬೇಕು. ವಿಮಾನಪಡೆ, ಹಡಗುಪಡೆ ಇವೇ ಮೊದಲಾದ ಆಧುನಿಕ ಯುದ್ಧೋಪಕರಣಗಳಾಗಬೇಕು. ಅರ್ಥಾತ್ ಆಧುನಿಕ ನಾಗರೀಕತೆಯ ತುತ್ತತುದಿಗೇರಬೇಕು. ಇದರಿಂದ ನಮಗೆ ಸ್ವರಾಜ್ಯ ಲಭಿಸಿತೆನ್ನುವ. ಆದರೆ ಇಂದು ನಾವು ಬ್ರಿಟಿಷರ ನಾಗರೀಕತೆಯನ್ನು ತಿರಸ್ಕರಿಸುತ್ತಿರುವೆವು. ಏನಾದರೂ, ಭಾರತವು ಆ ಆಧುನಿಕ ನಾಗರೀಕತೆಯ ಕರಾಳ ಕೈಗಳೊಳಗೆ ಸಿಲುಕಬಾರದೆಂದು ಪ್ರಯತ್ನಿಸುತ್ತಿರುವೆವು. ಅಂದಮೇಲೆ ಹಿಂಸಾ ಚರಣೆಯಿಂದ ನಮ್ಮ ಧ್ಯೇಯ ಸಂಪಾದನೆಯನ್ನು ಮಾಡಿದ್ದರ ಪುರುಷಾರ್ಥವೇನು? ಸ್ವರಾಜ್ಯ ಲಭಿಸಿಯೂ ಭಾರತವು ಆಧುನಿಕ ನಾಗರೀಕತೆಯ ಅಂಧಾನುಕರಣೆಯಲ್ಲಿ ಮಗ್ನವಾಗಿದ್ದರೆ ಪ್ರಯೋಜನವೇನು? ಆಳುವ ಜನಾಂಗವನ್ನು ಬದಲಾಯಿಸಿ ಪುನಹ ಅದೇ ತತ್ವದಿಂದ ರಾಜ್ಯಭಾರ ಮಾಡುವ ಹವ್ಯಾಸವೇಕೆ? ಇಂದು ಬ್ರಿಟಿಷ್ ಜನರಲ್ಲಿ ಭಾರತೀಯರಿಗೆ ದ್ವೇಷವಿರುವುದೇನು? ಇಲ್ಲ, ಯಾವನೊಬ್ಬ ಬ್ರಿಟಿಷನಾದರೂ ಇಂದು ಅತ್ಯಾಚಾರಗಳನ್ನು ವಿರೋಧಿಸಿ ಭಾರತೀಯರ ಸ್ವಾತಂತ್ರ್ಯಕ್ಕಾಗಿ ಶ್ರಮಿಸುವನಾದರೆ ಅವನು ಖಂಡಿತವಾಗಿಯೂ ಭಾರತೀಯನೆಂದೇ ಪರಿಗಣಿಸಲ್ಪಡುವನು. ಆದ್ದರಿಂದ ಹಿಂಸಾ ಚರಣೆಯಿಂದ ಲಭಿಸುವ ಸ್ವಾತಂತ್ರ್ಯವು ಸ್ವರಾಜ್ಯದ ಮೂಲೋದ್ದೇಶಗಳನ್ನು ಒಳಗೊಳ್ಳಲಾರದು. ಹಿಂಸಾ ತತ್ವಾವಲಂಬನದಿಂದ ಸ್ವರಾಜ್ಯ ಪಡೆದು ಜನಸಮುದಾಯದ ಮೇಲ್ಮೆಯಿಂದ ವರ್ತಿಸಿ, ಇಂದಿನ ಆಧುನಿಕ ನಾಗರೀಕತೆಯನ್ನು ಬದಿಗಿರಿಸಿ ಆರ್ಷೇಯವಾದ ಭಾರತ ನಾಗರೀಕತೆಯನ್ನವಲಂಬಿಸಿ ಮೆರೆಯುವುದು ಅಸಾಧ್ಯ. ಹಾಗೆ ಕಾಂಕ್ಷಿಸುವವರಿದ್ದರೆ ಅವರ ಆಸೆಯು ಯಾವುದೋ ಒಂದು ಗಿಡವನ್ನು ನೆಟ್ಟು ಅದರಲ್ಲಿ ಗುಲಾಬಿ ಹೂವಾಗಬೇಕೆಂದು ಪ್ರಯತ್ನಿಸಿದಂತೆ. ಸಮುದ್ರವನ್ನು ದಾಟಬೇಕಿದ್ದರೆ ಹಡಗಿನ ಸಹಾಯದಿಂದ ಸಾಧ್ಯವಾಗುವುದೇ ವಿನಹ ಗಾಡಿಯಲ್ಲಿ ಕುಳಿತುಹೋದರೆ ಗಾಡಿಯೂ, ಮನುಷ್ಯನೂ ಸಮುದ್ರದ ಆಳನೋಡಬೇಕಾಗುವುದಿಲ್ಲವೇನು? 'ಬಿತ್ತಿದಂತೆ ಫಲ ಅನುಭವಿಸಬೇಕಿದೆ. ಆದ್ದರಿಂದ ಯಾವ ಸಂದರ್ಭದಲ್ಲಿ ಹೇಗೆ ಮಾಡಬೇಕೆಂಬುದನ್ನು ವಿಚಾರಿಸಿ ತಿಳಿಯಬೇಕು. ಒಂದೇ ಧ್ಯೇಯಸಾಧನೆಗೆ ಅನೇಕ ಮಾರ್ಗಗಳಿರುವವು. ಉದಾಹರಣೆಗೆ ಒಬ್ಬನಲ್ಲಿ ಒಂದು ಗಡಿಯಾರವಿದೆಯೆಂದು ಭಾವಿಸುವ. ಅದನ್ನು ನಾವು ಕಿತ್ತುಕೊಳ್ಳಬೇಕಾದರೆ ಅವನೊಡನೆ ಜಗಳ ಮಾಡಬೇಕು. ಕ್ರಯಕ್ಕೆ ಪಡಕೊಳ್ಳುವದಾದರೆ ದುಡ್ಡು ಕೊಡಬೇಕು. ಅದನ್ನು ಬಹುಮಾನವಾಗಿ ಪಡೆಯಬೇಕಾದರೆ ಅತನನ್ನು ತೃಪ್ತಿಪಡಿಸಬೇಕು. ಮೊದಲನೇ ಮಾರ್ಗದಿಂದ ಲಭಿಸಿದರೆ ಅದಕ್ಕೆ ಕಸಿದುಕೊಂಡದ್ದೆಂದೂ, ೨ನೇ ಮಾರ್ಗದಲ್ಲಿ ಅದು ಸ್ವಯಾರ್ಜಿತವೆಂದೂ, ಮೂರನೇ ಮಾರ್ಗದಲ್ಲಿ ದಾನವೆಂದೂ ಕರೆಯಲ್ಪಡುವದು. ಆದ್ದರಿಂದ ಯಾವ ಯಾವ ಮಾರ್ಗವನ್ನನುಸರಿಸುತ್ತೇವೋ ಅದಕ್ಕನುಗುಣವಾದ ಪ್ರತಿಫಲ ದೊರೆಯುವದೆಂದು ಇದರಿಂದ ವ್ಯಕ್ತವಾಗುವುದು.

ಈಗ ಮನೆಯಲ್ಲಿರುವ ಕಳ್ಳನ ಉದಾಹರಣೆಯನ್ನು ತೆಗೆದುಕೊಳ್ಳುವ. ಮನೆಗೆ ನುಗ್ಗಿದ ಕಳ್ಳನನ್ನು ಯಾವುದಾದರೊಂದು ವಿಧಾನದಿಂದ ಓಡಿಸಿಬಿಡುವ ಅವರ್ತನೆಯು ತಪ್ಪು. ಕದಿಯಲಿಕ್ಕೆ ಬಂದವನು ತಂದೆಯಾಗಿದ್ದರೆ ಒಂದು ವಿಧಾನವನ್ನೂ, ಸ್ನೇಹಿತನಿದ್ದಪಕ್ಷ ಬೇರೆ ಮಾರ್ಗವನ್ನೂ, ಅಪರಿಚಿತನಾಗಿದ್ದಪಕ್ಷ ಮತ್ತೊಂದು ವಿಧಾನವನ್ನೂ, ಪೂರ್ಣ ಸುಸಜ್ಜಿತ ಸೈನಿಕನಾಗಿದ್ದಪಕ್ಷ ಮಗುದೊಂದು ವಿಧಾನವನ್ನೂ ಅನುಸರಿಸಬೇಕಿದೆ. ಎಲ್ಲದಕ್ಕೆ ಒಂದೇ ವಿಧಾನವನ್ನು ಕೈಕೊಳ್ಳುವದು ದುಸ್ಸಾಧ್ಯ. ಸುಸಜ್ಜಿತನಾದ ಒಬ್ಬ ಸೈನಿಕನೇ ದರೋಡೆಗೆ ಬಂದನೆನ್ನುವ. ನೀವು ಅವನನ್ನು ನಿಮ್ಮ ಸ್ವಾರ್ಥಕ್ಕಾಗಿ ಶಿಕ್ಷಿಸದಿದ್ದರೂ ನೆರೆಯವರ ಹಿತದೃಷ್ಟಿಯಿಂದ ಶಿಕ್ಷಿಸಲೆಳಸುವಿರಿ. ಆದ್ದರಿಂದ ಕೆಲವು ಸುಸಜ್ಜಿತ ಜನರನ್ನು ಕೂಡಿಸಿ ಅವನನ್ನು ಎದುರಿಸಬೇಕಾಗುವದು. ಇದರಿಂದ ಸಿಟ್ಟುಗೊಂಡ ದರೋಡೆಕಾರನೂ ತನ್ನ ಸ್ನೇಹಿತರಿಂದೊಡಗೂಡಿ ಬರುವನು. ಪ್ರತ್ಯಕ್ಷ ಕದನವಾಗುವದು. ನೆರೆಯವರಿಗೆ ಸಹಾಯ ಮಾಡಲೆಂದು ಬಯಸಿ ದರೋಡೆಕಾರನನ್ನು ಶಿಕ್ಷಿಸಲು ಯತ್ನಿಸಿದ್ದರ ಫಲಿತಾಂಶವಾಗಿ ಇಡೀ ಊರೇ ಕಲಹದಿಂದ ತುಂಬಿ ಗೊಂದಲಕ್ಕೀಡಾಯಿತು. ಅಲ್ಲದೆ ಯಾವಾಗ ದರೋಡೆಕಾರರು ಹಾವಳಿ ಮಾಡುವರೋ ಎಂಬ ಭೀತಿಯು ದಿನೇ ದಿನೇ ಹೆಚ್ಚುವಂತಾಯಿತು. ಕಳ್ಳನು ಮನೆನುಗ್ಗಿದರೆ ಅವನ ಬೇಕುಬೇಡಿಕೆಗಳನ್ನು ವಿಚಾರಿಸಿ ತೊಂದರೆಯನ್ನು ನಿವಾರಿಸುವದೊಂದು ಉಪಾಯ. ಅನಂತರವೂ ಅವನು ತನ್ನ ಅಭ್ಯಾಸವನ್ನು ಬಿಡದಿದ್ದರೆ ಮನೆಯ ಬಾಗಿಲುಗಳನ್ನು ತೆರೆದಿಟ್ಟು ಸಾಮಾನುಗಳನ್ನು ಕಳ್ಳನು ಸುಲಭವಾಗಿ ಎತ್ತಿಕೊಂಡು ಹೋಗುವಂತೆ ಇಡಬೇಕು. ಈ ಸದ್ಗುಣದಿಂದ ಕ್ರಮೇಣ ಕಳ್ಳನ ಹೃದಯವು ಕರಗಿ ಅವನು ತನ್ನ ಹೀನವೃತ್ತಿಯನ್ನು ಬಿಡದೆ ಇರಲಿಕ್ಕಿಲ್ಲ. ಆದ್ದರಿಂದ ನಾವು ಅನುಸರಿಸುವ ಮಾರ್ಗದಂತೆ ಫಲ ಸಿಗುವದೆಂಬುದಕ್ಕೆ ಇದೇ ನಿದರ್ಶನ. ಮುಯ್ಯಿಗೆ ಮುಯ್ಯಿ ಮಾಡುವದರಿಂದ ಅವರ್ಣನೀಯ ಅನಾಹುತಗಳೂ, ಸದಾಚಾರ ಸದ್ಬೋಧನೆಯಿಂದ ಶಾಶ್ವತ ಸುಖ ಸಂಪತ್ತೂ ಲಭಿಸುವವರಲ್ಲಿ ಸಂಶಯವಿಲ್ಲ. ಆದ್ದರಿಂದ ಹಿಂಸಾ ಚರಣೆಯಿಂದ ತೊಂದರೆಬರುವುದೇ ವಿನಹ ಅಹಿಂಸೆಯಿಂದ ಎಂದಿಗೂ ಬಾರದು.

ಅಹಿಂಸಾವಾದಿಗಳು ಬರೇ ಅರ್ಜಿ ಬರೆಯುವವರೆನ್ನುವ ಆ ವಿಚಾರವನ್ನು ತೆಗೆದುಕೊಂಡರೆ ಬೆಂಬಲವಿಲ್ಲದ ಒಂದು ಅರ್ಜಿಯು ನಿರರ್ಥಕವೆಂಬುದು, ಎಲ್ಲರಿಗೂ ತಿಳಿದ ವಿಚಾರ. ಆದರೂ ಅರ್ಜಿಗಳು ಒಂದು ಒಳ್ಳೇದನ್ನು ಮಾಡುವವು. ಜನರನ್ನು ಅವು ತರಬೇತು ಮಾಡುವದಲ್ಲದೆ ಜನರಲ್ಲಿ ತಮ್ಮ ಸ್ಥಿತಿಯ ಪೂರ್ಣ ಪರಿಭಾವನವನ್ನು ಬೇರೂರಿಸುವುವು. ಈ ಅರ್ಜಿಗಳಲ್ಲಿ ಎರಡು ವಿಧ ಮಾಡಬಹುದು. 'ನೀವು ಇಂಥಾದ್ದನ್ನು ಕೊಡದಿದ್ದರೆ ನಿಮಗೆ ನಾವು ತೊಂದರೆ ಕೊಡುವೆವು.' ಎಂಬುದು ಒಂದು ವಿಧ. 'ನಮ್ಮ ಕೋರಿಕೆಯನ್ನು ಮನ್ನಿಸದಿದ್ದರೆ ಮುಂದೆ ನಾವು ಅರ್ಜಿದಾರರಾಗಲಾರೆವು, ನಾವು ಆಳಲ್ಪಡುವವರೆಂದು ಇರುವ ವರೆಗೆ ಮಾತ್ರ ನೀವು ಆಳಬಹುದು. ಮುಂದೆ ನಿಮ್ಮೊಡನೆ ನಮಗೆ ಸಂಬಂಧವಿರತಕ್ಕದ್ದಿಲ್ಲ' ಇದು ಮತ್ತೊಂದು ವಿಧ. ಈ ವಿಧದಲ್ಲಿ ಸೂಚಿಸಿದ್ದೇ ಅಹಿಂಸಾ ತತ್ವವಾಗಿರುವದು. ಇದೇ ನಾಶರಹಿತವಾದ ಸುಗಮವಾಗಿರುವ ಮಾರ್ಗ. ಎಂಥಾ ಹಿಂಸಾ ತತ್ವವಾಗಲೀ ಪ್ರೀತಿಯ ಆತ್ಮ ನಿಷ್ಠೆಯುಳ್ಳ ಆ ಅಹಿಂಸಾ ತತ್ವವನ್ನು ಎದುರಿಸಲಾರದು. ಹಿಂಸಾತತ್ವಾಚರಣೆಯಿಂದ ಅದಕ್ಕೆ ಯೋಗ್ಯವಾದ ಫಲ ಲಭಿಸುವದೇ ವಿನಹ ಹೆಚ್ಚಿಲ್ಲ. ಆದ್ದರಿಂದ ಹಿಂಸಾ ತತ್ವದಿಂದ ಬ್ರಿಟಿಷರನ್ನು ಎದುರಿಸಬೇಕಾದರೆ ನಾವು ಸುಸಜ್ಜಿತರಾಗಬೇಕು. ಆಧುನಿಕ ಯುದ್ಧೋಪಕರಣಗಳ ದಾಸರಾಗಿ ನಮ್ಮ ವ್ಯಕ್ತಿತ್ವವನ್ನು ಕಳಕೊಳ್ಳಬೇಕು. ಆದರೂ ನಮಗೆ ಸಿಕ್ಕುವ ಸುಖವು ಶಾಶ್ವತವಲ್ಲ. ಪ್ರೀತಿ, ವಿಶ್ವಾಸಗಳಿಂದ ದೊರಕುವ ಸುಖಕ್ಕಿಂತಲೂ ಬಲಾತ್ಕಾರದಿಂದ ಲಭಿಸುವ ಸುಖ ಹೆಚ್ಚಾಗುವುದೇ? ಆದ್ದರಿಂದ ಅಹಿಂಸಾ ತತ್ವವೇ ನಮ್ಮ ಶಾಶ್ವತ ಸುಖ ಅರ್ಥಾತ್ ಸ್ವಾತಂತ್ರ್ಯಕ್ಕೆ ಸುಗಮವಾದ ಮಾರ್ಗ. ಅಹಿಂಸಾ ತತ್ವವು ಹಿಂದೆ ಜಾರಿಯಲ್ಲಿತ್ತೋ, ಅದು ಹಿಂಸಾ ತತ್ವಕ್ಕಿಂತ ಹೇಗೆ ಮೇಲೆಂಬುದನ್ನು ವಿಶದವಾಗಿ ಮುಂದಿನವಾರ ಬರೆಯುವೆವು.

ಕೆಂಪು ನೀರು.

ಇಟೆಲಿ ದೇಶದ ಸೀಡ್‌ಮಂಟ್ ಎಂಬಲ್ಲಿನ ಚಿಕ್ಕದೊಂದು ಕೆರೆಯ ನೀರು, ಇದೀಗ ರಕ್ತದಂತೆ ಕೆಂಪಗಾಗಿರುವದನ್ನು ಕಂಡು, ಅನೇಕರು ಭಯಪಟ್ಟಿದ್ದಾರೆ. ಅನೇಕರು ಅನೇಕ ವಿಧವಾಗಿ, ನೀರು ಕೆಂಪಾದುದರ ಕಾರಣ ಹೇಳುತ್ತಿದ್ದಾರೆ. ಆದರೆ, ಅಂತೆಯೇ ಇನ್ನು ಕೆಲವರು, ದೇವರು ಮುನಿದಿರಬೇಕೆಂದೂ ಹೆದರಿ ಸಾರುತ್ತಿದ್ದಾರೆ.

ಬದುಕಿನರಸ್ಸ ನಮ್ಮ ಅಡಿಗೆಯವರು!

ಅಲ್ಯೂಮಿನಿಯಂ ಪಾತ್ರೆಗಳು ಒಲೆಯ ಮೇಲಿಟ್ಟು ಸುಟ್ಟು ಕರೆಕಟ್ಟಿದರೆ ಅದನ್ನು ತೊಳೆಯಲು ಒಂದು ನೀರುಳ್ಳಿಯನ್ನು ಕತ್ತರಿಸಿ ಸ್ವಲ್ಪ ನೀರಿಟ್ಟು ಚೆನ್ನಾಗಿ ಕುದಿಸಿದರೆ ಪಾತ್ರೆಯಲ್ಲಿರುವ ಕರೆಯು ಕರಗಿ ಪಾತ್ರೆಯು ಶುಚಿಯಾಗುವುದು.

ಹಿಟ್ಲರನ ಮನ ನಡಗಿಸುವ ಭಾಷಣ.

ಪೋಲೇಂಡ್–ಜರ್ಮನಿಗಳೊಳಗಿನ ಒಪ್ಪಂದವು ಕವಡಾಯಿತು–ಬ್ರಿಟನ್–ಜರ್ಮನಿ ಸಖ್ಯವೂ ಅದೇ ದಾರಿ ಹಿಡಿಯಿತು–ಹಿಂದಿನ ಜರ್ಮನ್ ಚಕ್ರಾಧಿಪತ್ಯವನ್ನು ಕಟ್ಟದಿರೆನೆಂಬ ಹೆಬ್ಬಯಕೆಯು ಹಿಟ್ಲರನಲ್ಲಿ ಹಿರಿದಾಯಿತು–ಮಹಾ ಯುದ್ಧದ ಕಾರ್ಮೋಡಗಳು ತುಂಬಿ, ಅದರ ರಭಸಗಳು ಕಿವಿಬಿರಿಯುವಂತೆ ಮೊಳಗುವಂತಾಯಿತು–ಯೂರೋಪಿನ ಈ ಮೋಡಗಳ ಮಳೆಯು ಸುರಿಯುವುದೆಂಬುವುದೇ ಉಳಿಯಿತು.

ಜರ್ಮನರ ಭಾಗ್ಯವಿಧಾತನಾದ ಹಿಟ್ಲರನು ತಾ. 29ರಲ್ಲಿ ಅತ್ಯಮೋಘವಾದ ತನ್ನದೊಂದು ಭಾಷಣದಿಂದ ಅನೇಕ ರಾಷ್ಟ್ರಗಳ ಮನ ನಡುಗಿಸಿದ್ದಾನೆ. ಸರ್ವತ್ರ ಜರ್ಮನಿಯ ಜನತೆಯು ತಮ್ಮ ಕಾರ್ಯಕಲಾಪಗಳನ್ನು ಬಿಟ್ಟು ರೇಡಿಯೋ ಯಂತ್ರಗಳ ಮುಂದೆ ಕುಳಿತು ಸರ್ವಾಧಿಕಾರಿ ಹಿಟ್ಲರನ ಭಾಷಣವನ್ನಾಲಿಸಿತು. ಈ ಮೊದಲು ಅಮೇರಿಕದ ಅಧ್ಯಕ್ಷರಾದ ರೂಸ್‌ವೆಲ್ಟರವರು ಕಳುಹಿದ ಸಂದೇಶವನ್ನು ಕುರಿತು ಮಾತಾಡುತ್ತಾ 'ಪ್ರಜಾ ಸತ್ತಾತ್ಮಕ ರಾಷ್ಟ್ರಗಳೆಷ್ಟೋ ಈ ರೀತಿಯ ಸಲಹೆ ಸಂದೇಶಗಳೊಡನೆ ನಮ್ಮನ್ನೆಚ್ಚರಿಸಿವೆ. ಸ್ನೇಹದ ಸಂದೇಶಗಳೆಂದು ಕಳುಹಿಸಿದ ಈ ಸುದ್ದಿಯು ಬಹಳ ಕುತಂತ್ರವುಳ್ಳದ್ದು. ಅಂತೆಯೇ ಅದಕ್ಕೆ ಉತ್ತರವನ್ನೀಯಬೇಕು.

'ಜರ್ಮನಿಯು ಇಂದು ರಾಜ್ಯವಿಸ್ತರಣಾ ಲಾಲಸೆಯೆಂಬ ರೋಗದಿಂದ ತಮ್ಮನ್ನು ಸುತ್ತುಗಟ್ಟುತ್ತಿದೆ. ಎಂದು ಬ್ರಿಟನು ಘೋಷಿಸುತ್ತಿದೆ. ಬ್ರಿಟನಿನ ಪತ್ರಿಕೆಗಳೂ, ಸರಕಾರವೂ ಜರ್ಮನನ್ನು ಕಟುವಾಗಿ ಟೀಕಿಸುತ್ತಿವೆ. ಜರ್ಮನಿಯ ಮೇಲೆ ಬ್ರಿಟನಿನಲ್ಲಿ ಅದೊಂದು ಅಂತರ್ಯುದ್ಧವೇ ನಡೆಯುತ್ತಿದೆ. ಆದರೆ ಹಿಂದೆ ನಾನಂದಂತೆ ಬರೇ ವಸಾಹತುಗಳ ಕೇಳಿಕೆಯೊಂದರಿಂದಲೇ ಬ್ರಿಟನು ಇಷ್ಟು ಗಾಬರಿಪಟ್ಟುಕೊಂಡದ್ದು ಬೇಸರದ ವಿಚಾರ. ಅವರಲ್ಲೂ ಈ ನನ್ನ ಹೇಳಿಕೆಯೂ ಎಂದು ಯುದ್ಧಕ್ಕೆ ಎಡೆ ಕೊಡದೆಂದು ಸಾರುತ್ತಾ ಬಂದಿರುವೆನು. ಈ ಕೇಳಿಕೆಯ ವಿಚಾರದಲ್ಲಿ ಬ್ರಿಟನು ಸಂಧಾನ ನಡೆಸಲು ಸಿದ್ಧವಾಗಿದೆಯೆಂದರೆ ನನಗೆ ತುಂಬಾ ಸಂತೋಷವಾಗದಿರದು. ಇಂದು ಜರ್ಮನಿಯು ಪೋಲೇಂಡಿನ ಡೇನ್ಜಿಗ್ ಪ್ರದೇಶವನ್ನು ಬಿಟ್ಟು ಕೊಡಬೇಕೆಂದು ಕೇಳಿದೆ. ಪೋಲೇಂಡು ಈ ಕೇಳಿಕೆಯನ್ನು ತಿರಸ್ಕರಿಸಿರುವದರಿಂದ ಪೋಲೇಂಡು–ಜರ್ಮನಿಗಳೊಳಗಿನ ಒಪ್ಪಂದವು ಮುರಿದಿದೆ' ಎಂದು ಸಾರಿದನು.

'ಜರ್ಮನಿಯು ನಾಝಿ ತತ್ವವನ್ನಾರಂಭಿಸಿ ಸರ್ಕಾರ ನಡೆಸಲಾರಂಭಿಸಿದಾಗ ನಾನೇ ನಮ್ಮ ಹಡಗು ಪಡೆಯ ಬೆಳವಣಿಗೆಗೆ ಒಂದು ತಡೆಯನ್ನಿಟ್ಟೆ. ಇದರ ಅರ್ಥವಾದರೂ ಮುಂದೆ ಬ್ರಿಟನು ಜರ್ಮನಿಗಳೊಳಗೆ ಯುದ್ಧವಿರಬಾರದೆಂದು. ಆದರೆ ಇಂದು ಆ ನನ್ನ ತತ್ವವನ್ನು ಬದಲಾಯಿಸಿ ನಮ್ಮ ಆ ಪುರಾತನ ಒಡಂಬಡಿಕೆಯು ನಿರ್ನಾಮವಾಗಿದೆಯೆಂದು ಬ್ರಿಟಿಷರಿಗೆ ತಿಳಿಸುವವನಿದ್ದೇನೆ. ಜರ್ಮನಿಯ ಮನಸಿನಂತೆ ಬ್ರಿಟನಿನದ್ದಿಲ್ಲ. ಅದು ಇಂದು ಒಳಗೊಳಗ ತನ್ನ ಸೈನ್ಯ ಸರಂಜಾಮುಗಳನ್ನು ಸಿದ್ಧಪಡಿಸಿಕೊಂಡು ಜರ್ಮನಿಯ ಎದುರು ನಿಲ್ಲುವ ಪ್ರಯತ್ನದಲ್ಲಿರುವದೆಂದು ಅದರ ಅಂತರ್ಗತ ಪರಿಸ್ಥಿತಿಯಿಂದ ವಿಷದವಾಗುತ್ತಿದೆ. ಹಾಗಿರಲು ಜರ್ಮನಿ ನೌಕಾಪಡೆಗೆ ಈ ಮೊದಲು ಇಟ್ಟಿದ್ದಂಥಾ ತಡೆಯು ಇನ್ನಿರಲಾರದು. ನಮ್ಮೊಳಗಿನ ಒಪ್ಪಂದವು ಅಳಿದಿದೆ. ಈ ಒಪ್ಪಂದವನ್ನು ನಾನು ಸ್ವಾವಲಂಬನ ದೃಷ್ಟಿಯಿಂದಲೂ ಬ್ರಿಟನರ ಹೆದರಿಕೆಯಿಂದ ಮಾಡಿದ್ದಲ್ಲ. ಇಂದು ಇಂಗ್ಲೆಂಡಿನೊಡನೆ ಶಸ್ತ್ರಸಂಗ್ರಹದ ಸ್ಪರ್ಧೆಯನ್ನು ನಿಲ್ಲಿಸುವಂತಾಗಬಾರದೆಂಬ ಬದಲ ನನಗಿದೆ. ಅಮೇರಿಕಗಿಂತಲೂ ಹಿರಿದಾದ ಸಾಮ್ರಾಜ್ಯವು ಜರ್ಮನಿಯದಾಗಿದೆಯೆಂದೂ, ಕಳೆದ ಮಾರ್ಚಿ ತಿಂಗಳ ಚರಿತ್ರಾರ್ಹ ಘಟನೆಗಳಿಂದ ಜರ್ಮನಿಯ ಜನತೆಯನ್ನು ಸೋಲಿನಿಂದ ಎತ್ತಿ, ಎಲ್ಲಾ ಕಾಲದ ಅಪ್ರಬುದ್ಧ ಒಪ್ಪಂದಗಳ ಕಟ್ಟುಗಳಿಂದ ಜರ್ಮನರನ್ನು ಸ್ವತಂತ್ರರನ್ನಾಗಿ ಮಾಡುವ ತನ್ನ ಜೀವನಧ್ಯೇಯವನ್ನು ಸಾಧಿಸಿದೆನೆಂದೂ ಸಾರಿದ್ದಾನೆ.

(ಅಡಾಲ್ಫ ಹಿಟ್ಲರ್)

'ಒಂದು ಕಾಲಕ್ಕೆ ಅಖಂಡವಾಗಿ ಬೆಳೆದು ಯೂರೋಪಿನ ಭಾಗ್ಯಾಕಾಶದಲ್ಲಿ ಮೆರೆದ ಆ ವಿಶಾಲ ಜರ್ಮನ್ ಚಕ್ರಾಧಿಪತ್ಯದ ಭಾಗಗಳನ್ನು ಇತರ ರಾಷ್ಟ್ರಗಳು ತುಂಡು ತುಂಡಾಗಿ ನಳಿದೊಯ್ದು ಅನ್ಯಾಯದಿಂದ ಅಧೋಗತಿಗಿಳಿಸಿದವು ಅವುಗಳಿಗೆ ಪ್ರತೀಕಾರವನ್ನು ಮಾಡಿ ಆ ಒಯ್ದ ಭಾಗಗಳನ್ನು ಏಕೀಕರಿಸಿ ಅಖಂಡ ಸಾಮ್ರಾಜ್ಯವನ್ನು ಕಟ್ಟಬೇಕೆಂಬುವುದೇ ನನ್ನ ಮೂಲೋದ್ದೇಶ. ಆದ್ದರಿಂದ 30 ವರ್ಷಗಳಿಗೆ ಹಿಂದಿದ್ದ ಜರ್ಮನ್ ಚಕ್ರಾಧಿಪತ್ಯದ ಸ್ಥಾಪನೆಗ ಮುಂದಾಗಿರುವೆನೇ ವಿನಹ ಇತರರ ಅಧಿಕಾರವನ್ನು ಕಿತ್ತುಕೊಳ್ಳಲಿಕ್ಕಲ್ಲ. ಇಂದು ಜರ್ಮನಿಯ ಅಂಕಯಲ್ಲಿ ಹಿಂದೆ ಅದರ ವಿಶಾಲ ಛತ್ರಛಾಯೆಯಲ್ಲಡಗಿರದ ಯಾವ ರಾಷ್ಟ್ರವೂ ಇಲ್ಲ.

ಬ್ರಿಟನ್ ಜರ್ಮನಿಗಳೊಳಗೆ ವೈಶಮ್ಯ ಬರಬಾರದು. ಅವು ತಮ್ಮ ರಾಜಕಾರಣದಲ್ಲಿ ಏಕೀಭಾವದಿಂದಿರಬೇಕೆಂಬುವುದೇ ನನ್ನ ಬಯಕೆಯಾಗಿತ್ತು. ಅಂತೆಯೇ ಆ ಯೋಜನೆಯನ್ನು ಸಮರ್ಥಿಸುವ ಬಹು ಮಂದಿಯನ್ನೂ ಕಂಡಿರುವೆನು. ಆದರೆ ಶಾಂತಿ ಸಂಧಾನದ ಆ ಕಾಲದಲ್ಲಿ ರಾಜಕಾರಣವನ್ನು ಅರಿಯುತ್ತಿದ್ದವರೆಲ್ಲ ಯುದ್ಧದ ಅನುಭವವಿಲ್ಲದವರೇ ಆಗಿದ್ದುದರಿಂದ ಇಂದಿನ ಸ್ಥಿತಿ ಹೀಗಾಗಬೇಕಾಯಿತು. ಬ್ರಿಟನು ಒಳಗೊಳಗೆ ದ್ವೇಷಾಸೂಯೆಯಿಂದ ಬೆಂದು ನಮ್ಮ ಪ್ರಗತಿಯನ್ನು ತಡೆಗಟ್ಟಲು ಯತ್ನಿಸುತ್ತಿರುವ ಆ ಹವ್ಯಾಸವೇ ಇಂದಿನ ಈ ವಿಷಮ ಪರಿಸ್ಥಿತಿಗೆ ಕಾರಣ' ಎಂದನು.

ರಾಜಕೋಟೆ ಸಮಸ್ಯೆ.

ಮಹಾತ್ಮರಿಗೆ ಠಾಕೂರರ ತಂತಿ.

ರಾಜಕೋಟೆ ಠಾಕೂರ ಸಾಹೇಬರು ಮಹಾತ್ಮಗಾಂಧಿಯವರಿಗೆ ಒಂದು ತಂತಿಯನ್ನು ಕಳುಹಿಸಿ ಚಳವಳಿಯ ಮುಖಂಡರಿಗೆ ಬೇರೆ ಬೇರೆ ಹಿತ ಸಂಬಂಧಗಳ ಪ್ರತಿನಿಧಿಗಳನ್ನು ಕೂಡಿಕೊಂಡು ಠಾಕೂರರ ಸಾಹೇಬರಲ್ಲಿಗೆ ಹೋಗಿ ನಿಮ್ಮ ನಿಮ್ಮಲ್ಲಿ ಪ್ರಶ್ನೆ ಬಗೆಹರಿಸಿಕೊಳ್ಳಿರಿ. ಎಂದು ಸಲಹೆ ಕೊಟ್ಟ ಬಗ್ಗೆ ಅವರನ್ನು ಅಭಾರ ಮನ್ನಿರಿಸಿರುವರು. ಸಲಹೆಯ ಪ್ರಕಾರ ಮುಖಂಡರು ತಮ್ಮ ಅಧಿಕಾರಿಗಳು ಅವರ ಯೋಗ್ಯ ಮತ್ತು ನ್ಯಾಯವಾದ ಬೇಡಿಕೆಗಳನ್ನು ಪೂರೈಸಲು ಶಕ್ಯವಿದ್ದದ್ದನ್ನು ಮಾಡುವದಾಗಿಯೂ ಠಾಕೂರು ಸಾಹೇಬರು ಉಲ್ಲೇಖಿಸಿದ್ದಾರೆ.

ವೀರಸಾಲರ ತಂತಿ.

ವೀರವಾಲರವರೂ ಗಾಂಧಿಯವರಿಗೆ ಒಂದು ತಾರು ಕಳುಹಿಸಿ ಢೇಬರರು ಸರದಾರ್ ವಲ್ಲಭಭಾಯಿಯವರ ಸಲಹೆ ಕೇಳಲು ಮುಂಬಯಿಗೆ ಹೋಗಿರುವರೆಂದೂ ಹೀಗೆ ಅವರು ಮುಂಬಯಿಗೆ ಹೋಗಿದ್ದುದು ಒಪ್ಪಂದದ ಮಾತು ಕತೆ ವಿಲಂಬವಾ ಕಾರಣವಾಗುವದರಿಂದ ರಾಜಕೋಟೆ ಪ್ರಭುಗಳು ಅಸಮಾಧಾನಗೊಂಡಿರುವರೆಂದೂ ತಿಳಿಸಿದ್ದಾರೆ. ಕೊನೆಯಲ್ಲಿ ಅವರು ಗಾಂಧಿಯವರಿಗೆ ಈ ಪ್ರಶ್ನೆಯಲ್ಲಿ ಕೈಹಾಕದಿರಲು ಸರದಾರ ವಲ್ಲಭಭಾಯಿಯವರಿಗೆ ವಿನಂತಿ ಮಾಡಿಕೊಳ್ಳಬೇಕೆಂದು ಕೇಳಿಕೊಂಡಿರುವರು.

ಗಾಂಧೀಜೀಯವರು ಠಾಕೂರು ಸಾಹೇಬರಿಗೂ ದರ್ಬಾರು ವೀರವಾಲರಿಗೂ ಒಂದೊಂದು ತಂತಿ ಕಳುಹಿಸಿದ ತಂತಿಯಲ್ಲಿ, ತಾವು ಕಳುಹಿಸಿದ ತಂತಿಗೆ ಕೃತಜ್ಞನಿರುವನೆಂದೂ, ನೀವು ಮತ್ತು ನಿಮ್ಮ ಪ್ರಜೆಗಳು ಒಗ್ಗಟ್ಟಿನಿಂದ ಹೊರಗಿನವರ ಪ್ರೇರಣೆಯಿಲ್ಲದೆ, ಒಂದು ತೀರ್ಮಾನಕ್ಕೆ ಬಂದದ್ದು ನನಗೆ ತುಂಬಾ ಸಂತೋಷವನ್ನುಂಟುಮಾಡಿರುವದೆಂದೂ ಸೂಚಿಸಿರುವರು. ದರ್ಬಾರ್ ವೀರವಾಲರಿಗೆ ಕಳುಹಿಸಿದ ತಂತಿಯಲ್ಲಿ, 'ನೀವು ನಿಮ್ಮ ಪ್ರಜೆಗಳೊಡನೆ ಒಪ್ಪಂದಕ್ಕೆ ಬರುವದರಲ್ಲಿ ನಾವು ಕೈ ಹಾಕಲಾರೆವು. ಢೇಭಾರರವರು ಒಳ್ಳೆಯವರು. ಅವರು ಪಟೇಲರಲ್ಲಿಗೆ ಹೋದದ್ದು ಯಾವ ಒಳಸಂಚಿಗೂ ಅಲ್ಲ. ರಾಜಕೋಟೆಗೆ ತಾರೀಕು 12ರಲ್ಲಿ ಬರಬೇಕೆಂದು ನಿಶ್ಚಯಿಸಿರುವೆನು'

ಸುಧಾರಣೆ.

ರಾಜಕೋಟೆ ಸರ್ಕಾರದ ನಾಲ್ಕು ರಾಷ್ಟ್ರೀಯ ಕಟ್ಟೋಣ ಇಲಾಖೆಗಳನ್ನು ಜನತೆಗೆ ಬಿಡಲಾಗುವದೆಂದೂ, ಧರ್ಮಾರ್ಥ ಪ್ರೈಮರಿ ವಿದ್ಯಾಭ್ಯಾಸದ ಅನುಕೂಲತೆಯನ್ನು ಕಲ್ಪಿಸಲಾಗುವದೆಂದೂ ನಂಬಲಾಗಿದೆ. ಇತರ ಸುಧಾರಣೆಗಳ ಬಗ್ಗೆ ಒಡನೆ ಜಾಹೀರಾತು ತೊಡಲ್ಪಡುವದೆಂದು ಊಹಿಸಲಾಗಿದೆ.

21 ಜನರಿಂದ ಸಹಿಹಾಕಲ್ಪಟ್ಟ ಒಂದು ಪ್ರಕಟಣೆಯನ್ನು ರಾಜಕೋಟೆ ಜನತೆಯ ಪರ ತಯಾರಿಸಿ ಗಾಂಧಿಜೀಯವರಿಗೆ ಅಲ್ಲಿಯ ಜನರು ತಂತಿ ಕಳುಹಿಸಿರುವರು. ಇದರಲ್ಲಿ ಅವರು ದರ್ಬಾರ್ ವೀರವಾಲರೊಡನೆ ಚರ್ಚಿಸಿ, ಮುನ್ಸಿಪಲ್, ಗ್ರಾಮಾಭಿವೃದ್ಧಿ, ಆರೋಗ್ಯ ಮತ್ತು ಚಿಕಿತ್ಸೆ, ವಿದ್ಯಾ ಪಬ್ಲಿಕ್ ವರ್ಕ್ಸ್ ಈ ಮೊದಲಾದ ಇಲಾಖೆಗಳ ಉಸ್ತುವಾರಿಯನ್ನು ಜನತೆಗೆ ಕೊಡಬೇಕೆಂದೂ, ಸಂಸ್ಥಾನದ ಮಂತ್ರಿ ಮಂಡಳವು 3 ಜನರಿಂದ ಕೂಡಿರಬೇಕೆಂದೂ ಅವರಲ್ಲಿ ಇಬ್ಬರು ಚುನಾಯಿತರೂ ಒಬ್ಬರು ಸರ್ಕಾರದಿಂದ ನೇಮಕ ಹೊಂದಿದವರಿರಬೇಕೆಂಬ ಇತ್ಯಾದಿ ಸೂಚನೆಗಳಿರುವವು.

ಸುಧಾರಣಾ ಕಮಿಟಿ ಸದಸ್ಯರ ಪರೀಕ್ಷೆ.

ಸರ್ದಾರ್ ಪಟೇಲರು ಸುಧಾರಣಾ ಕಮಿಟಿಗೆ ಸೂಚಿಸಿದ ಸದಸ್ಯರಲ್ಲಿ ೨ ಜನರನ್ನು ಅವರು ರಾಜಕೋಟ್ ಪ್ರಜೆಗಳಲ್ಲವೆಂಬ ಕಾರಣದಿಂದ ಠಾಕೂರು ಸಾಹೇಬರು ತಿರಸ್ಕರಿಸಿ ಆ ವಿಚಾರ ಜ್ಯುಡಿಷಿಯಲ್ ಕಮಿಷನರ ತೀರ್ಮಾನಕ್ಕೆ ಇಡಲ್ಪಟ್ಟಿತ್ತಷ್ಟೆ. ಜ್ಯುಡಿಷಿಯಲ್ ಕಮಿಷನರು ಇಕ್ಕಡೆಯವರ ವಾಗ್ವಾದವನ್ನು ಕೇಳಿಕೊಂಡಿರುವರು ನಿರ್ಣಯವು ಒಡನೇ ಹೊರಬೀಳಲಿರುವದು.

ಕೊಡಗು

[illegible] ಮೇ ತಾರೀಕು ೫ ನೇ ಶುಕ್ರವಾರ ೧೯೩೯.

ಸರ್ಕಾರವೂ, ರಾಷ್ಟ್ರೋದ್ಧಾರದ ಇಲಾಖೆಗಳೂ.

ವ್ಯವಸಾಯ, ಪಶುವೈದ್ಯ ಮತ್ತು ಸಹಕಾರ–ಇವು ಮೂರು ರಾಷ್ಟ್ರೋದ್ಧಾರ ಇಲಾಖೆಗಳೆಂದು ಪರಿಗಣಿಸಲ್ಪಟ್ಟಿವೆ. ಸರ್ಕಾರದ ಎಲ್ಲಾ ಇಲಾಖೆಗಳೂ ಪ್ರಜಾಜನರಿಗೆ ಪ್ರಯೋಜನಕಾರಿಯವಾದರೂ ಕೃಷಿಕಾವಳಿ ಜನರ ಅಭಿವೃದ್ಧಿಗೆ ಈ ನೋಟಿನ ಇಲಾಖೆಗಳು ಬಹು ಮುಖ್ಯವಾದವಾಗಿವೆ. ಭಾರತದ ಇತರ ಪ್ರದೇಶಗಳಂತೆಯೇ ಕೊಡಗಿನ ರೈತ ಜನರ ಆರ್ಥಿಕ ಸ್ಥಿತಿಯೂ ಬಹಳ ಮಟ್ಟಿಗೆ ನಿರಾಶಾಜನಕವಾಗಿದೆ. ಈ ಸ್ಥಿತಿಯು ಸುಧಾರಿಸಬೇಕಾದರೆ ಮೇಲೆ ಸೂಚಿಸಿದ ಮೂರು ಇಲಾಖೆಗಳ ಮೂಲಕ ಸರ್ಕಾರದವರು ವ್ಯವಸಾಯಗಾರರ ಸಹಾಯಕ್ಕೆ ಮುಂದುಬರಬೇಕಾಗಿದೆ. ಆದರೆ ಈ ಇಲಾಖೆಗಳು ಜನರು ಅಪೇಕ್ಷಿಸುವಷ್ಟು ಕೆಲಸಗಳನ್ನು ನಡಿಸಿರುವುದಿಲ್ಲ. ಇದಕ್ಕೆ ಹಲವು ಕಾರಣಗಳಲ್ಲೊಂದಾದ ಮುಖ್ಯ ಅಧಿಕಾರಿಗಳ ನೇಮಕದ ವಿಷಯ ಸ್ವಲ್ಪ ವಿಮರ್ಶಿಸಬೇಕಾಗಿದೆ.

ಯಾವ ಇಲಾಖೆಯಿಂದಾದರೂ ಆಗುವ ಕೆಲಸವು ಬಹುಮಟ್ಟಿಗೆ ಆಯಾಯ ಇಲಾಖೆಯ ಮುಖ್ಯ ಅಧಿಕಾರಿಯನ್ನು ಹೊಂದಿಕೊಂಡಿರುತ್ತದೆ. ಕೊಡಗಿನಲ್ಲಿ ಈ ಮೂರು ಇಲಾಖೆಗಳ ಆಡಳಿತವು ಡೆಪ್ಯುಟಿ ಡೈರೆಕ್ಟರವರ ಮೇಲ್ವಿಚಾರಕ್ಕೆ ಒಳಪಟ್ಟು ನಡೆಯುತ್ತಾ ಬಂದು, ಈಗ ಕೆಲವು ವರ್ಷಗಳ ಹಿಂದ ಪಶುವೈದ್ಯ ಇಲಾಖೆಯು ಅದರಿಂದ ಬೇರ್ಪಡಿಸಲ್ಪಟ್ಟಿತು. ಉಳಿದ ಎರಡು ಇಲಾಖೆಗಳು ಆದಾಯ ತೆರಿಗೆ (ಇನ್‌ಕಮ್ ಟ್ಯಾಕ್ಸ್) ಇಲಾಖೆಯೊಡನೆ ಅವರ ಅಧೀನದಲ್ಲಿಯೇ ಇದೆ. ಆದರೆ ಇವರ ಹುದ್ದೆಯು ಬೇಗನೆ ವಜಮಾಡಲ್ಪಟ್ಟು, ಕಮಿಷನರವರು ರಿಜಿಸ್ಟ್ರಾರಾಗುವರೆಂದೂ, ಅವರ ಕೈಕೆಳಗೆ ಒಬ್ಬ ಅಸಿಸ್ಟೆಂಟ್ ರಿಜಿಸ್ಟ್ರಾರ್ ನೇಮಿಸಲ್ಪಡುವರೆಂದೂ, ಇವರು ಸಹಕಾರಿ ಇಲಾಖೆಯ ಕೆಲಸದೊಂದಿಗೆ ವ್ಯವಸಾಯ ಇಲಾಖೆಯ ಇನ್‌ಸ್ಪೆಕ್ಟರಾಗಿರುವರೆಂದೂ ವರ್ತಮಾನವಿದೆ. ಹೀಗೆ ಮಾಡಿದ್ದೇ ಆದರೆ ಇವೆರಡೂ ಇಲಾಖೆಗಳ ಕೆಲಸಗಳು ಸುಸೂತ್ರವಾಗಿ ನಡೆಯಲಾರವೆಂಬುವದರಲ್ಲಿ ಸಂಶಯವಿಲ್ಲ.

ಈಗ ಸಹಕಾರಿ ಸಂಘಗಳ ಕೆಲಸವು ಹೆಚ್ಚುತ್ತಾ ಬರುತ್ತಿದೆಂಬುದು ನಿರ್ವಿವಾದವಾತಾಗಿದೆ. ಇಲ್ಲಿ ಸಹಕಾರಿ ಸಂಸ್ಥೆಗಳ ಸಂಖ್ಯೆಯು ದಿನೇ ದಿನೇ ಏರುತ್ತಾ ಬರುತ್ತಿದೆಯಲ್ಲದೆ, ಅವುಗಳ ಕೆಲಸಗಳೂ ತೃಪ್ತಿಕರವಾಗಿ ನಡಿಸಲ್ಪಡುತ್ತಿವೆ. ಮುಚ್ಚಿದ ಸಂಘಗಳು ಬಹು ಕಡಿಮೆ. ನಮ್ಮ ನೆರೆ ಸಂಸ್ಥಾನವಾದ ಮೈಸೂರಿನ ಸಹಕಾರಿ ಸಂಸ್ಥೆಗಳ ಪ್ರಗತಿಯೊಡನೆ ಇಲ್ಲಿಯವುಗಳದನ್ನು ಹೋಲಿಸಿ ನೋಡಿದರೆ ಇಲ್ಲಿಯ ಅಭಿವೃದ್ಧಿಯು ವಿಶದವಾಗುವುದು. 1938 ರಲ್ಲಿ ನಡೆದ 25 ನೇ ಮೈಸೂರು ಪ್ರಾಂತೀಕ ಸಹಕಾರಿ ಸಮ್ಮೇಳನದ ಅಧ್ಯಕ್ಷರಾಗಿದ್ದ ಅಲ್ಲಿಯ ಚೀಫ್ ಜಸ್ಟೀಸ್ ನಾಗೇಶ್ವರ ಐಯ್ಯರವರ ಭಾಷಣದಲ್ಲಿ ಸೂಚಿಸಿರುವಂತೆ–‘ಮೈಸೂರು ಪ್ರಾಂತದಲ್ಲಿ 1,881 ಸಂಘಗಳು ಮಾತ್ರ ಕೆಲಸ ಮಾಡುತ್ತಿವೆ; 1,200 ಸಂಘಗಳು ಮುಚ್ಚುವ ಸ್ಥಿತಿಯಲ್ಲಿವೆ ಅಥವಾ ಕೆಲಸ ಮಾಡದೆ ತಟಸ್ಥಭಾವದಲ್ಲಿವೆ. ಕೆಲಸ ಮಾಡುತ್ತಿರುವ 1,881 ಸಂಘಗಳ ಪೈಕಿ 865 ಮಾತ್ರ ತೃಪ್ತಿಕರವಾಗಿ ನಡೆಯುತ್ತಿವೆ; ಉಳಿದವು ಹೀನಾವಸ್ಥೆಯಲ್ಲಿವೆ.’ ಕೊಡಗಿನ ಸಹಕಾರಿ ಸಂಘಗಳ ಸ್ಥಿತಿಯನ್ನು ಕುರಿತು–ಇಲ್ಲಿಗೆ ಸ್ಪೆಶ್ಯಲ್ ಆಫೀಸರಾಗಿ ಬಂದಿದ್ದ ಶ್ರೀ ಯಜ್ಞನಾರಾಯಣ ಅಯ್ಯರವರು ಕಳೆದ ವರ್ಷ ನಡೆದ ಕೊಡಗಿನ ಹತ್ತನೇ ಸಹಕಾರಿ ಪರಿಷತ್ತಿನ ಅಧ್ಯಕ್ಷರಾಗಿ ಮಾಡಿದ ಭಾಷಣದ ಶ್ಲಾಘನೀಯವಾದ ಮಾತುಗಳೇ ಇಲ್ಲಿಯ ಸಹಕಾರಿ ಚಳವಳದ ತೃಪ್ತಿಕರವಾದ ಸ್ಥಿತಿಯನ್ನು ವಿಶದಪಡಿಸುತ್ತವೆ. ಇಲ್ಲಿ ಗ್ರಾಮ ಪತ್ತಿನ ಮತ್ತು ಪೌರ ಪತ್ತಿನ ಸಂಘಗಳು, ಸಹಕಾರಿ ಕೂಟಗಳು, ಸ್ಟೋರ್ ಸಂಘಗಳು, ಭತ್ತ ದಾಸ್ತಾನು ಸಂಘಗಳು, ವಿದ್ಯಾರ್ಥಿ ಸ್ಟೋರುಗಳು, ದವಸ ಭಂಡಾರಗಳು, 1 ಹಾಲು ಸರಬರಾಯಿ ಸಂಘ, 2 ಉತ್ತಮ ಜೀವನ ಸಂಘಗಳು, 1 ಜೇನು ಮತ್ತು ಮೇಣ ಸಂಘ, 1 ಸೆಂಟ್ರಲ್ ಬ್ಯಾಂಕು–ಹೀಗೆ ಒಟ್ಟು 309 ಸಹಕಾರಿ ಸಂಸ್ಥೆಗಳಿವೆ. ಸೂಕ್ಷ್ಮವಾಗಿ ಹೇಳುವದಾದರೆ ಕೊಡಗಿನಲ್ಲಿ ಹೆಚ್ಚು ಕಮ್ಮಿ ಗ್ರಾಮಕ್ಕೊಂದು ಸಂಘದಂತೆ ಇದೆ. ಬೇರೆ ಪ್ರಾಂತ್ಯಗಳೊಂದಿಗೆ ಹೋಲಿಸಿದರೆ ಅವುಗಳ ಕೆಲಸವೂ ತೃಪ್ತಿಕರವೆಂದೇ ಹೇಳಬೇಕು. ಸಹಕಾರಿ ಪರಿಜ್ಞಾನವು ಜನರಲ್ಲಿ ರೂಪುಗೊಳ್ಳುತ್ತಿದೆ. ಈ ಸಮಯದಲ್ಲಿ ಸರ್ಕಾರವು ಸಂಘಗಳ ಅಭಿವೃದ್ಧಿಗೆ ಸರ್ವವಿಧದಲ್ಲಿಯೂ ಸಹಾಯಮಾಡಬೇಕಾಗಿದೆ. ಸಹಕಾರಿ ಚಳವಳವು ಮುಂದಿಟ್ಟಿರುವ ಹೆಜ್ಜೆಯನ್ನು ಹಿಂತೆಗೆಯದಂತೆ ಮಾಡಬೇಕಾದರೆ ಈ ಇಲಾಖೆಗಾಗಿಯೇ ತರಬೇತು ಹೊಂದಿದ ಮತ್ತು ಅನುಭವಶಾಲಿಯಾದವರನ್ನು ಪ್ರತ್ಯೇಕ ಅಸಿಸ್ಟೆಂಟ್ ರಿಜಿಸ್ಟ್ರಾರಾಗಿ ನೇಮಿಸುವುದು ಅಗತ್ಯವಾಗಿದೆ.

ಕೊಡಗು ರೈತರ ದೇಶವಾಗಿದೆ. ಆದರೂ ಕೂಡ ಇಲ್ಲಿ ವ್ಯವಸಾಯಗಾರರ ಅಭಿವೃದ್ಧಿಗಾಗಿ ಇಡಲ್ಪಟ್ಟಿರುವ ವ್ಯವಸಾಯ ಇಲಾಖೆಯು ಸುವ್ಯವಸ್ಥಿತವಾಗಿ ನಡಿಸಲ್ಪಡುತ್ತಿರುವುದಿಲ್ಲ: ಇದು ನೆಪಮಾತ್ರಕ್ಕೆ ಇರುವುದಾಗಿದೆ. ಇತರ ಪ್ರಾಂತ್ಯಗಳಲ್ಲಿ ಇದರ ಪ್ರಾಮುಖ್ಯತೆಯನ್ನು ಅರಿತು ಸರ್ಕಾರದವರು ವ್ಯವಸಾಯ ಇಲಾಖೆಗಾಗಿ ತುಂಬಾ ಖರ್ಚು ಮಾಡುತ್ತಿರುವರು; ರೈತರಿಗೆ ಸಾಕಷ್ಟು ಅನುಕೂಲತೆಗಳನ್ನು ಕಲ್ಪಿಸಿಕೊಡುತ್ತಿರುವರು. ಆದುದರಿಂದ ಈ ಇಲಾಖೆಗೂ ವ್ಯವಸಾಯ ಕ್ರಮದಲ್ಲಿ ತರಬೇತು ಹೊಂದಿರುವ, ನುರಿತವರೊಬ್ಬರನ್ನು ನೇಮಿಸಬೇಕಾಗಿದೆ. ವ್ಯವಸಾಯ ಮತ್ತು ಸಹಕಾರಿ ಇಲಾಖೆಗಳನ್ನು ಒಬ್ಬ ಉದ್ಯೋಗಸ್ಥರ ಅಧೀನದಲ್ಲಿಡುವುದರಲ್ಲಿ ಅರ್ಥವಿಲ್ಲ. ಹಿಂದೂಸ್ಥಾನದ ಬೇರೆ ಯಾವ ಕಡೆಯಲ್ಲಿಯೂ ಇವೆರಡು ಇಲಾಖೆಗಳಿಗೆ ಒಬ್ಬರೇ ಉದ್ಯೋಗಸ್ಥರಿರುವುದಿಲ್ಲ. ಸರ್ಕಾರದಲ್ಲಿ ಹಣದ ಅಭಾವವು ಪ್ರತ್ಯೇಕ ಉದ್ಯೋಗಸ್ಥರ ನೇಮಕಕ್ಕೆ ಅಡ್ಡಿ ಬರುವದಾದರೆ, ಇವರಿಗೆ ಈ ಮೊದಲಿನಂತೆ ದೊಡ್ಡ ಸಂಬಳ ಕೊಡಬೇಕಾಗಿಲ್ಲ. ಈಗಿನ ಸ್ಥಿತಿಯನ್ನನುಸರಿಸಿ, ಆಗುವಷ್ಟು ಕಡಿಮೆ ಸಂಬಳದಲ್ಲಿ ನೇಮಿಸಬಹುದು. ಪ್ರತ್ಯೇಕ ತರಬೇತು ಹೊಂದಿದವರನ್ನು ನೇಮಿಸಬೇಕಾದ ಇಲಾಖೆಗಳು ಇವು. ಆದುದರಿಂದ ಇಲ್ಲಿಯ ಸರ್ಕಾರದವರು ಈ ಮೊದಲು ಒಂದು ಇಲಾಖೆಯವರನ್ನು ಇನ್ನೊಂದು ಇಲಾಖೆಗೆ ಹಾಕುತ್ತಿದ್ದಂತೆ ಇವೆರಡು ಇಲಾಖೆಗಳಲ್ಲಿ ಮಾಡಕೂಡದು. ಆಯಾಯ ಇಲಾಖೆಗಳಲ್ಲಿ ನುರಿತವರನ್ನೇ ನೇಮಿಸುವುದು ಉತ್ತಮವಾಗಿದೆ. ಹಾಗೆ ಮಾಡಿದರೇನೇ ಇವೆರಡು ಇಲಾಖೆಗಳಿಂದ ಜನರಿಗೆ ಪ್ರಯೋಜನಉಂಟಾಗುವುದು. ಸರ್ಕಾರವು ಪ್ರಜಾಹಿತಕ್ಕೆ ಇರುವುದಾಗಿದೆ. ಪ್ರಜೆಗಳು ಸರ್ಕಾರದ ಹಿತಕ್ಕಲ್ಲ. ಆದಕಾರಣ ಸರ್ಕಾರದವರು ಮೇಲಿನ ಸೂಚನೆಗಳಿಗೆ ಗಮನಕೊಟ್ಟು ವ್ಯವಸಾಯಗಾರರ ಅಭಿವೃದ್ಧಿಗೆ ಅನುಕೂಲವಾಗುವ ಏರ್ಪಾಡುಗಳನ್ನು ಮಾಡುವರಾಗಿ ನಂಬುತ್ತೇವೆ

ಓರಿಯಂಟಲ್ ಜೀವ ವಿಮಾ ಕಂಪೆನಿ.

ವಿಮಾ ಕಂಪನಿಗಳಲ್ಲಿ ಗಣ್ಯಸ್ಥಾನವನ್ನು ಪಡೆದಿರುವ ಓರಿಯಂಟಲ್ ಕಂಪೆನಿಯು ಈ ವರ್ಷ ಮಾಡಿದ ಉದ್ಯಮವು ಚಿತ್ತಾಕರ್ಷಕವಾಗಿದೆ. 9,76,85,385 ರೂಪಾಯಿಗಳ ಭರವಸೆಯ 53,388 ಪೊಲಿಸಿಗಳು ಮಾಡಲ್ಪಟ್ಟಿರುವವು. ಆರ್ಥಿಕ ಮುಗ್ಗಟ್ಟಿನ ಇಂದಿನ ವಿಷಮ ಪರಿಸ್ಥಿತಿಯಲ್ಲೂ ಸಹ ಕಂಪೆನಿಯು ಇಂಥಾ ಪ್ರಗತಿಪರ ಕಾರ್ಯವನ್ನು ಮಾಡುತ್ತಿರುವದನ್ನು ನೋಡಿದರೆ ಅದು ತನ್ನ 65 ವರ್ಷಗಳ ಅವಿಚಲ ಸೇವೆಯಿಂದ ಜನತೆಯ ಆದರಣೆಯನ್ನು ಎಷ್ಟರ ಮಟ್ಟಿಗೆ ಪಡೆದಿದೆಯೆಂಬುದು ಸ್ವಯಂವ್ಯಕ್ತವಾಗುತ್ತದೆ. ವಿಮಾ ಪ್ರಪಂಚದಲ್ಲಿ ಹೀಗೆ ಪ್ರಗತಿ ಪಥದಲ್ಲಿ ನಡೆಯುತ್ತಿರುವ ಸಂಸ್ಥೆಗಳಲ್ಲಿ ಇದ್ದು ಗಣನೀಯ ಸ್ಥಾನವನ್ನು ಪಡೆದಿದೆ. ಇಂದು ಇದರ ಭದ್ರತೆಯ ಮಟ್ಟಿಗೆ ಜನತೆಯಲ್ಲಿರುವ ನಂಬಿಕೆಯೇ ಇದರ ಪ್ರಗತಿ ಪ್ರತಿಷ್ಠೆಗೆ ಕಾರಣವಾಗಿದೆ. ಕಳೆದ 65 ವರ್ಷಗಳಿಂದೂ ಕ್ರಮವಾಗಿ ಬೆಳೆದು ಇಂದು ತನ್ನ ಶಾಖೋಪಶಾಖೆಗಳಿಂದ ಇಡೀ ಭಾರತವನ್ನಾವರಿಸಿ ವಿಮಾ ಪ್ರಪಂಚದಲ್ಲಿ ಹೊಸ ಬೆಳಕನ್ನು ಪ್ರಸರಿಸಿರುವ ಸಂಸ್ಥೆ ಇದು ಎಂದರೆ ಅತಿಶಯೋಕ್ತಿಯಾಗಲಾರದು. ಹೀಗೆಯೇ ಮುಂದೂ ಜನಾದರಣೆಯನ್ನು ಪಡೆದು ಜನತೆಗೆ ಸಲ್ಲಿಸುತ್ತಿರುವ ಅಖಂಡ ಸೇವೆಯನ್ನು ನಿರ್ವಿಘ್ನವಾಗಿ ಸಲ್ಲಿಸಲೀ ಎಂದೇ ನಮ್ಮ ಹಾರೈಕೆ.

ಜನರಲ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್ ಅಜ್ಮೀರ್.

ಈ ಸೊಸೈಟಿಯ 1938–39 ನೇ ವರ್ಷದ ವರದಿಯು ನಮ್ಮ ಕೈ ಸೇರಿದೆ. ಇದರಲ್ಲಿಯ ಅಂಕೆ ಸಂಖ್ಯೆಗಳು ಮನನೀಯವಾಗಿರುವದರಿಂದ ಅವನ್ನಿಲ್ಲಿ ಕೊಡಲಾಗಿದೆ.

ವರದಿ ವರ್ಷದಲ್ಲಿ ಗತ ವರ್ಷಕ್ಕಿಂತ ರೂ. 3,10,500 ಉದ್ಯಮವು ಹೆಚ್ಚಾಗಿ ನಡೆದಿದೆ. 1938 ನೇ ಡಿಸೆಂಬರ್ ಆಖೈರ್ ವರೆಗೆ ಚಾಲ್ತಿಯಲ್ಲಿರುವ ಪಾಲಿಸಿಗಳ ಮೊತ್ತವು 3¼ ಕೋಟಿಗೆ ಮೀರಿದೆ. 1937 ರ ವರಮಾನಕ್ಕಿಂತ ಈ ವರ್ಷದ ವರಮಾನವು 1,64,492 ರೂ. ಹೆಚ್ಚಿದೆ. ಈ ವರ್ಷ ಕಾರ್ಯನಿರ್ವಹಣಕ್ಕಾಗಿ 27-5/ ರಂತೆ ಖರ್ಚಾಗಿರುತ್ತೆ. ಅಂದರೆ ಕಳೆದ ವರ್ಷದಕ್ಕಿಂತ ಶೇಕಡ 1.5 ಕಮ್ಮಿಯೂ ಆಂತಾಯಿತು.

ವರದ ವರ್ಷದಲ್ಲಿ ಸಾವಿನಿಂದ 206 ಪಾಲಿಸಿಗಳ ಬಾಪ್ತು 2,88,142 ರೂ. ಪಾವತಿ ಮಾಡಲಾಯಿತು. ಇದು ಗತ ವರ್ಷದಕ್ಕಿಂತ ರೂ. 4,661 ಹೆಚ್ಚಿದೆ. ಅಲ್ಲದೆ 249 ಪೊಲಿಸಿಗಳು ತಮ್ಮ ಅವಧಿಯನ್ನು ಪೂರೈಸಿದ್ದರಿಂದ ಅವುಗಳ ಬಗ್ಗೆ 3,49,445 ರೂ ಪಾವತಿ ಮಾಡಲಾಯಿತು. ಈ ವರ್ಷ ಇಂದೂರಿನಲ್ಲಿದ್ದ ಇದರ ಚೀಫ್ ಏಜನ್ಸಿ ಆಫೀಸನ್ನು ಬ್ರಾಂಚ್ ಆಫೀಸಾಗಿ ಮಾಡಿ, ಜಬ್ಬಲ್‌ಪುರ, ಅಲ್ಲಹಾಬಾದ್, ಬೆಜವಾಡ ಈ ಪ್ರಾಂತಗಳಲ್ಲಿ ಹೊಸ ಶಾಖೆಗಳನ್ನು ತೆರೆಯಲಾಗಿದೆ. ಸೊಸೈಟಿಯ ಒಟ್ಟು ಆಸ್ತಿಯು ರೂ. 91,51,564 ಇದೆ.

ಕಲ್ಕತ್ತೆಯಲ್ಲಿ 6 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಒಂದು ಕಟ್ಟಡವನ್ನು ಕಟ್ಟುವ ಪ್ರಯತ್ನ ಮಾಡುತ್ತಿದೆ. ಈ ವರ್ಷಕ್ಕೆ ಪಾಲುದಾರರಿಗೆ ನೂರಕ್ಕೆ 15 ರಂತೆ ಇಂಟೆರಿಂಡಿವಿಡೆಂಡು ಕೊಡಬೇಕೆಂದು ತೀರ್ಮಾನಿಸಿದೆ. ಅಲ್ಲದೆ ಕಂಪೆನಿಯ ಕೆಲಸಗಾರರಿಗೆಲ್ಲಾ ಒಂದು ತಿಂಗಳ ಸಂಬಳವನ್ನು ಬೋನಸ್ಸಾಗಿ ಕೊಡುವಂತೆಯೂ ನಿರ್ಣಯಿಸಿದೆ. ಈ ಮೇಲ್ಕಂಡ ಅಂಕೆ ಸಂಖ್ಯೆಗಳು ಸೊಸೈಟಿಯ ಭದ್ರತೆಯನ್ನು ಸೂಚಿಸುವವೆಂಬುದರಲ್ಲಿ ಅನುಮಾನವಿಲ್ಲ. ಈ ವರೆಗೆ ಸುವ್ಯವಸ್ಥಿತ ರೀತಿಯಿಂದ ಕಾರ್ಯ ನಡಿಸಿ ಜನತೆಯ ಮನವನ್ನಾಕರ್ಷಿಸಿರುವ ಈ ಸೊಸೈಟಿಯು ಮುಂದಕ್ಕೂ ಜನಾದರಣೆಯನ್ನು ಪಡೆದು ಯಶಸ್ವಿಯಾಗಲೆಂದು ಆಶಿಸುತ್ತೇವೆ.

ಒಳದೇಶ.

ಮಡಿಕೇರಿ.

ಇನ್ಸ್‌ಪೆಕ್ಟರ್ ಟೆರಿಟೋರಿಯಲ್ ಪಟಾಲಾಮಿನ ಈ ವರ್ಷದ ಕವಾಯತು ಇಪತ್ತಿಗೆ ಸಲುವಾದ ನಾಳೆದಿನ ಎಲ್ಲರೂ ಬಿಡಲ್ಪಡುವರೆಂದು ತಿಳಿದು ಬರುತ್ತದೆ

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾ 20ನೇ ಶನಿವಾರ ನಡೆಯುವದೆಂದು ತಿಳಿಯಬರುತ್ತದೆ.

ಕೊಡಗು ಟೆರಿಟೋರಿಯಲ್ ಪಟಾಲಮಿನಲ್ಲಿ ಹವಾಲ್ದಾರ್ ಮೇಜರಾಗಿದ್ದ ಶ್ರೀ ಮೂವಂಡ ಭೀಮಯ್ಯನವರು ಈ ತಾರೀಕು 4ರಲ್ಲಿ ಇಲ್ಲಿಯ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಪೋಲೀಸರ ಮತ್ತು ಜವಾನರ ಉಪಯೋಗಿಸಲ್ಪಡದ ಕೆಲವು ಉಡುಪು ಮತ್ತು ಸಾಮಾನುಗಳು ಈ ತಾರೀಕು 19-5-39ರಲ್ಲಿ ಇಲ್ಲಿ ಹರಾಜು ಮಾಡಲ್ಪಡುವವೆಂದು ತಿಳಿಸುತ್ತಾರೆ.

ಬೆಂಗಳೂರಿನ ಪೋಲೀಸ್ ಕಮಿಷನರು ಕೊಡಗಿನ ಪೋಲೀಸ್ ಇಲಾಖೆಯ ಇನ್ಸ್‌ಪೆಕ್ಷನಿಗೆ ಇಲ್ಲಿಗೆ ಬಂದಿರುವರೆಂದೂ, ಇವರು ಇನ್ನು ಎರಡು ವಾರ ಕೊಡಗಿನಲ್ಲಿರುವರೆಂದೂ ತಿಳಿಯ ಬರುತ್ತದೆ

ಕಾಫಿಯವರು ಕೊಟ್ಟ ಹಾಕಿ ಬಟ್ಲಿನ ಪಂದ್ಯವು ತಾ. ತಾ. 25-4-39 ರಿಂದ ಇಲ್ಲಿ ಪ್ರಾರಂಭವಾಗಿ ಕಡೇ ಆಟವು ಇಲ್ಲಿ ಸೋಶಿಯಲ್ಸ್ ಮತ್ತು 'ವೀ ಆರ್ ಇಲೆವನ' ಎಂಬ ಟೀಮುಗಳಿಗೆ ನಡೆದು ವೀ ಆರ್ ಇಲವನ್ ಟೀಮಿನವರು ಗೆದ್ದು ಬಟ್ಲನ್ನು ಪಡೆದರು.

ಕೆ. ಡಗಿನ ಹಯ್ಯರ್ ಮತ್ತು ಲೋವರ್ ಎಲಿಮೆಂಟರಿ ಶಾಲೆಗಳಲ್ಲಿ ಉಪಯೋಗಿಸಬೇಕಾದ ಪಠ್ಯ ಪುಸ್ತಕಗಳ ಪಟ್ಟಿಯನ್ನು ತಯಾರಿಸಲು ಟೆಕ್ಸ್ಟ್ ಬುಕ್ ಕಮಿಟಿಯ ಮೀಟಿಂಗು ಈ ತಾ. 12ರಲ್ಲಿ ಇಲ್ಲಿ ನಡೆಯುವುದು.

ವೀರಾಜಪೇಟೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗು ಈ ತಾ. 16ನೇ ಮಂಗಳವಾರ ಪೂರ್ವಾಹ್ನ ಇಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ. 16ರ ಅಪರಾಹ್ನ ಇಲ್ಲಿ ನಡೆಯಲಿಕ್ಕಿದೆ.

'ಕೊಡಗು' ಕಂಪನಿಯ ಡೈರೆಕ್ಟರುಗಳ ಮೀಟಿಂಗೊಂದು ಈ ತಾ. 2ರಲ್ಲಿ ವೀರಾಜಪೇಟೆಯಲ್ಲಿ ನಡೆಯಿತು

ಶನಿವಾರಸಂತೆ.

ಈಗ್ಗೆ ಒಂದು ವಾರದಿಂದ ಗೌಡನರೇಖೆ ಪರ್ಯಾಯ ಕಟೆಯಲ್ಲಿಯ ಕೊಡ್ಲಿಪೇಟೆ ಆಜುಬಾಜಿನ ಕೆಲವು ಗ್ರಾಮಗಳಲ್ಲಿ ಭತ್ತದ ಪೈರನ್ನೂ, ಬಾಳೆಯ ಹುಲ್ಲನ್ನೂ ಅದ್ಯಾವುದೊ ಜಾತಿಯ ಕಪ್ಪು ಹುಳುಗಳು ತಿಂದು ನಾಶ ಪಡಿಸುತ್ತಿವೆಯೆಂದೂ ಇದರಿಂದ ರೈತರಿಗೆ ತುಂಬಾ ನಷ್ಟ ಸಂಭವಿಸದ ಇರಲಾರದೆಂದೂ ತಿಳಿಸುತ್ತಾರೆ.

ಮೂರ್ನಾಡು

ಮುತ್ತಾರುಮುಡಿ ಗ್ರಾಮದ ಉಳು

ವರ್ತಮಾನ ಸಂಗ್ರಹ.

ವಾರನ ಅಪ್ಪಚ್ಚನವರು ಈ ತಾ 3ರಲ್ಲಿ ಬಿದಿರು ಕಡಿಯಲು ಹೋದವರು ಬಿದಿರು ಮೆಳೆಯಿಂದ ಬಿದ್ದು ಮೃತರಾಗಿರುವರೆಂದು ವರ್ತಮಾನ.

ಗೆಜೆಟ್.

ಕೊಡಗಿನಲ್ಲಿ ಕಳೆದ ತಿಂಗಳಲ್ಲಿ 337 ಜನನಗಳೂ, 334 ಮರಣಗಳೂ ಸಂಭವಿಸಿರುವದಾಗಿ ಪ್ರಕಟವಾಗಿದೆ.

ತಿತಿಮತಿ ರೇಂಜಿನ ದೇವಮಚ್ಚಿ ಮತ್ತು ಮತ್ತಿಗೋಡು ಫಾರೆಸ್ಟುಗಳಲ್ಲಿ ಸಾಧಾರಣವಾಗಿ ತಿರುಗಿ ಕೊಂಡಿರುತ್ತಿರುವ 'ದೇವಮಚ್ಚಿ ಮತ್ತಿಗೋಡ್ ರೋಗ್' ಎಂಬ ಒಂಟಿಗ ಆನೆಯನ್ನು ಕೊಲ್ಲಲು ಸ್ಪೆಷಲ್ ಲೈಸೆನ್ಸು ಕೊಡಲಾಗುವದೆಂದು ಪ್ರಕಟವಾಗಿದೆ.

ಬರುವ ಆಗಸ್ಟ್ ತಾರೀಕು 1ರಿಂದ ಕೊಡಗಿನ ಡಿ. ಬೋರ್ಡ್ ಅಧೀನದಲ್ಲಿರುವ ಹೊಟಲುಗಳ ಪೈಕಿ 1ನೇ ತರಗತಿಯ ಹೊಟೆಲಿನ ಲೈಸೆನ್ಸು ಫೀಜನ್ನು 7ರಿಂದ 10 ರೂಪಾಯಿಗೂ, 2ನೇ ತರಗತಿಯ ಹೊಟೆಲಿನ ಲೈಸೆನ್ಸು ಫೀಜನ್ನು 5ರಿಂದ 7ಕ್ಕೂ ಏರಿಸಲಾಗಿದೆಯೆಂದು ಪ್ರಕಟವಾಗಿದೆ.

ಮೊಟ್ಟೆ ಚಾರ್ಜನ್ನು ಆನೆಗೆ ರೂ. 2, ಕೋಣಕ್ಕೆ ರೂ. 1, ದನ ಮತ್ತು ಕುದುರೆಗೆ 8 ಆಣೆ, ಕರ ಮತ್ತು ಕತ್ತೆಗೆ 4 ಆಣೆ ಕುರಿ ವಗೈರೆಗೆ 2 ಆಣೆಯಂತೆ ಏರಿಸಲಾಗುವದೆಂದೂ, ಆಕ್ಷೇಪವಿರುವವರು 2 ತಿಂಗಳೊಳಗೆ ಚೀಫ್ ಕಮಿಷನರವರಿಗೆ ತಿಳಿಸಬೇಕೆಂದೂ, ಪ್ರಕಟವಾಗಿದೆ.

ಕಂದಾಯ ವ ಕಂತಿನ ಈಗಿರುವ 20ನೇ ಫೆಬ್ರವರಿ ಮತ್ತು 20ನೇ ಮಾರ್ಚಿ ತಾರೀಕುಗಳನ್ನು 10ನೇ ಫೆಬ್ರವರಿ ಮತ್ತು 15ನೇ ಮಾರ್ಚಿ ಎಂದು ಬದಲಾಯಿಸಲಾಗುವದೆಂದೂ, ಇದಕ್ಕೆ ಆಕ್ಷೇಪಿಸುವವರು 60 ದಿನಗಳೊಳಗೆ ಚೀಫ್ ಕಮಿಶನರಿಗೆ ಬರೆಯತಕ್ಕದ್ದೆಂದೂ ಈ ತಿಂಗಳ 1ನೇ ತಾರೀಕಿನ ಗೆಜೆಟಿನಲ್ಲಿ ಪ್ರಕಟವಾಗಿದೆ.

ಏಳು ದಿನಗಳ ಲೈಸನ್ಸ್ ಪಡೆದು ಹೊರಗಿನಿಂದ ಬಂದ ಮೋಟಾರು ಪ್ರಯಾಣಿಕರು ಈ ಅವಧಿಯು ತೀರುವ ಒಳಗೆ ಅದನ್ನು 30 ದಿನಗಳ ಲೈಸನ್ಸಿಗೆ ಬದಲಾಯಿಸಬಹುದೆಂದೂ, ಏಳು ದಿನ ಲೈಸೆನ್ಸ್ ಜಾರಿಯಲ್ಲಿ ಬಂದ ದಿನದಿಂದ 1 ತಿಂಗಳ ಲೈಸೆನ್ಸು ಕೊಡಲಾಗುವದೆಂದೂ, 30 ದಿನಗಳ ಲೈಸೆನ್ಸ್ ಕೊಡುವ ಆಫೀಸರು ಏಳು ದಿನಗಳ ಲೈಸೆನ್ಸ್ ರದ್ದು ಮಾಡಿ ಈ ಏಳು ದಿನಗಳ ಲೈಸೆನ್ಸನ್ನು ಅವರೇ ಕೊಟ್ಟಿಲ್ಲದ ಪಕ್ಷ ಅದನ್ನು ಕೊಟ್ಟ ಆಫೀಸರಿಗೆ ತಿಳಿಸಬೇಕೆಂದೂ ಚೀಫ್ ಕಮಿಶನರು ಪ್ರಕಟಿಸಿರುವರು.

ಹಿಂದೂದೇಶ.

ಬೊಂಬಾಯಿ ಸರ್ಕಾರವು ವಾರ್ಧಾ ಸ್ಕೀಮನ್ನು 100 ಶಾಲೆಗಳಲ್ಲಿ ಪ್ರವೇಶಗೊಳಿಸಲು ನಿರ್ಧರಿಸಿದೆ.

ಹೈದರಾಬಾದ್ ಸತ್ಯಾಗ್ರಹದಲ್ಲಿ ಭಾಗವಹಿಸಿದ ನಿಮಿತ್ತ ಸೆರೆ ಸೇರಿಸಲ್ಪಟ್ಟ ಸ್ವಾಮಿ ಸತ್ಯಾನಂದಜೀ ಎಂಬ ಆರ್ಯ ಸತ್ಯಾಗ್ರಹಿಯು ಸೆರೆಯಲ್ಲೇ ಸತ್ತುಹೋದರು.

ಮೇ ತಿಂಗಳಲ್ಲಿ 5 ಸಾವಿರ ಸತ್ಯಾಗ್ರಹಿಗಳನ್ನು ಹೈದರಾಬಾದಕ್ಕೆ ಕಳುಹಿಸಿ ಹೈದರಾಬಾದ ಸತ್ಯಾಗ್ರಹವನ್ನು ಅತ್ಯಂತ ಜೋರಿನಿಂದ ಸಾಗಿಸಬೇಕೆಂದು ಆರ್ಯ ಸಮಾಜ ಯುದ್ಧ ಮಂಡಳಿಯವರು ನಿರ್ಧರಿಸಿರುವರು.

ಒಬ್ಬನನ್ನು ಕೈದು ಮಾಡುವ ಸಂದರ್ಭದಲ್ಲಿ ಉಂಟಾದ ಗಲಭೆಯಿಂದ, ಪೋಲೀಸರು ಮಂದಿಯ ಮೇಲೆ ಗುಂಡು ಹಾರಿಸಿದ ನಿಮಿತ್ತ, ಗಂಗ್‌ಪುರ ಸಂಸ್ಥಾನದಲ್ಲಿ ಸುಮಾರು 65 ಮಂದಿ ಸತ್ತರೆಂದೂ ಹಲವರು ಗಾಯಗೊಂಡರೆಂದೂ ತಿಳಿದುಬರುತ್ತದೆ.

ವಿಮಾನಧಾಳಿಯಿಂದ ರಕ್ಷಣೆಯಾಗುವಂತೆ ಕರಾಚಿಯಲ್ಲಿ ಸರ್ವ ಸಿದ್ಧಗಳೂ ರಭಸದಿಂದ ಸಾಗುತ್ತಿವೆ. ಮರಳಿನ ಗೋಣಿಗಳ ಸರಬರಾಯಿ, ವಿಷ ವಾಯುವಿನ ಅಪಾಯದಿಂದ ತಪ್ಪಿಸಿಕೊಳ್ಳುವ ಸಂಬಂಧದ ಉಪನ್ಯಾಸಗಳೇ ಮೊದಲಾದ ಹಲವು ಏರ್ಪಾಡುಗಳಾಗಲೇ ನಡೆದಿವೆ.

ಇಟಲಿಯವರು ಆಫ್ಘಾನೀ ಸ್ಥಾನಕ್ಕೆ ಹನ್ನೆರಡು ಫಿರಂಗಿ ಬಂಡಿಗಳನ್ನು ಕಳುಹಿಸಿ ಕೊಟ್ಟಿರುತ್ತಾರೆಂದೂ ಅವು ಕಳೆದ ವಾರ ಕರಾಚಿಗೆ ಬಂದವೆಂದೂ ಪ್ರಕಟವಾಗಿದೆ. ಮುಸಲೋನಿಯ ಪ್ರಭಾವವು ಭಾರತಕ್ಕೆ ಏನಾದರೂ ಬರಬಹುದೇ?

ಈ ದೇಶದ ಜನರಲ್ಲಿ ಐಕಮತ್ಯ ಉಂಟುಮಾಡಲೂ ಪರದೇಶದಲ್ಲಿ ಹಿಟ್ಲರ್ ಮುಂತಾದವರ ಘೋರ ವರ್ತನೆಯನ್ನು ಖಂಡಿಸಲೂ ಮಧುರಾದಲ್ಲಿ ತಿರುಪರಕುಂಡ್ರಂ ಬೆಟ್ಟದಲ್ಲಿನ ಒಂದು ಗುಹೆಯಲ್ಲಿ ಕುಳಿತು 21 ದಿವಸಗಳ ಉಪವಾಸ ವ್ರತವನ್ನು ಸ್ವಾಮಿ ಬಾಲ ಸುಬ್ರಹ್ಮಣ್ಯಂರವರು ಪ್ರಾರಂಭಿಸಿದ್ದಾರೆ

ಲೈಲಾಪ್ಪುರದಲ್ಲಿ, ಸರ್ಕಾರಕ್ಕೆ ಸೇರಿದ್ದೆಂಬ ಒಂದು ಸ್ಥಳದ ಮೇಲೆ ಕಟ್ಟಿದ್ದ ಕಾಂಗ್ರೆಸ್ಸಿನ ಒಂದು ಫ್ಲಾಗ್ ಸ್ಟಾಫನ್ನು ಕಿತ್ತುಹಾಕಲು, ತಹಸಿಲ್ದಾರರ ಪೇದೆ ಅಲ್ಲಿಗೆ ಹೋದಾಗ ಅವನನ್ನು ತಡೆದು ಬಡಿದರೆಂದು ಆ ಗ್ರಾಮದ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಹಾಗೂ ಮತ್ತೆ ಮೂವರಿಗೆ ತಲಾ ಎರಡುವರೆ ತಿಂಗಳ ಕಠಿಣ ಸಜೆ ವಿಧಿಲಾಗಿದೆ

ಲಾಹೋರ್ ಪ್ರಾಂತ್ಯದಲ್ಲಿ ಸಾಮಾನ್ಯವಾಗಿ 20 ಸಾವಿರ ಕೈದಿಗಳಿದ್ದು, ಅವರಲ್ಲಿ 16 ಸಾವಿರ ಮಂದಿಗೆ ಮಾತ್ರ ಸ್ಥಳವು ಅಲ್ಲಿನ ಜೈಲುಗಳಲ್ಲಿರುವುದರಿಂದ ಈ ಕೊರತೆಯ ನಿವಾರಣೆಗಾಗಿ ಅಮೃತಸರದಲ್ಲಿ 20ಲಕ್ಷ ರೂಪಾಯಿಗಳ ವೆಚ್ಚದಿಂದ ಹೊಸ ಜೈಲು ಕಟ್ಟಿಸಬೇಕೆಂದು ನಿರ್ಧಾರವಾಗಿದೆ. ಈ ಜೈಲಿನ ಸ್ಥಳದ ಬೆಲೆಯೇ 1½ ಲಕ್ಷ ರೂಪಾಯಿಗಳು.

ವಿದೇಶ

ಬ್ರಿಟನ್ ರುಮೇನಿಯಕ್ಕೆ ಸರಿಯಾದ ಭದ್ರತೆಯ ಮೇಲೆ 5 ಮಿಲ್ಯ ಸ್ಟರ್ಲಿಂಗ್ ಸಾಲ ಕೊಡುವುದಾಗಿ ತಿಳಿದು ಬರುತ್ತದೆ.

ಚೀನಿಯರು ಕೆಯೋನಿನಿಂದ ಜಪಾನಿಯರನ್ನು ಓಡಿಸಿ, ಅದನ್ನು ವಶಪಡಿಸಿಕೊಂಡು, ಕೆಂಟನನ್ನೂ, ಕೈಫೆಂಗನ್ನೂ ಆಕ್ರಮಿಸಲು ಮುಂದೊತ್ತುತ್ತಿದ್ದಾರೆ.

ಬ್ರಿಟನಿನಲ್ಲಿ ನಿರ್ಬಂಧ ಸೈನ್ಯ ಸಂಗ್ರಹ ಕಾರ್ಯವು ನಡೆಯುವಲ್ಲಿ, ಇಂಗ್ಲೆಂಡಿನಲ್ಲಿರುವ ಐರಿಶ್ ಫ್ರೀ ಸ್ಟೇಟಿನ ಹಾಗೂ ಉತ್ತರ ಐರ್ಲೇಂಡಿನ ಜನರು ವಿನಾಯಿಸಲ್ಪಡಬೇಕೆಂದು ಹಲವು ಮುಖಂಡರ ಅಭಿಮತವಾಗಿದೆ.

ಒಂದು ಕೋಟಿ ಜೇನು ಹುಳುಗಳನ್ನು ವಿಷಮಿಶ್ರಿತವಾದ ಸಕ್ಕರೆ ಹಾಕಿ ಕೊಂದದಕ್ಕಾಗಿ ಫ್ರಾನ್ಸ್ ಎಂಬಲ್ಲಿನ ಡೊಮಿಂಗೋ ಟೋರೆಸ್ ಎಂಬುವನಿಗೆ 3 ವರ್ಷ ಸಜೆ

ಇಂಗ್ಲೆಂಡ್‌ದೊಳಗಿಂದ ಮೂವರು ಜರ್ಮನರನ್ನು ಹೊರಗೆ ಹಾಕಿದ್ದರಿಂದ ಜರ್ಮನಿಯಲ್ಲಿ ವ್ಯಾಪಾರ ಮಾಡುತ್ತಿದ್ದ ಮೂವರು ಪ್ರಮುಖ ಬ್ರಿಟಿಷರಿಗೆ ಮೇ 10ನೇ ತಾರೀಕಿನೊಳಗಾಗಿ ಜರ್ಮನಿಯೊಳಗಿಂದ ಹೊರಟು ಹೋಗುವ ಆಜ್ಞೆ ವಿಧಿಸಲಾಗಿದೆ. ಅವರಿಗೆ ಜರ್ಮನಿಯಲ್ಲಿ ಇರುವದಕ್ಕೆ ಪರವಾನಿಗೆ ಕೊಡಿಸಬೇಕೆಂದು ಜರ್ಮನಿಯಲ್ಲಿಯ ಬ್ರಿಟಿಷ್ ಅಧಿಕಾರಿಗಳು ಪ್ರಯತ್ನ ಮಾಡುತ್ತಿದ್ದರು. ಆದರೆ ಅವರಿಗೆ ಯಶಸ್ಸು ಸಿಗಲಿಲ್ಲ.

ಜೇನು ಮೇಣ ಸಹಕಾರ ಸಂಘಕ್ಕೆ

ಏಜಂಟರು ಬೇಕಾಗಿದ್ದಾರೆ.

ಜೇನು ಮೇಣ ಸಂಘಕ್ಕೆ ಜೇನನ್ನೂ, ಮೇಣವನ್ನೂ ವಸೂಲ್‌ಮಾಡಿ ಕೊಡಲಿಕ್ಕೆ ಕೊಡಗಿನ ಎಲ್ಲಾ ಕಡೆಗಳಲ್ಲು ಏಜಂಟರು ಬೇಕಾಗಿದ್ದಾರೆ. ಸಂಘಕ್ಕೆ ಮಾರುವ ಕ್ರಯಕ್ಕೇನೆ ಜನರಿಂದ ಕೊಂಡುಕೊಳ್ಳಬೇಕು. ಚೆನ್ನಾಗಿಲ್ಲದ್ದನ್ನು ವಾಪಾಸು ಮಾಡಲಾಗುವುದು.

ಇಷ್ಟವಿರುವವರು ಎಷ್ಟು ಜೇನು ಮತ್ತು ಮೇಣ ಕೊಡಲು ಸಾಧ್ಯವಿದೆ ಎಂದು ನಮೂದಿಸಿ ಹೆಚ್ಚಿನ ಮಾಹಿತಿಗೆ ಸಂಘದ ವೀರರಾಜಪೇಟೆ ಆಫೀಸಿಗೆ ಬರೆದುಕೊಳ್ಳತಕ್ಕದ್ದು.

ಪ್ರೆಸಿಡೆಂಟ್,
ಜೇನು ಮೇಣ ಸಂಘ.

ರಾಮದುರ್ಗ ಅತ್ಯಾಚಾರದ ಬಗ್ಗೆ.

ಮಹಾತ್ಮರ ಹೇಳಿಕೆ.

(ಹರಿಜನ.-29-4-39.)

ರಾಮದುರ್ಗ ಸಂಸ್ಥಾನದಲ್ಲಿ ನಡೆದ ಅತ್ಯಾಚಾರದ ವಿಚಾರ ಮಹಾತ್ಮರು ಒಂದು ಪ್ರಕಟಣೆಯನ್ನು ಹೊರಡಿಸಿ ನಡೆದ ಹಿಂಸಾಚರಣೆಯನ್ನು ಖಂಡಿಸಿ ಕಾಂಗ್ರೆಸಿನ ಮುಖಂಡರು ಜನತೆಯನ್ನು ಸರಿಯಾಗಿ ತರಬೇತುಮಾಡದ್ದರ ಪರಿಣಾಮವೇ ಇದೆಂದರು. ಮುಂದುವರಿಸುತ್ತಾ-ಕಾಂಗ್ರೆಸ್ಸಿನಲ್ಲಿ ಮನೋವಾಕ್ಕಾಯಗಳಿಂದ ಹಿಂಸಾಚಾರವನ್ನು ತೊಡೆದು ಹಾಕಲು ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳವರೂ, ಹೊಸ ವರ್ಕಿಂಗ್ ಕಮಿಟಿಯು ಸ್ಥಾಪಿಸಲ್ಪಟ್ಟ ಮೇಲೆ, ಅದೂ, ಉಗ್ರೋಪಾಯಗಳನ್ನು ಕೈಕೊಳ್ಳಬೇಕಾಗುವದು. ಎಷ್ಟೋ ಸಲ ಸತ್ಯ, ಅಹಿಂಸೆಗಳನ್ನು ಸಹ ಬಿಟ್ಟು ನಡೆಯಲಾಗುತ್ತಿದೆಯೆಂದು ನಾನು ಓದುವ ಹಲ ಕೆಲವು ವೃತ್ತಪತ್ರಗಳಿಂದ ನನಗೆ ಕಂಡು ಬರುತ್ತದೆ. ಈ ಅನಿಷ್ಟವನ್ನು ಹೇಗೆ ಹೋಗಲಾಡಿಸಬೇಕೆಂಬದು ನನಗೆ ತಿಳಿಯದಂತಾಗಿದೆ. ಕಾಂಗ್ರೆಸ್ ಜನರಿಂದ ನಡೆಸಲ್ಪಡುವ ವೃತ್ತಪತ್ರಗಳು ನೈತಿಕ ಅಧಿಕಾರಕ್ಕೆ ತಲೆಬಾಗಿ ನಡೆಯಬಹುದು. ಆದರೆ ಹಳ್ಳಿಗಳಲ್ಲಿ ಕೆಲಸ ಮಾಡುವ ಕಾಂಗ್ರೆಸ್ ಜನರಿಂದಲೇ ಹೆಚ್ಚು ಕಿಡಿಗೇಡಿತನವಾಗುತ್ತದೆಂದು ನನಗನಿಸಹತ್ತಿದೆ. ಇವರನ್ನು ಕಡುತರವಾದ ಶಿಸ್ತಿಗೊಳಪಡಿಸಬೇಕು. ಇದೇನೂ ಅಷ್ಟೊಂದೂ ಕಷ್ಟತರವಾಗಲಿಕ್ಕಿಲ್ಲ.

ನಿಷ್ಪಕ್ಷಪಾತ ವಿಚಾರಣೆಯಾಗಬೇಕು.

ಈ ಘಟನೆಗಳನ್ನು ಕುರಿತು ನಿಷ್ಪಕ್ಷಪಾತ ವಿಚಾರಣೆಯನ್ನು ನಡೆಸಬೇಕೆಂದು ನಾನು ಸೂಚಿಸುತ್ತೇನೆ. ಈ ಕೆಲಸವನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಒಬ್ಬ ಹಾಯಕೋರ್ಟು ನ್ಯಾಯಾಧೀಶರಿಗೆ ಒಪ್ಪಿಸಬೇಕು. ಈ ಕೆಲಸಕ್ಕೆ ರಾಜಾಸಾಹೇಬರು ಸಹಾಯಮಾಡಿದರೆ ಅದು ಬಹಳ ಸುಲಭವಾಗುವದು. ಒಂದು ವೇಳೆ ಅವರು ಮಾಡದಿದ್ದರೂ, ಸತ್ಯವನ್ನು ಕಂಡು ಹಿಡಿಯಲು ಕಷ್ಟವೇನೂ ಆಗದು.

ಮತ್ತೊಂದು ದುರ್ದೈವದ ಪರಿಣಾಮ

ರಾಮದುರ್ಗದ ಚಳವಳಿಯಿಂದ ಮತ್ತೊಂದು ದುರ್ದೈವದ ಪರಿಣಾಮವಾಗಿದೆ. ಈ ಚಳವಳಿಯು ಈಗ ಜಾತೀಯ ಸ್ವರೂಪವನ್ನು ತಾಳಿದೆ. ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಎಂಬೆರಡು ಪಕ್ಷಗಳಿವೆ. ಕರ್ನಾಟಕವು ಈ ಬಗೆಯ ಜಾತೀಯ ವಿಷದಿಂದ ದೂರವಾಗಿರುವದೆಂದು ಇದು ವರೆಗೆ ನನ್ನ ಭಾವನೆಯಾಗಿತ್ತು. ಆದರೆ ಅಲ್ಲಿಯೂ ಈ ವಿಷವು ಬಹಳ ಆಳವಾಗಿ ವ್ಯಾಪಿಸಿರುವದೆಂದು, ನನಗೆ ಕಳಿಸಿಕೊಡಲ್ಪಟ್ಟಿರುವ ವೃತ್ತಪತ್ರಿಕೆಗಳ ಅವತರಣಿಕೆಗಳನ್ನೋದಿದರೆ ಕಂಡು ಬರುತ್ತದೆ. ಈ ಅನಿಷ್ಟವನ್ನು ಕೂಡಲೇ ಹೋಗಲಾಡಿಸುವದು ಅತ್ಯಂತ ಅವಶ್ಯವಾಗಿದೆ.

ಈ ವಿಷಯದಲ್ಲಿ ಯೋಗ್ಯ ಹಾದಿ ತೋರಿಸಬೇಕೆಂದು ನನ್ನನ್ನು ಕೇಳಲಾಗಿದೆ. ಸ್ಥಾನಿಕ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅಭ್ಯಾಸ ಮಾಡದೆ, ಸಲಹೆ ಕೊಡುವದು, ಸಾಹಸದ ಮಾತಾಗುವದು. ಈ ಜಾತೀಯ ವೈಮನಸ್ಸನ್ನು ಹೋಗಲಾಡಿಸಬೇಕೆಂಬ ಆಸಕ್ತಿಯುಳ್ಳ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಸಾಕಷ್ಟು ಜನರಿದ್ದರೆ, ಅವರು ಆ ಪ್ರದೇಶದಲ್ಲಿ ಸಂಚರಿಸಿ, ಈ ವೈಮನಸ್ಸಿನ ಕಾರಣಗಳೇನೆಂಬದನ್ನು ಕಂಡು ಹಿಡಿದು, ಅವುಗಳನ್ನು ನಿವಾರಿಸಲು ಪ್ರಯತ್ನಪಡಬೇಕು. ಈ ವೈಮನಸ್ಸು ದೇಶದಲ್ಲಿ ಹಿಂಸಾಚಾರವು ಪ್ರವೃತ್ತಿ ಹೆಚ್ಚುತ್ತಿದೆಯೆಂಬತರ ಲಕ್ಷಣವಾಗಿದೆ ಎಂದು ಹೇಳಿದರು.

Notice.

InCome-Tax.

Return of total income and of total world income of the previous year for assessment in the year commencing on the 1st April 1939.

In pursuance of Sub-section (1) of Section 22 of the Indian Income-tax Act, 1922 (XI of 1922), notice is hereby given to EVERY PERSON whose total income during the previous year exceeded the maximum amount not chargeable to Income-tax to furnish within sixty days from the date of this Notice a return in the prescribed from & verified in the prescribed manner setting forth (along with such other particulars as are required by the said form) his total income and total world income during that year.

A copy of the prescribed form will be supplied free of charge to any person who, for the purpose of complying with this notice, applies at my office.

Penalty—Any person who fails without reasonable cause to furnish the return required by this notice, or fails without reasonable cause to furnish it within the time allowed or in the manner required is liable under Section 28 of the said Act to a penalty not exceeding one and a half times any tax payable by him.

K. Chengappa,
Income-tax Officer.
18—4—1939.

ಒಲಿದರೆ ನಾರಿ, ಮುನಿದರೆ ಮಾರಿ.

ತರುಣರೇ ಎಚ್ಚರಿಕೆ!

ಮುರಾಸಿಪುರದ ಸಬ್ ಡಿವಿಜನಲ್ ಮೇಜಸ್ಟ್ರೇಟರ ಕೋರ್ಟಿನ ಮುಂದೆ ಓರ್ವ ತರುಣಿಯು ವಿಚಾರಣೆಗೆ ಗುರಿಪಡಿಸಲ್ಪಟ್ಟಳು. ಒಬ್ಬ ಜಮೀನ್ದಾರನನ್ನು ಕೊಂದಳೆಂದು ಅವಳ ಮೇಲೆ ಆರೋಪಣೆ. ತರುಣಿಯು ತನ್ನಿಂದ ಕೊಲ್ಲಲ್ಪಟ್ಟ ಜಮೀನ್ದಾರನು ತನ್ನನ್ನು ಸದಾ ತನ್ನೊಡನೆ ವಿಹರಿಸಲು ಕೇಳುತ್ತಿದ್ದನೆಂದೂ, ಒಂದು ದಿನ ಮನೆಯಲ್ಲಿ ತಾನೊಬ್ಬಳೇ ಇರುವಾಗ ಆವನು ಬಂದು ಬಲಾತ್ಕಾರ ಉಪಯೋಗಿಸಿದನೆಂದೂ, ಆಗ ತಾನವನನ್ನು ಕೊಂದದ್ದು ನಿಜವೆಂದೂ ಹೇಳಿದಳು. ಕೋರ್ಟಿನವರು ಪ್ರಶ್ನಿಸಲಾಗಿ ತಾನು ಚೆನ್ನಾಗಿ ಕುಸ್ತಿ ಮಾಡುವವಳೆಂದು ಹೇಳಿದಳು. ಪೊಲೀಸ್ ಇನ್ಸ್‌ಪೆಕ್ಟರು ಮಧ್ಯೆ ಬಾಯಿ ಹಾಕಿ ಇವಳು ಇನ್ನೊಬ್ಬ ಜಮೀನ್ದಾರನ ಪ್ರೇರಣೆಯಿಂದ ಅವನನ್ನು ಕೊಂದಳೆಂದೂ, ಅವಳು ಕುಸ್ತಿ ಬಲ್ಲವಳೆಂಬುದು ನಿಜವಲ್ಲವೆಂದೂ ಹೇಳಲಾಗಿ ಅವಳು ಇನ್ಸ್‌ಪೆಕ್ಟರನ್ನು ಕೋರ್ಟಿನೊಳಗೇ ತನ್ನೊಡನೆ ಕುಸ್ತಿಗೆ ನಿಲ್ಲಬೇಕು, ಆಗ ತನ್ನ ಮಾತಿನ ಸತ್ಯತೆಯನ್ನು ತೋರಿಸುವೆನೆಂದಳು. ತನ್ನ ಮಾತನ್ನು ಮುಗಿಸುತ್ತಾ ಜಮೀನ್ದಾರನ ಕೊಲೆಗೆ ತಾನೊಬ್ಬಳೇ ಕಾರಣವೆಂದೂ ಹೇಳಿದಳು.

ನೋಟೀಸು.

ಕೊಡಗು ಜಮೀನ್ದಾರರ ಸಂಘದ ವಾರ್ಷಿಕ ಮಹಾ ಸಭೆಯನ್ನು ನಡಿಸುವ ವಿಚಾರ ತೀರ್ಮಾನಿಸಲು ಈ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ. 16 ನೇ ಮಂಗಳವಾರ ಮಧ್ಯಾಹ್ನದ ಮೇಲೆ 2 ಗಂಟೆಗೆ ನೀರಾಜವೇಟೆಯಲ್ಲಿ ನಡೆಯುವುದು. ಕಮಿಟಿ ಮೆಂಬರುಗಳೆಲ್ಲರೂ ದಯವಿಟ್ಟು ತಪ್ಪದೆ ಬರಬೇಕಾಗಿ ಕೋರಿಕೆ.

ಮಡಿಕೇರಿ, ಪಿ. ಜಿ. ಅಯ್ಯಪ್ಪ,
ತಾ. 3-5-39 ಗೌ. ಕಾರ್ಯದರ್ಶಿ.
2-1

Wanted.

Wanted candidates. Allowance Rs. 28. Uniform passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce, and Filmcraft. Rules and Entrance form on annas eight. Director, Royal Telegraph and Rly. Duties College, Bombay.

8-1

ಪ್ರಪಂಚ ಮಹಾಯುದ್ಧ ನಡೆಯುವುದೆ? ಹಾಗಿದ್ದರೆ ಅದೆಂದು?

(ಭವಿಷ್ಯ.)

ಯುದ್ಧದ ಕಾರ್ಮೋಡದಿಂದ ಆಕಾಶವು ಕವಿದಿರಲು, ಪಯಣಿಗನು ಕೈಯಿಂದ ಕೊಡೆಯನ್ನು ಬಿಡುವ ಹಾಗಿಲ್ಲ! ಇಂತಹ ಒಂದು ಪರಿಸ್ಥಿತಿಯು ಪಾಶ್ಚಾತ್ಯ ನಭೋಮಂಡಲದಲ್ಲಿ ಕಂಡು ಬರುತ್ತಿದೆ. ಎಲ್ಲಾ ರಾಷ್ಟ್ರಾಧಿಪತಿಗಳೂ, ರಾಜರೂ, ಸಾಮ್ರಾಜ್ಯ ತೃಷ್ಣೆಯಿಂದ, ತಂತಮ್ಮ ಹಕ್ಕು, ಬಾಧ್ಯತೆ, ಮಾನ ಮರ್ಯಾದೆಗಳ ಸಂರಕ್ಷಣೆಗಳಿಗಾಗಿ, ಬೇಕುಬೇಕೆನಿಸಿದ ವಿವಿಧ ಶಕ್ತಿಯ, ಪ್ರಚಂಡೋತ್ಪಾತ ಪ್ರಳಯಸೃಷ್ಟಿಯನ್ನೇ ಗೈಯುವ ಯುದ್ಧೋಪಕರಣಗಳನ್ನು ತಯಾರಿಸಿದ್ದಾರೆ; ತಯಾರಿಸುತ್ತಿದ್ದಾರೆ. ಈ ಕಾರ್ಮೋಡವು, ಆ ರಾಷ್ಟ್ರದಲ್ಲಿ, ಆ ಅಂತರಿಕ್ಷದಲ್ಲಿ ಮಳೆಗರೆಯದಿರುವುದು, ಅಸಂಭವ. ಭೀಕರವಾಗಿ ಸುರಿಯಲಿರುವ ಆ ಮಾರುತನ ಘೋಷಾರವವು, ನಮ್ಮೆಲ್ಲರ ಕಿವಿಗೂ ಇಂದು ಕೇಳುತ್ತಿದೆ. ಆದರೆ ಆ ಕಾರ್ಮೋಡಗಳು, ಗುಡುಗನ್ನು ಮಾತ್ರ ಎಬ್ಬಿಸಿ, ಮಾಯವಾಗುವವುಗಳೇ? ಎಂಬುದು ಪ್ರಕೃತ ವಿಚಾರಣೀಯ.

ನೋಡವು ಆ ಪಾಶ್ಚಾತ್ಯ ನಭೋಮಂಡಲ; ಅದಕ್ಕೆ ಇಂದು, ಗುರು ಶನಿಗಳು ದ್ವಾದಶದಲ್ಲಿ ಮಾತ್ರವಲ್ಲ; ದ್ವಾದಶದಲ್ಲಿ ನಿಂದ ಗುರು ಶನಿಗಳ ಮೇಲೆ, ಯುದ್ಧದೇವತೆಯ ಆ ಸೇನಾಕಾರಕನ, ಅಂಗಾರಕನ ದೃಷ್ಟಿ. ಅದುದರಿಂದ, ಪ್ರಪಂಚ ಫಲ ಪರಿಸ್ಥಿತಿಯನ್ನು ಜ್ಯೋತಿಷ ಸಿದ್ಧಾಂತ ರೀತ್ಯಾ ನಿರ್ಣಯಿಸುವಾಗ, ಅಸಮಾಧಾನ, ಸಂಕಷ್ಟ, ಗೊಂದಲ. ಪೀಡೆಗಳಿಗೆ ಪಾಶ್ಚಾತ್ಯ ದೇಶವು ಹೊಂದಿದೆಯೆಂದು ಯಾರಿಗಾದರೂ ಹೇಳಬಹುದು.

ಆದರೆ, ಇನ್ನು ಮುಂದೆ ದುಃಖ, ಪ್ರಳಯಕಾರಕನೆನಿಸಿದ ಆ ಶನಿಮಹಾರಾಯನು, ಪಾಶ್ಚಾತ್ಯ ರಾಷ್ಟ್ರವಾದ ಮೇಷಕೆ ಕಾಲಿಡಲಿದ್ದಾನೆ. ಅವನ ಗಮನವು, ಏಪ್ರಿಲ್ ತಾ. 28 ಕ್ಕೆ ಸಂಭವಿಸುತ್ತಿದೆ ಮಾತ್ರವಲ್ಲ; ಆ ಯುದ್ಧ ದೇವತೆಯ ಮೇ 6 ಕ್ಕೆ, ತನ್ನ ಉಚ್ಚವಾದ ಮಕರ ಸೇರುತ್ತಾನೆ. ಅಲ್ಲಿ ನಿಂದು, ಮಹಾವಾದ ಶಕ್ತಿಯಿಂದ, ಆ ಶನಿಯ ಮೇಲೆ ದೃಷ್ಟಿಯನ್ನು ಕೊಡುವನು. ಅನಿವಾರ್ಯವಾದ ಯುದ್ಧ ಪ್ರಸಂಗವನ್ನು ಅದರಿಂ ಉಂಟು ಮಾಡುವನು. ಆ ಮುಂ 1940 ಫೆಬ್ರುವರಿ ಪರಿಯಂತ, ಯುದ್ಧ ಒಮ್ಮೆ ಕಾಲಿಡುತ್ತ, ತೆಗೆಯುತ್ತಾ ಮುಂದೂತ್ತಿ, ಎರಡೂವರೆ ವರ್ಷಗಳ ತನಕ, ಸ್ತೀರ್ಣವಾದ ಅಸಮಾಧಾನವೂ, ಅಂ ವ್ಯವಸ್ಥಿತಿಯೂ ಉಂಟಾಗಲಿದೆ. ಯುದ್ಧದಲ್ಲಿ, ಇಂಗ್ಲೇಡು ಪರಾಜಯ ಪ್ರಸ್ತಾಪವನ್ನು ಅನುಭವಿಸಬೇಕಾಗದೆ. ಭಾರತಕ್ಕೆ, ಈ ಸಂಭವದಿಂದ ಇನ ರಾಷ್ಟ್ರೀಯ ಒಡಕಲ್ಲದೆ ಮತ್ತಾವು ಉಂಟಾಗದು.

(ಕಂ.)

ರಾಷ್ಟ್ರಪತೀತ್ವಕ್ಕೆ ಬೋಸರ ರಾಜಿನಾಮೆ.

ಅಧ್ಯಕ್ಷತನಕ್ಕೆ ರಾಜೇಂದ್ರ ಪ್ರಸಾದರ ಆಯ್ಕೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ನಡವಳಿಕೆ.

ಹೊಸ ವರ್ಕಿಂಗ್ ಕಮಿಟಿಯ ನೇಮಕ.

ಎಡಪಕ್ಷದವರ ವಿನಾಯಿತಿ.

ಬೋಸರು.



ಪ್ರಸಾ[illegible]ರು

ಅಖಿಲ ಭಾರತ ಕಾಂಗ್ರೆಸ ಕಮಿಟಿ ಮೀಟಿಂಗು ತಾರೀಕು 29 ಕ್ಕೆ ಇಡಲ್ಪಟ್ಟಿತ್ತು. ಇದಕ್ಕೆ ದಿವ ಮೊದಲು ಗಾಂಧಿ–ಬೋಸರ ಭೇಟಿಯೂ ಏರ್ಪಾಡಾಗಿತ್ತು. ಈ ಭೇಟಿಯಲ್ಲಿ ಗಾಂಧೀಜಿಯವರು ಸುಭಾಷರು ಗಾಂಧೀತತ್ವಾನುಯಾಯಿಗಳಾದವರಿ ಮಾತ್ರ ಅವರ ಇಷ್ಟದಂತೆ ವರ್ಕಿಂಗ್ ಕಮಿಟಿ ನೇಮಿಸಲು ಸಾಧ್ಯವೆಂದೂ ಇಲ್ಲವೇ ಕಾಂಗ್ರೆಸ ಅಧ್ಯಕ್ಷರ ಚುನಾವಣೆಗೆ ಮೊದಲಿದ್ದ ಹಳೇ ವರ್ಕಿಂಗ್ ಕಮಿಟಿಯೇ ಈ ವರ್ಷವೂ ಅಧಿಕಾರದಲ್ಲಿರಬೇಕೆಂದೂ ಸೂಚಿಸಿದ್ದರು. ಬೋಸರು ವರ್ಕಿಂಗ್ ಕಮಿಟಿಯಲ್ಲಿ ಈ [illegible] ಹದಿನೈದು ವರ್ಷಗಳಿಂದ [illegible] ತ್ತು ಜನ [illegible] ಬಾಕಿ [illegible] ಜನರ [illegible] ಸಂಗಡಗಳಿಂದ ಚುನಾಯಿತ [illegible] ಸೂಚಿಸಿದ್ದರು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲಿ [illegible] ಮಾನಿಸಲ್ಪಡ [illegible] ರಾಷ್ಟ್ರಪತೀತ್ವಕ್ಕೆ ರಾಜಿನಾಮೆ [illegible] ಮೀಟಿಂಗಿನ [illegible] ಈ ಕೆಳಗೆ ಕೊಡಲಾಗಿದೆ.

ಗಾಂಧಿ-ಬೋಸರ ಭೇಟಿ.

ಗಾಂಧೀಜಿಯವರ ವಾದ.

ವರ್ಕಿಂಗ್ ಕಮಿಟಿ ನೇಮಕದ ವಿಚಾರದಲ್ಲಿ ಗಾಂಧೀಯವರು ಈ ಸೂಚನೆಯನ್ನಿತ್ತರು 'ಅಧ್ಯಕ್ಷರ ಚುನಾವಣೆ ನಡೆಯುವ ಮೊದಲು ಯಾವ ವರ್ಕಿಂಗ್ ಕಮಿಟಿಯು ಕೆಲಸ ಮಾಡುತಿತ್ತೋ ಅದೇ ಈ ವರ್ಷವೂ ಕೆಲಸ ಮಾಡಬೇಕು. ಹಳೇ ವರ್ಕಿಂಗ್ ಕಮಿಟಿಯಲ್ಲಿದ್ದ ಶರತ್ ಚಂದ್ರಬೋಸರನ್ನಲ್ಲದೆ ಯಾವ ಎಡಪಕ್ಷೀಯರನ್ನೂ ವರ್ಕಿಂಗ್ ಕಮಿಟಿಯಲ್ಲಿ ಸೇರಿಸುವದು ಅಸಾಧ್ಯ. ಶ್ರೀ ಕೃಪಾಲಿನಿಯವರೇ ಕಾರ್ಯದರ್ಶಿಗಳಾಗಿರಬೇಕು. ವರ್ಕಿಂಗ್ ಕಮಿಟಿ ಸದಸ್ಯರ ಖಾಯಿಲೆಯೂ, ಜೈಲುವಾಸದಿಂದ ಖಾಲಿಯಿರುವ ಸ್ಥಳಗಳನ್ನು ಸಹ ಬರುವ ಮತ್ತೊಂದು ಮೀಟಿಂಗಿನಲ್ಲಿ ಭರ್ತಿಮಾಡಬೇಕೇ ವಿನಹ ಈಗ ಕೂಡದು' ಎಂದು ಹೇಳಿದ್ದರಂತೆ.

ಬೋಸರ ನಿರ್ಧಾರ.

'ವರ್ಕಿಂಗ್ ಕಮಿಟಿಯಲ್ಲಿ ಎಡ ಪಕ್ಷದವರ ಪರ ಶರತ್ ಚಂದ್ರಬೋಸ್, ಆಚಾರ್ಯ ನರೇಂದ್ರದೇವ್ ಮತ್ತು ಜಯಪ್ರಕಾಶ ನಾರಾಯಣರವರನ್ನು ಸೇರಿಸಬೇಕು. ಕೆಲವು ವರ್ಷಗಳಿಂದ ನಡೆದು ಬಂದಂತೆ ವರ್ಕಿಂಗ್ ಕಮಿಟಿಯಲ್ಲಿ ಹತ್ತು ಜನ ಹಳೇ ಸದಸ್ಯರಿರಲು ಅಡ್ಡಿಯಿಲ್ಲ. ಬಾಕಿ ಸ್ಥಳಗಳಿಗೆ ಹೊಸ ಚುನಾವಣೆಯಾಗುವದು ಅವಶ್ಯ. ಹೀಗೆ ಮಾರ್ಪಾಡಾದಲ್ಲೀನೆ ತಾನು ತನ್ನ ಜವಾಬ್ದಾರಿಯನ್ನಿಟ್ಟುಕೊಳ್ಳುವದು ಸಾಧ್ಯ' ಎಂದು ಹೇಳಿಬಿಟ್ಟಿದ್ದರು.

ಸರೋಜಿನಿ ದೇವಿಯವರು.

ಅಖಿಲ ಭಾರತ ಕಾಂಗ್ರೆಸ್ ಮೀಟಿಂಗು.

ಮೊದಲೇ ನಿಶ್ಚಯಿಸಿದ್ದಂತೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗು ಕಲ್ಕತ್ತಾದಲ್ಲಿ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ ನೆರೆಯಿತು.

ರಾಷ್ಟ್ರಪತಿಗಳಾದ ಸುಭಾಷಬಾಬುಗಳು ಎಲ್ಲರೂ ಶಾಂತತೆಯಿಂದಿರಬೇಕೆಂದು ಕೇಳಿಕೊಂಡು ಮಹಾತ್ಮರ ಕಾಗದವನ್ನು ಓದಿದರು. ನಂತರ ತಮ್ಮ ರಾಜಿನಾಮೆಯ ವಿಚಾರ ಈ ಹೇಳಿಕೆಯನ್ನು ಕೊಟ್ಟರು 'ತ್ರಿಪುರಿಯಲ್ಲಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯನ್ನು ನೇಮಿಸುವ ಬಗ್ಗೆ ಪಾಸಾದ ಠರಾವು ಎಲ್ಲರಿಗೂ ತಿಳಿದಿರುವದು. ತ್ರಿಪುರ ಕಾಂಗ್ರೆಸಿನ ನಂತರ ಈ ವರೆಗೆ ವರ್ಕಿಂಗ್ ಕಮಿಟಿಯನ್ನು ನೇಮಿಸದ್ದಕ್ಕೆ ನಾನು ವ್ಯಸನಪಡುತ್ತೇನೆ. ಆದರೆ ನನ್ನ ಹತೋಟಿಯಲ್ಲಿಲ್ಲದ ಸಮಸ್ಯೆಯೊದ್ದರಿಂದ ಹೀಗಾಗಲು ಕಾರಣ. ನನ್ನ ಕಾಯಿಲೆಯ ದೆಸೆಯಿಂದ ಗಾಂಧಿಜೀಯವರನ್ನು ಕಂಡು ವಿಚಾರವನ್ನು ಒಡನೇ ತೀರ್ಮಾನಿಸಲಾಗಲಿಲ್ಲ. ಆದ್ದರಿಂದ ಅವರೊಂದಿಗೆ ಪತ್ರವ್ಯವಹಾರ ನಡೆಸಬೇಕಾಯಿತು. ಇದು ನಮ್ಮಲ್ಲಿಯ ಸಂಶಯಗಳನ್ನು ಪರಿಹರಿಸಿದರೂ, ಒಂದು ನಿಶ್ಚಿತ ಅಭಿಪ್ರಾಯಕ್ಕೆ ಬರಲು ಸಾಧ್ಯವಾಗಲಿಲ್ಲ. ಈ ಪತ್ರವ್ಯವಹಾರವು ನಿಷ್ಪ್ರಯೋಜಕವೆಂದು ತಿಳಿದೊಡನೇ ನಾನು ಗಾಂಧಿಜೀಯವರನ್ನು ಸ್ವತಹ ಕಾಣಲು ಪ್ರಯತ್ನಪಟ್ಟೆನು. ಅದೂ ಸಾಧ್ಯವಾಗಲಿಲ್ಲ. ಮಹಾತ್ಮರು ಕಲ್ಕತ್ತೆಗೆ ಬಂದ ಮೇಲೆ ನಮ್ಮೊಳಗೆ ಧೀರ್ಘಾಲೋಚನೆಯಾಯಿತು. ಆದರೆ ಇದರಿಂದ ಸಮಸ್ಯೆಯು ತೀರ್ಮಾನವಾಗಲಿಲ್ಲ. ಗಾಂಧಿಜೀಯವರು ನನ್ನ ಇಷ್ಟದಂತೆ ವರ್ಕಿಂಗ್ ಕಮಿಟಿಯನ್ನು ನೇಮಿಸಿ ಕಾರ್ಯ ಮುಂದುವರಿಸಲು ಸೂಚಿಸಿದರು. ಆದರೆ ಅದು ತ್ರಿಪುರಿಯಲ್ಲಾದ ಪಂತರ ಠರಾವಿಗೆ ವಿರೋಧವಾಗುವದರಿಂದಲೂ, ಅದು ಇಡೀ ಕಾಂಗ್ರೆಸಿನ ನಂಬಿಗೆಗರ್ಹವಾಗದ್ದರಿಂದಲೂ ಸಾಧ್ಯವಾಗಲಿಲ್ಲ. ಆದ್ದರಿಂದ ನನ್ನ ಹೆಗಲಲ್ಲಿದ್ದ ಜವಾಬ್ದಾರಿಯನ್ನು ತ್ರಿಪುರಿ ಠರಾವಿನಂತೆ ಹೊತ್ತು ವರ್ಕಿಂಗ್ ಕಮಿಟಿಯನ್ನು ಸೂಚಿಸಬೇಕೆಂದು ಕೇಳಿಕೊಂಡೆನು. ಅಲ್ಲದೆ ಯಾವ ಕಮಿಟಿಯನ್ನು ನೇಮಿಸಿದರೂ ನಾನು ಅದಕ್ಕೆ ಒಳಗಾಗುವೆನೆಂದೂ ಪಂಡಿತ ಪಂತರ ಠರಾವನ್ನು ಮಾನಿಸುವದು ಕರ್ತವ್ಯವೆಂದೂ ಹೇಳಿದೆನು. ಆದರೆ ದುರಾದೃಷ್ಟವಶಾತ್ ಗಾಂಧೀಜಿಯವರು ಕಮಿಟಿಯನ್ನು ಸೂಚಿಸಲು ಒಪ್ಪಲಿಲ್ಲ. ಮಹಾತ್ಮರು ಹೇಳಿದಂತೆ ಇತರ ಮುಖಂಡರೊಡನೆ ವಿಚಾರ ವಿನಿಮಯಮಾಡಿ ಒಂದು ತೀರ್ಮಾನಕ್ಕೆ ಬರಲು ಪ್ರಯತ್ನಿಸಲಾಯಿತು. ಅದೂ ನಿಷ್ಫಲ. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಮುಂದಿರುವ ಈ ಜಟಿಲ ಸಮಸ್ಯೆಯನ್ನು ತೀರ್ಮಾನಿಸುವ ಬಗ್ಗೆ ಹೇಗೆ ಸಹಾಯ ಮಾಡಬಹುದೆಂದು ಪೂರಾ ಆಲೋಚಿಸಿ ನಾನು ಅಧ್ಯಕ್ಷನಾಗಿರುವದು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರ ವರ್ಕಿಂಗ್ ಕಮಿಟಿ ಚುನಾವಣಾ ಪಥಕ್ಕೆ ತೊಂದರೆಯೆಂದು ತಿಳಿದುಕೊಂಡೆನು. ಅಲ್ಲದೆ ಹೊಸ ಅಧ್ಯಕ್ಷರಾದರೆ ಈ ಸಮಸ್ಯೆಯು ಬೇಗನೆ ತೀರ್ಮಾನವಾಗುವದೆಂಬ [illegible] ದರಿಂದ ಇಂದು ನಾನು ಕಾಂಗ್ರೆಸಿನ ಅಧ್ಯಕ್ಷಸ್ಥಾನಕ್ಕೆ ರಾಜಿನಾಮೆಯನ್ನಿತ್ತಿರುವೆನು. [illegible] ಹಾಗೂ [illegible] ದಕ್ಕಿದ [illegible] ಬೇಕು. [illegible] ರುವೆನು. ನಾನು ಕಾಂಗ್ರೆಸಿನ ಅಧ್ಯಕ್ಷನಾದರೇನು? [illegible] ಈ ಕಾಂಗ್ರೆಸ್ [illegible] ಯು [illegible] ಕೆಲಸ ಮಾಡು[illegible]ಲ್ಲದ'

[illegible]ರ [illegible]

'ಕಾಂಗ್ರೆಸ [illegible] ಗಿ [illegible] ಸಂಸ್ಥೆಯಲ್ಲಿ [illegible] ವಲ್ಲ. ಆದರೆ ಇಂದಿನ [illegible] ಗಳ [illegible] ಯಿಸುವಂಥವಗಿ [illegible] ವಿಚಾರಗಳನ್ನು ಮರೆತು ಐಕ್ಯಮತ್ಯದಿಂದ [illegible] ಮುಂದರಿಯಬೇಕು. [illegible]

ರಾಜಿನಾಮೆಯನ್ನು ವಾಪಾಸು ತೆಗೆದು [illegible] ವಾದಿಸಿದರು.

ಸರ್ದಾರ್ ವಲ್ಲಭಬಾಯಿ ಪಟೇಲರು

ಈಗ ಸುಭಾಷ ಬೋಸರ ಹೇಳಿಕೆಯು ಇರುವದು. ಅವರ ಹೇಳಿಕೆಯಿಂದ ಅವರು ತ್ರಿಪುರಿಯ ಪಂತರ ಠರಾವಿಗೆ ಒಳಪಟ್ಟು ನಡೆಸುವರೆಂದು ತಿಳಿದುಬರುತ್ತದೆ. ಹಾಗಿಯೇ ಆ ಠರಾವಿನಂತೆ ಗಾಂಧೀಯವರು ನಡೆಸುವದೂ ಕಷ್ಟವಿದೆ. ಇಂದಿನ ವರೆಗೆ ಕಾಂಗ್ರೆಸು ಬಿಕ್ಕಟ್ಟಿನ ಸಂದರ್ಭಗಳಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಿದೆ. ಆದ್ದರಿಂದ ಸುಭಾಷ ಬಾಬುಗಳು ತಮ್ಮ ರಾಜಿನಾಮೆಯನ್ನು ವಾಪಾಸು ತೆಗೆದುಕೊಳ್ಳಬೇಕೆಂದು ಅವರನ್ನು ಕೇಳಿಕೊಳ್ಳುತ್ತೇನೆ' ಅಲ್ಲದೆ ಈ ಸಂದಿಗ್ಧ ಸಮಯದಲ್ಲಿ ನಾವು ಭೇದಭಾವವನ್ನಿಟ್ಟುಕೊಂಡು ನಮ್ಮ ಶತ್ರುಗಳಿಗೆ ಮುಂದರಿಯಲು ಅವಕಾಶವೀಯುವದು ಸಮಂಜಸವಲ್ಲ. ಇಂದಿನ ವರೆಗೆ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆದವು. ನದಿಯ ಮಧ್ಯದಲ್ಲಿ ಕುದುರೆಯನ್ನು ಬದಲಾಯಿಸಲೆತ್ನಿಸುವದು ಅವಿವೇಕತನ. ಹಳೇ ವರ್ಕಿಂಗ್ ಕಮಿಟಿಯ ಇಬ್ಬರು ಸದಸ್ಯರಲ್ಲಿ ಒಬ್ಬರು ಜೈಲಿನಲ್ಲಿಯೂ ಮತ್ತೊಬ್ಬರು ಕಾಯಿಲೆಯಲ್ಲಿಯೂ ಇರುವದರಿಂದ ಅವರ ಸ್ಥಳಕ್ಕೆ ಸುಭಾಷರು ಅವರಿಗಿಷ್ಟಬಂದವರನ್ನು ನೇಮಿಸಲಿ. ಕೊನೆಯದಾಗಿ ನೀವೆಲ್ಲರೂ ಸುಭಾಷರು ತನ್ನ ತೀರ್ಮಾನವನ್ನು ವಾಪಾಸು ತೆಗೆದುಕೊಳ್ಳುವಂತೆ ಹೇಳಿ ಮುಂದಿನ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ಒಗ್ಗಟ್ಟಿನಿಂದ ನಡೆಸಬೇಕೆಂದು' ಎಂದು ಹೇಳಿ 'ಸುಭಾಷರು ತಮ್ಮ ರಾಜಿನಾಮೆಯನ್ನು ಹಿಂತೆಗೆದುಕೊಳ್ಳಬೇಕೆಂ'ಬ ಠರಾವನ್ನು ಮಂಡಿಸಿದರು. ವರ್ಕಿಂಗ್ ಕಮಿಟಿಯಲ್ಲಿ ಹಳೇ ಸದಸ್ಯರಿಗೆ ಬಹುಮತವಿದ್ದರೂ ಹೊಸ ಸದಸ್ಯರನ್ನು ಅದರಲ್ಲಿ ಸೇರಿಸುವದು ಯುಕ್ತವೆಂದೂ, ಈ ಬಗ್ಗೆ ತನ್ನ ಸೂಚನೆಯನ್ನು ಅಂಗೀಕರಿಸದಿದ್ದರೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ತನ್ನ ರಾಜಿನಾಮೆಯನ್ನು ಸ್ವೀಕರಿಸಿ ಪ್ರೆಸಿಡೆಂಟರ ಜವಾಬ್ದಾರಿಯಿಂದ ಪಾರುಮಾಡಬೇಕೆಂದೂ ಬೋಸರು ನಿರ್ದಿಷ್ಟವಾಗಿ ಹೇಳಿದ ಪ್ರಯುಕ್ತ ನೆಹರೂರವರು ತಮ್ಮ ಠರಾವನ್ನು ವಾಪಾಸು ತೆಗೆದುಕೊಂಡರು.

ಅಧ್ಯಕ್ಷ ಚುನಾವಣೆ.

ನೆಹರೂರವರು ತಮ್ಮ ಠರಾವನ್ನು ವಾಪಸು ತೆಗೆದುಕೊಂಡ ಮೇಲೆ ಅಧ್ಯಕ್ಷರನ್ನು ಚುನಾಯಿಸುವ ಬಗ್ಗೆ ಚರ್ಚೆಯಾಯಿತು. ಶ್ರೀ ಕೆ. ಎಫ್. ನರಿಮನರು ಅಧ್ಯಕ್ಷರನ್ನು ಡೆಲಿಗೇಟರೇ ಚುನಾಯಿಸಬೇಕಲ್ಲದೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಗೆ ಅಧಿಕಾರವಿಲ್ಲವೆಂದೂ ಉಪಸೂಚನೆಯನ್ನು ತಂದರು. ಆದರೆ ಅಧ್ಯಕ್ಷೆಯರಾಗಿದ್ದ ಶ್ರೀ ಸರೋಜಿನಿ ದೇವಿಯವರು ಕಮಿಟಿಗೆ ಅಧ್ಯಕ್ಷರನ್ನು ಚುನಾಯಿಸುವ ಅಧಿಕಾರವಿದೆಯೆಂದೂ ಆದ್ದರಿಂದ ಸಭಿಕರು ಅಧ್ಯಕ್ಷ ಚುನಾವಣೆಯ ಕಾರ್ಯವನ್ನು ಕೈಕೊಳ್ಳಬೇಕೆಂದೂ ಹೇಳಿದರು. ನಂತರ ಡಾ. ಜೋಯಿತ್ರಾಮ್ ಕಿಡ್ವಾನಿಯವರು ರಾಜೇಂದ್ರ ಪ್ರಸಾದರ ಹೆಸರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಿದರು. ಇದು ಅಂಗೀಕೃತವಾಯಿತು. ಇದರಿಂದ ಕೆಲವು ಜನ ಸದಸ್ಯರು ಅಸಮಾಧಾನಗೊಂಡು ತಮ್ಮ ನಿಷೇಧ ಸೂಚನಾರ್ಥವಾಗಿ ಸಭೆಯಿಂದ ಹೊರ ನಡೆದರು. ಜನರು 'ನಮಗೆ ರಾಜೇಂದ್ರ ಪ್ರಸಾದರು ಬೇಡ' ಎಂಬವಾಗಿ ಕೂಗಿ ಗಲಭೆಯೆಬ್ಬಿಸಿದರು. ಪ್ರಸಾದರು ಮಾತಾಡಲು ಭಾಷಣವೇದಿಕೆಗೆ ಬಂದಾಗಲಂತೂ 'ನಾಚಿಕೆ, ನಾಚಿಕೆ !' ಎಂಬ ಕೂಗು ಗಗನವನ್ನು ಆವರಿಸಿ ಅವರ ಭಾಷಣಕ್ಕೆ ತೊಂದರೆ ಮಾಡಿತು. ಆದ್ದರಿಂದ ಶ್ರೀ ಸುಭಾಷ್ ಬೋಸರು ಜನರಿಗೆ ಶಾಂತರೀತಿಯಿಂದಿರಬೇಕೆಂದು ಸೂಚಿಸಿ, ಗಲಭೆಗಳಾಗುವ ಸ್ಥಳಗಳಲ್ಲೆಲ್ಲಾ ಸುತ್ತಾಡಿದ್ದರಿಂದ ಗಲಭೆಯು ಶಾಂತವಾಯಿತು. ನಂತರ ರಾಜೇಂದ್ರ ಪ್ರಸಾದರು ಒಂದು ಹೇಳಿಕೆಯನ್ನು ಕೊಟ್ಟರು.

ಪ್ರಸಾದರ ಹೇಳಿಕೆ.

'ನಾವು ಕಾಂಗ್ರೆಸಿನ ಚರಿತ್ರೆಯಲ್ಲಿ ಒಂದು ಸಂದಿಗ್ಧ ಸಮಯದಲ್ಲಿರುವೆವು. ನೀವು ನನ್ನನ್ನು ಅಧ್ಯಕ್ಷನನ್ನಾಗಿ ಆರಿಸಿದ್ದರಿಂದ ನನಗೆ ಸಂತೋಷವೆನಿಸದು. ದೇಶ ಸೇವಕನ ಕರ್ತವ್ಯ ದೃಷ್ಟಿಯಿಂದ ನಿಮ್ಮ ಆಶೆಯನ್ನು ಈಡೇರಿಸಲು ಅಧ್ಯಕ್ಷತೆಯನ್ನು ವಹಿಸಿಕೊಂಡಿರುವೆನು. ಶ್ರೀ ಬೋಸರಿಗೆ ತಾವು ರಾಜಿನಾಮೆ ಕೊಡುವುದು ಬೇಡವೆಂದೂ, ಅವರು ಅನರಿಷ್ಟದಂತೆ ವರ್ಕಿಂಗ್ ಕಮಿಟಿಯನ್ನು ಚುನಾಯಿಸಿಕೊಂಡು ಕೆಲಸ ಮಾಡಬೇಕೆಂದೂ ಅನೇಕಬಾರಿ ನಾನು ಹೇಳಿರುವೆನು. ಆದರೆ ಅವರು ಅದನ್ನು ಅಂಗೀಕರಿಸಲಿಲ್ಲ. ನಾನು ಅದಕ್ಕೆ ತುಂಬಾ ವ್ಯಸನಪಡುತ್ತೇನೆ. ಅಧ್ಯಕ್ಷಪದವು ಸುಲಭ ಕೆಲಸವೇನೂ ಅಲ್ಲ. ಆದ್ದರಿಂದ ನನಗೆ ನಿಮ್ಮೆಲ್ಲರ ಸಹಾಯವು ಅತ್ಯಾವಶ್ಯ. ನಿಮ್ಮ ಸಹಕಾರವಿಲ್ಲದೆ ಕಾರ್ಯವು ಮುಂದುವರಿಯಲಾರದು. ಇಂದು ಯಾವ ನಿಮ್ಮ ಅಪ್ಪಣೆಯಂತೆ ಅಧ್ಯಕ್ಷಪದವನ್ನು ಅಂಗೀಕರಿಸಿರುವೆನೋ ಅದೇ ಮೇರೆ ನಿಮ್ಮ ಇಷ್ಟ ಬಂದಾಗ ಈ ಪದವಿಯನ್ನು ತ್ಯಜಿಸಲೂ ನಾನು ಸಿದ್ಧನಿರುವೆನು.' ನಂತರ ಮೀಟಿಂಗು ಮರುದಿನಕ್ಕೆ ಮುಂದರಿಸಲ್ಪಟ್ಟಿತು.

ಹೊಸ ವರ್ಕಿಂಗ್ ಕಮಿಟಿ.

ಡಾ. ರಾಜೇಂದ್ರ ಪ್ರಸಾದರು ಮರುದಿನ ವರ್ಕಿಂಗ್ ಕಮಿಟಿಯ ಸದಸ್ಯರಾದ ಶ್ರೀ ಗಳಾದ (1) ಮೌಲಾನಾ ಅಬುಲ್ ಕಲಾಂ ಅಜಾದ್, (2) ಶ್ರೀಮತಿ ಸರೋಜಿನಿ ನಾಯುಡು, (3) ಸರ್ದಾರ್ ವಲ್ಲಭಭಾಯಿ ಪಟೇಲ್, (4) ಸೇಟ್ ಜಮ್ನಾಲಾಲ್ ಬಜಾಜ್, (5) ಜಯರಾಮದಾಸ್ ದೌಲತ್‌ರಾಮ್, (6) ಖಾನ್ ಅಬ್ದುಲ್ ಗಫಾರ್ ಖಾನ್, (7) ಜೆ. ಬಿ. ಕೃಪಾಲಿನಿ, (8) ಡಾ. ಪಟ್ಟಾಭಿಸೀತಾರಾಮಯ್ಯ, (9) ಬುಲಾಬಾಯಿ ದೇಸಾಯಿ, (10) ಶಂಕರರಾವ್ ದೇವ್, (11) ಹರಿಕೃಷ್ಣ ಮಹತಾಬ್, (12) ಡಾ ಬಿಧನ್ ಚಂದ್ರರಾಯ್ ಮತ್ತು (13) ಪ್ರಫುಲ್ಲ ಚಂದ್ರಘೋಷ್ ಇವರ ಹೆಸರನ್ನು ಸೂಚಿಸಿದರು. ನಂತರ ಜವಾಹರ್‌ಲಾಲ್ ನೆಹರೂ ಮತ್ತು ಸುಭಾಷ್ ಬೋಸರನ್ನು ಯಾಕೆ ವರ್ಕಿಂಗ್ ಕಮಿಟಿಯಲ್ಲಿ (ಅವರು ಒಪ್ಪದ್ದರಿಂದ) ಸೇರಿಸಲಿಲ್ಲವೆಂಬುದನ್ನು ಹೇಳಿ ಅವರ ಬದಲು ಬಂದ ಪ್ರಫುಲ್ಲಚಂದ್ರ ಘೋಷ್ ಮತ್ತು ಬಿಧನ್‌ಚಂದ್ರರಾಯರ ಹೆಸರನ್ನು ಸೂಚಿಸುವಾಗ ಅನೇಕ ಜನರು 'ನಾಚಿಕೆ, ನಾಚಿಕೆಗೇಡು' ಎಂದು ಕೂಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಕೆ ಎಫ್. ನರಿಮನ್ನರು.

ನಂತರ ಶ್ರೀ ಕೆ. ಎಫ್. ನಾರಿಮನರಿಂದ ತಯಾರಿಸಲ್ಪಟ್ಟು 30 ಜನ ಸದಸ್ಯರಿಂದ ರುಜು ಹಾಕಲ್ಪಟ್ಟ ಒಂದು ನಿಷೇಧ ಸೂಚನಾಪತ್ರವು ಸಭೆಯ ಮುಂದಿಡಲ್ಪಟ್ಟಿತು. ಇದರಲ್ಲಿ ಅಧ್ಯಕ್ಷರ ಚುನಾವಣೆಯು ಕಾನೂನು ಬಾಹಿರವಾಗಿ ನಡೆಸಲ್ಪಟ್ಟಿದೆಯೆಂದೂ, ಪ್ರತಿನಿಧಿಗಳು ಮಾತ್ರ ಅಧ್ಯಕ್ಷರನ್ನು ಚುನಾಯಿಸಲು ಅರ್ಹರು ವಿನಹ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲವೆಂದೂ, ಆದ್ದರಿಂದ ಚುನಾವಣೆಯನ್ನು ಅವರಿಗೆ ಬಿಡಬೇಕಿತ್ತೆಂದೂ ಸೂಚಿಸಲ್ಪಟ್ಟಿತ್ತು.

ಯುದ್ಧದ ಬಗ್ಗೆ ಠರಾವುಗಳು.

'ಅಂತರ ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಫ್ಯಾಸಿಸ್ಟ ವರ್ತನೆಗಳು ತುಂಬಿರುವ ಪ್ರಯುಕ್ತ ಕಾಂಗ್ರೆಸು ಯಾವ ವಿಧದ ಯುದ್ಧವನ್ನು ವಿರೋಧಿಸುತ್ತಲ್ಲದೆ ಯುದ್ಧ ಕಾಲದಲ್ಲಿ ಭಾರತದ ಸಂಪತ್ತನ್ನು ಭಾರತೀಯರ ಅಪ್ಪಣೆಯಿಲ್ಲದೆ ಉಪಯೋಗಿಸಲು ಅವಕಾಶಕೊಡಲು ಸಾಧ್ಯವಿಲ್ಲವೆಂದು ಈ ಕಾಂಗ್ರೆಸ್ ಅಭಿಪ್ರಾಯಪಡುತ್ತದೆ. ನಮ್ಮ ಅತೃಪ್ತಿಯಿಂದ ಅರೇಬಿಯಾಕ್ಕೆ ಭಾರತ ಸೈನ್ಯವನ್ನು ಕಳುಹಿಸಿದ ಇವರ ಧೋರಣೆಯನ್ನು ಈ ಕಾಂಗ್ರೆಸು ಖಂಡಿಸುತ್ತದೆ. ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನು ತಿದ್ದುಪಡಿ ಮಾಡಬೇಕೆಂಬ ಸರಕಾರದ ಯೋಜನೆಯನ್ನು ವಿರೋಧಿಸುತ್ತದೆ. ಪ್ರಾಂತೀಕ ಸರಕಾರ ನಡೆಸುತ್ತಿರುವ ಕಾಂಗ್ರೆಸ್ಸಿನವರನ್ನು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯು ಆಗಿಂದಾಗ್ಯೆ ಕೊಡಬಹುದಾದ ಸೂಚನೆಗಳನ್ನು ಜಾರಿಗೆ ತರಲು ತಯಾರಿರುವಂತೆ ಈ ಕಾಂಗ್ರೆಸು ಎಚ್ಚರಿಸುತ್ತದೆ' ಎಂಬ ಠರಾವನ್ನು ಪ. ಜವಾಹರಲಾಲರು ಮುಂದಿಟ್ಟರು. ಠರಾವು ಬಹುಮತದಿಂದ ಪಾಸಾಯಿತು.

ಕಾಂಗ್ರೆಸ್ ಅಂತರ್ಗತ ಕೊಳೆ.

'ಕಾಂಗ್ರೆಸ್ಸಿನ ಶುದ್ಧೀಕರಣದ ಬಗ್ಗೆ ತ್ರಿಪುರಿಯಲ್ಲಾದ ಠರಾವಿನಂತೆ ಆ ಕಾರ್ಯವನ್ನು ಬೇಗ ಕೈಕೊಳ್ಳಲು ಪ. ಜವಹರಲಾಲ್, ಪಟ್ಟಾಭಿ ಸೀತಾರಾಮಯ್ಯ, ನರೇಂದ್ರ ದೇವ್ ಮತ್ತು ಕೃಪಾಲಿನಿಯವರಿಂದ ಕೂಡಿದ ಸಮಿತಿಯನ್ನೇರ್ಪಡಿಸಬೇಕು' ಎಂಬ ಠರಾವು ಬಹುಮತದಿಂದ ಮಂಜೂರಾಯಿತು. ನಂತರ ಮೀಟಿಂಗ ಮುಕ್ತಾಯಗೊಂಡಿತು.

ಅಬ್ದುಲ್ ಗಫಾರ್ ಖಾನರು.

ಜೇನು ಮೇಣ ಸಂಘದ

ಪ್ರೆಸಿಡೆಂಟರಾದ

ಶ್ರೀ ಸಿ. ಯಂ. ಉತ್ತಪ್ಪ ಬಿ. ಎ., ಎಲ್. ಟಿ.

ಇವರ ಭಾಷಣ.

ಪೂಜ್ಯ ಚೀಫ್ ಕಮಿಶನರವರೆ, ಮಹಿಳೆಯರೆ, ಮಹನೀಯರೆ.

ಈ ದಿವಸ ಕೊಡಗು ಜೇನು ಮೇಣ ಸಹಕಾರ ಸಂಘದ 'ಹನಿ ಹೌಸ'ನ್ನು ತೆರೆವ ಸಮಾರಂಭವನ್ನು ನಡಿಸಿಕೊಡಲೊಪ್ಪಿರುವ ಪೂಜ್ಯ ಚೀಫ್ ಕಮಿಷನರವರಿಗೆ ನಾವು ತುಂಬಾ ಕೃತಜ್ಞರಾಗಿರುತ್ತೇವೆ.

ಸಂಘದ ಕಾರ್ಯಕಲಾಪಗಳು ಈ ಹೊಸ ಮನೆಗೆ ವರ್ಗಾಯಿಸಲ್ಪಟ್ಟದ್ದು ಸಂಘದ ಚರಿತ್ರೆಯಲ್ಲಿ ಒಂದು ವಿಶೇಷ ವಿಷಯವಾಗಿದೆ. ಈ ಸಂದರ್ಭ ಈ ಸಂಘವು 1936 ನೇ ಇಸವಿಯಲ್ಲಿ ಸ್ಥಾಪಿತವಾದಂದಿನಿಂದ ಅದರ ಸಂಕ್ಷೇಪ ಚರಿತ್ರೆಯನ್ನು ತಮ್ಮ ಮುಂದಿಡಲು ನಾನು ಇಷ್ಟಪಡುತ್ತೇನೆ.

ಈ ಸಂಘವು ಪೊನ್ನಂಪೇಟೆಯ ಶಾರದಾಶ್ರಮದ ಸ್ವಾಮಿ ಶಂಭವಾನಂದಜೀಯವರ ಸೂಚನೆಯಂತೆ ಅವರ ಆಶ್ರಾಂತ ಶ್ರಮದಿಂದ ರೂಪುಗೊಂಡಿತು ಎಂಬುದನ್ನು ನಾವು ಮೊದಲು ನೆನಸಿಕೊಳ್ಳಬೇಕಾಗಿದೆ. ಅವರು ಇನ್ನೂ ಇದರ ಮುಂದಾಳುತನವನ್ನು ವಹಿಸಿಕೊಂಡಿರುವುದು ನಮಗೆಲ್ಲರಿಗೂ ತುಂಬಾ ಸಂತೋಷಕರವಾದ ಸಂಗತಿಯಾಗಿದೆ. ಅಮೇರಿಕದ ಮಿಸ್. ಜೋಸೆಫೈನ್ ಮೆಕ್ ಲ್ಲಾಡ್ ಎಂಬ ಮಹಿಳೆಯು ಉದಾರಭಾವದಿಂದ ರೂ. 700 ದಾನ ಮಾಡಲು ಆ ಹಣದಿಂದ ಸ್ವಾಮಿಜಿಯವರಿಗೆ ಜೇನು ವ್ಯವಸಾಯದ ಕುರಿತ ಗ್ರಂಥಗಳನ್ನೂ, ಸಾಹಿತ್ಯಗಳನ್ನೂ ಕೊಂಡುಕೊಂಡು ಆ ಕೃಷಿಯನ್ನು ಅಭ್ಯಾಸಮಾಡಿಕೊಳ್ಳಲಿಕ್ಕೆ ಅನುವಾಗಿ ಅವರ ಸಂಬಂಧದ ಜ್ಞಾನದಿಂದ ಈ ಸಂಘವನ್ನು ಬೆಳಸಲಿಕ್ಕೆ ಅನುಕೂಲವಾಯಿತು. ರಾಮಕೃಷ್ಣ ಸಂಸ್ಥೆಯ ಮಠಗಳು ಇಂಡಿಯಾದಲ್ಲಿ ಅಲ್ಲಲ್ಲಿ ಇರುತ್ತಾ ನಮ್ಮ ಜೇನು ಮಾರಾಟ ಕಾರ್ಯಕ್ಕೆ ಉತ್ತೇಜನವನ್ನು ಕೊಟ್ಟಿವೆ ಅಲ್ಲದೆ. ಮೂರು ವರ್ಷಗಳ ವರೆಗೆ ತಮ್ಮ ಸಮಯವನ್ನು ಈ ಸಂಘದ ಕರ್ತವ್ಯಕ್ಕೆ ವಿನಿಯೋಗಿಸುವ ಬಗ್ಗೆ ಸ್ವಾಮೀಜೀಯವರಿಗೆ ಒಪ್ಪಿಗೆ ಕೊಟ್ಟದ್ದಕ್ಕೂ ಈ ಸಂಸ್ಥೆಯವರಿಗೆ ನಮ್ಮ ಅನೇಕ ಅಭಿವಂದನೆಗಳು. ಇನ್ನು ಮುಂದೆ ಇವರು ನಮಗೆ ಸಹಾಯಕರಾಗಲು ಅನುಕೂಲ ಇಲ್ಲವೆಂದು ಹೇಳುತ್ತಿರುವರು ಎಂಬುದನ್ನು ತಿಳಿಸಲು ವಿಷಾದಿಸುತ್ತೇನೆ.

ಈ ಸಂಘದ ಕಳೆದ ನಾಲ್ಕು ವರ್ಷಗಳ ಬೆಳವಣಿಗೆಯನ್ನು ಕೆಳಗಿನ ಅಂಕೆಸಂಖ್ಯೆಗಳಿಂದ ಕಾಣಬಹುದು.

1935ನೇ ಮಾರ್ಚಿನಿಂದ ಜೂನ್ 36ಕ್ಕೆ ಸಂಘದಲ್ಲಿ 53 ಸದಸ್ಯರಿದ್ದರು. 1936-37 ರಲ್ಲಿ ಸದಸ್ಯರ ಸಂಖ್ಯೆಯು 100 ಕ್ಕೂ, 37–38 ರಲ್ಲಿ 155 ಕ್ಕೂ, ಏರಿದ್ದಲ್ಲದೆ ವರದಿ ವರ್ಷ 167ಕ್ಕೆ ತಲುಪಿದೆ. 1935 ರಲ್ಲಿ 331 ಪೌಂಡು ಜೇನನ್ನು **ಕೊಂಡುಕೊಳ್ಳಲಾಯಿತು. 1936–37 ರಲ್ಲಿ 5400 ಪೌಂಡುಗಳನ್ನೂ, 37–38 ರಲ್ಲಿ 8620 ಪೌಂಡುಗಳನ್ನೂ, ವರದಿ ವರ್ಷದಲ್ಲಿ 21886 ಪೌಂಡುಗಳನ್ನು ಕೊಂಡುಕೊಂಡದ್ದಲ್ಲದೆ 36–37 ರಲ್ಲಿ 1968 ಪೌಂಡುಗಳನ್ನೂ, 37–38 ರಲ್ಲಿ 8894 ಪೌಂಡುಗಳನ್ನೂ ವರದಿ ವರ್ಷದಲ್ಲಿ** 20000 ಪೌಂಡುಗಳನ್ನೂ ವಿಕ್ರಯಿಸಲಾಗಿದೆ.

ವ್ಯಾಪಾರದ ಬೆಳವಣಿಗೆಯಿಂದ ಈ ಪ್ರತ್ಯೇಕ ಕಟ್ಟಡವೊಂದನ್ನು ಕೊಳ್ಳುವುದು ಆವಶ್ಯವಾಯಿತು. ಈ ಕಟ್ಟಡದಲ್ಲಿ ಜೇನು ಸಂಗ್ರಹಿಸಿ ಇಡಲಿಕ್ಕೆ, ಶುದ್ಧ ಮಾಡಲಿಕ್ಕೆ, ರವಾನೆಗೆ ಅಣಿಗೊಳಿಸಲಿಕ್ಕೆ ಯಥೇಚ್ಛ ಸ್ಥಳ ವಿಸ್ತಾರವಿದೆ. ಈ ಕಟ್ಟಡದಲ್ಲಿ ನಾವು 1000 ಟಿನ್ನು (56,000 lb) ಜೇನು ಕೂಡಿಡಲಿಕ್ಕೂ, ಎರಿ ತಯ್ಯಾರಿಸುವ ಯಂತ್ರ ಇಡಲಿಕ್ಕೂ, (ಇಂಡಿಯಾದಲ್ಲಿ ಈ ಯಂತ್ರವು ಇಲ್ಲಿ ಮಾತ್ರ ಇರುತ್ತದೆ.) ಶಾಸ್ತ್ರೀಯ ರೀತಿಯಿಂದ ಕುಪ್ಪಿಗಳನ್ನು ಶುದ್ಧ ಮಾಡಿ ಜೇನು ತುಂಬಲಿಕ್ಕೂ, ಇತರ ಎಲ್ಲಾ ಸಾಮಾನ್ಯ ಕೆಲಸಗಳನ್ನು ಜರುಗಿಸಲಿಕ್ಕೆ ಅವಕಾಶವಿದೆ.

ಈ ಸುಸಂದರ್ಭದಲ್ಲಿ ಈ ಸಂಘಕ್ಕೆ ಸರಕಾರದಿಂದ ಹೇರಳ ಧನಸಹಾಯವೊದಗಲಿಕ್ಕೆ ಕಾರಣ ಪುರುಷರಾದ ಈ ಮೊದಲಿನ ಚೀಫ್ ಕಮಿಷನರ್ ಲೆಫ್ಟಿನೆಂಟ್ ಕರ್ನಲ್ ಸಿ. ಟಿ. ಸಿ ಪ್ಲೌಡನ್‌ರವರಿಗೂ, ಈಗಿನ ಚೀಫ್ ಕಮಿಷನರವರಾದ ನಿಮಗೂ ಮತ್ತು ಈಗಿನ ಕಮಿಷನರವರಿಗೂ ನಮ್ಮ ಕೃತಜ್ಞತೆಯನ್ನು ಸೂಚಿಸುತ್ತೇನೆ. ಈ ಹೊಸ ಸಹಕಾರ ಸಾಧನೆಯಲ್ಲಿ ಇಲಾಖೆ ರಿಜಿಸ್ಟ್ರಾರವರು ಮತ್ತು ಅವರ ಸಿಬ್ಬಂದಿಯವರು ಸದಾ ಕಾಲದಲ್ಲೂ ಅವರ ಸೂಚನೆ, ಸಹಾಯ ಮತ್ತು ಪ್ರೋತ್ಸಾಹಗಳನ್ನು ಕೊಟ್ಟದಕ್ಕೆ ನಾವು ಕೃತಜ್ಞರಾಗಿದ್ದೇವೆ. ಸಕಾಲಕ್ಕೆ ಧನ ಸಹಾಯಕೊಡುತ್ತಿದ್ದ ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿಗೂ ಸಹ ನಮ್ಮ ವಂದನೆಗಳು.

ಕೊಡಗು ಸರಕಾರವು ಯಂತ್ರಗಳ ಬಗ್ಗೆ ರೂ. 4,800 ರ ಉದಾರ ಸಹಾಯವೂ, ಕಟ್ಟಡ ಇತ್ಯಾದಿಗಳ ಬಗ್ಗೆ ರೂ. 7500 ರ ಸಾಲವೂ, ಜೇನುಗೂಡು ತಯ್ಯಾರಿಸುವ ಬಗ್ಗೆ ಮರವೂ, ಪ್ರದರ್ಶನಗಳಲ್ಲಿ ಸಹಾಯ ಮಾಡಲು ಬೀ ಇನ್‌ಸ್ಪೆಕ್ಟರನ್ನೂ ಕೊಟ್ಟು ಸಹಾಯ ಮಾಡಿದೆ.

ಸರಕಾರಕ್ಕೆ ಹಣದ ಅಭಾವವು ಇರುತ್ತಿದೆಯಾದರೂ ಇನ್ನು ಮುಂದಕ್ಕೂ ಧನಸಹಾಯಮಾಡಿ ಕೊಡಗಿಗೆ ಸ್ವಾಭಾವಿಕವಾದ ಈ ಕಾಮಗಾರಿಯನ್ನು ಇನ್ನೂ ಬೆಳೆಸಲು ಪ್ರೋತ್ಸಾಹಿಸುವರೆಂದು ನಾವು ಕೋರುತ್ತೇವೆ.

ಜೇನು ವ್ಯವಸಾಯದ ತಿಳುವಳಿಕೆಯನ್ನು ಹರಡಲೂ, ವಳಾಳಿಗಳ ಹಾವಳಿಯನ್ನು ತಪ್ಪಿಸಿ ಕೃಷಿಕರಲ್ಲಿ ಹೋಗಿ ಪ್ರಚಾರ ಕೆಲಸ ನಡಿಸಲೂ ಅನುಕೂಲವಾಗುವಂತೆ ಸರಕಾರ ಸಂಬಳದ ಬೀ ಇನ್‌ಸ್ಪೆಕ್ಟರ್ ಒಬ್ಬನನ್ನು ಸಂಘಕ್ಕೆ ಕಳುಹಿಸಿಕೊಡಬೇಕೆಂದು ನಾವು ಸೂಚಿಸುತ್ತೇವೆ.

ನಮ್ಮ ಸಾಮಾನನ್ನು ಹೊರದೇಶದ ಸಂತೆಗೆ ಒಯ್ಯುವಲ್ಲಿ ಸಾಗಿಸುವ ಖರ್ಚು ಮಿತಿಮೀರುತ್ತೆ. ಸರಕಾರದವರು ಇಂಡಿಯಾದ ಎಲ್ಲಾ ರೈಲ್ವೆ ಕಂಪೆನಿಯವರಿಗೆ ಬರಕೊಂಡು ದರ ಇಳಿಸಿಕೊಡಬೇಕಾಗಿ ಈ ಮೊದಲು ಕೇಳಿಕೊಂಡಿದ್ದೇವೆ. ಈ ವಿಷಯ ಕುರಿತು ರಿಜಿಸ್ಟ್ರಾರವರಿಂದ ನಾವು ಜವಾಬು ಹಾರೈಸುತ್ತಿದ್ದೇವೆ.

ಕಡಿಮೆ ತರದ ಜೇನನ್ನು ನಮ್ಮ ವ್ಯಾಪಾರದ ಹೆಗ್ಗುರುತಿಟ್ಟು ಕೆಲವರು ಮಾರಾಟ ಮಾಡುತ್ತಿದ್ದಾರೆ. ಸಂಘದ ಹೆಸರು ಕೆಡದಂತೆಯೂ, ಸಂಘದ ರೈತರಿಗೆ ಹೆಚ್ಚಿನ ಲಾಭವಾಗುವಂತಾಗುವಂತೆಯೂ ಸರಕಾರವು ಸಂಘವನ್ನು ರಕ್ಷಿಸುವುದು ಅತ್ಯವಶ್ಯಕವಾಗಿದೆ.

ಸಂಘವು ತನ್ನ ಜೇನು ಮತ್ತು ಮೇಣವನ್ನು ಮದ್ರಾಸು, ಮೈಸೂರು, ಬೆಳಗಾಂ, ಪೂನ ಮತ್ತು ಮುಂಬಾಯಿ ಪಟ್ಟಣಗಳಲ್ಲಿ ಪ್ರದರ್ಶಿಸಿ ಚಿನ್ನ ಮತ್ತು ಬೆಳ್ಳಿಯ ಪದಕಗಳು, ಯೋಗ್ಯತಾ ಪತ್ರಗಳು ಮತ್ತು ಬೆಳ್ಳಿಯ ಬಟ್ಟಲುಗಳು ಇತ್ಯಾದಿಗಳನ್ನು ಪಡೆದಿದೆ. ಮಾದರಿ ಜೇನನ್ನು ಹಲವು ಸ್ಥಳಗಳ ಮಾರ್ಕೆಟಿಂಗ್ ಆಫೀಸರುಗಳಿಗೆ ಮತ್ತು ಇಂಡಿಯಾ ಸರಕಾರದ ಮಾರ್ಕೆಟಿಂಗ್ ಎಡ್ವೈಸರಿಗೆ ಕಳುಹಿಸಿದ್ದೇವೆ. ಕೊಡಗಿನ ಜೇನನ್ನು ಉಪಯೋಗಿಸಿದವರೆಲ್ಲಾ ಹೊಗಳುತ್ತಿದ್ದಾರೆಂಬುದು ಸಂಘದ ಶ್ರೇಯಸ್ಸನ್ನು ಬಯಸುವವರಿಗೆಲ್ಲ ಶುಭ ವರ್ತಮಾನವಾಗಬಹುದು. ಇದನ್ನು ಮುಂಬಾಯಿಯ ಗವರ್ಮೆಂಟ್ ಕೆಮಿಸ್ಟ್, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಅಫ್ ಸಯನ್ಸ್, ಮೈಸೂರಿನ ಗವರ್ನಮೆಂಟು ಟೆಸ್ಟಿಂಗ್ ಲೇಬೊರೇಟರಿಯವರು ಪರೀಕ್ಷೆಮಾಡಿ ಉತ್ತಮವಾದ ಜೇನೆಂದು ಹೇಳಿರುತ್ತಾರೆ. ಇಂಡಿಯಾದ ವೈಸರಾಯಿ, ಮಹಾತ್ಮ ಗಾಂಧಿಯವರಂತ ಮಹಾನೀಯರು ನಮ್ಮ ಜೇನನ್ನು ತರಿಸಿಕೊಳ್ಳುತ್ತಿದ್ದಾರೆ. ಕೊಡಗಿನ ಚೀಫ್ ಕಮಿಷನರವರು ನಮ್ಮ ಜೇನನ್ನು ಪದೇ ಪದೇ ಕೊಂಡುಕೊಳ್ಳುವವರೂ, ನಮ್ಮ ಜೇನನ್ನು ಪ್ರಚುರಪಡಿಸುವವರೂ ಆಗಿದ್ದಾರೆ. ನಮ್ಮ ಜೇನನ್ನು ಉಪಯೋಗಿಸುತ್ತಿರುವವರು ಮತ್ತು ಮೆಚ್ಚಿರುವವರಲ್ಲಿ ಮದ್ರಾಸಿನ ಸರ್. ಕೆ. ವಿ. ರೆಡ್ಡಿ, ಮೈಸೂರಿನ ಶ್ರೀ. ವಿ. ಸುಬ್ರಮಣ್ಯ ಅಯ್ಯರ್, ಅಹಮ್ಮದಾಬಾದಿನ ಶ್ರೀಮತಿ ಸರಳಾದೇವಿ ಸಾರಾಭಾಯಿ, ಶಿಕಾರ್‌ಪುರದ ಡಾಕ್ಟರ್ ಡಿ. ಆರ್. ಮೇಟ, ಮೊದಲಾದವರು ಕೆಲವರಾಗಿದ್ದಾರೆ. ಈ ಮೂರು ವರ್ಷಗಳಲ್ಲಿ ನಮ್ಮ ವ್ಯಾಪಾರಕ್ಕೆ ಪ್ರೋತ್ಸಾಹವನ್ನು ಕೊಟ್ಟ ಎಲ್ಲಾ ಮಹಿಳೆ, ಮಹನೀಯರಿಗೆ ನಮ್ಮ ವಂದನೆಗಳು.

ಕೆಲವರು ಪ್ರಕಟಣೆ ಬಗ್ಗೆ ನಾವು ಹೆಚ್ಚು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ; ಹಾಗೆಯೇ ಪ್ರಕಟನೆಯೇ ವ್ಯಾಪಾರಕ್ಕೆ ಮೂಲವಾದ ಈ ಕಾಲದಲ್ಲಿ ನಾವು ನಾಕಾದಷ್ಟು ಪ್ರಕಟನೆಗೆ ಖರ್ಚು ಮಾಡುವುದಿಲ್ಲವೆಂದು ಹೇಳುವವರಿದ್ದಾರೆ. ಜೇನಿನ ಕ್ರಯವು ಹೆಚ್ಚೆಂದು ಕೆಲವರು ಹೇಳುತ್ತಿದ್ದರು.

ಆದರೆ ಈಗ ಅದನ್ನು ಶೇಕಡ 20 ರಂತೆ ಇಳಿಸಿರುತ್ತೇವೆ. ಇಂಡಿಯಾ ದೇಶದ ಯಾವ ಭಾಗಕ್ಕೂ (ಸಾಗಿಸುವ ಖರ್ಚು ಸಹಿತ) ನಮ್ಮ ದರವು ಒಂದೇ ಆಗಿರುತ್ತದೆ. ನಮ್ಮ ಜೇನು ಉತ್ತಮ ತರದ್ದು, ಶುದ್ಧವಾದದ್ದು. ಮಾರಾಟವು ಹೆಚ್ಚುತ್ತಾ ಬಂದಂತೆಯೇ ಕ್ರಯವನ್ನು ಇಳಿಸಲು ಅನುಕೂಲಿಸುವುದು.

ಈ ಸಂಘವು ಹಳ್ಳಿಯ ಜನರಿಗೆ ಏನು ಪ್ರಯೋಜನ ಮಾಡಿದೆ ಎಂದು ಕೆಲವರು ಕೇಳಬಹುದು. ಮಿ. ಯಜ್ಞನಾರಾಯಣ ಅಯ್ಯರು, ಯಂ. ಎ; ಡಿಫ್. ಎ ಬಿ ಆರ್ (ಕ್ಯಾಂಟಬ್) ಎನ್. ಡಿ. ಡಿ. (ಇಂಗ್ಲೆಂಡ್) ಕೊಡಗಿನ ವ್ಯವಸಾಯ ಮತ್ತು ಜಾನುವಾರು ವಿಷಯಗಳ ಆವಶ್ಯಕತೆಯನ್ನು ಪರೀಕ್ಷಿಸಲು ಬಂದ ಇವರು ಈ ಪ್ರಶ್ನೆಗೆ ಉತ್ತರ ಕೊಟ್ಟಿರುವರು. ಅವರು ಏನು ಹೇಳುವರೆಂದರೆ-'ಈ ಸಂಘವನ್ನು ತೆರೆದದ್ದರಿಂದ ಉತ್ಪತ್ತಿಯಾಗುವ ಎಲ್ಲಾ ಜೇನಿಗೆ ಸಂತೆಯು ದೊರಕುವಂತಾಯಿತು. ಆ ಕಾರಣದಿಂದ ಇನ್ನೂ ಹೆಚ್ಚಿನ ಉತ್ಪತ್ತಿ ದೊರೆವಲ್ಲಿ ನಡೆಯುವಂತೆಯೂ ಆಯಿತು. ಮಾರಾಟ ವಿಷಯದಲ್ಲಿ ನಿಮ್ಮ ಸಂಘವು ವಿಶೇಷ ಕಾರ್ಯವನ್ನು ನಡಸಿರುತ್ತದೆ. ಉತ್ತಮ ತರದ ಜೇನನ್ನು, ಮನಮೋಹಕ ಪಾತ್ರೆಗಳಲ್ಲಿ ಅತ್ಯಂತ ಸುಧಾರಿಸಿದ ಪ್ರಕಟನೆಗಳಿಂದ ಸಂತೆಗೆ ತಂದಿರುತ್ತದೆ. ಸುಧಾರಿಸಿದ ಜೇನು ಗೂಡುಗಳನ್ನು ಒದಗಿಸಿಕೊಟ್ಟು ಶುದ್ಧವಾದ ಜೇನನ್ನು ಪಡೆಯಲಿಕ್ಕೂ, ಜೇನು ಹುಳುಗಳನ್ನು ಸದಾ ಕಾಲದಲ್ಲಿ ಕಾಪಾಡಲಿಕ್ಕೂ ಜಯಪ್ರದವಾದ ಪ್ರಯತ್ನವಹಿಸುತ್ತಿದ್ದಾರೆ. ಜೇನು ಹಿಂಡುವ ಯಂತ್ರಗಳು ಉಪಯೋಗಕ್ಕೆ ಬಂದಿವೆ. ನಿಮ್ಮ ಉತ್ಪತ್ತಿಯು ಹಲವು ಮುಖ್ಯ ಸಂತೆಗಳನ್ನು ವಶಪಡಿಸಿಕೊಂಡಿದೆ. ಒಟ್ಟಾರೆ ಹೇಳುವದಾದರೆ ಈ ಕೃಷಿಗೆ ದೊಡ್ಡ ಪ್ರೋತ್ಸಾಹವು ದೊರತಿದೆ.' ಇವರು ನಮ್ಮ ಸಂಘವನ್ನು ಶ್ರಮಪಟ್ಟು ಪರಿಶೀಲಿಸಿರುವರು. ಇದರ ಅಭಿವೃದ್ಧಿ ಬಗ್ಗೆ ಉತ್ತಮ ತರದ ಸಲಹೆಗಳನ್ನು ಅವರು ಸರಕಾರಕ್ಕೆ ಶಿಫಾರಸ್ಸು ಮಾಡ್ಯಾರೆಂದು ನಾವು ಹಾರೈಸುತ್ತೇವೆ. ಅವರು ನಮ್ಮ ಹಿತಚಿಂತನೆಯನ್ನು ತೋರಿದ್ದಾಕ್ಕಾಗಿ ಅವರಿಗೆ ವಂದನೆಗಳು.

ಈ ತಾರೀಖಿನ ವರೆಗೆ ಸಂಘವು 213 ಜೇನು ಗೂಡುಗಳನ್ನೂ, 572 ಕ್ವೀನ್ ಗೇಟುಗಳನ್ನೂ, ರೂ. 470 ರ ಪುಸ್ತಕಗಳನ್ನೂ ಮಾರಾಟ ಮಾಡಿರುತ್ತದೆ. ಕೊಡಗಿನಲ್ಲಿ ಈಗ 2000 ಕ್ಕೆ ಕಡಿಮೆ ಇಲ್ಲದೆ

ಜೇನು ಗೂಡುಗಳು ಇಡಲ್ಪಟ್ಟಿವೆ; ಇಟ್ಟವರಲ್ಲಿ ಹೆಚ್ಚು ಜನರು ವಿದ್ಯಾರ್ಥಿಗಳು. ಮೊದಲು ಮೊದಲು ಜೇನು ರೂ. ಗೆ 3 ರಿಂದ 5 ಸೇರು ವರೆಗೆ ಮಾರಾಟವಾಗುತ್ತಿತ್ತು. ಈಗ ರೂ. ಗೆ ಎರಡು ಸೇರು ದರವು ಸ್ಥಿರಮಿತವಾಗಿದೆ. ಈ ವರೆಗೆ ನಾವು ಮಾರಾಟ ಮಾಡಿದ 600 ಟಿನ್ನುಗಳ ಜೇನಿಗೆ ಜೇನು ಕೃಷಿಕರಿಗೆ ರೂ. 1500 ಕ್ಕೆ ಕಡಿಮೆಯಾಗದೆ ಲಾಭವಾಗಿದೆಯೆಂದು ಹೇಳಬಹುದು. ಇಲ್ಲಿಯ ವರೆಗೆ ಗಿರಾಕಿ ಇಲ್ಲದೆ ಇದ್ದ ಜೇನಿಗೂ ಸಹ ಒಂದು ಸಂತೆಯನ್ನು ಕಂಡು ಹಿಡಿದಿರುತ್ತೇವೆ.

ಇದರಿಂದ ಈ ಸಂಘವು ದೇಶದ ರೈತರ ಆರ್ಥಿಕ ವಿಷಯದಲ್ಲಿ ಹೆಚ್ಚಿನ ಬದಲಾವಣೆಯನ್ನು ತರಲಿದೆಯೆಂದು ತಿಳಿಯುವುದು. ಈ ರೀತಿಯ ಸೇವೆಯನ್ನು ಸಂಘವು ತನ್ನ ಧ್ಯೇಯವಾಗಿ ಇಟ್ಟಿರುವುದರಿಂದ ಇಲ್ಲಿಯ ವರೆಗೆ ಪಾಲುದಾರರಿಗೆ ಲಾಭ ಹಂಚಲು ಅನುಕೂಲವಾಗಲಿಲ್ಲ.

ಕೊಡಗಿನ ಕಾಡುಗಳಲ್ಲಿ ಇನ್ನೂ ಅಪಾರವಾದ ಜೇನು ಸಂಪತ್ತು ಹೊರಬರಲು ಬಾಕಿಯಿದೆಯೆಂದು ದೃಢವಾಗಿ ಹೇಳಬಹುದು. ಶುದ್ಧವಾದ ಜೇನಿಗೆ ತುಂಬಾ ಬೇಡಿಕೆ ಇದೆ ಎಂದೂ ಹೇಳಬಹುದು. ಈ ಮಹಾ ಕಾರ್ಯದ ಪ್ರಥಮ ಸೋಪಾನವನ್ನು ಮಾತ್ರ ನಾವು ಏರಿದವರಾಗಿರುತ್ತೇವೆ.

ಕಿತ್ತಳೆ ಮತ್ತು ನಿಂಬೆಯ ರಸವನ್ನು ತಯ್ಯಾರಿಸುವ, ಹಣ್ಣುಗಳನ್ನು ರಕ್ಷಣೆ ಮಾಡುವ, ಹುಳಿಯನ್ನು ತಯ್ಯಾರಿಸುವ ಮತ್ತು ಬೀಜಗಳಿಂದ ಎಣ್ಣೆ ತೆಗೆಯುವ ಕಾರ್ಯಗಳನ್ನು ಈ ಸಂಘವು ನಡಿಸಬೇಕೆಂದು ಸೂಚನೆಗಳು ಬರುತ್ತವೆ. ಈಗ ತೊಡಗಿರುವ ಕಾರ್ಯದಲ್ಲಿ ಜಯವಾದರೆ ಮಾತ್ರ ಮತ್ತಿತರ ವಿಷಯಗಳನ್ನು ತೆಗೆದುಕೊಳ್ಳಬಹುದು.

ಇನ್ನು ಮುಂದೆ ಸಹಕಾರ ಕಾರ್ಯಕ್ಕೆ ಜನತೆಗೆ ಸರಕಾರಿ ಉದ್ಯೋಗಸ್ಥರ ಸಹಕಾರ ದೊರಕುವುದಿಲ್ಲ. ಆದ್ದರಿಂದ ಜನರು ಮುಂದುವರಿದು ಇವರ ಕೆಲಸ ಕಾರ್ಯಗಳನ್ನು ವಹಿಸಿಕೊಂಡು ನಡಿಸತಕ್ಕದ್ದು.

ಸಂಘದ ಮೆಂಬರುಗಳ ಪರವಾಗಿ ಈ ದಿನ ನಮ್ಮ ಕಟ್ಟಡವನ್ನು ತೆರೆಯಲ್ಪ್ಪಿದಯೆಮಾಡಿರುವ ಪೂಜ್ಯ ಚೀಫ್ ಕಮಿಷನರವರಿಗೆ ನಾನು ವಂದಿಸುತ್ತೇನೆ. ಅಲ್ಲದೆ ಕಮಿಷನರವರಿಗೂ, ಸಹಕಾರ ಇಲಾಖೆ ರಿಜಿಸ್ಟ್ರಾರವರಿಗೂ ಅವರಿಲ್ಲಿಗೆ ದಯಮಾಡಿಸಿದಕ್ಕೆ ನನ್ನ ವಂದನೆಗಳು. ಇಲ್ಲಿ ನೆರೆದ ಎಲ್ಲಾ ಮಹಿಳೆ ಮಹನೀಯರಿಗೂ ನನ್ನ ವಂದನೆಗಳು. ನೀವೆಲ್ಲರೂ ಇಲ್ಲಿ ದಯಮಾಡಿಸಿದ್ದು, ಸಂಘದ ಮೇಲೆ ನಿಮಗಿರುವ ಅಭಿಮಾನವನ್ನು ತೋರಿಸುತ್ತದೆ. ನಿಮ್ಮೆಲ್ಲರ ದಯೆಯಿಂದ ಈ ಸಂಘವು ವೃದ್ಧಿಹೊಂದಲಿ.

ಈಗ ಈ ಸಂಘದ ಮೆಂಬರುಗಳ ಪರವಾಗಿ ಪೂಜ್ಯ ಚೀಫ್ ಕಮಿಷನರವರು ಈ ಕಟ್ಟಡವನ್ನು ತೆರೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಜೇನು ಮೇಣ ಸಂಘದ ವಾರ್ಷಿಕ ಸಭೆ.

ತಾರೀಕು 24-4-1939 ರಲ್ಲಿ ಜರುಗಿದ ಕೊಡಗು ಜೇನು ಮೇಣ ಸಂಘದ ವಾರ್ಷಿಕ ಮಹಾ ಸಭೆಯು ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ 66 ಮೆಂಬರುಗಳಲ್ಲದೆ, ಸಹಕಾರಿ ಸಂಘಗಳ ಸೀನಿಯರ್ ಇನ್ಸ್‌ಪೆಕ್ಟರವರೂ, ಸ್ಟೋರ್ಸ್ ಇನ್ಸ್‌ಪೆಕ್ಟರವರೂ, ಸ್ಟೋರ್ಸ್ ಸುಪರ್ ವೈಜರವರೂ ಮತ್ತು ಸೆಂಟ್ರಲ್ ಬ್ಯಾಂಕ್ ಪ್ರೆಸಿಡೆಂಟರವರು ಸಹ ಹಾಜರಿದ್ದರು.

ಈ ದಿನದ ಮಹಾ ಸಭೆಯನ್ನು ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡು ನಡಿಸಿಕೊಡಬೇಕಾಗಿ ಸಂಘದ ಪ್ರೆಸಿಡೆಂಟರು ಕೇಳಿಕೊಳ್ಳಲು ಸಹಕಾರಿ ಇಲಾಖೆ ರಿಜಿಸ್ಟ್ರಾರವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿಕೊಂಡ ನಂತರ ಮೀಟಿಂಗು ಸುರುವಾಯಿತು.

ಕಳೆದ ವರ್ಷದ ಮಹಾಸಭೆಯ ನಡವಳಿಕೆಗಳನ್ನು ಓದಿ ಕೇಳಿ ಮಂಜೂರ್ಮಾಡಲಾಯಿತು

ನಂತರ ಈ ಮೊದಲೇ ಮೆಂಬರುಗಳಿಗೆ ಕಳುಹಿಸಲಾಗಿದ್ದ ಆಡಿಟ್ ರಿಪೋರ್ಟಿನಲ್ಲಿ ಕಂಡು ಬಂದ ಕೆಲವು ವಿಷಯಗಳ ಮೇಲೆ ಸವಾಲು ಜವಾಬುಗಳು ನಡೆದುವು. ಸದರಿ ಆಡಿಟು ರಿಪೋರ್ಟು ಸರ್ವಸಮ್ಮತದಿಂದ ಮಂಜೂರ್ಮಾಡಲ್ಪಟ್ಟಿತು

ತದನಂತರ 1938-1939 ನೆ ಸಾಲಿನ ಡೈರೆಕ್ಟರುಗಳ ವರದಿಯನ್ನು ಓದಿ ಕೇಳಿ ಒಪ್ಪಲಾಯಿತು.

ಆ ಮೇಲೆ ಮುಂದಿನ ವರ್ಷದ ಬಜೆಟ್ಟು ಓದಿ ಮಂಜೂರ್ಮಾಡಲಾಯಿತು ಕಳೆದ ವರ್ಷ ಪ್ರಯಾಣ ಭತ್ಯ ಬಜೆಟ್ ಮಂಜೂರಾತಿಗೆ ಮೀರಿ ರೂ. 106-9-2 ಖರ್ಚಾದ್ದನ್ನು ಈಗ ಮಂಜೂರ್ಮಾಡಲಾಯಿತು.

ಅನಂತರ ಮುಂದಿನ ವರ್ಷಕ್ಕೆ ಈ ಕೆಳಗಿನವರನ್ನು ಡೈರೆಕ್ಟರುಗಳನ್ನಾಗಿ ಚುನಾಯಿಸಲಾಯಿತು.

ಮುಂದಿನ ವರ್ಷಕ್ಕೆ ಮ. ಪಿ. ಯಂ. ಉತ್ತಪ್ಪನವರು ಪ್ರೆಸಿಡೆಂಟರಾಗಬೇಕೆಂದೂ, ಮ. ಟಿ. ಯಂ. ಕಾರ್ಯಪ್ಪನವರು ಸೆಕ್ರೆಟರಿಯಾಗಬೇಕೆಂದೂ ಸೂಚನೆ ಬಂದ ಮೇರೆ ಸರಕಾರಿ ಉದ್ಯೋಗಸ್ಥರು ಇಂಥಾ ಸಹಕಾರಿ ಸಂಘದ ಕಮಿಟಿಯಲ್ಲಿ ಕೆಲಸ ಮಾಡಲು ಕೂಡದೆಂದು ಕಮಿಷನರವರ ಆರ್ಡರು ಇರುವಲ್ಲಿ ನಮ್ಮಿಬ್ಬರಿಂದ ಮುಂದೆ ಡೈರೆಕ್ಟರಾಗಿರಲು ಸಾಧ್ಯವಿಲ್ಲವೆಂದು ಅವರಿಬ್ಬರೂ ಹೇಳಿದಲ್ಲಿ ಅಧ್ಯಕ್ಷರು ಮತ್ತು ಮ. ಪಿ. ಐ. ಬೆಳ್ಯಪ್ಪನವರು ಈ ಬಗ್ಗೆ ಸಹಕಾರ ಇಲಾಖೆಯವರು ಕಮಿಷನರವರಿಗೆ ಬರೆದು ಇವರಿಬ್ಬರ ಬಗ್ಗೆ ಅಪ್ಪಣೆ ತರಸಿಕೊಂಡು ಇವರನ್ನು ಮುಂದಿನ ವರ್ಷದ ಡೈರೆಕ್ಟರಾಗಿಟ್ಟುಕೊಳ್ಳಬೇಕೆಂದು ಸಭೆಯವರಿಂದ ತೀರ್ಮಾನವಾಯಿತು.

ಮೇಲ್ಕಂಡ ರೀತಿ ಮ. ಪಿ. ಯಂ. ಉತ್ತಪ್ಪನವರು ಪ್ರೆಸಿಡೆಂಟರಾಗಿಯೂ, ಮ. ಟಿ. ಯಂ. ಕಾರ್ಯಪ್ಪನವರು ಸೆಕ್ರೆಟರಿಯಾಗಿಯೂ ಸರ್ವಸಮ್ಮತದಿಂದ ಚುನಾಯಿಸಲಾಯಿತು.

ಜೇನು ಮೇಣ ಸಂಘದ ಕೆಲಸ ಕಾರ್ಯಗಳು ಇನ್ನೂ ಸ್ಥಿರಮಿತ ಸ್ಥಿತಿಗೆ ಬಂದಿರುವುದಿಲ್ಲವಾದ ಕಾರಣ ಈ ಸಂಘದ ಸ್ಥಾಪಕರೂ, ಪೋಷಕರೂ ಆಗಿರುವ ಸ್ವಾಮಿ ಶಂಭವಾನಂದಜಿಯವರು ಕಮ್ಮಿ ಪಕ್ಷ ಇನ್ನೊಂದು ವರ್ಷದ ವರೆಗಾದರೂ ಈ ಸಂಘದ ಡೈರೆಕ್ಟರಾಗಿರಬೇಕೆಂದು ಈ ಸಭೆಯು ಸ್ವಾಮಿಜಿಯವರಿಗೆ ವಿನಂತಿ ಮಾಡಿಕೊಳ್ಳುತ್ತದೆ.

ಉಳಿದ ಡೈರೆಕ್ಟರುಗಳ ಸ್ಥಾನಕ್ಕೆ ಮ. ಪಿ. ಐ. ಬೆಳ್ಯಪ್ಪನವರು, ಕೆ. ಯಂ. ಪೂವಯ್ಯನವರು, ಕೆ. ಕೆ. ಬೆಳ್ಯಪ್ಪನವರು, ಆರ್. ಯಸ್. ಸಂಜೀವರಾಯರು ಡೈರೆಕ್ಟರುಗಳಾಗಿ ಚುನಾವಣೆ ಮಾಡಲಾಯಿತು.

'ಸರಕಾರಿ ಉದ್ಯೋಗಸ್ಥರನ್ನು ಕೊಡಗಿನ ಎಲ್ಲಾ ಸಹಕಾರಿ ಸಂಸ್ಥೆಗಳಲ್ಲಿ ಮೆಂಬರಾಗಿರಲಿಕ್ಕೂ, ಠೇವಣಾತಿ ಹಣ ಇಡಲಿಕ್ಕೂ ಮತ್ತು ಬಿನ್ ಪತ್ತಿನ (Non-credit) ಸಂಘಗಳ ಕಾರ್ಯಕಾರಿ ಮಂಡಳಿಯಲ್ಲಿ ಭಾಗವಹಿಸಲಿಕ್ಕೂ ಇಡಲಿರುವ ಅಡಚಣೆಯನ್ನು ತೆಗೆದು ಹಾಕಬೇಕೆಂದು ಈ ಸಭೆಯು ಸರಕಾರದವರನ್ನು ಕೇಳಿಕೊಳ್ಳುತ್ತದೆ, ಎಂಬ ಠರಾವನ್ನು ಮ. ಪಿ. ಜಿ. ಮುದ್ದಮ್ಮಯ್ಯನವರು ತರಲು ಮ. ಪಿ. ಐ. ಬೆಳ್ಯಪ್ಪನವರು ಅನುಮೋದಿಸಿ ಠರಾವು ಸರ್ವಸಮ್ಮತದಿಂದ ಮಂಜೂರ್ಮಾಡಲಾಯಿತು.

ಸಂಘದ ಪ್ರೆಸಿಡೆಂಟ್ ಪಿ. ಯಂ. ಉತ್ತಪ್ಪನವರು ಸೆಂಟ್ರಲ್ ಬ್ಯಾಂಕಿಗೆ ಡೆಲಿಗೇಟರಾಗಿ ಚುನಾಯಿಸಲ್ಪಟ್ಟರು.

ಮ. ಕೆ. ಯಂ. ಪೂವಯ್ಯನವರು ಮತ್ತು ಕೆ. ಯಸ್. ಕುಶಾಲಪ್ಪನವರು ಯೂನಿಯನಿಗೆ ಪ್ರತಿನಿಧಿಗಳಾಗಿ ಚುನಾಯಿಸಲ್ಪಟ್ಟರು

ಆ ಮೇಲೆ ಸ್ವಾಮಿ ಶಂಭವಾನಂದಜಿಯವರು ಜೇನು ವ್ಯವಸಾಯ ಮತ್ತು ಮಾರಾಟ ಕುರಿತು ಉತ್ಸಾಹಪೂರಿತ ಭಾಷಣವನ್ನು ಮಾಡಿದರು.

ಅನಂತರ ಅಧ್ಯಕ್ಷರು ಸಂಘದ ಬೆಳವಣಿಗೆಯ ಕುರಿತು ಹಲವು ಉತ್ತಮ ಸಲಹೆಗಳನ್ನು ಕೊಟ್ಟು ಭಾಷಣ ಮಾಡಿದರು.

ಅಧ್ಯಕ್ಷರಿಗೆ ನಮ್ಮ ಬೆಂಗಳೂರು ಏಜೆಂಟು ಶ್ರೀಮಾನ್ ನರಸಿಂಹೈಯ್ಯನವರಿಗೆ ಮತ್ತು ಎಲ್ಲಾ ಸಭಿಕರಿಗೆ ವಂದನೆಗಳನ್ನು ಅರ್ಪಿಸಿದ ನಂತರ ಸಭೆಯು ಬರಕಾಸ್ತಾಯಿತು.

ಕೆ. ಚಂಗಪ್ಪ,
ಅಧ್ಯಕ್ಷ.

ಓದುಗರೇ, 'ಕೊಡಗು' ಪತ್ರಿಕೆಯ
ಚಂದಾ ಹಣವನ್ನು
ವಹನೆ ಕಳುಹಿಸಿ ಕೊಡಿರಿ.

ಯುದ್ಧ ಸಮಾಧಿಯ ಬಗ್ಗೆ ಮಹಾತ್ಮರ ಅಭಿಪ್ರಾಯ.

—೦೦೦—

'ಶಾಂತಿಯ ಸಲುವಾಗಿ ನಾನು ಹೋರಾಡುತ್ತೇನೆ. ಅದಕ್ಕಾಗಿ-ಕಾಂಗ್ರೆಸ್, ಸಂಸ್ಥಾನ ಹಾಗೂ ಜಗತ್ತಿನಲ್ಲಿಯ ಶಾಂತಿಯ ಸಲುವಾಗಿ-ಮತ್ತು ಜನರಲ್ಲಿ ಸೌಹಾರ್ದಭಾವನೆ ಬೆಳೆಯುವದರ ಸಲುವಾಗಿ ಪ್ರಯತ್ನಿಸಲು ಮರಣವನ್ನೊಪ್ಪಲು ಸಹ ನಾನು ಸಿದ್ಧನಿದ್ದೇನೆ. ರಾಜ್ಯಕ್ಕೋಸ್ಕರ ದ ಮಾರ್ಗವನ್ನನುಸರಿಸಿ ಆತ್ಮಹತ್ಯೆ ಮಾಡಿಕೊಳ್ಳಲು ಹೊರಟ ಜನಾಂಗವನ್ನು ಉಳಿಸಲು ಆಮರಣ ಉಪವಾಸವನ್ನು ಕೈಕೊಳ್ಳಲು ನನ್ನಲ್ಲಿ ಸಾಮರ್ಥ್ಯವಿದೆ' ಹೀಗೆಂದು ಮಹಾತ್ಮ ಗಾಂಧಿಯವರು ಕಲ್ಕತ್ತೆಗೆ ಹೋಗುತ್ತಿರುವಾಗ 'ಟಾಯಿಮ್ಸ್ ಆಫ್ ಇಂಡಿಯಾ' ಪತ್ರಿಕೆಯ ಪ್ರತಿನಿಧಿಯೊಡನೆ ಅಂತರರಾಷ್ಟ್ರೀಯ ಪರಿಸ್ಥಿತಿಯ ಬಗ್ಗೆ ಮಾತನಾಡುವಾಗ ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡಿದರು

ಅವರು ಮತ್ತೂ ಹೇಳಿದ್ದೇನೆಂದರೆ:- ಇಂಗ್ಲೆಂಡ್, ಫ್ರಾನ್ಸ್ ಅಮೇರಿಕೆಗಳಲ್ಲಿ ತನ್ನ ತತ್ವದ 1/10 ಭಾಗವನ್ನಾದರೂ ಬಿತ್ತಲು ನಾನು ಸಮರ್ಥನಾದರೆ ಯುದ್ಧವು ತನ್ನಷ್ಟಕ್ಕೆ ತಾನೇ ಮಾಯವಾಗುವದು. ನಾನು ಇಂಗ್ಲೆಂಡದ ಪ್ರಧಾನನಾಗಿದ್ದರೆ ಈಗಿಂದೀಗ ಶಸ್ತ್ರ ಸನ್ಯಾಸವನ್ನು ಜಾರಿಯಲ್ಲಿ ತರುತ್ತಿದ್ದ.

ಜರ್ಮನಿ-ಇಟಲಿಗಳಿಗೆ ಇದೇ ಬೇಕಾಗಿದೆಯೆಂದು ನಡುವೆ ಪ್ರಶ್ನಿಸಲಾಗಿ ಮಹಾತ್ಮರು 'ಇಲ್ಲ. ಅಂಥಾ ಮಾರ್ಗವನ್ನು ಕೈಗೊಂಡಿದ್ದಾದರೆ ಆ ರಾಷ್ಟ್ರಗಳ ಮೇಲೆ ಒಳ್ಳೇ ಪರಿಣಾಮವಾಗುವದು. ಆ ಮೇಲಾದರೂ ಹಿಟ್ಲರ ಮುಸಲೋನಿಯವರು ತಮ್ಮ ಮಾರ್ಗವನ್ನು ಬಿಡದಿದ್ದರೆ ಅವರ ಅನುಯಾಯಿಗಳೇ ಅವರನ್ನು ತಡೆಯುವರು ಎಂದು ಉತ್ತರ ಕೊಟ್ಟು ಇವೆಲ್ಲ ನನ್ನ ವೈಯಕ್ತಿಕ ಅಭಿಪ್ರಾಯಗಳೆಂದು ಕೊನೆಯಲ್ಲಿ ಹೇಳಿದರು.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,
Ludhiana.

2

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇವರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52–22) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು,
ಚಾಟಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ಬಯ್ಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ತಿಮ್ಮಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮೊಣ್ಣಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪನೆರವಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಚೆಪ್ಪುಡಿರ ಯು. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಕೃಷ್ಣನವರು.

ಸೂಚನೆ.—ಪ್ರಿಂಟುಳ್ಳ ರಶೀತಿ ಹೊಂದಿರುವವರ ಮೂಲಕ ಚಂದಾ ಕೊಡಬೇಕಾದದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ...ರೂ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ 2..ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-8

ಧನ್ವಂತರಿ ಸಹಾಯ ಔಷಧಾಲಯ.

ವೀರಾಜಪೇಟೆ, (ದ. ಕೊಡಗು).

ಆಯುರ್ವೇದ ಶಾಸ್ತ್ರ ಪ್ರಕಾರ ತಯಾರಿಸಲ್ಪಟ್ಟ ಎಲ್ಲಾ ಔಷಧಗಳು ನ್ಯಾಯವಾದ ಕ್ರಯಕ್ಕೆ ವಿಕ್ರಯಿಸಲ್ಪಡುತ್ತೆ. ನಮ್ಮ ವೈದ್ಯ ಶಾಲೆಯು ಕಾಯಿಲಸ್ಥರನು. ಪರೀಕ್ಷೆ ಮಾಡಿ ಔಷಧಿ ಕೊಟ್ಟು ಕೆಲವು ಮಹನೀಯರಿಂದ ಸರ್ಟಿಫಿಕೇಟ್ ಪಡೆದಿರುತ್ತದೆ. ದೂರದಲ್ಲಿರುವ ಮಹನೀಯರು ಅವರ ಕಾಯಿಲೆಯ ವಿವರವನ್ನು ತಿಳಿಸಿದಲ್ಲಿ ತಕ್ಕ ಔಷಧಿ ಕಳುಹಿಸಿ ಕೊಡಲಾಗುತ್ತೆ. 12 ವರ್ಷದ ಲಾಗಾಯಿತು ವೈದ್ಯ ಶಾಲೆಯು ಪ್ರಚಾರದಲ್ಲಿರುತ್ತೆ.

ಜ್ವರ ಸಂಹಾರ ಸುದರ್ಶನ.

ಈ ಔಷಧಿಯು ತ್ರಿ ದೋಷ ಕೋಪದಿಂದುಂಟಾಗುವ ಸರ್ವಜ್ವರವನ್ನು ಗುಣಪಡಿಸುತ್ತೆ. 13 ಪ್ರಕಾರದ ಸನ್ನಿಯನ್ನೂ, ಸೀತಜ್ವರ, ಮೋಹಾಲಸ್ಯ, ತಲೆನೋವು, ಬಾಯೊರಿಕೆ, ಉಬ್ಬಸ, ಕೆಮ್ಮಲು, ಪಾಂಡುರೋಗ, ಹೃದ್ರೋಗ, ಕಾಮಲೆ, ಬೆನ್ನೆಲುಬು, ಸೊಂಟ, ಮಂಡಿ, ಪಕ್ಕೆಗಳು—ಈ ಭಾಗಗಳ ನೋವನ್ನು ಗುಣಪಡಿಸುವುದು

ಉಪಯೋಗದ ಕ್ರಮ:—ದೇಹ ಪ್ರಕೃತಿಯನ್ನನುಸರಿಸಿ ಒಂದರಿಂದ ಎರಡು ಔನ್ಸುಗಳ ವರೆಗೆ ಒಮ್ಮೆ ತೆಗೆದುಕೊಳ್ಳುವದು. 8 ಔನ್ಸುಗಳ ಕುಪ್ಪಿಗೆ ರೂ. 1-0-0. ಟಪ್ಪಾಲು ಹಾಸಲು ಪ್ರತ್ಯೇಕ.

41 ಸಿ. ಹೆಚ್. ರಾಮುಣ್ಣಿ ವೈದ್ಯರ್.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತನಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಪ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¾ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ ಬೆಳ್ಯಪ್ಪನವರು ಎಂ. ಎಲ್ ಸಿ
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯವರು.
ಸೆಕ್ರೆಟರಿ:—ಮೆ ಎಸ್ ಎನ್. ರಾಮಶೆಟ್ಟಿಯವರು

ತಾ. 1-1-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ 55	ರೂ. 35.	ರೂ. 22
6 ತಿಂಗಳಿಗೆ—	,, 100.	,, 35.	,, 22	,, 13
3 ತಿಂಗಳಿಗೆ—	,, 60	,, 20	,, 13.	,, 8
1 ತಿಂಗಳಿಗೆ—	,, 25.	,, 10	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಜನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಪೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62-17)

Printed & Published by P. I. Bellıappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩—೮—೦
ತಾ. ೧೨—೫—೧೯೩೯.
ಸಂಪುಟ ೧೮] [ಸಂಚಿಕೆ ೪೯

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-22

ಕೇರಳ ಆಯುರ್ವೇದಿಕ್ ವೈದ್ಯಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿಸಲ್ಪಟ್ಟು—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಸಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-11

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಕೇವಲ ಸಾಧಾರಣ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು–ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುತ್ತ: ಪ್ರತಿಯೊಂದು ಕೂಲಂ
25 ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವವು.
ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ ೫ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–1

The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. ಝಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯೂ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–33)

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹೆಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

12–29

ಈ ವಾರದ ಕಥೆ.

ನಿರೀಕ್ಷಣೆ.

ಬರೆದವರು:—ಎಚ್. ಸಿ. ರಾಜಗೋಪಾಲ್, ಮಡಿಕೇರಿ.

ನಾರಾಯಣ ಶಾಸ್ತ್ರಿಗಳೆಂದರೆ ನಮ್ಮೂರಿನಲ್ಲಿ ಎಲ್ಲರಿಗೂ ತಿಳಿದೇ ಇದೆ. ಯಾರ ಮನೆಯಲ್ಲಿ ಯಾವ ಕಾರ್ಯವಾಗಬೇಕಾದರೂ ಶಾಸ್ತ್ರಿಗಳ ಹಾಜರಿ ಇಲ್ಲದೆ ಇಲ್ಲ. ಮದುವೆ, ಉಪನಯನ, ಮೊದಲಾದ ಶುಭಾಶುಭಗಳೆಲ್ಲಕ್ಕೂ ಶಾಸ್ತ್ರಿಗಳನ್ನು ಕರೆಯದೆ ಇರುತ್ತಿರಲಿಲ್ಲ. ಈಗ್ಯೆ ಕೆಲವು ವರ್ಷಗಳ ಹಿಂದೆ ನಮ್ಮ ಸರ್ಕಾರದಲ್ಲಿ ಸಿಬ್ಬಂದಿ ಖೋತೆ ನಡೆಯಿತು. ಇದರ ಪರಿಣಾಮವಾಗಿ ಶಾಸ್ತ್ರಿಗಳ ಹಾಜರಿಗೂ ಖೋತೆಯಾಗುತ್ತಾ ಬಂತು. ಹಣದ ಅಭಾವವಲ್ಲವೇ? ಶಾಸ್ತ್ರಿಗಳನ್ನು ತೃಪ್ತಿಪಡಿಸುವುದೆಂತು? ಆದರೂ ಶಾಸ್ತ್ರಿಗಳೇನು ಅಲ್ಲಾಡಿದಂತೆ ತೋರಲಿಲ್ಲ.

ಶಾಸ್ತ್ರಿಗಳ ಹೆಂಡತಿಯು ಕಾಲವಾಗಿ ಇಂದಿಗೆ ನಾಲ್ಕು ವರ್ಷಗಳಾದವು. ಶಾಸ್ತ್ರಿಗಳಿಗೆ ಗಂಡು ಸಂತಾನವಿಲ್ಲದ್ದರಿಂದ ಶಾಸ್ತ್ರಿಗಳು ಶಾಸ್ತ್ರಕ್ಕನುಸಾರವಾಗಿ ಹೆಂಡತಿ ತೀರಿದ ಒಂದು ವರ್ಷದೊಳಗಾಗಿಯೇ ಪುನರ್ವಿವಾಹವಾದರು. ಶಾಸ್ತ್ರಿಗಳ ಪ್ರಾಯ ಬರೀ 50 ವರ್ಷ. ನವ ವಧುವಿಗೋ 14 ವರ್ಷ. 'ಏನು ಸ್ವಾಮಿ! ಈ ಪ್ರಾಯದಲ್ಲೇ ನಿಮಗೆ ಲಗ್ನ?' ಎಂದು ಯಾರಾದರೂ ಪರಿಚಯಸ್ಥರು ಶಾಸ್ತ್ರಿಗಳನ್ನು ಕೇಳಿದರೆ 'ಅಯ್ಯೋ! ಏನೆಂದಿರಿ? ನನಗೇನು ಪ್ರಾಯ ಬಹಳವಾಗಿದೆಯೋ? ಈಗ 4೮ ನಡೆಯುತ್ತಿದೆ. ಅಲ್ಲದೆ ಸ್ವಾಮಿ, 'ನಾ ಪುತ್ರಸ್ಯ ಗತಿರ್ನಾಸ್ತಿ' ಎಂದಿಲ್ಲವೇ? ಅದಕ್ಕಾಗಿ ಈ ಲಗ್ನ. ಏನೋ ಸಾಯುವಾಗ ಬಾಯಿಗೆ ನೀರು ಬಿಡುವುದಕ್ಕೆ ಮಗ ಬೇಕಲ್ಲ ಹೇಳಿ' ಎನ್ನುತ್ತಿದ್ದರು. ಇದನ್ನು ಕೇಳಿದವರು ಎದುರಿನಲ್ಲಿ ತಲೆಯಲ್ಲಾಡಿಸಿದರೂ, ಹೊರಗೆ 'ಎನಪ್ಪ ಈ ಶಾಸ್ತ್ರಿಗೆ ಹಿಡಿದಿದೆಯೋ ಹುಚ್ಚು' ಎನ್ನುತ್ತಿದ್ದರು.

ಇನ್ನು ಶಾಸ್ತ್ರಿಗಳ ನವ ವಧುವಿನ ವರ್ಣನೆ ಎಂದರೆ 'A Modern Girl' ಎಂದರೆ ಸಾಕು. ಹೆಂಡತಿ ಏನು ಕೇಳಿದರೂ ಏನು ಹೇಳಿದರೂ ಶಾಸ್ತ್ರಿಗಳು ತರಲೂ, ಮಾಡಲೂ ಸಿದ್ಧ. ಇದೇನು ಪ್ರಭಾವವೋ ತಿಳಿಯದು.

ನವ ವಧುವಿನ ಮಹಾತ್ಮೆಯಿಂದ ಶಾಸ್ತ್ರಿಗಳ ಮನೆ ಮಹಡಿ ಮನೆಯಾಯಿತು. ಮನೆಯ ಮುಂದ ಸೊಗಸಾದ ಹೂತೋಟ. ಬಗೆ ಬಗೆಯ ಹೂಗಿಡಗಳು. ರಮ್ಯವಾದ ಹೂಗಳು ಶಾಸ್ತ್ರಿಗಳ ಆರಾಧ್ಯ ದೇವತೆ. ಮನೆಯ ಹೊರಗಿನ ಕೆಲಸಗಳನ್ನು ಮಾಡಲು ಒಬ್ಬ ಆಳು. ಮನೆಗೆ 'ಹಿಸ್ ಮಾಸ್ಟರ್ಸ್ ವಾಯ್ಸ್' ಗ್ರಾಮಫೋನ್ ಬೇರೆ. ನೂರಾರು ಮುನ್ನೂರು ರೆಕಾರ್ಡುಗಳು, ಹೆಚ್ಚಿನವೆಲ್ಲಾ ನಾಟಕಗಳು. ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 10 ಗಂಟೆಯ ವರೆಗೆ ಗ್ರಾಮಫೋನಿಗೆ ಪುರುಸತ್ತೇ ಇಲ್ಲ. ಕೂಗಾಟವೇ ಕೂಗಾಟ. ಗದ್ದಲವೇ ಗದ್ದಲ. ಅವರ ಮನೆಗಾಗಿ ದಾಟುವವರನ್ನೆಲಾ ಶಾಸ್ತ್ರಿಗಳು ಆಮಂತ್ರಿಸಿ ಗ್ರಾಮಫೋನ್ ಸಂಗೀತದ ಮೂಲಕ ಉಪಚರಿಸಿ ಕಳುಹಿಸುತ್ತಿದ್ದರು. ನಾನೂ ಅನೇಕ ಸಾರಿ ಹೋಗಿದ್ದೇನೆ. ನನಗಂತೂ ಆ ಗ್ರಾಮಫೋನನ್ನು ಕೇಳಿ ಕೇಳಿ ಮೊದಲೇ ಸಾಕಾಗಿದೆ. ಆದರೂ ಶಾಸ್ತ್ರಿಗಳು ಏನು ತಿಳಿದುಕೊಂಡಾರೋ ಎಂಬ ಭಯ. ಕೆಲವು ಸಾರಿ ಇಲ್ಲದ/ನವ ಹೇಳಿ ಜಾರಿದ್ದೂ ಇದೆ.

ಒಂದು ದಿನ ಶಾಸ್ತ್ರಿಗಳು ನನ್ನನ್ನು ಬಿಡಲೇ ಇಲ್ಲ. ಯಾವುದೋ ಹೊಸ ರೆಕಾರ್ಡನ್ನು ಕೇಳಲು ಬಲಾತ್ಕಾರ ಮಾಡಿ ಕರೆದುಕೊಂಡು ಹೋದರು. ಸಂಗೀತವನ್ನು ಕೇಳಿದ ಮೇಲೆ 'ಅಲ್ಲ ಸ್ವಾಮಿ! ಇದೇನು ಕೇಳಿದ್ದೇ ಕೇಳುವುದು. ಇವಕ್ಕೆ ಹಾಕಿದ ಹಣಕ್ಕೆ ಒಂದು ರೇಡಿಯೋ ತರಿಸಿಬಿಟ್ಟಿದ್ದರೆ ಚೆನ್ನಾಗಿರೋದು' ಎಂದೆ. ಅಲ್ಲಿಯೇ ಇದ್ದ ಅವರ ಹೆಂಡತಿ 'ಹೌದಪ್ಪ. ನೀವು ಹೇಳುವುದು ಸರಿ. ನನಗೂ ಹಲವು ರಾತ್ರಿ ಅದೇ ಯೋಚನೆ. ಇದೋ ವಿಪರೀತ ಖರ್ಚಿಗೆ ದಾರಿ ಕೇಳಿ ಕೇಳಿ ಬೇಸರವಾಗಿ ಹೋಗಿದೆ. ಒಂದು ಸಾರಿ ತೆಗೆದುಕೊಂಡ ರೆಕಾರ್ಡು ಹಾಳೆ. ಇದನ್ನು ಯಾರಿಗಾದರೂ ಮಾರಿಬಿಡಿ ಅಂತ ಸಾವಿರ ಸರ್ತಿ ಹೇಳಿ ಆಯಿತು. ಇವರ ಮನಸಿಗೆ ಹೋಗೋದೇ ಇಲ್ಲ. ಇಷ್ಟರ ವರೆಗಿನ ಇದರ ಖರ್ಚಿಗೆ ಎರಡು ರೇಡಿಯೋ ಬರುತಿತ್ತೋ ಏನೋ?' ಎಂದಳು. 'ಹಾಗೇಕೆ ಮಾಡಬಾರದು ಸ್ವಾಮಿ. ಪ್ರಯತ್ನ ಮಾಡಿ ನೋಡಿ. ಎಂದವನೇ ಅಲ್ಲಿಂದ ಹೊರಟು ಬಂದೆ.

ಶಾಸ್ತ್ರಿಗಳ ದರ್ಬಾರನ್ನು ನೋಡಿದ ಹಲವರಿಗೆ ಬಹು ಆಶ್ಚರ್ಯ. 'ಏನು ನಾವು ಉದ್ಯೋಗದಲ್ಲಿದ್ದು ತಿಂಗಳಿಗೆ 59, 100 ಸಂಪಾದಿಸಿದರೂ ಸಂಸಾರವನ್ನು ಸಾಗಿಸುವುದಕ್ಕೆ ಹಿಂದುಮುಂದು. ಇವರ ದರ್ಬಾರು ಹೇಗೋ ಆ ಪರಮಾತ್ಮನೇ ಬಲ್ಲ ಅನ್ನುತ್ತಿದ್ದರು. ಇನ್ನು ಕೆಲವರು 'ಇಲ್ಲ ಕಂಡ್ರಿ, ಈ ಶಾಸ್ತ್ರಿ ಬೂದಿಯಿಂದ ಚಿನ್ನ ಮಾಡೋದು ಕಲಿತಿದ್ದಾನೆ. ಅದಕ್ಕಾಗಿ ನೋಡಿ ಅವನು ಆಗಾಗ ಊರು ಬಿಟ್ಟು ಹೋಗುತಿರುತ್ತಾನೆ. ಇಲ್ಲದಿದ್ದರೆ ಹೇಗ್ರಿ ಮಾಡ್ತಾನೆ ಈ ದವಲತ್ತು' ಎನ್ನುತಿದ್ದರು.

ಇಷ್ಟೆಲ್ಲ ಆದರೂ ಶಾಸ್ತ್ರಿಗಳಿಗೆ 'ನಾ ಪುತ್ರಸ್ಯ ಗತಿರ್ನಾಸ್ತಿ' ಎಂಬುವುದಕ್ಕೆ ದೇವರು ಕಣ್ಣು ಬಿಡಲಿಲ್ಲ. ಬೇಕಾದಷ್ಟು ವ್ರತಗಳಾದವು. ಔಷಧೋಪಚಾರಗಳಾದವು. ಏನೂ ಪ್ರಯೋಜನವಿಲ್ಲ. ಯಾರಾದರೂ 'ಸ್ವಾಮಿ ನಿಮಗೆ ಪರಮಾತ್ಮ ಒಂದೆರಡು ಗಂಡುಮಕ್ಕಳನ್ನು ದಯಪಾಲಿಸಿಬಿಟ್ಟರೆ' ಎನ್ನುವಷ್ಟರೊಳಗೆ ಶಾಸ್ತ್ರಿಗಳು 'ಏನು ಅಷ್ಟು ಅವಸರ, ನಿಧಾನವಾಗಿಯೇ ಆಗಲಿ' ಎನ್ನುತಿದ್ದರು. ಅಂತೂ ಶಾಸ್ತ್ರಿಗಳ ಪುತ್ರ ನಿರೀಕ್ಷಣೆಯೂ ಅವರ ನವ ವಧುವಿನ ರೇಡಿಯೋ ಆಶೆಯೂ ಸಫಲವಾದರೆ ನಮಗೆಲ್ಲರಿಗೂ ಆನಂದ. ನಾವೂ ನಿರೀಕ್ಷಿಸುತ್ತಿರೋಣ.

—:0:—

ಕೊಡಗಿನ ಬೆಡಗು.

ಲೇಖಕ:—'ಪರ ಕುಮಾರ', ಪೊನ್ನಂಪೇಟೆ ಸುತ್ತಲಿಕ್ಕಿ ದ ನಾಡು.

ಸುತ್ತಲಿಕ್ಕಿರ ಬೆಟ್ಟ, ಬಳಿದ ಕಾಡಮು ಬೆಟ್ಟ
ಎತ್ತ ನೋಡಿದರತ್ತ ಬೆಟ್ಟ ಅಡವಿ ||
ಹತ್ತಲಸದಳವಾದ ಕಟ್ಟಕಡಿದಾಗಿರುವ
ಕೊತ್ತಳಗಂತಿರುವ ಬೆಟ್ಟಗಳ ನಾಡು ||

ಸೃಷ್ಟಿದೇವಿಯು ತಾನು, ಹಸುರು ಶೀರೆಯನುಟ್ಟು
ತುಷ್ಟಿಯಿಂ ಕುಳಿತಿಹಳೊ ಎಂಬ ತೆರದಿ ||
ಅಷ್ಟು ಅಂದಕೆ ತೋರುವನು ಬೆಳೆದ ಹುಲ್ಲೆಲ್ಲ
ಸೃಷ್ಟಿ ಸೌಂದರ್ಯದಾ ತವರು ಮನೆ ಕೊಡಗು ||

ಕಾಡಲ್ಲಿ ಬೆಳೆದ ಮರ, ಗಂಧ ಹೆಬ್ಬಲಸು
ಕಾಡ ಸಂಪಿಗೆ, ಇರ್ಪೆ, ಬೀಟಿ, ಹಲಸು ||
ಕಾಡಾಲ, ಅರಳಿ, ನೇರಳೆ, ಸರಳೆ, ಬಣಪು
ಚೋತಿ, ಮೇಲಾಗಿ ಬೆಳೆದಿರುವ ಗಿಡಗಳ ಗುಂಪು

ಅಲಲ್ಲಿ ನಿಂಬೆ, ಕಿತ್ತಳೆ, ಚೂತ, ಬಾಳೆ
ನೆಲ್ಲಿ, ಮಾದಳಗಿಡವು ಮತ್ತೆ ಪೇರಾಳೆ ||
ಎಲ್ಲ ತರ ತರದ ತರಕಾರಿ ಹಣ್ಣುಗಳು ದೊರೆವ
ಸಲ್ಲಲಿತ ಸೊಂಪಾದ ನಾಡು ಕೊಡಗು ||

ಚಿತ್ತಬೀಳಿನ ಹುದಿಯು, ಸತ್ತಿಗೆಯ ತೆರದಲ್ಲಿ
ಎತ್ತಿ ತಲೆಯನು ಮರದ ತುದಿಯಲ್ಲಿ ಜೋಲಿ
ಒತ್ತಿ ಮಾರುತ ಬೀಸಲಲ್ಲಿ ಮಿಣಿ, ಕುಣಿದಾಡಿ
ಚಿತ್ತವನು ರಂಜಿಪುದು ನೋಟಕರ ನೋಡಿ ||

ಬೆಟ್ಟಗಳ ಬದಿಯಲ್ಲಿ ತೊಟ್ಟಗಳ ಮಧ್ಯದಲಿ
ಇಟ್ಟಿಬೆಲು ಹೊಂಬಟ್ಟಲಂತೆ ಬಯಲುಗಳು ||
ಮೆಟ್ಟು ಮೆಟ್ಟಲಾಗಿ ತೋರುತಿಹ ಗದ್ದೆಗಳು
ಪುಷ್ಟಿ ಧೃಡಗಳಿಂದ ಮೆರೆದು ಹೊಳೆಯುವವು ||

ಕಾಡ ಉತ್ಪತ್ತಿಗಳ ಈ ಕಾಡಿನಿಂ ಜನರು
ನಾಡತ್ತ ಒಯ್ಯುವರು ರೂಢಿ ಮಾಡಿ ||
ಕಾಡಲ್ಲಿ 'ಯಾಲಕ್ಕಿ' 'ಕಾಫಿ' ಮೊದಲಾಗಿರುವ
ಪಾಡಾದ ತೋಟಗಳು ಬೆಳಗುತಿಹ ನಾಡು ||

ಆಗುವನು ಒಡೆ ಬತ್ತದ ಬೆಳೆಯು ವರುಷದಲಿ
ತೀಗುವರು ಉಂಡು ಮತ್ತಷ್ಟು ಇಹುದಲ್ಲಿ ||
ಸಾಗು ಮಾಡುವರು ಒಗ್ಗಟ್ಟಿನಿಂ ಮತ್ತದರು
ತ್ಯಾಗಿಗಳ ತೆರದಿ ಧರ್ಮದಿ ಭೋಗಿಸುವರು ||

ಆಳು ಎಂಬನಿಲ್ಲ, ಅರಸನಂದದಿ ಎಲ್ಲ
ಆಳಾಗಿ ದುಡಿದು ಅರಸನ ತೆರದಿ ಉಂಡು ||
ತಾಳಿ ಹರಷದ ತಮ್ಮ ಕಾರ್ಯದೊಳು ತಾವಿದ್ದು
ತಾಳಿ ಬಾಳುತಲಿಹರು ಈ ನಾಡಿನವರು ||

ಲಕ್ಷಗಟ್ಟಲೆ ಜನರುಆಳಾಗಿ ದುಡಿದಲ್ಲಿ
ಕುಕ್ಷಿಯನು ಹೊರೆಯುವರು ಬಂದುಹೆರರು
ಲಕ್ಷಗಟ್ಟಲೆ ಜನಕೆ ಭಿಕ್ಷವನು ಕೊಡುತಿರುವ
ಅಕ್ಷಯಾ ಪಾತ್ರವಿದು ಕೊಡಗು ನಾಡು ||

ಪುಣ್ಯದಾಯಕಿಯಾದ ಕಾವೇರಿ ನದಿಯುಗಮ
ಪುಣ್ಯಕ್ಷೇತ್ರವದಾಗಿ ಇಹುದು ಜನಕೆ ||
ಪುಣ್ಯವಂಗಳಿಸಿ ಪಾಪವ ಬಿಡಲು ಜನರೆಲ್ಲ
ಕನ್ಯ ಮಾಸವು ಕಳೆಯೆ ಬರುವರಲ್ಲಿ ||

'ಕೊಡಗು' ಜಿಲ್ಲೆಯ ವಾಸಿಜನರೆನಿಪರು ಮತ್ತೆ
'ಕೊಡಗ'ರೆಂಬುವರವರೆ ಅತಿ ಧನಿಕರಾಗಿ ||
'ಕೊಡಗು'ಸೀಮೆಗೆ ದೇವಿ ಕಾವೇರಿಯೊಲಉಂಟು
'ಬೇಡು' 'ಕಾವೇರಮ್ಮ'ನದು ಕೊಡಗು ನಾಡು ||

—:0:—

ಕಣ್ಣಿನ ಚುರುಕಿಗೆ.

ತಾಸಿಗೊಂದು ಪುಟ ಓದ, ಎಂತಹ ಪುಸ್ತಕವಾದರೂ ಅದನ್ನು ಒಂದೇ ದಿನದಲ್ಲಿ ಮುಗಿಸಿದೆನೆನ್ನುವ ಮಹಾತ್ಮರೂ, ದಿನಕ್ಕೊಂದರಂತೆ ಪುಸ್ತಕ ಓದಿ ಪುಸ್ತಕದಲ್ಲಿರುವುದೇನೆಂದು ಅರಿಯದವರೂ ನಮ್ಮಲ್ಲಿ ಬಹಳ ಇರುವರು. ಬೇಗನೆ ಓದುವ ಶಕ್ತಿಯನ್ನು ಕಣ್ಣಿಗೆ ತರಲು ಒಂದು ಉಪಾಯವನ್ನು ಈಗ ಕಂಡು ಹಿಡಿದಿದ್ದಾರೆ. ಮೂಕ ಚಲನಚಿತ್ರಗಳಲ್ಲಿ, ಚಿತ್ರದ ವಿಚಾರವನ್ನು ಪಟದ ಮೇಲೆಯೇ ಉಲ್ಲೇಖಿಸುತ್ತಾರೆ. ಈ ಲೇಖನವನ್ನು ಓದುವಾಗ ಕಣ್ಣುಗಳು ಬಹಳ ಚುರುಕಾಗಿರಬೇಕು. ಹೆಚ್ಚಿನವರು 2 ಪಂಕ್ತಿ ಓದುವಾಗಲೇ ಅದು ಅಳಿಸಿ ಹೋಗಿ ಪುನಹ ಹೊಸ ಪಂಕ್ತಿಗಳು ಕಾಣಿಸಿಕೊಳ್ಳುವವು. ಇಂಥಾ ಚಿತ್ರಗಳನ್ನು ಶಾಲೆಗಳಲ್ಲಿ ಪ್ರದರ್ಶಿಸಿ ಅದರ ಬರಹಗಳು ಅಳಿಸಿ ಹೋದೊಡನೆ ಚಿತ್ರ ನಿಲ್ಲಿಸಿ ಅಲ್ಲಿ ಕಂಡುದನ್ನು ಬರೆದುಕೊಳ್ಳುವಂತೆ ಪ್ರೇಕ್ಷಕರಿಗೆ ಹೇಳಬೇಕಂತೆ. ಹಾಗೆ ಕೆಲಕಾಲ ಮಾಡಿದರೆ ಕಣ್ಣಿಗೆ ಚುರುಕು ಬರುವುದಂತೆ.

—:0:—

ನಮ್ಮಲ್ಲಿಯೂ ಬೇಕು.

ಮೇಫೇಯರ್ ಎಂಬ ನಗರದಲ್ಲಿ ವ್ಯಭಿಚಾರ ಮುಂತಾದ ಹೊಲಸು ಹವ್ಯಾಸಗಳು ಅತೀ ವಿಪರೀತವಾಗಿ, ಇವುಗಳನ್ನು ವಿರೋಧಿಸುತ್ತಿದ್ದ ವಿದ್ಯಾವಂತರು, ಧನಿಕರು, ಅಧಿಕಾರಿಗಳು ಡಾಕ್ಟರ್, ವಕೀಲರುಗಳು ಈಗ ಇವನ್ನು ತಮ್ಮ ಕೈಗೆ ತೆಗೆದುಕೊಂಡಿರುವರು. ಲಂಡನ್ ಪೋಲೀಸರಿಂದ ಇದನ್ನು ತಡೆಯಲಾಗಲಿಲ್ಲ. ಇದನ್ನು ಕಂಡು ಬೇಸರಗೊಂಡು ಊರಿನ ತರುಣರೇ ಈಗೊಂದು ಸಂಘವನ್ನು ಮಾಡಿ ಇವುಗಳ ನಿರ್ಮೂಲಕ್ಕೆ ಕೈಹಾಕಿದ್ದಾರೆ. ಇವರಿಂದಾಗಿ ಕ್ಲಬ್ಬುಗಳಲ್ಲಿ ಮಾದಕ ದ್ರವ್ಯಪಾನ ಮಾಡಿ ಅನೀತಿಯಿಂದ ವರ್ತಿಸುವ ಅಧಿಕಾರಿಗಳಿಗೂ, ಪ್ರಮುಖರಿಗೂ, ವ್ಯಭಿಚಾರ ವೃತ್ತಿಗೆ ಸಾಧಕರಾಗಿರುವ ಡಾಕ್ಟರ್, ವಕೀಲ ನಗರದ ಆಧಾರ ಸ್ತಂಭರಾದ ಪ್ರಮುಖರಿಗೂ ಬಹಳ ತೊಡಕಾಗಿದೆ. ಇಲ್ಲದೆ ತರುಣರು ಪೋಲೀಸರ ಸಹಾಯ ಕೊಡುವಂತೆ ಲಂಡನಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ನಮ್ಮಲ್ಲಿ ಈ ತೆರನ ಸಂಘ ಬೇಡವೇ?

—:0:—

ಅಹಿಂಸಾ ತತ್ವದ ಮಹಿಮೆ.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಅಹಿಂಸೆಯು ಎಲ್ಲಾ ಕಡೆಯಲ್ಲಿಯೂ ಬಾಯಿಯಿರುವ ಶಕ್ತಿ. ಒಂದೇ ತೊಟ್ಟು ರಕ್ತ ಹರಿಸದೆ ಅದು ಅನೇಕ ಅಮೋಘ ಕಾರ್ಯಗಳನ್ನು ಮಾಡಬಲ್ಲುದು. ಅದು ತುಕ್ಕು ಹಿಡಿಯುವಂಥಾದ್ದಲ್ಲ. ಯಾ ಕದಿಯಲ್ಪಡುವಂಥಾದ್ದೂ ಅಲ್ಲ. ಅಹಿಂಸಾಪೂರಿತ ಯುದ್ಧಕ್ಕೆ ಸೈನ್ಯ ತರಬೇತು ಬೇಕಿಲ್ಲ. ತನ್ನ ಮನುಷ್ಯತ್ವವನ್ನು ತಿಳಿದವನೇ ಅಹಿಂಸಾವಾದಿಯಾಗಬಲ್ಲ. ಅಹಿಂಸಾವಾದಿಯು ತನ್ನ ಮನೋಭಾವಕ್ಕೆ ವಿರುದ್ಧವಾಗಿ ಎಂದೂ ನಡೆಯಲಿಕ್ಕಿಲ್ಲ. ಅದಕ್ಕಾಗಿ ಗುಂಡಿನ ಬಾಯಿಗೆ ತುತ್ತಾಗಲೂ ಆತನು ಹೆದರಲೊಲ್ಲ. ಅಹಿಂಸೆಯು ಅಜೇಯವಾದ ಅಸ್ತ್ರವೆಂದರೆ ಅತಿಶಯೋಕ್ತಿಯಲ್ಲ.

ಅಹಿಂಸಾತತ್ವವು ಅಜೇಯವಾದದ್ದು. ಹಿಂಸಾ ತತ್ವಕ್ಕಿಂಥ ಅದು ವಿರೋಧಿಗಳಲ್ಲಿ ಮಾರ್ಪಾಡುಮಾಡಬಲ್ಲುದು ಎಂದು ಗತಲೇಖನದಲ್ಲಿ ಬರೆದೆವು. ಆದರೆ ಇಂಥಾ ಒಂದು ಹೇಳಿಕೆಯನ್ನು ಮುಂದಿಡಲು ಇದಕ್ಕೆ ಚರಿತ್ರಾ ಆಧಾರಗಳಿವೆಯೋ ಎಂಬುದೊಂದು ಪ್ರಶ್ನೆಯು ವಾಸ್ತವವಾಗಿ ಮುಂಬರುವದು. ಅಹಿಂಸಾದ ಅಡಿಗಲ್ಲೆಂದರೆ ಪ್ರೇಮ ಮತ್ತು ವಿಶ್ವಾಸ. ಇವೆರಡು ಜನತೆಯಲ್ಲಿಲ್ಲದಿದ್ದ ಪಕ್ಷ ಭೂವಲಯವು ಎಂದೋ ಮಾಯವಾಗಿ ಹೋಗುತ್ತಿತ್ತು. ಅಹಿಂಸಾತತ್ವದ ಬಗ್ಗೆ ಚರಿತ್ರೆಯಿಂದ ಉದಾಹರಣೆ ಕೊಡಲಿಕ್ಕೆ ಮೊದಲು ಚರಿತ್ರೆಯೆಂದರೇನೆಂಬುದನ್ನು ಸ್ವಲ್ಪ ವಿಚಾರಿಸುವದು ಅಗತ್ಯ. ಗುಜರಾತಿ ಭಾಷೆಯಲ್ಲಿ ಚರಿತ್ರೆಯೆಂದರೆ, 'ಅದು ಹಾಗೆ ಆಯಿತು' ಎಂಬ ಅರ್ಥ ಬರುವದಂತೆ. ಚರಿತ್ರೆಯ ಅರ್ಥವು ಅದೇ ಆಗಿದ್ದ ಪಕ್ಷದಲ್ಲಿ ಅಹಿಂಸಾತತ್ವದ ಬಗ್ಗೆ ಉದಾಹರಣೆ ಕೊಡುವದು ಸುಲಭವಾಗುತ್ತಿತ್ತು. ಆದರೆ ಇಂದಿನ ಚರಿತ್ರೆಯ ಮೂಲ ಅರ್ಥವೇನು? ರಾಜರು, ಚಕ್ರಾಧಿಪತಿಗಳು ಮಾಡಿದ ಕಾರ್ಯಕಲಾಪಗಳು. ಯುದ್ಧಗಳ ಒಂದು ಪಟ್ಟಿಯು. ಆದ್ದರಿಂದ ಚರಿತ್ರೆಯಲ್ಲಿ ಆತ್ಮಶಕ್ತಿಯ ಯಾ ಅಹಿಂಸದ ಉದಾಹರಣೆಗಳು ಇರಲಾರವು. ಯಾವ ಜನಾಂಗದಲ್ಲಿ ಚರಿತ್ರೆಯಿಲ್ಲವೊ ಅರ್ಥಾತ್ ಯುದ್ಧ ನಡೆಯಲಿಲ್ಲವೋ ಅದು ಸುಖಿಯಾದ ಜನಾಂಗವೆಂದು ಯೂರೋಪಿಯನರಲ್ಲಿ ಒಂದು ಗಾದೆ ಇದೆ. ಚರಿತ್ರೆಯು ಕೇವಲ ರಾಜರುಗಳ ವರ್ತನೆ, ಅವರು ಮಾಡಿದ ಸಾಹಸ ಕಾರ್ಯಗಳ ವರ್ಣನೆ, ಒಬ್ಬರೊಬ್ಬರನ್ನು ಕೊಂದು ಮಾಡಿದ ರಾಜ್ಯವಿಸ್ತಾರದ ಇಷ್ಟಗಳನ್ನು ತಪ್ಪಿಲ್ಲದೆ ಜನತೆಯ ಮುಂದಿಡುವದೇ ವಿನಹ ಬೇರಿಲ್ಲ. ಚರಿತ್ರೆಯಲ್ಲಿ ವಿವರಿಸುವಂತೆ ಜಗತ್ತು ಯುದ್ಧದಿಂದ ಪ್ರಾರಂಭಿಸಲ್ಪಟ್ಟಿದ್ದರೆ ಇಂದು ಜಗತ್ತಿನಲ್ಲಿ ಯಾನೊಬ್ಬನೂ ಜೀವಂತನಾಗಿರುವದು ದುರ್ಲಭವಾಗುತ್ತಿತ್ತು. ಯುದ್ಧದಿಂದ ಪ್ರಾರಂಭಿಸಿದ ಜನಾಂಗಗಳು ನಾಮಾವಶೇಷವಾಗಿರುವವು. ಉದಾಹರಣೆಗೆ ಆಸ್ಟ್ರೇಲಿಯಾವು ಪರದೇಶೀಯರಿಂದ ಆಕ್ರಮಿಸಲ್ಪಟ್ಟಿತು. ಇಂದು ಅಲ್ಲಿ ನಿಜವಾದ ಒಬ್ಬನೇ ಒಬ್ಬ ಆಸ್ಟ್ರೇಲಿಯನನಿಲ್ಲ. ಯುದ್ಧದಿಂದ ಪ್ರವೇಶಿಸಿದ ಈ ಜನಾಂಗವಾದರೂ ಹೆಚ್ಚುಕಾಲ ಅಲ್ಲಿ ಇರಲಾರದೆಂಬುದು ಸ್ವತಸಿದ್ಧ. 'ಕತ್ತಿಯಿಂದ ಜಯಿಸಿದವನು ಕತ್ತಿಯಿಂದಲೇ ಮಡಿಯುವನೆಂಬ ನಾಣ್ಣುಡಿಯಂತೆ ಯುದ್ಧದಿಂದ ಪ್ರಾರಂಭವಾದ ಜನಾಂಗವು ಅದರಿಂದಲೇ ನಾಶಹೊಂದದಿರದು.

ಇಂದು ಜಗತ್ತಿನಲ್ಲಿ ಅನೇಕಾನೇಕ ಜನರು ಜೀವಿಸುತ್ತಿರುವದರಿಂದ ಚರಿತ್ರೆಯಲ್ಲಿ ನಮೂದಿರುವಂತೆ ಜಗತ್ತು ಯುದ್ಧದಿಂದ ಪ್ರಾರಂಭಿಸಲ್ಪಡಲಿಲ್ಲ. ಸತ್ಯ, ಅಥವಾ ಪ್ರೀತಿಯೇ ಮೂಲ ವಸ್ತುಗಳೆಂದು ತಿಳಿಯುತ್ತದೆ. ಆದ್ದರಿಂದ ಅನೇಕ ಘೋರ ಸಂಗ್ರಾಮಗಳಾದರೂ, ಜನಾಂಗ ಜನಾಂಗಗಳೊಳಗೆ ವಿರೋಧಗಳುಂಟಾದರೂ ನಾಶಹೊಂದದಿರುವ ಆ ಸತ್ಯ ಯಾ, ಪ್ರೀತಿಯೆಂಬ ಶಕ್ತಿಯೇ ಬುನಾದಿಯಿಂದಲೂ ನಡೆದು ಬಂದ ಮೂಲ ತತ್ವ. ಈ ಪ್ರೀತಿ, ಸತ್ಯದ ಪರಿಣಾಮದಿಂದಾಗಿಯೇ ಲಕ್ಷೋಪಲಕ್ಷ ಜನರು ಬದುಕಿ ಬಾಳುತ್ತಿರುವರು. ಕೋಟ್ಯಾಂತರ ಕುಟುಂಬಗಳಲ್ಲಿ ದಿನವೂ ಬರಬಹುದಾದ ಕಲಹ ಕಕ್ಷಿಗಳು ಈ ಪ್ರೇಮವೆಂಬ ಶಕ್ತಿಯಿಂದಲೇ ಶಮನವಾಗುತ್ತಿವೆ. ಸಾವಿರಾರು ಜನಾಂಗಗಳು ಶಾಂತಿಯಿಂದ ಬಾಳುತ್ತಿರುವವು. ಚರಿತ್ರೆಯು ಈ ವಿಚಾರಗಳನ್ನೆಲ್ಲಾ ಒಳಗೊಳ್ಳಲಾರದು. ಚರಿತ್ರೆಯೆಂದರೆ ಸುಗಮವಾಗಿ ಮುಂದರಿಯುತ್ತಿರುವ ಜನಾಂಗದ ಪಥದಲ್ಲಿ ಬಂದ ತೊಡರುಗಳ ಪಟ್ಟಿಯೇ ವಿನಹ ಬೇರಿಲ್ಲ. ಇಬ್ಬರು ಸಹೋದರರು ಐಕ್ಯದಿಂದಿರುವಾಗ ಯಾರೂ ಅವರ ವಿಚಾರ ಯೋಚಿಸರು. ಅವರೊಳಗೆ ಪರಸ್ಪರ ಕದನವಾದಾಗ ಮಾತ್ರ ಜನತೆಯ ಕಣ್ಣು ಅಲ್ಲಿ ಕೇಂದ್ರೀಕೃತವಾಗುವದು. ಅಂತೆಯೇ ಚರಿತ್ರೆಯಲ್ಲೂ ಸುಗಮವಾಗಿ ಮುಂದರಿದ ಜನಾಂಗಗಳ ವಿಚಾರ ಬರುವದು ಅಸಂಭವ. ಆದ್ದರಿಂದ ಅಹಿಂಸಾ, ತತ್ವದ ವಿಚಾರ ಇಂದಿನ ಚರಿತ್ರೆಯಲ್ಲಿ ಬರುವದೂ ಅಸಾಧ್ಯ.

ಅಹಿಂಸಾತತ್ವವನ್ನು ತಿಳಿಯುವ ಕಾತುರವು ಜನತೆಯಲ್ಲಿ ಬರುವದರಿಂದ ಅದರ ರೂಪರೇಖೆಗಳೊಂದಿಗೆ ವಿವರಿಸುವೆವು. ಅಹಿಂಸೆಯು ನಮ್ಮ ಮೂಲಭೂತ ಹಕ್ಕುಗಳನ್ನು ನಮ್ಮ ವೈಯಕ್ತಿಕ ನರಳುವಿಕೆಯಿಂದ ಸಂಪಾದಿಸುವ ಒಂದು ಮಾರ್ಗ. ಯುದ್ಧ ಮುಂತಾದ ಕಾರ್ಯಕಲಾಪಗಳ ವಿರೋಧ ತತ್ವವದು. ನಮ್ಮ ಮನೋಭಾವನೆಗೆ ತೃಪ್ತಿಕರವಲ್ಲದ ಕೆಲಸವನ್ನು ಮಾಡಲು ನಾವು ತಿರಸ್ಕರಿಸಿದರೆ ಅದು ಆತ್ಮಶಕ್ತಿ. ಉದಾಹರಣೆಗಾಗಿ ಇಂದಿನ ಸರಕಾರವು ನಮಗೆ ಅನ್ವಯಿಸುವ ಮತ್ತು ನಮಗೆ ವಿರೋಧವಿರುವ ಒಂದು ಕಾನೂನನ್ನು ಹೊರಡಿಸಿದರೆನ್ನುವ. ನಾವು ಸರಕಾರದ ಘೋರಣೆಯನ್ನು ಅಸ್ತ್ರಶಸ್ತ್ರಗಳ ಶಕ್ತಿಯಿಂದ ಖಂಡಿಸಿ ಅದನ್ನು ಸರಕಾರವು ವಾಪಾಸು ತೆಗೆಯುವಂತೆ ಮಾಡಿದರೆ ಅದು ಶರೀರ ಶಕ್ತಿಯೆನ್ನಲ್ಪಡುವದು. ನಾವು ಖಾನೂನನ್ನು ಒಪ್ಪದೆ ಅದರು ವಿಧಿಸಬಹುದಾದ ಕಷ್ಟಕ್ಕೊಳಗಾದರೆ ಅದು ಆತ್ಮಶಕ್ತಿಯೆಂದೆನಿಸುವದು. ಇತರರನ್ನು ಬಲಿಕೊಟ್ಟು ಆರ್ಜಿಸಿದ ಲಾಭಕ್ಕಿಂತಲೂ, ಆತ್ಮಸಮರ್ಪಣೆಯಿಂದ ಪಡೆದ ಜಯವು ಮೇಲೆಂಬುದನ್ನು ಯಾರೂ ವಿರೋಧಿಸರು. ಆದರೆ ನ್ಯಾಯವಲ್ಲದ ಸಂದರ್ಭಗಳಲ್ಲಿ ಈ ತತ್ವವನ್ನುಪಯೋಗಿಸಿದರೆ ಆತನೇ ಕಷ್ಟಪಡಬೇಕಾಗುವದು. ಆದ್ದರಿಂದ ನ್ಯಾಯ ವಿಮರ್ಶೆಯು ಈ ತತ್ವಾವಲಂಬನೆಗೆ ಅಗತ್ಯ. ಸರಕಾರದ ಕಟ್ಟಪ್ಪಣೆಯ ಬೆದರಿಕೆಯಿಂದ ಯಾ, ಇತರ ವಿಚಾರಗಳ ಸಮಾವೇಶದಿಂದ ತನ್ನ ಆತ್ಮಕ್ಕೆ ತೃಪ್ತಿಯಾಗದ ವಿಚಾರವನ್ನು ಒಪ್ಪುವದೆಂದರೆ ನಮ್ಮ ಹೇಡಿತನದ ಪ್ರದರ್ಶನವಲ್ಲದೆ ಬೇರಿಲ್ಲ. ಯಾವ ಮನುಷ್ಯನು ತನ್ನ ಮನುಷ್ಯತ್ವವನ್ನು ತಿಳಿದು ಜಗನ್ನಿಯಾಮಕನಿಗೆ ಮಾತ್ರ ಬಗ್ಗಿ ಕಾರ್ಯಮಾಡುತ್ತಾನೋ ಅವನಿಗೆ ಈ ಖಾನೂನುಗಳಾಗಲೀ, ಸರಕಾರವಾಗಲೀ ಏನೂ ಪ್ರತೀಕಾರವನ್ನು ಮಾಡಲಾರದು. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಪ್ರತಿಷ್ಠೆಯು ಕೆಳಗಿನ ಅಂತಸ್ತಿಗೆ ಇಳಿದು ಹೋಗಿ ಸರಕಾರವು ಹೊರಡಿಸಿದ ಪ್ರತಿಯೊಂದು ಖಾನೂನನ್ನು ನಮ್ಮ ಆತ್ಮತೃಪ್ತಿಗೆ ವಿರೋಧವಾಗಿ ಕರ್ತವ್ಯದೃಷ್ಟಿಯಿಂದ ಪಾಲಿಸುತ್ತಿರುವೆವು. ಮಾನವನು ಯಾವಾಗ ನ್ಯಾಯವಲ್ಲದ ಯಾವ ಖಾನೂನನ್ನೂ ಪಾಲಿಸಲಾರೆನೆಂಬ ಆ ತಿಳುವಿಗೆ ಬರುವನೋ ಅವನನ್ನು ಯಾರ ದ್ವೇಷವೂ ಬಾಧಿಸದು. ಇದೇ ಆತ್ಮಸ್ವಾತಂತ್ರ್ಯದ ಆಡಿಪಾಯ.

ಬಹು ಪಕ್ಷದವರ ತೀರ್ಮಾನಕ್ಕೆ ಅಲ್ಪ ಪಕ್ಷದವರು ಶರಣಾಗತರಾಗಬೇಕೆಂಬ ವಾದವು ನ್ಯಾಯಸಮ್ಮತವಾದುದಲ್ಲ. ಬಹುಮತದವರು ತಪ್ಪು ಹೆಜ್ಜೆಯಿಂದ ನಡೆದು ಕನಿಷ್ಟ ಪಕ್ಷದವರನ್ನು ಬಲಾತ್ಕರಿಸಿದ ಉದಾಹರಣೆಗಳೆಷ್ಟೊ ಇವೆ. ಕೆಲವು ಕಳ್ಳರ ಗುಂಪಿನಲ್ಲಿ ಕಳ್ಳತನ ಮಾಡುವದಕ್ಕೆ ಬಹುಮತ ಸಿಕ್ಕಿತೆಂದರೆ ಅಲ್ಲಿರಬಹುದಾದ ಸಂಪನ್ನನೂ ಅದನ್ನು ಅನುಸರಿಸಬೇಕೆಂಬುದರಲ್ಲಿ ಅರ್ಥವಿಲ್ಲ. ಹೀಗೆ ಅನ್ಯಾಯದ ವರ್ತನೆಯನ್ನು ತನ್ನ ಇಚ್ಛೆಗೆ ವಿರೋಧ ಪಾಲಿಸಿದರೆ ಅದು ಆತ್ಮಘಾತುಕವು. ನಿಜವಾದ ಅಹಿಂಸಾವಾದಿಯು ಹಾಗೆ ಮಾಡನು.

ಇದರಿಂದ ಈ ತಟಸ್ಥ ಪ್ರತಿರೋಧ ಶಕ್ತಿಯು, ಅಹಿಂಸೆಯು ಕೇವಲ ನಿತ್ರಾಣಿಗಳ, ಬಲಹೀನರ ಆಯುಧವೆಂದು ಯಾರೂ ಭಾವಿಸಲಾಗದು. ಯಾಕೆಂದರೆ ಅಹಿಂಸೆಯು ಅಜೇಯವಾದದ್ದು. ಅದು ಖಡ್ಗ, ಯಾ ಕೋವಿಗುಂಡುಗಳ ಶಕ್ತಿಗಿಂತಾ ಮಿಗಿಲಾದದ್ದು. ಅಂದ ಬಳಿಕ ಅದು ಶಕ್ತಿಹೀನರ ಆಯುಧ ಹೇಗಾದೀತು? ಹೇಡಿಯಾದವನೊಬ್ಬನು ತನ್ನ ಮನನಿಚ್ಛೆಯಕ್ಕೆ ವಿರೋಧವಾದ ಖಾನೂನನ್ನು ಮುರಿಯಲೆತ್ನಿಸುವನೇ? ಗುಂಡಿನ ಬಾಯಿಗೆ ಸಹ ನಿಲ್ಲಲು ಹಿಂಜರಿಯದ ಆ ಅಹಿಂಸಾಭಕ್ತನು ಹೇಡಿಯಾಗುವನೇ? ಧೈರ್ಯವು ಎಲ್ಲಿದೆ? ಕೋವಿಯ ಹಿಂದುಗಡೆ ನಿಂತು ಗುಂಡು ಹಾರಿಸುವದರಲ್ಲೋಯೊ, ಗುಂಡನ್ನು ಎದುರಿಸಿ ನಿಲ್ಲುವದರಲ್ಲೋ? ಸಾವೆಂಬುದನ್ನು ಸ್ನೇಹಿತನಂತೆ ಜೊತೆಯಲ್ಲಿಟ್ಟುಕೊಂಡಿರುವವನೋ ಧೈರ್ಯಶಾಲಿಯು ಯಾ ಇತರರ ಜೀವವನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿರುವವನೋ? ಯಾವ ಮನುಷ್ಯನಲ್ಲಿ ಮನುಷ್ಯತ್ವ ಮತ್ತು ಧೈರ್ಯವಿಲ್ಲವೋ ಅವನು ಖಂಡಿತಾ ಅಹಿಂಸಾವಾದಿಯಾಗಲಾರನೆಂಬುದು ನೆನಪಿರಲಿ. ಅಹಿಂಸಾಪೂರಿತ ಯುದ್ಧಕ್ಕೆ ಸೈನ್ಯ ತರಬೇತು ಬೇಕಿಲ್ಲ. ಪ್ರತಿಯೊಬ್ಬನೂ ತನ್ನ ಮನವನ್ನು ಅವನವನ ಹತೋಟಿಯಲ್ಲಿಟ್ಟುಕೊಳ್ಳುವದೇ ತರಬೇತಾಗಿದೆ.

ಅಹಿಂಸೆಯೆಂಬುದು ಎಲ್ಲಾ ಕಡೆಯಲ್ಲಿಯೂ ಜಾಯಿಯಿರುವ ಶಕ್ತಿಯಾಗಿರುವದು. ಅದನ್ನು ಯಾವ ವಿಧವಲ್ಲಾದರೂ ಪ್ರಯೋಗಿಸಬಹುದು. ಒಂದೇ ಒಂದು ತೊಟ್ಟು ರಕ್ತವನ್ನು ಹರಿಸದೆ ಅದು ಅತ್ಯಮೋಘ ಕಾರ್ಯಗಳನ್ನು ಮಾಡಬಲ್ಲುದು. ಅದು ತುಕ್ಕು ಹಿಡಿಯುವಂಥಾದ್ದಲ್ಲ ಯಾ ಕದಿಯಲ್ಪಡುವಂಥಾದ್ದೂ ಅಲ್ಲ.

ಅಹಿಂಸೆಯು ಭಾರತದ ಪ್ರಧಾನ ಆಯುಧವಾದ ಪಕ್ಷ ಭಾರತದಲ್ಲಿ ಈವರೆಗೆ ಕೋವಿ ಗುಂಡುಗಳ ಪ್ರಯೋಗವು ಬರಲಿಲ್ಲವೋ? ಘೋರ ಸಂಗ್ರಾಮಗಳಾಗಿ ರಕ್ತದ ಕಾಲುವ ಹರಿಯಲಿಲ್ಲವೋ? ಎಂಬ ಪ್ರಶ್ನೆಯು ಬರುವದು. ಇದು ಕೇವಲ ಸಂಕುಚಿತವಾದ ಪ್ರಶ್ನೆ. ಭಾರತವೆಂದರೆ ಕೇವಲ ಕೆಲವು ಅರಸರ ದೇಶವಲ್ಲ. ಅವರು ಹಿಂಸಾತತ್ವದಿಂದ ವರ್ತಿಸಿದರೆಂದರೆ ಭಾರತದ ಮಿಲಿಯಾಂತರ ಜನತೆಯು ಅಹಿಂಸವಾದಿಗಳಲ್ಲ. ಈ ಪ್ರಜೆಗಳಿಂದಲೇ ರಾಜರುಗಳು ಬದುಕಿಬಾಳುವದು. ರಾಜರುಗಳು ತಮ್ಮ ಹಿಡಿತದಲ್ಲಿ ಜನತೆಯನ್ನಿಟ್ಟುಕೊಳ್ಳಲು ಯುದ್ಧ ಮೊದಲಾದುವನ್ನು ಮಾಡಿ, ಹಿಂಸಾಬೀಜವನ್ನು ಬಿತ್ತಿ ಬೆಳೆಸುವರು. ರಾಜ್ಯಲಾಲಸೆಯಿಂದ ಕಾತುರರಾದ ಅವರಿಗೆ ಅಹಿಂಸಾಮಾರ್ಗವು ತಿಳಿಯದು. ಈ ದಿನ ವರೆಗೆ ರಾಜಾಧಿರಾಜರ ಈ ಉಗ್ರವರ್ತನೆಗಳಿಂದ ಜನತೆಯು ತತ್ಕಾಲ ಬಗ್ಗಿದರೂ ಕ್ರಮೇಣ ಅವರು ಹಿಂಸಾತತ್ವಕ್ಕೆ ಬಗ್ಗಲಿಲ್ಲವೆಂದು ತಿಳಿದುಬರುವದು. ಅಹಿಂಸೆಯು ಇಂಥಾ ಜನತೆಯನ್ನು ತನ್ನ ಬಗಲಲ್ಲಿ ಹಾಕಿಕೊಳ್ಳುವ ಶಕ್ತಿಯುಳ್ಳ

ದ್ದು. ಕೆಲವೊಂದು ರಾಜರು ಹಿಂಸಾಚರಣೆಯನ್ನು ಮಾಡಿದ್ದನ್ನು ಚರಿತ್ರೆಯಲ್ಲಿ ನಮೂದಿಸಿದ್ದರೆ ಭಾರತದ ಚರಿತ್ರೆಯೇ ಹಿಂಸಾಮಯವೆಂದು ಯಾರೂ ತಿಳಿಯಲಿಕ್ಕಾಗದು. ಭಾರತವು ಅನಾದಿಯಿಂದಲೂ ತನ್ನ ಅಹಿಂಸಾಚರಣೆಗೆ ಖ್ಯಾತಿಗೊಂಡಿದೆ. ಸರಕಾರವು ಜನತೆಗೆ ಹಿತಕರವಾಗಿ ವರ್ತಿಸದಿದ್ದಾಗ ಅನೇಕಸಾರೆ ಜನರು ಸರಕಾರದೊಡನೆ ಸಹಕರಿಸದ ಉದಾಹರಣೆಗಳೆಷ್ಟೋ ಇವೆ. ಇದೇ ಅಲ್ಲವೆ ಅಹಿಂಸೆ. ಉದಾಹರಣೆಗಾಗಿ ಒಂದು ಗ್ರಾಮದ ಜನರ ಮೇಲೆ ಅಧಿಕಾರದಲ್ಲಿದ್ದ ರಾಜನು ಕೆಲವು ಖಾನೂನು ಕಟ್ಟಳೆಗಳನ್ನು ವಿಧಿಸಿದ್ದನ್ನು ನಿಷೇಧಿಸಿ ಗ್ರಾಮವಾಸಿಗಳು ಗ್ರಾಮವನ್ನೇ ಬಿಟ್ಟು ಹೊರಡಲುದ್ಯುಕ್ತರಾದ್ದರಿಂದ ಅರಸನು ತನ್ನ ಕಟ್ಟಳೆಯನ್ನು ಹಿಂತೆಗೆದು ಅವರ ಕ್ಷಮೆ ಬೇಡಬೇಕಾಯಿತಂತೆ. ಇದೆಲ್ಲಾ ಅಹಿಂಸಾತತ್ವಾಚರಣೆಯೇ. ಇಂಥಾ ಉದಾಹರಣೆಗಳು ಭಾರತ ಇತಿಹಾಸದಲ್ಲಿ ಅನೇಕ ಇವೆ.

ಅಹಿಂಸಾ ತತ್ವವನ್ನು ಪಾಲಿಸುವನಾಗಬೇಕಾದರೆ ಆತನಿಗೆ ತನ್ನ ದೇಹದ ಮೇಲೆ ಹಿಡಿತವಿರಬೇಕು. ದೇಶದ ಹಿತಸಾಧನೆಯಿಂದ ಅಹಿಂಸಾಪಾಲಕನಾಗಬೇಕಾದರೆ ಆತನು ಬಡತನವನ್ನು ಅಂಗೀಕರಿಸಬೇಕು, ಸತ್ಯವನ್ನು ಪಾಲಿಸಬೇಕು. ಧೈರ್ಯವನ್ನು ಆಚರಣೆಯಲ್ಲಿ ತರಬೇಕು ಮತ್ತು ವಿಷಯಸುಖಗಳಿಂದ ನಿರ್ಲಿಪ್ತನಾಗಿರಬೇಕು. ವಿಷಯಸುಖಗಳನ್ನು ತೊರೆದರೇನೆ ಮನಸ್ಸನ್ನು ಸ್ಥಿಮಿತದಲ್ಲಿಡಲು ಸಾಧ್ಯವಾಗುವದು. ಸಂಸಾರಸ್ಥನು ಅಹಿಂಸಾವಾದಿಯಾಗಬೇಕಿದ್ದರೆ ಆತನು ಸಹ ವಿಷಯಸುಖವನ್ನು ತ್ಯಜಿಸಬೇಕಾಗುವದು. ಇಲ್ಲವೇ ಆತನು ಖಂಡಿತಾ ಅಹಿಂಸಾತತ್ವಪಾಲಕನಾಗಲಾರನು. ಅಹಿಂಸಾವಾದಿಯು ಹೇಗೆ ವಿಷಯಸುಖಗಳನ್ನು ತೊರೆಯಬೇಕೋ ಹಾಗೆಯೇ ಅಹಿಂಸಾತತ್ವಾಲಿಂಗನಮಾಡಬೇಕಾದರೆ ಆತನು ಕಡುಬಡವನಿರಬೇಕು. ಸತ್ಯವೇ ಅಹಿಂಸೆಯ ಆಧಾರಸ್ತಂಭ. ಈ ತತ್ವವು ಧೈರ್ಯಲ್ಲೂ ಇದ್ದರೆ ಒಂದು ಹೆಜ್ಜೆ ಮುಂದಿಡಲಾರನು. ಹಣ, ನೌಕರಿ, ಖ್ಯಾತಿ, ಸರಕಾರ, ಬಂಧುಮಿತ್ರರು ಮತ್ತು ಮರಣದ ಭಯವನ್ನು ತೊರೆದವರೇ ಈ ತತ್ವವನ್ನು ಅನುಸರಿಸಲಾಪರು. ಈ ವಿಚಾರಗಳೆಲ್ಲ ಕಷ್ಟತಮವೆಂದೆನಿಸಬಹುದು. ಆದರೆ ಮಾನವನು ಹೃದಯದಲ್ಲಿ ಈ ಕಷ್ಟಗಳನ್ನು ಸಹಿಸುವ ಆ ಸಹನಶಕ್ತಿಯು ಪ್ರಕೃತಿ ನಿರ್ಮಿತವಾಗಿದೆ.

ಮಾನವನು ಹುಸಿಯನ್ನಾಡಬೇಕಾದರೆ ಆತನಿಗೆ ಯಾವದಾದರೊಂದು ವಿಚಾರದ ಭಯವಿರಬೇಕು. ಆದ್ದರಿಂದ ಧೈರ್ಯದಿಂದ ಸತ್ಯನುಡಿದು ಕಷ್ಟವನ್ನು ಎದುರಿಸುವದೇ ಅಹಿಂಸೆಯ ಅಂಗವಾಗಿದೆ. ಆದ್ದರಿಂದ ಅಹಿಂಸಾತತ್ವದ ಪ್ರಥಮ ಸೋಪಾನಗಳೆಂದರೆ ಸತ್ಯ, ಧೈರ್ಯ, ಸದಾಚಾರ ಮತ್ತು ಸಹನಶಕ್ತಿ. ನಿಜವಾದ ಅಹಿಂಸಾವಾದಿಗೆ ಅಸಾಧ್ಯವಾದ ಕೆಲಸವಿಲ್ಲ. ಹೆದರಬೇಕಾದ ಸಂಗತಿಯಿಲ್ಲ. ಮಾನಸಿಕ ಶಾಂತಿಗೆ ತೊಂದರೆಯಿಲ್ಲ.

ಸೋವಿಯಟ್ ರಶಿಯಾ.

ಅದರ ಪ್ರಚಂಡ ಯುದ್ಧ ಬಲ.

ಮಧ್ಯ ಯುರೋಪಿನಲ್ಲಿಯೂ, ಪೂರ್ವ ಭಾಗದ ಯುರೋಪಿನಲ್ಲಿಯೂ ಅಂತರರಾಷ್ಟ್ರ ರಾಜಕೀಯ ವಿದ್ಯಮಾನಗಳು ಒಂದೊಂದು ವೇಳೆ ಹಠಾತ್ತಾಗಿ, ಅನಿರೀಕ್ಷಿತವಾಗಿ ಮಿಂಚಿನ ವೇಗದಿಂದ ಮುಂದುವರಿಯುತ್ತದೆ. ಇದರಿಂದ ಯಾವ ಕಾಲಕ್ಕೆ ಯುದ್ಧದ ಕಿಡಿಯು ಹೊತ್ತಿಕೊಂಡು ಅನರ್ಥ ಪರಂಪರೆಯಾಗುವದೋ ಎಂದು ಭಯವೂ, ಸಂದೇಹವೂ ಉಂಟಾಗಿರುತ್ತದೆ. ಇದಕ್ಕೆ ಜರ್ಮನಿಯ ಆಕ್ರಮಣ ವರ್ತನೆಯೇ ಕಾರಣ. ಆಸ್ಟ್ರಿಯಾ, ಜೆಕೊಸ್ಲೊವೇಕಿಯ ರಾಜ್ಯಗಳು ಹಿಟ್ಲರನ ವಶವಾದವು. ಆಲ್ಬೇನಿಯವು ಇಟಲಿಯ ವಶವಾಯಿತು. ಯುರೋಪಿನ ವಿದೇಶಾಂಗ ರಾಜನೀತಿಯಲ್ಲಿ ಗ್ರೇಟ್ ಬ್ರಿಟನ್ ಮತ್ತು ಸೋವಿಯಟ್ ರಶಿಯಾ ದೇಶಗಳು ಐಕ್ಯಮತ್ಯದಿಂದ ವರ್ತಿಸಿದರೆ ಅಂತರರಾಷ್ಟ್ರ ರಾಜಕೀಯ ಪರಿಸ್ಥಿತಿಯು ಉತ್ತಮಗೊಳ್ಳಬಹುದು. ಆದರೆ ಇದನ್ನು ಸಹ ಹೇಳುವ ಹಾಗಿಲ್ಲ. ಹಿಟ್ಲರನು ಎಲ್ಲರನ್ನೂ ಎದುರಿಸಿ ತನ್ನ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಹಟ ಹಿಡಿದಿರುವಂತೆ ತೋರುತ್ತದೆ. ರಶಿಯಾ ದೇಶವು ಜರ್ಮನಿಗೆ ವಿರೋಧವಾಗಿ ನಿಂತು ಯುದ್ಧ ಮಾಡುವದಾದರೆ, ಅದು ಬ್ರಿಟನಿನ ಮತ್ತು ಫ್ರಾನ್ಸಿನ ಪಕ್ಷಕ್ಕೆ ಸೇರಿದರೆ, ಜರ್ಮನಿಯು ಕೊಂಚ ಆಲೋಚನೆ ಮಾಡಬೇಕಾದ ಪರಿಸ್ಥಿತಿ ಉಂಟಾಗಬಹುದು.

ಸೋವಿಯಟ್ ರಶಿಯವು ಪ್ರಪಂಚದಲ್ಲಿ ಅತ್ಯಂತ ಪ್ರಬಲವಾದ ರಾಷ್ಟ್ರಗಳಲ್ಲಿ ಮೂರನೆಯದು. ಬ್ರಿಟಿಷ್ ಚಕ್ರಾಧಿಪತ್ಯವು ಮೊದಲನೆಯದು. ಅಮೇರಿಕದ ಸಂಯುಕ್ತ ಸಂಸ್ಥಾನವು ಎರಡನೇಯದು. ಜನಸಂಖ್ಯೆಯಲ್ಲಿಯೂ, ಸಂಪತ್ತು ಸಾಧನೆಗಳಲ್ಲಿಯೂ ಸೋವಿಯಟ್ ರಶಿಯವು ಬಹಳ ಬಲಿಷ್ಠದಾಗಿರುತ್ತದೆ. ರಶಿಯಕ್ಕೆ ಅನುಕೂಲವಾದ ಪರಿಸ್ಥಿತಿಯೊಂದಿಗೆ ಬಂಗಾರದ ಜಮಾವಣೆಯು ಏರುತ್ತಲಿದೆ. ರಶಿಯಾಕ್ಕೆ ವಿದೇಶ ವ್ಯಾಪಾರ ಕ್ಷೇತ್ರವು ಬೇಕಾಗಿರುವದು ಬಹಳ ಕಡಿಮೆ. ರಶಿಯಾದಲ್ಲಿ ಹೆಚ್ಚಾಗಿ ಬೆಳೆಯುತ್ತಲಿರುವ ಗೋದಿ ಮೊದಲಾದ ಆಹಾರ ಸಾಮಗ್ರಿಗಳು ರಶಿಯಾಕ್ಕೇನೇ ಬೇಕಾಗಿದೆ. ರಶಿಯಾದಲ್ಲಿ ಜನಜೀವನದ ಆರ್ಥಿಕ ಮಟ್ಟವು ಬಹಳ ಕಮ್ಮಿದರ್ಜೆಯಲ್ಲಿತ್ತು. ಅದು ಹೆಚ್ಚಿನ ಮತ್ತು ತೃಪ್ತಿಕರವಾದ ಮಟ್ಟಕ್ಕೆ ಬರುತ್ತಲಿದೆ. ರಶಿಯಾದ ಜನರು ಹೆಚ್ಚು ಬಲಶಾಲಿಗಳಾಗಿಯೂ, ಉತ್ತಮರಾಗಿಯೂ ಆಗುತ್ತಲಿದ್ದಾರೆ. ರಶಿಯಾದಲ್ಲಿ ಯುದ್ಧ ಸಾಮಗ್ರಿಗಳೂ, ಸಂಪತ್ತು ಸಾಧನೆಗಳೂ ಹೆಚ್ಚಾಗಿರುತ್ತವೆ.

ಆರ್ಥಿಕ ಪರಿಸ್ಥಿತಿ.

ಸೋವಿಯಟ್ ರಶಿಯಾದಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ಉದ್ಯಮಗಳು ಒಂದು ಗೊತ್ತಾದ ಕ್ರಮದಲ್ಲಿ ಅವಧಿ ಮೇರೆಗೆ ನಡೆಯುತ್ತದೆ. ವ್ಯವಸಾಯ ಕ್ರಮಗಳಲ್ಲಿ ಎರಡು ಪ್ರಾಮುಖ್ಯ ಅಂಶಗಳಿವೆ. ಮರದ ನೇಗಿಲನ್ನು ವ್ಯವಸಾಯದಲ್ಲಿ ಉಪಯೋಗಿಸುವದಿಲ್ಲ. ಅದರ ಬದಲು ಆಧುನಿಕ ಯಂತ್ರಗಳನ್ನು ಉಪಯೋಗಿಸುತ್ತಾರೆ. ವ್ಯವಸಾಯವನ್ನು ಸಾಮೂಹಿಕವಾಗಿ ಮಾಡುತ್ತಾರೆ. ರಶಿಯಾದಲ್ಲಿ ವ್ಯವಸಾಯದ ಒಂದು ಹೊಲ ಅಥವಾ ಗದ್ದೆಯೆಂದರೆ ಅದು 2,500 ಎಕರೆಯಷ್ಟು ದೊಡ್ಡದು. ಯಾಂತ್ರಿಕ ಮತ್ತು ಸಾಮೂಹಿಕ ವ್ಯವಸಾಯಕ್ಕೆ ಅನುಕೂಲವಾಗಿ ವ್ಯವಸಾಯ ಕ್ಷೇತ್ರಗಳನ್ನು ಈ ರೀತಿ ಇಷ್ಟು ದೊಡ್ಡದಾಗಿ ಏರ್ಪಡಿಸಿಕೊಂಡಿದ್ದಾರೆ. ಅಂದರೆ ರಶಿಯಾದ ಈ ವ್ಯವಸಾಯ ಕ್ಷೇತ್ರವು ಬ್ರಿಟನಿನ ಒಂದು ಸಾಮಾನ್ಯ ವ್ಯವಸಾಯ ಕ್ಷೇತ್ರಕ್ಕಿಂತ 20 ಪಾಲು ದೊಡ್ಡದಾಯಿತು. ಆಧುನಿಕ ವಿಜ್ಞಾನ ಶಾಸ್ತ್ರ ರೀತಿಯಲ್ಲಿ ದೊಡ್ಡದಾದ ರಶಿಯಾದ ಹೊಲಗಳಲ್ಲಿ ವ್ಯವಸಾಯ ಅತ್ಯಂತ ಉತ್ತಮ ರೀತಿಯಲ್ಲಿ ನಡೆಯುತ್ತದೆ. ಇದಕ್ಕೆ ಸರಕಾರದ ಪ್ರೋತ್ಸಾಹವೂ, ಸಹಾಯವೂ, ಬೆಂಬಲವೂ ಇರುತ್ತದೆ. ಕಳೆದ ವರ್ಷ ರಶಿಯಾದ ಹೊಲಗದ್ದೆಗಳಲ್ಲಿ 10 ಕೋಟಿ ಟನ್‌ಗಳಷ್ಟು ಧಾನ್ಯವು ಬೆಳೆಸಲ್ಪಟ್ಟಿತು. 1937 ರಲ್ಲಿ ದೊರೆತ ಬೆಳೆಗಿಂತಲೂ ಸ್ವಲ್ಪ ಕಮ್ಮಿಯೆಂದೇ ಹೇಳಲಾಗಿದೆ. ಆದರೆ ಹಿಂದಿನ ಎರಡು ವರ್ಷಗಳಿಗಿಂತ ಕಳೆದ ಸಾಲಿನಲ್ಲಿ ಹೆಚ್ಚಾದ ಬೆಳೆಯು ದೊರೆಯಿತು. ವ್ಯವಸಾಯದಲ್ಲಿ ಯಾಂತ್ರಿಕ ಮತ್ತು ವೈಜ್ಞಾನಿಕ ಕ್ರಮಗಳನ್ನು ಅನುಭವಿಸುತ್ತಿರುವದೇ ಈ ರೀತಿ ಹೆಚ್ಚು ಫಸಲು ಸಿಕ್ಕಲು ಕಾರಣವಾಯಿತು. ವಿಶೇಷ ಚತುರತೆಯಿಂದ ವ್ಯವಸಾಯ ಕ್ರಮಗಳನ್ನು ಅಭಿವೃದ್ಧಿ ಮಾಡಿ ವಿಶೇಷ ತರಹದ ಬೆಳೆಗಳನ್ನು ಸಹ ಹೆಚ್ಚಾಗಿ ಹೊಂದುತ್ತಲಿದ್ದಾರೆ. 'ಟೆಕ್ನಿಕಲ್' ಪೈರುಗಳನ್ನು ಚೆನ್ನಾಗಿ ಹೊಂದುತ್ತಲಿದ್ದಾರೆ. ಸೋವಿಯಟ್ ರಶಿಯಾವು ತನಗೆ ಬೇಕಾದಷ್ಟು ಸಕ್ಕರೆ, ನಾರು, ಹತ್ತಿ ಇವೆಲ್ಲವನ್ನೂ ತಯಾರಿಸಿಕೊಳ್ಳುತ್ತದೆ. ಟೀ, ರಬ್ಬರ್ ಮತ್ತು ಇತರ ವಸ್ತುಗಳನ್ನು ಮೊದಲಿಗಿಂತ ಹೆಚ್ಚಾಗಿ ತಯಾರಿಸಿಕೊಳ್ಳುತ್ತಿದ್ದಾರೆ.

'ಕ್ಯಾನಿಂಗ್' ಕಾರ್ಖಾನೆಗಳ ಉದ್ಯಮವು ಬಹಳ ಅಭಿವೃದ್ಧಿಗೊಂಡಿರುತ್ತದೆ. ಒಂದು ವರ್ಷಕ್ಕೆ 160 ಕೋಟಿ ಟನ್ನುಗಳಷ್ಟು ತಯಾರಿಸುತ್ತಾರೆ. ಇವುಗಳಲ್ಲಿ 92 ಸಾಮಾನ್ಯ ಕ್ಯಾನಿಂಗ್ ಕಾರ್ಖಾನೆಗಳೂ, 30 ವಿಮಾನ ಕ್ಯಾನಿಂಗ್ ಕಾರ್ಖಾನೆಗಳೂ 10 ಮಾಂಸದ ಕ್ಯಾನಿಂಗ್ ಕಾರ್ಖಾನೆಗಳೂ ಇರುತ್ತವೆ. ಮಾಂಸ ತಯಾರಿಯ ಕಾರ್ಖಾನೆಗಳು ಅಮೇರಿಕದ ಕಾರ್ಖಾನೆಗಳಂತೆ ಬಹಳ ಉತ್ತಮ ಸ್ಥಿತಿಯಲ್ಲಿವೆ. ಇವುಗಳಂತೆ 50 ಕೋಲ್ಡ್ ಸ್ಟೋರೇಜ್ ಪ್ಲಾಂಟುಗಳೂ ಇರುತ್ತವೆ. ಇವುಗಳ ಪ್ರಮಾಣ 690 ಲಕ್ಷ ಟನ್ನುಗಳು. ರಶಿಯಾದಲ್ಲಿ 'ಜಾರ್' ಚಕ್ರವರ್ತಿಗಳ ಕಾಲದಲ್ಲಿ ಮಾರ್ಗರಿನ್ ಕಾರ್ಖಾನೆಗಳೇ ಇರಲಿಲ್ಲ. ಈಗ ಇಂಥ ಕಾರ್ಖಾನೆಗಳು 14 ಇವೆ.

ರಶಿಯಾದ ಸಂಪತ್ತು ವಿಶೇಷವಾಗಿದೆ. ಪ್ರಪಂಚದಲ್ಲಿರುವ ಅರಣ್ಯಗಳ ಮರಮುಟ್ಟುಗಳ ಸಾಧನಗಳಲ್ಲಿ ರಶಿಯಾದಲ್ಲಿಯೇ ಮೂರನೇ ಒಂದು ಭಾಗವಿಷ್ಟಿದೆ. ಪ್ರತಿ ವರ್ಷವೂ ರಶಿಯಾದ ಅರಣ್ಯಗಳಲ್ಲಿ 130 ಕೋಟಿ ಘನ ಮೀಟರುಗಳ ಮರಮುಟ್ಟುಗಳು ಉತ್ಪನ್ನವಾಗುತ್ತದೆ. ಇವುಗಳಲ್ಲಿ ಸುಮಾರು 35 ಕೋಟಿಯಷ್ಟು ಮಾತ್ರ ಉಪಯೋಗಿಸಲ್ಪಡುತ್ತದೆ. ಒಟ್ಟಿನಲ್ಲಿ ಹೇಳುವದಾದರೆ ರಶಿಯಾದ ವ್ಯವಸಾಯ ಸಂಪತ್ತು, ವನ ಸಂಪತ್ತು, ಹುಲ್ಲುಗಾವಲುಗಳ ಸಂಪತ್ತು ಅಪಾರವಾದವು. ರಶಿಯಾದ ಖನಿಜ ಸಂಪತ್ತು ಬಹಳವಾಗಿರುತ್ತದೆ. ಇವೆಲ್ಲ ಸಾಧನಗಳ ಮೂಲಕ ಸೋವಿಯಟ್ ಸರ್ಕಾರದವರು ರಶಿಯಾವನ್ನು ಮಹಾ ಪ್ರಬಲವಾದ ರಾಷ್ಟ್ರವನ್ನಾಗಿ ಮಾಡುತ್ತಲಿದ್ದಾರೆ.

ಖನಿಜ ಸಂಪತ್ತು.

ರಶಿಯಾದ ಖನಿಜ ಸಂಪತ್ತು ಅಪಾರವಾಗಿದೆ. ಈ ವಿಚಾರದಲ್ಲಿ ಹೊಸ ಶೋಧನೆಗಳು ಹೆಚ್ಚಾಗಿ ನಡೆಯುತ್ತಲಿದೆ. ಕಲ್ಲಿದ್ದಲು, ಪೆಟ್ರೋಲಿಯಂ, ತೈಲಗಳು, ಕಬ್ಬಿಣ, ಮ್ಯಾಂಗನೀಸ್, ಕ್ರೋಮಿಯಂ, ತಾಮ್ರ, ಸೀಸ ಮೊದಲಾದ ಅನೇಕ ಲೋಹಗಳು ವಿಶೇಷವಾಗಿ ದೊರೆಯುತ್ತವೆ. ಬಂಗಾರ ಮತ್ತು ಪ್ಲಾಟಿನಂ ಎಂಬ ಅಮೌಲ್ಯ ಲೋಹವು ಹೆಚ್ಚಾಗಿ ದೊರೆಯುತ್ತವೆ. ತವರ, ನಿಕ್ಕಲ್, ಕೊಬಾಲ್ಟ್ ಮತ್ತು ಗಂಧಕ ಇವುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುವದಿಲ್ಲ.

ಯುದ್ಧದ ಸಲಕರಣೆಗಳು.

ರಶಿಯಾವು ಯುದ್ಧ ಸಾಮಗ್ರಿಗಳ ತಯಾರಿಗಾಗಿ ನಡೆಸುತ್ತಿರುವ ಕಾರ್ಖಾನೆಗಳು ಶತ್ರುಗಳಿಗೆ ಪ್ರವೇಶ ಮಾಡಲಾಗದ ದುರ್ಗಮ ಪ್ರದೇಶಗಳಲ್ಲಿ ನಡೆಯುತ್ತಲಿವೆ. ಶತ್ರುಗಳು ವಿಮಾನಗಳಿಂದ ಈ ಕಾರ್ಖಾನೆಗಳ ಮೇಲೆ ಬಾಂಬು ಹಾಕಿ ದಾಳಿ ಮಾಡುವ ಹಾಗಿಲ್ಲ. ಯುದ್ಧ ಸಾಧನಗಳ ತಯಾರಿಯು ತೀವ್ರವಾಗಿ ಮುಂದುವರಿಯುತ್ತಲಿವೆ. ಯಂತ್ರಗಳ ಮತ್ತು ಆಯುಧಗಳ ತಯಾರಿ, ರಸಾಯನಿಕ ಪದಾರ್ಥಗಳ ತಯಾರಿ, ವಿಮಾನಗಳ ತಯಾರಿ, ಇತರ ಎಲ್ಲಾ ಯುದ್ಧ ಸಾಮಾನುಗಳ ತಯಾರಿ, ವಿದ್ಯುತ್‌ಶಕ್ತಿ ಸಾಮಾನುಗಳ ತಯಾರಿ ಇವು ಮುಂದುವರಿಯುತ್ತವೆ.

(10 ನೇ ಪುಟಕ್ಕೆ ಸಾಗಿದೆ.)

ಅಹಿಂಸಾ ತತ್ತ್ವದ ಮಹಿಮೆ.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಅಹಿಂಸೆಯು ಎಲ್ಲಾ ಕಡೆಯಲ್ಲಿಯೂ ಬಾಯಿಯಿರುವ ಕತ್ತಿ. ಒಂದೇ ತೊಟ್ಟು ರಕ್ತ ಹರಿಸದೆ ಅದು ಅನೇಕ ಅಮೋಘ ಕಾರ್ಯಗಳನ್ನು ಮಾಡಬಲ್ಲುದು. ಅದು ತುಕ್ಕು ಹಿಡಿಯುವಂಥಾದ್ದಲ್ಲ. ಯಾ ಕದಿಯಲ್ಪಡುವಂಥಾದ್ದೂ ಅಲ್ಲ. ಅಹಿಂಸಾಪೂರಿತ ಯುದ್ಧಕ್ಕೆ ಸೈನ್ಯ ತರಬೇತು ಬೇಕಿಲ್ಲ. ತನ್ನ ಮನುಷ್ಯತ್ವವನ್ನು ತಿಳಿದವನೇ ಅಹಿಂಸಾವಾದಿಯಾಗಬಲ್ಲ. ಅಹಿಂಸಾವಾದಿಯು ತನ್ನ ಮನೋಭಾವಕ್ಕೆ ವಿರುದ್ಧವಾಗಿ ಎಂದೂ ನಡೆಯಲಿಕ್ಕಿಲ್ಲ. ಅದಕ್ಕಾಗಿ ಗುಂಡಿನ ಬಾಯಿಗೆ ತುತ್ತಾಗಲೂ ಆತನು ಹೆದರಲೊಲ್ಲ. ಅಹಿಂಸೆಯು ಅಜೇಯವಾದ ಅಸ್ತ್ರವೆಂದರೆ ಅತಿಶಯೋಕ್ತಿಯಲ್ಲ.

ಅಹಿಂಸಾತತ್ತ್ವವು ಅಜೇಯವಾದದ್ದು. ಹಿಂಸಾ ತತ್ತ್ವಕ್ಕಿಂಥ ಅದು ವಿರೋಧಿಗಳಲ್ಲಿ ಮಾರ್ಪಾಡುಮಾಡಬಲ್ಲುದು ಎಂದು ಗತಲೇಖನದಲ್ಲಿ ಬರೆದೆವು. ಆದರೆ ಇಂಥಾ ಒಂದು ಹೇಳಿಕೆಯನ್ನು ಮುಂದಿಡಲು ಇದಕ್ಕೆ ಚರಿತ್ರಾ ಆಧಾರಗಳಿವೆಯೋ ಎಂಬುದೊಂದು ಪ್ರಶ್ನೆಯು ವಾಸ್ತವವಾಗಿ ಮುಂಬರುವದು. ಅಹಿಂಸಾದ ಅಡಿಗಲ್ಲೆಂದರೆ ಪ್ರೇಮ ಮತ್ತು ವಿಶ್ವಾಸ. ಇವೆರಡು ಜನತೆಯಲ್ಲಿಲ್ಲದಿದ್ದ ಪಕ್ಷ ಭೂವಲಯವು ಎಂದೋ ಮಾಯವಾಗಿ ಹೋಗುತ್ತಿತ್ತು. ಅಹಿಂಸಾತತ್ತ್ವದ ಬಗ್ಗೆ ಚರಿತ್ರೆಯಿಂದ ಉದಾಹರಣೆ ಕೊಡಲಿಕ್ಕೆ ಮೊದಲು ಚರಿತ್ರೆಯೆಂದರೇನೆಂಬುದನ್ನು ಸ್ವಲ್ಪ ವಿಚಾರಿಸುವದು ಅಗತ್ಯ. ಗುಜರಾತಿ ಭಾಷೆಯಲ್ಲಿ ಚರಿತ್ರೆಯೆಂದರೆ, 'ಅದು ಹಾಗೆ ಆಯಿತು' ಎಂಬ ಅರ್ಥ ಬರುವದಂತೆ. ಚರಿತ್ರೆಯ ಅರ್ಥವು ಅದೇ ಆಗಿದ್ದ ಪಕ್ಷದಲ್ಲಿ ಅಹಿಂಸಾತತ್ತ್ವದ ಬಗ್ಗೆ ಉದಾಹರಣೆ ಕೊಡುವದು ಸುಲಭವಾಗುತ್ತಿತ್ತು. ಆದರೆ ಇಂದಿನ ಚರಿತ್ರೆಯ ಮೂಲ ಅರ್ಥವೇನು? ರಾಜರು, ಚಕ್ರಾಧಿಪತಿಗಳು ಮಾಡಿದ ಕಾರ್ಯಕಲಾಪಗಳು. ಯುದ್ಧಗಳ ಒಂದು ಪಟ್ಟಿಯು. ಆದ್ದರಿಂದ ಚರಿತ್ರೆಯಲ್ಲಿ ಆತ್ಮಶಕ್ತಿಯ ಯಾ ಅಹಿಂಸದ ಉದಾಹರಣೆಗಳು ಇರಲಾರವು. ಯಾವ ಜನಾಂಗದಲ್ಲಿ ಚರಿತ್ರೆಯಿಲ್ಲವೊ ಅರ್ಥಾತ್ ಯುದ್ಧ ನಡೆಯಲಿಲ್ಲವೋ ಅದು ಸುಖಿಯಾದ ಜನಾಂಗವೆಂದು ಯೂರೋಪಿಯನರಲ್ಲಿ ಒಂದು ಗಾದೆ ಇದೆ. ಚರಿತ್ರೆಯು ಕೇವಲ ರಾಜರುಗಳ ವರ್ತನೆ, ಅವರು ಮಾಡಿದ ಸಾಹಸ ಕಾರ್ಯಗಳ ವರ್ಣನೆ, ಒಬ್ಬರೊಬ್ಬರನ್ನು ಕೊಂದು ಮಾಡಿದ ರಾಜ್ಯವಿಸ್ತರಣ ಇವುಗಳನ್ನು ತಪ್ಪಿಲ್ಲದೆ ಜನತೆಯ ಮುಂದಿಡುವದೇ ವಿನಹ ಬೇರಿಲ್ಲ. ಚರಿತ್ರೆಯಲ್ಲಿ ವಿಶದವಾದಂತೆ ಜಗತ್ತು ಯುದ್ಧದಿಂದ ಪ್ರಾರಂಭಿಸಲ್ಪಟ್ಟಿದ್ದರೆ ಇಂದು ಜಗತ್ತಿನಲ್ಲಿ ಯಾವನೊಬ್ಬನೂ ಜೀವಂತನಾಗಿರುವದು ದುರ್ಲಭವಾಗುತ್ತಿತ್ತು. ಯುದ್ಧದಿಂದ ಪ್ರಾರಂಭಿಸಿದ ಜನಾಂಗಗಳು ನಾಮಾವಶೇಷವಾಗಿರುವವು. ಉದಾಹರಣೆಗೆ ಆಸ್ಟ್ರೇಲಿಯಾವು ಪರದೇಶೀಯರಿಂದ ಆಕ್ರಮಿಸಲ್ಪಟ್ಟಿತು. ಇಂದು ಅಲ್ಲಿ ನಿಜವಾದ ಒಬ್ಬನೇ ಒಬ್ಬ ಆಸ್ಟ್ರೇಲಿಯನನಿಲ್ಲ. ಯುದ್ಧದಿಂದ ಪ್ರವೇಶಿಸಿದ ಈ ಜನಾಂಗವಾದರೂ ಹೆಚ್ಚುಕಾಲ ಅಲ್ಲಿ ಇರಲಾರದೆಂಬುದು ಸ್ವತಸಿದ್ಧ. 'ಕತ್ತಿಯಿಂದ ಜಯಿಸಿದವನು ಕತ್ತಿಯಿಂದಲೇ ಮಡಿಯುವನೆಂಬ ನಾಣ್ಣುಡಿಯಂತೆ ಯುದ್ಧದಿಂದ ಪ್ರಾರಂಭವಾದ ಜನಾಂಗವು ಅದರಿಂದಲೇ ನಾಶಹೊಂದದಿರದು.

ಇಂದು ಜಗತ್ತಿನಲ್ಲಿ ಅನೇಕಾನೇಕ ಜನರು ಜೀವಿಸುತ್ತಿರುವದರಿಂದ ಚರಿತ್ರೆಯಲ್ಲಿ ನಮೂದಿರುವಂತೆ ಜಗತ್ತು ಯುದ್ಧದಿಂದ ಪ್ರಾರಂಭಿಸಲ್ಪಡಲಿಲ್ಲ. ಸತ್ಯ ಅಥವಾ ಪ್ರೀತಿಯೇ ಮೂಲವಸ್ತುಗಳೆಂದು ತಿಳಿಯುತ್ತದೆ. ಆದ್ದರಿಂದ ಅನೇಕ ಘೋರ ಸಂಗ್ರಾಮಗಳಾದರೂ, ಜನಾಂಗ ಜನಾಂಗಗಳೊಳಗೆ ವಿರೋಧಗಳುಂಟಾದರೂ ನಾಶಹೊಂದದಿರುವ ಆ ಸತ್ಯ ಯಾ, ಪ್ರೀತಿಯೆಂಬ ಶಕ್ತಿಯೇ ಬುನಾದಿಯಿಂದಲೂ ನಡೆದು ಬಂದ ಮೂಲ ತತ್ತ್ವ. ಈ ಪ್ರೀತಿ, ಸತ್ಯದ ಪರಿಣಾಮದಿಂದಾಗಿಯೇ ಲಕ್ಷೋಪಲಕ್ಷ ಜನರು ಬದುಕಿ ಬಾಳುತ್ತಿರುವರು. ಕೋಟ್ಯಾಂತರ ಕುಟುಂಬಗಳಲ್ಲಿ ದಿನವೂ ಬರಬಹುದಾದ ಕಲಹ ಕಕ್ಷಿಗಳು ಈ ಪ್ರೇಮವೆಂಬ ಶಕ್ತಿಯಿಂದಲೇ ಶಮನವಾಗುತ್ತಿವೆ. ಸಾವಿರಾರು ಜನಾಂಗಗಳು ಶಾಂತಿಯಿಂದ ಬಾಳುತ್ತಿರುವವು. ಚರಿತ್ರೆಯು ಈ ವಿಚಾರಗಳನ್ನೆಲ್ಲಾ ಒಳಗೊಳ್ಳಲಾರದು. ಚರಿತ್ರೆಯೆಂದರೆ ಸುಗಮವಾಗಿ ಮುಂದರಿಯುತ್ತಿರುವ ಜನಾಂಗದ ಪಥದಲ್ಲಿ ಬಂದ ತೊಡರುಗಳ ಪಟ್ಟಿಯೇ ವಿನಹ ಬೇರಿಲ್ಲ. ಇಬ್ಬರು ಸಹೋದರರು ಐಕ್ಯದಿಂದಿರುವಾಗ ಯಾರೂ ಅವರ ವಿಚಾರ ಯೋಚಿಸರು. ಅವರೊಳಗೆ ಪರಸ್ಪರ ಕದನವಾದಾಗ ಮಾತ್ರ ಜನತೆಯ ಕಣ್ಣು ಅಲ್ಲಿ ಕೇಂದ್ರೀಕೃತವಾಗುವದು. ಅಂತೆಯೇ ಚರಿತ್ರೆಯಲ್ಲೂ ಸುಗಮವಾಗಿ ಮುಂದರಿದ ಜನಾಂಗಗಳ ವಿಚಾರ ಬರುವದು ಅಸಂಭವ. ಆದ್ದರಿಂದ ಅಹಿಂಸಾ, ತತ್ತ್ವದ ವಿಚಾರ ಇಂದಿನ ಚರಿತ್ರೆಯಲ್ಲಿ ಬರುವದೂ ಅಸಾಧ್ಯ.

ಅಹಿಂಸಾತತ್ತ್ವವನ್ನು ತಿಳಿಯುವ ಕಾತುರವು ಜನತೆಯಲ್ಲಿ ಬರುವದರಿಂದ ಅದರ ರೂಪರೇಖೆಗಳೊಂದಿಗೆ ವಿವರಿಸುವೆವು. ಅಹಿಂಸೆಯು ನಮ್ಮ ಮೂಲಭೂತ ಹಕ್ಕುಗಳನ್ನು ನಮ್ಮ ವೈಯಕ್ತಿಕ ನರಳುವಿಕೆಯಿಂದ ಸಂಪಾದಿಸುವ ಒಂದು ಮಾರ್ಗ. ಯುದ್ಧ ಮುಂತಾದ ಕಾರ್ಯಕಲಾಪಗಳ ವಿರೋಧ ತತ್ತ್ವವದು. ನಮ್ಮ ಮನೋಭಾವನೆಗೆ ತೃಪ್ತಿಕರವಲ್ಲದ ಕೆಲಸವನ್ನು ಮಾಡಲು ನಾವು ತಿರಸ್ಕರಿಸಿದರೆ ಅನು ಆತ್ಮಶಕ್ತಿ. ಉದಾಹರಣೆಗಾಗಿ ಇಂದಿನ ಸರಕಾರವು ನಮಗೆ ಅನ್ವಯಿಸುವ ಮತ್ತು ನಮಗೆ ವಿರೋಧವಿರುವ ಒಂದು ಕಾನೂನನ್ನು ಹೊರಡಿಸಿದರೆನ್ನುವ. ನಾವು ಸರಕಾರದ ಧೋರಣೆಯನ್ನು ಅಸ್ತ್ರಶಸ್ತ್ರಗಳ ಶಕ್ತಿಯಿಂದ ಖಂಡಿಸಿ ಅದನ್ನು ಸರಕಾರವು ವಾಪಾಸು ತೆಗೆಯುವಂತೆ ಮಾಡಿದರೆ ಅನು ಶರೀರ ಶಕ್ತಿಯೆನ್ನಲ್ಪಡುವದು. ನಾವು ಕಾನೂನನ್ನು ಒಪ್ಪದೆ ಅವರು ವಿಧಿಸಬಹುದಾದ ಕಷ್ಟಕ್ಕೊಳಗಾದರೆ ಅದು ಆತ್ಮಶಕ್ತಿಯೆಂದೆನಿಸುವದು. ಇತರರನ್ನು ಬಲಿಕೊಟ್ಟು ಆರ್ಜಿಸಿದ ಲಾಭಕ್ಕಿಂತಲೂ, ಆತ್ಮಸಮರ್ಪಣೆಯಿಂದ ಪಡೆದ ಜಯವು ಮೇಲೆಂಬುದನ್ನು ಯಾರೂ ವಿರೋಧಿಸರು. ಆದರೆ ನ್ಯಾಯವಲ್ಲದ ಸಂದರ್ಭಗಳಲ್ಲಿ ಈ ತತ್ತ್ವವನ್ನುಪಯೋಗಿಸಿದರೆ ಆತನೇ ಕಷ್ಟಪಡಬೇಕಾಗುವದು. ಆದ್ದರಿಂದ ನ್ಯಾಯ ವಿಮರ್ಶೆಯು ಈ ತತ್ತ್ವಾವಲಂಬನೆಗೆ ಅಗತ್ಯ. ಸರಕಾರದ ಕಟ್ಟಪ್ಪಣೆಯ ಬೆದರಿಕೆಯಿಂದ ಯಾ, ಇತರ ವಿಚಾರಗಳ ಸಮಾವೇಶದಿಂದ ತನ್ನ ಆತ್ಮಕ್ಕೆ ತೃಪ್ತಿಯಾಗದ ವಿಚಾರವನ್ನು ಒಪ್ಪುವದೆಂದರೆ ನಮ್ಮ ಹೇಡಿತನದ ಪ್ರದರ್ಶನವಲ್ಲದೆ ಬೇರಿಲ್ಲ. ಯಾವ ಮನುಷ್ಯನು ತನ್ನ ಮನುಷ್ಯತ್ವವನ್ನು ತಿಳಿದು ಜಗನ್ನಿಯಾಮಕನಿಗೆ ಮಾತ್ರ ಬಗ್ಗಿ ಕಾರ್ಯಮಾಡುತ್ತಾನೋ ಅವನಿಗೆ ಈ ಕಾನೂನುಗಳಾಗಲೀ, ಸರಕಾರವಾಗಲೀ ಏನೂ ಪ್ರತೀಕಾರವನ್ನು ಮಾಡಲಾರದು. ಇಂದಿನ ಪರಿಸ್ಥಿತಿಯಲ್ಲಿ ನಮ್ಮ ಪ್ರತಿಷ್ಠೆಯು ಕೆಳಗಿನ ಅಂತಸ್ತಿಗೆ ಇಳಿದು ಹೋಗಿ ಸರಕಾರವು ಹೊರಡಿಸಿದ ಪ್ರತಿಯೊಂದು ಕಾನೂನನ್ನು ನಮ್ಮ ಆತ್ಮತೃಪ್ತಿಗೆ ವಿರೋಧವಾಗಿ ಕರ್ತವ್ಯದೃಷ್ಟಿಯಿಂದ ಪಾಲಿಸುತ್ತಿರುವೆವು. ಮಾನವನು ಯಾವಾಗ ನ್ಯಾಯವಲ್ಲದ ಯಾವ ಕಾನೂನನ್ನೂ ಪಾಲಿಸಲಾರನೆಂಬ ಆ ತಿಳುವಿಗೆ ಬರುವನೋ ಅವನನ್ನು ಯಾರ ದ್ವೇಷವೂ ಬಾಧಿಸದು. ಇದೇ ಆತ್ಮಸ್ವಾತಂತ್ರ್ಯದ ಅಡಿಪಾಯ.

ಬಹು ಪಕ್ಷದವರ ತೀರ್ಮಾನಕ್ಕೆ ಅಲ್ಪ ಪಕ್ಷದವರು ಶರಣಾಗತರಾಗಬೇಕೆಂಬ ವಾದವು ನ್ಯಾಯಸಮ್ಮತವಾದುದಲ್ಲ. ಬಹುಮತದವರು ತಪ್ಪು ಹೆಜ್ಜೆಯಿಂದ ನಡೆದು ಕನಿಷ್ಟ ಪಕ್ಷದವರನ್ನು ಬಲಾತ್ಕರಿಸಿದ ಉದಾಹರಣೆಗಳೆಷ್ಟೋ ಇವೆ. ಕೆಲವು ಕಳ್ಳರ ಗುಂಪಿನಲ್ಲಿ ಕಳ್ಳತನ ಮಾಡುವದಕ್ಕೆ ಬಹುಮತ ಸಿಕ್ಕಿತೆಂದರೆ ಅಲ್ಲಿರಬಹುದಾದ ಸಂಪನ್ನನೂ ಅದನ್ನು ಅನುಸರಿಸಬೇಕೆಂಬುದರಲ್ಲಿ ಅರ್ಥವಿಲ್ಲ. ಹೀಗೆ ಅನ್ಯಾಯದ ವರ್ತನೆಯನ್ನು ತಮ್ಮ ಇಚ್ಛೆಗೆ ವಿರೋಧ ಪಾಲಿಸಿದರೆ ಅದು ಆತ್ಮಘಾತುಕವು. ನಿಜವಾದ ಅಹಿಂಸಾವಾದಿಯು ಹಾಗೆ ಮಾಡನು.

ಇದರಿಂದ ಈ ತಟಸ್ಥ ಪ್ರತಿರೋಧ ಶಕ್ತಿ ಯಾ, ಅಹಿಂಸೆಯು ಕೇವಲ ನಿತ್ರಾಣಿಗಳ, ಬಲಹೀನರ ಆಯುಧವೆಂದು ಯಾರೂ ಭಾವಿಸಲಾಗದು. ಯಾಕೆಂದರೆ ಅಹಿಂಸೆಯು ಅಜೇಯವಾದದ್ದು. ಅದು ಖಡ್ಗ, ಯಾ ಕೋವಿಗುಂಡುಗಳ ಶಕ್ತಿಗಿಂತಾ ಮಿಗಿಲಾದದ್ದು. ಅಂದ ಬಳಿಕ ಅದು ಶಕ್ತಿಹೀನರ ಆಯುಧ ಹೇಗಾದೀತು? ಹೇಡಿಯಾದವನೊಬ್ಬನು ತನ್ನ ಮನನಿಶ್ಚಯಕ್ಕೆ ವಿರೋಧವಾದ ಕಾನೂನನ್ನು ಮುರಿಯಲೆತ್ನಿಸುವನೇ? ಗುಂಡಿನ ಬಾಯಿಗೆ ಸಹ ನಿಲ್ಲಲು ಹಿಂಜರಿಯದ ಆ ಅಹಿಂಸಾಭಕ್ತನು ಹೇಡಿಯಾಗುವನೇ? ಧೈರ್ಯವು ಎಲ್ಲಿದೆ? ಕೋವಿಯ ಹಿಂದುಗಡೆ ನಿಂತು ಗುಂಡು ಹಾರಿಸುವದರಲ್ಲೋ ಯಾ, ಗುಂಡನ್ನು ಎದುರಿಸಿ ನಿಲ್ಲುವದರಲ್ಲೋ? ಸಾವೆಂಬುದನ್ನು ಸ್ನೇಹಿತನಂತೆ ಜೊತೆಯಲ್ಲಿಟ್ಟುಕೊಂಡಿರುವವನೋ ಧೈರ್ಯಶಾಲಿಯು ಯಾ ಇತರರ ಜೀವವನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿರುವವನೋ? ಯಾವ ಮನುಷ್ಯನಲ್ಲಿ ಮನುಷ್ಯತ್ವ ಮತ್ತು ಧೈರ್ಯವಿಲ್ಲವೋ ಅವನು ಖಂಡಿತಾ ಅಹಿಂಸಾವಾದಿಯಾಗಲಾರನೆಂಬುದು ನೆನಪಿರಲಿ. ಅಹಿಂಸಾಪೂರಿತ ಯುದ್ಧಕ್ಕೆ ಸೈನ್ಯ ತರಬೇತು ಬೇಕಿಲ್ಲ. ಪ್ರತಿಯೊಬ್ಬನೂ ತನ್ನ ಮನವನ್ನು ಅವನವನ ಹತೋಟಿಯಲ್ಲಿಟ್ಟುಕೊಳ್ಳುವದೇ ತರಬೇತಾಗಿದೆ.

ಅಹಿಂಸೆಯೆಂಬುದು ಎಲ್ಲಾ ಕಡೆಯಲ್ಲಿಯೂ ಬಾಯಿಯಿರುವ ಕತ್ತಿಯಾಗಿರುವದು. ಅದನ್ನು ಯಾವ ವಿಧವಲ್ಲಾದರೂ ಪ್ರಯೋಗಿಸಬಹುದು. ಒಂದೇ ಒಂದು ತೊಟ್ಟು ರಕ್ತವನ್ನು ಹರಿಸದೆ ಅದು ಅತ್ಯಮೋಘ ಕಾರ್ಯಗಳನ್ನು ಮಾಡಬಲ್ಲುದು. ಅದು ತುಕ್ಕು ಹಿಡಿಯುವಂಥಾದ್ದಲ್ಲ ಯಾ ಕದಿಯಲ್ಪಡುವಂಥಾದ್ದೂ ಅಲ್ಲ.

ಅಹಿಂಸೆಯು ಭಾರತದ ಪ್ರಧಾನ ಆಯುಧವಾದ ಪಕ್ಷ ಭಾರತದಲ್ಲಿ ಈ ವರೆಗೆ ಕೋವಿ ಗುಂಡುಗಳ ಪ್ರಯೋಗವು ಬರಲಿಲ್ಲವೋ? ಘೋರ ಸಂಗ್ರಾಮಗಳಾಗಿ ರಕ್ತದ ಕಾಲುವೆ ಹರಿಯಲಿಲ್ಲವೋ? ಎಂಬ ಪ್ರಶ್ನೆಯು ಬರುವದು. ಇದು ಕೇವಲ ಸಂಕುಚಿತವಾದ ಪ್ರಶ್ನೆ. ಭಾರತವೆಂದರೆ ಕೇವಲ ಕೆಲವು ಅರಸರ ದೇಶವಲ್ಲ. ಅವರು ಹಿಂಸಾತತ್ತ್ವದಿಂದ ವರ್ತಿಸಿದರೆಂದರೆ ಭಾರತದ ಮಿಲಿಯಾಂತರ ಜನತೆಯು ಅಹಿಂಸವಾದಿಗಳಲ್ಲ. ಈ ಪ್ರಜೆಗಳಿಂದಲೇ ರಾಜರುಗಳು ಬದುಕಿಬಾಳುವದು. ರಾಜರುಗಳು ತಮ್ಮ ಹಿಡಿತದಲ್ಲಿ ಜನತೆಯನ್ನಿಟ್ಟುಕೊಳ್ಳಲು ಯುದ್ಧ ಮಾಡಲಾದುದನ್ನು ಹೂಡಿ, ಹಿಂಸಾಬೀಜವನ್ನು ಬಿತ್ತಿ ಬೆಳೆಸುವರು. ರಾಜ್ಯಲಾಲಸೆಯಿಂದ ಆತುರರಾದ ಅವರಿಗೆ ಅಹಿಂಸಾಮಾರ್ಗವು ತಿಳಿಯದು. ಇಂದಿನ ವರೆಗೆ ರಾಜಾಧಿರಾಜರ ಈ ಉಗ್ರವರ್ತನೆಗಳಿಂದ ಜನತೆಯು ತತ್ಕಾಲ ಬಗ್ಗಿದರೂ ಕ್ರಮೇಣ ಅವರು ಹಿಂಸಾತತ್ತ್ವಕ್ಕೆ ಬಗ್ಗಲಿಲ್ಲವೆಂದು ತಿಳಿದುಬರುವದು. ಅಹಿಂಸೆಯು ಇಂಥಾ ಜನತೆಯನ್ನು ತನ್ನ ಬಗಲಲ್ಲಿ ಹಾಕಿಕೊಳ್ಳುವ ಶಕ್ತಿಯುಳ್ಳ

ದ್ದು. ಕೆಲವೊಂದು ರಾಜರು ಹಿಂಸಾಚರಣೆಯನ್ನು ಮಾಡಿದನ್ನು ಚರಿತ್ರೆಯಲ್ಲಿ ನಮೂದಿಸಿದ್ದರೆ ಭಾರತದ ಚರಿತ್ರೆಯೇ ಹಿಂಸಾಮಯವೆಂದು ಯಾರೂ ತಿಳಿಯಲಿಕ್ಕಾಗದು. ಭಾರತವು ಅನಾದಿಯಿಂದಲೂ ತನ್ನ ಅಹಿಂಸಾಚರಣೆಗೆ ಖ್ಯಾತಿಗೊಂಡಿದೆ. ಸರಕಾರವು ಜನತೆಗೆ ಹಿತಕರವಾಗಿ ವರ್ತಿಸದಿದ್ದಾಗ ಅನೇಕಸಾರೆ ಜನರು ಸರಕಾರದೊಡನೆ ಸಹಕರಿಸದ ಉದಾಹರಣೆಗಳೆಷ್ಟೊ ಇವೆ. ಇದೇ ಅಲ್ಲವೆ ಅಹಿಂಸೆ. ಉದಾಹರಣೆಗಾಗಿ ಒಂದು ಗ್ರಾಮದ ಜನರ ಮೇಲೆ ಅಧಿಕಾರದಲ್ಲಿದ್ದ ರಾಜನು ಕೆಲವು ಖಾನೂನು ಕಟ್ಟಳೆಗಳನ್ನು ವಿಧಿಸಿದ್ದನ್ನು ನಿಷೇಧಿಸಿ ಗ್ರಾಮವಾಸಿಗಳು ಗ್ರಾಮವನ್ನೇ ಬಿಟ್ಟು ಹೊರಡಲುದ್ಯುಕ್ತರಾದ್ದರಿಂದ ಅರಸನು ತನ್ನ ಕಟ್ಟಳೆಯನ್ನು ಹಿಂತೆಗೆದು ಅವರ ಕ್ಷಮೆ ಬೇಡಬೇಕಾಯಿತಂತೆ. ಇವೆಲ್ಲಾ ಅಹಿಂಸಾತತ್ವಾಚರಣೆಯೇ. ಇಂಥಾ ಉದಾಹರಣೆಗಳು ಭಾರತ ಇತಿಹಾಸದಲ್ಲಿ ಅನೇಕ ಇವೆ.

ಅಹಿಂಸಾ ತತ್ವವನ್ನು ಪಾಲಿಸುವನಾಗಬೇಕಾದರೆ ಆತನಿಗೆ ತನ್ನ ದೇಹದ ಮೇಲೆ ಹಿಡಿತವಿರಬೇಕು. ದೇಶದ ಹಿತಸಾಧನೆಯಿಂದ ಅಹಿಂಸಾಪಾಲಕನಾಗಬೇಕಾದರೆ ಆತನು ಬಡತನವನ್ನು ಅಂಗೀಕರಿಸಬೇಕು, ಸತ್ಯವನ್ನು ಪಾಲಿಸಬೇಕು. ಧೈರ್ಯವನ್ನು ಆಚರಣೆಯಲ್ಲಿ ತರಬೇಕು ಮತ್ತು ವಿಷಯಸುಖಗಳಿಂದ ನಿರ್ಲಿಪ್ತನಾಗಿರಬೇಕು. ವಿಷಯಸುಖಗಳನ್ನು ತೊರೆದಲ್ಲದೆ ಮನಸ್ಸನ್ನು ಸ್ಥಿಮಿತದಲ್ಲಿಡಲು ಸಾಧ್ಯವಾಗುವದು. ಸಂಸಾರಸ್ಥನು ಅಹಿಂಸಾವಾದಿಯಾಗಬೇಕಿದ್ದರೆ ಆತನು ಸಹ ವಿಷಯಸುಖವನ್ನು ತ್ಯಜಿಸಬೇಕಾಗುವದು. ಇಲ್ಲವೇ ಆತನು ಖಂಡಿತಾ ಅಹಿಂಸಾತತ್ವಪಾಲಕನಾಗಲಾರನು. ಅಹಿಂಸಾವಾದಿಯು ಹೇಗೆ ವಿಷಯಸುಖಗಳನ್ನು ತೊರೆಯಬೇಕೋ ಹಾಗೆಯೇ ಅಹಿಂಸಾತತ್ವಾಲಿಂಗನಮಾಡಬೇಕಾದರೆ ಆವನು ಕಡುಬಡವನಿರಬೇಕು. ಸತ್ಯವೇ ಅಹಿಂಸೆಯ ಆಧಾರಸ್ಥಂಭ. ಈ ತತ್ವವು ಧೈರ್ಯಲ್ಲೂ ವಿದ್ದರೆ ಒಂದು ಹೆಜ್ಜೆ ಮುಂದಿಡಲಾರನು. ಹಣ, ನೌಕರಿ, ಖ್ಯಾತಿ, ಸತ್ಕಾರ, ಬಂಧುಮಿತ್ರರು ಮತ್ತು ಮರಣಾಪಭಯವನ್ನು ತೊರೆದವರೇ ಈ ತತ್ವವನ್ನು ಅನುಸರಿಸಲಾಪರು. ಈ ವಿಚಾರಗಳೆಲ್ಲ ಕಷ್ಟತಮವೆಂದನಿಸಬಹುದು. ಆದರೆ ಮಾನವನು ಹೃದಯದಲ್ಲಿ ಈ ಕಷ್ಟಗಳನ್ನು ಸಹಿಸುವ ಆ ಸಹನಶಕ್ತಿಯು ಪ್ರಕೃತಿ ನಿರ್ಮಿತವಾಗಿದೆ.

ಮಾನವನು ಹುಸಿಯನ್ನಾಡಬೇಕಾದರೆ ಆತನಿಗೆ ಯಾವದಾದರೊಂದು ವಿಚಾರದ ಭಯವಿರಬೇಕು. ಆದ್ದರಿಂದ ಧೈರ್ಯದಿಂದ ಸತ್ಯನುಡಿದು ಕಷ್ಟವನ್ನು ಎದುರಿಸುವದೇ ಅಹಿಂಸೆಯ ಚಿಂಗವಾಗಿದೆ. ಆದ್ದರಿಂದ ಅಹಿಂಸಾತತ್ವದ ಪ್ರಥಮ ಸೋಪಾನಗಳೆಂದರೆ ಸತ್ಯ, ಧೈರ್ಯ, ಸದಾಚಾರ ಮತ್ತು ಸಹನಶಕ್ತಿ. ನಿಜವಾದ ಅಹಿಂಸಾವಾದಿಗೆ ಅಸಾಧ್ಯವಾದ ಕೆಲಸವಿಲ್ಲ. ಹೆದರಬೇಕಾದ ಸಂಗತಿಯಿಲ್ಲ. ಮಾನಸಿಕ ಶಾಂತಿಗೆ ಕೊಂದರೆಯಿಲ್ಲ.

ಸೋವಿಯಟ್ ರಶಿಯಾ.

ಅದರ ಪ್ರಚಂಡ ಯುದ್ಧ ಬಲ.

ಮಧ್ಯ ಯೂರೋಪಿನಲ್ಲಿಯೂ, ಪೂರ್ವ ಭಾಗದ ಯೂರೋಪಿನಲ್ಲಿಯೂ ಅಂತರರಾಷ್ಟ್ರ ರಾಜಕೀಯ ವಿದ್ಯಮಾನಗಳು ಒಂದೊಂದು ವೇಳೆ ಹಠಾತ್ತಗಿ, ಅನಿರೀಕ್ಷಿತವಾಗಿ ಮಿಂಚಿನ ವೇಗದಿಂದ ಮುಂದುವರಿಯುತ್ತದೆ. ಇದರಿಂದ ಯಾವ ಕಾಲಕ್ಕೆ ಯುದ್ಧದ ಕಿಡಿಯು ಹೊತ್ತಿಕೊಂಡು ಅನರ್ಥ ಪರಂಪರೆಯಾಗುವದೋ ಎಂದು ಭಯವೂ, ಸಂದೇಹವೂ ಉಂಟಾಗಿರುತ್ತದೆ. ಇದಕ್ಕೆ ಜರ್ಮನಿಯ ಆಕ್ರಮಣ ಪರ್ತನೆಯೇ ಕಾರಣ. ಆಸ್ಟ್ರಿಯೂ, ಜೆಕೊಸ್ಲೊವೇಕಿಯ ರಾಜ್ಯಗಳು ಹಿಟ್ಲರನ ವಶವಾದವು. ಆಲ್ಬೇನಿಯವು ಇಟಲಿಯ ವಶವಾಯಿತು. ಯೂರೋಪಿನ ವಿದೇಶಾಂಗ ರಾಜನೀತಿಯಲ್ಲಿ ಗ್ರೇಟ್ ಬ್ರಿಟನ್ ಮತ್ತು ಸೋವಿಯಟ್ ರಶಿಯಾ ದೇಶಗಳು ಐಕ್ಯಮತ್ಯದಿಂದ ವರ್ತಿಸಿದರೆ ಅಂತರರಾಷ್ಟ್ರ ರಾಜಕೀಯ ಪರಿಸ್ಥಿತಿಯು ಉತ್ತಮಗೊಳ್ಳಬಹುದು. ಆದರೆ ಇದನ್ನು ಸಹ ಹೇಳುವ ಹಾಗಿಲ್ಲ. ಹಿಟ್ಲರನು ಎಲ್ಲರನ್ನೂ ಎದುರಿಸಿ ತನ್ನ ಕಾರ್ಯಸಾಧನೆ ಮಾಡಿಕೊಳ್ಳಬೇಕೆಂದು ಹಟ ಹಿಡಿದಿರುವಂತೆ ತೋರುತ್ತದೆ. ರಶಿಯಾ ದೇಶವು ಜರ್ಮನಿಗೆ ವಿರೋಧವಾಗಿ ನಿಂತು ಯುದ್ಧ ಮಾಡುವವಾದರೆ, ಅದು ಬ್ರಿಟನಿನ ಮತ್ತು ಫ್ರಾನ್ಸಿನ ಪಕ್ಷಕ್ಕೆ ಸೇರಿದರೆ, ಜರ್ಮನಿಯು ಕೊಂಚ ಆಲೋಚನೆ ಮಾಡಬೇಕಾದ ಪರಿಸ್ಥಿತಿ ಉಂಟಾಗಬಹುದು.

ಸೋವಿಯಟ್ ರಶಿಯವು ಪ್ರಪಂಚದಲ್ಲಿ ಅತ್ಯಂತ ಪ್ರಬಲವಾದ ರಾಷ್ಟ್ರಗಳಲ್ಲಿ ಮೂರನೆಯದು. ಬ್ರಿಟಿಷ್ ಚಕ್ರಾಧಿಪತ್ಯವು ಮೊದಲನೆಯದು. ಅಮೇರಿಕದ ಸಂಯುಕ್ತ ಸಂಸ್ಥಾನವು ಎರಡನೇಯದು. ಜನ ಸಂಖ್ಯೆಯಲ್ಲಿಯೂ, ಸಂಪತ್ತು ಸಾಧನೆಗಳಲ್ಲಿಯೂ ಸೋವಿಯಟ್ ರಶಿಯವು ಬಹಳ ಬಲಿಷ್ಠವಾಗಿರುತ್ತದೆ. ರಶಿಯಕ್ಕೆ ಅನುಕೂಲವಾದ ಪರಿಸ್ಥಿತಿಯೊಂದಿಗೆ ಬಂಗಾರದ ಜಮಾವಣೆಯು ಏರುತ್ತಲಿದೆ. ರಶಿಯಾಕ್ಕೆ ವಿದೇಶ ವ್ಯಾಪಾರ ಕ್ಷೇತ್ರವು ಬೇಕಾಗಿರುವದು ಬಹಳ ಕಡಿಮೆ. ರಶಿಯಾದಲ್ಲಿ ಹೆಚ್ಚಾಗಿ ಬೆಳೆಯುತ್ತಲಿರುವ ಗೋಧಿ ಮೊದಲಾದ ಆಹಾರ ಸಾಮಗ್ರಿಗಳು ರಶಿಯಾಕ್ಕೇನೇ ಬೇಕಾಗಿದೆ. ರಶಿಯಾದಲ್ಲಿ ಜನಜೀವನದ ಆರ್ಥಿಕ ಮಟ್ಟವು ಬಹಳ ಕಮ್ಮಿದರ್ಜೆಯಲ್ಲಿತ್ತು. ಅದು ಹೆಚ್ಚಿನ ಮತ್ತು ತೃಪ್ತಿಕರವಾದ ಮಟ್ಟಕ್ಕೆ ಬರುತ್ತಲಿದೆ. ರಶಿಯಾದ ಜನರು ಹೆಚ್ಚು ಬಲಶಾಲಿಗಳಾಗಿಯೂ, ಉತ್ತಮರಾಗಿಯೂ ಆಗುತ್ತಲಿದ್ದಾರೆ. ರಶಿಯಾದಲ್ಲಿ ಯುದ್ಧ ಸಾಮಗ್ರಿಗಳೂ, ಸಂಪತ್ತು ಸಾಧನೆಗಳೂ ಹೆಚ್ಚಾಗಿರುತ್ತವೆ.

ಆರ್ಥಿಕ ಪರಿಸ್ಥಿತಿ.

ಸೋವಿಯಟ್ ರಶಿಯಾದಲ್ಲಿ ವ್ಯವಸಾಯ ಮತ್ತು ಕೈಗಾರಿಕೆ ಉದ್ಯಮಗಳು ಒಂದು ಗೊತ್ತಾದ ಕ್ರಮದಲ್ಲಿ ಅವಧಿ ಮೇರೆಗೆ ನಡೆಯುತ್ತದೆ. ವ್ಯವಸಾಯ ಕ್ರಮಗಳಲ್ಲಿ ಎರಡು ಪ್ರಾಮುಖ್ಯ ಅಂಶಗಳಿವೆ. ಮರದ ನೇಗಿಲನ್ನು ವ್ಯವಸಾಯದಲ್ಲಿ ಉಪಯೋಗಿಸುವದಿಲ್ಲ. ಅದರ ಬದಲು ಆಧುನಿಕ ಯಂತ್ರಗಳನ್ನು ಉಪಯೋಗಿಸುತ್ತಾರೆ. ವ್ಯವಸಾಯವನ್ನು ಸಾಮೂಹಿಕವಾಗಿ ಮಾಡುತ್ತಾರೆ. ರಶಿಯಾದಲ್ಲಿ ವ್ಯವಸಾಯದ ಒಂದು ಹೊಲ ಅಥವಾ ಗದ್ದೆಯೆಂದರೆ ಅದು 2,500 ಎಕರೆಯಷ್ಟು ದೊಡ್ಡದು. ಯಾಂತ್ರಿಕ ಮತ್ತು ಸಾಮೂಹಿಕ ವ್ಯವಸಾಯಕ್ಕೆ ಅನುಕೂಲವಾಗಿ ವ್ಯವಸಾಯ ಕ್ಷೇತ್ರಗಳನ್ನು ಈ ರೀತಿ ಇಷ್ಟು ದೊಡ್ಡದಾಗಿ ಏರ್ಪಡಿಸಿಕೊಂಡಿದ್ದಾರೆ. ಆದರೆ ರಶಿಯಾದ ಈ ವ್ಯವಸಾಯ ಕ್ಷೇತ್ರವು ಬ್ರಿಟನಿನ ಒಂದು ಸಾಮಾನ್ಯ ವ್ಯವಸಾಯ ಕ್ಷೇತ್ರಕ್ಕಿಂತ 20 ಪಾಲು ದೊಡ್ಡದಾಯಿತು. ಆಧುನಿಕ ವಿಜ್ಞಾನ ಶಾಸ್ತ್ರ ರೀತಿಯಲ್ಲಿ ದೊಡ್ಡದಾದ ರಶಿಯಾದ ಹೊಲಗಳಲ್ಲಿ ವ್ಯವಸಾಯ ಅತ್ಯಂತ ಉತ್ತಮ ರೀತಿಯಲ್ಲಿ ನಡೆಯುತ್ತದ. ಇದಕ್ಕೆ ಸರಕಾರದ ಪ್ರೋತ್ಸಾಹವೂ, ಸಹಾಯವೂ, ಬೆಂಬಲವೂ ಇರುತ್ತದೆ. ಕಳೆದ ವರ್ಷ ರಶಿಯಾದ ಹೊಲಗದ್ದೆಗಳಲ್ಲಿ 10 ಕೋಟಿ ಟನ್‌ಗಳಷ್ಟು ಧಾನ್ಯವು ಬೆಳೆಸಲ್ಪಟ್ಟಿತು. 1937 ರಲ್ಲಿ ದೊರೆತ ಬೆಳೆಗಿಂತಲೂ ಸ್ವಲ್ಪ ಕಮ್ಮಿಯೆಂದೇ ಹೇಳಲಾಗಿದೆ. ಆದರೆ ಹಿಂದಿನ ಎರಡು ವರ್ಷಗಳಿಗಿಂತ ಕಳೆದ ಸಾಲಿನಲ್ಲಿ ಹೆಚ್ಚಾದ ಬೆಳೆಯು ದೊರೆಯಿತು. ವ್ಯವಸಾಯದಲ್ಲಿ ಯಾಂತ್ರಿಕ ಮತ್ತು ವೈಜ್ಞಾನಿಕ ಕ್ರಮಗಳನ್ನು ಅನುಭವಿಸುತ್ತಿರುವದೇ ಈ ರೀತಿ ಹೆಚ್ಚು ಫಸಲು ಸಿಕ್ಕಲು ಕಾರಣವಾಯಿತು. ವಿಶೇಷ ಚತುರತೆಯಿಂದ ವ್ಯವಸಾಯ ಕ್ರಮಗಳನ್ನು ಅಭಿವೃದ್ಧಿ ಮಾಡಿ ವಿಶೇಷ ತರಹದ ಬೆಳೆಗಳನ್ನು ಸಹ ಹೆಚ್ಚಾಗಿ ಹೊಂದುತ್ತಲಿದ್ದಾರೆ. 'ಟೆಕ್ನಿಕಲ್' ಪೈರುಗಳನ್ನು ಚೆನ್ನಾಗಿ ಹೊಂದುತ್ತಲಿದ್ದಾರೆ. ಸೋವಿಯಟ್ ರಶಿಯಾವು ತನಗೆ ಬೇಕಾದಷ್ಟು ಸಕ್ಕರೆ, ನಾರು, ಹತ್ತಿ ಇವೆಲ್ಲವನ್ನೂ ತಯಾರಿಸಿಕೊಳ್ಳುತ್ತದೆ. ಟೀ, ರಬ್ಬರ್ ಮತ್ತು ಇತರ ವಸ್ತುಗಳನ್ನು ಮೊದಲಿಗಿಂತ ಹೆಚ್ಚಾಗಿ ತಯಾರಿಸಿಕೊಳ್ಳುತ್ತಿದ್ದಾರೆ.

'ಕ್ಯಾನಿಂಗ್' ಕಾರ್ಖಾನೆಗಳ ಉದ್ಯಮವು ಬಹಳ ಅಭಿವೃದ್ಧಿಗೊಂಡಿರುತ್ತದೆ. ಒಂದು ವರ್ಷಕ್ಕೆ 180 ಕೋಟಿ ಟಿನ್ನುಗಳನ್ನು ತಯಾರಿಸುತ್ತಾರೆ. ಇವುಗಳಲ್ಲಿ 92 ಸಾಮಾನ್ಯ ಕ್ಯಾನಿಂಗ್ ಕಾರ್ಖಾನೆಗಳೂ, 30 ವಿಮಾನ ಕ್ಯಾನಿಂಗ್ ಕಾರ್ಖಾನೆಗಳೂ 10 ಮಾಂಸದ ಕ್ಯಾನಿಂಗ್ ಕಾರ್ಖಾನೆಗಳೂ ಇರುತ್ತವೆ. ಮಾಂಸ ತಯಾರಿಯ ಕಾರ್ಖಾನೆಗಳು ಅಮೇರಿಕದ ಕಾರ್ಖಾನೆಗಳಂತೆ ಬಹಳ ಉತ್ತಮ ಸ್ಥಿತಿಯಲ್ಲಿವೆ. ಇವುಗಳಂತೆ 50 ಕೋಲ್ಡ್ ಸ್ಟೋರೇಜ್ ಪ್ಲಾಂಟ್‌ಗಳೂ ಇರುತ್ತವೆ. ಇವುಗಳ ಪ್ರಮಾಣ 690 ಲಕ್ಷ ಟನ್ನುಗಳು. ರಶಿಯಾದಲ್ಲಿ 'ಜಾರ್' ಚಕ್ರವರ್ತಿಗಳ ಕಾಲದಲ್ಲಿ ಮಾರ್ಗರಿನ್ ಕಾರ್ಖಾನೆಗಳೇ ಇರಲಿಲ್ಲ. ಈಗ ಇಂಥ ಕಾರ್ಖಾನೆಗಳು 14 ಇವೆ.

ರಶಿಯಾದ ಸಂಪತ್ತು ವಿಶೇಷವಾಗಿದೆ. ಪ್ರಪಂಚದಲ್ಲಿರುವ ಅರಣ್ಯಗಳ ಮರಮುಟ್ಟುಗಳ ಸಾಧನಗಳಲ್ಲಿ ರಶಿಯಾದಲ್ಲಿಯೇ ಮೂರನೇ ಒಂದು ಭಾಗವಷ್ಟಿದೆ. ಪ್ರತಿ ವರ್ಷವೂ ರಶಿಯಾದ ಅರಣ್ಯಗಳಲ್ಲಿ 130 ಕೋಟಿ ಘನ ಮೀಟರುಗಳ ಮರಮುಟ್ಟುಗಳು ಉತ್ಪನ್ನವಾಗುತ್ತದೆ. ಇವುಗಳಲ್ಲಿ ಸುಮಾರು 35 ಕೋಟಿಯಷ್ಟು ಮಾತ್ರ ಉಪಯೋಗಿಸಲ್ಪಡುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ರಶಿಯಾದ ವ್ಯವಸಾಯ ಸಂಪತ್ತು, ವನ ಸಂಪತ್ತು, ಹುಲ್ಲುಗಾವಲುಗಳ ಸಂಪತ್ತು ಅಪಾರವಾದವು. ರಶಿಯಾದ ಖನಿಜ ಸಂಪತ್ತು ಬಹಳವಾಗಿರುತ್ತದೆ. ಇವೆಲ್ಲ ಸಾಧನಗಳ ಮೂಲಕ ಸೋವಿಯಟ್ ಸರಕಾರದವರು ರಶಿಯಾವನ್ನು ಮಹಾ ಪ್ರಬಲವಾದ ರಾಷ್ಟ್ರವನ್ನಾಗಿ ಮಾಡುತ್ತಲಿದ್ದಾರೆ.

ಖನಿಜ ಸಂಪತ್ತು.

ರಶಿಯದ ಖನಿಜ ಸಂಪತ್ತು ಅಪಾರವಾಗಿದೆ. ಈ ವಿಚಾರದಲ್ಲಿ ಹೊಸ ಶೋಧನೆಗಳು ಹೆಚ್ಚಾಗಿ ನಡೆಯುತ್ತಲಿದೆ. ಕಲ್ಲಿದ್ದಲು, ಪೆಟ್ರೋಲಿಯಂ, ತೈಲಗಳು, ಕಬ್ಬಿಣ, ಮ್ಯಾಂಗನೀಸ್, ಕ್ರೋಮಿಯಂ, ತಾಮ್ರ, ಸೀಸ ಮೊದಲಾದ ಅನೇಕ ಲೋಹಗಳು ವಿಶೇಷವಾಗಿ ದೊರೆಯುತ್ತವೆ. ಬಂಗಾರ ಮತ್ತು ಪ್ಲಾಟಿನಂ ಎಂಬ ಅಮೌಲ್ಯ ಲೋಹವು ಹೆಚ್ಚಾಗಿ ದೊರೆಯುತ್ತವೆ. ತವರ, ನಿಕ್ಕಲ್, ಕೊಬಾಲ್ಟ್ ಮತ್ತು ಗಂಧಕ ಇವುಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುವದಿಲ್ಲ.

ಯುದ್ಧದ ಸಲಕರಣೆಗಳು.

ರಶಿಯಾವು ಯುದ್ಧ ಸಾಮಗ್ರಿಗಳ ತಯಾರಿಗಾಗಿ ನಡಿಸುತ್ತಿರುವ ಕಾರ್ಖಾನೆಗಳು ಶತ್ರುಗಳಿಗೆ ಪ್ರವೇಶ ಮಾಡಲಾಗದ ದುರ್ಗಮ ಪ್ರದೇಶಗಳಲ್ಲಿ ನಡೆಯುತ್ತಲಿವೆ. ಶತ್ರುಗಳು ವಿಮಾನಗಳಿಂದ ಈ ಕಾರ್ಖಾನೆಗಳ ಮೇಲೆ ಬಾಂಬು ಹಾಕಿ ದಾಳಿ ಮಾಡುವ ಹಾಗಿಲ್ಲ. ಯುದ್ಧ ಸಾಧನಗಳ ತಯಾರಿಯು ತೀವ್ರವಾಗಿ ಮುಂದುವರಿಯುತ್ತಲಿದೆ. ಯಂತ್ರಗಳ ಮತ್ತು ಆಯುಧಗಳ ತಯಾರಿ, ರಸಾಯನಿಕ ಪದಾರ್ಥಗಳ ತಯಾರಿ, ವಿಮಾನಗಳ ತಯಾರಿ, ಇತರ ಎಲ್ಲಾ ಯುದ್ಧ ಸಾಮಾನುಗಳ ತಯಾರಿ, ವಿದ್ಯುತ್‌ಶಕ್ತಿ ಸಾಮಾನುಗಳ ತಯಾರಿ ಇವು ಮುಂದುವರಿಯುತ್ತವೆ.

(10 ನೇ ಪುಟಕ್ಕೆ ಸಾಗಿದೆ.)

ಕೊಡಗು

ಮೇ ತಾರೀಕು ೧೨ನೇ ಶುಕ್ರವಾರ ೧೯೩೯.

ಸುಬಾಶಚಂದ್ರ ಬೋಸರ ರಾಜಿನಾಮೆ ಮತ್ತು ನಂತರ.

ಲೋಕ ವಿಖ್ಯಾತರಾದ ಮಹಾತ್ಮ ಗಾಂಧೀಯವರು ಕಾಂಗ್ರೆಸ್ ಸಂಸ್ಥೆಯ ಸೂತ್ರಧಾರತ್ವವನ್ನು ವಹಿಸಿದ ಮೇಲೆ ಆ ಸಂಸ್ಥೆಯ ಕಾರ್ಯಕಲಾಪಗಳೆಲ್ಲವು ಮಹಾತ್ಮರ ಸತ್ಯ ಮತ್ತು ಅಹಿಂಸಾತತ್ವಗಳನ್ನನುಸರಿಸಿಯೇ ನಡಿಸಲ್ಪಡುತ್ತಿವೆ. ಇಡೀ ಬ್ರಿಟಿಷ್ ಸರಕಾರವನ್ನು ಮಾತ್ರವಲ್ಲ ಪ್ರಪಂಚವನ್ನೇ ತಲ್ಲಣಗೊಳಿಸಿದ ಸತ್ಯಾಗ್ರಹ ಚಳವಳಿವು ಕೂಡ ಮಹಾತ್ಮರ ಈ ತತ್ವಗಳನ್ನನುಸರಿಸಿ ಅವರ ಮುಂದಾಳುತನದಲ್ಲಿ ನಡಿಸಲ್ಪಟ್ಟದ್ದಾಗಿವೆ. ಕಳೆದ ಕೌನ್ಸಿಲು ಚುನಾವಣೆಗಳಲ್ಲಿ ಹಿಂದುಸ್ಥಾನದ ಹನ್ನೊಂದು ಪ್ರಾಂತಗಳ ಪೈಕಿ ಏಳು ಪ್ರಾಂತಗಳಲ್ಲಿ ಕಾಂಗ್ರೆಸ್ ಪಕ್ಷದವರಿಗೆ ಬಹುಮತ ದೊರೆತದ್ದು ಕಳೆದ ಸತ್ಯಾಗ್ರಹ ಚಳವಳದ ಫಲಿತಾಂಶದಿಂದಲೇ ಆಗಿದೆ. ಇಂದು ಕಾಂಗ್ರೆಸಿಗೆ ದೊರೆತಿರುವ ವಿಶೇಷ ಶಕ್ತಿ ಮತ್ತು ಕೀರ್ತಿಯೂ, ಈ ದೆಸೆಯಿಂದ ಬ್ರಿಟಿಷ್ ಸರಕಾರಕ್ಕೆ ಕಾಂಗ್ರೆಸಿನ ಮೇಲಿರುವ ಗೌರವ ಮತ್ತು ಭಯವೂ, ಕಾಂಗ್ರೆಸ್ ಕೈಹಿಡಿದಿರುವ ಮಹಾತ್ಮರ ತತ್ವ ಮತ್ತು ಅವರ ಮುಂದಾಳುತನದಿಂದಲೇ ಎಂಬುದರಲ್ಲಿ ಏನೊಂದೂ ಸಂಶಯವಿಲ್ಲ. ಇನ್ನು ಮುಂದಕ್ಕೂ ಕಾಂಗ್ರೆಸಿನ ಅಂತಿಮ ಧ್ಯೇಯವಾದ ಪೂರ್ಣ ಸ್ವರಾಜ್ಯವನ್ನು ಪಡೆಯಬೇಕಾದರೂ ಈ ತತ್ವಗಳಿಂದಲೇ ಆಗಬೇಕಾಗಿದೆ. ಈ ತತ್ವಗಳನ್ನು ಜನರಿಂದ ಜಯಪ್ರದವಾಗಿ ನಡೆಸಬೇಕಾದರೆ ಮಹಾತ್ಮರೊಬ್ಬರಿಗಲ್ಲದೆ ಮತ್ಯಾರಿಗೂ ಸಾಧ್ಯವಿಲ್ಲವೆಂಬುದು ನಿರ್ವಿವಾದದ ಮಾತಾಗಿದೆ.

ಇನ್ನೊಂದು ಕಡೆ ಬ್ರಿಟಿಷ್ ಸರಕಾರದವರು ಕಾಂಗ್ರೆಸ್ ಸಂಸ್ಥೆಯು ತಿರಸ್ಕರಿಸಿರುವಂಥಾ ಸಂಯುಕ್ತ ರಾಜ್ಯಘಟನೆಯನ್ನು ಹಿಂದೂಸ್ಥಾನದ ಮೇಲೆ ಬಲಾತ್ಕಾರದಿಂದ ಹೊರಿಸುವಂಥಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಅಲ್ಲದ ಯೂರೋಪಿನ ರಾಜಕೀಯ ಪರಿಸ್ಥಿತಿಯು ದಿನೇ ದಿನೇ ವಿಷಮಾವಸ್ಥೆಯನ್ನು ಹೊಂದುತ್ತಾ ಬರುತ್ತದೆ. ಅಲ್ಲಿ ಇಂದೋ ನಾಳೆಯೋ ಯುದ್ಧವು ಪ್ರಾರಂಭವಾಗುವ ಸಂಭವವಿದೆ. ಹಾಗೆ ಯುದ್ಧವು ಪ್ರಾರಂಭವಾದರೆ ಗುಲಾಮಗಿರಿಯಲ್ಲಿರುವ ಹಿಂದೂಸ್ಥಾನವು ಸ್ವಾತಂತ್ರ್ಯ ದೊರೆಯದೆ ಅಂಥಾ ಯುದ್ಧದಲ್ಲಿ ಭಾಗವಹಿಸುವದು ಯೋಗ್ಯವಲ್ಲವೆಂದು ಕಾಂಗ್ರೆಸ್ ಸಂಸ್ಥೆಯು ತೀರ್ಮಾನಿಸಿದೆ. ಯುದ್ಧ ಪ್ರಾರಂಭವಾದರೆ ಪ್ರಾಂತೀಕ ಸರಕಾರಗಳ ಅಧಿಕಾರವನ್ನೆಲ್ಲಾ ಮಧ್ಯವರ್ತಿ ಸರಕಾರಕ್ಕೆ ಕೈಕೊಳ್ಳುವಂತಹ ಕಾನೂನನ್ನೂ ಕೂಡ ಬ್ರಿಟಿಷ್ ಪಾರ್ಲಿಮೆಂಟು ಮಾಡಿಕೊಂಡಿದೆ.

ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಕಾಂಗ್ರೆಸಿನ ಒಗ್ಗಟ್ಟೂ, ಶಕ್ತಿಯೂ ಅತ್ಯುತ್ತಮ ಸ್ಥಿತಿಯಲ್ಲಿರಬೇಕಾದ್ದು ಅತ್ಯಾವಶ್ಯವಾಗಿದೆ. ಇದನ್ನು ಸಾಧಿಸಬೇಕಾದರೆ ಮಹಾತ್ಮರ ತತ್ವಗಳಿಂದ ಅವರ ಮುಂದಾಳುತನವಲ್ಲಿ ಅಲ್ಲದೆ ಬೇರೆ ಸಾಧ್ಯವಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಆದರೆ ಭಾರತ ಭೂಮಿಯ ದುರ್ದೆಶೆಯಿಂದ ಈ ಸಮಯದಲ್ಲಿ ಕಾಂಗ್ರೆಸಿನೊಳಗೆ ಒಡಕು ಬರುವಂತಹ ಪ್ರಸಂಗವು ಉಂಟಾದದ್ದು ಬಹು ಶೋಚನೀಯವಾಗಿದೆ. ತ್ರಿಪುರಿ ಕಾಂಗ್ರೆಸಿನ ಅಧ್ಯಕ್ಷ ಪದವಿಯ ಚುನಾವಣೆಯಲ್ಲಿ ನಡೆದಂಥಾ ಪೈಪೋಟಿ, ಅದರಲ್ಲಿ ಸುಭಾಷ ಚಂದ್ರ ಬೋಸರವರಿಗೆ ಉಂಟಾದ ಜಯದ ಫಲಿತಾಂಶವಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಹದಿಮೂರು ಸದಸ್ಯರುಗಳು ಕೊಟ್ಟ ರಾಜಿನಾಮೆ, ಈ ಸಂಬಂಧ ತ್ರಿಪುರಿ ಕಾಂಗ್ರೆಸಿನಲ್ಲಿ ಮಹಾತ್ಮರ ಮುಂದಾಳುತನದಲ್ಲಿ ಪೂರ್ತಿ ವಿಶ್ವಾಸವನ್ನು ಸೂಚಿಸಿ ಪಾಸು ಮಾಡಿದ ಠರಾವು ಮೊದಲಾದುವುಗಳನ್ನು ಕುರಿತು ಈ ಮೊದಲೇ ಬರೆಯಲಾಗಿತ್ತು. ಇತ್ತೀಚೆಗೆ ಸುಭಾಷ ಚಂದ್ರ ಬೋಸರವರ ಆರೋಗ್ಯವು ಉತ್ತಮಗೊಂಡು, ಕಳೆದ ತಿಂಗಳ ಅಂತ್ಯದಲ್ಲಿ ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗಿನ ಸಮಯದಲ್ಲಿ ಮಹಾತ್ಮರಿಗೂ, ಸುಭಾಷ ಚಂದ್ರ ಬೋಸರಿಗೂ ವರ್ಕಿಂಗ್ ಕಮಿಟಿಯ ನೇಮಕವನ್ನು ಕುರಿತು ಸಂಧಾನಗಳು ನಡೆದು ಸಫಲವಾಗದ ಕಾರಣ ಸುಭಾಷ ಚಂದ್ರಬೋಸರವರು ಕಾಂಗ್ರೆಸಿನ ಅಧ್ಯಕ್ಷ ಪದವಿಗೆ ರಾಜಿನಾಮೆಯನ್ನು ಕೊಟ್ಟರು. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಕಾಂಗ್ರೆಸಿನೊಳಗಿರುವ ಬಲಪಕ್ಷ ಯಾ ಎಡಪಕ್ಷ, ಇವುಗಳಲ್ಲಿ ಯಾವುದಾದರೊಂದು ಪಕ್ಷದವರಿಂದಲೇ ಕೂಡಿದ್ದಾಗಿರಬೇಕೆಂದೂ, ಅಂದರೇನೇ ಕಾಂಗ್ರೆಸಿನ ಮುಂದಿನ ನಿರ್ಧಿಷ್ಟವಾದ ಕಾರ್ಯಕ್ರಮವನ್ನು ಜಯಪ್ರದವಾಗಿ ನಡೆಸಲು ಸಾಧ್ಯವಾಗುವದೆಂದೂ ಮಹಾತ್ಮರ ಅಭಿಪ್ರಾಯವಾಗಿದೆ. ಈ ಕಾರಣದಿಂದ ಸುಭಾಷ ಚಂದ್ರಬೋಸರವರನ್ನು ತಮಗೆ ಇಷ್ಟಬಂದ ಪಾರ್ಟಿಯ ಮೆಂಬರುಗಳಿಂದ ವರ್ಕಿಂಗ್ ಕಮಿಟಿಯನ್ನು ನೇಮಿಸುವಂತೆ ಮಹಾತ್ಮರು ಕೇಳಿಕೊಂಡರು. ತ್ರಿಪುರಿ ಕಾಂಗ್ರೆಸಿನ ತೀರ್ಮಾನದಂತೆ ರಾಷ್ಟ್ರಪತಿಗಳಾದ ಸುಭಾಷ ಬೋಸರವರು ಮಹಾತ್ಮ ಗಾಂಧೀಯವರಿಗೆ ಒಪ್ಪುವಂಥಾ ವರ್ಕಿಂಗ್ ಕಮಿಟಿಯ ಮೆಂಬರುಗಳನ್ನು ನೇಮಿಸಬೇಕಾಗಿತ್ತು. ಆದರೆ ಬೋಸರವರು ಒಂದೇ ಪಕ್ಷದ ಮೆಂಬರುಗಳನ್ನೇ ವರ್ಕಿಂಗ್ ಕಮಿಟಿಗೆ ನೇಮಿಸಲು ಒಪ್ಪಲಿಲ್ಲ. ಈ ದೆಸೆಯಿಂದ ಅವರು ಅಧ್ಯಕ್ಷ ಪದವಿಗೆ ರಾಜಿನಾಮೆಯನ್ನಿತ್ತರು. ಕೂಡಲೇ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಬಾಬುರಾಜೇಂದ್ರ ಪ್ರಸಾದರನ್ನು ರಾಷ್ಟ್ರಪತಿಗಳಾಗಿ ಆರಿಸಿದರು. ಇವರು ಮಹಾತ್ಮರ ಸೂಚನೆಯಂತೆ ಹೆಚ್ಚು ಕಮ್ಮಿ ಎಲ್ಲಾ ಹಳೇ ಮೆಂಬರುಗಳನ್ನೇ ವರ್ಕಿಂಗ್ ಕಮಿಟಿಗೆ ನೇಮಿಸಿದರು. ಈ ವರ್ಕಿಂಗ್ ಕಮಿಟಿಯು ಮಹಾತ್ಮರ ಸಲಹೆಗಳಂತೆ ಕಾಂಗ್ರೆಸಿನ ಕಾರ್ಯಕಲಾಪಗಳನ್ನು ನಡೆಸಲು ಸಿದ್ಧವಾಗಿದೆ. ಅಂದರೆ ಕಾಂಗ್ರೆಸು ಮಹಾತ್ಮರ ಮುಂದಾಳುತನದಲ್ಲಿ ನಡೆಸಲ್ಪಡುವದು.

ಸುಭಾಷ ಚಂದ್ರಬೋಸರವರು ಅಧ್ಯಕ್ಷಪದವಿಗೆ ರಾಜಿನಾಮೆ ಕೊಟ್ಟಾಗ್ಯೆ ಕಾಂಗ್ರೆಸಿನ ಒಗ್ಗಟ್ಟಿಗೂ, ಶಕ್ತಿಗೂ ಅವರು ಕುಂದಕ ತರುವರೆಂದು ಯಾರೂ ನಿರೀಕ್ಷಿಸಿರಲಿಲ್ಲ. ಆದರೆ ಸ್ವಲ್ಪ ದಿವಸಗಳಲ್ಲಿಯೇ ಅವರು ಕಾಂಗ್ರೆಸಿನೊಳಗೆ ಇನ್ನೊಂದು ಪಾರ್ಟಿಯನ್ನು ಸ್ಥಾಪಿಸಲು ಮುಂದೆ ಬಂದದ್ದು ತುಂಬಾ ವಿಷಾದಕರ. ಕಾಂಗ್ರೆಸಿನೊಳಗೆ ಬಲಪಕ್ಷವನ್ನು ಅಂದರೆ ಈಗ ವರ್ಕಿಂಗ್ ಕಮಿಟಿಯಲ್ಲಿ ಅಧಿಕಾರದಲ್ಲಿರುವ ಪಕ್ಷವನ್ನು ಬಿಟ್ಟು ಎಡ ಪಕ್ಷದ ಎಲ್ಲಾ ಗುಂಪುಗಳನ್ನು ('ಫಾರ್ವರ್ಡ್ ಬ್ಲಾಕ್')ಮುನ್ನಡೆಯ ಪಕ್ಷವೆಂಬ ಹೆಸರಿನ ಹೊಸ ಪಕ್ಷವಾಗಿ ಒಂದುಗೂಡಿಸಲು ಯತ್ನಿಸುತ್ತಿರುವರು. ಆದರೆ ಈ ಹೊಸ ಪಕ್ಷವು ಕಾಂಗ್ರೆಸಿನ ಅಹಿಂಸಾ ಮತ್ತು ಸತ್ಯ ತತ್ವಗಳನ್ನೇ ಅನುಸರಿಸಿ ಕಾಂಗ್ರೆಸಿನ ಕಾರ್ಯಕ್ರಮಗಳನ್ನು ಹಿಂಬಾಲಿಸುವದೆಂದೂ, ಅದರೊಂದಿಗೆ ಸ್ವರಾಜ್ಯವನ್ನು ಪಡೆಯಲು ಬಲಪಕ್ಷದವರಿಗಿಂತ ಬಿರುಸಾಗಿ ಮುನ್ನಡೆಯಲು ಯತ್ನಿಸುವದೆಂದೂ ಸುಭಾಷರು ಸೂಚಿಸಿರುವರು. ಬಲಪಕ್ಷದವರು ಗಾಂಧಿಜೀಯವರ ತತ್ವಗಳ ನಿಜವಾದ ಭಾವವನ್ನು ಬಿಟ್ಟು ಮಧ್ಯಗಾಮಿಗಳಂತೆ ವರ್ತಿಸುತ್ತಿರುವದರಿಂದ ಕಾಂಗ್ರೆಸಿನವರಲ್ಲಿ ಕ್ರಾಂತಿಯುಕ್ತ ಭಾವನೆಯನ್ನು ಹುಟ್ಟಿಸುವದೇ ಈ ಹೊಸ ಪಕ್ಷದ ಗುರಿಯೆಂದೂ ಹೇಳಿರುವರು. ಇನ್ನೊಂದು ಕಡೆ ಬಲಪಕ್ಷದವರಿಗೆ ಗಾಂಧಿ ಸೇವಾ ಸಂಘವು ಹೇಗೆ ಆಧಾರಭೂತವಾದ ಸಂಸ್ಥೆಯಾಗಿದೆಯೋ ಹಾಗೆಯೇ ಎಡ ಪಕ್ಷದವರಿಗೆಲ್ಲಾ ಈ ಹೊಸ ಪಾರ್ಟಿಯು ಆಧಾರಭೂತವಾಗಿರಬೇಕೆಂದು ಅಂದಿರುವರು. ಸುಭಾಷ ಬೋಸರು ಹೇಳುವಂತೆ ಅವರ ಈ ಹೊಸ ಪಕ್ಷವು ಮಹಾತ್ಮರು ಹಾಕಿ ಕೊಟ್ಟಿರುವ ಕಾಂಗ್ರೆಸಿನ ತತ್ವಗಳನ್ನೂ, ಕಾರ್ಯಕ್ರಮಗಳನ್ನೂ ಅನುಸರಿಸಿ ನಡೆಯುವುದಾದರೆ ಕಾಂಗ್ರೆಸಿನೊಳಗೆ ಈ ಹೊಸ ಪಕ್ಷದ ಅವಶ್ಯಕತೆಯೇ ಇರುವದಿಲ್ಲ. ಗಾಂಧಿಜೀಯವರ ತತ್ವಗಳ ನಿಜಭಾವವನ್ನು ಬಲಪಕ್ಷದವರು ಮರೆತಿದ್ದರೆ, ಅದನ್ನು ಸಂಪೂರ್ಣವಾಗಿ ಜಾರಿಗೆ ತರುವ ಶಕ್ತಿಯು ಮಹಾತ್ಮರೊಬ್ಬರಿಗೆಯಲ್ಲದೆ ಬೇರೆ ಯಾವ ವ್ಯಕ್ತಿಗಾಗಲೀ, ಪಕ್ಷಕ್ಕಾಗಲೀ ಇಲ್ಲವೆಂಬುವುದು ಯಾರಿಗೆ ತಾನೇ ತಿಳಿಯದಿರುವದು. ಮಹಾತ್ಮರು ತತ್ವಗಳನ್ನು ಹಿಂಬಾಲಿಸಲು ತಯಾರಿರುವ ಸುಭಾಷ ಬೋಸರು – ಗಾಂಧಿಜಿಯವರ ಮುಂದಾಳುತನದಲ್ಲಿ ನಡಿಸಲ್ಪಡುತ್ತಿರುವ ಬಲಪಕ್ಷಕ್ಕೆ ವಿರುದ್ಧವಾಗಿ ಇನ್ನೊಂದು ಪಕ್ಷವನ್ನು ಏರ್ಪಡಿಸುವದರಲ್ಲಿ ಅರ್ಥವಿಲ್ಲ. ಗಾಂಧಿ ಸೇವಾ ಸಂಘದ ಉದಾಹರಣೆಯು ಇಲ್ಲಿಗೆ ಸರಿಹೋಗುವುದಿಲ್ಲ. ಈ ಸೇವಾ ಸಂಘವು ಮಹಾತ್ಮರ ಸತ್ಯ ಮತ್ತು ಅಹಿಂಸಾ ತತ್ವಗಳನ್ನು ರಾಜಕೀಯ ವಿಚಾರದಲ್ಲಿ ಮಾತ್ರವಲ್ಲ' ಪ್ರಾಪಂಚಿಕ ಎಲ್ಲಾ ವ್ಯವಹಾರಗಳಲ್ಲಿಯೂ ಜಾರಿಗೆ ತರುವಂತೆ ಪ್ರಚಾರ ನಡಿಸಲು ಹೊರಟ ಸಂಸ್ಥೆಯಾಗಿದೆ. ಬರೇ ಇನ್ನೂರು ಮೆಂಬರುಗಳಿರುವ ಈ ಸಂಘ ಕಾಂಗ್ರೆಸಿನ ಬಲ ಪಕ್ಷದವರಿಗೆ ಆಧಾರಭೂತವಾಗಿ ರಾಜಕೀಯ ವಿಚಾರಕ್ಕಾಗಿ ಏರ್ಪಡಿಸಲ್ಪಟ್ಟದ್ದೆಂದು ಹೇಳುವದರಲ್ಲಿ ಏನೊಂದೂ ಹುರುಳಿಲ್ಲ. ಸುಭಾಷರು 1923ರ ಸ್ವರಾಜ್ಯ ಪಕ್ಷದ ಉದಾಹರಣೆಯನ್ನು ಕೊಟ್ಟಿರುವರು. ಆದರೆ ಸ್ವರಾಜ್ಯ ಪಕ್ಷವು ಕಾಂಗ್ರೆಸ್ ಮಹಾಸಭೆಯ ತೀರ್ಮಾನಕ್ಕೆ ವಿರುದ್ಧವಾಗಿ ಕೌನ್ಸಿಲ್ ಪ್ರವೇಶದ ಕಾರ್ಯಕ್ರಮವನ್ನು ಕೈಕೊಂಡಿತ್ತು. ಆದರೆ ಬೋಸರ ಈ ಹೊಸ ಪಕ್ಷವು ಕಾಂಗ್ರೆಸಿನ ತೀರ್ಮಾನಕ್ಕೆ ವಿರುದ್ಧ ಹೋಗುವದಿಲ್ಲವೆಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ಈ ಹೋಲಿಕೆಯು ಸರಿಯಿಲ್ಲ. ಕಾಂಗ್ರೆಸ್ ಸಂಸ್ಥೆಯು ಸ್ವರಾಜ್ಯದ ಕಡೆಗೆ ಇಷ್ಟು ಬಿರುಸಾಗಿ ನಡೆದಿರುವದಾದರೂ ಮಹಾತ್ಮರ ತತ್ವ ಮತ್ತು ಮುಂದಾಳುತನದಿಂದಲೇ ಆಗಿದೆಯೆಂಬದನ್ನು ಯಾರೂ ಅಲ್ಲಗಳೆಯಲಾರರು. ಅವರಿಗಿಂತ ಬಿರುಸಾಗಿ ನಡೆಯುವವೆಂದು ಹೇಳುವವರು ಬರೇ ಭಾಷಣಗಳಲ್ಲಿಯೂ, ಠರಾವುಗಳಲ್ಲಿಯೂ ತಮ್ಮ ತೀವ್ರತೆಯನ್ನು ತೋರಿಸುವದಲ್ಲದೆ ಕಾರ್ಯತಃ ಅಲ್ಲ. ಮಹಾತ್ಮರಾದರೋ ತಾವು ಹೇಳುವದನ್ನೆಲ್ಲಾ ಕೂಡಲೇ ಕಾರ್ಯದಲ್ಲಿ ಮಾಡಿ ತೋರಿಸುವವರಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಕಾರ್ಯತಃ ಮಹಾತ್ಮರಿಗಿಂತ ಬಿರುಸಾಗಿ ಮುನ್ನಡೆಯುವ ಮುಂದಾಳು ಬೇರೆ ಯಾರೂ ಇಲ್ಲವೆಂದೇ ಹೇಳಬೇಕಾಗಿದೆ. ಆದ್ದರಿಂದ ಕಾಂಗ್ರೆಸ್ಸಿನ ತತ್ವ ಮತ್ತು ಕಾರ್ಯಕ್ರಮಗಳನ್ನೇ ನಡೆಸುವಂತಾ ಹೊಸದೊಂದು ಪಾರ್ಟಿಗೆ ಕಾಂಗ್ರೆಸಿನಲ್ಲಿ ಅವಕಾಶವಿಲ್ಲ. ಇಲ್ಲವೇ ಈ ಹೊಸ ಪಾರ್ಟಿಯು ಕಾಂಗ್ರೆಸಿನ ಕಾರ್ಯಕ್ರಮವನ್ನು ಅನುಸರಿಸಿಯೇ ನಡೆಯುವದೆಂದು ಹೇಳುವದು ಬರೇ ನೆಪ ಮಾತ್ರವಾಗಿರಬೇಕು. ಬಹು ಜನಪ್ರಿಯವಾಗಿರುವ ಮಹಾತ್ಮರ ಮತ್ತು ಅವರ ತತ್ವಗಳ ಹೆಸರಿನಿಂದ ಈ ಪಕ್ಷಕ್ಕೆ ಬೆಂಬಲವನ್ನು ಪಡೆಯುವ ಪ್ರಯತ್ನವೇ ಇದಾಗಿರಬೇಕು. ಸಮತಾವಾದಿ ಪಕ್ಷಕ್ಕೆ ಬೆಂಬಲವನ್ನು ಪಡೆಯುವ ಪ್ರಯತ್ನವೇ ಇದಾಗಿರಬೇಕು. ಸಮತಾವಾದ ಪಕ್ಷದ ಕೆಲವು ಪ್ರಮುಖರು ಸುಭಾಷರ ಈ ಅಭಿಪ್ರಾಯಕ್ಕೆ ಒಪ್ಪಿಗೆಯನ್ನು ಸೂಚಿಸಿಲ್ಲವೆಂದು ಅವರೇ ಹೇಳಿ

ಪರರಾಷ್ಟ್ರಗಳ ಪರಿಸ್ಥಿತಿ.

ಜರ್ಮನಿ.

ಜರ್ಮನಿಯ ವಿಧಾಯಕನಾದ ಹಿಟ್ಲರನು ಮಧ್ಯ ಯೂರೋಪಿನ ಚಿಕ್ಕ ಚಿಕ್ಕ ರಾಷ್ಟ್ರಗಳನ್ನು ಒಂದೊಂದಾಗಿ ತನ್ನ ಅಂಕೆಗೆ ತಂದು ಒಂದು ಕಾಲಕ್ಕೆ ವಿಶಾಲ ಚಕ್ರಾಧಿಪತ್ಯವೆನಿಸಿ ಮೆರೆದ ಪುರಾತನ ಜರ್ಮನ್ ರಾಜ್ಯವನ್ನು ಕಟ್ಟಬೇಕೆಂದು ಊಹಿಸಿದ್ದನು. ಅಂತೆಯೇ ಆಸ್ಟ್ರಿಯಾವನ್ನು ನುಂಗಿ, ಝೆಕೊಸ್ಲೊವಾಕಿಯಾವನ್ನು ಕಬಳಿಸಿ ಮುಂದಿನ ತನ್ನ ಆಪೋಷಣಕ್ಕೆ ಪೋಲೆಂಡನ್ನು ತೆಗೆದುಕೊಳ್ಳಬೇಕೆಂದು ಹವಣಿಸಿದನು. ಆದರೆ ಹಿಟ್ಲರನ ಈ ವರ್ತನೆಯಿಂದ ಯೂರೋಪಿನ ಇತರ ರಾಷ್ಟ್ರಗಳು ಎಚ್ಚೆತ್ತುಕೊಂಡು ಹಿಟ್ಲರನನ್ನು ಇಂದು ತಡೆಗಟ್ಟಿ ಆತನ ಅಭಿವೃದ್ಧಿಗೆ ತಡೆಯನ್ನೊಡ್ಡದಿದ್ದರೆ ತಮ್ಮ ಸ್ಥಾನ ಚ್ಯುತಿಯಾಗುವುದರಲ್ಲಿ ಸಂದೇಹವಿಲ್ಲವೆಂದರಿತು ಆತನ ಮುಂದುವರಿಯುವಿಕೆಗೆ ತಡೆಯುಡಲು ಕಂಕಣಬದ್ಧವಾಗಿವೆ. ಆದ್ದರಿಂದ ಪೋಲೇಂಡಿನ ಮೇಲೆ ಒಮ್ಮೆಗೇ ಕೈ ಮಾಡಲು ಹಿಟ್ಲರನು ಯೋಚಿಸುತ್ತಿರುವನು. ಇದರ ಪರಿಣಾಮದಿಂದಾಗಿಯೇ ಆತನು ಆಸ್ಟ್ರಿಯಾ ಅಥವಾ ಝೆಕೊಸ್ಲೊವಾಕಿಯಾದ ಮೇಲೆ ಬಲತ್ಕಾರದಿಂದ ತನ್ನ ಸೈನ್ಯವನ್ನು ನಡೆಸಿದಂತೆ ಇಲ್ಲಿ ನಡೆಸದೆ ಮೊದಲು ಕೆಲವು ಶರತ್ತುಗಳನ್ನು ಕೇಳಿದನು. ಅವು ಯಾವುವೆಂದರೆ–ಪೋಲೇಂಡಿನ ಮಧ್ಯಕ್ಕಾಗಿ ಸೈನ್ಯ ಸಾಗಿಸಲು ಒಂದು ದಾರಿ. ಪೋಲೇಂಡು ಬರೇ ಕೃಷಿಕರ ದೇಶವಾಗಿ ಉಳಿಯಬೇಕೆಂಬ ಒಂದು ಶರತು. ಅಲ್ಲಿ ಡೇನ್ಜಿಗ್ ಪ್ರಾಂತವನ್ನು ಹಿಟ್ಲರನಿಗೆ ಮರ್ಯಾದೆಯಿಂದ ಒಪ್ಪಿಸಿಬಿಡಬೇಕೆಂಬ ಒಂದು ಸವಿನಯದ ಕೇಳಿಕೆ.

ಪೋಲೆಂಡು ಈ ಶರತ್ತುಗಳಿಗೊಪ್ಪಿದರೆ ಅದು ತನ್ನ ಸ್ವಾತಂತ್ರ್ಯ ಹಾಗೂ ವ್ಯಕ್ತಿತ್ವವನ್ನು ಕಳೆದುಕೊಂಡಂತೆಯೇ. ಆದ್ದರಿಂದ ಸ್ವದೇಶಪ್ರೇಮಿಗಳಾದ ಪೋಲೀಷರು ಜರ್ಮನರ ಈ ಕಠಿಣ ಕೇಳಿಕೆಗಳನ್ನು ತಿರಸ್ಕರಿಸಿರುವರು. ಪೋಲೇಂಡಿನ ವಿದೇಶ ಮಂತ್ರಿಗಳಾದ ಕರ್ನಲ್ ಬೆಕ್ಕರವರು ತಮ್ಮದೊಂದು ಭಾಷಣದಲ್ಲಿ ಹಿಟ್ಲರನ ಕೇಳಿಕೆಗಳನ್ನೆಲ್ಲಾ ಖಂಡಿಸಿರುವರಲ್ಲದೆ ಪೋಲೀಷರು ದೃಢ ನಿಶ್ಚಯ ಉಳ್ಳವರೆಂದೂ, ಜರ್ಮನಿಯು ಈ ಎರಡು ರಾಷ್ಟ್ರಗಳೊಳಗಿನ ಒಪ್ಪಂದವನ್ನು ತೃಣೀಕರಿಸಿರುವುದು ಅಸಮಂಜಸನೆಂದೂ, ಡಾನ್ಜಿಗ್ ಸ್ವಾತಂತ್ರ್ಯ ಪೋಲಾಂಡದಿಂದ ಅಭಿವೃದ್ಧಿ ಹೊಂದಿದೆಯೆಂದೂ, ಅದನ್ನು ಕಿತ್ತುಕೊಳ್ಳುವ ಹವ್ಯಾಸಕ್ಕೆ ಬಂದರೆ ಅದನ್ನು ವಿರೋಧಿಸಲು ತಾವು ಸದಾ ಸಿದ್ಧವಿರುವೆವೆಂದೂ ಸಾರಿರುವರು. ಇದರಿಂದ ಜರ್ಮನರು ತೀವ್ರವಾಗಿ ಪೋಲೆಂಡದ ಮೇಲೆ ಬೀಳುವ ಸಂಭವ ಕಾಣುವದಿಲ್ಲ. ಅಂತು ಜರ್ಮನಿಯು ಪೋಲೇಂಡಿನ ಗಡಿಗಳಲ್ಲಿ ಯುದ್ಧ ಸಾಮಗ್ರಿಗಳನ್ನು ಶೇಖರಿಸುತ್ತಿದೆ.

ಚೀನಾ–ಜಪಾನ್.

ಯೂರೋಪಿನ ರಾಜಕೀಯ ಆಂದೋಲನವು ಪ್ರಬಲವಾಗಿರುವ ಈ ಸಮಯದಲ್ಲಿ ಜನತೆಯ ದೃಷ್ಟಿಯು ಚೀನಾ ದೇಶದ ಪರಿಸ್ಥಿತಿಯನ್ನು ವಿಚಾರಿಸುತ್ತಿಲ್ಲ. ವಿಮಾನಗಳ ಸಹಾಯದಿಂದ ಅಂತರಿಕ್ಷದಲ್ಲಿ ಸುತ್ತಾಡಿ ಕೆಲವೊಂದು ನಿರಪರಾಧಿ ಜನತೆಯ ಮೇಲೆ ಬಾಂಬಿನ ಮಳೆಗರೆದು ಧ್ವಂಸ ಮಾಡಿದ ಮಾತ್ರಕ್ಕೇ ರಾಷ್ಟ್ರಸೇವಾ ದುರಂಧರರಾಗಿರುವ ಚೀನೀಯರನ್ನು ಆಳುವ ಸಾಮರ್ಥ್ಯ ಜಪಾನಿಗೆ ಬರಲಿಕ್ಕಿಲ್ಲ. ಚೀನಾ ದೇಶದಲ್ಲಿ ಜಪಾನರಿಗೆ ಈಗೀಗ ಉಂಟಾಗುತ್ತಿರುವ ನಷ್ಟದಿಂದ ಬಳಲಿ ಬೆಂಡಾಗಿರುವ ಜಪಾನು ಯುದ್ಧವನ್ನು ಮುಂದರಿಸುವದೂ ಕಷ್ಟ, ನಿಲ್ಲಿಸುವದೂ ಕಷ್ಟವೆಂಬಂತೆ ಮಧ್ಯದಲ್ಲಿ ಸಿಲುಕಿಕೊಂಡಿದೆ. ಈ ಯುದ್ಧದಿಂದ ಚೀನೀಯರ ಮೇಲೆ ಅನೋಘ ಪರಿಣಾಮ ಉಂಟಾಗಿದೆ. ಚೀನೀಯರು ಒಗ್ಗಟ್ಟಿನಿಂದ ಮುಂದುವರಿದು ಕ್ರಮೇಣ ಶತ್ರುವನ್ನು ಮರ್ದಿಸದಿರರು. ತತ್ಕಾಲಕ್ಕೆ ಯುದ್ಧವು ಮುಂದರಿಯುತ್ತಾ ಇದೆ. ಜಪಾನಿನವರು ಸಿಂಗ್‌ಪೊ ಎಂಬ ಬಂದರಿನ ಮೇಲೂ, ಚೀನಾ ದೇಶದ ಮುಖ್ಯ ಪಟ್ಟಣವಾದ ಚುಂಗ್‌ಕಿಂಗ್ ನಗರದ ಮೇಲೂ ವಿಶೇಷವಾಗಿ ಸಿಡಿಮದ್ದು ಸುರಿಸಿರುವರು. ಸಿಂಗ್‌ಪೊವಿನಲ್ಲಿ 200 ಮನೆಗಳೂ, ಚುಂಗ್‌ಕಿಂಗ್‌ನಲ್ಲಿ 1000 ಜನರೂ ಇದರಿಂದ ನಾಶ ಹೊಂದಿರುವರು. ನಿರಾಶ್ರಿತರಾದ ಜನರು ತಂಡ ತಂಡವಾಗಿ ಊರುಬಿಟ್ಟು ಅಲೆಯುತ್ತಿರುವರೆಂದೂ ಇವರ ಸಹಾಯಾರ್ಥವಾಗಿ ಸರ್ಕಾರವು ಲಕ್ಷೋಪಲಕ್ಷ ಹಣ ಸಹಾಯ ಮಾಡುತ್ತಿದೆಯೆಂದೂ ತಿಳಿದು ಬರುತ್ತದೆ. ಒಂದು ಕಡೆಯಲ್ಲಿ ಜಪಾನರು ಜಯಪತಾಕೆಯನ್ನು ಹಿಡಿದು ಮುಂದೊತ್ತುತ್ತಿದ್ದರೆ ಮತ್ತೊಂದು ದಿಗ್ಭಾಗದಲ್ಲಿ ಚೀನೀಯರು ತಮ್ಮ ಪ್ರಾಂತಗಳನ್ನು ಪುನಹ ಸ್ವಾಧೀನಪಡಿಸಿಕೊಳ್ಳುತ್ತಿರುವರು. ಆದ್ದರಿಂದ ಜಪಾನರು ಜಯವನ್ನು ಪಡೆದರೂ (ಪಡೆಯುವುದಿಲ್ಲ) ದೇಶಾಭಿಮಾನಿಗಳಾಗಿರುವ ಚೀನೀಯರು ಜೀವ ಹಿಡಿದು ಬದುಕಿರುವ ತನಕ ಜಪಾನರು ರಾಜ್ಯಭಾರವನ್ನು ಶಾಂತ ರೀತಿಯಿಂದ ಅಲ್ಲಿ ನಡೆಸಲಾರರು.

ಬ್ರಿಟನ್.

ಬ್ರಿಟನಿನಲ್ಲಿ ಜನರು ಖಡ್ಡಾಯವಾಗಿ ಸೈನ್ಯಕ್ಕೆ ಸೇರಬೇಕೆಂಬ ಕಾನೂನು ಕಾಮನ್ಸ್ ಸಭೆಯಲ್ಲಿ ಪ್ರಧಾನ ಸಚಿವರಾದ ಚೇಂಬರ್ಲೇನರಿಂದ ಮಂಡಿಸಲ್ಪಟ್ಟಿತು. ಇದರಂತೆ ಬ್ರಿಟನಿನಲ್ಲಿ ಈ ವರ್ಷ 2 ಲಕ್ಷ ಜನರೂ ಮುಂದಿನ ಮೂರು ವರ್ಷಗಳಲ್ಲಿ ಎಂಟು ಲಕ್ಷ ಜನರೂ ಸೈನ್ಯಕ್ಕೆ ಸಿದ್ಧರಾಗುವರು. ಇದರೊಂದಿಗೆ ಚೇಂಬರ್ಲೇನರು ಹಿಟ್ಲರನ ವರ್ತನೆಯನ್ನು ಖಂಡಿಸಿ ಹಿಟ್ಲರನು ಮಧ್ಯ ಯೂರೋಪದಲ್ಲಿ ತನ್ನ ಅತ್ಯಾಚಾರವನ್ನು ಮುಂದರಿಸಿದ್ದೇ ಆದರೆ ಖಂಡಿತವಾಗಿ ತಕ್ಕ ಶಾಸ್ತಿ ಸಲ್ಲಿಸುವೆವೆಂದೂ, ಪೋಲೇಂಡಿನ ಮೇಲೆ ಹಿಟ್ಲರನು ಬಿದ್ದದ್ದೇ ಆದರೆ ತಾವು ಪೋಲೇಂಡಿಗೆ ಸಹಾಯ ನೀಡುವೆವೆಂದೂ ಭರವಸೆ ಕೊಟ್ಟಿರುವರು. ಪರಿಸ್ಥಿತಿ ಹೇಗಾಗುವದೆಂದು ನೋಡಬೇಕಾಗಿದೆ. ಒಮ್ಮೆ ಝೆಕೊಸ್ಲೊವಾಕಿಯಾಕ್ಕೆ ಈ ತರದ ಭರವಸೆಯನ್ನಿತ್ತು ಅದರ ಗಂಟಲನ್ನು ಹಿಸುಕಿ ಮರಣಾಮಾರಿಯಂತಿದ್ದ ಹಿಟ್ಲರನಿಗೆ ಬಲಿ ಕೊಟ್ಟಿತು. ಈಗ ಯಾವ ಧೋರಣೆಯನ್ನು ಕೈಕೊಳ್ಳುವದೋ ಎಂಬುದು ಊಹಿಸಲಸಾಧ್ಯವಾದ ವಿಚಾರ. ಅಂತೂ ಬ್ರಿಟನು ತನ್ನ ಪೌರೋಹಿತ್ಯವನ್ನು ಸಾಂಗವಾಗಿ ಸಾಗಿಸುತ್ತಿದೆಯೆಂಬುದರಷ್ಟರಿಂದಲೇ ತೃಪ್ತಿಗೊಳ್ಳೋಣ.

ಬಾತ್ಮಿ.

ಮದುವೆಗಳಲ್ಲಿ ಮಾದಕ ಪಾನೀಯ.

ಕೀರ್ತಿಗೆ ಪ್ರಯತ್ನವೋ, ನಾಗರೀಕತೆಯ ಹೆಚ್ಚಳಿಕೆಯೋ?

ಯಾವನಾದರೂ ಜನರ ದೃಷ್ಟಿಗೆ ಬೀಳಬೇಕಾದರೆ ಆವನು ಬೇರೆಯವರು ಮಾಡದಂತಹ ಕೆಲಸಗಳನ್ನೇ ಮಾಡಬೇಕಾಗುತ್ತದೆ. ಕೆಲವು ವರ್ಷಗಳ ಹಿಂದೆ ಅಂದರೆ ಕೊಡಗಿನಲ್ಲಿ ಕಾಂಗ್ರೆಸಿನವರು ಸತ್ಯಾಗ್ರಹವನ್ನು ಹೂಡಿದ ಮೊದಲು ಕೊಡವರ ಮದುವೆ ಮುಂಜಿಗಳಲ್ಲಿ ಮಾದಕ ಪದಾರ್ಥಗಳನ್ನು ಸೇರಿಸದೆ ಇದ್ದ ಸಂದರ್ಭಗಳೇ ಬಹು ಕಡಿಮೆ. ಅಗ್ಯ ಸೇರಿಸದೆ ಇದ್ದ ಮಹನೀಯರುಗಳ ಹೆಸರೂ, ಕೀರ್ತಿಯೂ ಜನರಲ್ಲಿ ಹರಡುತ್ತಿತ್ತು. ಇತ್ತೀಚೆಗೆ ನಿಷಾನಿಷೇಧದ ಪ್ರಯೋಜನಗಳನ್ನು ಜನತೆಯು ಅರಿತು ನಿಷಾ ಪದಾರ್ಥಗಳನ್ನು ಸೇರಿಸುವ ಮದುವೆಗಳೇ ಬಹು ಕಡಿಮೆಯಾಗಿವೆ. ಕಳೆದ ವರ್ಷದಲ್ಲೂ, ಈ ವರ್ಷದ ಪ್ರಾರಂಭದಲ್ಲೂ ಇಂಥಾ ಮದುವೆಗಳು ಹುಡುಕಿದರೂ ಸಿಕ್ಕುತ್ತಿರಲಿಲ್ಲ. ಎಲ್ಲರ ಮದುವೆಯು ನಿಷಾ ಸೇವನೆಯಿಲ್ಲದೆ ಏಕರೀತಿಯಾಗಿದ್ದುದರಿಂದ ಯಾವ ವ್ಯಕ್ತಿಯ ಹೆಸರೂ ಜನತೆಯ ದೃಷ್ಟಿಗೆ ಬೀಳುತ್ತಿರಲಿಲ್ಲ. ಹೇಗಾದರೂ ತಮ್ಮ ಹೆಸರು ದೇಶದಲ್ಲಿ ಹರಡಬೇಕೆಂಬ ಇಚ್ಛೆಯಿಂದಲೋ ಏನೋ ಈಗ ಕೆಲವು ದಿವಸಗಳಿಂದ ಕೆಲವು ಮಹನೀಯರು ನಿಷಾ ಪಿಶಾಚಿಗೆ ತಮ್ಮ ಲಗ್ನ ಕೂಟಗಳಲ್ಲಿ ಅವಕಾಶ ಕೊಡುತ್ತಾ ಬರುತ್ತಿರುವರು. ನನಗೆ ತಿಳಿದ ಮಟ್ಟಿಗೆ ಗ್ರಾಮಗಳಲ್ಲಿ ನಡೆದ ಮದುವೆಗಳ ಪೈಕಿ ದೇವನೂರು ಗ್ರಾಮದ ಮಿ. ಅರ್ಜೇಂಗಳ ಪೂವಯ್ಯನವರ ಮಗನ ಮದುವೆಯೊಂದರಲ್ಲಿಯೂ, ಮಡಿಕೇರಿಯಲ್ಲಿ ನಡೆದ ಮದುವೆಗಳಲ್ಲಿ ಮಿ. ನಾಪನೆರವಂಡ ಅಚ್ಚಯ್ಯನವರ ಲಗ್ನದಲ್ಲೂ, ಮಿ. ಕೊಂಗಂಡ ಸುಬ್ಬಯ್ಯನವರ ಮಗಳ ಲಗ್ನದಲ್ಲೂ, ಮಿ. ಪಟ್ಟಮಾಡ ಡಿ. ಕೃಷ್ಣಪ್ಪನವರ ಮಗನ ಲಗ್ನದಲ್ಲೂ ಅಮಲು ಪದಾರ್ಥವು ಸೇರಿಸಲಾಗಿತ್ತು. ಒಂದು ವೇಳೆ ನನ್ನ ಗೋಚರಕ್ಕೆ ಬಾರದ ಇನ್ನು ಕೆಲವು ಇಂಥಾ ಲಗ್ನಗಳು ಇರಬಹುದು. ಹೇಗೂ ಮೊದಲು ನಿಷಾ ಸೇರಿಸಿದವರ ಕೀರ್ತಿಯು ಹೇಗೆ ಜನತೆಯಲ್ಲಿ ಹಬ್ಬುತ್ತಿತ್ತೋ? ಹಾಗೆಯೇ ಈ ಮಹನೀಯರುಗಳ ಹೆಸರುಗಳು ಈಗ ಜನತೆಯ ಬಾಯಲ್ಲಿ ಇವೆ. ಜನತೆಯಲ್ಲಿ ಬಡತನವು ವಿಪರೀತವಾಗುತ್ತಿರುವ ಈ ಸಮಯದಲ್ಲಿ ಅದಕ್ಕೆ ಮುಖ್ಯ ಕಾರಣಗಳಲ್ಲಿ ಒಂದಾದ ನಿಷಾ ಸೇವನೆಯನ್ನು ಹೋಗಲಾಡಿಸಲು ಪ್ರಾಂತೀಯ ಸರ್ಕಾರಗಳೇ ನಿಷಾ ನಿಷೇಧವನ್ನು ಕಾನೂನು ರೀತಿಯಿಂದ ಸಾಧಿಸುತ್ತಿರುವಂಥಾ ಈ ಸಮಯದಲ್ಲಿ ನಮ್ಮ ದೇಶೀಯರಲ್ಲಿ ಕೆಲವರು ನಿಷಾ ಸೇವನೆಗೆ ಇನ್ನೂ ಪ್ರೋತ್ಸಾಹವನ್ನೀಯುತ್ತಿರುವದು ನಾಚಿಕೆಗೇಡೂ, ವ್ಯಸನಕರವೂ ಆಗಿದೆ. ಅನುಕೂಲಸ್ಥರೂ, ಅಧಿಕಾರ ಪದವಿಯವರೂ ಜನತೆಗೆ ಉತ್ತಮವಾದ ಉದಾಹರಣೆಯನ್ನು ಹಾಕುತ್ತಿರುವುದನ್ನೂ ಕೂಡ ಕೆಲವರು ನಿರ್ಲಕ್ಷ್ಯ ಮಾಡುತ್ತಿರುವದು ವ್ಯಸನಕರ. ಕೊಡಗಿನ ದೇಶೀಯ ಉದ್ಯೋಗಸ್ಥರ ಪೈಕಿ ಅತೀ ಉಚ್ಚ ಪದವಿಯಲ್ಲಿರುವ ರಾ. ಸಾ. ಮಂದೇಪಂಡ ಮೊಂದಣ್ಣನವರು ತಮ್ಮ ಸಹೋದರನ ಮದುವೆಯಲ್ಲಿ ನಿಷಾ ಸೇವನೆಯನ್ನು ವರ್ಜಿಸಿದ್ದು ಶ್ರೇಯಸ್ಕರವಾಗಿದೆ. ಮದ್ರಾಸು ಪ್ರಾಂತದಲ್ಲಿ ನಿಷಾ ನಿಷೇಧವನ್ನು ಸಾಧಿಸುತ್ತಿರುವ ಸರ್ಕಾರದ ಒಬ್ಬ ಗಜೆಟೆಡ್ ಉದ್ಯೋಗಸ್ಥರಾದ ರಾ. ಬ. ಕಡೇಮಾಡ ಬೆಳ್ಳಪ್ಪನವರೂ ಈ ನಿಷಾ ನಿಷೇಧದ ಒಳ್ಳೇ ಪರಿಣಾಮವನ್ನು ಮನಗಂಡವರಾಗಿ ತನ್ನ ಪುತ್ರಿಯ ಲಗ್ನದಲ್ಲಿ ನಿಷಾ ಭೂತಕ್ಕೆ ಎಡೆಕೊಡದಿದ್ದದ್ದು ಸ್ತೋತ್ರಾರ್ಹವಾಗಿದೆ. ಈ ಇಬ್ಬರು ಮಹನೀಯರು ಐಶ್ವರ್ಯದಲ್ಲಿ ಕಡಿಮೆ ಇಲ್ಲದವರಾದರೂ ಈ ವಿಚಾರಕ್ಕೆ ಎಷ್ಟಷ್ಟು ಹಣ ಖರ್ಚು ಮಾಡಲು ಅನುಕೂಲವಿದ್ದವರಾಗಿದ್ದರೂ ಕೂಡ ಅವರು ಅಮಲು ಪದಾರ್ಥದ ದುಷ್ಪರಿಣಾಮವನ್ನು ತಪ್ಪಿಸಿಕೊಂಡಂತೆಯೇ ಜನತೆಗೆ ಮುಂದಿಟ್ಟು ಮಾಡುವ ಉದ್ದಿಶ್ಯ ಉತ್ತಮವಾದ ಉದಾಹರಣೆಯನ್ನು ಹಾಕಿದ್ದಕ್ಕೆ ದೇಶದವರು ಇವರಿಗೆ ತುಂಬಾ ಕೃತಜ್ಞರಾಗಿರುವರು. ಇವರಂತೆಯೇ ಬೇರೆ ಐಶ್ವರ್ಯವಂತರೂ ಕೂಡ ಈ ಮೊದಲೇ ನಿಷಾ ವರ್ಜನೆಮಾಡಿರುವರು. ಇವರಿಗೂ ಇವರ ಉದಾಹರಣೆಯನ್ನು ಹಿಂಬಾಲಿಸಿ ಅಮಲು ಪದಾರ್ಥ ಸೇರಿಸದೆ ಲಗ್ನ ಕಾರ್ಯವನ್ನು ನಡೆಸಿದ ಹಲವು ಮಹನೀಯರಿಗೂ ನಾನು ಈ ಮೂಲಕ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇನೆ. ಇನ್ನಾದರೂ ನಮ್ಮ ದೇಶೀಯರು ಕಷ್ಟರೆಂದು ತಮ್ಮ ಶುಭಶೋಭನಗಳಲ್ಲಿ ಈ ನಿಷಾ ಪಿಶಾಚಿಗೆ ಎಡೆಕೊಡದೆ ದೇಶೋದ್ಧಾರಕ್ಕಾಗಿ ಕಾಂಗ್ರೆಸ್ ಸಂಸ್ಥೆಯು ಮಾಡುತ್ತಿರುವ ನಿಷಾ ನಿಷೇಧ ಕಾರ್ಯಕ್ರಮಕ್ಕೆ ಬೆಂಬಲವನ್ನಿತ್ತು ಜನತೆಯ ಕೃತಜ್ಞತೆಗೆ ಪಾತ್ರರಾಗಬೇಕಾಗಿ ಅತೀ ವಿನಯದಿಂದ ಬೇಡಿಕೊಳ್ಳುತ್ತೇನೆ.

'ಕಾಂಗ್ರೆಸ್ ಮೆಂಬರ್‌'

ರುವರು. ಅಂದ ಮೇಲೆ ಎಡ ಪಕ್ಷದ ಗುಂಪುಗಳನ್ನೆಲ್ಲಾ ಒಂದುಗೂಡಿಸಲು ಮಾಡುವ ಪ್ರಯತ್ನವು ಇದಾಗಿರಲಾರದು. ಸುಭಾಷರಿಗೂ, ಮಹಾತ್ಮರಿಗೂ ಇರುವ ತತ್ವಭೇದಗಳ ಫಲಿತಾಂಶವೇ ಈ ಹೊಸ ಪಕ್ಷಕ್ಕೆ ಕಾರಣವೆಂದು ತೋರುತ್ತದೆ. ಇದನ್ನು ವಿಶದಪಡಿಸಿದರೆ ಹೊಸ ಪಕ್ಷಕ್ಕೆ ಹೆಚ್ಚಿನ ಬೆಂಬಲ ದೊರೆಯಲಾರದೆಂಬ ಕಾರಣದಿಂದ ಈ ಹೊಸ ಪಕ್ಷವು ಮಹಾತ್ಮರ ತತ್ವಗಳನ್ನೇ ಅನುಸರಿಸಿ ನಡೆಯುವದೆಂದು ಹೇಳುತ್ತಿರುವದಾಗಿದೆ. ಹೇಗೂ ಈ ಬಿಕ್ಕಟ್ಟಿನ ಸಮಯದಲ್ಲಿ ಕಾಂಗ್ರೆಸ್ಸಿನ ಒಗ್ಗಟ್ಟನ್ನೂ, ಬಲವನ್ನೂ ಕಾಪಾಡಿಕೊಂಡು ಸ್ವಾತಂತ್ರ್ಯ ಹೋರಾಟವನ್ನು ಜಯಪ್ರದವಾಗಿ ನಡೆಸಲು ಮಹಾತ್ಮರ ಮುಂದಾಳುತನ ಹಾಗೂ ತತ್ವಗಳನ್ನೇ ಅನುಸರಿಸಿ ಎಲ್ಲರೂ ನಡೆಯಬೇಕೆಂಬುವುದರಲ್ಲಿ ಸಂದೇಹವಿಲ್ಲ.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ಸಾಲನಿವಾರಣೆ ಬೋರ್ಡು ಮಸೂದೆಯನ್ನು ಚರ್ಚಿಸಲು ಏರ್ಪಡಿಸಲ್ಪಟ್ಟಿರುವ ಕೌನ್ಸಿಲು ಸಭೆಯ ಸಿಲೆಕ್ಟ್ ಕಮಿಟಿಯ ಮೀಟಿಂಗು ಈ ತಾ. 22 ರಲ್ಲಿ ಮಡಿಕೇರಿಯಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಕೊಡಗು ಪ್ರಾಂತೀಕ ಮುಸ್ಲಿಂಲೀಗಿನ ಪ್ರಥಮ ಸಮ್ಮೇಳನವು ಈ ತಾ. 16 ರಲ್ಲಿ ಇಲ್ಲಿ ಮಲಬಾರಿನ ಹಾಜಿ ಅಬ್ದುಲ್ ಸತ್ತಾರ್ ಇಸ್ಸಾಕ್ ಸೇಟ್ ಯಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನಡೆಯಲಿರುವದು.

ಡಿಸ್ಟ್ರಿಕ್ಟ್ ಬೋರ್ಡಿನ ಕೈಕೆಳಗೆ ಅವಶ್ಯವಿರುವಲ್ಲಿ ಶಾಲೆಗಳನ್ನು ಹೆಚ್ಚಿಸಲು ಮತ್ತು ಅನಾವಶ್ಯದ ಶಾಲೆಗಳನ್ನು ಮುಚ್ಚುವ ಬಗ್ಗೆ ವಿಚಾರ ನಡೆಸಲು ನೇಮಿಸಿದ ಡಿಸ್ಟ್ರಿಕ್ಟ್ ಬೋರ್ಡಿನ ಉಪಸಮಿತಿಯ ಮೀಟಿಂಗು ತಾರೀಕು 18 ರಲ್ಲಿ ಇಲ್ಲಿ ನಡೆಯುವದು.

ಯಾಲಕ್ಕಿ ವ್ಯಾಪಾರ ಮಾಡುತ್ತಿರುವ ಶ್ರೀ ಅಪ್ಪನೆರವಂಡ ಅಚ್ಚಪ್ಪನವರಿಗೆ ಗೋವಾ ಲಾಟರಿಯಲ್ಲಿ ರೂ. 1000 ಬಹುಮಾನವು ಬಂದಿರುವದಾಗಿ ತಿಳಿಯುತ್ತೇವೆ.

ಇಲ್ಲಿಯ ವಕೀಲರಾದ ಶ್ರೀ ಎನ್. ಆರ್. ಗೋಪಾಲಕೃಷ್ಣರವರು ಹೊರಗೆ ತನ್ನ ಕೋಟನ್ನು ತೂಗಿಟ್ಟು ಊಟ ಮಾಡುತ್ತಿದ್ದಾಗ ಅವರ ಜೇಬಿನಿಂದ ಹಣದ ಪಾಕೆಟನ್ನು ಕದ್ದು ಓಡಿ ಹೋಗಿದ್ದ ಕಳ್ಳನನ್ನು ಅವರ ಅಣ್ಣ ಶ್ರೀ ಎನ್. ಆರ್. ಸುಬ್ರಾಯನವರ ಪರಿಶ್ರಮದಿಂದ ಪತ್ತೆಹಚ್ಚಲಾಗಿದೆಯೆಂದೂ ಬರೇ ಎಂಟು ರೂಪಾಯಿ ಮಾತ್ರ ಆತನಲ್ಲಿ ಸಿಕ್ಕಿರುವದಾಗಿಯೂ ವರ್ತಮಾನ.

ಈ ತಾ. 12 ರಲ್ಲಿ ನಡೆಯಬೇಕಾಗಿದ್ದ ಟೆಕ್ಸ್ಟ ಬುಕ್ ಕಮಿಟಿ ಮೀಟಿಂಗಿನಲ್ಲಿ ಡಿಸ್ಟ್ರಿಕ್ಟ್ ಎಡ್ಯುಕೇಶನಲ್ ಆಫೀಸರು, ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರು, ವೀರಾಜಪೇಟೆ ಮುನ್ಸಿಪಾಲಿಟಿ ಪ್ರೆಸಿಡೆಂಟರು ಮತ್ತು ಮಡಿಕೇರಿ ಹೈಸ್ಕೂಲು ಹೆಡ್ಮಾಸ್ಟರವರು ಮಾತ್ರ ಹಾಜರಿದ್ದು ಮಡಿಕೇರಿ ಮುನ್ಸಿಪಾಲಿಟಿ ಪ್ರೆಸಿಡೆಂಟರು, ಮಡಿಕೇರಿ ಕಾನ್ವೆಂಟ್ ಹೈಸ್ಕೂಲು ಹೆಡ್ ಮಿಸ್ಟ್ರೆಸ್‌ರವರು ಮತ್ತು ವೀರಾಜಪೇಟೆ ಹೈಸ್ಕೂಲು ಹೆಡ್ಮಾಸ್ಟರವರು ಗೈರ್ಹಾಜರಾಗಿದ್ದ ಕಾರಣ ಕೋರಂ (ಐದು ಮೆಂಬರುಗಳು) ಇಲ್ಲದೆ ಮೀಟಿಂಗು ಬಾಕಿ ಮಾಡಲಾಯಿತೆಂದು ತಿಳಿಯಬರುತ್ತದೆ.

ವೀರಾಜಪೇಟೆ.

ಎಡೆನಾಲ್ಕುನಾಡು ಕುಕ್ಲೂರು ಗ್ರಾಮದ ಭದ್ರಕಾಳಿ ದೇವರ ಹಬ್ಬವು ಈ ತಾರೀಕು 22,23, ಮತ್ತು 24 ರಲ್ಲಿ ಜರಗುವದೆಂದು ತಿಳಿಸುತ್ತಾರೆ.

ಇಲ್ಲಿಯ ತಾಲೋಕು ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಕಂಜಿತಂಡ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನೆರೆದು ಶಾಲಾ ಫೀಜನ್ನು ಹೆಚ್ಚಿಸಿದ, ಹುಡುಗಿಯರ ಶಾಲೆಯನ್ನು ವಜಾ ಮಾಡಿದ ಮತ್ತು ದೊಡ್ಡಿ ಚಾರ್ಜನ್ನು ಹೆಚ್ಚಿಸುವ ವಿಚಾರ ನಿಷೇಧಿಸಿ ಠರಾವುಗಳನ್ನು ಮಂಜೂರ್ಮಾಡಿತು.

ನಾಪೋಕ್ಲು.

ಹಿಂದೀ ಪರೀಕ್ಷೆಗೆ ಇಲ್ಲಿ ಕೂತವರಲ್ಲಿ ಶ್ರೀಮತಿ ಯಂ. ಗೌರಮ್ಮನವರೂ ಮತ್ತು ಎ. ಟಿ. ರಾಮಾಚಾರಿಯವರೂ ಮಾಧ್ಯಮಿಕ ಪರೀಕ್ಷೆಯಲ್ಲಿ ಪಾಸಾಗಿರುವರು.

ನಿಧನ ವಾರ್ತೆ.

ಉತ್ತರ ಕೊಡಗಿನ ಸರ್ವೆಯರಾಗಿದ್ದ ಶ್ರೀ ಮಾತಂಡ ಪೊನ್ನಪ್ಪನವರು ತಾ. 10 ರಲ್ಲಿ ಮಡಿಕೇರಿ ಆಸ್ಪತ್ರೆಯಲ್ಲಿಯೂ, ಕಾನ್ವೆಂಟಿನಲ್ಲಿ 1 ನೇ ಫಾರಂನಲ್ಲಿ ಓದುತ್ತಿದ್ದ ಶ್ರೀ ನಾಣಮಂಡ ಮುದಪ್ಪನವರ ಪುತ್ರಿಯೂ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಶನಿವಾರಸಂತೆ.

ಕೊಡಗು ಸಂಜರಾಯ ಪಟ್ಣ ತಾಲೋಕಿನ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ತಾ. 13-5-39 ರಲ್ಲಿ ಇಲ್ಲಿ ನಡೆಯುವದು.

ಪೊನ್ನಂಪೇಟೆ.

ಹತ್ತುಗಟ್ಟುನಾಡು ಕೊಟ್ಟಗೇರಿ ಗ್ರಾಮದ ಅಳಮೇಂಗಡ ಕುಟ್ಟಪ್ಪನವರಿಗೆ ಹುಚ್ಚು ಗುಳ್ಳೇನರಿ ಕಚ್ಚಿ 48 ದಿವಸಗಳ ನಂತರ ಹುಚ್ಚು ಹಿಡಿದು ಈ ತಾ. 6 ರಲ್ಲಿ ಶಿವಾಧೀನರಾದರೆಂದೂ, ಹುಚ್ಚುನಾಯಿ ಕಡಿತದಿಂದ ಬಾಳೆಲೆ ಗ್ರಾಮದ ಹರಿಜನ ಸ್ತ್ರೀಯೊಬ್ಬಳು ಮೃತಳಾದಳೆಂದೂ, ಆ ಪ್ರಾಂತ್ಯದಲ್ಲಿ ಹುಚ್ಚು ನರಿ ಮತ್ತು ನಾಯಿಗಳ ಕಾಟ ಹೆಚ್ಚಾಗಿದೆಯೆಂದೂ ವರ್ತಮಾನ.

ಕಿರುಗೂರಿನ ಸಹಕಾರ ಶಾಲೆಯು ಈಗ ತಾನೇ ಬಡಾವಣೆ ಹೊಂದಿದೆಯೆಂದೂ, ಪೊನ್ನಂಪೇಟೆ ಹುಡುಗಿಯರ ಶಾಲೆಯು ಮುಚ್ಚಲ್ಪಟ್ಟಿರುವ ಪ್ರಯುಕ್ತ ಮಕ್ಕಳ ಸಂಖ್ಯೆಯು ಪೊನ್ನಂಪೇಟೆ ಹುಡುಗರ ಶಾಲೆಯಲ್ಲಿ ಜಾಸ್ತಿಯಾಗಿ ಅನಾನುಕೂಲವಾದಂಥಾ ಈ ಸಂದರ್ಭದಲ್ಲಿ ಈ ಶಾಲೆಯಲ್ಲಿ 5ನೇ ತರಗತಿಯನ್ನು ತೆರೆದು ಪೊನ್ನಂಪೇಟೆಗೆ ಹೋಗುವ ಮಕ್ಕಳು ಇದೇ ಶಾಲೆಗೆ ಬರುವಂತೆ ಏರ್ಪಡಿಸಿರುವರೆಂದೂ ತಿಳಿದುಬರುತ್ತದೆ.

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಆಯಾಯ ಶಾಲೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆಯೂ ಶೇಕಡ ಎಷ್ಟು ಪಾಸಾದಂತಾಯಿತೆಂಬುದನ್ನೂ ಇಲ್ಲಿ ಕೊಟ್ಟಿರುವೆವು. ಕಕ್ಕಬೆ. 10, ಅಂದರೆ 83%. ಪಾಸಾದಂತಾಯಿತು. ಮಡಿಕೇರಿ ಹುಡುಗಿಯರ ಹೈಸ್ಕೂಲ್ 23, 72%. ಸೋಮವಾರಪೇಟೆ 11, 69%. ಮಡಿಕೇರಿ 15, 68%. ಹೈಸ್ಕೂಲ್ ವೀರಾಜಪೇಟೆ 44, 63%. ಕೊಡ್ಲಿಪೇಟೆ 9, ಅಂದರೆ 60%. ಪೊನ್ನಂಪೇಟೆ 18 ಅಂದರೆ 60%. ಕೊಟ್ಟೂರು 10, ಅಂದರೆ 59%. ಮಡಿಕೇರಿ ಹೈಸ್ಕೂಲ್ 45, ಅಂದರೆ54%. ಅಮ್ಮತ್ತಿ 15, ಅಂದರೆ 52%. ಮೂರ್ನಾಡು 6, ಅಂದರೆ 38%. ಶಾಕೋಟು ಪರಂಬು 8, ಅಂದರೆ 38%. ನಾಪೋಕ್ಲು 10, ಅಂದರೆ 29%.

ಹಿಂದೂದೇಶ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆಯು ಜೂನ್ 6 ರಲ್ಲಿ ಬೊಂಬಾಯಿಯಲ್ಲಿ ನಡೆಯುವದು.

ಕಾಶಿಯಲ್ಲಿ 'ದಿ ಬೆನಾರಿಸ್ ಬ್ಯಾಂಕ್ ಲಿಮಿಟೆಡ್' ಎಂಬ ಸಂಸ್ಥೆ ತನ್ನ ವಹಿವಾಟುಗಳನ್ನು ನಿಲ್ಲಿಸಿ ಬಾಗಿಲು ಮುಚ್ಚಿದೆ.

ಬರ್ಮದಿಂದ ಇಂಡಿಯಾಕ್ಕೆ ಸಲ್ಲತಕ್ಕ 50 ಕೋಟಿ ರೂಪಾಯಿಗಳಲ್ಲಿ ವರ್ಷಕ್ಕೆ 2½ ಲಕ್ಷದಂತೆ 43 ವರ್ಷಗಳ ಕಾಲ ಆ ದೇಶವು ತೆರಬೇಕೆಂದು ವಿಧಿಸಲಾಗಿದೆ.

ಆಚಾರ್ಯ ಚಂದ್ರಶೇಖರ ಶಾಸ್ತ್ರಿ ಎಂಬವರಿಂದ ಬರೆಯಲ್ಪಟ್ಟ 'ಹಿಂದೀ ಭಯೋತ್ಪಾದಕ ಚಳವಳದ ಇತಿಹಾಸ' ವೆಂಬ ಗ್ರಂಥವು ಡಿಲ್ಲಿ ಪ್ರಾಂತ್ಯದಲ್ಲಿ ಸರ್ಕಾರದಿಂದ ಬಹಿಷ್ಕರಿಸಲ್ಪಟ್ಟಿದೆ.

ಶ್ರೀ ಆರ್. ಕೆ. ಸಿದ್ವಾ, ಎಂ. ಎಲ್. ಎ. (ಕಾಂಗ್ರೆಸ್) ಇವರು ಕರಾಚಿಯ ಮೇಯರರಾಗಿ ಆರಿಸಲ್ಪಟ್ಟಿರುವರು. ಈ ಗೌರವವನ್ನು ಸಂಪಾದಿಸಿದವರಲ್ಲಿ ಇವರೇ ಮೊದಲನೆಯ ಕಾಂಗ್ರೆಸಿನವರು.

ಹೈದರಬಾದ್ ಸತ್ಯಾಗ್ರಹದ ಸಂಬಂಧ ಗುಲ್ಬರ್ಗಾ ಜೈಲಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿದ್ದ ಲೈಲಾಪುರ ಜಿಲ್ಲೆಯ ಧೋಟಿ ಲಾಲ್ಜಿ ಎಂಬ ಸ್ವಯಂ ಸೇವಕನು ಮೃತನಾದನು. ಈತನ ಶವವನ್ನು ಇತರ ಸತ್ಯಾಗ್ರಹಿಗಳು ಮೆರವಣಿಗೆಯಲ್ಲಿ ಕೊಂಡೊಯ್ದು ಸಾರ್ವಜನಿಕ ಭಾಷಣಗಳೂ ನಡೆದವು. ಜೈಲಲ್ಲೇ ಮೃತರಾದ ಆರ್ಯ ಸತ್ಯಾಗ್ರಹಿಗಳಲ್ಲಿ ಈತನು ಆರನೆಯವನೆಂದು ಹೇಳಲಾಗಿದೆ.

ಮದ್ರಾಸ್ ಕಾರ್ಪರೇಶನ್, ವಿದ್ಯಾಕಾರ್ಯಕ್ಕಾಗಿ ವರ್ಷಕ್ಕೆ ಸುಮಾರು 11 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಿದೆಯೆಂದೂ, ಸುಮಾರು 6 ಸಾವಿರ ಮಂದಿ ವಿದ್ಯಾರ್ಥಿಗಳಿಗೆ ತಲಾ 6 ಪೈಯಂತೆ ಉತ್ತಮವಾದ ಮಧ್ಯಾಹ್ನದ ಊಟವನ್ನು ಅದು ಒದಗಿಸುತ್ತಿದೆಯೆಂದೂ, ದುಡ್ಡಿನ ಅಡಚಣೆಯಿಂದ ಶಾಲೆಗಳಿಗೆ ಹೋಗುವ ವಯಸ್ಸಿನ ಎಲ್ಲ ಮಕ್ಕಳಿಗೂ ಆ ಕಾರ್ಪರೇಶನ್ ವಿದ್ಯಾದಾನ ಮಾಡಲು ಶಕ್ತವಾಗಿಲ್ಲವೆಂದೂ ಪ್ರಕಟವಾಗಿದೆ.

ಬೊಂಬಾಯಿ ಅಧಿಪತ್ಯದ ಕಾಂಗ್ರೆಸ್ ಸರ್ಕಾರದವರು ಅಲ್ಪ ಬೆಲೆಯ ಸ್ಥಿರಸ್ವತ್ತುಗಳನ್ನು ಪಡೆದಿರುವ ಬಡವರಿಂದ ಆಸ್ತಿಯ ತೆರಿಗೆಯನ್ನು ವಸೂಲ್ಮಾಡುವುದನ್ನು ತಪ್ಪಿಸಬೇಕೆಂದು ನಿಶ್ಚೈಸಿರುತ್ತಾರೆ. ಬೊಂಬಾಯಿಯಲ್ಲಿರುವ ಆಸ್ತಿಯ ಬೆಲೆ 500 ರೂಪಾಯಿಗಿಂತ ಕಡಮೆಯಾಗಿದ್ದರೂ ಶೋಲಾಪುರ ಮತ್ತು ಅಹಮದಾಬಾದಿನಲ್ಲಿರುವ ಆಸ್ತಿಯ ಬೆಲೆ 200 ರೂಪಾಯಿಗಿಂತ ಕಡಮೆಯಾಗಿದ್ದರೂ ಅಂಥಾ ಆಸ್ತಿಯನ್ನು ಪಡೆದಿರುವ ಬಡವರು ಅವುಗಳಿಗೆ ತೆರಿಗೆಯನ್ನು ಕೊಡುವುದು ತಪ್ಪಿಹೋಗುತ್ತದೆ. ಇದರಿಂದ ಕೆಲವು ಗ್ರಾಮಗಳಲ್ಲಿ ಸರಕಾರದ ಆದಾಯ ಶೇಕಡ ಐವತ್ತರಷ್ಟು ಬಿದ್ದುಹೋಗುವುದೆಂದೂ ಬಡವರಿಗೆ ಬಹಳ ಉಪಕಾರವಾಗುವುದೆಂದೂ ಹೇಳಲಾಗಿದೆ.

ಅಖಿಲ ಭಾರತ ಗಾಂಧಿ ಸೇವಾ ಸಂಘದ 5 ನೇ ಸಮ್ಮೇಳನದಲ್ಲಿ ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರು ರಾಷ್ಟ್ರ ಧ್ವಜವನ್ನೇರಿಸಿದರು. ಶ್ರೀ ಕಿಶೋರ್‌ಲಾಲ್ ಗನಶಾಮಲಾಲ್ ಮಶ್ರೂವಾಲಾರವರು ಅಧ್ಯಕ್ಷತೆ ವಹಿಸಿದ್ದರು. ಮಹಾತ್ಮಾಜಿಯವರು ಪ್ರದರ್ಶನವನ್ನು ತೆರೆಯುವ ಸಂದರ್ಭದಲ್ಲಿ ಪುಟ್ಟ ಭಾಷಣವನ್ನು ಮಾಡಿದರು. ಪ್ರತಿಯೊಬ್ಬನ ಧ್ಯೇಯವೂ, ಕರ್ತವ್ಯವೂ ದೇಶೀಯ ಕೈಗಾರಿಕೆಗಳನ್ನೂ, ಖಾದಿಯನ್ನೂ ಪ್ರೋತ್ಸಾಹಿಸುವುದೇ ಆಗಿರಬೇಕು. ಗ್ರಾಮ ಕೈಗಾರಿಕೆಗಳಿಗೆ ಬೇಕಾದ ವಸ್ತುಗಳಿಗೆ ಕಚ್ಚಾ ಪದಾರ್ಥಗಳಿಗೆ ನಮ್ಮಲ್ಲಿ ಅಭಾವವಿಲ್ಲ. ಸಿಹಿಯಾದ ತಾಳೆ ರಸವನ್ನು ನಾವು ಬೆಲ್ಲಕ್ಕಾಗಿ ಉಪಯೋಗಿಸಬಹುದು. ಈ ಸಿಹಿ ರಸವನ್ನು ಎಲ್ಲರೂ ಕುಡಿಯಬಹುದು. ಇನ್ನು ಖಾದಿಯ ವಿಚಾರವಾಗಿ ಹೇಳುವದಿದ್ದರೆ ಇಷ್ಟು ಅನ್ನಬಹುದು. 'ಖಾದಿಯನ್ನು ಧರಿಸದ ಅಥವಾ ಪ್ರೋತ್ಸಾಹಿಸದ ಮಂದಿ ಭಾರತದಲ್ಲಿ ಬದುಕಿರಲರ್ಹರಲ್ಲ' ಎಂದರು.

ಯೂರೋಪಿನಲ್ಲಿ ಯುದ್ಧವು ಸಂಭವಿಸಿದಾಗ ರೈತಾಪಿ ಗಂಡಸರೆಲ್ಲರೂ ದೇಶಸಂರಕ್ಷಣಾರ್ಥವಾಗಿ ಸೈನ್ಯಕ್ಕೆ ಸೇರಿ ಯುದ್ಧಭೂಮಿಗೆ ಹೋಗಬೇಕಾಗಿರುವುದರಿಂದ ಆಗ್ಗೆ ಭೂ ವ್ಯವಸಾಯವು ನಿಂತು ಹೋಗಿ ಆಹಾರದ ಅಭಾವ ಉಂಟಾಗುವದೆಂದೂ ತಿಳಿದು ಬ್ರಿಟಿಷ್ ಸರ್ಕಾರದ ವ್ಯವಸಾಯ ಖಾತೆಯವರು ಒಂದು ಹೊಸ ಏರ್ಪಾಡನ್ನು ಜಾರಿಗೆ ತರುವ ಯೋಚನೆ ಮಾಡಿರುತ್ತಾರೆ. ಯುದ್ಧ ಸಮಯದಲ್ಲಿ ಬೇಸಾಯದ ಕಸಬನ್ನು ನಡಿಸಲು ಇಷ್ಟಪಡುವ ಮಹಿಳಾ ಸ್ವಯಂ ಸೇವಕಿಯರಪಡೆಯೊಂದನ್ನು ದೇಶದಲ್ಲಿ ಶಾಂತಿ ನೆಲಸಿರುವ ಸಮಯದಲ್ಲಿ ಶೇಖರಿಸಬೇಕೆಂದು ಸಿದ್ಧಪಡಿಸುತ್ತಲಿದ್ದಾರೆ.

ನೋಟೀಸು.

ಕೊಡಗು ಜಮಾನ್ದಾರರ ಸಂಘದ ವಾರ್ಷಿಕ ಮಹಾ ಸಭೆಯನ್ನು ನಡಿಸುವ ವಿಚಾರ ತೀರ್ಮಾನಿಸಲು ಈ ಸಂಘದ ಕಾರ್ಯಕಾರಿ ಮಂಡಳಿಯ ಮೀಟಿಂಗೊಂದು ಈ ತಾ. 16 ನೇ ಮಂಗಳವಾರ ಮಧ್ಯಾಹ್ನದ ಮೇಲೆ 2 ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವುದು. ಕಮಿಟಿ ಮೆಂಬರುಗಳೆಲ್ಲರೂ ದಯವಿಟ್ಟು ತಪ್ಪದೆ ಬರಬೇಕಾಗಿ ಕೋರಿಕೆ.

ಮಡಿಕೇರಿ, ಪಿ. ಜಿ. ಅಯ್ಯಪ್ಪ
ತಾ. 3-5-39 ಗೌ. ಕಾರ್ಯದರ್ಶಿ

2-1

ಮುನ್ನಡೆಯ ಪಕ್ಷದ ಮೂಲ ಧ್ಯೇಯ.

ಮುಂದಿನ ಚಳವಳಕ್ಕೆ ಜನತೆಯನ್ನು ಸಿದ್ಧಪಡಿಸುವುದು. ಜನತೆಯಲ್ಲಿ ಕ್ರಾಂತೀ ಬೀಜವನ್ನು ಬಿತ್ತುವುದು. ಕಾಂಗ್ರೆಸ್ ಕಾರ್ಯಕರ್ತರಲ್ಲಿರುವ ಅಧಿಕಾರ ಲಾಲಸೆಯನ್ನು ಕಿತ್ತೊಗೆಯುವುದು ಭಾರತದಲ್ಲಿ ಶಿಸ್ತಿನ ಸ್ವಯಂ ಸೇವಕ ದಳವನ್ನು ಸ್ಥಾಪಿಸುವುದು. ಕಾಂಗ್ರೆಸಿನಲ್ಲಿಯ ವಿವಿಧ ಪಕ್ಷಗಳಲ್ಲಿ ಸ್ನೇಹ ಸರಣಿಯನ್ನು ಜೋಡಿಸಿ ಏಕೀಕರಿಸುವುದು. ಅಂತು ಶೀಘ್ರದಲ್ಲಿಯೇ ಭಾರತ ಸ್ವಾತಂತ್ರ್ಯವನ್ನು ಗಳಿಸುವುದು.

‘ಕಾಂಗ್ರೆಸಿನ ಅಧಿಕಾರಿ ಪಕ್ಷಕ್ಕೂ ಹೊಸದಾದ ಕಾಂಗ್ರೆಸಿನ ಮುನ್ನಡೆಯ ಪಕ್ಷಕ್ಕೂ ಭೇದವೇನೆಂಬ ಪ್ರಶ್ನೆಯು ಬರುವದು ವಾಸ್ತವ, ಇದನ್ನು ವಿವರಿಸುವದಾದರೆ ಇವುಗಳೊಳಗೆ ಪ್ರಾಮುಖ್ಯವಾಗಿ ಎರಡು ಭೇದಗಳಿರುವವು. ಈ ಹೊಸ ಪಕ್ಷವು ಈಗಿನ ಕಾಂಗ್ರೆಸಿನ ಧ್ಯೇಯ ಹಾಗೂ ಕಾರ್ಯಕ್ರಮಗಳನ್ನು ಸುಧಾರಿತ ರೀತಿಯ ಕ್ರಾಂತಿಕಾರಕ ಮಾರ್ಗದಿಂದ ಸಾಧಿಸಲೆಳಸುತ್ತದೆ. ಎರಡನೇದಾಗಿ ಅದಕ್ಕೆ ತನ್ನದೇ ಆದ ಒಂದು ಕಾರ್ಯಕ್ರಮವಿರುವದು. ಅದನ್ನು ಕಾಂಗ್ರೆಸು ಅಂಗೀಕರಿಸುವಂತೆ ಅದು ಪ್ರೇರೇಪಿಸುವದು. ಈ ಕಾರ್ಯಕ್ರಮದ ಮುಖ್ಯ ಧ್ಯೇಯವಾದರೂ ಆದಷ್ಟು ಬೇಗನೆ ಭಾರತ ಸ್ವಾತಂತ್ರ್ಯ ಸಂಪಾದನೆಯಾಗಿದೆ. ಈ ಮುನ್ನಡೆಯ ಪಕ್ಷವು ವಿವಿಧ ಕಾಂಗ್ರೆಸ್ ಪಂಗಡಗಳ ರಂಗಭೂಮಿಯಾಗಿರುವದರಿಂದ ಅದು ಎಲ್ಲಾ ಪಂಗಡಗಳೊಡನೆ ಮೈತ್ರಿಯಿಂದ ವರ್ತಿಸುವದು. ಆದ್ದರಿಂದ ಈ ಪಕ್ಷಕ್ಕೆ ತಮ್ಮ ಅನುಯಾಯಿಗಳು ಸೇರಲು ಯಾವ ಪಂಗಡಗಳೂ ನಿಷೇಧಿಸವೆಂದು ನಾನು ಆಶಿಸುವೆನು.

ಕೆಲವು ಸಮಯದಿಂದ ನಾವು ರಾಜಶಾಸನಾನುರೂಪದ ಕಾರ್ಯಕ್ರಮಗಳಿಗೆ ತೊಡಗಿರುವೆವು. ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದಂದಿನಿಂದ ಇದು ಬೆಳೆಯಿತು. ಕಾಂಗ್ರೆಸ್ ಅಧಿಕಾರ ಸ್ವೀಕರಿಸಿದ್ದರಿಂದ ಅದರ ಪ್ರತಿಷ್ಠೆಯು ಹೆಚ್ಚಿದೆಯೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇತ್ತಿತ್ತಲಾಗಿ ಕಾಂಗ್ರೆಸ್ ಮಂತ್ರಿಮಂಡಳಗಳು ಕೇವಲ ತಮ್ಮ ಆಡಳಿತೆಯಲ್ಲಿ ಮಗ್ನರಾಗಿ ತಮ್ಮ ಮೊದಲಿನ ಕ್ರಾಂತಿಕಾರಕ ಗುಣವನ್ನು ಮರೆಯುತ್ತಿರುವರು. ಗಾಂಧೀತತ್ವವಾದ ಅಹಿಂಸಾ ಅಸಹಕಾರದ ಅಮೋಘ ತತ್ವವು ಕ್ರಮೇಣ ಬಿಸಿಲಿನ ಹೂವಿನಂತೆ ಬಾಡುತ್ತಿರುವದು. ಕಳೆದ ಒಂದು ವರ್ಷದಿಂದ ನಾನು ಈ ವಿಚಾರದ ಘೋಷಣೆ ಹೊರಡಿಸಿ ನನಗೆ ಹಿತವೆಂದು ತೋರಿದ ತಕ್ಕ ದಾರಿಯನ್ನು ಮುಂದಿಟ್ಟಿರುವೆನು. ಅಧಿಕಾರದ ಮಾಯಾ ಜಾಲದಲ್ಲಿ ಸಿಕ್ಕಿ ದಿಕ್ಕು ಕಾಣದಂತಾಗಿರುವ ಕಾಂಗ್ರೆಸಿನವರನ್ನು ತಮ್ಮ ಪ್ರಜ್ಞೆಗೆ ತರಬೇಕಾದರೆ ಒಡನೆ 1933 ನೇ ವರ್ಷದಲ್ಲಿ ನಿಲ್ಲಿಸಿದ ಸತ್ಯಾಗ್ರಹವನ್ನು ಕೈಕೊಳ್ಳಬೇಕು. ಆದರೆ ಕಾಂಗ್ರೆಸ್ ಅಧಿಕಾರಿಗಳು ಕೆಲವರು ಇಂಥಾ ಚಳವಳಕ್ಕೆ ಜನತೆಯು ತಯಾರಾಗಿಲ್ಲವೆಂದು ತರ್ಕಿಸುವರು. ಆದರೆ ನನಗೆ ಆ ವಿಧದ ಯಾವ ಸಂಶಯವೂ ಇಲ್ಲ. ತ್ರಿಪುರಿ ಅಧ್ಯಕ್ಷ ಭಾಷಣದಲ್ಲಿ ನನ್ನ ಮನೋಭಾವವನ್ನು ವ್ಯಕ್ತಮಾಡಿರುವೆನು. ಈಗ ದೇಶಕ್ಕೆ ಬೇಕಾದದ್ದು ಮುಖಂಡರ ಅಪ್ಪಣೆ ವಿನಹ ಬೇರಿಲ್ಲ. ಆದ್ದರಿಂದ ನಾವು ಈ ಮುನ್ನಡೆಯ ಪಕ್ಷವನ್ನು ಸ್ಥಾಪಿಸಿದ ಮೂಲೋದ್ದೇಶವಾದರೂ ಇಡೀ ಭಾರತದ ಉದ್ದಗಲಕ್ಕೂ ಪ್ರಚಾರ ಕೆಲಸ ನಡೆಸಿ ಮುಂಬರುವ ಅಮೋಘ ಚಳವಳಕ್ಕೆ ಜನರನ್ನು ಎಚ್ಚರಿಸುವದೇ ಆಗಿದೆ. ಈಗಲಿಂದಲೇ ನಾವು ಈ ಕಾರ್ಯವನ್ನು ಕೈಕೊಂಡದ್ದಾದರೆ ಬರುವ ಅಧಿವೇಶನದಲ್ಲಿ ಸ್ವಾತಂತ್ರ್ಯ ಯುದ್ಧವನ್ನು ಹೂಡುವ ಬಗ್ಗೆ ತಕ್ಕ ಏರ್ಪಾಡುಗಳನ್ನು ಮಾಡಲು ಸಾಧ್ಯವಾಗುವದು. ಆದ್ದರಿಂದ ಮುನ್ನಡೆಯ ಪಕ್ಷದ ಮುಂದಿರುವ ಕಾರ್ಯದ್ವಯಗಳೆಂದರೆ ಜನತೆಯಲ್ಲಿ ಕ್ರಾಂತಿಕಾರಕ ಮನೋಭಾವವನ್ನು ಹುಟ್ಟಿಸುವದು ಮತ್ತು ದೇಶದಲ್ಲೆಲ್ಲಾ ಪ್ರಚಾರಮಾಡಿ ಜನತೆಯನ್ನು ಮುಂದಿನ ಯುದ್ಧಕ್ಕೆ ಸಿದ್ಧರನ್ನಾಗಿ ಮಾಡುವದು.

‘ಮುನ್ನಡೆಯ ಪಕ್ಷ’ದ್ದೆ ಆದ ಕಾರ್ಯಕ್ರಮ ವ್ಯಾವುದೆಂಬ ಶಂಕೆಯು ಕೆಲವರಲ್ಲಿ ಬರಬಹುದು. ಅದನ್ನು ಇಲ್ಲಿ ವಿಶದವಾಗಿ ಹೇಳಲಾರೆ. ಆದರೂ ಅದರ ಮುಖ್ಯೋದ್ದೇಶವು ಮುಂದಿನ ಸಂಗ್ರಾಮದ ತರಬೇತಿಯೇ ಆಗಿದೆ. ಬ್ರಿಟಿಷ್ ಇಂಡಿಯಾದಲ್ಲಿ ಸ್ವಯಂಸೇವಕರ ದಳವೊಂದು ಏರ್ಪಡಬೇಕು. ಇದು ನಮ್ಮಲ್ಲಿ ಶಿಸ್ತನ್ನು ಕಾಪಾಡಲಿಕ್ಕೆ ಮಾತ್ರ ಅವಶ್ಯವಲ್ಲದೆ ಜನತೆಯನ್ನು ಅಹಿಂಸಾಸ್ಫೂರಿತ ಚಳವಳಕ್ಕೆ ತಯಾರು ಮಾಡುವದಕ್ಕೂ ಅಗತ್ಯವಿದೆ. ಈ ವರೆಗೆ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಇಂಥಾದ್ದೊಂದು ಕಾರ್ಯವನ್ನು ಕೈಗೊಳ್ಳದಿದ್ದದ್ದು ತುಂಬಾ ಬೇಸರದ ಸಂಗತಿಯಲ್ಲದೆ, ಅದರ ತಾಟಸ್ಥ್ಯ ಭಾವದಿಂದಾಗಿ ನಮ್ಮ ವಿರೋಧಿಗಳು ಸುಸಜ್ಜಿತರಾಗಲು ಅನುವಾಯಿತು. ಸಂಸ್ಥಾನ ಪ್ರಜೆಗಳ ಮೇಲೆ ವರ್ಕಿಂಗ್ ಕಮಿಟಿಯು ತನ್ನ ಕಣ್ಣಿಡಬೇಕು. ಭಾರತದಲ್ಲಿ ಆರುನೂರಕ್ಕಿಂತ ಹೆಚ್ಚಿಗೆ ಸಂಸ್ಥಾನಗಳಿವೆಯೆಂಬುದನ್ನು ಯಾರೂ ಮರೆಯಬಾರದು. ಬರೇ ರಾಜಕೋಟೆ, ಜಯಪುರಗಳಲ್ಲಿ ಚಳವಳ ನಡೆದರೆ ಸಾಲದು. ಇಡೀ ಸಂಸ್ಥಾನ ಸಮೂಹದಲ್ಲೇ ಕ್ರಾಂತಿಯಾಗಬೇಕು. ಹಿಂದೂಸ್ಥಾನದ ಪ್ರಾಂತಗಳಲ್ಲಿ ಸತ್ಯಾಗ್ರಹ ಚಳವಳವನ್ನು ಕೈಕೊಂಡಾಗ ಸಂಸ್ಥಾನ ಪ್ರಜೆಗಳು ಅದರಲ್ಲಿ ಕಲೆತು ಹೋರಾಡಲು ತಯಾರಾಗಬೇಕು. ಈ ದೃಷ್ಟಿಯಿಂದ ಸಂಸ್ಥಾನ ಕಾಂಗ್ರೆಸನ್ನು ಅಖಿಲ ಭಾರತ ಕಾಂಗ್ರೆಸಿನ ಒಂದು ಅಂಗವಾಗಿ ಮಾಡಬೇಕು. ಮೂರನೆಯದಾಗಿ ಈ ಮುನ್ನಡೆಯ ಪಕ್ಷವು ಸಾರ್ವಭೌಮ ಸರಕಾರ ವಿರೋಧಿಗಳಾದ ಕಿಸಾನ್ ಸಭಾ, ಟ್ರೇಡ್ ಯೂನಿಯನ್ ಕಾಂಗ್ರೆಸ್ ಮೊದಲಾದವುಗಳೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳಬೇಕು. ಇದರಿಂದ ಭಾರತೀಯರು ಏಕೀಕರಿಸಿದಂತಾಗಿ ಮುಂದಿನ ಚಳವಳವು ಬಹಳೇ ಪ್ರಖರವಾದ ರೀತಿಯಿಂದ ಸಾಗಲು ಸಾಧ್ಯವಾಗುವದು. ಕಡೆಯದಾಗಿ ಬ್ರಿಟಿಷ್ ಸರಕಾರವು ಫೆಡರೇಷನನ್ನು ಭಾರತದಲ್ಲಿ ಜಾರಿಗೆ ತರುವ ವರೆಗೆ ನಾವು ತಟಸ್ಥರಾಗಿ ಕುಳಿತು ಅದನ್ನು ಜಾರಿಗೆ ತರುವ ಸಂದರ್ಭದಲ್ಲಿ ಚಳವಳ ಹೂಡಿದರೆ ಆತ್ಮಘಾತುಕ ಮಾಡಿಕೊಂಡಂತಾಗುವದರಿಂದ ಈಗಲೇ ಪ್ರಚಂಡ ನಿರೋಧವನ್ನು ಸೂಚಿಸಿ ಅದನ್ನು ಜಾರಿಗೆ ತರದಂತೆ ಮಾಡಬೇಕು.

ಇಂದಿನ ಅಂತರ ರಾಷ್ಟ್ರೀಯ ಪರಿಸ್ಥಿತಿಯಿಂದ ಯುದ್ಧ ಸಂಭವಿಸಿದರೆ ಬ್ರಿಟಿಷರು ಭಾರತೀಯರ ಸಹಾಯವಿಲ್ಲದೆ ಮುಂದರಿಯಲಾರರು. ಆ ದೃಷ್ಟಿಯಿಂದ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟನ್ನು ತಿದ್ದುಪಡಿ ಮಾಡುವ ಸೂಚನೆಯು ಪಾರ್ಲಿಮೆಂಟಿನ ಮುಂದಿರುವ ಪ್ರಯುಕ್ತ ಅದು ಜಾರಿಗೆ ಬಂದರೆ ನಾವು ಭಾರತೀಯರೇನು ಮಾಡಬೇಕು? ಖಂಡಿತವಾಗಿಯೂ ನಾವು ದಬ್ಬಿದ ಮೂಕದನಗಳಂತೆ ಅದಕ್ಕೆ ಶರಣಾಗತರಾಗಲಾರೆವು. ಶರಣಾಗತರಾಗುವದೆಂದರೆ, ಸ್ವಾತಂತ್ರ್ಯ ವೃಕ್ಷದ ಬುಡಕ್ಕೆ ಕೊಡಲಿ ಪ್ರಯೋಗಿಸಿದಂತೆ. ಆದ್ದರಿಂದ ಯುದ್ಧ ಸಮಯದಲ್ಲಿ ಶರಣಾಗತರಾಗುವದಾಗಲೀ, ತಾಟಸ್ಥ್ಯ ಭಾವವಹಿಸುವದಾಗಲೀ ಸಲ್ಲದು. ಆದ್ದರಿಂದ ನಾವು ತಯಾರಾಗಿರುವದು ಶ್ರೇಯಸ್ಕರ.

ಮುಂದಿನ ಯುದ್ಧಕ್ಕೆ ನಾವು ತಯಾರಾಗಬೇಕು. ಅದಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಆದರೆ ದುರಾದೃಷ್ಟವಶಾತ್ ಇಂದಿನ ಕಾಂಗ್ರೆಸ್ ಅಧಿಕಾರಿ ವರ್ಗವು ಈ ಧೋರಣೆಯನ್ನು ಅನುಮೋದಿಸುವ ಹಾಗಿಲ್ಲ. ತ್ರಿಪುರಿಯಲ್ಲಿಯ ಅವರ ವರ್ತನೆಯಿಂದ ಇದು ವಿಶದವಾಗುತ್ತಿತ್ತು. ಆದರೆ ಕಳೆದ ವಿಚಾರಗಳನ್ನು ಯೋಚಿಸಿ ಸಮಯ ಕಳೆಯುವದು ವಿವೇಕವಲ್ಲ. ನಮ್ಮ ಮುಂದಿರುವ ಇಂದಿನ ಸಮಸ್ಯೆಯನ್ನು ಚಂದದಿಂದ ಎದುರಿಸಲು ಆನಂದದಿಂದ ಎಲ್ಲರೂ ಒಂದಾಗಬೇಕಿದೆ.’

ರಾಜಿನಾಮೆ ಕೊಟ್ಟದ್ದೇಕೆ?

ಬೋಸರ ಹೇಳಿಕೆ.

—೦೦೦—

ಕಳೆದ ಜನವರಿಯಲ್ಲಿ ಅಧ್ಯಕ್ಷರ ಚುನಾವಣೆಯಾದ ಮೇಲೆ ನಡೆದ ಘಟನಾವಳಿಗಳನ್ನೆಲ್ಲಾ ಬೋಸರು ವಿವರಿಸುತ್ತಾ ವಾರ್ಧಾ ಮತ್ತು ಕಲ್ಕತ್ತೆಗಳಲ್ಲಿ ತಾವು ಮ. ಗಾಂಧಿಯವರೊಡನೆ ಆಡಿದ ಮಾತುಗಳನ್ನೂ ವಿವರಿಸಿ, ಪಂಡಿತ ಪಂತರ ಠರಾವಿನ ಮೇರೆ ಗಾಂಧಿಯವರು ಹೊಸ ವರ್ಕಿಂಗ್ ಕಮಿಟಿಯನ್ನು ನೇಮಿಸಲು ನಿರಾಕರಿಸಿದ್ದನ್ನೂ ಹೇಳಿದರು. ನಂತರ ತಾವು ರಾಜಿನಾಮೆ ಇತ್ತ ವಿಚಾರದ ಕಾರಣಗಳನ್ನು ವಿವರಿಸುತ್ತಾ, ‘ಕಲ್ಕತ್ತೆಯಲ್ಲಿ ಸೇರಿದ್ದ ಮುಖಂಡರೊಡನೆ ಮಾತುಕತೆಯಾಡಿದ ಮೇಲೆ ನನಗೆ ಹೀಗನ್ನಿಸಿತು. ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಉಳಿಸಿಕೊಳ್ಳಬೇಕಾದರೆ ನಾನು ಹಳೆಯ ವರ್ಕಿಂಗ್ ಕಮಿಟಿಯನ್ನೇ ನೇಮಿಸಬೇಕು. ಎರಡು ಸ್ಥಳಗಳಿಗೆ ಮಾತ್ರ ನಾನು ಬೇರೆಯವರನ್ನು ನೇಮಿಸಬಹುದಿತ್ತು. ಆದರೆ ಕಾಂಗ್ರೆಸಿನ ಘಟನೆಯ ಪ್ರಕಾರ ವರ್ಕಿಂಗ್ ಕಮಿಟಿಯನ್ನು ನೇಮಿಸಲು ಅಧ್ಯಕ್ಷರಿಗೆ ಸಂಪೂರ್ಣ ಅಧಿಕಾರವಿದೆ. ನನ್ನ ಮೇಲೆ ಅನೇಕ ಕರಾರು ಕಟ್ಟುಗಳು ಹಾಕಲ್ಪಟ್ಟವು. ಅಧ್ಯಕ್ಷ ಪದದ ಗೌರವವು ಈ ಪರಿಸ್ಥಿತಿಗೆ ಬಂದ ಮೇಲೆ ನಾನು ಕೇವಲ ಕೈಗೊಂಬೆಯ ಅಧ್ಯಕ್ಷನಾಗಿರಲು ಅಪೇಕ್ಷಿಸಲಾರೆನೆಂದು ಕಂಠೋಕ್ತವಾಗಿ ಗಾಂಧಿಯವರಿಗೆ ತಿಳಿಸಿದೆನು.

ಎದುರು ಪಕ್ಷದವರಲ್ಲಿ ಹೊಂದಿಕೊಂಡು ನಡೆಯುವ ಸ್ವಭಾವವು ಇಲ್ಲವೆಂದು ನನಗೆ ಖಚಿತವಾಯಿತು. ಹೀಗಿರುವಾಗ ಮುಂದೆ ನಾವು ಒಗ್ಗಟ್ಟಿನಿಂದ ಹೇಗೆ ಕೆಲಸ ಮಾಡಬೇಕೆಂಬ ಮಾರ್ಗವು ನನಗೆ ತೋಚಲಿಲ್ಲ. ಆದ್ದರಿಂದ ನಾನು ಅಧ್ಯಕ್ಷತನಕ್ಕೆ ರಾಜಿನಾಮೆಯನ್ನೀಯಬೇಕಾಯಿತು.’ ಎಂದು ಹೇಳಿದರು.

Wanted.

Wanted candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce and Filmcraft. Rules and Entrance form on annas eight. Director, Royal Telegraph and Rly. Duties College, Bombay.

8-2

ಚೀಫ್ ಕಮಿಷನರಿಗೆ ಮನವಿ.

ಶಾಲಾ ಫೀಜು ಹೆಚ್ಚಿಸಿದ ಮತ್ತು ಹುಡುಗಿಯರ ಶಾಲೆಯನ್ನು ವಜಾ ಮಾಡಿದ ಬಗ್ಗೆ ದಕ್ಷಿಣ ಕೊಡಗಿನವರು ಚೀಫ್ ಕಮಿಷನರಿಗೆ ಮಾಡಿಕೊಂಡ ಮನವಿಯ ಸಾರಾಂಶ.

ಪೂಜ್ಯರೇ,

ದಕ್ಷಿಣ ಕೊಡಗಿನ ಮನವೀದಾರರಾದ ನಾವು ಈ ಕೆಳಗಿನ ಕೆಲವು ವಿಚಾರಗಳನ್ನು ನಿಮ್ಮ ಅವಗಾಹನೆ ಮತ್ತು ವಿಮರ್ಶೆ ಬಗ್ಗೆ ಮುಂದಿಡ ಬಯಸುತ್ತೇವೆ.

ಪಬ್ಲಿಕ್ ಜನತೆಯು ತನ್ನ ನಿಶೇಧವನ್ನು ನಾನಾ ರೀತಿಯಿಂದ ಸೂಚಿಸಿದ್ದರೂ ನಮ್ಮ ದುರಾದೃಷ್ಟಕ್ಕೆ ಶಾಲಾಫೀಜು 1939 ನೇ ಏಪ್ರಿಲ್ 1ರಿಂದ ಹೆಚ್ಚಿಸಲ್ಪಟ್ಟು ಜಾರಿಗೆ ಬರುವದೆಂಬುದು ತಿಳಿದುಬರುತ್ತದೆ. ನಮ್ಮ ಈ ಬಡ ಜನತೆಯು ಈಗಿರುವ ಶಾಲಾ ಫೀಜನ್ನೇ ಕಟ್ಟಲಾರದೆ ತತ್ತರಿಸುತ್ತಿರುವಾಗ ಜನತೆಯ ಕಷ್ಟ ಪರಂಪರೆಗಳನ್ನು ಆಲೋಚಿಸದೆ ಅದೂ ಇನ್ನೂ ಹೆಚ್ಚಿಸಲ್ಪಟ್ಟರೆ ಜನತೆಯ ಇಂದಿನ ಬಡ ಸ್ಥಿತಿಯ ಪರಿಣಾಮದಿಂದ ಇಲ್ಲಿಯ ವಿದ್ಯಾಭ್ಯಾಸವು ಹೇಗೆ ಅಧೋಗತಿಗೆ ಇಳಿಯುವದೆಂಬದು ಯೋಚಿಸತಕ್ಕ ವಿಚಾರವಲ್ಲದೆ ವರ್ಣಿಸುವದಲ್ಲ. ಈಗ ಗ್ರಾಮದಲ್ಲಿ ಜನತೆಯ ಸ್ಥಿತಿಯನ್ನು ಪರೀಕ್ಷಿಸಿ ನೋಡಿದರೆ ಅನೇಕ ತಂದೆ ತಾಯಿಗಳು ಹಣದ ಅಭಾವದ ದೆಸೆಯಿಂದ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನಿತ್ತಿದ್ದು ಕಂಡು ಬರುವದು. ಶಾಲಾ ಫೀಜು ಮಾತ್ರವಲ್ಲದೆ ಅವರ ಪುಸ್ತಕಗಳ ಖರ್ಚೂ ದೊಡ್ಡ ಹೊರೆಯಾಗಿದೆ. ಕೊಡಗಿನ ಹೊರಗಿನ ಪ್ರಾಂತಗಳಲ್ಲಿ ಇಲ್ಲಿಗಿಂತ ಹೆಚ್ಚಿನ ದರದ ಫೀಜು ಕೊಡುತ್ತಿರುವರೆಂಬ ವಾದವು ಕೊಡಗಿಗೆ ಅನ್ವಯಿಸದು. ಯಾಕೆಂದರೆ ಇಲ್ಲಿಯ ಜನತೆಯ ಸ್ಥಿತಿಯನ್ನು ಬೇರೆ ಪ್ರಾಂತದ ಜನತೆಯೊಂದಿಗೆ ಹೋಲಿಸಿದರೆ ಇಲ್ಲಿಯವರ ಸ್ಥಿತಿಯು ಶೋಚನೀಯಾವಸ್ಥೆಯಲ್ಲಿದೆ. ಯೋಗ್ಯ ಸರ್ಕಾರದ ಧ್ಯೇಯ ಮತ್ತು ಸಾಧನೆಯೂ ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡಿ ಸ್ವತಂತ್ರಿಗಳನ್ನಾಗಿ ಮಾಡುವದಾಗಿದೆ. ಆದ್ದರಿಂದ ವಿದ್ಯಾ ಸವಲತ್ತುಗಳು ಕಮ್ಮಿ ಮಾಡಲ್ಪಟ್ಟದ್ದೇ ಆದರೆ ಅದರ ಪರಿಣಾಮವು ಸರ್ಕಾರಕ್ಕೂ, ಜನತೆಗೂ ಹಾನಿಕರವಾದದ್ದು. ಅಲ್ಲದೆ ವಿದ್ಯಾರ್ಥಿನಿಯರಿಗೆ 3ನೇ ಫಾರಮಿನ ವರೆಗಿರುವ ಫೀಜಿನ ವಿನಾಯಿತಿಯನ್ನು ಮುಂದಕ್ಕೆ ಕೊಡಲಾಗುವುದಿಲ್ಲವೆಂಬ ಸರಕಾರದ ತೀರ್ಮಾನವು ಹೃದಯದ್ರಾವಕವಿದೆ. ಸ್ತ್ರೀ ವಿದ್ಯಾಭ್ಯಾಸವನ್ನು ಹೆಚ್ಚಿಸುವ ದೃಷ್ಟಿಯಿಂದ ಅವರಿಗೆ ಸಕಲ ವಿಧದ ಸೌಕರ್ಯವನ್ನೂ ಒದಗಿಸಿಕೊಡದೆ ಸರಕಾರವು ಈಗಿರುವ ಸೌಕರ್ಯಗಳನ್ನೇ ಕಿತ್ತೊಗೆಯುವ ಹವ್ಯಾಸಕ್ಕಿಳಿದರೆ ಸ್ತ್ರೀ ವಿದ್ಯಾಭ್ಯಾಸವು ನಾಮಾವಶೇಷವಾಗುವದರಲ್ಲಿ ಸಂದೇಹವಿಲ್ಲ. ವೀರಾಜಪೇಟೆ ಹುಡುಗಿಯರ ಶಾಲೆಯನ್ನು ತೆಗೆಯಕೂಡದೆಂದು ಅಲ್ಲಿಯ ಜನರು ಮನವಿಯ, ಸಾರ್ವಜನಿಕ ಸಭೆಗಳ, ಮೂಲಕ ತಮ್ಮ ನಿಶೇಧ ವ್ಯಕ್ತಪಡಿಸಿದರೂ ಸರ್ಕಾರದವರು ಅದನ್ನು ನಿರ್ಲಕ್ಷಿಸಿ ತಮ್ಮ ಧೋರಣೆಯನ್ನೇ ಅನುಸರಿಸಿದ್ದು ಇಡೀ ದೇಶದಲ್ಲಿ ಅಸಮಧಾನವನ್ನು ಹರಡಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಹುಡುಗಿಯರ ಶಾಲೆಯನ್ನು ತೆಗೆದು ಹಾಕಿ, ವೀರಾಜಪೇಟೆಯ ಶಾಲೆಯನ್ನೂ ಜನರ ಮನಸಿಗೆ ವಿರೋಧವಾಗಿ ಮುಚ್ಚಿ, ಮಡಿಕೇರಿಯಲ್ಲಿರುವ ಹುಡುಗಿಯರ ಹೈಸ್ಕೂಲಿಗೆ ಕೊಡುತ್ತಿರುವ ಗ್ರಾಂಟನ್ನು ಮಾತ್ರ ಕಮ್ಮಿ ಮಾಡದಿರುವ ಸರ್ಕಾರದ ಧೋರಣೆಯು ನಿಷ್ಪಕ್ಷಪಾತೀಯ ವರ್ತನೆಯೆಂದು ಕರೆಯಲ್ಪಡಲಾರದು. ಸರ್ಕಾರದ ಈ ಧೋರಣೆಯು ಪೂರಾ ಟೀಕೆಗೊಳಗಾಗಿರುವದು. ದ. ಕೊಡಗಿಗೆ ಸ್ತ್ರೀ ವಿದ್ಯಾಭ್ಯಾಸಕ್ಕೆ ಅನುಕೂಲವಾಗಿದ್ದ ಶಾಲೆಯೆಂದರೆ ವೀರಾಜಪೇಟೆಯ ಹುಡುಗಿಯರ ಶಾಲೆ. ಮಡಿಕೇರಿ ಶಾಲೆಯು ಕೆಲವೊಂದು ಧನಿಕರಿಗೆ ಅನುಕೂಲವಾಗುವದೇ ವಿನಹ ವೀರಾಜಪೇಟೆಯ ಶಾಲೆಯಂತೆ ಬಡ ಜನರಿಗುಪಕಾರಿಯಾಗಲಾರದು. ಈ ಶಾಲೆಯ ಮುಚ್ಚುವಿಕೆಯು ದಕ್ಷಿಣ ಕೊಡಗಿನ ಜನರ ಮನಸನ್ನು ಪೂರಾ ಅತೃಪ್ತಿಗೊಳಿಸಿದೆ. ಆದ್ದರಿಂದ ಸರ್ಕಾರವು ತಮ್ಮ ನ್ಯಾಯದೃಷ್ಟಿಯಿಂದ ಈ ಶಾಲೆಯನ್ನು ಮುಂದರಿಸಬೇಕಿದೆ.

ಮೇಲ್ಕಂಡ ಕಾರಣಗಳನ್ನೂ ಮತ್ತು ದೇಶದ ಆರ್ಥಿಕ ಮುಗ್ಗಟ್ಟಿನ ವಿಚಾರವನ್ನೂ ಮನಸಿಗೆ ತೆಗೆದುಕೊಂಡು ಜಾರಿಯಲ್ಲಿ ತರಲು ಯೋಚಿಸಿರುವ ಶಾಲಾ ಫೀಜಿನ ಹೆಚ್ಚಿಸುವಿಕೆಯನ್ನು ಜಾರಿಗೆ ತಾರದೆ ವೀರಾಜಪೇಟೆ ಹುಡುಗಿಯರ ಶಾಲೆಯನ್ನು ಮುಂದರಿಸುವದಲ್ಲದೆ ಸ್ತ್ರೀ ವಿದ್ಯಾಭ್ಯಾಸಕ್ಕೆ 3ನೇ ಫಾರಂ ವರೆಗಿರುವ ಸೌಕರ್ಯವನ್ನು 6ನೇ ಫಾರಮಿನ ವರೆಗೆ ಮುಂದರಿಸಬೇಕೆಂದು ಬೇಡಿಕೊಳ್ಳುವೆವು. ಜನತೆಯ ಕೂಗಿನ ಪ್ರತಿಧ್ವನಿಯಾದ ಮೇಲ್ಕಂಡ ವಿಚಾರಗಳು ಕೂಲಂಕುಶವಾಗಿ ವಿಚಾರಿಸಲ್ಪಟ್ಟು, ಮನ್ನಿಸಲ್ಪಡುವದೆಂದು ನಾವು ಮನಃಪೂರ್ವಕವಾಗಿ ಆಶಿಸುತ್ತೇವೆ.

'ಮನವಿದಾರರು.,

ಕೊಡಗು ಕಂಪೆನಿಯ ಡೈರೆಕ್ಟರುಗಳ ಮೀಟಿಂಗು.

ತಾರೀಖು 2-5-39 ರಲ್ಲಿ ವೀರಾಜಪೇಟೆ ಅಂಜುಮಾನ್ ಹಾಲ್‌ನಲ್ಲಿ ಪ್ರೆಸಿಡೆಂಟರಾದ ಶ್ರೀ ಯು. ಯಂ. ಅಣ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಾಜರಿದ್ದವರು-ಶ್ರೀಗಳಾದ ಉದಯಂಡ ಅಣ್ಣಯ್ಯ, ಐ. ಪಿ. ಕಾರ್ಯಪ್ಪ, ಎನ್. ಸೋಮಯ್ಯ, ಯಂ. ಮಾದಪ್ಪ, ಬಿ. ಯಂ. ಕಾರ್ಯಪ್ಪ, ಜಮ್ಮಡ ಮಾದಪ್ಪ, ಕೂತಂಡ ಪೂವಯ್ಯ, ನೆಲ್ಲಮಕ್ಕಳ ಅಚ್ಚಯ್ಯ, ಕೊಳ್ಳಿಮಾಡ ಕರುಂಬಯ್ಯ ಮತ್ತು ಮಂಡೇಪಂಡ ಸೋಮಯ್ಯನವರುಗಳು.

ಫೆಬ್ರವರಿ, ಮಾರ್ಚಿ ಮತ್ತು ಏಪ್ರಿಲ್ ತಿಂಗಳ ಲೆಕ್ಕಗಳನ್ನು ಓದಿ ಮಂಜೂರು ಮಾಡಲಾಯಿತು.

ಶೇರುಗಳಿಗೆ ಸರ್ಟಿಫಿಕೇಟು ಕೊಡುವ ಬಗ್ಗೆ ವಿಚಾರಿಸಲು ನೇಮಕವಾದ ಕಮಿಟಿಯವರ ರಿಪೋರ್ಟನ್ನು ಒಡನೆ ಕಳುಹಿಸುವಂತೆ ಕೇಳಿಕೊಳ್ಳಲು ತೀರ್ಮಾನವಾಯಿತು.

ಹುಲುಕೋಡು ಶಾಂತಪ್ಪನವರ ಹೆಸರಿನಲ್ಲಿರುವ ಶೇರನ್ನು ಶ್ರೀ. ಹೆಚ್. ಎಂ. ಪುಷ್ಪಣ್ಣನವರ ಹೆಸರಿಗೂ, ಶ್ರೀ ಹೆಚ್. ಡಿ. ಬೋರಯ್ಯನವರ ಹೆಸರಿನಲ್ಲಿರುವ ಶೇರನ್ನು ಶ್ರೀ. ಹೆಚ್. ಬಿ. ಸಿದ್ದಯ್ಯನವರ ಹೆಸರಿಗೂ ಶ್ರೀ. ಎನ್. ಆರ್. ಸುಬ್ಬಣ್ಣಯ್ಯನವರ ಹೆಸರಿನಲ್ಲಿರುವ ಶೇರುಗಳನ್ನು ಅವರ ಮಗ ಮಂಜುನಾಥಯ್ಯನವರ ಹೆಸರಿಗೂ ಅವರುಗಳ ಅರ್ಜಿ ಮೇರೆ ವರ್ಗಾಯಿಸುವಂತೆ ತೀರ್ಮಾನವಾಯಿತು.

ತಾ. 30-12-38ರ ಡೈರೆಕ್ಟರುಗಳ ಮೀಟಿಂಗಿನಲ್ಲಿ ತೀರ್ಮಾನಿಸಿದಂತೆ ಶ್ರೀ. ಪಾಂಡಂಡ ಚಂಗಪ್ಪನವರು 'ಇಂಡೆಮ್ನಿಟಿ ಬಾಂಡ" ಹಾಜರು ಪಡಿಸದಿದ್ದರೆ ಅವರ ತಂದೆಯವರ ಹೆಸರಿನಲ್ಲಿರುವ ಶೇರುಗಳನ್ನು ವರ್ಗಾಯಿಸಲಾಗುವುದಿಲ್ಲವೆಂದು ತೀರ್ಮಾನವಾಯಿತು.

ಪ್ರೆಸ್ಸಿನಲ್ಲಿ ಕೆಲಸ ಮಾಡುವ ಶ್ರೀಗಳಾದ ತಿಮ್ಮೋತಿ ಕುಂದರ್, ಜೆ. ಡಿಸೋಜ ಯಂ. ಯಂ. ಬಿದ್ದಪ್ಪ ಮತ್ತು ಐ. ಪುಟ್ಟಯ್ಯ ಇವರುಗಳ ಸಾಲದ ಅರ್ಜಿ ಮೇರೆ ವೈಯಕ್ತಿಕವಾಗಿ ರೂ. 75, 66, 60, 42 ಸಾಲಗಳನ್ನು ಶೇಕಡ 8½ ದರದ ಬಡ್ಡಿಯಲ್ಲಿ 12 ಕಂತುಗಳಿಂದ ಕಟ್ಟುವಂತೆ ಮಂಜೂರು ಮಾಡಲಾಯಿತು.

ಶ್ರೀ ಉದಯಂಡ ಪೂಚಯ್ಯನವರಿಂದ ಕಳುಹಿಸಲ್ಪಟ್ಟಿದ್ದ ಠರಾವುಗಳು (1) ಸಂಪಾದಕರು ರಾಜಿನಾಮೆ ಕೊಡಬೇಕು, (2) ಪತ್ರಿಕೆಯಲ್ಲಿ ಪ್ರಕಟಿಸುವ ಲೇಖನಗಳನ್ನು ಪರಿಶೀಲಿಸಲು ಒಂದು ಸಂಪಾದಕ ಮಂಡಳಿಯನ್ನು ನೇಮಿಸಬೇಕು, (3) ಕೆಲಸಗಾರರ ಹಾಜರುಪಟ್ಟಿಯನ್ನು ಅವರವರ ಸ್ವಂತ ರುಜುವಿನಿಂದ ಗುರ್ತಿಸಬೇಕು. (4) ಸಂಬಳವನ್ನು ಪ್ರೆಸಿಡೆಂಟರು ಬಟವಾಡೆ ಮಾಡಬೇಕು, (5) (a) ಪ್ರತಿ ತಿಂಗಳ ಪ್ರಥಮ ಆದಿತ್ಯವಾರ ಕಂಪೆನಿಯ ಡೈರೆಕ್ಟರುಗಳ ಮೀಟಿಂಗು ಜರಗಬೇಕು. (b) ಮೀಟಿಂಗಿಗೆ ಹಾಜರಿರುವ ಡೈರೆಕ್ಟರುಗಳ ಸಹಿಯನ್ನು ಮೀಟಿಂಗಿನ ನಡವಳಿಕೆಯಲ್ಲಿ ಹಾಕಬೇಕು, (c) ಮೀಟಿಂಗಿನ ನಡವಳಿಕೆಯನ್ನು ಪತ್ರಿಕೆಯಲ್ಲಿ ಪ್ರಕಟಿಸಬೇಕು. ಇವುಗಳ ಸೂಚಕರು ಹಾಜರಿಲ್ಲವಾದ್ದರಿಂದ ಚರ್ಚಿಸಲ್ಪಡಲಿಲ್ಲ.

ಸಂಪಾದರು ಹಣ ವಸೂಲಾತಿಯ ಬಗ್ಗೆ ರಜಾ ದಿನಗಳಲ್ಲೂ ಸಹ ಹೊರಗೆ ಹೋಗಬೇಕಾಗಿರುವ ಕಾರಣ ಮತ್ತು ಕಂಪೆನಿಯ ಕೆಲಸಕ್ಕೆ ತೊಂದರೆ ಬಾರದಂತೆ ರಾಜಕೀಯದ ಬಗ್ಗೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಪ್ರಯುಕ್ತ ಅವರು ತಮ್ಮ ಹಾಜರಾತಿಯನ್ನು ಗುರ್ತಿಸುವದರಿಂದ ವಿನಾಯಿಸಲ್ಪಡಬೇಕು' ಎಂಬ ಠರಾವನ್ನು ಶ್ರೀ ಐನಂಡ ಕಾರ್ಯಪ್ಪನವರು ಸೂಚಿಸಿದರು.

ಶ್ರೀ. ಕೆ. ಯಂ. ಪೂವಯ್ಯನವರು- ಈಗ ಸಂಪಾದಕರು ಪತ್ರಿಕೆಯ ಕಾರ್ಯದ ಬಗ್ಗೂ, ಪತ್ರಿಕೆಯ ಧ್ಯೇಯಕ್ಕೆ ಸಂಬಂಧಪಟ್ಟ ಇತರ ಸಾರ್ವಜನಿಕ ಕೆಲಸಗಳ ಬಗ್ಗೂ ಹೊರಗೆ ಹೋಗುವಾಗ ಮತ್ತು ಆಫೀಸಿನಲ್ಲೇ ಇರುವಾಗ ಈಗ ಯಾವ ರೀತಿಯ ಹಾಜರಾತಿ ಗುರ್ತು ಮಾಡಲ್ಪಡುತ್ತಿದೆಯೋ ಅದೇ ಮುಂದರಿಯಬೇಕೆಂಬ-ತಿದ್ದುಪಡಿಯನ್ನು ಮುಂದಿಟ್ಟರು. ಇದು ಸರ್ವಾನುಮತದಿಂದ ಮಂಜೂರಾಯಿತು.

ಶ್ರೀ. ಉದಯಂಡ ಪೂಚಯ್ಯನವರು ಹಾಜರಿಲ್ಲದೆ ಅವರು ಸಂಪಾದಕರು ರಾಜಿನಾಮೆ ಕೊಡಬೇಕೆಂಬ ಠರಾವು ಚರ್ಚಿಸಲ್ಪಡದ ಕಾರಣ ಶ್ರೀ. ಕೆ. ಸಿ. ಕರುಂಬಯ್ಯನವರು ಸಂಪಾದಕರಲ್ಲಿ ನಂಬಿಕೆಯನ್ನು ಸೂಚಿಸುವ ತಮ್ಮ ಠರಾವನ್ನು ವಾಪಸು ತೆಗೆದುಕೊಂಡರು.

ನಂತರ ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಬರಕಾಸ್ತಾಯಿತು.

ಯು. ಯಂ. ಅಣ್ಣಯ್ಯ,
(ಅಧ್ಯಕ್ಷರು)

ಸೋವಿಯಟ್ ರಶಿಯಾ.

(5 ನೇ ಪುಟದಿಂದ ಸಾಗಿದ್ದು.)

ಕಮೆಟೂರಸ್ಕ ಎಂಬಲ್ಲಿ ಯುದ್ಧ ಯಂತ್ರೋಪಕರಣಗಳ ತಯಾರಿಯ ಕಾರ್ಖಾನೆ ಇದೆ. ಇದು ಪ್ರಪಂಚದಲ್ಲಿರುವ ಅತೀ ದೊಡ್ಡ ಕಾರ್ಖಾನೆಗಳಲ್ಲಿ ಪ್ರಾಮುಖ್ಯವಾದುದು. ಜರ್ಮನಿಯಲ್ಲಿರುವ ಕ್ರುಪ್ಸ್ ಕಾರ್ಖಾನೆಗಳಿಗಿಂತಲೂ ದೊಡ್ಡದು. ಎಸಿನ್‌ನಲ್ಲಿರುವ ಕ್ರುಪ್ಸ್ ಕಾರ್ಖಾನೆಯಲ್ಲಿ ವರ್ಷಕ್ಕೆ 30 ಸಾವಿರ ಟನ್ನುಗಳಷ್ಟು ಯುದ್ಧ ಸಾಮಗ್ರಿಗಳು ತಯಾರಾಗುತ್ತವೆ. ಆದರೆ ರಶಿಯಾದ ಈ ಕಾರ್ಖಾನೆಯಲ್ಲಿ 57 ಸಾವಿರ ಟನ್ನುಗಳಷ್ಟು ತಯಾರಾಗುತ್ತೆ. 180 ಟನ್ನುಗಳಷ್ಟು ಭಾರವುಳ್ಳ ಫಿರಂಗಿಗಳು ತಯಾರಾಗುತ್ತವೆ. ಈ ಕಾರ್ಖಾನೆಯಲ್ಲಿರುವ ಕುಲುಮೆಗಳಿಂದ ತಿಂಗಳೊಂದರ 4 ಸಾವಿರ ಟನ್ನುಗಳಷ್ಟು ತಯಾರಿಸಬಹುದು. ಕ್ರುಪ್ಸ್ ಕಾರ್ಖಾನೆಯಲ್ಲಿ 1,300 ಟನ್ನುಗಳಷ್ಟು, ಸ್ಕೋಡಾ ಕಾರ್ಖಾನೆಯಲ್ಲಿ ತಿಂಗಳು ಒಂದಕ್ಕೆ 1,500 ಟನ್ನುಗಳಷ್ಟು ಮಾತ್ರ ತಯಾರಾಗುತ್ತದೆ.

'ತಾಯಿನಾಡು'

ಮುನ್ನಡೆಯ ಪಕ್ಷ.

ಕಾಂಗ್ರೆಸಿನಲ್ಲಿ ಹೊಸ ಪಕ್ಷವನ್ನು ಕಟ್ಟಲು ಸುಭಾಸರ ಯೋಜನೆ.

- **ಉಗ್ರವಾದಿ ಮತ್ತು ಪ್ರಗತಿಪರ ಜನರ ಸಂಘಟನೆ.**
- **ಸದ್ಯದ ಅಧಿಕಾರಿ ವರ್ಗದ ಖಂಡನೆ.**
- **ಕಾಂಗ್ರೆಸ್ಸಿನ ಐಕ್ಯತೆಯಲ್ಲಿ ಎಡ ಪಕ್ಷೀಯರಿಗೆ ಬಲಪಕ್ಷೀಯರಿಗಿಂತ ನಂಬಿಕೆ ಇದೆಯೆಂಬ ಘೋಷಣೆ.**

ಕಲ್ಕತ್ತೆಯ ಶ್ರದ್ಧಾನಂದ ಪಾರ್ಕಿನ ಮುಂದುಗಡೆ ನೆರೆದಿದ್ದ 20 ಸಾವಿರ ಮಂದಿ ಜನತೆಯ ಸಭೆಯಲ್ಲಿ ಸುಭಾಷರು ಭಾಷಣ ಮಾಡುತ್ತಾ ಈ ಕೆಳಗಿನ ಹೇಳಿಕೆಯೊಂದನ್ನು ಕೊಟ್ಟಿರುವರು. ಪ್ರಾರಂಭಿಸುತ್ತಾ ಅವರು, ಈಕಳೆದ ಕೆಲವು ವರ್ಷಗಳಿಂದ ಕಾಂಗ್ರೆಸಿನಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ಸ, ಲೆಫ್ಟಿಸ್ಟ್ಸ ಮತ್ತು ರಾಯ್ಯಿಸ್ಟ್ ಎಂಬ ವಿವಿಧ ಪಕ್ಷಗಳು ಮೊಳೆತು ಬೆಳೆಯುತ್ತಿವೆಯೆಂದೂ, ಇತ್ತೀಚೆಗೆ ಅವರಲ್ಲಿ ಪರಸ್ಪರ ವಿವೇಚನೆಗಳಾಗಿ ಒಂದು ಹೊಸ ಪಕ್ಷವನ್ನು ಸ್ಥಾಪಿಸಿ ಅದರಲ್ಲಿ ಈ ವಿವಿಧ ಪಂಗಡಗಳು ಐಕ್ಯವಾಗುವ ಏರ್ಪಾಡು ನಡೆಯಿತೆಂದೂ, ಅದಕ್ಕೆ ಎಡಪಕ್ಷ ಎಂಬ ಹೆಸರು ಸಮಂಜಸವಾಗದ್ದರಿಂದ 'ಮುನ್ನಡೆಯ ಪಕ್ಷ' 'ಫಾರ್ವರ್ಡ್ ಬ್ಲಾಕ್' ಎಂಬ ಹೆಸರಿಡಲಾಯಿತೆಂದೂ ಹೇಳಿರುವರು.

ಮುಂದುವರಿಸುತ್ತಾ, 'ಕಳೆದ ಒಂದು ವರ್ಷದಿಂದ ಈ ರೀತಿ ಭಿನ್ನಭಿನ್ನವಾಗಿರುವ ಎಡಪಕ್ಷೀಯರನ್ನು ಏಕೀಕರಿಸುವ ಬಗ್ಗೆ ದೀರ್ಘ ಯೋಚನೆ ಮಾಡಿದೆನು. ಕಡೆಗೆ ನನ್ನ ನಿರ್ಧಾರವು ಇಂದು ನಾವು ಸ್ಥಾಪಿಸಲೆಳಸಿರುವ 'ಮುನ್ನಡೆಯ ಪಕ್ಷ'ಕ್ಕೆ ಬೆಂಬಲವನ್ನಿತ್ತಿತು. ಆದ್ದರಿಂದ ನಾನು ಈ ಪಕ್ಷಕ್ಕೆ ಸೇರಿ ಕಾರ್ಯ ನಿರ್ವಹಿಸುವವನಿದ್ದೇನೆ. ಇಂದು ಕಾಂಗ್ರೆಸ್ಸಿನ ಅಡಿಗಲ್ಲೆಂದರೆ ಗಾಂಧಿ ಸೇವಾಸಂಘ. ಅದರಲ್ಲಿ ಎಲ್ಲಾ ಪಕ್ಷೀಯರಿಗೂ ಪ್ರಾತಿನಿಧ್ಯವಿಲ್ಲ. ಎಡಪಕ್ಷದಂತಹ ಅನೇಕ ಪಂಗಡಗಳು ತಾವೇ ತಾವಾಗಿ ಸರಿಯಾದ ವ್ಯವಸ್ಥೆಯಿಲ್ಲದೆ ಇವೆ. ಇಂದಿನ ಮುನ್ನಡೆಯ ಪಕ್ಷವಾದರೂ ಕ್ರಮೇಣ ಬೆಳೆದು ಈ ವಿವಿಧ ಪಕ್ಷಗಳನ್ನು ಏಕೀಕರಿಸಿ ಇಡೀ ಕಾಂಗ್ರೆಸು ಒಂದೇ ಅವಿಚಲ ಪಕ್ಷವೆಂದು ಸಾಧಿಸಲು ಜನ್ಮತಾಳಿದೆ.

ಈ 'ಮುನ್ನಡೆಯ ಪಕ್ಷ' ಸ್ಥಾಪನೆಯಿಂದ ಕಾಂಗ್ರೆಸಿನಲ್ಲಿ ಒಡಕು ಬರಬಹುದೆಂದು ಕೆಲವರು ವಾದಿಸಬಹುದು. ಆದರೆ ಗಾಂಧಿ ಸೇವಾಸಂಘವನ್ನು ಸ್ಥಾಪಿಸಿದಾಗ ದೇಶದ ಶಾಂತಿಗಾಗಲೀ, ಕಾಂಗ್ರೆಸಿನ ಐಕ್ಯತೆಗಾಗಲೀ ತೊಂದರೆ ಬಂತೇನು? ಹಾಗಿಲ್ಲದ ಪಕ್ಷ ಈ 'ಮುನ್ನಡೆಯ ಪಕ್ಷ' ಸ್ಥಾಪನೆಯಿಂದ ಹೇಗೆ ಕಾಂಗ್ರೆಸಿನಲ್ಲಿ ಭಿನ್ನಾಭಿಪ್ರಾಯ ಬರುವುದು? ಈ ಎಡಪಕ್ಷೀಯರ ಏಕೀಕರಣವು ಕಾಂಗ್ರೆಸಿನ ಏಕೀಕರಣದ ತಳಹದಿಯೆಂದು ನನಗನಿಸುತ್ತದೆ. ಈ ಎಡಪಕ್ಷೀಯರ ಐಕ್ಯತೆಯಿಲ್ಲದೆ ಹೇಗೆ ಜನಾಂಗವು ಏಕೀಕರಿಸಲ್ಪಡುವದೆಂಬುದು ಮನವರಿಕೆಯಾಗದ ವಿಚಾರ.

1934ರಲ್ಲಿ ಸಮತಾವಾದ ಪಕ್ಷವು ಸ್ಥಾಪನೆಯಾದಂದಿನಿಂದ ಅದರ ತತ್ವಗಳು ಇಡೀ ಭಾರತದಲ್ಲಿ ಪಸರಿಸಿವೆ. ಇದರ ಪರಿಣಾಮವಾಗಿಯೇ ಮಿಲಿಯಾಂತರ ಜನರಲ್ಲಿ ಪ್ರಜಾಪ್ರಭುತ್ವ, ಸಮತಾವಾದ ಸಾರ್ವಭೌಮತ್ವದ ನಿರೋಧ ಮೊದಲಾದ ವಿಚಾರಗಳ ಆಂದೋಲನವುಂಟಾಗಿದೆ. ಈ 'ಮುನ್ನಡೆಯ ಪಕ್ಷ'ವು ಕಾಂಗ್ರೆಸಿನ ಒಂದು ಅಂಗವಾಗಿಯೇ ಕಾರ್ಯ ಮಾಡುವುದು. ಕಾಂಗ್ರೆಸ್ ತತ್ವ ಮತ್ತು ಧ್ಯೇಯವನ್ನು ಅದು ಪರಿಪಾಲಿಸುವುದು. ಮಹಾತ್ಮ ಗಾಂಧಿಯವರಲ್ಲಿ ಅದು ಅಮೋಘ ನಂಬಿಗೆಯನ್ನಿಡುವುದಲ್ಲದೆ ಅವರ ರಾಜಕೀಯ ತತ್ವವಾದ ಅಹಿಂಸಾ ಅಸಹಕಾರದಲ್ಲಿ ಪೂರ್ಣ ಭರವಸೆಯನ್ನಿಡುವುದು. ಇದರಿಂದ ಇಂದಿನ ಕಾಂಗ್ರೆಸ್ ಅಧಿಕಾರಿವರ್ಗದಲ್ಲಿ ಅವಶ್ಯವಾಗಿ ನಂಬಿಕೆಯನ್ನಿಡಬೇಕೆಂದು ಅರ್ಥವಾಗದು. ಇಂದು ಕಾಂಗ್ರೆಸಿನಲ್ಲಿ ಹೊಸತೊಂದು ಪಕ್ಷವನ್ನು ಸ್ಥಾಪಿಸಿ ಶಾಂತತಾಭಂಗ ಮಾಡುವ ಹವ್ಯಾಸವೇಕೆಂದು ಪ್ರಶ್ನಿಸಬಹುದು. ವೈಯಕ್ತಿಕವಾಗಿ ನನ್ನ ಮಟ್ಟಿಗೆ ಇಂದಿನ ಕಾಂಗ್ರೆಸ್ ಅಧಿಕಾರಿ ವರ್ಗದ ಅನಾಯಕತ್ವದ ದೆಸೆಯಿಂದ ಇಂಥಾ ಒಂದು ಬಿಕ್ಕಟ್ಟು ಮುಂದಾದರೂ ಅನಿವಾರ್ಯವೆಂದು ತೋರುವುದು. ಇಂದಿನ ಬಿಕ್ಕಟ್ಟನ್ನು ಪರಿಹರಿಸಬೇಕಾದರೆ ಅವರಿಗೆ ನಾವು ಶರಣಾಗತರಾಗುವುದೊಂದೇ ದಾರಿ. ಆದರೆ ಇದು ಶಾಶ್ವತವಾಗಿ ನಿಲ್ಲದು. ಆದ್ದರಿಂದ ಕೆಟ್ಟ ಪ್ರಸಂಗಗಳನ್ನು ಮುಂದರಿಸಿದುವುದರಿಂದ ಅದು ತಪ್ಪಿದ್ದಲ್ಲ. ಅವನ್ನು ಒಂದಲ್ಲೊಂದು ದಿನ ಎದುರಿಸಿಯೇ ತೀರಬೇಕು. ಆದುದರಿಂದ ಇಂದ್ವಿನ ಬಿಕ್ಕಟ್ಟನ್ನು ಎದುರಿಸಿ ಪರಿಹರಿಸಿಕೊಳ್ಳುವುದು ಯುಕ್ತವೆಂದು ನನಗನಿಸಿದೆ. ಹೊರಗಿನಿಂದ ಬೇರೆ ವಿಧದ ಬಿಕ್ಕಟ್ಟುಗಳು ಬಂದೊದಗುವ ಮೊದಲು ನಮ್ಮಲ್ಲಿಯ ಈ ಅಂತರ್ಗತ ತೊಡಕನ್ನು ನಿವಾರಿಸಿಕೊಂಡು ಒಗ್ಗಟ್ಟನಿಂದಿರುವುದು ಹಿತದಾಯಕವಿದೆ.

ಕಾಂಗ್ರೆಸಿನೊಳಗಾಗುವ ಈ ತತ್ಕಾಲಿಕ ಬಿಕ್ಕಟ್ಟನಿಂದ ಕಾಂಗ್ರೆಸಿನ ಪ್ರತಿಷ್ಟೆ ಪ್ರಗತಿಗೆ ತೊಂದರೆ ಬರಬಹುದೆಂದು ಕೆಲವರೆನ್ನಬಹುದು. ಆದರೆ ನನ್ನ ಅಭಿಪ್ರಾಯದಲ್ಲಿ ಇಂಥಾ ಬಿಕ್ಕಟ್ಟುಗಳು ಕಾಂಗ್ರೆಸಿನ ವರ್ಚಸ್ಸನ್ನು ಹೆಚ್ಚಿಸುವುವೆಂದೆನ್ನಿಸುತ್ತದೆ. 1918ರಲ್ಲಿಯ ಮೋಡರೇಟ್ ಪಕ್ಷದವರ ಮತ್ತು 1920ರ ಅಸಹಕಾರ ವಿರೋಧಿಗಳ ಚಳವಳಗಳು ಕಾಂಗ್ರೆಸಿನ ಪ್ರಗತಿಗೆ ಸಹಕಾರಿಗಳಾದುವೇ ವಿನಃ ಬೇರಿಲ್ಲ. ಇಂತಹ ಸಂಕಷ್ಟಗಳಿಂದ ಕಾಂಗ್ರೆಸ್ ಶುದ್ಧಿಗೊಂಡು ಮುಂದರಿಯುವುದರಲ್ಲಿ ಅನುಮಾನವಿಲ್ಲ. 1903ರ ರಷ್ಯಾದ ಸೋಷಿಯಲ್ ಪ್ರಜಾಪಕ್ಷದಲ್ಲಾದ ಭಿನ್ನಾಭಿಪ್ರಾಯವೇ ಇಂದಿನ ರಷ್ಯಾದ ಬೋಲ್ಶೆವಿಕ್ ಪಾರ್ಟಿಯ ಅಡಿಗಲ್ಲು. ಆದ್ದರಿಂದ ಈ ಮುನ್ನಡೆಯ ಪಕ್ಷದವರಿಂದ ಕಾಂಗ್ರೆಸಿಗೆ ಯಾವ ತರದ ತೊಂದರೆಯಾಗಲೀ, ದೇಶದಲ್ಲಿ ಯಾವ ತರದ ಗೊಂದಲವಾಗಲೀ ಉಂಟಾಗದು. 1922ರ ಗಯಾ ಕಾಂಗ್ರೆಸ್ ಅಧಿವೇಶನದಲ್ಲಾದ ಘರ್ಷಣೆಯಿಂದ ಉಪಸ್ಥಿತವಾದ ಸ್ವರಾಜ್ಯ ಪಾರ್ಟಿಯು ಕಾಂಗ್ರೆಸಿನ ತತ್ವ ಹಾಗೂ ಧ್ಯೇಯವನ್ನು ಸರಿಪಡಿಸಿತು. ಈಗಲಾದರೂ ಹಾಗೆಯೇ ಆಗುವುದು. ಕಾಂಗ್ರೆಸಿನಲ್ಲಿ ಐಕ್ಯತೆಯಿರಬೇಕೆಂದು ನಂಬುವವರಲ್ಲಿ ಬಲಪಕ್ಷೀಯರಿಗೆ ಎಂದೂ ಎಡಪಕ್ಷೀಯರು ಹಿಂದಿಲ್ಲ. ಆದ್ದರಿಂದಲೇ ಎಡಪಕ್ಷೀಯರು ವರ್ಕಿಂಗ್ ಕಮಿಟಿಯಲ್ಲಿ ಎಲ್ಲಾ ಪಂಗಡಗಳ ಪ್ರಾತಿನಿಧ್ಯವಿರಬೇಕೆಂದು ಸೂಚಿಸಿದ್ದಾಗಿದೆ. ಆದರೆ ಅದು ನಿಷ್ಫಲವಾದುದರಿಂದ ಅಧಿಕಾರಿವರ್ಗದ ಧೋರಣೆಯನ್ನು ಬದಲಾಯಿಸಿ ಕಾಂಗ್ರೆಸಿನ ಪ್ರಗತಿಯನ್ನು ಕೋರುವ ಉದ್ದೇಶದಿಂದ ಈ 'ಮುನ್ನಡೆಯ ಪಕ್ಷ'ವು ಉದ್ಭವಿಸಬೇಕಾಯಿತು. ಆದುದರಿಂದ ಎಲ್ಲಾ ದೇಶೀಯರು ಈ 'ಮುನ್ನಡೆಯ ಪಕ್ಷ'ದ ಸ್ಥಾಪನೆಗೆ ಸರಿಯಾದ ಸಹಾಯವನ್ನಿತ್ತು, ಪ್ರೋತ್ಸಾಹಿಸಿ ದೇಶದ ಏಳಿಗೆಗೆ ಹಾಗೂ ಕಾಂಗ್ರೆಸಿನ ಉಚ್ಛ್ರಾಯ ಸ್ಥಿತಿಗೆ ಕಾರಣೀಭೂತರಾಗಬೇಕೆಂದು ಕೇಳಿಕೊಳ್ಳುತ್ತೇನೆ' ಎಂದು ಹೇಳಿದರು.

ಜಯಪುರ

ರಾಜಕೀಯ ಕೈದಿಗಳು.

('ಹರಿಜನ' ಪತ್ರಿಕೆಯಿಂದ)

ಜಯಪುರ ಸತ್ಯಾಗ್ರಹದ ಸಂಬಂಧ ಸೆರೆಯಾಳುಗಳಾಗಿರುವ ಜಮ್ನಾಲಾಲ್ ಬಜಾಜ್ ಮತ್ತು ಇತರ ರಾಜಕೀಯ ಕೈದಿಗಳ ಬಗ್ಗೆ ಸರಕಾರವು ಪ್ರಕಟಿಸಿರುವ ಪ್ರಕಟಣೆಯು ಬರೇ ಆತ್ಮ ಸಮರ್ಥನೆಯದ್ದಾಗಿದೆ. ಜಮ್ನಾಲಾಲ್ ಬಜಾಜರ ವಿಚಾರ ತೀರ ಸುಲಭದ ಸಮಸ್ಯೆ. ಅವರನ್ನು ಗೋಪ್ಯ ಸ್ಥಳದಲ್ಲಿ ಕೈಸರೆ ಇಟ್ಟಿರುವರೆಂದೂ ಅಲ್ಲಿಯ ನೀರು ಹಾಗೂ ಇತರ ವಾತಾವರಣವು ಆರೋಗ್ಯದೃಷ್ಟಿಯಿಂದ ಅಹಿತವಾದುದೆಂದೂ ಜನಜನಿತವಾಗಿದೆ. ಅವರ ಜೊತೆಗೆ ಯಾರನ್ನು ಬಿಡದೆ ಅವರನ್ನು ಏಕಾಂಗಿಯಾಗಿಟ್ಟಿರುವದು ವಿಷಾದಕರ. ಇಂಥಾ ಕಠಿಣ ಶಿಕ್ಷೆ ವಿಧಿಸಲು ಅವರು ಮಾಡಿದ ಮಹಾಪರಾಧವಾದರೂ ಏನು? ಅವರು ಕ್ರೂರಿಗಳಲ್ಲ, ಅಸಭ್ಯವರ್ತನೆಯೆಂಬದೆ ಅವರಿಗೆ ತಿಳಿಯದು. ಜನ್ಮಸ್ಥಳವಾದ ಜಯಪುರಕ್ಕೆ ಬರಬಾರದೆಂಬ ಸರಕಾರದ ಅಪ್ಪಣೆಯನ್ನು ನಿರಾಕರಿಸಲೆತ್ನಿಸಿದಕ್ಕೆ ಇಂಥಾ ಶಿಕ್ಷೆಯೆ?

ಜಮ್ನಾಲಾಲ್ ಬಜಾಜರು ಯಾದರಿ ಕೈದಿಗಳೆಂಬುದು ಸಂಸ್ಥಾನಾಧೀಶರಿಗೆ ತಿಳಿದಿರಬಹುದು. ಅವರು ಜೈಲು ಕಟ್ಟಲೆಗಳನ್ನು ಆದರದಿಂದ ಪಾಲಿಸುವವರು. ಅಂಥಾವರನ್ನು ಬಾಹ್ಯಪ್ರಪಂಚದಿಂದ ಬೇರ್ಪಡಿಸಿ ಗೋಪ್ಯವಾಗಿಟ್ಟಿರುವದು ದುಸ್ವರ್ತನೆಯಾಗಿರುವದು. ಜೈಲುವಾಸಿಗಳಿಗೆ ಬೇಕಾದ ಪ್ರಾಮುಖ್ಯ ಬೇಡಿಕೆಯೆಂದರೆ ಅವರ ಅಂತಸ್ಥಿನ, ಮನೋಭಾವದ ಜೊತೆಗಾರರು. ಆದ್ದರಿಂದ ಅವರನ್ನು ಆ ಸ್ಥಳದಿಂದ ವರ್ಗಾಯಿಸಿ ಹೊರಗಿನ ಜನರ ಮಿಳಿತಕ್ಕೆ ಅವಕಾಶವಿರುವ ಮತ್ತು ಸಭ್ಯಸ್ನೇಹಿತರ ಸಖ್ಯ ಸಿಗುವ ಸ್ಥಳಕ್ಕೆ ತರಬೇಕೆಂದು ಸೂಚಿಸುತ್ತೇನೆ.

ಲಂಬಾ ಎಂಬಲ್ಲಿ ಕೈದಿಗಳಾಗಿರುವವರ ಸ್ಥಿತಿಯಂತೂ ಇನ್ನಷ್ಟು ಶೋಚನೀಯವಾಗಿದೆ. ಈ ಕೈದಿಗಳನ್ನು ಜೀರ್ಣ ಹೊಂದಿದ ಹಳೇ ಕೋಟೆಯೊಳಗೆ ಹಾಕಿರುವರು. ಅದು ಹಾವು ಹಲ್ಲಿಗಳ ನೆಲೆವೀಡಾಗಲು ಯೋಗ್ಯವೇ ವಿನಹ ಮಾನವನು ದಂಡಿತನಾಗಿಯೂ ಹೆಚ್ಚುಕಾಲ ಅಲ್ಲಿ ಬಾಳಲಾರನು. ಈ ಕೋಟೆಯು ಹಾವುಗಳ ಮತ್ತು ಇತರ ಪ್ರಾಣಿಗಳಿಗೆ ಆಕರವಾಗಿದ್ದರೂ ಈ ವರೆಗೆ ಯಾರೂ ಈ ಪ್ರಾಣಿಗಳಿಂದ ತೊಂದರೆಗೀಡಾಗಲಿಲ್ಲವೆಂದು ಹೇಳುವ ಸರಕಾರದ ವರ್ತನೆಯು ಲಾಂಛನೀಯವಾಗಿದೆ. ಈ ಕೈದಿಗಳನ್ನು ಸ್ಥಳಾಂತರಿಸಬೇಕಾದರೆ ಯಾರಾದರೂ ಈ ಪ್ರಾಣಿಗಳಿಂದ ತೊಂದರೆಗೀಡಾಗಬೇಕಾಗಬೇಕೆಂಬುದು ಸರಕಾರದ ಅಭಿಲಾಷೆಯೇನು? ತಮಗೆ ಸರಿಯಾದ ಉಪಚಾರ ಮಾಡುವದಿಲ್ಲವೆಂದು ಅನ್ನ ಸತ್ಯಾಗ್ರಹ ಕೈಕೊಂಡ ಕೈದಿಗಳನ್ನು ಇಲ್ಲಿಗೆ ವರ್ಗಾಯಿಸಿದ್ದೆಂಬುದು ತಿಳಿದಿರತಕ್ಕ ವಿಚಾರ, ನಾನು ಸತ್ಯಾಗ್ರಹವನ್ನು ನಿಲ್ಲಿಸಬೇಕೆಂದು ಅಪ್ಪಣೆ ಮಾಡಿದಂತೆ ಸತ್ಯಾಗ್ರಹವು ನಿಂತಿತು. ಇಲ್ಲವೇ ಸತ್ಯಾಗ್ರಹವು ಮುಂದುವರಿಯುತ್ತಿತ್ತು.

ಸತ್ಯಾಗ್ರಹದ ಧ್ಯೇಯದ ವಿಮರ್ಶೆಯು ಇನ್ನೂ ತೀರ್ಮಾನವಾಗಿಲ್ಲ. ಆದರೂ ಅದು ದೊಡ್ಡದಲ್ಲ; ಪ್ರಜಾ ಸಂಘವನ್ನು ಮಾನಿಸಿ ಅಂಗೀಕರಿಸಬೇಕೆಂದು ಈ ಸತ್ಯಾಗ್ರಹ ಹೂಡಲ್ಪಟ್ಟಿತ್ತು. ಜಯಪುರ ದರ್ಬಾರವು ದೊಡ್ಡದೊಂದು ಶರತ್ತು ಹಾಕಿ ಹೊರಗಿನವರಾದ ಯಾರೂ ಈ ಸಂಘದಲ್ಲಿರಕೂಡದೆಂದು ಅಂದಿರುವದು. ಆ ಮೇರೆ ಜಮ್ನಾಲಾಲಜೀಯವರಿಗೆ ಅಖಿಲ ಭಾರತ ಕಾಂಗ್ರೆಸಿನಲ್ಲಿ ಸಂಬಂಧ ಇಟ್ಟುಕೊಂಡು ಅದರ ಅಧ್ಯಕ್ಷರಾಗಿರುವದು ಸಾಧ್ಯವಾಗುವದಿಲ್ಲ. ಬೇರೆ ಅನೇಕ ಸಂಸ್ಥಾನಗಳಂತೆ ಇಲ್ಲಿಯೂ ಸತ್ಯಾಗ್ರಹವು ನನ್ನ ಪ್ರೇರಣೆಯಂತೆ ನಿಲ್ಲಿಸಲ್ಪಟ್ಟಿತು. ಆದರೆ ಅದು ಹೆಚ್ಚು ಕಾಲ ಹಾಗೇ ನಿಲ್ಲಿಸಲ್ಪಡಲಿಕ್ಕಿಲ್ಲ. ಆದ್ದರಿಂದ ಸಂಸ್ಥಾನದ ಮುಖಂಡರು ಮುಂದುವರಿದು ಜನತೆಯನ್ನು ಎಚ್ಚರಿಸಿ ಸಿದ್ಧರಾಗಿರಬೇಕೆಂದು ಸೂಚಿಸುತ್ತೇನೆ. ಸತ್ಯಾಗ್ರಹವು ನಿಲ್ಲಿಸಲ್ಪಟ್ಟಿದ್ದರೂ ಸರಕಾರವು ರಾಜಕೀಯ ಬಂಧಿಗಳನ್ನು ಇನ್ನೂ ಕೈದಿಯಲ್ಲಿಟ್ಟಿರುವದರಿಂದ ದರ್ಬಾರದವರು ತಪ್ಪು ಹೆಜ್ಜೆ ಇಡುತ್ತಿರುವರೆಂದು ಸೂಚಿಸಬಲ್ಲೆ. ಆದ್ದರಿಂದ ರಾಜಕೀಯ ಕೈದಿಗಳಿಗೆ ಕೊಡುತ್ತಿರುವ ಈ ಅನಾವಶ್ಯಕ ಅತ್ಯಾಚಾರಗಳು ವಡನೆ ನಿಲ್ಲಿಸಲ್ಪಡಬೇಕೆಂದು ದರ್ಬಾರರನ್ನು ಎಚ್ಚರಿಸುತ್ತೇನೆ.

ಆತ್ಮಶೋಧನೆ.

ಲೇ:-ಗಾಂಧಿ. (ಹರಿಜನ 6-5-39)

—:—

ಅಹಿಂಸೆಯೆಂಬುದೊಂದು ಶಾಸ್ತ್ರ. ಅದರ ಶಬ್ದ ಕೋಶದಲ್ಲಿ 'ಸೋಲು' ಎಂಬ ಶಬ್ದಕ್ಕೆ ಎಡೆಯಿಲ್ಲ. ಇಂದಿನ ರಾಜಕೋಟೆ ಸಮಸ್ಯೆಯಲ್ಲಿ ಅಹಿಂಸೆವು ವಿಫಲವಾಗಿದ್ದರೆ ಅದನ್ನು ಆಚರಿಸುವವರ ನ್ಯೂನತೆಯಲ್ಲದೆ ಬೇರಿಲ್ಲ. ಆದ್ದರಿಂದ ಅಹಿಂಸಾಭಕ್ತರಾಗಬೇಕಿದ್ದರೆ ಸಹನಾಶೀಲರಾಗಿರಿ. ಪ್ರತಿಷ್ಠೆ ಗೌರವಗಳನ್ನು ಮರೆಯಿರಿ. ನಿಸ್ವಾರ್ಥ ದೃಷ್ಟಿಯಿಂದ ಜನತಾಸೇವೆ ಮಾಡಿರಿ.

ಗಾಂಧೀಜಿಯವರು ರಾಜಕೋಟೆಯನ್ನು ಬಿಡುವ ಮೊದಲು ತಾರೀಕು 23-4-39 ರಲ್ಲಿ ರಾಜಕೋಟೆಯ ಕೆಲಸಗಾರರನ್ನು ಕರೆಸಿ, ಅವರ ಮನಸ್ಸಿನಲ್ಲಿ ಅಲ್ಲಿಯ ಚಳವಳಿ ಬಗ್ಗೆ ಮೂಡಿದ, ಮತ್ತು ಜನತೆಯು ಯಾವ ದಾರಿಯನ್ನು ಹಿಡಿಯಬೇಕೆಂದು ಅವರು ಆಶಿಸಿದ ವಿಚಾರಗಳನ್ನು ಅವರ ಮುಂದೆ ವಿಷದವಾಗಿ ಹೇಳಿದರು. ಈ ಕೆಳಗೆ ಅವರ ಮಾತುಕತೆಗಳ ಸಾರಾಂಶ ಕೊಡಲಾಗಿದೆ.

ಕೆಲಸವು ವ್ಯರ್ಥವಾಗಲಿಲ್ಲ.

ನಿಮಗೆಲ್ಲಾ ತಿಳಿದಿರುವಂತೆ ಕಳೆದ 15 ದಿನಗಳಿಂದ ರಾಜಕೋಟೆ ಬಿಕ್ಕಟ್ಟನ್ನು ಪರಿಹರಿಸುವ ಬಗ್ಗೆ ಪೂರ್ಣ ಶ್ರಮಪಟ್ಟೆನು. ಆದರೆ ನಾನು ಇದರಲ್ಲಿ ಜಯಶೀಲನಾಗಲಿಲ್ಲವೆಂದು ಒಪ್ಪಿಕೊಳ್ಳಬೇಕಾಗಿದೆ. ಭಾಯತ್ ಮತ್ತು ಮುಸಲ್ಮಾನರೊಡನೆ ಒಂದು ಒಪ್ಪಂದಕ್ಕೆ ಬರಲು ಅಸಾಧ್ಯವಾದದ್ದು ನನ್ನನ್ನು ಇನ್ನಷ್ಟು ದುಃಖಿತನನ್ನಾಗಿ ಮಾಡಿತು. ಆದರೆ ನನಗೆ ನನ್ನ ಕೆಲಸವು ನಿಷ್ಪ್ರಯೋಜಕವಾಗಲಿಲ್ಲವೆಂಬ ನಂಬಿಕೆ ಇದೆ. ನೀವೂ ಸಹ ಅದರಲ್ಲಿ ಭಾಗಿಗಳಾಗಬೇಕಾಗಿದೆ. ಎಲ್ಲಾ ವಿಚಾರಕ್ಕೂ ತಕ್ಕ ಸಮಯವನ್ನು ಆ ಜಗಜ್ಜನಕನು ನಿಶ್ಚಯಿಸಿರುವನು. ನಾವು ಪ್ರಯತ್ನಪಡಲಾಸನೇ ವಿನಹ ಅದರ ಫಲವನ್ನು ನಿಶ್ಚಿತಪಡಿಸಲಾಗಲಿಕ್ಕಿಲ್ಲ. ನನ್ನ ಮಟ್ಟಿಗೆ ನನ್ನ ಮೇಲಿದ್ದ ಜವಾಬ್ದಾರಿಯಂತೆ ಅದರ ಸಾಧನೆಗೆ ನಾನು ಅವಿಕಲ ಶ್ರಮಪಟ್ಟಿದ್ದೇನೆಂಬ ತೃಪ್ತಿಯು ನನಗಿದೆ.

ನಾನು ರಾಜಕೋಟೆ ಅಧಿಕಾರಿಗಳಿಗೆ ಈ ಸಮಸ್ಯೆಯನ್ನು ವಹಿಸಿ ಹೊರಡುವಾಗ ನನ್ನ ಪ್ರತಿಷ್ಠೆಯನ್ನು ಕಳೆದುಕೊಂಡಂತಾಗುವದೆಂಬ ಅರಿವು ನನಗಿತ್ತು. ನಾನು ಸಾರ್ವಭೌಮ ಸರಕಾರವು ಈ ಸಮಸ್ಯೆಯಲ್ಲಿ ಕೈಹಾಕಬೇಕೆಂದು ಕೇಳಿಕೊಳ್ಳಬಹುದಿತ್ತು. ಆದರೆ ನನ್ನ ಆ ಘೋರಣೆಯು ನ್ಯಾಯಸಮಂಜಸವಾದರೂ ಜನತೆಯ ಹಿತದೃಷ್ಟಿಯಿಂದ ಸರಿಯಲ್ಲವೆಂದೇ ನಾನು ಅದಕ್ಕೆ ಕೈಹಾಕದೆ ಶತ್ರುವಿನ ಕೊಡಿಯಲ್ಲಿ ತಲೆಯನ್ನಿಡುವಂತೆ ನಿಮ್ಮನ್ನು ಕೇಳಿಕೊಂಡದ್ದಾಗಿದೆ.

ಅಹಿಂಸಾಪರೀಕ್ಷೆ.

ಈ ನಿವೇದನೆಯನ್ನು ಮಾಡುವಾಗ ನನ್ನ ಮನಸ್ಸು ಹೇಗೆ ಕೆಲಸ ಮಾಡುತ್ತಿತ್ತೆಂದು ಸ್ವಲ್ಪ ವಿವರಿಸುವೆನು. ನಿಜವಾದ ಅಹಿಂಸೆಯು ಎಂಥಾ ಕಠಿಣ ಶತ್ರುವಿನ ಮೇಲೆಯೂ ತನ್ನ ಪರಿಣಾಮವನ್ನು ಮಾಡದೆ ಬಿಡದೆಂಬ ಆ ಸಿದ್ಧಾಂತವನ್ನು ಪುಷ್ಟೀಕರಿಸುವವನು ನಾನು. ರಾಜಕೋಟೆ ರಾಜಕೀಯ ವಿಚಾರದ ಬಗ್ಗೆ ನಾನು ವಿಚಾರಿಸತೊಡಗಿದೆನೆಂದರೆ,—ನನ್ನ ಅಹಿಂಸಾತತ್ವವು ಸಂಸ್ಥಾನಾಧಿಕಾರಿಗಳನ್ನು ಯಾಕೆ ಮಾರ್ಪಡಿಸಲಾರದೆ ಹೋಯಿತು?—ಎಂಬ ಪ್ರಶ್ನೆಯು ಮುಂದು ಬರುತಿತ್ತು. ದಕ್ಷಿಣ ಆಫ್ರಿಕದ ಸತ್ಯಾಗ್ರಹಿಗಳ ಕೇಳಿಕೆಯಾದರೂ ಅಲ್ಲಿಯ ಅಧಿಕಾರಿವರ್ಗದವರನ್ನು ರೊಚ್ಚಿಗೇಳಿಸಲಿಲ್ಲ. ಅಲ್ಲಿಯ ಅಧಿಕಾರಿಗಳಾದ ಜನರಲ್ ಸ್ಮಟ್ಸರವರು 8 ವರ್ಷಗಳ ಪರಿಯಂತರ ಈ ಸತ್ಯಾಗ್ರಹಿಗಳ ಕೇಳಿಕೆಯನ್ನು ಕಠಿಣವಾಗಿ ವಿರೋಧಿಸಿ ಕಡೆಗೆ ಅವರ ಕೇಳಿಕೆಯಲ್ಲಿರುವ ನ್ಯಾಯವನ್ನು ಒಪ್ಪಿಕೊಂಡರು. ದಕ್ಷಿಣ ಆಫ್ರಿಕದಲ್ಲಿ ಸಾಧ್ಯವಾದ ಕೆಲಸವು ರಾಜಕೋಟೆಯಲ್ಲೂ ಜಯಶೀಲವಾಗಲೇಬೇಕು. ಅಲ್ಲಿ ಕೆಲವೊಂದು ಭಾರತೀಯರು ಸೇರಿಕೊಂಡು ಇಡೀ ಬೋರ್ ಜನಾಂಗವನ್ನೇ ಎದುರಿಸಬೇಕಿತ್ತು. ಇಲ್ಲಿ ಅನೇಕ ಜನರಿರುವರು. ಅಲ್ಲಿಯ ಚಳವಳಿವು ಪ್ರತ್ಯಕ್ಷ ಸರಕಾರದೊಡನಾಯಿತು. ಇಲ್ಲಿ ಬರೇ ಒಬ್ಬ ವ್ಯಕ್ತಿಯ ಮನವನ್ನು ಮಾತ್ರ ಬದಲಾಯಿಸಬೇಕಿದೆ. ಈ ಕಾರ್ಯವನ್ನು ಮಾಡಲು ನಾವು ಅಸಮರ್ಥರಾದರೆ ನಮ್ಮಲ್ಲಿಯೂ, ನಮ್ಮ ಅಹಿಂಸಾದಲ್ಲಿ ಏನಾದರೊಂದು ಕೊರತೆ ಇದ್ದೇ ಇರಬೇಕು. ರಾಜಕೋಟೆಯಲ್ಲಿ ದರ್ಬಾರ್ ವೀರವಲರಿರುವ ವರೆಗೆ ಶಾಂತಿ ನೆಲಸದೆಂದು ಹೇಳುವುದು ಕೇವಲ ಹಿಂಸಾಮಯ ಮಾತೇ ವಿನಹ ಅಹಿಂಸಾ ಸೂಚಕವಲ್ಲ. ನಿಮ್ಮ ನನ್ನ ಅಹಿಂಸಾತತ್ವದ ಪರೀಕ್ಷೆಯು ಈ ದಿನ ಒಂದಿದೆ. ಆದ್ದರಿಂದ ಈ ಸಂದರ್ಭದಲ್ಲಿ ಎಲ್ಲರೂ ಎಚ್ಚತ್ತು ಸಮಯೋಚಿತ ವರ್ತಿಸಬೇಕಿದೆ.

ರಾಜಕೋಟೆ ಸಮಸ್ಯೆಯ ಬಗ್ಗೆ ನಾನೇ ನನ್ನೊಳಗೆ ವಿಚಾರಿಸುತ್ತಿದ್ದೇನೆ. ಶಾಂತಿ ಸಾಧಕನಂತೆ ರಾಜಕೋಟೆಗೆ ನಾನು ಬಂದು ದರ್ಬಾರ್ ವೀರವಲ ಮತ್ತು ಠಾಕೂರು ಸಾಹೇಬರನ್ನು ಉದ್ರೇಕಗೊಳಿಸಿದ್ದು ಹೇಗೆ? ರಾಜಕೋಟೆ ಅರಸರಿಗೂ ನನ್ನ ಮನೆತನಕ್ಕೂ ಪರಸ್ಪರ ಸಂಬಂಧವಿದ್ದು ಬಿಕ್ಕಟ್ಟಿನ ಸಂದರ್ಭದಲ್ಲಿ ಕೇಂದ್ರ ಸರಕಾರದ ಸಹಾಯ ಪಡೆಯಬೇಕಾಯಿತೇಕೆ? ಈ ವಿಚಾರಗಳನ್ನು ಆಗಿಂದಾಗ್ಯೆ ಪರಿಶೀಲಿಸಿದರೂ ನನ್ನ ಆತ್ಮಶಕ್ತಿಯು ಈ ಸಲಕ್ಕೆ ನನ್ನನ್ನು ಬಿಟ್ಟು ತೊಲಗಿದಂತಿದೆ. ಈ ಸಮಸ್ಯೆಗಳನ್ನು ವಿವೇಚಿಸಿ ವಿಮರ್ಶಿಸಲು ನಿಮಗೊಪ್ಪಿಸುವೆನು. ದರ್ಬಾರ್ ವೀರವಲರ ಮನಸನ್ನು ಬದಲಾಯಿಸುವವರಲ್ಲಿ ನಿಮ್ಮ ಮತ್ತು ನನ್ನ ಅಹಿಂಸದ ಪೂರ್ಣ ಪರೀಕ್ಷೆಯು ನಿಂತಿದೆ. ನನ್ನ ವಿಚಾರ ವಿಮರ್ಶೆಯ ಹೊಸ ಶೋಧನೆಯಾದರೂ ಇದೇ. ಎಂಥಾ ಸುಧಾರಣೆ ಸವಲತ್ತುಗಳನ್ನು ಬಲಾತ್ಕಾರದಿಂದ ಅರ್ಜಿಸಿದರೂ ಸಂಸ್ಥಾನಾಧಿಕಾರಿಗಳ ಮನಸ್ತೃಪ್ತಿಯ ಮೇಲೆ ಅವುಗಳ ಲಾಭಾಲಾಭವು ನಿಂತಿರುವದರಿಂದ ನಮ್ಮ ಮುಂದಿನ ಧ್ಯೇಯ ಸಂಪಾದನೆಗೆ ಅಧಿಕಾರಿಗಳ ಚಿತ್ತಪಲ್ಲಟ ಮಾಡುವದು ಪ್ರಥಮ ಸೋಪಾನ. ಆದರೆ ನಿಮ್ಮ ಅಹಿಂಸೆಯು ಭಾಷಣಗಳಲ್ಲಿ, ಕೃತಿಯಲ್ಲಿ, ಗುಣದಲ್ಲಿ ಒಡೆದು ಕಾಣಿಸಬೇಕು. ಅಹಿಂಸೆಯ ನಿಶ್ಚಲ ಭಕ್ತನು, ದೃಢನಿಶ್ಚಿತ ಕಾರ್ಯ, ಆತ್ಮ ಸಂಯಮನದಿಂದ ಕೂಡಿ ಜಾಗೃತನಿರಬೇಕು.

ಬೆಳಕನ್ನು ಅಂತರ್ಮುಖ ಮಾಡಿ.

ನಾನು ವಿವರಿಸಿದ್ದರ ಅರ್ಥದ ಬಗ್ಗೆ ಉದಾಹರಣೆಯನ್ನು ಕೊಟ್ಟು ಸಮರ್ಥಿಸುವೆನು. ನಿನ್ನೆ ದಿನ ನನಗೂ, ದರ್ಬಾರ್ ವೀರವಲರಿಗೂ 5 ಗಂಟೆಗಳ ಸಂಭಾಷಣೆಯಾಯಿತು. ಅವರ ಮನೋಭಾವವು ಮೊದಲಿನಂತೆಯೇ ಇತ್ತು. ಆದರೆ ನನ್ನ ಮನವು ನನ್ನ ಅಂತರೀಕ ವಿವೇಚನೆಯ ಪರಿಣಾಮವಾಗಿ ಹೊಸ ಹುರುಪಿನಿಂದ ಕೂಡಿತ್ತು. ಈ ಸಾರಿಯ ನನ್ನ ಮಾತುಗಳು ಅವರಲ್ಲಿಯೂ ಪರಿಣಾಮವನ್ನು ಮಾಡದಿರಲಿಲ್ಲ. ವೀರವಲರ ದೃಷ್ಟಿಯಿಂದ ವಿಚಾರಗಳನ್ನು ವಿವೇಚಿಸಿ ಅವರ ಚಿತ್ತವನ್ನು ಮಾರ್ಪಡಿಸಲು ಪ್ರಯತ್ನಿಸಿದೆನು. ಅವರೊಂದಿಗೆ ನಡೆದ ಸಂಭಾಷಣೆಗಳನ್ನೆಲ್ಲಾ ಇಲ್ಲಿ ವಿವರಿಸಲಾಗುವದಿಲ್ಲ. ಆದರೆ ಒಂದು ವಿಚಾರವನ್ನು ಮಾತ್ರ ನಿಮ್ಮ ಮುಂದಿಡುವೆನು. ದರ್ಬಾರ್ ವೀರವಲರಿಗೆ ಪ್ರಜಾಪರಿಷತ್ ಜನರ ಮೇಲೆ ತುಂಬಾ ದ್ವೇಷವಿರುವದು. ಇದು ನನ್ನನ್ನು ಬೇಸರಕ್ಕೀಡುಮಾಡಿತು. ನಿಮ್ಮ ಅಹಿಂಸಾ ಸತ್ಯಾಗ್ರಹವು ಅವರಲ್ಲಿ ಈ ದ್ವೇಷವನ್ನು ಹುಟ್ಟಿಸಲು ಕಾರಣವೇನು? ತನ್ನ ಮಗುವು ಬೇರೆಯವರಿಂದ ನಿಂದಿಸಲ್ಪಟ್ಟರೆ ಹೇಗೆ ತಾಯಿಯು ನೊಂದು, ಬೆಂದು ಊಟ ಮಾಡದೆ ಮಲಗುವಳೋ ಆ ರೀತಿಯಲ್ಲಿ ಅಹಿಂಸಾ ಪಾಲಕರಾದ ನೀವು ನಿಮ್ಮಷ್ಟಕ್ಕೆ ಸಂತಾಪಕ್ಕೊಳಗಾಗಬೇಕಲ್ಲದೆ ವಿರೋಧಿಗಳಲ್ಲಿ ಈ ದ್ವೇಷಾಸೂಯೆ ಹುಟ್ಟಲು ಕಾರಣವಿಲ್ಲ. ಆದ್ದರಿಂದ ಪ್ರತಿಯೊಬ್ಬ ಸತ್ಯಾಗ್ರಹಿಯೂ ಅಹಿಂಸೆಯ ಬೆಳಕನ್ನು ಅಂತರ್ಮುಖಮಾಡಿ ಮನದಲ್ಲಿ ಅಡಗಿರುವ ಇತರ ದುಷ್ಟ ಭಾವನೆ, ಆಶೆಗಳನ್ನು ಕಿತ್ತೊಗೆದು ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡು ತನ್ನ ಧ್ಯೇಯಸಾಧನೆಯನ್ನು ಮಾಡಲು ಕಂಕಣಬದ್ಧನಾಗಬೇಕು.

ಅಹಿಂಸದ ತೊಡರುಗಳು.

ನಿಮ್ಮ ಆತ್ಮಶಕ್ತಿಯಿಂದ ನೀವು ಮುಂದರಿಯಬೇಕೇ ವಿನಹ ಹೊರಗಿನ ಸಹಾಯದಿಂದ ಕೂಡದೆಂದು ಮೊದಲೇ ನಿಮಗೆ ಸಾರಿ ಹೇಳುತ್ತಾ ಬಂದಿರುವೆನು. ನೀವು ಇನ್ನೂ ಈಗ ಒಂದು ಹೆಜ್ಜೆ ಮುಂದೆ ಹೋಗಬೇಕಿದೆ. ನೀವು ಇತರರ ಮಾರ್ಗದರ್ಶಿತ್ವವನ್ನು ಕಾಯಕೂಡದು. ಸತ್ಯಾಗ್ರಹವೆಂಬುದು ಸ್ವತಂತ್ರಪ್ರೇರಿತವೆಂದು ಊಹಿಸಬೇಕು. ಚಿಕ್ಕ ಚಿಕ್ಕ ವಿಚಾರಗಳಿಗೂ ಸಹ ನನ್ನ ಸಲಹೆಯನ್ನಪೇಕ್ಷಿಸುವದು ನನಗೂ ನಿಮಗೂ ಅಸಹನೀಯವಾದದ್ದು. ಆದ್ದರಿಂದ ನೀವು ನಿಮ್ಮ ಪ್ರೇರಣೆಯಂತೆ ದರ್ಬಾರ್ ವೀರವಲರೊಡನೆ ಒಂದು ಒಪ್ಪಂದಕ್ಕೆ ಬರುವ ನಿರ್ಧಾರಮಾಡಬೇಕು. ಅಹಿಂಸೆಯು ನಿಮಗೆ ಒಗ್ಗದ ಪಕ್ಷ ಯೂ, ಅದು ನಿಮ್ಮನ್ನು ಹೇಡಿಗಳನ್ನಾಗಿ ಮಾಡುವ ಪಕ್ಷ ನೀವು ಆ ತತ್ವವನ್ನು ಬಿಟ್ಟು ಬಿಡಬಹುದು. ಆದರೆ ನೀವು ಅಹಿಂಸಾ ಮಾರ್ಗವನ್ನು ಹಿಂಬಾಲಿಸಿದರೆ ಅದರಿಂದ ವಿರೋಧಿಯ ಮನವನ್ನು ಒಲಿಸದ ಪಕ್ಷ ಅದು ಬರೀ ಹೆಸರಿನ ಅಹಿಂಸವಾದೀತು.

ಈ ಸಂದರ್ಭದಲ್ಲಿ ನಿಮಗೆ ಕೆಲವು ಸೂಚನೆಗಳನ್ನು ಕೊಡಲು ಇಚ್ಛಿಸುತ್ತೇನೆ. ಸುಧಾರಣಾ ಕಮಿಟಿಗೆ ಸೂಚಿಸಲ್ಪಟ್ಟ ಏಳು ಜನರೂ ದರ್ಬಾರ್ ವೀರವಲರಲ್ಲಿಗೆ ಹೋಗಿ ರಾಜಕೋಟೆ ಸಮಸ್ಯೆಯ ತೀರ್ಮಾನದ ಬಗ್ಗೆ ನನ್ನನ್ನು ನಿವೃತ್ತಗೊಳಿಸಿರುವರೆಂದೂ, ಸರಕಾರದವರನ್ನೂ ಈ ವಿಚಾರ [illegible] ಬರೇ ದರ್ಬಾರ್ ವೀರವಲರೇ ಕಳೆದ ಡಿಸಂಬರ್ 26 ರ ಪ್ರಕಟಣೆ ಮೇರೆ ವರ್ತಿಸಿ ಜನತೆಯ ಹಿತವನ್ನು ಬಯಸಬೇಕೆಂದು ಹೇಳಿ ಇಡೀ ಸಮಸ್ಯೆಯ ಜವಾಬ್ದಾರಿಯನ್ನು ಅವರ ಮೇಲಿಡಬೇಕು. ಅವರು ಮಾಡಬಹುದಾದ ಯಾವ ಅಪಚಾರವನ್ನು ಸಹಿಸುವ ಸಹನಶೀಲರಾಗಿರಿ. ಪೂರ್ಣ ಅಧಿಕಾರ ಚಲಾವಣೆಯ ಬಗ್ಗೆ ವೀರವಲರಿಗೆ ಸಮರ್ಥನೆಯಿತ್ತು ಹುರುಪುಗೊಳಿಸಿರಿ. ದಕ್ಷಿಣ ಆಫ್ರಿಕದ ಸತ್ಯಾಗ್ರಹದಲ್ಲೂ ಸಹ ನಾನು ನನ್ನ ಪ್ರತಿಷ್ಠೆಯನ್ನು ಕಡೇ ಅಂತಸ್ತಿಗೆ ತಂದದ್ದರಿಂದಲೇ ನಾನು ಅಲ್ಲಿ ಅಹಿಂಸದ ಮೂಲಕ ಜಯಪಡೆಯಲು ಸಮರ್ಥನಾದುದು. ಅಹಿಂಸಾವೆಂಬುದು ನಿಸ್ವಾರ್ಥದೃಷ್ಟಿಯ ಜನತೆಯ ಸೇವೆಯಿಂದ ವ್ಯಕ್ತವಾಗಬೇಕು. ಅದರ ಸಾಧನೆಗೆ ಚರಕಾಕ್ಯಂಥ ಹೆಚ್ಚಿನ ಸಹಕಾರಿಯಾದ ಸಾಧನವು ಬೇರಿಲ್ಲ.

ಅಹಿಂಸಾವೆಂಬುದೊಂದು ಶಾಸ್ತ್ರ ಆ ಶಾಸ್ತ್ರದ ಶಬ್ದ ಕೋಶದಲ್ಲಿ 'ಸೋಲು ಎಂಬ ಶಬ್ದಕ್ಕೆ ಎಡೆ ಇಲ್ಲ. ಯೋಚಿಸಿ ಧ್ಯೇಯಸಾಧನೆಯಲ್ಲಿ ಅಪಜಯವೆಂ: ಮುಂದಿನ ಶೋಧನೆಗೆ ಹೊಸ ದಾರಿಯೆದೇ ತಿಳಿಯಬೇಕು. ಈ ದೃಷ್ಟಿಯಿಂದ ನೀವುಗಳೆಲ್ಲರೂ ಇಂದಿನ ಸ್ಥಿತಿಯನ್ನು ವಿರಿಸಿ ಕರ್ತವ್ಯ ಧುರಂಧರರಾಗಿರಿ.'

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

3 **Ludhiana.**

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರೀದಾರುಗಳಿಗೆ 2...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, **ಸೌತ್ ಪರೇಡ್, ಬೆಂಗಳೂರು.**

52–9

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.

ಮತ್ತು ಕಂಪನಿ,

(52–23) ಗಿರಗಾಂವ, ಮುಂಬಯಿ ೪,

ನೋ ಟೀ ಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಐಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು.

ಮೆ. ಕೆ. ಯಂ. ಸುಬ್ಬಯ್ಯನವರು.

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಯಪಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

"ಕೊಡಗು" ಪತ್ರಿಕೆಯ

ಚಂದಾದಾರರಲ್ಲಿ

ವಿನಂತಿ.

ಮಹನೀಯರೇ,

ವರದಿ ವರ್ಷವು ಈ ಮೇ ತಾರೀಕು 31ಕ್ಕೆ ಅಂತ್ಯವಾಗುವದರಿಂದ ಅದರೊಳಗೆ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಬರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮಾಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್—ಪಂಪ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ
ಟ್ರೆಜರರ್—ರಾವ್ ಬಹದ್ದೂರ್ ಪಿ ದೇವಯ್ಯನವರು
ಸಕ್ರೆಟರಿ—ಮ ಎಸ್ ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ	1 ಕಲಮಿಗೆ.	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60	,, 20	,, 13	,, 8
1 ತಿಂಗಳಿಗೆ—	,, 25	,, 10	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯಂತಕಾಲಿಕ ಸುಲಭ ದರದ ಹಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಪೇಕ್ಷಣೀಯವಾದ ಮತ್ತು ಜನಾದರಣೀಯ ಜೀವ ವಿಮಾ ಕಂಪನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ನೆಲೆಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪ್ರೋಲಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೇಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(52-18)

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಪಿ. ಐ. ಬೆಳ್ಯಪ್ಪ.
ವಾರ್ಷಿಕ ಚಂದಾ ರೂ. ೩-೮-
ತಾ. ೧೯—೫—೧೯೩೯.
ಸಂಪುಟ ೧೮] [ಸಂಚಿಕೆ ೫೦

THE CANARA BANKING CORPORATION, UDIPI, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000 -
are now issued at
all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-23

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 6 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-12

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕನೈಟ್, ಎಂದೂ ತುಂಡಾಗದ ಸೆಲೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

26

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೈಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–2

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** — ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** — ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. ಝಂಡೂ ಅಯೋಡೈಸ್ಡ್ **ಸೇರಸಪರಿಲ್ಲಾ** — ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ. ಎಸ್

(52-34) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋನೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12-30

ಈ ವಾರದ ಕಥೆ.

ಉದ್ಧಾರ.

(ಲೇಖಕ:- ಬಿ. ಕೆ. ರಾಮಕೃಷ್ಣ ಶರ್ಮಾ.)

ದೃಶ್ಯ ೧.

'ಪಿತಾಜೀ!'

'ಏನಮ್ಮಾ ಕಮಲಾ?'

ಈ ಮಾತು ನಿಜವೇ?'

'ಯಾವ ಮಾತೇ ಕಮಲಾ?

'ನೀವು ನನ್ನನ್ನು ಧನದಾಶೆಯಿಂದ ಓರ್ವ ಮುದಿ ಕೋತಿಯ ಕೈಗೆ ಮಾರ....'

'ಏನು? ಧನದಾಶೆಯಿಂದ! ಸುಳ್ಳು ತೀರಾ ಸುಳ್ಳು ಹೀಗೆಂದು ನಿನಗೆ ಯಾರು ಹೇಳಿದರು?'

'ಪಿತಾಜೀ! ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯಲಾರಂಭಿಸಿದರೆ ಪ್ರಪಂಚವೆಲ್ಲವೂ ಕುರುಡಾಗಿರುವುದೇ? ನಿಮ್ಮ ಚಾಣಕ್ಯ ತಂತ್ರವು ನನಗೆ ಅರಿಯದೆಂದು ತಿಳಿದಿರುವಿರಾ?'

'ಅಮ್ಮಾ ಕಮಲಾ! ಹೀಗೆ ನೀನು ಇಲ್ಲದ್ದನ್ನೊಂದು ಕಲ್ಪಿಸಿಕೊಂಡು ವೃಥಾ ನನ್ನಲ್ಲಿ ದೋಷವನ್ನೆಣಿಸಬೇಡ ಕಂಡೆಯಾ.'

'ಏನು, ದೋಷಾರೋಪಣೆಯೇ? ನೀವು ಆ ಮುದಿ ಗೂಬೆಯಂತಿರುವ ಡಾಕ್ಟರನಿಗೆ ನನ್ನನ್ನು ಕೊಡುವುದಾಗಿಯೂ ಅವನು ನಾಲ್ಕು ಸಾವಿರ ನಿಮಗೆ ಕೊಡುವುದಾಗಿಯೂ, ಒಪ್ಪಿರುವುದಲ್ಲದೆ, ಈಗಾಗಲೇ ನೀವು ಅವನಿಂದ ಎರಡು ಸಾವಿರ ಮುಂಗಡವಾಗಿ ತೆಗೆದುಕೊಂಡಿರುವುದಿಲ್ಲವೇ?'

'.......... ....'

'ಪಿತಾಜೀ! ನಿಮಗೆ ಧನ ಪಿಶಾಚಿಯು ಬಲವಾಗಿ ಹಿಡಿದಿರುವದು. ನೀವು ಧನದಾಶೆಯಿಂದ ಯಾವಳನ್ನು ಬೆಂಕಿಯ ಕುಂಡದಲ್ಲಿ ಕೆಡಹಬೇಕೆಂದಿರುವಿರೋ, ಅವಳು ನಿಮ್ಮ ಮಗಳೇ ಎಂಬುದನ್ನು ತೀರಾ ಮರೆತಂತೆ ತೋರುತ್ತಿದೆ.' ಆದರೆ ಪಿತಾಜೀ! ನಿಮ್ಮ ದುರಾಶೆಯು ಎಂದೂ ಈಡೇರಲಾರದೆಂಬದನ್ನು ಮಾತ್ರ ಮರೆಯಬೇಡಿರಿ. ನಾನು ಆ ಪಿಶಾಚಿಯ ಮುಖಾವಲೋಕನವನ್ನು ಕೂಡ ಮಾಡಲಾರೆನು.'

'ಕಮಲಾ, ನಿನ್ನ ಗ್ರಹಿಕೆಯು ಪೂರಾ ತಪ್ಪಾಗಿರುವುದು. ನೀನು ಯೋಚಿಸಿರುವಷ್ಟು ಡಾಕ್ಟರ್ ರಮೇಶರಾಯರು ನೀಚರಾಗಿರುವುದಿಲ್ಲ. ಅವರು ಸಜ್ಜನರೂ, ಯುವಕರೂ ಆಗಿರುವರು. ಏನು? ಮೊದಲಿನ ಹೆಂಡತಿ ಸತ್ತ ಮಾತ್ರಕ್ಕೆ ಮುದುಕನೆಂದಾಯಿತೇ? ಅಮ್ಮಾ! ಕಮಲಾ! ಸುಮ್ಮನೆ ನೀನು ಹೀಗೆ ಹಟ ಮಾಡಬೇಡ. ನಿನ್ನನೆಂದೂ ನಾನು ಹೊಂಡಕ್ಕೆ ಕೆಡಹಲಾರೆನು.'

'ಸಾಕು ಮಾಡಿರಿ, ಪಿತಾಜಿ! ಯುವಕನಂತೆ, ಯುವಕ! ಯುವಕನೆನ್ನುವ ನಿಮಗೆ ನಾಚಿಕೆಯಾಗುವುದಿಲ್ಲವೇ? ಇಂದೋ ನಾಳೆಯೋ ಸಾಯುವ ಮುದಿ ಗೂಬೆ, ಯುವಕನಂತೆ. ಅಂತೂ ಆ ಚಂಡಾಲನು ನಿಮ್ಮ ಕಿವಿಯಲ್ಲಿ ಚೆನ್ನಾಗಿ ಊದಿದಂತೆ ತೋರುತ್ತದೆ. ಆದರೆ, ಪಿತಾಜೀ! ನಾನಾ ಪಿಶಾಚಿಯ ಪಾಣಿಗ್ರಹಣವನ್ನು ಕಾಲತ್ರಯದಲ್ಲೂ ಮಾಡಲಾರೆನೆಂಬುವುದನ್ನು ಜ್ಞಾಪಕದಲ್ಲಿಡಿರಿ.'

'ದುಷ್ಟೇ! ಚಾಂಡಾಲಿನೀ! ತಿಳಿಯಿತು, ಈಗಾಗಲೇ ನಿನ್ನನ್ನು ಆ ವಿಶುವು ಕೆಡಿಸಿರುವನೆಂದು ತೋರುವುದು.'

'ನಿಜ ನಿಜ. ಚೆನ್ನಾಗಿ ಊಹಿಸಿ ಹೇಳಿದಿರಿ. ವಿಶ್ವೇಶ್ವರನು, ನನ್ನನ್ನು ಕೆಡಿಸಿರುವುದೇನು? ಅವನೇ ನನ್ನ ಭಾವೀ...........'

'ನಾಚಿಕೆಗೆಟ್ಟವಳೇ! ಮುಚ್ಚು ಬಾಯಿ, ನಿನ್ನ ಮುಖವನ್ನು ನೋಡಿದರೆ ಸ್ನಾನ ಮಾಡಬೇಕಾಗುವದು. ನಿನಗಿಷ್ಟು ಅಹಂಕಾರವೇ? ನಿನ್ನನ್ನು ಆ ರಮೇಶ ರಾಯರಿಗೆ ಕೊಟ್ಟು ಮದುವೆ ಮಾಡದಿದ್ದರೆ ನನ್ನ ಹೆಸರು ಶ್ರೀನಿವಾಸನೇ ಅಲ್ಲ. ನೀನು ಅವರನ್ನು ವರಿಸಲೇಬೇಕಾಗುವದು.'

'ಆಗದು, ಎಂದೂ ಆಗದು. ಕಾಲತ್ರಯಗಳಲ್ಲೂ ಆಗಲಾರದು. ಪಿತಾಜೀ! ನೀವಿಂದು ನಿಮ್ಮ ಕರ್ತವ್ಯವನ್ನು ತೀರಾ ಮರೆತಿರುವಿರಿ. ನನ್ನನ್ನು ಆ ರಾಕ್ಷಸನ ಕೈಗೆ ಅರ್ಪಿಸುವದಕ್ಕಿಂತಲೂ ಬಾವಿಗಾದರೂ ದೊಬ್ಬಿಬಿಡಬಾರದೇ? ಅಮ್ಮನಿದ್ದಿದ್ದರೆ ನನಗಿಂದು ಈ ಕಷ್ಟವಿದ್ದಿತೇ?

ಕಮಲೆಯು ಹೀಗೆನ್ನುತ್ತಾ ಶೋಕಾತಿಶಯದಿಂದ ಒಳಗೆ ನಡೆದಳು. ಹಾಗೂ ತನ್ನ ಕೋಣೆಯೊಳಗೆ ಹೋಗಿ ಹಾಸಿಗೆಯ ಮೇಲೆ ಬಿದ್ದುಕೊಂಡು ಬಿಕ್ಕಿ ಬಿಕ್ಕಿ ಅಳ ಹತ್ತಿದಳು. ಇತ್ತ ಶ್ರೀನಿವಾಸರಾಯರೂ ಕೂಡ ರೋಷದಿಂದ ಎದ್ದು ಡಾಕ್ಟರ್ ರಮೇಶರಾಯರ ಮನೆಯ ಕಡೆಗೆ ನಡೆದರು.

ದೃಶ್ಯ ೨.

ರಮೇಶರಾಯರು ಬೆಂಗಳೂರಿನ ಒಬ್ಬ ಸಾಮಾನ್ಯ ಡಾಕ್ಟರಾಗಿದ್ದರು. ಅವರ ವಯಸ್ಸು ಸುಮಾರು ಐವತ್ತಾರಕ್ಕೆ ಮುಟ್ಟಿತ್ತು. ಅವರ ಹೆಂಡತಿಯು ಹತ್ತು ವರ್ಷಗಳ ಹಿಂದೆ ಗಂಡು ಮಗುವೊಂದನ್ನು ಹೆತ್ತು ಸದ್ಗತಿಯನ್ನು ಹೊಂದಿದ್ದಳು. ರಮೇಶರಾಯರೂ ಕೂಡ ಇದರಿಂದ ವೈರಾಗ್ಯ ಹೊಂದಿ ಆ ಮಗುವಿನ ಪೋಷಣೆಯಲ್ಲೇ ನಿರತರಾಗಿ ಎರಡನೇ ಸಂಬಂಧದ ಯೋಚನೆಗೆ ಹೋಗಿರಲಿಲ್ಲ. ಆದರೆ ಕೆಲವು ಸಮಯದನಂತರ ಶ್ರೀನಿವಾಸರಾಯರ ಮಗಳಲ್ಲಿ ಮೋಹಗೊಂಡ ರಮೇಶರಾಯರು ಆ ವಿಷಯವಾಗಿ ರಾಯರಲ್ಲಿ ಪ್ರಸ್ತಾಪಿಸಿದರು. ರಾಯರು ಮೊದಲು ಆ ಮಾತಿಗೆ ಒಪ್ಪಿರಲಿಲ್ಲ. ಆದರೆ ಡಾಕ್ಟರು ನಾಲ್ಕು ಸಾವಿರ ರೂಪಾಯಿಗಳ ಆಶೆಯನ್ನು ರಾಯರಿಗೆ ತೋರಿಸುತ್ತಲೇ ಅವರು ಸಂತೋಷದಿಂದ ಒಪ್ಪಿಕೊಂಡಿದ್ದರು. ಒಂದು ದಿನ ಹತ್ತು ಗಂಟೆಯ ಸಮಯವಾಗಿತ್ತು. ಏನೋ ತೊಂದರೆಯಿದ್ದ ಕಾರಣ ರಮೇಶರಾಯರು ತಮ್ಮ ಆಫಿಸಿಗೆ ಹೋಗದೆ ಕೋಣೆಯಲ್ಲಿ ಆರಾಮ ಕುರ್ಚಿಯೊಂದರ ಮೇಲೆ ಮಲಗಿಕೊಂಡು ಏನೋ ಆಲೋಚಿಸುತ್ತಿದ್ದರು ಕೋಣೆಯೇನೋ ವಿಶಾಲವಾಗಿಯೇ ಇದ್ದಿತು. ಆದರೆ ಸಾಮಾನುಗಳೆಲ್ಲಾ ಅಲ್ಲಲ್ಲಿ ಅಸ್ತವ್ಯಸ್ತವಾಗಿ ಬಿದ್ದಿದ್ದವು. ಗೋಡೆಯ ಮೇಲೆ ದೊಡ್ಡ ಆದರೆ ಬಹಳ ಹಳೇ ಗಡಿಯಾರ ಒಂದು ತನ್ನ ಕೆಲಸದಲ್ಲಿ ತಲ್ಲೀನವಾಗಿತ್ತು. ಹಾಗೆಯೇ ಕೋಣೆಯ ಮೂಲೆ ಒಂದರಲ್ಲಿ ಡಾಕ್ಟರರ ಹತ್ತು ವರ್ಷದ ಮಗು ರಾಮುವು ಗಾಳಿ ಪಟ ಮಾಡುವುದರಲ್ಲಿ ಮಗ್ನನಾಗಿದ್ದನು.

ಅಷ್ಟರಲ್ಲಿ ಯಾರೋ ಹೊರಗೆ ಬಂದ ಸಪ್ಪಳವಾಯಿತು. ರಾಮುವು ಕೆಲಸವನ್ನು ಬಿಟ್ಟು ಹೊರಗೆ ಓಡಿದನು. ಹಾಗೂ ಹೊರಗೆ ರಾಯರು ನಿಂತಿರುವುದನ್ನು ನೋಡಿ 'ಪಪ್ಪಾ, ಪಪ್ಪಾ' ಎನ್ನುತ್ತಾ ಓಡಿ ಬಂದನು. ಆಗಲೇ ಡಾಕ್ಟರೂ ಸಹ ಎದ್ದು ಹೊರಗೆ ಹೋದರು ಮತ್ತು ಶ್ರೀನಿವಾಸರಾಯರೂ ಬಂದುದನ್ನು ನೋಡಿ ಅವರನ್ನು ಕರತಂದು ಕುರ್ಚಿಯೊಂದರಲ್ಲಿ ಕೂರಿಸಿದರು. ಆ ಮೇಲೆ ತಾನೂ ಸಮೀಪದ ಒಂದು ಕುರ್ಚಿಯಲ್ಲಿ ಕುಳಿತುಕೊಂಡು ರಾಯರನ್ನು ಕುರಿತು ಕೆಲಸವೆಲ್ಲವೂ ಸರಿಹೋಯಿತೇ ರಾಯರೇ?' ಎಂದು ಕೇಳಿದರು. 'ಮುಕ್ಕಾಲು ಸರಿ ಹೋದಂತೆಯೇ ಸರಿ. ಆದರೆ–

'ಆದರೆ ಏನು? ಎರಡು ಸಾವಿರ ಕೊಟ್ಟ ಮೇಲೆ ಇನ್ನು ಆದರೆ ಇದೆಯೇ?'

'ಹಾಗೇನೂ ಇಲ್ಲ. ಆದರೆ ಹುಡುಗಿ ಸ್ವಲ್ಪ ಒಪ್ಪದವಳಾಗಿದ್ದಾಳೆ. ಇನ್ನು ಬೇಗನೆ ದಾರಿಗೆ ಬರುವಳೆಂದು ತೋರುತ್ತದೆ.'

'ರಾಯರೇ ನೀವು ಹೇಗಾದರೂ ಮಾಡಿ ಹುಡುಗಿಯನ್ನು ಬೇಗ ಒಡಂಬಡಿಸಿ ಇದೇ ವೈಶಾಖದಲ್ಲಿ ಲಗ್ನವನ್ನು ತೀರಿಸಿ ಬಿಡಿರಿ. ಆ ಮೇಲೆ ನನಗೆ ಬಿಡುವಿಲ್ಲ. ಸಾವಿರಾರು ಕೆಲಸಗಳು ಮುಂದೆ ಬಿದ್ದಿವೆ.'

'ಡಾಕ್ಟರೇ, ನೀವು ನಿಶ್ಚಿಂತರಾಗಿರಿ. ಎಲ್ಲವೂ ಬೇಗನೆ ಸರಿ ಹೋಗುವುದು. ಆದರೆ ಈಗ ಮದುವೆಯ ತಿಥಿಯ ನಿಶ್ಚಯವು ಬೇಗನೇ ಆಗಬೇಕಾಗಿದೆ'

'ಅದಕ್ಕೇನು ರಾಯರೇ? ಯಾವುದಾದರೊಂದು ಭಾನುವಾರವೊಂದನ್ನು ಇಟ್ಟುಕೊಂಡರಾಯಿತು

'ನೀವಿಷ್ಟು ಕಲಿತವರಾದರೂ ನಿಮಗಿನ್ನು ಪ್ರಪಂಚಾನುಭವವಾದಂತೆ ತೋರುವುದಿಲ್ಲ. ರಾಯರೇ! ನಮ್ಮಂಥಾ ಈಗಿನ ಇಂಗ್ಲಿಷ್ ಕಲಿತ ಯುವಕರಿಗೆ 'ಲಗ್ನವೂ, ಭಗ್ನವೂ,' ಅಂತೂ ರಜಾ ದಿನವಾಗಬೇಕು.'

'ಸರಿ ಹಾಗಾದರೆ ಮುಂದಿನ ಭಾನುವಾರವೇ ಲಗ್ನ ಸಮಾರಂಭವಾಗಿ ಬಿಡಲಿ.'

'ಆಗಲಿ ಬಹಳ ಸಂತೋಷ 'ಶುಭಸ್ಯ ಶೀಘ್ರಂ' ಎಂಬ ಹಿರಿಯೋಕ್ತಿ ಇರುವುದು.

'ಡಾಕ್ಟರೇ! ಬಾಕಿ ಎರಡು ಸಾವಿರದ ವಿಷಯ.'

'ಅದರ ಚಿಂತೆ ನಿಮಗೀಗ ಬೇಡ ರಾಯರೆ, ಎಲ್ಲವೂ ಮದುವೆ ದಿನ ಸರಿ ಹೋಗುವದು.'

'ಆಗಲಿ' ಎಂದುಕೊಂಡು ರಾಯರು ಮನೆಯ ಕಡೆಗೆ ಸಂತೋಷದಿಂದ ಹಿಂತಿರುಗಿದರು. ಮತ್ತು ಬೇಗ ಬೇಗನೆ ಮದುವೆಯ ತಯಾರಿಯಲ್ಲಿ ತೊಡಗಿದರು. ಮಗಳ ವಿಷಯ ಮಾತ್ರ ರಾಯರಿಗೆ ಸ್ವಲ್ಪ ಹೆದರಿಕೆ ಇತ್ತು. ಆದರೆ ಮದುವೆಯ ಮಾಪೋರ್ತನ್ನು ಕಣ್ಣು ಮುಂದೆ ಬರುತ್ತಲೇ ಅವಳು ತಾನೇ ತಾನಾಗಿ ಒಪ್ಪದಿರಲಾರಳೆಂದು ಧೈರ್ಯಗೊಂಡರು.

ಮದುವೆಯ ದಿನವೂ ಕೂಡ ನಿಶ್ಚಯವಾಗಿದೆಯೆಂಬ ಮಾತನ್ನು ಕೇಳಿದ ಕೂಡಲೇ ಕಮಲೆಯು ಗೊಂದಲದಲ್ಲಿ ಬಿದ್ದಳು. ಅವಳಿಗೆ ಏನೂ ತೋಚದಾಯಿತು. ತನ್ನ ದುಃಖವನ್ನು ಹೇಳಿಕೊಳ್ಳಲು ತಂದೆಯ ವಿನಹ ಅವಳಿಗೆ ಮತ್ಯಾರೂ ಇರಲಿಲ್ಲ. ತಂದೆಯಾದರೋ ಅವಳ ಮಾತಿಗೆ ಕಿವಿಗೊಡುತ್ತಿರಲಿಲ್ಲ. ಆದರೂ ಅವಳು ಮತ್ತೊಮ್ಮೆ ತಂದೆಯನ್ನು ಬಹಳವಾಗಿ ಕೇಳಿಕೊಂಡಳು. ಆದರೂ ಆ ಸ್ವಾರ್ಥಪರನು ಅವಳ ಯಾವ ಮಾತನ್ನೂ ತೆಗೆದುಕೊಳ್ಳಲಿಲ್ಲ. ಆಗಂತೂ ಕಮಲೆಯು ನಿರುಪಾಯಳಾದಳು. ಅವಳು ಕೂಡಲೇ ತನ್ನ ಕೋಣೆಯೊಳಗೆ ಹೋಗಿ ಬಾಗಿಲು ಹಾಕಿ ಹಾಸಿಗೆಯ ಮೇಲೆ ಬಿದ್ದುಕೊಂಡು ಒಂದೇ ಸಮನೆ ಅಳಲಾರಂಭಿಸಿದಳು. ಅತ್ತು ಅತ್ತು ಅವಳ ಮನಸು ಸ್ವಲ್ಪ ಹಗುರವಾಯಿತು. ಆಗ ಅವಳು ಕುಳಿತು ಯೋಚಿಸಲಾರಂಭಿಸಿದಳು. ಕೂಡಲೇ ಅವಳಿಗೆ ಏನೋ ತೋಚಿದಂತಾಗಿ ಬೇಗನೆ ತನ್ನ ಮೇಜಿನೆಡೆಗೆ ಹೋದಳು. ಹಾಗೂ ಬೇಗ ಬೇಗನೆ ಒಂದು ಕಾಗದ ಬರೆದು ಲಕೋಟೆಯಲ್ಲಿ ತುಂಬಿ, ವಿಳಾಸ ಬರೆದು ತನ್ನೋರ್ವ ಆಳನ್ನೊಡನೆ ಅಂಚೆ ಪೆಟ್ಟಿಗೆಗೆ ಹಾಕುವಂತೆ ಹೇಳಿ ಕಾಗದವನ್ನು ಕೊಟ್ಟು ಅಂಚೆಮನೆಯೆಡೆಗೆ ಓಡಿಸಿದಳು.

[ಅಪೂರ್ಣ.

—೦0೦—

ಗೊರಕೆ.

ನ್ಯೂಯಾರ್ಕಿನಲ್ಲಿ ಬ್ರೂಕ್ಲೀನ್‌ನನ ಆರ್. ಜೆ. ಕ್ರೂಗರ್ ಎಂಬಾತ ನಿದ್ದೆ ಹೋಗಿದ್ದ. ಆದೇ ಎಚ್ಚರವಾಗುವ ವೇಳೆ ಅವನಾಕೆ ಚಿಕ್ಕದೊಂದು ಚೂರಿಯಿಂದ 7 ಇರಿತಗಳನ್ನು ಕೊಟ್ಟಿದ್ದಳು. ಇರಿತದ ಪರಿಣಾಮವಾಗಿ ಎಚ್ಚೆತ್ತವನು ಅದರಿಂದಾಗಿಯೇ ಪುನಹ ದೀರ್ಘ ನಿದ್ರೆ ಹೋದನು. ಇದಕ್ಕೆ ಕಾರಣವೆಂದರೆ–ಆತನಿಗೆ ನಿದ್ದೆ ಹೋಗುವ ಹುಚ್ಚು ಬಹಳ. ಅಲ್ಲದೆ ಗೊರಕೆ ಹೊಡೆಯುವುದು ಅವನ ಧರ್ಮ. ಅದರಿಂದಲೇ ಆತನ ಮಡದಿ ಬೇಸರಿಸ್ಸಿ ಈ ಅಕಾರ್ಯ ಮಾಡಿದಳು. ಆದರೇನು? ಕೋರ್ಟು ಆಕೆ ಮಾಡಿದುದು ಸರಿ ಎಂದಿತು. ಗೊರಕೆ ಹೊಡೆವ ಗಂಡಂದಿರು ಎಚ್ಚರವಾಗಿರಲಿ!

—೦0೦—

ಆಧುನಿಕ ವಿದ್ಯೆ.

(ಮಹಾತ್ಮ ಗಾಂಧಿಯವರ ಲೇಖನಾಧಾರದಿಂದ.)

ಅಕ್ಷರಜ್ಞಾನವೆಂಬ ಆಧುನಿಕ ವಿದ್ಯೆಯು ನಿಜವಾದ ವಿದ್ಯೆಯಲ್ಲ. ಅನ್ಯ ಭಾಷೆಯ ಅಂಧಾನುಕರಣೆಗಳಾಗಿ ಮುಂದಿನ ಪೀಳಿಗೆಯಿಂದ ಅಧಮರೆನ್ನಿಸಿಕೊಳ್ಳುವದು ಯೋಗ್ಯವಲ್ಲ. ಪಾಶ್ಚಿಮಾತ್ಯ ವಿದ್ಯಾವಲಂಬಿಗಳಾಗಿ ಅದರ ಮಹಾಪ್ರವಾಹದಲ್ಲಿ ಸಿಕ್ಕಿ ಅದನ್ನೇ ಮನ್ನಿಸುತ್ತಿರುವದು ಮೌಢ್ಯತೆಯಲ್ಲದೆ ಮತ್ತಿಲ್ಲ. ಇಂದಿನ ಭಾರತೀಯರ ದಾರುಣವಾದ ದುಸ್ಥಿತಿಗೆ ಪರಭಾಷಾವಲಂಬಿಗಳಾದ ನಾವೇ ಬಾಧ್ಯರಲ್ಲದೆ ಬೇರಿಲ್ಲ. ಸದಾಚಾರ, ಸದ್ಗುಣಗಳನ್ನು ಬೆಳೆಸಿ, ಆತನ ಕರ್ತವ್ಯ ಪಥವನ್ನು ಕೈನೀಡಿ ತೋರಿಸುವ ಭಾರತ ಆರ್ಷೇಯ ಜ್ಞಾನವೇ ನಿಜವಾದ ವಿದ್ಯೆ. ಇದನ್ನು ಪ್ರೋತ್ಸಾಹಿಸಿ, ಜನತೆಯಲ್ಲಿ ಹೊಸ ಬೆಳಕನ್ನು ಸೂಸಿ ನಮ್ಮ ಗುಲಾಮಗಿರಿಯನ್ನು ಹರಿಸಿದ್ದಲ್ಲದೆ ಭಾರತಕ್ಕೆ ಶ್ರೇಯಸಿಲ್ಲ.

———::———

ವಿದ್ಯೆಯೆಂದರೇನು? ಅದರ ಅಂತಿಮ ಧ್ಯೇಯವಾದರೂ ಏನು? ಎಂಬ ಬಗ್ಗೆ ವಿಚಾರಿಸಿದರೆ ವಿದ್ಯೆಯೆಂಬುದು ಅಕ್ಷರ ಜ್ಞಾನವೆಂದು ಇಂದಿನ ಜಗತ್ತಿನಲ್ಲಿ ಪರಿಗಣಿಸಲ್ಪಟ್ಟಿದೆ ಎಂದು ತಿಳಿದು ಬರುವದು. ಅಕ್ಷರ ಜ್ಞಾನವಿರುವವನು ವಿದ್ಯಾವಂತನೆಂದು ಕರೆಯಲ್ಪಡುವನು. ಈ ವಿದ್ಯೆಯು ಕೇವಲ ಒಂದು ಯಂತ್ರದೋಪಾದಿ ಇರುವದು. ವಿದ್ಯೆಯೆಂದೆಣಿಸಲ್ಪಡುತ್ತಿರುವ ಈ ಅಕ್ಷರ ಜ್ಞಾನದಿಂದ ಸತ್ಕಾರ್ಯಗಳೂ, ದುಷ್ಕಾರ್ಯಗಳೂ ನಡೆಯಲು ಸಾಧ್ಯ. ಇಂದಿನ ಜಗತ್ತಿನಲ್ಲಿ ಅನೇಕರು ಈ ಅಕ್ಷರ ಜ್ಞಾನದ ದುರುಪಯೋಗವನ್ನೂ, ಕಲವರೇ ಮಾತ್ರ ಅದರ ಸದುಪಯೋಗವನ್ನೂ ಮಾಡುತ್ತಿರುವದು ನಮಗೆ ಗೋಚರಿಸುವದು. ಆದ್ದರಿಂದ ಇಂದಿನ ಅಕ್ಷರಜ್ಞಾನವೆಂಬ ಈ ವಿದ್ಯೆಯಿಂದ ಜಗತ್ತಿನಲ್ಲೇ ಹೆಚ್ಚು ತೊಂದರೆಗಳುಂಟಾಗುತ್ತಿವೆಯೆಂದು ಹೇಳಬಹುದು.

ವಿದ್ಯೆಯೆಂಬ ಶಬ್ದದ ಸಾಧಾರಣ ಅರ್ಥವು ಓದುವದು, ಬರೆಯುವದು ಲೆಕ್ಕ ಕೂಡಿಸುವದು. ಇದು ಪ್ರಾಥಮಿಕ ವಿದ್ಯೆ. ಒಬ್ಬ ರೈತನು ಮರ್ಯಾದೆಯಿಂದ ತನ್ನ ಜೀವನಕ್ಕೆ ಬೇಕಾದ್ದನ್ನು ಸಂಪಾದಿಸಿ ಹೊಟ್ಟೆ ಹೊರೆಯುತ್ತಾನೆ. ಆತನ ತಂದೆ ತಾಯಿಗಳ ಬಗ್ಗೂ, ಹೆಂಡತಿ ಮಕ್ಕಳ ಬಗ್ಗೂ, ಗ್ರಾಮಸ್ನೇಹಿತರೊಡನೆಯೂ ಯಾವ ರೀತಿಯಿಂದ ವರ್ತಿಸಬೇಕೆಂಬ ಅರಿವು ಅವನಿಗಿದೆ. ಸದಾಚಾರಿಯಾದ ಅವನಿಗೆ ಮಾತ್ರ ಅವನ ಹೆಸರನ್ನು ಸಹ ಬರೆಯಲಿಕ್ಕಾಗುವದಿಲ್ಲ. ಈತನು ಇಂದಿನ ಜಗತ್ತಿನ ದೃಷ್ಟಿಯಲ್ಲಿ ಅವಿದ್ಯಾವಂತ, ನಿರಕ್ಷರ ಕುಕ್ಷಿಯೆಂದೆಣಿಸಲ್ಪಡುವನು. ಆದರೆ ಇಂಥಾ ಸ್ವಾತಂತ್ರ್ಯದಿಂದಿರುವ ಸುಖಿಗೆ ಅಕ್ಷರ ಜ್ಞಾನವನ್ನುಂಟುಮಾಡಿದರೆ ಆತನ ಸಂತೋಷವು ಹೆಚ್ಚಬಹುದೇ? ಅಕ್ಷರಜ್ಞಾನವಿಲ್ಲದ್ದರಿಂದ ಆತನು ತನ್ನ ವ್ಯವಹಾರದಲ್ಲಿ ಅಸಂತುಷ್ಟನಾಗಿರುವನೇ? ಆತನಿಗೆ ಈ ಬರೇ ಅಕ್ಷರಜ್ಞಾನವು ಬೇಕಿಲ್ಲ. ಪಾಶ್ಚಿಮಾತ್ಯ ದೇಶಗಳ ಈ ವಿದ್ಯೆಯ ಅಮೋಘ ಪ್ರವಾಹದಲ್ಲಿ ತೇಲಿ ಮುಳುಗುತ್ತಿರುವ ನಾವು ದಿಕ್ಕೆಟ್ಟು ಅದರ ಸಾಧಕ ಬಾಧಕಗಳನ್ನು ವಿಚಾರಿಸದೆ ಅಕ್ಷರಜ್ಞಾನದ ವಿದ್ಯೆಯನ್ನೇ ಪ್ರೋತ್ಸಾಹಿಸುತ್ತಿರುವೆವು.

ಈಗ ಪ್ರೌಢ ವಿದ್ಯಾಭ್ಯಾಸವನ್ನು ವಿಚಾರಿಸುವ. ಭೂಗೋಳ ಶಾಸ್ತ್ರ, ಖಗೋಳ ಶಾಸ್ತ್ರ, ಪ್ರಕೃತಿ ಶಾಸ್ತ್ರ, ರೇಖಾಗಣಿತ ಮೊದಲಾದದ್ದನ್ನು ಒಬ್ಬನು ಕಲಿತಿರುವನೆನ್ನುವ. ಆದರೆ ಏನು? ಇದರಿಂದ ಆತನಿಗಾಗಲಿ, ಆತನ ಸುತ್ತುಮುತ್ತಲಿನ ಜನರಿಗಾಗಲೀ ಆಗುವ ಉಪಯೋಗವೇನು? ಇದನ್ನು ಕಲಿತದ್ದರ ಪುರುಷಾರ್ಥವೇನು? ಪ್ರೊಫೆಸರ್ ಹಕ್ಸಲೀ ಎಂಬವರು ವಿದ್ಯಾವಂಥಾನಾರೆಂದು ವಿವರಿಸುತ್ತಾ 'ಯೌವನದಲ್ಲಿ ಯಾರು ತನ್ನ ಶರೀರವನ್ನು ತನ್ನ ಅಪೇಕ್ಷೆಯದಾಸನಾಗಿರಿಸಿ ಎಲ್ಲಾ ಅವಯವಗಳ ಮೇಲೆ ತನ್ನ ಸ್ವಾತಂತ್ರ್ಯವನ್ನು ಪ್ರತಿಷ್ಠಿಸಿ, ತನ್ನ ಕೆಲಸಗಳನ್ನೆಲ್ಲಾ ನಿರ್ವಂಚನೆಯಿಂದ ಮಾಡಿ ಪೂರೈಸಿ, ತನ್ನ ಜ್ಞಾನಶಕ್ತಿಯನ್ನು ಸ್ಥಿಮಿತದಲ್ಲಿಟ್ಟುಕೊಂಡು ಹೋಗಲು ಕಲಿತಿರುವನೋ ಅವನೇ ವಿದ್ಯಾವಂತ. ಪ್ರಕೃತಿಯ ಪ್ರಮುಖ ತತ್ವಗಳನ್ನರಿತು, ವಿಷಯ ಶಾಸ್ತ್ರಗಳನ್ನು ತನ್ನ ಹತೋಟಿಯಲ್ಲಿಟ್ಟು ತನ್ನಂತೆಯೇ ಇತರರನ್ನು ಮನ್ನಿಸುವನಾವನೋ ಆತನೇ ಸರಿಯಾದ ವಿದ್ಯಾವಂತ, ಯಾಕೆಂದರೆ ಪ್ರಕೃತಿಗೂ, ಆತನಿಗೂ ಪರಸ್ಪರ ಸೌಜನ್ಯವುಂಟಾಗಿ ಆತನು ಪ್ರಕೃತಿಯು, ಪ್ರಕೃತಿಯು ಆತನ ವಿಶಿಷ್ಟ ಸುಖವನ್ನನುಭವಿಸುವರು' ಈ ರೀತಿ ಅಂದಿರುವರು. ವಿದ್ಯೆಯು ಇಂಥಾದ್ದಾದ ಪಕ್ಷ ಮೇಲೆ ವಿವರಿಸಿದ ಭೂಗೋಳ, ಖಗೋಳ ಇವೇ ವಿವಿಧ ಶಾಸ್ತ್ರಗಳ ಪಾಂಡಿತ್ಯವು ನಮ್ಮ ಮನಸ್ಸನ್ನು ಸ್ಥಿಮಿತದಲ್ಲಿಡಲಿಕ್ಕಾಗಲೀ, ಯಾ ಇತರರಿಗೆ ನಾವು ಪ್ರಯೋಜನಕಾರಿಗಳಾಗಲಿಕ್ಕಾಗಲೀ ಸಹಾಯಕವಾಗಲಾರವು. ಅಂದ ಮೇಲೆ ಪ್ರಾಥಮಿಕ ಯಾ ಪ್ರೌಢ ವಿದ್ಯೆಯು ನಮ್ಮ ಬೇಡಿಕೆಗಳನ್ನು ಸಲ್ಲಿಸದು. ಜನರ ಸಹಾಯಕರನ್ನಾಗಿ ನಮ್ಮನ್ನು ಮಾಡಲಾರದು. ನಮ್ಮ ಕರ್ತವ್ಯವನ್ನು ಮಾಡಲು ಅದು ದಾರಿತೋರಿಸದು. ನಾವು ಮಾನವರು, ಮಾನವನ ಕರ್ತವ್ಯ ಇಂತಹದು ಎಂಬ ಪಥವನ್ನೂ ಅದು ಸೂಚಿಸದು. ಆದ್ದರಿಂದ ಮನುಷ್ಯನನ್ನು ಮನುಷ್ಯನನ್ನಾಗಿ ಮಾಡುವ ವಿದ್ಯೆಯು ಅಗತ್ಯ. ತಾನು ಮಾನವನು, ತಾನು ಮಾಡತಕ್ಕ ಕರ್ತವ್ಯವಿದು ಎಂಬ ಪರಿವೆಯುಂಟಾಗಲನುಕೂಲವಾದ ವಿದ್ಯೆಯು ಬೇಕು. ಅದೇ ನಮ್ಮ ಪುರಾತನ ವಿದ್ಯೆ. ಜನತೆಯಲ್ಲಿ ಭಕ್ತಿ, ದಯೆ, ಸದಾಚಾರವನ್ನು ಬೋಧಿಸುತ್ತಿದ್ದ ಆ ಆರ್ಷೇಯ ವಿದ್ಯೆಯೇ ನಮಗೆ ಬೇಕಾದ್ದು.

ಇಲ್ಲಿ ಇಂದಿನ ವಿದ್ಯೆಯಿಂದ ಜನತೆಗೆ ಸಹಾಯವಾಗಲಿಲ್ಲವೇ? ಇಂಗ್ಲಿಷ್ ವಿದ್ಯೆಯಿಲ್ಲದಿದ್ದರೆ ನಮ್ಮಲ್ಲಿ ನವಚೈತನ್ಯ ಹುಟ್ಟುತಿತ್ತೆ? ಇಂದು ನಮ್ಮಲ್ಲಿ ಸ್ವಾತಂತ್ರ್ಯದ ಬೀಜವನ್ನು ಬಿತ್ತಿದ್ದಾದರೂ ಈ ಪಾಶ್ಚಿಮಾತ್ಯನಾಗರೀಕತೆಯೇ ಅಲ್ಲವೇ? ಎಂಬ ಪ್ರಶ್ನಾವಳಿಗಳು ಉಪಸ್ಥಿತವಾಗುವವು. ಇದಕ್ಕೆ ನಾವು ಕೊಡುವ ಉತ್ತರವಾದರೂ ಇದೇ. ಮಿಲಿಯಾಂತರ ಜನರಿಗೆ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕೊಡಿಸುವದೆಂದರೆ ನಮ್ಮನ್ನು ನಾವು ಪರದಾಸ್ಯದ ಶೃಂಖಲೆಗಳಿಂದ ಬಂಧಿಸಿ ಕೊಂಡಂತೆ. ಲಾರ್ಡ್ ಮೆಕಾಲೆಯವರು ಭಾರತದಲ್ಲಿ ಪಾಶ್ಚಿಮಾತ್ಯ ವಿದ್ಯಾಪ್ರಸಾರವನ್ನು ಕೈಕೊಂಡಂದಿನಿಂದಲೇ ಭಾರತವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿತು. ಐರೋಪ್ಯರು ತಮ್ಮ ನಾಗರೀಕತೆಯನ್ನು ಭಾರತದಲ್ಲಿ ಬಿತ್ತಿದರು. ನಾವು ಅವರ ಅಂಧಾನುಕರಣೆಗಳಾಗಿ, ಅವರ ವಿಚಾರದಲ್ಲಿ ನಮ್ಮ ನಮ್ಮೊಳಗೆ ಸ್ಪರ್ಧೆ ಬಂದು ಅದು ಅಮೋಘವಾಗಿ ಬೆಳೆಯಿತು. ಪಾಶ್ಚಿಮಾತ್ಯರು ದಿನ ದಿನಕ್ಕೆ ತಮ್ಮ ನಾಗರೀಕತೆಯನ್ನು ಬಲವಾಯಿಸುತ್ತಾ ಅವರ ಹಿತದೃಷ್ಟಿಯಿಂದ ಮುಂದರಿದರು. ಈ ನಮ್ಮ ಅಂಧಾನುಕರಣೆಯು ನಮ್ಮ ವ್ಯಕ್ತಿತ್ವವನ್ನು ನಾಶಪಡಿಸಿ ಪರಾವಲಂಬಿಗಳನ್ನಾಗಿ ಮಾಡಿದೆ. ಇಂದು ಬ್ರಿಟನಿನಲ್ಲೇ ನಾಗರೀಕತೆಯ ಚಿಹ್ನೆಯೆಂದೆನಿಸುವ ಇಂಗ್ಲಿಷ್ ಭಾಷೆಯ ಪತನವಾಗುವ ಕುರುಹುಗಳು ಕಂಡು ಬರುತ್ತಿವೆ. ಇಂಗ್ಲೆಂಡಿನ ಸಣ್ಣದೊಂದು ಭಾಗವಾದ ವೇಲ್ಸ್‌ನ ಜನರಲ್ಲಿ ವೆಲ್ಶ್ ಭಾಷೆಯನ್ನೇ ಆಡಬೇಕೆಂದು ಚಳವಳ ನಡೆದಿದೆ. ಪ್ರಮುಖ ಧುರೀಣರಾದ ಮಿ. ಲಾಯಿಡ್ ಜಾರ್ಜರೇ ಇದರ ಮುಖಂಡತ್ವವನ್ನು ವಹಿಸಿರುವರು. ಆದರೆ ನಮ್ಮ ಪರಿಸ್ಥಿತಿ ಹೇಗಿದೆ? ಪರಸ್ಪರರಿಗೆ ನಾವು ಕಾಗದ ಬರೆಯುವದು ಈ ಇಂಗ್ಲಿಷ್ ಭಾಷೆಯಿಂದ. ನಮ್ಮ ಅಮೂಲ್ಯ ಅಭಿಪ್ರಾಯಗಳು ಹೊರಬೀಳಬೇಕಾದರೆ ಈ ಇಂಗ್ಲಿಷ್ ಭಾಷೆಯಿಂದ. ಕಾಂಗ್ರೆಸಿನ ಕಾರ್ಯಕಲಾಪಗಳು ಹೆಚ್ಚಾಗಿ ನಡೆಯುವದು ಇಂಗ್ಲಿಷಿನಿಂದ. ನಮ್ಮ ಉಜ್ವಲ ಪತ್ರಿಕೆಗಳು ಇರುವದು ಇಂಗ್ಲಿಷಿನಲ್ಲಿ. ಈ ರೀತಿಯು ಇನ್ನೂ ಮುಂದರಿದರೆ ಮುಂದಿನ ಜನಾಂಗವಾದ ನಮ್ಮ ಪೀಳಿಗೆಯು ನಮ್ಮನ್ನು ಶಪಿಸದಿರದು. ಇಂಗ್ಲಿಷ್ ಭಾಷೆಯ ಪರಿಣಾಮದಿಂದಾಗಿಯೇ ನಾವು ಜನಾಂಗವನ್ನು ಪರದಾಸ್ಯಕ್ಕೆ ತಿಲುಕಿದೆವು ಎನ್ನಲಡ್ಡಿಯಿಲ್ಲ. ಇದರಿಂದಾಗಿ ಕಪಟತನ ಮತ್ತು ಕ್ರೂರಶಾಸನಗಳು ಹೆಚ್ಚಿವೆ. ಇಂಗ್ಲಿಷ್ ತಿಳಿಯುವ ಭಾರತೀಯರು ತಮ್ಮ ಜನಾಂಗವನ್ನು ಹೆದರಿಸಿ ಮೋಸಪಡಿಸಲು ಹಿಂಜರಿಯಲಿಲ್ಲ. ಈಗ ನಾವು ಜನತೆಗಾಗಿ ಏನಾದರೊಂದು ಸತ್ಕಾರ್ಯಮಾಡುತ್ತಿರುವದಾದರೆ ಅವರಿಗೆ ನಮ್ಮಿಂದ ಸಲ್ಲತಕ್ಕ ಸಾಲದಲ್ಲಿ ಸ್ವಲ್ಪ ಸ್ವಲ್ಪ ಮರುಪಾವತಿ ಮಾಡಿದಂತೆ.

ಭಾರತದಲ್ಲಿ ಒಂದು ನ್ಯಾಯಸ್ಥಾನಕ್ಕೆ ಹೋಗಬೇಕಾದರೆ ಈ ಇಂಗ್ಲಿಷ್ ವಿದ್ಯೆಯೇ ಸಹಕಾರಿ ಎನ್ನುವಂಥಾದರೆ ಅದು ಹೃದಯದ್ರಾವಕ ವಿಚಾರವಲ್ಲವೇನು? ಒಬ್ಬನು ಬ್ಯಾರಿಸ್ಟರಾಗಿ ಬಂದರೆ ತನ್ನ ಮಾತೃಭಾಷೆಯಲ್ಲಿ ಮಾತಾಡಲಾರ. ಬೇರೆಯವರ ವಿವರಣೆಯಿಲ್ಲದೆ ವಿಚಾರಗಳನ್ನು ತಿಳಿಯಲಾರ. ಭಾಷಾಜ್ಞಾನವಿದ್ದರೆ ಅದನ್ನಾಡುವದು ತನ್ನ ಪ್ರತಿಷ್ಠೆಗೆ ಕುಂದು. ಎಂಥಾ ಶೋಚನೀಯ ವಿಚಾರ! ಇದು ಪರದಾಸ್ಯತೆಯ ಹೆಗ್ಗುರುತಲ್ಲವೇನು? ಇದಕ್ಕಾಗಿ ನಾವು ಇಂಗ್ಲಿಷರನ್ನು ದೂಷಿಸಬೇಕೋ ಯಾ ನಮ್ಮ ಸಹೋದರರನ್ನೋ? ಇಂಗ್ಲಿಷನ್ನು ಬಲ್ಲ ನಾವೇ ಭಾರತದ ಪರದಾಸ್ಯತೆಗೆ ಮೂಲಕಾರಣರು. ಇಡೀ ಭಾರತ ಜನಾಂಗದ ದಾರುಣವಾದ ಸ್ಥಿತಿಗೆ ಇಂಗ್ಲಿಷರಲ್ಲ ಕಾರಣೀಭೂತರು ನಾವು. ಇಂಗ್ಲಿಷ್ ಭಾಷೆಯಿಂದ ಮತ್ತರಾಗಿರುವವರು.

ಆದ್ದರಿಂದ ಇಂಗ್ಲಿಷ್ ಕಲಿತ ನಾವು ಈ ಇಂಗ್ಲಿಷ್ ಭಾಷೆಯನ್ನು ಅಗತ್ಯವಿರುವಲ್ಲಿ ಅಂದರೆ ಬ್ರಿಟಿಷರ ಸ್ಥಿತಿಯನ್ನು ಅರಿತುಕೊಳ್ಳಲು, ಅವರೊಡನೆ ಪತ್ರವ್ಯವಹಾರ ನಡೆಸಲು ಮಾತ್ರ ಇದನ್ನು ಉಪಯೋಗಿಸಬೇಕು. ಇಂಗ್ಲಿಷ್ ತಿಳಿದವರು ಸದಾಚಾರವನ್ನು ತಮ್ಮ ಪೀಳಿಗೆಗೆ ಮಾತೃಭಾಷೆಯಲ್ಲಿ ಬೋಧಿಸಬೇಕು. ಮಾತೃಭಾಷಾಪ್ರೇಮವು ಅವರಲ್ಲಿ ಹುಟ್ಟುವಂತೆ ಮಾಡಬೇಕು. ಇಂಗ್ಲಿಷ್ ಭಾಷಾ ಪ್ರೇಮವು ಮಾಯವಾಗಬೇಕು. ಇಲ್ಲಿ ಯಾವ ವಿದ್ಯೆಯನ್ನು ಮುಂದಿನ ಜನಾಂಗಕ್ಕೆ ಕೊಡಬೇಕೆಂಬ ಪ್ರಶ್ನೆಯು ಬರುವದು ವಾಸ್ತವ. ಆದ್ದರಿಂದ ಅದನ್ನು ಕೆಲ ಮಟ್ಟಿಗೆ ಇಲ್ಲಿ ವಿವರಿಸುವೆವು. ಭಾರತದ ವಿವಿಧ ಭಾಷೆಗಳು ಅಭಿವೃದ್ಧಿಗೊಳ್ಳಬೇಕು. ಇಂಗ್ಲಿಷಿನಲ್ಲಿರುವ ಅಮೂಲ್ಯ ಗ್ರಂಥಗಳು ವಿವಿಧ ಭಾರತ ಭಾಷೆಗಳಿಂದ ತರ್ಜುಮೆ ಮಾಡಲ್ಪಡಬೇಕು. ಶೋಧಿಕೆಯ ಶಾಸ್ತ್ರಗಳನ್ನರಿತು ಹೆಸರಿನ ಹಿಂದಕ್ಕೂ, ಮುಂದಕ್ಕೂ ಬಿರುದುಗಳನ್ನು ಸೇರಿಸುವ ಹವ್ಯಾಸನಿಲ್ಲಬೇಕು. ಪ್ರತಿಯೊಬ್ಬ ಭಾರತೀಯನೂ ತನ್ನ ಪ್ರಾಂತೀಕ ಭಾಷೆಯಲ್ಲದೆ ಹಿಂದುವಾದರೆ ಸಂಸ್ಕೃತವನ್ನೂ, ಮುಸ್ಲಿಮನಾದರೆ ಅರಬೀಭಾಷೆಯನ್ನೂ, ಪಾರ್ಸಿಯಾದರೆ ಪರ್ಶಿಯನ್ ಭಾಷೆಯನ್ನೂ ಕಲಿತಿರಬೇಕಲ್ಲದೆ ಎಲ್ಲರೂ ಸಾರ್ವಜನಿಕವಾಗಿ ಹಿಂದೀಯನ್ನು ತಿಳಿದಿರಬೇಕು. ಕೆಲವು ಹಿಂದುಗಳು ಅರಬಿ, ಪಾರ್ಸಿಯನ್ನೂ, ಕೆಲವು ಮುಹಮ್ಮದೀಯರು ಪಾರ್ಸಿ, ಸಂಸ್ಕೃತವನ್ನೂ, ಕಲಿತಿರಬೇಕು. ಭಾರತ ದೇಶಕ್ಕೆ ಸಾರ್ವಜನಿಕವಾಗಿ ಹಿಂದೀ ಭಾಷೆ ಇರಬೇಕು. ಇದರಿಂದ ಭಾರತದಲ್ಲಿರುವ ವಿವಿಧ ಪಂಗಡಗಳ ಏಕ

ಭಾರತ ದೇಶವು ಕಳೆದ ಐವತ್ತು ವರ್ಷಗಳಿಂದೀಚೆಗೆ ಮಾನವ ಜೀವನದ ವಿವಿಧ ಕ್ಷೇತ್ರಗಳಲ್ಲಿ ತನ್ನ ಪ್ರಚಂಡ ವರ್ಚಸ್ಸನ್ನು ತೋರಿ ಇಡೀ ಜಗತ್ತಿನ ದೃಷ್ಟಿಯನ್ನು ತನ್ನೆಡೆಗೆ ಆಕರ್ಷಿಸಿಕೊಂಡಿದೆ. ಹೀಗೆ ಇಂದು ಭಾರತಕ್ಕೆ ಈ ಆಕರ್ಷಕ ಶಕ್ತಿಯು ಎಲ್ಲಿಂದ ಬಂತು? ಜೀವನದ ಗೂಢವನ್ನರಿತು ಜನತೆಯ ಹಿತದೃಷ್ಟಿಯಿಂದ ಶ್ರಮಿಸುತ್ತಿರುವ ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಗೋರ್, ಪಂಡಿತ ಜವಾಹರ್‌ಲಾಲ್, ಸುಭಾಷ ಚಂದ್ರ ಬೋಸರಂತಹ ನೈತಿಕ, ರಾಜಕೀಯ, ವೈಜ್ಞಾನಿಕ, ತಾತ್ವಿಕ ಪ್ರತಿಪಾದಿಗಳು ಇಂದು ಭಾರತಕ್ಕೆ ಈ ಶಕ್ತಿಯನ್ನು ಕಲ್ಪಿಸಿರುವರು. ಇವರ ಭಾಷಣಗಳೆಂದರೆ ಕಿಕ್ಕಿರಿದು ಜನರು ಸೇರುತ್ತಾರೆ. ಭಾರತದ ಕಾರ್ಯಶಕ್ತಿ, ಉತ್ಸಾಹ, ಕೀರ್ತಿ ಇವರಿಂದಾಗಿ ಹೆಚ್ಚಿದೆ. ಆದರೆ ಇವರೆಲ್ಲ ಒಂದು ಮಾದರಿ.

ಇವರ ಈ ಕಾರ್ಯಕ್ರಮಕ್ಕೆಲ್ಲ ವ್ಯತಿರಿಕ್ತವಾಗಿಯೋ ಎಂಬಂತೆ ಅಂತರ ರಾಷ್ಟ್ರೀಯ ಕೀರ್ತಿಯನ್ನು ಗಳಿಸದೆ, ಭಾಷಣ ವೇದಿಕೆಗಳಿಗೆ ಕಾಲಿಡದೆ, ಹೆಚ್ಚೇಕೆ? ಜನಸಂಪರ್ಕವನ್ನೇ ಮಾಡದೆ, ಜನರ ಕಣ್ಣಿಗೂ ಸಹ ಬೀಳದೆ ಹೊರಗಿನ ಜಗತ್ತಿನ ಬಾಂಧವ್ಯವನ್ನು ಕಿತ್ತೊಗೆದು ಗೋಪ್ಯವಾಗಿರುವ ಶ್ರೀ ಅರವಿಂದ ಯೋಗಿಗಳ ಜೀವನವು ಕೃತಾರ್ಥವಾದುದು. ಅವರು ಜನರಿಗೆ ವರ್ಷದಲ್ಲಿ ದರ್ಶನಕೊಡುವ ದಿನಗಳೆಂದರೆ ಮೂರು. ಫೆಬ್ರವರಿ 21,

---

ರಣವನ್ನೂ ಸಾಧಿಸಿದಂತಾಗುವುದು. ಹೀಗೆ ನಾವು ಮಾಡಬಲ್ಲೆವಾದರೆ ಇಂಗ್ಲಿಷ್ ಭಾಷೆಯನ್ನು ಭಾರತ ರಂಗಸ್ಥಳದಿಂದ ಓಡಿಸಿಬಿಡಬಹುದು. ಆದ್ದರಿಂದ ನಾವು ನಮ್ಮ ಗುಲಾಮಗಿರಿಯಿಂದ ಮುಕ್ತರಾಗಬೇಕು. ಆಗಲೇ ನಮ್ಮ ದೇಶವು ತನ್ನ ಸ್ವಾತಂತ್ರ್ಯವನ್ನು ಸಂಪಾದಿಸಲು ಸಮರ್ಥವಾಗುವದು.

ಈ ಸಂದರ್ಭದಲ್ಲಿ ಭಾರತ ದೇಶದಲ್ಲಿ ವಿವಿಧ ಮತೀಯರಿರುವಾಗ ಮತಭೋಧನೆಯ ವಿಚಾರದಲ್ಲಿ ಘರ್ಷಣೆಬರಬಹುದು. ಆದರೆ ಮತಪ್ರಚಾರಕರು ಸ್ವಲ್ಪ ದೂರದೃಷ್ಟಿ ಇಟ್ಟರೆ ಇದರಿಂದ ತೊಂದರೆ ಬರಲಿಕ್ಕಿಲ್ಲ. ಯಾಕೆಂದರೆ ಪರಮತದೂಷಣೆಯೇ ಮೊದಲಾದ ಕೊಳೆಯ ರೋಗವು ಭಾರತದಲ್ಲಿ ಇನ್ನೂ ಹರಡಿಲ್ಲ. ಕೆಲವೆಡೆಗಳಲ್ಲಿ ಮಾತ್ರ ಅದು ತಾಂಡವವಾಡುತ್ತಿದೆ. ಆದ್ದರಿಂದ ಅಲ್ಲಲ್ಲಿಯ ಆ ಕೊಳೆಗಳನ್ನು ತೊಳೆದು ಬಿಟ್ಟರೆ ಯಾವ ಅಪಾಯವೂ ಬರಲಿಕ್ಕಿಲ್ಲ. ಭಾರತದ ಪುರಾತನ ಕೀರ್ತಿಜ್ಯೋತಿಯನ್ನು ಹೊತ್ತಿಸಬೇಕಾದರೆ ನಾವು ಪರಭಾಷೆಯ ಕೈಂಕರ್ಯದಿಂದ ವಿಮುಕ್ತರಾಗಿ ಭಾರತೀಯರೆಂಬ ಪರಿವು ನಮ್ಮಲ್ಲುಂಟಾಗಬೇಕು. ನಮ್ಮ ಅಸ್ವದೇಶೀಯ ನಾಗರೀಕತೆಯು ಬೇರೆಯಾಗಬೇಕು. ಆದ್ದರಿಂದ ನಾವು ಮಾಡಬೇಕಾದ ಮುಖ್ಯ ಕೆಲಸವೆಂದರೆ ಪಾಶ್ಚಿಮಾತ್ಯ ನಾಗರೀಕತೆಯ ಬಹಿಷ್ಕಾರ, ಇದು ಆನರ ಮುಂದಿನ ಕಾರ್ಯಕ್ರಮಗಳು ತಾವೇ ಕಾರ್ಯರೂಪಕ್ಕೆ ಬರುವವು.

ಗಾಂಧಿಜೀಯವರ ರಾಜಕೀಯ ಗುರು ಅರವಿಂದ ಘೋಷ್

ಅವರ ಅದ್ಭುತ ಜೀವನ ರಹಸ್ಯ.

ಆಗಸ್ಟ್ 15 ಮತ್ತು ನವಂಬರು 24. ಈ ಮೂರು ದಿನಗಳನ್ನು ಬಿಟ್ಟರೆ ಅವರ ದರ್ಶನವಾಗುವುದು ದುಸ್ಸಾಧ್ಯ. ಈ ನಿಶ್ಚಿತ ದಿನಗಳಲ್ಲಿ ಅವರ ಅಪೂರ್ವ ದರ್ಶನಕ್ಕಾಗಿ ಅಮೇರಿಕನರು, ಯೂರೋಪಿಯವರು, ಚೀನೀಯರು, ಜಪಾನರೇ ಆದಿಯಾಗಿ ನಾನಾ ಜಾತಿಯ ರಾಷ್ಟ್ರಗಳ ಜನರು ಸಹಸ್ರ ಸಂಖ್ಯೆಯಲ್ಲಿ ಕಾದಿರುತ್ತಾರೆ. ಕೇವಲ ನಾಲ್ಕು ಮಂದಿ ಶಿಷ್ಯರಿಂದ ಪ್ರಾರಂಭಿಸಲ್ಪಟ್ಟ ಅವರ ಪುದುಚೇರಿ ಆಶ್ರಮದಲ್ಲಿ ವಿವಿಧ ಜಾತಿ ಜನಾಂಗದ ನೂರೈವತ್ತೈದು ಮಂದಿಗಿಂತಲೂ ಹೆಚ್ಚಿನ ಶಿಷ್ಯವರ್ಗವಿರುವದು. ವಿಖ್ಯಾತ ಕವಿಗಳೂ, ಅಖಂಡ ವಿದ್ಯಾಸಂಪನ್ನರೂ, ರಾಜಕೀಯ ಧುರೀಣರೂ ಸಹ ಅವರ ಶಿಷ್ಯರಾಗಿರುವರು. ಅಂದಬಳಿಕ ಅಂಥಾ ಪವಿತ್ರ ಗುರುವರ್ಯರಾದ ಅರವಿಂದ ಯೋಗಿಗಳ ಜೀವಿತದ ವಿಚಿತ್ರ ಪ್ರಸಂಗಗಳನ್ನಾದರೂ ತಿಳಿದುಕೊಳ್ಳುವದು ಒಳಿತು.

ಅರವಿಂದರ ಏಕಾಂತವಾಸ, ಮೌನ ಇವುಗಳ ಫಲವಾಗಿ ಅವರ ಹೆಸರು ಇತರ ಮಹಾ ವ್ಯಕ್ತಿಗಳ ಹೆಸರಿನಂತೆ ಪತ್ರಿಕೆಗಳಲ್ಲಿ ಪ್ರಕಟವಾಗದಿದ್ದರೂ ಜಗತ್ತಿನ ಯಾವ ಭಾಗದಲ್ಲಿ ನೋಡಿದರೂ, ಯೋಗಿ ಅರವಿಂದರ ಆಧ್ಯಾತ್ಮಿಕ ಹಾದಿಯಲ್ಲಿ ನಡೆಯುವ, ಅವರೊಡನೆ ಒಂದಲ್ಲ ಒಂದು ವಿಧದ ಸಂಬಂಧವನ್ನಿಟ್ಟುಕೊಂಡಿರುವ ಅವರಲ್ಲಿ ನಿಸ್ಸೀಮ ಭಕ್ತಿಯುಳ್ಳ ವ್ಯಕ್ತಿಗಳನ್ನು ಕಾಣಬಹುದು. ಜಗತ್ತಿನ ಮೂಲೆ ಮೂಲೆಯಲ್ಲಿರುವ ಜನರ ಮನವನ್ನಾಕರ್ಷಿಸಿರುವ ಯೋಗಿ ಅರವಿಂದರ ಶಕ್ತಿಯಾದರೂ ಯಾವುದು? ಇದು ಗಹನವಾದ ವಿಚಾರ. ಆದುದರಿಂದಲೇ ಅವರ ಜೀವಿತವು ವಿವಿಧ ಸಂಸ್ಕೃತಿಗಳ ಸಮ್ಮೇಳನವೆಂದೆಣಿಸಲ್ಪಟ್ಟಿದೆ. ಅವರ ಅದ್ಭುತವಾದ ಆಧ್ಯಾತ್ಮಿಕ ತೇಜಸ್ಸು ಸಹಸ್ರಾರು ಜನರನ್ನು ಪ್ರಗತಿ ಮಾರ್ಗದಲ್ಲಿ ನಡೆಸುತ್ತಿದೆ ಎಂದು ನಂಬಲಾಗಿದೆ.

ಅರವಿಂದರು ಹುಟ್ಟಿದ್ದು ಬಂಗಾಳದಲ್ಲಿ-1872 ರಲ್ಲಿ. ಅವರು ಹುಟ್ಟಿದ ಸಂದರ್ಭದಲ್ಲಿ ಬಂಗಾಳದ ಜನರು ಪಾಶ್ಚಿಮಾತ್ಯ ಸಂಸ್ಕೃತಿಯ ತಳಕಿಗೆ ಬೆರಗಾಗಿ, ಅದು ಸಂಪೂರ್ಣ ಸುವರ್ಣದಂತಹ ಸಂಸ್ಕೃತಿಯೆಂದೂ, ಭಾರತ ಸಂಸ್ಕೃತಿ ಧರ್ಮಗಳು ಸತ್ವಹೀನವಾದ ಮಣ್ಣೆಂದು ಭಾವಿಸಿ ಪೂರ್ವಾಚಾರ, ಸನಾತನ ಧರ್ಮಗಳ ಮೇಲೆ ಧಾಳಿ ಎಬ್ಬಿಸಿದ್ದರು. ಇವರ ಕುಟುಂಬವಾದರೋ ಪಾಶ್ಚಾತ್ಯ ನಾಗರೀಕತೆಗೆ ಸಿಲುಕಿ ಮನಸೋತು ಮುಗ್ಧವಾಗಿತ್ತು. ಆದ್ದರಿಂದ ತಮ್ಮ ಮಕ್ಕಳನ್ನು ಪಾಶ್ಚಾತ್ಯರನ್ನಾಗಿ ಮಾಡಬೇಕೆಂಬ ಹೆಬ್ಬಯಕೆಗೆ ಬಲಿಯಾದ ತಾಯಿ ತಂದೆಗಳು 7 ವರ್ಷದ ಮಗುವಾಗಿದ್ದ ಅರವಿಂದರನ್ನು ಅವರ ಇಬ್ಬರು ಸಹೋದರರೊಂದಿಗೆ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಿದರು. ಇದರಿಂದಾಗಿ ಅರವಿಂದರು ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ಭಾರತಕ್ಕೆ ಬರುವಾಗ ಅವರಿಗೆ ಇಂಗ್ಲಿಷ್, ಫ್ರೆಂಚ್, ಲ್ಯಾಟಿನ್, ಗ್ರೀಕ್, ಜರ್ಮನಿ, ಇಟಾಲಿಯನ್ ಭಾಷೆ ಮತ್ತು ಸಂಸ್ಕೃತಿಗಳ ಅರಿವಿತ್ತೇ ವಿನಹ ಸಂಸ್ಕೃತ ಮತ್ತು ಇತರ ಭಾರತೀಯ ಭಾಷೆಗಳ ತಿಳುವಳಿಕೆ ಏನೇನೂ ಇರಲಿಲ್ಲ.

ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕೂತ ಇವರು ಅದರಲ್ಲಿ ತೇರ್ಗಡೆಯಾಗಿದ್ದರೆ ಅಧಿಕಾರ ಲಾಲಸೆಗೆ ಸಿಕ್ಕದೆ ಇಂದಿನಂತೆ ಜಗದ್ವಿಖ್ಯಾತರಾದ ಯೋಗಿಗಳಾಗುತ್ತಿದ್ದರೆಂಬುದು ಸಂಶಯ. ಐ. ಸಿ. ಯಸ್. ಪರೀಕ್ಷೆಯಾದ ನಂತರ ಅರವಿಂದರು ಭಾರತಕ್ಕೆ ಬಂದರು. ತಮಗಿರುವ ಭಾರತ ಭಾಷೆ, ಸಂಸ್ಕೃತಿಗಳ ಅಜ್ಞತೆಯನ್ನು ಕಂಡು ಇಲ್ಲಿ ಸಂಸ್ಕೃತ, ಮತ್ತಿತರ ದೇಶ ಭಾಷೆಗಳನ್ನು ಕಲಿಯಲಾರಂಭಿಸಿದರು. ಈ ಮಧ್ಯೆ ಅವರು ಬರೋಡ ಸಂಸ್ಥಾನದಲ್ಲಿ ನೌಕರಿಯಲ್ಲಿದ್ದರು. ಅವರ ದೇಶ ಭಾಷೆಯ ಅಧ್ಯಯನವು ಮುಂದುವರಿದಂತೆ ಅವರಿಗೆ ದೇಶಪ್ರೇಮವು ಪ್ರಬಲವಾಗಿ ಭಾರತದ ದಾಸ್ಯತ್ವವನ್ನು ಕಿತ್ತೊಗೆಯುವದು ಪ್ರತಿಯೊಬ್ಬನ ಮುಂದಿರುವ ಸಮಸ್ಯೆಯೆಂದು ಮನವರಿಕೆಯಾಯಿತು.

ಈ ಸಮಯದಲ್ಲಿ ಬಂಗಾಳದಲ್ಲಿ ಪ್ರಾರಂಭವಾಗಿದ್ದ ರಾಜಕೀಯ ಆಂದೋಲನದ ಮೊಳಕೆಯನ್ನು ಚಿವುಟಿ ಹಾಕಬೇಕೆಂದು ಅಂದಿನ ಗವರ್ನರ್ ಜನರಲರಾಗಿದ್ದ ಲಾರ್ಡ್ ಕರ್ಜನ್‌ರವರು ಬಂಗಾಳವನ್ನು ಎರಡು ಪ್ರಾಂತವಾಗಿ ಒಡೆದರು. ಇದರ ಪರಿಣಾಮವಾಗಿ ಇಡೀ ಬಂಗಾಳದಲ್ಲಿ ಪ್ರಚಂಡ ಕಲಕಲವಾಯಿತು. ಇದನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಿದ್ದ ಅರವಿಂದರು ತಮ್ಮ ಹುದ್ದೆಗೆ ರಾಜೀನಾಮೆಯಿತ್ತು ಬಂಗಾಳದಲ್ಲಿ ಸ್ಥಾಪಿತವಾಗಿದ್ದ ರಾಷ್ಟ್ರೀಯ ಕಲಾ ಶಾಲೆಯ ಮುಖ್ಯೋಪಾಧ್ಯಾಯರಾದರು. ನಂತರ ಇವರು ರಾಜಕೀಯ ರಂಗಕ್ಕೂ ಧುಮುಕಿದರು. ಸ್ವದೇಶಿ ಚಳವಳಿ, ಪರದೇಶೀ ವಸ್ತು ಬಹಿಷ್ಕಾರ, ಸರ್ಕಾರದವರ ಸಂಸ್ಥೆಗಳೊಡನೆ ಅಸಹಕಾರ ಮುಂತಾದ ಕಾರ್ಯ ಕ್ರಮಗಳ ನಿರ್ಮಾತೃ ಅರವಿಂದರೇ. 20 ವರ್ಷಗಳ ಮೊದಲು ಅವರು ಹಾಕಿದ ಪಥದಲ್ಲೇ ಮಹಾತ್ಮ ಗಾಂಧಿಯವರೂ ಮುಂದುವರಿಯುತ್ತಿರುವರು. ಅರವಿಂದರು 1906 ರಲ್ಲಿ ಪ್ರತಿಪಾದಿಸಿದ ಪೂರ್ಣ ಸ್ವಾತಂತ್ರ್ಯ ಧ್ಯೇಯವೇ ಇಂದೂ ಕಾಂಗ್ರೆಸಿನ ಧ್ಯೇಯವಾಗಿರುವದು. ಆ ಕಾಲದಲ್ಲಿ ಬಂಗಾಳದ ಒಂದು ಪಂಗಡವು ಹಿಂಸಾತತ್ವವನ್ನು ಕೈಕೊಂಡು ಸರಕಾರಿ ಅಧಿಕಾರಿಗಳ ಮೇಲೆ ಅತ್ಯಾಚಾರ ನಡೆಸ ತೊಡಗಿತ್ತು. 1907 ರಲ್ಲಿ ಸೂರತಿನಲ್ಲಿ ಅಹಿಂಸಾವಾದಿಯಾಗಿದ್ದ ಅರವಿಂದರನ್ನು ದಸ್ತಗಿರಿ ಮಾಡಿದರು. ಆದರೆ ಇವರು ಆ ವಿಪ್ಲವಕಾರಿಗಳ ಪಂಗಡದವರೆಂದು ರುಜುಪಡಿಸಲಸಾಧ್ಯವಾದ್ದರಿಂದ ಅರವಿಂದರನ್ನು ಕೆಲವು ತಿಂಗಳುಗಳಲ್ಲಿ ಬಿಟ್ಟು ಬಿಟ್ಟರು. ಅವರು ಸೆರೆಮನೆಯಲ್ಲಿ ಇದ್ದ ಒಂದು ವರ್ಷದ ಅವಧಿಯು ಅವರ ಜೀವಮಾನದಲ್ಲಿ ಒಂದು ಹೊಸ ಪರಿವರ್ತನವನ್ನು ಮಾಡಿತು. ಆ ಕಾಲದಲ್ಲಿಯೇ ಅವರ ಹೃದಯದಲ್ಲಿ ಆಧ್ಯಾತ್ಮಿಕ ಸ್ಫೂರ್ತಿಯು ಹುಟ್ಟಿ ಅವರಿಗೆ ಆಧ್ಯಾತ್ಮಿಕ ಉನ್ನತಿಯ ದರ್ಶನವಾದದು.

ತಾನು ತನ್ನ ಸಹಪಾಠಿಗಳೊಡನೆ ಸೆರೆಮನೆಯನ್ನು ಸೇರಿರುವದರಿಂದ ತಮ್ಮ ರಾಜಕೀಯ ಚಳವಳವನ್ನು ಮುಂದುವರಿಸುವವರಿಲ್ಲದೆ ತಮ್ಮ ಧ್ಯೇಯವು ಮಣ್ಣುಪಾಲಾಗುವದೆಂದು ವ್ಯಸನದಿಂದಿದ್ದ ಅರವಿಂದರಿಗೆ ಜೈಲಿನಲ್ಲಿ ಓದಲು ಭಗವದ್ಗೀತೆಯು ಕೊಡಲ್ಪಟ್ಟಿತು. ಅದರ ನಿತ್ಯ ಪಠನದಿಂದ ಅವರ ಮಾನಸಿಕ ಕೋಲಾಹಲವೆಲ್ಲಾ ಮಾಯವಾಗಿ ಕಾರ್ಯವನ್ನು ಮಾಡುವವರು ತಾವಾದರೂ, ಮಾಡಿಸುವ ಮಹಾ ಶಕ್ತಿಯೊಂದಿದೆಯೆಂದೂ, ಆ ಶಕ್ತಿಯ ಸೂಚನೆಯನ್ನನುಸರಿಸುವುದರಲ್ಲಿ ಹಿತವಿದೆಯೆಂದೂ ಅವರಿಗೆ ಮನದಟ್ಟಾಯಿತು. ಈ ನಂಬಿಕೆಯು ಅವರಲ್ಲಿ ಬೆಳೆದಂತೆಲ್ಲಾ ಅವರ ಮನಸ್ಸು ಆತ್ಮಾನುಸಂಧಾನದ ಕಡೆಗೆ ತಿರುಗಲಾರಂಭಿಸಿತು.

ಜೈಲಿನಿಂದ ಬಿಡುಗಡೆಯಾದರೂ ತಾವು ಆರಂಭಿಸಿದ ರಾಜಕೀಯ ಚಳವಳವನ್ನು ಬಿಡಲು ಅವರ ಮನಸ್ಸೊಪ್ಪಲಿಲ್ಲ. ಆದ್ದರಿಂದ ಪುನಃ ಅವರು ಸ್ನೇಹಿತರನ್ನು ಸೇರಿಸಿ, ತಾವು ಸೆರೆಮನೆ ಸೇರಿದ್ದಾಗ ಪ್ರಯುಕ್ತ ತೀರಾ ಹಿಡಿತತಪ್ಪಿದ್ದ ಚಳವಳಿಯನ್ನು ಹತೋಟಿಗೆ ತರಲು ಯತ್ನಿಸಿದರು. ಆದರೆ ಆತ್ಮಾನುಸಂಧಾನದ ಪರಮ ಸುಖವನ್ನರಿತ ಅವರ ಮನಸ್ಸು ಹೇಗೆ ರಾಜಕೀಯ ರಂಗದಲ್ಲಿ ನಿಲ್ಲುವದು. ಕ್ರಮೇಣ ಅವರ ಮನಸು ರಾಜಕೀಯದಿಂದ ದೂರ ಸರಿಯತೊಡಗಿತು. ಇವರು 1910 ರಲ್ಲಿ ಮದರಾಸಿನ ಹತ್ತಿರವಿರುವ ಫ್ರೆಂಚ್ ಸಂಸ್ಥಾನವಾದ ಪಾಂಡಿಚೇರಿಗೆ ಹೋಗಿ ನೆಲಸಿದರು. ಅಂದಿನಿಂದ ಅವರು ರಾಜಕಾರಣವನ್ನು ಸಂಪೂರ್ಣ ಬಿಟ್ಟಿರುವರು.

ಭಾರತೀಯರಲ್ಲಿ ಸ್ವಾತಂತ್ರ್ಯ ಅಭಿಲಾಷೆಯನ್ನು ಹುಟ್ಟಿಸಿ ಅಸದೃಶವಾದ ದೇಶಸೇವೆ ಮಾಡಿದ ಅರವಿಂದರನ್ನು ಕಾಂಗ್ರೆಸಿನ ಅಧ್ಯಕ್ಷರಾಗಿ ಜನತೆಯು ಚುನಾಯಿಸಿದರೂ ಅರವಿಂದರು ಅದನ್ನು ಸ್ವೀಕರಿಸಲು ಒಪ್ಪಲಿಲ್ಲ. ಅಧ್ಯಾತ್ಮದ ಕಡೆಗೆ ತಿರುಗಿದ ಅವರ ಮನಸ್ಸು ರಾಜಕೀಯದ ಕಡೆಗೆ ಬಂದೀತೇ? ಅವರು ಅಂದಿನಿಂದ ಇಂದಿನ ವರೆಗೂ ಏಕಾಂತದಲ್ಲಿದ್ದು ತಮ್ಮ ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾ ತಮ್ಮ ಆಧ್ಯಾತ್ಮಿಕ ಅನುಭವದ ವಿವರಣೆಯಿಂದ ಇತರರ ಆತ್ಮೋನ್ನತಿಗೆ ಕಾರಣರಾಗುತ್ತಾ ಇದ್ದಾರೆ.

ಆಧ್ಯಾತ್ಮಿಕ ದೃಷ್ಟಿಯಲ್ಲಿ ಇಡೀ ಜಗತ್ತಿನ ದೃಷ್ಟಿಯನ್ನು ತನ್ನೆಡೆಗೆ ಆಕರ್ಷಿಸುತ್ತಿರುವ ಭಾರತ ಮಾತೆಯ ಸುಪುತ್ರರಾದ ಅರವಿಂದ ಯೋಗಿಗಳು ಚಿರಾಯುವಾಗಿ ಬಾಳಲೆಂದೇ ನಮ್ಮ ಬಯಕೆ.

ಕೊಡಗು

ಮೇ ತಾರೀಕು ೧೯ನೇ ಶುಕ್ರವಾರ ೧೯೩೯.

ಶಾಲೆಗಳ ಪಠ್ಯ ಪುಸ್ತಕಗಳು.

ಕೊಡಗಿನ ಶಾಲೆಗಳಲ್ಲಿ ಉಪಯೋಗಿಸುವ ಪಠ್ಯ ಪುಸ್ತಕಗಳನ್ನು ಆರಿಸುವ ಬಗ್ಗೆ ಇಷ್ಟರ ವರೆಗೆ ನಿಬಂಧನೆ ಏನೂ ಇರಲಿಲ್ಲ. ಶಾಲಾ ಇನ್ಸ್‌ಪೆಕ್ಟರು ಮತ್ತು ಅಸಿಸ್ಟೆಂಟ್ ಯಾ ಡಿಪ್ಯುಟಿ ಇನ್ಸ್‌ಪೆಕ್ಟರವರು ತಾವೇ ಬರೆದ ಅಥವಾ ತಮಗೆ ಇಷ್ಟಬಂದ ಪುಸ್ತಕಗಳನ್ನು ಉಪಯೋಗಿಸುವಂತೆ ಹುಕುಂ ಮಾಡುತ್ತಿದ್ದರು. ಆದ ಕಾರಣ ಈ ಅಧಿಕಾರಿಗಳು ಬದಲಾದಂತೆ ಪುಸ್ತಕಗಳೂ ಬದಲಾಗುತ್ತಿದ್ದವು. ಈ ಉದ್ಯೋಗಸ್ಥರೇ ಗ್ರಂಥಕರ್ತರಾಗಿದ್ದಲ್ಲಿ ಅವರ ಪುಸ್ತಕಗಳು ಎಷ್ಟೇ ಕಠಿಣ ತರದವಾಗಿರಲಿ, ಎಷ್ಟೇ ಯೋಗ್ಯವಲ್ಲದವಾಗಿರಲಿ, ಎಷ್ಟೇ ಕ್ರಯ ಉಳ್ಳವಾಗಿರಲಿ ಅವುಗಳನ್ನೇ ಉಪಯೋಗಿಸುತ್ತಿದ್ದ ಕಾರಣ ವಿದ್ಯಾರ್ಥಿಗಳಿಗೆ ಕಲಿಯಲು ಬಹು ಕಷ್ಟವಾಗುತ್ತಿದ್ದವಲ್ಲದೆ, ಬಡ ತಂದೆ ತಾಯಿಗಳಿಗೆ ದೊಡ್ಡ ಹೊರೆಯಾಗುತ್ತಿತ್ತು. ಕೆಳಗಿನ ತರಗತಿಗಳಲ್ಲಿ ಕನ್ನಡ, ಲೆಕ್ಕ, ಇಂಗ್ಲಿಷ್ ಮೊದಲಾದ ಪಠ್ಯ ಪುಸ್ತಕಗಳೊಂದಿಗೆ ಕಥೆ ಪುಸ್ತಕಗಳನ್ನೂ ಕೂಡ ಮಕ್ಕಳು ಬಿಡ್ಡಾಯವಾಗಿ ಕೊಂಡುಕೊಳ್ಳಬೇಕಾಗಿದ್ದದ್ದೂ, ಶಾಲೆಗಳಲ್ಲಿ ಸ್ಲೇಟಿನ ಉಪಯೋಗವನ್ನು ಕಡಿಮೆ ಮಾಡಿ ಕಾಗದದ ಹಲವು ನೋಟು ಪುಸ್ತಕಗಳನ್ನು ಉಪಯೋಗಿಸುತ್ತಿದ್ದದ್ದೂ, ಪ್ರಿಂಟಾದ ರೈಟಿಂಗ್ ಪುಸ್ತಕಗಳನ್ನೇ ಯಾವಾಗಲೂ ಉಪಯೋಗಿಸುತ್ತಿದ್ದದ್ದೂ ತಂದೆ ತಾಯಿಗಳ ಹೊರೆಯನ್ನು ಮತ್ತಷ್ಟೂ ಹೆಚ್ಚಿಸಿತ್ತು. ಈ ಕಷ್ಟಗಳನ್ನು ಸಹಿಸಲಾರದೆ, ಯೋಗ್ಯವಾದ, ಆಗುವಷ್ಟು ಕಡಿಮೆ ಕ್ರಯದ ಪಠ್ಯ ಪುಸ್ತಕಗಳನ್ನು ಆರಿಸಲು ಒಂದು ಕಮಿಟಿಯನ್ನು ನೇಮಿಸಬೇಕೆಂದೂ, ಪುಸ್ತಕಗಳನ್ನು ಪ್ರತಿ ವರ್ಷವೂ ಬದಲಾಯಿಸಬಾರದೆಂದೂ, ಈ ಬಾಬಿನಲ್ಲಿ ತಂದೆತಾಯಿಗಳ ಹೊರೆಯನ್ನು ಕಡಿಮೆ ಮಾಡಬೇಕೆಂದೂ ದೇಶದಲ್ಲಿ ಚಳವಳ ನಡೆಯಿತು. ಹಾಗೆಯೇ ಇಲ್ಲಿಯ ಜಿಲ್ಲಾ ಬೋರ್ಡಿನಲ್ಲಿಯೂ, ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿಯೂ ಠರಾವುಗಳು ಪಾಸಾದವು. ಸರ್ಕಾರವು ಇವುಗಳನ್ನು ಮಾನ್ಯ ಮಾಡಿ, ಜನರ ಕೋರಿಕೆಯಂತೆ ಒಂದು ಪಠ್ಯ ಪುಸ್ತಕ ಕಮಿಟಿಯನ್ನು ಈ ವರ್ಷ ನೇಮಕ ಮಾಡಿದರು.

ಮೂರು ಹೈಸ್ಕೂಲುಗಳ ಹೆಡ್ಮಾಸ್ಟರುಗಳೂ, ಎರಡು ಮುನ್ಸಿಪಾಲಿಟಿಗಳ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರುಗಳೂ ಈ ಕಮಿಟಿಯ ಮೆಂಬರುಗಳೂ, ಜಿಲ್ಲಾ ಎಡ್ಯುಕೇಶನ್ ಆಫೀಸರು ಇದರ ಅಧ್ಯಕ್ಷರೂ ಆಗಿರುವರು. ಹೈಸ್ಕೂಲುಗಳ ಹೆಡ್ಮಾಸ್ಟರುಗಳು ಇದರಲ್ಲಿರುವುದು ನ್ಯಾಯವೆ. ಆದರೆ ಎರಡು ಮೂರು ಶಾಲೆಗಳಿರುವ ಮುನ್ಸಿಪಾಲಿಟಿಗಳಿಗೂ, ನೂರು 85 ಶಾಲೆಗಳಿರುವ ಜಿಲ್ಲಾ ಬೋರ್ಡಿಗೂ ಒಂದೊಂದರಂತೆ ಪ್ರಾತಿನಿಧ್ಯ ಕೊಟ್ಟದ್ದು ಎಂದೂ ನ್ಯಾಯವಲ್ಲ. ನಮ್ಮ ನೆರೆ ಪ್ರಾಂತ್ಯದ ಜಿಲ್ಲೆಗಳಲ್ಲಿ ಹೈಸ್ಕೂಲಿನ ಹೆಡ್ಮಾಸ್ಟರುಗಳು ಸೇರಿ ಆರಿಸಿದ ಪಠ್ಯಪುಸ್ತಕಗಳ ಪಟ್ಟಿಯಿಂದ ಜಿಲ್ಲಾ ಬೋರ್ಡಿನ ಶಾಲೆಗಳಿಗಿರುವ ಪುಸ್ತಕಗಳನ್ನು ನಿಶ್ಚಯಿಸುವ ಹಕ್ಕು ಜಿಲ್ಲಾ ಬೋರ್ಡಿನ ಒಂದು ಕಮಿಟಿಗೆ ಇದೆ. ಈ ರೀತಿ ಮಾಡುವದೇ ಯೋಗ್ಯವಾಗಿದೆ. ಇದನ್ನು ತತ್ಕಾಲ ಇಲ್ಲಿ ಜಾರಿಗೆ ತರಲು ಸಾಧ್ಯವಿಲ್ಲದಿದ್ದರೂ, ಇಲ್ಲಿಯ ಎಲಿಮೆಂಟರಿ ಶಾಲೆಗಳೆಲ್ಲಾ ಹೆಚ್ಚು ಕಮ್ಮಿ ಜಿಲ್ಲಾ ಬೋರ್ಡಿನ ಆಡಳಿತೆಯಲ್ಲಿರುವುದರಿಂದ ಈ ಟೆಕ್ಸ್ಟ್ ಬುಕ್ ಕಮಿಟಿಯ ನಾಲ್ಕರಲ್ಲಿ ಮೂರು ಭಾಗದಷ್ಟಾದರೂ ಜಿಲ್ಲಾ ಬೋರ್ಡಿನ ಪ್ರತಿನಿಧಿಗಳಾಗಿರಬೇಕು. ಈ ವಿಚಾರಕ್ಕೆ ಸರ್ಕಾರದವರೂ ಹಾಗೂ ಜಿಲ್ಲಾ ಬೋರ್ಡಿನವರೂ ಕೂಡಲೆ ಗಮನ ಕೊಡುವರಾಗಿ ನಂಬುತ್ತೇವೆ.

ಈ ಕಮಿಟಿಯು ವಾಡಿಕೆಯಾಗಿ ಪ್ರತಿ ವರ್ಷ ಮಾರ್ಚಿ ತಿಂಗಳಲ್ಲಿ ಸೇರಬೇಕೆಂದಿದ್ದರೂ ಕೂಡ ಈ ವರ್ಷ ಕಮಿಟಿಯ ನೇಮಕದ ಪ್ರಕಟಣೆಯು ಏಪ್ರಿಲ್ 1ರ ಗಜೆಟಿನಲ್ಲಿ ಹೊರಬಿದ್ದ ಕಾರಣ ಮೀಟಿಂಗನ್ನು ಏಪ್ರಿಲ್ 15ರಲ್ಲಿ ನಡಿಸಬೇಕಾಯಿತು. ಈ ಮೀಟಿಂಗಿನಲ್ಲಿ ಕೆಲವು ಮೆಂಬರುಗಳು—ಈಗ ತಡವಾದ ಕಾರಣ ಈ ವರ್ಷ ಪಠ್ಯ ಪುಸ್ತಕಗಳನ್ನು ಬದಲಾಯಿಸಕೂಡದೆಂದೂ, ಹಳೇ ಪುಸ್ತಕಗಳನ್ನೇ ಇನ್ನೊಂದು ವರ್ಷ ಮುಂದುವರಿಸಬೇಕೆಂದೂ ವಾದ ಮಾಡಿದರೆಂದೂ, ಇನ್ನು ಕೆಲವು ಮೆಂಬರುಗಳು—ಜನರ ಮೇಲೆ ಸೂಚಿಸಿದ ಕಷ್ಟಗಳನ್ನು ಪರಿಹರಿಸಲು ಅವರ ಕೋರಿಕೆಯಂತೆ ಸರ್ಕಾರದವರು ನೇಮಿಸಿರುವ ಈ ಕಮಿಟಿಯು ಈ ವರ್ಷವೇ ಯೋಗ್ಯವಾದ ಪಠ್ಯ ಪುಸ್ತಕಗಳನ್ನು ಆರಿಸುವುದು ಅದರ ಕರ್ತವ್ಯವೆಂದೂ, ಹಳೇ ಪುಸ್ತಕಗಳನ್ನೇ ಮುಂದುವರಿಯಲು ಬಿಟ್ಟರೆ ಇಂಥಾ ಕಮಿಟಿಯನ್ನು ನೇಮಿಸಬೇಕೆಂದು ಜನತೆಯು ಮಾಡಿದ ಕೋರಿಕೆಯಲ್ಲಿ ಹುರುಳಿಲ್ಲವೆಂದಾಗುವದೆಂದೂ, ಹಲವು ಶಾಲೆಗಳು ಇನ್ನೂ ಹೊಸ ವರ್ಷದ ಪಾಠಕ್ರಮವನ್ನು ಪ್ರಾರಂಭಿಸದೆ ಇರುವ ಕಾರಣ ಈಗ ಪುಸ್ತಕಗಳ ಪಟ್ಟಿಯನ್ನು ತಯಾರಿಸುವದರಿಂದ ಹೆಚ್ಚಿನ ತೊಂದರೆಯಾಗಲಾರದೆಂದೂ ವಾದಿಸಿದರೆಂದೂ ತಿಳಿಯಬರುತ್ತದೆ. ಈ ವರ್ಷ ಪುಸ್ತಕಗಳನ್ನು ಬದಲಾಯಿಸಬಾರದೆಂದವರಲ್ಲಿ, ಇಷ್ಟರ ವರೆಗೆ ಪ್ರೈಮರಿ ಶಾಲೆಗಳಲ್ಲಿ ಉಪಯೋಗಿಸುತ್ತಿದ್ದ ಹಲವು ಪುಸ್ತಕಗಳ ಗ್ರಂಥಕರ್ತರೊಬ್ಬರು, ಮತ್ತು ಇನ್ನೊಬ್ಬರು ಇವರ ಸಂಬಂಧಿಕರು. ಪಠ್ಯ ಪುಸ್ತಕಗಳಿಗೆ ಸಂಬಂಧ ಇದ್ದವರು ಯಾರೂ ಇರುವವರು ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ಮೆಂಬರಾಗಿರಕೂಡದೆಂದು ಮದ್ರಾಸು ಪ್ರಾಂತ್ಯದಲ್ಲಿ ನಿಬಂಧನೆ ಇದೆ. ಈ ನಿಬಂಧನೆಯಲ್ಲಿ ತುಂಬಾ ನ್ಯಾಯವಿದೆ. ಇಲ್ಲಿಯ ಕಮಿಟಿಯನ್ನು ನೇಮಿಸುವಾಗ್ಯೆ ಈ ನಿಬಂಧನೆಯನ್ನು ಇಲ್ಲಿಯ ಸರ್ಕಾರದವರು ಯಾಕೆ ಹಿಂಬಾಲಿಸಲಿಲ್ಲವೋ ತಿಳಿಯದು. ಇನ್ನಾದರೂ ಇದಕ್ಕೆ ಸಿಗವಿಡುವರಾಗಿ ಆಶಿಸುತ್ತೇವೆ.

ಇವರಲ್ಲಿ ಒಬ್ಬರು ಎಷ್ಟು ಹಟದಿಂದ ಚರ್ಚೆ ನಡಿಸಿದರೆಂದರೆ, ಈ ವಿಚಾರ ತೀರ್ಮಾನಕ್ಕೆ ಬಂದಾಗ್ಯೆ ಅಧ್ಯಕ್ಷರಿಗೆ ಓಟು ಕೊಡುವ ಹಕ್ಕಿಲ್ಲವೆಂದೂ ಕೂಡ ವಿರೋಧಿಸಿದರು. ಕ್ರಮಬದ್ಧವಾಗಿ ನೇಮಿಸಲ್ಪಟ್ಟ ಇಂಥಾ ಕಮಿಟಿಯಲ್ಲಿ ಅಧ್ಯಕ್ಷರಿಗೆ ಓಟಿನ ಹಕ್ಕಿಲ್ಲವೆಂದು ಹೇಳುವುದು ಎಂಥಾ ತಿಳಿಗೇಡಿತನದ ಮಾತು. ಈ ಕಮಿಟಿಯ ಮೀಟಿಂಗಿನಲ್ಲಿ ಅಧ್ಯಕ್ಷರು ಸೇರಿ 5 ಸದಸ್ಯರು ಹಾಜರಿದ್ದರೆ ಕೋರಂ ಆಗುವುದು ಎಂದು ನೋಟಿಫಿಕೇಶನಿನಲ್ಲಿ ವಿಶದವಾಗಿರುವಾಗ್ಯೆ ಅಧ್ಯಕ್ಷರು ಓಟು ಮಾಡಕೂಡದೆಂಬುದರಲ್ಲಿ ಅರ್ಥವೇನಿದೆ? ಇಂಥಾ ಕಮಿಟಿಗಳಲ್ಲಿ ಅಧ್ಯಕ್ಷರಿಗೆ ಮೆಂಬರರಂತೆ ಒಂದು ಓಟಿನ ಹಕ್ಕಿರುವುದು ಮಾತ್ರವಲ್ಲ, ಸರಿಸಮಾನವಾದಲ್ಲಿ ಅವರಿಗೆ ಕಾಸ್ಟಿಂಗ್ ಓಟು (2 ನೇ ಓಟು) ಕೊಡುವ ಅಧಿಕಾರವೂ ಇದೆ. ಅಧ್ಯಕ್ಷರು ತಮಗಿದ್ದ ಓಟಿನ ಹಕ್ಕನ್ನು ನ್ಯಾಯವಾಗಿ ಉಪಯೋಗಿಸಿದ್ದರಿಂದ ಎಲಿಮೆಂಟರಿ ಶಾಲೆಗಳಿಗಿರುವ ಪುಸ್ತಕಗಳನ್ನು ಆರಿಸಲು ಈ ತಾ. 12 ರಲ್ಲಿ ಕಮಿಟಿಯವರು ಪುನಹ ಸೇರುವಂತೆ ನಿಶ್ಚಯಿಸಲಾಯಿತು. ಆದರೆ ಇಲ್ಲಿಯ ಸೆಕೆಂಡರಿ ಶಾಲೆಗಳಲ್ಲಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರಿಂದ ಆರಿಸಲ್ಪಟ್ಟು, ಅಲ್ಲಿಯ ಶಾಲೆಗಳಲ್ಲಿ ಉಪಯೋಗಿಸಲ್ಪಡುತ್ತಿರುವ ಪುಸ್ತಕಗಳೇ ಜಾರಿಯಲ್ಲಿರುವದರಿಂದ ಈ ವರ್ಷದ ಮಟ್ಟಿಗೆ ಅವುಗಳನ್ನು ಬದಲಾಯಿಸುವುದು ಬೇಡವೆಂದು ತೀರ್ಮಾನಿಸಲಾಯಿತು. ತಾ. 12 ರ ಮೀಟಿಂಗಿನಲ್ಲಿ ಮೂರು ಮೆಂಬರುಗಳು ಗೈರುಹಾಜರಾದ ಕಾರಣ ಕೋರಂ ಇಲ್ಲದೆ ಮೀಟಿಂಗನ್ನು ನಡಿಸಲು ಸಾಧ್ಯವಾಗಲಿಲ್ಲವೆಂಬುದು ವ್ಯಸನಕರ. ಹಿಂದಿನ ಮೀಟಿಂಗಿನಲ್ಲಿ ಪುಸ್ತಕಗಳನ್ನು ಈ ವರ್ಷ ಬದಲಾಯಿಸಕೂಡದೆಂದು ಓಟು ಮಾಡಿದ ಮೂರು ಮೆಂಬರುಗಳೇ, ಎಲ್ಲಾ ಮೆಂಬರುಗಳಿಗೂ ಅನುಕೂಲಿಸುವಂತೆ ನಿಶ್ಚಯಿಸಿದ ತಾರೀಕಿನಲ್ಲಿ ಏನೊಂದೂ ಕಾರಣ ಸೂಚಿಸದೆ ಈ ಮೀಟಿಂಗಿಗೆ ಬಾರದೆ ಹೋದದ್ದು ನೋಡಿದರೆ, ಕಮಿಟಿ ಮೀಟಿಂಗಿಗೆ ಕೋರಂ ಇಲ್ಲದೆ ಮಾಡಿ, ಆದರ ಕಾರ್ಯವನ್ನು ಈ ವರ್ಷಕ್ಕೆ ನಿಲ್ಲಿಸಿ, ಹಳೇ ಪುಸ್ತಕಗಳನ್ನೇ ಮುಂದುವರಿಸುವಂತೆ ಮಾಡಬೇಕೆಂದು ಅವರ ಉದ್ದೇಶವಾಗಿರಬಹುದೋ ಎಂಬ ಸಂಶಯಕ್ಕೆ ಎಡೆಕೊಟ್ಟಂತಾಗಿದೆ.

ಹೇಗೂ ಈ ಕಮಿಟಿಯ ಮೀಟಿಂಗನ್ನು ಇನ್ನು ಪುನಹ ನಡಿಸಿ, ಪಠ್ಯ ಪುಸ್ತಕಗಳನ್ನು ಆರಿಸಲು ತಡವಾಯಿತೆಂಬುದರಲ್ಲಿ ಸಂಶಯವಿಲ್ಲ. ಆದರೂ ಕೂಡ, ಜಿಲ್ಲಾ ಎಡ್ಯುಕೇಶನ್ ಆಫೀಸರವರು ಡಿಸ್ಟ್ರಿಕ್ಟ್ ಬೋರ್ಡು ಅಧ್ಯಕ್ಷರ ಸಲಹೆಯೊಡನೆ ಯೋಗ್ಯವಾದ ಮತ್ತು ಕಡಿಮೆ ಕ್ರಯದ ಪುಸ್ತಕಗಳನ್ನು ಆರಿಸಿ, ಅನಾವಶ್ಯದ ಪುಸ್ತಕಗಳನ್ನು ಮಕ್ಕಳು ತೆಗೆಯದಂತೆ ಮಾಡಿ, ಕಮಿಶನರವರ ಮಂಜೂರಾತಿಯಿಂದ ತಂದೆತಾಯಿಗಳ ಅಪಾರವಾದ ಹೊರೆಯನ್ನು ಕಡಿಮೆ ಮಾಡುವುದು ಅವಶ್ಯವಾಗಿದೆ. ಹಳೇ ಪುಸ್ತಕಗಳನ್ನೇ ಉಪಯೋಗಿಸುವುದರ ಬದಲು ಹೊಸ ಪುಸ್ತಕಗಳನ್ನು ಕೊಂಡುಕೊಳ್ಳುವಂತೆ ಮಾಡಿದರೆ ತಂದೆ ತಾಯಿಗಳಿಗೆ ನಷ್ಟ ಉಂಟಾಗುವದೆಂದು ಕೆಲವರಿಗೆ ತೋರಬಹುದು. ಆದರೆ ಯೋಗ್ಯವಲ್ಲದ ಪುಸ್ತಕಗಳನ್ನು ಬದಲಾಯಿಸುವುದೂ, ಅನಾವಶ್ಯದ ಕಥೆ ಮೊದಲಾದ ಪುಸ್ತಕಗಳನ್ನು ಮಕ್ಕಳು ಕೊಂಡುಕೊಳ್ಳುವುದನ್ನು ನಿಲ್ಲಿಸುವುದೂ ಈ ವರ್ಷವಲ್ಲದಿದ್ದರೂ ಬರುವ ವರ್ಷವಾದರೂ ಮಾಡಲೇ ಬೇಕು. ಅಂದ ಮೇಲೆ ಆಗುವಷ್ಟು ಬೇಗನೆ ಮಾಡುವದು ಉತ್ತಮ. ಒಂದು ಸಾರಿ ನಿಶ್ಚಯಿಸಿದ ಪುಸ್ತಕಗಳನ್ನು ಮೂರು ವರ್ಷಗಳ ವರೆಗೆ ಬದಲಾಯಿಸಕೂಡದೆಂದು ನಿಬಂಧನೆ ಇದೆ. ಈ ಸಾರಿ ಹೊಸ ಪುಸ್ತಕಗಳನ್ನು ಕೊಂಡು ಕೊಂಡರೆ ಮೂರು ವರ್ಷಗಳ ವರೆಗೆ ಬೇರೆ ಮಕ್ಕಳು ಹಳೇ ಪುಸ್ತಕಗಳನ್ನೇ ಉಪಯೋಗಿಸುತ್ತಿರಬಹುದು. ಆದುದರಿಂದ ತಂದೆ ತಾಯಿಗಳಿಗೆ ಮಕ್ಕಳ ವಿದ್ಯಾಭ್ಯಾಸದ ಈ ಬಾಬಿನಲ್ಲಾಗುವ ಖರ್ಚನ್ನು ಆಗುವಷ್ಟು ಕಡಿಮೆ ಮಾಡುವ ಏರ್ಪಾಡನ್ನು ಈ ವರ್ಷವೇ ಮಾಡುವುದು ಅತ್ಯವಶ್ಯವೆಂದು ಎಷ್ಟು ಒತ್ತಿ ಹೇಳಿದರೂ ಸಾಲದು.

Wanted.

Wanted candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce, and Filmcraft. Rules and Entrance form on annas eight. Director, Royal Telegraph and Rly. Duties College, Bombay.

8-4

ಕೊಡಗು ಪ್ರಾಂತೀಕ ಮುಸ್ಲಿಂ ಲೀಗಿನ ಪ್ರಥಮ ಅಧಿವೇಶನ.

ಅಧ್ಯಕ್ಷರಾದ ಜನಾಬ್ ಹಾಜಿ ಅಬ್ದುಸ್ ಸತ್ತಾರ್ ಹಾಜಿ ಇಸ್ಹಾಕ್ ಶೇಟ್ ಯಂ. ಎಲ್. ಎ. ರವರ ಭಾಷಣ.

ಜನಾಬ್ ಸಿದ್ದೀಕ್ ಸಾಹೇಬರೇ,
ಮತ್ತು ಸ್ನೇಹಿತರೇ,

ಕೊಡಗು ಪ್ರಾಂತೀಕ ಮುಸ್ಲಿಂ ಲೀಗಿನ ಪ್ರಥಮಾಧಿವೇಶನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆಹ್ವಾನಿಸಿದ್ದರಿಂದ ನಿಮ್ಮ ಕಾರ್ಯಕರ್ತರು ನಿಮಗೆ ಅನ್ಯಾಯಮಾಡಿದಂತಾಗಿದೆ. ಯಾಕೆಂದರೆ ನನ್ನ ಮೇಲೆ ಈ ಗೌರವದ ಮತ್ತು ಜವಾಬ್ದಾರಿಯ ಕಾರ್ಯವನ್ನು ಹೊರಿಸಿದಾಗ ಬೇರೆ ಶಕ್ತ ಮತ್ತು ದೊಡ್ಡ ಮುಖಂಡರನ್ನು ಆಹ್ವಾನಿಸುವುದು ಉತ್ತಮವೆಂದು ಹೇಳಿಕೊಂಡರೂ ನಿಮ್ಮ ಕಾರ್ಯಕರ್ತರು ನನ್ನ ವಿವರಣೆಯನ್ನು ಒಪ್ಪದೆ ನಾನೇ ಅದಕ್ಕೆ ಅರ್ಹನೆಂದು ಒತ್ತಾಯಪಡಿಸಿದ್ದರಿಂದ ನಾನು ಈ ಜವಾಬ್ದಾರಿಯನ್ನು ಹೊರಬೇಕಾಯಿತು. ಈ ಸಂದರ್ಭದಲ್ಲಿ ನಿಮ್ಮ ಸಹಾಯ ಸಹಾನುಭೂತಿ ಇಲ್ಲದಿದ್ದರೆ ಮುಂದಿನ ಕಾರ್ಯ ಜಯಪ್ರದವಾಗಿ ನಡೆಯದ್ದರಿಂದ ನೀವು ಯಥೋಚಿತ ವರ್ತಿಸುವಿರಾಗಿ ಆಶಿಸುತ್ತೇನೆ.

ಈ ಚಿಕ್ಕ ಪ್ರಾಂತವಾದ ಕೊಡಗಿನಲ್ಲಿ ಮುಸ್ಲಿಂ ಲೀಗಿನ ಸಂಸ್ಥೆಯು ಜನಾಬ್ ಅಬ್ದುಲ್ ಹಾಮಿದ್ ಖಾನ್ ಸಾಹೇಬ್ ಯಂ. ಎಲ್. ಎ. ಯವರ ಪ್ರೇರಣೆಯಿಂದ ಕಳೆದ ವರ್ಷ ಸ್ಥಾಪನೆಯಾಯಿತು. ಈ ಒಂದು ವರ್ಷದಲ್ಲಿ ಅದರ ಪ್ರೆಸಿಡೆಂಟರಾದ ಜನಾಬ್ ಯಂ. ಯಂ. ಸಿದ್ದೀಕ್ ಸಾಹೇಬರ, ಮತ್ತು ಸೆಕ್ರೆಟರಿಯವರಾದ ಜನಾಬ್ ಅಬ್ದುಲ್ ಮಜೀದ್ ಖಾನ್ ಸಾಹೇಬ ಮತ್ತು ಇತರ ನಿಸ್ಸೀಮ ಕೆಲಸಗಾರರ ಅವಿಚಲ ಶ್ರದ್ಧೆಯಿಂದ ಅನೇಕ ಕೆಲಸಗಳನ್ನು ಮಾಡಿದೆ. ಮುಸ್ಲಿಂ ಲೀಗಿನ ಶಾಖೆಗಳು ಕೊಡಗಿನ ಪ್ರತಿಯೊಂದು ಪ್ರಾಮುಖ್ಯ ಭಾಗಗಳಲ್ಲಿ ಸ್ಥಾಪಿಸಲ್ಪಟ್ಟಿರುವದಲ್ಲದೆ, ತೃಪ್ತಿಕರವಾಗಿ ಸದಸ್ಯರ ಸಂಖ್ಯೆಯೂ ಏರಿದೆ. ಆದರೆ ಇದು ಮುಸ್ಲಿಂ ಲೀಗು ಮಾಡಬೇಕಾದ ಕಾರ್ಯದ ಪ್ರಥಮ ಹೆಜ್ಜೆ. ಇನ್ನೂ ಕಾರ್ಯರೂಪದಲ್ಲಿ ಬರಲು ಅನೇಕ ಸಮಸ್ಯೆಗಳಿವೆ. ಕೊಡಗಿನ ಇಡೀ ಮುಸ್ಲಿಂ ಜನಾಂಗವು ಈ ಲೀಗಿಗೆ ಒಳಪಡಬೇಕು. ಜನತೆಯ ಮಾನಸಿಕ ಹಾಗೂ ನೈತಿಕ ಅಭಿವೃದ್ಧಿಗೆ ಇದು ಸಹಕಾರಿಯಾಗಬೇಕು. ಆದ್ದರಿಂದ ನಿಮ್ಮ ಕಾರ್ಯಕರ್ತರು ಕೈಕೊಂಡಿರುವ ಈ ಕಾರ್ಯಕ್ಕೆ ಎಲ್ಲರೂ ಪ್ರೋತ್ಸಾಹವನ್ನೀಯುವದಗತ್ಯವಿದೆ.

ಭಾರತ ಮುಸ್ಲಿಂ ಲೀಗು ಭಾರತೀಯ ಮುಸ್ಲಿಮರನ್ನು ಹಿಂದೆಂದೂ ನಡೆಯದ ರೀತಿ ಏಕೀಕರಿಸಿದೆ. ಕೆಲವೊಂದು ಸ್ವಾರ್ಥಪರರ ಹಾಗೂ ಅಧಿಕಾರ ಪ್ರಿಯರ ವಿನಹ ಎಲ್ಲಾ ಮುಸ್ಲಿಮರು ಮುಸ್ಲಿಂ ಲೀಗಿನ ಅನುಯಾಯಿಗಳಾಗಿದ್ದಾರೆ. ಮುಸ್ಲಿಂ ಲೀಗಿನವರ ಪ್ರಯತ್ನವು ಎಲ್ಲೆಲ್ಲೂ ಜಯಪ್ರದವಾಗುತ್ತಾ ಬಂದಿದೆ. ಇದಕ್ಕೆ ಮುಸ್ಲಿಮರಲ್ಲಿ ಉಪಸ್ಥಿತವಾಗಿರುವ ರಾಜಕೀಯ ಜಾಗೃತಿಯೇ ಕಾರಣ. ಸಾವಿರ ವರ್ಷಗಳ ವರೆಗೆ ಅವಿಚಲವಾಗಿ ಆಳಿಬಾಳಿದ ಆ ಮುಸ್ಲಿಮರ ತೇಜಸ್ಸು, ರಾಜಕೀಯ ಜಾಗೃತಿ ಜೀವಂತವಾಗಿರುವದು. ಕಾಲಪರಿಸ್ಥಿತಿಗನುಸರಿಸಿ ಮುಸ್ಲಿಂ ಲೀಗಿನ ನೇತೃತ್ವದಲ್ಲಿ ಏಕೀಕರಿಸಿ ಪುರಾತನ ತಮ್ಮ ತೇಜಸ್ಸು, ಸಂಸ್ಕೃತಿಗಳನ್ನು ಕಾಯ್ದುಕೊಂಡು ಪ್ರತ್ಯೇಕ ಜನಾಂಗವಾಗಿರುವದು ಇಂದಿನ ಲೀಗಿನ ಧೋರಣೆಯಾಗಿದೆ. ಭಾರತದಲ್ಲಿ ಬ್ರಿಟಿಷರ ಹಿಡಿತವು ಶಿಥಿಲವಾಗುತ್ತಿದೆಯೆಂದೂ, 1935ನೇ ಆಕ್ಟಿನನ್ವಯ ಮುಸ್ಲಿಮರಿಗೆ ಯಾವ ಲಾಭವೂ ಇಲ್ಲವೆಂದೂ ಅವರು ತಿಳಿದರು. ಆದರೆ ಈ ಆಕ್ಟಿಗೆ ವಿರೋಧವಾಗಿದ್ದ ಬಹುಮತ ಜನಾಂಗದವರ ಇಚ್ಛೆಯು ಕೇವಲ ಕೆಲವೊಂದು ಅಧಿಕಾರ ಲೋಲುಪರಾಗಿರುವ ವ್ಯಕ್ತಿಗಳ ಅಭಿಪ್ರಾಯದಿಂದ ತಿರಸ್ಕರಿಸಲ್ಪಟ್ಟಿತು. ಇಂಥಾ ವಿಷಮ ಪರಿಸ್ಥಿಯಲ್ಲಿ ನಮ್ಮ ಹಿತರಕ್ಷಣೆಯಾಗಬೇಕಾದರೆ ನಮ್ಮಲ್ಲಿ ಐಕ್ಯತೆ, ಹಾಗೂ ಒಮ್ಮತವು ಅತ್ಯಾವಶ್ಯಕ. ಇದರ ಸಾಧನೆಗಾಗಿಯೇ ನಿರತರಾಗಿರುವ ಮಿ. ಮಹಮ್ಮದಾಲಿ ಜಿನ್ನಾರವರಿರುವದಕ್ಕಾಗಿ ನಾವು ಭಗವಂತನನ್ನು ಪ್ರಾರ್ಥಿಸಬೇಕಿದೆ. ಇಂದು ಮುಸ್ಲಿಮರ ಶ್ರೇಯಸ್ಸಿಗಾಗಿ ತನು ಮನ ಧನಗಳನ್ನರ್ಪಿಸಿ ಅವಿಚಲವಾಗಿ ಶ್ರಮಿಸುತ್ತಿರುವ ವ್ಯಕ್ತಿಯೆಂದರೆ ಇವರೊಬ್ಬರೇ. ಇಂದು ಮುಸ್ಲಿಮರನ್ನು ಸುಗಮವಾದ ಪಥದಲ್ಲಿ ನಡೆಸಿ ತಮ್ಮ ಅಂತಿಮ ಧ್ಯೇಯವನ್ನು ಸಾಫಲ್ಯಗೊಳಿಸಬಹುದಾದ ಚಾಣಾಕ್ಷರೆಂದರೆ ಶ್ರೀ. ಜಿನ್ನಾರವರೇ. ಹೀಗೆ ಅವಿಚಲವಾಗಿ ದೇಶಹಿತಕ್ಕಾಗಿ ತನ್ನ ಹರೆಯದಿಂದ ಶ್ರಮಿಸಿದ ಇವರು ಈಗ ರಾಜಕೀಯ ರಂಗದಿಂದ ನಿವೃತ್ತರಾಗಲು ಅರ್ಹರಾದರೂ ಆ ಅವಿಚಲ ದೇಶಪ್ರೇಮದ ದೆಸೆಯಿಂದ ತಮ್ಮ ವೃದ್ಧಾಪ್ಯದಲ್ಲೂ ದೇಶದ ಕಲ್ಯಾಣಕ್ಕೆ ಶ್ರಮಿಸುತ್ತಿರುವದು ನಮ್ಮ ಭಾಗ್ಯವೇ ಆಗಿದೆ. ಭಾರತ ಮುಸ್ಲಿಮರೆಲ್ಲಾ ಮಿ. ಜಿನ್ನಾರವರೇ ಮುಸ್ಲಿಮರ ಅಖಂಡ ಮುಖಂಡರೆಂದು ಅಂಗೀಕರಿಸಿರುವರು. ಅಲ್ಲದೆ ಅವರಿಗೆ ಸಕಲ ಸಹಾಯ ಸವಲತ್ತುಗಳನ್ನು ಕೊಡಲೂ ನಿರ್ಧರಿಸಿರುವರು. ಅವರ ನೇತೃತ್ವದಲ್ಲಿ ಮುಸಲ್ಮಾನರು ಮುಂದುವರಿಯುವದರಲ್ಲಿ ಯಾವ ಸಂದೇಹವೂ ಇಲ್ಲ. ದೇವರು ಅವರನ್ನು ಚಿರಾಯುವನ್ನಾಗಿ ಮಾಡಲಿ.

1937 ರಿಂದ ಭಾರತದಲ್ಲಾದ ಅವ್ಯವಸ್ಥಿತ ಪರಿಸ್ಥಿತಿಗಳನ್ನು ಅರಿತು, ಮುಂದೆ ಬರಬಹುದಾದ ವಿಪತ್ತುಗಳನ್ನು ಯೋಚಿಸಿ ಭಾರತದಲ್ಲಿಯ ಎಲ್ಲಾ ಜನಾಂಗಗಳ ಐಕ್ಯತೆಗಾಗಿ ಹಗಲಿರುಳು ದುಡಿದ ವ್ಯಕ್ತಿಯೆಂದರೆ ಮಿ. ಜಿನ್ನಾರವರು. ಭಾರತದಲ್ಲಿ ವಿವಿಧ ಜನಾಂಗಗಳಿಗೆ ಬೇಕಾದುದಾದರೂ ಸರಿಸಮಾನ ಹಕ್ಕು. ಬಹು ಪಕ್ಷ, ಅಲ್ಪ ಪಕ್ಷಗಳೆಂಬ ಭೇದವಿಲ್ಲದ ಆ ಭಾವನೆ. ಎಲ್ಲರೂ ಏಕೀಕರಿಸಿ ಭಾರತದಲ್ಲಿ ತಮ್ಮ ತಮ್ಮ ಪ್ರಗತಿಯ ಅಗ್ರಸ್ಥಾನವನ್ನಲಂಕರಿಸುವದು. ಇದು ಯೋಗ್ಯ ಸಲಹೆಯಲ್ಲವೇನು? ಆದರೆ ರಾಜಕೀಯ ರಂಗದಲ್ಲಿ ಶ್ರಮಿಸಿ ನಿರತರಾದ ಅಖಂಡ ಮುಖಂಡರೊಬ್ಬರ ಯೋಗ್ಯ ಪ್ರಯತ್ನವು ಹೀಗೆ ಅಧಿಕಾರ ಲಾಲಸೆಯಿಂದ ಕೂಡಿದ ಕೆಲವೊಂದು ವ್ಯಕ್ತಿಗಳಿಂದ ಕಿತ್ತೊಗೆಯಲ್ಪಟ್ಟು, ಅಖಂಡ ಸಂಸ್ಥೆಯಾದ ಅಖಿಲ ಭಾರತ ಕಾಂಗ್ರೆಸಿನ ಕಡಿವಾಣವು ಹೇಗೆ ಅವರ ಕೈಯೊಳಗೆ ಬಂದಿದೆಯೆಂಬುದು ಬೇಸರದ ವಿಚಾರ. ಭಾರತದಲ್ಲಿಯ ಜನಾಂಗಗಳ ಏಕೀಕರಣಕ್ಕಿದ್ದ ಒಂದು ಅಮೂಲ್ಯ ಸಂದರ್ಭವು ಕಳೆದು ಹೋಯಿತು. ಅಧಿಕಾರ ತೃಷೆಯಿಂದ ಕೂಡಿದ ವ್ಯಕ್ತಿಗಳು ದೇಶದ ಕಲ್ಯಾಣವನ್ನು ಮರೆತು ಪ್ರಯತ್ನಿಸುತ್ತಿರುವದು ಶೋಚನೀಯ. ಇಂಥಾವರಲ್ಲಿ ಇಡೀ ಭಾರತದ ಕಡಿವಾಣವು ಇದೆಯೆಂಬುದು ಮತ್ತಷ್ಟು ವಿಷಾದಕರ.

ಇಂಥಾ ಪರಿಸ್ಥಿತಿಯಲ್ಲಿ ನಾವು ಮಾಡಬೇಕಾದುದೇನು? ಯಾವನೊಬ್ಬ ಭಾರತೀಯ ಮುಸಲ್ಮಾನನೂ ಬಹುಪಕ್ಷದವರೊಡನೆ ಐಕ್ಯಗೊಂಡು ಸಾವಿರ ವರ್ಷಗಳಿಂದ ಕಾಪಾಡಿಕೊಂಡಿರುವ ವ್ಯಕ್ತಿತ್ವವನ್ನು ಕಳಕೊಳ್ಳಲು ಒಪ್ಪಲಾರನು. ಭಾರತ ಕಾಂಗ್ರೆಸಿನ ಅಧಿಕಾರಿವರ್ಗವು ಮುಸ್ಲಿಂ ಸಂಗಡವು ಪೂರ್ಣವಾಗಿ ಕಾಂಗ್ರೆಸಿನಲ್ಲಿ ಬೆರೆತುಕೊಳ್ಳಬೇಕೆಂದು ವಾದಿಸುವರು. ಮುಸ್ಲಿಂ ಲೀಗನ್ನು ಭಾರತ ಮುಸ್ಲಿಮರ ಏಕಸೂತ್ರ ಸಂಸ್ಥೆಯೆಂಬುದನ್ನು ಅಂಗೀಕರಿಸದ ಅವರ ಧೋರಣೆ, ಕೆಲವೊಂದು ಮುಸ್ಲಿಮರನ್ನು ವಶಮಾಡಿಕೊಂಡು ಅವರಿಂದ ನಡೆಸುತ್ತಿರುವ ಪ್ರಚಾರ ಕಾರ್ಯ, ಇದೆಲ್ಲವೂ ಮುಸ್ಲಿಮರ ಶ್ರೇಯಸ್ಸಿಗಾಗಿ ಅಲ್ಲವೆಂಬುದು ಸ್ವತಃ ಸಿದ್ಧ. ಉದಾಹರಣೆಕೊಟ್ಟು ಹೇಳುವದಾದರೆ ರಾಜಕೋಟೆಯ ಪ್ರಕರಣದಲ್ಲಿ ಸುಧಾರಣಾ ಕಮಿಟಿಯ ಸದಸ್ಯತನಕ್ಕೆ ಮುಸ್ಲಿಮರಿಗೆ ಸರಿಯಾದ ಪ್ರಾತಿನಿಧ್ಯಕೊಡದೆ ಬೇರೆ ಜನಾಂಗದವರು ಮುಸ್ಲಿಮರ ಹಿತಸಾಧನೆ ಮಾಡುವರೆಂಬ ಮ. ಗಾಂಧಿಯವರ ಧೋರಣೆಯೇ ಸಾಕು. ಆದರೆ ಇಂದು ಮುಸ್ಲಿಮರು ಎಚ್ಚೆತ್ತು ತಮ್ಮ ಕರ್ತವ್ಯದೃಷ್ಟಿಯಿಂದ ಮುಂದುವರಿಯುತ್ತಿರುವರೆಂಬುದು ಅವರ ಗೋಚರಕ್ಕೆ ಬಾರಲಿಲ್ಲ. ಗಾಂಧೀಯವರ ಶರತುಗಳಿಗೊಪ್ಪುವ ಒಬ್ಬನೇ ಒಬ್ಬ ಮುಸ್ಲಿಂ ಮನು ರಾಜಕೋಟೆಯಲ್ಲಿ ಸಿಗಲಿಲ್ಲವೆಂದರೆ ಅದು ಹೆಮ್ಮೆಯ ಮಾತು. ಆದ್ದರಿಂದ 'ಮುಸಲ್ಮಾನನೇ ರಾಜಕೋಟ್ ಜಿಂದ್ ಬಾದ್' (ರಾಜಕೋಟೆಯ ಮುಸಲ್ಮಾನರಿಗೆ ಜಯವಾಗಲಿ) ಎಂದು ಘೋಷಿಸುವ. ಈ ಉದಾಹರಣೆಯ ನಂತರ ಕಾಂಗ್ರೆಸ್ ಖಂಡಿತವಾಗಿಯೂ ಮುಸ್ಲಿಮರ ಹಿತ ಸಾಧಿಸುವುದಿಲ್ಲವೆಂಬುವುದು ವ್ಯಕ್ತವಾಗುತ್ತದೆ. ಇಂದಿನ ಅಧಿಕಾರಿ ವರ್ಗದಿಂದ ಏನೊಂದೂ ಹಿತದಾಯಕ ಕಾರ್ಯಗಳಾಗಲಿಕ್ಕಿಲ್ಲವೆಂಬದನ್ನು ನಂಬಿ ಆದ್ದರಿಂದ ಈ ಸಂದರ್ಭದಲ್ಲಿ ನಾವು ಮಾಡಬೇಕಾದುದೇನು ಎಂಬುವುದೇ ಜಟಿಲ ಪ್ರಶ್ನೆ. ನನ್ನ ಅನುಭವವನ್ನು ಹೇಳುವುದಾದರೆ ಉತ್ತರ ಹಿಂದೂಸ್ಥಾನದಲ್ಲಿ ಮುಸಲ್ಮಾನರು ಕಾಂಗ್ರೆಸ್ಸಿನ ಮೇಲೆ ತೃಣಮಾತ್ರ ನಂಬಿಕೆ ಇಟ್ಟಿರುವುದಿಲ್ಲ. ಅವರು ಅವರ ಸಂಸ್ಥೆಯಾದ ಮುಸ್ಲಿಂ ಲೀಗನ್ನು ಬಲಪಡಿಸಲು ಅಹೋರಾತ್ರಿ ಶ್ರಮಿಸುತ್ತಿರುವರು. ಕಾಂಗ್ರೆಸ್ ಅಧಿಕಾರ ರೂಢವಾಗಿರುವ ಪ್ರಾಂತಗಳ ರಾಜ್ಯಾಡಳಿತದಿಂದ ಮುಸ್ಲಿಮರು ತಮ್ಮ ಶಕ್ತಿಗೆ ತಾನೇ ಸಹಾಯ ಮಾಡಿಕೊಳ್ಳದ ಹೊರತು ಗತ್ಯಂತರವಿಲ್ಲವೆಂಬುದು ತಿಳಿದುಬರುತ್ತದೆ. ಅನೇಕ ಪ್ರಾಂತ್ಯಗಳಲ್ಲಿ ಮುಸ್ಲಿಂ ಧೋರಣೆಯನ್ನು ತೃಣೀಕರಿಸಿ ಮುಸ್ಲಿಮರನ್ನು ಬಗ್ಗು ಬಡಿಯುವ ಯತ್ನಗಳಾಗುತ್ತಿರುವದೆಂದರೆ ಅತಿಶಯೋಕ್ತಿಯಲ್ಲ. ಕಾಂಗ್ರೆಸಿನ ಇಂಥಾ ಧೋರಣೆಯು ಉತ್ತರ ಭಾರತದ ಮುಸ್ಲಿಂ ಸಹೋದರರನ್ನು ಉದ್ರೇಕಗೊಳಿಸುತ್ತಿರುವದು. ಈ ಅತೃಪ್ತಿಯು ಭಾರತದಲ್ಲಿ ಕ್ರಮವಾಗಿ ಪಸರಿಸುತ್ತಿದೆ. ಭಾರತವನ್ನು ಸಾಂಸ್ಕೃತಿಕ ದೃಷ್ಟಿಯಿಂದ ವಿಭಾಗಿಸುವದೇ ಇಂದಿನ ಆಂದೋಲನವನ್ನು ನಿಲ್ಲಿಸಲಾಪುವುದೆಂಬ ಭಾವನೆಯು ಹೆಚ್ಚುತ್ತಿದೆ. ಈ ವಿಚಾರವು ಸಿಂಧ್, ಸಂಯುಕ್ತಪ್ರಾಂತ್ಯ ಮತ್ತು ಡೆಲ್ಲಿ ಪ್ರಾಂತೀಕ ಮುಸ್ಲಿಂ ಲೀಗಿನಿಂದ ಪುಷ್ಟೀಕರಿಸಲ್ಪಟ್ಟಿದೆ. ಈ ವಿಚಾರವನ್ನು ವಿಮರ್ಶಿಸಿ ಒಂದು ಅಂತ್ಯ ತೀರ್ಮಾನವನ್ನು ಮಾಡಲು ಮುಸ್ಲಿಂ ಲೀಗಿನ ಕಾರ್ಯಕಾರಿ ಮಂಡಳಿಯು ಒಂದು ಉಪ ಸಮಿತಿಯನ್ನು ನೇಮಿಸಿದೆ. ಉತ್ತರ ಭಾರತದ ಮುಸ್ಲಿಮರು ತಮ್ಮ ರಾಜಕೀಯ ನೈಪುಣ್ಯದಿಂದ ಕಾಂಗ್ರೆಸಿನ ಉಪಟಳಕ್ಕೆ ಬಗ್ಗದೆ ಶ್ರಮಿಸುತ್ತಿರುವರು. ಆದರೆ ದಕ್ಷಿಣದಲ್ಲಿರುವ ನಾವಾವರೋ ಮನೋಭಾವದಿಂದಲೇ ಅದಕ್ಕೆ ನಮ್ಮ ಸಹಾನುಭೂತಿಯನ್ನೀಯುತ್ತಿರುವೆವು. ಆದ್ದರಿಂದ ನಾವು ಒಡನೇ ಜಾಗೃತರಾಗಿ ಈ ಉಪಸಮಿತಿಗೆ ನಮ್ಮಲ್ಲಿಯ ನಿಶ್ಚಿತ ಅಭಿಪ್ರಾಯವನ್ನು ಕೊಡಬೇಕಿದೆ.

ಸ್ನೇಹಿತರೇ, ಸಂಯುಕ್ತ ರಾಜ್ಯಘಟನೆಯ ವಿರೋಧ ಪ್ರಚಂಡ ಚಳವಳ ಹೂಡಲು ನಾವು ತಯಾರಾಗಬೇಕು. ಸರಕಾರವು ತನ್ನ ವ್ಯಾಪಾರ ತಂತ್ರದಿಂದ ನಮ್ಮನ್ನು ಕಾಂಗ್ರೆಸ್ ಸರ್ವಾಧಿಕಾರಿಗಳ ಕೈಗೊಂಬೆಯಾಗಿ ಮಾಡಲು ಪ್ರಯತ್ನಿಸುತ್ತಿದೆ. ಈಗ ನಡೆದ ಗಾಂಧಿ—ವೈಸರಾಯಿ ಭೇಟಿಯು ಮುಸ್ಲಿಮರಲ್ಲಿ ಸಂಶಯನ್ನುಂಟುಮಾಡಿದೆ. ಕಾಂಗ್ರೆಸ್ ಸಂಯುಕ್ತ ಘಟನೆಯನ್ನು ಅಂಗೀಕರಿಸದೆಂದು ಹೇಳಲು ಯಾರಿಗೂ ಧೈರ್ಯವಿಲ್ಲ. 1935ನೇ ಆಕ್ಟನ್ನು ಅಂಗೀಕರಿಸಿದಂತೆಯೇ ಇದೂ ಆಗುವದೆಂಬ ಭಾವನೆಯು ಎಲ್ಲರಲ್ಲಿಯೂ ಮೊಳೆಯುತ್ತಿದೆ. ಆದ್ದರಿಂದ, 'ನಾವು ಬ್ರಿಟಿಷ್ ಸರ್ಕಾರವನ್ನೂ, ಕಾಂಗ್ರೆಸನ್ನೂ ಈ ಸಮಸ್ಯೆಯ ಬಗ್ಗೆ ವಿರೋಧಿಸಬೇಕಿದೆ. ಸರ್ಕಾರ

ರ ಹಾಗೂ ಕಾಂಗ್ರೆಸ್ ಒಂದಾಗಿ ಮುಸ್ಲಿಮರನ್ನು ಬಗ್ಗು ಬಡಿದು, ಅತ್ಯಾಚಾರಗಳನ್ನು ನಡೆಸಿದರೂ, ನಮ್ಮ ಆತ್ಮ ಧ್ಯೇಯವನ್ನು ಅಳಿಸಲಾಗಲಿಕ್ಕಿಲ್ಲ. ನಮ್ಮ ಇಸ್ಲಾಮಿಕ್ ಸಂಸ್ಕೃತಿಯನ್ನು ನಾಶಪಡಿಸಲಿಕ್ಕಾಗಲಿಕ್ಕಿಲ್ಲ. ಅದು ಚಿರಂಜೀವಿಯಾಗಿ ಬಾಳಿದೆ; ಬಾಳಬಲ್ಲುದು. ಆದ್ದರಿಂದ ಯಾವ ರೀತಿಯಿಂದ ಈ ಎದುರಾಳಿಗಳನ್ನು ಎದುರಿಸಬೇಕಾದರೂ ನಾವು ಸಿದ್ಧರೇ ಇರುವೆವು' ಎಂದು ಜಿನ್ನಾರವರು ಈ ವರ್ಷ ನ್ಯಾಯವಿಧಾಯಕ ಸಭೆಯಲ್ಲಾಡಿದ ಮಾತು ಚಿರಸ್ಮರಣೀಯವಿರುವದು. ಆದ್ದರಿಂದ ನಮ್ಮ ಅಖಂಡ ಮುಖಂಡರ ಅಪ್ಪಣೆಯಂತೆ ಬೆಂಕಿಗೆ ಹಾರಲು ನಹ ನಾವು ತಯಾರಿರಬೇಕು. ನಮಗೆ ಅಂತ್ಯದಲ್ಲಿ ಜಯ ಸಿಗದಿರಲಾರದೆಂಬುವುದನ್ನು ನಂಬಿ ಕಾರ್ಯಪ್ರವರ್ತರಾಗಿರಿ.

ನಿಮ್ಮ ಈ ನಾಡಿನ ಸಮಸ್ಯೆಗಳನ್ನು ವಿಚಾರಿಸಿದರೆ ಇದೊಂದು ಪ್ರಾಂತದಲ್ಲಿ ಮಾತ್ರ ಮುಸ್ಲಿಂ ಹಾಗೂ ಹಿಂದೂ ಜನಾಂಗಗಳ ಸಹ ಚುನಾವಣೆ (ಜಾಯಿಂಟ್ ಇಲೆಕ್ಟೋರೇಟ್) ನಡೆಯುತ್ತಿದೆ. ಆದರೆ ಬೇರೆ ಪ್ರಾಂತ್ಯಗಳಲ್ಲಿ ತಮ್ಮ ಪ್ರತಿನಿಧಿಗಳನ್ನು ಆರಿಸುವ ಅಧಿಕಾರವು ಅವರಿಗೆ ಪ್ರತ್ಯೇಕ ಇದೆ. ನಿಮ್ಮ ಇಲ್ಲಿಯ ಸ್ಥಿತಿಯೇನು? ನ್ಯಾಯವಿಧಾಯಕ ಸಭೆಯಲ್ಲಾಗಲೀ, ಜಿಲ್ಲಾ ಬೋರ್ಡಿನಲ್ಲಾಗಲೀ ಒಬ್ಬನೇ ಒಬ್ಬ ಚುನಾಯಿತ ಮುಸ್ಲಿಂ ಪ್ರತಿನಿಧಿ ಇಲ್ಲ. ಇದರ ಸಾಧನೆಗಾಗಿ ಅನೇಕ ಪ್ರಯತ್ನಗಳು ನಡೆದವೆಂದು ಕೇಳುತ್ತೇನೆ. ಆದರೆ ಅದು ಫಲಕಾರಿಯಾಗಲಿಲ್ಲ. ಹಿಂದು ಮುಸ್ಲಿಮರಿಗೆ ಇಲ್ಲಿಯಂತೆ ಏಕೀಯ ಚುನಾವಣೆ ಇರಬೇಕೆಂದು ವಾದಿಸುವ ಮದ್ರಾಸು ಪ್ರಧಾನ ಮಂತ್ರಿಗಳಾದ ರಾಜಾಜಿ ಹಾಗೂ ಅವರ ಸರ್ಕಾರವು ಅದರ ದುಷ್ಪರಿಣಾಮವನ್ನು ಕೊಡಗಿನಿಂದ ತಿಳಿಯಬೇಕಾಗಿದೆ. ನಿಮ್ಮ ಈ ವರೆಗಿನ ಪ್ರಯತ್ನಗಳು ವಿಫಲವಾಗಿದ್ದರೂ ಸರಿಯಾದ ರೀತಿಯಿಂದ ಸರಿಯಾದ ಸ್ಥಳದಲ್ಲಿ ನೀವು ಚಳವಳ ನಡೆಸಿದರೆ ನೀವು ಜಯಶೀಲರಾಗುವಿರೆಂಬುದರಲ್ಲಿ ಸಂದೇಹವಿಲ್ಲ.

ಈ ವಿಚಾರ ನಾನು ವಿವೇಚಿಸುವಾಗ ಕೊಡಗಿನಲ್ಲಿರುವ ವಿವಿಧ ಮತೀಯರ ಐಕ್ಯತೆಯನ್ನು ಹೊಗಳದೆ ಗತ್ಯಂತರವಿಲ್ಲ. ಇಲ್ಲಿಯ ಮುಸ್ಲಿಮರ ಬೇಕು ಬೇಡಿಕೆಗಳನ್ನು ಮನ್ನಿಸುತ್ತಿರುವ ಬಹು ಪಕ್ಷೀಯರಿಗೆ ನಾವು ಕೃತಜ್ಞರಿದ್ದೇವೆ. ಪಶ್ಚಿಮ ತೀರದಲ್ಲಿರುವಂತೆಯೇ ವಿವಿಧ ಮತಗಳಲ್ಲಿ ಸೌಹಾರ್ದತೆಯು ಕೊಡಗಿನಲ್ಲಿದೆ. ಕಾಂಗ್ರೆಸಿನ ಅಧಿಕಾರಿ ವರ್ಗವು ಪರಸ್ಪರ ಐಕ್ಯತೆಯ ವಿಚಾರವನ್ನು ನಿಮ್ಮಿಂದ ತಿಳಿಯಬೇಕಿದೆ. ವಿವಿಧ ಮತಗಳ ಐಕ್ಯತೆಯ ನಿಜ ಮಾರ್ಗವು ಕಾಂಗ್ರೆಸ್ ಅಧಿಕಾರಿಗಳಿಗೆ ಹೊಳೆಯದ ವಿನಹ ಕಾಂಗ್ರೆಸ್ಸಿನ ಮುಂದಿನ ಪಥವು ಸುಗಮವಾಗಿರಲಾರದು. ಕಾಂಗ್ರೆಸ್ ಈ ತಪ್ಪನ್ನು ಅರಿಯುವ ವರೆಗೆ ಬ್ರಿಟಿಷರ ಹಾಗೂ ದೇಶೀಯ ಸಣ್ಣ ಸಣ್ಣ ಸರ್ವಾಧಿಕಾರಿಗಳ ಹಾವಳಿಯಿಂದ ತಪ್ಪಿಸಲು ಸಿದ್ಧರಾಗಿರೋಣ.

'ಮುಸ್ಲಿಂ ಲೀಗ್ ಜಿಂದ್ ಬಾದ'

ಒಕ್ಕಲಿಗರ ವಿದ್ಯಾಭಿವೃದ್ಧಿ ಸಂಘದ ಮಹಾ ಸಭೆ.

(ಬರೆದು ಬಂದದ್ದು.)

ತಾ. 5-5-39ರಲ್ಲಿ ಜರುಗಿದ ಒಕ್ಕಲಿಗರ ವಿದ್ಯಾಭಿವೃದ್ಧಿ ಸಂಘದ ಮಹಾಸಭೆಯು ಶ್ರೀ ಹೆಚ್. ಬಿ. ಸಿದ್ದಯ್ಯ ಎಂ. ಎಲ್. ಸಿ. ಯವರ ಸೂಚನೆ ಮೇರೆ ಶ್ರೀ ವಿ. ಬಿ. ನಿಂಗೇಗೌಡರ ಅಧ್ಯಕ್ಷತೆಯಲ್ಲಿ ಗೋಣಿಕೊಪ್ಪಲಿನ ಮೆ. ಗಿರಿಗೌಡ್ರ ತಿಮ್ಮಯ್ಯ ಬೆಂಚ್ ಮೇಜಿಸ್ಟ್ರೇಟ್ ಇವರ ಮನೆ ಬಳಿ ಜರುಗಿತು.

ಅಂದಾಜು ಸಂಘದ ಮೆಂಬರುಗಳ ಪೈಕಿ ಮುಕ್ಕಾಲು ಜನರು ಹಾಜರಿದ್ದರು. ಮೆಂಬರಲ್ಲದವರಲ್ಲಿ ಕೆಲವು ಮಂದಿ ಸಹ ಹಾಜರಿದ್ದರು.

ಮೆ. ಹೆಚ್. ಬಿ. ಬೋರ್ಲಿಂಗಯ್ಯನವರು ದೇವರ ಪ್ರಾರ್ಥನೆ ಮಾಡಿದ ಮೇಲೆಯೂ ಮತ್ತು ಸ್ವಾಗತ ಅಧ್ಯಕ್ಷರಾದ ಮೆ. ವಿ. ಕೆ. ತಿಪ್ಪಯ್ಯ (ರಿಟಯರ್ಡ್ ಮುನ್ಸಿ) ಇವರು ವಿದ್ಯೆಯ ವಿಚಾರವಾಗಿ ಮತ್ತು ಈ ವರೆಗೆ ನಡೆದ ಇನ್ನು ಮುಂದಕ್ಕೆ ನಡೆಯಬೇಕಾದ ರೀತಿಗಳ ಬಗ್ಗೆ ಸ್ವಾರಸ್ಯವಾದ ಸಲಹೆಗಳ ಭಾಷಣದಿಂದ ಮೀಟಿಂಗು ಪ್ರಾರಂಭಿಸಲ್ಪಟ್ಟಿತು.

ಸಂಘದ ಮೆಂಬರಾದ ಮೆ. ವಿ. ಕೆ. ಮೊಗಣ್ಣನವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಬೇಕೆಂದು ಮೆ. ಹೆಚ್. ಬಿ. ಸಿದ್ದಯ್ಯ ಎಂ. ಎಲ್. ಸಿ. ಇವರ ಸೂಚನೆಯಂತೆ 'ಈ ಸಭೆಯು ಮೆ. ವಿ. ಕೆ. ಮೊಗಣ್ಣನವರ ನಿಧನಕ್ಕಾಗಿ ವ್ಯಸನಪಡುತ್ತದೆ ಮತ್ತು ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ' ಎಂಬ ಠರಾವನ್ನು ಬಹುಮತದಿಂದ ಪಾಸು ಮಾಡಿದ್ದಲ್ಲದೆ ಈ ವಿಷಯವನ್ನು ಅವರ ಕುಟುಂಬಕ್ಕೆ ತಿಳಿಸುವಂತೆ ಗೌರವ ಕಾರ್ಯದರ್ಶಿಯವರಾದ ವಿ. ಹೆಚ್. ವೆಂಕಟಪ್ಪನವರಿಗೆ ತಿಳಿಸಲಾಯಿತು.

ಈ ವರೆಗೆ ನಡೆದ ನಡವಳಿಕೆಗಳನ್ನು ಗೌರವ ಕಾರ್ಯದರ್ಶಿಯವರು ಮಹಾಸಭೆಯ ಮುಂದೆ ಓದಿ, ಮಂಜೂರು ಮಾಡಲಾಯಿತು.

ಸಂಘದ ಬೈಲಾ ವಿಷಯ ಮೆ. ಕೆ. ಬಿ. ಕುಸ್ಸಯ್ಯನವರ ಕೆಲವು ಯುಕ್ತವಾದ ಸಲಹೆಗಳನ್ನು ಅಂಗೀಕರಿಸಲಾಯಿತು. ಬೈಲಾ ಸಂಗತಿ ಸಭೆಯಲ್ಲಿ ದೀರ್ಘ ಚರ್ಚೆ ನಡೆದು ರಚಿಸಿದ ಬೈಲಾವನ್ನು ಸರ್ವಾನುಮತದಿಂದ ಮಂಜೂರು ಮಾಡಲಾಯಿತು.

ಮುಂದಿನ ವರ್ಷದ ಬಡ್ಜೆಟ್ ಮಂಜೂರು ಮಾಡಿ ಆಡಳಿತ ಮಂಡಳಿಯವರನ್ನು ಚುನಾಯಿಸಲಾಯಿತು.

ಸಂಘವನ್ನು ಒಡನೆ ರಿಜಿಸ್ಟರು ಮಾಡುವಂತೆ ತೀರ್ಮಾನಿಸಲಾಯಿತು.

ನಂತರ ವಿದ್ಯೆಯ ವಿಚಾರವಾಗಿ ಶ್ರೀಮಾನ್ ಹೆಚ್. ಬಿ. ಅಣ್ಣಯ್ಯನವರು ಸ್ವಾರಸ್ಯಭರಿತವಾದ ಭಾಷಣವನ್ನು ಮಾಡಿದರು.

ಅಧ್ಯಕ್ಷರ ಉತ್ಸಾಹಪೂರಿತ ಭಾಷಣವಾದನಂತರ, ಆಖೈರಿನಲ್ಲಿ ಅಧ್ಯಕ್ಷರಿಗೂ, ಆ ದಿನದ ಆತಿಥ್ಯ ಸೇವೆಯನ್ನು ಕೈಕೊಂಡ ಮೆ. ಜಿ. ವಿ. ಕರಿಯಣ್ಣನವರಿಗೂ, ಸ್ವಾಗತ ಮಂಡಳಿಯವರಿಗೂ ಮತ್ತು ಎಲ್ಲಾ ಸಭಿಕರಿಗೂ ವಂದನೆಗಳನ್ನರ್ಪಿಸಿ ಸಭೆಯು ಬರಕಾಸ್ತಾಯಿತು.

ರಾಜಕೋಟೆಯ ಪಗಡೆಯಾಟ.

ಸರ್ದಾರ್ ವೀರವಾಲರು, ಇನ್ನೂ ದಾರಿಗೆ ಬಂದಂತೆ ತೋರುವುದಿಲ್ಲ. ಈ ರೀತಿಯ ಕುಶಲ ಬುದ್ಧಿಯನ್ನೆಲ್ಲ ಇವರು ಎಲ್ಲಿಂದ ಕಲಿತಿರಬಹುದೋ ಏನೊ? ಪ್ರಜೆಗಳ ಬಾಯಿಗೂ, ಪಟೇಲರ ಕಣ್ಣಿಗೂ ಧೂಳೆರಚುವ ಸಾಹಸಕ್ಕೆ ಇವರು ಕೈ ಇಕ್ಕಿದ್ದಾರೆ. ಇವರ ಮಂತ್ರಾಲೋಚನೆಯ ಮಾತಿನಂತೆ ನವಾಬರೂ ಕುಣಿಯುತ್ತಲಿದ್ದಾರೆ. ಇಬ್ಬರೂ ಒಂದೇ ಯೋಜನೆಯವರಾದುದರಿಂದ ರಾಜಕೋಟೆಯ ರಾಜಕೀಯ ಆಕಾಶದಲ್ಲಿ ಗುಡುಗು ಕೇಳಿ ಬರುತ್ತಲೇ ಇದೆ.

ಇದೆಲ್ಲ ಆಟವನ್ನು ಕಂಡ ಮಹಾತ್ಮಾಜಿಗಳು 'ನಾನು ಬರುವಂತೆ ನೀವು ಮಾಡುತ್ತಿರುವಿರಿ. ನಾನು ಬರಬಾರದೆಂದಿದರೂ ನೀವೇ ಸೆಳೆಯುತ್ತೀರಿ. ತಾ. 12 ಕ್ಕೆ ಬಂದೇ ಬರುವೆನು' ಎಂದು ವೀರವಾಲರಿಗೆ ತಂತಿ ಬಿಟ್ಟು ಹಾಗೆಯೇ ಅತ್ತ ಹೊರಟು ತಲಪಿದ್ದಾರೆ.

ವೀರವಾಲರ ಯುಕ್ತಿ ಪ್ರಯೋಗದ ಕುರಿತು ನೋಡೋಣ. ರಾಜಕೀಯ ವಿಚಾರದಲ್ಲಿ ಕೈಯುಕ್ತಿ, ಸತ್ಯಾಗ್ರಹದಲ್ಲಿ ಭಾಗ ವಹಿಸಿದ ಸುಮಾರು ಹತ್ತಾರು ಮಂದಿಯನ್ನು ಆಸ್ತಿಗಳಿಂದ ಹೊರದಬ್ಬಿ ಅವರಿಗೆ ಆಸ್ತಿ ಸಾಗುವಳಿ ಮಾಡುವ ಅಧಿಕಾರವಿಲ್ಲೆಂದು ಸಾರಿದ್ದಾರೆ. ಅಲ್ಲದೆ ಪತ್ರಿಕೆಗಳ ಕತ್ತನ್ನೇ ಕೈಯಲ್ಲಿ ಹಿಡಿದುಕೊಂಡು ಅರಸರ ವಿರೋಧವಾದದ್ದೆಂಬ ಅಪಸ್ವರವೇ ಏಳದಂತೆ ಜಾಗರೂಕರಾಗಿದ್ದಾರೆ. ಪತ್ರಿಕೆಗಳನ್ನೂ ಹಾಗೂ ಛಾಪಖಾನೆಗಳನ್ನು ಇರಿಸಿಕೊಳ್ಳಲು ಅಪ್ಪಣೆ ದೊರೆಯಬೇಕಾದರೆ 1000 ರೂ. ರೇವಣಾತಿ ಸರ್ಕಾರದ ವಶವಿರಬೇಕೆಂದೂ ಪತ್ರಿಕೆ ಅರಸರ ವಿರುದ್ಧ ಉಸಿರೆತ್ತಿದರೆ 1ರಿಂದ 3 ಸಾವಿರದ ತನಕದ ದಂಡ ಹಾಗೂ 6 ತಿಂಗಳ ಸಜೆ ವಿಧಿಸಲಾಗುವದೆಂದೂ ಸಾರಿದ್ದಾರೆ. ಮೇಲಾಗಿ ಸಂಶಯ ಬಂದಾಗ ಸಿಕ್ಕ ಸಿಕ್ಕವರ ಮನೆ ಹುಡುಕುವ ಅಧಿಕಾರವೂ ಬೇರೆ ಇದೆಯೆನ್ನುವಾಗ ಸರ್ಕಾರಿ ಅಧಿಕಾರಿಗಳ ಹಾಗೂ ಪೋಲೀಸರುಗಳ ಕಾರ್ಯಕಲಾಪಗಳು ಹೈದರಾಬಾದು ಸಂಸ್ಥಾನದಲ್ಲಿ ಈಗ ಸಾಗುತ್ತಿರುವುದಕ್ಕೂ ಮಿಗಿಲೆನಿಸಿ ಬೇಗನೆ ಇನ್ನು ರಾಜಕೋಟೆಯಲ್ಲಿ ನಡೆಯಬಹುದೇನೋ ಯಾರು ಬಲ್ಲ?

ಈ ನಡುವೆ ರಾಜಕೋಟೆ ಪ್ರಜೆಗಳ ಪ್ರತಿನಿಧಿಗಳಾದ ದೇಬರ್‌ರವರು ವೀರವಾಲರ ಹೇಳಿಕೆಯಂತೆ ವಿಚಾರಣೆ ನಡೆಸಿ, ಜುಡಿಶ್ಯಲ್ ಕಮಿಶನನು ತೆಗೆದು ಹಾಕಿದ ಎರಡು ಕಮಿಟಿ ಮೆಂಬರರ ಬದಲು ಬೇರೆ ಎರಡು ಹೆಸರುಗಳನ್ನು ಸೂಚಿಸಿದ್ದಾರೆ. 'ಒಲ್ಲದವನಿಗೆ ಮೊಸರಿನಲ್ಲಿ ಕಲ್ಲು' ಎಂಬಂತೆ ವೀರವಾಲರು ಈ ಎರಡು ಮಂದಿಯ ಯೋಗ್ಯತೆ ತೂಗುವ ಕೆಲಸವನ್ನು ಜುಡಿಶಿಯಲ್ ಕಮಿಶನರಿಗೆ ಬಿಟ್ಟರೆ ಜವಾಬ್ದಾರಿ ಸರ್ಕಾರ ಕೊಡುವ ಆಟ ಮುಂದುವರಿಯುತ್ತಾ ಹೋಗಬಹುದು.

ದೇಬರವರು, ಪಟೇಲರು ಹಾಗೂ ಮಹಾತ್ಮಾಜೀಯವರುಗಳು ಪ್ರಜೆಗಳಿಗೆ ಜವಾಬ್ದಾರಿ ಸರ್ಕಾರ ಒದಗಿಸಿಕೊಡಲು ಪ್ರಯತ್ನಿಸುತ್ತಿರುವಂತೆ ಠಾಕೂರ್ ಸಾಹೇಬರೂ, ವೀರವಾಲರೂ ತಾವವನ್ನು ಕೊಡಲು ಬಹಳ ಇಚ್ಛೆಪಡುವಂತೆ ಈ ಮೂವರ ಮುಂಗೈಗೆ ಬೆಲ್ಲ ಹಚ್ಚುತ್ತಿದ್ದಾರೆ! ಯಾವ ಉಪಾಯದಿಂದ ಯಾರು ಈ ಬೆಲ್ಲ ತಿನ್ನುವರೋ ನೋಡೋಣ.

'ಕಂ.'

ಹೈದ್ರಾಬಾದ್ ಸಂಸ್ಥಾನದ ಪರಿಚಯ.

ಭಾರತೀಯ ನರೇಂದ್ರರಲ್ಲಿ ನೈಜಾಮರೇ ಶ್ರೀಮಂತರು. ಈ ರಾಜ್ಯವು ಬ್ರಿಟಿಷ ದ್ವೀಪಗಳಷ್ಟು ದೊಡ್ಡದಿದ್ದು ಇಲ್ಲಿಯ ಬೊಕ್ಕಸ ಭಂಡಾರದಲ್ಲಿ ಅಗಣಿತ ದ್ರವ್ಯವಿರುವದೆಂದೂ, ಅನರ್ಘ್ಯ ರತ್ನಗಳಿರುವವೆಂದೂ ಪ್ರತೀತಿ ಇದೆ. ಈ ಸಂಸ್ಥಾನದಲ್ಲಿ ಅಧಿಕಾರಿಗಳ ಸಂಬಳವೇ ಮೊದಲಾದುವು ದಿನಕ್ಕೆ 1 ಲಕ್ಷ ಪವನುಗಳಷ್ಟಾಗುತ್ತದೆ.

ಮೈಸೂರು, ಗ್ವಾಲಿಯರ್, ಬಡೋದ ಹಾಗೂ ಕಾಶ್ಮೀರ ಈ ರಾಜ್ಯಗಳು ದೊಡ್ಡವಿದ್ದು ನೈಜಾಮರಂತೆ 21 ಬಂದೂಕಗಳ ಗೌರವಕ್ಕೆ ಪಾತ್ರವಾಗಿವೆ. ಈ ವಂಶವು ಪುರಾತನವಾದದ್ದು. ತುರ್ಕಿಸ್ತಾನದ ನಿರ್ಮಾಣಕರ್ತನಾದ ಕೆಮಾಲಪಾಶನು ಹಳೆ ಪದ್ಧತಿಯನ್ನೆಲ್ಲ ಕಿತ್ತೊಗೆದ ಮೇಲೆ ಸಮಗ್ರ ಮುಸ್ಲಿಮರ ಧರ್ಮಾಧಿಕಾರಿಯಾಗುವ ಸುಯೋಗವು ನೈಜಾಮರ ಪಾಲಿಗೆ ಬಿತ್ತು.

ಹೈದರಾಬಾದದ ಪ್ರಜೆಗಳು 100 ಕ್ಕೆ 90 ರಂತೆ ಹಿಂದುಗಳಿದ್ದಾರೆ. ಹೀಗಿದ್ದರೂ ಬ್ರಿಟಿಷರ ಮೈತ್ರಿಯಿಂದ ಮಾತ್ರ ನೈಜಾಮರ ರಾಜ್ಯಭಾರವು ತಮ್ಮ ಮನಸ್ಸಿಗೆ ಬಂದಂತೆ ಸಾಗಿದೆಯಲ್ಲದೆ ಪ್ರಜೆಗಳ ತೃಪ್ತಿಗೆ ಪಾತ್ರವಾಗಿಲ್ಲ. ಈಗ ಸಂಯುಕ್ತ ಘಟನೆಯು ಒಪ್ಪೊತ್ತು ಜಾರಿಗೆ ಬಂದರೆ ಆ ಸಮಯದಲ್ಲಿ ಎಚ್ಚತ್ತು ಪ್ರಜೆಗಳು ಪ್ರಜಾಪ್ರಭುತ್ವವೇ ಸಿಗಬೇಕೆಂದು ಹಟ ಹಿಡಿದರೆ, ಇವಕ್ಕೆ ಇಂಗ್ಲೆಂಡದಲ್ಲಿ ಸಾಮ್ಯವಾದಿ ಮಂತ್ರಿ ಮಂಡಲವು ಅಧಿಕಾರಕ್ಕೆ ಬಂದು ಬೆಂಬಲ ಕೊಟ್ಟರೆ ಬ್ರಿಟಿಷ ಪಾರ್ಲಿಮೆಂಟಿಗೂ ಕೂಡ ನೈಜಾಮರೊಡನೆ ಅಂದು ಮಾಡಿದ ಸಖ್ಯದಂತೆ ನಡೆದುಕೊಳ್ಳಲು ಕಷ್ಟವಾಗುವದು. ಒಂದು ವೇಳೆ ಬ್ರಿಟಿಷರು ಈ ಸಂದರ್ಭದಲ್ಲಿ ಸಹಾಯ ಮಾಡಲು ತಪ್ಪಿದಲ್ಲಿ ಹಿಂದುಸ್ಥಾನದ ಮುಸಲ್ಮಾನರೆಲ್ಲ ರೊಚ್ಚಿಗೇಳಬಹುದು. ಹೀಗೆ ಪರಿಸ್ಥಿತಿಯು ಬಿಕ್ಕಟ್ಟಿನದಾಗಬಹುದು. ಮುಸಲ್ಮಾನರು ಮಾತುಕತೆಗಳಿಗೆ ಎಂದೂ ಸಿದ್ಧರಿಲ್ಲ. ಅವರು ಯುದ್ಧ ಪ್ರಿಯರು ಅವರಿಗೆ ಬ್ರಿಟನದ ಆಳಿಕೆಯು ಇಲ್ಲಿ ಚಿರಸ್ಥಾಯಿಯಾಗಿರಲೆಂಬ ಆಸೆ ಇರಬಹುದು

ಸ. ಕ.

ವರ್ತಮಾನ ಸಂಗ್ರಹ.

ಒಳದೇಶ.

ಸಹಕಾರಿ ಸಂಘಗಳ ಇನ್ಸ್‌ಪೆಕ್ಟರಾದ ಶ್ರೀ ಪಟ್ಟಮಾಡ ಪೊನ್ನಪ್ಪನವರು ನಾಲ್ಕು ತಿಂಗಳು ರಜೆಯಲ್ಲಿ ಹೋಗಿರುವ ಪ್ರಯುಕ್ತ ಅವರ ಬದಲು ಶ್ರೀ ಮದ್ರಿರ ಮಂದಣ್ಣನವರನ್ನು ಹಂಗಾಮಿಯಾಗಿ ನೇಮಿಸಲಾಗಿದೆ.

ಆವಶ್ಯವಿರುವಲ್ಲಿ ಶಾಲೆಗಳನ್ನು ಹೆಚ್ಚಿಸುವ ಮತ್ತು ಅನಾವಶ್ಯವಿರುವಲ್ಲಿ ಶಾಲೆಗಳನ್ನು ತೆಗೆಯುವ ಬಗ್ಗೆ ಆಲೋಚಿಸಲು ನೇಮಕವಾದ ಉಪ ಸಮಿತಿಯ ಮೀಟಿಂಗು ನಿನ್ನೆ ನಡೆದು ಕೆಲವು ಶಾಲೆಗಳನ್ನು ತೆಗೆಯಲು ಸಿಫಾರಸು ಮಾಡಿರುವರಾಗಿ ತಿಳಿಯಬರುತ್ತದೆ.

ಕಳೆದ ಮದ್ರಾಸ್ ಯೂನಿವರ್ಸಿಟಿ ಬಿ. ಎ. (ಹಾನರ್ಸ್) ಪರೀಕ್ಷೆಯಲ್ಲಿ ಶ್ರೀಮತಿ ಮುಂಡೇಮಂಡ ಪೊನ್ನಮ್ಮನವರೂ, ಬಿ. ಎ. ಪರೀಕ್ಷೆಯಲ್ಲಿ ಶ್ರೀಗಳಾದ ಪಾಂಡಂಡ ಅಪ್ಪಾಜಿ, ಕುಂಬೆರ ಪೂವೈಯ್ಯ ಮತ್ತು ಎಸ್. ಎಸ್. ಶಂಕರನಾರಾಯಣರವರುಗಳೂ, ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀಮತಿ ಚೋನಿರ ಗಂಗಮ್ಮನವರೂ (ಫಸ್ಟ್‌ಕ್ಲಾಸ್) ಮಿಸ್. ಕಡೇಮಾಡ ಬೆಳ್ಯಪ್ಪನವರೂ, ಮತ್ತು ಶ್ರೀಗಳಾದ ಬಲ್ಲಚಂಡ ಯಂ. ಕುಟ್ಟಪ್ಪ, ಮನೆಯಪಂಡ ಎ. ಬೆಳ್ಯಪ್ಪ, ಮಾಡೆರ ಬೆಳ್ಯಪ್ಪ, ಮನೆಯಪಂಡ ಪಿ. ಕಾರ್ಯಪ್ಪ, ಬೊಳ್ಳಿರ ಸಿ. ಕಾರ್ಯಪ್ಪ, ಅಪ್ಪನೆರವಂಡ ಸಿ. ನಂಜಪ್ಪ ಮತ್ತು ಸಿ. ಆರ್. ಭವಾನಿಯವರುಗಳು ಪೂರ್ತಿಯಾಗಿಯೂ, ಶ್ರೀಗಳಾದ ಪಾಲೇಕಂಡ ಪೊನ್ನಪ್ಪ, ಕೂತಂಡ ಮಾಚಯ್ಯ, ಐಚೆಟ್ಟಿರ ಪೂವಯ್ಯ, ಅಮ್ಮಣಿಚಂಡ ಸುಬ್ಬಯ್ಯ, ಬಿದ್ದಂಡ ಬೋಪಯ್ಯ, ಚೇಂದಂಡ ಕರುಂಬಯ್ಯ ಪಟ್ಟಮಾಡ ಯಂ. ಪೊನ್ನಪ್ಪ ಮತ್ತು ಬಲ್ಲಚಂಡ ಎನ್. ಕುಟ್ಟಪ್ಪನವರುಗಳು 1 ಮತ್ತು 2ನೇ ಭಾಗಗಳಲ್ಲಿಯೂ, ಶ್ರೀ ಮುಕ್ಕಾಟಿರ ಯಂ. ಗಣಪತಿಯವರು 2ನೇ ಮತ್ತು 3ನೇ ಭಾಗಗಳಲ್ಲಿಯೂ, ಮತ್ತು ಶ್ರೀಗಳಾದ ಕೋದಂಡ ಪೂವಯ್ಯ, ಸಿ. ಎಸ್. ವಿಶ್ವೇಶ್ವರನ್ ಮತ್ತು ಕೋಟೇರ ಸೋಮಣ್ಣ ಇವರುಗಳು 1ನೇ ಭಾಗದಲ್ಲಿಯೂ ಉತ್ತೀರ್ಣರಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ. ಇವರಿಗೆಲ್ಲಾ ನಮ್ಮ ಅಭಿನಂದನೆಗಳಿವೆ.

ಮಡಿಕೇರಿ.

ಹೊಗೆಸೊಪ್ಪು ಮಸೂದೆಯನ್ನು ಕುರಿತ ಲೆಜಿಸ್ಲೇಟಿವ್ ಕೌನ್ಸಿಲಿನ ಸಿಲೆಕ್ಟ್ ಕಮಿಟಿ ಮೀಟಿಂಗು ಈ ತಾ. 25ರಲ್ಲಿ ಇಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಶ್ರೀ. ಕೊದಾಂಡ ನಾಣಯ್ಯನವರು ಇಲ್ಲಿಯ ಸಿವಿಲ್ ಆಸ್ಪತ್ರೆಯ ಹೆಂಗಸರ ವಾರ್ಡಿನ ಬಡಾವಣೆಯ ಮತ್ತು ಹೆಚ್ಚಿಗೆ ಹಾಸಿಗೆಗಳನ್ನಿಡುವ ಬಗ್ಗೆ ರೂ. 600 ದಾನ ಮಾಡಿರುವರೆಂದು ತಿಳಿಯುತ್ತೇವೆ.

ಇಲ್ಲಿ ಮಳೆಯ ಅಭಾವದಿಂದ ನೀರಿನ ತೊಂದರೆಯಾಗಿರುವುದಲ್ಲದೆ ಮಲೇರಿಯಾದ ಹಾವಳಿಯು ವಿಪರೀತವಿದೆ. ಒಂದು ವಾರದಲ್ಲಿ ಮಳೆ ಬೀಳದಿದ್ದರೆ ಸ್ಥಿತಿಯು ಶೋಚನೀಯವಾಗದಿ...

ಕುಂಜಿಲೇರಿ ಗ್ರಾಮದ ಶ್ರೀ ಚೊಟ್ಟೆರ ಐಯ್ಯಣನವರನ್ನು ಚೂರಿಹಾಕಿ ಕೊಂದ ಅಪಾದನೆ ಮೇಲೆ ದಸ್ತಗಿರಿ ಮಾಡಲ್ಪಟ್ಟ ಅಪರಾಧಿಯ ವಿಚಾರಣೆಯು ಕೊಡಗಿನ ಸೆಷನ್ಸ್ ಕೋರ್ಟಿನಲ್ಲಿ ನಡೆದು ಅತನಿಗೆ 10 ವರ್ಷಗಳ ಕಠಿಣ ಸಜೆಯು ವಿಧಿಸಲ್ಪಟ್ಟಿರುವದಾಗಿ ತಿಳಿದುಬರುತ್ತೆ.

ಇಲ್ಲಿಯ ಮುಸ್ಲಿಮರೊಳಗೆ ಬಾಜ್ ಪಾರ್ಟಿ, ಪಟ್ವೇಗರ್ ಪಾರ್ಟಿ ಮತ್ತು ನಾನ್ ಪಟ್ವೇಗರ್ ಪಾರ್ಟಿ ಎಂಬ ಭಿನ್ನ ಪಂಗಡಗಳಾಗಿ ಒಂದಕ್ಕೊಂದು ವಿರೋಧವಾಗಿ ವರ್ತಿಸುತ್ತಾ, ಇವರ ವಿಚಾರದಲ್ಲಿ ಮೊಖದ್ದಮ್ಮೆಯು ಸಹ ನಡೆದಿತ್ತು. ಹಲವು ವರ್ಷಗಳಿಂದಲೇ ಇದ್ದ ಈ ಒಡಕನ್ನು ಮೊನ್ನೆ ಇಲ್ಲಿಯ ಮುಸ್ಲಿಂಲೀಗಿನ ಪ್ರಥಮಾಧಿವೇಶನದ ಅಧ್ಯಕ್ಷರಾಗಿ ಬಂದಿದ್ದ ಹಾಜಿ ಅಬ್ದುಸ್ ಸತಾರ್ ಹಾಜಿ ಇಸಾಕ್ ಸೇಟ್ ಯಂ. ಎಲ್. ಎ ರವರು ನ್ಯಾಯರೀತಿಯಿಂದ ಎಲ್ಲಾ ಪಾರ್ಟಿಯವರನ್ನೂ ಒಪ್ಪಿಸಿ ಏಕೀಕರಿಸಿರುವರೆಂದೂ, ಪೊನ್ನಂಪೇಟೆಯವರಲ್ಲಿ ಎರಡು ಪಂಗಡಗಳನ್ನು ಸಹ ಒಂದುಗೂಡಿಸಿರುವರೆಂದೂ ತಿಳಿದುಬರುತ್ತದೆ.

ವೀರಾಜಪೇಟೆ.

ವೀರಾಜಪೇಟೆ ಟೌನ್ ಕೋ-ಆಪರೇಟಿವ್ ಬ್ಯಾಂಕಿನ ವಾರ್ಷಿಕ ಮಹಾಸಭೆಯು ಈ ತಾ. 23ನೇ ಮಂಗಳವಾರ ದಿನ ಅಪರಾಹ್ನ 2 ಗಂಟೆಗೆ ವೀರಾಜಪೇಟೆ ಮುನ್ಸಿಪಲ್ ಹಾಲ್‌ನಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಜರುಗುವುದಾಗಿ ತಿಳಿಯಬರುತ್ತದೆ.

ಕೊಡಗು ಜಮೀನ್ದಾರರ ಸಂಘದ ಕಾರ್ಯಕಾರಿ ಮಂಡಳದ ಮೀಟಿಂಗು ಪ್ರೆಸಿಡೆಂಟರಾದ ಶ್ರೀ. ಬಿದ್ದಂಡ ಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ಮಹಾ ಸಭೆಯನ್ನು ಈಗ ನಡೆಸಲು ತಡವಾದ್ದರಿಂದ ಅಕ್ಟೋಬರ್ ತಿಂಗಳನಂತರ ಇದನ್ನು ನಡಿಸುವ ಬಗ್ಗೆ ಯೋಚಿಸಲು ತೀರ್ಮಾನಿಸಿದೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗು ಈ ತಾ. 16 ರಲ್ಲಿ ಇಲ್ಲಿ ಶ್ರೀ ಐ. ಸಿ. ಕಾರ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಹಾಲಿ ವರ್ಷಕ್ಕೆ ಶ್ರೀ ಕೆ. ಸಿ. ಕರುಂಬಯ್ಯನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಬಿ. ಯಂ. ಕಾರ್ಯಪ್ಪನವರನ್ನು ಸೆಕ್ರೆಟರಿಯವರನ್ನಾಗಿಯೂ, ಮತ್ತು ಶ್ರೀ ಸಿ. ಜಿ. ಮುದ್ದಮ್ಮಯ್ಯನವರನ್ನು ಖಜಾನ್ಜಿಯವರನ್ನಾಗಿಯೂ ಆರಿಸಲಾಗಿದೆ.

ಹಿಂದೂದೇಶ.

ತಿರುಚಿನಾಪಳ್ಳಿಯ ಯೂನಿಯನ್ ಬೋರ್ಡ್ ಶಾಲೆಗಳಿಗೂ, ಬೋರ್ಡಿನ ಖರ್ಚಿನಿಂದ, ಗಾಂಧಿಯವರ ಭಾವಚಿತ್ರಗಳನ್ನು ಒದಗಿಸುವಂತೆ, ಅಲ್ಲಿನ ಬೋರ್ಡ್ ನಿರ್ಧರಿಸಿದೆ.

ಮಧ್ಯ ಹಿಂದೂಸ್ಥಾನದಲ್ಲಿನ ಕಿಲ್ಚಿಪ್ಪುರ್ ಸಂಸ್ಥಾನದಲ್ಲಿ ರೈತರು ಬಾಕಿ ಕೊಡಬೇಕಾಗಿದ್ದ ರೂ. 1,60,000 ಕಂದಾಯವನ್ನು ರಾಜರು ಮಾಫಿ ಮಾಡಿ, ರೈತರ ಮೇಲೆ ತಮಗಿರುವ ಕರುಣೆಯನ್ನು ತೋರಿಸಿರುತ್ತಾರೆ.

ಸುಭಾಸ್ ಬೋಸರ 'ಫಾರ್‌ವರ್ಡ್ ಬ್ಲೋಕ್'ನ್ನು ಕಾಂಗ್ರೆಸ್ ಸೋಶಿಯಲಿಸ್ಟ್ (ಸಮತಾವಾದಿ)ಗಳು ಸೇರುವದಿಲ್ಲೆಂದು, ತಿಳಿದು ಬಂದಿದೆ. ಇದರ ಕಾರಣವನ್ನು ವಿವರಿಸಿ, ಶ್ರೀ. ಜೈ ಪ್ರಕಾಶ್ ನಾರಾಯಣರು ಒಂದು ಹೇಳಿಕೆ ಕೊಟ್ಟಿದ್ದಾರೆ.

ಗಡಿನಾಡಿನ ಮುಸ್ಲಿಂ ಲೀಗ್ ಯಂ. ಎಲ್. ಎ ಗಳಾದ ರಾಜಾಮಹಮ್ಮದ್ ಖಾನ್ ಮತ್ತು ಲೆಫ್ಟಿನೆಂಟ್ ಮಹಮ್ಮದ್ ಜಮಾನ್ ಖಾನ್ ಎಂಬಿಬ್ಬರು, ಕಾಂಗ್ರೆಸ್‌ನಂತಹ ಸಂಸ್ಥೆ ಬೇರೆ ಇಲ್ಲವೆಂದು ತಾವು ಕಾಂಗ್ರೆಸ್ ಮಂತ್ರಿಮಂಡಲದ ಜೊತೆ ಸೇರಿದ್ದಾರೆ.

ರಾಜಕೋಟೆಯಲ್ಲಿ ಗಾಂಧೀಜೀಯವರು, ಅಲ್ಲಿನ ಒಂದು ರಾಜಕೀಯ ಪಂಗಡದ ಮುಖಂಡರಾದ ಶ್ರೀ. ಕೈಲಾಸ ದಾಸ ಪರೇಖ್ ಮೊದಲಾದವರನ್ನು ಕಂಡು ಮಾತಾಡಿದರು. ರಾಜಿಗೇನಾದರೂ ಉಪಾಯವಿದೆಯೋ ಎಂದು ಗಾಂಧಿಗಳು ಬಹಳವಾಗಿ ಯೋಚಿಸುತ್ತಿದ್ದಾರೆ.

ಗಯಾ ಪಟ್ಟಣದ ಪಂಗಡಗಳ ಕದಿದಾಟಗಳಲ್ಲಿ 9 ಜನರು ಸತ್ತರು 92 ಮಂದಿಗೆ ಗಾಯಗಳಾದವು. ಈ ವರೆಗೂ ಪೋಲೀಸಿನವರು 265 ಮಂದಿಯನ್ನು ದಸ್ತಗಿರಿ ಮಾಡಿರುತ್ತಾರೆ. ಈ ಪೈಕಿ 162 ಮಂದಿ ಹಿಂದುಗಳು. ಈಗ ಪರಿಸ್ಥಿತಿಯು ಶಾಂತರೀತಿಯಲ್ಲಿರುವದರಿಂದ ಅಂಗಡಿಗಳೆಲ್ಲಾ ತೆರೆಯಲ್ಪಟ್ಟಿವೆ.

ಕನ್ನಡ ಸಂಸ್ಕೃತಿಯಲ್ಲಿ, ಸಂಶೋಧನೆ ನಡೆಸಲು, ಒಂದು ಕಮಿಟಿಯನ್ನು ಸರಕಾರವು ಸ್ಥಾಪಿಸಿದೆ. ಇದು ಸರಕಾರಕ್ಕೆ ಹಾಗೂ ಕನ್ನಡ ಸಂಶೋಧನ ಡೈರೆಕ್ಟರರಿಗೆ ವಿವಿಧ ವಿಚಾರಗಳನ್ನು ತಿಳಿಸಲಿದೆ. ಕನ್ನಡ ಸಂಶೋಧನ ಡೈರೆಕ್ಟರರೇ, ಇದರ ಎಕ್ಸ್ ಅಫೀಸಿಯೋ ಸೆಕ್ರೆಟರಿಗಳು. ಈ ಬೋರ್ಡು ಆಗಾಗ ಧಾರವಾಡದಲ್ಲಿ ಕೂಡಲಿದೆ.

ಹಿಂದೂ ದೇಶದಲ್ಲಿ ವೃದ್ಧ ಪಿತಾಮಹರೆಂದು ಹೆಸರು ಪಡೆದಿದ್ದ ದಾದಾಭಾಯಿ ನೌರೋಜಿಯವರ ಭಾವಚಿತ್ರವನ್ನು ಲಂಡನ್ ಪಟ್ಟಣದ ಹೌಸ್ ಆಫ್ ಕಾಮನ್ಸ್ ಎಂಬ ಪ್ರಜಾಪ್ರತಿನಿಧಿ ಸಭಾಮಂದಿರದಲ್ಲಿ ಕಟ್ಟಬೇಕೆಂದು ಅವರ ಪಣೆಯ ಪರಾಂದ ಸೆ. ಜಮೇರಿಯವರು ಲಂಡನ್ ಪಟ್ಟಣಕ್ಕೆ ಕಳುಹಿಸಿ ಕೊಟ್ಟರು. ಅಲ್ಲಿನವರು ಅದನ್ನು ಅವರಿಂದ ಸ್ವೀಕರಿಸಿ ಬೇರೆ ತಸ್ವೀರುಗಳ ಜೊತೆಯಲ್ಲಿ ಎತ್ತಿಕಟ್ಟುವುದಾಗಿ ಒಪ್ಪಿಕೊಂಡರು.

ಬೆಜ್ವಾಡದಲ್ಲಿ ತಾ. 7 ರಲ್ಲಿ ಮುಸ್ಲಿಂಮರ ಒಂದು ಸಭೆಯು ಸೇರಿ ಅಲ್ಲಿನ ಗಾಂಧಿ ಪಾರ್ಕಿನಲ್ಲಿ ಇಟ್ಟಿರುವ ಮಹಾತ್ಮ ಗಾಂಧಿಯವರ ಪ್ರತಿಮೆಯನ್ನು ತೆಗೆದುಬಿಡಬೇಕೆಂದೂ, ಹಾಗೆ ಮಾಡದೆ ಹೋದರೆ ಸತ್ಯಾಗ್ರಹವನ್ನು ಹಿಡಿಯುವುದಾಗಿಯೂ ತೀರ್ಮಾನಿಸಿ, ಈ ತಮ್ಮ ಅಭಿಪ್ರಾಯವನ್ನು ಮದರಾಸ್ ಸರ್ಕಾರಕ್ಕೂ, ಕಾಂಗ್ರೆಸ್ ಅಧಿಕಾರಿಗಳಿಗೂ ತಿಳಿಸಿರುತ್ತಾರೆ. ಇದರಂತೆಯೇ ಇನ್ನು 5-6 ಕಡೆಗಳಿಂದ ಸರ್ಕಾರಕ್ಕೆ ಅರ್ಜಿಗಳು ಹೋಗಿವೆ.

ಕಾಂಗ್ರೆಸಿನ ಪ್ರೆಸಿಡೆಂಟರು, ಪಂಡಿತ ಜವಹರಲಾಲ ನೆಹರು, ಡಾ. ಪಟ್ಟಾಭಿ ಸೀತಾರಾಮಯ್ಯ, ಆಚಾರ್ಯ ನರೇಂದ್ರ ದೇವ್ ಮತ್ತು ಶ್ರೀ. ಜೆ. ಬಿ. ಕೃಪಲಾನಿ ಇವರಿಷ್ಟು ಮಂದಿಯಿಂದ ಕೂಡಿದ ಕಮಿಟಿಯೊಂದು, ತ್ರಿಪುರಿ ಕಾಂಗ್ರೆಸಿನಲ್ಲಿ ಆದ ನಿರ್ಣಯದಂತೆ, ಕಾಂಗ್ರೆಸಿನ ಶುದ್ಧೀಕರಣಕ್ಕಾಗಿ, ಕಾಂಗ್ರೆಸ್ ಮೆಂಬರರನ್ನು ಸೇರಿಸಿಕೊಳ್ಳುವಲ್ಲಿ ಯಾವುದೊಂದು ಠಕ್ಕಿನ ವ್ಯಾಪಾರವೂ ನಡೆಯದ ಹಾಗೆ, ಶಿಫಾರಸುಗಳನ್ನು ಮಾಡಲಿಕ್ಕೂ, ನಿಬಂಧನೆಗಳನ್ನು ಸೂಚಿಸಲಿಕ್ಕೂ ಬೊಂಬಯಿಯಲ್ಲಿ ಇದೇ ಜೂನ್ ತಾ. 3ರಲ್ಲಿ, ಸಭೆ ಸೇರುವುದೆಂದು ಪ್ರಕಟವಾಗಿದೆ.

ನೋಟೀಸು.

ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 16-5-1939.

ಹಳ್ಳಿಗಳ ಉಪಯೋಗಾರ್ಥವಾಗಿ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಆರು ತಿಂಗಳ ವರೆಗೆ ಎರಡು ಜನರಿಗೆ ಸೂಲಗಿತ್ತಿ ತರಬೇತು ಕೊಡಲಾಗುವುದು.

(1) ತಿಂಗಳಿಗೆ 15 ರೂಪಾಯಿಯಂತೆ ಆರು ತಿಂಗಳ ವರೆಗೆ ವಿದ್ಯಾರ್ಥಿ ವೇತನ ಕೊಡಲಾಗುವದು.

(2) ಪೂರ್ಣ ತರಬೇತಾಗುವ ವರೆಗೆ ಪ್ರತಿಯೊಬ್ಬರಿಗೂ 10 ರೂ. ಭತ್ಯ ಕೊಡಲಾಗುವದು.

(3) ತರಬೇತು ಅದನಂತರ ಸಾಮಾನು ಸಾಹಿತ್ಯಗಳನ್ನು ತೆಗೆದುಕೊಳ್ಳಲು ರೂ. 20ರಂತೆ ಕೊಡಲಾಗುವುದು.

(4) ಉಮೇದ್ವಾರರು ಲೋವರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಗಿರಬೇಕು. ಕನಿಷ್ಠ ಪಕ್ಷ 25 ವರ್ಷ ವಯಸ್ಸಾದವರೂ ಆಗಿರಬೇಕು. ಗ್ರಾಮದಲ್ಲಿ ವಾಸಿಸುವ ಮಧ್ಯ ಪ್ರಾಯದ ವಿಧವೆಯರಿಗೆ ಹೆಚ್ಚಿನ ಮಾನ್ಯತೆ ಕೊಡಲಾಗುವದು.

ವಿದ್ಯಾ ಅರ್ಹತೆಯ ಬಗ್ಗೆಯ ಸರ್ಟಿಫಿಕೇಟಿನಿಂದ ಕೂಡಿದ ಅರ್ಜಿಗಳು ತಾ. 1-6-39ರ ಒಳಗೆ ಸಿವಿಲ್ ಸರ್ಜನರಿಗೆ ತಲಪಬೇಕು, ಆರಿಸುವಿಕೆಯು ತಾ. 5-6-39ರಲ್ಲಿ ನಡೆಯುವುದಲ್ಲದೆ ಕ್ಲಾಸು ಮಡಿಕೇರಿ ಆಸ್ಪತ್ರೆಯಲ್ಲಿ ಒಡನೆ ಪ್ರಾರಂಭವಾಗುವುದು. ಆರಿಸಲ್ಪಟ್ಟ ಉಮೇದ್ವಾರರು ತಾ. 5-6-39ರಿಂದಲೇ ಮಡಿಕೇರಿ ಆಸ್ಪತ್ರೆಯಲ್ಲಿ ತರಬೇತು ಹೊಂದಲು ತಯಾರಾಗಿರಬೇಕು.

ತರಬೇತು ಮುಗಿದನಂತರ ಅವರಿಗೆ ಸರ್ಟಿಫಿಕೇಟುಗಳನ್ನು ಕೊಡಲಾಗುವದು. ಅವರು ಅವರ ಸ್ವಗ್ರಾಮದಲ್ಲೇ ವಾಸಿಸಿ ತಮ್ಮ ಕೆಲಸವನ್ನು ನಿರ್ವಹಿಸುವಂತೆ ಒಂದು ಕರಾರುಪತ್ರ ಬರೆದು ಕೊಡಬೇಕಾಗಿದೆ.

ಜಿ. ಪಿ. ಚಾಲಿನ್‌ವುಡ್,
2-1 ಕೆಪ್ಟನ್, ಐ. ಯಂ. ಎಸ್.
ಸಿವಿಲ್ ಸರ್ಜನ್, ಕೊಡಗು.

ಪರರಾಷ್ಟ್ರಗಳ ಪರಿಸ್ಥಿತಿ.

ಪೋಲೆಂಡ್.

ಜರ್ಮನಿ ಪೋಲೆಂಡಿನ ಸಂಬಂಧವು ಭೀಕರವಾಗುತ್ತಾ ಬಂದಿದೆ. ಡಾನ್ಜಿಗನ್ನು ಬಿಟ್ಟುಕೊಡಬೇಕೆಂಬ ಜರ್ಮನರ ಕೇಳಿಕೆಯು ಪ್ರಬಲವಾಗುತ್ತಿದೆ. ಡಾನ್ಜಿಗಕ್ಕೆ ಬರುತ್ತಿದ್ದ ಯಾವತ್ತೂ ಪೋಲಿಷ್ ಪತ್ರಿಕೆಗಳ ಮೇಲೆ ಅಲ್ಲಿಯ ನಾಝಿಗಳು ಬಹಿಷ್ಕಾರ ಹಾಕಿರುವರಲ್ಲದೆ ಪೋಲೆಂಡಿನ ಅಧಿಕೃತ ಗಜೆಟಾದ ಪೋಲ್ಸ್ಕಾ ಎಂಬದಕ್ಕೂ ನಿಷೇಧ ಹಾಕಿರುವರು. ಆದ್ದರಿಂದ ಪೋಲೆಂಡಿನವರಲ್ಲಿ ಪೂರಾ ಅತೃಪ್ತಿಯು ಬಂದಿರುವವಲ್ಲದೆ ಜರ್ಮನರ ಈ ಘೋರಣೆಯನ್ನು ಖಂಡಿಸಿರುವರು. ಇದರಿಂದ ಇಕ್ಕಡೆಗಳಲ್ಲಿಯೂ ಘರ್ಷಣೆಯು ಪುನಃ ಒಮ್ಮೆ ತಲೆದೋರಿದೆ. ಯುದ್ಧದ ಕಾರ್ಮೋಡಗಳು ರಭಸದಿಂದ ಡಾನ್ಜಿಗದ ಆಕಾಶದಲ್ಲಿ ಹಾರಾಡುತ್ತಿರುವವು. ಆಕಸ್ಮಿತವಾಗಿ ಡಾನ್ಜಿಗದ ಮೇಲೆ ಜರ್ಮನಿಯು ಯಾವದೇ ರೀತಿಯ ಅತ್ಯಾಚಾರವನ್ನು ಕೈಕೊಂಡರೂ ಪರಿಣಾಮವು ನೆಟ್ಟಗಾಗಲಿಕ್ಕಿಲ್ಲೆಂದು ಪೋಲೆಂಡು ಜರ್ಮನರನ್ನು ಎಚ್ಚರಿಸಿದೆ. ಅಲ್ಲದೆ ಜರ್ಮನರು ಹಾಕಿರುವ ಬಹಿಷ್ಕಾರ ಶರತುಗಳನ್ನು ಉಲ್ಲಂಘಿಸಿರುವರು. ಆದ್ದರಿಂದ ಜರ್ಮನಿ ಪೋಲೆಂಡದೊಳಗಿರುವ ಈ ಮನಃಕಷಾಯದಿಂದ ಒಡನೆ ಅವರೊಳಗೆ ಕದನವಾಗದಿರದೆಂದು ಹೇಳಬಹುದು. ಇಂದಿನ ಈ ಪರಿಸ್ಥಿತಿಯಲ್ಲಿ ಜರ್ಮನಿಯು ಪೋಲೆಂಡಿನ ದಿಟ್ಟತನಕ್ಕೆ ಹೆದರಿ ಹಿಂದೆ ನಿಲ್ಲುವುದೂ ಅಸಾಧ್ಯ. ಮತ್ತೆ ಪ್ರಜಾಪ್ರಭುತ್ವ ಸರಕಾರಗಳು ಪೋಲೆಂಡಿನ ಹಿತಸಾಧಕರೆಂದು ಭರವಸೆ ಇತ್ತಿರುವ ಪ್ರಯುಕ್ತ ಈ ಮೊದಲು ಮಾಡಿದಂತೆ ಏಕಾಏಕಿ ಮೇಲೆ ಬೀಳುವುದು ದುಸ್ತರವಾಗಿದೆ. ಅಂತೂ ಸರ್ವಾಧಿಕಾರಿ ಹಿಟ್ಲರನ ಸ್ಥಿತಿಯು ವಿಷಮಾವಸ್ಥೆಯಲ್ಲಿದೆ. ಮುಂದೇನು ನಡೆಯುವುದೋ ನಿರೀಕ್ಷಣೀಯ.

ಇದರೊಂದಿಗೆ ಈಗ ಹಿಟ್ಲರನು ಧೃತಿಗೆಡದೆ ಪುನಹ ಒಂದು ಪ್ರಕಟಣೆ ಹೊರಡಿಸಿರುವನು. ಪೋಲೆಂಡು ಡೇನ್ಜಿಗ್‌ನ್ನು ಜರ್ಮನಿಗೆ ಬಿಟ್ಟುಕೊಟ್ಟರೆ ಸಾಲದು. ಅದರೊಂದಿಗೆ ಕೊರಡೋರ್ ಎಂಬ ಪ್ರಾಂತವನ್ನು ಜರ್ಮನಿಗೆ ಬಿಟ್ಟುಕೊಡುವದಾದರೆ ತಾನು ಯಾರೊಡನೆಯೂ ಕಲಹ ಮಾಡಲಿಕ್ಕಿಲ್ಲವೆಂದೂ, ಎಲ್ಲರೊಡನೆಯೂ ಶಾಂತಿ ಶರತುಗಳನ್ನು ಭದ್ರಪಡಿಸಿಕೊಳ್ಳುವೆನೆಂದು ಹೇಳಿರುವನು. ಮುಖ್ಯವಾಗಿ ನೌಕಾ ಕೇಂದ್ರವಾಗಿ ಉಪಯೋಗಿಸಲು ಡೇನ್ಜಿಗ್ ಜರ್ಮನಿಗೆ ಅಗತ್ಯ. ಮಿಲಿಟರಿ ಕಾರ್ಯಕ್ರಮಕ್ಕಾಗಿ ಕೊರಡೋರ್ ಅಗತ್ಯ. ಇಷ್ಟು ಸಿಕ್ಕಿದರೆ ಸದ್ಯಕ್ಕೆ ಯಾವ ತೊಂದರೆಯೂ ಇಲ್ಲ ಎಂದಿರುವನು. ಅಲ್ಲದೆ ಒಂದು ಕಾಲಕ್ಕೆ ತಮ್ಮದೇ ಆಗಿದ್ದ ಪ್ರಾಂತಗಳನ್ನು ತಮಗೇ ಬಿಟ್ಟುಕೊಡಲು ಈ ರಾಷ್ಟ್ರಗಳಿಗಾವರೂ ಹೊಟ್ಟೆಯುರಿಯೇನು? ಇಂದು ಜರ್ಮನಿಗೆ ತನ್ನ ಪ್ರಜೆಗಳ ಹಿತರಕ್ಷಣಾ ದೃಷ್ಟಿಯಿಂದ ಇದೆಲ್ಲಾ ಬೇಕು ಎಂದು ಹೇಳಿರುವನು. ಈ ಸಂದರ್ಭದಲ್ಲಿ ಯುರೋಪಿನ ಪುರೋಹಿತರಾದ ಮಿ. ಚೇಂಬರ್ಲೇನರು ಯಾವ ಘೋರಣೆಯನ್ನೂ ವ್ಯಕ್ತಪಡಿಸಿರುವದಿಲ್ಲ. ಶಾಂತಿ ಸಂಸ್ಥಾಪಕರೆಂದು ಬಿರುದು ಗಳಿಸಿದ ಅವರು ಈ ಸಮಯದಲ್ಲಿ ಮೊದಲೊಮ್ಮೆ ಝೆಕೋಸ್ಲೋವಾಕಿಯಾದ ಕತ್ತು ಹಿಸುಕಿದಂತೆ ಪೋಲೆಂಡನ್ನು ಬಲಿಯಾಗಿ ಅರ್ಪಿಸಿ ಶಾಂತಿ ಸಂಸ್ಥಾಪನಾಚಾರ್ಯ ಎಂಬ ಬಿರುದನ್ನು ಗಳಿಸಬಹುದೇನೊ? ಬಲ್ಲವರಾರು. ಎಲ್ಲವೂ ಕಾಲಗರ್ಭದಲ್ಲಡಗಿದೆ.

ರಷ್ಯಾ, ಬ್ರಿಟನ್ ಸಂಧಿ.

ಈಗ ಕೆಲವು ತಿಂಗಳುಗಳಿಂದ ಈ ಪ್ರಯತ್ನವು ನಡೆಯುತ್ತಿದ್ದರೂ ಅದು ಫಲಕಾರಿಯಾಗದೆ ಹಿಂದಿನ ಯುಗದ ಅಶ್ವಮೇಧಯಾಗದಷ್ಟು ಕಠಿಣವಾಗಿ ಹೋಗಿದೆ. ಇದು ಹೇಗೆ, ಯಾವಾಗ ಅಂತ್ಯವಾಗುವದೊ ಅದರೊಳಗೆ ಏನೇನು ಕಾರ್ಯಗಳು ನಡೆಯಬಹುದೋ ತಿಳಿಯದು. ಈ ಒಪ್ಪಂದವು ಕೊನೆಗೊಳ್ಳದಿರಲಿಕ್ಕೆ ಪ್ರಥಮ ಕಾರಣವೆಂದರೆ, ರಷ್ಯಾಕ್ಕೆ ಬ್ರಿಟನಿನಲ್ಲಿ ನಂಬಿಕೆ ಸಾಲದು. ಸಣ್ಣ ಸಣ್ಣ ರಾಷ್ಟ್ರಗಳನ್ನು ಮಧ್ಯ ಯುರೋಪಿನ ಸರ್ವಾಧಿಕಾರಿಗಳ ಉಪಟಳದಿಂದ ರಕ್ಷಿಸಲು ಒಂದು ವ್ಯವಸ್ಥೆ ಮಾಡದಿದ್ದರೆ ಯುರೋಪಿನಲ್ಲಿ ಪ್ರಜಾಪ್ರಭುತ್ವ ರಾಷ್ಟ್ರಗಳ ಅಳಿವಾಗಿ ನಿರಂಕುಶಾಧಿಕಾರವು ತಲೆಯೆತ್ತಿ ಮೆರೆವದೆಂಬ ಪರಿಜ್ಞಾನವು ರಷ್ಯಾಕ್ಕೆ ಚೆನ್ನಾಗಿದೆ. ಆದ್ದರಿಂದ ಈ ಯೋಜನೆಯ ಬಗ್ಗೆ ಸಮ್ಮತಿಯನ್ನೀಯುವಂತೆ ರಷ್ಯಾವು ಬ್ರಿಟನನ್ನು ಎಳೆಯುತ್ತಿದೆ. ಆದರೆ ಪ್ರಧಾನರಾದ ಮಿ. ಚೇಂಬರ್ಲೇನರು ಒಂದು ಕಡೆ ಸರ್ವಾಧಿಕಾರಿಗಳ ಭಯ, ಮತ್ತೊಂದೆಡೆ ಶಾಂತಿಸ್ಥಾಪನೆಯ ಧ್ಯೇಯ ಹೀಗೆ ತಮ್ಮ ಕಾರ್ಯದ್ವಯಗಳಲ್ಲಿ ಸಿಕ್ಕಿ ರಷ್ಯಾಕ್ಕೆ ಸುವ್ಯಕ್ತವಾದ ವಾಗ್ದಾನವನ್ನು ಕೊಡಲು ಹಿಂದು ಮುಂದು ನೋಡುತ್ತಿರುವರು. ಆದ್ದರಿಂದ ರಷ್ಯಾ ಬ್ರಿಟನ್ ಒಪ್ಪಂದವು ಇಂದು ಬಹಳ ಜಟಿಲವಾದ ಸಮಸ್ಯೆಯಾಗಿ ಪರಿಣಮಿಸಿದೆ.

ಅಬಿಸೀನಿಯಾ.

ಇಟಲಿಯ ಸರ್ವಾಧಿಕಾರಿ ಮುಸಲೋನಿಯು ಈ ಪ್ರಾಂತದ ಮೇಲೆ ಧಾಳಿ ನಡೆಸುವ ಮೊದಲು ಅಬಿಸೀನಿಯಾದಲ್ಲಿ ಅಪಾರವಾದ ಚಿನ್ನ, ಬೆಳ್ಳಿ ಮೊದಲಾದ ಲೋಹಗಳು ದೊರೆಯುವವೆಂದೂ, ಅದರಿಂದ ಇಟಲಿಯನ್ನು ಇಂದ್ರಲೋಕದಂತೆ ಮಾಡಿ ಮೆರೆಯುವೆನೆಂದೂ ಊಹಿಸಿದ್ದನು. ನ್ಯಾಯಪ್ರಕಾರ ಅಬಿಸೀನಿಯರನ್ನು ಗೆದ್ದೂ ಆಯಿತು. ಆದರೆ ಆತನ ಆಶೆ, ಆಕಾಂಕ್ಷೆಗಳು ಇಂದಿಗೂ ಬಿಸಿಲ್ಗುದುರೆಯಾಗಿಯೇ ಪರಿಣಮಿಸಿವೆ. ಅಬಿಸೀನಿಯಾ ಪ್ರಜೆಗಳು ಈ ಇಟಲಿಯನರ ಹತೋಟಿಗೆ ಬಾರದೆ ಅಲ್ಲಲ್ಲಿ ಪರಸ್ಪರ ಜಗಳ ಕಲಹಗಳು ನಡೆಯುತ್ತಿವೆ. ದೇಶಭಕ್ತನಾದ ಒಬ್ಬನೇ ಒಬ್ಬ ಅಬಿಸೀನಿಯಾ ಪ್ರಜೆಯು ಇರುವವರೆಗೆ ಅಲ್ಲಿ ಶಾಂತಿ ನೆಲೆಸುವದು ದುಸ್ತರ. ಮುಸಲೋನಿಯು ತನ್ನ ಆಳಿಯ ಪರಿಣಾಮದಿಂದಾಗಿ ಅಬಿಸೀನಿಯಾದಲ್ಲಿ ನಾಲ್ಕು ಮಿಲಿಯ ಪವನು ಖರ್ಚು ಮಾಡಿದ. ಆದರೆ ಇದೆಲ್ಲಾ ನೀರ ಮೇಲಿನ ಹೋಮದಂತಾಯಿತು. ಆದರೂ ಮುಸಲನಿಯು ಧೈರ್ಯಗೆಡದೆ ಅಬಿಸೀನಿಯಾವನ್ನು ತನ್ನದೊಂದು ವಸಾಹತನ್ನಾಗಿ ಮಾಡಿಕೊಳ್ಳಬೇಕೆಂದು ಸುಮಾರು ಒಂದು ಸಾವಿರ ಇಟಲಿಯನರನ್ನು ಅಲ್ಲಿ ವಸತಿಗೆ ಕಳುಹಿಸಿದ. ಇದರ ಪರಿಣಾಮವೇನು? ಅವರು ಅಲ್ಲಿ ತಮ್ಮ ಪ್ರಾಣವನ್ನು ಕೈಲಿ ಹಿಡಿದು ಸಂಚರಿಸಬೇಕಿದೆ.

ಇಟಲಿಯು ಅಬಿಸೀನಿಯಾವನ್ನು ಜಯಿಸುವ ಮೊದಲು ಆ ಅಬಿಸೀನಿಯಾವು ಒಂದು ಮಿಲಿಯ ಪವನುಗಳ ಬೆಲೆಯ ಸಾಮಾನುಗಳನ್ನು ಹೊರಗೆ ಕಳುಹಿಸುತ್ತಿತ್ತು. ಅದು ಕಾಫಿ ವ್ಯವಸಾಯಕ್ಕೆ ಪ್ರಖ್ಯಾತಿಗೊಂಡಿತ್ತು. ಆದರೆ ಇಂದು ಅಲ್ಲಿಯ ಕಾಫಿ ತೋಟಗಳು ಪಾಳುಬಿದ್ದಿವೆ. ವ್ಯಾಪಾರವಂತು ನಿರಾಶಾಜನಕವಾಗಿದೆ. ವಿಶಾಲ ಸಾಮ್ರಾಜ್ಯವನ್ನು ಕಟ್ಟಿ ಮೆರೆಯಬೇಕೆಂದು ಪ್ರಯತ್ನಿಸಿದ ಮುಸಲನಿಯ ಪ್ರಯತ್ನಗಳು ನಿಷ್ಫಲವಾಗಿ ಇಂದು ಅಬಿಸೀನಿಯಾವು ಮರಳು ಕಾಡಿನಂತೆ ಪರಿಣಮಿಸಿದೆ.

ಬ್ರಿಟನ್.

ಎರಡು ಸಾವಿರ ವರ್ಷಗಳ ಹಿಂದೆ ಮಹಾತ್ಮ ಏಸುಕ್ರಿಸ್ತನು, 'ನೀನು ಒಬ್ಬರ ವಸ್ತುವನ್ನು ಕದ್ದರೆ, ಒಬ್ಬನನ್ನು ಹಿಂಸಿಸಿದರೆ ನಿನ್ನನ್ನು ಹಿಂಸಿಸುವನು ಮತ್ತೊಬ್ಬನಿರುವನೆ'ಂದು ಸಾರಿದ್ದನೆ. ಆದರೆ ಈ ಮಾತನ್ನು ಮನ್ನಿಸದೆ ವರ್ತಿಸಿದ ಬ್ರಿಟಿಷರಿಗೆ ಇಂದು ಅದರ ಸತ್ಯತೆಯು ತಿಳಿದಿರಬಹುದು. ಭಾರತೀಯರನ್ನು ಬಗ್ಗುಬಡಿದು ತನ್ನ ವಿಜಯ ಪತಾಕೆಯನ್ನು ಇಲ್ಲಿ ಹಾರಿಸಿದಾಗ, ಪೇಲೆಸ್ತೀನದಲ್ಲಿ ಅರಬರ ಮೇಲೆ ಕೈಯೆತ್ತಿದಾಗ ತನಗೆ ಇದಿರಾಳು ಯಾರೂ ಇಲ್ಲವೆಂದು ಬ್ರಿಟನ್ ಭಾವಿಸಿತ್ತು. ಆದರೆ ಇಂದು ಮಧ್ಯ ಯುರೋಪಿನ ಸರ್ವಾಧಿಕಾರಿಗಳ ಉಪಟಳದಿಂದ ಮೇಲಿನ ಧರ್ಮ ವಾಕ್ಯವು ಬ್ರಿಟನರ ಸ್ಮೃತಿ ಪಥಕ್ಕೆ ಬರುತ್ತಿರಬಹುದು. ಆದ್ದರಿಂದ ಅದು ತನ್ನ ಪೂರ್ವದ ವೀರಾವೇಶವನ್ನು ತೊರೆದು ಶಾಂತಿ ಸ್ಥಾಪಕನ ಸೋಗಿನಲ್ಲಿ ನಟಿಸುತ್ತಿರುವದು. ಹೊರಗೆ ಕಾಣುವಂತೆ ಸರ್ವಾಧಿಕಾರಿಗಳಿಗೆ ವಿರೋಧವಾಗಿ ಪ್ರಕಟಣೆ ಹಾಗೂ ಸಂಧಾನಗಳನ್ನು ಮಾಡಿಕೊಂಡರೂ, ಒಳಗೊಳಗೇ ಸರ್ವಾಧಿಕಾರಿಗಳನ್ನು ಮೆಚ್ಚಿಸಲೆತ್ನಿಸುತ್ತಿದೆ. ಈ ಧ್ಯೇಯದಿಂದಲೇ ಆಸ್ಟ್ರಿಯಾ, ಝೆಕೊಸ್ಲೊವಾಕಿಯಾ, ಸ್ಪೈಯಿನ್, ಅಲ್ಬೇನಿಯಾ ಮೊದಲಾದವನ್ನು ಧಾರೆಯೆರೆಯಿತು. ಮುಂದಾದರೂ ಅದು ಸರ್ವಾಧಿಕಾರಿಗಳ ಕೇಳಿಕೆಯಂತೆ ಪೋಲೇಂಡ್, ರೊಮೇನಿಯಾ ಟ್ಯೂನಿಷ್, ಕೋರ್ಸಿಕಾ ಮೊದಲಾದುವನ್ನು ಯಾರು ಆಕ್ರಮಿಸಿದರೂ ಬೇಡವೆಂದು ತಡೆದೀತೇ? ಇಂದಿನ ಬ್ರಿಟಿಷರ ಧೋರಣೆಯಾದರೂ ಇಷ್ಟೆ. ಬ್ರಿಟನನ್ನು ಹಾಗೂ ಅದರ ಸಾಮ್ರಾಜ್ಯವನ್ನು ಬಿಟ್ಟು ಯಾರೂ ಹೇಗೆ ವರ್ತಿಸಿದರೂ ಅದು ಯಾವ ಕಾರ್ಯಕ್ರಮವನ್ನೂ ಕೈಕೊಳ್ಳದು.

ಹಸಿದು ಉದ್ರೇಕಗೊಳ್ಳುತ್ತಿರುವ ಸರ್ವಾಧಿಕಾರಿಗಳಿಗೆ ಯೋಗ್ಯ ಸಮಯದಲ್ಲಿ ಆಹಾರವನ್ನಿತ್ತು ಅವರನ್ನು ಸಮಾಧಾನಪಡಿಸಿ ತನ್ನ ರಾಷ್ಟ್ರದ ಮೇಲೆ ಬೀಳದಂತೆ ನೋಡಿಕೊಳ್ಳುವದೇ ಬ್ರಿಟಿಷರ ಪ್ರಥಮ ಧ್ಯೇಯ. ಆದರೆ ಮಾನವನು ಯೋಚಿಸಿದಂತೆ ಕಾರ್ಯ ನಡೆಯದು. ಕಾಲಚಕ್ರದ ತೀವ್ರ ಉರುಳಾಟದಲ್ಲಿ ಅಲ್ಪ ಜೀವಿಯಾದ ಮಾನವನ ಶ್ರಮವು ಜಯವನ್ನು ಪಡೆದೀತೇ?

ಚೀನಾ—ಜಪಾನ್.

ಯುದ್ಧವು ನಡೆಯುತ್ತಿದೆ. ಚೀನೀಯರ ಕೈ ಈಗೀಗ ಮೇಲಾಗುತ್ತಿದೆ. ತಾ. 12 ರಲ್ಲಿ 20 ಜಪಾನಿ ವಿಮಾನಗಳು ಚೀನಾ ದೇಶದ ಪಶ್ಚಿಮ ಭಾಗದಲ್ಲಿರುವ ಈಗಿನ ರಾಜಧಾನಿಯಾದ ಚುಂಗ್‌ಕಿಂಗ್ ಪಟ್ಟಣದ ಮೇಲೆ ಬಾಂಬು ಹಾಕಿದ್ದಲ್ಲದೆ ವಿಶೇಷವಾಗಿ ಸಿಡಿಮದ್ದನ್ನು ಸುರಿಸಿದವು. ಇದು ಸ್ಫೋಟನವಾದಾಗ್ಯೆ ಭಯಂಕರ ಭೂಕಂಪವಾದಂತೆ ನೆಲವೆಲ್ಲಾ ನಡುಗಿತು. ಜೀವನಾಶ್ರಯಕ್ಕಾಗಿ ನಿರ್ಮಿಸಿದ ನೆಲಮಾಳಿಗೆಗಳು ಸಹ ಉರುಳಿದವಂತೆ. ಈ ಸಮಯದಲ್ಲಿ ಚೀನೀಯರ ಯುದ್ಧ ವಿಮಾನಗಳು ಮೇಲಕ್ಕೇರಿ ಜಪಾನರ 3 ವಿಮಾನಗಳನ್ನು ಕೆಡವಿ ಹಾಕಿದ್ದಲ್ಲದೆ ಬಾಕಿ ವಿಮಾನಗಳನ್ನು ಓಡಿಸಿ ಬಿಟ್ಟವು. ಅಲ್ಲಿ ಹಾಕಿದ ಸಿಡಿಮದ್ದು ಉರಿದು ಇಡೀ ಪಟ್ಟಣವೇ ಬೆಂಕಿಯಲ್ಲಿ ಬೇಯುತ್ತಿದೆ. ಚೀನೀ ನಾಯಕನಾದ ಚಿಯಾಂಗ್ ಕೈಶೇಕರು ಚುಂಗ್‌ಕಿಂಗ್ ಪಟ್ಟವನ್ನು ಬಿಡುವಂತೆ ತಮ್ಮ ಕೈಕೆಳಗಿನ ಅಧಿಕಾರಿಗಳಿಗೆ ಅಪ್ಪಣೆ ಮಾಡಿರುವರು. ಚೀನಾದ ಅಪಾರವಾದ ಸೈನ್ಯಗಳನ್ನು ಈ ತಿಂಗಳಲ್ಲಿ ಹಾಂಕೋವಿನ ಸುತ್ತುಮುತ್ತಲು ಕದನಮಾಡಿ ಸೋಲಿಸಿರುವೆವೆಂದೂ, ಚೀನಾದವರು ಹಾಂಕೋವನ್ನು ವಶಪಡಿಸಿಕೊಳ್ಳಲು ಮಾಡಿದ ಸಾಹಸವು ನಿರರ್ಥಕವಾಯಿತೆಂದೂ ಜಪಾನರು ಸಾರಿರುತ್ತಾರೆ. ಆದರೆ ಚೈನೀಯರು ಇದೆಲ್ಲಾ ಬರೀ ಸುಳ್ಳು ಎಂದು ಘೋಷಿಸಿರುವರು. ಇಂದಿನ ಚೀನೀಯರ ಧೋರಣೆಯಿಂದ ಖಂಡಿತವಾಗಿಯೂ ಅಂತ್ಯದಲ್ಲಿ ಅದು ವಿಜಯಶ್ರೀಯನ್ನು ವರಿಸದಿರದೆಂಬುದು ನಿಶ್ಚಯ. ಜಪಾನರು ಇಂದಿನ ಯುದ್ಧದಿಂದ ಕಂಗೆಟ್ಟಿದ್ದಾರೆ. ಜರ್ಮನಿಯ ಪ್ರಧಾನ ಸೈನ್ಯಾಧಿಪತಿ ಮಾರ್ಷಲ್ ಗೋರಿಂಗರು ಸಂದಿಗ್ಧ ಸಮಯದಲ್ಲಿ ಸಹಾಯ ಕೊಡಬೇಕೆಂದು ಜಪಾನರನ್ನು ಕೇಳಿಕೊಂಡ ವಿಚಾರಕ್ಕೆ ಜಪಾನು ನಕಾರವನ್ನಿತ್ತಿದೆ. ಇದರಿಂದಲೇ ಜಪಾನಿನ ಸ್ಥಿತಿಯು ವಿಷಮಪರಿಸ್ಥಿತಿಯಲ್ಲಿದೆಯೆಂಬುದು ವಿಶದವಾಗುವದು. ರಾಷ್ಟ್ರಾಭಿಲಾಷೆಯಿಂದ ಮುಂದೊತ್ತುತ್ತಿರುವ ಚೈನೀಯರನ್ನು ಪ್ರತಿಭಟಿಸುವದೇ ಅದಕ್ಕೆ ಕಷ್ಟತಮವಾಗಿ ಪರಿಣಮಿಸಿದೆ. ಅಂತು ಜಪಾನು ವಿಶಾಲ ಚೈನಾವನ್ನು ಹಿಡಿದು ನುಂಗುವ ತನ್ನ ಯೋಜನೆಯಿಂದ ಒಳ್ಳೆ ಪಾಠ ಕಲಿಯುವಂತಾಗುವದರಲ್ಲಿ ಸಂದೇಹವಿಲ್ಲ.

ಚೈನಾ ಯುದ್ಧದಿಂದಾಗಿ ಚೀನೀಯರ ಅಭಿವೃದ್ಧಿ.

ವಿಶಾಲ ಚೈನಾವು ರಾಜ್ಯ ವಿಸ್ತರಣಾ ತೃಷೆಯಿಂದ ಕೂಡಿದ ಜಪಾನರ ದೃಷ್ಟಿಗೆ ಬಿದ್ದು ಅನೇಕ ತೊಂದರೆಗಳನ್ನನುಭವಿಸಿತು. ಜಪಾನರ ಕ್ರೂರ ಅತ್ಯಾಚಾರಗಳನ್ನೂ, ನಿರ್ದಯಾತ್ಮಕ ಧೋರಣೆಯನ್ನೂ ತನ್ನ ರಾಷ್ಟ್ರ ಪ್ರೇಮವೆಂಬ ಆ ಗುರಾಣಿಯ ಸಹಾಯದಿಂದ ತಡೆದು ಸೈರಿಸಿತು. ಪಟ್ಟಣ ಪಟ್ಟಣಗಳೇ ಜಪಾನರ ವಶವಾಗಿ ಇಡೀ ಚೈನಾವೇ ದುಃಖಾಂಬುಧಿಯಲ್ಲಿ ತಳಮಳಿಸಿದ ಆ ದಾರುಣವಾದ ದೃಶ್ಯವನ್ನು ಚೈನೀ ರಾಷ್ಟ್ರ ಕಾರ್ಯಧುರಂಧರರು ತಕ್ಕೆಯಿಂದ ನೋಡಿದರು. ತಮ್ಮ ಈ ವಿಪನ್ನಾವಸ್ಥೆಯನ್ನು ಪರಿಹರಿಸಲು ಎಲ್ಲರೂ ಏಕೀಕರಿಸಿ ರಾಷ್ಟ್ರ ಕಟ್ಟೋಣ ಕಾರ್ಯಗಳಲ್ಲಿ ನಿರತರಾದರು. ಅವರು ತಮ್ಮ ಆರ್ಥಿಕ ಅಡಿಪಾಯವನ್ನು ಭದ್ರಪಡಿಸಿಕೊಂಡು ಈಗ ಯುದ್ಧಕ್ಕೆ ತಯಾರಾಗಿರುವರು. ಆದ್ದರಿಂದ ಈಗ ನಾಲ್ಕಾರು ವಾರಗಳಿಂದ ಚೈನೀಯ ಯುದ್ಧ ಭಟರು ತೀಕ್ಷ್ಣವಾದ ಕದನ ನಡೆಸಿ ಯುದ್ಧಾರಂಭ ಕಾಲದಲ್ಲಿ ಜಪಾನರು ಗೆದ್ದುಕೊಂಡಿದ್ದ ಪಟ್ಟಣಗಳನ್ನು ಸ್ವಾಧೀನಪಡಿಸಿಕೊಳ್ಳುತ್ತಾ ಬರುತ್ತಿರುವರು. ಚೀನೀಯರ ಸೈನ್ಯವು ಇನ್ನೂ ಪೂರ್ಣ ತಯಾರಾಗಿಲ್ಲ. ಇವರ ಸೈನ್ಯವು ತಯಾರಾದಂತೆ ಇವರಿಗೆ ಜಯ ಶ್ರೀಯು ಒಲಿಯದಿರಲಾರಳೆಂದು ಆಶಿಸಲಾಗಿದೆ

ಚೈನಾದ ಮಹಾಪ್ರಯಾಣ.

ಎರಡು ವರ್ಷಗಳಿಂದೀಚೆಗೆ ಚೈನಾದಲ್ಲಿ ಒಂದು ವಿಶೇಷವಾದ ಮಾರ್ಪಾಡುಗಳಾಗಿರುತ್ತವೆ. ಕಸಬು ಕೈಗಾರಿಕೆಗಳೂ, ವಿಶ್ವವಿದ್ಯಾನಿಲಯಗಳೂ ವೃದ್ಧಿಯಾಗಿವೆ, ಲಕ್ಷಾಂತರ ಪ್ರಜೆಗಳು ಆ ವಿಸ್ತಾರವಾದ ದೇಶದ ಪಶ್ಚಿಮ ಭಾಗದ ಭೂಪ್ರದೇಶಗಳನ್ನು ಕುರಿತು ಹೋಗಿ ಸೇರಿಕೊಂಡಿದ್ದಾರೆ. ಚೈನಾ ದೇಶದ ಪೂರ್ವ ತೀರದಲ್ಲಿ ಶಾಂಘೈ, ಟಿಯನ್ ಟ್ಸಿನ್, ಕ್ಯಾಂಟನ್ ಎಂಬುವೇ ಮುಂತಾದ ಬಂದರು ಪಟ್ಟಣಗಳಿರುವವು. ಈ ನಗರಗಳಲ್ಲೂ, ಅವುಗಳ ಸುತ್ತುಮುತ್ತಲಿನ ಪ್ರದೇಶಗಳಲ್ಲೂ ಪ್ರಜಾಸಂಖ್ಯೆಯು ಅಪಾರವಾಗಿದೆ. ಸಮುದ್ರ ತೀರದಿಂದ ಒಂದು ನೂರು ಮೈಲು ಆಚೆಯ ಒಳದೇಶದಲ್ಲಿ ನೋಡಿದರೆ ಜನಬಾಹುಳ್ಯವು ಬಹಳ ಕಡಿಮೆ; ಇದು ಹೇಗೂ ಆ ಭೂ ಪ್ರದೇಶವು ಅಭಿವೃದ್ಧಿಗೆ ಬಂದಿರಲಿಲ್ಲವೆಂದೇ ಹೇಳಬಹುದು. ಚೈನಾದ ಹಳೆ ರಾಜಧಾನಿಯಾಗಿದ್ದ ನಾನ್ ಕಿಂಗ್ ನಗರವನ್ನು ತ್ಯಜಿಸಿಬಿಟ್ಟ ಮೇಲೆ ಅವರು ಅಲ್ಲಿದ್ದ ಕಾರ್ಖಾನೆಗಳನ್ನೂ, ವಿದ್ಯಾನಿಲಯಗಳನ್ನೂ ಅಲ್ಲಿಂದ ಪಶ್ಚಿಮಕ್ಕೆ ಎಂಟುನೂರು ಮೈಲಿಗಳ ಆಚೆ ಇರುವ ಚುಂಗ್ ಕಿಂಗ್ ಮೊದಲಾದ ಸ್ಥಳಗಳಿಗೆ ತೆಗೆದುಕೊಂಡು ಹೋಗಿ ಅದೇ ಯಾಂಗ್ ತ್ಸೆ-ಕಿಯಾಂಗ ನದೀ ತೀರದ ಊರುಗಳಲ್ಲಿ ಸ್ಥಾಪನ ಮಾಡಿಕೊಂಡರು. ಚುಂಗ್ ಕಿಂಗ್ ನಲ್ಲಿ ಸ್ಥಾಪನೆಯಾದ ಕೇಂದ್ರ ವಿಶ್ವವಿದ್ಯಾನಿಲಯವು ನಾನ್ ಕಿಂಗ್ ನಿಂದ ಒಂದು ಸಾವಿರ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಸೇರಿಸಿದರು. ಉಪಾಧ್ಯಾಯ ವರ್ಗದವರನ್ನೂ, ಪುಸ್ತಕ ಭಂಡಾರವನ್ನೂ, ವಿಜ್ಞಾನ ಶಾಸ್ತ್ರ ಶೋಧನೆಯ ಸಾಧನಗಳನ್ನೂ ಅಲ್ಲಿಗೆ ತೆಗೆದುಕೊಂಡು ಹೋಗಿ ಮೂರು ವಾರಗಳೊಳಗಾಗಿ ಹಂಗಾಮಿಯಾಗಿ ಕಟ್ಟಿ ಸ್ಥಾಪನೆ ಮಾಡಿದ ಇಪ್ಪತ್ತನಾಲ್ಕು ನಿಲಯಗಳಲ್ಲಿ ಅವುಗಳನ್ನಿಟ್ಟು ವಿದ್ಯಾನಿಲಯದ ಕೆಲಸಕಾರ್ಯಗಳನ್ನು ನಡೆಸುತ್ತಾ ಬಂದಿದ್ದಾರೆ. ಅದೇ ರೀತಿ ತಿಯೆನ್ ತ್ಸಿನ್ ನಲ್ಲಿದ್ದ ನಾನ್ ಕೈ ವಿಶ್ವವಿದ್ಯಾನಿಲಯವನ್ನು ಕೂಡ ಅಲ್ಲಿಂದ ಪಶ್ಚಿಮ ಪ್ರದೇಶಕ್ಕೆ ಸಾಗಿಸಿಕೊಂಡರು. ಅನೇಕ ಪಾಠಶಾಲೆಗಳನ್ನು ಟಿಬೆಟ್ ರಾಜ್ಯದ ಎಲ್ಲೆಕಟ್ಟುಗಳ ಸಮೀಪಕ್ಕೆ ತಂದು ಸ್ಥಾಪಿಸಿ, ರಣರಂಗದಲ್ಲಿದ್ದ ವಿದ್ಯಾರ್ಥಿಗಳನ್ನೆಲ್ಲಾ ಕೂಡಿಸಿ ಆ ಪಾಠಶಾಲೆಗೆ ತಂದುಬಿಟ್ಟಿದ್ದಾರೆ.

ಕಳೆದ ಐದು ವರ್ಷಗಳ ಅವಧಿಯಲ್ಲಿ ಚೈನಾ ದೇಶದ ಪೂರ್ವ ಭಾಗದಲ್ಲೂ, ಮಧ್ಯ ರಾಷ್ಟ್ರದಲ್ಲೂ ಇದ್ದ ಅನೇಕ ಕಾರ್ಖಾನೆಗಳನ್ನು ಪಶ್ಚಿಮ ಭಾಗದ ಸೇಚ್ವಾನ್ ಎಂಬ ಆಧಿಪತ್ಯಕ್ಕೆ ಸಾಗಿಸಿರುತ್ತಾರೆ. ಈ ಆಧಿಪತ್ಯದೊಳಗೇ ಚೈನಾದ ಈಗಿನ ರಾಜಧಾನಿಯಾದ ಚುಂಗ್ ಕಿಂಗ್ ನಗರವು ಇರುತ್ತದೆ. ಈ ಆಧಿಪತ್ಯವು ತುಂಬಾ ಫಲವತ್ತಾದದ್ದು; ಜಪಾನ್ ಸೈನ್ಯಗಳಿರುವ ಜನಬಾಹುಳ್ಯವಾಗಿದ್ದ ಭಾಗಗಳಿಂದ ಹತ್ತಾರು ಸಹಸ್ರ ಕೃಷಿಕರನ್ನು ಅಲ್ಲಿಗೆ ಕರೆತಂದುಬಿಟ್ಟಿದ್ದಾರೆ. ಯೂರೋಪಿಗೆ ಹೋಗಿಬರಲೂ, ಅಮೆರಿಕಕ್ಕೂ ಸುಮಾರು 2,000 ಮೈಲುಗಳ ದೂರ ಎರಡು ಘಾಟಿ ರಸ್ತೆಗಳನ್ನು ಈ ಪಶ್ಚಿಮ ಪ್ರದೇಶದಲ್ಲಿ ತಯಾರುಮಾಡಿಕೊಂಡಿರುವರು. ಈ ಪ್ರತಃ ಒಂದು ರಸ್ತೆಯಲ್ಲಿ ಚುಂಗ್ ಕಿಂಗ್ ನಿಂದ ಬರ್ಮಾದಲ್ಲಿರುವ ರಂಗೂನ್ ನಗರಕ್ಕೆ ಬಂದು ಹೋಗಬಹುದು; ಎರಡನೇ ರಸ್ತೆಯ ಮೂಲಕ ವಾಯುವ್ಯವಾಗಿ ರಷ್ಯದ ತುರ್ಕಿಸ್ತಾನಿಗೆ ಹೋಗಬಹುದಾಗಿದೆ. ಈ ಪಾಶ್ಚಾತ್ಯ ವಿಭಾಗದಲ್ಲಿ ಸೇರಿಕೊಂಡಿರುವ ಲಕ್ಷಾಂತರ ಪ್ರಜೆಗಳಿಗೆ ಕೆಲಸ ಕಾರ್ಯಗಳನ್ನೂ, ಜೀವನವನ್ನೂ ಒದಗಿಸಿ ನಡೆಸುವುದಕ್ಕೆ ಚೈನಾ ಸರ್ಕಾರದವರು ಸಾಲಕೊಡತಕ್ಕ ಬ್ಯಾಂಕುಗಳನ್ನು ಏರ್ಪಾಡು ಮಾಡಿರುತ್ತಾರಲ್ಲದೆ, ಭಾರಿ ನೀರಾವರಿಗಳಿಂದ ಅಫೀಮನ್ನು ಬೆಳೆಯುತ್ತಿದ್ದ ವಿಸ್ತಾರವಾದ ಭೂಪ್ರದೇಶಗಳಲ್ಲಿ ಈಗ ಆಹಾರ ದಿನಸುಗಳನ್ನು ಅಪಾರವಾಗಿ ಬೆಳೆಯುವಂತೆ ಮಾಡಿರುವರು. ಸೇಚ್ವಾನ್ ನಲ್ಲಿ ಕ್ಷಾಮಡಾಮರಗಳ ಶಂಕೆಯೇ ಇಲ್ಲ; ಪ್ರತಿ ವರ್ಷವೂ ಕೃಷಿ ಪ್ರಜೆಗಳು ಶ್ರಮಪಟ್ಟು ನಾಲ್ಕು ಬೆಳೆಗಳನ್ನು ಜಮೀನುಗಳಲ್ಲಿ ಬೆಳೆ ಮಾಡುತ್ತಾರೆ. ಇದಲ್ಲದೆ ಈ ಭೂಭಾಗದಲ್ಲಿ ಗರ್ಭಿತವಾದ ಪದಾರ್ಥಗಳನ್ನು ಅಂದರೆ ಕಲ್ಲಿದ್ದಲು, ಕಬ್ಬಿಣ, ತಾಂಬ್ರ, ಚಿನ್ನ ಮೊದಲಾದವುಗಳನ್ನು ಶೋಧಿಸಿ ತೆಗೆದು ಉಪಯೋಗಕ್ಕೆ ತಂದುಕೊಂಡಿದ್ದಾರೆ. ಚೈನಾದ ಆಗ್ನೇಯ ವಿಭಾಗದಲ್ಲಿ ಸೀಕೊಂಗ್ ಎಂಬ ಹೆಸರಿನ ಹೊಸ ಆಧಿಪತ್ಯವನ್ನು ಏರ್ಪಡಿಸಿಕೊಂಡಿದ್ದಾರೆ. ಈ ಆಧಿಪತ್ಯದಲ್ಲಿ ಬಂಗಾರವೇ ಮೊದಲಾದ ನಾನಾ ಖನಿಜಗಳೂ, ಗಿಡಮರಗಳಿಂದ ನಿಬಿಡವಾದ ಕಾಡುಗಳೂ, ವಿಸ್ತಾರವಾದ ಗೋಮಾಳಗಳೂ ಇರುವವು. ಚೈನಾದ ಪಶ್ಚಿಮ ವಿಭಾಗದಲ್ಲಿ ಅನೇಕವಾಗಿ ಕಸಬು ಕೈಗಾರಿಕೆಗಳು ಹೊಸ ಹೊಸದಾಗಿ ಸ್ಥಾಪನೆಯಾಗಿರುತ್ತವೆ. ಇಷ್ಟೇ ಅಲ್ಲ, ಚೈನಾದ ಮಧ್ಯ ರಾಷ್ಟ್ರದಲ್ಲೂ, ಪೂರ್ವದಿಗ್ಭಾಗದಲ್ಲೂ ಇದ್ದು ಜಪಾನರು ಹಾಳುಗೆಡಹಿದ ಸಾವಿರಾರು ಗಿರಣಿ ಮತ್ತು ಕಾರ್ಖಾನೆಗಳ ಕಾರ್ಯಾಲಯಗಳನ್ನು ಈಗ ಪಶ್ಚಿಮ ವಿಭಾಗದಲ್ಲಿ ಸ್ಥಾಪನೆ ಮಾಡಿರುತ್ತಾರೆ. ಇತರ ವಿಭಾಗಗಳಲ್ಲಿದ್ದ ನಾನಾ ಕಾರ್ಯಗಾರರು, ಕಸಬುದಾರರು ಲಕ್ಷಗಟ್ಟಲೆ ಈ ನೂತನ ವಿಭಾಗಕ್ಕೆ ಬಂದು ನೆಲಸಿರುವರು. ಚೈನಾ ಸರ್ಕಾರದ ಸರ್ವಸೇನಾಧಿಪತಿಯ ಪತ್ನಿ ಶ್ರೀಮತಿ ಚಿಯಾಂಗ್ ಕೈ ಶೆಕ್ ರವರು ಸಾಹಸಪಟ್ಟು ಗಿರಣಿಗಳಲ್ಲೂ, ಕಾರ್ಖಾನೆಗಳಲ್ಲೂ ಕೆಲಸ ಮಾಡುತ್ತಿದ್ದ 30,000 ಹೆಂಗಸರನ್ನೂ, ಹುಡುಗಿಯರನ್ನೂ ಪಾಶ್ಚಾತ್ಯವಿಭಾಗಕ್ಕೆ ಬಂದುಬಿಡುವಂತೆ ಮಾಡಿದರು. ಅಲ್ಲದೆ ಗಿರಣಿಗಳ ಮತ್ತು ಕಾರ್ಯಾಲಯಗಳ ಯಂತ್ರೋಪಕರಣಗಳನ್ನು ಆ ಪ್ರದೇಶಕ್ಕೆ ಸಾಗಿಸಿರುತ್ತಾರೆ. ಈಗ ಅಲ್ಲಿ ಪ್ರಾಚೀನ ಕಾಲದ ಕಸಬು ಕೈಗಾರಿಕೆಗಳೂ, ನವೀನ ಕೈಗಾರಿಕೆಗಳೂ ಚಕ್ಷಣವೂ ನಡೆಯುತ್ತಿರುವವು. ದೊಡ್ಡ ದೊಡ್ಡ ಪರಸ್ಪರ ಸಹಾಯ ಸಂಘಗಳು ಕೂಡ ಸ್ಥಾಪನೆಯಾಗಿ ಅವುಗಳ ಮೂಲಕ ವಿದ್ಯುದ್ದೀಪಗಳು, ಹೆಣಿಗೆ ಕಸಬು, ನೇಯಿಗೆ ಗಿರಣಿಗಳು, ಸಕ್ಕರೆ ಕಾರ್ಖಾನೆ, ಇತರ ಆಹಾರ ಪದಾರ್ಥಗಳ ತಯಾರಿಕೆಗಳೆಲ್ಲ ಸುಲಲಿತವಾಗಿ ನಡೆಯುತ್ತಲಿವೆ. ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಚೈನಾ ದೇಶದ ಪಶ್ಚಿಮವಿಭಾಗಕ್ಕೆ ಲಕ್ಷಗಟ್ಟಲೆ ಬಂದು ನೆಲಸಿರುವ ರೈತ ಪ್ರಜೆಗಳಿಗೆ ಬೇಗ ಬೇಗನೆ ವಿದ್ಯೆ ನಾಗರೀಕತೆಗಳನ್ನು ಕಲಿಸುತ್ತಿದ್ದಾರೆ. ಎಲ್ಲೆಲ್ಲೂ ಸಂಚಾರಕ್ಕೂ, ಆಮದು ರಫ್ತಿಗೂ ಅನುಕೂಲವಾಗಿ ಅನೇಕ ಸೇತುವೆಗಳು ನಿರ್ಮಾಣವಾಗಿರುವವು.

ಯುದ್ಧ ಸಾಮಗ್ರಿಗಳು ಅಂದರೆ ಕೈದುಗಳು, ಮದ್ದುಗುಂಡು, ಬಂದೂಕ, ಫಿರಂಗಿ, ವಿಮಾನ ಯಂತ್ರಗಳೇ ಮೊದಲಾದವುಗಳಲ್ಲಿ ಚೈನಾದವರು ಜಪಾನಿನಷ್ಟು ಅನುಕೂಲಗಳನ್ನು ಪಡೆದವರಾಗಿಲ್ಲ. ಜಪಾನಿನವರು ಚೈನಾದ ಮಧ್ಯ ರಾಷ್ಟ್ರದಲ್ಲೂ, ಪೂರ್ವ ಭಾಗದಲ್ಲೂ, ಪಟ್ಟಣ, ಊರು, ಗ್ರಾಮಗಳನ್ನು ಸುಟ್ಟು ಹಾಕಿದಾಗ ಅಲ್ಲಿದ್ದ ಪ್ರಜೆಗಳು ಲಕ್ಷಗಟ್ಟಲೆ ಪಶ್ಚಿಮ ಕಡೆಗೆ ಹೋಗುತ್ತಿದ್ದುದನ್ನು ಕಂಡು ಇನ್ನೇನು ತಾವು ಜಯಪ್ರದ ಹೊಂದಿದೆವು ಎಂಬ ಭಾವನೆ ಅವರಿಗುಂಟಾಯಿತು. ಆದರೆ ನಿಜ ಸ್ಥಿತಿ ಏನೆಂದರೆ ಅವರು ತಮ್ಮ ಅಪಜಯವನ್ನು ತಾವೇ ಕೋರಿಕೊಂಡತಾಗಿದೆ. ಹೇಗೆಂದರೆ—ಯುದ್ಧ ಪ್ರಕರಣಗಳು ತಿಂಗಳುಗಟ್ಟಲೆ ನಡೆಯುತ್ತಾ ಬಂದದ್ದರ ಪರಿಣಾಮವಾಗಿ ಪಶ್ಚಿಮ ವಿಭಾಗದಲ್ಲಿ ಒಂದು ಹೊಸ ಚೈನಾ ದೇಶವೇ ಹುಟ್ಟಿಕೊಂಡಿದೆ. ಚೈನಾದ ಒಳಪ್ರದೇಶಗಳಲ್ಲಿ ಮೌಢ್ಯವೂ, ಒರಟುತನವೂ ಪರಿಹಾರವಾಗಿ ತಿಳುವಳಿಕೆ, ಬುದ್ಧಿಕೌಶಲ್ಯ, ವಿದ್ಯುತ್ತನ್ನು ಪ್ರಯೋಗಿಸಿ ಕಸಬು ಕೈಗಾರಿಕೆಗಳನ್ನು ನಡೆಸುವುದು ಇತ್ಯಾದಿಗಳೆಲ್ಲಾ ಅಲ್ಲೀಗ ಮೆರೆಯುತ್ತಲಿವೆ. ಆದ ಪ್ರಯುಕ್ತ ಇನ್ನು ಮುಂದೆ ಚೈನಾದವರಿಗೆ ಈಗಿನ ಯುದ್ಧ ಪ್ರಕರಣದಲ್ಲಿ ಜಯಲಾಭವೇ ದೊರೆತೀತು; ಬಳಿಕ ಅವರು ಜಪಾನಿನವರೊಡನೆ ತಮ್ಮ ಇಷ್ಟಾನುಸಾರವಾದ ತಹನಾಮೆಯನ್ನು ಮಾಡಿಕೊಳ್ಳುವಂತಾಗುವುದು. ಈ ರೀತಿಯಾಗಿ ಚೈನಾದವರು ತಮ್ಮ ಜನಾಂಗವನ್ನು ಪುನಸ್ಸೃಜನೆ ಮಾಡಿಕೊಂಡು ಪೂರ್ವರಾಜ್ಯಗಳಲ್ಲಿ ಎಲ್ಲರಿಗಿಂತ ಮೇಲ್ಮೆಯನ್ನು ಪಡೆದವರಾಗುತ್ತಾರೆ.

ಇಂದಿನ ಚೈನಾ ಜಪಾನು ಯುದ್ಧವು ಚೈನಾದಲ್ಲಿ ಒಂದು ಕ್ರಾಂತಿಯನ್ನು ಮಾಡಿ ಶಿಥಿಲವಾಗಿದ್ದ ಚೈನೀಯರು ವ್ಯವಸ್ಥಿತ ರೀತಿಯಿಂದ ಒಟ್ಟುಗೂಡಿಸಲು ಅನುಮಾಡಿತು. ಚೈನೀಯರು ರಾಷ್ಟ್ರಸೇವಾಸಕ್ತರು. ದೇಶಕ್ಕಾಗಿ ಪ್ರಾಣವನ್ನೂ ಸಹ ತೊರೆಯಲು ಹಿಂಜರಿಯರು ಎಂಬ ಭಾವನೆಯು ಇತರ ರಾಷ್ಟ್ರಗಳ ಚಿತ್ತಭಿತ್ತಿಯಲ್ಲಿ ಕೆತ್ತಲ್ಪಟ್ಟಿತು. ಆದ್ದರಿಂದ ಚೈನಾ ಯುದ್ಧದಿಂದಾಗಿ ಚೈನೀಯರ ಪ್ರತಿಷ್ಠೆ ಹಾಗೂ ಪ್ರಗತಿಯು [illegible] ಯುಕ್ತಿ ವಿಶೇಷವಿಲ್ಲ.

ಪಾನನಿರೋಧ ಜರ್ಮನಿಯಲ್ಲಿ.

ಇಂದು ಜರ್ಮನಿಯಲ್ಲಿ ಕೈಕೊಂಡಿರುವ ಅತ್ಯನೇಕ ಸುಧಾರಣಾ ಕಾರ್ಯಕ್ರಮಗಳಲ್ಲಿ ಪಾನನಿರೋಧವು ಒಂದು. ಅಲ್ಲಿ ಪಾನನಿರೋಧದ ಬಗ್ಗೆ ಕೈಕೊಂಡಿರುವ ಮಾರ್ಗವು ಅನುಕರಣೀಯವಿದೆ.

ಪಾನನಿರೋಧದ ಬಗ್ಗೆ 14 ರಿಂದ 21 ವಯಸ್ಸಿನೊಳಗಿನ ಯುವಕ ಯುವತಿಯರ ಸಂಘ ಒಂದನ್ನು ಏರ್ಪಡಿಸಿ ಅದಕ್ಕೆ 'ಹಿಟ್ಲರ್ ಯುವಕ ಸಂಸ್ಥೆ' ಯೆಂಬ ಹೆಸರಿಟ್ಟು ಮಾದಕ ಪಾನೀಯಗಳ ಹಾಗೂ ಅಮಲು ಪದಾರ್ಥಗಳ ವಿರೋಧ ಪ್ರಚಾರ ಕೈಕೊಂಡಿರುವರು. ಈಗ [illegible] ಈ

ಅಂತರ ರಾಷ್ಟ್ರ ರಾಜಕಾರಣದಲ್ಲಿ ಎಷ್ಟೆಲ್ಲ ಗೊಂದಲವಿದ್ದರೂ, ಯುದ್ಧ ಹೂಡುವುದಕ್ಕೆ ಯಾರಿಗೂ ಧೈರ್ಯವಿಲ್ಲ. ಸರ್ವಾಧಿಕಾರಿಗಳು ಮಾತಿನ ಮಲ್ಲರು. ಪ್ರಜಾಪ್ರಭುತ್ವಗಳವರು ಇದು ವರೆಗೆ ರಣಹೇಡಿಗಳೆನಿಸಿಕೊಂಡರು. ಇತ್ತೀಚೆಗೆ ಸ್ವಲ್ಪ ಧೈರ್ಯ ಸ್ಥೈರ್ಯಗಳನ್ನು ಹೊಂದಿದಂತೆ ಭಾಸವಾಗುತ್ತಿರಲು ಸರ್ವಾಧಿಕಾರಿಗಳೇಕೆ ಆಲೋಚನಾ ಮಗ್ನರಾಗಿದ್ದಾರೆ? ಹೊಡೆಯುವುದಕ್ಕೆ ಮನಸ್ಸಿದೆ, ಧೈರ್ಯವಿಲ್ಲ. ಆದುದರಿಂದಲೇ ಈ ಪೇಚಾಟ ಎಂಬಂತೆ ತೋರುತ್ತದೆ.

ಸಂಸ್ಥೆಯಲ್ಲಿ 8,000,000 ಯುವಕ ಯುವತಿಯರು ಸದಸ್ಯರಾಗಿ ಸೇರಿರುವರು. ಈ ಯುವಕ ಯುವತಿಯರ ಸಮುದಾಯವು ಪ್ರಚಂಡವಾದ ಪ್ರಚಾರ ಕಾರ್ಯವನ್ನು ದೇಶದ ಉದ್ದಗಲಕ್ಕೂ ಕೈಕೊಂಡಿರುವದು.

ಅವರ ಈ ಕಾರ್ಯಕ್ರಮವು ಜಯಪ್ರದವಾದರೆ ಜರ್ಮನಿಯಲ್ಲಿ ಈ ಮಾದಕ ಪಾನೀಯಗಳಿಂದ ಮಾರ್ಪಟ್ಟ ಜನಾಂಗವು ಮಾಯವಾಗಿ ಹೃಷ್ಟಪುಷ್ಟವಾದ ಜನಾಂಗವು ತಲೆದೋರುವುದರಲ್ಲಿ ಸಂಶಯವಿಲ್ಲ. ಮಾದಕ ಪಾನೀಯಗಳಲ್ಲಿರುವ ವಿಷಪದಾರ್ಥಗಳೂ, ಹೊಗೇಸೊಪ್ಪಿನಲ್ಲಿರುವ ನಿಕೋಟಿನ್ ಎಂಬ ವಿಷಪದಾರ್ಥವು ಜನತೆಯ ಆರೋಗ್ಯಕ್ಕೆ ತೊಂದರೆ ಮಾಡುವದೆಂಬದು ನಿರ್ವಿವಾದ. ನಮ್ಮ ಭಾರತ ಭೂಮಿಯಲ್ಲಿ ಇದೀಗ ಸಿಗರೇಟು ಸಾರಾಯಿಗಳ ಹುಚ್ಚು ಸ್ತ್ರೀ ಸಮಾಜದಲ್ಲೂ ಬೆಳೆಯುತ್ತಿದೆ. ಸಿಗರೇಟು ಹೊಗೆಯನ್ನು ಆಕಾಶದಲ್ಲಿ ಬಿಡುತ್ತಾ ಬೀದಿಯಲ್ಲಿ ತಿರುಗುವ ಯುವತಿಯರೆಷ್ಟಿಲ್ಲ?

ಇಂಥಾ ಸಂದರ್ಭದಲ್ಲಿ ಜರ್ಮನಿಯು ಈ ದುರಭ್ಯಾಸವನ್ನು ಹೋಗಲಾಡಿಸಿ ಈ ದುಶ್ಚಟಗಳಿಂದ ನಿರ್ಲಿಪ್ತವಾದ ಹೊಸ ಜನಾಂಗವನ್ನು ತಯಾರಿಸುವದರಲ್ಲಿ ಜಯವನ್ನು ಪಡದರೆ ಅದು ಇನ್ನ ಪ್ರಜೆಗಳ ಹಿಂಸ ಧನೆಯಿಂದ ಮಾಡುತ್ತಿರುವ ಅನೇಕ ಯುದ್ಧಗಳನ್ನು ಜಯಿಸಿದಂತಾಯಿತು. ನಿಕೋಟಿನ್ ಬಹು ಶಕ್ತಿಯುಳ್ಳ ವಿಷ. ಅದರ ಒಂದು ತೊಟ್ಟು ಒಬ್ಬ ಮನುಷ್ಯನನ್ನು ಕೊಲ್ಲುವಷ್ಟು ಶಕ್ತಿಯುಳ್ಳದ್ದು. ಅಂಥಾದ್ದರಲ್ಲಿ ಅವುಗಳು ಹಿತದಾಯಕವೆಂದು ಪ್ರಕಟಿಸಿ ಸಿಗರೇಟು ಮೊದಲಾದ ಹೊಗೆ ಸೊಪ್ಪಿನ ವ್ಯಾಪಾರಕ್ಕೆ ಸಹಾಯಮಾಡುವುದು ಹಿತವಲ್ಲ.

ಆದ್ದರಿಂದ ಮಾದಕ ಪಾನೀಯಗಳ ಮತ್ತು ಅಮಲು ಪದಾರ್ಥಗಳನ್ನು ಸೇವಿಸಿ ನಿರ್ಬಲ ನಿಸ್ತೇಜರಾಗಿರುವ ಭಾರತ ಯುವಕ ಯುವತಿಯರು ಈ ದುಶ್ಚಾಳಿಯನ್ನು ತಡೆಗಟ್ಟಿ ಮುಂದಕ್ಕೆ ಒಂದು ಹೊಸ ಜನಾಂಗವನ್ನೇ ನಿರ್ಮಿಸುವದು ಅಗತ್ಯವಿದೆ. ಯಾಕೆಂದರೆ ಆರೋಗ್ಯಕರವಾದ ಶರೀರವು ಹೇಗೆ ಮಾನವನ ಪ್ರಗತಿಗೆ ಕಾರಣವೋ, ಹಾಗೆಯೇ ದೃಢಕಾಯರಿಂದ ಕೂಡಿದ ಜನಾಂಗವೂ ಪ್ರಗತಿ ಪಥದಲ್ಲಿ ನಡೆಯುವದೆಂಬುದೂ ನಿರ್ವಿವಾದ.

ಪ್ರಧಾನ ರಾಷ್ಟ್ರಗಳ ಬಲಾಬಲ.

ಪ್ರಜಾಪ್ರಭುತ್ವಗಳೂ ಸರ್ವಾಧಿಕಾರಿಗಳೂ

ಫ್ರಾನ್ಸಿನ ಸೈನ್ಯ.

ಯುರೋಪಿನ ಪ್ರಧಾನ ರಾಷ್ಟ್ರಗಳ ಬಲಾಬಲಗಳನ್ನು ಪರೀಕ್ಷಿಸಿದಲ್ಲಿ, ಕೇವಲ ಪರಾಕ್ರಮದಲ್ಲಿ ಫ್ರೆಂಚ ಸೈನ್ಯವು ಅಪ್ರತಿಮವಾಗಿದೆ. 6½ ಲಕ್ಷ ಸೈನಿಕರು ಸದಾ ಸಿದ್ಧರಾಗಿರುವರು. ಯುದ್ಧ ಪ್ರಾರಂಭವಾಗಿ ಸ್ವಲ್ಪ ಕಾಲದೊಳಗೆ 7½ ಅಥವಾ 8 ಲಕ್ಷದ ವರೆಗೆ ಸೈನಿಕ ಸಂಖ್ಯೆಯನ್ನು ಹೆಚ್ಚಿಸಬಲ್ಲರು. ಅಲ್ಲದೆ 5½ ಮಿಲಿಯ ಬೇರೆ ಸೈನಿಕರಿರುವರು. ಎಂದರೆ, ಇವರು ಒಂದೆರಡು ವರ್ಷದ ತರಬೇತಿ ಹೊಂದಿ, ಅವಶ್ಯ ಸಂದರ್ಭಗಳಲ್ಲಿ ಯುದ್ಧ ರಂಗಕ್ಕೆ ಬರಬಹುದು.

ಸೇನಾಬಲದಲ್ಲಿ ಇಂಗ್ಲೆಂಡಾಗಲಿ, ಅಮೇರಿಕವಾಗಲಿ, ಫ್ರಾನ್ಸಿಗೆ ಸರಿಸಾಟಿಯಾಗಿಲ್ಲ. ಕಳೆದ ಮಹಾಯುದ್ಧದಲ್ಲಿ ಫ್ರೆಂಚ ಸೈನಿಕರೇ ಹೆಚ್ಚಾಗಿ ಕಾದಾಡಬೇಕಾಯಿತು; ಅವರ ನಾಶವೇ ಹೆಚ್ಚಾಯಿತು. ಈ ಬಾರಿಯೂ ಹಾಗಾಗಬಾರದೆಂದು ಫ್ರೆಂಚರ ಅಭಿಪ್ರಾಯವಿರುವುದು. ಆದುದರಿಂದಲೆ, ಇಂಗ್ಲೆಂಡಿನಲ್ಲಿಯೂ ಅಮೇರಿಕದಲ್ಲಿಯೂ ಸೈನಿಕ ಸಂಗ್ರಹವಾಗುತ್ತಿದೆ. ಸೈನ್ಯವೆಷ್ಟು ಪ್ರಬಲವಾಗಿದ್ದರೂ, ಫ್ರಾನ್ಸಿನ ಸುತ್ತಲೂ ಶತ್ರು ಶಿಬಿರಗಳಿವೆ. ಜರ್ಮನಿ ಫ್ರಾನ್ಸುಗಳ ಗಡಿನಾಡಿನಲ್ಲಿ, ಮೆಗಿನೊಟ್ ಲೈನ್ ಎಂಬ ಅಭೇದ್ಯ ಕೋಟಾವಲಯ ವಿದ್ದರೂ, ಇದನ್ನು ಮುರಿಯುವುದು ಅಸಂಭವ್ಯವಲ್ಲವಂತೆ. ಇನ್ನೊಂದೆಡೆ ಫ್ರಾಂಕೋ ಸಹಾಯಕರ ಸೇನೆಗಳು—ಸ್ಪೈನಿನಲ್ಲಿ—ಕಾದು ನಿಂತಿವೆ. ಮತ್ತೊಂದೆಡೆ ಇಟಲಿಯ ಸೈನಿಕರು ದಾಳಿಯಿಡಬಹುದು. ಹೀಗಾದ ಪ್ರಯುಕ್ತ ಫ್ರೆಂಚ ಸೈನಿಕರಿಗೆ ಸ್ವದೇಶ ಸಂರಕ್ಷಣ ಮಾಡ ವುದಷ್ಟೆ ಸಾಧ್ಯವಾದೀತು. ಅವರ ವಿಮಾನ ಸೇನೆಯು ಜರ್ಮನಿಯದರಷ್ಟು ಪ್ರಬಲವಲ್ಲ. ನೌಕಾಬಲವು ಪ್ರಬಲವ ಗಿದ್ದರೂ ಸಮುದ್ರ ಯುದ್ಧದ ಮಟ್ಟಿಗೆ ಇದರ ಪ್ರಯೋಗವಾಗಬಹುದು. ದೀರ್ಘ ಕಾಲದ ಯುದ್ಧದಲ್ಲಿ ಇವುಗಳ ಶಕ್ತಿ ಹೆಚ್ಚಾಗಿ ತೋರಬಹುದು. ವಸಾಹತುಗಳಲ್ಲಿ ಸೈನ್ಯಗಳಿವೆ. ಆದರೆ ಇವು ಅಲ್ಲಿಯ ವಿಪ್ಲವಗಳನ್ನು ಹೋಗಲಾಡಿಸುವುದಕ್ಕೇ ಬೇಕಾಗಬಹುದು.

ಜರ್ಮನಿಯ ಬಲ.

ಸೈನಿಕ ಸಂಖ್ಯೆಯಲ್ಲಿ ಜರ್ಮನಿಯು ಅಗ್ರಭಾಗ ವಹಿಸುವುದು. ಫ್ರೆಂಚ್ ಜನಸಂಖ್ಯೆ ಸುಮಾರು 4½ ಕೋಟಿಯೊಳಗಿದ್ದು ಜರ್ಮನರದು 8 ಕೋಟಿ. ಸೈನಿಕ ಸಂಖ್ಯಾ ಪ್ರಮಾಣವು ಇದೇ ರೀತಿಯಲ್ಲಿದೆ ಎಂದು ಭಾವಿಸಬಹುದು. ಇರುವ ಸೈನಿಕರೇ ಫ್ರೆಂಚ್ ಸೈನಿಕರ 1½ ಪಾಲಿನಷ್ಟು ಹೆಚ್ಚಾಗಿರುವರು. ಜರ್ಮನಿಗೆ ದೊಡ್ಡ ನೌಕೆಯಿಲ್ಲ. ವಿಮಾನ ಸಂಖ್ಯೆಯಲ್ಲಿದು ರಷ್ಯಕ್ಕೆ ಸೇರಿದ್ದ ವಿಮಾನಗಳ ಕೀರ್ತಿ ಇಂದು ಜರ್ಮನಿಯದಾಗಿರುವದಂತೆ. ತಿಂಗಳೊಂದಕ್ಕೆ ಸರಾಸರಿ 500 ವಿಮಾನಗಳು ತಯಾರಾಗುತ್ತಿವೆ. ಜೆಕೊಸ್ಲೊವೇಕಿಯದ ಧ್ವಂಸದಿಂದ 1500 ಉತ್ಕೃಷ್ಟ ಯುದ್ಧ ವಿಮಾನಗಳು ಜರ್ಮನಿಯ ವಶವಾದುವು. ಅಲ್ಲದೆ ರೋಗಾಣುಗಳ ಮೂಲಕ, ವಿಷವಾಯುಗಳ ಮೂಲಕ ಯುದ್ಧ ಮಾಡುವುದರಲ್ಲಿ ಜರ್ಮನಿಯು ಅದ್ವಿತೀಯವಾಗಿರುವುದೆಂದು ಊಹಿಸಲ್ಪಟ್ಟಿದೆ. ಈ ಶಕ್ತಿಯೊಂದೇ ಪಶ್ಚಿಮ ದೇಶಗಳನ್ನು ದಿಗಿಲುಗೊಳಿಸಿದೆ. ಸರಿಯಾದ ಆಹಾರ ಸಾಮಗ್ರಿಗಳಿಲ್ಲದಿರುವುದೂ ಯುದ್ಧೋಪಕರಣ ನಿರ್ಮಾಣದ ಅಸಿದ್ಧ ವಸ್ತುಗಳು ಸಾಕಷ್ಟು ಇಲ್ಲದಿರುವುದೂ ಜರ್ಮನಿಯ ದೌರ್ಬಲ್ಯಗಳಂತೆ. ಕ್ಷಿಪ್ರ ಯುದ್ಧದಲ್ಲಿ ಜರ್ಮನಿ ಒಮ್ಮೆ ಜಯಹೊಂದಬಹುದು. ವಿಳಂಬಿತ ಸಮರದಲ್ಲಿ ಅದರ ಪರಾಭವವು ಸಿದ್ಧ.

ಜರ್ಮನಿಯ ಉತ್ಕರ್ಷಕ್ಕೆ ಕಾರಣಗಳು:—(1) ಅಪಾರವಾದ ಸೈನ್ಯ (2) ಫ್ರಾನ್ಸು—ಇಂಗ್ಲೆಂಡುಗಳ ಗಡಿನಾಡಿನಲ್ಲಿರುವ ಮೇಗಿನೊಟ್ ಲೈನಿಗೆ ಇದಿರಾಗಿ ಜರ್ಮನರು ಕಟ್ಟಿರುವ ಕೋಟೆ. ಇದು ಫ್ರೆಂಚರ ಕೋಟೆಗಳಿಗಿಂತಲೂ ಪ್ರಬಲವಾಗಿರುವುದಂತೆ. (3) ಫಿರಂಗಿಗಳು. ಕೆಲ ಸಮಯದ ಹಿಂದೆ ಬರ್ಲಿನಿನಲ್ಲಿ ಸೇನಾ ಪ್ರದರ್ಶನವೊಂದು ನಡೆಯಿತು. ಸೇನೆಗಳಿಗೆ ಒದಗಿಸಲಾಗುವ ಭಯಂಕರವಾದೊಂದು ಫಿರಂಗಿಯು ಆಗ ಪ್ರದರ್ಶಿಸಲಾಯಿತು. ಇದರಿಂದ 20 ಮೈಲುಗಳ ದೂರಕ್ಕೆ ಗುಂಡು ಹಾರಿಸಬಹುದಂತೆ. (4) ಸೈನಿಕ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಕಷ್ಟವೇನೂ ಇಲ್ಲ. ಸಕಲರೂ ಯುದ್ಧ ವಿದ್ಯೆಯನ್ನು ಖಡ್ಡಾಯವಾಗಿ ಕಲಿಯಬೇಕೆಂಬ ನಿರ್ಬಂಧ ಅಲ್ಲಿದೆ.

ಇಟಲಿಯ ಬಲ

ಇಟಲಿಯ ಸೇನಾ ಬಲಗಳ ಕುರಿತು ಸರಿಯಾದ ಊಹನೆಯಾಗಿಲ್ಲ. ಸುಮಾರು 4½ ಲಕ್ಷ ಸೈನಿಕರು ಸಿದ್ಧರಾಗಿರುವರು. ಎಬಿಸೀನಿಯಾ, ಲಿಬಿಯಗಳಲ್ಲಿ ಒಂದೊಂದು ಲಕ್ಷ ಸೈನಿಕರಿರಬಹುದು. ಇವರ ವಿಮಾನಬಲವು ಅಪಾರವಾಗಿದೆ. ಆದರೆ ಸೈನಿಕರ ಯುದ್ಧವಿದ್ಯಾನಿಪುಣತೆಯನ್ನಿದುವರೆಗೂ ಒರೆಗೆ ಹಚ್ಚಿ ಪರೀಕ್ಷಿಸಿದವರಿಲ್ಲ. ನೌಕಾ ಬಲವು ಉತ್ತಮವಾಗಿದ್ದರೂ, ಆಂಗ್ಲ—ಫ್ರೆಂಚರ ಬಲದ ಮುಂದೆ ಇದು ಗಣನೀಯವಲ್ಲ. ಬೇಕಾದಷ್ಟು ಸೈನಿಕರನ್ನು ಅಗಿಂದಾಗ ಸಂಗ್ರಹಿಸಬಹುದಾದರೂ ಜರ್ಮನಿಯಲ್ಲಿಯೂ, ಇಟಲಿಯಲ್ಲಿಯೂ ತರಬೇತಿ ಹೊಂದಿ ತಯಾರಾಗಿರುವ ಸೈನಿಕರು ಕಡಿಮೆಯಂತೆ. ಆಹಾರ ವಸ್ತು ಕಾಲದಲ್ಲಿ ಜರ್ಮನಿಯೇ ಇಟಲಿಗೆ ಸಹಾಯ ಮಾಡಬೇಕಾಗಿ ಬರುವುದಂತೆ.

ರಷ್ಯ—ಅಮೇರಿಕ—ಇಂಗ್ಲೆಂಡು.

ರಷ್ಯದಲ್ಲಿ ದೊಡ್ಡ ಸೇನೆ ಇದೆ. ವಿಮಾನಬಲವಿದೆ. ಪೂರ್ವದಲ್ಲಿ ಜಪಾನಿನೊಡನೆಯೂ ಸೆಣಸಾಡುವ ಪ್ರಸಂಗ ಬರಬಹುದಾದುದರಿಂದ ರಷ್ಯದ ಬಲಗಳು ವಿಭಾಗ ಹೊಂದಬಹುದು. ಶಸ್ತ್ರಗಳಿಗೆ ಬೇರಬೇಕಾದ ಅಸಿದ್ಧ ವಸ್ತುಗಳು ಅಪಾರವಾಗಿರುವುವು. ಇಂಗ್ಲೆಂಡು ದಿನೇ ದಿನೇ ಪ್ರಬಲವಾಗುತ್ತಿದೆ. ಅದರ ನೌಕೆ ಇಂದಿಗೂ ಲೋಕದಲ್ಲಿ ಅತಿ ಶ್ರೇಷ್ಠ. ಆದರೆ ಸೈನಿಕರ ಸಂಖ್ಯೆ ಎಲ್ಲರಿಗೂ. ಅಮೇರಿಕಕ್ಕೂ ಇದೇ ಸೂತ್ರವು ಅನ್ವಯಿಸುವುದು. ಆದರೆ ಅಮೇರಿಕವು ಕುಬೇರರ ದೇಶವಾಗಿರುವುದರಿಂದ ಪ್ರಜಾ ಪ್ರಭುತ್ವಗಳಿಗೆ ಎಷ್ಟು ಬೇಕಾದರೂ ಸಹಾಯ ಕೊಡುವ ಶಕ್ತಿ ಅದಕ್ಕಿದೆ.

ಒಟ್ಟಿನ ಮೇಲೆ ಹೇಳುವುದಾದರೆ, ಕ್ಷಿಪ್ರ ಯುದ್ಧದಲ್ಲಿ ಸರ್ವಾಧಿಕಾರಿಗಳಿಗೆ ಶ್ರೇಷ್ಠತೆ ಕಂಡು ಬರಬಹುದು. ದೀರ್ಘ ಕಾಲದಲ್ಲಿ ಅವರ ಪತನವು ನಿಶ್ಚಯ. ಮತ್ತಾವುದಲ್ಲದಿದ್ದರೂ ಅನ್ನ ಬಸ್ತ್ರಗಳು ಅವರನ್ನು ಸೋಲಿಸಿಬಿಡುವುವು. —ರಾ. ಬ

ಗಾಂಧೀಜಿಯವರು ರಾಜಕೋಟೆಯಲ್ಲಿ.

ಪೂಜ್ಯ ಗಾಂಧೀಜಿಯ ಪರ್ಸನಲ್ ಕಾರ್ಯದರ್ಶಿ ಮಹದೇವ ದೇಸಾಯಿಯವರೊಡನೆ ತಾ 12ರಲ್ಲಿ ರಾಜಕೋಟೆಗೆ ತಲುಪಿರುವರು. ಅಸೌಖ್ಯದ ದೆಸೆಯಿಂದ ಕಸ್ತೂರಿಬಾಯಿ ಗಾಂಧಿಯವರು ಅಲ್ಲಿಗೆ ಹೋಗಲಿಲ್ಲ. ಗಾಂಧೀಜಿಯವರು ಪುನಹ ರಾಜಕೋಟೆಯ ರಾಜಕೀಯ ವ್ಯವಹಾರದ ಸೂತ್ರ ಸಂಚಾಲಕರಾಗಬಹುದೆಂದು ಊಹಿಸಲಾಗಿದೆ. ಅವರು ಎರಡು ತಿಂಗಳುಗಳ ವರೆಗೆ ರಾಜಕೋಟೆಯಲ್ಲೇ ಇರುವರೆಂದೂ, ಅವರೆಗೆ ರಾಜಕೋಟೆಯ ಸಮಸ್ತ ಭಿನ್ನಬೇಧಗಳನ್ನು ಹೋಗಲಾಡಿಸಿ ಅಲ್ಲಿ ಅಹಿಂಸಾ ತತ್ವಕ್ಕೆ ವಿಜಯವು ಪ್ರಾಪ್ತವಾಗುವಂತೆ ಮಾಡುವರೆಂದೂ ಭಾರತೀಯರೆಲ್ಲರೂ ಹಾರೈಸಿದರೆಂದು ನಂಬಲಾಗಿದೆ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

4 **Ludhiana.**

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ **ಮಾಡಿದ ಉದ್ಯೋಗ**	ರೂ.	2,53,15,500.
1937ರಲ್ಲಿ **ಪೂರ್ತಿಯಾದ ಉದ್ಯೋಗ**	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, **ಸೌತ್ ಪರೇಡ್, ಬೆಂಗಳೂರು.**

52–10

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕರೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕರೆ.

ಮತ್ತು ಕಂಪನಿ,

(52–24) ಗಿರಗಾಂವ, ಮುಂಬಯಿ ೪,

· ನೋ ೕ ಟೀ ಸು ·

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸರ್ವ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಬೋಯಪ್ಪನವರು.

ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು.

ಮೆ. **ಕೆ.** ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. **ಕೆ.** ಮುದ್ದಮ್ಮಯ್ಯನವರು.

ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. **ಜಿ:** ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಮ್ಮನವರು.

ಸೋಮವಾರಪೇಟೆ—ಮೆ ಕೆ. ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

"ಕೊಡಗು" ಪತ್ರಿಕೆಯ

ಚಂದಾದಾರರಲ್ಲಿ

ವಿನಂತಿ.

ಮಹನೀಯರೆ:

ಮರಡಿ ವರ್ಷವು ಈ ಮೇ ತಾರೀಕು 31ಕ್ಕೆ ಅಂತ್ಯವಾಗುವದರಿಂದ ಅದರೊಳಗೆ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ವವಸ ಭಂಡಾರಗಳಲ್ಲಿ ರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ **ಪ್ರತಿ**ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮುಮುಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ಮಾರಲ್ಪಡುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅದವ ಹೆಚ್ಚಿನ ಅವದಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1 9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್ –ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ
ಟ್ರೆಜರರ್ —ರಾವ್ ಬಹದ್ದೂರ್ ಪಿ ದೇವಯ್ಯನವರು
ಸೆಕ್ರೆಟರಿ:—ಮ ಎಸ್ ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! ಜ್ಞಾನ ಸಂಚಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35	ರೂ 22
6 ತಿಂಗಳಿಗ—	,, 100	,, 35	,, 22	,, 13
3 ತಿಂಗಳಿಗೆ—	,, 60	,, 20	,, 13	,, 8
1 ತಿಂಗಳಿಗೆ—	,, 25	,, 10	,, 6	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ಪ್ರಾಪ್ತಪಡಿಸುವ ಒಂದು ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಆರೋಗ್ಯವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(52-19)

Printed & Published by P. I. Belliappa. at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಸಿ. ಐ. ಬೆಳ್ಯಪ್ಪ.
ತಾ. ೨೬—೫—೧೯೩೯.
ವಾರ್ಷಿಕ ಚಂದಾ ರೂ. ೩-೮-೦
ಸಂಪುಟ ೧೮] [ಸಂಚಿಕೆ ೫೧

THE CANARA BANKING CORPORATION, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-, 100/-, 500/-, 1,000/- & 5,000/-
are now issued at
all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-24

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಪಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಸಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಜಿಸ್ಟರ್ಡ್.)
52-13 **ಮೆಡಿಕಲ್ ಪ್ರಾಕ್ಟಿಷನರ್, ವೀರಾಜಪೇಟೆ.**

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕಾಲಂ
26 ಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖಗಳಿಂದ ತಿಳಿದುಕೊಳ್ಳಬಹುದು

52–3

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧವ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯೂ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–35)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಢಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

12–31

ಈ ವಾರದ ಕಥೆ.

ಉದ್ಧಾರ.

(ಲೇಖಕ:- ಬಿ. ಕೆ. ರಾಮಕೃಷ್ಣ ಶರ್ಮಾ.)

(ಕಳೆದ ವಾರದಿಂದ ಮುಂದುವರಿದದ್ದು.)

ದೃಶ್ಯ ೩.

ವಿಶ್ವೇಶ್ವನು ಓರ್ವ ಧನಿಷ್ಟ ಹಾಗೂ ಸದ್ಗುಣ ಸಂಪನ್ನ ಯುವಕನಾಗಿದ್ದನು. ಎಲ್ಲವರೂ ಅವನನ್ನು ವಿಶುವೆಂದು ಕರೆಯುತ್ತಿದ್ದರು. ವಿಶುವು ಆದೇ ಬಿ. ಎಲ್. ಮಾಡಿಕೊಂಡು ಮನೆ ಸೇರಿದ್ದನು. ಲಾ ಓದುತ್ತಿರುವಾಗಲೇ ವಿಶುವಿಗೆ ಕಮಲೆಯ ಪರಿಚಯವಾಗಿತ್ತು. ಹಾಗೂ ಅವರೀರ್ವರಲ್ಲಿ ಪ್ರೇಮಾಂಕುರವಾಗಿದ್ದಿತು. ವಿಶುವು ಪರೀಕ್ಷೆ ಮುಗಿಸಿ ಮನೆಗೆ ಹೊರಡುವ ಸಮಯದಲ್ಲಿ ಕಮಲೆಯ ವಿವಾಹದ ಪ್ರಸ್ತಾಪವನ್ನು ಅವಳ ತಂದೆ ಶ್ರೀನಿವಾಸರಾಯರೊಡನೆ ಮಾಡಿದ್ದನು. ಆದರೆ ಧನಪಿಶಾಚಿಯಿಂದಾವೃತರಾದ ರಾಯರು ಆ ವಿವಾಹದಿಂದ ತನಗೇನೂ ಲಾಭವಿಲ್ಲವೆಂದು ತಿಳಿದು ನಿರಾಕರಿಸಿದ್ದರು. ಇದರಿಂದ ನಿರಾಶನಾಗಿ ವಿಶುವು ಮನೆ ಸೇರಿದ್ದನು. ಆದರೆ ಕಮಲೆಯನ್ನು ಮರೆಯುವುದು ಮಾತ್ರ ಅವನಿಂದಾಗಲಿಲ್ಲ. ಕಮಲೆಯೂ ಕೂಡ ಅವನನ್ನೇ ಸೇರಬೇಕೆಂಬ ಪ್ರತಿಜ್ಞೆಯನ್ನೂ ಮಾಡಿಬಿಟ್ಟಿದ್ದಳು.

ಒಂದು ದಿನ ಸಾಯಂಕಾಲ ಐದು ಗಂಟೆ ಸಮಯವಾಗಿದ್ದಿತು. ವಿಶುವು ತನ್ನ ಸುಸಜ್ಜಿತ ಕೋಣೆಯೊಂದರಲ್ಲಿ ಆರಾಮ ಕುರ್ಚಿಯ ಮೇಲೆ ಬಿದ್ದುಕೊಂಡಿದ್ದನು. ಅವನೇನೋ ದೊಡ್ಡ ವಿಚಾರದಲ್ಲಿ ಮಗ್ನನಾಗಿದ್ದನು. ಅಂತೆಯೇ ದಾಸಿ ಬಂದು ದೀಪ ಹಚ್ಚಿ ಹೋದದ್ದೂ ಕೂಡ ಅವನಿಗೆ ತಿಳಿದಿರಲಿಲ್ಲ.

ಸ್ವಲ್ಪ ಹೊತ್ತಿನಲ್ಲೇ ಅಂಚೆಯವನು ಬಂದು ವಿಶುವನ್ನು ಕರೆದು ಅವನ ವಿಳಾಸಕ್ಕಿದ್ದ ಕಾಗದ ಒಂದನ್ನು ಕೊಟ್ಟು ಹೋದನು. ಲಕ್ಕೋಟೆಯ ವಿಳಾಸವನ್ನು ನೋಡಿ ವಿಶುವಿಗೆ ಅದು ತನಗೆ ದೊರೆತ ವಿಷಯದಲ್ಲಿ ಬಹಳ ಆಶ್ಚರ್ಯವಾಯಿತು. ಏಕೆಂದರೆ ವಿಳಾಸದಲ್ಲಿ ಕೇವಲ ಇಷ್ಟೇ ಬರೆದಿದ್ದಿತು –'ಬಿ. ವಿಶ್ವೇಶ್ವರರಾವ್, ಬಿ. ಎ. ಬಿ. ಎಲ್., ಮೈಸೂರು. ಆದರೆ ಕಾಗದವು ಬೆಂಗಳೂರಿಂದ ಬಂದುದೆಂದು ಕೂಡಲೆ ಕಂಡುಕೊಂಡನು. ವಿಶುವು ಲಕ್ಕೋಟೆಯನ್ನು ಒಡೆದು ಕಾಗದವನ್ನು ಓದುತ್ತಲೇ ಅವನಿಗೆ ಸಖೇದಾನಂದಾಶ್ಚರ್ಯಗಳು ಒಮ್ಮೆಲೇ ಉಂಟಾದವು. ಅವನು ಸ್ತಂಭಿತನಾಗಿ ಕಾಗದವನ್ನು ಪುನಃ ಮತ್ತೊಮ್ಮೆ ಓದಲಾರಂಭಿಸಿದನು. ಕಾಗದದ ಅಭಿಪ್ರಾಯವು ಹೀಗಿದ್ದಿತು:–

ಪ್ರಿಯಕರಾ,

ನನ್ನ ಈ ಸಂಭೋದನೆಯಿಂದ ನಿಮಗೆ ಆಶ್ಚರ್ಯವೆನಿಸದಿರದು ಆದರೆ ನಾನು ಬೇಕೆಂದೇ ಹೀಗೆ ಸಂಭೋಧಿಸಿರುವೆನು. ನೀವಂತೂ ನನ್ನನ್ನು ಈ ವರೆಗೆ ಮರೆತಿರಬಹುದು. ಆದರೆ ನಾನು ನಿಮ್ಮ ವಿರಹ ವ್ಯಥೆಯಿಂದ ತಳಮಳಿಸುತ್ತಿರುವೆನು. ಅಲ್ಲದೆ ನನ್ನ ತಂದೆಯ ಪೈಶಾಚಿಕ ವೃತ್ತಿಯಿಂದಂತೂ ನಾನು ತೀರಾ ಕಂಗಾಲಾಗಿರುವೆನು. ನನ್ನ ತಂದೆಯು ನನ್ನನ್ನು ಈಗಾಗಲೇ ಒಬ್ಬ ನೀಚ ಹಾಗೂ ವೃದ್ಧ ಡಾಕ್ಟರನ ಕೊರಳಿಗೆ ಕಟ್ಟಬೇಕೆಂದಿರುವನು ಮತ್ತು ಆ ಕಾರ್ಯವು ಮುಂದಿನ ಭಾನುವಾರವೇ ಆಗಲಿರುವುದು. ಆದುದರಿಂದ ಪ್ರಿಯಕರಾ! ನನ್ನಲ್ಲಿ ಕರುಣವಿಟ್ಟು ನೀವು ಆ ಕಟುಕನ ಕೈಯಿಂದ ಮದುವೆಯ ಮುಂಚಿತವೇ ತಪ್ಪಿಸದಿದ್ದರೆ ಬಾವಿಗೆ ಬಿದ್ದಾದ್ದರೂ ಅವನಿಂದ ಪಾರಾಗುವೆನು. ಅನಾಥೆಯಾದ ನನ್ನಲ್ಲಿ ಕೃಪೆಯಿಟ್ಟು ಓರ್ವ ಅಬಲೆಯು ಹತ್ಯಾದೋಷಕ್ಕೆ ಭಾಗಿಗಳಾಗಬಾರದಾಗಿ ಸೆರೆಗೊಡ್ಡಿ ಬೇಡಿಕೊಳ್ಳುವುದಲ್ಲದೆ, ಅವಶ್ಯವಾಗಿ ತಾವು ಬಂದು ನನ್ನನ್ನು ಉದ್ಧರಿಸುವಿರಾಗಿ ತಿಳಿದು ನಾನು ನಿಶ್ಚಿಂತಳಾಗಿರುವೆನು.

ಇಂತಿ ತಮ್ಮವಳಾದ,
ಕಮಲಾ.

ಕಾಗದವನ್ನು ಓದಿ ವಿಶುವು ಕಿಂಕರ್ತವ್ಯ ವಿಮೂಢನಾಗಿ ಕುಳಿತುಬಿಟ್ಟನು. ಮುಂದೇನು ಮಾಡಬೇಕೆಂಬ ವಿಚಾರವೇ ಅವನಿಗೆ ಹೊಳೆಯಲಿಲ್ಲ. ಕಡೆಗೆ ಅವನು ದೇವರಲ್ಲಿ ಭರವಸೆಯಿಟ್ಟು ಕೂಡಲೇ ಬಂದು ಕಾಗದವನ್ನು ಬರೆದು ತನ್ನ ಮನೆಯ ಸಮೀಪದಲ್ಲಿದ್ದ ಅಂಚೆ ಪೆಟ್ಟಿಗೆಯಲ್ಲಿ ಹಾಕಿಬಿಟ್ಟನು.

ದೃಶ್ಯ ೪.

ಇತ್ತ ರಾಯರ ಮನೆಯು ಚಪ್ಪರ ತಳಿರು ತೋರಣಗಳಿಂದ ಅಲಂಕೃತವಾಗಿದ್ದಿತು. ರಾಯರ ಹಲ ಕೆಲವು ಬಂಧುಗಳು ಬಂದು ರಾಯರಿಗೆ ಕೆಲಸಗಳಲ್ಲಿ ತಮ್ಮಿಂದಾದ ಸಹಾಯ ಮಾಡುತ್ತಿದ್ದರು. ಯಾವತ್ತೂ ರಾಯರ ಎಲ್ಲಾ ಬಂಧು ಬಳಗದವರಿಗೂ ಆಮಂತ್ರಣವು ಮುಟ್ಟಿದ್ದಿತು. ರಾಯರಿಗಂತೂ ಮನೆಯಲ್ಲಿ ಬಿಡುವೇ ಇಲ್ಲ. ಮನೆಯಲ್ಲಿ ಮದುವೆ; ಅಲ್ಲದೆ ಮಗಳ ಮದುವೆ! ಅದರಲ್ಲೂ ನಾಲ್ಕು ಸಾವಿರ ಜೇಬಿಗ ಬೀಳುವ ಸುಸಂದರ್ಭದ ಮದುವೆ!! ಎಂದ ಮೇಲೆ ಬಿಡುವಾದರೂ ಎಂತಿರಬೇಕು?

ಕಮಲೆಯಾದರೂ ಮೊದಲಿನಂತೆ ಹಟಮಾರಿಯಾಗಿಲ್ಲ. ಅವಳಲ್ಲಿ ಯಾವ ತರದ ಚಿಂತಾಜನಕ ಚಿಹ್ನೆಯೂ ಕಾಣಬರುವುದಿಲ್ಲ. ಅವಳು ಯಾವಾಗಲೂ ಸಂತೋಷದಲ್ಲೇ ಇರುವಳು. ಮದುವೆಗೆ ಮಗಳ ಸಮ್ಮತಿಯಯನ್ನು ತಿಳಿದಂತೂ ರಾಯರು ಸಂತೋಷದಿಂದ ತಲ್ಲೀನರಾಗಿದ್ದರು.

ಕಮಲೆಯು ಮದುವೆಗೆ ಸಮ್ಮತಿಸಿರುವ ಸುಸಮಾಚಾರವು ಡಾಕ್ಟರಿಗೆ ತಿಳಿದ ಮೇಲಂತೂ ಅವರಿಗೆ ಸ್ವರ್ಗಕ್ಕೆ ಮೂರೇ ಅಡಿ ಬಾಕಿ ಎಂದು ಬೋಧೆಯಾಯಿತು. ಅವರೂ ಕೂಡ ಮದುವೆಗೆ ಬೇಕಾದ ಎಲ್ಲಾ ಸಲಕರಣೆಗಳನ್ನು ಸಿದ್ಧ ಮಾಡಿದರು. ಹಾಗೂ ತನ್ನ ಹಲ ಕೆಲವು ಬಂಧು ಬಳಗದವರಿಗೆ ಆಮಂತ್ರಣಗಳನ್ನು ಕಳುಹಿಸಿದರು. ಡಾಕ್ಟರ್ ಮಗ ರಾಮುವಂತೂ ತನಗೊಬ್ಬ ಚಿಕ್ಕಮ್ಮನು ಬರುವಳೆಂದು ತಿಳಿದು ಕುಣಿಯಲಾರಂಭಿಸಿದನು. ಹಾಗೂ ಹೀಗೂ ಮದುವೆಯ ದಿನ ಬಂದಿತು. ಮದುವೆಗೆ ಒಂದು ದಿನ ಮುಂಚೆಯೇ ರಾಯರ ಮನೆಯು ಅತಿಥಿಗಳಿಂದ ತುಂಬಿ ಶೋಭಿಸುತ್ತಿತು. ಸಾಯಂಕಾಲಕ್ಕೆ ಸರಿಯಾಗಿ ಬಂಧು ಬಳಗ ಇಷ್ಟ ಮಿತ್ರರಿಂದೊಡಗೂಡಿದವರ ದೇವರ ಸವಾರಿಯು ಬಂದಿತು. ರಾಯರು ಬಹು ಸಂತೋಷದಿಂದ ಬಂದು ದಿಬ್ಬಣದವರನ್ನು ಇದಿರುಗೊಂಡರು. ಹಾಗೂ ಅವರೆಲ್ಲರನ್ನೂ ಆದರದಿಂದ ಕರೆತಂದು ಚಪ್ಪರದಡಿಯಲ್ಲಿ ಕೂರಿಸಿ ಅವರ ಆದರೋಪಚಾರಗಳಲ್ಲಿ ತೊಡಗಿದರು.

ಇತ್ತ ಕಮಲೆಯೂ ಕೂಡ ಅಮೂಲ್ಯ ವಸ್ತ್ರಾಭರಣಗಳಿಂದಲಂಕೃತಳಾಗಿ ತನ್ನ ಕೋಣೆಯಲ್ಲಿ ಕುಳಿತುಕೊಂಡಿದ್ದಳು. ಹೊರಗೆ ನಡೆಯುತ್ತಿದ್ದ ಘೋಷಣೆಯನ್ನು ನೋಡಿ ಅವಳು ಒಳಗೊಳಗೇ ನಗುತ್ತಿದ್ದಳು. ಹಾಗೂ ಬಹು ಸಂತೋಷದಿಂದ ಇರುತ್ತಿದ್ದಳು. ಆದರೂ ಒಮ್ಮೊಮ್ಮೆ ನಿರಾಶೆಯು ತಲೆದೋರಿ ಅವಳನ್ನು ಗೊಂದಲದಲ್ಲಿ ಬೀಳಿಸುತ್ತಿದ್ದಿತು.

ಮಾರಣೆ ದಿನ ವಿವಾಹ ಕಾರ್ಯವು ಬೇಗನೆ ನೆರಬೇಕಿದ್ದುದರಿಂದ ರಾಯರು ಎಲ್ಲರಿಗೂ ಸಾಯಂಕಾಲದ ಊಟ ಉಪಚಾರಗಳನ್ನು ತೀರಿಸಿ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳುವ ಏರ್ಪಾಡು ಮಾಡಿದರು. ಹಾಗೂ ಮಗಳನ್ನು ಕುರಿತು–'ಮಗೂ ನಾಳೆ ಬೇಗನೆ ಏಳಬೇಕಾದುದರಿಂದ ಸ್ವಲ್ಪ ವಿಶ್ರಮಿಸಿಕೊಳ್ಳಮ್ಮ' ಎಂದು ಹೇಳಿ ತಾವು ಅಡಿಗೆ ಕೋಣೆಗೆ ಹೋದರು. ಅಡಿಗೆಯವರಿಗೆ ಮಾರಣೆ ದಿನಕ್ಕಿರುವ ಭಕ್ಷ್ಯ ಭೋಜ್ಯಾದಿಗಳನ್ನು ಮಾಡುವಂತೆ ತಿಳಿಸಿ ತಾವೂ ಸ್ವಲ್ಪ ವಿಶ್ರಾಂತಿಯನ್ನು ತೆಗೆದುಕೊಳ್ಳುವುದಕ್ಕಾಗಿ ತಮ್ಮ ಕೋಣೆಯನ್ನು ಸೇರಿದರು.

ಸ್ವಲ್ಪ ಸಮಯದಲ್ಲೇ ಶಾಂತಿಯು ತಾನೇ ತಾನಾಗಿ ಎಲ್ಲೆಲ್ಲೂ ವಿರಾಜಿಸಿದಳು. ಎಲ್ಲವರೂ ನಿದ್ರಾಂಗನೆಯ ವಶವಾಗಿದ್ದರು. ಆದರೆ ಕಮಲೆಯ ಕೋಣೆಯಲ್ಲಿ ಮಾತ್ರ ಚಿಕ್ಕದೊಂದು ದೀಪ ಮಂದ ದೃಷ್ಟಿಯಿಂದ ಸುತ್ತಲೂ ನೋಡುತ್ತಿದ್ದಿತು. ಕಮಲೆಯೂ ಕೂಡ ಮಲಗಿರದೆ ತನ್ನ ಮೇಜಿನೆಡೆ ಕುಳಿತುಕೊಂಡು ಏನೋ ಕೆಲಸ ಮಾಡುತ್ತಿದ್ದಳು. ಅಷ್ಟರಲ್ಲಿ ಸಮೀಪದ ಹಾಲಿನಿಂದ ಗಡಿಯಾರವು ಹನ್ನೆರಡು ಬಡೆಯುವ ಶಬ್ಧವು ಕಮಲೆಗೆ ಕೇಳಿಸಿತು. ಕಮಲೆಯು ಎದ್ದು ಬಾಗಿಲನ್ನು ಸ್ವಲ್ಪ ತೆರೆದು ಸುತ್ತಲೂ ನೋಡಿದಳು. ಎಲ್ಲೆಲ್ಲೂ ಶಾಂತಿಯು ವಿರಾಜಿಸಿದ್ದಳು. ಆದರೆ ಅಡಿಗೆ ಕೋಣೆಯಲ್ಲಿ ಮಾತ್ರ ಅವಳ ಆಟವು ನಡಿಯದೆ ಅಲ್ಲಿಂದ ಅಡಿಗೆಯವರ ಗದ್ದಲವು ಕೇಳಬರುತ್ತಿತ್ತು.

ಕಮಲೆಯು ತನ್ನ ಕೈಯ್ಯ ಕಾಗದವನ್ನೊಮ್ಮೆ ನೋಡಿಕೊಂಡಳು. ಆಮೇಲೆ ಸಣ್ಣ ಸೂಟುಕೇಸೊಂದನ್ನು ತೆಗೆದುಕೊಂಡು ಮೆಲ್ಲನೆ ಕೋಣೆಯಿಂದ ಹೊರಗೆ ಬಂದಳು. ಚಂದ್ರನು ತನ್ನ ಮನೋಹರ ಕಿರಣಗಳಿಂದ ಪ್ರಪಂಚವನ್ನು ಸಿಂಗರಿಸಿದ್ದಾನೆ. ಕಮಲೆಯು ಅಂಗಳಕ್ಕಿಳಿದಳು. ಹಾಗೂ ಸುತ್ತಲೂ ಒಮ್ಮೆ ದೃಷ್ಟಿ ಬೀರಿ ಗೇಟನ್ನು ದಾಟಿ ಮಾರ್ಗಕ್ಕೆ ಬಂದಳು. ಅಲ್ಲಿ ನಿಂತು ಉತ್ಸುಕತೆಯಿಂದ ಅತ್ತಿತ್ತ ನೋಡಿದಳು. ಏನೂ ಕಾಣಸಲಿಲ್ಲ. ಕಮಲೆಯ ಆನಂದವು ಒಮ್ಮೆಯೇ ಮಾಯವಾಯಿತು. ಅವಳ ಎದೆಯು ಬಡೆಯಲಾರಂಭಿಸಿತು. ಮುಖವು ಕಪ್ಪಿಟ್ಟಿತು. ಮೆಲ್ಲನೆ ಕಣ್ಣಿನಿಂದ ಉಷ್ಣೋದಕವು ಹರಿಯಲಾರಂಭಿಸಿತು. ಅವಳು ಸಮಾರು ಹೊತ್ತು ಅಲ್ಲೇ ನಿಂತುಕೊಂಡಳು. ದುಃಖವು ಒತ್ತಿಬಂದಿತು. ಆಗ ಅವಳು ನಿರಾಶಳಾಗಿ 'ಹಾ ನನಗಿನ್ನು ಬಾವಿಯ ಹೊರತು ಅನ್ಯ ಆಶ್ರಯವಿಲ್ಲ' ಎನ್ನುತ್ತಾ ಹಿಂತಿರುಗಲನುವಾದಳು. ಅವಳು ಗೇಟನ್ನು ದಾಟಿ ಬಾವಿಯ ಕಡೆಗೆ ನಡೆದಳು. ಅವಳು ಬಾವಿಗ ಹಾರಬೇಕೆಂದು ಬಾವಿ ಕಟ್ಟೆ ಮೇಲೇರಿದಳು. ಹಾಗೂ ಒಂದು ನಿಟ್ಟುಸಿರುಬಿಟ್ಟು ಕಡಗೊಮ್ಮೆ ಮಾರ್ಗದ ಕಡೆ ನೋಡಿದಳು. ಅಷ್ಟರಲ್ಲೇ ಕಾರೊಂದು ಸದ್ದಿಲ್ಲದೆ ಬಂದು ಗೇಟಿನ ಬಳಿ ನಿಂತದ್ದನ್ನು ಕಮಲೆಯು ನೋಡಿದಳು. ಕಮಲೆಯ ಹರ್ಷಕ್ಕೆ ಪಾರವೇ ಇಲ್ಲ. ಅವಳು ಓಡಿ ಬಂದು ಮಾರ್ಗದಲ್ಲಿ ನಿಂತಳು. ಆಗ ತರುಣನೊಬ್ಬನು ಕಾರಿನಿಂದಿಳಿದು ಕಮಲೆಯ ಕಡೆಗೆ ಬಂದನು. ಆಗ ಕಮಲೆಯು ಅವನ ಕೈಯ್ಯನ್ನು ಹಿಡಿದುಕೊಂಡು 'ಅಂತೂ ವಿಶೂ ನೀ ನನ್ನನ್ನು ಉದ್ಧಾರ ಮಾಡಿದೆ' ಎಂದಳು. ಕೂಡಲೇ ಅವರಿಬ್ಬರೂ ಕಾರಲ್ಲಿ ಹತ್ತಿ ಕುಳಿತರು. ಕಾರು ತಕ್ಷಣವೇ 'ಘೊಂ! ಘೊಂ!' ಎನ್ನುತ್ತಾ ವಾಯುವೇಗದಲ್ಲಿ ಎತ್ತಲೋ ಹೊರಟು ಹೋಯಿತು.

ಇತ್ತ ಮನೆಯಲ್ಲಿ ಗಡಿಯಾರವು ನಾಲ್ಕು ಬಡಿಯುತ್ತಲೇ ರಾಯರಿಗೆ ಎಚ್ಚರವಾಯಿತು. ಕೂಡಲೇ ಅವರು ಎದ್ದು ಎಲ್ಲರನ್ನೂ ಎಬ್ಬಿಸಿ ಸ್ನಾನ ಮಾಡುವಂತೆ ಹೇಳಿದರು. ಒಬ್ಬೊಬ್ಬರಾಗಿ ಎಲ್ಲರೂ ಸ್ನಾನ ಮಾಡಿದರು. ಹಾಗೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗಿದರು. ಇತ್ತ ಕೆಲವು ಸುವಾಸಿನಿಯರು ಕಮಲೆಯನ್ನು ಸ್ನಾನ ಮಾಡಿಸಿ ಸಿಂಗರಿಸುವುದಕ್ಕಾಗಿ ಅವಳ ಕೋಣೆಗೆ ಬಂದರು. ಅಲ್ಲಿ ನೋಡಲು ಕಮಲೆಯು ಕಾಣಿಸಲಿಲ್ಲ ಬರೇ ಹಾಸಿಗೆ ಮಾತ್ರ ಬಿದ್ದಿದ್ದಿತು. ಅವಳು ಬಚ್ಚಲಿಗೆ ಹೋಗಿರಬಹುದಾಗಿ ಅವರು ಭಾವಿಸಿದರು. ಅಲ್ಲಿ ಬಂದು ನೋಡಲು ಅಲ್ಲೂ ಕಾಣಿಸಲಿಲ್ಲ. ಎಲ್ಲೆಲ್ಲೂ ಹುಡುಕಿದರು. ಆದರೆ ಕಮಲೆಯ ಪತ್ತೆಯೇ ಇಲ್ಲ. ಎಲ್ಲರೂ ಗಾಬರಿಯಾದರು. ಹಾಗೂ ಓಡಿ ಬಂದು ರಾಯರಿಗೆ ತಿಳಿಸಿದರು. ರಾಯರು ಗಾಬರಿಯಿಂದ ಎಲ್ಲೆಲ್ಲೂ ಹುಡುಕಿದರು. ಆದರೆ ಕಮಲೆಯು ಎಲ್ಲೂ ಸಿಗಲಿಲ್ಲ.

(12ನೇ ಪುಟಕ್ಕೆ ಸಾಗಿದೆ.)

ಗ್ರಾಮೋದ್ಧಾರದ ಸಮಸ್ಯೆ.

(ಲೇಖಕ- ಹಳ್ಳಿ ತರುಣ.)

ರಾಜಕೀಯ ರಂಗವನ್ನು ಹೊಕ್ಕು ತಮ್ಮ ಒಣರಾಜಕೀಯವನ್ನು ಬಾಯಲ್ಲಿ ಘೋಷಿಸಿ ಅಧಿಕಾರವೇದಿಕೆಗೇರಲು ಹೊಂಚುಹಾಕುವದರಿಂದ ದೇಶದ ಕಲ್ಯಾಣವಿಲ್ಲ. ಶಿಕ್ಷಿತರೆಂದೆನಿಸಿ ನೌಕರೀ ಬೇಟೆಯಲ್ಲಿ ತೊಡಗಿ ಬೀದಿ ಬೀದಿಗಳಲ್ಲಿ ಭಿಕಾರಿಗಳಂತೆ ತಿರುಗುವದು ಯೋಗ್ಯವಲ್ಲ. ಕೊಡಗು ಕೃಷಿಕರ ನಾಡಾಗಿರುವದರಿಂದ ಹಳ್ಳಿಗಳ ಸುಧಾರಣೆಯಿಂದಲೇ ದೇಶದ ಕಲ್ಯಾಣ. ಹಳ್ಳಿಗಳ ಶ್ರೇಯಸ್ಸೇ ಕೊಡಗಿನ ಯಶಸ್ಸು. ಆದ್ದರಿಂದ ಹಳ್ಳಿಸೇವೆಯೇ ಹರನ ಸೇವೆಯೆಂದು ನಂಬಿ ತರುಣರು ಗ್ರಾಮಗಳ ಕಡೆಗೆ ತಿರುಗಿ ಗ್ರಾಮ ಜೀವನವೇ ಯೋಗ್ಯ ಜೀವನವೆಂಬುದನ್ನು ಸಾರಬೇಕು. ಹಳ್ಳಿ ಎಂದರೇನೇ ಕೊಡಗಿನ ಆರ್ಷೇಯ ಕೀರ್ತಿಗೆ ಮೇಲ್ಮೆ! ಹಳ್ಳಿವಾಸಿಗಳಿಗೆ ನಲ್ಮೆ!! ಸುಧಾರಕರಿಗೆ ಗ್ರಾಮವಾಸಿಗಳ ಒಲ್ಮೆ!!!

...ನದ ಅಂತಃಕರಣವು ಇಂದು ಹಳ್ಳಿಗಳಲ್ಲಿಯೇ ಇರುವದರಿಂದ ಹಿಂದೀ ತರುಣರು ಹಳ್ಳಿಗಳಿಗೆ ಹೋಗಿ, ತಮ್ಮ ಗ್ರಾಮ ಬಂಧುಗಳಿಗೆ ಅವರ ಹಕ್ಕಿನ ವಿಷಯವಾಗಿ ಜಾಗೃತಿಯನ್ನುಂಟುಮಾಡಿಕೊಡಬೇಕೆಂದು ಮಹಾತ್ಮರು ಮೊದಲು ಹಿಂದೀ ತರುಣರಿಗೆ ಆಹ್ವಾನವನ್ನಿತ್ತರು. ಮಹಾತ್ಮಾಜೀಯವರ ಈ ಕರೆಯು ವ್ಯರ್ಥವಾಗಲಿಲ್ಲ. ಇಂದು ದೇಶಬಾಂಧವರ ಲಕ್ಷ್ಯವು ದಿನದಿನಕ್ಕೂ ಗ್ರಾಮೋದ್ಧಾರದ ಕಡೆಗೆ ಹೆಚ್ಚೆಚ್ಚು ಹೊರಳುತ್ತಿದೆ. ಆದರೂ ಇದು ಸಾಲದು. ಪರಕೀಯರ ಆಳಿಕೆಯಿಂದ ಪಾಳುಬಿದ್ದಿರುವ ಹಳ್ಳಿಗಳ ಪುನರುದ್ಧಾರದ ಪ್ರಚಂಡ ಕಾರ್ಯವು ಇನ್ನೂ ಆಗಬೇಕಾಗಿದೆ. ಬಾಹ್ಯ ಪ್ರಪಂಚದ ಅರಿವೆಯಿಂದ ಬಹಿರ್ಮುಖರಾಗಿರುವ ನಮ್ಮ ಬಾಂಧವರಲ್ಲಿ ನವ ಚೈತನ್ಯದ ಹೊಸ ಜೀವನ ಕಳೆಯನ್ನು ಬೀರಿ ಗ್ರಾಮದ ಆ ಸರಳ ಜೀವನವೇ ಆರಾಧ್ಯ ಜೀವನವೆಂಬ ಭಾವನೆಯನ್ನು ಹುಟ್ಟಿಸಬೇಕಿದೆ. ಆದ್ದರಿಂದ ಹಳ್ಳಿಗಳ ಮಹತ್ವವೇನು? ಅಲ್ಲಿಯ ಕೆಲಸಗಳಾದರೂ ಏನು? ನಮ್ಮ ಸಹೋದರರನ್ನು ಉದ್ಧರಿಸುವ ಬಗೆ ಹೇಗೆ? ಇವೇ ಮೊದಲಾದ ಪ್ರಮುಖ ಪ್ರಶ್ನೆಗಳ ಅರಿವು ಎಲ್ಲರಿಗೂ ಇರಬೇಕು.

ಹಳ್ಳಿ, ಕೊಡಗಿನ ಜೀವಾಳ.

ಕೊಡಗಿನ ಜನ ಸಂಖ್ಯೆಯಲ್ಲಿ ಶೇಕ 90ರಷ್ಟು, ಒಂದಲ್ಲ ಒಂದು ವಿಧದ ಕೃಷಿಯನ್ನು ಮಾಡಿ ಜೀವಿಸುವವರಿದ್ದಾರೆ. ಆದ್ದರಿಂದ ಕೊಡಗಿನಲ್ಲಿ ಗ್ರಾಮೋದ್ಧಾರ ಕಾರ್ಯಕ್ರಮವನ್ನು ಕೈಕೊಂಡರೆ ಕೊಡಗಿನ ಇಡೀ ಜನತೆಗೇ ಅದು ಅನ್ವಯಿಸುವದು. ಬಹುಮತದಿಂದಿರುವ ಈ ಕೃಷಿಕರ ಸ್ಥಿತಿಯು ವಿಪನ್ನಾವಸ್ಥೆಯಿಂದಿರುವದರಿಂದಲೇ ಇಡೀ ಕೊಡಗಿನ ಚೈತನ್ಯವು ಕುಗ್ಗಿರುವದು. ಕೊಡಗು ಮುಂದೆಂದು ಪ್ರಗತಿ ಪಥದಲ್ಲಿ ನಡೆಯಬೇಕಾದರೆ ಗ್ರಾಮೋದ್ಧಾರ ಕಾರ್ಯಕ್ರಮವು ಅಗತ್ಯ. ಕೃಷಿಯನ್ನೇ ತಮ್ಮ ಆಧಾರವಾಗಿಟ್ಟುಕೊಂಡಿರುವ ಈ ಕೃಷಿಕರ ದೇಶದಲ್ಲಿ ಗ್ರಾಮೋದ್ಧಾರದ ಮಹತ್ವವು ನಮ್ಮ ಮನಸ್ಸಿನ ಮೇಲೆ ಬಿಂಬಿಸಿ ನಮ್ಮ ತರುಣರೇ ಯೋಗ್ಯ ರೀತಿಯಿಂದ ಗ್ರಾಮೋದ್ಧಾರದ ಈ ಸಮಸ್ಯೆಯನ್ನು ಬಗೆ ಹರಿಸಬಲ್ಲರೆಂದು ಮನವಂಕೆಯಾಗುತ್ತಿದೆ. ಸ್ವರಾಜ್ಯವು ಲಭಿಸುವ ಮೊದಲು ಯಾ ಲಭಿಸಿದ ನಂತರವಾದರೂ ಜನತೆಯ ಮುಂಬರುವ ಜಟಿಲ ಪ್ರಶ್ನೆಯೆಂದರೆ ಇದೇ. ಆದ್ದರಿಂದ ಈ ಮೂಲಭೂತ ಮಹಾ ಪ್ರಶ್ನೆಯನ್ನು ಮೊದಲೇ ಬಿಡಿಸಿಬಿಡುವದು ಯೋಗ್ಯವಾಗಿದೆ. ಆದ್ದರಿಂದ ಪ್ರತಿಯೊಬ್ಬನಲ್ಲಿ ಈ ಸಮಸ್ಯೆಯ ಪ್ರಾಮುಖ್ಯತೆಯ ಅರಿವು ಉಂಟಾಗಿ ಪ್ರತಿಯೊಬ್ಬನಲ್ಲಿಯೂ ನವ ಚೈತನ್ಯವನ್ನು ಹುಟ್ಟಿಸಲಿಕ್ಕೇ ಬೇಕು. ಇಂದು ಹಳ್ಳಿಗಳು ಅನೇಕ ಕಾರಣಗಳಿಂದ ವಿನಾಶ ಮಾರ್ಗದಲ್ಲಿ ಬಿದ್ದಿರುವವು. ಕೊಡಗಿನ ರಾಜಕೀಯ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವವರ ಸಲುವಾಗಿ ಹಳ್ಳಿಗಳು ಉದ್ಧಾರವಾಗಲೇ ಬೇಕು. ಇದು ಜರುಗ ಬೇಕಾದರೆ ಯಾರು ತಮ್ಮ ಆಯುಶ್ಯವನ್ನು ಈ ಸಮಸ್ಯೆಯ ತೀರ್ಮಾನಕ್ಕಾಗಿ ಅರ್ಪಿಸಲು ಸಿದ್ಧರಿರುವರೋ ಅವರಿಗೆ ಹಳ್ಳಿಯ ಪರಿಸ್ಥಿತಿಯ ಸೂಕ್ಷ್ಮವಾದ ಜ್ಞಾನವಿರಲಿಕ್ಕೇ ಬೇಕು.

ಹಳ್ಳಿಗಳಲ್ಲಿ ಅಜ್ಞಾನ.

ಹಳ್ಳಿಗಳಲ್ಲಿ ಜಾಗೃತಿಯಾಗಬೇಕೆಂದು ನುಡಿಯುವದು ಸುಲಭವಿದ್ದರೂ ಸಹ ಕಾರ್ಯತಃ ಅದನ್ನು ಮಾಡುವ ಕೆಲಸವು ಕಠಿಣವಿರುವದು. ಕೊಡಗಿನ ಈ ಅಸಂಖ್ಯ ಹಳ್ಳಿಗಳಲ್ಲಿ ಬ್ರಿಟಿಷ್ ಕಾರುಬಾರದ ಕಟು ಫಲಗಳು ನೋಡಲಿಕ್ಕೆ ಸಿಗುವವು. ಅಂಥಾ ಸ್ಥಳಗಳಲ್ಲಿ ಯಾವನಾದರೂ ಅಜ್ಞಾಂಧಕಾರದಲ್ಲಿರಬೇಕಾದುದು ವಾಸ್ತವ. ಅನೇಕ ಧುರೀಣರು ಹಳ್ಳಿಗಳ ಉದ್ಧಾರವಾಗಬೇಕೆಂದು ಘೋಷಣೆಗಳನ್ನು ಮಾಡಿದರೂ ನಮ್ಮ ಹಳ್ಳಿಗಳ ಶೋಚನೀಯ ಸ್ಥಿತಿಯು ಸುಧಾರಿಸದಿರಲಿಕ್ಕೆ ಕಾರಣಗಳೇನು? ಇಂದು ಹಳ್ಳಿಗಳಲ್ಲಿ ದಾರಿದ್ರ್ಯದಿಂದ ಕಂಗೆಟ್ಟು, ಭೀತಿಯುಕ್ತ ಮುದ್ರೆಗಳನ್ನು ಮುಖದಲ್ಲಿ ತಳೆದಿರುವ ನಮ್ಮ ಸಹೋದರರ ಕರುಣಾಜನಕ ಸ್ಥಿತಿಗೆ ಕಾರಣವೇನು? ಇಂದಿನ ಹಳ್ಳಿಗಳು ಅರೆಹೊಟ್ಟೆ, ಹರಕು ಬಟ್ಟೆ, ಕೃಷವಾದ ಶರೀರ ಮಾಸಲಾದ ಹೃದಯದ್ರಾವಕ ವಿಚಾರಗಳನ್ನು ಪ್ರತಿಬಿಂಬಿಸುವ ಕನ್ನಡಿ ಯಾದುದೇಕೆ? ಕೆಲವೆಡೆಗಳಲ್ಲಿ ಕಾಣಬಹುದಾದ ಬಡ ರೈತರ ವಿದ್ರೂಪ ಮುದ್ರೆ, ನಿಸ್ತೇಜ ದೃಷ್ಟಿ, ರೋಗಾಲಿಂಗಿತ ಶರೀರ, ಇವುಗಳನ್ನು ನೋಡಿದರೆ ಜಗತ್ತಿನಲ್ಲಿ ಸುಧಾರಣೆ ಹಾಗೂ ಸಂಸ್ಕೃತಿಯನ್ನು ಬೀರಲು ಜಗನ್ನಿಯಾಮಕನಿಂದ ನಿಯಮಿಸಲ್ಪಟ್ಟ ಮಾನವ ಜಾತಿಯ ಅಧೋಗತಿಯ ಪರಮಾವಧಿಯ ವಿಷಧವಾಗುವದು.

ಮಾನವೀ ಸುಧಾರಣೆ.

ದಿನಕ್ಕೆರಡಾವರ್ತಿ ಹೊಟ್ಟೆ ತುಂಬಾ ಅನ್ನ ದೊರಕಿಸಿಕೊಳ್ಳುವದಕ್ಕೆ ದಿನವಿಡೀ ಚಡಪಡಿಸಿ ಕೆಲಸ ಮಾಡಬೇಕಾಗಿರುವಾಗ ಗೃಹಸ್ಥ ಧರ್ಮ, ಮಾನವೀ ಸುಧಾರಣೆಗಳಂಥಾ ತಾತ್ವಿಕ ಸಂಗತಿಗಳ ಕಡೆಗೆ ಮನಗೊಡುವವರು ವಿರಳ. ಅಂಧಕಾರಮಯವಾದ ಭವಿಷ್ಯವು ನಮ್ಮ ಮುಂದಿರುವಾಗ ಆಶೆಯೊದರೂ ಬರುವದೆಲ್ಲಿಂದ. ಪ್ರತಿಯೊಬ್ಬನು ತನ್ನ ಉದರಂಭರಣವೇ ಮೊದಲಾದ ದೈನಿಕ ಕಾರ್ಯಗಳ ಕಷ್ಟ ಪರಂಪರೆಗಳಲ್ಲಿ ಸಿಲುಕಿ ಅಲ್ಲೋಲ ಕಲ್ಲೋಲವಾಗಿರುವಾಗ ಸುಧಾರಣೆ ವಿಚಾರವಾದರೂ ಹೇಗೆ ಮೊಳೆಯಬೇಕು? ಇದು ವಾಸ್ತವವೇನೋ ಹೌದು. ಆದರೆ ಗ್ರಾಮ ಜನರ ಕಡುಕಾರ್ಪಣ್ಯಗಳನ್ನು ಪರಿಹರಿಸಲು ಹೊರಗಿನ ಸುಧಾರಕರು ಸಮರ್ಥರಾಗಲಾರರು. ಸುಧಾರಕರು ಜನತೆಯನ್ನು ತನ್ನ ಅಂಕೆಯಲ್ಲಿ ತಂದು ತನ್ನ ಅಂತಿಮದ ವರೆಗೆ ಗ್ರಾಮವನ್ನು ಸುಗಮವಾಗಿ ನಡೆಸಬಹುದು. ಆದರೆ ಪ್ರತಿಯೊಬ್ಬ ಗ್ರಾಮ ವ್ಯಕ್ತಿಯಲ್ಲಿ ತಮ್ಮನ್ನು ತಾವೇ ಸರಿಪಡಿಸಿಕೊಳ್ಳುವ ಚಪಲತೆಯು ಹುಟ್ಟಬೇಕು. ಗ್ರಾಮಸ್ಥರಲ್ಲಿ ತಮ್ಮ ಗ್ರಾಮದ ಪುರೋಭಿವೃದ್ಧಿಯ ಕಾಂಕ್ಷೆಯು ಬೇರೂರಬೇಕು. ಎಂದರೇನೇ ಹಳ್ಳಿಗಳು ಮುಂಬರಲು ಸಾಧ್ಯ. ಹಳ್ಳಿಯ ಜನತೆಯಲ್ಲಿ ಹಳ್ಳಿಯ ಉನ್ನತಿಯ ಮೂಲಧ್ಯೇಯ, ಅದರ ಲಾಭಾಲಾಭಗಳನ್ನು ಮನದಟ್ಟುಪಡಿಸಿ ಅವರನ್ನು ತನ್ನ ಕರಯಂತ್ರ ಸುಧಾರಣಾಕಾರ್ಯಕ್ಕೆ ಹಚ್ಚಲು ಸಮರ್ಥನಿಲ್ಲದ ಸುಧಾರಕನ ಸುಧಾರಣಾ ಕಾರ್ಯವು ಶಾಶ್ವತವಲ್ಲ. ಜನತೆಯ ಮನವನ್ನು ತನ್ನ ಮಾದರಿ, ಮಾರ್ಪಾಡುಗಳಿಂದ ತಿರುಗಿಸಬೇಕು. ಇದು ಬಿಟ್ಟು ಕೇವಲ ಕಾಯದೆ ಖಾನೂನುಗಳನ್ನು ಸುಸರಿಸಿ ಗ್ರಾಮಸ್ಥರನ್ನು ಬಲಾತ್ಕಾರದಿಂದ ಪ್ರೇರೇಪಿಸುವದು ತತ್ಕಾಲ ಫಲಕಾರಿಯಾದರೂ ಅದು ಶಾಶ್ವತವಾಗಲಾರದು.

ದೈವ ವಾದ.

ನಮ್ಮ ಹಳ್ಳಿಗರು ಅತ್ಯಂತ ದೈವ್ಯವಾದಿಗಳಾಗಿರುವರು. ಯಾವ ಕಾರ್ಯವನ್ನೂ ತಮ್ಮ ಇಷ್ಟ ದೈವದ ಮೇಲಿಟ್ಟು ಸ್ವಸ್ಥಚಿತ್ತರಾಗಿ ಕುಳಿತುಕೊಳ್ಳುವ ಹವ್ಯಾಸವು ಹೆಚ್ಚು. ಎಲ್ಲಾ ವಿಚಾರಕ್ಕೂ ದೇವರಿದ್ದಾನೆ. ದೇವರು ಕಂಡಂತಾಗಲಿ ಎಂಬುದು ವಾಡಿಕೆ. ಇದು ಪೂರ್ತಿ ಪರಿವರ್ತನೆ ಹೊಂದಬೇಕು. ನಾವು ಸ್ವತಃ ಪ್ರಯತ್ನಿಸಿದ್ದಲ್ಲದೆ ಕಾರ್ಯ ಕೈಗೂಡದೆಂಬ ಅರಿವು ಅವರಲ್ಲಿ ಉತ್ಪನ್ನವಾಗಬೇಕು. ದೇವರ ಮೇಲೆ ಭಾರವಿಟ್ಟು ನಿರಾಶರಾಗಿ ಕೂರುವದರಿಂದ ತಮ್ಮ ಅದಃಪತನವೇ ಆಗುವದೆಂದು ಅವರು ಮನಗಾಣಬೇಕು. ಗ್ರಾಮ ಜೀವಿಗಳಲ್ಲಿ ಪುರಾತನವಾದ ಆ ನಂಬಿಕೆಯು ಅಚ್ಚಳಿಯದೆ ಉಳಿದಿರುವದರಿಂದಲೇ ಕಾಲ ಪರಿಸ್ಥಿತಿಯಂತೆ ಅವರಲ್ಲಿ ಮಾರ್ಪಾಡಾಗುವದು ಕಷ್ಟವಿದೆ. ಆದ್ದರಿಂದ ಹಳೆಯ ಸಂಪ್ರದಾಯವನ್ನೇ ಅನುಸರಿಸುವದರಿಂದ ತಮ್ಮ ಉನ್ನತಿಯು ಸಾಧ್ಯವಿಲ್ಲವೆಂಬ ವಿಚಾರವು ಅವರ ಮನಸ್ಸಿನಲ್ಲಿ ಬಿಂಬಿಸುವಂತೆ ನಮ್ಮ ಸುಧಾರಕರು ಮಾಡಬೇಕು. ಪೂರ್ವ ತತ್ವಾನುಯಾಯಿಗಳಾಗಿ ಪುರಾತನ ಕಾಲದಲ್ಲಿ ನಡೆಯುತ್ತಿದ್ದ ಅನಾಚಾರಗಳೇ ಇಂದೂ ಗ್ರಾಮದಲ್ಲಿ ನಡೆಯುವದು ಶೋಭಿಸುವ ವಿಚಾರವಲ್ಲ. ಸರಳ ಜೀವನವು ಹೆಚ್ಚು ಹೆಚ್ಚಾಗಿ ಪ್ರಸರಿಸಬೇಕು. ಪುರಾತನ ಆಚಾರವೆಂಬ ಸೋಗಿನಿಂದ ನಡೆಯುವ ದುಂದುಗಾರಿಕೆ ನಿಲ್ಲಬೇಕು. ಮದುವೆ ಮುಂಜಿಗಳ ಖರ್ಚಿನ ವೈಪರೀತ್ಯವು ಕಮ್ಮಿಯಾಗಬೇಕು. ಪ್ರತಿಯೊಬ್ಬನೂ ಸ್ವಾವಲಂಬಿಯಾಗಿ ತನ್ನ ಕಾಲಿನ ಮೇಲೆಯೇ ನಿಲ್ಲಲಿಕ್ಕೆ ಬೇಕೆಂಬ ಆ ಸ್ವಾತಂತ್ರ್ಯಾಭಿಲಾಷೆಯು ಎಲ್ಲರಲ್ಲಿಯೂ ಮೂಡಬೇಕು.

ಧ್ಯೇಯ ವಾದ.

ತಮ್ಮ ತಮ್ಮ ಗ್ರಾಮವೆಂದರೆ ಒಂದು ಸಾಮಾಜಿಕ ಸಂಸ್ಥೆಯಿದ್ದು ಅದು ಯಥಾಪ್ರಕಾರವಾಗಿ ಹೇಗೆ ಸ್ವಯಂ ಪ್ರಕಾಶಿತವಾಗಿ ಮಾದರಿಯ ಗ್ರಾಮವೆಂದೆನಿಸಲ್ಪಡುವದೆಂಬ ವಿಚಾರವು ಪ್ರತಿಯೊಬ್ಬ ಗ್ರಾಮಸ್ಥನಲ್ಲಿಯೂ ಅಂಕುರಿಸಲಿಕ್ಕೆ ಬೇಕು. ಗ್ರಾಮ ಹಿತಕ್ಕಾಗಿ ಪ್ರತಿಯೊಬ್ಬ ವ್ಯಕ್ತಿಯೂ ಆಸಕ್ತ ವಹಿಸಬೇಕು. ತಮ್ಮ ಗ್ರಾಮವು ಮುಂದರಿದು ಆದರ್ಶಗ್ರಾಮವೆನಿಸಿಕೊಳ್ಳಬೇಕೆಂಬ ಅಭಿಮಾನವು ಪ್ರತಿಯೊಬ್ಬನಲ್ಲಿಯೂ ಬರಬೇಕು. ಗ್ರಾಮಾಭಿವೃದ್ಧಿಯ ಧ್ಯೇಯದಿಂದ ಪ್ರತಿಯೊಬ್ಬನೂ ಅವ್ಯಾಹತವಾದ ಕೈಗಾರಿಕೆ ಯಾ ಉದ್ಯೋಗಕ್ಕೆ ತೊಡಗಿರಬೇಕು. ಈಗಿನ ಆಧುನಿಕ ಶಾಸ್ತ್ರೀಯ ಶೋಧಗಳಿಗೆ ಅನುಸರಿಸಿ ಯೋಗ್ಯವಾದ ಶೈಕ್ಷಣಿಕ, ಆರ್ಥಿಕ, ರಾಜಕೀಯ ಸುಧಾರಣೆಗಳನ್ನು ಮಾಡಬೇಕು. ಒಟ್ಟಾಗಿ ಹೇಳಬೇಕಾದರೆ ಪ್ರತಿಯೊಬ್ಬನಲ್ಲಿಯೂ ಇದು ತನ್ನ ಗ್ರಾಮ, ಗ್ರಾಮ ಸಂಸ್ಥೆಯ ಸುಖವೇ ತನ್ನ ಸುಖವೆಂಬ ಭಾವನೆಯು ಮೊಳೆಯಬೇಕು. ಪ್ರತಿಯೊಬ್ಬನಲ್ಲಿ ಸಹಕಾರ ಬುದ್ಧಿಯು ಬೆಳೆದು ಅನ್ಯೋನ್ಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯಬೇಕು. ಜನತೆಯಲ್ಲಿ ಇಂಥಾ ಭಾವನೆಯನ್ನು ಹುಟ್ಟಿಸುವ ಕೆಲಸವಾದರೂ ಸಮಾಜ ಸುಧಾರಕರ ಹಾಗೂ ರಾಜಶಾಸನ ಸಂಸ್ಥೆಗಳ ಮೇಲೆ ಬಿದ್ದಿದೆ. ಆದ್ದರಿಂದ ಈ ಸಂಘ ಸಂಸ್ಥೆಗಳು ಗ್ರಾಮಾಭಿವೃದ್ಧಿಯ ದೃಷ್ಟಿಯಿಂದ ಈ ಕಾರ್ಯಗಳನ್ನು ಕೈಗೊಳ್ಳಲಿಕ್ಕೆ ಬೇಕು.

ಪ್ರತಿಯೊಂದು ಗ್ರಾಮದ ಪ್ರತಿಯೊಂದು ಮನೆಯ ವರೆಗೆ ವೈದಕೀಯ ಯೋಜನೆಯು ತಲಸಬೇಕು. ಪ್ರತಿಯೊಂದು ಗ್ರಾಮಕ್ಕೆ ಕುಡಿಯುವ ಮತ್ತು ತೋಟಗಾರಿಕೆಗೆ ನೀರಿನ ಸರಬರಾಯಿ ಮಾಡಲಿಕ್ಕೆ

ಬೇಕು. ಊರೂರಲ್ಲಿ ಶಿಕ್ಷಣದ ವ್ಯವಸ್ಥೆಯು ಪ್ರಖರವಾಗಿ ನಡೆದು ಅಶಿಕ್ಷಿತನಾಗಿ ಉಳಿಯುವದು ಕಡಿಮೆ ತರಗತಿಯ ಲಕ್ಷಣವೆಂಬ ಭಾವನೆ ಹುಟ್ಟಬೇಕು. ಗ್ರಾಮೋದ್ಧಾರ ಕೈಗಾರಿಕೆಗಳು ಅಭಿವೃದ್ಧಿಗೊಂಡು ಗ್ರಾಮವು ಸ್ವಯಂ ಪೂರ್ಣವಾಗಬೇಕು. ವ್ಯಾಪಾರೋದ್ಯಮಗಳ ಸಲಕರಣೆಯು ಹೆಚ್ಚಿ ವ್ಯಾಪಾರವು ಸುಗಮವಾಗಿ ನಡೆಯುವ ಅನುವಾಗಬೇಕು. ಪ್ರತಿಯೊಂದು ಹಳ್ಳಿಯಲ್ಲಿಯೂ ಸಹಕಾರಿ ಸಂಘಗಳು ಸ್ಥಾಪಿತವಾಗಿ ಅವರಲ್ಲಿ ಐಕ್ಯಮತ್ಯವು ಹುಟ್ಟಬೇಕು. ಸಹಕಾರ ಸಂಘಗಳು ಕೇವಲ ಸಾಲಕೊಡುವ ಸಂಸ್ಥೆಗಳೆಂಬ ಭಾವನೆಯು ಜನತೆಯಲ್ಲಿ ದೂರಾಗಿ ಸಹಕಾರಿ ತತ್ವಗಳನ್ನು ಪಾಲಿಸಿ ನಡೆದರೆ ಅದೇ ಬಡವರ ಕಾಮಧೇನುವೆಂಬ ಭಾವನೆಯು ಹುಟ್ಟಬೇಕು. ಹಳ್ಳಿಗಳಲ್ಲಿ ಸಾಲದ ಬಾಧೆಯು ತಪ್ಪಿ ಶಕ್ಯವಿದ್ದಷ್ಟು ಬೇಗ ಹಳ್ಳಿಗರು ಸಾಲದಿಂದ ಮುಕ್ತರಾಗಲು ಸಾಲನಿವಾರಣೆ ಬೋರ್ಡುಗಳು ಮುಖವರ್ಜಯಿಂದ ಕಾರ್ಯಪ್ರವೃತ್ತವಾಗಬೇಕು. ಎಂದರೇನೇ ಗ್ರಾಮವು ಸ್ವಯಂ ಪೂರ್ತಿಯಾಗಿ ಒಂದು ಮಾದರಿ ಗ್ರಾಮವೆನಿಸುವದು.

ಮತಾಧಿಕಾರದ ಉಪಯೋಗ.

ಪ್ರತಿ ಗ್ರಾಮಗಳಲ್ಲಿ ಗ್ರಾಮ ಪಂಚಾಯಿತಿಯು ಅಗತ್ಯ. ಇದು ಗ್ರಾಮಸ್ಥರಲ್ಲಿ ಜಾಗೃತಿಯನ್ನುಂಟುಮಾಡಿ ಸ್ವಾಭಿಮಾನ, ಸ್ವಾವಲಂಬನ, ಹೊಣೆಗಾರಿಕೆಯ ತಿಳುವಳಿಕೆ ಮತ್ತು ಐಕ್ಯ ಮೊದಲಾದ ಭಾವನೆಗಳನ್ನು ಹುಟ್ಟಿಸುತ್ತದೆ. ಪಂಚಾಯಿತಿಯನ್ನು ನಡೆಸುವ ಮುಖ್ಯ ತತ್ವಗಳು ಹಳ್ಳಿಗರಲ್ಲಿ ಮನದಟ್ಟಾದರೆ ಅವರು ಶಹರುವಾಸಿಗಳ ಮೇಲೆ ಆಧರಿಸಿ ನಿಲ್ಲಲಾರರು. ಗ್ರಾಮೋದ್ಧಾರ ಕಾರ್ಯಕ್ರಮಕ್ಕೆ ಅವರೇ ಪ್ರವೃತ್ತರಾಗಬಹುದು. ಗ್ರಾಮ ಪಂಚಾಯಿತಿಯು ಸ್ಥಾಪನವಾಯಿತೆಂದರೆ ಪ್ರತಿಯೊಬ್ಬನಿಗೂ ಮತಾಧಿಕಾರವೆಂದರೇನು? ಅದು ಮಹತ್ವವೆಂಥಾದ್ದು. ಎಂದು ಕ್ರಮೇಣ ಮನವರಿಕೆಯಾಗಬಹುದು. ಪ್ರತಿಯೊಬ್ಬನಲ್ಲಿಯೂ ಮತದಾನದ ಪ್ರಧಾನ ತತ್ವವು ಅಂಕುರಿಸಿದರೆ ಗ್ರಾಮದಲ್ಲಿರುವ ಕಲ್ಪನಾತೀತವಾದ ಆ ಶಕ್ತಿಯು ಹೊರಹೊಮ್ಮಿ ದೇಶದ ಕಲ್ಯಾಣವಾಗದಿರದು.' ಸ್ವರಾಜ್ಯವನ್ನು ನಡೆಸುವ ಒಂದು ಸಂಸ್ಥೆಯಾಗಿ ಈ ಗ್ರಾಮ ಪಂಚಾಯಿತಿಯು ಪರಿಣಮಿಸದಿರದು. ಇದು ಗ್ರಾಮಸ್ಥರಿಗೆ ತಮ್ಮ ವ್ಯಕ್ತಿತ್ವವನ್ನು ಬೋಧಿಸಿ ರಾಜಕೀಯ ಶಿಕ್ಷಣವನ್ನು ಕೊಡುವ ಪ್ರಾಥಮಿಕ ಸಂಸ್ಥೆಯಾಗಬಹುದು. ಸ್ವಲ್ಪದರಲ್ಲಿ ಹೇಳುವದಾದರೆ ಲೋಕಶಾಹಿಯಲ್ಲಿ ಪ್ರವೇಶ ಮಾಡುವ ಮಹಾದ್ವಾರವೇ ಈ ಗ್ರಾಮ ಪಂಚಾಯಿತಿಕೆ.

ತರುಣರ ಕರ್ತವ್ಯ.

ಮೇಲೆ ಹೇಳಿದ ಕಾರ್ಯಗಳೆಲ್ಲವೂ ಒಂದು ಶಿಸ್ತಿನಿಂದ ಸುಗಮವಾಗಿ ನಡೆಯಬೇಕಾದರೆ ಅದು ತರುಣ ಜನಾಂಗದವರಿಂದಲೇ ಸಾಧ್ಯವೆಂದು ಎದೆ ತಟ್ಟಿ ಹೇಳಬಹುದು. ಆದ್ದರಿಂದ ಗ್ರಾಮದ ಶಿಕ್ಷಿತ, ಪ್ರಾಮಾಣಿಕ, ಅನುಭವಸ್ಥ ತರುಣರು ಮುಂದೆ ಬಂದು ತಮ್ಮದೇ ಒಂದು ಪಥಕವನ್ನು ನಿರ್ಮಿಸಿ ಮೇಲಿನ ಕಾರ್ಯಗಳಿಗೆ ಕೈಹಾಕಬೇಕು. ಗ್ರಾಮದಲ್ಲಿ ಒಂದು ಸಂಸ್ಥೆಯನ್ನೇರ್ಪಡಿಸಿ ಅಶಿಕ್ಷಿತ ಸಹೋದರರನ್ನು ಮುಂದಕ್ಕೆ ತರುವ, ಶಿಕ್ಷಿತರಿಗೆ ಮುಂದಿನ ಕಾರ್ಯವನ್ನು ತೋರಿಸುವ ಕಾರ್ಯ ಕೈಗೊಳ್ಳಬೇಕು. ಈ ಸ್ವಯಂಸೇವಕ ದಳವು ಲೋಕ ಜಾಗೃತಿಯ ಕಾರ್ಯವನ್ನು ಅವ್ಯಾಹತವಾಗಿ ಮಾಡಿ ಗ್ರಾಮವಾಸಿಗಳ ಜೀವನದಲ್ಲಿ ಉತ್ಸಾಹವನ್ನು ತುಂಬಬೇಕು. ಜನರಲ್ಲಿಯ ಆಲಸ್ಯವನ್ನು ಅಗಲಿಸಿ ತಮ್ಮ ಕರ್ತವ್ಯದಲ್ಲಿ ನಿರತರಾಗುವಂತೆ ಪ್ರೇರೇಪಿಸಬೇಕು. ಸಮಾಜ ಸುಧಾರಕರು ಬಂದು ನಮ್ಮನ್ನುದ್ಧರಿಸುವರೆಂಬ ಭಾವನೆಯಿಂದ ತಟಸ್ಥರಾಗಿ ಕೂಡುವದು ಅವಿವೇಕ. ನಮ್ಮ ಮೇಲ್ಮೆಯು ನಮ್ಮಿಂದಲೇ ಆಗಬೇಕು. ಆದ್ದರಿಂದ ಶಿಕ್ಷಿತ ತರುಣರು ಸರಕಾರಿ ಉದ್ಯೋಗದ ಲಾಲಸೆಯಿಂದ ನಗರಗಳಲ್ಲಿ ಅಲೆದು ತಮ್ಮ ಅಮೂಲ್ಯ ಸಮಯವನ್ನು ಹಾಳುಮಾಡಿಕೊಳ್ಳುವದು ಶುದ್ಧ ಅವಿವೇಕ. ಕೊಡಗಿನಲ್ಲಿ ಹಳ್ಳಿಗಳಿಗೆ ಹೋಗಿ ಮಾದರಿ ರೈತನಾಗಿದ್ದು ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಇತರ ಸಹೋದರರೂ ಅನುಸರಿಸುವಂತೆ ಕೆಲಸಮಾಡುವದು ಅತೀ ಸುಲಭವಾಗಿದೆ. ಆದ್ದರಿಂದ ಸುಶಿಕ್ಷಿತ ತರುಣರು ಈ ನಿರುದ್ಯೋಗದ ಸಮಯದಲ್ಲಿ ಬೀದಿ ಬೀದಿಗಳಲ್ಲಿ ತಿರುಗಿ ಜಿಂಡಾಗಿ ತಮ್ಮ ಪ್ರತಿಷ್ಠೆ ಸ್ವಾತಂತ್ರ್ಯಗಳನ್ನು ಮಾರಿಕೊಳ್ಳುವದು ಲಾಂಛನೀಯವಾದುದಾಗಿದೆ. ಹಳ್ಳಿಗಳಲ್ಲಿ ದಿಕ್ಕುಕಾಣದೆ ತೊಳಲಿ ಬಳಲುತ್ತಿರುವ ನಮ್ಮ ಸಹೋದರರನ್ನು ಕೈ ಹಿಡಿದೆತ್ತಿ ನಮ್ಮ ಮೇಲಿನ ಕರ್ತವ್ಯವನ್ನು ತರುಣರಾದ ನಾವಿಂದು ಮಾಡಬೇಕಿದೆ. ತರುಣ ಪೀಳಿಗೆಯು ಎಚ್ಚೆತ್ತು ಜನತಾ ಸೇವೆಗೆ ಕೈಯಿಕ್ಕಿದಲ್ಲದೆ ಗ್ರಾಮ ಹಾಗೂ ದೇಶವು ಮುಂದುವರಿಯಲಾರದು. ಆದ್ದರಿಂದ ಜನಾರ್ದನ ಸೇವೆಯೇ ಇದೆಂಬ ಭಾವನೆಯನ್ನಿಟ್ಟು ಶಿಕ್ಷಿತ ತರುಣರು ಗ್ರಾಮಾಂತರಗಳಲ್ಲಿ ಪ್ರಚಂಡ ಕಾರ್ಯ ಕ್ರಮಗಳನ್ನು ಕೈಕೊಂಡು ಗ್ರಾಮದ ಹಾಗೂ ದೇಶದ ಉನ್ನತಿಗೆ ಕಾರಣರಾಗಬೇಕು. ಎಂದರೇನೆ ನಾವು ಪರಕೀಯರ ಆಳಿಕೆಯಿಂದ ಮುಕ್ತರಾಗಬಲ್ಲೆವು. ಬಡತನದ ಬೇಗೆಯಿಂದ ಬದುಕಲಾಪೆವು. ಸ್ವಾತಂತ್ರ್ಯ ವೇದಿಕೆಯಲ್ಲಿ ನಲಿದು ಸುಖಿಸಬಲ್ಲೆವು.

Wanted.

Wanted candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce, and Filmcraft. Rules and Entrance form on annas eight. Director, Royal Telegraph and Rly. Duties College, Bombay.

8-5

ರಾಜಕೋಟೆ ಪ್ರಕರಣ.

ರಾಜಕೋಟೆ ಸಂಸ್ಥಾನದಲ್ಲಿ ಘಟನಾತ್ಮಕ ಸುಧಾರಣೆಯನ್ನು ಮಾಡುವ ಬಗ್ಗೆ ಹತ್ತು ಜನರನ್ನೊಳಗೊಂಡ ಸುಧಾರಣಾ ಸಮಿತಿಯನ್ನು ಠಾಕೂರು ಸಾಹೇಬರ ಅಪ್ಪಣೆಯ ಮೇರೆಗೆ ಇಂದು ನೆರೆದ ಸ್ಟೇಟ್ ಕೌನ್ಸಿಲ್ ಸಭೆಯಲ್ಲಿ ನೇಮಿಸಲಾಯಿತು. ಈ ಸಮಿತಿಯು ಒಂದು ತಿಂಗಳಲ್ಲಿ ತಮ್ಮ ವರದಿಯನ್ನು ಠಾಕೂರ ಸಾಹೇಬರ ಕಡೆಗೆ ಒಪ್ಪಿಸತಕ್ಕದ್ದು. ಕಮಿಟಿಯಲ್ಲಿ ಈ ಕೆಳಗೆ ಹೆಸರು ಕಾಣಿಸಿದ ಸದಸ್ಯರಿದ್ದಾರೆ.

ಸಮಿತಿಯ ಸದಸ್ಯರು.

1. ದರ್ಬಾರ್ ವೀರವಾಲ (ಅಧ್ಯಕ್ಷರು), 2. ಜಮ್ನಾ ಶಂಕರ ಮುರಾರಜಿ ಪಾಂಡ್ಯ, 3. ದೌಲತರಾಯ ವಕೀಲ, 4. ಜಡೇಜ ಜೀವನ ಸಿಂಘ, 5. ಕಾಳಿದಾಸ ಮೋತಿಚಂದ ಪರೇಖ, 6. ಗಾಜಿದಾದಾ ಭಾಜಿ ವಲ್ಲಮಹ್ಮದ, 7. ಮೋಹನಲಾಲ್, 8. ಹಿಪಟುಭಾಯಿ ಅಬ್ದುಲಾಲ, 9. ಹಕೀಮ್ ಚಂದ ಲಕ್ಷ್ಮಿಚಂದ ಜೋಶಿ, 10. ಗೋಕುಲದಾಸ ಪಯಾಭಾಯಿ.

ಪರಿಷತ್ತಿನ ಮೆಂಬರುಗಳ್ಯಾರೂ ದರ್ಬಾರಕ್ಕೆ ಬಂದಿರಲಿಲ್ಲ.

ದರ್ಬಾರ.

ತಾ. 22ರಲ್ಲಿ ಅರಮನೆಯಲ್ಲಿ ದರ್ಬಾರವು ನಡೆಯಿತು. ಠಾಕೂರ ಸಾಹೇಬರು ರಜತ ಸಿಂಹಾಸನವನ್ನೇರಿದರು. ದರಬಾರ ವೀರವಾಲರು ಬಲಭಾಗದಲ್ಲಿ ಕುಳಿತಿದ್ದರು. ರಾಜರ ತಮ್ಮಂದಿರಾದ ಪ್ರದ್ಯುಮ್ನ ಸಿಂಗರು ಎಡಮಗ್ಗುಲಲ್ಲಿ ವಿರಾಜಿಸುತ್ತಿದ್ದರು. ಅಧಿಕಾರಿಗಳು ಹಾಗೂ ನಾಗರಿಕರು ಸಾಲು ಕಟ್ಟಿ ಎಡ ಮಗ್ಗುಲಲ್ಲಿ ಕುಳಿತಿದ್ದರು.

ಜಾಸಿಕ ಮಹಾಜನರ ಕೌನ್ಸಿಲ್ ಮೆಂಬರರಾದ ಧೀರಜಲಾಲ್ ಮೋದಿ ಇವರು ರಾಜರ ಔದಾರ್ಯ ಹಾಗೂ ಮಹಾತ್ಮಾಜಿಯವರ ವಿವೇಕವನ್ನು ಶ್ಲಾಘಿಸಿ ಧನ್ಯವಾದಗಳನ್ನರ್ಪಿಸಿ ಭಾಯಾತ ಹಾಗೂ ಮುಸಲ್ಮಾನ ಪ್ರತಿನಿಧಿಗಳು ತಮ್ಮ ಜಾತಿ ಬಾಂಧವರ ಬೇಡಿಕೆಗಳನ್ನು ಸಮರ್ಥಿಸಿ, ದರ್ಬಾರದಲ್ಲಿ ಭಾಷಣ ಮಾಡಿ ಮುಂದೆ ಘಟನೆಯಲ್ಲಿ ತಮ್ಮ ಹಿತಸಂರಕ್ಷಣೆಯ ಬಗ್ಗೆ ತಕ್ಕ ವ್ಯವಸ್ಥೆಯಾಗುವಂತೆ ಬಿನ್ನವಿಸಿಕೊಂಡರು.

ಗಾಂಧಿಯವರು ತಮ್ಮ ಧರ್ಮಪತ್ನಿ ಶ್ರೀಮತಿ ಕಸ್ತೂರಿಬಾಯಿ ಗಾಂಧಿ ಹಾಗೂ ಇನ್ನಿತರ ಪರಿವಾರದೊಡನೆ ದರಬಾರಕ್ಕೆ ಆಗಮಿಸಿದರು. ಸ್ವತಹ ಠಾಕೂರು ಸಾಹೇಬರೇ ಅವರನ್ನು ಇದಿರುಗೊಂಡು ಉಪಚರಿಸಿದರು. ನೆರೆದವರೆಲ್ಲ ಗಾಂಧಿಜೀಯವರ ಮೇಲೆ ತಮಗಿದ್ದ ಗೌರವವನ್ನು ವ್ಯಕ್ತ ಮಾಡಿ ಸ್ವಾಗತಿಸುವುದಕ್ಕೆ ಎದ್ದು ನಿಂತರು. ಗಾಂಧೀಜೀಯವರು ಸಭಾಗೃಹವನ್ನು ಸೇರುವಾಗಲೇ ಕೈಜೋಡಿಸಿಕೊಂಡು ಬಂದಿದ್ದರು. ಅವರಿಗೆ ಠಾಕೂರು ಸಾಹೇಬರ ಬಲಭಾಗದಲ್ಲಿ ಭವ್ಯವಾದ ಪೀಠದ ಏರ್ಪಾಡನ್ನು ಮಾಡಲಾಗಿತ್ತು. ಸಂಸ್ಥಾನದ ಪ್ರಮುಖ ಅಧಿಕಾರಿಗಳ ಹಾಗು ನಾಗರೀಕರ ಪರಿಚಯವನ್ನು ಅವರಿಗೆ ಮಾಡಿಸಲಾಯಿತು. ಕೊನೆಗೆ ಮುಂದಣ ಪಕ್ಷದ ಮುಖಂಡರಾದ ಕಾಳಿದಾಸ ಪರೇಖರು ಮಾತಾಡಿದರು. ಅಲ್ಲದೆ ಹಿಂದಿನ ಠಾಕೂರರು ಒಮ್ಮೆ ಆಮಂತ್ರಣ ಕೊಟ್ಟು ಕರೆಸಿದಾಗ ಗಾಂಧಿಜೀಯವರು ಸಭೆಗೆ ಬಂದ ಸಂದರ್ಭವನ್ನು ನೆನಪು ಮಾಡಿ ಗಾಂಧಿಜೀಯವರ ಗುಣಕಥನವನ್ನು ಮಾಡಿ ಶ್ಲಾಘಿಸಿದರು. ಸಂಸ್ಥಾನಗಳಲ್ಲಿ ಆದ ಈ ಘಟನೆಯು ತೀರ ಹೊಸದಿದ್ದು ಮೊಟ್ಟಮೊದಲನೆಯದೆನ್ನಬೇಕು. ಅಲ್ಲಿಂದ ಮುಂದೆ ಜಾರಿಯಲ್ಲಿ ಬರದಿರುವ ಸುಧಾರಣೆಯಿಂದ ರಾಜಕೋಟೆಯು ಯಶಸ್ವಿಯಾಗಿ ಮುನ್ನಡೆಯಬಹುದೆಂದೂ ಮುಂತಾಗಿ ಸೂಚಿಸಿದರು.

ನಂತರ ಗಾಂಧಿಜೀಯವರು ಠಾಕೂರು ಸಾಹೇಬರೊಡನೆ ಮೋಟಾರ್ ಕಾರಿನಲ್ಲಿ ಕುಳಿತು ಹೊರಟರು. ಅನೇಕರು ಗಾಂಧೀಯವರಿಗೆ ಹೂಮಾಲೆಗಳನ್ನು ಹಾಕಿದರು. ಎಲ್ಲಾ ಕಟ್ಟಡಗಳಲ್ಲಿಯೂ ದೀಪವು ಬೆಳಗುತಿತ್ತು. ದಾರಿಯುದ್ದಕ್ಕೂ ಜನರು ಸಾಲುಕಟ್ಟಿ ನೆರೆದಿದ್ದರು. ಮೆರವಣಿಗೆಯು ಆನಂದಭವನವನ್ನು ಮುಟ್ಟಿದ ಬಳಿಕ ಠಾಕೂರು ಸಾಹೇಬರು ಗಾಂಧಿಜಿಯವರನ್ನು ಬೀಳ್ಕೊಟ್ಟು ಅರಮನೆಗೆ ಹಿಂತಿರುಗಿದರು.

ಠಾಕೂರು ಸಾಹೇಬರ ಪ್ರಕಟಣೆ.

'ಮಹಾತ್ಮ ಗಾಂಧಿಯವರಿಂದ ಹೊರಡಿಸಲ್ಪಟ್ಟ ತಾರೀಕು 18-5-38ರ ಪ್ರಕಟಣೆ ಮೇರೆ ಇನ್ನು ಮುಂದೆ ಸಂಸ್ಥಾನದಲ್ಲಿ ಸುಧಾರಣೆ ಆಗಬೇಕಾದರೆ ಸಂಸ್ಥಾನದ ಅರಸರನ್ನೇ ಪ್ರಾರ್ಥಿಸಬೇಕೆಂಬುವುದು ಬಹು ಯೋಗ್ಯವಾದ ಮಾತು. ದೇಶದಲ್ಲಿ ಶಾಂತಿಯನ್ನು ನೆಲೆಗೊಳಿಸಲಿಕ್ಕಾಗಿ ಈ ಪ್ರಕಟಣೆಯನ್ನು ಹೊರಡಿಸುವೆನು.

1. ಚಳವಳದ ಕಾಲದಲ್ಲಿ ಅಂದರೆ 1938ನೇ ಆಗಸ್ಟ 1ರಿಂದ ಜನತೆಯ ಚಳವಳವನ್ನು ಕುಗ್ಗಿಸಲು ಜಾರಿಗೆ ತಂದ ಎಲ್ಲಾ ಪ್ರಕಟಣೆ ಕಾನೂನುಗಳೂ ರದ್ದಾಗತಕ್ಕದ್ದು.

(2) ಚಳವಳ ಸಮಯದಲ್ಲಿ ವಸೂಲ್ಮಾಡಿದ ಜುಲ್ಮಾನೆ, ಜಪ್ತಿ ಮಾಡಿದ ಭೂಮಿ, ಈ ಭೂಮಿ ಮಾರಾಟದಿಂದ ಬಂದ ಹಣ ಇವುಗಳೆಲ್ಲವನ್ನೂ ಸಂಬಂಧಪಟ್ಟವರ ಕೇಳಿಕೆಯಂತೆ ಹಿಂದಕ್ಕೆ ಕೊಡಲಾಗುವುದು. ವಸೂಲಾಗದೆ ಇರುವ ಜುಲ್ಮಾನೆಗಳನ್ನು ಮಾಫಿ ಬಿಟ್ಟಿದೆ.

(3) ಎಲ್ಲಾ ಪಟ್ಟಣಿಗರಿಗೂ ಮೊದಲಿನಂತೆಯೇ ಎಲ್ಲಾ ನಾಗರೀಕ ಹಕ್ಕುಬಾಧ್ಯತೆಗಳಿರುವವಲ್ಲದೆ ಸಂಸ್ಥಾನದಲ್ಲಿ ಸಭೆಗಳಿಗಾಗಲೀ ಭಾಷಣಗಳಿಗಾಗಲೀ ಸಾಮಾನ್ಯ ಕಾಯಿದೆಗೊಳಪಡುವಂತೆ ಅಡ್ಡಿ ಇರುವದಿಲ್ಲ.

ವೃತ್ತ ಪತ್ರಿಕೆಗಳ ಮೇಲಿರುವ ನಿರ್ಬಂಧವನ್ನು ಮಾತ್ರ ಇನ್ನೂ ತೆಗೆದಿರುವುದಿಲ್ಲ.

ಈ ಸುಧಾರಣಾ ಸಮಿತಿಯ ಕಾರ್ಯಕಲಾಪಗಳಲ್ಲೂ ಮತ್ತು ಇತರ ವಿಚಾರಗಳನ್ನು ರಾಜಕೋಟೆ ಪ್ರಜಾ ಪರಿಷತ್ತಿನವರು ಸಹಕರಿಸದೆ ತಟಸ್ಥರಾಗಿದ್ದರು. ಆದರೆ ಗಾಂಧಿಜೀಯವರು ಅವರೊಡನೆ ಸಹಕರಿಸಬಹುದೆಂದು ಅಪ್ಪಣೆ ಕೊಟ್ಟಿರುವರು.

ಕೊಡಗು

ಮೇ ತಾರೀಕು ೨೬ನೇ ಶುಕ್ರವಾರ ೧೯೩೯.

ರೈತರ ಸಾಲನಿವಾರಣೆ.

ಹಿಂದೂಸ್ಥಾನವು, ಅನಕ್ಕಿಂತಲೂ ಚ್ಚಾಗಿ ಕೊಡಗು ಪ್ರಾಂತ್ಯವು ವ್ಯವಸಾಯಗಾರರ ದೇಶವಾಗಿದೆ. ಇವರ ಸ್ಥಿತಿಯು ಉತ್ತಮಗೊಳ್ಳದೆ ದೇಶವೆಂದಿಗೂ ಉದ್ಧಾರವಾಗಲಾರದು. ಈಗಿನ ಪರಿಸ್ಥಿತಿಯಲ್ಲಿ ರೈತರ ಸ್ಥಿತಿಯು ಅಭಿವೃದ್ಧಿಗೊಳ್ಳಬೇಕಾದರೆ ಅವರ ಆಧಾರವಾದ ಸಾಲದ ಹೊರೆಯನ್ನು ತಪ್ಪಿಸಬೇಕಾಗಿದೆ. ಈ ದೆಸೆಯಿಂದ ಹಿಂದೂಸ್ಥಾನದ ಹಲವು ಪ್ರಾಂತ್ಯಗಳಲ್ಲಿ ವ್ಯವಸಾಯಗಾರರ ಸಾಲದ ಭಾರವನ್ನು ಸಾಧ್ಯವಾದಷ್ಟು ಮಟ್ಟಿಗೆ ನೀಗಲು ಸಾಲನಿವಾರಣೆ ಬೋರ್ಡುಗಳು ಸರ್ಕಾರದವರಿಂದ ನೇಮಿಸಲ್ಪಟ್ಟು, ಪ್ರಯೋಜನಕರವಾದ ಕೆಲಸ ಮಾಡುತ್ತಿವೆ. ನಮ್ಮ ಪ್ರಾಂತ್ಯದಲ್ಲೂ ಇಂಥಾ ಸಾಲನಿವಾರಣೆಯ ಬೋರ್ಡನ್ನು ನೇಮಿಸುವುದು ಅವಶ್ಯವೆಂದು ಕೆಲವು ವರ್ಷಗಳಿಂದಲೇ ಜನರು ಚಳವಳ ನಡಿಸಿರುವರು. ಜನರ ಈ ಕೂಗಿಗೆ ಸರಕಾರದವರು ಇಷ್ಟರ ವರೆಗೆ ಕಿವಿ ಕೇಳದಂತೆ ನಟಿಸಿದರೂ, ಈಗ ಅದಕ್ಕೆ ಗಮನಕೊಡಲು ನಿಶ್ಚಯಿಸಿರುವದು ತೃಪ್ತಿಕರವಾಗಿದೆ. ಇಲ್ಲಿಯ ನ್ಯಾಯವಿಧಾಯಕಸಭೆಯು ಕಳೆದ ಮೀಟಿಂಗಿನಲ್ಲಿ ಸಾಲನಿವಾರಣೆ ಬೋರ್ಡಿನ ಮಸೂದೆಯೊಂದು ಕೌನ್ಸಿಲು ಸಭೆಯ ಮುಂದಿಡಲ್ಪಟ್ಟು, ನಿರ್ಧರಿಸುವ ಬಗ್ಗೆ ಅದು ಒಂದು ಸಿಲೆಕ್ಟ್ ಕಮಿಟಿಗೆ ಒಪ್ಪಿಸಲ್ಪಟ್ಟಿತು. ಆ ಸಿಲೆಕ್ಟ್ ಕಮಿಟಿಯ ಮೀಟಿಂಗು ಮೊನ್ನೆ ತಾನೇ ಮಡಿಕೇರಿಯಲ್ಲಿ ನಡೆಯಿತಾಗಿ ತಿಳಿಯಬರುತ್ತದೆ.

ಈ ಮಸೂದೆಯನ್ನು ಬಡ ಸಾಲಗಾರರ ಹಿತದೃಷ್ಟಿಯಿಂದ ತಿದ್ದುಪಡಿ ಮಾಡಿ ಕೌನ್ಸಿಲಿನಲ್ಲಿ ಮಂಜೂರು ಮಾಡಿ, ಆದಷ್ಟು ಬೇಗನೆ ಜಾರಿಗೆ ತರುವುದು ಅಗತ್ಯವೆಂಬುದರಲ್ಲಿ ದೇಶದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಬರೇ ಸಾಲನಿವಾರಣೆ ಬೋರ್ಡನ್ನು ಸ್ಥಾಪಿಸುವುದರಿಂದ ಹೆಚ್ಚಿನ ಪ್ರಯೋಜನವಾಗಲಾರದು. ಈ ಬೋರ್ಡಿನವರು ರಾಜಿಯಿಂದ ತೀರ್ಮಾನಿಸುವ ಸಾಲದ ಮೊಬಲಗನ್ನು ಸಾಲಗಾರರಿಗೆ ಒದಗಿಸಿಕೊಡುವ ಏರ್ಪಾಡನ್ನು ಅದರೊಂದಿಗೆ ಮಾಡಬೇಕಾಗಿದೆ. ಸಾಲಕೊಟ್ಟ ಸಾಹುಕಾರರಿಗೆ ನಗದು ಹಣ ದೊರೆಯುವದೆಂದಾದರೆ, ಅವರು ಬಹುಮಟ್ಟಿಗೆ ಬಡ್ಡಿಯನ್ನು ಮಾತ್ರವಲ್ಲ; ಅಸಲಿನಲ್ಲಿ ಒಂದು ಭಾಗವನ್ನು ಕೂಡ ಸೋಡಿ ಬಿಡಲು ಒಪ್ಪಿಕೊಳ್ಳುವರು. ನಗದು ಹಣ ದೊರೆಯದೆ, ಮುಂದಕ್ಕೆ ಕಂತುಗಳಲ್ಲಿ ಸಲ್ಲಿಸಿ ಮಾಡುವದೆಂದರೆ ಅವರು ರಾಜಿಯಲ್ಲಿ ಸೋಡಿ ಬಿಡಲು ಒಪ್ಪಿಕೊಳ್ಳುವುದು ಕಡಿಮೆ. ಇದು ಅನುಭವದ ಮಾತು. ಇಲ್ಲಿಯ ಸಹಕಾರಿ ಸೆಂಟ್ರಲ್ ಬ್ಯಾಂಕಿನವರು ಒಂದು ಸಾಲನಿವಾರಣೆಯ ಬೋರ್ಡನ್ನು ಸ್ಥಾಪಿಸಿಕೊಂಡು ಕೆಲವು ವರ್ಷಗಳಿಂದ ಸಹಕಾರಿ ಸಂಘಗಳ ಮೆಂಬರುಗಳ ಸಾಲನಿವಾರಣೆಯ ಪ್ರಯತ್ನ ನಡಿಸಿದರಲ್ಲಿ ಬಹುಮಟ್ಟಿಗೆ ಸಫಲವಾಯಿತೆಂದು ತಿಳಿಯಬರುತ್ತದೆ. ನಗದು ಹಣ ದೊರೆತಲ್ಲಿ ಸಾಲಗಾರರಿಗೆ ತುಂಬಾ ಸೋಡಿ ಬಿಡಲ್ಪಟ್ಟು, ಅವರ ಸಾಲದ ಹೊರೆಯು ಬಹಳ ಮಟ್ಟಿಗೆ ಹಗುರ ಮಾಡಲ್ಪಟ್ಟಿತು. ನಗದು ಹಣ ದೊರೆಯದಲ್ಲಿ ಸಾಹುಕಾರರು ರಾಜಿಗೆ ಒಪ್ಪಿಕೊಳ್ಳಲು ಬಹಳ ಹಿಂಜರಿಯುತ್ತಿದ್ದರು. ಆದುದರಿಂದ ಸಾಲನಿವಾರಣೆ ಬೋರ್ಡಿನ ಪ್ರಯತ್ನವು ಸಫಲವಾಗಬೇಕಾದರೆ ಅವರು ತೀರ್ಮಾನಿಸುವ ಮೊಬಲಗನ್ನು ಕೂಡಲೆ ಒದಗಿಸಿಕೊಡತಕ್ಕದ್ದು.

ಬೇರೆ ಪ್ರಾಂತ್ಯಗಳಲ್ಲಿ ಸಾಲ ನಿವಾರಣೆ ಬೋರ್ಡಿನವರು ತೀರ್ಮಾನಿಸುವ ಮೊಬಲಗನ್ನು ಒದಗಿಸಿಕೊಡಲು ಭೂಮಿ ಅಡಮಾನದ ಬ್ಯಾಂಕುಗಳಿವೆ; ಅಲ್ಲದೆ ಇತರ ಬ್ಯಾಂಕುಗಳೂ ಹಣ ಸಹಾಯ ಮಾಡುತ್ತವೆ. ಕೊಡಗಿನಲ್ಲಿ ಇಂಥಾ ಅನುಕೂಲಗಳೇನೂ ಇಲ್ಲ. ಸರ್ಕಾರದವರು ವ್ಯವಸಾಯಗಾರರ ಸಾಲ ನಿವಾರಣೆಗಾಗಿ ಕೊಡುವ ಸಾಲವೊಂದೇ ಇಲ್ಲಿರುವ ಏರ್ಪಾಡು. ಇದು ಕಳೆದ ವರ್ಷ ಬರೇ 50,000 ರೂ. ಆಗಿತ್ತು. ಈ ವರ್ಷ ಇದು 30,000 ಇಳಿಸಲ್ಪಡುವದೆಂಬ ವರ್ತಮಾನವಿದೆ. ಈ ಅಲ್ಪ ಮೊಬಲಗಿನಿಂದ ರೈತರ ಸಾಲ ನಿವಾರಣೆಗೆ ಹೆಚ್ಚಿನ ಸಹಾಯ ದೊರೆಯಲಾರದು. ಆದ್ದರಿಂದಲೇ ಇಲ್ಲಿರುವ ಸಹಕಾರಿ ಸಂಘಗಳ ಕೇಂದ್ರ ಸಂಸ್ಥೆಯಾದ ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲಿ ಸಾಲ ನಿವಾರಣೆ ಬೋರ್ಡಿನವರು ಮಾಡುವ ತೀರ್ಮಾನಗಳನ್ನು ಸಫಲಗೊಳಿಸಲು ಸಾಲಗಾರರಿಗೆ ಧೀರ್ಘ ಕಂತಿನಲ್ಲಿ ಮರುಪಾವತಿ ಮಾಡುವ, ಸಾಲ ಒದಗಿಸುವಂತೆ ಮಾಡಬೇಕೆಂದು ಈ ಕೆಲವು ವರ್ಷಗಳಿಂದ ಹೋರಾಡುತ್ತಿರುವದಾಗಿದೆ. ಈಗಾಗಲೇ ಈ ಬ್ಯಾಂಕು ಸಾಲ ನಿವಾರಣೆಯ ಪ್ರಯತ್ನಕ್ಕೆ ಕೈ ಹಾಕಿ ಸ್ವಲ್ಪ ಮಟ್ಟಿಗೆ ಸಹಾಯ ಮಾಡುತ್ತಿದೆ. ಆದರೆ ದೀರ್ಘ ಕಂತಿನ ಸಾಲವನ್ನು ಸಾಕಷ್ಟು ಕೊಡಲು ಅವರಲ್ಲಿ ಹಣವಿಲ್ಲ. ಈ ಕಾರಣದಿಂದ ಸರ್ಕಾರದವರು ವ್ಯವಸಾಯಗಾರರಿಗೆ ಕೊಡುತ್ತಿರುವ ದೀರ್ಘ ಕಂತಿನ ಸಾಲವನ್ನು ಈ ಬ್ಯಾಂಕಿನ ಮೂಲಕ ಕೊಡಬೇಕೆಂತಲೂ ಮತ್ತು ಇಂಡಿಯಾ ಸರ್ಕಾರದಿಂದ ಈ ಬ್ಯಾಂಕಿಗೆ ದೀರ್ಘ ಅವಧಿಯಲ್ಲಿ ಹಣ ದೊರೆಯುವ ಏರ್ಪಾಡು ಮಾಡಬೇಕೆಂತಲೂ ಕೇಳಿಕೊಳ್ಳುವದಾಗಿದೆ. ಹೀಗೆ ಈ ಬ್ಯಾಂಕನ್ನು ಇತರ ಪ್ರಾಂತ್ಯಗಳಲ್ಲಿನ ಭೂಮಿ ಅಡಮಾನದ ಬ್ಯಾಂಕಿನ ಸ್ಥಿತಿಗೆ ತಂದಿಟ್ಟರೆ ಸಾಲ ನಿವಾರಣೆ ಬೋರ್ಡಿನ ಕಾರ್ಯಕಲಾಪಗಳು ಸಾಕಷ್ಟು ಮಟ್ಟಿಗೆ ಜಯಪ್ರದವಾಗುವದು. ಇಲ್ಲವಾದರೆ ಜನರೂ ಮತ್ತು ಸರ್ಕಾರದವರೂ ಯೋಚಿಸುವಷ್ಟು ಪ್ರಯೋಜನವು ಈ ಬೋರ್ಡಿನಿಂದ ಆಗಲಾರದೆಂಬುವುದರಲ್ಲಿ ಸಂಶಯವಿಲ್ಲ. ಪ್ರತ್ಯೇಕ ಭೂಮಿ ಗಿರ್ವಿ ಬ್ಯಾಂಕನ್ನು ಇಲ್ಲಿ ಸ್ಥಾಪಿಸುವದರಿಂದ ಆಗುವ ತೊಂದರೆಗಳನ್ನೂ, ಅದರ ಬದಲಿಗೆ ಸಹಕಾರಿ ಸೆಂಟ್ರಲ್ ಬ್ಯಾಂಕಿಗೆ ಸರಕಾರದವರು ದ್ರವ್ಯ ಸಹಾಯಕೊಟ್ಟು ಅದರಿಂದಲೇ ದೀರ್ಘ ಕಂತಿನ ಸಾಲ ಸಂಘಗಳ ಮೂಲಕ ರೈತರಿಗೆ ದೊರೆಯುವಂತೆ ಮಾಡುವದರ ಪ್ರಯೋಜನಗಳನ್ನೂ ಕುರಿತು ಈ ಮೊದಲು ಹಲವು ಸಾರಿ ಬರೆಯಲಾಗಿದೆ. ಆದ್ದರಿಂದ ಸರಕಾರದವರು ಈಗ ಸ್ಥಾಪಿಸಲೆಣಿಸುವ ಸಾಲನಿವಾರಣೆ ಬೋರ್ಡಿನ ಪ್ರಯೋಜನವು ರೈತರಿಗೆ ಸಾಕಷ್ಟು ಲಭಿಸಬೇಕೆಂದಿದ್ದರೆ ಅದಕ್ಕೆ ಬೇಕಾಗುವಷ್ಟು ಹಣ ಒದಗಿಸಿಕೊಡುವಂತೆ ಮಾಡಲು ಸಹಕಾರಿ ಸೆಂಟ್ರಲ್ ಬ್ಯಾಂಕನ್ನು ಸರಕಾರದವರು ಪ್ರೋತ್ಸಾಹಿಸಬೇಕಾದ್ದು ಅತ್ಯವಶ್ಯವೆಂದು ನಾವು ಪುನಃ ಒತ್ತಿಹೇಳಬೇಕಾಗಿದೆ. ಅಧಿಕಾರಿಗಳು ಈ ವಿಷಯಕ್ಕೆ ಕೂಡಲೇ ಗಮನಕೊಡುವರೆಂದು ನಂಬುತ್ತೇವೆ.

ಓರಿಯಂಟೆಲ್ ವಿಮಾ ಕಂಪೆನಿ.

ಈ ಪ್ರಸಿದ್ಧ ವಿಮಾ ಕಂಪೆನಿಯ 1938 ನೇ ವರ್ಷದ ವರದಿಯು ನಮ್ಮ ಕರಗತವಾಗಿದೆ. ಈ ಕಂಪೆನಿಯು ಈ ವರದಿ ವರ್ಷದಲ್ಲಿ ಮಾಡಿದ ಕಾರ್ಯಕಲಾಪಗಳು ಒಳ್ಳೇ ಸಂತೃಪ್ತಿಕರವಾದುದರಿಂದ ಅವರಲ್ಲಿ ಪ್ರಾಮುಖ್ಯಾಂಶಗಳನ್ನು ಇಲ್ಲಿ ಕೊಡುವೆವು.

ವರದಿ ವರ್ಷ ವಿಮೆ ಮಾಡಲ್ಪಟ್ಟ ಒಟ್ಟು ಮೊಬಲಗು 9 ಕೋಟಿ 77 ಲಕ್ಷಕ್ಕೆ ತಲುಪಿದೆ. ಈ ವರ್ಷ ಕಂಪೆನಿಯ ವರಮಾನವು ಹೆಚ್ಚಿದೆ. ಕಳೆದ ವರ್ಷ ವಾರ್ಷಿಕ ವರಮಾನವು ಮೂರು ಕೋಟಿ 27½ ಲಕ್ಷವಿತ್ತು. ಈ ವರ್ಷ ಅದು ಮೂರು ಕೋಟಿ 49½ ಲಕ್ಷಕ್ಕೆ ಏರಿದೆ. ವಿಮೆ ಮಾಡಿದವರಲ್ಲಿ ಸಾಲ ತೆಗೆಯುವವರ ಸಂಖ್ಯೆಯು ಹೆಚ್ಚಿರುವದು. ಇದು ಕೆಲವೆಡೆಗಳಲ್ಲಿ ಸಂಭವಿಸಿದ ಕ್ಷಾಮ ಮೊದಲಾದ್ದರ ಪರಿಣಾಮದಿಂದುಂಟಾದ ಆರ್ಥಿಕ ಮುಗ್ಗಟ್ಟಿನ ಫಲವೇ ಆಗಿದೆ. ಕಂಪೆನಿಯ ಬಂಡವಾಳವು 21½ ಕೋಟಿಯಿಂದ 23½ ಕೋಟಿಗೆ ಹೆಚ್ಚಿರುವದು. ವಿಮಾ ಮಾಡಿದ ಒಟ್ಟು ಮೊತ್ತವು 77 ಕೋಟಿಗೆ ಏರಿದೆ. ನಮ್ಮ ಕೈಸೇರಿರುವ ಈ ವರದಿಯಾದರೂ 64 ನೇ ವರದಿಯಾಗಿದೆ. ಕಂಪೆನಿಯ ಬಂಡವಾಳವೆಲ್ಲಾ ಸರಕಾರದ ಖಾತರಿಯಲ್ಲಿದೆ.

ಇನ್ನೊಂದು ವಿಶೇಷ ವಿಚಾರವೆಂದರೆ ವಿಮಾದಾರರ ಪೈಕಿ ಸಾಯುವವರ ಸಂಖ್ಯೆಯು ಕಮ್ಮಿಯಾಗುತ್ತಿರುವದಲ್ಲದೆ ಕಂಪೆನಿಯ ಖರ್ಚೂ ವರ್ಷೇ ವರ್ಷೇ ಕಮ್ಮಿಯಾಗುತ್ತಿರುವದು. ವಿಮಾ ಮಾಡಿದ ವಿಮಾದಾರರು ಜೀವಂತದಲ್ಲಿಯೇ ತಮ್ಮ ವಿಮಾ ಹಣವನ್ನು ಪಡೆಯುವದು ಹೆಚ್ಚುತ್ತಿರುವದು.

ಅಂತು ಈ ವಿಮಾ ಕಂಪೆನಿಯು ವರ್ಷ ವರ್ಷ ಉಜ್ವಲ ಕಾರ್ಯವನ್ನು ಮಾಡುತ್ತಿರುವದೆಂಬುದು ಇದರ ವಾರ್ಷಿಕ ವರದಿಗಳಿಂದ ಗೊತ್ತಾಗುತ್ತಿದೆ. ಕಂಪೆನಿಯು ಹಿಂದೂ ದೇಶಕ್ಕೆ ಮಾದರಿಯಾಗಿ ಬ್ರಿಟಿಷ್ ಸಾಮ್ರಾಜ್ಯದ ಕಂಪೆನಿಗಳಲ್ಲಿ 5ನೇ ಸ್ಥಾನ ಪಡೆದಿದೆ. ಹಾಗೆಯೇ ಮುಂದಕ್ಕೂ ಕಂಪೆನಿಯು ಪ್ರಗತಿಪಥದಲ್ಲಿ ಮುನ್ನಡೆದು ವಿಮಾ ಪ್ರಪಂಚದಲ್ಲಿ ಅಗ್ರಸ್ಥಾನ ಪಡೆಯುವಂತಾಗಲೆಂದು ಹಾರೈಸುತ್ತೇವೆ.

ನೋಟೀಸು.

ಸಿವಿಲ್ ಸರ್ಜನರ ಆಫೀಸು,
ಮಡಿಕೇರಿ, 16-5-1939.

ಹಳ್ಳಿಗಳ ಉಪಯೋಗಾರ್ಥವಾಗಿ ಮಡಿಕೇರಿ ಸಿವಿಲ್ ಆಸ್ಪತ್ರೆಯಲ್ಲಿ ಆರು ತಿಂಗಳ ವರೆಗೆ ಎರಡು ಜನರಿಗೆ ಸೂಲಗಿತ್ತಿ ತರಬೇತು ಕೊಡಲಾಗುವುದು.

(1) ತಿಂಗಳಿಗೆ 15 ರೂಪಾಯಿಯಂತೆ ಆರು ತಿಂಗಳ ವರೆಗೆ ವಿದ್ಯಾರ್ಥಿ ವೇತನ ಕೊಡಲಾಗುವದು.

(2) ಪೂರ್ಣ ತರಬೇತಾಗುವ ವರೆಗೆ ಪ್ರತಿಯೊಬ್ಬರಿಗೂ 10 ರೂ. ಭತ್ಯ ಕೊಡಲಾಗುವದು.

(3) ತರಬೇತು ಆದನಂತರ ಸಾಮಾನು ಸಾಹಿತ್ಯಗಳನ್ನು ತೆಗೆದುಕೊಳ್ಳಲು ರೂ. 20ರಂತೆ ಕೊಡಲಾಗುವುದು.

(4) ಉಮೇದ್ವಾರರು ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಪಾಸಾಗಿರಬೇಕು. ಕನಿಷ್ಠ ಪಕ್ಷ 25 ವರ್ಷ ವಯಸ್ಸಾದವರೂ ಆಗಿರಬೇಕು. ಗ್ರಾಮದಲ್ಲಿ ವಾಸಿಸುವ ಮಧ್ಯ ಪ್ರಾಯದ ವಿಧವೆಯರಿಗೆ ಹೆಚ್ಚಿನ ಮಾನ್ಯತೆ ಕೊಡಲಾಗುವದು.

ವಿದ್ಯಾ ಅರ್ಹತೆಯ ಬಗ್ಗೆಯ ಸರ್ಟಿಫಿಕೇಟಿನಿಂದ ಕೂಡಿದ ಅರ್ಜಿಗಳು ತಾ. 1-6-39ರ ಒಳಗೆ ಸಿವಿಲ್ ಸರ್ಜನರಿಗೆ ತಲಪಬೇಕು, ಆರಿಸುವಿಕೆಯು ತಾ. 5-6-39ರಲ್ಲಿ ನಡೆಯುವುದಲ್ಲದೆ ಕ್ಲಾಸು ಮಡಿಕೇರಿ ಆಸ್ಪತ್ರೆಯಲ್ಲಿ ಒಡನೆ ಪ್ರಾರಂಭವಾಗುವುದು. ಆರಿಸಲ್ಪಟ್ಟ ಉಮೇದ್ವಾರರು ತಾ. 5-6-39ರಿಂದಲೇ ಮಡಿಕೇರಿ ಆಸ್ಪತ್ರೆಯಲ್ಲಿ ತರಬೇತು ಹೊಂದಲು ತಯಾರಾಗಿರಬೇಕು.

ತರಬೇತು ಮುಗಿದನಂತರ ಅವರಿಗೆ ಸರ್ಟಿಫಿಕೇಟುಗಳನ್ನು ಕೊಡಲಾಗುವದು ಅವರು ಅವರ ಸ್ವಗ್ರಾಮದಲ್ಲೇ ವಾಸಿಸಿ ತಮ್ಮ ಕೆಲಸವನ್ನು ನಿರ್ವಹಿಸುವಂತೆ ಒಂದು ಕರಾರುಪತ್ರ ಬರೆದು ಕೊಡಬೇಕಾಗಿದೆ.

ಜಿ. ಪಿ. ಚಾರ್ಲ್ಸ್‌ವರ್ತ್,
2-2 ಕೆಪ್ಟನ್, ಐ. ಎಂ. ಎಸ್.
ಸಿವಿಲ್ ಸರ್ಜನ್, ಕೊಡಗು.

ವರ್ತಮಾನ ಸಂಗ್ರಹ.

ಒಳದೇಶ.

ಕಳೆದ ಇಂಟರ ಮೀಡಿಯೇಟ್ ಪರೀಕ್ಷೆಯಲ್ಲಿ ಶ್ರೀ ಚೋಡುಮಾಡ ಎಸ್. ಐಯ್ಯಮ್ಮನವರು ಎರಡನೇ ಮತ್ತು ಮೂರನೇ ಭಾಗಗಳಲ್ಲಿ ಉತ್ತೀರ್ಣರಾಗಿರುವರೆಂದೂ, ಮೈಸೂರು ಯೂನಿವರ್ಸಿಟಿ ಬಿ. ಎ. (ಆನರ್ಸ್) ಪರೀಕ್ಷೆಯಲ್ಲಿ ಶ್ರೀ ಕುಂಜಾಳಿಯನ ಮಾದಪ್ಪನವರೂ, ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಕುಂಜಾಳಿಯನ ಬೋಪಣ್ಣನವರೂ ತೇರ್ಗಡೆಯಾಗಿರುವರೆಂದೂ ತಿಳಿಸಲು ಸಂತೋಷಪಡುತ್ತೇವೆ. ಇವರಿಗೆಲ್ಲಾ ನಮ್ಮ ಅಭಿನಂದನೆಗಳು.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 125, ಏಲಕ್ಕಿ ಮಣಕ್ಕೆ ರೂ. 26 ಕ್ರಯವಿದೆ.

ರೀಸೆಸ್ ರಜಾ ತೀರಿ ಕೊಡಗಿನ ಸಿವಿಲ್ ಕೋರ್ಟುಗಳೂ, ಬೇಸಿಗೆ ರಜಾ ತೀರಿ ಮಡಿಕೇರಿ ಹೈಸ್ಕೂಲೂ ತಾರೀಕು 29-5-39 ರಿಂದ ತೆರೆಯಲ್ಪಡುವವು.

ಕೆಲವು ಶಾಲೆಗಳನ್ನು ಮುಚ್ಚಲು ಡಿ. ಬೋರ್ಡಿನ ಉಪಸಮಿತಿಯು ತೀರ್ಮಾನಿಸಿರುವರೆಂದು ಪ್ರಕಟಿಸಿದ ವರ್ತಮಾನವು ನಿಜವಲ್ಲವೆಂದೂ, ಮಕ್ಕಳು ಕಮ್ಮಿ ಇರುವ ಶಾಲೆಗಳನ್ನು ಗ್ರಾಂಟ್-ಇನ್-ಎಯಿಡ್ ಶಾಲೆಗಳನ್ನಾಗಿ ಮಾಡುವಂತೆ ಮತ್ತು ಹೆಚ್ಚು ಮಕ್ಕಳಿರುವ ಶಾಲೆಗಳಿಗೆ ಹೆಚ್ಚಿಗೆ ಉಪಾಧ್ಯಾಯರನ್ನು ಕೊಡುವಂತೆ ತೀರ್ಮಾನಿಸಿರುವರೆಂದೂ ಆ ಬಗ್ಗೆ ಪರಿಶೀಲಿಸಲು ಉಪಸಮಿತಿಯವರು ಶಾಲೆಗಳನ್ನು ಸಂದರ್ಶಿಸುತ್ತಿದ್ದಾರೆಂದೂ ತಿಳಿಯುತ್ತೇವೆ.

ನಾಪೋಕ್ಲು.

ಬೇತರಿ ಕಡುವಿನಲ್ಲಿ ಕಾವೇರಿ ಹೊಳೆಗೆ ಒಂದು ನೀರು ಹೆಚ್ಚು ಬಂದಾಗ ಮುಳುಗಿಹೋಗುವಂಥಾ (Sub-mergible) ಸೇತುವೆ ಕಟ್ಟಲು ಇಂಡಿಯಾ ಸರಕಾರದವರು ಸುಮಾರು 41,000 ರೂಪಾಯಿ ಮಂಜೂರ್ಮಾಡುವರಾಗಿ ವರ್ತಮಾನ.

ಹಿಂದೂದೇಶ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗೂ ಮತ್ತು ವರ್ಕಿಂಗ್ ಕಮಿಟಿಯ ಮೀಟಿಂಗೂ ಪೂನಾದಲ್ಲಿ ನಡೆಯಬೇಕೆಂದು ಪೂನಾ ಕಾಂಗ್ರೆಸ್ ಕಮಿಟಿಯವರು ಆಹ್ವಾನಿಸಿರುವರು.

ಸುಭಾಷರ ಹೊಸ ಪಕ್ಷವಾದ ಫಾರ್ವರ್ಡ್ ಬ್ಲಾಕ್ ಯ ಮುನ್ನಡೆಯ ಪಕ್ಷದ ಸಮ್ಮೇಳನವು ಬೊಂಬಾಯಿಯಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗು ನಡೆಯುವ ಮೊದಲು ಜರಗುವದೆಂದು ತೀರ್ಮಾನವಾಗಿದೆ.

ಮುಂದಿನ ಮಹಾ ಯುದ್ಧದಲ್ಲಿ ಜನ, ಧನ ಸಹಾಯವನ್ನು, ಮುಸಲ್ಮಾನರು ಬ್ರಿಟಿಷರಿಗೆ ಮಾಡಕೂಡದೆಂಬ ಠರಾವು ಮುಂಬಾಯಿ ಪ್ರಾಂತೀಕ ಅಹ್ರಾರ್ ಪರಿಷತ್ತು ಮತ್ತು ಜಮಾಯಿತ್-ಉಲ್-ಉಲ್ಲೇಮಾದಲ್ಲಿ ಪಾಸಾಯಿತು.

ರಾಷ್ಟ್ರಪತಿಗಳಾದ ಬಾಬು ರಾಜೇಂದ್ರಪ್ರಸಾದರು ಮುಂದಿನ ಕಾಂಗ್ರೆಸ್ ಅಧಿವೇಶನಕ್ಕಾಗಿ ಹಣ ಸಂಗ್ರಹವಾಗಬೇಕೆಂದು ಅರಿಕೆಮಾಡಿಕೊಂಡಿದ್ದಾರೆ. 'ಆ ಪ್ರಾಂತದ ೬೭ ಸಾವಿರ ಹಳ್ಳಿಗಳಲ್ಲಿ ಪ್ರತಿಯೊಂದೂ ರೂ. 4-5ರಂತೆ ವಂತಿಗೆ ಕೊಡಲಿ; ಇತರರೂ ಧನ ಸಹಾಯಮಾಡಲಿ' ಎಂದು ಅವರ ವಿನಂತಿ.

ಅಖಿಲ ಭಾರತ ರಾಜಕೀಯ ಕೈದಿಗಳ ದಿನಾಚರಣೆಯ ಸಂಬಂಧದಲ್ಲಿ ಭಾಷಣ ಮಾಡುತ್ತಾ ಪಂಡಿತ ನೆಹರುಗಳವರು ಸುಭಾಷರ ಮುನ್ನಡೆಯ ಪಕ್ಷವು ಮಂಗಳಕರವಲ್ಲವೆಂದೂ, ಪ್ರತಿಯೊಬ್ಬನಿಗೂ ಅವನವನ ಅಭಿಪ್ರಾಯ ವ್ಯಕ್ತಮಾಡುವ ಮತ್ತು ಅದಕ್ಕನುಗುಣ ವರ್ತಿಸುವ ಸ್ವಾತಂತ್ರ್ಯತೆ ಇದ್ದರೂ, ಹೀಗೆ ಕಾಂಗ್ರೆಸಿನಲ್ಲಿ ಹೊಸ ಪಕ್ಷ ಸ್ಥಾಪಿಸಿ ಸಂಸ್ಥೆಯಲ್ಲಿ ಒಡಕುತರುವದು ಶುಭದಾಯಕವಲ್ಲವೆಂದೂ ಹೇಳಿದರು.

ಮುಸ್ಲಿಂ ಲೀಗಿನ ಧುರೀಣರಾದ ಮಿ ಜಿನ್ನರ ಮತ್ತು ಇನ್ನಿತರರ ಭಾಷಣಗಳಿಂದ ಅವರು ದೇಶೀಯ ಸಂಸ್ಥಾನಗಳಲ್ಲಿ ನಿರಂಕುಶ ಪ್ರಭುತ್ವವನ್ನು ರೂಢಮೂಲವಾಗಿರುವಂತೆ ಮಾಡಲು ಪ್ರಯತ್ನಿಸುವರೆಂದು ಭಾಸವಾಗುವದೆಂದು ಹೇಳಿ ಕಾಶ್ಮೀರದ ಮುಸ್ಲಿಂ ಧುರೀಣರಾದ ಮಿ. ಎಸ್. ಎಂ. ಅಬ್ದುಲ್ಲರವರು ಲೀಗಿನ ಧುರೀಣರನ್ನು ಟೀಕಿಸಿದ್ದಾರೆ. ಕಾಶ್ಮೀರದ ಮುಸ್ಲಿಮರು ರಾಷ್ಟ್ರೀಯ ಸಭೆಯ ಧೋರಣೆಯನ್ನು ಅನುಸರಿಸುವರಂತೆ.

ಸಿಲೋನ್ ದ್ವೀಪದ ಎಲ್ಲಾ ಭಾಗಗಳಲ್ಲಿಯೂ ನಾನಾ ಕೆಲಸ ಕಾರ್ಯಗಳಲ್ಲಿ ಪರದೇಶೀಯರನೇಕರು ಹೋಗಿ ನೆಲಸಿ ಆ ದ್ವೀಪದ ನಿವಾಸಿಗಳಿಗೆ ತೊಂದರೆಯುಂಟಾಗಿರುವುದೆಂಬ ಅಂಶವು ಅಲ್ಲಿನ ಸರಕಾರದವರ ಗಮನಕ್ಕೆ ಬಂದಿದೆ. ಐದು ವರ್ಷಗಳಿಂದ ಈಚೆಗೆ ಹೊಸದಾಗಿ ಸೇರಿದ ಕೂಲಿ ಜನಗಳು ಎಷ್ಟು ಮಂದಿ ಇರುತ್ತಾರೆಂದೂ ಅವರು ಇರಬೇಕಾದ್ದು ಆವಶ್ಯಕವೇ ಎಂಬುವದನ್ನೂ ಎಲ್ಲಾ ಸರಕಾರಿ ಇಲಾಖೆಗಳ ಮುಖ್ಯಾಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ.

ಕಾಂಗ್ರೆಸಿನಲ್ಲಿ ನಕ್ಲಿ ಮೆಂಬರುಗಳ ಸಮಾವೇಶವಾಗದಂತೆ ಪ್ರಯತ್ನಗಳು ನಡೆಯಲಾರಂಭಿಸಿವೆ. ಇನ್ಸ್ಪೆಕ್ಟರುಗಳು ಇವನ್ನು ತನಿಖೆ ಮಾಡುವಂತೆ ಇದರಲ್ಲಿ ಏರ್ಪಾಡುಗಳು ನಡೆಯಬೇಕೆಂದೆನ್ನುವ ಸೂಚನೆಗಳೊಡನೆ ಬೊಂಬಾಯಿ ಪ್ರಾಂತೀಕ ಕಾಂಗ್ರೆಸು ಕಮಿಟಿಯೂ, ಈ ವಿಚಾರಕ್ಕಾಗಿ ಹಲಕೆಲವು ನಿರ್ಬಂಧಗಳನ್ನೇರ್ಪಡಿಸಿದೆ. ಇನ್ನು ಮುಂದೆ ಕಾಂಗ್ರೆಸು ಮೆಂಬರಿಗೊಂದು ಕಾರ್ಡು– ಅವರ ಹೆಸರು, ನಂಬರುಗಳುಳ್ಳದ್ದು, ಕೊಡಲ್ಪಡುವದಾಗಿದ್ದು ಅದೇ ಕಾಂಗ್ರೆಸಿನ ಯಾವತ್ತು ಕಾರ್ಯಕ್ರಮಗಳಲ್ಲಿಯೂ ಉಪಯೋಗವಾಗುವಂತಹ ವ್ಯವಸ್ಥೆ ಜಾರಿಗೆ ಬರಲಿದೆ.

ಬೊಗ್ರಾ ಜಿಲ್ಲೆಯು ಸಾಕ್ಷರತಾ ಪ್ರಚಾರ ಕಾರ್ಯದಲ್ಲಿ ಅತ್ಯಂತ ಯಶಸ್ಸನ್ನು ಸಂಪಾದಿಸಿದ ಬಂಗಾಳದ ಪ್ರಥಮ ಪ್ರದೇಶವೆಂದು ಈಗಲೀಗ ಪ್ರಕಟವಾಗಿದೆ. "ಕೈಬೆರಳಿನ ಗುರ್ತ"ದ ರಗಳೆಯೇ ಬೇಡವೆಂದು ಅಲ್ಲಿನ ಯುವಕರೆಲ್ಲರಿಗೂ ತಮ್ಮ ಹೆಸರನ್ನು ಬರೆಯಲು ಕಲಿಸಿದುದಲ್ಲದೆ ಈಗ ಒಂದನೆಯ ಪುಸ್ತಕದ ಪಾಠಗಳಿಗೂ ಪ್ರಾರಂಭವಾಗಿದೆ. ಈ ಶಿಕ್ಷಣದ ಮುಂದಾಳುಗಳಾಗಿ ಖಾನ್ ಬಹದೂರ್ ಮಹಮ್ಮದಾಲಿ, ಎಂ. ಎಲ್. ಎ., ಮತ್ತು ಚೇರ್ಮೆನ್, ಡಿಸ್ಟ್ರಿಕ್ಟ್ ಬೋರ್ಡು, ಇವರು ಜನಗಳಿಗೆ ಸ್ವಂತ ಖರ್ಚಿನಿಂದ 50 ಸಾವಿರ ಲೇಖನಿಕೆಗಳನ್ನು ಕೊಟ್ಟಿರುವರಲ್ಲದೆ, ಆ ಡಿ. ಬೋರ್ಡು ಅಗತ್ಯವಿರುವ ಮಸಿ ಬುಡ್ಡಿಗಳನ್ನೂ ಒದಗಿಸುವಂತೆ ವರ್ತಿಸಿದುವರು. ವಿದ್ಯಾಭಿಮಾನ, ಜನಸೇವೆಯೆಂದರೆ ಇದೀಗ!

ಸಂಯುಕ್ತ ಪ್ರಾಂತದ ನ್ಯಾಯವಿಧಾಯಕ ಸಭೆಯಲ್ಲಿ ಹಿಂದೂ ಚರಿತ್ರೆಯ ಪಠ್ಯ ಪುಸ್ತಕಗಳ ವಿಮರ್ಶೆಯ ಬಗೆಗೆ ವಿಚಾರಿಸಲೊಂದು ಕಮಿಟಿಯಾಗಬೇಕೆಂದು ಅದೊಂದು ಠರಾವು ಸರಕಾರಕ್ಕೆ ಶಿಫಾರಸು ಮಾಡಿದೆ. ಇಂಡಿಯಾದಲ್ಲಿ ಹಿಂದೂ ಮುಸ್ಲಿಮರ ಮನಸ್ತಾಪಗಳಿಗೆ ಕಾರಣವಾದ ಅಂಶಗಳಿರಬಾರದು. ಹಿಂದೂ ನಿವಾಸಿಗಳು ಇತರ ಜನಾಂಗದವರಿಗಿಂತ ನಿಕೃಷ್ಟರೆಂದು ಭಾವಿಸುವ ವಿಚಾರಗಳಿರಬಾರದು. ದೇಶಾಭಿಮಾನ, ಭ್ರಾತೃಭಾವ, ಇವನ್ನು ವಿದ್ಯಾರ್ಥಿಗಳಲ್ಲಿ ತುಂಬುವ ಗುಣಗಳಿರಬೇಕು ಎಂಬುದೇ ಈ ಸೂಚನೆಗೆ ಕಾರಣವಾಗಿದೆ. ನ್ಯಾಯಖಾತೆಯ ಮಿನಿಸ್ಟರರಾದ ಡಾ. ಕಟ್ಜುರವರೂ ಈ ಠರಾವಿನ ಸ್ಫೂರ್ತಿಯನ್ನು ಅಂಗೀಕರಿಸಿ, 'ಹೌದು, ವಿದೇಶೀಯರಿಂದ ಬರೆಯಲ್ಪಟ್ಟ ಪುಸ್ತಕಗಳು ಅನ್ಯ ಚರಿತ್ರೆಗಳಲ್ಲಿ; ಪ್ರಚಾರ ಕಾರ್ಯದ ಗ್ರಂಥಗಳು. ಚರಿತ್ರೆಯು ಹಿಂದೂದೇಶದ ದೃಷ್ಟಿಯಿಂದಲೇ ಬರೆಯಲ್ಪಡಬೇಕು. ಅದರಲ್ಲಿ ಪಕ್ಷಪಾತದ ವಿಷಯಗಳೇನೂ ಇರಬಾರದು' ಎಂದಿರುವರು.

ವಿದೇಶ

ರಷ್ಯಾದ ಮಂಚುಕೋಗಡಿಯಲ್ಲಿ ರಷ್ಯಾ ಜಪಾನರೊಡನೆ ಘರ್ಷಣೆ ಬಂದಿದೆ. ಇಕ್ಕಡೆಯವರಿಗೂ ಚಿಕ್ಕ ಚಿಕ್ಕ ಕದನವಾಗಿದೆ. ಮುಂದೆ ಇದು ಹೇಗೆ ಪರಿಣಮಿಸುವದೊ ತಿಳಿಯದು.

ಸಂಯುಕ್ತ ಮಲಯ ಸಂಸ್ಥಾನಗಳವರು ಬ್ರಿಟಿಷ ಸಾರ್ವಭೌಮರವರ ರಕ್ಷಣ ಬಲದ ಖರ್ಚಿಗಾಗಿ ತಮ್ಮ ಸಂಸ್ಥಾನದ 40,00,000 ಡಾಲರುಗಳನ್ನು ಕೊಡಲು ಒಪ್ಪಿರುತ್ತಾರೆ.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರದವರು ತಮ್ಮ ವಿಮಾನ ಸೈನ್ಯಕ್ಕಾಗಿ ನವೀನ ತರದ ಸುಮಾರು 150 ವಿಮಾನಗಳನ್ನು ಕಟ್ಟಲು ಅಪ್ಪಣೆ ಮಾಡಿರುತ್ತಾರೆ. ಇವುಗಳ ವೆಚ್ಚ ಸುಮಾರು 150 ಲಕ್ಷ ಡಾಲರುಗಳಾಗಬಹುದೆಂದು ಅಂದಾಜಾಗಿದೆ. ಶತ್ರುಪಕ್ಷದವರ ಮೇಲೆ ಸಿಡಿಮದ್ದುಗಳನ್ನು ಸುರಿಸುತ್ತಾ ಸುತ್ತಿಗೆ ಹಾರಲು ಈ ವಿಮಾನಗಳು ಅತ್ಯಂತ ಸಹಕಾರಿಯಾಗಿರುವವೆಂದು ತಿಳಿಯುತ್ತದೆ. ಈ ವಿಮಾನಗಳು ಗಂಟೆಗೆ 350 ಮೈಲಿಗಳಂತೆ ಓಡುವವು.

ಸ್ಪೇಯಿನ್ ದೇಶದ ರಾಜಧಾನಿಯಾದ ಮಾಡ್ರಿಡಿನಲ್ಲಿ ಜನರಲ್ ಫ್ರಾಂಕೊರವರು ಕಳೆದ ತಾ. 19 ನೇ ಶುಕ್ರವಾರ ವಿಜಯೋತ್ಸವವನ್ನು ಆಚರಿಸಿದರು. ಸ್ಪೇಯಿನಿನ ಮೊರೆವಿಯಾದ ಮತ್ತು ಜರ್ಮನಿಯ ಸೈನ್ಯ ದಳಗಳವರು ಅವರ ಮುಂದೆ ಕವಾತುಗಳನ್ನು ಮಾಡಿ ಮುಜರೆ ಮಾಡಿದರು. ಆ ದಿನ ಮಾಡ್ರಿಡಿನ ರಾಜಬೀದಿಗಳೆಲ್ಲವನ್ನೂ ಪುಷ್ಪ ಪತಾಕೆಗಳಿಂದ ಶೃಂಗರಿಸಿದ್ದರು. ಜನರಲ್ ಫ್ರಾಂಕೋರವರು ಆ ದಿನ ಆಕಾಶವಾಣಿಯ ಮೂಲಕ ಮಾತನಾಡುತ್ತಾ–ನಮ್ಮ ಗೌರವವನ್ನೂ, ಸ್ವಾತಂತ್ರ್ಯವನ್ನೂ ಇತರ ಎಲ್ಲಾ ವಸ್ತುಗಳಿಗಿಂತಲೂ ಮುಂದುಮಾಡೋಣ. ಯೂರೋಪಿನಲ್ಲಿ ಶಾಂತಿ ಸ್ಥಾಪಿಸಲು ಸಹಕರಿಸಬೇಕೆಂಬುದೇ ನಮ್ಮ ಆಕಾಂಕ್ಷೆ–ಎಂದು ಹೇಳಿದರು. ಕೊನೆಯಲ್ಲಿ ಅವರು ತಮ್ಮ ದೇಶದ ಪುನರ್ರಚನೆಗಾಗಿ ಎಲ್ಲರೂ ಪ್ರಯತ್ನಪಡಬೇಕೆಂದು ಪ್ರಾರ್ಥಿಸಿದರು.

ಮಾರಾಟಕ್ಕೆ ಇದೆ.

ಮಡಿಕೇರಿ ರಾಜಾಸೀಟ್ ಬಳಿ ವಾಸಕ್ಕೆ ಲಾಯಕ್ಕಾದ ಒಂದು ಮನೆ, ಇದಕ್ಕೆ ಸೇರಿದ ಹೊರ ಮನೆ, ಅಡಿಗೆ ಮನೆ ವಗೈರೆ ಮತ್ತು ಈ ಮನೆಗೆ ಸೇರಿದ ಹಾಲಿ ತಿಂಗಳಿಗೆ 10 ರೂಪಾಯಿ ಬಾಡಿಗೆ ಬರುವ ಒಂದು ಲೈನ್, ಸಾಧಾರಣ ಎರಡು ಎಕರೆಯಷ್ಟು ಮನೆಗೆ ಸೇರಿದ ಜಾಗ ಸಹ ಮಾರಾಟಕ್ಕಿದೆ. ಇಷ್ಟಪಟ್ಟವರು ಮನೆಯನ್ನು ನೋಡಿ ಕಮ್ಮಿ ಬೆಲೆಯನ್ನು ತಿಳಿಸಬಹುದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

"X"
C/o. Editor,
"Kodagu" Ltd.,
4-1 Mercara.

Notice.

An auction of gold jewels pledged at the Travancore National & Quilon Bank Ltd., (In Liquidation) Mercara, will be held on the 9th June 1939 at 11 a. m. at the premises of the Bank.

ನೋಟೀಸು.

ಟ್ರಾವಂಕೂರ್ ನೇಷನಲ್ ಮತ್ತು ಕ್ವಿಲಾನ್ ಬ್ಯಾಂಕ್ ಲಿಮಿಟೆಡ್, ಮಡಿಕೇರಿ ಶಾಖೆಯಲ್ಲಿ ಅಡವು ಇಡಲ್ಪಟ್ಟಿದ್ದ ಚಿನ್ನದ ಒಡವೆಗಳು ಜೂನ್ ತಾ. 9ರಲ್ಲಿ ಬೆಳಿಗ್ಗೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವವು.

ಕೆ. ಎ. ಚೆಟ್ಟಿಯಾರ್,
2-1] ಅಫೀಶಿಯಲ್ ಲಿಕ್ವಿಡೇಟರಿಗಾಗಿ

ಪರರಾಷ್ಟ್ರಗಳ ಪರಿಸ್ಥಿತಿ.

ಪ್ಯಾಲೆಸ್ಟೈನ್.

ಇಲ್ಲಿ ಬ್ರಿಟಿಷರಿಗೂ, ಮುಸಲ್ಮಾನರಿಗೂ ಮನಕಷಾಯವುಂಟಾಗಿ ಅನೇಕ ಸಂಧಾನ ಶರತ್ತುಗಳ ಪ್ರಯತ್ನವಾದರೂ ಜಯಪ್ರದವಾಗದೆ ಬ್ರಿಟಿಷರು ತಮ್ಮ ಘೋಷಣೆಯನ್ನೇ ಅನುಸರಿಸುತ್ತಿದ್ದದ್ದು ಎಲ್ಲರಿಗೂ ವಿಧಿತವಿದೆ. ಇತ್ತಲಾಗಿ ಬ್ರಿಟಿಷರ 'ಶ್ವೇತಪತ್ರ' ಒಂದು ಅಲ್ಲಿ ಪ್ರಕಟವಾಗಿದೆ. ಇದರ ಮೇರೆಗೆ ಬ್ರಿಟಿಷ್ ಸರಕಾರವು ಇನ್ನು 10 ವರ್ಷಗಳೊಳಗಾಗಿ ನೂರರಲ್ಲಿ 2 ರಷ್ಟು ಅರಬಿಯರ ಬಹುಮತವಿರುವ ಒಂದು ಸ್ವತಂತ್ರ ರಾಷ್ಟ್ರನಿರ್ಮಾಣಕ್ಕೆ ಒಪ್ಪಿಕೊಂಡಿರುವದು. ಇದಲ್ಲದೆ ಯೆಹೂದಿಯ ರಾಷ್ಟ್ರೀಯ ಪ್ರಶ್ನೆಯೂ ವಿಮರ್ಶಿಸಲ್ಪಟ್ಟು ಐದು ವರ್ಷಗಳ ಬಳಿಕ, ಯೆಹೂದಿಗಳ ಆಮದು ರಪ್ತುಗಳ ವಿಚಾರವನ್ನು ಸಂಪೂರ್ಣ ನಿರ್ಬಂಧಕ್ಕೊಳಪಡಿಸಲಾಗುವದೆಂದೂ, ಅಲ್ಲಿಯ ವರೆಗೆ ನಿರಾಶ್ರಿತ ಎಪ್ಪತ್ತೈದು ಸಾವಿರ ಮಂದಿ ಯೆಹೂದಿಗಳಿಗೆ ಅಲ್ಲಿ ನಿಯಮಿತಿಯಿಂದ ಸ್ಥಳ ಕೊಡಬೇಕೆಂದೂ ವಿಧಿಸಲಾಗಿದೆ. ಇನ್ನು ಅರಬಿ ಯೆಹೂದಿಗಳ ಪ್ರಕೃತ ಮನಸ್ತಾಪವು ಕಡಿಮೆಯಾದಂತಾಯಿತು. ಇಷ್ಟು ಮಟ್ಟಿನ ಸೌಲಭ್ಯಗಳನ್ನು ಮಧ್ಯಸ್ಥಗಾರಿಕೆ ವಹಿಸಿ ಬ್ರಿಟಿಷರು ಮಾಡಿಕೊಟ್ಟಿದ್ದರೂ ಆ ಎರಡು ಜನಾಂಗಗಳಿಗೆ ತೃಪ್ತಿಯಿರುವದಿಲ್ಲ. ಅರಬರು ತಮ್ಮ ಸ್ವಾತಂತ್ರ್ಯದಾನ ಅವಧಿಯನ್ನು ಹತ್ತು ವರ್ಷಕ್ಕಿಟ್ಟದ್ದು ಅನ್ಯಾಯವೆಂದೂ, ಯೆಹೂದಿ ತಮ್ಮ ಹಕ್ಕನ್ನು ಅಂಗೀಕರಿಸುವ ಅವಧಿಯನ್ನು ಐದು ವರ್ಷಕ್ಕಿಟ್ಟದ್ದು ಶೋಚನೀಯವೆಂದೂ ಸಾರುತ್ತಿರುವರು, ಇದರಿಂದಾಗಿ ಅಶಾಂತಿಯು ತಲೆದೋರಿದೆ, ಜರುಸಲೇಮಿನಲ್ಲಿ ಯೆಹೂದಿಯರ ಬಹಿಷ್ಕಾರಗಳೂ, ಹರತಾಳಗಳೂ, ಉಪವಾಸಗಳೂ ಪ್ರಖರವಾಗಿರುವವಂತೆ. ಟೆಲ್ ಅವಿಲ್‌ನಲ್ಲಿ ಯೆಹೂದಿಗಳ ಧಾಳಿಯೇ ಪ್ರಾರಂಭವಾಗಿರುವದಂತೆ, ಹೀಗೆ ಸರಕಾರವನ್ನು ಬಹಿರಂಗ ವಿರೋಧಿಸುವ ಮಟ್ಟಕ್ಕೆ ಅಲ್ಲಿಯ ಯೆಹೂದಿ ಹಾಗೂ ಅರಬರ ಸ್ಥಿತಿಯು ತಲಪಿದೆ. ಈ ಅವಾಂತರವು ಹೇಗ ಮುಕ್ತಾಯಗೊಳ್ಳುವದೋ ಯಾರಿಗೆ ಗೊತ್ತು?

ಬ್ರಿಟಿಷ್ ರಷ್ಯಾ ಸಂಧಿ.

ದ್ವಾಪರಯುಗದ ಅಶ್ವಮೇಧ ಯಾಗದಷ್ಟು ಜಟಿಲವಾಗಿ ಪರಿಣಮಿಸಿರುವ ಈ ಪ್ರಶ್ನೆಯು ಬೇಗ ಅಂತ್ಯಗೊಳ್ಳುವ ಚಿಹ್ನೆಯು ಕಂಡು ಬರುವದಿಲ್ಲ. ಬ್ರಿಟನಿನ ಸೂಚನೆಗಳಿಗೂ, ರಷ್ಯಾದವರ ಸೂಚನೆಗಳಿಗೂ ಅಜಗಜಾಂತರ ವ್ಯತ್ಯಾಸವಿರುವದರಿಂದ ರಷ್ಯಾದವರು ಬ್ರಿಟನರ ಸೂಚನೆಗಳನ್ನು ತಿರಸ್ಕರಿಸಿರುವರು. ಇವರಡು ರಾಷ್ಟ್ರಗಳ ಪರಿಸ್ಥಿತಿಯನ್ನವಲೋಕಿಸುತ್ತಿರುವ ಫ್ರಾನ್ಸಿಗೆ ಇವುಗಳ ವರ್ತನೆಯಿಂದ ತಲೆಬೇನೆ ಬಂದಿದೆಯಂತೆ. ಆದ್ದರಿಂದ ಈ ಎರಡು ರಾಷ್ಟ್ರಗಳೊಳಗಿನ ಈ ಜಟಿಲ ಸಮಸ್ಯೆಯಲ್ಲಿ ಫ್ರಾನ್ಸು ಮಧ್ಯಸ್ಥಿಕೆ ವಹಿಸಿ ಎರಡು ರಾಷ್ಟ್ರಗಳಿಗೂ ಒಪ್ಪುವ ಸೂಚನೆಗಳನ್ನು ಕೊಡುವದೆಂದೂ ತಿಳಿದುಬಂದಿರುವದು. ಮಧ್ಯೆ ಲೀಗ್ ಕೌನ್ಸಿಲಿನ ಮೀಟಿಂಗು ನಡೆಯುವ ವರೆಗೆ ಈ ವ್ಯವಹಾರವನ್ನು ಮುಂದರಿಸಿಡಬೇಕೆಂದು ಸ್ಟೇಟ್ಸ್‌ಮೆನ್ ಮೊದಲಾದ ಪತ್ರಿಕೆಗಳು ಸಾರುತ್ತಿವೆ. ಪರಿಸ್ಥಿತಿ ಹೇಗಾಗುವದೋ ನೋಡೋಣ.

ಪೋಲೆಂಡ್.

ಜರ್ಮನಿಯ ಹಿತವಚನಗಳು ಪೋಲೆಂಡಿಗೆ ಅರ್ಥವಾಗುವದಿಲ್ಲವೆಂದು ಜರ್ಮನಿಯು ಘೋಷಿಸುತ್ತಿದೆ. ಜರ್ಮನಿಯ ಧ್ಯೇಯವಾದರೂ ತನ್ನ ರಾಷ್ಟ್ರದಿಂದ ಪೋಲೆಂಡಿನ ಮೂಲಕ ಡೇನ್ಜಿಗಿಗೆ ಹೋಗಬೇಕಾಗಿದೆ. ಅದಕ್ಕಾಗಿ ಕೊರಿಡರ್ ಎಂಬಲ್ಲಿಂದ ಡೇನ್ಜಿಗ್ ವರೆಗೆ ಮಾರ್ಗಮಾಡಲು ಆತನಿಗೆ ಪೋಲೆಂಡಿನ ಸಮ್ಮತಿ ಬೇಕಿದೆ. ಹೊರಗೆ ಜರ್ಮನಿಯು ಹೇಳುವಂತೆ ಇದು ಅಲ್ಪ ವಿಚಾರವೆಂದು ಕಂಡುಬಂದರೂ ಕೂಲಂಕುಶವಾಗಿ ವಿಚಾರಿಸಿದರೆ ಇದು ಪೋಲೆಂಡಿನ ಕತ್ತು ಹಿಸುಕುವ ಪ್ರಯತ್ನವೆಂದು ತಿಳಿದುಬರದಿರದು. ಇಂದು ಹಿಟ್ಲರನು ಎಲ್ಲಿ ಕೊರಿಡರ್ ಡೇನ್ಜಿಗ್‌ಗಳೊಳಗೆ ದಾರಿಮಾಡಲು ಇಚ್ಛಿಸಿರುವನೋ ಆ ಮಾರ್ಗವಾಗಿಯೇ ಪೋಲೆಂಡ್ ಉತ್ತರ ಸಮುದ್ರಕ್ಕೆ ಕಾಲಿಡಬೇಕಾಗಿದೆ. ಅಂಥಾದ್ದರಲ್ಲಿ ಆ ಮಾರ್ಗವನ್ನು ಹಿಟ್ಲರನ ವಶಕೊಟ್ಟರೆ ಪೋಲೆಂಡು ಸಮುದ್ರವನ್ನು ಬೇರೆ ದಾರಿಯಿಂದ ಕಾಣುವದು ಅಸಾಧ್ಯ. ಅಂದ ಮೇಲೆ ಪೋಲೆಂಡಿನ ವ್ಯಾಪಾರದ ಗತಿಯಾದರೂ ಏನಾಗಬೇಕು? ಹಿಟ್ಲರನು ಮಾಡಲಿಚ್ಛಿಸಿರುವ ರಸ್ತೆಯಾದರೂ ಪೋಲೆಂಡಿನ ಜೀವಾಳದಂತಿರುವ ಈ ಗ್ಡೀನಿಯಾ ಎಂಬ ಪ್ರಾಂತಕ್ಕಾಗಿ ಹೋಗುವದರಿಂದ ತನ್ನ ಅತ್ಯಮೂಲ್ಯ ಭಾಗವಾದ ಇದನ್ನು ಇಬ್ಭಾಗಮಾಡುವ ಮನಸ್ಸು ಪೋಲೆಂಡಿಗಿಲ್ಲ. ಹೀಗೆ ಮಾರ್ಗಮಾಡುವ ಹೆಬ್ಬಯಕೆಯನ್ನು ಹೊರಗೆ ತೋರಿಸಿ ಪೋಲೆಂಡನ್ನೆ ತನ್ನ ಬಗಲಲ್ಲಿ ಹಾಕುವ ಹಿಟ್ಲರನ ಕುತಂತ್ರವು ಪೋಲೆಂಡಿನವರಿಗೆ ತಿಳಿಯದಿಲ್ಲ. ಹಿಟ್ಲರನು ಪೋಲೆಂಡರ ತಿರಸ್ಕಾರದಿಂದ ಒಳಗೊಳಗೇ ಕುದಿಯುತ್ತಿರುವನು. ತಾ. 22 ರಲ್ಲಿ ಪೋಲೆಂಡಿನ ಗಡಿಯಲ್ಲಿ ಕೆಲವು ಜರ್ಮನ್ ಸೈನಿಕರು ಪೋಲೆಂಡಿನವರ ಕೆಲವು ಮನೆಗಳಿಗೆ ಬೆಂಕಿ ಹಚ್ಚಿದರೆಂದೂ, ಪೋಲೆಂಡರು ಗುಂಡು ಹಾರಿಸಿದರಿಂದ ಒಬ್ಬ ಜರ್ಮನನು ಮೃತನಾದನೆಂದೂ ತಿಳಿಯಬಂದಿದೆ. ಹೀಗೆ ಒಳಗೊಳಗೆ ಚಿಕ್ಕ ಚಿಕ್ಕ ಕದನಗಳಾಗಿ ಯಾವಾಗ ಪ್ರಚಂಡ ಯುದ್ಧವಾಗಿ ಪರಿಣಮಿಸುವದೋ ತಿಳಿಯದು. ಅಂತು ಈ ವರೆಗೆ ಹಿಟ್ಲರನಿಗೆ ಶರಣಾಗತರಾದ ರಾಷ್ಟ್ರಗಳು ಮಾಡಿದಂತೆ ಪೋಲೆಂಡು ಆತನನ್ನು ಎದುರಿಸದೆ ಬಗ್ಗದೆಂಬುದು ಮಾತ್ರ ಸತ್ಯ.

ಬ್ರಿಟನ್.

ಕಾಮನ್ಸ್ ಸಭೆಯಲ್ಲಿ ಖಡ್ಡಾಯವಾಗಿ ಸೈನಿಕ ಶಿಕ್ಷಣ ಕೊಡುವ ವಿಚಾರ ಚರ್ಚೆ ನಡೆಯುತ್ತಿದೆ. ಗ್ರೇಟ್ ಬ್ರಿಟನಿನ ಹೊರಗೆ ವಾಸಿಸುವ ಪ್ರಜೆಗಳನ್ನು ಸಹ ಬಲಾತ್ಕಾರ ಸೈನ್ಯ ತರಬೇತಿಗೆ ಒಳಪಡಿಸುವ ಬಗ್ಗೆ ಈಗ ಚರ್ಚಿಸಲ್ಪಡುತ್ತಿರುವ ಮಸೂದೆಗೆ ಉಪಸೂಚನೆ ಬಂದಿದೆ. ಇದರಿಂದ ಇನ್ನೂ ಖಡ್ಡಾಯ ಸೈನ್ಯ ಶಿಕ್ಷಣವು ಬ್ರಿಟಿಷರಿಂದ ಕೈಕೊಳ್ಳಲ್ಪಡಬಹುದು. ಈ ಮಧ್ಯೆ ಕಾಮನ್ಸ್ ಸಭೆಯ ಮೀಟಿಂಗಿನಲ್ಲಿ ಅಂತರರಾಷ್ಟ್ರೀಯ ರಾಜಕೀಯ ವಿಚಾರ ವಿಮರ್ಶಿಸುತ್ತಾ ಮಿ. ಲಾಯಡ್ ಜಾರ್ಜರು ಇಂಗ್ಲೆಂಡಿನ ಪರಿಸ್ಥಿತಿಯನ್ನು 1918 ನೇ ಅಂದರೆ ಘೋರ ಸಂಗ್ರಾಮದಲ್ಲಿದ್ದ ಪರಿಸ್ಥಿತಿಗೆ ಹೋಲಿಸಿ ಜರ್ಮನರು ಬ್ರಿಟನರ ಮೇಲೆ ಬಿದ್ದಾರೆಂಬ ಹೆದರಿಕೆಯಿಂದ ಮುಂದು ನೋಡುತ್ತಿರುವಂತಾಗಿದೆಯೆಂದರು. ಅಲ್ಲದೆ ಏನೇ ಆದರೂ ಸಹ ಶಾಂತಿ ಸಾಧಕರಾಗಿ ಪ್ರಪಂಚದ ಹಾಗೂ ಬ್ರಿಟಿಷರ ಹಿತಸಾಧನೆಯನ್ನು ಮಾಡೋಣವೆಂದಿರುವರು. ಪ್ರಧಾನರಾದ ಮಿ. ಚೆಂಬರ್ಲೇನರು ಅದೇ ಸಭೆಯಲ್ಲಿ ಮಾತಾಡುತ್ತಾ ಜಗತ್ತಿನ ಶಾಂತಿಯನ್ನು ಮುರಿಯಲು ಮುಂದೊತ್ತುವ ರಾಷ್ಟ್ರಗಳಿಗೆ ರಿಯಾಯಿತಿಗಳನ್ನು ಕೊಟ್ಟು ಸಮಾಧಾನಪಡಿಸಿ ಶಾಂತಿಯನ್ನು ಕೊಳ್ಳುವದರಿಂದ ಇನ್ನಷ್ಟು ಅದು ಒತ್ತಾಯಕ್ಕೆ ಮಾರ್ಗವಾದುದರಿಂದ ಇನ್ನು ಮುಂದಕ್ಕೆ ಆ ಧೋರಣೆಯನ್ನು ಬ್ರಿಟಿಷರು ವಹಿಸರು, ಎಂದು ಹೇಳಿರುವರು. ಅಲ್ಲದೆ ನಿರಂಕುಶಾಧಿಕಾರಿಗಳಾದ ಹಿಟ್ಲರ್, ಮುಸಲೋನಿಗಳ ಆಕ್ರಮಣವನ್ನು ತಡೆಗಟ್ಟಲು ಪ್ರಜಾಸತ್ತಾತ್ಮಕ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಟರ್ಕಿ, ಪೋಲೆಂಡ್ ಇವುಗಳು ಒಮ್ಮತದಿಂದ ಏಕೀಕರಿಸಿರುವವು. ಈಗ ರಷ್ಯಾದವರ ಸಹಾಯವನ್ನು ಇವು ಬೇಡುತ್ತಿರುವವು. ಮುಂದಿನ ಪರಿಸ್ಥಿತಿ ಹೇಗಾಗುತ್ತದೋ ವಿಚಾರಣೀಯ.

ನಾಜಿ ಜರ್ಮನಿ.

ನಾಜೀ ರಾಜ್ಯದಲ್ಲಿ ಐಕ್ಯವಾಗಿರುವ ಆಸ್ಟ್ರೀಯಾ ದೇಶದ ರಾಜಧಾನಿಯಾದ ವಿಯನ್ನಾ ನಗರದಲ್ಲಿ ರೈಚ್ ಕಲೋನಿಯಲ್ ಕಾಂಗ್ರೆಸ್ ಎಂಬ ಅಭಿದಾನದಿಂದ ತಮ್ಮ ವಸಾಹತುಗಳನ್ನು ಪಡೆಯಬೇಕೆಂದು ಕಾಂಕ್ಷಿತರಾದ ಜರ್ಮನರು ಒಂದು ಸಭೆ ಸೇರಿ ವಸಾಹತುಗಳನ್ನು ಹಿಂದಕ್ಕೆ ಪಡೆಯುವ ಬಗ್ಗೆ ವಾದವಿವಾದ ನಡೆಸಿದರು. ಆಗ ಅವರು ಹೇಳಿದ್ದೇನೆಂದರೆ–ನಮಗೆ ಬ್ರಿಟನಿನೊಂದಿಗೆ ದ್ವೇಷವಿಲ್ಲ. ಒಂದು ಕಾಲಕ್ಕೆ ನಮ್ಮದೇ ಆಗಿದ್ದ ವಸಾಹತುಗಳು ಒಂದು ವರ್ಷದೊಳಗಲ್ಲದಿದ್ದರೂ ಹತ್ತು ವರ್ಷದೊಳಗಾದರೂ ನಮ್ಮ ಹತೋಟಿಗೆ ಬರಬೇಕು. ಆದ್ದರಿಂದ ಅದನ್ನು ಸಾಧಿಸಲು ನಾವು ಕಂಕಣಬದ್ಧರಾಗಬೇಕು–ಎಂದು ನುಡಿದಿರುವರು. ಈ ಮಧ್ಯೆ ಜರ್ಮನಿಗೂ ಲಿಥುವೇನಿಯಾಕ್ಕೂ ಒಪ್ಪಂದವಾಗಿದೆ. ಇದರಂತೆ ಜರ್ಮನಿಯು ಲಿಥುವೇನಿಯಾಕ್ಕೆ ಒಂದು ಸ್ವತಂತ್ರ ಬಂದರನ್ನು ಕಟ್ಟಿಸಿಕೊಡತಕ್ಕದ್ದೆಂದು ನಿರ್ಣಯವಾಗಿದೆ. ಈ ಹೊಸ ಬಂದರಿನ ವಿಚಾರಗಳನ್ನು ವಿಮರ್ಶಿಸಲು ಜರ್ಮನರ ಮತ್ತು ಲಿಥುವೇನಿಯಾದ ಪ್ರತಿನಿಧಿಗಳಿಂದ ಕೂಡಿದ ಒಂದು ಸಮಿತಿಯೇರ್ಪಡಿಸಲ್ಪಟ್ಟಿದೆ. ಅಂತು ಜರ್ಮನಿಯು ಲಿಥುವೇನಿಯಾದ ಹಿತಚಿಂತಕನಾಗಿ ವರ್ತಿಸುತ್ತಿದೆ. ಯಾವಾಗ ಜರ್ಮನಿಯು ತನ್ನ ರೌದ್ರಾವತಾರವನ್ನು ತೋರಿಸಿ ಲಿಥುವೇನಿಯಾವನ್ನು ಬಗಲಿಗೆ ಹಾಕುವದೋ ತಿಳಿದವರಾರು? ಅಂತು ಇಂದಿನ ಇವುಗಳ ಸಖ್ಯದಲ್ಲಿ ಒಂದು ಗೂಢಾರ್ಥ ಇಲ್ಲದೆ ಇರಲಿಕ್ಕಿಲ್ಲ.

ಚೈನಾ–ಜಪಾನ್.

ಚೈನಾ ಜಪಾನ್ ಯುದ್ಧವು ಎಂದಿನಂತೆ ಮುಂದರಿಯುತ್ತಿದೆ. ಈ ಮಧ್ಯೆ ಒಂದು ವಿಚಿತ್ರ ಘಟನೆಯು ಈ ವಾರದಲ್ಲಿ ನಡೆದುಹೋಯಿತು. ಏನೆಂದರೆ–ಚೀನಾ ದೇಶದ ದಕ್ಷಿಣ ಭಾಗದಲ್ಲಿರುವ ಕಾನ್‌ಟೋನ್ನಿಗೆ ಈಶಾನ್ಯ ದಿಕ್ಕಿನಲ್ಲಿ 350 ಮೈಲುಗಳ ದೂರದಲ್ಲಿ ಅಮೊಯ್ ಎಂಬ ದ್ವೀಪವಿರುತ್ತದೆ. ಆ ದ್ವೀಪದಲ್ಲಿ ಕೊಲಂಗ್ಸ್ಯು ಎಂಬ ಪಟ್ಟಣವು ಇರುವದು. ಚೈನಾ ಸರ್ಕಾರವು ಪೂರ್ವದಲ್ಲಿ ಗ್ರೇಟ್ ಬ್ರಿಟನ್ ಜಪಾನ್, ಮುಂತಾದ ರಾಷ್ಟ್ರಗಳೊಡನೆ ಮಾಡಿಕೊಂಡ ಒಪ್ಪಂದದಂತೆ ಇದರ ಕಾರ್ಯಕ್ರಮಗಳು ಸುಸೂತ್ರವಾಗಿ ಈ ವರೆಗೆ ನಡೆದು ಬಂದುವು. ಆದರೆ ಕಳೆದವಾರ ಜಪಾನರು ಈ ಪಟ್ಟಣದ ಆಡಳಿತವನ್ನು ಬದಲಾಯಿಸಿ ಅಲ್ಲಿ ಜಪಾನರನ್ನು ನೆಲೆಸುವ ಹವಣಿಕೆಯಿಂದ ಅಲ್ಲಿಗೆ 150 ಮಂದಿ ನಾವಿಕ ಯೋಧರನ್ನು ಕಳುಹಿಸಿದರು. ಆ ಪ್ರಾಂತದ ರಕ್ಷಣಾಭಾರವು ಬ್ರಿಟಿಷ್, ಫ್ರೆಂಚ್, ಅಮೇರಿಕಾ, ಮೊದಲಾದ ಪ್ರಾಂತಗಳಿಗೆ ಮೇಲ್ಕಂಡ ಚೈನಾ ಒಪ್ಪಂದದ ಮೇರೆ ಇರುವದರಿಂದ ಈ ರಾಷ್ಟ್ರಗಳೆಲ್ಲವೂ 40, 40 ರಂತೆ ತಮ್ಮ ಯೋಧರನ್ನು ಅಲ್ಲಿಗೆ ಕಳುಹಿಸಿದವು. ಇವರೊಟ್ಟಿನ ಸಂಖ್ಯೆಯು ಜಪಾನರದ್ದಕ್ಕಿಂತ ಹೆಚ್ಚಾಯಿತು. ಹೀಗೆ ವಿವಿಧ ರಾಷ್ಟ್ರಗಳು ಒಗ್ಗಟ್ಟಾದ್ದನ್ನು ಕಂಡ ಜಪಾನು ತನ್ನ ಸೈನ್ಯವನ್ನು ಹಿಂದಕ್ಕೆ ಕರೆಯಿಸಿಕೊಂಡಿರುವದು. ಈ ವರೆಗೆ ನಡೆದ ಕದನದಲ್ಲಿ ಚೀನಾದವರ ವಿರೋಧ ಧಾಳಿ ನಡೆಸುತ್ತಿರುವ ಜಪಾನರನ್ನು ತಡೆಗಟ್ಟಲು, ಅಮೇರಿಕಾ, ಬ್ರಿಟನ್, ಫ್ರಾನ್ಸ್, ಮೊದಲಾದವರು ಒಗ್ಗಟ್ಟಾದುದು ಇದೇ ಮೊದಲು. ಅಂತು ಇವರ ಮುಂದೆ ತನ್ನ ಆಟ ಸಾಗದೆಂದು ತಿಳಿದು ಜಪಾನು ಹಿಂದಕ್ಕೆ ಸರಿಯಿತು.

ಚೈನಾದ ಉತ್ತರ ದಿಕ್ಕಿನಲ್ಲಿ ಈ ವಾರ ನಡೆದ ಕದನದಲ್ಲಿ ಜಪಾನರು ಹಿಮ್ಮೆಟ್ಟಿರುವರೆಂದೂ, ಜಪಾನರ 18,000 ಮಂದಿ ಯೋಧರು ಹತರಾಗಿರುವರೆಂದೂ ಉಳಿದವರು ಉತ್ತರ ದಿಕ್ಕಿನ ಕಡೆಗೆ ಹಿಂದಟ್ಟಿ ಓಡಿ ಹೋದರೆಂದೂ ಚೈನೀಯರು ಪ್ರಕಟಿಸಿರುವರು.

ಈ ಮಧ್ಯೆ ಚೀನಾದ ಪಶ್ಚಿಮ ದಿಕ್ಕಿನಲ್ಲಿ ಅಂದರೆ ಈಗಿನ ರಾಜಧಾನಿಯಾದ ಚುಂಗ್ ಕಿಂಗ್ ಬಳಿಯಲ್ಲಿ ವಾಂತಿಬೇಧಿಯು ತಲೆದೋರಿ ಅನೇಕ ಅನಾಹುತಗಳಾಗುತ್ತಿವೆ.

ಕೊಡಗು ಪ್ರಾಂತೀಕ ಮುಸ್ಲಿಂ ಲೀಗಿನ ಪ್ರಥಮಾಧಿವೇಶನ.

ತಾರೀಕು 16-5-39 ರಲ್ಲಿ ಜನಾಬ್ ಹಾಜಿ ಅಬ್ದುಸ್ ಸತಾರ್ ಹಾಜಿ ಇಸಾಕ್ ಶೇಟ್ ಯಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಮಡಿಕೇರಿಯಲ್ಲಿ ನಡೆದ ಈ ಸಮ್ಮೇಳನದ ನಡವಳಿಕೆಗಳು.

ಜಯಘೋಷಗಳಿಂದ ಕೂಡಿ ಅಧ್ಯಕ್ಷರು ಸಭಾಂಗಣಕ್ಕೆ ಬಂದ ನಂತರ ರಾಷ್ಟ್ರೀಯ ಗೀತೆಯನ್ನು ಹಾಡಲಾಯಿತು. ನಂತರ ಸ್ವಾಗತ ಕಮಿಟಿಯ ಅಧ್ಯಕ್ಷರು ಕೊಡಗಿನ ಮುಸ್ಲಿಮರ ಸ್ಥಿತಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಅಧ್ಯಕ್ಷರು ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿಯೂ, ಉರುದು ಭಾಷೆಯಲ್ಲಿಯೂ ಮಾಡಿದರು. (ಇದರ ಸಾರಾಂಶ ಕಳೆದ ವಾರ ಕೊಡಲ್ಪಟ್ಟಿತ್ತು.)

ಶ್ರೀ ಹರೂನ್ ಕುಟ್ಟಿ ಬಿ. ಎ. ಬಿ. ಎಲ್ ರವರು ಭಾರತೀಯ ಮುಸ್ಲಿಮರಿಗೆ ಯಾಕೆ ಪ್ರತ್ಯೇಕ ಬಂದು ಸಂಸ್ಥೆ ಬೇಕು ಎಂಬ ವಿಚಾರ ಮಾತಾಡಿದರು.

ಮಧ್ಯಾಹ್ನದ ಮೇಲೆ ಕಣ್ಣನೂರಿನ ಶ್ರೀ ಕೆ. ಯಂ. ಅಬುಬಕರ್ ಸಾಹೇಬರು ಮುಸ್ಲಿಂ ಲೀಗಿನ ಅಡಿಯಲ್ಲಿ ಎಲ್ಲಾ ಮುಸ್ಲಿಮರು ಏಕೀಕರಿಸಬೇಕೆಂದೂ, ಶ್ರೀ ಯಂ. ಯಂ. ಸಿದ್ದೀಕರು ಕೊಡಗಿನ ಮುಸ್ಲಿಮರ ಆರ್ಥಿಕ, ಸಾಂಸ್ಕೃತಿಕ ಹಾಗೂ ನೈತಿಕ ಸ್ಥಿತಿಯನ್ನು ವಿವರಿಸಿಯೂ ಮಾತಾಡಿದರು. ನಂತರ ಕಾರ್ಯಕಾರಿ ಮಂಡಳಿಯನ್ನು ಚುನಾಯಿಸಿ ಮೀಟಿಂಗು ಸಾಯಂಕಾಲ 4-30 ಗಂಟೆಗೆ ಅಧ್ಯಕ್ಷರಿಗೆ ವಂದನೆಯಿಂದ ಮುಕ್ತಾಯಗೊಂಡಿತು.

ಪಾಸಾದ ಠರಾವುಗಳು.

1. ಸಾರ್ವಭೌಮ ಮುಸ್ತಾಫ ಕಮಾಲ್ ಪಾಶರವರ, ಮೌಲಾನಾ ಶೌಕತ್ತಾಲಿಯವರ, ಮೌಲಾನ ಇರ್‌ಫಾನ್ ಸಾಹೇಬರ ಮತ್ತು ಮೌಲಾನ ಮುಹಮ್ಮದೀನ್ ಸಾಹೇಬರ ನಿಧನಕ್ಕಾಗಿ ಈ ಸಭೆಯು ಸಂತಾಪ ಸೂಚಿಸುತ್ತದೆ.

2. ಪಾಲೇಸ್ತೀನದಲ್ಲಿ ಬ್ರಿಟಿಷರು ಅನುಸರಿಸುತ್ತಿರುವ ಧೋರಣೆ ಮತ್ತು ವರ್ತನೆಯನ್ನು ಈ ಸಭೆಯು ಖಂಡಿಸುತ್ತದಲ್ಲದೆ, ಇದರಿಂದ ಭಾರತ ಮುಸ್ಲಿಮರು ಉದ್ರೇಕಗೊಂಡಿರುವದ್ದರಿಂದ ಬ್ರಿಟಿಷರು ತಮ್ಮ ಧೋರಣೆಯನ್ನು ಬದಲಾಯಿಸಿ ಪಾಲೇಸ್ತೀನ್ ಅರಬರ ಮೂಲಭೂತ ಹಕ್ಕುಗಳನ್ನು ಕಾಯ್ದುಕೊಡಬೇಕೆಂದು ಈ ಸಮ್ಮೇಳನವು ಬ್ರಿಟಿಷರನ್ನು ಎಚ್ಚರಿಸುತ್ತದೆ.

3. ಹೈದರಾಬಾದು ಸಂಸ್ಥಾನವು ಭಾರತ ಹಾಗೂ ವಿದೇಶಿ ಮುಸ್ಲಿಮರಿಗಿತ್ತ ಸಹಾಯ ಸವಲತ್ತುಗಳ ಮತ್ತು ಹಿಂದೂಗಳ ವಿದ್ಯಾಭಿವೃದ್ಧಿಗಾಗಿ ಸಲ್ಲಿಸಿದ ಸೇವೆಯ ದೃಷ್ಟಿಯಿಂದ, ಆರ್ಯಸಮಾಜದವರು ಅಲ್ಲಿ ನಡೆಸುತ್ತಿರುವ ತೊಂದರೆಗಳನ್ನು ಈ ಸಮ್ಮೇಳನವು ಅಸಹ್ಯದಿಂದನೋಡುವದಲ್ಲದೆ ಸಕಾಲದಲ್ಲಿ ಸಾರ್ವಭೌಮ ಸರಕಾರವು ಕೈಹಾಕಿ ಮುಂದೆ ತೊಂದರೆಗಳು ಬಾರದಂತೆ ಸರಿಪಡಿಸಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ.

4. ಭಾರತದ ದೊಡ್ಡ ಪ್ರಾಂತಗಳಿಗೆ ಯಾವ ರೀತಿಯ ಪ್ರಾಂತೀಕ ಸ್ವರಾಜ್ಯವನ್ನು ಕೊಟ್ಟಿದೆಯೋ ಅಂತೆಯೇ ಆ ಮಾದರಿಯ ಸೌಕರ್ಯವನ್ನು ಕೊಡಗಿಗಾದರೂ ಕೊಡಬೇಕೆಂದು ಈ ಸಭೆಯು ಬ್ರಿಟಿಷ್ ಸರಕಾರವನ್ನು ಕೇಳಿಕೊಳ್ಳುತ್ತದೆ.

5. 1935 ನೇ ಇಂಡಿಯಾ ಆಕ್ಟು ಸ್ವೀಕರಿಸಲನರ್ಹವಾದ್ದರಿಂದ ಭಾರತದ ಎಲ್ಲಾ ಪಂಗಡಗಳ ಸಮಾಲೋಚನೆಯಿಂದ ಅದನ್ನು ಬದಲಾಯಿಸಿ ಅಲ್ಪ ಪಕ್ಷೀಯರ ಅಧಿಕಾರಹಕ್ಕುಗಳಿಗೆ ಭರವಸೆಯನ್ನು ಕೊಡುವ ಏರ್ಪಾಡು ಮಾಡಬೇಕೆಂದು ಬ್ರಿಟಿಷ್ ಸರಕಾರವನ್ನು ಈ ಸಮ್ಮೇಳನವು ಕೇಳಿಕೊಳ್ಳುತ್ತದೆ.

6. ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ತಮ್ಮ ಸ್ವಂತ ಚುನಾವಣೆಯಿಂದ ಆರಿಸಿಕೊಳುವಂತೆ ಕಮ್ಮಿಪಕ್ಷ ಎರಡು ಸ್ಥಳಗಳನ್ನೂ, ನಾಯವಿಧಾಯಕ ಸಭೆಯಲ್ಲಿ ಇದೇ ರೀತಿಯಿಂದ ಇಡೀ ಸಭೆಯ ಶೇಕಡ 16 ರಷ್ಟು ಪ್ರಾತಿನಿಧ್ಯವನ್ನೂ ಮುಸ್ಲಿಮರಿಗೆ ಕೊಡುವಂತೆ ಸಂಬಂಧಪಟ್ಟ ಖಾನೂನನ್ನು ಮಾರ್ಪಡಿಸಬೇಕೆಂದು ಈ ಸಭೆಯು ಸರಕಾರವನ್ನು ಒತ್ತಿ ಕೇಳಿಕೊಳ್ಳುತ್ತದೆ.

7. ಹೆಚ್ಚು ಸಂಬಳದ ಉದ್ಯೋಗಸ್ಥರನ್ನು ತೆಗೆಯದೆ ಕಮ್ಮಿ ಸಂಬಳದ ಉದ್ಯೋಗಸ್ಥರನ್ನೇ ತೆಗೆದು ಹಾಕಿದ ಕೊಡಗು ಸರಕಾರದ ಸಿಬ್ಬಂದಿ ಕಡಿತೆಯ ಧೋರಣೆಯನ್ನು ಈ ಸಭೆಯು ನಿಷೇಧಿಸುತ್ತದೆ.

8. ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡುತ್ತಿದ್ದ ಗ್ರಾಂಟನ್ನು ಕಮ್ಮಿಮಾಡುವದರಿಂದ ಕೊಡಗಿನ ವಿದ್ಯಾಭ್ಯಾಸಕ್ಕೆ ಧಕ್ಕೆ ತಗಲುವದರಿಂದ ಹಾಗೆ ಮಾಡಲು ಯತ್ನಿಸಿರುವ ಸರಕಾರದ ವರ್ತನೆಯನ್ನು ಈ ಸಮ್ಮೇಳನವು ಖಂಡಿಸುತ್ತದೆ.

9. ಕೊಡಗು ಟಿಕ್ಸ್ಟ್ ಬಕ್ ಕಮಿಟಿಯಲ್ಲಿ ಮುಸ್ಲಿಮರ ಪ್ರತಿನಿಧಿಗೆ ಒಂದು ಸ್ಥಳವನ್ನೂ, ವೀರಾಜಪೇಟೆ ಮುನ್ಸಿಪಲ್ ಮುಹಮ್ಮದೀಯ ಶಾಲೆಯ ಪಂಚಾಯ್ತುದಾರರ ನೇಮಕದಲ್ಲಿ ಸರಿಯಾದ ಪ್ರಾತಿನಿಧ್ಯವನ್ನೂ ಕೊಡಬೇಕೆಂದು, ಸರಕಾರವನ್ನು ಈ ಸಭೆಯು ಕೇಳಿಕೊಳ್ಳುತ್ತದೆ.

10. ಸಾಲದ ಬಾಧೆಯಿಂದ ನರಳುತ್ತಿರುವ ರೈತರ ಸಾಲನಿವಾರಣೆಗಾಗಿ ಇಂಡಿಯಾ ಸರಕಾರವು ಕೊಟ್ಟ ಸಾಲಕ್ಕಾಗಿ ಈ ಸಭೆಯು ಅವರನ್ನು ವಂದಿಸುತ್ತದಲ್ಲದೆ, ಈ ಹಣವು ರೈತರ ಸಾಲವಿಮೋಚನೆಗೆ ಸಾಲದೆಂದು ಒತ್ತಿ ಹೇಳುತ್ತದೆ.

11. ಕೊಡಗಿನಲ್ಲಿ ಒಬ್ಬನಾದರೂ ಗಜೆಟೆಡ್ ಮುಸ್ಲಿಂ ಉದ್ಯೋಗಸ್ಥನ ಅವಶ್ಯಕತೆಯನ್ನು ಈ ಸಭೆಯು ಸೂಚಿಸುವದಲ್ಲದೆ, ಹಾಗೆ ಅವಶ್ಯ ಬಂದರೆ ಹೊರ ಪ್ರಾಂತದಿಂದ ಗಜೆಟೆಡ್ ರೇಂಕಿನ ಒಬ್ಬ ಉದ್ಯೋಗಸ್ಥನನ್ನು ಆಮದುಮಾಡಬಹುದೆಂದು ಈ ಸಭೆಯು ಕೇಳಿಕೊಳ್ಳುತ್ತದೆ.

12. ಸಾಕಷ್ಟು ಮುಸ್ಲಿಂ ವಿದ್ಯಾರ್ಥಿಗಳಿರುವ ಎಲ್ಲಾ ಎಲಿಮೆಂಟರಿ ಶಾಲೆಗಳಲ್ಲಿ ಉರುದು ಅಧ್ಯಾಪಕರನ್ನು ನೇಮಿಸಿ, ಅವರಿಗೆ ಪಾಠ ಮಾಡುವ ಸೌಕರ್ಯವನ್ನು ಕಲ್ಪಿಸಿಕೊಡಬೇಕೆಂದು ಸರಕಾರವನ್ನು ಈ ಸಭೆಯು ಕೇಳಿಕೊಳ್ಳುತ್ತದೆ.

13. ಮುಸಲ್ಮಾನರ ಹಿಂದುಳಿದಿರುವ ವಿದ್ಯಾ ಮತ್ತು ಸಾರ್ವಜನಿಕ ಆರ್ಥಿಕ ಮುಗ್ಗಟ್ಟಿನ ದೃಷ್ಟಿಯಿಂದ ಮುಸ್ಲಿಮ್ ವಿದ್ಯಾರ್ಥಿಗಳಿಗೆ ಕೊಡುತ್ತಿರುವ ಅರ್ಧ ಫೀಜಿನ ಸೌಕರ್ಯವನ್ನು ಈಗ ಯೋಚಿಸಿರುವಂತೆ ಹೆಚ್ಚಿಸದೆ ಮುಂದ್ವರಿಸಬೇಕೆಂದು ಈ ಸಭೆಯು ಸರಕಾರವನ್ನು ಒತ್ತಾಯಪಡಿಸುತ್ತದೆ.

14. ಅಖಿಲ ಭಾರತ ಮುಸ್ಲಿಂ ಲೀಗಿನ ಕೌನ್ಸಿಲಿನಲ್ಲಿ ಕೊಡಗು ಪ್ರಾಂತಕ್ಕೆ ಕಮ್ಮಿ ಪಕ್ಷ 5 ಸ್ಥಳಗಳನ್ನಾದರೂ ಕೊಡಬೇಕೆಂದು ಆ ಕೌನ್ಸಿಲಿನವರನ್ನು ಈ ಸಭೆಯು ಒತ್ತಾಯಪಡಿಸುತ್ತದೆ.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಈ ತಾರೀಕು 20-5-39 ರಲ್ಲು ಬೆಳಗ್ಗೆ 11 ಗಂಟೆಗೆ ಶ್ರೀಮಾನ್ ಪಂದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ಬ್ಯಾಂಕು ಆಫೀಸಿನಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟರು) 2. ಸಿ. ಜಿ. ಐಯ್ಯಪ್ಪನವರು, 3. ರಾ. ಬ. ಪಿ. ದೇವಯ್ಯನವರು, (ಟ್ರೆಜರರ್) 4. ಕೆ. ಕೆ. ಗಣಪತಿಯವರು, 5. ಕೆ. ಸಿ. ಕರುಂಬಯ್ಯನವರು, 6. ಕೆ. ಯಂ. ಕುಶಾಲಪ್ಪನವರು, 7. ಐ. ಪಿ. ಕಾರ್ಯಪ್ಪನವರು, 8. ಬಿ. ಪಿ. ಮಾಚೈಯ್ಯನವರು, 9. ಹೆಚ್. ಯಂ. ಪುಷ್ಪಣ್ಣನವರು ಮತ್ತು 10. ಎನ್. ಬಿ. ಸೋಮಯ್ಯನವರು.

ಸೀನಿಯರ್ ನಾನ್‌ಕ್ರೆಡಿಟ್ ಇನ್ಸ್‌ಪೆಕ್ಟರರೂ ಸಹ ಹಾಜರಿದ್ದರು.

ಈ ಕೆಳಗಿನ ಡೈರೆಕ್ಟರುಗಳು ಗೈರುಹಾಜರಾಗಿದ್ದರು. ಮ. ಗಳಾದ 1. ಯಂ. ಸಿ. ದೇವಯ್ಯನವರು, 2. ಪಿ. ಸಿ. ಕರುಂಬಯ್ಯನವರು, 3. ಯಂ. ಎಸ್. ಸೋಮಯ್ಯನವರು, 4. ಎನ್. ಶಂಕರಯ್ಯನವರು ಮತ್ತು 5. ಎಸ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ).

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ಒಪ್ಪಲಾಯಿತು.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

3. ಸಾಲನಿವಾರಣೆ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲಾಯಿತು.

4. ಕಳೆದ ಏಪ್ರಿಲ್ ತಿಂಗಳ ಜಮಾ ಮತ್ತು ಖರ್ಚಿನ ಲೆಖ್ಖ ಓದಿ ಮಂಜೂರ್ಮಾಡಲಾಯಿತು.

ಹಿಂದಳ ಶಿಲ್ಕು	27,386	1	7
ಸದರಿ ತಿಂಗಳ ವಸೂಲಿ	19,196	6	3
ಜುಮ್ಲಾ	46,582	7	10
ಆ ತಿಂಗಳಲ್ಲಿ ಖರ್ಚು	25,358	15	0
ಬಾಕಿ ಶಿಲ್ಕು	21,223	8	10

ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. 1. ಕೊಳತಡಬೈಗೋಡು ಸೊಸೈಟಿಗೆ ರೂ. 2000 2. ಕೊಡಗು ಜೇನು ಮತ್ತು ಮೇಣದ ಸಂಘಕ್ಕೆ ರೂ. 3000, 3. ಕೈಕೇರಿ ಸೊಸೈಟಿಗೆ ರೂ. 1500, 4. ಶನಿವಾರಸಂತೆ ಕ್ರಾಪ್, ಲೋನ್ ಅಂಡ್ ಸೇಲ್ ಸೊಸೈಟಿಗೆ ರೂ. 800, 5. ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1000, 6. ಪಾಲೂರು ಸೊಸೈಟಿಗೆ ರೂ. 600, 7. ನಂಜರಾಜಪಟ್ಣ ಸೊಸೈಟಿಗೆ ರೂ. 700, 8. ಬೆಟ್ಟತ್ತೂರು ಸೊಸೈಟಿಗೆ ರೂ. 600, 9. ನರಿಯಂದಡ ಸೊಸೈಟಿಗೆ ರೂ. 400, 10. ಮರೆನಾಡು ಸೊಸೈಟಿಗೆ ರೂ. 1200, 11. ಹುದಿಕೇರಿ ಸೊಸೈಟಿಗೆ ರೂ. 1500, 12. ನಿಡ್ತಸೊಸೈಟಿಗೆ ರೂ. 1000, 13. ಹೇರ್ಮಾಡು ಸೊಸೈಟಿಗೆ ರೂ. 2000, 14. ತಿತಿಮತಿ ಶ್ರೀರಾಮ ಸೊಸೈಟಿಗೆ ರೂ. 2000, 15. ಬಾವಲಿ ಸೊಸೈಟಿಗೆ ರೂ. 850, ಮತ್ತು 16. ಕೂಡ್ಲೂರು ಸೊಸೈಟಿಗೆ ರೂ. 750.

ಅಲ್ಲದೆ ಶನಿವಾರಸಂತೆ ಕ್ರಾಪ್, ಲೋನ್ ಅಂಡ್ ಸೇಲ್ ಸೊಸೈಟಿಯು ವಸೂಲಾದ ಭತ್ತವನ್ನು ಭದ್ರವಾಗಿ ಡಿಪಾಜಿಟು ಮಾಡಿರುತ್ತದೊ ಎಂದು ಡೈರೆಕ್ಟರು ಮ. ಐ. ಪಿ. ಕಾರ್ಯಪ್ಪನವರು ರಿಪೋರ್ಟು ಮಾಡುವ ವರೆಗೂ ಮತ್ತು ಬಾವಲಿ ಸೊಸೈಟಿಯ ಕೆಲಸ ಕಾರ್ಯಗಳ ವಿಷಯ ತೃಪ್ತಿಕರವಾದ ರಿಪೋರ್ಟ್ ಡೈರೆಕ್ಟರು ಮ. ಕೆ. ಯಂ. ಕುಶಾಲಪ್ಪನವರಿಂದ ಬರುವ ವರೆಗೂ ಈ ಎರಡು ಸೊಸೈಟಿಗಳಿಗೆ ಸಾಲ ಬಟವಾಡೆ ಮಾಡಕೂಡದೆಂದು ತೀರ್ಮಾನವಾಯಿತು.

5. ಮೂರ್ನಾಡು ವಿದ್ಯಾರ್ಥಿಯರ ಮತ್ತು ಹುದಿಕೇರಿ ಟೌನ್ ಸೊಸೈಟಿಯ ಸಾಲದ ಅರ್ಜಿಗಳನ್ನು ಕಾರಣಾಂತರದಿಂದ ಇನ್ನೊಂದು ಮೀಟಿಂಗಿಗೆ ಇಡಲಾಯಿತು.

6. ಒಬ್ಬ ಮಹನೀಯಳು ಬ್ಯಾಂಕಿನಲ್ಲಿ ಡಿಪಾಜಿಟ್ಟು ಇಟ್ಟಿರುವ ತನ್ನ ಹಣವನ್ನು ಬಡ್ಡಿ ರಹಿತ ವಾಪ್ಸು ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಓದಲಾಯಿತು.

ಸದರಿ ಅರ್ಜಿ ಮೇರೆ ಪೊನ್ನಂಪೇಟೆ ನಾಡು ಯೂನಿಯನ್ ಪ್ರೆಸಿಡೆಂಟರು ಈ ಬಾಬಿನಲ್ಲಿ ಸದರಿಯವರನ್ನು ಕೇಳಿದಲ್ಲಿ ತನಗೆ ಹಾಗೆ ಡಿಪಾಜಿಟು ವಾಪ್ಸು ಬೇಡವೆಂತಲೂ ಸದರಿ ಡಿಪಾಜಿಟ್ಟಿನ ಮೇಲೆ ಸಾಲ ಕೊಟ್ಟರೆ ಸಾಕೆಂತಲೂ ತಿಳಿಸಿದ ಮೇರೆ ಸದರಿಯವರ ಅರ್ಜಿಯನ್ನು ತಿರಸ್ಕರಿಸಿದೆಯಾಗಿ ತೀರ್ಮಾನಿಸಲಾಯಿತು.

7. ಬೇಗೂರು ಸೊಸೈಟಿಯವರು ತಮಗೆ ತಾ. 3-12-38 ರಲ್ಲು ಕೊಟ್ಟ ರೂ. 1000 ಸಾಲಕ್ಕೆ ಒಂದು ಕಂತಿನ ಬದಲು 10 ವಾರ್ಷಿಕ ಕಂತುಗಳನ್ನು ಕೊಡಿಸಬೇಕೆಂದು ಯೂನಿಯನ್ ಪ್ರೆಸಿಡೆಂಟರ ಶಿಫಾರಸಿನೊಡನೆ ಕಳುಹಿಸಿದ ಪತ್ರವನ್ನು ಓದಲಾಯಿತು.

...ರ ಕೋರಿಕೆ ಮೇರೆ 6 ಕಂತುಗಳನ್ನು (ವಾರ್ಷಿಕ) ಮಂಜೂರ್ಮಾಡಲಾಯಿತು. ಅಲ್ಲದೆ ಸದರಿ ಸಾಲದ ಬಾಕಿ ಮೊಬಲಗುಗಳಿಗೆ ಹೊಸದಾಗಿ ಸ್ಟಾಂಪು ಕಾಗದದಲ್ಲಿ ಖರಾರು ಬರೆದು ಕಳುಹಿಸಬೇಕಾಗಿಯೂ ಸಹ ತೀರ್ಮಾನವಾಯಿತು.

8. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರಕೊಂಡ 1. ಶ್ರೀಮತಿ ಶಿವಾಚಾರ ಈರಮ್ಮ 2. ಮೆ. ಮುಂಜಾಂದಿರ ಸಿ. ಸುಬ್ಬಯ್ಯ ಮತ್ತು 3. ಶ್ರೀಮತಿ ಕೊಟ್ಟಂಗಳ ದೇಚವ್ವ ಇವರುಗಳನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

9. ನೆರವಂಡ ಕುಟುಂಬ ಧವಸ ಭಂಡಾರದ ಪ್ರೆಸಿಡೆಂಟರು ತಮ್ಮ ಸಂಘದ ಬಾಬ್ತು ಬ್ಯಾಂಕಿನಲ್ಲಿ ಪಡಕೊಂಡ 10 ಶೇರುಗಳ ಪೈಕಿ ಒಂದನ್ನು ಇಟ್ಟು ಬಾಕಿ 9 ಶೇರುಗಳನ್ನು ಅವರು ಕೊಡಬೇಕಾದ ಸಾಲಕ್ಕೆ ಜಮ ತೆಗೆದುಕೊಳ್ಳಬೇಕೆಂದು ಬರಕೊಂಡ ಅರ್ಜಿಯಂತೆ ಮಂಜೂರ್ಮಾಡಲಾಯಿತು.

10. ಬೇಂಗುನಾಡು ಬಾಡಗ ಸೊಸೈಟಿಯವರು ತಮಗೆ ಮಂಜೂರಾದ ಹಣದಿಂದ ಬ್ಯಾಂಕಿನಲ್ಲಿ ಅವರು ಡಿಪಾಜಿಟ್ಟು ಇಡಬೇಕಾದ ಕ್ಷೇಮನಿಧಿ ಮೊಬಲಗನ್ನು ವಜ ಹಿಡಿಯಕೂಡದೆಂದು ಬರಕೊಂಡದೆಂದು ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು.)

ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು.

ತಾ. 16-5-39ರಲ್ಲಿ ವೀರಾಜಪೇಟೆಯಲ್ಲಿ ನಡದ ಮೀಟಿಂಗಿನ ನಡವಳಿಕೆ. ಎಲ್ಲಾ ಸದಸ್ಯರೂ ಹಾಜರಿದ್ದರು.

ಕಳೆದ ಮೀಟಿಂಗಿನ ಕಾರ್ಯಕಲಾಪಗಳ ವಿವರಣೆಯನ್ನು ಓದಿದನಂತರ ಈ ಕೆಳಗಿನ ಠರಾವುಗಳು ಅಂಗೀಕರಿಸಲ್ಪಟ್ಟವು.

(1) ಪ್ರತಿ ತಾಲೋಕು ಕಾಂಗ್ರೆಸ್ ಕಮಿಟಿಯ ಲೆಕ್ಕಪತ್ರಗಳನ್ನು ಆಡಿಟುಮಾಡಿಸಲು ಮಾ. ಗಳಂದ ಪಿ. ಜ. ಮುದ್ದಯ್ಯ, ಚೆಂಬಂಡ ಮಾದಪ್ಪ ಮತ್ತು ಸಿ. ಯಂ. ಪೂಣಚ್ಚ (ಕನ್ವೀನರ್) ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು. ಇವರು ಜೂನ್ 10ರೊಳಗ ತಮ್ಮ ವರದಿಯನ್ನೊಪ್ಪಿಸುವಂತೆ ತೀರ್ಮಾನವಾಯಿತು.

(2) ಶ್ರೀಮತಿ ಬಿ. ಟಿ. ಜ. ಕೃಷ್ಣಾ ಇವರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚನೆಯ ಠರಾವನ್ನು ಪಾಸು ಮಾಡಲಾಯಿತು.

(3) ಮುಂದಿನ ವರ್ಷದ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷಸ್ಥಾನಕ್ಕೆ ಶ್ರೀ. ಕೆ. ಸಿ. ಕರುಂಬಯ್ಯನವರನ್ನೂ, ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ. ಬಿ. ಯಂ. ಕಾರ್ಯಪ್ಪನವರನ್ನೂ ಮತ್ತು ಖಜಾಂಚಿಯವರ ಸ್ಥಾನಕ್ಕೆ ಶ್ರೀ. ಪಿ. ಜಿ ಮುದ್ದಪ್ಪಯ್ಯನವರನ್ನೂ ಸರ್ವ ಸಮ್ಮತದಿಂದ ಚುನಾಯಿಸಲಾಯಿತು.

(4) (a) ಕಳೆದ ಕೌನ್ಸಿಲ್ ಮೀಟಿಂಗಿನಲ್ಲಿ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರ ಸಭಾ ತ್ಯಾಗದ ವಿಷಯ ದೀರ್ಘ ಚರ್ಚೆ ನಡೆದು ಕೌನ್ಸಿಲ್ ಸದಸ್ಯರು ಕೊಟ್ಟ ಸಮಜಾಯಿಸಿಕೆಯನ್ನು ಕೇಳಿದನಂತರ ಅವರು ಕೈಗೊಂಡ ಕಾರ್ಯ ಕ್ರಮಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಒತ್ತಾಸೆಯನ್ನು ವ್ಯಕ್ತಮಾಡಲಾಯಿತು.

(b) ಕಾಂಗ್ರೆಸ್ ಕೌನ್ಸಿಲ್ ಮೆಂಬರರು ಎಂದಿನಂತೆ ಕೌನ್ಸಿಲ್ ಕಾರ್ಯಭಾರದಲ್ಲಿ ಭಾಗವಹಿಸಬಹುದೆಂದು ತೀರ್ಮಾನಿಸಲಾಯಿತು.

(5) ಮಾದಕ ಪದಾರ್ಥಗಳಿರುವ ಯಾವುದೇ ಕೂಟದಲ್ಲಿ ಭಾಗವಹಿಸಬಾರದೆಂದು ತೀರ್ಮಾನಿಸಲಾಯಿತು.

(6) ಈ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಈಗಿನ ಹೊಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿಯೂ ಮತ್ತು ಮಹಾತ್ಮ ಗಾಂಧಿಯವರಲ್ಲಿಯೂ ಸಂಪೂರ್ಣ ಭರವಸೆಯನ್ನಿಟ್ಟಿರುವುದೆಂದು ತೀರ್ಮಾನಿಸಲಾಯಿತು.

ನಂತರ ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಬರಕಾಸ್ತಾಯಿತು.

ಐ. ಪಿ. ಕಾರ್ಯಪ್ಪ,
(ಅಧ್ಯಕ್ಷ.)

ಉದ್ಧಾರ.

(3ನೇ ಪುಟದಿಂದ ಸಾಗಿದ್ದು.)

ಕಡೆಗೆ ರಾಯರು ಅವಳ ಕೋಣೆಯೆಡೆಗೆ ಓಡಿದರು. ಅಲ್ಲಿ ಅವಳ ಬರಿದಾದ ಹಾಸಿಗೆ ಮಾತ್ರ (ಚೇತನ ರಹಿತ ಸುಂದರ ಸ್ತ್ರೀಯಂತೆ) ಬಿದ್ದಿದ್ದಿತು. ರಾಯರು ಹುಚ್ಚರಂತಾದರು. ಇಷ್ಟರಲ್ಲೇ ಕಮಲೆಯು ಅದೃಶ್ಯವಾದ ಸಮಾಚಾರವು ಮನೆಯಲ್ಲೆಲ್ಲಾ ಹರಡಿತು. ತನ್ನನ್ನು ತಾನೇ ಸಿಂಗರಿಸಿಕೊಳ್ಳುತ್ತಾ ಕುಳಿತಿದ್ದ ಡಾಕ್ಟರರ ಎದೆ ಹಾರಿತು. ಅವರೂ ಸಹ ಹುಡುಕಲಾರಂಭಿಸಿದರು. ನಿಮಿಶಾರ್ಧದಲ್ಲಿ ಡಾಕ್ಟರರು ರಾಯರ ಮನೆಯ ಸಂಧಿ ಮೂಲೆಗಳನ್ನೆಲ್ಲಾ ಸಂದರ್ಶಿಸಿದರು. ಎಲ್ಲವೂ ವ್ಯರ್ಥವಾಯಿತು. ರಾಯರೂ ಕೂಡ ಕೋಣೆಯ ಎಲ್ಲಾ ಸಾಮಾನುಗಳನ್ನು ಮಗುಚಿ ಹಾಕಿದರು. ಅವರೂ ಕಮಲೆಯ ಕುರುಹು ಹತ್ತದಾಯಿತು.

ಅಷ್ಟರಲ್ಲೇ ರಾಯರಿಗ ಮೇಜಿನ ಮೇಲೆ ತನ್ನ ಹೆಸರಿನ ಕಾಗದವೊಂದು ದೃಷ್ಟಿಗೆ ಬಿದ್ದಿತು. ಕೂಡಲೇ ಅವರು ಅದನ್ನು ಆತುರದಿಂದ ತೆಗೆದುಕೊಂಡು ಬಿಡಿಸಿಕೊಂಡು ಓದಕೊಂಡರು. ರಾಯರಿಗೆ ಕಣ್ಣು ಕತ್ತಲೆ ಬಂದಂತಾಯಿತು. ತಲೆ ತಿರುಗಲಾರಂಭಿಸಿತು. ಅವರು ತಲೆಯ ಮೇಲೆ ಕೈ ಇಟ್ಟು ಅಲ್ಲೇ ಕುಳಿತುಬಿಟ್ಟರು. ಹಾಗೂ ಗಟ್ಟಿಯಾಗಿ ರೋಧಿಸಲಾರಂಭಿಸದರು.

ಆಗ ಡಾಕ್ಟರರೂ ಗಾಬರಿಯಿಂದ ಅಲ್ಲಿಗೆ ಓಡಿ ಬಂದರು. ರಾಯರು ರೋಧಿಸುತ್ತಾ ಕಾಗದವನ್ನು ಅವರಿಗೆ ಕೊಟ್ಟರು. ಅದನ್ನು ಓದಿದ ಕೂಡಲೇ ಡಾಕ್ಟರರ ಕಣ್ಣುಗಳು ಕೆಂಪಾದವು. ಅವರು ಕಾಗದವನ್ನು ರಾಯರ ಮುಖಕ್ಕೆ ಬಿಸಾಡಿ 'ರಾಯರೇ ನಿಮ್ಮ ಕುತಂತ್ರವಲ್ಲಾ ತಿಳಿಯಿತು. ನಾಲ್ಕು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮಗಳನ್ನು ಕೊಡದೆ ನನ್ನನ್ನು ವಂಚಿಸಬೇಕೆಂದು ಮಾಡಿದ ಚಾಣಕ್ಯ ತಂತ್ರವು ಈಗ ಬಯಲಾಯಿತು. ನೀವು ಮಾಡಿದ ಮೋಸಕ್ಕೆ ಸರಿಯಾದ ಫಲವು ನಿಮಗೆ ದೊರೆಯಲು ಇನ್ನು ಹೆಚ್ಚು ವಿಳಂಬವಾಗದೆಂದು ತಿಳಿಯಿರಿ. ರಾಯರೇ ನನ್ನಿಂದ ಮೋಸ ಮಾಡಿ ಪಡೆದ ಆ ಎರಡು ಸಾವಿರವನ್ನು ಈಗಲೇ ಇಟ್ಟುಬಿಡಿರಿ. ಇಲ್ಲವಾದರೆ ನಿಮ್ಮ ಗತಿಯು ನೆಟ್ಟಗಾಗಲಾರದು' ಎಂದು ಕೂಗಾಡಲಾರಂಭಿಸಿದರು.

ಇದನ್ನು ಕೇಳಿ ರಾಯರಿಗೂ ಕೂಡ ಸಿಟ್ಟು ಬಂದಿತು. ಅವರು 'ಡಾಕ್ಟರರೇ! ಸಾಕು ಮಾಡಿರಿ ನಿಮ್ಮ ಪುರಾಣವನ್ನು, ನಾನೇನು ನಿಮಗೆ ಬೇಕೆಂದು ಮೋಸ ಮಾಡಿರುವುದಿಲ್ಲ ಆದರೆ ಈಗ ನೋಡುವಾಗ ಅದಷ್ಟು ಒಳಿತೇ ಆಯಿತು. ಇಗೊಳ್ಳಿ ತೆಗೆದುಕೊಳ್ಳಿರಿ ನಿಮ್ಮ ಎರಡು ಸಾವಿರವನ್ನು' ಎಂದವರೇ ರಾಯರು ಎರಡು ನೋಟುಗಳನ್ನು ಡಾಕ್ಟರರ ಮುಂದೆ ಚೆಲ್ಲಿದರು.

ಡಾಕ್ಟರರು ನೋಟುಗಳನ್ನು ತೆಗೆದುಕೊಳ್ಳುತ್ತಾ 'ರಾಯರೇ! ಮರೆಯಬೇಡಿರಿ ನೀವು ನನ್ನ ಮಾನ ಹಾನಿ ಮಾಡಿರುವಿರಿ. ಆದುದರಿಂದ ನಾನು ಈಗಲೇ ಮಾನ ಹಾನಿಯ ಮೇಲೆ ಹೋಗದಿದ್ದರೆ ನನ್ನ ಹೆಸರು 'ಡಾಕ್ಟರ್ ರಮೇಶನೇ ಅಲ್ಲ' ಎಂದು ಹೇಳಿ ರೋಷದಿಂದ ತನ್ನವರನ್ನೆಲ್ಲ ಕೂಡಿಕೊಂಡು ಕೂಡಲೇ ತನ್ನ ಮನೆಯ ಕಡೆ ಸಾಗಿದರು.

ಇತ್ತ ರಾಯರ ದುಃಖವು ಅನಿವಾರ್ಯವಾಯಿತು. ಒಂದೆಡೆ ಮಗಳ ವಿಯೋಗ, ಇನ್ನೊಂದೆಡೆ ನಾಲ್ಕು ಸಾವಿರದ ಮೇಲೆ ವಜ್ರಘಾತ, ಮತ್ತೊಂದೆಡೆ ಡಾಕ್ಟರ ಮುಂದಿನ ಕಾರ್ಯದ ಭಯ. ಇವಲ್ಲದರಿಂದಲೂ, ಹಣ್ಣಾದ ರಾಯರು ಶೋಕಾತಿರೇಕದಿಂದ ಮೂರ್ಛಿತರಾಗಿ ಬಿದ್ದು ಬಿಟ್ಟರು.

ಎರಡು ಗಂಟೆಗಳ ಹಿಂದೆ ಸಂತೋಷ ಸಾಗರದಲ್ಲಿ ತೇಲಾಡುತ್ತಿದ್ದ ರಾಯರ ಬಂಧುಬಳಗದಲ್ಲಿ ಅಶಾಂತಿಯು ನೆಲೆಗೊಂಡಿತು. ಎಲ್ಲೆಲ್ಲೂ ಅಶಾಂತಿಯೇ ಅಶಾಂತಿ, ದುಃಖವೇ ದುಃಖ.

ಸ್ವಲ್ಪ ಹೊತ್ತಿನಲ್ಲೇ ರಾಯರಿಗೆ ಎಚ್ಚರವಾಯಿತು. ಅವರು ಎದ್ದು ಕುಳಿತರು. ಸಮೀಪದಲ್ಲೇ ದುಃಖದಾಯಕ ಹಾಗೂ ಭೀಕರ ಕಾಗದವು ಬಿದ್ದಿದ್ದಿತು. ರಾಯರು ಪುನಹ ಅದನ್ನು ಎತ್ತಿಕೊಂಡು ಓದಲಾರಂಭಿಸಿದರು. ಅದರಲ್ಲಿ ಹೀಗೆ ಬರೆದಿತ್ತು—

ಪಿತಾಜೀ! ನನ್ನನ್ನು ಕ್ಷಮಿಸಿರಿ, ನಾನು ಮಾಡಿದ ಕೆಲಸದಿಂದ ತಮಗ ಬಹಳ ದುಃಖವಾಗುವದೆಂದು ನನಗೆ ತೀರಾ ತಿಳಿದದೆ. ಆದರೆ ನನ್ನ ಉದ್ಧಾರಕ್ಕಾಗಿ ನಾನು ಆ ಕೆಲಸಕ್ಕೆ ಕೈ ಹಾಕಿದ್ದಲ್ಲದೆ ತಮ್ಮ ಬಹು ದೊಡ್ಡ ಲಾಭಕ್ಕೆ ಹುಳಿ ಹಿಂಡುವ ಮಹತ್ಕಾರ್ಯವನ್ನು ಕೈಗೊಂಡೆನು. ಆದರೆ ಪಿತಾಜೀ! ನಾನು ಪರಮಾತ್ಮನನ್ನು ಸ್ಮರಿಸಿ ಹೇಳುವೆನು, ನೀವು ನಿಜವಾಗಿ ತಂದೆಯು ಮಾಡಬೇಕಾದ ಕರ್ತವ್ಯವನ್ನು ತೀರಾ ಮರೆತಿರುವಿರಿ. ಇದೆಲ್ಲಕ್ಕೂ ಕಾರಣವೆಂದರೆ ನಿಮ್ಮ ದುರಾಶೆಯು. ಆದರೆ, ಇನ್ನಾದರೂ ಪಿತಾಜೀ! ನೀವು ಧನದಾಶೆಯನ್ನು ಬಿಡದಿದ್ದರೆ ಭೂತ ಭವಿಷ್ಯದ್ವರ್ತಮಾನಗಳಲ್ಲೂ ನಿಮಗೆ ಸುಖವಿಲ್ಲವೆಂಬದನ್ನು ನಾನು ಧೈರ್ಯವಾಗಿ ಹೇಳಬಲ್ಲೆನು.

ಪಿತಾಜೀ! ನೀವು ಯಾವ ವಿಷಯವನ್ನು ನೀಚ ಹಾಗೂ ನಿಕೃಷ್ಟವೆಂದು ಭಾವಿಸಿದ್ದಿರೋ ಅದರಿಂದಲೇ ಇಂದು ನನ್ನ ಉದ್ಧಾರವಾಗಿದೆ. ಒಂದು ರೀತಿಯಲ್ಲಿ ನಿಮ್ಮ ಉದ್ಧಾರವಾಗಿದೆಯೆಂದು ತಿಳಿಯಿರಿ. ಅಲ್ಲದೆ ಹಾಗೆ ನನ್ನನ್ನುದ್ಧರಿಸಿದ ಆ ವಿಷಯವೇ ನನ್ನ ಪ್ರಾಣಧಾತರೆಂದೂ ಮತ್ತು ನನ್ನ ಇಹಪರಗಳೆರಡರ ಸರ್ವೈಶ್ವರ್ಯವೆಂದೂ ಪುನಹ ನಾನು ನಿಮಗೆ ಹೇಳುವೆನು. ಹಾಗೆ ಹೇಳುತ್ತಿರುವ ನನ್ನ ನಾಚಿಕೆಗೆಟ್ಟ ಮುಖವನ್ನು ತಾವು ನೋಡಬಯಸಲಾರಿರೆಂದೂ, ತೋರುವದೂ ಕೂಡ ಉಚಿತವಲ್ಲವೆಂದೇ ನಾನು ಹೊರಟು ಹೋಗಿರುವೆನು. ತಾವು ನನಗಾಗಿ ಚಿಂತಿಸುವ ಕಾರಣವಿಲ್ಲ.

ಪಿತಾಜೀ! ಇದೇ ಈಗ ನಾನು ಮಾಡುವ ಅಂತಿಮ ಪ್ರಣಾಮವನ್ನು ಸ್ವೀಕರಿಸುವ ಕೃಪೆ ಮಾಡಿರಿ. ಅಲ್ಲದೆ ನಾವಿಬ್ಬರೂ ಚಿರಕಾಲ ಸುಖಿಗಳಾಗಿರುವಂತೆ ಆಶೀರ್ವದಿಸಿ ಪಿತೃ ಕರ್ತವ್ಯದ ಸ್ವಲ್ಪ ಭಾಗವನ್ನಾದರೂ ಪೂರೈಸಬೇಕಾಗಿ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಪಿತಾಜೀ! ತಾವಿನ್ನು ವ್ಯರ್ಥವಾಗಿ ಹುಡುಕುವ ಶ್ರಮ ತೆಗೆದುಕೊಳ್ಳದೆ ನಿಶ್ಚಿಂತರಾಗಿರಬೇಕಾಗಿ ನನ್ನ ಅಂತಿಮ ವಂದನೆಯನ್ನರ್ಪಿಸಿ ಕೇಳಿಕೊಳ್ಳುವೆನು.

ಇತಿ, ತಮ್ಮ ಹಿತಚಿಂತಕಳಾದ,
ಕಮಲಾ.

ಕಾಗದವನ್ನು ಓದಿಕೊಂಡ ಕೂಡಲೇ ರಾಯರಿಗೆ ಅವರ ತಪ್ಪು ತಿಳಿಯಿತು. ಆಗ ಅವರು ಗದ್ಗದ ಕಂಠದಿಂದ 'ಕ್ಷಮಿಸಮ್ಮ ಕಮಲಾ! ನಾನು ನಿನ್ನ ತಂದೆಯಲ್ಲ. ನಿನ್ನ ಪಾಲಿನ ಅಂತಕನು. ನೀನು ಮಾನವಿಯಲ್ಲ, ದೇವಿ ಎಂಬದು ತಿಳಿಯಿತು. ಕಮಲಾ! ನೀನು ಹೇಳಿದಂತೆ ನಾನು ನಿನ್ನನ್ನು ಮಾರಲುದ್ಯುಕ್ತನಾಗಿದ್ದುದು ನಿಜ. ಆದರೆ ಅದಕ್ಕಾಗಿ ನೀನು ಈಗ ನನ್ನನ್ನು ಕ್ಷಮಿಸಲಾರೆಯಾ? ಕಮಲಾ! ಅಮ್ಮಾ ಕಮಲಾ! ನಿಜವಾಗಿಯೂ ನೀನು ನನ್ನನ್ನು ಬಿಟ್ಟಗಲಿದೆಯಾ? ನಾನು ನಿನ್ನನ್ನು ಎಂದೂ ನೋಡಲಾರೆನೇ? ಇನ್ನು ಈ ಪಾಪಿಯನ್ನು ಕ್ಷಮಿಸಿ ನೀನು ಹಿಂದಿರುಗಲಾರೆಯಾ? ಕಮಲಾ? ದೇವಿ! ಕಮಲೇ!! ನನ್ನ ಪ್ರಿಯ ಕುಮಾರೀ!!! ಹಾ! ನಾನೆಂಥಾ ನಿರ್ಭಾಗ್ಯನು. ಬಾಮ್ಮಾ ಕಮಲಾ! ಒಮ್ಮೆ ಬಂದು ನಿನ್ನ ಅಭಾಗಿಯಾದ ತಂದೆಯನ್ನು ನೋಡು. ಹಾಗೂ ನಿನ್ನ ವಿಶಯವನ್ನು ಕರೆದುಕೊಂಡು ಬಾಮ್ಮಾ! ಸಂತೋಷದಿಂದ ನಾನು ನಿನ್ನನ್ನು ಅವನಿಗೇ ಧಾರೆಯೆರೆದು ಕೊಡುವೆನು. ಅಲ್ಲದೆ ನಿಮ್ಮೀರ್ವರನ್ನೂ ನೋಡಿ ನಲಿವೆನು. ಹಾ! ಅಂಥಾ ಪುಣ್ಯವು ನನಗಿನ್ನಿದೆಯೋ? ನನ್ನ ಪ್ರಿಯ ಕುಮಾರೀ, ಹಾ! ಇನ್ನು ಹಿಂದಿರುಗಿ ಬರುವಳೇ? ಇಲ್ಲ, ಇಲ್ಲ; ಎಂದೂ ಬರಲಾರಳು. ನಾನು ಪರಮ ಪಾಪಿಯು. ನರಾಧಮನು. ದೇವೀ! ನನ್ನನ್ನು ನೀನೆಂದು ಉದ್ಧರಿಸಿದೆ. ಆದರೆ, ಕಮಲಾ, ನನ್ನನ್ನು ನೀನು ಹೀಗೆ ಅಗಲಿ ಹೋಗಬಹುದೇ? ಹಾ! ದೇವೀ! ಕಮಲೇ ಪ್ರಿಯ ಕುಮಾರಿ ಹಾ!' ಎನ್ನುತ್ತಾ ಮೂರ್ಛಿತನಾಗಿ ಬಿದ್ದುಬಿಟ್ಟನು.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

5 **Ludhiana.**

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ ...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-11

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೀ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೀ.
ಮತ್ತು ಕಂಪನಿ,

(52-25) ಗಿರಗಾಂವ, ಮುಂಬಯಿ ೪,

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೆ,

ವರದಿ ವರ್ಷವು ಈ ಮೇ ತಾರೀಕು 31ಕ್ಕೆ ಅಂತ್ಯವಾಗುವದರಿಂದ ಅದರೊಳಗೆ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸು.

ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮೆ ಪಿ. ಜಿ. ಮುದ್ದಮ್ಮಯ್ಯನವರು.
ಕುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬಿಳ್ಳಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು

ಸೂಚನೆ.—ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಸದರಿಯವರ ಕೋರಿಕೆ ಮೇರೆ 6 ಕಂತುಗಳನ್ನು (ವಾರ್ಷಿಕ) ಮಂಜೂರ್ಮಾಡಲಾಯಿತು. ಅಲ್ಲದೆ ಸದರಿ ಸಾಲದ ಬಾಕಿ ಮೊಬಲಗುಗಳಿಗೆ ಹೊಸದಾಗಿ ಸ್ಟಾಂಪು ಕಾಗದದಲ್ಲಿ ಖರಾರು ಬರೆದು ಕಳುಹಿಸಬೇಕಾಗಿಯೂ ಸಹ ತೀರ್ಮಾನವಾಯಿತು.

8. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರಕೊಂಡ 1. ಶ್ರೀಮತಿ ಶಿವಾಚಾರ ಈರಮ್ಮ 2. ಮೆ. ಮುಂಜಾಂದಿರ ಸಿ. ಸುಬ್ಬಯ್ಯ ಮತ್ತು 3. ಶ್ರೀಮತಿ ಕೊಟ್ಟಂಗಳ ದೇಚವ್ವ ಇವರುಗಳನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

9. ನರಿಯಂಡ ಕುಟುಂಬ ಧವಸ ಭಂಡಾರದ ಪ್ರೆಸಿಡೆಂಟರು ತಮ್ಮ ಸಂಘದ ಬಾಬ್ತು ಬ್ಯಾಂಕಿನಲ್ಲಿ ಪಡಕೊಂಡ 10 ಶೇರುಗಳ ಪೈಕಿ ಒಂದನ್ನು ಇಟ್ಟು ಬಾಕಿ 9 ಶೇರುಗಳನ್ನು ಅವರು ಕೊಡಬೇಕಾದ ಸಾಲಕ್ಕೆ ಜಮ ತೆಗೆದುಕೊಳ್ಳಬೇಕೆಂದು ಬರಕೊಂಡ ಅರ್ಜಿಯಂತೆ ಮಂಜೂರ್ಮಾಡಲಾಯಿತು.

10. ಬೇಂಗುನಾಡು ಬಾಡಗ ಸೊಸೈಟಿಯವರು ತಮಗೆ ಮಂಜೂರಾದ ಹಣದಿಂದ ಬ್ಯಾಂಕಿನಲ್ಲಿ ಅವರು ಡಿಪಾಜಿಟ್ಟು ಇಡಬೇಕಾದ ಕ್ಷೇಮನಿಧಿ ಮೊಬಲಗನ್ನು ವಜ ಹಿಡಿಯಕೂಡದೆಂದು ಬರಕೊಂಡದೆಂದು ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

ಸಿ. ಐ. ಬೆಳ್ಯಪ್ಪ,
(ಅಧ್ಯಕ್ಷರು.)

ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು.

ತಾ. 16–5–39ರಲ್ಲಿ ವೀರರಾಜಪೇಟೆಯಲ್ಲಿ ನಡೆದ ಮೀಟಿಂಗಿನ ನಡವಳಿಕೆ. ಎಲ್ಲಾ ಸದಸ್ಯರೂ ಹಾಜರಿದ್ದರು.

ಕಳೆದ ಮೀಟಿಂಗಿನ ಕಾರ್ಯಕಲಾಪಗಳ ವಿವರಣೆಯನ್ನು ಓದಿದನಂತರ ಈ ಕೆಳಗಿನ ಠರಾವುಗಳು ಅಂಗೀಕರಿಸಲ್ಪಟ್ಟವು.

(1) ಪ್ರತಿ ತಾಲೋಕು ಕಾಂಗ್ರೆಸ್ ಕಮಿಟಿಯ ಲೆಕ್ಕಪತ್ರಗಳನ್ನು ಆಡಿಟು ಮಾಡಿಸಲು ಮ. ಗಳಂವ ಪಿ. ಜಿ. ಮುದ್ದಪ್ಪಯ್ಯ, ಚಂಬಾಂಡ ಮಾದಪ್ಪ ಮತ್ತು ಸಿ. ಎಂ. ಪೂಣಚ್ಚ (ಕನ್ವೀನರ್) ಇವರುಗಳಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಲಾಯಿತು. ಇವರು ಜೂನ್ 10ರೊಳಗ ತಮ್ಮ ವರದಿಯನ್ನೊಪ್ಪಿಸುವಂತೆ ತೀರ್ಮಾನವಾಯಿತು.

(2) ಶ್ರೀಮತಿ ಬಿ. ಟಿ. ಜಿ. ಕೃಷ್ಣ ಇವರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚನೆಯ ಠರಾವನ್ನು ಪಾಸು ಮಾಡಲಾಯಿತು.

(3) ಮುಂದಿನ ವರ್ಷದ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷಸ್ಥಾನಕ್ಕೆ ಶ್ರೀ. ಕೆ. ಸಿ. ಕರುಂಬಯ್ಯನವರನ್ನೂ, ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ. ಬಿ. ಯಂ. ಕಾರ್ಯಪ್ಪನವರನ್ನೂ ಮತ್ತು ಖಜಾನ್ಜಿಯವರ ಸ್ಥಾನಕ್ಕೆ ಶ್ರೀ. ಸಿ. ಜಿ. ಮುದ್ದಪ್ಪಯ್ಯನವರನ್ನೂ ಸರ್ವ ಸಮ್ಮತದಿಂದ ಚುನಾಯಿಸಲಾಯಿತು.

(4) (a) ಕಳೆದ ಕೌನ್ಸಿಲ್ ಮೀಟಿಂಗಿನಲ್ಲಿ ಕೌನ್ಸಿಲಿನ ಕಾಂಗ್ರೆಸ್ ಸದಸ್ಯರ ಸಭಾ ತ್ಯಾಗದ ವಿಷಯ ದೀರ್ಘ ಚರ್ಚೆ ನಡೆದು ಕೌನ್ಸಿಲ್ ಸದಸ್ಯರು ಕೊಟ್ಟ ಸಮಜಾಯಿಸಿಕೆಯನ್ನು ಕೇಳಿದನಂತರ ಅವರು ಕೈಗೊಂಡ ಕಾರ್ಯ ಕ್ರಮಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಒಪ್ಪಿಗೆಯನ್ನು ವ್ಯಕ್ತಮಾಡಲಾಯಿತು.

(b) ಕಾಂಗ್ರೆಸ್ ಕೌನ್ಸಿಲ್ ಮೆಂಬರರು ಎಂದಿನಂತೆ ಕೌನ್ಸಿಲ್ ಕಾರ್ಯಭಾರದಲ್ಲಿ ಭಾಗವಹಿಸಬಹುದೆಂದು ತೀರ್ಮಾನಿಸಲಾಯಿತು.

(5) ಮಾದಕ ಪದಾರ್ಥಗಳಿರುವ ಯಾವುದೇ ಕೂಟದಲ್ಲಿ ಭಾಗವಹಿಸಬಾರದೆಂದು ತೀರ್ಮಾನಿಸಲಾಯಿತು.

(6) ಈ ಜಿಲ್ಲಾ ಕಾಂಗ್ರೆಸ್ ಕಮಿಟಿಯು ಈಗಿನ ಹೊಸ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಲ್ಲಿಯೂ ಮತ್ತು ಮಹಾತ್ಮ ಗಾಂಧಿಯವರಲ್ಲಿಯೂ ಸಂಪೂರ್ಣ ಭರವಸೆಯನ್ನಿಟ್ಟಿರುವುದೆಂದು ತೀರ್ಮಾನಿಸಲಾಯಿತು.

ನಂತರ ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಬರಕಾಸ್ತಾಯಿತು.

ಐ. ಪಿ. ಕಾರ್ಯಪ್ಪ,
(ಅಧ್ಯಕ್ಷ.)

ಉದ್ಧಾರ.

(3ನೇ ಪುಟದಿಂದ ಸಾಗಿದ್ದು.)

ಕಡೆಗೆ ರಾಯರು ಅವಳ ಕೋಣೆಯೆಡೆಗೆ ಓಡಿದರು. ಅಲ್ಲಿ ಅವಳ ಬರಿದಾದ ಹಾಸಿಗೆ ಮಾತ್ರ (ಚೇತನ ರಹಿತ ಸುಂದರ ಸ್ತ್ರೀಯಂತೆ) ಬಿದ್ದಿದ್ದಿತು. ರಾಯರು ಹುಚ್ಚರಂತಾದರು. ಇಷ್ಟರಲ್ಲೇ ಕಮಲೆಯು ಅದೃಶ್ಯವಾದ ಸಮಾಚಾರವು ಮನೆಯಲ್ಲೆಲ್ಲಾ ಹರಡಿತು. ತನ್ನನ್ನು ತಾನೇ ಸಿಂಗರಿಸಿಕೊಳ್ಳುತ್ತಾ ಕುಳಿತಿದ್ದ ಡಾಕ್ಟರರ ಎದೆ ಹಾರಿತು. ಅವರೂ ಸಹ ಹುಡುಕಲಾರಂಭಿಸಿದರು. ನಿಮಿಶಾರ್ಧದಲ್ಲಿ ಡಾಕ್ಟರರು ರಾಯರ ಮನೆಯ ಸಂಧಿ ಮೂಲೆಗಳನ್ನೆಲ್ಲಾ ಸಂದರ್ಶಿಸಿದರು. ಎಲ್ಲವೂ ವ್ಯರ್ಥವಾಯಿತು. ರಾಯರೂ ಕೂಡ ಕೋಣೆಯ ಎಲ್ಲಾ ಸಾಮಾನುಗಳನ್ನು ಮಗುಚಿ ಹಾಕಿದರು. ಆದರೂ ಕಮಲೆಯ ಕುರುಹೆ ಹತ್ತದಾಯಿತು.

ಅಷ್ಟರಲ್ಲೇ ರಾಯರಿಗೆ ಮೇಜಿನ ಮೇಲೆ ತನ್ನ ಹೆಸರಿನ ಕಾಗದವೊಂದು ದೃಷ್ಟಿಗೆ ಬಿದ್ದಿತು. ಕೂಡಲೇ ಅವರು ಅದನ್ನು ಆತುರದಿಂದ ತೆಗೆದುಕೊಂಡು ಬಿಡಿಸಿಕೊಂಡು ಓದಕೊಂಡರು. ರಾಯರಿಗೆ ಕಣ್ಣು ಕತ್ತಲೆ ಬಂದಂತಾಯಿತು. ತಲೆ ತಿರುಗಲಾರಂಭಿಸಿತು. ಅವರು ತಲೆಯ ಮೇಲೆ ಕೈ ಇಟ್ಟು ಅಲ್ಲೇ ಕುಳಿತುಬಿಟ್ಟರು. ಹಾಗೂ ಗಟ್ಟಿಯಾಗಿ ರೋಧಿಸಲಾರಂಭಿಸದರು.

ಆಗ ಡಾಕ್ಟರರೂ ಗಾಬರಿಯಿಂದ ಅಲ್ಲಿಗೆ ಓಡಿ ಬಂದರು. ರಾಯರು ರೋಧಿಸುತ್ತಾ ಕಾಗದವನ್ನು ಅವರಿಗೆ ಕೊಟ್ಟರು. ಅದನ್ನು ಓದಿದ ಕೂಡಲೇ ಡಾಕ್ಟರರ ಕಣ್ಣುಗಳು ಕೆಂಪಾದವು. ಅವರು ಕಾಗದವನ್ನು ರಾಯರ ಮುಖಕ್ಕೆ ಬಿಸಾಡಿ 'ರಾಯರೇ ನಿಮ್ಮ ಕುತಂತ್ರವಲ್ಲಾ ತಿಳಿಯಿತು. ನಾಲ್ಕು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಮಗಳನ್ನು ಕೊಡದೆ ನನ್ನನ್ನು ವಂಚಿಸಬೇಕೆಂದು ಮಾಡಿದ ಚಾಣಕ್ಯ ತಂತ್ರವು ಈಗ ಬಯಲಾಯಿತು. ನೀವು ಮಾಡಿದ ಮೋಸಕ್ಕೆ ಸರಿಯಾದ ಫಲವು ನಿಮಗೆ ದೊರೆಯಲು ಇನ್ನು ಹೆಚ್ಚು ವಿಳಂಬವಾಗದೆಂದು ತಿಳಿಯಿರಿ. ರಾಯರೇ ನನ್ನಿಂದ ಮೋಸ ಮಾಡಿ ಪಡೆದ ಆ ಎರಡು ಸಾವಿರವನ್ನು ಈಗಲೇ ಇಟ್ಟುಬಿಡಿರಿ. ಇಲ್ಲವಾದರೆ ನಿಮ್ಮ ಗತಿಯು ನೆಟ್ಟಗಾಗಲಾರದು' ಎಂದು ಕೂಗಾಡಲಾರಂಭಿಸಿದರು.

ಇದನ್ನು ಕೇಳಿ ರಾಯರಿಗೂ ಕೂಡ ಸಿಟ್ಟು ಬಂದಿತು. ಅವರು 'ಡಾಕ್ಟರರೇ! ಸಾಕು ಮಾಡಿರಿ ನಿಮ್ಮ ಪುರಾಣವನ್ನು, ನಾನೇನು ನಿಮಗೆ ಬೇಕೆಂದು ಮೋಸ ಮಾಡಿರುವುದಿಲ್ಲ ಆದರೆ ಈಗ ನೋಡುವಾಗ ಅದದ್ದು ಒಳಿತೇ ಆಯಿತು. ಇಗೊಳ್ಳಿ ತೆಗೆದುಕೊಳ್ಳಿರಿ ನಿಮ್ಮ ಎರಡು ಸಾವಿರವನ್ನು' ಎಂದವರೇ ರಾಯರು ಎರಡು ನೋಟುಗಳನ್ನು ಡಾಕ್ಟರರ ಮುಂದೆ ಚೆಲ್ಲಿದರು.

ಡಾಕ್ಟರರು ನೋಟುಗಳನ್ನು ತೆಗೆದುಕೊಳ್ಳುತ್ತಾ 'ರಾಯರೇ! ಮರೆಯಬೇಡಿರಿ ನೀವು ನನ್ನ ಮಾನ ಹಾನಿ ಮಾಡಿರುವಿರಿ. ಆದುದರಿಂದ ನಾನು ಈಗಲೇ ಮಾನ ಹಾನಿಯ ಮೇಲೆ ಹೋಗದಿದ್ದರೆ ನನ್ನ ಹೆಸರು 'ಡಾಕ್ಟರ್ ರಮೇಶನೇ ಅಲ್ಲ' ಎಂದು ಹೇಳಿ ರೋಷದಿಂದ ತನ್ನವರನ್ನೆಲ್ಲ ಕೂಡಿಕೊಂಡು ಕೂಡಲೇ ತನ್ನ ಮನೆಯ ಕಡೆ ಸಾಗಿದರು.

ಇತ್ತ ರಾಯರ ದುಃಖವು ಅನಿವಾರ್ಯವಾಯಿತು. ಒಂದೆಡೆ ಮಗಳ ವಿಯೋಗ, ಇನ್ನೊಂದೆಡೆ ನಾಲ್ಕು ಸಾವಿರದ ಮೇಲೆ ವಜ್ರಘಾತ, ಮತ್ತೊಂದೆಡೆ ಡಾಕ್ಟರ ಮುಂದಿನ ಕಾರ್ಯದ ಭಯ. ಇವೆಲ್ಲವರಿಂದಲೂ, ಹಣ್ಣಾದ ರಾಯರು ಶೋಕಾತಿರೇಕದಿಂದ ಮೂರ್ಛಿತರಾಗಿ ಬಿದ್ದು ಬಿಟ್ಟರು.

ಎರಡು ಗಂಟೆಗಳ ಹಿಂದೆ ಸಂತೋಷ ಸಾಗರದಲ್ಲಿ ತೇಲಾಡುತ್ತಿದ್ದ ರಾಯರ ಬಂಧುಬಳಗದಲ್ಲಿ ಅಶಾಂತಿಯು ನೆಲೆಗೊಂಡಿತು. ಎಲ್ಲೆಲ್ಲೂ ಅಶಾಂತಿಯೇ ಅಶಾಂತಿ, ದುಃಖವೇ ದುಃಖ.

ಸ್ವಲ್ಪ ಹೊತ್ತಿನಲ್ಲೇ ರಾಯರಿಗೆ ಎಚ್ಚರವಾಯಿತು. ಅವರು ಎದ್ದು ಕುಳಿತರು. ಸಮೀಪದಲ್ಲೇ ದುಃಖದಾಯಕ ಹಾಗೂ ಭೀಕರ ಕಾಗದವು ಬಿದ್ದಿದ್ದಿತು. ರಾಯರು ಪುನಹ ಅದನ್ನು ಎತ್ತಿಕೊಂಡು ಓದಲಾರಂಭಿಸಿದರು. ಅದರಲ್ಲಿ ಹೀಗೆ ಬರೆದಿತ್ತು–

ಪಿತಾಜೀ! ನನ್ನನ್ನು ಕ್ಷಮಿಸಿರಿ, ನಾನು ಮಾಡಿದ ಕೆಲಸದಿಂದ ತಮಗೆ ಬಹಳ ದುಃಖವಾಗುವದೆಂದು ನನಗೆ ತೀರಾ ತಿಳಿದದೆ. ಆದರೆ ನನ್ನ ಉದ್ಧಾರಕ್ಕಾಗಿ ನಾನು ಆ ಕೆಲಸಕ್ಕೆ ಕೈ ಹಾಕಿದ್ದಲ್ಲದೆ ತಮ್ಮ ಬಹು ದೊಡ್ಡ ಲಾಭಕ್ಕೆ ಹುಳಿ ಹಿಂಡುವ ಮಹತ್ಕಾರ್ಯವನ್ನು ಕೈಗೊಂಡೆನು. ಆದರೆ ಪಿತಾಜೀ! ನಾನು ಪರಮಾತ್ಮನನ್ನು ಸ್ಮರಿಸಿ ಹೇಳುವೆನು, ನೀವು ನಿಜವಾಗಿ ತಂದೆಯು ಮಾಡಬೇಕಾದ ಕರ್ತವ್ಯವನ್ನು ತೀರಾ ಮರೆತಿರುವಿರಿ. ಇದೆಲ್ಲಕ್ಕೂ ಕಾರಣವೆಂದರೆ ನಿಮ್ಮ ದುರಾಶೆಯು. ಆದರೆ, ಇನ್ನಾದರೂ ಪಿತಾಜೀ! ನೀವು ಧನದಾಶೆಯನ್ನು ಬಿಡದಿದ್ದರೆ ಭೂತ ಭವಿಷ್ಯದ್ವರ್ತಮಾನಗಳಲ್ಲೂ ನಿಮಗೆ ಸುಖವಿಲ್ಲವೆಂಬದನ್ನು ನಾನು ಧೈರ್ಯವಾಗಿ ಹೇಳಬಲ್ಲೆನು.

ಪಿತಾಜೀ! ನೀವು ಯಾವ ವಿಶುವನ್ನು ನೀಚ ಹಾಗೂ ನಿಕೃಷ್ಟನೆಂದು ಭಾವಿಸಿದ್ದಿರೋ ಅವರಿಂದಲೇ ಇಂದು ನನ್ನ ಉದ್ಧಾರವಾಗಿದೆ. ಒಂದು ರೀತಿಯಲ್ಲಿ ನಿಮ್ಮ ಉದ್ಧಾರವಾಗಿದೆಯೆಂದು ತಿಳಿಯಿರಿ. ಅಲ್ಲದೆ ಹಾಗೆ ನನ್ನನ್ನುದ್ಧರಿಸಿದ ಆ ವಿಶುವೇ ನನ್ನ ಪ್ರಾಣಧಾತರೆಂದೂ ಮತ್ತು ನನ್ನ ಇಹಪರಗಳೆರಡರ ಸರ್ವೈಶ್ವರ್ಯವೆಂದೂ ಪುನಹ ನಾನು ನಿಮಗೆ ಹೇಳುವೆನು. ಹಾಗೆ ಹೇಳುತ್ತಿರುವ ನನ್ನ ನಾಚಿಕೆಗೆಟ್ಟ ಮುಖವನ್ನು ತಾವು ನೋಡಬಯಸಲಾರಿರೆಂದೂ, ತೋರುವದೂ ಕೂಡ ಉಚಿತವಲ್ಲವೆಂದೇ ನಾನು ಹೊರಟು ಹೋಗಿರುವೆನು. ತಾವು ನನಗಾಗಿ ಚಿಂತಿಸುವ ಕಾರಣವಿಲ್ಲ.

ಪಿತಾಜೀ! ಇದೇ ಈಗ ನಾನು ಮಾಡುವ ಅಂತಿಮ ಪ್ರಣಾಮವನ್ನು ಸ್ವೀಕರಿಸುವ ಕೃಪೆ ಮಾಡಿರಿ. ಅಲ್ಲದೆ ನಾವಿಬ್ಬರೂ ಚಿರಕಾಲ ಸುಖಿಗಳಾಗಿರುವಂತೆ ಆಶೀರ್ವದಿಸಿ ಪಿತೃ ಕರ್ತವ್ಯದ ಸ್ವಲ್ಪ ಭಾಗವನ್ನಾದರೂ ಪೂರೈಸಬೇಕಾಗಿ ಸೆರಗೊಡ್ಡಿ ಬೇಡಿಕೊಳ್ಳುತ್ತೇನೆ. ಪಿತಾಜೀ! ತಾವಿನ್ನು ವ್ಯರ್ಥವಾಗಿ ಹುಡುಕುವ ಶ್ರಮ ತೆಗೆದುಕೊಳ್ಳದೆ ನಿಶ್ಚಿಂತರಾಗಿರಬೇಕಾಗಿ ನನ್ನ ಅಂತಿಮ ವಂದನೆಯನ್ನರ್ಪಿಸಿ ಕೇಳಿಕೊಳ್ಳುವೆನು.

ಇತಿ, ತಮ್ಮ ಹಿತಚಿಂತಕಳಾದ,
ಕಮಲಾ.

ಕಾಗದವನ್ನು ಓದಿಕೊಂಡ ಕೂಡಲೇ ರಾಯರಿಗೆ ಅವರ ತಪ್ಪು ತಿಳಿಯಿತು. ಆಗ ಅವರು ಗದ್ಗದ ಕಂಠದಿಂದ 'ಕ್ಷಮಿಸಮ್ಮ ಕಮಲಾ! ನಾನು ನಿನ್ನ ತಂದೆಯಲ್ಲ. ನಿನ್ನ ಪಾಲಿನ ಅಂತಕನು. ನೀನು ಮಾನವಿಯಲ್ಲ, ದೇವಿ ಎಂಬುದು ತಿಳಿಯಿತು. ಕಮಲಾ! ನೀನು ಹೇಳಿದಂತೆ ನಾನು ನಿನ್ನನ್ನು ಮಾರಲುದ್ಯುಕ್ತನಾಗಿದ್ದುದು ನಿಜ. ಆದರೆ ಅದಕ್ಕಾಗಿ ನೀನು ಈಗ ನನ್ನನ್ನು ಕ್ಷಮಿಸಲಾರೆಯಾ? ಕಮಲಾ! ಅಮ್ಮಾ ಕಮಲಾ! ನಿಜವಾಗಿಯೂ ನೀನು ನನ್ನನ್ನು ಬಿಟ್ಟಗಲಿದೆಯಾ? ನಾನು ನಿನ್ನನ್ನು ಎಂದೂ ನೋಡಲಾರೆನೇ? ಇನ್ನು ಈ ಪಾಪಿಯನ್ನು ಕ್ಷಮಿಸಿ ನೀನು ಹಿಂದಿರುಗಲಾರೆಯಾ? ಕಮಲಾ? ದೇವಿ! ಕಮಲೇ!! ನನ್ನ ಪ್ರಿಯ ಕುಮಾರೀ!!! ಹಾ! ನಾನೆಂಥಾ ನಿರ್ಭಾಗ್ಯನು. ಬಾಮ್ಮಾ ಕಮಲಾ! ಒಮ್ಮೆ ಬಂದು ನಿನ್ನ ಅಭಾಗಿಯಾದ ತಂದೆಯನ್ನು ನೋಡು. ಹಾಗೂ ನಿನ್ನ ವಿಶುವನ್ನು ಕರೆದುಕೊಂಡು ಬಾಮ್ಮಾ! ಸಂತೋಷದಿಂದ ನಾನು ನಿನ್ನನ್ನು ಅವನಿಗೇ ಧಾರೆಯೆರೆದು ಕೊಡುವನು. ಅಲ್ಲದೆ ನಿಮ್ಮೀರ್ವರನ್ನೂ ನೋಡಿ ನಲಿವೆನು. ಹಾ! ಅಂಥಾ ಪುಣ್ಯವು ನನಗಿನ್ನಿದೆಯೋ? ನನ್ನ ಪ್ರಿಯ ಕುಮಾರೀ, ಹಾ! ಇನ್ನು ಹಿಂದಿರುಗಿ ಬರುವಳೇ? ಇಲ್ಲ, ಇಲ್ಲ; ಎಂದೂ ಬರಲಾರಳು. ನಾನು ಪರಮ ಪಾಪಿಯು. ನರಾಧಮನು. ದೇವೀ! ನನ್ನನ್ನು ನೀನಿಂದು ಉದ್ಧರಿಸಿದೆ. ಆದರೆ, ಕಮಲಾ, ನನ್ನನ್ನು ನೀನು ಹೀಗೆ ಅಗಲಿ ಹೋಗಬಹುದೇ? ಹಾ! ದೇವೀ! ಕಮಲೇ ಪ್ರಿಯ ಕುಮಾರಿ ಹಾ!' ಎನ್ನುತ್ತಾ ಮೂರ್ಛಿತನಾಗಿ ಬಿದ್ದು ಬಿಟ್ಟನು.

VANTED.

Agens to sell Sarees and Chadars, Shirtings and Sutings etc. on Rs. 50 to 100 p. m.

Annual Bonus Rs. 500.

No Cah deposit required for Samples.

For termsapply:—

Majestic House,

5 **Ludhiana.**

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪೆನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,

(52–25) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾಚಪ್ಪನವರು ಮತ್ತು ಮ. ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ ಕೆ ನೊಗಪ್ಪನವರು.
ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.—ಪ್ರಿಂಟುಳ್ಳ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–11

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೆ,

ಪರದಿ ವರ್ಷವು ಈ ಮೇ ತಾರೀಕು 31ಕ್ಕೆ ಅಂತ್ಯವಾಗುವದರಿಂದ ಅದರೊಳಗೆ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜನ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿವರುಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಅ	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	16,481	15	11
ತ್ರಿಫ್ಟ್ ಡಿಪಾಜಿಟ್ಟು	-	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937 ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್:-ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ.
ಟ್ರೆಜರರ್.—ರಾವ್ ಬಹದ್ದೂರ್ ಪಿ ದೇವಯ್ಯನವರು
ಸೆಕ್ರೆಟರಿ—ಮ ಎಸ್ ಎನ್ ರಾಮಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ. 180	ರೂ 55	ರೂ 35	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60	,, 20	,, 13	,, 8
1 ತಿಂಗಳಿಗೆ—	,, 25	,, 10	,, 6	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು— ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(52-20)

Printed & Published by P. I. Belliappa, at 'Kodagu' Press Mercara for 'Kodagu' Ltd.







FLASH NO:1









1939 - June
To, December
1940 - Jan
To, May

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.
ಸಂಪಾದಕ:—ಪಿ. ಐ. ಬೆಳ್ಯಪ್ಪ.
ತಾ. ೨—೬—೧೯೩೯.
ವಾರ್ಷಿಕ ಚಂದಾ ರೂ. ೩—೮—೦
ಸಂಪುಟ ೧೯] [ಸಂಚಿಕೆ ೧

THE CANARA BANKING CORPORATION, Ltd.

(Incorporated in British India)

THREE YEARS' CASH CERTIFICATES

bearing interest at 4% p. a.

in denominations of

Rs. 50/-,100/-,500/-,1,000/- & 5,000/-

are now issued at

all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-25

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾಪಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-14

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇನೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕಾಲಂ ಕುಷವಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

27

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–4

The Agricultural &
Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಕ್ಕಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–36)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್ಪೂರ್, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರೆ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12–32

ಹೊಸ ವರ್ಷಾರಂಭ.

ಹೊಸ ವರ್ಷವು ಸರ್ವರಿಗೂ ಶುಭದಾಯಕವಾಗಿರಲಿ! ದೇಶವು ಸೌಖ್ಯ ಸಂಪತ್ಸಮೃದ್ಧಿಯಿಂದ ವಿರಾಜಿಸಲಿ!!

ಸಮಯವೆಂಬುದು ತನ್ನ ಕಾರ್ಯವನ್ನು ಏಕೋ ರೀತಿಯಿಂದ ತಡೆಬಡೆಯಿಲ್ಲದೆ ನಡಿಸಿಯೇ ಬಿಡುವದು. ಕಾಲಚಕ್ರವೆಂಬ ಈ ಅನಂತ, ಅಸ್ಖಲಿತ ಉರುಳಾಟದಲ್ಲಿ ಕಷ್ಟ, ಸುಖ, ಆಶಾ, ಸಂತೋಷ, ಸಂತಾಪಗಳ ಮಧ್ಯೆ ಮತ್ತೊಂದು ವರ್ಷವು ಕಳೆಯಿತು. ಹಳೇ ಸಂವತ್ಸರವು ಆ ಕಾಲ ಚಕ್ರದ ತೀವ್ರ ಉರುಳಾಟದಲ್ಲಿ ಮರೆಯಾಗಿ ಹೊಸ ಸಂವತ್ಸರವೊಂದು ಕಾಲಿಟ್ಟಿದೆ. ಅಂಥಾ ಈ ಸಂದರ್ಭದಲ್ಲಿ ಹಳೆಯ ವರ್ಷ ಹೋಯಿತಲ್ಲಾ ಎಂಬ ವ್ಯಸನಕ್ಕಾಗಲೀ, ಹೊಸ ವರ್ಷ ಬಂತಲ್ಲಾ ಎಂಬ ಸಂತೋಷಕ್ಕಾಗಲೀ ಕಾರಣವಿದೆಯೇ? ಹಳೇ ವರ್ಷದಲ್ಲಿ ಆಶೆ, ನಿರಾಶೆ ಕಡು ಕಾರ್ಪಣ್ಯಗಳ ದುಃಖದಿಂದ ಬಳಲಿದವರು ಹೊಸ ವರ್ಷವನ್ನು ಆಶಾ ದೃಷ್ಟಿಯಿಂದ ನೋಡುವದು ವಾಸ್ತವ. ಆದರೆ ಹಿರಿಯರ ಕಾಲದ ಸಾಲವು ಕಿರಿಯರಿಗೂ ಅನ್ವಯಿಸುವಂತೆ ಕಳೆದ ವರ್ಷದ ಕಾರ್ಯಕಲಾಪಗಳ ಫಲ, ಈ ವರ್ಷವೂ ಆಗುವದೆಂಬುವುದು ನಿರ್ವಿವಾದ. ಗತ ವರ್ಷದಲ್ಲಿ ನಡೆದ ಕೆಲಸ ಕಾರ್ಯಗಳ ಫಲವನ್ನು ನಾವು ಅನುಭವಿಸಲಾರೆವೆಂದರೆ ಅದಕ್ಕೆ ಹೊಣೆಯಾರು? ಕಾಲ ಗರ್ಭದಲ್ಲಿ ಅಡಗಿರುವ ವಿಚಾರಗಳ ಫಲಾಫಲಗಳು ಯಾವನನ್ನೂ ಯಾವ ಕಾಲಕ್ಕೂ ಬಿಡಲಾರವು.

ಗತವರ್ಷವನ್ನು ನೆನೆಸಿ ಜಗತ್ತಿನ ಕಡೆಗೊಮ್ಮೆ ನೋಡಿದರೆ, ನಮಗೆ ಮನವರಿಕೆಯಾಗುವದೇನು? ಒಂದು ಕಡೆ ಚೈನಾ ಜಪಾನಿನ ಯಾದವೀ ಕಲಹ ಮತ್ತೊಂದು ಕಡೆ ಜನರಲ್ ಫ್ರಾಂಕೋವಿನ ವಿಜಯ ಯಾತ್ರೆ, ಒಂದೆಡೆ ಹಿಟ್ಲರ್ ಮುಸಲೋನಿಗಳ ದಿಗ್ವಿಜಯ; ಮತ್ತೊಂದೆಡೆ ಪಾಲೆಸ್ಟೈನಿನ ಕರುಣಾಜನಕಚಿತ್ರ, ಮಗುದೊಂದೆಡೆ, ಪ್ರಜಾಪ್ರಭುತ್ವರಾಷ್ಟ್ರಗಳ ಹಾಹಾಕಾರ! ಇವೇ ಆಗಿವೆ. ಗತ ವರ್ಷದಲ್ಲಿ ನಡೆಸಿದ ಈ ಕಾರ್ಯ ಕ್ರಮಗಳ ಫಲಗಳನ್ನು ಆಯಾಯ ರಾಷ್ಟ್ರಗಳು ಅನುಭವಿಸದಿರಲಿಕ್ಕೆ ಸಾಧ್ಯವಿದೆಯೇ? ಅದರ ಕಟುಫಲವಾಗಿ ಯಾವ ರೀತಿಯ ಅವ್ಯವಸ್ಥೆಯು ಜಗತ್ತಿನಲ್ಲುಂಟಾದೀತು? ಯಾವ ರಾಷ್ಟ್ರಗಳು ಎಂಥಾ ಸ್ಥಿತಿಯನ್ನು ಹೊಂದುವವು? ಎಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಇದು ಈ ಹೊಸ ವರ್ಷದಲ್ಲೇ ಆಗಬೇಕಾದದ್ದು.

ಯೂರೋಪಿನ ರಾಜಕೀಯವನ್ನೊಮ್ಮೆ ಪರಿಶೀಲಿಸಿದರೆ ಇಂದು ಯೂರೋಪಿನ ವಿವಿಧ ರಾಷ್ಟ್ರಗಳು ತಮ್ಮ ರಾಜ್ಯ ವಿಸ್ತರಣಾ ತೃಷೆಯಿಂದ ಅಬಲ ರಾಷ್ಟ್ರಗಳ ಕತ್ತು ಹಿಸುಕುತ್ತಿರುವವು. ಸರ್ವಾಧಿಕಾರಿಗಳ ಪರಾಕ್ರಮವು ಯಾವತ್ತೂ ಪ್ರಬಲ ರಾಷ್ಟ್ರಗಳ ತಲೆ ತಗ್ಗಿಸಿದೆ. ಇಂದು ಚಿಕ್ಕ ಚಿಕ್ಕ ಸ್ವತಂತ್ರ ರಾಷ್ಟ್ರಗಳಿಗೆ ಯೂರೋಪಿನಲ್ಲಿ ಎಡೆ ಇಲ್ಲದಂತಾಗಿದೆ. ಕಡಲರಾಣಿಯೆಂಬ ಬಿರುದನ್ನು ಗಳಿಸಿದ ಬ್ರಿಟನೂ, ಅದರ ಮಾತಿನಂತೆ ವರ್ತಿಸುತ್ತಿರುವ ಫ್ರಾನ್ಸೂ ಇಂದು ಹಿಟ್ಲರ್-ಮುಸಲೋನಿಗಳ ಹತ್ಯಾಕಾಂಡದಿಂದ ದಿಗ್ಭ್ರಾಂತಗೊಂಡಿವೆ. ಯಾವ ಒಪ್ಪಂದ ಶರತ್ತುಗಳನ್ನೂ, ಕರಾರು ಕೌಲುಗಳನ್ನೂ ಮನ್ನಿಸದೆ ತಮ್ಮ ಮನಸ್ವೇಚ್ಛೆಯಿಂದ ವರ್ತಿಸಿ ಮಧ್ಯ ಯೂರೋಪಿನ ಸ್ವತಂತ್ರ ರಾಷ್ಟ್ರಗಳ ಅವತಾರವನ್ನು ಅಂತ್ಯಗೊಳಿಸುತ್ತಿರುವ ಹಿಟ್ಲರ್ ಮುಸಲೋನಿಗಳ ವರ್ತನೆಯಿಂದ ಕ್ರಮೇಣ ತಮ್ಮ ರಾಜಕೀಯ ರಂಗದಲ್ಲೂ ಇವರು ಪ್ರವೇಶಿಸದಿರರೆಂಬುವುದು ಬ್ರಿಟನ್-ಫ್ರಾನ್ಸ್‌ಗಳಿಗೆ ಮನವಟ್ಟಾಗಿದೆ. ಆದ್ದರಿಂದಲೇ ಅವು ಯುದ್ಧ ಸಿದ್ಧತೆ ಮಾಡಿಕೊಂಡು ಪ್ರಜಾಪ್ರಭುತ್ವ ರಾಷ್ಟ್ರಗಳ ಏಕೀಕರಣವನ್ನು ಮಾಡುವ ಪ್ರಚಂಡ ಉದ್ಯಮದಲ್ಲಿ ತೊಡಗಿರುವವು. ಹಿಟ್ಲರ್-ಮುಸಲೋನಿಗಳ ಮುಂದಿನ ಹೆಜ್ಜೆಯು ಯುದ್ಧದ ಕುರುಹು ಆಗುವದರಲ್ಲಿ ಸಂದೇಹವಿಲ್ಲ. ಹೀಗೆ ಯೂರೋಪಿನ ಆಕಾಶದಲ್ಲಿ ಯುದ್ಧ ಕಾರ್ಮೋಡಗಳು ಹರಡಿವೆ ಈ ಮೋಡಗಳ ಮಳೆ ಬೀಳುವದನ್ನು ನೋಡುವದು ಈ ಹೊಸ ವರ್ಷದಲ್ಲೇ.

ನಮ್ಮ ಮಾತೃ ಭೂಮಿಯೆಡೆಗೆ ದೃಷ್ಟಿಯನ್ನು ತಿರುಗಿಸಿದರೆ ಅಲ್ಲಿಯೂ ಕೆಲವೊಂದು ಪ್ರಾಮುಖ್ಯ ಪ್ರಶ್ನೆಗಳು ತೀರ್ಮಾನವನ್ನು ಕಾದು ಕುಳಿತಿವೆ. ಗತ ವರ್ಷದ ಕಾರ್ಯಕಲಾಪಗಳನ್ನು ಯೋಚಿಸಿದರೆ ಕಾಂಗ್ರೆಸ್ ಪ್ರೆಸಿಡೆಂಟರ ಚುನಾವಣೆಯ ಗಜಿ ಬಿಜಿ, ಅದರ ಪರಿಣಾಮದಿಂದಾಗಿ ಕಾಂಗ್ರೆಸಿನಲ್ಲಾದ ಭಿನ್ನಭೇದ, ತತ್ಪರಿಣಾಮದಿಂದ ಉಂಟಾದ ಅಧ್ಯಕ್ಷರ ರಾಜಿನಾಮೆ, ನೂತನವಾಗಿ ಸ್ಥಾಪಿಸಲ್ಪಟ್ಟಿರುವ ಮುನ್ನಡೆಯ ಪಕ್ಷ, ಹಾಗೂ ರಾಷ್ಟ್ರೀಯ ಕಾರ್ಯಗಳ ಅನಾಸಕ್ತಿ, ಜಾರಿಗೆ ಬರಲಿರುವ ಫೆಡರೇಶನನ್ನು ವಿರೋಧಿಸುವ ಬಗ್ಗೆ ಇರುವ ಭಿನ್ನಾಭಿಪ್ರಾಯ, ಇವೆಲ್ಲಾ ಕಾಂಗ್ರೆಸಿನ ಈ ವರೆಗಿನ ಅವಿಚಲ ಕಾರ್ಯ ಕ್ರಮಗಳನ್ನು ಹದಗೆಡಿಸಿವೆ. ಅಂದೊಮ್ಮೆ ಪ್ರಸಿದ್ಧ ಮುಖಂಡರಲ್ಲೂ ಕಾಂಗ್ರೆಸ್ ಕೆಲಸದಲ್ಲಿ ಆಲಸತೆಯುಂಟಾಗಿ ಇಡೀ ಕಾಂಗ್ರೆಸ್ಸಿನ ಜೀವನದಲ್ಲಿ ಒಂದು ಮೌಢ್ಯವೂ, ನಿದ್ರಾವಸ್ಥೆಯೂ ತಲೆದೋರಿ, ಅದು ಅವಿಚಲ ಕಾರ್ಯ ಮಾಡಿರುವ ಕಾಂಗ್ರೆಸ್ ಮುಖಂಡರ ವಿಶ್ರಾಂತಿ ಸಮಯವೋ ಎಂಬಂತೆ ಭಾಸವಾಗುತ್ತಿತ್ತು. ಆದರೆ ಇಂದು ಮುಖಂಡರು ಎಚ್ಚೆತ್ತು ಕಾರ್ಯ ಪ್ರವರ್ತರಾಗಿರುವರು. ಕಾಂಗ್ರೆಸ್ಸಿಗೆ ಸ್ಫೂರ್ತಿ ಬಂದು ಅದರ ಜೀವನವು ವಿಕಾಸಗೊಂಡು, ಭಾರತೀಯರು ಎಚ್ಚೆತ್ತಿರುವರು; ಸ್ವಾತಂತ್ರ್ಯ ಸಮರದ ಸ್ಫೂರ್ತಿಯು ಕುಂದಿಲ್ಲವೆಂದು ಜಗತ್ತಿಗೆ ಸಾರಬೇಕಾದುದಾದರೂ ಈ ವರ್ಷದಲ್ಲೇ. ಭಾರತ ಸಂಸ್ಥಾನಗಳಾದರೂ ಗತ ವರ್ಷದಲ್ಲಿ ಎಚ್ಚೆತ್ತು ಮುನ್ನಡೆದಿವೆ. ರಾಜಕೋಟೆಯಲ್ಲಾದ ಆಶಾಭಂಗವೊಮ್ಮೆ ಎಲ್ಲಾ ಧುರೀಣರಲ್ಲಿ ನಿರಾಶೆಯನ್ನುಂಟು ಮಾಡಿತ್ತು. ಆದರೆ ಭಾರತದ ಭಾಗ್ಯವಿಧಾತನಾಗಿರುವ ಜಗದ್ವಂದ್ಯ ಮಹಾತ್ಮಾ ಗಾಂಧಿಯವರ ಚಾಣಾಕ್ಷತೆಯಿಂದಾಗಿ ರಾಜಕೋಟೆಯ ಆ ಜಟಿಲ ಸಮಸ್ಯೆಯು ಬಗೆಹರಿದು ಇಂದು ಮುಖಂಡರಲ್ಲಿ ಹುರುಪನ್ನು ಹುಟ್ಟಿಸಿದೆ. ನಾವಾದರೋ ರಾಜಕೋಟೆ ತೀರ್ಮಾನದ ಶುಭ ವಾರ್ತೆಯೊಂದೊಡಗೂಡಿ ಹೊಸ ವರ್ಷಕ್ಕೆ ಕಾಲಿಕ್ಕುತ್ತಿರುವೆವು. ರಾಜಕೋಟೆಯ ಉದಾಹರಣೆಯಂತೆ ವಿವಿಧ ಸಂಸ್ಥಾನಗಳು ಎಚ್ಚೆತ್ತು ಇಡೀ ಭಾರತವು ಇಂದಿನ ಜಗತ್ತಿನ ಅತ್ಯಂತಅಮೋಘ ಸಂಸ್ಥೆಯಾದ ಕಾಂಗ್ರೆಸ್ಸಿನ ಅಡಿಯಲ್ಲಿ ಏಕೀಕರಿಸುವ ಸಾಧ್ಯತೆಯಾದರೂ ಈ ನವ ವರ್ಷದಲ್ಲಿಯೇ.

ಈ ನವ ವರ್ಷ ನಮ್ಮ ಕೊಡಗು ಪ್ರಾಂತದಲ್ಲಾದರೂ ನಡೆಯಬೇಕಾದುದು ಬಹಳವಿದೆ. ಆದರೆ ಈಗಿನ ಅದರ ಜಡತ್ವ, ಅನಾಸಕ್ತಿಯ ಮಾತು, ಹಾಗೂ ಇತರ ಕಾರ್ಯ ಕಲಾಪಗಳಿಂದ ಇವೆಲ್ಲಾ ಮಾತಿನಲ್ಲೇ ಮುಗಿದರೂ ಮುಗಿಯಬಹುದಾಗಿದೆ. ದೇಶದ ಜನತೆಯನ್ನು ಕಾಂಗ್ರೆಸ್ಸಿನ ಅಡಿಯಲ್ಲಿ ಏಕೀಕರಿಸುವ, ಯಾ, ಹಳ್ಳಿಗಳಲ್ಲಿ ರಾಷ್ಟ್ರೀಯ ಕಟ್ಟೋಣ ಕಾರ್ಯಗಳನ್ನು ಕೈಕೊಳ್ಳುವ ಪ್ರಯತ್ನಗಳು ನಡೆದಿಲ್ಲ. ಮುಖಂಡರಲ್ಲಿ ಪರೋಪದೇಶ ಪಾಂಡಿತ್ಯವು ಹೆಚ್ಚಾಗಿದೆ. ಸ್ವಪ್ರತಿಷ್ಠೆ ಸ್ವಾರ್ಥಸಾಧನೆ ಇವುಗಳ ಮುಂದೆ ಕಾಂಗ್ರೆಸಿನ ಪವಿತ್ರಧ್ಯೇಯಗಳು ಮಾಯವಾಗುತ್ತಿವೆ. ಅಧಿಕಾರ ಲಾಲಸೆ, ಪಕ್ಷಸಾಧನೆ, ಇವುಗಳ ವಿನಹ ಮುಖಂಡರ ಸ್ಮೃತಿ ಪಥದಲ್ಲಿ ಯಾವ ವಿಚಾರವೂ ಬಾರದಾಗಿವೆ. ಹೀಗೆ ಒಂದೆಡೆ ಅವ್ಯವಸ್ಥೆಯಾದರೆ ಮತ್ತೊಂದೆಡೆ ಕೊಡಗಿನ ಭವಿತವ್ಯತೆಯ ವಿಚಾರವು ಸಮುದ್ರದ ತೆರೆಗಳ ಏರಿಳಿತದಂತೆ ಅಲ್ಲೋಲಕಲ್ಲೋಲವಾಗಿದೆ. ಒಮ್ಮೆ ದೇಶದಲ್ಲಿ ಪ್ರಖರವಾದ ಕೋಲಾಹಲವು ನಡೆದರೆ ಒಮ್ಮೆ ಕುಂಭಕರ್ಣನನ್ನು ಮೀರಿಸುವ ಗಾಢಾ ನಿದ್ರೆ. ಹೀಗಾಗಿ ಈ ವಿಚಾರ ತರ್ಕವು ಕೆಲಸವಿಲ್ಲದ ಪತ್ರಿಕಾ ಉದ್ಯೋಗಿಗಳ, ಯಾ ಭಾಷಣಕಾರರ ಕೂಗೆಂಬ ಅಪವಾದಕ್ಕೆಎಡೆ ಕೊಟ್ಟಿದೆ. ಒಂದೆಡೆ 'ಮೈಸೂರಿಗೆ ಸೇರಿಬಿಡಿ' ಎಂಬ ವಾದ, ಮತ್ತೊಂದೆಡೆ, 'ಮದ್ರಾಸಿನಲ್ಲಿ ಐಕ್ಯವಾಗಿ ಕರ್ನಾಟಕ ಏಕೀಕರಣವಾದಾಗ ಅಲ್ಲಿ ಸ್ಥಳ ಹುಡುಕುವ' ಎಂಬ ಉದ್ಗಾರ. ಮಗುದೊಂದೆಡೆ, 'ಈಗ ಇರುವಂತೆಯೇ ತಟಸ್ಥರಾಗಿ ಉಳಿದುಬಿಡಬೇಕೆಂ'ಬ ಘೋಷಣೆ, ಇವುಗಳ ಹಾವಳಿಯಿಂದಾಗಿ ಜನತೆಯ ಮುಂದಿರುವ ಸಮಸ್ಯೆಯೇ ಕಣ್ಮರೆಯಾಗುತ್ತಿದೆ. ಹೀಗೆ ಕೊಡಗಿನೊಳಗಿನ ಪಂಗಡಗಳೇ ಭಿನ್ನಾಭಿಪ್ರಾಯದಿಂದ ಏಕೀಕರಿಸದಿರುವಾಗ ಬೇರೆ ಪ್ರಾಂತಗಳೊಡನೆ ಸಂಯೋಜನೆಯಾಗಿ ಯಾ ಐಕ್ಯವಾಗಿ ಅವರೊಂದಿಗೆ ಒಮ್ಮತದಿಂದ ವರ್ತಿಸುವದಾದರೂ ಕನಸಿನ ಗಂಟೇ ಅಲ್ಲವೇ? ಅದರಲ್ಲೂ ಇನ್ನೂ ಬಾಲ್ಯಾವಸ್ಥೆಯಲ್ಲಿ ಅಂಬೆಗಾಲಿಡುತ್ತಿರುವ ಪತ್ರಿಕೆಗಳೂ ತಮ್ಮ ನಿರ್ದಿಷ್ಟ ಕರ್ತವ್ಯವನ್ನು ಬಿಟ್ಟು ಅಸಾಧ್ಯ ಪ್ರಚಾರಕ್ಕೆ ತೊಡಗಿರುವದಾದರೂ ಅಧಿಕ ಪ್ರಸಂಗವಲ್ಲವೇ? ಅಧಿಕ ಪ್ರಸಂಗಕ್ಕೂ ಒಂದು ಮಿತಿ ಬೇಡವೇ? ಅಂತು ಕೊಡಗಿನ ಭವಿತವ್ಯದ ವಿಚಾರವು ಈ ಹೊಸ ವರ್ಷದಲ್ಲಿ ಯಾವ ಮಾರ್ಗವನ್ನು ಹೊಂದುವದೆಂಬುವುದೂ ನಿರೀಕ್ಷಣೀಯ.

ಹೀಗೆ ಜಗತ್ತಿನ ವಿವಿಧ ಕ್ಷೇತ್ರಗಳಲ್ಲಿ ಬದಲಾವಣೆಯಾದಂತೆಯೇ ವಿವಿಧ ಕಷ್ಟ ಪರಂಪರೆಗಳ ಮಧ್ಯದಲ್ಲಿ ಇನ್ನೊಂದು ವರ್ಷದ ತನ್ನ ಅಲ್ಪ ಸೇವೆಯಿಂದ 'ಕೊಡಗು' ಪತ್ರಿಕೆಯು ಇಂದು ತನ್ನ ಹದಿನೆಂಟನೇ ವರ್ಷವನ್ನು ದಾಟಿ ಹತ್ತೊಂಭತ್ತನೇ ವರ್ಷಕ್ಕೆ ಕಾಲಿಕ್ಕಿದೆ. ಆರ್ಥಿಕ ಮುಗ್ಗಟ್ಟಿನ ತೊಡಕು, ಇನ್ನೂ ಇತರ ಕಷ್ಟ ನಿಷ್ಠುರಗಳ ಪರಂಪರೆ, ಇವನ್ನೆಲ್ಲಾ ತಾಳ್ಮೆಯಿಂದ ಸಹಿಸಿ ಕೈಲಾದ ಸೇವೆಯನ್ನು ಕೊಡಗು ನಾಡಿಗೆ ಸಲ್ಲಿಸಲು ಇಂದು ಪತ್ರಿಕೆಯು ಕಂಕಣಬದ್ಧವಾಗಿ ನಿಂತಿದೆ. ಈ ಆಶಾ ಪೂರ್ತಿಯಾಗಿ 'ಕೊಡಗು' ಪತ್ರಿಕೆಯು ಪ್ರಗತಿಮಾರ್ಗದಲ್ಲಿ ಮುನ್ನಡೆಯುವುದಾದರೂ ಅಖಿಲ ಕನ್ನಡಿಗರ ಉದಾರಾಶ್ರಯದಲ್ಲಿ ನಿಂತಿದೆ. ಮೇಲಾಗಿ ಆರ್ಥಿಕ ಮುಗ್ಗಟ್ಟಿನ ಹಾಗೂ ಇತರ ಕಡು ಕಾರ್ಪಣ್ಯಗಳ ದೆಸೆಯಿಂದ ಪತ್ರಿಕೆಯನ್ನು ಸುಗಮವಾಗಿ ನಡಿಸಲು ನಮ್ಮ ಚಂದಾದಾರರ ಸಹಾನುಭೂತಿಯು ತುಂಬಾ ಬೇಕಿದೆ. ಆದ್ದರಿಂದ ಎಲ್ಲಾ ಚಂದಾದಾರರೂ ಪತ್ರಿಕೆಯ ಧ್ಯೇಯ ಸಾಫಲ್ಯಕ್ಕೆ ಸಹಕರಿಸಬೇಕಾಗಿದೆ.

ಗತ ವರ್ಷದಲ್ಲಿ ಚಂದಾದಾರರಾಗಿದ್ದು ಪ್ರೋತ್ಸಾಹಿಸಿದ, ಜಾಹಿರಾತುಗಳನ್ನು ಕೊಟ್ಟು ಹುರುಪುಗೊಳಿಸಿದ ಮಹನೀಯರಿಗೂ ಸಮಯೋಚಿತವಾದ ಲೇಖನಗಳನ್ನು ಕೊಟ್ಟು ಸಹಾಯ ಮಾಡಿದ ಲೇಖಕರಿಗೂ ವಂದಿಸಬೇಕಾಗಿದೆ. ಹಾಗೆಯೇ ಮುಂದಕ್ಕಾದರೂ ಪ್ರೋತ್ಸಾಹವನ್ನಿತ್ತು ತನ್ನ ಅಲ್ಪ ಸೇವೆಯನ್ನು ಸಲ್ಲಿಸಲು ಹುರುಪುಗೊಳಿಸಬೇಕಾಗಿಯೂ ಬೇಡುವದಲ್ಲದೆ, ಇಡೀ ಕೊಡಗು ಪ್ರಾಂತಕ್ಕೂ, ದೇಶೀಯರಿಗೂ, ಭಾರತಕ್ಕೂ, ಭಾರತೀಯರಿಗೂ ಈ ನವ ವರ್ಷದಲ್ಲಿ ಅತಿಶಯವಾದ ಶ್ರೇಯಸ್ಸುಂಟಾಗಲೆಂದು ಜಗನ್ನಿಯಾಮಕನಲ್ಲಿ ಭಕ್ತಿಯುತವಾಗಿ ಬೇಡುತ್ತಿರುವದು ಈ 'ಕೊಡಗು' ಪತ್ರಿಕೆಯು.

Wanted.

Wanted candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce, and Filmcraft. Rules and Entrance form on annas eight. Director, Royal Telegraph and Rly. Duties College, Bombay.

8-6

ನಿವೇದನೆ.

ಭಾರತದಲ್ಲಿ ಬದುಕಬೇಕೆಂಬ ಪ್ರತಿಯೊಬ್ಬ ಬ್ರಿಟಿಷನೂ ಹಿಂದಿಯನ್ನು ಖಡ್ಡಾಯವಾಗಿ ಕಲಿಯಬೇಕು. ಇಂಗ್ಲಿಷಿಗಿರುವ ಪ್ರಾಮುಖ್ಯತೆ ತೊಲಗಬೇಕು. ಭಾರತೀಯರೆಲ್ಲರೂ ತಮ್ಮ ಆತ್ಮಸ್ವಾತಂತ್ರ್ಯವನ್ನು ಪಡೆದರೆ ಸ್ವಾತಂತ್ರ್ಯವು ಕರಗತವಾಗುವದೆಂಬುದನ್ನು ತಿಳಿಯಬೇಕು. ರಾಷ್ಟ್ರದಲ್ಲಿ ಪ್ರೇಮವಿಟ್ಟು ಸ್ವದೇಶಿಯನ್ನು ಪ್ರೋತ್ಸಾಹಿಸಬೇಕು. ಸ್ವದೇಶಿಯನ್ನು ಪ್ರೋತ್ಸಾಹಿಸದವನು ಭಾರತೀಯನಲ್ಲನೆಂದು ತಿಳಿಯಬೇಕು. ಸ್ವದೇಶಿ ಪ್ರೋತ್ಸಾಹವೇ ಸ್ವದೇಶಸೇವೆ ಅರ್ಥಾತ್ ಸ್ವಾತಂತ್ರ್ಯಕ್ಕೆ ರಾಜಮಾರ್ಗವೆಂದು ಮನಗಾಣಬೇಕು. ಅಂದೇ ಬಡಜನೋದ್ಧಾರ! ಮಾತೃಭೂಮಿಗೆ ಶ್ರೇಯಸ್ಕರ!! ಭಾರತದಲ್ಲಿ ಸ್ವಾತಂತ್ರ್ಯ ಸರಕಾರ!!!

ಈ ವರೆಗಿನ ನಮ್ಮ ಲೇಖನಗಳಿಂದ ಭಾರತದ ವಿವಿಧ ಹಿತಾಹಿತವನ್ನು ಕುರಿತು ಚರ್ಚಿಸಿದೆವು. ದೇಶದ ಹಿತದೃಷ್ಟಿಯಿಂದ ನಮ್ಮಲ್ಲಿಯ ತೀವ್ರಗಾಮಿಗಳಾಗಲೀ, ಮಧ್ಯಗಾಮಿಗಳಾಗಲೀ ಯಾ ಮಂದಗಾಮಿಗಳಾಗಲೀ ಏಕೀಕರಿಸಿದಲ್ಲದೆ ಕಾರ್ಯವು ಸಾಧಿಸದು. ಈ ವರೆಗೆ ನಾವು ವಿವರಿಸಿದ ವಿವಿಧ ಕಾರ್ಯಕ್ರಮಗಳ ವಿಚಾರವು ಕ್ರಾಂತಿಗೊಂಡು ದೇಶದ ಉದ್ದಗಲಕ್ಕೂ ಸರ್ವತೋಮುಖವಾಗಿ ಹರಡಬೇಕು. ಬ್ರಿಟಿಷರು ಇಂದು ತಮ್ಮ ಗಂಟು ಮೂಟೆಗಳೊಡನೆ ಭಾರತವನ್ನು ಬಿಟ್ಟು ನಡೆದರೆ ಭಾರತದ ಪರಿಸ್ಥಿತಿಯು ವಿಷಮವಾಗುವದೆಂದು ಹೆದರುವ ಭಾರತೀಯರ ಅಂಜಿಕೆಯು ಮಾಯವಾಗಬೇಕು. ದೇಶದಲ್ಲಿ ಶಾಂತಿಯು ನೆಲೆಸುವಂತೆ ಎಲ್ಲರೂ ಯತ್ನಿಸಬೇಕು. ಬ್ರಿಟಿಷರು ಭಾರತವನ್ನು ತೊರೆದ ಮೇಲೂ ನಮ್ಮನಮ್ಮೊಳಗೆ ಘರ್ಷಣೆ ಬರುವದಿದ್ದ ಪಕ್ಷ ಅಂಥಾದ್ದನ್ನು ಈಗಲೇ ಎದುರಿಸಿ ನಮ್ಮಲ್ಲಿಯ ಬೇಧಭಾವವನ್ನು ತೊರೆಯಬೇಕು.

ಬ್ರಿಟಿಷರಲ್ಲಿ ಒಂದು ಮಾತು.

ಬ್ರಿಟಿಷರು ಭಾರತವನ್ನು ಆಳಬಹುದು. ಅವರನ್ನು ನಮ್ಮ ರಾಜರೆಂದು ಅಂಗೀಕರಿಸುವೆವು. ನಮ್ಮ ಈ ಭಾರತ ಭೂಮಿಯಲ್ಲಿ ಅವರು ಒಡೆತನಮಾಡುವದಕ್ಕೂ ಅಡ್ಡಿಯಿಲ್ಲ. ಆದರೆ ಅವರು ಜನತೆಯ ಸೇವಕರಾಗಿರಬೇಕು. ಪ್ರಜೆಗಳು ರಾಜನ ಪೋಷಕರೆಂದೂ, ರಾಜನು ಪ್ರಜೆಗಳ ನಮ್ರ ಸೇವಕನೆಂದೂ ಅವರು ಅರಿಯಬೇಕು. ಭಾರತದ ಆರ್ಥಿಕ ಶೋಷಣೆಯು ಇನ್ನು ಕೂಡದು. ಭಾರತದಲ್ಲಿ ಅವರು ಬರೇ ರಕ್ಷಕರಾಗಿರಬೇಕಲ್ಲದೆ ಅನ್ಯಥಾ ಸಲ್ಲದು. ಭಾರತವನ್ನು ತಮ್ಮ ಸಂತೆಯಾಗಿಟ್ಟುಕೊಳ್ಳುವ ಆ ಧೋರಣೆಯು ಮಾರ್ಪಡಬೇಕು. ಇಂದು ಅವರು ನಾಗರೀಕತೆಯೆಂದು ಕರೆಯುವವಿಚಾರವು ಅನಾಗರೀಕತೆಯ ಅಭಿಪ್ರಾಯವಾಗಿರುವದರಿಂದ ನಮ್ಮ ನಾಗರೀಕತೆಯೇ ದೇಶದಲ್ಲಿ ಅನುಸರಿಸಲ್ಪಡಬೇಕು. ಭಾರತದಲ್ಲಿ ಭಾರತೀಯರಾಗಿ ಬಾಳಲು ಮಾತ್ರ ಬ್ರಿಟಿಷರಿಸ್ಥಳವಿದೆ. ಭಾರತೀಯ ಸಂಸ್ಕೃತಿಯನ್ನು ಮನ್ನಿಸಬೇಕು. ಈ ವರೆಗೆ ಅವರ ಆಳಿಕೆಯ ಕಡುಕಾರ್ಪಣ್ಯಗಳನ್ನು ಸಹನದಿಂದ ಸಹಿಸಿದೆವು. ಇದರಿಂದ ನಮ್ಮ ಮನಸ್ಸಿಗೆ ಅವರ ಧೋರಣೆಯು ಸರಿಯೆನಿಸಿ ಅಲ್ಲ. ನಮ್ಮ ವ್ಯಕ್ತಿತ್ವವನ್ನು ಸೂರೆಗೊಂಡು ನಮ್ಮನ್ನು ನಿಸ್ಸಹಾಯರನ್ನಾಗಿ ಮಾಡಿದ ಅವರ ಧೋರಣೆಯ ಪರಿಣಾಮದಿಂದ. ಆದರೆ ಇನ್ನು ಸಹಿಸಲಾರೆವು. ಇಂದಿನ ಶಾಲೆಗಳೂ, ನ್ಯಾಯಾಸ್ಥಾನಗಳೂ ನಿಸ್ಸಹಾಯರಾದ ಆಧುನಿಕ ನಾಗರೀಕರನ್ನು ತಯಾರಿಸುವ ಕಾರ್ಖಾನೆಗಳೆಂಬ ಅರಿವು ನಮಗಾಗಿದೆ. ಭಾರತದಲ್ಲಿ ಬದುಕಲಿಚ್ಛಿಸುದ್ದರೆ ಪ್ರತಿಯೊಬ್ಬ ಐರೋಪ್ಯನು ಹಿಂದಿಯನ್ನು ಖಡ್ಡಾಯ ಕಲಿಯಬೇಕು. ಭಾರತದಲ್ಲಿ ಇಂಗ್ಲಿಷ್ ಭಾಷೆಯೆಂಬ ತರಗೆಲೆಯು ಹಿಂದಿ ಭಾಷೆಯೆಂಬ ಪ್ರವಾಹದಲ್ಲಿ ತೇಲಿ ಮೂಲೆ ಸೇರಬೇಕು.

ರೈಲ್ವೆಗಳ ಯಾ ಇತರ ಕಾರ್ಖಾನೆಗಳಿಗಾಗಿ ವಿನಿಯೋಗವಾಗುವ ಧನವು ನಿಲ್ಲಬೇಕು. ಸೈನ್ಯತರಬೇತಿಗಾಗಿ ಹರಿಯುವ ಹಣದ ಕಾಲುವೆಯು ಕಟ್ಟಲ್ಪಡಬೇಕು. ಬ್ರಿಟಿಷರಿಗೆ ಜರ್ಮನರ ಯಾ ಇಟೆಲಿಯೂನರ ಭಯವಿರಬಹುದು. ಆದರೆ ನಮಗೆ ಅದರ ಭಯವಿಲ್ಲ. ನಮಗೆ ಪರದೇಶಿ ಬಟ್ಟೆಯ ಅವಶ್ಯವಿಲ್ಲ. ನಾವೇ ನಮಗಾಗಿ ನಮ್ಮ ಮನೆಯಲ್ಲಿ ಬಟ್ಟೆ ತಯಾರಿಸುವೆವು.

ಇವೆಲ್ಲಾ ಬ್ರಿಟಿಷರ ಮೇಲಿನ ದ್ವೇಷದಿಂದ ಹೇಳುವದಲ್ಲ. ಬ್ರಿಟಿಷರಿಗೆ ಅಮೋಘ ಸೈನ್ಯವಿದೆ. ಪ್ರಖ್ಯಾತಿ ಹೊಂದಿದ ಹಡಗು ಪಡೆಯಿದೆ. ಆದರ ಮುಂದೆ ಬಡ ಭಾರತದ ಆಟವು ಸಾಗದು. ಆದರೆ ಮೇಲಿನ ವಿಚಾರಗಳನ್ನು ಬ್ರಿಟಿಷರು ಮನಸಿಗೆ ತೆಗೆದುಕೊಂಡು ಯಥೋಚಿತ ವರ್ತಿಸದಿದ್ದರೆ ನಾವು ಮಾತ್ರ ನಮ್ಮ ಪಾಲಿನ ಕರ್ತವ್ಯವನ್ನು ಮಾಡಲಾರೆವು. ನಮ್ಮನ್ನು ಆಳುವದು ಇನ್ನು ದುಸ್ತರವಾಗಿ ಪರಿಣಮಿಸೀತು. ನಮ್ಮ ಹಠಸಾಧನೆಗೆ ಕ್ರೂರಶಾಸನಗಳನ್ನು ಹೊರಡಿಸಿ ಭಾರತೀಯರನ್ನು ಮುಚ್ಚುಮರಿಯಾಗಿ ಸಂಹರಿಸಬಹುದು. ಗುಂಡಿನ ಬಾಯಿಗೆ ತುತ್ತು ಮಾಡಬಹುದು. ಆದರೆ ಅವರ ರಾಜ್ಯಭಾರ ಕ್ರಮದಲ್ಲಿ ನಾವು ಸಹಕರಿಸಲಾರೆವು. ನಮ್ಮ ಸಹಕಾರವಿಲ್ಲದೆ ಅವರು ಒಂದೇ ಒಂದು ಹೆಜ್ಜೆ ಮುಂದಿಡಲಾರರು. ನಮ್ಮ ಇಂದಿನ ಈ ಪ್ರಲಾಪವನ್ನು ಕಂಡು ಅಧಿಕಾರ ಮತ್ತತೆಯಿಂದಿರುವ ಪರದೇಶೀಯರು ನಗಾಡಬಹುದು. ಅವರನ್ನು ಏಕಾಏಕಿ ಬಗ್ಗುಬಡಿಯಲು ಅಸಾಧ್ಯವಾದರೂ ನಮ್ಮಲ್ಲಿ ಮನುಷ್ಯತ್ವವಿದ್ದರೆ ಕ್ರಮೇಣ ಅವರ ಈ ಮತ್ತತೆಯೇ ತಮ್ಮ ವಿನಾಶಕ್ಕೆ ರಾಜಮಾರ್ಗವೆಂಬುದನ್ನು ಅವರ ಮನಸ್ಸಿಗೆ ತಾರದಿರೆವು.

ಭಾರತಕ್ಕೆ ಬಂದಿರುವ ಬ್ರಿಟಿಷರು ಬ್ರಿಟಿಷ್ ಜನಾಂಗದ ಒಳ್ಳೇ ನಮೂನೆಯವರಲ್ಲ. ಬ್ರಿಟಿಷರ ನಾಗರೀಕತೆಯಿಂದ ಆವರಿಸಿರುವ ನಾವಾದರೂ ಶುದ್ಧ ಭಾರತೀಯರಲ್ಲ. ಬ್ರಿಟಿಷ್ ಜನಾಂಗವು ಭಾರತಕ್ಕೆ ಬಂದ ಬ್ರಿಟಿಷರು ಮಾಡಿರುವ ಅತ್ಯಾಚಾರಗಳನ್ನರಿತರೆ ಅವರ ವರ್ತನೆಯನ್ನು ಖಂಡಿಸದಿರದು. ಬ್ರಿಟಿಷರ ನಾಗರೀಕತೆಯು ರೋಗವನ್ನು ತೆಗೆದು ಹಾಕಿ ತಮ್ಮ ಪುರಾತನ ಸಂಸ್ಕೃತಿಯನ್ನೇ ಪರಿಶೀಲಿಸಿದರೆ ಭಾರತೀಯರಾದ ನಮ್ಮ ಕೇಳಿಕೆಯು ನ್ಯಾಯಸಮರ್ಪಕವಾದುದೆಂದು ಅವರಿಗೇ ತಿಳಿಯದಿರದು.

ಭಾರತೀಯರಿಗೊಂದು ಮಾತು.

ಬ್ರಿಟಿಷರ ಹೆಮ್ಮರಿಕೆ ಯಾ ಹಂಗು ಇಲ್ಲದೆ ಮೇಲ್ನಮೂದಿಸಿದಂತೆ ಘಂಟಾಘೋಷವಾಗಿ ಹೇಳುವ ಮತ್ತು ಭಾರತೀಯ ನಾಗರೀಕತೆಯೇ ಶ್ರೇಷ್ಠವಾದ್ದು ಎಂಬ ನಂಬಿಕೆ ಇರುವವನೇ ಭಾರತೀಯನು. ಬ್ರಿಟಿಷರ ಇಂದಿನ ನಾಗರೀಕತೆಯು ನಾಗರೀಕತೆಯ ರೋಗದಿಂದ ಮೆರೆಯುವ ಕರ್ಕಶ ನ್ಯಾಯವಾದ ವಿಚಾರವೆಂದೂ, ಭಾರತ ತತ್ವಗಳಾದ ಅಹಿಂಸೆ, ಸತ್ಯ ಇವೇ ಜನತೆಯ ಹಿತಕಾರಿಗಳೆಂದೂ ಘೋಷಿಸುವವನೇ ಭಾರತೀಯನು. ಇಂಥಾ ಒಬ್ಬನೇ ಒಬ್ಬ ಅಚ್ಚ ಭಾರತೀಯನು ಇದ್ದದ್ದೇ ಆದರೆ ಮೇಲೆ ಹೇಳಿದಂತೆ ಇಂಗ್ಲಿಷರಿಗೆ ಹೇಳುತ್ತಿದ್ದನಲ್ಲದ ಇಂಗ್ಲಿಷರಿಗೆ ಆತನ ಮಾತಿಗೆ ಕಿವಿಗೊಡದಿರಲಿಕ್ಕೂ ಸಾಧ್ಯವಿರಲಿಲ್ಲ. ಇವು ನಮ್ಮ ಕೇಳಿಕೆಗಳಲ್ಲ. ನಮ್ಮ ಮನಸ್ಸಿನ ಸ್ಥಿತಿಯು ಪರಿವೇದನೆ, ನಾವು ಕೇಳಿಕೊಂಡು ಯಾ ಮನವಿಮಾಡಿಕೊಂಡಿರುವ ವರೆಗೆ ನಮಗೇನೂ ಲಭಿಸದು. ನಮಗೆ ಬೇಕಾದುದನ್ನು ನಾವೇ ತೆಗೆದುಕೊಳ್ಳಬೇಕು. ಅದಕ್ಕೆ ಶಕ್ತಿ ಬೇಕು. ಶಕ್ತಿ ಬರಬೇಕಾದರೆ ಈ ಕೆಳಗಿನ ಶರತುಗಳನ್ನು ಪಾಲಿಸಬೇಕು.

1. ಇಂಗ್ಲಿಷ್ ಬರುವವರು ಇಂಗ್ಲಿಷ್ ಭಾಷೆಯ ಉಪಯೋಗವನ್ನು ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಮಾಡಬೇಕು.

2. ಲಾಯರುಗಳಾಗಿದ್ದರೆ ಅವರು ತಮ್ಮ ವೃತ್ತಿಯನ್ನು ನಿಲ್ಲಿಸಿದು ಚರಕವನ್ನು ತೆಗೆದುಕೊಳ್ಳಬೇಕು.

3. ಲಾಯರುಗಳಾದ ಪಕ್ಷ ತಮ್ಮ ತಿಳುವಳಿಕೆಯನ್ನು ಜನತೆಗೆ ಬೋಧಿಸಿ ಅವರ ಉನ್ನತಿಗೆ ಕಾರಣನಾಗಬೇಕಲ್ಲದೆ ಬ್ರಿಟಿಷರ ಕಣ್ಣು ತೆರೆಯಬೇಕು.

4. ಲಾಯರುಗಳಾದರೆ ಪಕ್ಷಗಳಲ್ಲಿ ಕೈಹಾಕಿ ಜಗಳಗಳಲ್ಲಿ ಭಾಗಿಯಾಗುವವನ್ನು ಬಿಟ್ಟು ಕೋರ್ಟು ಖಚೇರಿಗಳನ್ನು ತ್ಯಜಿಸಿ ಜನತೆಗೂ ಅದನ್ನು ಬೋಧಿಸಬೇಕು.

5. ಡಾಕ್ಟರಾಗಿದ್ದ ಪಕ್ಷ ಶರೀರ ಅಸ್ವಸ್ಥತೆಗೆ ಮಾತ್ರ ಔಷಧ ಕೊಡಬಲ್ಲ ತಮ್ಮ ಉದ್ಯೋಗವನ್ನು ತೊರೆದು ಆತ್ಮಕ್ಕೆ ಔಷಧಿಕೊಟ್ಟು ಸಂಪಡಿಸುವ ಕಾರ್ಯಕ್ಕೆ ಗೊಳ್ಳಬೇಕು.

6. ಡಾಕ್ಟರಾದ ಪಕ್ಷ ಆತನು ಯಾವ ಮತೀಯನಾದರೂ ಪ್ರಾಣಿಗಳ ವಧೆಯಿಂದ ಮಾನವನಿಗಾಗಿ ಸಂಗ್ರಹಿಸಿದ ಔಷಧಿಯನ್ನು ಪಯೋಗಿಸಿ ಹಿಂಸಾತತ್ವವನ್ನು ಸಮರ್ಥಿಸುವದಕ್ಕಿಂಥಾ ಮಾನವನು ರೋಗಗ್ರಸ್ಥನಾಗಿರುವದು ಮೇಲೆಂದು ತಿಳಿಯಬೇಕು.

7. ಡಾಕ್ಟರಾದ ಪಕ್ಷ ಚರಕಾವನ್ನು ಕೈಯಲ್ಲಿ ಹಿಡಿದು ರೋಗಗ್ರಸ್ಥರಾಗಿ ಬಂದವರಿಗೆ ಅದರ ಕಾರಣಗಳನ್ನು ವಿವರಿಸಿ, ಮುಂಜಾಗ್ರತೆಯಿಂದ ತಪ್ಪಿಸಿಕೊಳ್ಳುವ ವಿಧಾನವನ್ನು ಹೇಳಿ ಕಳುಹಿಸಬೇಕು. ಹಾನಿಕಾರಕ ಬ್ರಿಟಿಷ್ ಔಷಧಿನ್ನು ಸೇವಿಸದ್ದರಿಂದ ಅದೃಷ್ಟವಶಾತ್ ಒಬ್ಬನು ಮೃತಿಯನ್ನೈದುವದಾದರೆ ಜಗತ್ತು ಅದಕ್ಕೆ ದುಃಖಪಡಲಾರದು. ಈ ಮಾನವ ಜೀವನಕ್ಕಾಗಿ ಅನೇಕ ಪ್ರಾಣಿಗಳ ವಧೆ ನಡೆಸುವದು ಭಾರತ ಭೂಮಿಯಲ್ಲಿ ಖಂಡಿತಾ ಸಲ್ಲದು.

8. ಧನವಂತನಿದ್ದ ಪಕ್ಷ ಅಲ್ಲಲ್ಲಿ ಚರಕಾ ಕೇಂದ್ರಗಳನ್ನೇರ್ಪಡಿಸಿ, ಕೈನೂಲಿನ ಬಟ್ಟೆಯನ್ನು ತಾನೆ ಧರಿಸುತ್ತಾ ಗ್ರಾಮ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕು.

9. ಎಲ್ಲಾ ಭಾರತೀಯರಂತೆ ಆತನು ಇದು ವ್ಯಸನಪಡಲು, ಮತ್ತು ತಮ್ಮ ಪಾಲಿನ ಕರ್ತವ್ಯವನ್ನು ದೇಶಕ್ಕಾಗಿ ಸಲ್ಲಿಸಲು ಇದೇ ಸಮಯವೆಂದು ತಿಳಿಯಬೇಕು.

10. ಎಲ್ಲಾ ಭಾರತೀಯರಂತೆ ಬ್ರಿಟಿಷರನ್ನು ಬಯ್ಯುವದರಿಂದ ಪ್ರಯೋಜನವಿಲ್ಲವೆಂದೂ, ನಮ್ಮಿಂದಾಗಿಯೇ ಅವರು ಭಾರತದಲ್ಲಿ ಜೀವನ ನಡೆಸುತ್ತಿರುವರೆಂದೂ, ನಮ್ಮನ್ನು ನಾವು ಬಲಾಯಿಸಿಕೊಂಡಂದು ಅವರೂ ಮಾರ್ಪಡುವವರಲ್ಲ ಅನುಮಾನವಿಲ್ಲವೆಂದು ತಿಳಿಯಬೇಕು.

11. ಇತರರಂತೆ ದೇಶವು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿರುವಾಗ, ಶೋಕಾತಿರೇಕದಿಂದ ಜನತೆಯು ಉರಿದೇಳುತ್ತಿರುವಾಗ ಇನ್ನೂ ದೇಶವು ಅಧೋಗತಿಯಲ್ಲಿರುವದನ್ನು ಸಹಿಸುವದಕ್ಕಿಂಥಾ ಅವರ ವಿಮೋಚನೆಗಾಗಿ ಹೋರಾಡಿ ಜೈಲಿನಲ್ಲಿಯಾಗಲೀ, ಗಡಿಪಾರಾಗಿ ಪರದೇಶಿಯಾಗಿಯಾಗಲೀ ಇರುವದು ಲೇಸೆಂದು ತಿಳಿಯಬೇಕು.

12. ತನ್ನ ದೇಶೀಯರೊಡನೆ ತನ್ನ ಮನದಿಚ್ಛೆಯನ್ನು ವಿಷದವಾಗಿ ಹೇಳಲು ಸಹ ಅವಕಾಶಕೊಡದ ಸರಕಾರದ ವರ್ತನೆಯು ಹೇಯವೆಂದು ತಿಳಿದು ಜೈಲಿಗೆ ನಡೆಯಲು ಸಿದ್ಧನಾಗಬೇಕು.

13. ಮಾತಿಗಿಂಥಾ ಕೆಲಸವು ಮೇಲೆಂದು ತಿಳಿಯಬೇಕು. ನಾವು ಹೇಗೆ ಯೋಚಿಸುತ್ತೇವೋ ಹಾಗೇ ಮಾಡಬೇಕು. ಎಂಥಾ ಎಡರುಗಳು ಬಂದರೂ ನಮ್ಮ ಮಾತಿನಂತೆ ನಡೆಯಲು ತಪ್ಪಬಾರದು. ಎಂದರೇನೇ ನಮ್ಮ ಮಾತಿಗೆ ಬೆಲೆ ಬರುವದು.

14. ಕಷ್ಟಸಹಿಷ್ಣುತೆಯಿಂದಲೇ ನಾವು ಸ್ವತಂತ್ರರಾಗಬಲ್ಲೆವೆಂಬ ತಿಳಿವು ಬರಬೇಕು.

ಕಾಂಗ್ರೆಸ್ ಕಾರ್ಯಕ್ಷೇತ್ರ.

(ಪಂಡಿತ ಜವಾಹರಲಾಲರ ಲೇಖನ.)

ತ್ರಿಪುರಿಯ ಅನುಭವವೇನು? ಕಾಂಗ್ರೆಸಿನಲ್ಲಿ ಒಡಕು ಬರಲು ಕಾರಣವೇನು? ಮುನ್ನಡೆಯ ಪಕ್ಷದ ಪುರುಷಾರ್ಥವೇನು? ಸಂಸ್ಥಾನಗಳ ಪರಿಸ್ಥಿತಿಯೇನು? ಜವಾಹರರು ವರ್ಕಿಂಗ್ ಕಮಿಟಿಯಲ್ಲಿ ಇರದಕ್ಕೂ, ಸಂಸ್ಥಾನಗಳ ಕಾರ್ಯಕ್ರಮಕ್ಕೂ ಕೈಯಿಕ್ಕದ ಸಂಗತಿಯೇನು?

ಇವೆಲ್ಲಕ್ಕೂ ಲೇಖನವನ್ನೋದಿರಿ.

ಪಂಡಿತ ಜವಾಹರಲಾಲರು ನ್ಯಾಷನಲ್ ಹೆರಾಲ್ಡ್ ಎಂಬ ಪತ್ರಿಕೆಗೆ ಎರಡು ಲೇಖನಗಳನ್ನು ಬರೆದು ಕಳೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನ ನಂತರ ಕಾಂಗ್ರೆಸಿನಲ್ಲಿ ನಡೆದಿರುವದೇನು ಮತ್ತು ಕಾಂಗ್ರೆಸ್ ಎತ್ತ ಸಾಗುತ್ತಿದೆಯೆಂಬ ವಿಚಾರ ವಿಶದಪಡಿಸಿರುವರು. ಅವುಗಳ ಸಾರಾಂಶವನ್ನು ಇಲ್ಲಿ ಕೊಟ್ಟಿರುವೆವು.–

'ನನ್ನ ಸ್ನೇಹಿತರು ಹಾಗೂ ಸಹವಾಸಿಗಳು ಕಾಂಗ್ರೆಸಿನಲ್ಲಿ ಆಗುತ್ತಿರುವ ಬದಲಾವಣೆಗಳ ವಿಚಾರ ನನ್ನನ್ನು ಆಗಾಗ್ಯೆ ಕೇಳುತ್ತಿರುವದರಿಂದ ಈ ಲೇಖನಗಳನ್ನು ಬರೆಯಲಾಯಿತು. ದೇಶದಲ್ಲಿ ಜನತೆಯ ಮನಸಿನಲ್ಲಿ ಕೋಲಾಹಲವು ಹಬ್ಬಿರುವದರಿಂದಲೂ, ಇಂಥಾ ಅವ್ಯವಸ್ಥೆಯ ಸಮಯದಲ್ಲಿ ಲೇಖನ ಬರೆಯುವದರಿಂದ ಜನತೆಯಲ್ಲಿ ಕ್ಷೋಭೆಗಳು ಸಹ ಏಳುವ ಸಂಭವವಿರುವದರಿಂದಲೂ ಈ ಲೇಖನಗಳನ್ನು ಜೋಪಾನದಿಂದ ಬರೆದಿರುವೆನು.

ಪಾಶ್ಚಿಮಾತ್ಯ ದೇಶಗಳ ವಿಚಾರ ತೆಗೆದುಕೊಂಡರೆ ಸ್ಪೈಯಿನಿನ ಅವಸ್ಥಾಂತರವು ನನ್ನ ಮನಸ್ಸಿನಲ್ಲಿ ಅಚ್ಚಳಿಯದ ಗುರ್ತು ಮಾಡಿದೆ. ಆದರೆ ಅದು ದೂರದ ದೇಶವಾಯಿತು. ನಮ್ಮ ಮಾತೃಭೂಮಿಯ ಅನೇಕ ಸಮಸ್ಯೆಗಳು ನನ್ನನ್ನು ತೊಂದರೆಗೊಳಿಸುತ್ತಿವೆ. ಇಡೀ ಭಾರತ ಜನಾಂಗವೇ ಅಂತಃಕಲಹ, ಪರಸ್ಪರರಲ್ಲಿ ಅಪನಂಬಿಕೆಯಿಂದ ತುಂಬಿರುವದೋ ಎಂಬಂತೆ ಒಂದೊಂದು ಸಲ ಭಾಸವಾಗುತ್ತದೆ. ನಮ್ಮಲ್ಲಿ ನಂಬಿಕೆಯೆಂಬುದಿಲ್ಲ. ಪತ್ರಿಕೆಯಲ್ಲಿ ಮುಖಂಡರ ಪ್ರತಿಯೊಂದು ಹೇಳಿಕೆಗಳಿಗೂ ಒಮ್ಮೊಮ್ಮೆ ಮನಸ್ಸನ್ನು ಚಂಚಲಗೊಳಿಸಿ ನೆಲೆಗಾಣದಿರುವವು. ಕಾಂಗ್ರೆಸ್ ರಂಗಕ್ಕೆ ಅಸಹ್ಯ ಅಭ್ಯಾಸಗಳು ಕಾಲಿಕ್ಕುತ್ತಿರುವವೆಂದರೆ ಅತಿಶಯೋಕ್ತಿಯಲ್ಲ.

ತ್ರಿಪುರಿ.

ತ್ರಿಪುರಿಯ ಅನುಭವವು ಅನೇಕ ವಿಧಗಳಿಂದ ಮನನೋಯಿಸುವಂಥಾದ್ದಿತ್ತು. ನಾವನೇಕರು ಅಲ್ಲಿಯ ಅನುಭವದಿಂದ ಶೋಕದಿಂದ ಕೂಡಿದ ಹೃದಯದಿಂದ ಹಿಂದಿರುಗಿದೆವು. ನಂತರ ಪತ್ರಿಕೆಗಳ ಮುಖಾಂತರ ನಡೆದ ಕೋಲಾಹಲ, ವ್ಯಕ್ತಿದೂಷಣೆ ಮೊದಲಾದವು ನನ್ನನ್ನು ಇನ್ನಷ್ಟು ಚಿಂತೆಗೊಳಮಾಡಿದವು. ಆದರೆ ನಾನು ಅಸಹಾಯನಾಗಿದ್ದೆ. ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನಲ್ಲಿ ಈ ಎಲ್ಲಾ ವಿಚಾರಗಳು ಪರಿಹೋಗಬಹುದೆಂದು ಆಶಿಸಿದ್ದೆನು. ಅಂತೆಯೇ ಅಲ್ಲಿ ಕಡೆಯ ವರೆಗೂ ಈ ಮನಕಷಾಯವನ್ನು ನೀಗಲು ನನ್ನ ಕೈಲಾದ ಪ್ರಯತ್ನಪಟ್ಟೆನು. ಆದರೆ ಎಲ್ಲಾ ವಿಫಲವಾಯಿತು. ಕಲ್ಕತ್ತಾದಲ್ಲಿ ಸುಭಾಷಚಂದ್ರಬೋಸರು ಮುಂದಿಟ್ಟ ಎಲ್ಲಾ ಸೂಚನೆಗಳಿಗೆ ನಾನು ಒಪ್ಪದಿದ್ದರೂ, ಅವರು ತ್ರಿಪುರಿಯಲ್ಲಿಯ ಸೂಚನೆಗಳನ್ನೆಲ್ಲಾ ಅಂಗೀಕರಿಸಿ ಕಾಂಗ್ರೆಸಿನ ಐಕ್ಯತೆಗೆ ತುಂಬಾ ಪ್ರಯತ್ನಿಸಿದರೆಂಬುದನ್ನು ನಾನು ಒಪ್ಪಲೇಬೇಕು. ಐಕ್ಯತೆಯ ಸಾಧನೆಗೆ ಯಾವ ತೊಂದರೆ ಇಲ್ಲದಿದ್ದರೂ ಅರ್ಥವಿಲ್ಲದ ವಿರೋಧಾಭಿಪ್ರಾಯವನ್ನು ಸುಭಾಷರ ಮುಂದಿಟ್ಟದ್ದರಿಂದ ಅವರು ರಾಜಿನಾಮೆಕೊಡಬೇಕಾಗಿ ಬಂತು. ಆ ಸಂದರ್ಭದಲ್ಲಿ ರಾಜಿನಾಮೆ ಮಾಡದೆ ಗತ್ಯಂತರವಿರಲಿಲ್ಲವಾದರೂ, ರಾಜಿನಾಮೆಯಿಂದ ಕಾಂಗ್ರೆಸ್ಸಿನಲ್ಲಿ ಪಂಗಡಗಳು ಬೆಳೆಯಲು, ವ್ಯಕ್ತಿದ್ವೇಷವು ಹೆಚ್ಚಲು ಅನುವಾಯಿತು.

ಈ ಕಾರಣಗಳಿಂದಾಗಿ ನಾನು ವರ್ಕಿಂಗ್ ಕಮಿಟಿಯಲ್ಲಿರಲು ಒಪ್ಪಲಿಲ್ಲ. ಕಲ್ಕತ್ತಾ ಮೀಟಿಂಗಿನ ಮೊದಲು ಕಮಿಟಿಯಲ್ಲಿ ಕೆಲಸ ಮಾಡುವ ವಿಚಾರ ನಾನು ಅಷ್ಟೇನು ವಿರೋಧಿಸಿರಲಿಲ್ಲ. ಜನಮತದಂತೆ ನಡೆಯುವೆನೆಂಬ ಅಭಿಪ್ರಾಯದಲ್ಲಿದ್ದೆನು. ಆದರೆ ಕಲ್ಕತ್ತಾ ಮೀಟಿಂಗಿನ ನಂತರ ಅಸಹಕಾರ ಅಥವಾ ಇನ್ನಾವ ಕಾರಣದಿಂದಲ್ಲದಿದ್ದರೂ ನನ್ನ ಮನವು ಮಾರ್ಪಟ್ಟಿದೆ. ಇಂಥಾ ಬಿಕ್ಕಟ್ಟಿನ ಸಮಯದಲ್ಲಿ ಕಾಂಗ್ರೆಸಿನ ಜವಾಬ್ದಾರಿಯನ್ನು ಹೊತ್ತ ರಾಜೇಂದ್ರ ಪ್ರಸಾದರ ಎದೆಗಾರಿಕೆಯು ಹೊಗಳ ತಕ್ಕಂಥಾದ್ದೇ ಆಗಿರುವದು.

ಭಿನ್ನ ಬೇಧ.

ಕಾಂಗ್ರೆಸಿನಲ್ಲಿ ಮೊಳೆತಿರುವ ಭಿನ್ನಬೇಧವನ್ನು ನಿರ್ಲಕ್ಷಿಸಿ ಕುಳಿತುಕೊಳ್ಳುವದಾದರೂ ಅವಿವೇಕ ಈ ಭಿನ್ನಾಭಿಪ್ರಾಯಗಳು ಕೇವಲ ಸಂಶಯವೆಂಬ ಅಡಿಗಲ್ಲಿನ ಮೇಲೆ ಕಟ್ಟಲ್ಪಟ್ಟವುಗಳು. ಕಳೆದ ಜನವರಿಯಲ್ಲಿ ಜರಗಿದ ಅಧ್ಯಕ್ಷರ ಚುನಾವಣೆಯು ಯಾರ ಮೇಲೆಯೂ ಅವಿಶ್ವಾಸ ಸೂಚಿಸುವಂಥಾದಲ್ಲ ಅಥವಾ ಯಾವ ತತ್ತ್ವದ ಪರವಾಗಿಯೂ ಅದು ನಡೆದಿಲ್ಲ ಆದರೆ ಅದರಲ್ಲಿ ಒಂದು ವಿಧದ ಅತೃಪ್ತಿಯು ಕೆಲವರಲ್ಲಿ ಮೂಡಿತ್ತು. ಆ ಚುನಾವಣೆಯ ಸಂದರ್ಭದಲ್ಲಿ ನಮಗೆ ಒಳ್ಳೇ ಪಾಠ ಬೋಧಿಸಲ್ಪಟ್ಟಿದೆ ಆ ಪಾಠವನ್ನು ಕಲಿಯದ್ದು ನಮ್ಮ ಮೌಢ್ಯತೆ. ಈ ನಮ್ಮ ಧೋರಣೆಯಿಂದ ಇಂದು ಇಂಥಾ ಅನರ್ಥಗಳಿಗೆ ಕಾರಣವಾಗಿದೆ. ಈ ತೊಂದರೆಗಳನ್ನು ನಿವಾರಿಸಲು ಯಾವದಾದರೊಂದು ಪಕ್ಷವು ಶರಣಾಗತವಾಗಬೇಕು. ಆದರೆ ಐಕ್ಯತೆಗೆಂದು ತಮ್ಮ ಧರ್ಮವನ್ನು ಬಿಟ್ಟು ಶರಣಾಗತವಾಗುವದರಿಂದ ನಮ್ಮನ್ನು ಅಬಲರನ್ನಾಗಿ ಮಾಡಿಕೊಂಡಂತಾಗುವದು. ಇಂದು ಜಗತ್ತು ಎಚ್ಚೆತ್ತು ನೋಡುವವರಿಗೆ ಕ್ಷಣಿಕವಾಗಿಯೂ, ನಿಜವಾಗಿಯೂ ಅರಿಯುವವರಿಗೆ ಹೃದಯದ್ರಾವಕವಾಗಿಯೂ ಕಾಣುತ್ತಿದೆ. ಹೀಗೆ ರಾಜಕೀಯ ರಂಗವು ಕಗ್ಗತ್ತಲೆಯಿಂದ ಮುಸುಕಿದಂತಾಗಿರುವದರಿಂದ ಮುಂದಿನ ಆಶೆಗಳು ನಿರಾಶೆಯಾಗ ತೊಡಗಿವೆ. ಅಂತರರಾಷ್ಟ್ರೀಯ ಪರಿಸ್ಥಿತಿಯು ಒಂದೆಡೆ ನಮ್ಮನ್ನು ಎಚ್ಚರಿಸುತ್ತಿದೆ. ಮಧ್ಯೆ ನಮ್ಮೊಳಗಿನ ಸಮಸ್ಯೆಗಳು ವೃಷ್ಟಿಯನ್ನೆಳೆಯುತ್ತಿವೆ. ಕ್ರಮೇಣ ನಿರಂಕುಶ ತತ್ತ್ವವು ಕಾಂಗ್ರೆಸ್ಸಿನಲ್ಲಿ ಮೊಳೆತು ಬಲಗೊಳ್ಳುವದೋ ಎಂಬ ಭಯವೂ ಆಗುತ್ತಿದೆ. ಕೆಲವೊಂದು ವೇಳೆ ಕಾಂಗ್ರೆಸ್ ಅಧಿಕಾರಿ ವರ್ಗವು ನಿರಂಕುಶ ವರ್ತನೆಯನ್ನು ಕೈಗೊಂಡಿದೆಯೆಂಬ ಕೂಗು ಹೊರಬೀಳದೆ ಇಲ್ಲ. ಕಾಂಗ್ರೆಸ್ ಅಧಿಕಾರ ವರ್ಗವೂ ಇಂಥಾ ಧೋರಣೆಯನ್ನು ಅನುಸರಿಸಿರಲಿಕ್ಕೂ ಸಾಕು. ಆದರೆ ಕಾಂಗ್ರೆಸು ಜರ್ಮನಿಯ ಫ್ಯಾಸಿಸ್ಟ್ ತತ್ತ್ವವನ್ನನುಸರಿಸುತ್ತಿದೆಯೆಂಬದು ಕೇವಲ ಮೌಢ್ಯತೆ. ಜರ್ಮನಿಯ ನಾಝಿ ತತ್ತ್ವಾಚರಣೆಯು ಭಾರತದಲ್ಲಿ ನಡೆಯದೆ ಇಲ್ಲ. ಅರಾಜಕೀಯ ಸಂಸ್ಥೆಗಳಲ್ಲಿ ಈ ಕೋಮುವಾರು ತತ್ತ್ವವೆಂಬ ರೋಗವು ಅಭಿವೃದ್ಧಿಗೊಳ್ಳುತ್ತಿದೆ. ಆದರೆ ಕಾಂಗ್ರೆಸ್ಸು ಆ ತತ್ತ್ವದಿಂದ ಮಲಿನವಾಗಿಲ್ಲ.

ಪುರೋಗಾಮಿ ಪಕ್ಷ.

ಸುಭಾಶಚಂದ್ರ ಬೋಸರವರು ಸ್ಥಾಪಿಸಿರುವ ಮುನ್ನಡೆಯ ಯಾ ಪುರೋಗಾಮಿ ಪಕ್ಷವು ಅರ್ಥಗರ್ಭಿತವಾದದಾದರೂ ಈ ಸಂದರ್ಭದಲ್ಲಿ ಅದರ ಅವಶ್ಯಕತೆ ಇರಲಿಲ್ಲ. ಯಾಕೆಂದರೆ ಅದರಲ್ಲಿ ಕೆಲವು ಅಪಾಯಗಳಿರುವವು. ಅದರ ವಿಚಾರ ಈ ವರೆಗೆ ತಿಳಿದಿರುವ ಮಟ್ಟಿಗೆ ಇಂದಿನ ಕಾಂಗ್ರೆಸ್ ಅಧಿಕಾರ ಸೂತ್ರವನ್ನು ಕೈಯಲ್ಲಿ ಹಿಡಿದಿರುವವರನ್ನು ಕೆಳಗುರುಳಿಸುವ ಧ್ಯೇಯವೆಂಬ ಅಡಿಗಲ್ಲಿನಿಂದ ಕಟ್ಟಲ್ಪಟ್ಟ ಸಂಸ್ಥೆಯೆಂಬುದು ಗೊತ್ತಾಗುವದು. ಈ ಪಕ್ಷದ ಬಾಗಿಲುಗಳು ವಿಶಾಲವಾಗಿ ತೆರೆಯಲ್ಪಟ್ಟು ಎಲ್ಲರಿಗೂ ಇದರಲ್ಲಿ ಸ್ಥಳವಿರುವ ಕಾರಣ ಇದರಲ್ಲಿ ನಾನಾ ವಿಧದ, ನಾನಾ ಧ್ಯೇಯದ ಜನರು ಸೇರುವದರಲ್ಲಿ ಸಂಶಯವಿಲ್ಲ. ಇಂದು ಕಾಂಗ್ರೆಸ್ಸಿನೊಳಗೆ ಒಂದೇ ಧ್ಯೇಯದಿಂದಿರುವ ಸದಸ್ಯರಾದರೂ ಅಧಿಕಾರ ಲಾಲಸೆಯೇ ಮೊದಲಾದ ಸ್ವಾರ್ಥಸಾಧನೆಯಲ್ಲಿ ನಿರತರಾದ ಜನರ ಸಮಾಗಮದಿಂದ ಉಂಟಾಗುತ್ತಿರುವ ತೊಂದರೆ, ಆ ಪ್ರಯುಕ್ತ ಅಂಧವರನ್ನು ಕಿತ್ತೊಗೆಯಲು ಕಾಂಗ್ರೆಸು ಮಾಡುತ್ತಿರುವ ಉಗ್ರ ಕಾರ್ಯಕ್ರಮ ಇದೆಲ್ಲಾ ಎಲ್ಲರಿಗೂ ತಿಳಿದಿರುವಾಗ ಯಾವ ಪಕ್ಷ ಭೇದವಿಲ್ಲದೆ ಮುನ್ನಡೆಯ ಪಕ್ಷದಲ್ಲಿ ಸೇರುವ ಜನತೆಯನ್ನಾದರೂ ಸುಭಾಷ ಬಾಬುಗಳು ಹೇಗೆ ಹಿಡಿತದಲ್ಲಿಡುವರೆಂಬುದು ಊಹಿಸಲಸಾಧ್ಯವಾದ ವಿಚಾರ.

ಯುದ್ಧದ ವಿಚಾರದಲ್ಲಿ.

ನಾವು ಯುದ್ಧವನ್ನು ವಿರೋಧಿಸಬೇಕಾದದು ವಾಸ್ತವ. ಯಾಕಂದರೆ ಭಾರತದ ಸ್ವಾತಂತ್ರ್ಯ, ಹಾಗೂ ಪ್ರಜಾಹಿತಕ್ಕಾಗಿ ಈ ವಿಧಾನವನ್ನು ನಾವು ಅನುಸರಿಸಿರುವೆವು. ಆದರೆ ನಮ್ಮ ಅದೇ ಧೋರಣೆಯನ್ನು ಬದಲಾಯಿಸಿ ಅದಕ್ಕೆ ಹೊಸ ರೂಪವನ್ನು ಕೊಡಲೂಬಹುದು. ಇಂದು ಯೂರೋಪಿನ ಸರ್ವಾಧಿಕಾರಿ ರಾಷ್ಟ್ರಗಳು ಅರ್ಥಾತ್ ಜರ್ಮನಿ, ಇಟೆಲಿಗಳು ಭಾರತದ ಸಹಾಯವನ್ನು ಅವರಿಂದ ಸ್ವೀಕರಿಸುವವು. ಭಾರತವು ಪ್ರತ್ಯೇಕವಿದ್ದು ಬ್ರಿಟಿಷ್ ಸರಕಾರಕ್ಕೆ ತಮ್ಮ ಸ್ವಾತಂತ್ರ್ಯದ ಬಗ್ಯೆ ತೊಂದರೆ ಕೊಡುವದಾದರೆ ಈ ರಾಷ್ಟ್ರಗಳು ಈ ಸಮಯವನ್ನುಪಯೋಗಿಸಿಕೊಂಡು ಬ್ರಿಟನನ್ನು ಹಣ್ಣುಮಾಡಲು ಯತ್ನಿಸಹಿರವು. ಆದರೆ ನಾವು ಈ ರಾಷ್ಟ್ರಗಳ ಕೈಗೊಂಬೆಗಳಾಗಿ ವರ್ತಿಸುವದು ನಮ್ಮನ್ನು ಅಧೋಗತಿಗಿಳಿಸುಹದರಲ್ಲಿ ಸಂಶಯವಿಲ್ಲ. ಬ್ರಿಟಿಷ್ ಸಾರ್ವಭೌಮ ಸರ್ಕಾರದಿಂದ ಆಳಲ್ಪಡಲು ಹೇಗೆ ಇಚ್ಛಿಸೆವೋ ಹಾಗೆಯೇ ಆ ರಾಷ್ಟ್ರಗಳ ಸಹಾಯ

(೬ನೇ ಪುಟದ ೪ನೇ ಕಲಂ ನೋಡಿ.)

---

15. ಐರೋಪ್ಯರ ನಾಗರೀಕತೆಯನ್ನು ಪ್ರೋತ್ಸಾಹಿಸುವವರ ಆ ತಪ್ಪಿಗೆ ಅಂಡಮಾನ್ ದ್ವೀಪಕ್ಕೆ ಗಡಿಪಾರು ಮಾಡುವದೂ ಸಾಲದೆಂಬ ಭಾವನೆ ಬರಬೇಕು.

16. ಕಷ್ಟ ಪಡದೆ ಯಾವ ಜನಾಂಗವೂ ಅಭಿವೃದ್ಧಿಗೊಂಡಿಲ್ಲ. ಆದ್ದರಿಂದ ಅಹಿಂಸಾವನ್ನನುಸರಿಸಿ ಕಷ್ಟಗಳನ್ನು ಲೆಕ್ಕಿಸದ ಮುಂದರಿದರೇನೇ ದೇಶಕ್ಕೆ ಕಲ್ಯಾಣವಾಗುವದು.

17. ಬೇರೆಯವರು ಮಾಡಿದ ನಂತರ ತಾನು ಮಾಡುವೆನೆಂದು ಕಾದುಕೂರುವದು ಅವಿವೇಕ. ತನಗೆ ಸರಿಯಾಗಿ ತೋರಿದ್ದನ್ನು ಯಾರನ್ನೂ ಲೆಕ್ಕಿಸದ ಮಾಡಬೇಕು. ಬೇರೆಯವರ ಪ್ರೇರಣೆಯಿಂದ ಯಾ ಬಲಾತ್ಕಾರದಿಂದ ಮಾಡುವ ಕಾರ್ಯದಲ್ಲಿ ರುಚಿ ಇರಲಾರದು. ಆದ್ದರಿಂದ ಪ್ರಮುಖ್ಯ ವಿಚಾರಗಳೆಂದರೆ–

ಆತ್ಮ ಸ್ವಾತಂತ್ರ್ಯವೇ ನಿಜವಾದ ಸ್ವರಾಜ್ಯ. ಇದಕ್ಕೆ ರಾಜಮಾರ್ಗವೇ ಆತ್ಮಶಕ್ತಿ ಯಾ ಪ್ರೇಮಶಕ್ತಿ. ಪ್ರೇಮಶಕ್ತಿಯ ಅಡಿಪಾಯವೇ ಸ್ವದೇಶಿ. ಸ್ವದೇಶಿ ಪ್ರೋತ್ಸಾಹವೇ ಸ್ವದೇಶಸೇವೆ. ಆದ್ದರಿಂದ ನಾವು ನಮಗೆ ಬೇಕಾದುದ್ದನ್ನು ಕರ್ತವ್ಯದೃಷ್ಟಿಯಿಂದ ಮಾಡಬೇಕು. ಇಂದು ಬ್ರಿಟಿಷರು ದೊಡ್ಡ ದೊಡ್ಡ ಹುದ್ದೆಗಳಿಗೆ ಭಾರತೀಯರನ್ನು ನೇಮಿಸಿ ಭಾರತೀಯರ ಹಿತಚಿಂತಕರೆಂದೆನಿಕೊಂಡರೆ ಕೆಲವು ಭಾರತೀಯರಲ್ಲಿ ತೃಪ್ತಿಯುಂಟಾಗಿ ಮಾರ್ಪಾಡು ಆಗಬಹುದು. ಆದರೆ ಅದು ಸರಿಯಲ್ಲ. ಭಾರತದಲ್ಲಿ ಬ್ರಿಟಿಷರೇ ಇಲ್ಲದಿದ್ದರೂ ಯಂತ್ರ ತಯಾರಿಯ ವಸ್ತುಗಳಿಗೆ ಭಾರತದಲ್ಲಿ ಬಹಿಷ್ಕಾರವಿರಲೇಬೇಕು. ನಮಗೆ ಇಂಗ್ಲಿಷರಲ್ಲಿ ದ್ವೇಷವಿಲ್ಲ; ಅವರ ನಾಗರೀಕತೆಯಲ್ಲಿ. ಆದ್ದರಿಂದ ಪರದೇಶಿ ವಸ್ತುಗಳ ಖಂಡನೆ ವಿನಹ ನಮ್ಮ ದೇಶೀಯ ಕೈಗಾರಿಕೆಗಳು ತಲೆಯೆತ್ತಲಾರವು. ಮೇಲಿನ ಶರತುಗಳನ್ನು ಶಿರಸಾವಹಿಸಿ ನಡೆದರೆ ಸ್ವರಾಜ್ಯವು ದೂರವಿರದು.

ಕೊಡಗು

ಜೂನ್ ತಾರೀಕು ೨ನೇ ಶುಕ್ರವಾರ ೧೯೩೯

ನಿಶಾ ನಿಷೇಧ.

ಕಾಂಗ್ರೆಸಿನವರು ಸ್ವಲ್ಪ ಸಮಯದ ಹಿಂದೆ ಬ್ರಿಟಿಷ್ ಸರ್ಕಾರಕ್ಕೆ ವಿರುದ್ಧವಾಗಿ ಸವಿನಯ ಕಾಯಿದೆಭಂಗ ಚಳವಳವನ್ನು ನಡೆಸಿದಾಗ್ಯೆ ನಿಶಾನಿಷೇಧವನ್ನು ಸಾಧಿಸಬೇಕೆಂಬ ಉದ್ದೇಶದಿಂದ ಸಾರಾಯಿ ಸೇಂದಿ ಅಂಗಡಿಗಳ ಮುಂದೆ ಪಿಕೆಟಿಂಗ್ ಕಾರ್ಯವನ್ನು ಬಹಳವಾಗಿ ನಡೆಸಿದರು. ಇದರಿಂದ ಜನತೆಯ ಮನಸಿನಲ್ಲಿ ಒಳ್ಳೇ ಪರಿಣಾಮವುಂಟಾಯಿತು. ಕುಡಿಕತನವು ಒಂದು ಹೀನವಾದ ದುಶ್ಚಟ. ಇದನ್ನು ಬಲಾತ್ಕಾರದಿಂದ ಜನರಿಂದ ತಪ್ಪಿಸಬೇಕು, ಇದರಿಂದ ಬರುವ ಉತ್ಪತ್ತಿಯನ್ನು ವಿದ್ಯಾ ಇಲಾಖೆ, ವೈದ್ಯ ಇಲಾಖೆ ಮುಂತಾದ ಉತ್ತಮ ಕಾರ್ಯಗಳಿಗೆ ಉಪಯೋಗಿಸುವದು ನ್ಯಾಯವಲ್ಲ. ಆದ್ದರಿಂದ ನಿಶಾ ನಿಷೇಧವನ್ನು ಸಂಪೂರ್ಣ ಸಾಧಿಸಬೇಕೆಂಬುವುದು ಕಾಂಗ್ರೆಸ್ಸಿನವರ ಧ್ಯೇಯವಾಗಿದೆ. ಕಾಂಗ್ರೆಸ್ಸಿನವರ ಸತ್ಯಾಗ್ರಹದ ಫಲಿತಾಂಶವಾಗಿ ಸರ್ಕಾರದ ಅಬ್ಕಾರಿ ಇಲಾಖೆಯ ಉತ್ಪತ್ತಿಯು ಬಹುಮಟ್ಟಿಗೆ ಕಡಿಮೆಯಾಯಿತು. ವಿಶೇಷವಾಗಿ ಕುಡುಕತನಕ್ಕೆ ಬಲಿ ಬಿದ್ದಿರುವ ಈ ಚಿಕ್ಕ ಪ್ರಾಂತದಲ್ಲಿ ಕಾಂಗ್ರೆಸ್ಸಿನ ಈ ಚಳವಳಿಯಿಂದ ತುಂಬಾ ಪ್ರಯೋಜನ ಉಂಟಾಯಿತು. ಕೊಡಗಿನಲ್ಲಿ ನಡೆದ ಸತ್ಯಾಗ್ರಹದ ಪ್ರಮುಖ್ಯ ಕಾರ್ಯಭಾಗವು ಅಮಲು ಪದಾರ್ಥದ ಅಂಗಡಿಗಳ ಪಿಕೆಟಿಂಗೇ ಆಗಿತ್ತು. ಈ ಪಾನಗಳು [illegible] ಲಜ್ಜೆ ಇಲ್ಲದೆ ಬಹಿರಂಗವಾಗಿ ಅಂಗಡಿಗಳಲ್ಲಿ ಕುಳಿತು ಸೇಂದಿ ಸಾರಾಯಿ ಕುಡಿಯುತ್ತಿದ್ದವರು ಸತ್ಯಾಗ್ರಹದಲ್ಲಿ ನಮ್ಮ ಸಹೋದರ ಸಹೋದರಿಯರು ಮಾಡಿದ ತ್ಯಾಗದ ಪರಿಣಾಮವಾಗಿ ಅಂಗಡಿಗಳಲ್ಲಿ ಮಾತ್ರವಲ್ಲ, ಬಹಿರಂಗವಾಗಿ ಎಲ್ಲಿಯೂ ಕೂಡಾ ನಿಶಾಪಾನ ಮಾಡಲು ಹಿಂಜರಿಯುವಂತೆ ಆದರು. ಅದಕ್ಕಿಂತ ಹಿಂದೆ [illegible] ಮದುವೆ, ಮುಂಜಿಗಳಲ್ಲಿ ಅಮಲು ಪದಾರ್ಥ ನೀಡದಿರುವದೇ ಅಪರೂಪವಾಗಿತ್ತು. ನಂತರ ಅಮಲು ಪದಾರ್ಥ ನೀಡುವದು ಬಹು ಅಪರೂಪವಾಯಿತು. ಒಟ್ಟರ ಕುಡುಕತನದಲ್ಲಿ ಮುಳುಗಿದ್ದ ಕೊಡಗಿನ ವಾತಾವರಣವೇ ವಿಶೇಷ ಬದಲಾವಣೆಯನ್ನು ಹೊಂದಿರುವುದರಲ್ಲಿ ಸಂದೇಹವಿಲ್ಲ.

ಕಾಂಗ್ರೆಸ್ಸಿನವರ ಈ ಅದ್ವಿತೀಯ ಚಳವಳದಿಂದ ಇಡೀ ಹಿಂದೂಸ್ಥಾನವು ನಿಶಾ ನಿಷೇಧಕ್ಕೆ ತಯಾರು ಮಾಡಲ್ಪಟ್ಟಿತು. ಕಾಂಗ್ರೆಸ್ಸಿನ ಅಹಿಂಸಾ ಯುದ್ಧವು ನಿಲ್ಲಿಸಲ್ಪಟ್ಟ ಕೂಡಲೇ ಕಾಂಗ್ರೆಸ್ಸಿನವರು ಕೌನ್ಸಿಲ ಪ್ರವೇಶವನ್ನು ಮಾಡಿ ಅಧಿಕಾರ ಸ್ವೀಕರಿಸಿದರು. ಕೂಡಲೇ ನಿಶಾ ನಿಷೇಧದ ಉತ್ತಮ ತತ್ವವನ್ನು ಅವರು ಜಾರಿಗೆ ತರಲು ನಿರ್ಧರಿಸಿದರು. ಕಾಂಗ್ರೆಸ್ಸಿನವರು ಕಾಯಿದೆಭಂಗ ಚಳವಳವನ್ನು ನಡೆಸುತ್ತಿದ್ದಾಗ್ಯೆ, ಸರ್ಕಾರದ ಉತ್ಪತ್ತಿಗಳಲ್ಲಿ ಒಂದು ಬಹು ಮುಖ್ಯ ಭಾಗವಾದ ಅಬ್ಕಾರಿ ಇಲಾಖೆಯ ಆದಾಯವನ್ನು ನಿಶಾ ನಿಷೇಧ ಸಾಧಿಸಲಿಕ್ಕಾಗಿ ಕಳಕೊಳ್ಳುವದಾದರೆ ಆಡಳಿತ ಕ್ರಮವನ್ನು ಸುಸೂತ್ರವಾಗಿ ನಡೆಸಲು ಸಾಧ್ಯವಿಲ್ಲವೆಂದಲೂ, ಇದು ಅಧಿಕಾರದ ಹೊರೆಯನ್ನು ತಿಳಿಯದವರು ಆಡುವ ಬೇಜವಾಬ್ದಾರಿ ಮಾತೆಂದಲೂ, ಇದು ಸಾಧಿಸಲಸಾಧ್ಯವಾದ ಕನಸಿನ ಯೋಜನೆಯೆಂದಲೂ ಬ್ರಿಟಿಷ್ ಸರ್ಕಾರದವರು ಪ್ರತಿಭಟಿಸಿದ್ದರು. ಆದರೆ ಕಾಂಗ್ರೆಸಿನವರು ಅಧಿಕಾರದ ಜವಾಬ್ದಾರಿಯನ್ನು ಹೊತ್ತುಕೊಂಡ ಕೂಡಲೇ ತಮ್ಮ ಕನಸಿನ ಯೋಜನೆಯನ್ನು ಜಾರಿಗೆ ತರಲು ಪ್ರಾರಂಭಿಸಿಯೇ ಬಿಟ್ಟರು. ಕಾಂಗ್ರೆಸು ಮಂತ್ರಿ ಮಂಡಳಿಯನ್ನು ರಚಿಸಿದ ಪ್ರಾಂತಗಳಲ್ಲಿ ನಿಶಾ ನಿಷೇಧದ ಕಾರ್ಯವನ್ನು [illegible]ತ್ತಿರುವರು. ಇದರಲ್ಲಿ ಪ್ರಮುಖ್ಯವಾಗಿ ಕಾರುಬಾರು ನಡೆಸಿದ ಪ್ರಾಂತವೆಂದರೆ ನಮ್ಮ ನೆರೆ ಪ್ರಾಂತವಾದ ಮದ್ರಾಸು. ಅಲ್ಲಿಯ ಮಂತ್ರಿ ಮಂಡಳಿಯವರು ಶ್ರೀಯುತ ರಾಜಗೋಪಾಲಾಚಾರ್ಯರ ಮುಂದಾಳುತನದಲ್ಲಿ ಹದಿನೆಂಟು ತಿಂಗಳ ಹಿಂದೆ ಈ ಜನೋಪಕಾರಿಯಾದ ಕಾನೂನನ್ನು ಸೇಲಂ ಜಿಲ್ಲೆಯಲ್ಲಿ ಜಾರಿಗೆ ತಂದರು. ಅದರ ಉತ್ತಮವಾದ ಫಲಿತಾಂಶದಿಂದ ಧೈರ್ಯಗೊಂಡು ಒಂದು ವರ್ಷದ ನಂತರ ಅಂದರೆ ಆರು ತಿಂಗಳ ಹಿಂದೆ ಕಡಪಾ ಮತ್ತು ಚಿತ್ತೂರು ಜಿಲ್ಲೆಗಳಲ್ಲಿಯೂ ನಿಶಾ ನಿಷೇಧ ಕಾನೂನನ್ನು ಜಾರಿಗೆ ತಂದಿರುವರು. ಈ ಮೂರು ಜಿಲ್ಲೆಗಳಲ್ಲಿ ಕಳೆದ ಮೂರು ತಿಂಗಳಲ್ಲಿ ಆದ ಈ ಕಾನೂನಿನ ಫಲಿತಾಂಶದ ಕುರಿತು ಅಲ್ಲಿಯ ಸರ್ಕಾರದವರು ಹೊರಡಿಸಿರುವ ಪ್ರಕಟಣೆಯನ್ನು ಓದಿದರೆ ನಿಶಾ ನಿಷೇಧದ ಮೇಲೆ ಯಾವನೊಬ್ಬನಿಗೂ ಇರುವ ಸಂದೇಹಗಳು ಪರಿಹಾರವಾಗುವವು.

ಸರ್ಕಾರದವರ ಈ ಪ್ರಕಟಣೆ ಮೇರೆ ಈ ಮೂರು ಜಿಲ್ಲೆಗಳ ಪೋಲೀಸು ಅಧಿಕಾರಿಗಳು ನಿಶಾ ನಿಷೇಧದ ಕಾರ್ಯಕ್ರಮವನ್ನು ಜಯಪ್ರದವಾಗಿ ನಡೆಸುತ್ತಿರುವರು. ಅಮಲು ಪದಾರ್ಥವನ್ನು ಕದ್ದು ಮಾಡುವ ಯಾ ಮಾರುವ ಸಂದರ್ಭಗಳು ಬಹು ಕಡಿಮೆಯಾಗಿವೆ. ಕುಡಿಯಲು ಪಾಸು ತೆಗೆದುಕೊಂಡಿರುವವರೂ ಕೂಡ ಪಾಸುಗಳನ್ನು ವಾಪಸು ಕೊಡುತ್ತಿರುವರು. ಈ ದುಶ್ಚಟದಿಂದ ಜನರ ಮನಸನ್ನು ಬೇರೆಡೆ ತಿರುಗಿಸಲು ಗ್ರಾಮಗಳಲ್ಲಿ ಆಟೋಟಗಳು, ವಿನೋದ ಕೂಟಗಳು, ಚಿಕ್ಕ ಪುಟ್ಟ ಗ್ರಾಮ ಕೈಗಾರಿಕೆಗಳು ಪ್ರೋತ್ಸಾಹಿಸಲ್ಪಡುತ್ತಿರುವವು. ಜನರ ಆರ್ಥಿಕ ಸ್ಥಿತಿಯು ಬಹುಮಟ್ಟಿಗೆ ಅಭಿವೃದ್ಧಿಗೊಳ್ಳುತ್ತಿದೆ. ಕುಡುಕತನವನ್ನು ಬಿಟ್ಟದ್ದರಿಂದ ಜನರು ಊಟದ ಸಾಮಾನುಗಳನ್ನು ಹೆಚ್ಚಾಗಿ ಕೊಂಡುಕೊಳ್ಳುತ್ತಿರುವರು. ತಮ್ಮ ಹಳೇ ಸಾಲಗಳನ್ನು ಮರುಪಾವತಿ ಮಾಡಲು ಪ್ರಾರಂಭಿಸಿರುವರು. ಸಹಕಾರಿ ಸಂಸ್ಥೆಗಳು ಈ ಕಾರ್ಯದಲ್ಲಿ ಜನರಿಗೆ ತುಂಬಾ ಉತ್ತೇಜನಗಳನ್ನು ಕೊಡುತ್ತಿವೆ. ಸಂಪಾದನೆಯಿಂದ ಹಣ ಮಿಗಿಸಿ ಸಹಕಾರ ಸಂಘಗಳಲ್ಲಿ ಠೇವಣಾತಿ ಇಟ್ಟಿರುವರು. ನಿಶಾ ನಿಷೇಧದ ಕಾನೂನು ಜಾರಿಗೆ ಬರುವ ಮೊದಲು ಸೇಂದಿ ತೆಗೆಯುವ ಕೆಲಸದಲ್ಲಿದ್ದವರಿಗೆ ಹೊಸ ಉದ್ಯೋಗವನ್ನು ಕಲ್ಪಿಸಿ ಕೊಡುತ್ತಲಿರುವರು. ಅನೇಕರಿಗೆ ಭೂಮಿ ಕೊಡಲ್ಪಟ್ಟು ಅವರು ವ್ಯವಸಾಯಕರಾಗಿರುವರು. ಸಿಹಿ ಸೇಂದಿಯನ್ನು ತೆಗೆದು ಬೆಲ್ಲ ಮಾಡುವ ಕೈಗಾರಿಕೆಯು ಪ್ರಬಲವಾಗುತ್ತಿದೆ. ಕುಡುಕತನವನ್ನು ಬಿಡಲಾರದ ಇತರ ಪ್ರಾಂತಗಳ (spirits) [illegible] ಯಾಗಿ ಎಲ್ಲ [illegible] ಉಪಟಳವನ್ನು ಅರಿತು ಕಾರ್ಯಪ್ರವರ್ತರಾಗಿರುತ್ತಾರೆ. ಹೀಗೆ ಆ ಪ್ರಾಂತಗಳಲ್ಲಿ ಬಡವರ ಉದ್ಧಾರ ಆಗುತ್ತಿದೆ. ನಿಶಾ ನಿಷೇಧವೇ ಬಡವರ ಕಾಮಧೇನು ಎಂಬ ಭಾವನೆಯು ಅವರಲ್ಲಿ ನೆಲೆಸಿದೆ.

ಹಿಂದೂದೇಶದ ಇತರ ಪ್ರಾಂತಗಳಲ್ಲಿ ನಿಶಾ ನಿಷೇಧ ಕಾರ್ಯವು ಇಷ್ಟರ ಮಟ್ಟಿಗೆ ಜಯಪ್ರದವಾಗಿ ನಡೆಯುತ್ತಿರುವದಾದರೂ ನಮ್ಮ ಈ ಪ್ರಾಂತ [illegible] ಇದರ ಬಗೆಗೆ ಸ್ವಲ್ಪವೂ ಗಮನ ಕೊಡದಿರುವದು ನಮ್ಮ ದುರ್ದೈವ. ಈ ಸಂಬಂಧ ಸ್ಥಳೀಯ ಕೌನ್ಸಿಲಿನಲ್ಲಿ ಮಾಡಿದ ಗೊತ್ತುವಳಿಗೆ ಅಧಿಕಾರಿಗಳು ಮನ್ನಣೆ ಕೊಡದಿರುವದು ಶೋಚನೀಯ. ಇಡೀ ಹಿಂದೂಸ್ಥಾನವೇ ನಿಶಾ ನಿಷೇಧದಿಂದ ಮುಕ್ತವಾಗುತ್ತಿರುವಾಗ್ಯೆ [illegible] ತನ್ನ ಪೂರ್ವ ಕುಡುಕತನದಲ್ಲಿ [illegible] ಇರಲು ಸಾಧ್ಯವಿಲ್ಲ. [illegible] ಇಲ್ಲಿಯ ಸರಕಾರದವರು ಅಬ್ಕಾರಿ ಇಲಾಖೆಯ ಉತ್ಪತ್ತಿಯನ್ನು [illegible] ಇಲ್ಲಿಯ ಕಾಂಗ್ರೆಸ್ಸು ಅಧಿಕ ಲಕ್ಷ್ಯ [illegible] ಈ ಕಾರ್ಯವನ್ನು ಅವರು ಕೈಗೊಳ್ಳಲೇ ಬೇಕಾಗಿತ್ತು. ಆದರೆ ಈಗಿನ ಸರಕಾರವು ಇಡೀ ಹಿಂದೂಸ್ಥಾನದ ವಾತಾವರಣವನ್ನು ಮನವರಿಕೆ ಮಾಡಿಕೊಂಡು ಈ ವಿಚಾರದಲ್ಲಿ ಮುಂದುವರಿಯುವದನ್ನು ಮಾಡಬೇಕು. ಅಬ್ಕಾರಿಯ ಹಣದ ಅಭಾವದ ಕಾರಣವನ್ನು ಸರಕಾರದವರು ಮುಂದೊಡ್ಡಬಹುದು. ಆದರೆ ಈ ಕೊರತೆಯು ಎಲ್ಲಾ ಸರಕಾರಗಳಿಗೂ ಇದೆ. ಈ ಕಾರಣದಿಂದ ಈ ದುಶ್ಚಾಳಿಯನ್ನು ಇಟ್ಟುಕೊಳ್ಳಲು ಅವಕಾಶ ಕೊಡುವದು ಎಂದೂ ಯೋಗ್ಯವಲ್ಲ. ಒಕ್ಕನೆ ಇಲ್ಲಿ ನಿಶಾ ನಿಷೇಧವನ್ನು ಸಂಪೂರ್ಣ ಸಾಧಿಸಲು ಸಾಧ್ಯವಿಲ್ಲವೆಂದು ತೋರಿದರೆ ಸ್ವಲ್ಪ ಸ್ವಲ್ಪವಾದರೂ ಇದನ್ನು ಜಾರಿಗೆ ತರಲು ಅಧಿಕಾರಿಗಳು ಪ್ರಯತ್ನಿಸಬೇಕಾದ್ದು ಅವರ ಕರ್ತವ್ಯವಾಗಿದೆ. ಇನ್ನಾದರೂ ಇಲ್ಲಿಯ ಸರಕಾರದವರು ಈ ಪ್ರಮುಖ್ಯ ವಿಚಾರಕ್ಕೆ ತಕ್ಕಷ್ಟು ಗಮನವನ್ನೀಯುವರಾಗಿ ನಂಬುತ್ತೇವೆ.

(೨ನೇ ಪುಟದಿಂದ ಸಾಗಿದ್ದು)

ಪಡೆಯುವದಾದರೂ ಅಯೋಗ್ಯ. ಆದ್ದರಿಂದ ನಮ್ಮ ಯುದ್ಧ ವಿರೋಧ ಧೋರಣೆಯು ಸ್ವಾತಂತ್ರ್ಯ ಹಾಗೂ ಪ್ರಜಾಸತ್ತಾತ್ಮಕ ತತ್ವಗಳ ಮೇಲೆ ಆಧರಿಸಿ ನಿಂತಿರಬೇಕು.

ಸಂಸ್ಥಾನಗಳು.

ಸಂಸ್ಥಾನಗಳ ವಾತಾವರಣವಾದರೂ ಅಲ್ಲೋಲಕಲ್ಲೋಲವಾಗಿದೆ. ರಾಜಕೋಟೆಯಲ್ಲಿಯ ಈಗಿನ ವ್ಯವಹಾರವು ಕೆಲವು ಸಂಸ್ಥಾನಗಳಲ್ಲಿ ಹರ್ಷವನ್ನು ಹುಟ್ಟಿಸದಿಲ್ಲ. ಗಾಂಧೀಜೀಯವರು ರಾಜಕೋಟೆಯಲ್ಲಿ ಕೈಕೊಂಡ ಮಾರ್ಗವು ಸಮಂಜಸವಿರಬಹುದು. ಸಂಸ್ಥಾನದಲ್ಲಿ ಅವರು ಕೈಕೊಂಡ ಕಾರ್ಯಕ್ರಮಗಳನ್ನು ಸರಿಯಾಗಿ ಅರಿಯುವ ಒದಗುವದು ಅಪ್ರಸ್ತುತವಾಗಬಹುದು. ಆದರೆ ಕಳೆದ ಕೆಲವು ತಿಂಗಳಿಂದ ಅವರು ರಾಜಕೋಟೆ ಸಮಸ್ಯೆಯ ಬಗ್ಗೆ ಕೈಕೊಂಡ ವಿವಿಧ ಮಾರ್ಗಗಳು [illegible] ಸಮಗ್ರ ಅರಿಯಲು [illegible] ರೀತಿ ನೀತಿಗಳಿಂದ ಕಾಂಗ್ರೆಸನ್ನು ಮುಂದೆ ಅವರು ಹೇಗೆ ನಡೆಸುವರೆಂಬ ಶಂಕೆಯೂ ನನ್ನಲ್ಲಿ [illegible] ನನ್ನನ್ನು [illegible] ಭಾರತ ಸಂಸ್ಥಾನಗಳ ಪ್ರಜಾಸತ್ತಾತ್ಮಕ [illegible] ಸಂಸ್ಥಾನಗಳಲ್ಲಿ [illegible] ಕಾರ್ಯಕ್ರಮವನ್ನು [illegible] ಪ್ರತಿ ಸಂಸ್ಥಾನದ ಪ್ರಶ್ನೆಯೂ [illegible] ವಿಷಯವಿಷ್ಟು [illegible] ಏಕಮಾದ ಒಂದು [illegible] ನಾನು ಆದಳಿತವನ್ನು ವಿರೋಧಿಸಿ ಸಂಸ್ಥಾನಗಳ ಚಳವಳವು ವಿಕೇಂದ್ರೀಕರಣದಿಂದ [illegible] ಬೇಕೆಂದು ಹಿಂದೆ [illegible] ಬಯಸಿದ್ದೆನು. ಆದರೆ ಇಂದು ಸಂಸ್ಥಾನಗಳ ವಿಚಾರದಲ್ಲಿ ಗಾಂಧೀಜಿಯವರು ಅನುಸರಿಸುತ್ತಿರುವ ಧೋರಣೆ ಬೇರಾ ಬನ್ನವಾಗಿದೆ. ಸಂಸ್ಥಾನಗಳ ಚಳವಳಗಳಲ್ಲಿ ನಾನು ನಾಗನಡಿಸಿದ್ದೇ ಅವರ ನನ್ನ ಕಾರ್ಯಕ್ರಮಗಳಿಗೂ ಗಾಂಧೀಜೀಯವರ ಧೋರಣೆಗೂ ಸಂಘರ್ಷ ಉಂಟಾದೀತೆಂಬ ಭಯದಿಂದ ನಾನು ತಟಸ್ಥನಾಗಿ ಉಳಿದೆನು. ರಾಜಕೋಟೆಯಲ್ಲಿ ಮಹಾತ್ಮರು ಉಪಯೋಗಿಸಿದ ಮಾರ್ಗಗಳು ನನಗೆ ಇನ್ನೂ ತಿಳಿದಿಲ್ಲ.

ಮಹಾತ್ಮರಲ್ಲಿ ಭಕ್ತಿ

ಗಾಂಧೀಜೀಯವರ ತತ್ವ ಹಾಗೂ ಕಾರ್ಯಕ್ರಮಗಳಲ್ಲಿ ನನಗೆ ಅವಿಚಲವಾದ ಭಕ್ತಿಯಿದೆ. ಆದರು ಕಾಂಗ್ರೆಸಿಗೆ ಇತ್ತೀಚಿನ ತಪ್ಪುಗಳಾವವೂ ಸರ್ವಜನಾದರಣೀಯರಾದ ಪೂಜ್ಯ ಗಾಂಧೀಜೀಯವರು ನಮ್ಮ ಪವಿತ್ರತೆಯನ್ನು ರೂಪಿಸುವ ಕಾರ್ಯದಲ್ಲಿ ಇನ್ನೂ ಪ್ರಧಾನ ಪಾತ್ರವಹಿಸಿ ಕಾರ್ಯ ಮಾಡಬೇಕಿದೆ. ಆದ್ದರಿಂದ ಭಾರತ ಮಾತೆಯು ತನ್ನ ಸುಪುತ್ರನಾದ ಅವರನ್ನು ದೀರ್ಘಕಾಲ ಇಟ್ಟುಕೊಳ್ಳುವಷ್ಟು ಪುಣ್ಯಶಾಲಿಯಾಗಲಿ.

ವರ್ತಮಾನ ಸಂಗ್ರಹ.

ಒಳದೇಶ.

ಮೈಸೂರು ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಮು. ಮುಕ್ಕಾಟಿರ ಯಂ. ಪೂವಯ್ಯನವರು ಮೋಡೆಲಿಂಗ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿ ಆಚ್ಚೆರು ವರ್ಷದ ತರಗತಿಗೆ ಪ್ರಮೋಷನ್ ಪಡೆದರುವರಾಗಿ ತಿಳಿಯಬರುತ್ತದೆ.

ಮೈಸೂರು ಯೂನಿವರ್ಸಿಟಿಯಲ್ಲಿ ವ್ಯಾಸಂಗಮಾಡುತ್ತಿದ್ದ ಶ್ರೀ ಬಿದ್ದಾಟಂಡ ಯಂ. ತಿಮ್ಮಯ್ಯನವರು ಬಿ. ಎಸ್. ಸಿ. ಪರೀಕ್ಷೆಯಲ್ಲಿ ಪಾಸಾಗಿರುವರಾಗಿ ತಿಳಿಸಲು ಸಂತೋಷಪಡುತ್ತೇವೆ.

ಮಡಿಕೇರಿ.

ಇಲ್ಲಿ ಕಾಫಿ ಖಂಡಿಗೆ ರೂ. 125 ಯಾಲಕ್ಕಿ ಮಣಕ್ಕೆ ರೂ. 24 ಕ್ರಯವಿರುತ್ತೆ.

ಇಲ್ಲಿಯ ಸೆಂಟ್ರಲ್ ಹೈಸ್ಕೂಲಿನ 5 ನೇ ಫಾರಂನಲ್ಲಿ ಓದುತ್ತಿದ್ದ ಶ್ರೀ ಪಾರುವಂಗಡ ಚಂಗಪ್ಪನವರ ಪುತ್ರ ಐಯ್ಯಪ್ಪನೆಂಬ ವಿದ್ಯಾರ್ಥಿಯು ತಾನು ಪರೀಕ್ಷೆಯಲ್ಲಿ ಪಾಸಾಗಲಿಲ್ಲವೆಂಬ ಕಾರಣ ಕಳೆದ ತಾರೀಕು 28 ನೇ ಸಾಯಂಕಾಲ ತಮ್ಮ ತಿಂಮತಿ ಮನೆ ಬಳಿ ಗುಂಡು ಹೊಡೆದುಕೊಂಡು ಆತ್ಮಹತ್ಯೆಮಾಡಿಕೊಂಡನೆಂದು ತಿಳಿಸಲು ವಿಷಾದಿಸುತ್ತೇವೆ.

ಡಿ. ಬೋರ್ಡಿನ ಶಾಲಾ ಕಮಿಟಿಯವರು ಕೆಲವು ನಿರ್ದಿಷ್ಟ ಶಾಲೆಗಳ ಸಿಬ್ಬಂದಿ ಬದಲಾವಣೆಯ ಯೋಜನೆಯನ್ನು ಆಲೋಚಿಸಲು ಕಳೆದ ವಾರ ಕಗ್ಗಟ್ಟುನಾಡು ಮತ್ತು ಎಡೆನಾಲ್ಕುನಾಡು ತಾಲೋಕುಗಳಲ್ಲಿಯೂ, ಈ ವಾರ ಫ್ರೇಜರ್‌ಪೇಟೆ, ಮತ್ತು ಶನಿವಾರಸಂತೆ ತಾಲೋಕುಗಳಲ್ಲಿಯೂ ಕೆಲವು ಶಾಲೆಗಳನ್ನು ಸಂದರ್ಶಿಸಿದರು. ಬರುವ ವಾರ ಭಾಗಮಂಡಲ ಮತ್ತು ನಾಪೋಕ್ಲುನಾಡು ತಾಲೋಕುಗಳ ಶಾಲೆಗಳನ್ನು ಸಂದರ್ಶಿಸುವರೆಂದು ತಿಳಿಯಬರುತ್ತದೆ.

ಕಳೆದ ಏಪ್ರಿಲ್‌ನಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯ ಫಲಿತಾಂಶ:-

ಹೈಸ್ಕೂಲಿನಲ್ಲಿ ಕೂತ 32 ವಿದ್ಯಾರ್ಥಿಗಳಲ್ಲಿ ಶ್ರೀಗಳಾದ 1. ಕೋದಿರ ಯು. ಅಪ್ಪಚ್ಚು, 2. ಗುಮ್ಮಟ್ಟಿರ ಕೆ. ಮುತ್ತಣ್ಣ 3. ಟಿ. ಎ. ರಹಮಾನ್, 4. ಮಾಡೆರ ಬಿ. ತಮ್ಮಯ್ಯ, 5. ಚೆಪ್ಪುಡೀರ ಎಸ್. ಚಿಣ್ಣಪ್ಪ, 6. ಮಾಳೆಯಂಡ ಎಸ್. ಮುತ್ತಪ್ಪ ಮತ್ತು 7. ಕುಕ್ಕೆಮನೆ ಯಂ. ವಂಕಟರಮಣಯ್ಯ ಇವರುಗಳೂ, ಇಲ್ಲಿಯ ಹುಡುಗಿಯರ ಹೈಸ್ಕೂಲಿನಲ್ಲಿ ಕೂತ ಒಂಭತ್ತು ವಿದ್ಯಾರ್ಥಿನಿಯರ ಪೈಕಿ ಶ್ರೀಮತಿಯರಾದ 1. ಪಾಂಡಂಡ ಸಿ. ಕಾಳಮ್ಮ 2. ಕೋದಂಡ ಎನ್. ಕಮಲ 3. ಕೋಪಾಂಡ ಎಸ್. ಸೀತಮ್ಮ, 4. ಯಂ. ಪಿ. ಶಾರದಾಂಬಾ 5. ಕಾಯಪಂಡ ಡಿ. ಅಮ್ಮಕ್ಕ 6. ಬಿಟ್ಟಿಯಂಡ ಕೆ. ಪೂವಮ್ಮ ಮತ್ತು 7. ಕೋದಂಡ. ಯಂ. ಬೋಜಮ್ಮ ಇವರುಗಳೂ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ. ಇವರಿಗೆಲ್ಲಾ ನಮ್ಮ ಅಭಿವಂದನೆಗಳಿವೆ.

ವೀರಾಜಪೇಟೆ.

ಇಲ್ಲಿ ಬತ್ತ ಗಾಡಿಗೆ ರೂ. 44 ಕ್ರಯವಿರುವದಾಗಿ ತಿಳಿಯುತ್ತೇವೆ.

ಇಲ್ಲಿಯ ಹೈಸ್ಕೂಲಿನಲ್ಲಿ ಸ್ಕೂಲ್ ಫೈನಲ್ ಪರೀಕ್ಷೆಗೆ ಕೂತ 38 ವಿದ್ಯಾರ್ಥಿಗಳಲ್ಲಿ 18 ವಿದ್ಯಾರ್ಥಿಗಳು ಪಾಸಾಗಿರುವರೆಂದು ತಿಳಿಯುತ್ತೇವೆ. ಇವರ ಹೆಸರುಗಳನ್ನು ಮುಂದಿನ ವಾರ ಕೊಡಲಾಗುವದು.

ಸೋಮವಾರಪೇಟೆ.

ಇಲ್ಲಿ ಡಿ. ಬೋರ್ಡಿನ ಆಶ್ರಯದಲ್ಲಿ ತಾರೀಕು 27 ನೇ ಶನಿವಾರದಿಂದ ವಾರಕೊಮ್ಮೆ ಅಂದರೆ ಸಂತೆ ದಿನ ಔಷಧಿ ಕೊಡುವ ಹಂಗಾಮಿ ಆಸ್ಪತ್ರೆಯು ತೆರೆಯಲ್ಪಟ್ಟಿರುವದು.

ಶನಿವಾರಸಂತೆ.

ಇಲ್ಲಿ ಮಳೆಯ ಅಭಾವದಿಂದ ಜನ ಜಾನುವಾರಗಳಿಗೆ ಕುಡಿಯಲಿಕ್ಕೆ ನೀರಿಲ್ಲದೆಯೂ, ಬಿಸಿಲಿನ ತಾಪದಿಂದ ಅನೇಕ ವಿಧದ ಕಾಯಿಲೆಗಳು ಪಸರಿಸಿಯೂ ಜನರು ತೊಂದರೆಗೀಡಾಗಿರುವರೆಂದು ವಾರ್ತೆ. ಅಲ್ಲದೆ ಇಡೀ ಪ್ರಾಂತದಲ್ಲೇ ಮಳೆಯಿಲ್ಲದ್ದರಿಂದ ಹಾಹಾಕಾರವುಂಟಾಗಿದೆ. ಈಗಾಗಲೇ ಕೆಲವರಲ್ಲಿ ಈ ವರ್ಷ ಕ್ಷಾಮ ತಲೆದೋರಬಹುದೋ ಎಂಬ ಸಂದೇಹವೂ ಬಂದಿದೆ.

ಗಜೆಟ್.

ದೀರ್ಘ ಕಾಲದ ಸಾಲ ಬೇಕಾಗಿರುವ ವ್ಯವಸಾಯಗಾರರು ಇದೇ ಜುಲೈ 31 ರ ವರೆಗೆ ಕಮಿಷನರ ಆಫೀಸಿಗೆ ಅರ್ಜಿ ಮಾಡಿಕೊಳ್ಳಬಹುದೆಂತಲೂ, ಅದಕ್ಕೆ ಬೇಕಾದ ಅರ್ಜಿ ಫಾರಂಗಳು ಆಯಾಯ ನಾಡಿನ ಪಾರುಪತ್ತೆಗಾರರಿಂದ ಮುಫತ್ತಾಗಿ ಸಿಗುವದೆಂದೂ, ಈ ವರ್ಷಕ್ಕಾಗಿ ಇಟ್ಟ ಹಣ ಮುಗಿದ ನಂತರ ಬರುವ ಅರ್ಜಿಗಳನ್ನು ಅಂಗೀಕರಿಸಲಾಗುವದಿಲ್ಲವಾಗಿಯೂ ಪ್ರಕಟಿಸಲಾಗಿದೆ.

ಡಿಸ್ಟ್ರಿಕ್ಟ್ ಬೋರ್ಡಿನ ಮತ್ತು ಮುನಿಸಿಪಾಲಿಟಿಗಳ ಅಧೀನದಲ್ಲಿರುವ ಶಾಲೆಗಳಲ್ಲಿ ತಾ. 1-4-39 ರಿಂದ ಹುಡುಗಿಯರಿಗೆ ಎಂಟನೇ ತರಗತಿ ವರೆಗೆ ಸ್ಕೂಲ್ ಫೀಜು ಮಾಫಿ ಮಾಡಿದೆಯೆಂದೂ, ಹೈಸ್ಕೂಲುಗಳಲ್ಲಿ ಹುಡುಗಿಯರು ಮತ್ತು ಮುಸ್ಲಿಂ ವಿದ್ಯಾರ್ಥಿಗಳು ಅರ್ಧ ಫೀಜು ಕೊಡುವದೆಂದೂ ಸರಕಾರದವರು ಪ್ರಕಟಿಸಿರುವರು.

ಹಿಂದೂದೇಶ.

ಇದೇ ಕಳೆದ ಮೇ ತಾ. 20ಕ್ಕೆ ಅಂತ್ಯವಾಗುವ ವಾರದಲ್ಲಿ ಬೊಂಬಾಯಿಯಿಂದ ಅರ್ಧ ಕೋಟಿ ಬೆಲೆ ಬಾಳುವ ಬಂಗಾರ, ಪರದೇಶಗಳಿಗೆ ಸಾಗಿ ಹೋಗಿದೆ.

ಮದ್ರಾಸ್ ಸಂಸ್ಥಾನದಲ್ಲಿ ಹಿಂದೀ ವಿರೋಧ ಚಳುವಳಿಯಲ್ಲಿ ಭಾಗವಹಿಸಿ ಇನ್ನೂ ಜೈಲಲ್ಲಿ ಇರುವವರನ್ನು ನಮ್ಮದೇ ಸರ್ಕಾರವು ಬಿಡುಗಡೆ ಮಾಡಲಿರುವುದಾಗಿ ವಾರ್ತೆ.

ಬಿಹಾರ್ ಸರ್ಕಾರವು ಇದೇ ಬರುವ ಜುಲೈ ಮಧ್ಯದಲ್ಲಿ ರಾಂಚಿಯಲ್ಲಿ ಒಂದು ಮಿಲಿಟರಿ ಟ್ರೈನಿಂಗ್ ಶಾಲೆಯನ್ನು ಸ್ಥಾಪಿಸಲು ನಿರ್ಧರಿಸಿದೆ. ಸ್ವತಂತ್ರ ಆಡಳಿತದ ಪ್ರಾಂತಗಳಲ್ಲಿ ಇದೇ ಮೊದಲನೇ ಮಿಲಿಟರಿ ಶಾಲೆ.

ಸಿಲೋನಿನ ಕೌನ್ಸಿಲಿನಲ್ಲಿ ಸರ್ಕಾರಿ ಸರ್ವಿಸಿನಲ್ಲಿರುವ ಸಿಲೋನ್ ನಿವಾಸಿಗಳಲ್ಲದ ಉದ್ಯೋಗಿಗಳನ್ನು ಸ್ವದೇಶಕ್ಕೆ ಕಳುಹಿಸುವ ಸಂಬಂಧ ಅವರ ಗ್ರೇಚುವಿಟಿ ಮತ್ತು ಟ್ರೈವೆಲ್ ಚಾರ್ಜು ಇತ್ಯಾದಿಗಳಿಗಾಗಿ ೫ ಲಕ್ಷ ರೂ. ಗಳ ಗ್ರಾಂಟು ಮಂಜೂರಾಗಿದೆ.

ಜೈಲು ಸುಧಾರಣೆಗಳ ಪರ್ಯಾಲೋಚನೆಗಾಗಿ ಲಕ್ನೋವಿನಲ್ಲಿ ಮುಂದಿನ ಅಕ್ಟೋಬರಿನ ಸುಮಾರಿಗೆ ಒಂದು ಕಾನ್ಫರೆನ್ಸ್ ಶ್ರೀ. ಭುಲಾಬಾಯ್ ದೇಸಾಯಿಯವರ ಅಧ್ಯಕ್ಷತೆಯಲ್ಲಿ ನೆರೆಯಲಿದೆ. ಕಾಂಗ್ರೆಸ್ ಸರ್ಕಾರಗಳೂ ಇದಕ್ಕೆ ಬೆಂಬಲವೀಯಬೇಕೆಂದು ಅರಿಕೆ ಮಾಡಿಕೊಳಲಾಗಿದೆ.

ಇಂದೂರಿನ ಮಹಾರಾಜರು 1939-40 ರಲ್ಲಿ ಸುಮಾರು 5,48,328 ರೂಪಾಯಿಗಳನ್ನು ತಮ್ಮ ಪ್ರಜೆಗಳ ಕಂದಾಯದಲ್ಲಿ ಮಾಫಿ ಬಿಟ್ಟಿದ್ದಾರೆ. ಅಲ್ಲದೆ ಪಂಜಾಬ್ ಸರ್ಕಾರದವರೂ ರಬ್ಬಿನ ಕೃಷಿಯ ಉತ್ಪತ್ತಿಯ ಬೆಲೆ ಇಳಿದ ಕಾರಣ, ಒಟ್ಟಿಗೆ 36,52,428 ರೂಪಾಯಿಗಳನ್ನು ಕಂದಾಯದ ಮಾಫಿ ಎಂದು ಪ್ರಕಟಿಸಿದ್ದಾರೆ.

ಇಟೆಲಿಯವರು ಇತೋಪಿಯಾ ರಾಜ್ಯವನ್ನು ಗೆದ್ದುಕೊಂಡ ಈಚೆಗೆ ಮಾಜಿ ಚಕ್ರವರ್ತಿ ಹೈಲ್ ಸೆಲಾಸಿಯವರು ಇಂಗ್ಲಾಂಡಿನಲ್ಲಿ ಕಾಲಯಾಪನೆ ಮಾಡುತ್ತಿದ್ದರು. ಈಗ ಅವರು ಸಿಲೋನ್ (ಲಂಕಾ) ದ್ವೀಪಕ್ಕೆ ಬಂದು ಅಲ್ಲೇ ಇದ್ದು ಬಿಡುತ್ತಾರೆಂದೂ ಯೋಗಶಾಸ್ತ್ರವನ್ನು ಅಭ್ಯಾಸ ಮಾಡುವುದರಲ್ಲಿ ತೊಡಗುತ್ತಾರೆಂದೂ ತಿಳಿಯುತ್ತದೆ. ಕೊಲೊಂಬೊ ನಗರದಲ್ಲಿ ಬೇಗ ಕೂಟ ನಡೆಯುವುದರಲ್ಲಿ ಮಾಜಿ ಚಕ್ರವರ್ತಿಯವರು ಆ ಸಭೆಯ ಅಧ್ಯಕ್ಷತೆಯನ್ನು ವಹಿಸುತ್ತಾರೆಂದು ಸಿಲೋನಿನ ಮು. ಪರಮಾನಂದ ಸ್ವಿಯಪರ್ತಿಯವರು ತಿಳಿಸಿರುವರು.

ರಾಜಕೋಟೆಯ ವ್ಯವಹಾರವು ಗಡಿಬಿಡಿಯಿಲ್ಲದೆ ಸಾವಧಾನದಿಂದ ಸಾಗುತ್ತಿದೆ. ಶಾಂತ ಮಾರ್ಗದಿಂದ ಕೆಲಸ ನಡೆಯುತ್ತಿದೆ. ಗಾಂಧೀಜೀಯವರು ಪರಿಷತ್ತಿನ ಕೆಲಸಗಾರರೊಡನೆ ಮಾತು ಕತೆ ನಡೆಸಿ ಆ ಕೆಲಸಗಾರರು ಸುಧಾರಣೆಯ ಸಮಿತಿಯ ಮುಂದೆ ತಕ್ಕ ರುಜುವಾತುಗಳನ್ನು ಹಾಜರು ಮಾಡಬೇಕೆಂದೂ, ತಮ್ಮ ಅಭಿಪ್ರಾಯವನ್ನು ಪ್ರಕಟಿಸಬೇಕೆಂದೂ ಜನಗಳ ಕನಿಷ್ಟ ಮಿತಿಯ ಕೇಳಿಕೆಗಳನ್ನು ಮುಂದಿಡಬೇಕೆಂದೂ ಉಪದೇಶಿಸಿರುವದಾಗಿ ವಾರ್ತೆ. ಗಾಂಧೀಜೀಯವರು ಜೂನ್ ತಾ. 1ಕ್ಕೆ ರಾಜಕೋಟೆಯಿಂದ ಹೊರಡಲಿರುವರು.

ಭಾವನಗರ ಸಂಸ್ಥಾನದ ಶ್ರೀಮನ್ಮಹಾರಾಜರವರ ವರ್ಧಂತಿ ಮಹೋತ್ಸವವು ಕಳೆದ ಮೇ ತಾ. 21ರಲ್ಲಿ ನಡೆಯಿತು. ಆ ದಿನ ಮಹಾರಾಜರವರು ಪ್ರೌಢ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ತಿಂಗಳಿಗೆ 605 ರೂಪಾಯಿನ 25 ವಿದ್ಯಾರ್ಥಿ ವೇತನಗಳನ್ನು ದಯಪಾಲಿಸಿದರು. ಅದಲ್ಲದೆ ಕೇವಲ ನಿರ್ಗತಿಕರಾದ ನಾನಾ ಜಾತಿಯ 28 ಮಂದಿ ವಿಧವೆಯರಿಗೆ ಮಾಸಾಶನವನ್ನು ಕೊಡುವಂತೆ ಆಪ್ಪಣೆ ಮಾಡಿದರು. ಬಡವರ ವಿಷಯದಲ್ಲಿ ರಾಜರವರ ಈ ಹಿತಚಿಂತನೆಯು ಶ್ಲಾಘನೀಯವಾಗಿದೆ.

ಅಖಿಲಭಾರತ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯವರಾದ ಶ್ರೀಯುತ ಜೆ. ಬಿ. ಕೃಪಾಲಿನಿಯವರು ಅಲ್ಲಹಾಬಾದ್ ಸ್ವದೇಶಿ ಲೀಗಿನ ಸಮ್ಮೇಳನದಲ್ಲಿ ಭಾಷಣ ಮಾಡುತ್ತಾ ಒಲವನ್ನಿದವರು ಗಾಂಧಿ ತತ್ವವನ್ನರಿತು ಅವರ ಸೂತ್ರಚಾಲನೆಯಂತೆ ನಡೆಯುತ್ತಿರುವದು ಬಹು ಯೋಗ್ಯವೆಂದೂ, ಜನತೆಯಲ್ಲಿ ಮಹಾತ್ಮರಂಥಾ ಅಖಂಡ ಮುಂದಾಳು ಬೇರೊಬ್ಬನಿಲ್ಲವೆಂದೂ ಅವರ ಮಹಾತ್ಮೆಯನ್ನರಿಯದವರು ಮಾತ್ರ ಮನ ಬಂದಂತೆ ಮಾತಾಡುವರಲ್ಲದೆ ಅನ್ಯಥಾ ಇಲ್ಲವೆಂದೂ, ಇಂದು ಸುಭಾಷರು ಗಾಂಧಿ ತತ್ವಾನುಯಾಯಿಗಳಾದರೆ ಬಾಬು ರಾಜೇಂದ್ರರು ಅಧ್ಯಕ್ಷತನಕ್ಕೆ ರಾಜಿನಾಮೆಯಿತ್ತು ಸುಭಾಷರಿಗೆ ಬಿಟ್ಟು ಕೊಡಲು ತಯಾರಿರುವರೆಂದು ಹೇಳಿದರು.

ಮಾರಾಟಕ್ಕೆ ಇದೆ.

ಮಡಿಕೇರಿ ರಾಜಾಸೀಟ್ ಬಳಿ ವಾಸಕ್ಕೆ ಲಾಯಕ್ಕಾದ ಒಂದು ಮನೆ, ಇದಕ್ಕೆ ಸೇರಿದ ಹೊರ ಮನೆ, ಅಡಿಗೆ ಮನೆ ವಗೈರೆ ಮತ್ತು ಈ ಮನೆಗೆ ಸೇರಿದ ಹಾಲಿ ತಿಂಗಳಿಗೆ 10 ರೂಪಾಯಿ ಬಾಡಿಗೆ ಬರುವ ಒಂದು ಟ್ರೈಸ್, ಸಾಧಾರಣ ಎರಡು ಎಕರೆಯಷ್ಟು ಮನೆಗೆ ಸೇರಿದ ಜಾಗ ಸಹ ಮಾರಾಟಕ್ಕಿದೆ. ಇಷ್ಟವುಳ್ಳವರು ಮನೆಯನ್ನು ನೋಡಿ ಕಮ್ಮಿ ಬೆಲೆಯನ್ನು ತಿಳಿಸಬಹುದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

"X"

C/o. Editor,
"Kodagu" Ltd.,
4-1 Mercara.

Notice.

An auction of gold jewels pledged at the Travancore National & Quilon Bank Ltd., (In Liquidation) Mercara, will be held on the 9th June 1939 at 11 a. m. at the premises of the Bank.

ನೋಟೀಸು.

ಟ್ರಾವಂಕೂರ್ ನ್ಯಾಶನಲ್ ಮತ್ತು ಕ್ವಿಲಾನ್ ಬ್ಯಾಂಕ್ ಲಿಮಿಟೆಡ್, ಮಡಿಕೇರಿ ಶಾಖೆಯಲ್ಲಿ ಅಡವು ಇಡಲ್ಪಟ್ಟಿದ್ದ ಚಿನ್ನದ ಒಡವೆಗಳು ಜೂನ್ ತಾ. 9ರಲ್ಲಿ ಬೆಳಗ್ಯೆ 11 ಗಂಟೆಗೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುವವು.

ಕೆ. ಎ. ಚಿಟ್ಟಿಯಣ್ಣ,
2-1] ಆಫೀಶಿಯಲ್ ಲಿಕ್ವಿಡೇಟರಾಗಿ.

ಬಲಿದಾನ.

ಭಕ್ತ ಶಿಖಾಮಣಿಗಳೇ,

ನೋ: ತಾ. 26-5-39ರಲ್ಲು ಮೈತಾಡಿ ಗ್ರಾಮದಲ್ಲಿ ಪ್ರಖ್ಯಾತಿಯಲ್ಲಿರುವ 'ಮಂದತಮ್ಮ'ನವರ (ಚಾಮುಂಡೇಶ್ವರಿ ಮತ್ತು ಭದ್ರಕಾಳಿ) ಜಾತ್ರೆಯು ನಡೆದ ಸಮಯದಲ್ಲಿ ಸದರಿ ಮೈತಾಡಿ ಗ್ರಾಮದ ಅಯಿರರ ಪೊನ್ನ (ಸ್ಕೂಲ್ ಮಾಸ್ಟರು) ನವರು ತನ್ನ ಯಾವುದೋ ಕಷ್ಟ ಪರಿಹಾರಕ್ಕಾಗಿ ಹರಕೆ ಮಾಡಿಕೊಂಡಿದ್ದ ಒಂದು ಆಡನ್ನು ಆಹುತಿ ಕೊಡಲು ತಂದಿದ್ದರು. ಸದರಿ ಆಡನ್ನು ತಂದು ಒಂದು ತಿಂಗಳಾಗಾಯಿತು ತಾನು ಪೋಷಣೆ ಮಾಡುತ್ತಿದ್ದ ಪ್ರೀತಿಗಾಗಿ, ಆ ಬಡ ಪ್ರಾಣಿಯು ತನ್ನ ಮಕ್ಕಳಂತೆ ತನ್ನೊಂದಿಗೂ, ತನ್ನ ಮನೆಯವರೊಂದಿಗೂ ಅತೀ ಮಮತೆಯಿಂದ ತಿರುಗಾಡುತ್ತಿದ್ದ ಅದರ ಗುಣವನ್ನು ಕಂಡು ಸದರಿಯವರಿಗೆ ಮನ ಕರಗಿ ಹ್ಯಾಗಾದರೂ ದೇವರಿಂದ ಬೇಡಿ ಅದಕ್ಕೆ ಜೀವದಾನ ಕೊಡಿಸಬೇಕೆಂಬ ಕುತೂಹಲವುಂಟಾಗಿತ್ತಂತೆ. ಅಂತೆಯೇ ಮೇಲ್ಕಂಡ ಮಹತಾಯಿಯ ದೇವಸ್ಥಾನದಲ್ಲಿ ಹಲವು ಊರು, ನಾಡುಗಳಿಂದ ಬಂದ ಭಕ್ತರ ರೂಬ್ರೂಬು, ಮೈ ಹಿಡಿದು ಬಂದ ಮಹ ತಾಯಿಯಲ್ಲಿ ತನ್ನ ಹವಾಲನ್ನು ಹೇಳಿಕೊಂಡರು. ಸದರಿ ಆಡನ್ನು ಹರಕೆ ಕಡಿದು ಜೀವ ಹಿಂಸೆ ಮಾಡುವುದಕ್ಕೆ ತನ್ನ ಮನಸು ಒಡಂಬಡುವುದಿಲ್ಲನಂತಲೂ, ಅದರ ಬದಲಿಗ ಮಹತಾಯಿಯ ಅಪ್ಪಣೆಯಾದರ ಭಂಡಾರಕ್ಕೆ ಹಣ ಹಾಕಲು ತಯಾರಾಗಿದ್ದೇನೆಂತಲೂ ಭಕ್ತಿಪೂರ್ವಕವಾಗಿ ಕೇಳಿಕೊಂಡದ್ದಕ್ಕೆ ಮಹಾ ಕನಿಕರವುಳ್ಳ ಸರ್ವ ಜೀವ ರಾಶಿಗಳನ್ನು ಸೃಷ್ಟಿಸಿ ಪೋಷಿಸುತಿ ರುವ ಮಹಾ ಪಾರ್ವತಿ ಅವತಾರ ತಾಳಿದ ಚಾಮುಂಡೇಶ್ವರಿಯು ತನ್ನ ಭಕ್ತನ ಕೋರಿಕೆಯನ್ನು ಅತ್ಯಾನಂದದಿಂದ ನೆರವೇರಿಸಿ, ಹರಿಕೆ ಕಡಿಯಲು ತಂದ ಆಡನ್ನು ಮರಳಿ ಆಶೀರ್ವದಿಸಿ ಜೀವದಾನ ಮಾಡಿ ಕಳುಹಿಸಿ, ಭಕ್ತನ ಮನಸಿಗೆ ತೋರಿದಷ್ಟು ಹಣವನ್ನು ಮಾತ್ರ ಭಂಡಾರಕ್ಕೆ ಹಾಕಿಕೊಳ್ಳಲು ಅನುಮತಿ ಇತ್ತಳು. ಭಕ್ತನಾದ ಪೊನ್ನಮಾಸ್ಟರರ ಆನಂದವು ಹ್ಯಾಗಾಗಿರಬಹುದೆಂಬದನ್ನೂ ಮತ್ತು ದೇವಿಯ ಅನುಗ್ರಹವನ್ನೂ ವಿಳಂಬ ಬರೆಯುವ ಬದಲು ವಾಚಕರೇ ಊಹಿಸಿಕೊಳ್ಳಿ. ಮೇಲಿನ ಭಕ್ತರು ಆಡಿನ ಕ್ರಯದಷ್ಟು ಹಣವನ್ನು ಸದರಿ ಮಹತಾಯಿಯ ಭಂಡಾರಕ್ಕೆ ಹಾಕಿದರು.

ಈ ಮೇಲ್ಕಂಡ ಉದಾಹರಣೆಯು ಬರೀ ಮೈತಾಡಿ ಗ್ರಾಮಕ್ಕೆ ಮಾತ್ರ ಆಗಿರದೆ, ಎಲ್ಲಿ, ಯಾವ ದೇವಸ್ಥಾನದಲ್ಲಿ ಸಾಧು ಮೂಕ ಪ್ರಾಣಿಗಳನ್ನು ಕೊಂದು ಜೀವಹಿಂಸೆ ನಡೆಯುತ್ತಿರುವದೋ ಅಂಥಾ ಎಲ್ಲಾ ಸ್ಥಳದ ಭಕ್ತರಿಗೂ ಅನ್ವಯಿಸುತ್ತದೆಂಬುದನ್ನು ಯಾವ ಭಕ್ತರೂ ಮರೆಯದಿರಲಿ. ಯಾವ ದೇವರು ಎಲ್ಲಾ ಜೀವ ರಾಶಿಗಳು ತನ್ನ ಮಕ್ಕಳಂತಲೇ ಸೃಷ್ಟಿಸಿ, ರಕ್ಷಿಸುತ್ತಿರುವಾಗ ಅಜ್ಞಾನದಿಂದ ಕೋಳಿ, ಕುರಿ, ಆಡು ಮತ್ತು ಕೋಣಗಳನ್ನು ದೇವರ ಹೆಸರು ಹೇಳಿ ಕಡಿದು ಕೊಂದು ಮರಳಿ ಪಾಪವನ್ನು ಗಳಿಸುವ ಮನಸು ಯಾರಿಗೂ ಬರದಿರಲಿ. ದೇವರು ಭಕ್ತರು ಒಪ್ಪಿಸುವ ಜೀವಹಿಂಸೆಯಿಲ್ಲದ ಅದ್ಯಾವ ತರದ ಪೂಜೆ ಪುನಸ್ಕಾರಗಳಿಗೂ, ನೈವೇದ್ಯಗಳಿಗೂ ತೃಪ್ತಿ ಪಟ್ಟು ಭಕ್ತರನ್ನು ಉದ್ಧಾರ ಮಾಡುವದು ಖಂಡಿತವಲ್ಲದೆ, ಇಂಥಾ ಜೀವ ಹಿಂಸೆಯನ್ನು ಎಂದೂ ದೇವರು ಸಹಿಸಲಿಕ್ಕಿಲ್ಲವೆಂಬದು ಎಲ್ಲರ ಮನಸಿನಲ್ಲಿ ಬೆಳಗುತ್ತಿರಲಿ. ಇದೇ ಜ್ಞಾನದ ಮಹಿಮೆ. ಜೀವದಾನವನ್ನು ಕೊಟ್ಟು, ಆ ಬಡ ಮೂಕ ಪ್ರಾಣಿಯನ್ನು ಇನ್ನೂ ಕೆಲವು ವರ್ಷ ಬದುಕುವಂತೆ ಆಶೀರ್ವದಿಸಿದ ಆ ಮಹಾ ತಾಯಿಗೆ ಭಕ್ತರಾಗಿ ನಾವೆಲ್ಲರೂ ಮೇಲಿನ ಉದಾಹರಣೆಯನ್ನು ಹಿಂಬಾಲಿಸುವ.

ಕೊಡಗಿನಲ್ಲಿ ಅದೆಷ್ಟೋ ದೇವಸ್ಥಾನಗಳಲ್ಲಿ ಕೋಣಗಳನ್ನು ಆಹುತಿ ಕೊಡುತಿದ್ದದ್ದನ್ನು ಅನೇಕ ಭಕ್ತ ಶಿಖಾಮಣಿಗಳು ತಮ್ಮ ಪ್ರಯತ್ನದಿಂದಲೂ, ದೇವರ ದಯದಿಂದಲೂ ನಿಲ್ಲಿಸಿರುವಾಗ ಇನ್ನು ಮುಂದೆ ಕೋಳಿ, ಕುರಿ, ಆಡು ಮತ್ತು ಹಂದಿಗಳನ್ನು ಬಲಿಕೊಟ್ಟು ದೇವರ 'ದೇವಸ್ಥಾನ'ವನ್ನು ಅಶುದ್ಧಪಡಿಸುವದನ್ನೂ, ದೇವರು ಪ್ರಾಣಿಭಕ್ಷಕರೆಂಬ ಅಪವಾದವನ್ನೂ ಸಹ ತಪ್ಪಿಸಲು ಭಕ್ತ ಮಹನೀಯರು ಪ್ರಯತ್ನಪಟ್ಟು, ನಿಜವಾದ ದೇವರ ಪೂಜೆಯನ್ನು ನಡಿಸುತ್ತಾ ಪ್ರಸಾದ ಹೊಂದಿಕೊಂಡು ಪರಮಾನಂದವನ್ನು ಪಡೆಯಲು ಪ್ರಯತ್ನ ಮಾಡಬೇಕಲ್ಲದೆ ಬಡಕಲು ಪ್ರಾಣಿಗಳನ್ನು ದೇವಸ್ಥಾನದಲ್ಲಿ ಕೊಂದು, ತಿಂದು ತಾನೂ ತನ್ನ ಸಂಸಾರವೂ ಸಹ ಹಲವು ವ್ಯಾಧಿಗಳಿಗೂ, ಪಾಪಕ್ಕೂ ತುತ್ತಾಗದಿರಲಿ.

ಪತ್ರವ್ಯವಹಾರಕ್ಕೆ ಆಸ್ಪದವಿಲ್ಲ.

'ಒಬ್ಬ ಭಕ್ತ.'

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦೦—

ಕೊಡವರಲ್ಲಿ ಸಮಾಜ ಸುಧಾರಣೆಯ ಪರಿಣಾಮ.

(ಬಿ. ಯಂ. ಕಾರ್ಯಪ್ಪ ಎ. ಎಲ್. ಸಿ.)

ಈ ವಿಷಯದಲ್ಲಿ ಬರೆದ ನನ್ನ ಲೇಖನದ ಮೇಲೆ ಮಂಗಳೂರು 'ಸ್ವತಂತ್ರ ಭಾರತ'ದ ಸಂಪಾದಕರಾದ ಶ್ರೀ. ಬೋಳಕರಂಡ ಕಾರ್ಯಪ್ಪನವರ ಟೀಕೆಯನ್ನು ಓದಿ ನೋಡಿ, ಸಮಾಜದಲ್ಲಿನ ಈಗಿನ ನಡವಳಿಕೆಗಳು ದೇಶದ ಮುಂದಣ ಅಭಿವೃದ್ಧಿಗೆ ಸಹಾಯಕರವಾಗಿಲ್ಲವೆಂಬ ಅವರ ಅಭಿಪ್ರಾಯಕ್ಕೆ ನಾನು ಅವರನ್ನು ವಂದಿಸುವೆನು. ಆದರೆ ತಪ್ಪನ್ನು ಯುವಕ ಕಾರ್ಯಪ್ಪನವರು ಹಿರಿಯರೆಂದು ವಾದಿಸುವದರಲ್ಲು ಸತ್ಯವೂ, ಧರ್ಮವೂ, ನ್ಯಾಯವೂ ಇದೆ ಎಂದು ನಾನು ಒಪ್ಪದೆ ಇರಲು ವಿಧಿ ಇಲ್ಲ. ನನಗೆ ಕಾರ್ಯಪ್ಪ (ಬೋಳರಂಡ) ನವರ ಪ್ರಾಯದ ಮಕ್ಕಳಿರುವದು ಅವರಿಗೆ ತಿಳಿದಿರುವದು ನನ್ನ ಭಾಗ್ಯವೆ! 'ಕೊಡವ ಯುವಕರ ಮೇಲೆ ಇವರಿಗೆ ನಿಷ್ಕಾರಣವಾದ ವಕ್ರ ದೃಷ್ಟಿ ಇದೆ ಎಂಬುವುದು ನನ್ನ ಹೊಸ ಅನುಭವವಲ್ಲ. ಈ ವಕ್ರ ದೃಷ್ಟಿಯಿಂದ ಇವರ ನೋಟವು ಮುಸುಕಿ ಹೋಗಿದೆ' ಎಂದೂ ಇನ್ನೊಂದು ಕಡೆ ಹಿರಿಯರ ಮೇಲೆ ಒಂದು ತಪ್ಪು ಹೊರಿಸಿ ನನ್ನ ಲೇಖನವನ್ನೇ ಉದಾಹರಣೆಯಾಗಿ ಕೊಟ್ಟು, ಒಬ್ಬ ಯುವಕನು ಯಾ ಯುವತಿಯು ಇವರ ದೃಷ್ಟಿಗೆ ಗೋಚರವಾದರೆ ಸಾಕು. ಅವರ್ಯಾರು, ಅವಳ್ಯಾರು ಅವರ ತಾಯಿ, ತಂದೆ, ಅಜ್ಜ, ಮುತ್ತಜ್ಜ ಇವರ ಚರಿತ್ರೆಯನ್ನು ಹೆಕ್ಕಿ ತೆಗೆದು ಅವರ ಸ್ವಂತ ಚರಿತ್ರೆಯನ್ನು ಕಲ್ಪಿಸಿ ತಮ್ಮ ಮನದಲ್ಲಿ ಜೇಡರ ಬಲೆಯನ್ನು ನೆಯ್ಯುವ ಶಕ್ತಿ ....' ವಗೈರೆ ಬರೆದಿರುವದು ರುದ್ಧ ಅವರ ಮನಸಿನಲ್ಲು 'ಜೇಡರ ಬಲೆ' ನೆಯ್ಯುವದೇ ಆಗಿರುತ್ತೆ. ಖಂಡಿತವಾಗಿಯೂ ಯುವಕ, ಯುವತಿಯರನ್ನು ಕಂಡರೆ ಪರಿಚಿತಸ್ಥರಲ್ಲದ ಪಕ್ಷ ತಿಳಿದುಕೊಳ್ಳುವದರಲ್ಲು ತಪ್ಪೇನು? ಬಹುಶಃ ಅವರ ಮುಸುಕಿನ ಮನೋಭಾವವನ್ನೇ ಇಲ್ಲಿ ಚಿತ್ರಿಸಿರುವದೋ ಹೇಗೆಂಬ ಸಂಶಯಕ್ಕೆ ಎಡೆ ಕೊಟ್ಟಂತಿದೆ. ನನ್ನ ಮೇಲಣ ಇವರ ಊಹನೆಗಳಿಗೆ ತುಂಬಾ ವ್ಯಸನಪಡುತ್ತೇನೆ. ನನ್ನ ಆರೋಪಗಳು ಒಂದೆರಡು ಕುಟುಂಬಗಳ ಮೇಲಿಲ್ಲ, ವ್ಯಕ್ತಿಗಳ ಮೇಲಿಲ್ಲ. ನನ್ನ ಆರೋಪಣೆಗಳೂ ಮತ್ತು ಬೇಡಿಕೆಗಳೂ ವಿದ್ಯಾವಂತರ ಮೇಲೂ, ವಿದ್ಯವನ್ನು ಗಳಿಸದ ಅನುಕೂಲಸ್ಥರ ಮೇಲೂ ಆಗಿರುತ್ತೆ. ಯುವಕ ಯುವತಿಯರ ಮೇಲೆ ನನ್ನ ಲೇಖನಗಳಲ್ಲು ಎಲ್ಲಿಯೂ ಆರೋಪಣೆ ಹೊರಿಸುವುದಿಲ್ಲ. ಇವಕ್ಕೆಲ್ಲಾ ವಿದ್ಯೆಯೆಂದು ನಾವು ಕಲಿತ ಅವಿದ್ಯೆಯೇ ಮೂಲ ಕಾರಣವೆಂದು ಎಲ್ಲರಿಗೂ ತಿಳಿದ ಸಂಗತಿ. ಕುರುಡು ಯೌವ್ವನದಲ್ಲಿ ಯುವಕ ಕಾರ್ಯಪ್ಪನವರು ಹಿರಿಯರನ್ನೇ ತಪ್ಪಿತಸ್ಥರೆನ್ನುವದರಲ್ಲಿ ಬಹಳ ನ್ಯಾಯವಿರುತ್ತೆ. ಇದು ಸಾಧಾರಣವಾಗಿ ಮಕ್ಕಳಲ್ಲಿ ಕಾಣುತ್ತಾ ಬರುವಂಥಾದ್ದಾಗಿದೆ. ಹಿರಿಯರು ನೀವು ಹುಟ್ಟಿದ ಮೊದಲು ಇಷ್ಟರ ವರೆಗೆ ಮಾಡಿದ ತಪ್ಪುಗಳು ಎಷ್ಟು ಇವೆಯೆಂದು ಖಂಡಿತ ಒಪ್ಪಬೇಕಾದ ಮಾತು. ಅಂದ ಮಾತ್ರಕ್ಕೆ ಯುವಕ ವರ್ಗದವರು ತಪ್ಪಿತಸ್ಥರಲ್ಲವೆಂದು ವಾದಿಸುವದು ನ್ಯಾಯವಲ್ಲ. ಯುವಕ ವರ್ಗದವರು ಈಗ ತಪ್ಪೆಂದು ತಿಳಿದು ಬರುವ ಹಿರಿಯರ ನಡವಳಿಕೆಗಳನ್ನು ಬಿಟ್ಟು ತಿದ್ದಿಕೊಳ್ಳದ ಪಕ್ಷ ಈಗಿನ ಯುವಕ ವರ್ಗದವರೇ ಮುಂದಣ ಯುವಕ ವರ್ಗಕ್ಕೆ ಉತ್ತರವನ್ನು ಕೊಡಬೇಕಾದ ಜವಾಬ್ದಾರರಾಗುವರು. ದೂಷಣೆಯನ್ನು ವಿಭಾಗಿಸುವಂಥಾ ಚರ್ಚೆಗಳಿಂದ ನಮ್ಮ ಸಮಾಜವು ಮುಂದುವರಿಯಲು ಸಾಧ್ಯವಿಲ್ಲ. ಹೆಚ್ಚಾಗಿ ವಿದ್ಯಾವಂತ ಹಿರಿಯರೂ, ವಿದ್ಯೆಯನ್ನು ಪಡೆದು ಅನುಕೂಲಸ್ಥರಾದವರೂ ಮತ್ತು ಈಗೀಗ ಕೆಲವು ಯುವಕ ಯುವತಿಯರೂ ಸಮಾಜದ ಇಳಿತಕ್ಕೆ ಕಾರಣಭೂತರೆಂದು ದೃಢವಾಗಿ ಹೇಳಬಹುದು. ಹೀಗಿರುವಾಗ್ಯ ಕೆಲವು ವಿದ್ಯಾವಂತರಾದ ಹಿರಿಯರೂ ಮತ್ತು ಬಹಳ ಮಂದಿ ಯುವಕರೂ ನಮ್ಮ ಸಮಾಜದ ಇಳಿತವನ್ನು ಹ್ಯಾಗ ತಡಗಟ್ಟುವದೆಂದು ಈಗ ಆಲೋಚಿಸುತ್ತಿರುವದು ಒಂದು ಶುಭ ಸೂಚನೆಯಾಗಿರುತ್ತೆ. ಈ ಯುವಕ ಗೆಳೆಯರ ಗುಂಪಿನಲ್ಲು ಶ್ರೀಯುತ ಬೋಳಕರಂಡ ಕಾರ್ಯಪ್ಪನವರು ಒಬ್ಬರಾಗಿರುವುದಕ್ಕೆ ಸಂತೋಷಪಡಬೇಕಾಗಿದ

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಷನ್ ಲಿಮಿಟೆಡ್.

ಮಡಿಕೇರಿ ಬ್ರಾಂಚ್.

ಈ ಕೆಳಗಿನ ಹೆಸರು ಕಾಣಿಸಿದವರು ಮೇಲ್ಕಂಡ ಬ್ಯಾಂಕಿನಿಂದ ಆಭರಣಗಳ ಈಡಿನ ಮೇಲೆ ಸಾಲವಾಗಿ ಹೊಂದಿಕೊಂಡ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ಪಾವತಿ ಮಾಡದೆ ಇರುವ ಕಾರಣ ಇವರುಗಳಿಗೆ ರಿಜಿಸ್ಟ್ರಿ ನೋಟೀಸ್ ಕೊಟ್ಟಲ್ಲಿ, ನೋಟೀಸುಗಳು ಜಾರಿ ಆಗದೆ ಹಿಂದೆ ಬಂದಿರುವ ಕಾರಣ ಇವರ ಕಾಯಿದೆ ಶೀರ ವಾರೀಸುದಾರರು ಸದರಿ ಸಾಲದ ಅಸಲು, ಬಡ್ಡಿ ಮತ್ತು ಈ ನೋಟೀಸು ಪ್ರಕಟಣೆ ಖರ್ಚು ಸಹ ಪಾವತಿ ಮಾಡಿ ತಾ. 17-6-39ರ ಒಳಗೆ ಸದರಿಯವರು ಗಿರ್ವಿ ಮಡಗಿರುವ ನಗಗಳನ್ನು ಬಿಡಿಸಿಕೊಂಡು ಹೋಗತಕ್ಕದ್ದು. ತಪ್ಪಿದರೆ ಅದೇ ದಿನ ಮಧ್ಯಾಹ್ನ 1 ಗಂಟೆಗೆ ಯಾ ತದನಂತರ ಬ್ಯಾಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಆ ನಗಗಳನ್ನು ಬಹಿರಂಗವಾಗಿ ಹರಾಜು ಹಾಕಲ್ಪಡುತ್ತದೆ ಎಂತ ಈ ಮೂಲಕ ತಿಳಿಸೋಣಾಗಿದೆ.

ನಂ.	ಸಾಲದ ನಂ.	ಸಾಲಗಾರರ ಹೆಸರು.	ಮೊಬಲಗು.
1.	103/37	ಕೆ. ಯಸ್. ಭೀಮಯ್ಯ, ಸುಬ್ಬಯನವರ ಮಗ, ಮೋಟಾರ್ ಡ್ರೈವರ್, ಯೂನಿಯನ್ ಮೋಟಾರ್ ಸರ್ವಿಸ್, ಮಡಿಕೇರಿ.	7-0-0 ಇದರ ಬಡ್ಡಿ ವಗೈರೆ.
2.	283/37	ಬಲ್ಲಾರಂಡ ಅಪ್ಪಯ್ಯ, ಕಾಳಪ್ಪನವರ ಮಗ, ಕುರಳಿ ಗ್ರಾಮ, ಚೆಟ್ಟಳ್ಳಿ ಪೋಸ್ಟ್.	40-0-0 ಇದರ ಬಡ್ಡಿ ವಗೈರೆ.

ಬ್ಯಾಂಕಿನ ಆಫೀಸು, ಮಡಿಕೇರಿ, ತಾ. 27-5-39.

ಪಿ. ಪಿ. ಶೆಣೈ, ಏಜೆಂಟ್.

ಮುಂದಿನ ಯುದ್ಧ.

ಈಗಿನ ಯುದ್ಧದ ಭರ್ಝರಿ.
ವಿವಿಧ ರಾಷ್ಟ್ರಗಳ ವಿಮಾನ ತಯಾರಿ.
ರಷ್ಯಾ-ಬ್ರಿಟನ್ ಸಂಧಿಯ ವೈಖರಿ.

ಇಂದು ಇಡೀ ಜಗತ್ತಿನಲ್ಲಿ ಯುದ್ಧ ಕಾರ್ಮೋಡಗಳು ಪಸರಿಸಿ ಜಗತ್ತಿನ ಇತಿಹಾಸದ ಬೆಳಕನ್ನು ಮರೆಮಾಡಿವೆ. ಆದ್ದರಿಂದ ಒಂದಿಲ್ಲೊಂದು ದಿನ ಮಹಾ ಯುದ್ಧವೊಂದು ಸಂಭವಿಸುವದು ಅನಿವಾರ್ಯ. ಆದರೆ ಈಗಿನ ಕಾಲದ ಯುದ್ಧವೆಂದರೆ ಹಿಂದಿನ ಯುಗದ ಯುದ್ಧಗಳಂತೇನು? ಇಲ್ಲ; ಹಿಂದಿನ ಸಂಗ್ರಾಮಗಳಲ್ಲಿ ಶಕ್ತಿಯುತರ ಕೈ ಮೇಲಾಗುತ್ತಿತ್ತು. ಹಿಂದಿನ ಸಂಗ್ರಾಮವು ಕತ್ತಿಗುರಾಣಿಗಳ, ಕುದುರೆ ಕಾಲಾಳುಗಳ ಸಹಾಯದಿಂದ ನಡೆಯುತ್ತಿತ್ತು. ಅಂದಿನದು ಪ್ರತ್ಯಕ್ಷ ಯುದ್ಧ! ಧರ್ಮ ಯುದ್ಧ!!

ಆದರೆ ಇಂದಿನ ಯುದ್ಧದ ಶಕ್ತಿ ಕುದುರೆ ಕಾಲಾಳುಗಳ ಬಲದಲ್ಲಿ ಇಲ್ಲ; ಖಡ್ಗ ಕಠಾರಿಗಳ ಪ್ರಯೋಗದಲ್ಲಿಲ್ಲ. ಬದಲು ವಿಮಾನ-ಬಾಂಬುಗಳ ಮೇಲೆ, ವಿಷಗಾಳಿಯೇ ಮೊದಲಾದ ಅಪ್ರತ್ಯಕ್ಷ ಸಾಧನಗಳ ಮೇಲೆ ನಿಂತಿವೆ. ಜಯಾಪಜಯಗಳು ಶಕ್ತಿ ಯುಕ್ತಿಗಳಲ್ಲಿಲ್ಲ. ಎಂಥಾ ಬಲಾಢ್ಯನಿದ್ದರೂ ಇಂದಿನ ಈ ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತನಿಲ್ಲದಿದ್ದರೆ ಅವನಿಗೆ ರಣರಂಗದಲ್ಲಿ ಉಳಿಗಾಲವಿಲ್ಲ. ಇಂದಿನ ಕಾಲದಲ್ಲಿ ರಣರಂಗವೆಂಬುದೇ ಇಲ್ಲ. ಚಿಕ್ಕೋಚಿಕ್ಕದೂ ಸಹ ಈ ಯುದ್ಧೋಪಕರಣಗಳಿಂದ ಆಕಾಶದಲ್ಲಿ ಹಾರಾಡಿ, ನಗರಗಳ ಮೇಲೆ ಬಾಂಬಿನ ಮಳೆಸುರಿದು, ಮಾನವ ಯತ್ನವನ್ನು ಮಣ್ಣುಗೂಡಿಸಿ, ಸೃಷ್ಟಿಯ ಸೌಂದರ್ಯವನ್ನು ಸುಟ್ಟು, ಮಾನವ ಮಾರಣ ಹೋಮವನ್ನು ಮಾಡಿ ಮೆರೆಯಬಲ್ಲರು. ಹಿಂದಿನ ಯುಗದಲ್ಲಿ ಸಾವಿರಾರು ವ್ಯಕ್ತಿಗಳು ನೇರ ಮಾಡಲಾರದಂಥಾ ನಷ್ಟವನ್ನು ಇಂದು ಒಬ್ಬ ವ್ಯಕ್ತಿ ಒಂದು ಗಳಿಗೆಯಲ್ಲಿ ಮಾಡಬಲ್ಲನು. ಆದ್ದರಿಂದ ಇಂದಿನ ಯುದ್ಧ ವೈಖರಿಯು ಶಕ್ತಿಯ ಮೇಲಿಲ್ಲ. ಯುದ್ಧೋಪಕರಣಗಳಿಂದ ಸುಸಜ್ಜಿತವಾಗಿರುವ ದೇಶವೇ ಇಂದು ಬಲಾಢ್ಯ ಜನಾಂಗವಾಗಿದೆ.

ಸಮಾಚಾರ ಹೀಗಿರುವಾಗ ಇಂದಿನ ಯುದ್ಧದ ಆವೇಶ; ಪ್ರಬಲ ರಾಷ್ಟ್ರಗಳ ಯುದ್ಧ ಸಿದ್ಧತೆ; ಇವುಗಳು ಮುಂದಿನ ಯುದ್ಧವನ್ನು ಹತ್ತಿರ ಕರೆಯುತ್ತಿವೆ. ಭವಿಷ್ಯವಾದಿಗಳೂ ರಾಷ್ಟ್ರಗಳ ಸಿದ್ಧಾಸಿದ್ಧತೆಗಳನ್ನು ನೋಡಿ ಅದರಂತೆ ಮುನ್ನುಡಿಯುತ್ತಿರುವರು. ಹೀಗೆ ಪ್ರಪಂಚದ ಆಕಾಶದಲ್ಲಿ ತೂಗಾಡುತ್ತಿರುವ ಈ ಯುದ್ಧ ಕಾರ್ಮೋಡವು ಇಂದೋ ನಾಳೆಯೋ ಅನಿರೀಕ್ಷಿತ ಭೀಕರ ಮಳೆಯಾಗಿ ಸುರಿಯಬಹುದು. ಆದ್ದರಿಂದ ಆ ಅಮೋಘ ಸಮರದ ಪ್ರವಾಹದಲ್ಲಿ ಕಾದಾಡಿ ಜಯಶೀಲರಾಗಬೇಕೆಂಬ ಮಹತ್ವಾಕಾಂಕ್ಷೆಯಿಂದ ತಮ್ಮ ತಮ್ಮ ಸೈನ್ಯ ಹಾಗೂ ವಿಮಾನ ಶಕ್ತಿಯನ್ನು ಹೆಚ್ಚಿಸುತ್ತಿರುವ ವಿವಿಧ ರಾಷ್ಟ್ರಗಳ ಬಲಾಬಲಗಳನ್ನು ಅರಿತುಕೊಳ್ಳುವದು ಮುಖ್ಯ.

ಜಗತ್ತಿನ ವಿಚಾರ ಹೇಳುವದಾದರೆ ಪ್ರತಿ ಪ್ರಬಲರಾಷ್ಟ್ರಗಳೂ ಯುದ್ಧ ತಯಾರಿಯಲ್ಲಿ ತೊಡಗಿವೆ. ವಿಮಾನ ಪಡೆಯೇ ಮುಂದಿನ ಯುದ್ಧದ ಪ್ರಥಮ ಸಾಧನವೆಂದರಿತು ಎಲ್ಲಾ ರಾಷ್ಟ್ರಗಳೂ ಶಕ್ತಿ ಮೀರಿ ವಿಮಾನ ತಯಾರಿಸುತ್ತಿವೆ. 1928 ರಲ್ಲಿ ಈ ತಯಾರಿಗಾಗಿ ಜಗತ್ತು ಖರ್ಚು ಮಾಡಿದ್ದರ 6 ಪಾಲು ಅಥವಾ 1932 ರಲ್ಲಿ ಖರ್ಚು ಮಾಡಿದ್ದರ ನಾಲ್ಕು ಪಾಲು ಹೆಚ್ಚು ಧನವನ್ನು 1938 ರಲ್ಲಿ ವ್ಯಯಿಸಿತು. ಈ ವರ್ಷ ಬರೇ ವಿಮಾನ ತಯಾರಿಗಾಗಿ 700 ಮಿಲಿಯ ಪವನು ಹೆಚ್ಚಿಗೆ ವ್ಯಯಿಸಲು ಜಗತ್ತು ಮುಂದಡಿಯಿಟ್ಟಿದೆಯೆಂದರೆ ಯುದ್ಧ ತಯಾರಿಯ ಭರವು ಎಷ್ಟು ಪ್ರಖರವಾಗಿ ನಡೆಯುತ್ತಿದೆಯೆಂಬುದು ಸ್ವಯಂ ವ್ಯಕ್ತ.

ಬ್ರಿಟನ್.

ಈಗ ಜಗತ್ತಿನ ವಿವಿಧ ರಾಷ್ಟ್ರಗಳನ್ನು ತೆಗೆದುಕೊಂಡರೆ ಬ್ರಿಟಿಷ ಸರಕಾರವು ನಾಲ್ಕು ವರ್ಷಗಳಿಗೆ ಹಿಂದೆ ಬರೇ 27 ಮಿಲಿಯ ಪವನುಗಳಂತೆ ಖರ್ಚು ಮಾಡುತ್ತಿದ್ದು ಇಂದು 700 ಮಿಲಿಯ ಪವನುಗಳನ್ನು ಅದಕ್ಕಾಗಿ ಖರ್ಚು ಮಾಡಲು ನಿರ್ಧರಿಸಿದೆ. ಬ್ರಿಟನ್ ತನ್ನ ಹುಳುಕುಗಳನ್ನು ಮುಚ್ಚಿಟ್ಟು ಇತರರ ಹುಳುಕನ್ನು ಹೊರಗೆಡಹುವ ಯತ್ನದಲ್ಲೇ ಇರುವದರಿಂದ ಇಂದಿನ ವರೆಗೆ ಅದರ ವಿಮಾನ ಶಕ್ತಿ ಎಷ್ಟೆಂದು ನಿಶ್ಚಿತವಾಗಿ ತಿಳಿದಿಲ್ಲ. ಕೆಲವು ತಿಂಗಳುಗಳ ಹಿಂದೆ ಒಮ್ಮೆ ಅದರ ಈ ಗುಟ್ಟು ರಟ್ಟಾಗಿ ಕೇವಲ 2200 ವಿಮಾನಗಳೇ ಅದಕ್ಕಿರುವವೆಂದು ಪ್ರತೀತಿಯಾಯಿತು. ಆ ವೇಳೆ ಇಂಗ್ಲಂಡದ ರಾಜಕೀಯ ಧುರೀಣರು ಈ ಸಂಖ್ಯೆಗೆ ಐದು ಸಾವಿರವನ್ನು ಸೇರಿಸದಿದ್ದರೆ ಬ್ರಿಟನು ಬೇರೆ ರಾಷ್ಟ್ರಗಳ ಸಾಲಿನಲ್ಲಿ ಬರಲಾರದು ಎಂದು ಘೋಷಿಸಿದರು. ಆದ್ದರಿಂದ ಬ್ರಿಟನು ಶಕ್ತಿ ಮೀರಿ ವಿಮಾನ ತಯಾರಿಯಲ್ಲಿ ನಿರತವಾಗಿದೆ. ಈ ವರೆಗೆ ಇದು ಅಗಣಿತ ವಿಮಾನಗಳನ್ನು ತಯಾರಿಸಿಕೊಂಡಿದೆ. ತಿಂಗಳಿಗೆ ಸಾವಿರ ವಿಮಾನಗಳನ್ನು ಇಂದು ಅದು ತಯಾರಿಸಬಲ್ಲುದು. ಇದರಿಂದಾಗಿ ಇಂದು ಬ್ರಿಟನ್ ವಿಮಾನ ಬಲದ ಸಂಖ್ಯೆಯು 5 ಸಾವಿರವಿರಬಹುದೆಂದು ಅಂದಾಜು ಮಾಡಲಾಗಿದೆ.

ಫ್ರಾನ್ಸ್.

ಫ್ರಾನ್ಸಿಗೆ ಯುದ್ಧ ತಯಾರಿಯನ್ನು ಮಾಡದೆ ಗತ್ಯಂತರವಿಲ್ಲವೆಂಬುದು ಅದರ ಇಂದಿನ ಸ್ಥಿತಿಯಿಂದಲೇ ವ್ಯಕ್ತವಾಗುತ್ತಿದೆ. ಪೂರ್ವಭಾಗದಲ್ಲಿ ಜರ್ಮನರು ಕತ್ತಿ ಝಳಪಿಸುತ್ತಿರುವರು. ದಕ್ಷಿಣದಲ್ಲಿ ಫ್ರಾಂಕೋವು ತನ್ನ ಕೈಯ ಕತ್ತಿಯನ್ನಿನ್ನೂ ಕೆಳಗಿರಿಸಿಲ್ಲ. ಸುತ್ತು ಇಂಥಾ ಪರಿಸ್ಥಿತಿಯಿರುವಾಗ ಯಾವ ರಾಷ್ಟ್ರ ತಾನೇ ತನ್ನ ಸ್ವಸಂರಕ್ಷಣೆಗಾಗಿ ಸಿದ್ಧವಾಗಲೊಲ್ಲದು? ಆದ್ದರಿಂದಲೇ ಫ್ರಾನ್ಸು ತನ್ನಲ್ಲಿಯೇ ವಿಮಾನ ತಯಾರಿಯನ್ನು ಭರದಿಂದ ನಡೆಸಿರುವದಲ್ಲದೆ ಅಮೇರಿಕನರಿಂದ ಸಾವಿರ ವಿಮಾನಗಳನ್ನು ಪಡೆಯುವ ಯೋಜನೆ ಮಾಡಿದೆ. ಇದರಿಂದ ಫ್ರಾನ್ಸು ಶಕ್ತಿ ಮೀರಿ ಖರ್ಚು ಮಾಡುತ್ತಿದೆಯೆಂಬುದು ವಿಧಿತವಿದೆ.

ಅಮೇರಿಕಾ.

ಅಮೇರಿಕೆಯು ವಿವಿಧ ರಾಷ್ಟ್ರಗಳ ಯುದ್ಧ ತಯಾರಿಗೆ ಅನುಕೂಲವಾಗಿ ಸಾಮಾನುಗಳನ್ನು ಒದಗಿಸಿ ಲಾಭ ಪಡೆಯುತ್ತಿದ್ದರೂ, ತನ್ನ ವಿಮಾನ ಪಡೆಯನ್ನು ಹೆಚ್ಚಿಸುವ ಮಹತ್ವಾದ ಯೋಜನೆಯನ್ನು ಮುಂದೆ ಇರಿಸಿಕೊಂಡಿದೆ. ಇಂದು ಅಮೇರಿಕಾದಲ್ಲಿ 3000 ಕ್ಕೆ ಮಿಕ್ಕಿ ವಿಮಾನಗಳಿವೆ. ಇವನ್ನು ಎರಡು ವರ್ಷಗಳಲ್ಲಿ 12 ಸಾವಿರಕ್ಕೆ ಮುಟ್ಟಿಸುವಂತೆ ಅಲ್ಲಿಯ ಸರಕಾರವು ಯೋಚಿಸಿದೆ. ಅಂತು ಸದ್ಯಕ್ಕೆ ಅಮೇರಿಕೆಯಲ್ಲಿ 3000 ವಿಮಾನಗಳು ಮಾತ್ರ ಇವೆ. ಅಮೇರಿಕೆಯು ವಿಪುಲವಾಗಿ ವಿಮಾನಗಳನ್ನು ತಯಾರಿಸುತ್ತಿದೆ. ಆದರೂ ಪರರಾಷ್ಟ್ರಗಳ ಕೇಳಿಕೆಯನ್ನು ಪೂರೈಸುವದು ಕಷ್ಟವಾಗಿದೆ. ಆದ್ದರಿಂದ ಅಮೇರಿಕದಲ್ಲಿ ವಿಮಾನ ಕಾರ್ಖಾನೆಗಳು ಹೆಚ್ಚಿ ವಿಮಾನ ತಯಾರಿಯನ್ನು ಅಮೋಘವಾಗಿ ನಡೆಯುತ್ತಿದೆ.

ಜರ್ಮನಿ.

ಈಗ ಇದರ ವಿಮಾನ ಬಲವು ಅತೀ ಪ್ರಬಲವಾದದ್ದೆಂದು ಹೇಳಬಹುದು. ಜರ್ಮನರ ಅಂದಾಜಾದರೂ ಚೆನ್ನಾಗಿಯೇ ಇರುವದು. ಈಗಿನ ವಿಮಾನಗಳಲ್ಲಿ ಶೇಕಡ 90 ರಷ್ಟು ಯುದ್ಧಾರಂಭದಲ್ಲಿಯೇ ನಿರ್ನಾಮವಾದರೂ ಸಹ ಈ ನಷ್ಟವನ್ನು ಭರ್ತಿ ಮಾಡುವ ಯೋಜನೆಯನ್ನು ಸಹ ಜರ್ಮನಿಯು ಮಾಡಿದೆ. ಜರ್ಮನಿಯ ಕಾರ್ಖಾನೆಗಳು ಯುದ್ಧದ ಸಮಯದಲ್ಲೂ ವಿಮಾನ ತಯಾರಿಸಿ ನಷ್ಟವನ್ನು ಭರ್ತಿ ಮಾಡಲು ತಯಾರಿರುವದರಿಂದ ಇಂದು ಅದರ ವಿಮಾನ ಬಲವು ಬೇರೆ ರಾಷ್ಟ್ರಗಳದ್ದಕ್ಕಿಂತ ಅಧಿಕವಿದೆಯೆಂದು ಹೇಳಬಹುದು. ಜರ್ಮನಿಯು ಜಗತ್ತಿನಲ್ಲೇ ಸಿಕ್ಕದ ಉತ್ತಮ ಮಾದರಿಯ ಹಾಗೂ ಹೆಚ್ಚು ಕಾಲ ಬಾಳುವ ಯಂತ್ರಗಳನ್ನು ತಯಾರಿಸಬಲ್ಲುದು. ಇಂದು ಸುಸಜ್ಜಿತವಾದ 4000 ಕ್ಕಿಂತ ಹೆಚ್ಚಾಗಿ ವಿಮಾನಗಳು ಅಪ್ಪಣೆಯನ್ನು ಕಾಯ್ದು ನಿಂತಿವೆ. ಸಮಯಬಿದ್ದಾಗ ಇನ್ನಷ್ಟನ್ನು ತಯಾರು ಮಾಡಲೂ ಅದು ಸಕಲ ಸಲಕರಣೆಗಳಿಂದ ಕೂಡಿದೆ.

ಇಟಲಿ.

ಇಟಲಿಯು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿದ್ದರೂ, ಕಳೆದ ಅಬಿಸೀನಿಯಾ ಯುದ್ಧದಿಂದ ಕಂಗೆಟ್ಟಿದ್ದರೂ ತನ್ನ ವಿಮಾನ ಬಲವನ್ನು ಅಭಿವೃದ್ಧಿಗೊಳಿಸದೆ ಇಲ್ಲ. ಇಂದು ಅದಕ್ಕೆ ಬ್ರಿಟಿಷರಿಗಿರುವಷ್ಟೇ ವಿಮಾನ ಪಡೆಯಿದೆ. ದೇಶದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ದೃಷ್ಟಿಯಿಂದ ಅದು ಚೈತನ್ಯವಿಲ್ಲದೆ ಇದ್ದರೂ ಇಂದಿನ ಆಧುನಿಕ ಯುದ್ಧೋಪಕರಣಗಳ ಅರ್ಥಾತ್ ನವೀನ ಯುದ್ಧರಂಗದಲ್ಲಿ ಅದು ಪ್ರಾಧಾನ್ಯ ಸ್ಥಾನವನ್ನು ಪಡೆಯುವದರಲ್ಲಿ ಸಂಶಯವಿಲ್ಲ.

ವಿವಿಧ ರಾಷ್ಟ್ರಗಳ ಹೋಲಿಕೆ.

ಈ ವಿವಿಧ ಪ್ರಬಲ ರಾಷ್ಟ್ರಗಳ ಬಲಾಬಲಗಳನ್ನು ಒಂದಕ್ಕೊಂದು ಹೋಲಿಸಿದರೆ ವಾಚಕರಿಗೆ ರಾಷ್ಟ್ರಗಳ ಪರಿಸ್ಥಿತಿಯು ಚೆನ್ನಾಗಿ ಮನವರಿಕೆಯಾಗಬಹುದಲ್ಲದೆ ಬ್ರಿಟನು ಹೀಗೆ, ಜರ್ಮನಿ ಹಾಗೆ, ಫ್ರಾನ್ಸು ಇನ್ನೊಂದು ಬಗೆ ಎಂದು ಹೇಳುವವರಿಗೂ ಅವುಗಳ ನಿಜಸ್ಥಿತಿ ತಿಳಿಯುವದು. ಯೂರೋಪಿನ ಪ್ರಬಲ ರಾಷ್ಟ್ರಗಳ ವಿಮಾನ ಶಕ್ತಿಯನ್ನು ನೂರರ ಸಂಖ್ಯೆಯಲ್ಲಿ ಪರಿಗಣಿಸಿದ್ದೇ ಆದರೆ, ಜರ್ಮನಿಯ ಶಕ್ತಿ ನೂರು, ಬ್ರಿಟನಿನದ್ದು ಅರುವತ್ತು, ಇಟಲಿ ಅರುವತ್ತು, ಫ್ರಾನ್ಸು ಇಪ್ಪತ್ತೈದು, ಅಮೇರಿಕಾ ನಲುವತ್ತೈದು ಎಂದು ಲೆಕ್ಕ ಹಾಕಬಹುದು, ಆದ್ದರಿಂದ ಜರ್ಮನಿ-ಇಟಲಿಗಳ ಶಕ್ತಿಯು ಒಂದು ಗೂಡಿದರೆ ನೂರ ಅರುವತ್ತು ಆಗುವದು. ಬ್ರಿಟನ್-ಫ್ರಾನ್ಸ್ ಸೇರಿದರೆ ಬರೇ ಎಂಬತ್ತೈದು ಆಗುವದರಿಂದ ಈ ರಾಷ್ಟ್ರಗಳು ಅವನ್ನು ಎದುರಿಸಲಾರವು. ಅಮೇರಿಕವನ್ನು ಸೇರಿಸಿಕೊಂಡರೂ ಸಹ ಇವರ ಶಕ್ತಿಯು ನೂರ ಮೂವತ್ತು ಆಗುವದರಿಂದ ಆ ರಾಷ್ಟ್ರಗಳನ್ನು ಬಗ್ಗು ಬಡಿಯುವದು ಅಸಂಭವ. ಆದರೆ ಇಂದು ಬ್ರಿಟನ್-ಫ್ರಾನ್ಸ್-ಅಮೇರಿಕಾ ಇವುಗಳ ಸಂಖ್ಯೆ ಹೆಚ್ಚಿರಲಿಕ್ಕೂ ಸಾಕು. ಆದರೆ ಅದರೊಂದಿಗೆ ಸರ್ವಾಧಿಕಾರಿಗಳ ಬಲವಾದರೂ ಹೆಚ್ಚಿದೆ ಇಲ್ಲ.

ಬ್ರಿಟನಿಗೆ ರಷ್ಯಾ ಸ್ನೇಹ ಯಾಕೆ?

ಇಟಲಿ-ಜರ್ಮನರನ್ನು ತನ್ನಿಂದ ಎದುರಿಸಲಿಕ್ಕಾಗುವದಿಲ್ಲವೆಂದೇ ಬ್ರಿಟನು ರಷ್ಯಾದೊಡನೆ ಸಖ್ಯ ಬೆಳೆಸಲು ಅಮೋಘವಾಗಿ ಪ್ರಯತ್ನಿಸುತ್ತಿದೆ. ಈ ಐದು ರಾಷ್ಟ್ರಗಳ ಶಕ್ತಿಯನ್ನು ಮೀರಿಸಬಲ್ಲ ರಷ್ಯಾವು ಬ್ರಿಟನಿನೊಡನೆ ಸಖ್ಯ ಬೆಳೆಸಿದರೆ ಬ್ರಿಟನು ಮುಂದೆ ನಿಶ್ಚಿತ ಧೋರಣೆಯನ್ನು ಅನುಸರಿಸುವದರಲ್ಲಿ ಸಂಶಯವಿಲ್ಲ. ಆದ ಪ್ರಯುಕ್ತವೇ ಇಂದು ಬ್ರಿಟನು, ಸರ್ವಾಧಿಕಾರಿಗಳು ಯಾವ ರಾಷ್ಟ್ರವನ್ನು ನುಂಗಿದರೂ ಬಾಯಲ್ಲಿ ಬಡಬಡಿಸಿ, ಬೊಬ್ಬೆ ಹೊಡೆದು ಯುದ್ಧವನ್ನು ಮುಂದೂಡುತ್ತಿದೆ. ಹೀಗೆ ಯುದ್ಧವು ಮುಂದರಿದಂತೆ ಎಲ್ಲಾ ರಾಷ್ಟ್ರಗಳ ಬಲವೂ ಹೆಚ್ಚುತ್ತಿದೆ. ಆದ್ದರಿಂದ ಯುದ್ಧವು ಮುಂದೆ ಸಾಗಿದಂತೆಯೇ ಅದರ ಕಾಠಿಣ್ಯತೆಯೂ, ಯುದ್ಧದ ಭರ್ಝರಿಯು ಹೆಚ್ಚಾಗುವದರಲ್ಲಿ ಸಂದೇಹವಿಲ್ಲ.

'ಅದು ಹೇಗಾಯಿತು? ಕಾಫಿ ಬಟ್ಲನ್ನು ಕೆಳಗಿಡುತ್ತಾ ಎಂದಳು ತಾರೆ.

'ದೈವಾನುಕೂಲವಿದ್ದರೆ ಸರ್ವವೂ ಸಿದ್ಧಿಯಾಗುವುದು. 'ಕಷ್ಟ ಮೇಲೆ ಬಂದ್ದು ಬಂತು' ಅಲ್ಲವೇ?" ನಾನೆಂದೆ.

'ಹಾಗೇನೂ ಅಲ್ಲ—ನಿಮ್ಮ ಅಭ್ಯುದಯವೇ ನನ್ನದಲ್ಲವೇ? ಸರ್ವ ಪ್ರಯತ್ನವನ್ನೂ ಮಾಡಿದೆನು. ಆದರೆ—'

'ಆದರೆ ಏನು? ನಿನ್ನ ಮನಸು ಇಷ್ಟು ಚಾಂಚಲ್ಯವೆಂದು ನಾನು ಮೊದಲೇ ತಿಳಿದಿರಲಿಲ್ಲ. ಇಲ್ಲದಿದ್ದರೆ—'

ಸುಮ್ಮನೆ ಇಲ್ಲದ ವಿಚಾರಗಳನ್ನು ಕಲ್ಪಿಸಬೇಡಿ. ಈ ದಿನ ನೀವು ಸ್ಟುಡಿಯೋದಿಂದ ಬೇಂಡಿನೊಡನೆ ಹೊರಬರುವುದನ್ನು ನೋಡಿ ನನಗೆಷ್ಟು ಆನಂದವಾಯಿತು ಅನ್ನಿ? ಇರಲಿ, ನಿಮಗೆ ಚಾನ್ಸ್ ಹೇಗೆ ದೊರಕಿತು ತಿಳಿಸಿ' ತಾರೆ ಅಂದಳು.

'ಏಕೆ? ನೀನು ನೋಡಲಿಲ್ಲವೇ? ಸ್ಟುಡಿಯೋದಿಂದ ಹೊರ ಬರುವಾಗ ಇದ್ದ ಹುಡುಗಿಯನ್ನು—ನನ್ನ ಮನೋರಾಣಿಯನ್ನು—ನನ್ನ ಭಾಗದ ದೈವವನ್ನು—ಆ ಮೋಹಿನಿಯಿಂದಲೇ ನಾನು ಬದುಕಿದ್ದು—'

'ಯಾರು ನಮ್ಮ ಕಮಲಕ್ಕನೇ?' — — — —, ತಾರೆ ನನ್ನ ಹತ್ತಿರ ಕುರ್ಚಿಯನ್ನು ಎಳೆದುಕೊಂಡಳು. 'ಅದು ಯಾರು ಗೊತ್ತೆ?—ನರೇನ್!'

'ಅವಳು ನಮ್ಮ ಸ್ಟುಡಿಯೋದ ಪ್ರೊಪ್ರೈಟರರ ಒಬ್ಬಳೇ ಒಬ್ಬ ಪ್ರೀತಿಯ ಮಗಳು; 'ಭಾಗ್ಯನಿಧಿ' ' ನರೇನ್ ನೀನು ಭಾಗ್ಯವಂತನೇ ಸರಿ' ಗುಟುಕು ನುಂಗುತ್ತಾ ಮೆಲ್ಲನೆ ಉಸುರಿದಳು ತಾರೆ, 'ಅವಳ ಹೆಸರು ಮೋಹಿನಿ' ಎಂದಳು.

'ಎಲ್ಲವೂ ಅವನ ಕೃಪೆ' ಎಂದೆನ್ನುತ್ತಾ ಸಂತೋಷದ ಭರದಲ್ಲಿ ಹೊರಟು ಹೊರಗೆ ಬಂದಿದ್ದ.

'ನಮ್ಮನ್ನೆಲ್ಲಾ ಮರೆಯಬೇಡ, ಮಿಸ್ಟರ್ ನರೇನ್' ಪಿಳಿ ಪಿಳಿ ನೋಡುತ್ತಾ ನನ್ನನ್ನು ಬೀಳ್ಕೊಟ್ಟಳು ತಾರೆ.

ಅಂದು ಭಾನುವಾರ. ನಾನು ಹುಚ್ಚನಂತಾಗಿದ್ದೆನು. ಅಂತೆಯೇ ಬರೆದಿದ್ದಳು—ಆ ತಾರೆ. ನನಗೆ ಕೆಲಸ ಸಿಗುವುದು ಕಷ್ಟವೆಂದೂ, ಅಂತೇ ನನ್ನ ಅವಳ ಮಿಲನವು ಅಸಾಧ್ಯವೆಂದೂ, ತನ್ನನ್ನು ಕ್ಷಮಿಸಬೇಕೆಂದೂ, ಬೇರೊಬ್ಬನನ್ನು ಪ್ರೀತಿಸಿದ್ದಳೆಂದೂ ಮತ್ತು ಏನೇನೋ ಗೀಚಿದ್ದಳು ಆ ಕಾಗದದಲ್ಲಿ. ನನಗೆ ತಲೆ ತಿರುಗುತಿದ್ದಂತೆ ಭಾಸವಾಯಿತು. ಕಾಗದದ ಅಕ್ಷರಗಳು ಎರಡಕ್ಕ ಮೂರಾಗಿ ಕಾಣಿಸುತಿತ್ತು. ಯಾರ ಮೇಲೆ ನಾನು ನನ್ನ ಸಕಲಾಭಿಲಾಷೆಯನ್ನೂ ತಿಳಿಸಿ, ನನ್ನ ಸಕಲ ಆಶೆಯನ್ನೂ ಈ ಪರಿಯಾಗಿ ಇಟ್ಟುಕೊಂಡಿದ್ದನೋ ಅವಳೇ ಇಂದು ಈ ರೀತಿ ಬರೆದಿರುತ್ತಾಳೆ. ಆಲೋಚನೆ ಮಾಡುತ್ತಾ ಈಸೀ ಚೇರ್‌ನಲ್ಲಿ ಕುಳಿತೆ. ಒಂದೊಂದೇ ಅನುಭವಗಳು ನನ್ನ ಕಣ್ಣು ಮುಂದೆ ಕಟ್ಟಿದವು. ನಾನು ಬಿ. ಎ. ಗೆ ಕೂರಲು ಹಣವಿಲ್ಲದಾದ್ದು, ಪ್ರಪಂಚದಲ್ಲಿ ತಾನೊಬ್ಬನೆಯೋ ಎಂಬಂತೆ ದಿಕ್ಕಿಲ್ಲದೆ ಅಲೆದಾಡಿದುದು, ಕಡೆಗೆ ಸಿನೇಮಾ ನಟನಾಗಬೇಕೆಂಬ ಬಯಕೆಯೊಂದು ಉಂಟಾದುದು, ಅದಕ್ಕಾಗಿ ಅಲೆದುದು, ಕಡೆಗೆ 'ಸ್ಟಾರ್' ಸ್ಟುಡಿಯೋದಲ್ಲಿ ಪ್ರಯತ್ನಿಸಿದ್ದು, ಅಲ್ಲಿ ತಾರೆಯನ್ನು ಕಂಡದ್ದು, ನನಗೆ ಹೇಗಾದರೂ ಒಂದು ಚೇನ್ಸ್ ಕೊಡಿಸುತ್ತೇನೆಂಬ ಆಕೆಯ ಅಭಯ, ಈಗ ಅವಳ ಪರಿವರ್ತನೆ, ಹೀಗೆ ಒಂದೊಂದೇ ವಿಷಯವು ನನ್ನ ತಲೆಯಲ್ಲಿ ತಿರುಗಲಾರಂಭಿಸಿ ತಲೆ ಕರಡಾಗುವಂತೆ ಮಾಡಿದವು. ದೇಹವೇ ಭಾರವಾಯಿತು. ಕೂತಲ್ಲಿಯೇ ಒರಗಿದೆ.

ತಾರೆಯು 'ಸ್ಟಾರ್'ನಲ್ಲಿ ಒಂದು ಕಾರಕೂನಳು. ಅವಳಿಂದ ನನಗೆ ಸಹಾಯವಾಗಲು ಸಾಧ್ಯವಿಲ್ಲ. ಆದರೆ ಅವಳಲ್ಲಿ ನಂಬಿಕೆ ಇಟ್ಟೆ. ಅವಳ ಮಾತಿನಲ್ಲಿ ಮಾಧುರ್ಯವಿತ್ತು—ಆಶೆ ಇತ್ತು,—ವಿಶ್ವಾಸ ಇತ್ತು—ಅಭಯ ಇತ್ತು—ಆದರೆ ಹೃದಯ ಹೇಗಿತ್ತೊ?

'ಮೋಸ', 'ಮೋಸ', 'ಚಂಡಾಲಿನಿ', 'ರಾಕ್ಷಸೀ' ಎಂಬೀ ಉದ್ಗಾರವು ತಿಳಿಯದೇನೇ ನನ್ನ ಬಾಯಿಂದ ಹೊರಬಂದವು. ಎಷ್ಟು ಒರಗಿದ್ದನೋ ನನಗೆ ತಿಳಿಯಲಿಲ್ಲ. ಗಂಟೆಯು 11 ಭಾರಿಸಿತು. ಕೈಯ್ಯಲ್ಲಿಯೇ ಇತ್ತು ಆ ಕಾಗದ. ನನಗೇನೋ ಅನಿಸಿತು. ಅದನ್ನು

ಈ ವಾರದ ಕಥೆ.

"ಅದು ಹೇಗಾಯಿತು?"

(ಬರೆದವರು:—ಕೆ. ಎನ್. ಬಾಬು.)

ಹರಿತು ಚೂರು ಚೂರು ಮಾಡಿದೆ. ನನ್ನ ಪರ್ಸ್ ತೆಗೆದುಕೊಂಡು ಸೀದಾ ಕೃಷ್ಣಾ ರೆಸ್ಟೊರೆಂಟಿಗೆ ನುಗ್ಗಿದೆ. ನನಗೆ ಅತೀ ಬಾಯಾರಿಕೆ ಎನಿಸಿತಲ್ಲದೆ ಹೊಟ್ಟೆ ತುಂಬಿದಂತೆಯೇ ಇತ್ತು. ಬೆಳಿಗೆಯಿಂದ ಕಾಫಿ ಇಲ್ಲ. 'ಎರಡು, ಮೂರು, ಕಾಫಿ' ಎಂದೆ ಮಾಣಿಗೆ. ನನ್ನ ಮುಖವನ್ನೇ ನೋಡಿದ ಮಾಣಿ. ಜೊತೆಯಲ್ಲಿ ಯಾರೂ ಇಲ್ಲ; ಎರಡು, ಮೂರು, ಕಾಫಿ ಏಕೆ? ಎಂದೋ ಏನೋ. 'ಬೇಗ ತಾರೋ ಕಾಫಿ' ಪುನಹ ಎಂದೆ ನಾನು. ಮಾಣಿ ಮಾತಾಡಲಿಲ್ಲ—ಮೂರು ಬಟ್ಲು ಕಾಫಿ ತಂದ. ಒಂದಾದನಂತರ ಒಂದು ಹೀಗೆ ಮೂರು ಬಟ್ಲನ್ನು ಬರಿದು ಮಾಡಿದೆ. ಬಿಲ್ಲು ಕೊಟ್ಟು ಸಿಗರೇಟನ್ನು ಹೊತ್ತಿಸಿ ಹಾಗೆ ಬಂದೆ. ಸೀದಾ ರೈಲ್ವೆಗೆ ಹೋದೆ.

ಆಫೀಸಿನಲ್ಲಿ ಗಲಾಟೆ ನುಗ್ಗಾಟ ಹೆಚ್ಚಾಗಿತ್ತು. ಅಲ್ಲಿಯೇ ನಿಂತೆ. ಸಿಟಿ ಬಸ್ಸೊಂದು ನನ್ನ ಹತ್ತಿರ ಹೊರಡಲು ಸಿದ್ಧವಾಗಿತ್ತು. ಅದನ್ನು ಹತ್ತಿದ. ಎಲ್ಲಿಗೆ? ನನಗೇ ಗೊತ್ತಿಲ್ಲ, ಎಲ್ಲಿಗೆ ಎಂದು. ಬಸ್ಸಿನಲ್ಲೂ ನುಗ್ಗಾಟ; ಜಾಗವೇ ಇರಲಿಲ್ಲ. ನುಗ್ಗಿ ಒಂದಡೆಯಲ್ಲಿ ಕುಳಿತೆ. ಬಸ್ಸು ಹೊರಟಿತು ಎದುರು ಸೀಟಿನಲ್ಲಿ ಒಬ್ಬ ಲಲನಾ ಮಣಿಯು ಶೋಭಿಸುತಿದ್ದಳು. ಅವಳ ಜೊತೆಯಲ್ಲಿಯೇ ಒಬ್ಬ ಮಧ್ಯ ವಯಸ್ಸಿನ ದೊಡ್ಡ ಮೀಸೆಯ ಮನುಷ್ಯನೊಬ್ಬನು ಭವ್ಯವಾಗಿ ಕೂತಿದ್ದನು. ಅವರಿಬ್ಬರೂ ಏನೇನೋ ಮಾತಾಡುತ್ತಿದ್ದರು. ತರುಣಿಯು ಮಾತಿನ ಮಧ್ಯೆ ಮಧ್ಯೆ ನನ್ನನ್ನೇ ದಿಟ್ಟಿಸುತ್ತಿದ್ದಳು. ಇದು ನನ್ನ ಗೋಚರಕ್ಕೆ ಬಂದನಂತರ ನಾನು ಒಂದು ಕಡೆ ತಿರುಗಿ ಕೂತೆ. ಆದರೂ ಕುತೂಹಲವಿತ್ತು; ಕಿವಿಯು ಸ್ವಲ್ಪ ಆಲಿಸಿತ. ಅವರ ಮಾತು ಕತೆಗಳಿಂದ ತರುಣಿಯ ಹೆಸರು ಮೋಹಿನಿಯೆಂದೂ, ಆ ಮನುಷ್ಯನ ಹೆಸರು ರಾಜಾ ರಾಮ್ ಎಂದೂ ತಿಳಿದೆನು.

ಬಸ್ಸು ಅಲ್ಲಲ್ಲಿ ನಿಂತು, ಹೋಗುತ್ತಾ ಇತ್ತು. 'ತಾರ್' ಸ್ಟುಡಿಯೋದ ಹತ್ತಿರ ಒಮ್ಮೆ ನಿಂತಿತು. ಮೇಲೆ ಹೇಳಿದ ಇಬ್ಬರೂ ಇಳಿದರು. ತರುಣಿಯ ಕೈಯ್ಯಲ್ಲಿ ಒಂದು ಹ್ಯಾಂಡ್ ಬ್ಯಾಗ್ ಮಾತ್ರ ಇತ್ತು. ಅವರಿಬ್ಬರು ಸ್ಟಾರ್ ಸ್ಟುಡಿಯೊ ಬಂಗ್ಲೆಯ ಕಡೆ ಹೋಗುತ್ತಿದ್ದರು. ನಾನು ಹತ್ತಿರವೇ ಇದ್ದ ಹೊಟೆಲೊಂದಕ್ಕೆ ನುಗ್ಗಿದೆ.

ಹೊಟೆಲಿನಿಂದ ಹೊರ ಬರುವಾಗ ಸಾಯಂಕಾಲವಾಗುತ್ತಾ ಬಂದಿತ್ತು. ತಿರುಗಾಡುತ್ತಾ ಒಂದು ಥಿಯೇಟರಿಗೆ ಹೋದೆ. ಮೊದಲಿನ ಶೋ ಸುರುವಾಗಿತ್ತು. ಟಿಕೇಟು ಪಡೆದು ಒಳಹೋಗಿ ಕೂತುಕೊಂಡೆ ನಟ ನಟಿಯರು ನನ್ನ ಪರಿಚಿತರೇ ಇದ್ದರು. ಯಾವುದೂ ನನಗೆ ಸರಿಯಾಗಲಿಲ್ಲ. ಬೇಸರದಿಂದ ಕೂತಿದ್ದೆ. ಹಾಗೆಯೇ ಎದ್ದು ಹೊರಗೆ ಬಂದು ಸಿಗರೇಟೊಂದನ್ನು ಹಚ್ಚಿ ಆಕಾಶದ ಕಡೆ ನೋಡುತ್ತಾ ನಿಂತಿದ್ದೆ. ರಾತ್ರಿಯಾಗುತ್ತಾ ಬಂದಿತ್ತು. ಥಿಯೇಟರಿನ ಆಚೆ ಒಂದು ಸೀಟಿನಲ್ಲಿ ಯಾರೋ ಇಬ್ಬರು ಜೋರಾಗಿ ಮಾತಾಡುತ್ತಿರುವಂತೆ ತೋರಿತು. ಮರಗಳು ಅಡ್ಡವಿದ್ದುದರಿಂದಲೂ, ನಿಶೆಯ ದೆಸೆಯಿಂದಲೂ ಅವರನ್ನು ಕಾಣಿಸುತ್ತಿರಲಿಲ್ಲ. ಆದರೂ ಧ್ವನಿಯು ಸ್ವಲ್ಪ ಪರಿಚಿತವಾಗಿದ್ದವು. ಮೆಲ್ಲನೆ ಆ ಕಡೆ ಹೋದೆ. ಒಬ್ಬ ಸಾಧಾರಣದ ಯುವಕನು ಒಬ್ಬ ಯುವತಿಯನ್ನು ತಿವಿಯುವುದರಲ್ಲಿದ್ದನು. ಓಡಿ ಹೋಗಿ ನೋಡಲು, ಬಸ್ಸಿನಲ್ಲಿ ನಾನು ನೋಡಿದ ಇಬ್ಬರು ಇವರೇ ಆಗಿದ್ದರು. ನನ್ನನ್ನು ನೋಡಿದೊಡನೆ ರಾಜಾರಾಮನು ಓಡಲು ಪ್ರಾರಂಭಿಸಿದನು. 'ನನ್ನ ಉಂಗುರ' ಎಂದವಳು ಒದರಿದಳು. ಅವನ ಬೆನ್ನು ಹತ್ತಿ ನಾನು ಜೀವದ ಹಂಗು ದೂರಿದು ಅವನ ಮೇಲೆ ಬಿದ್ದೆ. ನಾನು ಭೀಮಕಾಯನಾದುದರಿಂದ ಕೆಲವೇ ಏಟುಗಳಲ್ಲಿ ಅವನನ್ನು ನೆಲದಲ್ಲಿ ಮಲಗಿಸಿದ. ಅವನ ಜೇಬಿನಲ್ಲಿ ಒಂದು ಪರ್ಸ್ ಮಾತ್ರ ಇತ್ತು. ನನಗೆ ಬೇಕಾಗಿದ್ದದ್ದು ಸಿಗಲಿಲ್ಲ. ನಿರಾಶೆಯಿಂದ ಹಿಂತಿರುಗಲನುವಾದೆ. ಅವಳೂ ಅಲ್ಲಿಗೆ ಬಂದಿದ್ದಳು; ಮತ್ತು ಕುತೂಹಲದಿಂದ 'ಸತ್ತು ಹೋದನೋ' ಎಂದು ಸಣ್ಣ ಧ್ವನಿಯಲ್ಲಿ ಎಂದಳು. 'ಇಲ್ಲ' ನಾನೆಂದೆ. ಸಂತೋಷವಾಯಿತೆಂದು ತೋರುತ್ತೆ, ಅವಳಿಗೆ. ನನ್ನನ್ನು ಹಳ್ಳದಿಂದ ಹೊರ ಬರುವಂತೆ ಹೇಳಿದಳು. ನಾನು ಹಾಗೆ ಮಾಡಿದೆ. ಆದರೆ ಅವಳು ಹಳ್ಳಕ್ಕಿಳಿದಳು ಮತ್ತು ಆತನ ಒಳಕಿಸೆಯಿಂದ ಒಂದು ಉಂಗುರವನ್ನು ಹೊರ ತೆಗೆದು ನನ್ನನ್ನು ಬರುವಂತೆ ಸನ್ನೆ ಮಾಡಿದಳು. ನಾನು ಕೈ ಕೊಟ್ಟೆ ಅವಳು ಮೇಲೆ ಬಂದಳು. ಬಂದವಳೇ 'ಬಹಳ ಉಪಕಾರವಾಯಿತು' ಎಂದಳು. ನಾವಿಬ್ಬರೂ ಮುನ್ನಡೆದೆವು. ಅವಳು ನನ್ನಲ್ಲಿಗೆ ಬರುವೆನೆಂದಳು. ಇಬ್ಬರೂ ಕೂಡಿ ರಾತ್ರಿ ಬಹು ಹೊತ್ತು ನಡೆದವು. ನನ್ನ ಕೋಣೆಗೆ ಬಂದು ಬಾಗಿಲು ತೆಗೆದು ಒಳಗೆ ಹೋದೆವು 'ನಾನೊಬ್ಬನೇ ಇರುವುದು, ರೂಂ ಚೆನ್ನಾಗಿಲ್ಲ' ನಾನೆಂದೆ. ರೂಮನ್ನು ಮೇಲೆ ಕೆಳಗೆ ನೋಡುತ್ತಾ, ತೂಗ ಹಾಕಿದ್ದ ಫೋಟೋಗಳನ್ನು ನೋಡಿ—'ಪರವಾ ಇಲ್ಲ. ನೀವು ಸಿನೇಮಾ ಸ್ಟಾರ್ಸ್‌ಗಳನ್ನು ತುಂಬಾ ಇಟ್ಟಿದ್ದೀರಿ. ನಿಮಗೇನು ಸಿನೇಮಾ ನಟ ನಟಿಯರೆಂದರೆ ಬಹು ಪ್ರೀತಿಯೋ?" ಎಂದು ಕೇಳಿದಳು.

'ಹೌದು, ನಾನು ಸಹ ನಟನಾಗಬೇಕೆಂದು ಸಾಧಿಸಿದ, ಸಾಧ್ಯವಾಗಲಿಲ್ಲ, ಇಷ್ಟರ ತನಕ' ನಾನೆಂದೆ.

ನಾನು ಒಬ್ಬ ಸಿನೇಮಾ ಏಜಂಟ್ ಇದ್ದೇನೆ. ನೀವು ಒಪ್ಪುವಿರಾದರೆ, ನಿಮ್ಮನ್ನು ಸೇರಿಸುತ್ತೇನೆ, ದಯಮಾಡಿ ಒಪ್ಪಿಗೆ ಕೊಡಿ' ಆಕೆ ಅಂದಳು.

ನನಗೆ ಆಶ್ಚರ್ಯವೆನಿಸಿತು. ಮಾತಾಡಲಾಗಲಿಲ್ಲ. 'ನಾಳೆ ಬೆಳಿಗ್ಗೆ ತಯಾರಾಗಿರಿ, ನಾನು ಬರುತ್ತೇನೆ. ನಿಮ್ಮ ಉಪಕಾರವನ್ನು ಮರೆಯಲಾರೆ' ಎಂದು ಹೊರಟೇ ಹೋದಳು. ನನಗೆಲ್ಲವೂ ಭ್ರಮೆಯೆಂದೇ ಭಾಸವಾಯಿತು.

ಮಾರಣೆದಿನ ಬೆಳಿಗ್ಗೆ ಏಳುವಾಗ ಬಹುಹೊತ್ತಾಗಿತ್ತು. ಎದ್ದು ಮುಖ ತೊಳೆದು ಕುಳಿತುಕೊಂಡೆ. ಎಂಟು ಗಂಟೆ ಹೊಡೆದಿತ್ತು. ಹೊರಗೆ ಕಾರಿನ ಶಬ್ಧವಾಯಿತು. ಬಾಗಿಲು ತೆರೆದೆ. ಅದೇ ಮೋಹಿನಿ. ಹೇಳಿದಂತೆಯೇ ಬಂದಿದ್ದಳು. 'ಏನು? ಇನ್ನೂ ಹೊರಡಲಿಲ್ಲವೇ?' ಮುಗುಳು ನಗೆ ನಕ್ಕಳು ಆಕೆ. 'ಹೊರಟೆ' ನಾನೆಂದೆ ಬಟ್ಟೆ ಹಾಕಿ, ತಲೆ ಕೊಂಬು ಬಾಚಿದೆ. ಇಬ್ಬರೂ ಕಾರಿನಲ್ಲಿ ಕೂತೆವು. ಕಾರು ಹೊರಟಿತು. 'ನಾನು ನಿಮಗೆ ಕೆಲಸ ಕೊಡಿಸುತ್ತೇನೆ—ಆದರೆ ನನ್ನನ್ನು ಮರೆತುಬಿಡುವಿರೇನು ಮತ್ತೆ? ಎಂದು ನಕ್ಕಳು ಆಕೆ. ನನಗೆ ಯಾವುದೂ ಹೊಳೆಯಲಿಲ್ಲ.

ಅಷ್ಟರಲ್ಲಿ ನಾವು ಸ್ಟಾರ್ ಸ್ಟುಡಿಯೋಕ್ಕೆ ಬಂದಿದ್ದೆವು. ನಾವಿಬ್ಬರೂ ಸೀದಾ ಪ್ರೊಪ್ರೈಟರ್ ಆಫೀಸಿಗೆ ನುಗ್ಗಿದೆವು. ಪ್ರೊಪ್ರೈಟರ್‌ನಲ್ಲಿ ಮಾತಾಡಿ—ಬಾಂಡ್‌ಗೆ ಸೈನು ಮಾಡಿ ಹೊರಬಂದೆ. ಅವಳೂ ನನ್ನೊಡನೆ ಹೊರ ಬಂದಳು. ಅನಂತರ ನಾನು ಆಕೆಯನ್ನು ವಿಷ್ ಮಾಡಿ ಹೊರಟೆನು.

ಸ್ಟುಡಿಯೋ ಬಹು ದೊಡ್ಡದಿತ್ತು. ಹೊರ ಬರಲು ಅನೇಕ ಆಫೀಸ್‌ಗಳನ್ನು ದಾಟಬೇಕಿತ್ತು. ಒಂದಾನೊಂದು ಆಫೀಸಿನಲ್ಲಿ ತಾರಾ ಇದ್ದಳು. ಎಲ್ಲರಂತೆ ಅವಳೂ (ಹೊಸ ನಟನಾದುದರಿಂದ) ಉತ್ಸುಕತೆಯಿಂದ ನನ್ನನ್ನು ನೋಡಿ ಒಳ ಬರಹೇಳಿದಳು. ನಾನು ಹೋದೆ—ನೋಡೋಣವೆಂದು. ಕಾಫಿ ತರಿಸಿ, ಮಾತಾಡಲು ಕೂತಳು ತಾರೆ. ನನ್ನ ಚೇನ್ಸಿನ ವಿಷಯ 'ಅದು ಹೇಗೆ ಆಯಿತು' ಎಂದು ವಿಚಾರಿಸಿದಳು. ನಾನು ಅವಳಿಗೆ ಆಶ್ಚರ್ಯವಾಯಿತೇನೊ, ಮೋಹಿನಿಯು ನನಗೆ ಚಾನ್ಸ್ ಕೊಡಿಸಿದ್ದು ಹೇಳಿದ್ದಕ್ಕೆ.

'ನಮ್ಮನ್ನೆಲ್ಲಾ ಮರೆಯಬೇಡಾ, ಮಿ. ನರೇನ್' ಎಂದು ಪಿಳಿ ಪಿಳಿ ಕಣ್ಣು ಬಿಟ್ಟದ್ದನ್ನು ನಾನು ಕಾಣದಿರಲಿಲ್ಲ. ಆದರೆ ಅವಸರವಸರವಾಗಿ ಬಂದು ಬಿಟ್ಟೆ ನನ್ನ ರೂಮ್‌ಗೆ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

6 **Ludhiana.**

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ[illegible] 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ [illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52-12

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

[illegible] ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,

(52-26) ಗಿರಗಾಂವ, ಮುಂಬಯಿ ೪,

"ಕೊಡಗು" ಪತ್ರಿಕೆಯ

ಚಂದಾದಾರರಲ್ಲಿ

ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರವರಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತನ್ನನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು.
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಕೆ ಮುದ್ದಪ್ಪಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮಾಗಪ್ಪನವರು.
ನಾಪೋಕ್ಲು—ಮೆ. ಬೆಳ್ಳಿಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ಧವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ** ಮೂಲದ ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜನ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ಧವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಆಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮೂಬಂದ ಠೇವಣಾತಿ	-	2,43,318	7	4
ವಸೂಲಾದ ಕ್ಷೇಮನಿಧಿ	-	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ಶ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 3¾ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯೂನ 4ರ ದರದಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ. 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ಥ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ಥ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1–8–1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಳಿಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಸಿ. ಎಸ್. ಎನ್. ರಾಮಶೆಟ್ಟಿಯವರು.

ತಾ. 1–1–1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರ[illegible]

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	„ 100.	„ 35.	„ 22.	„ 13
3 ತಿಂಗಳಿಗೆ—	„ 60.	„ 20.	„ 13.	„ 8
1 ತಿಂಗಳಿಗೆ—	„ 25.	„ 10.	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ 'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62–21)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩—೮—೦

ತಾ. ೯—೬—೧೯೩೯. ಸಂಪುಟ ೧೯] [ಸಂಚಿಕೆ ೧

THE CANARA BANKING CORPORATION, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-26

ಕೇರಳ ಆಯುರ್ವೇದಿಕ್ ವೈದ್ಯಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಹಳಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
. ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-15

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ಶೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

28

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು

ದಯವಿಟ್ಟು ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–5

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೀರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟಾಕಿಸ್ಟ್—

ಡಾ. ಬಿ. ಕೆ. ಸಂಜುಂಡೇಶ್ವರ, ಎಲ್ ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–37)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

[illegible] ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12–33

ಜಪಾನರಿಗೆ ಅಪಾರವಾದ ನಷ್ಟ.

ಚೈನೀಯರ ಪ್ರಚಂಡ ಸಾಹಸ.

ಈಚೆಗೆ ಕೆಲವು ವಾರಗಳಿಂದಲೂ ಚೈನದಿಂದ ಸರಿಯಾಗಿ ವಾರ್ತೆಗಳು ಬರುತ್ತಿದ್ದಿಲ್ಲ. ಕಾರಣ ವಿಶೇಷದಿಂದ ಹೊಸ ಘಟನೆಗಳು ಅಲ್ಲಿ ಸಂಭವಿಸಲಿಲ್ಲ. ಕೆಲ ರಣರಂಗಗಳಲ್ಲಿ ಆರಂಭವಾಗಿದ್ದ ಹೋರಾಟವು ಒಂದೇ ಸವನೆ ಜೋರಾಗಿ ನಡೆಯುತ್ತಿದ್ದಿತು. ಫಲಿತಾಂಶವೇನೆಂದು ತಿಳಿಯದೆ ವಾರ್ತೆ ಕಳುಹಿಸಿ ಫಲವಿಲ್ಲವೆಂದು ರ್‍ಯಾಟರರ ವಾರ್ತಾ ಕಂಪೆನಿಯು ಸುಮ್ಮನಿದ್ದಿರಬಹುದು.

ಆದರೆ ತಾ. 29ರಲ್ಲಿ ಬಂದ ವಾರ್ತೆ ಚೈನದವರ ಸಹಾಸವನ್ನು ಸಂಪೂರ್ಣ ಪ್ರದರ್ಶಿಸುತ್ತದೆ. ನಾಲ್ಕು ವಾರಗಳ ತನಕ ಜಪಾನರು ತಮ್ಮ ಸರ್ವ ಶಕ್ತಿಯನ್ನೂ ಉಪಯೋಗಿಸಿ ಹ್ಯಾನ್ ನದಿಯ ದಡದ ಮೇಲಿರುವ ಸಿಯಾಂಗ್ ಯಾಂಗ್ ಮತ್ತು ಫೇನ್‌ಚಂಗ್ ಎಂಬ ನಗರಗಳ ಮೇಲೆ ಪ್ರಬಲವಾದ ಧಾಳಿ ಇಟ್ಟರು. ಇವರಲ್ಲಿ ಜಪಾನರ ವಿಮಾನ ಪಡೆಗಳೂ, ನೌಕೆಗಳೂ ಮತ್ತು ಭೂ ಸೈನ್ಯಗಳೂ ಭಾಗ ವಹಿದ್ದುವು. ಆದರಲ್ಲಿ ಚೈನೀಯರಿಗೆ ಅಪಜಯವಾಗುತ್ತಿದ್ದರೆ ಚೈನದ ವೀರಯೋಧರು ಧೈರ್ಯಗುಂದಿ ನಿರುತ್ಸಾಹಿಗಳಾಗುತ್ತಿದ್ದರು.

ಪ್ರಕೃತ ಅಂಥಾ ಪರಿಸ್ಥಿತಿಗಳೇನೂ ಉಂಟಾಗುವ ಸಂಭವವಿಲ್ಲ. ಚೈನೀಯರು ತಮ್ಮ ಬೇರೆ ಬೇರೆ ಸೇನಾಂಗಗಳನ್ನು ಉಪಯೋಗಿಸಿ ಜಪಾನರಿಗೆ ಯುದ್ಧ ಕೊಟ್ಟರು. ನಾಲ್ಕು ವಾರಗಳ ವರೆಗೆ ಅವಿಚ್ಛಿನ್ನವಾಗಿ ಹೋರಾಟ ನಡೆದು ಈಗ ಜಯ ಶ್ರೀಯು ಚೈನದ ಕುತ್ತಿಗೆಗೆ ಹೂಮಾಲೆಯನ್ನು ಹಾಕಿದಳು. ಇದರ ಪರಿಣಾವಾಗಿ ಜನರು ತಮ್ಮ 20 ಸಾವಿರ ಸೈನಿಕರನ್ನು ಕಳೆದುಕೊಂಡರು. ಇಷ್ಟೆಲ್ಲಾ ನಡೆದ ಮೇಲೆ ಜಪಾನಿ ಸೈನಿಕರು ಹಿಂದಕ್ಕೋಡುತ್ತಿದ್ದಾರೆ. ಇನ್ನು ಸೈನ್ಯದ ಪುನರ್ರಚನೆಯಾಗದೆ ಪುನಹ ಯುದ್ಧವನ್ನಾರಂಭಿಸಲು ಸಾಧ್ಯವಿಲ್ಲವೆಂದು ತೋರುತ್ತದೆ.

ಚೈನೀಯರಿಗೆ ಸುಸಂದರ್ಭ.

ಜಪಾನರ ಪ್ರಕೃತದ ಸೋಲಿನಿಂದಾಗಿ ಚೈನೀಯರಿಗೆ ತುಂಬಾ ಪ್ರಯೋಜನವಾಗಿದೆ. ಓರ್ವ ಚೈನೀ ದಳಪತಿಯು ಹೇಳುವಂತೆ ಚೈನಕ್ಕೆ ತನ್ನ ಸೇನೆಗಳನ್ನು ಸುಜ್ಜಗೊಳಿಸಿ, ಮತ್ತಷ್ಟು ತರಬೇತಿ ಮಾಡಲು ಎರಡು ಮೂರು ತಿಂಗಳ ಕಾಲವು ದೊರೆಯುವುದು. ಅಲ್ಲದೆ ಜಪಾನರನ್ನು ಸಮಾನ ರಂಗದಲ್ಲಿ ನಿಂತು ತಾವು ಸಂಪೂರ್ಣ ಸೋಲಿಸಬಲ್ಲೆವು ಎಂಬ ಧೈರ್ಯವು ಚೈನೀಯರಿಗೆ ಉಂಟಾಯಿತು. ಇದು ಬಹಳ ಮುಖ್ಯವಾದುದು. ಚೈನದ ಈ ಧೈರ್ಯ ಸ್ಥೈರ್ಯವೇ ಅದನ್ನು ಕೊನೆಯ ವರೆಗೆ ಹೋರಾಡುವ ನಿರ್ಧಾರ ಮಾಡಲು ಉತ್ತೇಜಿಸಬೇಕು.

ಜಪಾನಿನ ಹೊಸ ಶತ್ರುಗಳು.

ಚೈನದೊಡನೆ ಜಪಾನು ಭೀಕರ ಹೋರಾಟವನ್ನು ನಡೆಸುತ್ತಿರುವಾಗ ಜಪಾನಿಗೆ ಇದಿರಾಗಿ ಮತ್ತೊಂದು ದೇಶವು ಹೊರಟಿದೆ. ಹೊರ ಮಂಗೋಲಿಯಾದ ಸೈನಿಕರು ಮಂಚುಕೋ ಗಡಿನಾಡನ್ನು ಒಂದಲ್ಲ ಹಲವು ಬಾರಿ ಪ್ರವೇಶಿಸಿದ್ದಾರೆ; ಮಂಗೋಲಿಯನರ ಕಡೆಯ ವಿಮಾನಗಳು ಮಂಚುಕೋ ದೇಶದ ಮೇಲಕ್ಕೆ ಹಾರಿ ಬಂದು ಯುದ್ಧವನ್ನು ಹೂಡುತ್ತಿವೆ. ಹಿಂದಿನ ಒಂದು ವಾರದಲ್ಲಿ ತಾವು ಮಂಗೋಲಿಯದವರ 59 ಯುದ್ಧದ ವಿಮಾನಗಳನ್ನು ನಾಶಪಡಿಸಿದುದಾಗಿ ಜಪಾನರ ಈ ವಾರ್ತೆಯು ಎಷ್ಟು ನಿಜವಿರಬಹುದೆಂದು ನಾವು ಊಹಿಸಬಹುದು. ಜಪಾನಿನಲ್ಲಿ ಈಗಾಗಲೇ ಜನರು ಉದ್ವೇಗಗೊಂಡಿದ್ದಾರೆ. ಯುದ್ಧದಿಂದಾಗಿ ಜಪಾನು ಅವನತಿಯ ಸ್ಥಿತಿಗೆ ಇಳಿಯುವುದೆಂಬದನ್ನು ಜಪಾನಿಗಳು ಮನಗಂಡಿದ್ದಾರೆ ಲಕ್ಷ ಸಂಖ್ಯೆಯಲ್ಲಿ ಗಾಯಗೊಂಡ ಜಪಾನಿ ಸೈನಿಕರು ಹಿಂತಿರುಗುವುದನ್ನು ನೋಡಿ ಜಪಾನಿನ ದುರವಸ್ಥೆಯನ್ನು ಹಳಿಯುತ್ತಿದ್ದಾರೆ. ಅಲ್ಲಿ ಜಯ ಸಿಕ್ಕಿದೆ; ಇಲ್ಲಿ ಜಯ ದೊರೆತಿದೆ. ಎಂದು ಸುಳ್ಳು ವಾರ್ತೆಗಳನ್ನಾದರೂ ಹರಡಿ ಜಪಾನರ ಕಣ್ಣಿಗೆ ಮಣ್ಣೆರಚದಿದ್ದರೆ ಜಪಾನಿನಲ್ಲಿಯೇ ಹೋರಾಟವಾಗುವ ಸಂಭವವಿದೆ. ಅದಕ್ಕಾಗಿ ಈ ತೆರನಾದ ಸುಳ್ಳು ವಾರ್ತೆಗಳ ಕಂತೆಗಳನ್ನು ಜಪಾನಿ ಮಿಲಿಟರಿಯವರು ಹರಡುತ್ತಿದ್ದಾರೆ.

ಸಿಕ್ಕಿದ್ದೂ ಹೋಯಿತು..

ಉತ್ತರ ಚೈನಾದಲ್ಲಿ ಜಪಾನರ ಕೈಯ್ಯಲ್ಲಿದ್ದ ಹೆಚ್ಚಿನ ಭೂಭಾಗವು ಈಗ ಚೀನೀ ಸೈನಿಕರ ವಶವಾಗಿದೆ. ಜಪಾನರು ಚೀನೀ ಸೈನಿಕರ ಬೇಟೆಯಾಡಲು ಹೋಗಿ ತಾವೇ ಬೇಟೆಯಾಡಲ್ಪಟ್ಟರು. ಈಗ ಚೀನೀ ಸೈನಿಕರಿರುವ ಪ್ರದೇಶದಿಂದ ತಮ್ಮ ಎಲ್ಲಾ ಸೇನೆಯನ್ನೂ ಜಪಾನರು ಹಿಂದಕ್ಕೆ ಕರೆಸಿದ್ದಾರೆ. ನದಿಯ ದಡದ ಪಟ್ಟಣಗಳಲ್ಲಿಯೂ, ರೈಲು ನಿಲ್ದಾಣಗಳ ಸಮೀಪವೂ ಮಾತ್ರ ಜಪಾನಿಗಳಿದ್ದಾರೆ. ಜಪಾನರಿಂದ ನೇಮಿಸಲ್ಪಟ್ಟ ಗ್ರಾಮಾಧಿಕಾರಿಗಳೆಲ್ಲರೂ ಚೈನೀ ಸೈನಿಕರಿಂದ ದಂಡಿಸಲ್ಪಟ್ಟಿದ್ದಾರೆ. ಈಗಿನಂತೆಯೇ ಇನ್ನೂ ಕೆಲವು ಕಾಲ ಯುದ್ಧ ನಡೆದರೆ ಜಪಾನರು ತಾವಾಗಿಯೇ ಹಿಂದಕ್ಕೆ ಹೋಗಬೇಕಾಗುವುದು.

ಪರದೇಶೀಯರೊಡನೆ ಜಗಳ.

ಮತ್ತೊಂದು ಕಡೆಯಲ್ಲಿ ಜಪಾನಿಗೆ ಕಷ್ಟ ಪೂರಗುವ ಸ್ಥಿತಿ ಇದೆ. ಜಪಾನೀ ನೌಕಾಧಿಕಾರಿಗಳ ಅಹಂಕಾರದಿಂದಾಗಿ ಅವರು ಯುರೋಪ್ಯ ರಾಷ್ಟ್ರಗಳ ಕೋಪಕ್ಕೆ ಈಡಾಗಿದ್ದಾರೆ; ಅಮೋಯ್ ಸಮೀಪ ಜಪಾನಿಗಿದಿರಾಗಿ ನೌಕಾ ಸೈನಿಕರನ್ನಿಳಿಸಿದುದನ್ನು ನೋಡಿದರೆ ಜಪಾನರ ಪುಂಡಾಟಿಕೆ ಇನ್ನು ಇವರು ಎಡೆ ಕೊಡುವುದಿಲ್ಲವೆಂಬದನ್ನು ಊಹಿಸಬಹುದು. ಹೀಗಾಗಿ ಮುಂದಿನ ಕೆಲವು ತಿಂಗಳುಗಳಲ್ಲಿ ಜಪಾನರು ಚೈನಾದಿಂದ ಹೊರಡುವ ಪ್ರಸಂಗ ಬಂದೀತೆಂದು ತೋರುತ್ತದೆ.

ಸಂಸ್ಕೃತದ ಕಾಠಿಣ್ಯವೇ ಅದಕ್ಕೆ ವಿನಾಶ.

(ಲೇಖಕ:–ಐ. ಯಂ. ಮುತ್ತಣ್ಣ.)

ಸಂಸ್ಕೃತ ಭಾಷೆಯು ಇತರ ಎಲ್ಲಾ ಭಾಷೆಗಳಿಗೆ ತಾಯಿಯಂತಿರುವ ಭಾಷೆಯೆಂದೂ, ಅದರ ಕೊಂಬೆಗಳೇ ಇತರ ಅನೇಕ ಭಾಷೆಗಳೆಂದೂ ಎಲ್ಲರೂ ಒಪ್ಪುತ್ತಿರುವರು. ಇಂಥಾ ಭಾಷೆಯನ್ನು ಅನೇಕರು ಈಗಿನ ಕಾಲಕ್ಕೆ ಅದನ್ನು ಮೃತಭಾಷೆಯೆಂದು ಅದರ ಶಿಕ್ಷಣ ವರ್ಗವನ್ನೇ ತೆಗೆಯುವುದನ್ನು ನೋಡಿದರೆ ಬಹು ಶೋಚನೀಯ. ಈಗ ಎಲ್ಲೆಲ್ಲೂ ಸಂಸ್ಕೃತ ಭಾಷೆಯು ಹಿಂದೆ ಬೀಳಲು ಕಾರಣ ಮುಖ್ಯವಾಗಿ ಅದು ಮಾತಿನಲ್ಲಿ ಬಳಕೆಯಲ್ಲಿಲ್ಲದ್ದರಿಂದ. ಆದರೂ ಸಹ ಆ ಭಾಷೆಯಲ್ಲಿನ ಗಾಂಭೀರ್ಯವು ಬಹು ಮಹತ್ವಾದ್ದಾಗಿದೆ. ಇದರ ಪ್ರಾಮುಖ್ಯತೆಯು ಎಷ್ಟರ ಮಟ್ಟಿಗೆ ಇದೆಯೆಂದರೆ ಸಾಧಾರಣ ಭೂಲೋಕದಲ್ಲಿಯ ನಾಲ್ಕರಲ್ಲಿ ಮೂರರಷ್ಟಿರುವ ಭಾಷೆಗಳೆಲ್ಲಾ ಶಬ್ಧ, ವ್ಯಾಕರಣ, ಅಕ್ಷರ ಮಟ್ಟಿಗೆ ಸಂಸ್ಕೃತದಿಂದಲೇ ಉದ್ಭವಿಸಿದೆಯೆಂಬದನ್ನು ಹೇಳಬಹುದು. 'ದೇವನಾಗರಿ' ಲಿಪಿ ಕ್ರಮವನ್ನು ಅನೇಕ ಭಾಷೆಗಳು ಅನುಸರಿಸಿವೆ. ಅಲ್ಲದೆ ಹಲವು ಭಾಷೆಗಳಿಗೆ ಇದೇ ಆಧಾರಾಧಾರಪ್ರಾಯವಾಗಿದೆ.

ಪೂರ್ವ ಕಾಲದಲ್ಲಿ ಆರ್ಯರಲ್ಲಿ ರೂಢಿಯಲ್ಲಿದ್ದ ಈ ಭಾಷೆಯು ಈಗ ಮಾಲಿನ್ಯ ಹೊಂದಲು ಕಾರಣವೇನಿರಬಹುದೆಂದರೆ ದೇಶದೊಳಗೆ ತಂಡೋಪತಂಡಗಳಾಗಿ ವಿದೇಶಿಯರು ಬಂದು ಸೇರಿದರಿಂದಲೇ ಎಂದೆನ್ನಬಹುದು. ಇಲ್ಲದ ಪಕ್ಷದಲ್ಲಿ ಇಂದಿಗೂ ಸಂಸ್ಕೃತ ಭಾಷೆಯು ರೂಢಿಯಲ್ಲಿದ್ದು ಪ್ರತಿ ಶಾಲೆಗಳಲ್ಲೂ ನಿತ್ಯ ಪಾಠವಾಗಿರುತಿತ್ತು. ಆದರೆ ಈಗ ಸಂಸ್ಕೃತ ಭಾಷೆಗೆ ಪ್ರಶಸ್ತಿ ಎಂದರೆ ಬರೇ ವಿದ್ವಾನ್ ಪರೀಕ್ಷೆಗಳಿಗೆ ಒಂದೊಂದು ಅಂಗವಾಗಿ ಇಟ್ಟಿರುವುದಲ್ಲದೆ ಕೆಲವು ಶಾಲೆಗಳಲ್ಲಿ ಐಚ್ಛಿಕ ಪಾಠವಾಗಿಯೂ ಇರಿಸಿರುವರು. ಕ್ರಮೇಣ ಇದರ ಸುಳಿವೇ ಇಲ್ಲದಂತಾಗಬಹುದೆಂಬದನ್ನು ಬೇರೆ ಹೇಳಬೇಕಾಗಿಲ್ಲ. ಭರತ ಖಂಡದೊಳಗಿನ ಅನೇಕ ಭಾಷೆಗಳ ಪೈಕಿ ಸಂಸ್ಕೃತವೇ ಅತೀ ಕಠಿಣವಾದುದೆಂದು ಹೇಳುವರು. ಆದ್ದರಿಂದ ತೇವವಿರುವ ಸ್ಥಳದಲ್ಲಿ ಅಗಿಯುವುದು ಹೆಚ್ಚೆಂಬಂತೆ ಸಂಸ್ಕೃತದಂಥಾ ಗಟ್ಟಿ ಪ್ರದೇಶದಲ್ಲಿ ಅಗಿಯುವವರು ಬಹು ವಿರಳ. ಸಂಸ್ಕೃತ ವ್ಯಾಕರಣವು ವಿಪರೀತವಾಗಿ ಇತರ ಭಾಷೆಗಳನ್ನು ಮೀರಿದೆ. ಕೆಲವೆಡೆ ಕೇವಲ ನಿಷ್ಪ್ರಯೋಜನವಾಗಿ ಬಾಷೆಯಲ್ಲಿನ ಕಠಿಣತೆಯನ್ನು ಮಾತ್ರ ಸೂಚಿಸುತ್ತವೆ. ಸಂಧಿವಿಂಗಡ ಕಾರ್ಯವೆಂದರೆ ಹಸಿ ಮರ ಚಕ್ಕೆಯನ್ನು ಸುಲಿದು ತಿನೆಯುವುದು ಹೇಗೋ ಹಾಗೆಯೇ. ಅತೀ ಚಿಕ್ಕ ಶಬ್ಧಗಳನ್ನು ಒಂದಕ್ಕೊಂದು ಸಂಧಿಸಿ ಹಾಕಿಬಿಟ್ಟು ಓದುವುದರಲ್ಲಿರುವ ಪ್ರಯಾಸವನ್ನು ಬಿಚ್ಚಿ ತೋರಿಸುತ್ತದೆ. ಇತರ ಭಾಷೆಗಳಲ್ಲೆಲ್ಲಾ ಒಂದು ಪಂಕ್ತಿಯಲ್ಲಿ ಬರೆಯಬೇಕಾದುದನ್ನು ಸಂಸ್ಕೃತ ಭಾಷೆಯು ಬರೇ ಒಂದು ಶಬ್ದದಲ್ಲಿ ಸೂಚಿಸಿ ಅದರ ಶೌರ್ಯವನ್ನು ಪ್ರದರ್ಶಿಸುತ್ತದೆ. ಇತರ ಭಾಷೆಗಳಲ್ಲಿ ತೋರದ ಈ ಭಾಷೆಯ ವ್ಯಾಕರಣ ಸೂತ್ರಗಳನ್ನು ನೀರಿಗೆ ಬಿದ್ದ ಮೇಲೆ ದಡ ಹತ್ತಲು ಯತ್ನಿಸುವ ಹಾಗೆ ಸಂಪೂರ್ಣ ಬಾಯಿ ಪಾಠ ಮಾಡಿಯೇ ಪ್ರವೀಣನೆನಿಸಿಕೊಳ್ಳಬೇಕು. ಶಬ್ಧಗಳಲ್ಲಿ ಪ್ರತ್ಯಯ ವಿಧಿ ಕ್ರಮಗಳೆಲ್ಲವೂ ಈ ಭಾಷೆಯನ್ನು ತಿಳಿದವನಿಗೆ ಇವೆಲ್ಲ ನಿಜವೆಂದೆನಿಸದೆ ಇರದು. ಭಾಷಾ ಸೂಚಕವಾದ ಅತೀ ಚಿಕ್ಕ ಆಗು ಹೋಗುಗಳನ್ನು ಪ್ರಸ್ತಾಪಿಸಿ ವ್ಯಾಕರಣದಲ್ಲಿ ಪ್ರತ್ಯೇಕ ಶಬ್ದ ಕ್ರಮಗಳಿಂದ ಕಠಿಣತೆಯನ್ನುಂಟುಮಾಡಿದ್ದು ಈಗಿನ ಜನರ ಕಲೆಯಲ್ಲಿನ ಮೃದು ಮೆದುಳನ್ನು ಕರಗಿಸದೆ ಇರದು. ಪಾಣಿನೀ ಪ್ರಸ್ತಾಪ ತೆಗೆದುಕೊಂಡಲ್ಲಿ ಸುಮಾರು 1900 ಧಾತುಗಳಿಂದ ಇಡೀ ಭಾಷೆಯನ್ನು ಕಲ್ಪಿಸಿ ಅದೇ ಗಿರಿಯಿಂದ ಆ ಭಾಷಾ ಶೈಲಿಯು ಅಲಂಕಾರಗೊಳ್ಳಬೇಕಾದರೆ ವಾಚಕರೇ ಅದರ ಕಠಿಣತೆಯನ್ನು ತಿಳಿದುಕೊಳ್ಳಬಹುದು. ಎಲ್ಲಾ ಪುಸ್ತಕಗಳಿಗೆ 'ನೋಟ್ಸು' ಎಂದರೆ ಇರುವುದನ್ನು ಕನಿಷ್ಟ ಪಕ್ಷಕ್ಕೆ ತಂದು ವಿವರಿಸಿ ಆ ರೀತಿ ಸುಲಭವಾಗಿ ಭೋದಿಸುವುದು. ಆದರೆ ಪಾಣಿನೀ ವ್ಯಾಕರಣಕ್ಕೆ ಬರೆಯಲ್ಪಟ್ಟ ನೋಟ್ಸು ಎಂದರೆ ಅದರ ಹತ್ತರಷ್ಟು ಅಥವಾ ಎಷ್ಟೋ ದೊಡ್ಡದಾಗಿದೆ. ಅನೇ ಆಗರ ಕಠಿಣತೆಗೆ ಆದರ್ಶಪ್ರಾಯವಾಗಿದೆ ಒಬ್ಬ ಪಂಡಿತರ ಹತ್ತಿರ ಸ್ವಲ್ಪ ಸಂಸ್ಕೃತವನ್ನು ಬೋಧಿಸಿರಿ, ಎಂದೆಂದರೆ ಅವರು 'ಅದೇನು ಅಷ್ಟು ಸುಲಭವಲ್ಲ. ಅಷ್ಟರಲ್ಲೇನೂ ಕಲಿಯಲಾಗುವುದಿಲ್ಲ. ಬೇರೆ ದೊಡ್ಡ ಶಾಲೆಗಳಲ್ಲಿ ಹೋಗಿ ಶಿಕ್ಷಣ ಹೊಂದಬೇಕು' ಎಂದು ಹೇಳಿಬಿಡುವರು. ಅನೇಕರು ಬಹು ಪ್ರಯಾಸಪಟ್ಟು ಕಲಿತಿದ್ದರೂ ಏನೊಂದೂ ಪ್ರಯೋಜನ ಇಲ್ಲದಾಗಿದೆ. ಮಾತಾಡಬಹುದೆಂದರೆ ಮಾತಿನ ರೂಢಿಯೂ ಇಲ್ಲ. ಬೋಧಿಸಬಹುದೆಂದರೆ ಕಲಿಯುವವರಿಲ್ಲ. ಸಾರ್ವಜನಿಕ ಪ್ರಯೋಜನಾರ್ಥವಾಗಿ ಬರೆದಿಡಬೇಕೆಂದರೆ ಅವಕ್ಕೆ ಕಿವಿಗೊಡುವವರಿಲ್ಲ. ಹೀಗಾಗಿ ಅದು ಈಗಿನ ಕಾಲಕ್ಕೆ 'ಮೃತಭಾಷೆ' ಎಂದು ಹಾತೊರೆಯುವರು. ಸಂಪೂರ್ಣವಾಗಿ ಅದರ ಗೌರವವನ್ನು ಕಳೆದುಕೊಳ್ಳಲನುವಾಗಿದೆ.

ಪುರಾಣ ವೇದಗಳೂ, ಇತರ ಶಾಸ್ತ್ರೋಪನಿಷತ್ತುಗಳೂ ಸಂಸ್ಕೃತದಲ್ಲಿದ್ದು ಪ್ರಪಂಚದ ಭಾಷಾ ದೇವಿಯಾಗಿ ಪೂಜಿಸಲರ್ಹವಾಗಿದೆ. ಇತರ ಪವಿತ್ರವಾದ ಪೂರ್ವದ ಗ್ರಂಥಗಳೆಲ್ಲವೂ ಸಂಸ್ಕೃತದಲ್ಲೇ ಉಲ್ಲೇಖಿಸಲ್ಪಟ್ಟಿದೆ. ಆದರೆ ಇದರಲ್ಲಿನ ಕಾಠಿಣ್ಯವು ಅದರ ಪ್ರಾಮುಖ್ಯತೆಯನ್ನೆಲ್ಲಾ ಕಳೆಯಲೆತ್ನಿಸುವುದು. ಸರ್ಕಾರದವರು ಸಂಸ್ಕೃತ ಶಿಕ್ಷಣಕ್ಕೆ ಮನ ಕೊಡುವ ಅಭಿಪ್ರಾಯದಲ್ಲೇ ಇಲ್ಲ. ಆದರೆ ಈ ಭಾಷೆಯ ವಿಶೇಷ ಪರಿಚಯವಿದ್ದ ಪಕ್ಷಕ್ಕೆ ಘನ ಜ್ಞಾನಿಯಾಗಿ ಮೆರೆಯಬಹುದು. ಸಾಧಾರಣ ಸರಳ ಭಾಷೆಯಾಗಿದ್ದಂಥಾ

(8ನೇ ಪುಟವನ್ನು ನೋಡಿ)

ಯೂರೋಪಿನ ಕಲಹಕಂಟಕ ಹಿಟ್ಲರ್.

ಬಡ ಕುಟುಂಬದಲ್ಲಿ ಜನಿಸಿ, ಅನೇಕ ಕಷ್ಟಪರಂಪರೆಗಳನ್ನು ಸಹಿಸಿ, ಇಂದು ಜಗತ್ತಿನ ದೃಷ್ಟಿಯನ್ನು ತನ್ನೆಡೆಗೆ ಆಕರ್ಷಿಸಿ,-ಅನೇಕ ಅಖಂಡ ಮುಖಂಡರ ಎದೆ ನಡುಗಿಸುತ್ತಿರುವ ಮಹಾ ವ್ಯಕ್ತಿಯ ಕ್ರಾಂತಿಕಾರಕ ಜೀವನ.

ಜಗತ್ತಿನ ಮಹಾ ವ್ಯಕ್ತಿಯಾರೆಂದು ಇಂದು ಪ್ರಶ್ನಿಸಿದರೆ ಜರ್ಮನಿಯ ನಿರ್ಮಾಣ ಕರ್ತ ಹಿಟ್ಲರನ ಕಡೆಗೆ ಕೈತೋರಿಸುವವರು ಹೆಚ್ಚು. ಈ ಗಣ್ಯ ವ್ಯಕ್ತಿಯು ಅವತಾರ ಮಾಡಿದ್ದು ಆಸ್ಟ್ರೀಯಾ ದೇಶದ ಬಡ ಕುಟುಂಬ ಒಂದರಲ್ಲಿ. ಹೊಟ್ಟೆಯ ಪಾಡಿಗಾಗಿ ಆಸ್ಟ್ರೀಯಾ ಹಾಗೂ ಜರ್ಮನಿಯಲ್ಲಿ ಅಲೆದಾಡಿದ ಈತನು ಕಳೆದ ಘೋರ ಯುದ್ಧದ ಸಂದರ್ಭದಲ್ಲಿ ಜರ್ಮನಿ ಸೈನಿಕರೊಡನೆ ಕೂಡಿ ಹೋರಾಡಿದನು ಇದರಿಂದಾಗಿ ಈತನಿಗೆ ಜರ್ಮನಿಯ ಮೇಲೆ ವಿಶೇಷ ಪ್ರೇಮವು ಹುಟ್ಟಿ ಈತನಲ್ಲಿ ಒಂದು ಸ್ಫೂರ್ತಿಯು ಉದ್ಭವಿಸಿತು. ಜರ್ಮನಿಯಲ್ಲಿ ಆ ಕಾಲಕ್ಕೆ ಹಿಂಡ್ ಬರ್ಗ್ ಎಂಬವನು ಅಧ್ಯಕ್ಷನಾಗಿದ್ದನು. ಹಿಟ್ಲರನು ತನ್ನ ವಯಸ್ಸಿನ ಯುವಕರನ್ನು ಸೇರಿಸಿ ಒಂದು ಹೊಸ ಪಕ್ಷವನ್ನು ಸ್ಥಾಪಿಸಿ ಜರ್ಮನಿಯ ಹಳೆಯ ಪದ್ಧತಿಯ ರಾಜ್ಯಭಾರವನ್ನು ಬದಿಗೊತ್ತುವ ಯೋಜನೆ ಮಾಡಿದನು. ಅದೇ ಇಂದಿನ ಪ್ರಚಂಡ ನಾಝಿ ಸಂಸ್ಥೆಯ ಅಡಿಗಲ್ಲು. ಕ್ರಮೇಣ ಈ ಸಂಗಡವು ಅಭಿವೃದ್ಧಿಗೊಂಡಿತು. ಅಷ್ಟರಲ್ಲಿ ಅಧ್ಯಕ್ಷನಾಗಿದ್ದ ಹಿಂಡ್ ಬರ್ಗನು ಈ ಹೊಸ ಪಕ್ಷದೊಡನೆ ಜಗಳಮಾಡಿದರೆ ತನ್ನ ಸ್ಥಿತಿಯು ನೆಟ್ಟಗಿರಲಿಕ್ಕಿಲ್ಲವೆಂದು ತಿಳಿದು ಹಿಟ್ಲರನನ್ನು ಜರ್ಮನಿಯ ಛಾನ್ಸಲರ್‌ನಾಗಿ ನೇಮಿಸಿದನು ದೈವವಶಾತ್ 1932 ರಲ್ಲಿ ಹಿಂಡ್‌ಬರ್ಗನು ಕಾಲವಶವಾಗಲು ಹಿಟ್ಲರನು ತಾನೇ ಸರ್ವಾಧಿಕಾರಿಯೆಂದು ಸಾರಿ ಜರ್ಮನಿಯಲ್ಲಿ ನಿರಂಕುಶಾಧಿಕಾರಕ್ಕೆ ಪ್ರಾರಂಭಿಸಿದನು

ಭಗ್ನವಾದ ಜರ್ಮನಿ.

ಜರ್ಮನಿಯು ಮಹಾ ಯುದ್ಧದಲ್ಲಿ ಸೋತು ಕಂಗೆಟ್ಟು ಹೋಗಿದ್ದ ಕಾಲಕ್ಕೆ ಇಂಗ್ಲೆಂಡ್, ಫ್ರಾನ್ಸ್‌ಗಳೆಲ್ಲವೂ ಸೇರಿ 'ವಾರ್ಸಲ್ಸ್' ಎಂಬ ಕರಾರನ್ನು ಮಾಡಿ ಜರ್ಮನಿಯನ್ನು ಹರಿದು ಹಂಚಿ ಭೂಗತ ಮಾಡಿಬಿಟ್ಟವು. ಇದರ ಪರಿಣಾಮದಿಂದಾಗಿ ವಿಶಾಲ ಚಕ್ರಾಧಿಪತ್ಯವಾಗಿದ್ದ ಜರ್ಮನಿಯು ಧ್ವಂಸವಾಗಿ ಸಣ್ಣ ಸಣ್ಣ ಸ್ವತಂತ್ರ ರಾಷ್ಟ್ರಗಳು ತಲೆಯೆತ್ತಿದವು. ಜರ್ಮನಿಯ ವಸಾಹತುಗಳೆಲ್ಲ ಬಲಾತ್ಕಾರದಿಂದ ಇತರ ರಾಷ್ಟ್ರಗಳಿಗೆ ಸೇರಿಸಲ್ಪಟ್ಟವು. ಹೀಗೆ ಯುದ್ಧದ ಛಳದಿಂದ ಬಳಲಿ ಬೆಂಡಾಗಿದ್ದ ಜರ್ಮನರಿಂದ ರಾಷ್ಟ್ರವನ್ನು ಕಿತ್ತುಕೊಂಡದ್ದಲ್ಲದೆ ಅವರ ಮೇಲೆ ಸಾಲದ ಹೊರೆಯನ್ನು ಹೇರಿದವು.

ಹಿಟ್ಲರನು ಅಧಿಕಾರ ವಹಿಸಿದ ನಂತರ ಫ್ರಾನ್ಸ್, ಇಂಗ್ಲಂಡ್ ಈ ರಾಷ್ಟ್ರಗಳನ್ನು 'ವಾರ್ಸೆಲ್ಸ್' ಒಪ್ಪಂದವನ್ನು ಮಾರ್ಪಡಿಸಬೇಕೆಂದು ಕೇಳಿಕೊಂಡನು. ಜಗತ್ತಿನಲ್ಲಿ ತಮಗೂ ಇತರ ರಾಷ್ಟ್ರಗಳಂತೆ ಒಂದು ಅಂತಸ್ತನ್ನು ಕೊಡಬೇಕೆಂದು ಬೇಡಿದನು. ಆದರೆ ವಿಜಯೋನ್ಮತ್ತರಾಗಿ ಮೆರೆಯುತ್ತಿದ್ದ ಇಂಗ್ಲೆಂಡ್, ಫ್ರಾನ್ಸುಗಳು ಈ ನ್ಯಾಯಸಮ್ಮತ ಕೇಳಿಕೆಗಳನ್ನು ನಿರಾಕರಿಸಿದವು. ಯುದ್ಧದಲ್ಲಿ ಸೋತವರಿಗೆ ನಮ್ಮ ಸರಿಯಾದ ಅಂತಸ್ತನ್ನು ಕೊಡಲಾರೆವೆಂದು ಘೋಷಿಸಿದವು. ಆದ್ದರಿಂದ ಹಿಟ್ಲರನು ಯೋಚಿಸಿದ್ದ ಆಶೆಯು ಮಣ್ಣುಗೂಡಿತು. ನ್ಯಾಯಮಾರ್ಗಕ್ಕೆ ಬೆಲೆಯಿಲ್ಲವೆಂದು ಹಿಟ್ಲರನಿಗೆ ತಿಳಿಯಿತು.

ವಾರ್ಸೆಲ್ಸ್ ಕರಾರಿನ ಸಮಾಧಿ.

ಆದ್ದರಿಂದ ಹಿಟ್ಲರನು, 'ಜಗತ್ತಿನಲ್ಲಿ ಶಕ್ತಿಯ ಬಲವೇ ಪ್ರಧಾನ'ವೆಂದು ಸಾರಿ ಅದರಂತೆ ಕಾರ್ಯಪ್ರವೃತ್ತನಾದನು. ಜನಾಂಗಗಳ ಕೂಟದ ತಮ್ಮ ಪ್ರಾತಿನಿಧ್ಯವನ್ನು ತ್ಯಜಿಸಿದನು ಜರ್ಮನಿಯಲ್ಲಿ ಹೊಸ ಸೈನ್ಯ ಶಿಕ್ಷಣವನ್ನು ತಂದನು. ಹೊಸ ಹೊಸ ವಿಧದ ಯುದ್ಧ ಸಾಮಗ್ರಿಗಳು ತಯಾರಿಸಲ್ಪಟ್ಟವು. 'ವಾರ್ಸೆಲ್ಸ್' ಕರಾರಿನ ಪ್ರತಿಯೊಂದು ಶರತ್ತನ್ನೂ ಮುಂದ್ಕೆ ಹಾಕಿದನು. ಇಂಗ್ಲೆಂಡ್ – ಫ್ರಾನ್ಸ್‌ಗಳ ಗೊಡ್ಡು ಬೆದರಿಕೆಯನ್ನು ಅಲಕ್ಷಿಸಿದನು. ಇಷ್ಟರಲ್ಲಿ ಜರ್ಮನಿಯ ಸೇನೆಯು ಅಗಾಧವಾಗಿ ಬೆಳೆಯಿತು. ಇಂಗ್ಲೆಂಡ್ ಫ್ರಾನ್ಸುಗಳನ್ನು ಎದುರಿಸುವೆನೆಂಬ ಶಕ್ತಿಯು ಬಂತು. ಮುಂದೆ ಹಿಟ್ಲರನು ತನ್ನ ದಂಡಯಾತ್ರೆಯನ್ನು ಪ್ರಾರಂಭಿಸಿದನು.

ಸಾರ್ ಪ್ರಾಂತ್ಯ

ಮಹಾ ಯುದ್ಧದ ಮೊದಲು ಇದು ಜರ್ಮನಿಗೇ ಸೇರಿತ್ತು. ಆದರೆ ವಾರ್ಸೆಲ್ಸ್ ಒಪ್ಪಂದದಂತೆ ಇದು ಫ್ರಾನ್ಸಿಗೆ ಸೇರಿತ್ತು. ಈ ಪ್ರಾಂತದ ಜನವಸತಿಯು ಪೂರಾ ಜರ್ಮನರೇ ಆದಪ್ರಯುಕ್ತ ಅವರೆಲ್ಲರೂ ಜರ್ಮನಿಗೆ ಸೇರಲು ಆಶೆಪಡುತ್ತಿದ್ದರು. ಈ ಪ್ರಾಂತದ ಬಹುಮತದವರು ಜರ್ಮನಿಯೊಡನೆ ಸೇರಬೇಕೆಂಬ ಹಟತೊಟ್ಟದ್ದರಿಂದ ಫ್ರಾನ್ಸು 'ಇದನ್ನು ಜರ್ಮನಿಗೆ ಹಿಂತಿರುಗಿ ಕೊಡಬೇಕಾಯಿತು. ಇದು ಹಿಟ್ಲರನಿಗೆ ಕಳೆದು ಹೋದ ಪ್ರಾಂತಗಳಲ್ಲಿ ಪ್ರಥಮತಃ ಸಿಕ್ಕಿದ ಭಾಗ.

ರೈನ್ ಲೇಂಡ್.

ಇಟೆಲಿ ಅಬಿಸೀನಿಯಾ ಯುದ್ಧವು 1935 ರಲ್ಲಿ ಪ್ರಾರಂಭವಾಯಿತು. ಈ ಕಾರಣವಾಗಿ ಇಡೀ ಜಗತ್ತಿನ ದೃಷ್ಟಿಯು ಆ ಕಡೆ ಕೇಂದ್ರೀಕರಿಸಿತು. ಯೂರೋಪಿನ ಇತರ ರಾಷ್ಟ್ರಗಳು 'ಜನಾಂಗಗಳ ಕೂಟ'ವೆಂಬ ನಾಟ್ಯರಂಗದಲ್ಲಿ ವಿವಿಧ ಆಟಗಳಲ್ಲಿ ಮರುಳಾಗಿ ಇಟೆಲಿಯನ್ನು ಬಗ್ಗುಬಡಿಯಬೇಕೆಂಬ ಅದೊಂದು ದೃಷ್ಟಿಯಿಂದಲೇ ವ್ಯವಹರಿಸು ಹಿಟ್ಲರನನ್ನು ಮರೆತುಬಿಟ್ಟಿದ್ದವು ಈ ಸಮಯವನ್ನು ನಿರೀಕ್ಷಿಸುತ್ತಿದ್ದ ಹಿಟ್ಲರನು ಏಕಾಏಕಿ 1936ರಲ್ಲಿ ಫ್ರಾನ್ಸ್ ಮತ್ತು ಜರ್ಮನ್ ಗಡಿಯಾದ ರೈನ್‌ಲೇಂಡಿನ ಮೇಲೆ ದಂಡೆತ್ತಿ ನುಗ್ಗಿದನು. ಫ್ರಾನ್ಸಿನವರು ಇದರಿಂದ ಕಿಡಿಕಿಡಿಯಾದರೂ ಯಾರ ಬೆಂಬಲವೂ ಸಿಗದ್ದರಿಂದ ಹಿಟ್ಲರನನ್ನು ಎದುರಿಸಲಿಲ್ಲ. ಇದು ಹಿಟ್ಲರನು ತನ್ನ ಸ್ವಪ್ರಯತ್ನದಿಂದ ಸಾಧಿಸಿದ 'ಶಕ್ತಿಯ ಪ್ರಧಾನ್ಯ'ದ ಮೊದಲನೇ ಜಯ.

ರೋಮ್ - ಬರ್ಲಿನ್ ಸಖ್ಯ

ಮಹಾ ಯುದ್ಧವು ಮುಗಿದ ನಂತರ ಆಸ್ಟ್ರೀಯಾವು ಸ್ವತಂತ್ರ ರಾಷ್ಟ್ರವಾಗಿತ್ತು ಅಲ್ಲಿ ಜರ್ಮನರ ಸಂಖ್ಯೆಯೇ ಹೆಚ್ಚಿದ್ದ ಕಾರಣ ಅವರು ಆಸ್ಟ್ರೀಯಾವನ್ನು ಜರ್ಮನಿಗೆ ಸೇರಿಸಬೇಕೆಂದು ಚಳವಳ ನಡೆಸಿದರು. ಆದರೆ ಇದರಿಂದ ಇಟೆಲಿಯ ಮುಸಲೋನಿಯು ಸಿಟ್ಟಿಗೆದ್ದು ಒಮ್ಮೆ ಆಸ್ಟ್ರೀಯಾದಲ್ಲಿರುವ ಜರ್ಮನರನ್ನು ಒಡಿಸುವ ಯತ್ನ ಮಾಡಿದನು. ಇದರಿಂದ ಮುಸಲೋನಿಯ ಸಖ್ಯವಿಲ್ಲದೆ ತನ್ನ ಮುಂದಿನ ಕಾರ್ಯ ಸಾಗದೆಂದು ತಿಳಿದ ಹಿಟ್ಲರನು ಮುಸಲೋನಿಯ ಸ್ನೇಹವನ್ನು ಬೇಡಿದನು. ಇಂಗ್ಲೆಂಡ್, ಫ್ರಾನ್ಸ್ ಇವೇ ಮೊದಲಾದ ರಾಷ್ಟ್ರಗಳ ಕ್ರೂರ ದೃಷ್ಟಿಗೆ ಬಿದ್ದಿದ್ದ ಇಟೆಲಿಯು ಜರ್ಮನರ ಕೈಯನ್ನು ಆದರದಿಂದ ಸ್ವೀಕರಿಸಿತು. ಇದೇ ಇಂದು 'ರೋಮ್ - ಬರ್ಲಿನ್ ಆಕ್ಸಿಸ್' ಎಂಬ ಹೆಸರಿನಿಂದ ಇಡೀ ಜಗತ್ತನ್ನೇ ಅಲ್ಲಾಡಿಸುತ್ತಿದೆ.

ಆಸ್ಟ್ರೀಯಾದ ಪತನ.

ಇಟೆಲಿಯೊಡನೆ ಸ್ನೇಹವಾದ ಮೇಲೆ ಆಸ್ಟ್ರೀಯಾವನ್ನು ಕೈವಶ ಮಾಡಲು ಹಿಟ್ಲರನು ಹವಣಿಸುತ್ತಿದ್ದನು. 1937 ರ ಮಾರ್ಚ್ ತಿಂಗಳಲ್ಲಿ ಆಸ್ಟ್ರೀಯಾದ ನಾಝಿಗಳು ಗಲಭೆಯೆಬ್ಬಿಸಿದ್ದರಿಂದ ಆಸ್ಟ್ರೀಯಾದ ಅಧ್ಯಕ್ಷರಾದ ಡಾ. ಶೂಷ್ನಿಗರು ಆಸ್ಟ್ರೀಯಾಕ್ಕೆ ಯಾವ ಸರಕಾರ (ನಾಝಿ ಯಾ ಆಸ್ಟ್ರೀಯಾ) ಬೇಕೆಂಬ ಬಗ್ಗೆ ಓಟಿನ ಮೂಲಕ ನಿರ್ಧರಿಸಲು ಯೋಚಿಸಿದನು. ಇದರಿಂದ ಹಿಟ್ಲರನು ಎಚ್ಚೆತ್ತನು. ಓಟು ನಡೆದರೆ ನಾಝಿಗಳಿಗೆ ಬಹುಮತ ದೊರೆಯದೆಂಬ ನಂಬಿಕೆ ಅವನಿಗಿತ್ತು. ಆದ್ದರಿಂದ ಅಲ್ಲಿ ಓಟಿನ ಮೂಲಕ ಅಭಿಪ್ರಾಯ ತೆಗೆಯಕೂಡದೆಂದೂ, ಆ ಬಗ್ಗೆ ನಿರ್ದಿಷ್ಟ ಉತ್ತರವನ್ನು ಮೂರು ದಿನಗಳ ಅವಧಿಯಲ್ಲಿ ಕೊಡದಿದ್ದರೆ ತಾನು ಆಸ್ಟ್ರೀಯಾವನ್ನು ನುಗ್ಗುವೆನೆಂದೂ ಎಚ್ಚರಿಸಿದನು. ಇದರಿಂದ ಆಸ್ಟ್ರೀಯಾದ ಅಧ್ಯಕ್ಷರಿಗೆ ಗಾಬರಿಯಾಯಿತು. ಆದರೂ ಧೈರ್ಯದಿಂದ ಅವರು ಹಿಟ್ಲರನ ಸೂಚನೆಯನ್ನು ನಿರಾಕರಿಸಲು ಹಿಟ್ಲರನು ಆಸ್ಟ್ರೀಯಾಕ್ಕೆ ನುಗ್ಗಿದನು. ಡಾ. ಶೂಷ್ನಿಗರು ಆತನನ್ನು ಎದುರಿಸಿದರೆ ರಕ್ತಪಾತವಾಗಿ ಅನೇಕರು ಮೃತರಾಗುವದರಿಂದ ಯುದ್ಧವು ಅಸಮಂಜಸವೆಂದು ಹೇಳಿ ತನ್ನ ಅಧ್ಯಕ್ಷತನಕ್ಕೆ ರಾಜಿನಾಮೆಯನ್ನಿತ್ತರು. ಹಿಟ್ಲರನಿಗೆ ಆಸ್ಟ್ರೀಯಾವು ಯಾವುದೊಂದು ಅಡಚಣೆಯಿಲ್ಲದೆ ಸಿಕ್ಕಿತು. ಹೀಗೆ ಹಿಟ್ಲರನು ಮುಂದರಿಯುತ್ತಿರುವುದನ್ನು ಕಂಡು ಯೂರೋಪಿನ ಇತರ ರಾಷ್ಟ್ರಗಳು ಬೆದರಿದವು. ಸಣ್ಣ ಸಣ್ಣ ರಾಷ್ಟ್ರಗಳು ತಮಗೆ ಉಳಿಗಾಲವಿಲ್ಲವೆಂದು ತಲ್ಲಣಿಸಿದವು. ಹೀಗೆ ಬೇರೆ ರಾಷ್ಟ್ರಗಳು ಈತನನ್ನು ತಡೆಯದಿರಲು ಈತನ ಧೈರ್ಯವು ಹೆಚ್ಚಿತು.

ಝೆಕೋಸ್ಲೋವಾಕಿಯಾದ ಆಕ್ರಮಣ.

ಇದೂ ಒಂದು ಸ್ವತಂತ್ರವಾದ ರಾಷ್ಟ್ರ ಇದರಲ್ಲಿರುವ ನಾಝಿಗಳನ್ನು ಎಚ್ಚರಿಸಿ ಚಳವಳ ನಡಸಲು ಹಿಟ್ಲರನು ಹೆರ್ ಹೆನ್‌ಲಿನ್ ಎಂಬವನನ್ನು ಕಳುಹಿಸಿದ್ದನು. ಇದರಿಂದ ಅಲ್ಲಿಯೂ ತಾವು ಜರ್ಮನಿಗೆ ಸೇರಬೇಕೆಂಬ ಕೂಗಾಟಗಳು ಪ್ರಾರಂಭವಾದವು ಝೆಕೊಸ್ಲೋವಾಕಿಯಾದ ಅಂಕಿತದಲ್ಲಿದ್ದ ಸುಡೆಟೆನ್ ಪ್ರಾಂತವನ್ನು ಬಿಟ್ಟುಕೊಡಲು ಅದರ ಅಧ್ಯಕ್ಷರಾಗಿದ್ದ ಡಾ. ಬೆನೆಶ್‌ರವರು ಒಪ್ಪಲಿಲ್ಲ. ಸುಡೆಟೆನ್ ಜರ್ಮನರು ತಮಗೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂದೂ, ತಾವು ಜರ್ಮನಿಯೊಡನೆ ಸೇರಲೇ ಬೇಕೆಂದೂ ಹಠಹಿಡಿದರು. ಝೆಕೊಸ್ಲೋವಾಕಿಯಾವು ರಷ್ಯಾ ಫ್ರಾನ್ಸ್, ಬ್ರಿಟನ್‌ಗಳೊಡನೆ ಈ ಮೊದಲು ಒಪ್ಪಂದ ಮಾಡಿಕೊಂಡಿತ್ತು. ಇದರಂತೆ ಆ ರಾಷ್ಟ್ರಗಳು ಬಿಕ್ಕಟ್ಟಿನ ಸಂದರ್ಭದಲ್ಲಿ ಝೆಕೊಸ್ಲೋವಾಕಿಯಾಕ್ಕೆ ಸಹಾಯ ಮಾಡುವದು ಧರ್ಮವಾಗಿತ್ತು. ಆದರೆ ಹಿಟ್ಲರನು ಇದು ಯಾವುದಕ್ಕೂ ಹೆದರದೆ ತನ್ನ ಧ್ಯೇಯವನ್ನು ಸಾಧಿಸಿಯೇ ಬಿಡುವೆನೆಂಬ ಭದ್ರಮುಷ್ಟಿಯಿಂದ ಕುಳಿತಿದ್ದನು. ಇಂಥಾ ಸಂದಿಗ್ಧ ಸಮಯದಲ್ಲಿ ಬ್ರಿಟನು ಪೌರೋಹಿತ್ಯ ವಹಿಸಿ ಚೇಂಬರ್ಲೇನರು ಹಿಟ್ಲರನನ್ನು ಸಮಾಧಾನಪಡಿಸಿ 'ಮ್ಯೂನಿಕ್' ಎಂಬ ಒಪ್ಪಂದವನ್ನು ಮಾಡಿ ಝೆಕೊಸ್ಲೋವಾಕಿಯಾದ ಕೊರಳನ್ನು ಕತ್ತರಿ

(8ನೇ ಪುಟವನ್ನು ನೋಡಿ.)

ಪರರಾಷ್ಟ್ರಗಳ ಪರಿಸ್ಥಿತಿ.

ರಷ್ಯಾ-ಬ್ರಿಟನ್ ಒಪ್ಪಂದ.

ಯೂರೋಪಿನ ಸರ್ವಾಧಿಕಾರಿಗಳು ಹದ್ದು ಮೀರಿ ವರ್ತಿಸಿ ಸಣ್ಣ ಪುಟ್ಟ ರಾಷ್ಟ್ರಗಳನ್ನು ನಿರ್ನಾಮ ಮಾಡದಂತೆ ತಡೆ ಹಾಕಲು ಬ್ರಿಟನ್-ಫ್ರಾನ್ಸ್ ಮತ್ತು ರಷ್ಯಾದೊಡನೆ ಒಂದು ಒಪ್ಪಂದವು ನಡೆಯಬೇಕೆಂಬ ಅವಿಚಲ ಪ್ರಯತ್ನವು ಪ್ರಾರಂಭವಾಗಿ ಪರ್ಷವಾಗಲಿಕ್ಕಾಯಿತು. ಇತ್ತೀಚೆಗೆ ಬ್ರಿಟನು ಒಪ್ಪಂದದ ಶರತುಗಳನ್ನು ಹಾಕಿ ಫ್ರಾನ್ಸಿನ ಮೂಲಕ ರಷ್ಯಾಕ್ಕೆ ಅದನ್ನು ಕಳುಹಿಸಿ ಕೊಟ್ಟಿತ್ತು. ರಷ್ಯವು ಅದನ್ನು ವಿಮರ್ಶಿಸುತ್ತಾ ಬ್ರಿಟನ್ ಮತ್ತು ಫ್ರೆಂಚರ ಆಲೋಚನೆಗಳು ಸಮರ್ಪಕವಾಗಿಲ್ಲವೆಂದೂ, ಆದರಂತೆ ಈ ತ್ರಿರಾಷ್ಟ್ರಗಳ ಸಂಘಯು ಕಷ್ಟವೆಂದೂ, ಸರಿ ರಾಷ್ಟ್ರಗಳಿಗೆ ಸಂದಿಗ್ಧ ಸಮಯದಲ್ಲಿ ಸಹಾಯವನ್ನು ನೀಡುವ ಮತ್ತು ತಮ್ಮ ಸ್ವರಕ್ಷಣೆಯ ಬಗ್ಗೆ ಪರಸ್ಪರ ಒಪ್ಪಂದ ಮಾಡಿಕೊಳ್ಳುವ ಶರತೇ ನಮಗೆ ಬೇಕಾಗಿದೆಯೆಂದೂ, ನಮ್ಮನ್ನಲ್ಲಿ ಯಾರ ಮೇಲಾದರೂ ವೈರಿಗಳು ಬಿದ್ದರೆ ಅಂಥವರಿಗೆ ಸಹಾಯ ಮಾಡಲು ನಾವು ತಯಾರಿರಬೇಕೆಂದೂ ಸೂಚಿಸಿರುವರು. ಅಲ್ಲದೆ ಸರ್ವಾಧಿಕಾರಿಗಳ ಆಕ್ರಮಣವನ್ನು ತಡೆಯುವ ಮತ್ತು ಶಾಂತತಾಪೇಕ್ಷೆಯುಳ್ಳ ರಾಷ್ಟ್ರಗಳೊಡನೆ ಸ್ನೇಹ ಬೆಳೆಸುವ ವಿಚಾರದಲ್ಲಿ ರಷ್ಯಕ್ಕೆ ತುಂಬಾ ಮನಸಿದೆಯೆಂದೂ, ಆದರೆ ಬೆಂಕಿಯಲ್ಲಿ ಬಿದ್ದ ಪರರ ವಸ್ತುವನ್ನು ತೆಗೆಯಲು ಹೋಗಿ ಕೈಸುಟ್ಟುಕೊಳ್ಳುವಂಥಾ ಮಾರ್ಗವು ನಮಗೆ ಬೇಡವೆಂದೂ ಹೇಳಿರುವರು. ಆ ರಾಷ್ಟ್ರಗಳ ಸೂಚನೆಗಳು ಬರೇ ಪರಸ್ಪರ ಸಹಾಯವನ್ನು ಮಾತ್ರ ಸೂಚಿಸುತ್ತವೆಯಲ್ಲದೆ ಬಾಲ್ಟಿಕ್ ರಾಷ್ಟ್ರಗಳಿಗೆ ಸಹಾಯದ ಯಾವ ಭರವಸೆಯನ್ನೂ ಇತ್ತಿರುವದಿಲ್ಲ. ಆದ್ದರಿಂದ ತಮ್ಮ ತಾಟಸ್ಥ್ಯವನ್ನು ರಕ್ಷಿಸಿಕೊಳ್ಳಲು ಅಸಮರ್ಥವಿದ್ದ ಚಿಕ್ಕ ರಾಷ್ಟ್ರಗಳ ರಕ್ಷಣೆಯನ್ನು ನಾವು ಹೊರಲಾರೆವು' ಎಂದು ಅವರು ಘೋಷಿಸಿರುವರು. ಆದ್ದರಿಂದ ಈ ತ್ರೈರಾಷ್ಟ್ರಗಳ ಒಪ್ಪಂದವು ದಿನೇ ದಿನೇ ಅಸಾಧ್ಯವಾಗಿ ಕಂಡು ಬರುತ್ತದೆ. ಇದಕ್ಕೆ ಕಾರಣವಿಷ್ಟೆ. ಒಪ್ಪಂದಕ್ಕೆ ಪ್ರಯತ್ನಿಸುತ್ತಿರುವ ಈ ರಾಷ್ಟ್ರಗಳೆಲ್ಲವು ಚಾಣಕ್ಯ ತಂತ್ರದಲ್ಲಿ ನಿಪುಣರು. ಪರಸ್ಪರ ಸಹಾಯ ಮಾತ್ರ ಎಲ್ಲರಿಗೂ ಬೇಕು. ಆದರೆ ಇನ್ನೊಬ್ಬನ ಸಂಕಟದ ಸಮಯದಲ್ಲಿ ತನಗೆ ಹಾನಿಯುಂಟಾಗಬಾರದೆಂಬ ದೃಷ್ಟಿಯಿಂದ ಪ್ರಯತ್ನಿಸುತ್ತಿರುವ ಈ ರಾಷ್ಟ್ರಗಳ ಸ್ವಾರ್ಥ ದೃಷ್ಟಿಯೇ ಸಂಧಾನದ ಅಸಾಧ್ಯತೆಗೆ ಕಾರಣ. ಕಷ್ಟ ಕಾಲದಲ್ಲಿ ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಸಣ್ಣ ರಾಷ್ಟ್ರಗಳಿಗೆ ಸಹಾಯ ಮಾಡಿ ಅವುಗಳ ಅಸ್ತಿತ್ವವನ್ನು ಉಳಿಸಬೇಕೆಂಬುವದೇ ರಷ್ಯಾದ ಪ್ರಯತ್ನ. ಆದರೆ ಉಳಿದೆರಡು ರಾಷ್ಟ್ರಗಳು ಇದಕ್ಕೆ ಮನ ಕೊಡುವಂತಿಲ್ಲ. ತಮ್ಮ ತಮ್ಮೊಳಗೆ ಪರಸ್ಪರ ಸಹಾಯ ಮಾಡಿಕೊಂಡರೆ ಸಾಕೆಂದು ಹೇಳುತ್ತಿರುವವು. ಆದ್ದರಿಂದ ಈ ಸಂಧಾನ ಶರತು ಕನಸಿನ ಗಂಟೇ ಆಗಿರುವದು. ಸಂಧಾನವಾಗಿದ್ದರೆ ಹೇಗೂ ಸರ್ವಾಧಿಕಾರಿಗಳ ಆಕ್ರಮಣಕ್ಕೆ ತಡೆಯಾಗುತಿತ್ತು. ಆನದಿದ್ದರೆ 'ಪ್ರಾಚೀನ ಕರ್ಮ ಬೆನ್ನ ಬಿಡದು' ಎಂಬಂತೆ ಒಂದಾನೊಂದು ಕಾಲಕ್ಕೆ ಈ ರಾಷ್ಟ್ರಗಳು ತೊಂದರೆಗೀಡಾಗದಿರವು.

ಜರ್ಮನಿ-ಡೆನ್ಮಾರ್ಕಿನ ಒಪ್ಪಂದ.

ಡೆನ್ಮಾರ್ಕ್ ಮಹಾಯುದ್ಧಕ್ಕೆ ಮೊದಲೇ ಸ್ವತಂತ್ರವಾಗಿದ್ದ ಒಂದು ರಾಷ್ಟ್ರ. ಮೊನ್ನೆ ಅಂದರೆ ತಾ. 31ರಲ್ಲಿ ಈ ರಾಷ್ಟ್ರಕ್ಕೂ ಮತ್ತು ಜರ್ಮನಿಗೂ ಒಂದು ಸ್ನೇಹದ ಒಪ್ಪಂದವಾಯಿತು. ಅದರ ಶರತುಗಳು ಹೀಗಿರುವವು—ಒಬ್ಬರ ಮೇಲೊಬ್ಬರು ಧಾಳಿ ಮಾಡಬಾರದು. ಅಥವಾ ಯಾವುದೇ ಬಗೆಯ ಹಿಂಸಾತ್ಮಕ ಧೋರಣವನ್ನು ಕೈಕೊಳ್ಳಬಾರದು. ಜರ್ಮನಿ-ಡೆನ್ಮಾರ್ಕಗಳ ಮೇಲೆ ಯಾವ ರಾಷ್ಟ್ರವಾದರೂ ಕೈ ಮಾಡುವದನ್ನು ಅವು ಒಗ್ಗಟ್ಟಿನಿಂದ ಎದುರಿಸಬೇಕು. ಈ ಒಪ್ಪಂದವು ಹತ್ತು ವರ್ಷಗಳ ವರೆಗೆ ಜಾರಿಯಲ್ಲಿರಬೇಕು.

ಜರ್ಮನಿಯು ಈ ಹವ್ಯಾಸವನ್ನು ಕೈಕೊಂಡದ್ದು ಇದೇ ಮೊದಲಲ್ಲ. ಇತ್ತ ರೊಮೇನಿಯಾದೊಡನೆ ಒಪ್ಪಂದ ಮಾಡಿಕೊಂಡಿದೆ. ಅಂತು ಇಂತಹ ಒಪ್ಪಂದಗಳ ಯುಗವೇ ಬಂದಿದೆ. ತಮ್ಮ ಸೈನ್ಯಾಧಿಪರು ಒಪ್ಪಂದವನ್ನು, ಅನೇಕ ವಿಧಗಳನ್ನೂ ಹಾಕಿ ರಾಷ್ಟ್ರಗಳನ್ನು ಮರುಳು ಮಾಡುವ ಒಂದು ವಿಧಾನವಿದು. ಸಾದೊನ್ನ ಮ್ಯೂನಿಕ್ ಒಪ್ಪಂದವು ನಾಲ್ಕೇ ದಿನದಲ್ಲಿ ಅದು ಸಮಾಧಿಯನ್ನೈದಿತು. ಹಾಗೆಯೇ ಅನೇಕ ಒಪ್ಪಂದಗಳು ಜನ್ಮತಾಳಿ ತಮ್ಮ ಶೈಶವಾವಸ್ಥೆಯಲ್ಲಿಯೇ ಮರಣಾವಸ್ಥೆಯನ್ನೈದಿವೆ. ಎಲ್ಲಾ ರಾಷ್ಟ್ರಗಳೂ ಒಪ್ಪಂದವೆಂಬ ಇದೊಂದು ಹೊಸಮಾರ್ಗದಲ್ಲಿ ಮಗ್ನವಾಗಿವೆ. ಆದರಿಂದ ಈಗಿನ ಡೆನ್ಮಾರ್ಕ-ಜರ್ಮನಿ ಒಪ್ಪಂದವು ಶಾಶ್ವತವಲ್ಲ. ಸಮಯಬಂದಾಗ ಹಿಟ್ಲರನು ಈ ಒಪ್ಪಂದ ಶರತ್ತುಗಳಿಗೆಲ್ಲ ಸಹ ಬುಟ್ಟಿಕಾಣಿಸಲೂ ಹಿಂಜರಿಯನು.

ಚೈನಾ ಜಪಾನು

ಇಂದಿನ ದಿನಗಳಲ್ಲಿ ಬರುತ್ತಿರುವ ಶುಭವಾರ್ತೆಗಳೆಂದರೆ ಚೀನಿಯರ ಜಯ. ಎಲ್ಲೆಲ್ಲೂ ಚೀನಿಯರು ಮುಂದೊತ್ತಿ ಜಪಾನರನ್ನು ಹಿಂದಟ್ಟುತ್ತಿದ್ದಾರೆ. ಜಪಾನರ ಈ ಸೋಲಿನ ಪರಂಪರೆಯಿಂದ ಅವರ ಧೃತಿಗೆಟ್ಟಿದೆ. ತಮತಮತೊಳಗೇ ವೈಮನಸ್ಯ ತಲೆಯೆತ್ತಿದೆ. ಪ್ರಖ್ಯಾತವಾದ ವಿಶಾಲ ರಾಷ್ಟ್ರವೊಂದನ್ನು ನುಂಗಿ ನೀರು ಕುಡಿಯಬೇಕೆಂದು ಯೋಚಿಸಿ ರಣರಂಗಕ್ಕೆ ದುಮುಕಿದ ಜಪಾನು ಇಂದು ಚೀನಿ ಗೊರಿಲ್ಲಾ ಗುಂಪಿನವರ ಗತ್ತುಗಾರಿಕೆಯ ಯುದ್ಧ ಹಾಗೂ ಅವರ ದೇಶಾಭಿಮಾನದ ಹೋರಾಟ ಅವರ ನಿಸ್ವಾರ್ಥಸೇವೆ ಇವುಗಳಿಂದಾಗಿ ಪರಾಜಿತರಾಗುವ ಸಂಭವ ಬಂದಿದೆ. ಚೀನಿಯರು ಇದೇ ರೀತಿ ಇನ್ನಾರು ತಿಂಗಳು ಯುದ್ಧವನ್ನು ಮುಂದುವರಿಸಿದರೆ ಜಪಾನವು ನಿರಾಸೆಯಿಂದೊಡಗೂಡಿ ಹಿಂದಿರುಗಬೇಕಾಗುವುದು. ಇವನ್ನರಿತೇ ಜಪಾನು ಯೂರೋಪಿನಲ್ಲಿ ಯುದ್ಧವಾದರೆ ತಾನು ತಾಟಸ್ಥ್ಯ ಭಾವನೆಯನ್ನು ಕೈಕೊಳ್ಳುವೆನೆಂದು ಹೇಳಿರುವದಾಗಿದೆ. ಏನೇ ಇರಲಿ, ಪರರ ರಾಷ್ಟ್ರವನ್ನು ಕಿತ್ತು ತನ್ನ ಅಂಕೆಯಲ್ಲಿರಿಸಿ ತಾನೇ ತಾನಾಗಿ ಮೆರೆಯಬೇಕೆಂದು ಇಚ್ಛಿಸಿದ ಜಪಾನಿಗೆ ಇಂದು ತಕ್ಕ ಪ್ರಾಯಶ್ಚಿತ್ತವಾಗುತ್ತಿರುವದು. ಜಪಾನು ತನ್ನ ಮರ್ಯಾದೆಯನ್ನು ಕಾಪಾಡಿಕೊಳ್ಳುವಂತಿದ್ದರೆ ಒಡನೆ ಚೈನೀಯರೊಡನೆ ಸಂಧಾನ ಬೆಳಸಿ ತಾನು ವಶಪಡಿಸಿಕೊಂಡಿರುವ ಪ್ರಾಂತಗಳನ್ನು ಹಿಂದಕ್ಕೆ ಕೊಟ್ಟು ಚೈನೀಯರ ಕೃಪೆಯನ್ನು ಸಾಧಿಸುವುದು ಹಿತವಿದೆ.

ಝೆಕೊಸ್ಲೋವಾಕಿಯಾ

ಜರ್ಮನಿಯ ಹಿಟ್ಲರನು ಈ ರಾಷ್ಟ್ರವನ್ನು ನುಂಗಿ ನೀರು ಕುಡಿದಿರುವನೆಂಬುದು ನಮಗೆ ತಿಳಿದದೆ. ಆದರೆ ಅಲ್ಲಿ ಈಗ ನಡೆಯುತ್ತಿರುವ ವಿಚಾರವು ಬಹಳ ಗಮನಾರ್ಹವಾಗಿದೆ. ಅಬಿಸೀನಿಯಾವನ್ನು ಇಟಲಿಯು ಗೆದ್ದು ದಗೆಯುಳ್ಳ ಹಾಗೆ ಇಲ್ಲಿ ಮಾಡಲಿಚ್ಛಿಸುವ ಅವಸ್ಥೆಪಡುತ್ತಿದೆ. ಅಂತೆಯೇ ಹಿಟ್ಲರನು ತನ್ನ ಛತ್ರಗುಂಪಿಯಿಂದ ಝೆಕೊಸ್ಲೋವಾಕಿಯಾದ ಕೈಕಾಲುಗಳನ್ನು ಕಟ್ಟಿ ಆಳುತ್ತಿರುವನು. ಜರ್ಮನಿಯು ಈ ಪ್ರಾಂತದೊಳಗೆ ನುಗ್ಗಿದೊಡನೆಯೇ ಇದರ ಸರ್ವ ಐಶ್ವರ್ಯವೂ ದೋಚಲ್ಪಟ್ಟು, ಅಂಗಡಿಗಳೆಲ್ಲಾ ಮುಚ್ಚಲ್ಪಟ್ಟು, ಭಂಡಾರಗಳು ಅಪಹರಿಸಲ್ಪಟ್ಟು ಸ್ವತಂತ್ರ ಪ್ರೇಮಿಗಳ ಮನೆಗಳು ಧ್ವಂಸಪಡಿಸಲ್ಪಟ್ಟವು. ನಾಜಿ ವಿರೋಧಿಗಳ ಹುಟ್ಟಡಗಿಸುವ ಕಾರ್ಯವು ಕೈಕೊಳ್ಳಲ್ಪಟ್ಟಿತು. ಇದರಿಂದ ಝೆಕೊಸ್ಲೋವಾಕಿಯಾದಲ್ಲಿ ಸೆರೆಮನೆಗಳು ಹೆಚ್ಚಿದವು. ಒಂದು ಕಾಲದಲ್ಲಿ ಐಶ್ವರ್ಯದಿಂದ ಮೆರೆಯುತ್ತಿದ್ದ ರಾಷ್ಟ್ರವು ಇಂದು ರುದ್ರನಾಟಕದ ರಂಗದಂತೆ ಕಾಣುತ್ತಿದೆ. ಮಂದಿಯು ಸತ್ತಾಪತ್ತು ರುದ್ರಭೂಮಿಯಲ್ಲಿಯ ಪಿಶಾಚಗಳ ಸಾಲಿನಂತೆ ಗೋಚರಿಸುತ್ತಿದೆ.

ಜರ್ಮನಿಯ ರಾಜನೀತಿಯಾದರೂ ಇಲ್ಲಿ ಬೇರೂರಿ ನಿಂತಿದೆ. ಈ ಕಟ್ಟಳೆಗಳನ್ನು ಸಹಿಸಲಾರದೆ ಎಷ್ಟು ಆದಷ್ಟೋ ದಂಗೆಗಳು ಜಗತ್ತಿಗೇ ತಿಳಿಯದೆ ಅಡಗಿ ಹೋಗಿದೆ. ಇಂದು ಜರ್ಮನ್ ಸರಕಾರದ ಅಪ್ಪಣೆ ವಿನಹ ಹೊರ ದೇಶಕ್ಕೆ ಹೋಗಕೂಡದು. ರೇಡಿಯೋ, ಟೆಲಿಫೋನ್ ಮೊದಲಾದ ಆಧುನಿಕ ಸೌಕರ್ಯಗಳೆಲ್ಲಾ ಜರ್ಮನ್ ಗೂಢಾಚಾರರ ಕೈವಶದಲ್ಲಿದೆ. ಪ್ರತಿಯೊಂದು ಪತ್ರವೂ ಪಾರ್ಸಲೂ ಜರ್ಮನರಿಂದ ಪರೀಕ್ಷಿಸಲ್ಪಡುತ್ತಿದೆಯೆಂದರೆ ಅಲ್ಲಿಯ ಮೀಮಾಂಸೆಯ ಕಾಠಿಣ್ಯವು ಎಷ್ಟರಮಟ್ಟಿನದೆಂಬುದನ್ನು ವಾಚಕರೇ ಊಹಿಸಬೇಕಿದೆ. ನಾಜಿ ಯುವಕರ ಅತ್ಯಾಚಾರ, ವಿಜಯೋನ್ಮತ್ತವಾಗಿ ಅವರು ತೋರಿಸುತ್ತಿರುವ ತಿರಸ್ಕಾರ ಇವುಗಳಿಂದಾಗಿ ಝೆಕ್ಕರು ನೊಂದು ಬೆಂದಿರುವರು, ಅವರ ಪವಿತ್ರ ಪ್ರತಿಮೆಗಳೂ, ಇತರ ಮತೀಯ ಸಾಧನಗಳೂ ಈ ನಾಜಿಗಳಿಂದ ನಾಶಪಡಿಸಲ್ಪಟ್ಟಿವೆ. ಬಲಾತ್ಕಾರವಾಗಿ ಝೆಕ್ಕರನ್ನು ಕಾರ್ಖಾನೆಗಳಲ್ಲಿ ಕೆಲಸ ಮಾಡಿಸುತ್ತಿರುವರು. ದಿನಕ್ಕೆ ಹನ್ನೆರಡು ಗಂಟೆ ಕೆಲಸ ಮಾಡಿಸಿ ಚಿಕ್ಕ ಆಣೆ ಕೂಲಿ ಕೊಡುವ ಜರ್ಮನರ ಸಾಮಂತಿ ಹೃದಯದ ಕಾಠಿಣ್ಯತೆಯು ಅವರ್ಣನೀಯ.

ಝೆಕ್ ಜನತೆಯಿಂದು ಈ ಹಲವು ವಿಧದ ಭಾದೆಗಳಿಂದ ಜೀವನ್ಮೃತರಂತಾಗಿರುವರು. ವ್ಯಾಪಾರಿಗಳು ವ್ಯಾಪಾರ ಮಾಡಲೊಲ್ಲರು. ಉದ್ಯೋಗಿಗಳು ಕೆಲಸ ಮಾಡಲೊಲ್ಲರು. ವ್ಯವಸಾಯಿಗಳು ತಟಸ್ಥರಾಗಿರುವರು. ವಿದ್ಯಾರ್ಥಿಗಳು ತಮ್ಮ ಮಾನಸಿಕ ವ್ಯಸನವನ್ನು ತಡೆಯಲಾರದೆ ಕಟ್ಟೆ ಒಡೆದ ಹೊಳೆಯಂತೆ ಮುಂಬಂದು ಜರ್ಮನರ ಕರಾಳ ಶಾಸನಕ್ಕೆ ತುತ್ತಾಗಿ ಸೆರೆಮನೆಗೆ ನಡೆಯುತ್ತಿರುವರು. ಹೀಗೆ ಇನ್ನೂ ವರ್ಣನಾತೀತವಂಥಾ ರೀತಿಗಳಿಂದ ಝೆಕರನ್ನು ತೊಂದರೆಗೊಳಿಸಿ ಮಾನವನಿಗೆ ಪ್ರಿಯತಮವಾದ ಆ ಸ್ವಾತಂತ್ರ್ಯವೆಂಬ ಪದವನ್ನು ಝೆಕ್ ರಾಷ್ಟ್ರದಿಂದಲೇ ನಿರ್ಮೂಲಮಾಡಿದ ನಾಜಿಗಳ ವರ್ತನೆಯು ನಿಂದನೀಯ. ಕಾಲಾನುಕಾಲಕ್ಕೆ ಜರ್ಮನರು ಈ ಫಲವನ್ನು ಉಣ್ಣಲಾರರೇ?

ಬ್ರಿಟನ್.

ಇಲ್ಲಿ ಕಡ್ಡಾಯ ಸೈನ್ಯ ಶಿಕ್ಷಣವು ನಡೆಯಬೇಕೆಂಬ ಕಾನೂನು ಇದೀಗ ಹೆಚ್ಚಿನ ವಿರೋಧವನ್ನು ಹುಟ್ಟಿಸುತ್ತಿದೆ. ಇದರ ವಿರೋಧಕರ ಸಂಘವು ದಿನೇ ದಿನೇ ಅಭಿವೃದ್ಧಿಯಾಗುತ್ತಲಿದೆ. ಬ್ರಿಟನ ಸರಕಾರವು ಬಂಡವಳವಾದ (capitalism) ವನ್ನು ಸಮರ್ಥಿಸಿ ಪೋಷಿಸುವದಾದ ಪ್ರಯುಕ್ತ ಅಲ್ಲಿ ಬಡವರ ಕೂಗು ಇದ್ದೇ ಇದೆ. ಧನಾಢ್ಯರು ಉಪ್ಪರಿಗೆಯ ಮನೆಯಲ್ಲಿ ಮೆರೆಯುತ್ತಿದ್ದರೂ ಹೊಟ್ಟೆಗೆ ಕೂಳಿಲ್ಲದೆ ದುಃಖಪಡುತ್ತಿರುವ ಬಡವರ ಕರುಳಿನ ಕೂಗು ಹೃದಯದ್ರಾವಕವಾಗಿದೆ. ಆದ್ದರಿಂದ ಇವರು ಧನಾಢ್ಯರ ಕೈಗೊಂಬೆಗಳಾಗಿ ಕಾರ್ಖಾನೆಗಳಲ್ಲಿ ಹಗಲು ರಾತ್ರಿಯೆನ್ನದೆ ದುಡಿದು ಹೊಟ್ಟೆ ಹೊರೆಯುತ್ತಿರುವರು. ಪ್ರಸ್ತುತ ಸೈನ್ಯಕ್ಕೆ ಕಡ್ಡಾಯವಾಗಿ ಸೇರಿಸುವ ಕಾನೂನು ಹಿತಕ್ಕಿಂತ ಅಧಿಕ ಅಹಿತವನ್ನು ಮಾಡುತ್ತಿದೆ. ಸೈನ್ಯ ತರಬೇತಿಗೆ ಅರ್ಹರಾದವರನ್ನು ಕಾರ್ಖಾನೆಗಳಿಂದ ಬಿಡಿಸಿ ತರಬೇತು ಕೊಡುವ ಯೋಚನೆ ನಡೆದಿದೆ. ಆರು ತಿಂಗಳ ವರೆಗೆ ಆತನು ಸೈನ್ಯ ತರಬೇತು ಪಡೆದು ಪುನಃ ಅದೇ ಕಾರ್ಖಾನೆಗೆ ಬಂದರೆ ಅವನಿಗೆ ಕಾರ್ಖಾನೆಯ ಮಾಲಕರು ಮೊದಲಿನ ಉದ್ಯೋಗವನ್ನೇ ಕೊಡಬೇಕೆಂದು ಸರಕಾರದ ಕಾನೂನು ಇದೆ. ಇದಕ್ಕೆ ತಪ್ಪಿದವರಿಗೆ 50 ಪವನ್ನುಗಳ ಹಾಗೂ ಕೆಲಸಗಾರನ ನಾಲ್ಕು ವಾರಗಳ ವೇತನದ ಜುಲ್ಮಾನೆಯನ್ನು ಮಾಲಕರಿಂದ ವಸೂಲು ಮಾಡುವ ಶಿಕ್ಷೆಯೂ ಇದೆ. ಆದುದರಿಂದ ಕಾರ್ಖಾನೆಗಳ ಮಾಲಕರು ಇದಕ್ಕೆ ಹೆದರಿ ಈಗಲೇ ಸೈನ್ಯಕ್ಕೆ ಸೇರಲು ಯೋಗ್ಯರಾದ ಕೆಲಸಗಾರರನ್ನು ಕೆಲಸದಿಂದ ನಿವೃತ್ತಿಗೊಳಿಸುತ್ತಿರುವರು. ಆದ ಪ್ರಯುಕ್ತ ಮೇಲ್ಕಂಡ ಕಡ್ಡಾಯ ಸೈನ್ಯ ಶಿಕ್ಷಣದ ಮಸೂದೆಯು ದೇಶದಲ್ಲಿ ಅತೃಪ್ತಿಯನ್ನು ಹಬ್ಬಿಸಿ.

ಕೊಡಗು

ಜೂನ್ ತಾರೀಕು ೯ನೇ ಶುಕ್ರವಾರ ೧೯೩೯.

ವೀರಾಜಪೇಟೆ ಬೋರ್ಡಿಂಗ್ ಮನೆ.

ವೀರಾಜಪೇಟೆ ಹೈಸ್ಕೂಲಿನ ಬೋರ್ಡಿಂಗನ್ನು ಈ ಮೊದಲಿದ್ದ ಬಹು ಅನುಕೂಲವಾದ ಕಟ್ಟಡದಿಂದ ಚಿಕ್ಕದಾದ ಹುಡುಗಿಯರ ಶಾಲಾ ಕಟ್ಟಡಕ್ಕೆ ವರ್ಗಾಯಿಸುವರೆಂದು ತಿಳಿದು ವಿಷಾದಿಸುತ್ತೇವೆ. ಹೀಗೆ ವರ್ಗಾಯಿಸುವುದರಿಂದ ಅಲ್ಲಿ ಉಳಕೊಳ್ಳುವ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಗಳುಂಟಾಗುತ್ತವೆಂಬ ಕಾರಣದ ಮೇಲೆ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಜನರ ಪ್ರತಿನಿಧಿಯರೊಬ್ಬರು ಈ ಬೋರ್ಡಿಂಗನ್ನು ಬೇರೆ ಕಟ್ಟಡಕ್ಕೆ ಸರ್ಕಾರದವರು ವರ್ಗಾಯಿಸುತ್ತಾರೋ ಎಂಬದಾಗಿ ಪ್ರಶ್ನೆ ಕೇಳಿದ್ದಕ್ಕೆ ಉತ್ತರವಾಗಿ—ವಿದ್ಯಾ ಇಲಾಖೆಯ ಮೆಂಬರರು ಹಾಗೆ ಮಾಡುವುದಿಲ್ಲವೆಂದು ಖಚಿತವಾಗಿ ನುಡಿದಿದ್ದರು. ಆದರೆ ಮೊನ್ನೆ ಮೊನ್ನೆ ಈ ಹೇಳಿಕೆಗೆ ವಿರುದ್ಧವಾಗಿ ಬೋರ್ಡಿಂಗನ್ನು ವರ್ಗಾಯಿಸಿದ್ದು ಅನುಚಿತವೂ, ವ್ಯಸನಕರವೂ ಆಗಿದೆ. ಅಲ್ಲದೆ ಸರ್ಕಾರಿ ಅಧಿಕಾರಿಗಳು ಕೌನ್ಸಿಲು ಸಭೆಯಲ್ಲಿ ಹೇಳಿದ ಮಾತುಗಳಿಗೆ ಅವರೇ ಎಷ್ಟರ ಮಟ್ಟಿಗೆ ಬೆಲೆ ಕೊಡುತ್ತಾರೆಂಬುವುದು ಇದರಿಂದ ವ್ಯಕ್ತವಾಗುತ್ತದೆ. ಇದು ಅಂದಿನ ಸಭೆಯ ಮೆಂಬರುಗಳನ್ನು ತತ್ಕಾಲ ಸಮಾಧಾನಪಡಿಸಲಿಕ್ಕಾಗಿ ಕೊಟ್ಟ ಉತ್ತರವೋ, ಅಥವಾ ಸರ್ಕಾರದವರು ನಂತರ ತಮ್ಮ ಅಭಿಪ್ರಾಯವನ್ನು ಬದಲಾಯಿಸಿದರೋ ಎಂಬುವುದು ಗೊತ್ತಾಗುವುದಿಲ್ಲ. ಆದರೆ ನಮಗೆ ತೋರಿದ ಹಾಗೆ ಆ ಸಭೆ ನಡೆದನಂತರ ಸರ್ಕಾರದವರು ಈ ವಿಚಾರದಲ್ಲಿ ತಮ್ಮ ಅಭಿಪ್ರಾಯವನ್ನು ಬದಲಾಯಿಸಲು ಹೊಸ ಕಾರಣಗಳೇನೂ ಉಂಟಾಗಿರುವುದಿಲ್ಲ. ಒಂದುವೇಳೆ ಅಂಥಾ ಕಾರಣಗಳೇನಾದರೂ ಇದ್ದರೆ ಅವುಗಳನ್ನು ಸರ್ಕಾರದವರು ಬಹಿರಂಗಪಡಿಸುವುದು ಉತ್ತಮವಾಗಿದೆ. ಇಲ್ಲವಾದರೆ ಸರ್ಕಾರದವರು ಇನ್ನು ಮುಂದೆ ಕೌನ್ಸಿಲು ಸಭೆಗಳಲ್ಲಿ ಕೊಡತಕ್ಕ ಉತ್ತರಗಳಿಗೆ ಜನರು ಬೆಲೆ ಕೊಡಲು ಸಾಧ್ಯವಾಗಲಿಕ್ಕಿಲ್ಲ.

ಬೋರ್ಡಿಂಗನ್ನು ಮೊದಲಿದ್ದ ಕಟ್ಟಡದಿಂದ ಬೇರೊಂದು ಕಟ್ಟಡಕ್ಕೆ ವರ್ಗಾಯಿಸಿದ್ದರಿಂದ ಉಂಟಾದ ತೊಂದರೆಗಳನ್ನು ಸ್ವಲ್ಪ ಮಟ್ಟಿಗೆ ವಿವರಿಸಬೇಕಾಗಿದೆ. ಮೊದಲಿನ ಕಟ್ಟಡವು ಬೋರ್ಡಿಂಗಿಗಾಗಿಯೇ ಪುರಸ್ಸುಮಾಡಿ ಅನುಕೂಲ ಪಡಿಸಿದ್ದಾಗಿದೆ. ಈ ವಿಶಾಲವಾದ ಕಟ್ಟಡದಲ್ಲಿ ಕಳೆದ ವರ್ಷ ಸುಮಾರು 70 ವಿದ್ಯಾರ್ಥಿಗಳು ವಾಸಮಾಡಿಕೊಂಡಿದ್ದರೆಂದು ತಿಳಿಯಬರುತ್ತದೆ. ಮಾತ್ರವಲ್ಲ; ಇನ್ನು 10 ಹುಡುಗರು ಅದರಲ್ಲಿ ನಿಲ್ಲಲಿಕ್ಕೆ ಸಾಧ್ಯವಿತ್ತು. ಎಂಟ್ಹತ್ತು ವರ್ಷಗಳಿಂದ ವಿದ್ಯಾರ್ಥಿಗಳು ಈ ಕಟ್ಟಡದಲ್ಲಿ ವಾಸಿಸುತ್ತಿದ್ದು ತಮ್ಮ ಆರೋಗ್ಯವನ್ನು ಕಾಪಾಡಿಕೊಂಡು ಓದುಗಾರಿಕೆಯನ್ನು ಸಮರ್ಪಕವಾಗಿ ನಡಿಸುತ್ತಾ ಬಂದರೆಂಬ ಸಂಗತಿಯು ಎಲ್ಲರಿಗೂ ತಿಳಿದ ವಿಷಯ.

ಈಗ ಬೋರ್ಡಿಂಗನ್ನು ವರ್ಗಾಯಿಸಿರುವ ಕಟ್ಟಡವು ಬಹಳ ಚಿಕ್ಕದು ಮತ್ತು ಮಕ್ಕಳ ಆರೋಗ್ಯಕ್ಕೆ ಹಿತವಾದದ್ದಲ್ಲ. ಇದರಲ್ಲಿ ಇರತಕ್ಕ ಕೋಣೆಗಳು ವಿದ್ಯಾರ್ಥಿಗಳು ಮಲಗಲಿಕ್ಕೂ, ಓದಲಿಕ್ಕೂ, ಊಟಮಾಡಲಿಕ್ಕೂ ಸಾಕಷ್ಟು ದೊಡ್ಡವಾಗಿಲ್ಲ; ಅಲ್ಲದೆ ಸಾಕಷ್ಟು ಗಾಳಿಯ ಓಡಾಟಕ್ಕೆ ಅನುಕೂಲವಿಲ್ಲ. ಬಚ್ಚಲು ಮನೆಯ ಅನುಕೂಲತೆಯೂ ಬಹು ಕಡಿಮೆ. ಸೌದೆ ಒಟ್ಟಲಿಕ್ಕೆ ಕೊಟ್ಟಿಗೆಯೇ ಇಲ್ಲ. ಇಂಥಾ ಅನಾನುಕೂಲವೂ, ಅನಾರೋಗ್ಯವೂ ಆದ ಕಟ್ಟಡಕ್ಕೆ ಬೋರ್ಡಿಂಗನ್ನು ಯಾತಕ್ಕೆ ವರ್ಗಾಯಿಸಿದರೊ ತಿಳಿಯದು.

ಅದರಲ್ಲೂ ಈ ಕಟ್ಟಡದಲ್ಲಿ ಹೆಚ್ಚೆಂದರೆ 40 ಮಕ್ಕಳು ಮಾತ್ರ ಇರಲು ಜಾಗವಿದೆ. ಆದರೆ ಈಗಾಗಲೇ ಇದರಲ್ಲಿ 60 ವಿದ್ಯಾರ್ಥಿಗಳು ಸೇರಿಸಲ್ಪಟ್ಟಿರುವರೆಂದೂ, ಇನ್ನೂ 15 ಮಕ್ಕಳು ಸೇರುವ ಸಂಭವವಿದೆಯೆಂದೂ ತಿಳಿಯ ಬರುತ್ತದೆ. ಬರೇ 40 ಮಕ್ಕಳಿರಲು ಯೋಗ್ಯವಾದ ಕಟ್ಟಡದಲ್ಲಿ 75 ಮಕ್ಕಳಿಗೆ ಸ್ಥಳ ಏರ್ಪಾಡು ಮಾಡುವುದೆಂದರೆ ಆಶ್ಚರ್ಯವೇ ಸರಿ. ಈಗ 60 ಮಕ್ಕಳ ಮಂಚಗಳನ್ನು ಇಟ್ಟದ್ದು ನೋಡಿದರೆ ಅದು ಕೊಟ್ಟಿಗೆಯಲ್ಲಿ ಕಿಕ್ಕಿರಿದು ದನಗಳನ್ನು ಕೂಡಿಸಿದಂತೆ ಕಾಣುತ್ತದಲ್ಲದೆ, ವಿದ್ಯಾರ್ಥಿಗಳ ಬೋರ್ಡಿಂಗ್ ಮನೆಯಂತೆ ತೋರುವುದಿಲ್ಲ.

ಬೋರ್ಡಿಂಗು ಮನೆಯು ನಮ್ಮ ಮಕ್ಕಳ ಬಾಳ್ವೆಯಲ್ಲಿ ಒಂದು ಮುಖ್ಯವಾದ ಅಂಗ. ಅಲ್ಲಿಯೇ ವಿದ್ಯಾರ್ಥಿಗಳ ಆರೋಗ್ಯವನ್ನು ವೃದ್ಧಿಪಡಿಸಿ, ಅವರ ನಡತೆ ನೀತಿಗಳನ್ನು ಸರಿಪಡಿಸುವುದಾಗಿದೆ. ಆದಕಾರಣ ವಿದ್ಯಾಭ್ಯಾಸ ಕ್ರಮದ ನಿಬಂಧನೆ ಪ್ರಕಾರ ಅಲ್ಲಿ ಅವರಿಗೆ ಸಾಕಷ್ಟು ಜಾಗ, ಗಾಳಿ, ಬೆಳಕು ಇರಬೇಕಾದದು ಅವಶ್ಯಕ. ಅಲ್ಲದೆ ಅವರ ನಡತೆ ನೀತಿಗಳನ್ನು ಸರಿಯಾಗಿಡಲು ಮಲಗುವ ಕೋಣೆಗಳಲ್ಲಿ ಮಂಚಗಳನ್ನು ಆಗುವಷ್ಟು ದೂರದೂರವಾಗಿ ಇಡುವುದು ಉತ್ತಮ. ಹೊರಗಿನ ಪ್ರಾಂತ್ಯಗಳಲ್ಲಿ ಈ ವಿಷಯಗಳಿಗೆ ಅಧಿಕಾರಿಗಳು ತುಂಬಾ ನಿಗಕೊಡುತ್ತಿದ್ದಾರೆ. ಇಲ್ಲಿಯ ಅಧಿಕಾರಿಗಳು ಇವುಗಳಿಗೆ ತಕ್ಕಷ್ಟು ಗಮನ ಕೊಡದೆ ಇರಲು ಕಾರಣವೇನೆಂದು ಗೊತ್ತಾಗುವುದಿಲ್ಲ.

ದೊಡ್ಡ ಕಟ್ಟಡದಿಂದ ಚಿಕ್ಕ ಕಟ್ಟಡಕ್ಕೆ ಬೋರ್ಡಿಂಗನ್ನು ವರ್ಗಾಯಿಸಲು ಹಣದ ಅಭಾವವೇ ಕಾರಣವೆಂದು ಸರ್ಕಾರದವರು ಹೇಳಬಹುದು. ಆದರೆ 'ವಿದ್ಯಾರ್ಥಿಗಳ ಆರೋಗ್ಯ ಮತ್ತು ನಡತೆ ನೀತಿಗಳ ವಿಷಯವು ಅಲ್ಪಸ್ವಲ್ಪ ಹೆಚ್ಚಿನ ಖರ್ಚಿಗಿಂತ ಪ್ರಾಮುಖ್ಯವಾದದ್ದೆಂಬುವದನ್ನು ಸರ್ಕಾರದವರು ಮರೆಯಬಾರದು. ಇಂದಿನ ವಿದ್ಯಾರ್ಥಿಗಳೇ ನಾಳೆಯ ಪ್ರಜೆಗಳಾಗುವುದರಿಂದ ಅವರ ತರಬೇತಿಗೆ ಸರ್ಕಾರದವರು ತುಂಬಾ ನಿಗಕೊಡಬೇಕಾದದ್ದು ಅವರ ಧರ್ಮವಾಗಿದೆ. ಈ ವಿಚಾರವನ್ನು ಅಧಿಕಾರಿಗಳು ಎಂದಿಗೂ ಅಸಡ್ಡೆಯಿಂದ ಕಾಣಬಾರದು. ಆದುದರಿಂದ ಸರ್ಕಾರದವರು ಈ ಬೋರ್ಡಿಂಗನ್ನು ಎಲ್ಲಾ ಅನುಕೂಲತೆಗಳಿಂದ ಕೂಡಿರುವ ಮೊದಲಿನ ಕಟ್ಟಡಕ್ಕೆ ಹಿಂದಕ್ಕೆ ವರ್ಗಾಯಿಸಿ, ಅಲ್ಲಿಯ ವಿದ್ಯಾರ್ಥಿಗಳ ಹಿತವನ್ನು ಕಾಪಾಡುವರಾಗಿ ನಂಬುತ್ತೇವೆ.

೫೩ ನೇ ಕಾಂಗ್ರೆಸ್ ಅಧಿವೇಶನ.

53 ನೇ ಕಾಂಗ್ರೆಸ್ ಅಧಿವೇಶನದ ಸ್ವಾಗತ ಸಮಿತಿಯ ಮೊದಲನೆಯ ಸಭೆಯು ಕಳೆದ ತಾ. 31 ರಲ್ಲಿ ರಾಷ್ಟ್ರಪತಿ ಶ್ರೀ ಬಾಬು ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಬರುವ ಡಿಸೆಂಬರ್ ತಿಂಗಳಲ್ಲಿ ರಾಮಗಡದಲ್ಲಿ ಕೂಡಲಿರುವ ಈ ಅಧಿವೇಶನದ ಪೂರ್ವ ಸಿದ್ಧತೆಗಳ ಬಗ್ಗೆ ವಿಚಾರವಾಯಿತು. ಸ್ವಾಗತ ಸಮಿತಿಗೆ ಇನ್ನೂ ಸಾಕಷ್ಟು ಸದಸ್ಯರಿರದ್ದರಿಂದ ಅಂದಿನ ಸಭೆಯು ಇನ್ನೂ ತಾತ್ಕಾಲಿಕ ಸ್ವರೂಪದ್ದೆಂದು ಗಣಿಸಲಾಗಿದೆ.



(ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್.)

ಅಧಿವೇಶನಕ್ಕೆ ಅವಶ್ಯವಾದ ಹಣ, ಕಾಂಗ್ರೆಸಿನ ನಗರ, ಸ್ವಯಂ ಸೇವಕರು ಮೊದಲಾದವುಗಳ ವ್ಯವಸ್ಥೆ ಮಾಡುವದಕ್ಕಾಗಿ ಕೆಲವು ಉಪ ಸಮಿತಿಗಳು ಸ್ಥಾಪಿಸಲ್ಪಟ್ಟವು. ಸನ್ಯದ ಪ್ರಾಂತೀಕ ಕಾರ್ಯಕಾರಿ ಮಂಡಲದ ಮೇಲೆ ಮಂಡಿಸಲ್ಪಟ್ಟ ಎರಡು ಅವಿಶ್ವಾಸ ಗೊತ್ತುವಳಿಗಳು ಇಂದಿನ ಅಜೆಂಡಾದಲ್ಲಿರದ್ದರಿಂದ ಅವುಗಳ ಚರ್ಚೆಯಾಗಲಿಲ್ಲ. ಜುಲೈ ತಿಂಗಳ 1 ನೇ ತಾರೀಖಿಗೆ ಕೂಡಲಿರುವ ಸಭೆಯಲ್ಲಿ ಈ ಗೊತ್ತುವಳಿಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯವಾಯಿತು.

ಮಾರಾಟಕ್ಕೆ ಇದೆ.

ಮಡಿಕೇರಿ ರಾಜಾಸೀಟ್ ಬಳಿ ವಾಸಕ್ಕೆ ಲಾಯಕ್ಕಾದ ಒಂದು ಮನೆ, ಇದಕ್ಕೆ ಸೇರಿದ ಹೊರ ಮನೆ, ಅಡಿಗೆ ಮನೆ ವಗೈರೆ ಮತ್ತು ಈ ಮನೆಗೆ ಸೇರಿದ ಹಾಲಿ ತಿಂಗಳಿಗೆ 10 ರೂಪಾಯಿ ಬಾಡಿಗೆ ಬರುವ ಒಂದು ಲೈನ್, ಸಾಧಾರಣ ಎರಡು ಎಕರೆಯಷ್ಟು ಮನೆಗೆ ಸೇರಿದ ಜಾಗ ಸಹ ಮಾರಾಟಕ್ಕಿದೆ. ಇಷ್ಟವುಳ್ಳವರು ಮನೆಯನ್ನು ನೋಡಿ ಕಮ್ಮಿ ಬೆಲೆಯನ್ನು ತಿಳಿಸಬಹುದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

"X"
C/o. Editor,
"Kodagu" Ltd.,
4-3 Mercara.

Wanted.

Wanted candidates. Allowance Rs. 28. Uniform, passage and quarter free. Service essential. Classes: Telegraph, Station Master, Wireless, Radio, Electrical, Civil and Automobile Engineering, Commerce, and Filmcraft. Rules and Entrance form on annas eight. Director, Royal Telegraph and Rly. Duties College, Bombay.

8-7

ಕೊಡಂದೇರ ಡಿ. ಮಾಚಯ್ಯ,
L. D. Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 1

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

ವರ್ತಮಾನ ಸಂಗ್ರಹ.

ಒಳದೇಶ.

ಮೈಸೂರಿನಲ್ಲಿ ಓದುತ್ತಿದ್ದ ಕೊಡ್ಲಿಪೇಟೆಯ ಶ್ರೀ ರಘುನಾಥರಾಯರ ಪುತ್ರಿ ಶ್ರೀಮತಿ ಬಿ. ಆರ್. ಕಾವೇರಮ್ಮನವರು ಕಳೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಪ್ರಥಮಶ್ರೇಣಿಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿದು ಸಂತೋಷಪಡುತ್ತೇವೆ

ಡಿಸ್ಟ್ರಿಕ್ಟ್ ಬೋರ್ಡಿನ ತೀರ್ಮಾನದಂತೆ ಕಳೆದ ತಿಂಗಳ ಅಂತ್ಯದಿಂದ ಕೊಡ್ಲಿಪೇಟೆ, ಸೋಮವಾರಪೇಟೆ ಮತ್ತು ಚೆಟ್ಟಳ್ಳಿ (10 ನೇ ಮೈಲು) ಈ ಮೂರು ಸ್ಥಳಗಳಲ್ಲಿ ವಾರಕ್ಕೊಂದು ದಿನ ಸಂತೆ ದಿವಸ ಆಸ್ಪತ್ರೆ ಇಡಲ್ಪಡುತ್ತಿರುವುದಾಗಿ ತಿಳಿಯಬರುತ್ತದೆ

ಮಡಿಕೇರಿ.

ಗ್ರಾಮಾಭಿವೃದ್ಧಿ ಮಂಡಲಿಯ ಕಮಿಟಿ ಮೀಟಿಂಗು ಈ ದಿನ ಕೌನ್ಸಿಲು ಹಾಲಿನಲ್ಲಿ ಕಮಿಷನರವರ ಅಧ್ಯಕ್ಷತೆಯಲ್ಲಿ ನಡೆಯಿತು

ಸಹಕಾರಿ ಸೆಂಟ್ರಲ್ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ಎಂದಿನಂತೆ ಕಡೇ ಶನಿವಾರ ಅಂದರೆ ಈ ತಾ 24 ರಲ್ಲಿ ನಡೆಯುವದೆಂದು ತಿಳಿಯಬರುತ್ತದೆ

ಇಲ್ಲಿಗೆ ಹೈಸ್ಕೂಲಿನಲ್ಲಿ ಯದಾ ಪ್ರಕಾರ ಶನಿವಾರ ಮತ್ತು ಭಾನುವಾರಗಳಲ್ಲಿ ಬೆಳಿಗ್ಗೆ 10½ ಗಂಟೆಯಿಂದ 12ರ ವರೆಗೆ ಹಿಂದೀ ಕ್ಲಾಸುಗಳು ತೆರಯಲ್ಪಟ್ಟಿರುವದೆಂದೂ, ಬಾಲಕ, ಬಾಲಕಿಯರನ್ನು ಕಳುಹಿಸಿ ರಾಷ್ಟ್ರಭಾಷೆಯನ್ನು ಉಪಯೋಗಿಸಿಕೊಳ್ಳಬೇಕೆಂದೂ ಈ ಮೂಲಕ ತಿಳಿಸಿರುತ್ತಾರೆ

ಈ ವಾರ ಬುಧವಾರ ತಾರೀಕು 7ರಿಂದ 9ರ ವರೆಗೆ ಇಲ್ಲಿ 1 ಇಂಚು 84 ಸೆಂಟು ಮಳೆ ಬಿದ್ದಿದೆ

ಇಲ್ಲಿ ಕಾಫಿ ಖಂಡಿಗೆ ರೂ 125 ಏಲಕ್ಕಿ ಮಣಕ್ಕೆ ರೂ 34 ಕ್ರಯ ಇರುತ್ತೆ

ವೀರರಾಜಪೇಟೆ.

ಕಳೆದ ಏಪ್ರಿಲ್‌ನಲ್ಲಿ ನಡೆದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ಇಲ್ಲಿಯ ಹೈಸ್ಕೂಲಿನ 30 ವಿದ್ಯಾರ್ಥಿಗಳ ಪೈಕಿ ಈ ಕೆಳಗಿನ ವಿದ್ಯಾರ್ಥಿಗಳು ತೇರ್ಗಡೆಯಾಗಿರುವರು – ಕ್ರಿಗಳಾದ (1) ಫ್ರಾನ್ಸಿಸ್ ಡಿಸೋಜ, (2) ಬೋರಾಂಡ ಪೊನ್ನಣ್ಣ, (3) ಅಮ್ಮಣಿಚಂಡ ಮುಂದಪ್ಪ, (4) ಮಡಿಕೇರಿಯಂಡ ಬೀಮಯ್ಯ, (5) ಚೆಕ್ಕೆರ ಮುಂದಪ್ಪ, (6) ಬಿಟ್ಟಿಯಂಡ ತಿಮ್ಮಯ್ಯ, (7) ಕೋಡಿಯಂಡ ಪೂಣಚ್ಚ, (8) ಪಟ್ಟೇಂಗಡ ಚಂಗಪ್ಪ, (9) ಚೇರಿಯೊಳಿ ರಾಮಕೃಷ್ಣ, (10) ಕೋಡಿಮಣಿಯಂಡ ಪೂವಣ್ಣ, (11) ಕೊಳ್ಳಿಮಾಡ ಮಂದಣ್ಣ, (12) ಇಟ್ಟಂಡಿರ ಬಿದ್ದಯ್ಯ, (13) ಚಿಕ್ಕರ ಸೋಮಯ್ಯ, (14) ಎಸ್ ಎಲ್ ಕೃಷ್ಣಪ್ಪ, (15) ಶಾನಭೋಗ್ ಎಸ್ ಗಣಪತಿ, (16) ಕರ್ತಮಾಡ ಗಣಪತಿ, (17) ಚಮ್ಮಟ್ಟಿಡ ಮಂದಪ್ಪ ಮತ್ತು (18) ಅಜ್ಜಿಕುಟ್ಟಿಯಂಡ ಕೃಷ್ಣವರ್ಮ ಇವರಿಗೆಲ್ಲಾ ನಮ್ಮ ಅಭಿನಂದನೆಗಳಿವೆ

ನಾಪೋಕ್ಲು.

ನಾಪೋಕ್ಲಿನ ಹಯರ್ ಎಲಿಮೆಂಟರಿ ಶಾಲೆಯ ಅಧ್ಯಾಪಕರಾಗಿದ್ದ ಶ್ರೀ ಯಂ ತಿಮ್ಮಯ್ಯನವರನ್ನು ಸೋಮವಾರಪೇಟೆಗೂ, ವೀರರಾಜಪೇಟೆಯ ನೋಡಲ್ ಶಾಲೆಯ ಅಧ್ಯಾಪಕರಾಗಿದ್ದ ಶ್ರೀ ಪಿ. ಎಸ್ ರಾಮಯ್ಯನವರನ್ನೂ ಪೊನ್ನಂಪೇಟೆಗೂ, ವರ್ಗಾಯಿಸಿರುವರೆಂದೂ, ಅವರ ಖಾಲಿ ಜಾಗವನ್ನು ಭರ್ತಿಮಾಡುವುದಿಲ್ಲವಾಗಿಯೂ ತಿಳಿಯುತ್ತೇವೆ.

ಪೊನ್ನಂಪೇಟೆ.

ಬಾಳೆಲೆ ಆಸ್ಪತ್ರೆಯ ಮತ್ತು ಡಾಕ್ಟರರ ವಸತೀ ಗೃಹದ ಅಸ್ತಿಭಾರ ಕಲ್ಲುಗಳನ್ನು ಹಾಕುವ ಸಮಾರಂಭೋತ್ಸವವು ಕೊಡಗಿನ ಸಿವಿಲ್ ಸರ್ಜನರಾದ ಕೆಪ್ಟನ್ ಜಿ. ಪಿ ಚಾರ್ಲಿವುಡ್ ಐ ಯಂ ಎಸ್. ಮತ್ತು ಮಿಸೆಸ್ ಚಾರ್ಲಿವುಡ್‌ರವರಿಂದ ತಾರೀಕು 12ನೇ ಸೋಮವಾರ ನಡೆಸಲ್ಪಡುವದೆಂದು ತಿಳಿಯುತ್ತೇವೆ.

ಬೆಸಗೂರು ಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನ ಸಮಾರಂಭೋತ್ಸವವು ಡಿಸ್ಟ್ರಿಕ್ಟ್ ಬೋರ್ಡಿನ ಪ್ರಸಿಡೆಂಟರಾದ ಶ್ರೀ ಪಿ ಐ ಬೆಳ್ಯಪ್ಪ ಯಂ ಎಲ್ ಸಿ ಯವರಿಂದ ತಾರೀಕು 12ನೇ ಸೋಮವಾರ ನಡೆಸಲ್ಪಡುವದೆಂದು ತಿಳಿಯಬರುತ್ತದೆ

ನಿಧನ ವಾರ್ತೆ.

ರಿಜಿಯರ್ಡ್ ಸುಬೇದಾರರಾದ ಶ್ರೀ ಕರವಂಡ ಗಣಪತಿಯವರ ಪತ್ನಿಯವರು ತಾರೀಕು 7ನೇ ಬುಧವಾರವೂ, ಪಿ ಡಬು. ಇಲಾಖೆಯ ಕಂಟ್ರಾಕ್ಟ್ ಕೆಲಸ ನಡಸುತ್ತಿದ್ದ ಮ ಟಿ ಮೊಹಿದಿನ್ ಬ್ಯಾರಿಯವರು ಈ ತಾ 3 ರಲ್ಲಿಯೂ ನಿಧನರಾದರೆಂದು ತಿಳಿಯಲು ವ್ಯಸನಪಡುತ್ತೇವೆ

ಗಾಳಿಬೀಡು.

ಎಸ್ಟೇಟ್ ಕೂಲಿಗಾರರನ್ನು ಇವರು ಈ ಜಾಗ ಬಿಟ್ಟುಹೋಗದಂತೆ ತಾರೀಕಿನಿಂದ ಹೆಂಗಸು, ಮಕ್ಕಳೂ ಸಹಕಾರಿ ಸಂಘಗಳ, ಕಂಪನಿಗಳ, ಬ್ಯಾಂಕು ಮೊದಲಾದವುಗಳ ಮತ್ತು ವರ್ತಕರುಗಳ ಲೀಸನ್ಸ್ ದಾರನ್ನಾಗಿ ನೇಮಿಸಲಾಗಿದೆ

ಇಂಡಿಯಾದ ಕೈಗಾರಿಕೆ ಎರಡನೆಯ ಇಂಜಿನಿಯರುಗಳು, ಎಲೆಕ್ಟ್ರಿಕ್ ಇಂಜಿನೀಯರಿಂಗ್ ಮತ್ತು ವ್ಯವಸಾಯದ ಮೆಟ್ರಿ 1ನೆ ಕ್ಲಾಸಿನ ಸೆಂಟ್ರಲ ಇಂಜಿನೀಯರಿಂಗ್ ಈ ತರಬೇತಿಗೆ ಸೇರಲು ಒಂದು ಪರೀಕ್ಷೆಯು ನವಂಬರು 1ರಲ್ಲು ಡೆಲ್ಲಿಯಲ್ಲಿ ಫೆಡರಲ್ ಪಬ್ಲಿಕ್ ಸರ್ವೀಸ್ ಕಮಿಷನಿಂದ ನಡೆಸಲ್ಪಡುವುದೆಂದೂ ಹೆಚ್ಚಿನ ವಿವರಗಳಿಗೆ ಕಾರ್ಯದರ್ಶಿ ಮೇಲೆ ಹೇಳಿದವರಿಗೆ ಬರೆಯಬೇಕೆಂದೂ ಪ್ರಕಟವಾಗಿದೆ

ಏಪ್ರಿಲ್ ತಿಂಗಳಲ್ಲಿ ಕೊಡಗಿನಲ್ಲಿ 142 ಜನನಗಳು 363 ಮರಣಗಳೂ ಸಂಭವಿಸಿದವೆಂದು ಪ್ರಕಟವಾಗಿದೆ

ಯೊಪ್ಪನೆಂದು ಪದಾರ್ಥವನ್ನು ಅಳೆಯಬೇಕಾದಲ್ಲಿ ಸದರಿ ಅಳತೆಯ ಪಾತ್ರೆಯ ತಳ ಸರಿ ಇರಬೇಕೆಂದೂ, ಪದಾರ್ಥಗಳ ಗಾತ್ರದಿಂದ ಅದರ ಆಕಾರದಿಂದ ಹೀಗೆ ಅಳೆಯಲು ಅಸಾಧ್ಯವಾದರೆ ಸಾಧ್ಯವಿರುವ ಮಟ್ಟಿಗೆ ಅಳತೆ ಪಾತ್ರೆಯೊಳಕ್ಕೆ ಎಲ್ಲಾ ಕಡೆಗಳಿಗೂ ಸಾಮಾನನ್ನು ಅಂಚಿನ ವರೆಗೂ ತುಂಬಿಸಿ ಅಳೆಯಬೇಕೆಂದೂ, ಅಳೆಯುವ ಪಾತ್ರೆಯು ಪರಿಯೂಗಿದ್ದ ಪಕ್ಷ ಒಂದುವರೆ ಇಂಚು ಚೌಕವಾಗಿರುವ ದೊಣ್ಣೆಯನ್ನುಪಯೋಗಿಸಬೇಕೆಂದೂ ಪ್ರಕಟವಾಗಿದೆ. ಈ ತಿದ್ದುಪಡಿಯು ಜುಲೈ 1 ರಿಂದ ಜಾರಿಗೆ ಬರುವದೆಂದೂ ಪ್ರಕಟಿಸಿದೆ

ಹಿಂದೂದೇಶ.

ಬೊಂಬಾಯಿಗೆ ದಯಮಾಡಿಸಿರುವ ರಾಷ್ಟ್ರಪತಿಗಳಾದ ಶ್ರೀ ರಾಜೇಂದ್ರ ಪ್ರಸಾದರವರ ಆಗಮನಾಗತಗಳ ಮಹೋತ್ಸವಗಳ ಫಿಲ್ಮನ್ನು ತೆಗೆದು ಪ್ರದರ್ಶಿಸುವಂತೆ ಏರ್ಪಾಡುಗಳು ನಡೆದಿವೆ.

ಹೈದರಬಾದು ಸತ್ಯಾಗ್ರಹದಲ್ಲಿ ಭಾಗ ವಹಿಸುವವರಿಗಾಗಿ ಪಂಡಿತ ಧರ್ಮವೀರ ವೇದಾಲಂಕಾರರ ನೇತೃತ್ವದಲ್ಲಿ ಸಂಯುಕ್ತ ಪ್ರಾಂತ್ಯದಲ್ಲಿ ಚಂದಾ ಎಂಬಲ್ಲೊಂದು ಕೇಂದ್ರ ಸ್ಥಾಪಿಸಲ್ಪಟ್ಟಿದೆ

ಅಮೇರಿಕದ ಸಂಚಾರಕ್ಕೆ ತೆರಳಿರುವ ಶ್ರೀಮತಿ ಕಮಲಾದೇವಿಯವರನ್ನು ಬೀಳ್ಕೊಡಲು ಬೊಂಬಾಯಿಯಲ್ಲಿ ಕಾಂಗ್ರೆಸ್



ಹೌಸಿನಲ್ಲಿ ಡಾ ಕಿಚಲು ಅಧ್ಯಕ್ಷತೆಯಲ್ಲಿ ಶ್ರೀ ಯುಸುಫ್ ಮೆಹೆರ್ ಅಲಿಯವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಜರುಗಿತು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ತನ್ನ ಮಗನೊಂದಿಗೆ 'ಗ್ನೈಸೆನೌ' ಎಂಬ ಇಟಾಲಿಯನ ಹಡಗಿನ ಮೂಲಕ ಯೂರೋಪಿಗೆ ಪ್ರಯಾಣ ಬೆಳಸಿದರು

ಭೋಪಾಳ ಸಂಸ್ಥಾನದಲ್ಲಿ ಪ್ರಜಾಪ್ರಭುತ್ವಗಳ ಚಳುವಳಿ ಹೆಚ್ಚುತ್ತಿರುವದೆಂದು ತಿಳಿದು ಬಂದಿದೆ. ಸರ್ಕಾರದವರ ನೇಮಕವಾಗಿರುವ ಭೋಪಾಳ ರಾಜ್ಯಸಭೆಯ ಈ ದಿನಗಳಲ್ಲಿ ನಡೆಯುವ ನ್ಯಾಯ್ಯತೆಗೆ ತನ್ನ ವಿರೋಧಿಸುತ್ತಿದ್ದಾರೆ.

ರಾಷ್ಟ್ರೀಯ ಚಳುವಳಿ ಕಮಿಟಿಯ ಸಭೆ ಜೂನ್ 21 ರಿಂದಲೂ, ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಸಭೆ ಜೂನ್ 24 ರಿಂದಲೂ ಮುಂಬಯಿಯಲ್ಲಿ ಸೇರಲಿವೆಯೆಂದು ಕಾಂಗ್ರೆಸ್ ಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ರಾಜದ್ರೋಹದ ಅಪಾದನೆಗಾಗಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಶಿಕ್ಷೆಯನ್ನು ಅನುಭವಿಸುತ್ತಿರುವ ಶಿವಮೊಗ್ಗದ ಕಾಂಗ್ರೆಸ್ ಮುಖಂಡರಾದ ಶ್ರೀ ಸಿದ್ದಯ್ಯನವರು ದಿನಕ್ಕೆ 25 ಸೇರು ರಾಗಿಯನ್ನು ಬೀಸುತ್ತಿರುವರು. ಈ ಕೆಲಸವನ್ನು ಅಧಿಕಾರಿಗಳು ಅವರಿಗೆ ವಿಧಿಸಿರುತ್ತಾರೆ

ಭೋಪಾಲ ಸಂಸ್ಥಾನದಲ್ಲಿ ಕಾಗದ ತಯಾರಿ ಕಾರ್ಖಾನೆಗೆ ಬೇಕಾಗುವಷ್ಟು ಬಿದಿರು ದೊರೆಯಬಹುದಾದುದರಿಂದ ಅಲ್ಲಿನ ಸರ್ಕಾರವು ಒಂದು ಕಾರ್ಖಾನೆಯ ಸ್ಥಾಪನೆಗೆ ಯೋಚನೆ ನಡೆಸಿದೆ ಕಾರ್ಖಾನೆಗೆ ವರ್ಷಂಪ್ರತಿ 10 ಸಾವಿರ ಟನ್ ಬಿದಿರು ಬೇಕಾಗಿರುವುದು ಆದರೆ ಪ್ರಕೃತ ವರ್ಷಂಪ್ರತಿ 8 ಸಾವಿರ ಟನ್ ದೊರೆಯಬಹುದಾದುದರಿಂದ ಸರ್ಕಾರವು 250 ಎಕ್ರೆ ಸ್ಥಳದಲ್ಲಿ ಬಿದಿರು ಬೆಳೆಸಲು ಯೋಚಿಸಿದೆ

ಮದ್ರಾಸಿನಿಂದ ಹೊರಡುವ ವಾರಪತ್ರಿಕೆಯಾದ 'ದಿ ಎಂಪೈರ್ ಟೈಮ್ಸ್' ತಿರುವಾಂಕೂರಿನ ಪ್ರಜೆಗಳಿಗೆ ಆ ಸರ್ಕಾರದ ಮೇಲೆ ತಿರಸ್ಕಾರವನ್ನು ಹುಟ್ಟಿಸತಕ್ಕ ಲೇಖನಗಳನ್ನು ಪ್ರಕಟಿಸುತ್ತದೆಂಬ ಕಾರಣದಿಂದ ಆ ಪತ್ರಿಕೆಗೆ ತಮ್ಮಲ್ಲಿಗೆ ಬಾರಿದ ಕೂಡದೆಂದು ತಿರುವಾಂಕೂರು ಸರ್ಕಾರದವರು ಬಹಿಷ್ಕಾರಾಜ್ಞೆಯನ್ನು ಹೊರಡಿಸಿದೆ ಇದೇ ಕಾರಣದಿಂದ ಕೊಚ್ಚಿಯ 'ದರ್ಮ ಪ್ರಕಾಶಂ' ಎಂಬ ಮಳೆಯಾಳಿ ಪ್ರಕಟಣಗೂ ಅದೇ ಬಂದ್ರ ಪ್ರಯೋಗವಾಗಿದೆ

ಫಿಲಿಪ್ಪೈನ್ ದ್ವೀಪಗಳಿಗೆ ಸೇರಿದ ಲೂಜಾನ್ ಮತ್ತು ಮಿಂಡನಾವೋ ದ್ವೀಪಗಳ ನಡುವೆ ಇರುವ ಪರ್ವತ ಎಂಬ ದ್ವೀಪವು ಮುಳುಗಿಹೋಗುತ್ತಿದೆ ಎಂದು ಪ್ರಕಟವಾಗಿದೆ. ಅಲ್ಲಿದ್ದ 4,000 ಪ್ರಜೆಗಳನ್ನು ಬೇರೆ ಕಡೆಗಳಿಗೆ ಕಳುಹಿಸಿರುತ್ತಾರೆ. ಈ ದ್ವೀಪವು ಸಮುದ್ರದ ಅಲೆಗಳಿಂದ ಕಡಿದು ನಡುಗಿಸಲ್ಪಟ್ಟಿರುವುದೇ ಈ ರೀತಿ ಅದು ಮುಳುಗಿಹೋಗಲು ಕಾರಣವೆಂದು ಹೇಳುತ್ತಾರೆ

ಚಾತ್ರಿ.

ಪಠ್ಯ ಪುಸ್ತಕಗಳು

ಅಯ್ಯಾ,

ಕೊಡಗಿನಲ್ಲಿ ಮುಳುಗಿರುವ ತಂದೆ ತಾಯಿಗಳು ಖರ್ಚನ್ನು ಕಡಿಮೆ ಮಾಡುವ ಉದ್ದೇಶ್ಯ ಶಾಲೆಗಳಲ್ಲಿ ಮಕ್ಕಳು ಕಲಿವ ಪುಸ್ತಕಗಳನ್ನೂ, ಪ್ರಿಂಟಾದ ರೂಲಿಂಗ್ ಪುಸ್ತಕಗಳನ್ನು ಕೊಂಡುಕೊಳ್ಳುವ ಅಗತ್ಯವಿಲ್ಲವೆಂದು ವಿದ್ಯಾ ಇಲಾಖೆಯ ಅಧಿಕಾರಿಗಳು ಹಲವು ಸಾರಿ ತಿಳಿಸಿದರೂ ಸರ್ಕಾರದ ಹುಕುಂ ಗಾಳಿಗೆ ತೂರಿ ಕೆಲವು ಉಪಾಧ್ಯಾಯರುಗಳು ಶಾಲೆಯ ಮಕ್ಕಳ ಪುಸ್ತಕಗಳ ಈ ದಿನದಲ್ಲೇ ಈ ಪುಸ್ತಕಗಳನ್ನು ತಂದರೆ ಇಲ್ಲಿ ಮಕ್ಕಳು ಹೇಳಿಕೊಡುವ ಕಾರಣ ಏನೆಂದರೆ ಮಕ್ಕಳು ಯೀಗಿಂದ ಬೇಗ ಕೊಳ್ಳುವಂತೆ ಉತ್ಸಾಹ ಪಡಿಸಿದ ಕಾರಣ ಸೇರಿ ಪತ್ರಿಕೆ ನನಗೆ ಕೊಟ್ಟಿರುವ ಇವರು 'ಪ್ರೀತಿ ಕೊಟ್ಟಿರುವ ಪುಸ್ತಕ ...

ಯಂತಾಗುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳು ಇದಕ್ಕೆ ಸ್ವಲ್ಪ ಗಮನ ಕೊಡುವರೇ? 'ತಂದೆ'

ಪಠ್ಯಪುಸ್ತಕ ಕಮಿಟಿ.

ಅಯ್ಯಾ,

ಈ ಕಮಿಟಿಯ ರಚನೆಯಲ್ಲಿ ಸ್ವಲ್ಪ ತಪ್ಪುಗಳಿವೆ ಎಂದೂ ಅವುಗಳನ್ನು ತಿದ್ದಬೇಕೆಂದೂ ತೋರುತ್ತೆ. ಈ ಕಮಿಟಿಯ ಅಧ್ಯಕ್ಷರಿಗೆ ಸಾಧಾರಣ ಓಟು ಮತ್ತು ಕಾಸ್ಟಿಂಗ್ ಓಟು ಸಹ ಇದೆಯೋ ಇಲ್ಲವೆಂಬುದು ಸ್ಪಷ್ಟಪಡಿಸಬೇಕಾಗಿದೆ. ಅಲ್ಲದೆ ಕಮಿಟಿಯವರ ಪೈಕಿ ಯಾರಾದರೂ ಪುಸ್ತಕ ಬರೆದವರಿದ್ದು ಅವರ ಪುಸ್ತಕಗಳ ವಿಷಯ ಚರ್ಚೆಗೆ ಬರುವಾಗ ಅವರಿಗೆ ಓಟು ಮಾಡಲು ಬಿಡಬೇಕೋ ಯಾ ಇಲ್ಲವೋ ಎಂದು ಸಹ ಸ್ಪಷ್ಟವಾಗಿ ತಿಳಿಯಬೇಕಾಗಿದೆ. ಒಂದೋ ಎರಡೋ ಶಾಲೆಗಳು ಮಾತ್ರ ಇರುವ ಎರಡು ಮುನ್ಸಿಪಾಲಿಟಿಯ ಅಧ್ಯಕ್ಷರಿಗೆ ಈ (ಟೆಕ್ಸ್ಟ್ ಬುಕ್) ಕಮಿಟಿಯಲ್ಲಿ ಸ್ಥಳವಿರುವುದು ಸರಿಯಾಗಿ ತೋರುವುದಿಲ್ಲ. ಇದಕ್ಕಿಂತ ಅಖಿಲ ಕೊಡಗು ಉಪಾಧ್ಯಾಯರ ಸಂಘದ ಅಧ್ಯಕ್ಷರಾಗಲೀ, ಯಾ ಹಯರ್ ಎಲಿಮೆಂಟರಿ ಶಾಲೆಯ ಹೆಡ್ ಮಾಸ್ಟರುಗಳ ಪೈಕಿ ಒಬ್ಬರಿಗಾಗಲೀ ಯಾ ಅಸಿಸ್ಟೆಂಟ್ ಎಜ್ಯುಕೇಶನಲ್ ಆಫೀಸರಿಗಾಗಲೀ ಅವರಲ್ಲಿ ಸ್ಥಳವಿರುವದು ಮೇಲೆಂದು ನನ್ನ ಅಭಿಪ್ರಾಯ. ಅಧಿಕಾರಿಗಳು ಇದನ್ನು ಆಲೋಚಿಸುವರೇ? ಮದ್ರಾಸಿನಲ್ಲಿ ಯಾ ಮೈಸೂರಿನಲ್ಲಿ ಹ್ಯಾಗಿದೆಯೆಂದು ಬಲ್ಲವರು ತಿಳಿಸುವದು ಒಳ್ಳೇಯದು. 'ವಿದ್ಯಾಭಿಮಾನಿ.'

ರುದ್ರಗುಪ್ಪೆ ದೇವರ ಹಬ್ಬದ ವಿಷಯ ನಿಜವಲ್ಲದ ವಾರ್ತೆ.

ಅಯ್ಯಾ,

ಕಳೆದ ಏಪ್ರಿಲ್ ತಾ. 28ನೆಯ ಕೊಡಗು ಪತ್ರಿಕೆಯಲ್ಲಿ ರುದ್ರಗುಪ್ಪೆ ಗ್ರಾಮದ ಭಗವತಿ ದೇವರ ವಾರ್ಷಿಕೋತ್ಸವವು ಅನೇಕ ಮೀಟಿಂಗುಗಳು ನಡದು ಸಹ ಜರುಗದೆ ಇದ್ದಂಥದ್ದು, ಸದರಿ ದೇವರ ಭಂಡಾರವು ಇಟ್ಟಿದ್ದ ಕುಟುಂಬದವರ ಮನೆಗೆ ಕಾರ್ಣೋರ್ಡ ದಾವೆ ನುಗ್ಗಿದ ಮಾತ್ರದಿಂದ ಈಗ ನಡೆಯುವ ಏರ್ಪಾಡಾಗಿದೆ ಎಂದು ಬರೆದ ಸಂಗತಿಯನ್ನು ನೋಡಿದ್ದಲ್ಲಿ ಬಹಳ ವಿಷಾದಕರವಾಗುತ್ತಿದೆ. ಅದರೆ ನಿಜವಲ್ಲದ ಈ ವರ್ತಮಾನವನ್ನು ನಿಮಗೆ ಯಾರು ಕೊಟ್ಟರೋ ತಿಳಿಯದು. ಯಾರಾದರೂ ಬರೆದು ತಿಳಿಸಿದಲ್ಲಿ ಅಂಥಾ ವರ್ತಮಾನವನ್ನು ಕೊಟ್ಟಂಥವರ ಯೋಗ್ಯತೆಯನ್ನೂ, ಅದನ್ನು ಕೇಳುವಲ್ಲಿ ಅವರಿಗೆ ಇದ್ದ ಮುತುವರ್ಜಿಯನ್ನೂ ಮತ್ತು ವರ್ತಮಾನದ ನಿಜತ್ವವನ್ನೂ ತಿಳಿಯದೆ ಪ್ರಕಟಿಸಿದ್ದನ್ನು ನೋಡಿ ವ್ಯಸನ ಪಡಬೇಕಾಗಿದೆ. ಈ ವರ್ತಮಾನ ಕೊಟ್ಟದ್ದು ಗ್ರಾಮದಲ್ಲಿ ಮತ್ತು ಕುಟುಂಬದಲ್ಲಿ ಒಡಕನ್ನು ತರುವ ಅಭಿಪ್ರಾಯದಿಂದಲೇ ಎಂದು ತೋರುತ್ತೆ. "ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು" ಎಂಬ ನಾಣ್ಣುಡಿಯು ಈ ಕಾಲದಲ್ಲಿ ಹೀಗೆ ನಿಷ್ಕಾರಣವಾದ ಹುರುಳಿಲ್ಲದ ವರ್ತಮಾನಗಳನ್ನು ಪ್ರಚುರಿಸುವದು ಸರಿಯಲ್ಲ.

ಈ ಬಾಬಿನಲ್ಲಿ ನಡೆದ ಮೀಟಿಂಗುಗಳ ವಿಷಯ ಬರೆಯುವುದು ಬರೇ ಅನಾಯಾಸವಾದುದರಿಂದ ಅವರ ವಿಚಾರವನ್ನು ಕೊಟ್ಟಿರುವುದಿಲ್ಲ.

ದೇವರ ಭಂಡಾರ ಇದ್ದ ಕುಟುಂಬದವರಲ್ಲೊಬ್ಬ:

ಗೌಡ ಜನಾಂಗದ ಮೀಟಿಂಗು.

ಆವಂದೂರು ಗ್ರಾಮದಲ್ಲಿ ತಾರೀಕು 20-5-39 ರಲ್ಲಿ ಶ್ರೀ ಬೊಳ್ಳಾಡಿರ ಯಸ್. ತಮ್ಮಯ್ಯನವರ ಅಧ್ಯಕ್ಷತೆಯಲ್ಲಿ ನಮ್ಮ ಗ್ರಾಮದ ಒಗ್ಗಟ್ಟಿನ ವಿಷಯ, ನಮ್ಮ ಮತಾಚಾರದ ಲಗ್ನಕಾರ್ಯದ ವಿಷಯ ಇನ್ನೂ ಕೆಲವು ಸಂಗತಿಗಳನ್ನು ನಮ್ಮ ಸಹಕಾರಿ ಸಂಘದ ಉತ್ತಮ ಜೀವನದ ಆಸ್ಪ ಮೇರೆ ಕೆಲಸಕಾರ್ಯಗಳನ್ನು ನಡಿಸಬೇಕಾಗಿಯೂ ಒಳ್ಳೇ ತರಹದ ವ್ಯವಸಾಯ ಮಾಡುವ ವಿಧಾನ ಈ ವಿಚಾರ ತರ್ಕಿಸಲು ಸೇರಿದ ಸಭೆಯು ನಡವಳಿಕೆ.

ನಾವು ನಮ್ಮ ಲಗ್ನಕಾರ್ಯದಲ್ಲಿ ಒಬ್ಬ ಮನುಷ್ಯನು ಎಷ್ಟು ಲಗ್ನ ಬೆಳಿಸಿದರೂ ಗುರುಕಾಣಿಕೆ 6-2-0 ಯನ್ನು ಮಾತ್ರ ತೆಗಯಬೇಕೆಂಬ ಸೂಚನೆಯು ಚರ್ಚಿಸಲ್ಪಟ್ಟು ಅದಕ್ಕೆ ಬಂದ ಉಪ ಸೂಚನೆಯಂತೆ ಮುಂದಕ್ಕೆ ಒಂದನೇ ಲಗ್ನಕ್ಕೆ 6-2-0 ಆಣೆ ಗುರುಕಾಣಿಕೆ ತೆಗೆಯುವಂತೆಯೂ ಇದರ ಮೇಲೆ ಎಷ್ಟು ಲಗ್ನ ಬೆಳಿಸಿದರೂ 6-6-0 ಆಣೆ ಮಾತ್ರ ಗುರುಕಾಣಿಕೆ ತೆಗೆಯುವಂತೆಯೂ ಸರ್ವ ಸಮ್ಮತದಿಂದ ತೀರ್ಮಾನವಾಯಿತು. ದೇವಾರು ಪೊನ್ನಪ್ಪನವರು ತನ್ನ ಮನೆಯಿಂದ ಕುಯ್ಯಮುಡಿ ಮನೆಗೆ ಲಗ್ನ ಬೆಳಿಸಿದ ಕಾರ್ಯಗಳಲ್ಲಿ ಅವರಿಂದ ಹೆಚ್ಚಿಗೆ ತೆಗೆದ ಹಣವನ್ನು ವಾಪಸು ಕೊಡುವಂತೆಯೂ ಇನ್ನು ಮುಂದೆ ನಮ್ಮ ಗ್ರಾಮದಲ್ಲಿ ಈ ಪದ್ಧತಿಯನ್ನು ಎಲ್ಲ ಮಹನೀಯರುಗಳಿಗೆ ತಿಳಿಸುವಂತೆ ಸರ್ವರೂ ಒಪ್ಪಿ ತೀರ್ಮಾನವಾಯಿತು.

ನಮ್ಮ ಗ್ರಾಮದ ಹಬ್ಬ ಉತ್ಸವಗಳಲ್ಲಿ ಕುಡಿಕತನವನ್ನು ನಿಲ್ಲಿಸಬೇಕಾಗಿಯೂ, ಒಗ್ಗಟ್ಟಿನಿಂದ ಕ್ಲಪ್ತ ಕಾಲಕ್ಕೆ ಸರಿಯಾಗಿ ಕೆಲಸ ನಡಿಸಬೇಕಾಗಿಯೂ ತೀರ್ಮಾನಿಸಲಾಯಿತು.

ನಾವು ಕರಡಿನಲು ಕೆಲಸಕಾರ್ಯಗಳನ್ನು ಜೊತೆನೇರ ಒಗ್ಗಟ್ಟಿನಿಂದ ನಡಿಸಬೇಕೆಂಬ ಸೂಚನೆಯು ಚರ್ಚಿಸಲ್ಪಟ್ಟು ಕರಿದನಲು ಎಲ್ಲರೂ ಕೈಕೊಳ್ಳಬೇಕಾಗಿ ತೀರ್ಮಾನಿಸಲಾಯಿತು.

ನಮ್ಮ ಲಗ್ನ ಕಾರ್ಯಗಳಲ್ಲಿ ನಮ್ಮ ಹುಡುಗರ ವಿದ್ಯಾಭ್ಯಾಸಕ್ಕಾಗಿ ಚಂದಾ ತೆಗೆದು ಹಣ ಶೇಖರಿಸಬೇಕೆಂಬ ಸೂಚನೆಯು ಚರ್ಚಿಸಲ್ಪಟ್ಟು ಇನ್ನು ಮುಂದಕ್ಕೆ ಚಂದಾ ತೆಗೆಯುವಂತೆಯೂ, ಪ್ರಿಂಟ್ ರಶೀತಿ ತೆರೆಯುವಂತೆಯೂ ತೀರ್ಮಾನಿಸಲಾಯಿತು.

ಅಧ್ಯಕ್ಷರ ಸ್ವಾರಸ್ಯವಾದ ಭಾಷಣದ ನಂತರ ಅಧ್ಯಕ್ಷರಿಗೆ ವಂದನೆಯನ್ನು ಅರ್ಪಿಸಿ ಸಭೆಯು ಬರಖಾಸ್ತಾಯಿತು.

'ಹಾಜರಿದ್ದವ'

ಯೂರೋಪಿನ ಕಲಹಕಂಟಕ ಹಿಟ್ಲರ್.

(4 ನೇ ಪುಟದಿಂದ ಸಾಗಿದ್ದು.

ಸಿದರು. ಆದ್ದರಿಂದ ಯೂರೋಪ್ ತೊಂದರೆಯೂ ಇಲ್ಲದೆ ಹಿಟ್ಲರನಿಗೆ ಸುಡೆಟೆನ್ ಪ್ರಾಂತವು ಸಿಕ್ಕಿದ್ದಲ್ಲದೆ ಝೆಕೊಸ್ಲೋವಾಕಿಯಾದ ವಧೆಯೂ ನಡೆಯಿತು.

ಈ ವಿಜಯದಿಂದ ಹಿಟ್ಲರನು ಪ್ರಚಂಡನಾದನು. ಯೂರೋಪಿನ ಪ್ರಬಲ ರಾಷ್ಟ್ರಗಳು ತಲೆತಗ್ಗಿಸತೊಡಗಿದವು. ಸಣ್ಣ ಸಣ್ಣ ರಾಷ್ಟ್ರಗಳು ತಮ್ಮ ಗತಿಯೇನೆಂದು ಜಪಮಾಡಲು ಪ್ರಾರಂಭಿಸಿದವು. ಹಿಟ್ಲರನು ಇದರಿಂದ ತೃಪ್ತನಾಗಲಿಲ್ಲ. ಝೆಕೋಸ್ಲೋವಾಕಿಯಾವು ತನ್ನ ಅಂಕಿಗೆ ಬರಬೇಕೆಂದು ಹವಣಿಸುತ್ತಿದ್ದನು. ಈ ಧ್ಯೇಯದಿಂದಲೇ ಹೊರಟಿದ್ದ ಹಿಟ್ಲರನಿಗೆ ಸುಡೆಟೆನ್ ಪ್ರಾಂತವನ್ನು ಬಲಿಕೊಟ್ಟು ಶಾಂತಪಡಿಸಲು ಯತ್ನಿಸಿದ ಯೂರೋಪಿನ ಪ್ರಬಲ ರಾಷ್ಟ್ರಗಳ ಆಶಯವು ಮಣ್ಣುಗೂಡಿತು. ಝೆಕೊಸ್ಲೋವಾಕಿಯಾದಲ್ಲಿ ಹಿಟ್ಲರನ ಪ್ರೇರಣೆಯಿಂದ ಚಳವಳಿಯ ಆರಂಭವಾಯಿತು. ಹೀಗೆ ಚಳವಳಿಯು ಪ್ರಾರಂಭವಾಗಲು ಝೆಕ್ ಸರಕಾರವು ಈ ಚಳವಳಿಗಾರರನ್ನು ಹಿಡಿದು ಬಂಧಿಸಿ ಸಂಬಂಧಪಟ್ಟವರನ್ನು ಶಿಕ್ಷಿಸಿದರು. ಇದರಿಂದ ಮುಖಂಡರು ಉದ್ರೇಕಗೊಂಡು ಚಳವಳಿಯು ಪ್ರಖರವಾಗಿ ನಡೆಯತೊಡಗಿತು. ಹಿಟ್ಲರನು ಪ್ರತಿ ನಿಮಿಷವನ್ನೂ ಎಚ್ಚರದಿಂದ ಕಾಯುತ್ತಿದ್ದನು. ಇಷ್ಟರಲ್ಲಿ ಸ್ಲೋವಾಕ್ ಮುಖಂಡನಾದ ಡಾ. ಟಿಸೋರ್ ಈ ಚಳವಳಿಯಲ್ಲಿ ತನ್ನನ್ನು ಸಹಾಯ ಮಾಡಲು ಹಿಟ್ಲರನನ್ನು ಬೇಡಿದನು. ಹಿಟ್ಲರನಿಗೆ ಅಂಗೈಯಲ್ಲಿ ಸ್ವರ್ಗ ಪ್ರತ್ಯಕ್ಷವಾದಂತಾಯಿತು. ಒಡನೇ ಝೆಕ್ ಅಧ್ಯಕ್ಷರನ್ನು ಕರೆದು ಸ್ಲೋವಾಕಿಯಾರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದೂ, ಇಲ್ಲವೇ ಚಳಗಾರರೊಳಗೆ ಝೆಕ್ ರಾಷ್ಟ್ರವು ಧ್ವಂಸ ಮಾಡಲ್ಪಡುವದು ಎಂಬ ಬೆದರಿಕೆ ಕೊಟ್ಟನು. ಝೆಕ್ ಅಧ್ಯಕ್ಷರು ನಿರ್ವಾಹವಿಲ್ಲದೆ ಶರಣಾಗತನಾದನು. ಇದಕ್ಕೆ ಮೊದಲೇ ಜರ್ಮನಿ ಸೇನೆಯು ಬೊಹೇಮಿಯ ಹಾಗೂ ಮೊರೇವಿಯಾ ಪ್ರಾಂತಗಳನ್ನು ವಶಪಡಿಸಿಕೊಂಡಿದ್ದವು. ಜರ್ಮನ್ ಸೇನೆಯು ಮುಂದರಿದು ಇಡೀ ಝೆಕೊಸ್ಲೋವಾಕಿಯಾವೇ ನಿರಾಯಾಸದಿಂದ ಹಿಟ್ಲರನ ಕರಗತವಾಯಿತು. ಹಿಟ್ಲರನು ತನ್ನ ಪತಾಕೆಯನ್ನು ಅಲ್ಲಿ ಏರಿಸಿ 'ಶಕ್ತಿಯ ಬಲದ ಮಹಿಮೆ'ಯನ್ನು ಜಗತ್ತಿಗೆ ಸಾರಿದನು. ಹಿಟ್ಲರನ ಈ ಧೂರ್ತತನವನ್ನು ಜಗತ್ತೇ ಧಿಕ್ಕರಿಸಿತು. ಯೂರೋಪಿನ ರಾಷ್ಟ್ರಗಳಿಗೆ ಸಿಡಿಲು ಬಡಿದಂತಾಯಿತು. ಮ್ಯೂನಿಕ್ ಒಪ್ಪಂದ ಮಾಡಿ ಜಗತ್ತಿನ ಶಾಂತಿಯನ್ನು ಸಾಧಿಸಿದೆನೆಂಬ ಚೇಂಬರ್ಲೇನರ ಹೆಗ್ಗಳಿಕೆಯು ಹೇಳಹೆಸರಿಲ್ಲದಂತಾಯಿತು.

ಮೆಮೇಲಿನ ನಿಧನ.

ಮಹಾ ಯುದ್ಧಕ್ಕೆ ಮೊದಲು ಲಿಥುವೇನಿಯಾದ ಬಳಿಯಿರುವ ಮೆಮೆಲ್ ಎಂಬ ಪ್ರಾಂತವು ಜರ್ಮನಿಗೆ ಸೇರಿತ್ತು. ಯುದ್ಧದಲ್ಲಿ ಜರ್ಮನಿಯು ಪರಾಜಯವಾಗಲು ಲಿಥುವೇನಿಯಾವು ಈ ಪ್ರಾಂತವನ್ನು ಆಕ್ರಮಿಸಿಕೊಂಡಿತ್ತು. ಇಲ್ಲಿ ಜರ್ಮನರ ಸಂಖ್ಯೆಯೇ ಹೆಚ್ಚಿತ್ತು. ಯಥಾಪ್ರಕಾರ ಇಲ್ಲಿಯೂ ಚಳವಳಿ ಪ್ರಾರಂಭವಾಯಿತು. ಹಿಟ್ಲರನು ಅಲ್ಲಿಯ ಜರ್ಮನರ ಹಿತಚಿಂತಕನಾಗಿ ಒಡನೆ ಮೆಮೆಲನ್ನು ಜರ್ಮನಿಗೆ ಒಪ್ಪಿಸಬೇಕೆಂದು ಘರ್ಜಿಸಿದನು. ಲಿಥುವೇನಿಯಾವು ಮುಂದಿನ ಮಾತೇ ಇಲ್ಲದೆ ಮೆಮೆಲನ್ನು ಜರ್ಮನಿಗೆ ಒಪ್ಪಿಸಿ ಶರಣಾಗತವಾಯಿತು. ಇದರಿಂದಂತೂ ಯೂರೋಪಿನ ರಾಷ್ಟ್ರಗಳ ಎದೆಯೊಡೆದು ಹೋಯಿತು.

ಮುಂದೇನು?

ಮಹಾ ಯುದ್ಧದಲ್ಲಿ ಸೋತು ಸೊರಗಿ ಹೋಗಿ 'ವಾರ್ಸೈಲ್ಸ್' ಒಪ್ಪಂದವೆಂಬ ಸರಪಣಿಯಿಂದ ಬಂಧಿಸಲ್ಪಟ್ಟ ಜರ್ಮನಿಯನ್ನು ಉದ್ಧರಿಸಿ ಇಡೀ ಜಗತ್ತೇ ಜರ್ಮನಿಯೆಂದರೆ ಹೆದರುವಂಥಾ ಸ್ಥಾನಕ್ಕೆ ತಂದ ಕೀರ್ತಿಯು ಹಿಟ್ಲರನದ್ದು. ಒಂದು ಕಾಲಕ್ಕೆ ಜರ್ಮನಿಯು ಅಧೀನತನವಾಗಿ ವಿವಿಧ ರಾಷ್ಟ್ರಗಳ ದಾಸ್ಯಕ್ಕೆಡೆಯಾಗಿದ್ದ ಆ ರಾಷ್ಟ್ರವನ್ನು ವಿವಿಧ ರಾಷ್ಟ್ರಗಳ ಮುಂದೆ ನಿಲ್ಲಿಸಿ ಎಲ್ಲರೂ ಆಶ್ಚರ್ಯದಿಂದ ಅದನ್ನು ನೋಡುವಂತೆ ಮಾಡಿದವನಾದರೂ ಈ ಹಿಟ್ಲರನೇ, ಮುಂದೆ ಯಾವ ಕಡೆ ಮುಂದುವರಿಯುವನೆಂಬುವದನ್ನು ಹೇಳಲಸಾಧ್ಯ. ಎಲ್ಲೋ ಗುಡುಗಿ ಎಲ್ಲೋ ಮಳೆ ಬೀಳುವಂತೆ ಯಾವುದೋ ಒಂದು ರಾಷ್ಟ್ರವನ್ನು ಎಚ್ಚರಿಸಿ ಯಾವುದೋ ಒಂದು ರಾಷ್ಟ್ರದ ಮೇಲೆ ಬೀಳುವದು ಹಿಟ್ಲರನ ವಾಡಿಕೆ. ಎಷ್ಟು ಹುಷಾರಿನಿಂದ ಕಾದು ನೋಡಿದರೂ, ಹಿಟ್ಲರನು ಒಂದು ದೇಶವನ್ನಾಕ್ರಮಿಸಿ ಅದನ್ನು ಜೀರ್ಣಿಸಿ ಮತ್ತೊಂದರ ಆಕ್ರಮಣಕ್ಕೆ ತೊಡೆತಟ್ಟಿ ನಿಂತ ಮೇಲೆಯೇ ಬೇರೆಯವರಿಗೆ ತಿಳಿಯುವದೇ ವಿನಹ ಅದಕ್ಕೆ ಮೊದಲಿಲ್ಲ. ಹಿಟ್ಲರನ ಕೆಲಸಗಳೆಲ್ಲವೂ ಮಿಂಚಿನ ವೇಗದಿಂದ ನಡೆದು ಹೋಗುತ್ತವೆ. ಈಗ ರೊಮೇನಿಯಾದೊಡನೆ ವ್ಯಾಪಾರದ ಒಪ್ಪಂದ ಮಾಡಿಕೊಂಡು ಅಲ್ಲಿ ಯಥೋಚಿತ ವ್ಯಾಪಾರ ಮಾಡುತ್ತಿರುವನು. ಕ್ರಮೇಣ ಅಲ್ಲಿ ಜರ್ಮನರು ನೆಲೆನಿಂತು ಅವರ ಪರಿಸ್ಥಿತಿ ಹೇಗೆ ತಿರುಗುವದೋ ತಿಳಿಯದಾಗಿದೆ. ಒಟ್ಟಿನಲ್ಲಿ ಹಿಟ್ಲರನ ಮುಂದಿನ ತುತ್ತಾಗಿ ಲಿಥುವೇನಿಯಾ, ಡಾನ್‌ಜಿಗ್ ಮತ್ತು ರುಮೇನಿಯಾ ಇವು ಮೂರರಲ್ಲಿ ಒಂದು ಪರಿಣಮಿಸದಿರದು. ಅಂತು ಜರ್ಮನಿಯ ಭಾಗ್ಯವಿಧಾತನಾಗಿ ಫ್ರಾನ್ಸಿನ ನೆಪೋಲಿಯನನ್ನು ಜ್ಞಾಪಕಕ್ಕೆ ತರುತ್ತಿರುವ ಹಿಟ್ಲರನು ತನ್ನ ಕಳೆದು ಹೋದ ವಿಶಾಲ ಚಕ್ರಾಧಿಪತ್ಯದ ಭಾಗಗಳನ್ನು ಒಂದು ಗೂಡಿಸದೆ ಬಿಡನೆಂಬುದರಲ್ಲಿ ಸಂದೇಹವಿಲ್ಲ.

ಸಂಸ್ಕೃತದ ಕಾಠಿಣ್ಯವೇ ಅದನ್ನು ಹಿಂದಿರಿಸಿದು.

(3ನೇ ಪುಟದಿಂದ ಸಾಗಿದ್ದು)

ವರ್ಷದಲ್ಲಿ ಇಂದಿಗೂ ಭರತಖಂಡದಲ್ಲೇ ಅಲ್ಲದೆ ಯೂರೋಪ್ ಖಂಡದಲ್ಲೂ ವ್ಯವಹಾರದಲ್ಲಿರುವಂಥಾ ಭಾಷೆಯಾಗುತ್ತಿದ್ದು. ಕಾಳಿದಾಸರಂಥಾ ಕವಿಗಳು ಭಾಷೆಯನ್ನೇ ಅಲ್ಲ, ಅವರ ಸೌಂದರ್ಯವನ್ನೂ, ಸದ್ಭಾವವನ್ನೂ, ದೀರ್ಘ ಮನೋಲ್ಲಾಸದಿಂದ ರಾರಾಜಿಸುವಂತೆ ಇರಿಸಿರುವರು. ಇವರೊಬ್ಬರೇ ಸಂಸ್ಕೃತಭಾಷೆಯನ್ನು ಪ್ರತಿಭಾಮಯವಾಗಿಯೂ, ಜನರಂಜಕವಾಗಿಯೂ ಆಗುವಂತೆ ಕುಣಿಸಿ ಓಲಾಡಿಸಿದವರು. ಇವರ ವರ್ಣನಾ ರೂಪದಂತೆ ಇತರ ಭಾಗಗಳಲ್ಲಿ ಯಾವ ಪ್ರಸಿದ್ಧ ಕವಿಯೂ

ಜನಪ್ರಿಯವಾಗಿ ತೋರಿಸಿಲ್ಲ. ಕಾಳಿದಾಸನು ಅತೀ ಕ್ಲಿಷ್ಟ ಅಭಿಪ್ರಾಯವನ್ನು ತೆಗೆದುಕೊಂಡು ಸಂಸ್ಕೃತದಲ್ಲಿ ವರ್ಣಿಸಿದ್ದನ್ನು ನೋಡಿದರೆ ಜಗದ್ವಿಖ್ಯಾತನಾದ ಷೇಕ್ಸ್‌ಪಿಯರನು ಬಹು ಹಿಂದೆ ನಿಲ್ಲುವನು. ಆದರೆ ಈಗಿನವರು ಎಂದರೆ ತಲೆಜುಟ್ಟು ಕಟ್ಟಿಕೊಂಡು ಪಂಚೆ ಪಗಡಿಗಳು ಸಹಿತ ಇರುವ ಭಟ್ಟರು, ಶೆಟ್ಟರು, ಶಾಸ್ತ್ರಿಗಳು ವಿನಹ ಇತರರು ಸಂಸ್ಕೃತದ ಕಾಠಿಣ್ಯ, ಪ್ರಶಸ್ತಿ, ಸೌಂದರ್ಯಕ್ಕೆ ಬೆರಗಾಗಿದ್ದಾರಲ್ಲದೆ ಅದರ ಹಿಂದೋಡಿ ತನ್ನಧೀನದಲ್ಲಿರಿಸಿಕೊಳ್ಳಲು ಹೆಣಗಲಾರರು. ಅಲ್ಲದೆ ಇದು ಬಹು ಅಸಾಧ್ಯವೆಂದಾದರೆ ಆ ಕಠಿಣತೆ ಅದನ್ನು ಇಂದಿಗೆ ಅರ್ಧ ಜೀವ ಮಾಡಿ ಉರುಳಿಸಿತು.

ಈ ಭಾಷಾ ಪರಿಚಯವು ಸಂಪೂರ್ಣವಾಗಿರುವವನಿಗೆ ವಿಶೇಷ ಜ್ಞಾನಿಯಾಗಿ ಎಲ್ಲವೂ ತಿಳಿಯಬಹುದು. ಡಿಗ್ರಿ ಪಡೆದ ವಿದ್ಯಾವಂತರೂ ಸಹ ಹಿಂದಿರಬೇಕು. ಇದರಲ್ಲಿ ಎಲ್ಲಾ ತರದ ಅಭಿಪ್ರಾಯಗಳು ಈ ಭಾಷೆಯಿಂದ ಅಮಿತವಾದ ಗ್ರಂಥಗಳು ಎಲ್ಲಾ ತರದ ವಿವೇಕ ವಿವೇಚನೆಗಳನ್ನೂ ಕೊಡಬಲ್ಲುದಾಗಿದೆ. ಆರ್ಯರು ಋಗ್ವೇದಪರಿಚಯ ನಮಗನೇಕರಿಗೆ ಸ್ವತಃ ಇಲ್ಲದಿದ್ದರೂ ಅದರ ಅಂಶಗಳನ್ನೂ, ಮಹತ್ವವನ್ನೂ, ವಿವೇಕವನ್ನೂ, ಚರಿತ್ರೆಯನ್ನೂ ಶಾಸ್ತ್ರನೀತಿಯನ್ನೂ, ಪುರಾಣವನ್ನೂ ಲೇಖಿಸಿ ಅವುಗಳಿಂದಲೇ ಪೂರ್ವಕಾಲಸ್ಥಿತಿಯನ್ನರಿಯಲು ಆಧಾರವಾಗಿರುವವು ಎಂಬದನ್ನು ಬಲ್ಲವರು ಹೇಳುವರು. ಇಷು ಮಹತ್ವದಿಂದಿದ್ದರೂ ಅದನ್ನು ಇಂದಿಗೆ ಬೆಳಕಿಗೆ ತಂದು ವ್ಯವಹಾರದಲ್ಲಿರಿಸಬೇಕೆಂದರೆ ಅದರ ಪ್ರಸಕ್ತವೇ ಇಲ್ಲದಾಗಿದೆ.

ಹಿಂದೂಸ್ಥಾನದ ಹಲವು ವಿಶ್ವ ವಿದ್ಯಾ ನಿಲಯಗಳಲ್ಲಿ ಸಂಸ್ಕೃತಕ್ಕೆ ವಿಶೇಷ ಪವಿತ್ರತೆಯನ್ನು ಕೊಟ್ಟು ಪ್ರವೀಣರಾದ ಪಂಡಿತರನ್ನಿಟ್ಟು ಬೋಧಿಸುವರು. ಸಂವತ್ಸರಗಳು ಹರಿದ ಹಾಗೆ ಕೆಲವೆಡೆ ಇಲ್ಲದಾಗುತ್ತಾ ಬರುತ್ತಿವೆ. ಹಿಂದೀ ಭಾಷೆಯು 'ದೇವನಾಗರಿ' ಲಿಪಿಯನ್ನನುಸರಿಸಿ ಆದೀಗ ಸಾರ್ವಜನಿಕಭಾಷೆಯಾದ ಮೇಲೆ ಸಂಸ್ಕೃತದ ನಾಮಶೇಷವಾಗುವುದೊಂದೇ ಕಾಣಬೇಕಾಗಿದೆ. ಶಾಲೆಗಳಲ್ಲಿ ಸಂಸ್ಕೃತವನ್ನು ಬೋಧಿಸಿದರೂ ಎಲ್ಲರಲ್ಲೂ ಅದರ ರಿಸದೆ ಬರೀ ಐಚ್ಛಿಕಪಾಠವಾಗಿಟ್ಟದ್ದು ಖೇದಕರವಾಗಿದೆ. ಈಗಿನ ಕಾಲಕ್ಕೆ ಗುರುಕುಲ ವಿದ್ಯಾರ್ಥಿಗಳಿಗೆ ಮಾತ್ರ ಸಂಸ್ಕೃತ ಭಾಷಾ ಜ್ಞಾನವನ್ನೀಯುವರು. ಆದರೆ ಚಿಕ್ಕಂದಿನಿಂದಲೇ ಅದನ್ನು ಕಲಿಸಿ ಮಕ್ಕಳಿಗೆ ಅದರ ಜೀವನಾನದಲ್ಲಿ ಸಹಕರಿಸದಿರುವ ಸ್ಥಿತಿಯನ್ನು ಹಲವೆಡೆ ನೋಡುತ್ತಿದ್ದೇವೆ. ಒಟ್ಟಾರೆ ಸಂಸ್ಕೃತವು ಸಂಪೂರ್ಣ ಹಿಂದರಿದಿದೆ. ಭಾಷಾ ವ್ಯವಹಾರ ಬಹು ವಿರಳ. ಇದಕ್ಕೆ ಬೆಂಬಲವಾಗಿ ಜನರಿಗೆ ಕಲಿಯುವ ಯಾ ಕಲಿಸುವ ಉತ್ಸಾಹವೇ ಇಲ್ಲದಾಗಿದೆ. ಅದರ ಘನತೆಯನ್ನೂ ಶ್ರೇಷ್ಠತೆಯನ್ನೂ ಹಿಂಗಿಸಲು ಕಾರಣವೆಂದರೆ ಅದರ ಕಠಿಣತೆ. ಆಧುನಿಕ ಯುಗದ ವಾತಾವರಣ ಸರ್ವೆಡೆಯೂ ಒಂದೇ ರೀತಿಯದಾಗಿದೆ !!!

ಕೊಡವರಲ್ಲಿ ಸಮಾಜ ಸುಧಾರಣೆಯ ಪರಿಣಾಮ.

ನಂಬರು 3.

ಸ್ತ್ರೀ ಸಮಾಜ.

(ಬಿ. ಯಂ. ಕಾರ್ಯಪ್ಪ ಎಂ. ಎಲ್. ಸಿ.)

ಈ ವಿಷಯ ಬರೆಯುವದರ ಮೊದಲು ಒಬ್ಬ ಕೊಡವ ಪ್ರೇಮಿಯೊಡವರು ಕೊಡವ ಸುಮಂಗಲಿಯರಲ್ಲಿ ವಿನಂತಿ ಮಾಡಿದ ಪದ್ಯವನ್ನು ಬರೆದು ಮುಂದರಿಸುವೆನು.

ಕೊಡವ ಕುವರಿ ಕೊಡವ ರಮಣಿ
ಕೊಡವ ಮಾತೆ ಧೀರಳೇ |
ಕೊಡವ ಧರ್ಮ ಕೊಡವ ಧೈರ್ಯ
ಕೊಡವ ಸಾಧ್ಯ ಪಾಲಕೀ ||
ಕೊಡವ ದೇಶ ಕೊಡವ ಕೋಶ
ಕೊಡವರಾದ ಮೂಲಕೀ |
ಕೊಡುವ ಕೊಡವ ಕಡಿದ ಶೂರ
ನುಡುವ ಧೀರ ಮಾತೆಯೇ ||

ಜೋಜೋ ನಿನ್ನ ತೇಜವಾಗಿ
ರಾಜಿಸುವದು ಲೋಕದೀ |
ರಾಜಯೋಗ ಕರ್ಣ ತ್ಯಾಗ
ಜೋ ಜೋ ಹಾಡು ಶೂರಳೇ ||

ದೇಶ ನಿನ್ನ ಈರೆಯೆಂದು
ಆಶೆಯಲ್ಲಿ ನಂಬಿದೇ |
ಕಾಸ ನಿನ್ನ ಕೈಯ್ಯೊಳಿಹುದು
ದೇಶದಾಶೆ ಈರೆಯೇ ||

ಭಾರತೀಯ ಶೂರ ಮಣಿಯು
ನೀನು ಎಂಬ ಖ್ಯಾತಿಯು |
ಸಾರುವಂತೆ ದೇಶವಲ್ಲ
ನೀನು ಹಾಡು ಖ್ಯಾತಿಯೂ ||

ನಾವು ಭಾರತೀಯರು. ಅಡಿಗಲ್ಲು ಕುಲಧರ್ಮ. ಸ್ತ್ರೀಯರು ಸಾಮಾಜಿಕ ಸ್ತಂಭಗಳು. ಸಮಾಜಿಕ ಅಭಿವೃದ್ಧಿಗೆ ವ್ಯಕ್ತಿ ಮಹತ್ವವನ್ನೆಣಿಸರು. ಅವರು ಹುಟ್ಟಿ ಬೆಳೆಯುವದು ಕುಲಕ್ಕಾಗಿ. ಕುಲಧರ್ಮವೇ ಭಾರತ ಸಮಾಜ ರಚನೆಗೆ ಅಡಿಗಲ್ಲು. ಸಂಸ್ಕೃತಿ ಬೆಳವಣಿಗೆಯು ಪುರುಷರ ಪ್ರಯತ್ನ ಫಲದಿಂದಾಗಬೇಕು. ನಮ್ಮ ಸಂಸ್ಕೃತಿಯು ಸ್ತ್ರೀಯರನ್ನು ಕಷ್ಟಕ್ಕೊಳಪಡಿಸಕೂಡದು. ನಮ್ಮ ಸಂಸ್ಕೃತಿಯು ಸ್ತ್ರೀಯರನ್ನು ಗೌರವದಿಂದ ಕಾಣುವಂತಾದ್ದಾಗಿದೆ. ಅವಳು ತಾಯಿ. ಸ್ತ್ರೀಯನ್ನು ಯಾವಾಗಲೂ ದೊಡ್ಡವರಾಗಲೀ, ಚಿಕ್ಕವರಾಗಲೀ ತಾಯಿಯೆಂದು ಕರೆಯುವದು ಪದ್ಧತಿ. ಇದು ನಮ್ಮ ಸಂಸ್ಕೃತಿ. ಕುಲದಲ್ಲಿ ಹುಟ್ಟಿದವರು ಕುಲದ ನಿಯಮ ಬದ್ಧರಾಗಿರಬೇಕು. ಪಾಶ್ಚಿಮಾತ್ಯರು ಕೇವಲ ವ್ಯಕ್ತಿ ವಿಮರ್ಶಕರು. ನಾವು ಭಾರತೀಯರು ಪೂರ್ಣ ಸಮಾಜ ಪಾಲಕರು. ಆದ್ದರಿಂದ ಕುಲ ಧರ್ಮವನ್ನು ಮೂಲೆಗೊತ್ತುವದು ಸಮಾಜ ದ್ರೋಹವಾಗಿ ಪರಿಣಮಿಸುವುದು. ತಾಯಿಯ ಮಹತ್ವವು ನಮ್ಮ ಮತ್ತು ಪಾಶ್ಚಿಮಾತ್ಯರ ಸಂಪರ್ಕದಲ್ಲಿ ಮಲಿನವಾಗಿ ಹೋಗಿದೆ. ಪಶ್ಚಿಮಾತ್ಯರಲ್ಲಿ 'ತಾಯಿ' ಎಂದರೆ ವೃದ್ಧೆ. ನಮ್ಮಲ್ಲಿ ತಾಯಿ ಎಂದರೆ ಬಹಳ ಪೂಜ್ಯ ವಸ್ತು, ಸ್ವಾರ್ಥತ್ಯಾಗಿ, ಉದಾರಿ. ಆಕೆಯ ನೆರಳು ಸೊಸೆ. ತಾಯಿಯಂತೆ ವರ್ತಿಸುವುದು ಅವಳ ಕರ್ತವ್ಯ. ಸೊಸೆಯು ಮದುವೆಯಾಗಿ ಪರಗೃಹದಿಂದ ಬರುವ ಮಗಳು. ಗೃಹಸೂತ್ರ ಕಡಿವಾಣವನ್ನು ಹಿಡಿದ ಮಾತೆಗೆ ಸೊಸೆಯು ವಿಧೇಯಳು. ಸೊಸೆಯು ತಾನು ಸ್ವಸಂತಾನ ಪಡೆಯುವ ವರೆಗೂ ಈ ನಿಯಮಗಳಿಗೆ ಒಳಪಟ್ಟಿರಬೇಕು. ಸ್ವಸಂತಾನ ಪಡೆದ ಕೂಡ್ಲೆ ಸ್ತ್ರೀಯರಿಗೆ ಮಾತೃತ್ವದ ಅಧಿಕಾರ ತೆರೆಗಳು ತಾನೇ ಉಬ್ಬಿ ಬರುವವು. ಭಾರತೀಯರ ಸ್ತ್ರೀ ಧ್ಯೇಯವೇ ಇದು. ಇದರ ಸಿದ್ಧಿಗಾಗಿ ಮಾಡುವ ಸಾಧನೆಯೇ ಪರಮ ಯೋಗ. ಸಂತಾನಕ್ಕಾಗಿ ಈಶನಲ್ಲಿ ಬೇಡುತ್ತಾರೆ. ವ್ರತವನ್ನು ಕೈಕೊಳ್ಳುತ್ತಾರೆ. ಸಂತಾನಕ್ಕಾಗಿ ತಾಯಂದಿರು ದುಃಖಪಡುವರು. ಇಂಥಾ ವ್ರತಸಾಧನೆಗಳಿಂದ ಹುಟ್ಟಿದವರಿಗೆ ಆರ್ಯರೆಂದು ಮನು ಹೇಳುತ್ತಾನೆ. ಇಂಥಾ ಆರ್ಯರೆಂಬುವ ವೀರರನ್ನೂ, ಶೂರರನ್ನೂ ದೇಶಾಭಿಮಾನಿಗಳನ್ನೂ, ಸಮಾಜ ಪ್ರೇಮಿಗಳನ್ನೂ ದೇಶಕ್ಕೆ ಧಾನ ಮಾಡುವದು ನಮ್ಮ ಧೀರ ಮಾತೆಯರ ಕರ್ತವ್ಯ. ಈ ಕಾರಣಗಳಿಂದಲೇ ಪೂಜ್ಯ ಮಾತೆಯನ್ನಾಳುವ ಗೃಹಿಣಿಗೆ ಮರ್ಯಾದೆ. ನಂತರ ಕುಸುಮದಂತೆ ಬೆಳೆಯುವ ಕುವರಿಗೆ ಗೌರವ ಮರ್ಯಾದೆಗಳು. ಇವೇ ಸ್ತ್ರೀ ಸಮಾಜದಲ್ಲಿನ ಅಂತಸ್ತುಗಳು. ಆದರೆ ಇತರ ದೇಶೀಯರು ಬಂದು ತಮ್ಮ ತಮ್ಮ ಪದ್ಧತಿಗಳನ್ನು ಆಚರಣೆಗೆ ಬಹಳ ಮಟ್ಟಿಗೆ ತರುತ್ತಿರುವರು. ಈ ಕಾರ್ಯವು ವಿಶೇಷವಾಗಿ ವಿದ್ಯೆಯ ಮೂಲಕವೇ ಆಗಿರುತ್ತೆ. ನಾವು ಪರಾಜಿತರು ಅವರು ಜಯಶಾಲಿಗಳು. ಆದುದರಿಂದ ಅವರ ನಿಯಮಗಳನ್ನು ಅಂಗೀಕರಿಸುತ್ತಿರುವೆವು. ವ್ಯಕ್ತಿ ಪ್ರೇಮವು ಹೆಚ್ಚುತ್ತಲಿರುವುದು. ಸಮಾಜದ ಅಡಿಗಲ್ಲು ಕುಸಿದು ಬೀಳುತ್ತಿರುವುದು. ಸಮಾಜವು ಪೂಜ್ಯ ಮಾತೆಯರ ಗೌರವವನ್ನುಳಿಸಲಿಕ್ಕಾಗಿ ನಿರ್ಮಿತವಾಗಿರುತ್ತೆ. ಸಮಾಜ, ಪೂಜ್ಯ ಮಾತೆಯರ ಸ್ವಾರ್ಥತ್ಯಾಗ, ಉದಾರ ಗುಣಗಳಿಂದ ಉಳಿಯಬೇಕಾಗಿದೆ. ಇದಕ್ಕಾಗಿ ನಮ್ಮ ಸ್ತ್ರೀ ಸಮಾಜವು ಶ್ರಮಪಡಬೇಕು. ಗ್ರಾಮಗಳಲ್ಲಿ ಶಾಲೆಗಳಿದ್ದವು. ಪಾಠ ನಡೆಯುತ್ತಿತ್ತು. ಮರಳಿನ ಮೇಲೆ ಅಕ್ಷರಗಳನ್ನು ಕಲಿತೆವು. ಪಾಠವು ಸುಲಭದಲ್ಲಿ ಆಗುತ್ತಿತ್ತು. ಉಪಾಧ್ಯಾಯರು ನೀತಿಗಳನ್ನು ಬಾಯಿಪಾಠ ಮಾಡಿಸುತ್ತಿದ್ದರು. ಆಗ ಕಲಿಸುತ್ತಿದ್ದ ನೀತಿಗಳು 'ಪರರ ಸುಖವೇ ನನ್ನ ಸುಖ. ಗ್ರಾಮ ಹಿತಕ್ಕಾಗಿ ಅವಶ್ಯವಿದ್ದರೆ ಸಂಸಾರ ತೊರೆ; ದೇಶದ ಕಲ್ಯಾಣಕ್ಕಾಗಿ ಗ್ರಾಮವನ್ನು ಬಿಡು; ಜನತೆಯ ಸುಖಕ್ಕಾಗಿ ದೇಶ ತ್ಯಾಗ ಮಾಡು; ವಿಶ್ವ ಕಲ್ಯಾಣಕ್ಕಾಗಿ ಸರ್ವ ತ್ಯಾಗ ಮಾಡು.' ಎಂಬಂತವುಗಳೇ ಆಗಿದ್ದವು. ಇವುಗಳೆಲ್ಲಾ ತಪ್ಪಿ ಈಗಿನ ವಿದ್ಯಾಭ್ಯಾಸದಲ್ಲೂ ಆದರಲ್ಲೂ ಪ್ರೌಢ ವಿದ್ಯಾಭ್ಯಾಸವಾದ ನಂತರ ವಿನಿಮಯ ವಿಚಾರಪರ ವಿದ್ಯಾಭ್ಯಾಸವೇ ನಶಿಸಿ ಹೋಗಿ ವ್ಯಕ್ತಿಕಲ್ಯಾಣಕ್ಕಾಗಿ ದೇಶವನ್ನು ಯಾಕೆ ಸಮಾಜವನ್ನೇ ತ್ಯಾಗ ಮಾಡುತ್ತಾ ಕರ್ಮವನ್ನೂ, ಧರ್ಮವನ್ನೂ ಬಿಟ್ಟು ಅಲೆದಾಡುವದು ನಾಗರೀಕತೆಯೆಂದು ಕರೆಯಲ್ಪಡುತ್ತಿದೆ. ಈಗಿನ ವಿದ್ಯಾನಿಲಯಗಳಲ್ಲು ಉತ್ತೀರ್ಣರಾದವರು ಸಂಪಾದನೆಯ ಸಂಬಳದ ಅಲ್ಪ ಸ್ವಾತಂತ್ರ್ಯಹೀನ ಸ್ಥಾನಗಳಿಗೆ ಮೋಹಿತರಾಗಿ, ಅಲ್ಪವನ್ನು ಅತಿ ದೊಡ್ಡದೆಂದೂ, ತಮ್ಮ ಕಾರ್ಯವು ಪರಮ ಸಾಧನವೆಂದೂ ಹೆಮ್ಮೆ ಪಡುತ್ತಲಿರುವರು. ಇವೆಲ್ಲಾ ನಮ್ಮನ್ನು ಪರಕೀಯರ ಯೋಜನೆಗೆ ದೂಡಿ ಹಾಕಿರುವದು. ಸ್ತ್ರೀ ಪುರುಷರ ಕಲ್ಯಾಣ ಬಯಸುವ ವಿದ್ಯಾಭ್ಯಾಸವು ನಂದಿ ಕುಂದುತ್ತಲಿದೆ. ಈ ಪ್ರಧಾನ ಕಾರಣಗಳಿಂದ ಸಮಾಜದ ಕರ್ತವ್ಯ ಭಾರವು ಮುರಿದಿದೆ. ಪರಿಣಾಮವಾಗಿ ಸಂಸಾರದಲ್ಲಿನ ಪೂಜ್ಯ ಭಾವವು ಮಲಿನವಾಗುತ್ತಾ ಬರುತ್ತಲಿರುವದು. ಸಂಸಾರದ ಆಲೋಚನೆಯು ಬೆದರಿಕೆಯನ್ನುಂಟುಮಾಡುತ್ತಲಿರುವುದು. ಉಡಿಗೆ ತೊಡಿಗೆಗಳು ನಿಷ್ಪ್ರಯೋಜನ ರೀತಿಯಲ್ಲು ಹೆಚ್ಚು ಮೀರುತ್ತಲಿರುವುದು. ಅತ್ಯವಶ್ಯವಾದವುಗಳನ್ನು ಬಿಟ್ಟು ಅನಾವಶ್ಯವಾದವುಗಳ ಮೇಲೆ ಪ್ರೇಮ ಹೆಚ್ಚುತ್ತಲಿರುವದು. ವ್ಯಕ್ತಿಹಿತ ಮಹತ್ವವೆಂದೆನ್ನುವವರು ಸಮಾಜವನ್ನು ನಿರ್ಲಕ್ಷತೆಯಿಂದ ಕಾಣಬಹುದು. ಸಮಾಜದಿಂದ ಆಗುವದೆ ನೆಂದೆನ್ನಬಹುದು. ವ್ಯಕ್ತಿಹಿತವನ್ನು ಸಾಧಿಸಲು ಚೈತನ್ಯವಿರುವಲ್ಲಿ ಸಮಾಜ ನಿಯಮಗಳಿಂದ ಪ್ರಯೋಜನವೇನು? ಆಗುವದೇನು? ವ್ಯಕ್ತಿಹಿತ ಸಾಧಿಸಲ್ಪಟ್ಟಲ್ಲಿ ಸಮಾಜವನ್ನು ಕಾಲಡಿಗೆ ತುಳಿವುದು ಸಾಧ್ಯವೆನ್ನುವ ಕೆಲವು ತರ್ಕಿಗಳಿರಬಹುದು. ಆದರೆ ಇಂಥಾ ತರ್ಕಿಗಳೆಲ್ಲಾ ನಮ್ಮ ಪುರಾತನ ಹಿರಿಯರ ಕಾಲದಲ್ಲಿ ಮಿಮರ್ಶಿಸಲ್ಪಟ್ಟೇ ಸಮಾಜ ನಿರ್ಮಿತವಾದದ್ದು. ಮಾನವನು ಸೃಷ್ಟಿ ಆದಿಯಿಂದ ಪ್ರಾಣಿ ಜೀವನವನ್ನು ಅನುಭವಿಸಿರುವನು. ಕಷ್ಟಪರಂಪರೆಗಳನ್ನು ಇಳಿಸಲು ಸಮಾಜವು ನಿರ್ಮಿತವಾಗಿರುವದು. ಸಮಾಜಾಧಿಕಾರವು ಗುರಿ ಇಲ್ಲದ ಜೀವನವಾಗಿ ವ್ಯಕ್ತಿಯನ್ನು ನಾಶಪಡಿಸುವುದು. ಕುಲಧರ್ಮವನ್ನು ಧಿಕ್ಕರಿಸಿದ ವ್ಯಕ್ತಿಗಳ ವ್ಯಸನಕರವಾದ ಶೋಚನೀಯದ ಪಾಡು ಈಗ ಕಣ್ಣು ಮುಂದೆ ಕಾಣುತ್ತಲಿದೆ. ಹೆಚ್ಚಾಗಿ ಹುಡುಕಬೇಕಿಲ್ಲ. ಪಟ್ಟಣಗಳಲ್ಲಿ ವ್ಯಕ್ತಿಗಳು, ಅವರ ಮನೆಗಳು ಕುಟೀಯಾ.ನ್ನು ಬೀದಿಗಳನ್ನು ಕಸ ತುಂಬಿಸುವದರ ಪರಿಣಾಮವಾಗಿ ವ್ಯಕ್ತಿಗಳು ರೋಗಗಳಿಂದ ನರಳುವ ಹಾಗೆಯೇ ಸಮಾಜ ಧಿಕ್ಕಾರವು ವ್ಯಕ್ತಿಗಳನ್ನು ನರಕಕ್ಕೆ ದೂಡುವದು. ಇದನ್ನರಿತು ಪೂರ್ವಿಕ ಬುದ್ಧಿವಂತರು ಸಮಾಜ ಗೃಹವನ್ನು ಅಹಿಂಸ, ಪ್ರೀತಿ, ಶಾಂತಿ, ವಿಸ್ತಂಬ ಕಂಬಗಳ ಮೇಲೆ ಸಹಕರಿಸಿ ನಿರ್ಮಿಸಿರುವರು. ಅದನ್ನು ಕಾಪಾಡಲು ಮಾಡಿದ ಕ್ಲಪ್ತನಿಯಮಗಳು ಕುಲಧರ್ಮವೆಂದು ಹೆಸರು ಪಡೆದಿರುವುದು. ಈ ನಿಯಮಗಳು ಸಮಾಜದ ಇಂಗಿತವನ್ನು ಸೂಚಿಸುವವು. ಅರಿಯಬೇಕು., ಎಚ್ಚೆತ್ತುಕೊಂಡು ತಿದ್ದಿಕೊಳ್ಳಬೇಕು. ನಮ್ಮ ಧೀರ ಮಾತೆಯರು ಉಳಿಯಬೇಕು.- ಇಲ್ಲವೇ ದೇಶವು ಅಳಿಯುವದು.

[ಸಶೇಷ.

ಸಾಮಾಜಿಕ ಕಾದಂಬರಿ.

ದೇವದತ್ತ.

ಸೂಚನೆ:—ಗ್ರಂಥಕರ್ತರ ದೇಹಾಲಸ್ಯದ ಸಂಬಂಧವಾಗಿ ಕಥೆಯು ಮುಂದುವರಿಯುವಿಕೆಯು ಇಷ್ಟು ದಿವಸ ನಿಂತಿದ್ದಾಯಿತು. ಮುಂದೆ ಪ್ರಕಟವಾಗುವ ಪರಿಚ್ಛೇದಗಳನ್ನು ಹಿಂದೆ ನಡೆದ ಕಥಾ ಭಾಗಕ್ಕೆ ಸೇರಿಸಲೋಸುಗ ವಾಚಕರ ಪ್ರಯೋಜನಾರ್ಥವಾಗಿ ಇಷ್ಟರವರೆಗೆ ಪ್ರಕಟವಾದ ಕಥಾ ಭಾಗವನ್ನು ಈ ವಾರ ಸಂಕ್ಷೇಪವಾಗಿ ಕೊಟ್ಟು ಮುಂದಿನವಾರಗಳಲ್ಲಿ ಮಿಕ್ಕುಳಿದ ಕಥಾ ಭಾಗವನ್ನು ಪ್ರಕಟಿಸುವೆವು.

ಇತಿ ಗ್ರಂಥ ಕರ್ತ.

ಸಾಗಿಹೋದ ಕಥಾ ಸಾರಾಂಶ.

ದೇವದತ್ತ ಮತ್ತು ಚಾರುದತ್ತ ಇವರಿಬ್ಬರೂ ಒಂದೇ ಮನೆತನಕ್ಕೆ ಸೇರಿದ ವಿದ್ಯಾರ್ಥಿಗಳು. ದೇವದತ್ತನ ತಾಯಿಯು ಕೇವಲ ಕೃತಿಕರಿಂದ ಕೂಡಿದ್ದು. ಚಾರುದತ್ತನ ವಂಶಸ್ಥರು ಸಣ್ಣ ತರಗತಿಯ ಸರ್ಕಾರಿ ನೌಕರರು. ದೇವದತ್ತನ ಕುಟುಂಬಸ್ಥರು ಭಾರತೀಯ ನಡವಳಿಕೆಗಳನ್ನು ಹಿಂಬಾಲಿಸುವವರಾಗಿದ್ದರು. ಚಾರುದತ್ತನ ಭಾಗದವರಾದರೋ ಪಾಶ್ಚಿಮಾತ್ಯ ನಾಗರೀಕತೆಗೆ ಪ್ರಶಸ್ತಿಯನ್ನು ಕೊಡುವವರಾಗಿದ್ದರು. ದೇವದತ್ತನು ಉದಾರಿ ಮತ್ತು ಸದ್ಗುಣಶಾಲಿ. ಶಾಲೆಯಲ್ಲಿ ಪ್ರಥಮಸ್ಥಾನವನ್ನು ವಹಿಸಿದ್ದ. ಚಾರುದತ್ತನನ್ನು ಬಹಳವಾಗಿ ಪ್ರೀತಿಸುತ್ತಿದ್ದ. ಚಾರುದತ್ತನಾದರೋ ಅಸೂಯಾಪರನು. ದೇವದತ್ತನ ಪರಮ ಆಪ್ತನಂತೆ ನಟಿಸುತ್ತಿದ್ದರೂ ಅಂತರ್ಯದಲ್ಲಿ ಅವನನ್ನು ಬಹಳವಾಗಿ ಹಳಿಯುತ್ತಿದ್ದನು. ಇವರಿಬ್ಬರೂ ಒಟ್ಟಿಗೆ ಓದುತ್ತಿದ್ದರು. ಚಾರುದತ್ತನಿಗೆ ಮನೋಹರನು ಪ್ರಶ್ನಾ ಪತ್ರವನ್ನು ಕೊಡುವನು. ಚಾರುದತ್ತನು ಇದನ್ನು ದೇವದತ್ತನಿಗೆ ತೋರಿಸದೆ ಮೋಸ ಮಾಡುವನು. ಆದರೂ ಪರೀಕ್ಷೆಯಲ್ಲಿ ದೇವದತ್ತನು ಕ್ಲಾಸಿನಲ್ಲಿ ಒಂದನೇಯವನಾಗಿ ಪಾಸಾಗುತ್ತಾನೆ. ಚಾರುದತ್ತನು ಸೋಲುತ್ತಾನೆ.

ಆ ಸಮಯದಲ್ಲಿ ದೇವದತ್ತನಿಗೆ ಕಾಯಿಲೆಯಾಗುತ್ತೆ. ಚಾರುದತ್ತನು ಉಪಾಯದಿಂದ ದೇವದತ್ತನಿಗೆ ಸ್ಕಾಲರ್‌ಶಿಪ್ ಸಿಕ್ಕದಂತೆ ಮಾಡುತ್ತಾನೆ. ಚಾರುದತ್ತನು ಸರ್ಟಿಫಿಕೇಟ್ ತೆಗೆದುಕೊಂಡು ಅರಸುಪುರದ ಶಾಲೆಯಿಂದ ರಾಜಧಾನಿಯ ಶಾಲೆಗೆ ಹೋಗುತ್ತಾನೆ. ಅಲ್ಲಿ ಇವನು ಚಲೋಮುಖಲಕ್ಷಣವಿದ್ದವನಾಗಿದ್ದ ಕಾರಣ ಕೆಲವು ತುಂಟ ವಿದ್ಯಾರ್ಥಿಗಳು ವಸಂತಚಂದ್ರನೆಂಬ ಉಪಾಧ್ಯಾಯರೂ ಇವನ ಕೇವಲ ಮಿತ್ರರಾಗುತ್ತಾರೆ. ವಸಂತಚಂದ್ರನ ಸಹಾಯದಿಂದ ಚಾರುವೂ ಇವನ ಗೆಳೆಯ ಆನಂದ ಪ್ರಸಾದನೂ 6ನೇ ತರಗತಿ ವರೆಗೆ ಬರುತ್ತಾರೆ. ಅಲ್ಲಿ ಅವರಿಗೆ ಸೆಲೆಕ್ಷನ್ ಸಿಕ್ಕುವುದಿಲ್ಲ. ಇವರು ಅನೇಕ ಸಾರಿ ಗಣಿತ ಶಾಸ್ತ್ರದ ಉಪಾಧ್ಯಾಯರನ್ನೂ ಇನ್ನಿತರ ಉಪಾಧ್ಯಾಯರನ್ನೂ ಕ್ಲಾಸಿನಲ್ಲಿ ಅಣಕಿಸುತ್ತಾರೆ. ಆರನೇ ತರಗತಿಯಲ್ಲಿ ಮೂರು ವರ್ಷವಾದರೂ ಸೆಲೆಕ್ಷನ್ ಸಿಕ್ಕದ್ದರಿಂದ ಆನಂದ ಪ್ರಸಾದರೂ ಮತ್ತು ಇನ್ನು ಕೆಲವು ವಿದ್ಯಾರ್ಥಿಗಳೂ ಸೇರಿ ಗಣಿತ ಶಿಕ್ಷಕರನ್ನು ಹೊಡೆಯಲು ರಾತ್ರಿ ಹೋಗುತ್ತಾರೆ. ಅಲ್ಲಿ ಆನಂದ ಪ್ರಸಾದನು ಕೈದು ಮಾಡಲ್ಪಟ್ಟು ಶಾಲೆಯಿಂದ ಡಿಸ್‌ಮಿಸ್ ಆಗುತ್ತಾನೆ. ಬೊಂಬಾಯಿಗೆ ಓಡಿಹೋಗಿ ಆ ಮೇಲೆ ತನ್ನ ಹಿಂದಿನ ದುಷ್ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ಪ್ರಾಣಹತ್ಯ ಮಾಡಿಕೊಳ್ಳುತ್ತಾನೆ.

ಚಾರುದತ್ತನು ಆರನೇ ತರಗತಿ ಬಿಟ್ಟು ಬಂದು ತನ್ನ ಊರಿನಲ್ಲಿ ಒಂದು ಸಣ್ಣ ನೌಕರನಾಗುತ್ತಾನೆ. ಊರವರನ್ನೆಲ್ಲಾ ತುಚ್ಛ ದೃಷ್ಟಿಯಿಂದ ಕಾಣುತ್ತಾ ಬಹು ಸ್ವೇಚ್ಛಾಪರನಾಗಿ ವರ್ತಿಸುತ್ತಾನೆ.

ದೇವದತ್ತನು ಕಾಯಿಲೆ ಬಿಟ್ಟು ಶಾಲೆಗೆ ಹೋಗುತ್ತಾನೆ. ಶಾಲೆಯ ವಿದ್ಯಾರ್ಥಿ ಕೂಟದ ಕಾರ್ಯದರ್ಶಿಯಾಗುತ್ತಾನೆ. ಅದೇ ವರ್ಷ ಆ ಊರಿಗೆ ಹರೇಂದ್ರನಾಥರೆಂಬ ಜಡ್ಜಿಯವರು ವರ್ಗವಾಗಿ ಬರುತ್ತಾರೆ. ಅವರ ಮಗಳು ಕಮಲೆಯು ದೇವದತ್ತನ ಶಾಲೆಯ ವಿದ್ಯಾರ್ಥಿನಿಯಾಗುತ್ತಾಳೆ. ದೇವದತ್ತನಿಗೂ, ಕಮಲೆಗೂ ಮೈತ್ರಿ ಬೆಳೆಯುತ್ತದೆ. ಮಾರಣೆ ವರ್ಷ ಹರೇಂದ್ರನಾಥರು ರಿಟಯರ್ ಆಗುತ್ತಾರೆ. ಕಮಲೆಯು ತಂದೆಯೊಡನೆ ಹೋಗುತ್ತಾಳೆ. ಕಮಲೆಯ ಅಗಲುವಿಕೆಯು ದೇವದತ್ತನಿಗೆ ಬಹಳ ವ್ಯಸನವನ್ನುಂಟುಮಾಡುತ್ತದೆ. ಆ ಮೇಲೆ ದೇವತ್ತನು ಆರನೇ ತರಗತಿ ಪಾಸಾಗಿ ಬೊಂಬಾಯಿಗೆ ವಿಶ್ವವಿದ್ಯೆ ಕಲಿಯಲು ಹೋಗಿ ಬಿ. ಎ. ಪಾಸಾಗುತ್ತಾನೆ. ಅಲ್ಲಿ ಡೇವಿ ಎಂಬೊಬ್ಬನ ಸ್ನೇಹವಾಗಿ ಅವರ ಮನೆಯಲ್ಲಿಯೇ ಕಲಿಯುತ್ತಾನೆ. ಡೇವಿಯು ಸತ್ತುಹೋಗುತ್ತಾನೆ. ದೇವದತ್ತನು ಮನೆಗೆ ಬರುತ್ತಾನೆ.

ಎಷ್ಟು ಪೇಚಾಡಿದರೂ ಇವನಿಗೆ ಒಂದು ನೌಕರಿ ಸಿಕ್ಕುವುದಿಲ್ಲ. ಕಡೆಗೆ ಒಂದು ನೌಕರಿ ಸಂಬಂಧವಾಗಿ ಮದ್ರಾಸಿಗೆ ಹೋಗಿ ಹಿಂತಿರುಗುವಾಗ ಕಲ್ಲಿಕೋಟೆಯಲ್ಲಿ ಒಂದು ಹೊಟೆಲಿನಲ್ಲಿ ಉಳಿಯುತ್ತಾನೆ. ಅಲ್ಲಿ ಒಬ್ಬ ನೀಚನ ಕೈಯಲ್ಲಿ ಸಿಕ್ಕಿ ಸಂಕಟಪಡುತಿದ್ದ ಕಮಲೆಯನ್ನು ದೇವದತ್ತ ಅನೇಕ ವರ್ಷಗಳನಂತರ ಕಾಣುತ್ತಾನೆ. ಶಕ್ತಿ ಸಾಹಸದಿಂದ ಅವನು ಕಮಲೆಯನ್ನು ರಕ್ಷಿಸುತ್ತಾನೆ. ಈ ಸಮಯದಲ್ಲಿ ಕಮಲೆಯು ಅನಾಥಳಾಗಿದ್ದಳು. ಅವಳ ತಂದೆಯ ಇಪ್ಪತ್ತು ಸಾವಿರ ರೂಪಾಯಿಗಳ ವಿಲ್ಲು ಅವಳಲ್ಲಿತ್ತು. ಈ ಹಣದ ಸಹಾಯದಿಂದ ದೇವದತ್ತನು ಕಮಲೆಯನ್ನು 'ಡೇವಿ'ಯ ತಾಯಿ ತಂದೆಯವರಲ್ಲಿ ಬಿಟ್ಟು ವಿಲಾಯಿತಿಗೆ ಕಲಿಯಲು ಹೋಗುತ್ತಾನೆ. ದೇವದತ್ತನ ತಾಯಿಗೂ ಅಣ್ಣನಿಗೂ ದೇವದತ್ತನು ಏನಾದನೆಂಬ ಸಂಗತಿ ತಿಳಿಯದೆ ವ್ಯಸನದಲ್ಲಿರುತ್ತಾರೆ.

ಚಾರುದತ್ತನು ತನ್ನ ಗ್ರಾಮದಲ್ಲಿ ಒಂದೇ ಸಮನೆ ನಿರಂಕುಶ ಪ್ರಭುತ್ವವನ್ನು ಸಾಧಿಸುತ್ತಿರುತ್ತಾನೆ. ದೇವದತ್ತನ ಮೇಲೆ ಏನೇನೋ ದುರಾಭಿಪ್ರಾಯಗಳನ್ನೂ, ಸುಳ್ಳು ಕಥೆಗಳನ್ನೂ ಹರಡಿಸುತ್ತಾನೆ.

ವಿಲಾಯಿತಿಯಲ್ಲಿರುವಾಗ್ಗೆ ದೇವದತ್ತನಿಗೆ ಒಂದು ಅಪಾಯ ಸಂಭವಿಸಿ ಅವನ ಮುಖ ರೂಪವು ಸ್ವಲ್ಪ ಬದಲಾಗುತ್ತೆ. ವೈದ್ಯ ವಿದ್ಯೆಯನ್ನು ಕಲಿತು ದೇವದತ್ತ ಮರಳಿ ತನ್ನ ಊರಿಗೆ ಕಮಲೆಯೊಡನೆ ಬಂದು ಪ್ರಯಾಣಿಕರ ಬಂಗ್ಲೆಯಲ್ಲಿ ಉಳಿಯುತ್ತಾನೆ. ಆ ದಿವಸವೇ ದೇವದತ್ತನ ತಾಯಿಗೆ ಕಾಯಿಲೆಯಾಗಿ ಆಸ್ಪತ್ರೆಗೆ ಬರುತ್ತಾರೆ. ಕಾಯಿಲೆಯಾದ ತಾಯಿಯನ್ನು ದೇವದತ್ತನು ಚಿಕಿತ್ಸೆ ಮಾಡುತ್ತಾನೆ. ಊರವರಲ್ಲೆಲ್ಲಾ ಬಹು ಸರಳವಾಗಿ ವರ್ತಿಸುತ್ತಾನೆ. ಯಾರಿಗೂ ಅವನ ಗುರುತು ಸಿಕ್ಕುವದಿಲ್ಲ. ಊರವರಿಗೆಲ್ಲಾ ದೇವದತ್ತನಲ್ಲಿ ಪ್ರೀತಿಯೂ ಆದರವೂ ಹುಟ್ಟುತ್ತದೆ.

ಚಾರುದತ್ತನ ಭೇಟಿಯೂ ಈ ಗುಪ್ತ ರೀತಿಯಲ್ಲಿದ್ದ ದೇವದತ್ತನಿಗೆ ಉಂಟಾಗುತ್ತೆ. ಅವರು ಗ್ರಾಮೋದ್ಧಾರದ ವಿಷಯ ಮಾತನಾಡುತ್ತಾರೆ.

ಮುಂದಿನ ಕಥೆಯು ಎಂದಿನಂತೆ ಸಾಂಗವಾಗಿ ವಾರ ವಾರ ಪ್ರಕಟಿಸಲ್ಪಡುವುದು. ಅಕಸ್ಮಾತ್ತಾಗಿ ಕಥೆಯು ಇಷ್ಟು ದಿವಸ ನಿಲ್ಲಿಸಲ್ಪಟ್ಟದ್ದಕ್ಕೆ ವಾಚಕರು ಕ್ಷಮಿಸಬೇಕಾಗಿ ಪ್ರಾರ್ಥನೆ. [ಗ್ರಂಥ ಕರ್ತ.

—o0o—

ವಿವಿಧ ವಾರ್ತೆ.

—o0o—

ಫಿರಂಗಿ 'ಕೊಕ್ಕಿ'ನ ವಿಮಾನ.

ಅಮೇರಿಕದ (ಯುದ್ಧ ಸಾಮಗ್ರಿ ತಯಾರಿಸುವ) ಒಂದು ಕಂಪೆನಿಯವರು ಒಂದು ಹೊಸ ವಿಮಾನವನ್ನು ತಯಾರಿಸಿದ್ದಾರೆ. ಹಕ್ಕಿಯ ಕೊಕ್ಕಿನಂತೆ ಕಾಣುವ ದೊಡ್ಡದೊಂದು ಫಿರಂಗಿಯು ಆ ವಿಮಾನದಲ್ಲಿದೆ. ಈ ಫಿರಂಗಿಯಲ್ಲಿ 11 ರಾತಲಿನ ಗುಂಡು ಹೊಡೆಯಲು ಸಾಧ್ಯವಿದೆ. 1 ಮಿನಿಟಿಗೆ 100ರಂತೆ ಗುಂಡು ಹಾರಿಸುವುದು. ವಿಮಾನ ಯುದ್ಧ ರಂಗದಲ್ಲಿ ಇದು ಅತ್ಯಂತ ಬಲವಾದ ಶಸ್ತ್ರವೆಂದು ಪರಿಗಣಿಸಲಾಗಿದೆ!

—o0o—

ಕಳ್ಳರ ಪತ್ತೆಗೆ ಅನುಕೂಲ.

ಗ್ಲಾಸ್ಗೋವಿನಲ್ಲಿ ಒಂದು ಅದ್ಭುತ ಶಕ್ತಿಯುಳ್ಳ ವಿದ್ಯುತ್ ಮಾಯಾಲಾಂದ್ರವನ್ನು ಹೊಸದಾಗಿ ತಯಾರಿಸಿದ್ದಾರಂತೆ. ಮಿ. ಜೆ. ಮೂಯಿರ್ ಎಂಬ ಸ್ಕಾಟ್‌ಲ್ಯಾಂಡಿನ ರಸಾಯನ ಶಾಸ್ತ್ರಜ್ಞರೊಬ್ಬರು ಇದನ್ನು ಕಂಡು ಹಿಡಿದವರು.

ಸಾವಿರಾರು ನೋಟುಗಳ ಅಡಿಯಲ್ಲಿ ಒಂದು ರಕಾರಿ ನೋಟು ಇದ್ದರೂ ಸರಿಯೆ, ಆ ಕಟ್ಟನ್ನು ಈ ದೀಪದ ಬೆಳಕಿಗೆ ಹಿಡಿದರೆ ಕೂಡಲೇ ಪತ್ತೆ ಸಿಕ್ಕುವುದು. ಆಹಾರ ಮತ್ತು ರಕ್ತಗಳಲ್ಲಿರುವ ವಿಷಗಳನ್ನು ಈ ಬೆಳಕು ತೋರಿಸುತ್ತದೆ. ಕೊಲೆಗಡುಕರ, ದರೋಡೆಗಾರರ ಶರೀರ ವಸ್ತ್ರಗಳಲ್ಲಿ ರಕ್ತಚ್ಛಾಯೆ ಅಥವಾ ಇತರ ಕುರುಹುಗಳು ಎಷ್ಟೇ ಸೂಕ್ಷ್ಮವಾಗಿದ್ದರೂ ಇದರಿಂದ ಪತ್ತೆ ಹಚ್ಚಬಹುದು.

—o0o—

ತರುಣರ ಭೀಷ್ಮ ಪ್ರತಿಜ್ಞೆ.

ಬರ್ಕ್ ಶಯರಿನ ಮೆಯಿಡನ್ ಹೆಡ್ ಎಂಬ ಸ್ಥಳದ ತರುಣರೆಲ್ಲ 'ನಾವು ಲಂಗ ಕುಪ್ಪಸಗಳನ್ನು ತೊಟ್ಟುಕೊಂಡು ಬೀದಿಯಲ್ಲಿ ತಿರುಗುತ್ತೇವೆ, ಜೋಕೆ!' ಎಂದು ನಗರದ ತರುಣಿಯರನ್ನೇ ಗದರಿಸಿದ್ದಾರಂತೆ! ಅಲ್ಲಿನ ಕೆಲವು ತರುಣಿಯರೂ, ಕೆಲವು ಧನಿಕ ಮತ್ತು ವಿವಾಹಿತ ಸ್ತ್ರೀಯರೂ ಕೂಡ ಕೋಟು ಚಲ್ಲಣಗಳನ್ನು ಹಾಕಿಕೊಂಡು ತಿರುಗಿದರಂತೆ. ಪುರುಷ ಜಾತಿಗೆ ಇದು ಅವಮಾನ; ಹೆಣ್ಣು ಗಂಡೆಂಬ ದೈವ ನಿರ್ಮಿತ ಭೇದದ ಬೆಲೆಯೇ ಹೋಯಿತು!' ಎಂಬ ಭಾವನೆಯೇ ತರುಣರು ಹಟ ತೊಡಲು ಕಾರಣವಂತೆ. ಅಧಿಕಾರಿಗಳು ಕೈದು ಮಾಡುವರೆಂದು ಕೊಟ್ಟ ಎಚ್ಚರಿಕೆಯನ್ನು ಸಹ ಲಕ್ಷಿಸದೆ 'ಪ್ರತಿಜ್ಞೆಯನ್ನು ಪಾಲಿಸಿಯೇ ಬಿಡುವೆವು' ಎಂದು ದೃಢ ಸಂಕಲ್ಪ ಮಾಡಿದ್ದಾರೆ. ಆ ತರುಣವೀರರು!

—o0o—

ಹೆಂಡಿರ ಕಾಟ.

ಆಲ್ಬೇನಿಯಾದ ಮಾರ್ಕೊ ಇಗ್ಲಿಚ್ ಎಂಬಾತನಿಗೆ ಮೂವರು ಹೆಂಡಿರು. ಈ ಸಂಸಾರವನ್ನು ಕಳೆದ ಹಲವು ವರ್ಷಗಳಿಂದ ಸಾಗಿಸುತ್ತಾ ಬಂದ ಈತ. ಕೆಲ ವಾರಗಳ ಹಿಂದೆ ತನ್ನ ಕಿರಿಯ ಹೆಂಡತಿಗಾಗಿ ಒಂದು ಹೇಟು ತಂದ. ಸರಿ! ಈತನ ಹೆಂಡಿರಾದ ಮೊರಿತಾ, ಅನಿತಾ ಮತ್ತು ದನಿತಾರೊಳಗೆ ಕಾಳಗ ಆರಂಭವಾಯಿತು. ಗಲಭೆ ಏನೆಂದು ತಿಳಿಯಲು, ಮಾರ್ಕೋ ಅಡಿಗೆ ಮನೆಗೆ ಹೋದ. ಕೂಡಲೇ ಆ ಮೂವರೂ ಇವನ ಕಡೆ ತಿರುಗಿ ಇವನಿಗೇ ಮೂಳೆ ಮುರಿಯುವಷ್ಟು ಉಡುಗರೆ ಕೊಟ್ಟರು. ಯಾರಾದರೂ ಒಬ್ಬಳನ್ನೇ ಹಿಡಿದುಕೊಂಡಿರಬೇಕೆಂದು ಎಲ್ಲರೂ ಈತನನ್ನು ಗದರಿಸಿದರು. ಪಾಪ! ಮಾರ್ಕೊ ಪೋಲೀಸ್ ಸ್ಟೇಷನಿಗೆ ಓಡಿದ! ಹೆಂಡಿರನ್ನು ಮನೆಯಿಂದ ಹೊರಡಿಸಿ, ಕಾಪಾಡಬೇಕೆಂದು ಮೊರೆಯಿಟ್ಟ. ಆದರೆ ಪೋಲೀಸ್ ಅಧಿಕಾರಿಗಳು 'ಅದು ನಿನ್ನ ಕೆಲಸ' ಎಂದುಬಿಟ್ಟರು. ತ್ರಿಶಂಕು ಸ್ವರ್ಗದಲ್ಲಿ ಸಿಕ್ಕಿಬಿದ್ದ ಮಾರ್ಕೊ ಮನೆಗೆ ಮರಳಿದ! ನಮ್ಮಲ್ಲಿನ ಕೆಲವು ಸಮಾಜ ಸುಧಾರಕರಂತೆ ಇವನೇಕೆ ಒಂದೇ ವಿವಾಹವಾಗಿ ಬಹು ಪತ್ನೀವ್ರತನಾಗಬಾರದಿತ್ತು?

—o0o—

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

7 **Ludhiana.**

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಗೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಗೆ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕಿ.
ಮತ್ತು ಕಂಪನಿ,
(52-27) ಗಿರಗಾಂವ. ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡಿದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು.
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ ಪಿ. ಕೆ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾಚಪ್ಪನವರು ಮತ್ತು ಮ. ಕೆ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಸ್ಟೋರ್ ಮಂಗಪ್ಪನವರು.
ನಾಪೋಕ್ಲು—ಮ. ಚೆಪ್ಪುಡಿರ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾಗಿದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ 2..ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, **ಸೌತ್ ಪರೇಡ್, ಬೆಂಗಳೂರು.**

52-13

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ವೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	45,930	0	0
ಜಮಾಬಂದ ಠೇವಣಾತಿ	–	2,43,318	7	4
ವಸೂಲಾದ ಕ್ಷೇಮನಿಧಿ	–	1,44,658	2	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	16,481	15	11
ತ್ರಿಫ್ಟ್ ಡಿಪಾಜಿಟ್ಟು	–	34,692	7	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ ಬೆಳ್ಯಪ್ಪನವರು ಎಂ ಎಲ್ ಸಿ.
ಟ್ರೆಜರರ್ —ರಾವ್ ಬಹದ್ದೂರ್ ಪಿ ದೇವಯ್ಯವರು
ಸೆಕ್ರೆಟರಿ —ಮೆ ಎಸ್ ಎನ್ ರಾಮುಶೆಟ್ಟಿಯವರು

ತಾ 1-1-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ. 55	ರೂ 35.	ರೂ 22
6 ತಿಂಗಳಿಗೆ—	„ 100.	„ 35	„ 22	„ 13
3 ತಿಂಗಳಿಗೆ—	„ 60	„ 20.	„ 13	„ 8
1 ತಿಂಗಳಿಗೆ—	„ 25	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62-22)

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M: 1550

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಬಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೬—೬—೧೯೩೯.

ಸಂಪುಟ ೧೯] [ಸಂಚಿಕೆ ೨

THE CANARA BANKING CORPORATION, Ltd.

(Incorporated in British India)

THREE YEARS' CASH CERTIFICATES

bearing interest at 4% p. a.

in denominations of

Rs. 50/-,100/-,500/-,1,000/- & 5,000/-

are now issued at

all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-26

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಅಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ

ಕೆ. ಪಿ. ಕೆ. ಪಣಿಕರ್,

ವೈದ್ಯ & ಅಸ್ಟ್ರೋಲಜರ್,(ರಿಜಿಸ್ಟರ್ಡ್)

ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-16

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

29

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛೈಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–6

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–37)

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಶೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. **ಸ್ಥಾಪಿತವಾದ್ದು** 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀನಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12–34

ಸಾಮಾಜಿಕ ಕಾದಂಬರಿ.

ದೇವದತ್ತ.

(ಸಂಚಿಕೆ 36 (ತಾ. 10-3-39) ರಿಂದ ಮುಂದುವರಿದದ್ದು)

೨೧ನೇ ಅಧ್ಯಾಯ.

ವೈದ್ಯರು-'ನಿಜ, ನಿಜ. ಯಾರಿಗೂ ಮನುಷ್ಯನ ಅಂತರ್ಯವನ್ನು ತಿಳಿಯಲು ಆಗುವುದಿಲ್ಲ. ಎಷ್ಟೋ ಜನರು, ಬಹು ಸ್ನೇಹಿತರಂತೆ ನಟಿಸುತ್ತಾ ತಮ್ಮ ಗೆಳೆಯರ ಪ್ರಾಣಕ್ಕೆ ಹಾನಿತರಲು ಹೆಣಗಾಡುತ್ತಿರುತ್ತಾರೆ. ಅಂತಹ ಹೂಮುಖದ ಸರ್ಪರಾದ ವಿಶ್ವಾಸಘಾತಕಿಗಳು ಲೋಕದಲ್ಲಿ ಎಷ್ಟೋ ಜನರಿರುವರು. ಆದರೂ ಸಜ್ಜನರು ತಮ್ಮ ನಡತೆಯನ್ನು ಬದಲಾಯಿಸಲು ಆಗುವುದಿಲ್ಲ. 'However much hypocracy might put on the face of Grace, yet grace must appear so.' ಆದುದರಿಂದ ಎಲ್ಲಾ ಮಾನಿಗಳನ್ನು ದುಷ್ಟರೆನ್ನಲಾಗುವುದಿಲ್ಲ. ಹಾಗೆಯೇ ಬಾಯಿಬಡುಕರನ್ನೆಲ್ಲಾ ಯೋಗ್ಯರೆಂದೂ ಹೇಳಲಾಗುವುದಿಲ್ಲ. ಕೆಲವು ಮೋಸಗಾರರು ತಮ್ಮ ಕಾರ್ಯಸ್ಥಾಪನೆಯ ಸಲುವಾಗಿ, ಬಾಯಿಬಡುಕರಂತೆ ನಟಿಸಿ, ಇತರರ ವಿಶ್ವಾಸಕ್ಕೆ ಪಾತ್ರರಾಗಿ,ಕಡೆಗೆ ಅವರನ್ನುವಂಚಿಸುತ್ತಾರೆ. ಅಂತು ಒಬ್ಬನು ಸತ್ತ ವಿನಹ ಅವನ ಗುಣದೋಷಗಳನ್ನು ಕುರಿತು ಏನೊಂದು ಅಭಿಪ್ರಾಯವನ್ನೂ ಕೊಡಲು ಆಗುವುದಿಲ್ಲ.'

ಇಷ್ಟರಲ್ಲಿ ಫಲಹಾರವು ಕೊನೆಗಂಡಿತು. ವೈದ್ಯರಿಗೆ ಇನ್ನೊಬ್ಬ ರೋಗಿಯನ್ನು ನೋಡಬೇಕಾಗಿದ್ದ ಕಾರಣ, ಅವರು ಹೊರಟರು. ಚಾರುದತ್ತನು ಅವರನ್ನು ಕಾರಿನ ವರೆಗೆ ಹಿಂಬಾಲಿಸಿ ಬೀಳ್ಕೊಂಡು ಹಿಂದಿರುಗಿದನು.

ಮೌನವತಿಯು ಏನೋ ಗೃಹಕೃತ್ಯದಲ್ಲಿ ಮಗ್ನಳಾಗಿದ್ದಳು. ಚಾರುದತ್ತನು ಒಳಹೊಕ್ಕು, ಕೋಪಮಿಶ್ರಿತ ಸ್ವರದಿಂದ, 'ಎಲ್ಲಿರುವೆ' ಎಂದನು. ಆ ಬಾಲೆಯು ನಮ್ರಭಾವದಿಂದ, 'ಬಂದೆನು' ಎನ್ನುತ್ತಾ ಹತ್ತಿರ ಸರಿದಳು. ಚಾರುದತ್ತನು ಸಿಟ್ಟಿನಿಂದ ಹುಬ್ಬು ಗಂಟು ಹಾಕಿ, 'ನಿನ್ನ ಚೇಷ್ಟೆಗಳನ್ನು ನೋಡಿ, ಒದೆಯುವಷ್ಟು ಕೋಪ ಬಂತು. ಏನು ಮಾಡುವುದು ಅಪರಿಚಿತ ಗೃಹಸ್ಥನ ಎದುರಿನಲ್ಲಿ ಅಂತಹ ಅಯೋಗ್ಯ ಕಾರ್ಯಕ್ಕೆಸಗುವುದು ಅನುಚಿತವೆಂದು ಹಿಂಜರಿದದ್ದಾಯಿತು. ಅವರು ಬರುವುದಕ್ಕೆ ಮೊದಲೇ, ಗಿಳಿಗೆ ಹೇಳುವಂತೆ ಹೇಳಿದ್ದು ಸಾಲದುದಕ್ಕೆ, ಅವರ ಎದುರಿನಲ್ಲಿ ಕಣ್ಣಿನಿಂದಲೂ, ಕಾಲಿನಿಂದಲೂ ಅಷ್ಟು ಸೂಚಿಸಿದರೂ ಸಹ ಗೊಂಬೆಗೆ ಹೇಳಿದಂತೆ ಮಾಡಿದೆಯಲ್ಲಾ? ಅಂತಹ ಸುಹೃನೀಯರ ಆಶ್ರಯವು ದೊರಕಬೇಕಾದರೆ ನಾವೆಷ್ಟು ಅದೃಷ್ಟವಂತರಾಗಿರಬೇಕು. ಒಮ್ಮೆ ದೊರಕಿತೆಂದರೆ ಅದನ್ನು ಆಗುವಷ್ಟು ಮಟ್ಟಿಗೆ ಕೈವಶ ಮಾಡಿಕೊಳ್ಳಬೇಕೆಂಬ ಕುತೂಹಲ ನಿನಗಿರಬೇಡ? (ಮೌನವತಿಯು ಕಣ್ಣೀರು ಸುರಿಸಲಾರಂಭಿಸಿದಳು) ಇನ್ನೆಲ್ಲಾ ಆಯಿತು? ನೀನೇ ದೊಡ್ಡ ಕಲಿಯುಗದ ಅರುಂಧತಿ! ನನ್ನ ಅಪ್ಪಣೆಯಂತೆ ವರ್ತಿಸುವುದರಲ್ಲಿ ಆಗತಕ್ಕ ತಪ್ಪೇನು? ಇದರಲ್ಲಿ ಧರ್ಮವಿರುದ್ಧವೇನಾದರೂ ಇದೆಯೇ? ಕಪಿಯ ಹಾಗೆ ಕಣ್ಣೀರು ಸುರಿಸಬೇಡ. ಹೋಗು! ಒಳಗೆ' ಎಂದು ಹೇಳಿ ಚಾರುದತ್ತನು ತನ್ನ ಜವಾನಿನ ಕಡೆಗೆ ನಡೆದನು.

ಮೌನವತಿಯು ದುಃಖಿಸುತ್ತಾ ಒಳಗೆ ಹೋದಳು.

೨೨ ಅಧ್ಯಾಯ.

ಸೋಮದತ್ತನು ಏರ್ಪಡಿಸಿದ್ದ ಊಟವು ಮುಗಿಯಿತು. ನಡಾವಳಿಕೆಗನುಗುಣವಾಗಿ ವೈದ್ಯರು, ಒಂದು ಸಣ್ಣ ಭಾಷಣವನ್ನು ಮಾಡಲು ಎದ್ದು ನಿಂತರು. ಎಲ್ಲರೂ ಚಪ್ಪಾಳೆ ತಟ್ಟಿದರು. ಕೂಡಲೇ ನಿಶಬ್ದವಾಗಿ ವೈದ್ಯರ ಭಾಷಣವನ್ನು ಕೇಳತೊಡಗಿದರು.

'ಬಂಧು ಬಾಂಧವರೆ! ಈ ದಿವಸ ಮಾ. ಶ್ರೀ. ಸೋಮದತ್ತವವರು ನಮಗೆ ಕೊಟ್ಟ ಈ ಸಂತೋಷಕರವಾದ ಔತಣಕ್ಕೆ ನಾನು ಅವರನ್ನು ನಿಮ್ಮ ಪರವಾಗಿಯೂ, ನನ್ನ ಪರವಾಗಿಯೂ ಮನಃಪೂರ್ವಕವಾಗಿ ವಂದಿಸುತ್ತೇನೆ. ಇಂಥಾ ಸುಸಂದರ್ಭಗಳಲ್ಲಿ ಒಬ್ಬಿಬ್ಬರು! ಅವರಲ್ಲಿಯೂ ಮುಖ್ಯವಾಗಿ ಈ ತರಹದ ಬಹುಮಾನವು ಯಾರ ಪರವಾಗಿ ಜರಗಿಸಲ್ಪಟ್ಟಿರುವುದೋ ಅತನು ಒಂದೆರಡು ಮಾತುಗಳನ್ನು ಆಡಿಕೊಳ್ಳುವುದು ಕೇವಲ ಅಸಾಧಾರಣವಾದ ಸಂಗತಿಯಲ್ಲದುದರಿಂದ ನಾನು ನಿಮ್ಮೆಲ್ಲರ ಕ್ಷಮಾಪಣೆಯನ್ನು ಪ್ರಥಮದಲ್ಲಿಯೇ ಬೇಡಿ ನನ್ನ ಅಭಿಪ್ರಾಯಗಳನ್ನು ಒಂದೆರಡು ಮಾತುಗಳಲ್ಲಿ ಹೇಳಿ ತೀರಿಸುತ್ತೇನೆ.'

'ಮಿತ್ರರೇ! ನಾನು ಈ ಗ್ರಾಮಕ್ಕೆ ಬಂದ ಮೊದಲು ಇಂದಿನ ವರೆಗೆ ನೀವೆಲ್ಲರೂ ತೋರಿಸಿದ ಅಸಾಧಾರಣವಾದ ಮಿತ್ರತ್ವಕ್ಕೆ ನಾನು ನಿಮಗೆಲ್ಲರಿಗೂ ಚಿರಋಣಿಯಾಗಿರುತ್ತೇನೆ. ನಿಮ್ಮ ಅಕಲ್ಮಶವಾದ ಭ್ರಾತೃಪ್ರೇಮವು ಖಂಡಿತವಾಗಿಯೂ ಫಲಿಸದಿರದು. ಭಗವಂತನ ದಯೆಯಿಂದ ನನ್ನ ಕೃತಜ್ಞತೆಯ ಫಲವನ್ನು ನೀವಿಂದಿನಿಂದ ನಾನು ಜೀವಿಸಿರುವ ವರೆಗೂ, ನಿರಂತರವಾಗಿ ಅನುಭವಿಸಬಹುದು. ಈ ಮಾತಿನ ಗೂಢಾರ್ಥವು ನಾಳೆಯೇ ನಿಮಗೆ ತಿಳಿಯುವುದು. ಅಷ್ಟರ ವರೆಗೆ ನಿಮ್ಮ ಮಹಾಕಾಂಕ್ಷೆಯ ಆತುರವನ್ನು ತಡೆದಿರುವಂತೆ ನಿಮ್ಮನ್ನು ಬಿನ್ನವಿಸುತ್ತೇನೆ.'

'ಇಲ್ಲಿ ನೆರೆದಿರುವ ನಿಮಗೆಲ್ಲಾ ನನ್ನ ಮತ್ತು ಹರೀಂದ್ರಕುಮಾರಿಯ ಜೀವನ ಚರಿತ್ರೆಯನ್ನು ಅಮೂಲಾಗ್ರವಾಗಿ ಕೇಳಬೇಕೆಂಬ ಕುತೂಹಲವು ಮಹತ್ತಾಗಿರಬಹುದು. ಈ ರಹಸ್ಯವನ್ನರಿಯಲು ನೀವು ಇನ್ನು ಬಹುಕಾಲ ಕಾಯುವ ಅವಶ್ಯಕತೆ ಇರುವುದಿಲ್ಲ. 'ಒಂದು ರಾತ್ರಿ ಮಾತ್ರ. ನಾಳೆ ಪ್ರಾತಃಕಾಲವೇ ನೀವು ಅದನ್ನು ತಿಳಿಯುವಿರಿ.'

'ಸ್ನೇಹಿತರೇ! ನಿಮ್ಮ ಗುಣ ನಡತೆಗಳು ಬಹು ಶ್ಲಾಘನೀಯವಾದುದು. ಆದರೆ ನಿಮ್ಮ ಈ ಸಾಧುಸ್ವಭಾವವನ್ನು ಅರಿತು ಕೆಲವು ಅಲ್ಪ ವಿದ್ಯಾವಂತರು ಮತ್ತು ಐಶ್ವರ್ಯವಂತರು ನಿಮ್ಮನ್ನು ಅಕಾರಣವಾಗಿ ಕಾಡಿಸುತ್ತಿರುವರು. ಇದು ಬಹು ದುಃಖಕರವಾದ ಸಂಗತಿಯಾಗಿದೆ. ಅವರೂ ನೀವು ಅಂಥಾ ನೀಚರೊಡನೆ, ಹಟ ಸಾಧಿಸಲು ತೊಡಗದಿರಿ. ಅಲ್ಪಜ್ಞನೂ, ಎಳೆ ವಯಸ್ಸಿನವನೂ ಆದ ನಾನು ಅನುಭವಶಾಲಿಗಳಾದ ನಿಮಗೆ ಹೆಚ್ಚಿನ ಬುದ್ಧಿವಾದವನ್ನು ಹೇಳಲಾರೆನು. ಆದರೂ ಸ್ವಲ್ಪ ಮಟ್ಟಿಗೆ ದೇಶಸಂಚಾರ ಮಾಡಿರುವೆನಾದ ಕಾರಣ ವಿದೇಶಿ ಜನರ ಮಿಳಿತದಿಂದ, ನನಗುಂಟಾದ ಕೆಲವು ಅನುಭವಗಳನ್ನು ನಿಮ್ಮ ಮುಂದೆ ಹೇಳಿಕೊಳ್ಳುತ್ತೇನೆ.'

'ದೇಶ ಬಾಂಧವರೆ! ಲೋಕದಲ್ಲಿ ಪ್ರತಿಯೊಬ್ಬನೂ ತಾನು ಎಷ್ಟೇ ವಿದ್ಯಾಹೀನನಾಗಿರಲಿ, ಅಥವಾ ಬಡವನಾಗಿರಲಿ, ತನ್ನ ಆತ್ಮಗೌರವವನ್ನು ಎಂದೂ ಬಿಡಲಾರನು. ಭಗವಂತನು ಮನುಷ್ಯವರ್ಗದ ಪ್ರತಿಯೊಂದು ವ್ಯಕ್ತಿಗೂ ಸರಿಸಮಾನವಾದ ಗೌರವವನ್ನು ಹಂಚಿರುವನು. ಈ ಆತ್ಮಗೌರವವನ್ನು ಉಳಿಸಿಕೊಳ್ಳುವುದಕೋಸ್ಕರವೇ ಪ್ರತಿಯೊಬ್ಬನೂ ಹಗಲೂ, ಇರುಳೂ ಕಷ್ಟಪಡುತ್ತಿರುವನು. ಆದರೆ ಅನೇಕರಿಗೆ ಆತ್ಮಗೌರವವನ್ನು ಅಹಂಕಾರದ ಗರ್ವವನ್ನೂ ವಿಂಗಡಿಸಿ ತಿಳಿಯಲು, ಶಕ್ತಿ ಸಾಲದು. ಅವರು ಒಂದನ್ನು ಮತ್ತೊಂದಕ್ಕೆ ಮಿಶ್ರ ಮಾಡಿ, ತನ್ನ ನೆರೆ ಹೊರೆಯವರ ಮಾಪನೆಗೂ, ಅಪವಾದಕ್ಕೂ ಗುರಿಯಾಗುತ್ತಾರೆ.'

'ಆತ್ಮಗೌರವಕ್ಕೂ, ಅಹಂಕಾರದ ಗರ್ವಕ್ಕೂ ಇರುವ ವ್ಯತ್ಯಾಸವು ಇಷ್ಟೆ. ಉದಾಹರಣೆಗಾಗಿ ನಿಮ್ಮ ಗ್ರಾಮಸ್ಥರ ಒಂದು ಸಂಘವಿದೆಯೆಂದು ತಿಳಿಯುವ. ಪ್ರತಿಯೊಂದು ಸಂಸ್ಥೆಯಲ್ಲಿಯೂ ಒಬ್ಬಿಬ್ಬರು ಮುಖಂಡರು ಇರುತ್ತಾರೆ. ಅಂಥಾ ಸಂಸ್ಥೆಗಳಲ್ಲಿ, ಮುಖಂಡನಲ್ಲದ ಅಲ್ಪಜ್ಞನೋ ಅಥವಾ ಬಡವನೋ, ಒಂದು ಪರೋಪಕಾರಯುಕ್ತವೂ, ಗ್ರಾಮಕ್ಕೆ ಪ್ರಯೋಜನಕಾರಿಯೂ ಆದ ಒಂದು ಅಭಿಪ್ರಾಯವನ್ನು ಸೂಚಿಸುತ್ತಾನೆಂದು ತಿಳಿಯುವ. ಇಂತಹ ಸಂದರ್ಭಗಳಲ್ಲಿ ಕೆಲವರು ಅಂಥಾ ಅಭಿಪ್ರಾಯವು ಬಹು ಅಮೂಲ್ಯವಾದದ್ದು ಎಂದು ತಿಳಿದರೂ ಸಹ ತಾವಲ್ಲದೆ ಇತರರನ್ನು ಅಂಥಾ ತತ್ವಗಳ ಮೂಲಪುರುಷರನ್ನಾಗಿ ಮಾಡಲು ಇಷ್ಟಪಡದೆ ತಮ್ಮ ದುರಹಂಕಾರದಿಂದ ಅದನ್ನು ವಿರೋಧಿಸಿ ಮಾತಾಡುತ್ತಾರೆ. ಇದೇ ಅಹಂಕಾರದ ಅಥವಾ ಗರ್ವದ ನಡತೆ. ಇದು ಜ್ಞಾನಿಗೂ, ಯೋಗ್ಯನಿಗೂ ತಕ್ಕದಲ್ಲ. ಅಮೂಲ್ಯವಾದ ಅಭಿಪ್ರಾಯಗಳು, ಯಾರ ಬಾಯಿಯಿಂದಲೇ ಹೊರಡಲಿ, ನೀವು ಅದಕ್ಕೆ ಕರ್ತೃವಿನ ಸ್ಥಿತಿಗತಿಯನ್ನು ನೋಡದೆ ನಿಮ್ಮ ಪತ್ತಾಸೆಯನ್ನು ಮನಪೂರ್ವಕವಾಗಿ ಕೊಡಬೇಕು.'

'ಎರಡನೇ, ಕೆಲವರು ತಮ್ಮ ಐಶ್ವರ್ಯದ ಗರ್ವದಿಂದಾಗಲೀ, ಅಲ್ಪ ವಿದ್ಯೆಯ ಹೆಮ್ಮೆಯಿಂದಾಗಲೀ ಅಥವಾ ಆತ್ಮಲಾಭ ದೃಷ್ಟಿಯಿಂದಾಗಲೀ ಏನಾದರೊಂದು ಹಾನಿಕರವಾದ ಚಳವಳವನ್ನು ಹರಡಿಸಲು ಪ್ರಯತ್ನಿಸುತ್ತಾನೆಂದು ಯೋಚಿಸುವ. ಇಂಥಾ ಸಂದರ್ಭಗಳಲ್ಲಿ ಆ ಚಳವಳದ ಕರ್ತೃವು ನಿಮ್ಮ ಕೇವಲ ಸ್ನೇಹಿತನೇ ಆಗಿರಲಿ, ಬಂಧುವೇ ಆಗಿರಲಿ, ಅಥವಾ ನಿಮ್ಮ ಧನಿಯೇ ಆಗಿರಲಿ, ಮತ್ತು ಈ ಚಳವಳಕ್ಕೆ ಒತ್ತಾಸೆ ಕೊಡುವುದರಿಂದ ನಿಮಗೆ ಯಾವುದೊಂದು ಕಷ್ಟ ನಷ್ಟಗಳು ಸಂಭವಿಸುವುದಿಲ್ಲವೆಂದಾದರೂ ಸಹ ಈ ಚಳವಳದಿಂದ ಇತರರಿಗೆ ಕಷ್ಟ ಉಂಟಾಗುವ ಸಂಭವವಿದ್ದರೆ ಅಥವಾ ಅಂಥಾ ಚಳವಳವು ಸ್ವಾರ್ಥತೆಯ ಕಾಂಕ್ಷೆಯಿಂದಲೋ,ಅಥವಾ ಇತರರನ್ನು ನಾಶ ಮಾಡಬೇಕೆಂಬ ದುರಾಶೆಯಿಂದಲೋ ತಂದದ್ದಾದರೆ ನೀವು ನಿಮ್ಮ ಸ್ನೇಹವನ್ನಾಗಲೀ, ಬಂಧುತ್ವವನ್ನಾಗಲೀ ಅಥವಾ ನಿಮ್ಮ ಬಡತನವನ್ನಾಗಲೀ ಗ್ರಹಿಸದೆ ಧೈರ್ಯದಿಂದ ನಿಮ್ಮ ಅಭಿಪ್ರಾಯವನ್ನು ಕೊಡಬೇಕು. ನನಗೇನಾಗಬೇಕು? ಇದರಿಂದ ನನಗೇನು ನಷ್ಟ, ಅಥವಾ ನಾನೇಕೆ ಅಷ್ಟು ದೊಡ್ಡ ಮನುಷ್ಯನ ದೃಷ್ಟಿಗೆ ಬೀಳಬೇಕು, ಎಂಬ ಭಿನ್ನಾಭಿಪ್ರಾಯದಿಂದ ನಿಮ್ಮ ಆತ್ಮ ವಿರುದ್ಧವಾದ ಅಭಿಪ್ರಾಯವನ್ನು ಎಂದೂ ಸೂಚಿಸದಿರಿ. ಸತ್ಯವೇ ನಿಮ್ಮ ಮತವಾಗಿರಬೇಕು. ಸತ್ಯಕ್ಕಾಗಿ ಯಾರೊಡನೆ ಕಾದಾಡಲು ನೀವು ಹಿಂಜರಿಯಬಾರದು. ಇದೇ ಆತ್ಮ ಗೌರವ. ಇದನ್ನು ಕಾಪಾಡಿಕೊಳ್ಳುವುದೇ ನಿಮ್ಮ ಮುಖ್ಯ ಧ್ಯೇಯವಾಗಿರಬೇಕು.'

'ಹೆಚ್ಚು ಮಾತಾಡಲಾರೆ. ಇದೊಂದು ಮಾತಿನಿಂದ ನನ್ನ ಭಾಷಣವನ್ನು ಕೊನೆಗಾಣಿಸುತ್ತೇನೆ. ಗ್ರಾಮಗಳಲ್ಲಿ ಐಶ್ವರ್ಯವಂತರೂ ಸುಖಿಗಳೂ, ಆಗಲು ಬೇಕಾದಷ್ಟು ಸೌಕರ್ಯಗಳಿವೆ. ಆದರೂ ಹಳ್ಳಿಗಳಲ್ಲಿ ಬಡವರೇ ಹೆಚ್ಚು. ಇದಕ್ಕೆ ಮುಖ್ಯ ಕಾರಣಗಳು ಯಾವುವೆಂದರೆ-ಸೋಮಾರಿತನ, ಕುಡುಕುತನ ಮತ್ತು ವ್ಯಾಜ್ಯಗಳು. ಈ ಮೂರು ಅನಾಹುತಗಳಿಗೆ ಎಂದೂ ತುತ್ತಾಗದಿರಿ. ನಿಮ್ಮ ಮಕ್ಕಳಿಗೆ ವಿದ್ಯೆಯನ್ನು ಕೊಡುವುದರಲ್ಲಿ ಆತುರರಾಗಿರಿ. ಮಕ್ಕಳ ಶಾರೀರಕ, ಮಾನಸಿಕ ಮತ್ತು ದೈವಿಕ ಬೆಳವಣಿಗೆಗಳಿಗೆ ತಂದೆ ತಾಯಿಗಳೇ ಮುಖ್ಯ ಕಾರಣರು. ಆದುದರಿಂದ ನಿಮ್ಮ ವಾರ್ಧಿಕ್ಯದಲ್ಲಿ ಸುಖಕ್ಕೆ ಕಾರಣಹೇತುಗಳಾದ ನಿಮ್ಮ ಮಕ್ಕಳ ವಿಷಯದಲ್ಲಿ ಅತ್ಯಂತ ಶ್ರದ್ಧೆಯುಳ್ಳವರಾಗಿ.'

ಹೆಚ್ಚಿನ ವಿಷಯಗಳನ್ನು ಇನ್ನು ಮುಂದೆ ನಾವು ಕಾಲೋಚಿತ ಒಬ್ಬರಿಂದೊಬ್ಬರು ತಿಳಿದುಕೊಳ್ಳಬಹುದು. ತತ್ಕಾಲಕ್ಕೆ ನಿಮಗೆಲ್ಲಾ ಇನ್ನೊಮ್ಮೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ ವಂದೇ ಮಾತರಂ.'

[ಅಪೂರ್ಣ.

—oOo—

ಬೇಕಿಲ್ಲ.

ಸಂಯುಕ್ತ ರಾಜ್ಯಾಂಗ ರಚನೆಯು ಭಾರತೀಯ ರಾಷ್ಟ್ರೀಯತೆಗೂ ಸ್ವಾತಂತ್ರ್ಯ ಪ್ರೇಮಕ್ಕೂ ಬ್ರಿಟಿಷ್ ಸಾಮ್ರಾಜ್ಯ ಸಕ್ತಿಗೂ ನಡುವೆ ಇರುವ ಜಗಳದ ಸ್ವರೂಪವೆಂದೇ ನಾವು ಭಾವಿಸುತ್ತಿದ್ದೇವೆ. ಅದು ಈ ಅಭಿಮತದ ಒಂದು ಮುಖ್ಯ ಭಾಗ, ಜಗಳವು ಅವರಲ್ಲಿ ಹುಟ್ಟಿಬಂದುದು ಮತ್ತು ಸಂಯುಕ್ತ ರಾಜ್ಯಾಂಗವನ್ನು ನಮ್ಮ ಮೇಲೆ ಹೇರಲು ಉದ್ಯುಕ್ತರಾದ ಕೂಡಲೇ ಆ ಭಾವನೆಯು ಹೊರಬೀಳುತ್ತದೆಂಬುವುದು ಖಂಡಿತ ಈ ಯೋಜನೆಯ ಯೋಗ್ಯತೆ ಅಯೋಗ್ಯತೆಗಳ ವಿಚಾರ ವಿಮರ್ಶೆಯೇ ನಮಗೀಗ ಬೇಕಿಲ್ಲ ಆ ವಿಚಾರವಾಗಿ ಬೇಕಾದಷ್ಟು ಹೇಳಿದುದು ಬರೆದುದು ಎಲ್ಲಾ ಆಗಿದೆ. ಮುಖ್ಯವಾದ ಕಾರಣವೇನೆಂದರೆ—ಭಾರತಕ್ಕೆ ಅದು ಒಗ್ಗುವುದಿಲ್ಲ, ಭಾರತೀಯರಿಗೂ ಅದು ಒಗ್ಗುವುದಿಲ್ಲ, ಭಾರತೀಯರಿಗದು ಬೇಡ ನಮಗಷ್ಟು ಸಾಕು ಲಾರ್ಡ್ ಜೆಟ್ಲೆಂಡರೋ ಅವರ ಸಹಚಾರಿಗಳೋ ಈ ವಿಚಾರದಲ್ಲಿ ಏನನ್ನು ತೀರ್ಮಾನಿಸುವುದು ನಮಗೆ ಬೇಕೇ ಇಲ್ಲ.

ಭಾರತ ಅಭೇದ್ಯ.

ಆದರೆ ಇನ್ನೊಂದು ದೊಡ್ಡ ವಿಚಾರವನ್ನೂ ನಾವು ಯೋಚಿಸಬೇಕಾಗುತ್ತದೆ ನಾವು ಕಳೆದ ಕೆಲವು ವರ್ಷಗಳಿಂದ ಭಾರತ ಮತ್ತು ಪ್ರಪಂಚದ ಅಂತರರಾಷ್ಟ್ರೀಯ ಸಂಬಂಧವನ್ನು ಲಕ್ಷ್ಯಕ್ಕೆ ತಂದುಕೊಳ್ಳಲು ಆರಂಭಿಸಿದ್ದೇವೆ ಕಾಲಾನುಸಾರವಾಗಿ ಬಂದ ಬಲತ್ಕಾರವಿದೆಂದೇ ಹೇಳಬೇಕು ನಾವೀಗ ನಮ್ಮ ವಿಷಯವಾಗಿ ಹೊರಗಿನವರು ಮಾಡುವ ಯಾವ ತೀರ್ಮಾನವನ್ನಾದರೂ ತಿರಸ್ಕರಿಸಬೇಕಾದ ಪರಿಸ್ಥಿತಿಗೆ ಬಂದಿದ್ದೇವೆ ಏಕೆಂದರೆ ಅಂಥಾ ತೀರ್ಮಾನಗಳು ಸತ್ಯ ಮತ್ತು ನ್ಯಾಯ ಸ್ಥಿತಿಗೆ ವಿರುದ್ಧವಾಗಿಯೇ ಇರುತ್ತವ ಈ ಪ್ರಶ್ನೆಯನ್ನು ನಾವು ವೀಕ್ಷಿಸುವಾಗ, ಪ್ರಪಂಚವು ಬಹು ಸಣ್ಣಗಾಗುತ್ತಿದೆ ಒಂದೇ ಸಂಸಾರದಷ್ಟು ಚಿಕ್ಕದಾಗುತ್ತಿದೆ. ಇದರಲ್ಲಿ ಒಂದು ಭಾಗದ ಮನುಷ್ಯರು ಮತ್ತಿತರ ಭಾಗಗಳಿಗೆ ಬಾಂಧವ್ಯವಿಲ್ಲದ ಇರುವುದು ಸಾಧ್ಯವಿಲ್ಲ—ಎಂಬ ಭಾಗವನ್ನು ಸದಾ ನೆನಪಿನಲ್ಲಿಡಬೇಕು ದಿನ ದಿನಕ್ಕೂ ಜನರಿದನ್ನು ಅರಿತುಕೊಳ್ಳುತ್ತಿದ್ದರೂ ಮಾನವ ಸ್ವಭಾವದಂತೆ ಸತ್ಯದ ಸಮೀಪಕ್ಕೆ ಹೋಗಲು ಹೆದರಿ ಹಿಮ್ಮೆಟ್ಟುತ್ತಿದ್ದಾರೆ. ಶಾಂತಿಯು ಅಭೇದ್ಯ-ಅಚ್ಛೇದ್ಯ ಎನ್ನುತ್ತಾರೆ, ಭಾಗ್ಯವೂ ಅಷ್ಟೆ, ಮುಖ್ಯವೆನಿಸುವ ವಿಚಾರಗಳೆಲ್ಲಾ ಪ್ರಪಂಚ ಬಾಂಧವ್ಯ ಮತ್ತು ಮಾನವ ವ್ಯವಹಾರವೇ ಅನ್ನು ಅಚ್ಛೇದ್ಯ ಅಭೇದ್ಯ.

ಸಹಕಾರಕ್ಕೆ ಬದಲು

ಆದುದರಿಂದ ನಮ್ಮ ಸ್ವಾತಂತ್ರ್ಯವೆಂದು ಹೇಳುವಾಗಲೆಲ್ಲಾ ಅದು ಇಡೀ ಪ್ರಪಂಚದ ಮತ್ತು ವಿಶ್ವದಲ್ಲಿನ ಸಹಕಾರದ ಸಂಬಂಧವುಳ್ಳುದೆಂಬ ಭಾವದಲ್ಲೇ ಹೇಳಬೇಕು. ರಾಷ್ಟ್ರಗಳು ಪ್ರತ್ಯೇಕವಾಗಿ ಇರಲಿದ್ದ ಸಾಧ್ಯತೆಯು ಮತ್ತೆ ಮರಳಿ ಬರದಂತೆ ಮಾಯವಾಗಿ ಹೋಗಿದೆ. ಇಂದು

ವಿಶ್ವಶಾಂತಿಗೊಂದು ವೀರವಾಣಿ.

ಭಾರತವು ಸ್ವತಂತ್ರವಾಗಲೇ ಬೇಕು.
ಸಂಯುಕ್ತ ರಾಜ್ಯಾಂಗವ್ಯವಸ್ಥೆಯನ್ನು ಮೂಲೆಗೊತ್ತಬೇಕು.

ವಿಶ್ವಶಾಂತಿಯು ಇಂದಿನ ಲೂಟಿಖೋರರ ಸಾಮ್ರಾಜ್ಯ ನೀತಿಯ ಪೂರ್ಣ ಪರಿವರ್ತನೆಯಿಂದ ಸಾಧ್ಯವೇ ವಿನಹ “ಲೀಗ್” ನಂಥಹ ಸತ್ತ ಸಂಸ್ಥೆಯಿಂದ ಎಂದಿಗೂ ಸಾಧ್ಯವಿಲ್ಲ

ವೀರ ಜವಾಹರಲಾಲರ ಅಮೋಘ ವಾಣಿ.

ವಿಶ್ವ ಸಹಕಾರಕ್ಕೆ ಬದಲು ಇನ್ನೇನಾದರೂ ಇದೆಯೆಂದರೆ ಯುದ್ಧ ರಾಷ್ಟ್ರಗಳ ರಕ್ತಿಯೆಲ್ಲಾ ನಿಸ್ಸಾರವಾಗಿ ಸೋರಿ ಹೋಗಿ ಎಲ್ಲ ಒಂದೇ ಒಂದು ಶ್ಮಶಾನದಲ್ಲಿ ಒರಗುವ ವರೆಗೂ ಕಾದು ಮುಗಿಸುವ ಭಯಂಕರ ಯುದ್ಧ

ಇಂದು ವಿಶ್ವದಲ್ಲಿ ಸಹಕಾರ ಮಧುರ ಬಾಂಧವ್ಯಗಳು ಸಾಧ್ಯವೇ? ಇದೊಂದು ಜಟಿಲ ಪ್ರಶ್ನೆಯೇ ಏಕೆಂದರೆ ಪ್ರ

ಪಂಚದ ವಿವಿಧ ಬಲಿಷ್ಠ ರಾಷ್ಟ್ರಗಳು ಒದಿದು ಜಳಪಿಸುತ್ತಿರುವ ಕತ್ತಿಗಳು ಅವರು ಸೌಹಾರ್ದದಿಂದ ಬಾಳಲು ಅವಕಾಶ ಕೊಡುತ್ತಿಲ್ಲ ಸೌಹಾರ್ದವನ್ನು ಉಂಟುಮಾಡಬಹುದೆಂದು ಯೋಚಿಸುವುದೂ ಹಾಸ್ಯಕರವಾಗಿಯೇ ಇದೆ ಹೀಗಿದ್ದರೂ ಅದಕ್ಕಾಗಿ ಶ್ರಮಿಸಿದರೆ, ಅರೆ-ಭರಗಳಲ್ಲಿ ವಿಶಾಲ ಜಗತ್ತೆಲ್ಲಾ ಒಂದೇ ಅಲ್ಲದಿದ್ದರೂ ಅಲ್ಲಲ್ಲಿ ಸಣ್ಣ ಸಣ್ಣ, ಸಹಕರಿಸಿ ಪ್ರವೃತ್ತಿಯಿಂದ ಬದುಕುವ, ರಾಷ್ಟ್ರಗಳ ಸಂಘಗಳನ್ನು ಯೋಚಿಸುವುದು ಅಸಾಧ್ಯವೇನಲ್ಲ ಇದಕ್ಕಿರುವ ಪ್ರತಿಭಟನೆಯೆಲ್ಲಾ, ಪ್ರಪಂಚದ ಚಾಣಾಕ್ಷ ಬುದ್ಧಿಶಾಲಿಗಳು, ಬಲಿಷ್ಠ ರಾಷ್ಟ್ರಗಳ ಪ್ರಭುತ್ವಗಳು ಮತ್ತು ಬಂಡವಾಳಗಾರರು ಇವರುಗಳಿಂದ ಮುಕ್ಕರೆಲ್ಲಾ ಇಂಥಾ ಮಿತ್ರತ್ವಕ್ಕೆ ಅನುಕೂಲರಾಗಿಯೇ ಇದ್ದಾರೆ.

ಶಾಂತಿ ಸ್ಮಶಾನ.

ಇಪ್ಪತ್ತು ವರ್ಷಗಳ ಹಿಂದ ಶ್ರೀ ಪ್ರೆಸಿಡೆಂಟ್ ವಿಲ್ಸನ್ನರು ಈ ಸವಿಗನಸು ಕಂಡರು. ಅವರ ಫಲವೇ ಇಂದು ಜಿನೀವದಲ್ಲಿರುವ ವಿಶ್ವಶಾಂತಿ ಭವನದ ಮುದ್ದ ಗೋರಿಗಳಂತೆ ಭಾಸವಾಗುವ ಮಹಾ ಸೌಧಗಳು ಇವುಗಳ ಮೊದಲು ಅಷ್ಟು ಶೀಘ್ರವಾಗಿ ಈ ಗತಿಗೆ ಬರಲು ಯುದ್ಧೋನ್ಮತ್ತ ರಾಷ್ಟ್ರಗಳೂ, ಬಂಡವಾಳಗಾರರೂ ಸಂಧಿಗಾಗಿ ಸೇರಿಕೊಂಡು ಈ ಶಾಂತಿಯ ಅಭಿಪ್ರಾಯವನ್ನು ಕಂಡು ಹುಬ್ಬು ಹಾರಿಸಿ ಹುಸಿನಗು ನಗಲು ಆರಂಭಿಸಿದ್ದೇ ಕಾರಣ ಅದು ಹುಟ್ಟುತ್ತಲೇ ತನ್ನ ಹಣೆಯ ಬರಹವನ್ನಳಿಸಿಕೊಳ್ಳಲಿಲ್ಲ ಹುಟ್ಟಿತು ಅಂತೆಯೇ ಸತ್ತೂ ಹೋಯಿತು ಅವರು ಸೇರಿದುದು ದುರ್ಬಲರನ್ನು ರಕ್ಷಿಸುವುದಕ್ಕಾಗಿಯಲ್ಲ ಪ್ರಬಲರ ಇತರಸ್ವಹಗೆ ಅವರ ಜನ್ಮವಿರುವ ವರೆಗೂ ಪ್ರಪಂಚದಲ್ಲಿ ರಾಷ್ಟ್ರ ರಾಷ್ಟ್ರಗಳ ಅಂತಸ್ತಿನ ಬೇಧಭಾವ ತಪ್ಪುವಂತೆಯೂ ಇರಲಿಲ್ಲ ಅದು ಗುಲಾಮಗಿರಿಯನ್ನು ರಾಷ್ಟ್ರೀಯ ಜೀವನಗಳಲ್ಲಿ ಭದ್ರಗೊಳಿಸುವುದಕ್ಕಾಗಿಯೇ ಇತ್ತು ಅದಕ್ಕೆ ಬದುಕುವ ಧೈರ್ಯ ಉತ್ಸಾಹಗಳೂ ಇರಲಿಲ್ಲ, ಅದು ಸಾಯಬೇಕಾಗಿಯೇ ಇತ್ತು. ಆ ಶವಕ್ಕಿನ್ನು ಜೀವಕಳೆ ತುಂಬಬೇಕಾದುದೂ ಇಲ್ಲ

ಬದುಕಿನಬೇಕಾದರೆ

ಅಂತೆ, ಆ ಶಾಂತಿ ಸಮ್ಮೇಳನದ ಅಭಿಪ್ರಾಯ ಉದ್ದೇಶಗಳು ಉಚ್ಚವಾದವು ಪುನರುದ್ಧಾರಕ್ಕೆ ಯೋಗ್ಯವಾದವುಗಳು. ಪ್ಯಾರಿಸ್ ಮತ್ತು ಜಿನೀವಾಗಳಲ್ಲಿ ಹಿಂದ ಅದ ಅಪ್ರಾಮಾಣಿಕ ಅದ ಮಾರ್ಗಗಳಲ್ಲಲ್ಲ ಸಂಕುಚಿತ ವೃತ್ತಿಯೊಡನಲ್ಲ, ಸರಳವಾದ ಸಮಾನತೆಯ ಧ್ಯೇಯವುಳ್ಳ ನೀತಿಯ ಬಲವುಳ್ಳ ಸಶಕ್ತ ಮಾರ್ಗಗಳಲ್ಲಿ ಅದನ್ನು ಪುನರ್ಜೀವನಗೊಳಿಸಬೇಕಾದುದು. ಮತ್ತಾವ ರೀತಿ ನೀತಿಗಳೊಡನೆ ಹುಟ್ಟಿಕೊಂಡರೂ ಅದು ಬದುಕತಕ್ಕುದ್ದಲ್ಲ

ಇನ್ನೂ ತಲೆಗೆ ಹಿಂಡಿದಿಲ್ಲ

ಕಳೆದ ಹಲವು ವರ್ಷಗಳಿಂದ ಈ ಸ್ವಾಮೂಹಿಕ ಶಾಂತಿಯ ವಿಚಾರವಾಗಿ ಪ್ರಪಂಚದಲ್ಲೆಲ್ಲಾ ಬೇಕಾದಷ್ಟು ಮಾತುಕಥೆಗಳಾಯಿತಾದರೂ ಇಂಗ್ಲೆಂಡ್, ಫ್ರಾನ್ಸ್‌ಗಳು ಆ ಮಾತುಕಥೆಗಳನ್ನು ಮಾತ್ರವಲ್ಲದೆ ಆದರೊಡನೆ ‘ಲೀಗ’ನ್ನೂ ಕೊಂದುಬಿಟ್ಟರು. ಆದರಿಂದ ಅವರಿಗೆ ಹೊಸ ಹೊಸ ಅಪಾಯಗಳೂ ಹುಟ್ಟಿಕೊಂಡವು; ಅವರ ಬುಡಕ್ಕೇನೇ ಸೀಳು ಬಿದ್ದುಹೋಗುವ ಸಂದರ್ಭಗಳು ಹುಟ್ಟಿಕೊಂಡವು. ಬೆದರಿ ಬೆಂಡಾಗಿ ಈಗ ಯುದ್ಧ ಸಂಭವಗಳಲ್ಲಿ ಹೊರಗಿನವರ ಮಿತ್ರತ್ವ ಮತ್ತು ಸಹಾಯಗಳಾಗಿ ಬಾಯಿ ಬಾಯಿ ಬಿಡುತ್ತಿದ್ದಾರೆ ಇಷ್ಟಾದರೂ ನಿಜವಾದ ಸಮುದಾಯಿಕ ಶಾಂತಿಯ ಭಾವನೆ ಅವರ ತಲೆಗೆ ಹಿಡಿದಿಲ್ಲ

ಒಂದು ಮಾತಿನಲ್ಲಿ

ಈ ಸಮುದಾಯ ಶಾಂತಿ ಭಾವನೆಯು ನಾಶವಾಗಲು ಹಲವು ಕಾರಣಗಳಿದ್ದವು ಅವುಗಳಲ್ಲೆಲ್ಲಾ ಅತ್ಯಂತ ಪ್ರಧಾನವಾದುದೆಂದರೆ—ಸಾಮ್ರಾಜ್ಯ ಶಾಹಿಗೂ ಇದಕ್ಕೂ ಇದ್ದ ಗಂಟು ಸಮುದಾಯ ಶಾಂತಿಗೂ ನಿಜವಾದ ಪ್ರಜಾಪ್ರಭುತ್ವಕ್ಕೂ ಎಡೆಬಿಡದ ಸಂಬಂಧವಿದೆ. ಕೇವಲ ಸಂಕುಚಿತವಾದ ಯಾವುದೋ ಕೆಲವು ಅರ್ಥಗಳಲ್ಲಿ ವಿನಃ ನಿಜವಾದ ಪ್ರಜಾಪ್ರಭುತ್ವವೇ ಇಲ್ಲದಿರುವ ಈ ಪ್ರಪಂಚದಲ್ಲಿ ಇಂತಹ ಸಮುದಾಯ ಶಾಂತಿ ತಾನೆ ಹೇಗೆ ಬದುಕೀತು? ಅದು ಸಾಯಲೇ ಬೇಕು ಈ ವಾದವಲ್ಲಾ ಒಂದು ಮಾತಿನಲ್ಲಿ ಸಂಗ್ರಹವಾಗಿ ಹೇಳುವದಾದರೆ ಶ್ರೀ ಲೆನಾರ್ಡ್ ಬಾರ್ನೆಯವರು ಅವರ ಪುಸ್ತಕದಲ್ಲಿ ಹೇಳಿದಂತೆ ಸಾಮ್ರಾಜ್ಯ ನೀತಿಯನ್ನು ಮಣ್ಣುಗೂಡಿಸಿ ಭರತಖಂಡಕ್ಕೆ ಸ್ವಾತಂತ್ರ್ಯಗಳಿಸಿಕೊಳ್ಳುವುದನ್ನು ಸಮರ್ಥಿಸಲಿ

ಹೊಸ ತತ್ವ

ಇಂದು ಒಂದು ಹೊಸ ತತ್ವವನ್ನು ಸೃಷ್ಟಿಸಿ ಪ್ರಪಂಚದ ಒಹು ಜನರ ಮನಸ್ಸಿಗ ನಾಟುವಂತೆ ಮಾಡಲ ಗುತ್ತಿದೆ ಮತ್ತೊಂದು ‘ವಿಶ್ವಶಾಂತಿ ಕೂಟ ಕುಟುಂಬ’ ವೇ ಆ ಆಜಮರ ಇದು ಅವಿರ್ಭವಿಸುವುದೇ ಆದರೆ ಮೊನ್ನೆ ತಾನೇ ಸತ್ತ ಲೀಗಿನ ತಾತನಾಗಲಿದ ಹಲವರು ‘ಬ್ರಿಟಿಷ್ ಕಾಮನ್‌ವೆಲ್ತ್’ ಈ ವಿಧದ ತತ್ವಕ್ಕೆ ಕೇಂದ್ರವಾಗಿ ಮಾರ್ಗದರ್ಶಿಯಾಗಬಹುದೆಂದು ಯೋಚಿಸುತ್ತಿದ್ದಾರೆ ಆದರೆ ಇದೇ ಬ್ರಿಟಿಷ್ ಕಾಮನ್‌ವೆಲ್ತಿನ ಹೃದಯದೊಂತರಾಳವು ಅಧೀನ ಪ್ರಜೆಗಳ ಲೂಟಿಯೇ ತನ್ನ ನೀತಿಯೆಂದು ನಿಂತಿರುವ ಸಾಮ್ರಾಜ್ಯಶಾಹಿ ಎಂಬುದನ್ನು ಮರೆತಿದ್ದಾರೆನ್ನಬೇಕಾಗುತ್ತದೆ. ಅಧೀನ ರಾಜ್ಯಗಳ ಮಾತು ಹಾಗಿರಲಿ. ಅರ್ಧ ಸ್ವಾತಂತ್ರ್ಯವಿರುವ ಡೊಮಿನಿಯನ್ ರಾಷ್ಟ್ರಗಳೂ ಚಕ್ರಾಧಿಪತ್ಯದಿಂದ ಕಳಚಿಕೊಳ್ಳುವುದಕ್ಕೆ ಹವಣಿಸುತ್ತಿಲ್ಲವೇ? ಕೆನಡಾ ರಾಜ್ಯಕ್ಕೂ, ಅಮೇರಿಕ ಸಂಯುಕ್ತ ಸಂಸ್ಥಾನಕ್ಕೂ ಇರುವಷ್ಟು ಮಿತ್ರತೆ ಇಂಗ್ಲೆಂಡಿಗೂ ಅದಕ್ಕೂ ಇಲ್ಲ. ಈ ತರಹದ ಮಿತ್ರತ್ವವು ನಾಳೆ ರಾಜಕೀಯ ದೃಷ್ಟಿಯಲ್ಲೂ ಪರಿಣಾಮವಾಗುವುದೇನೂ ಅಸಾಧ್ಯವಲ್ಲ! ಯುದ್ಧವಾಗುವುದೇ ಸಿದ್ಧವಾದರೆ ಬ್ರಿಟಿಷ್ ಚಕ್ರಾಧಿಪತ್ಯವು ಉಳಿಯುವುದೇ ಸಂದೇಹ.

ಕಡೇ ನುಡಿ.

ಇನ್ನು ಹಲವು ಸೂಚನೆಗಳುಂಟು. ಬ್ರಿಟಿಷ್ ಚಕ್ರಾಧಿಪತ್ಯದಲ್ಲಿರುವ ರಾಷ್ಟ್ರಗಳೆಲ್ಲಾ ಒಂದುಗೂಡಿ ಒಂದು ಕೇಂದ್ರ ಶಾಸನ ಸಭೆಯನ್ನು ನಿರ್ಮಾಣಮಾಡಬೇಕೆಂದೂ, ಅವುಗಳಲ್ಲೊಂದು ಪರಿಣಾಮದಲ್ಲಿ—ಇದು ಸಾಧನೆಯಾದರೆ—ಎರಡರಲ್ಲೊಂದಾಗಬೇಕು; ಇಲ್ಲವೇ ಬಳಿಯರು ಪ್ರ

ಅಂತರ ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಬ್ರಿಟನು ದಿನೇ ದಿನೆ ತನ್ನ ಪ್ರತಿಷ್ಠೆಯನ್ನು ಕಳೆದುಕೊಳ್ಳುತ್ತಿರಲು ಅದು ವಿವಿಧ ರಾಷ್ಟ್ರಗಳ ಸಖ್ಯತೆಯನ್ನು ಪಡೆದು ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಯತ್ನಿಸುವದು ನ್ಯಾಯವೆ. ಅಂತೆಯೇ ಅದು ರಷ್ಯಾದೊಡನೆ ಸ್ನೇಹವನ್ನು ಬೆಳೆಸಲು ಪ್ರಯತ್ನಿಸುತ್ತಿರುವದಾದರೂ ಎಲ್ಲರಿಗೂ ತಿಳಿದಿದೆ. ಈ ವಿಚಾರ ಮುಂದರಿಸುವ ಮೊದಲು ಈಗಿನ ಒಪ್ಪಂದಗಳ ವಿಚಾರ ಎರಡು ಮಾತು ಬರೆಯದೆ ತೀರದು. ಇಡೀ ಜಗತ್ತನ್ನೇ ನಾಶಪಡಿಸಬಹುದಾದ ಒಂದು ಯುದ್ಧವು ಅನಿವಾರ್ಯವೆಂದು ಎಲ್ಲಾ ರಾಜಕೀಯ ಮುತ್ಸದ್ದಿಗಳಿಗೂ ತಿಳಿದಿದೆ. ಆದ ಪ್ರಯುಕ್ತ ಸಾಧ್ಯವಿದ್ದಷ್ಟು ಮಟ್ಟಿಗೆ ಯುದ್ಧವನ್ನು ಮುಂದೂಡುವ ಒಂದೇ ಒಂದು ಉಪಾಯವೆಂದರೆ ಒಪ್ಪಂದವೆಂದು ಈ ಧುರೀಣರು ತಿಳಿದುಕೊಂಡಿದ್ದಾರೆ. ಈ ಒಪ್ಪಂದಗಳಲ್ಲಿ ಎರಡು ವಿಧ. ಒಂದು, ಅಬಲರು ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಸಬಲರನ್ನು ಮರೆಹೊಕ್ಕು ಅವರ ಸಖ್ಯವನ್ನು ಬಿಕ್ಕಟ್ಟಿನ ಸಂದರ್ಭದಲ್ಲಿ ಉಪಯೋಗಿಸಿಕೊಳ್ಳಲು ಕಾದಿಟ್ಟುಕೊಳ್ಳುವದು. ಮತ್ತೊಂದು ತಮ್ಮ ಶಕ್ತಿಯ ಸಂಘಟನೆಯಾಗುವ ವರೆಗೆ, ಶತ್ರುಗಳನ್ನು ನಿರಾತಂಕವಾಗಿ ಸದೆಬಡಿದೇವೆಂಬ ನಂಬಿಕೆ ಬರುವ ವರೆಗೆ ಪರಸ್ಪರರಲ್ಲಿ ಸಣ್ಣ ಪುಟ್ಟ ಶರ್ತಗಳನ್ನಿಟ್ಟುಕೊಂಡು ಸಖರಂತೆ ನಟಿಸಿಕೊಳ್ಳುವದು. ಇದು ಇಂದಿನ ಒಪ್ಪಂದಗಳಲ್ಲಿರುವ ಎರಡು ಧ್ಯೇಯಗಳು. ಇಂದಿನ ರಾಜಕೀಯ ಪಟುಗಳು, ಅಥವ ಮುಖಂಡರು ಈ ಎರಡನೇ ತರಗತಿಗೆ ಸೇರಿದವರೆನ್ನಬಹುದು.

ಪಂಚಮ ಬಣ್ಣದ ಜನರ ಮೇಲೆ ಸವಾರರಾಗಿ ಶಾಸ್ವತಗೊಳ್ಳಬೇಕು. ಅಲ್ಲದಿದ್ದರೆ ಬ್ರಿಟಿಷ್ ಚಕ್ರೇಶ್ವರತ್ವವು ಭಾರತದಿಂದಲೂ, ಪ್ರಪಂಚದ ಇತರ ಬ್ರಿಟಿಷ್ ಕಾಲೊನಿಗಳಿಂದಲೂ ಮಾಯವಾಗಿ ಸರ್ವಸ್ವತಂತ್ರ ಸಂಯುಕ್ತ ರಾಜ್ಯಾಂಗ ಘಟನೆಯೊಂದಾಗಬೇಕು. ಕಡೆಯ ಭಾವನೆಯೇ ಕೈಗೂಡುವ ಸಂದರ್ಭದಲ್ಲಿ ಭರತ ಖಂಡಕ್ಕೆ ಅಪಾರವಾದ ಪ್ರಕೃತಿ ಸಂಪತ್ತು ಮತ್ತು ಸಂಖ್ಯಾ ಬಲದಿಂದ ಅಂತಹ ಘಟನೆಯಲ್ಲಿ ಅಗ್ರ ಪೂಜೆ ಸಿಕ್ಕಬೇಕಾದೀತು. ಇದು ಇತರ ರಾಷ್ಟ್ರಗಳವರಿಗೆ ಇಷ್ಟವಾಗಬಹುದು. ಅನಿಷ್ಟವಾಗಿ ಬೇಕಾದರೂ ಪರಿಣಮಿಸಬಹುದು. ಏನೇ ಆಗಲಿ, ಭರತ ಖಂಡವು ಇನ್ನೂ ಬ್ರಿಟಿಷ್ ಚಕ್ರಾಧಿಪತ್ಯದಲ್ಲೇ ಇರುವ ವಿಚಾರದ ಯೋಚನೆಯನ್ನು ಇಟ್ಟುಕೊಳ್ಳಬಾರದು. ಅಲ್ಲದೆ ಯಾವ ಸಂಕುಚಿತ ಪ್ರಜಾಪತ್ಯದಲ್ಲೂ ಭಾಗಿಯಾಗುವ ಯೋಚನೆ ಮಾಡಲಾರದು. ಇಂದು ನಮ್ಮ ಕಣ್ಣೆದುರಿಗೇ ದಕ್ಷಿಣ ಆಫ್ರಿಕದಲ್ಲಿ ನಮ್ಮ ಸೋದರರಿಗೂ ಕೊಡುತ್ತಿರುವ ಮರ್ಯಾದೆಗಳನ್ನು ಕಂಡೂ ಕಂಡೂ ಇಂತಹ ಒಂದು ರಾಜ್ಯಾಂಗ ವಿಧಾನದಲ್ಲಿ ಇನ್ನೂ ಭಾಗಿಗಳಾಗಿರೆಂದು ಯಾರಾದರೂ ಹೇಳಲು ಬಂದರೆ ಅದೂ ಶುದ್ಧ ಅವಮಾನ.

'ವಿ. ಕ.'

ಪರರಾಷ್ಟ್ರಗಳ ಪರಿಸ್ಥಿತಿ.

ಪ್ರಕೃತ ಬ್ರಿಟನ್ ಫ್ರಾನ್ಸ್‌ಗಳು ರಷ್ಯಾದೊಡನೆ ಮಾಡಲು ಬಯಸುತ್ತಿರುವ ಒಪ್ಪಂದವಾದರೂ ಎರಡನೆಯ ತರಗತಿಗೇ ಬರುವದೇನೂ? ಈ ವ್ಯವಹಾರವು ಪ್ರಾರಂಭವಾಗಿ ಅನೇಕ ತಿಂಗಳುಗಳೇ ಕಳೆದವು. ಬ್ರಿಟನರು ತಮ್ಮ ಸೂಚನೆಗಳು ನ್ಯಾಯಸಮರ್ಪಕವಿವೆಯೆಂದು ಘೋಷಿಸಿದರೂ ರಷ್ಯಾವು ಅದನ್ನು ಅಂಗೀಕರಿಸಿರುವದಿಲ್ಲ. ಒಂದು ಕಾಲಕ್ಕೆ ರಷ್ಯನರನ್ನು ಕಡೆಗಣ್ಣಿನಿಂದ ಸಹ ನೋಡದೆ ಅಸ್ಪೃಶ್ಯರಂತೆ ದೂರವಿರಿಸಿದ್ದ ಬ್ರಿಟನು ಇಂದು ತಾನೇ ಅದರ ಕಾಲಿಗೆ ಬೀಳಲು ಪ್ರಯತ್ನಿಸುತ್ತಿರುವದಾದರೂ ಸಂಶಯಾಸ್ಪದವಲ್ಲವೇ? ಬ್ರಿಟನು ಮತ್ತು ಫ್ರಾನ್ಸು, ರೊಮೇನಿಯಾ ಮತ್ತು ಪೋಲೆಂಡುಗಳ ಸ್ವಾತಂತ್ರ್ಯತೆಯನ್ನು ಕಾಯಲು ಒಪ್ಪಿಗೆ ಕೊಡಬೇಕೆಂದು ರಷ್ಯಾವನ್ನು ಕೇಳುತ್ತಿವೆ. ಆದರೆ ಪೋಲೆಂಡ್ ಮತ್ತು ರೊಮೇನಿಯಾಕ್ಕೆ ಬ್ರಿಟನ್ ಮತ್ತು ಫ್ರಾನ್ಸು ಮಧ್ಯೆ ಇರುವ ಸರ್ವಾಧಿಕಾರಿಗಳನ್ನು ದಾಟಿ ಸಹಾಯ ಮಾಡುವ ಸಂಭವ ಕಡಿಮೆ. ಆದ್ದರಿಂದ ಒಪ್ಪಂದಕ್ಕೆ ಸಹಿ ಮಾಡಿದರೆ ರಷ್ಯಾವು ಆ ರಾಷ್ಟ್ರಗಳನ್ನು ರಕ್ಷಿಸುವ ಭಾರವನ್ನು ತಾನೇ ಹೊರಬೇಕಾಗುವದು. ರಷ್ಯಾವು ತಾನು ಬಾಲ್ಟಿಕ್ ರಾಷ್ಟ್ರಗಳಿಗೆ ಕೊಟ್ಟಿರುವ ಭರವಸೆಯಂತೆ ಬಿಕ್ಕಟ್ಟಿನ ಸಮಯದಲ್ಲಿ ಅವುಗಳ ರಕ್ಷಣಾಭಾರವನ್ನು ಹೊರಬೇಕಾಗುವದು. ಇಲ್ಲಿ ಒಂದು ಕಡೆ ರೊಮೇನಿಯಾ, ಪೋಲೆಂಡುಗಳಿಗೆ ತನ್ನ ಶಕ್ತಿಯನ್ನು ವಿನಿಯೋಗಿಸಿ ಇತ್ತ ಬಾಲ್ಟಿಕ್ ರಾಷ್ಟ್ರಗಳಿಗೆ ವಿಪತ್ತು ಬಂದಾಗ ತಾನು ಸಹಾಯ ಮಾಡಲಾರದೆ ನಿಶಕ್ತನಾಗಿ ಉಳಿದು ವಿಶ್ವಾಸಘಾತಕ ಮಾಡಿಕೊಳ್ಳುವದು ರಷ್ಯಾಕ್ಕೆ ಒಪ್ಪಿಗೆ ಇಲ್ಲ. ಇತ್ತ ಬ್ರಿಟನ್ ಫ್ರಾನ್ಸ್‌ಗಳು ಬಾಲ್ಟಿಕ್ ಪ್ರಾಂತದ ರಾಷ್ಟ್ರಗಳನ್ನು ರಕ್ಷಿಸುವ ಭಾರವನ್ನು ವಹಿಸುವಂತಿಲ್ಲ. ಅಂತು ಆಂಗ್ಲೊ-ರಷ್ಯನರ ಒಪ್ಪಂದ ಯಾವ ಕಾಲಕ್ಕೆ ಆಗಬಹುದೆಂದು ಹೇಳುವದು ಕಷ್ಟವಾಗಿದೆ. ಹೀಗೆ ಮಾತಿನ ಮಲ್ಲತನದಲ್ಲಿಯೇ ಮುಗಿದರೂ ಮುಗಿಯಬಹುದು.

ಜರ್ಮನಿ-ಇಟಲಿ.

ಇವುಗಳೊಳಗೊಂದು ಒಪ್ಪಂದವಾಗಿ 'ರೋಮ್-ಬರ್ಲಿನ್ ಆಕ್ಸಿಸ್' ಎಂಬ ಹೆಸರಿನಿಂದ ಜಗತ್ತನ್ನೇ ತಲ್ಲಣಿಸುತ್ತಿದೆ. ಒಂದು ಕಾಲಕ್ಕೆ ಈ ರಾಷ್ಟ್ರಗಳು ಬದ್ಧ ವೈರಿಗಳಾಗಿದ್ದವು. ಇಟಲಿಯು ಫ್ರಾನ್ಸಿನೊಡನೆ ಬಹು ಸ್ನೇಹದಿಂದಿತ್ತು. ಆದರೆ ಹಿಟ್ಲರನಿಗೆ ಈ ಎರಡು ರಾಷ್ಟ್ರಗಳು ಸಖ್ಯದಿಂದಿರುವುದನ್ನು ಸಹಿಸಲಾಗಲಿಲ್ಲ. ಆದ್ದರಿಂದ ಇಟಲಿಯೊಡನೆ ಮಾತುಕತೆ ನಡೆಸಿ, ಇಟಲಿಯನ್ನು ಮರಳು ಮಾಡಿ ಅದರೊಡನೆ ಸ್ನೇಹ ಮಾಡಿಕೊಂಡನು. ಈ ಸ್ನೇಹದಿಂದ ಅವನಿಗೆ ಅವರ್ಣನೀಯವಾದ ಜಯಲಾಭಗಳಾಗಿವೆ. ಈ ಸಖ್ಯವಾದೊಡನೇ ಜಗತ್ತಿನ ಬಲಾಬಲಗಳನ್ನು ತಿಳಿಯಲು ಇಟಲಿಯನ್ನು ಅಬಿಸೀನಿಯಾದ ಮೇಲೆ ಕೈ ಮಾಡಲು ಪ್ರೇರೇಪಿಸಿದನು. ಅಂತೆಯೇ ಯುದ್ಧವು ಪ್ರಾರಂಭವಾಯಿತು. ಹಿಟ್ಲರನು ತಟಸ್ಥನಾಗಿ ಉಳಿದು ಜಗತ್ತಿನ ಚಲನವಲನಗಳನ್ನೀಕ್ಷಿಸಿದನು. ಬ್ರಿಟನು ಆಧುನಿಕ ಯುದ್ಧೋಪಕರಣಗಳಿಂದ ಸಿದ್ಧವಿಲ್ಲವೆಂದು ಅರಿತುಕೊಂಡನು. ಫ್ರಾನ್ಸು ಬ್ರಿಟನರ ವ್ಯತಿರಿಕ್ತ ಯಾವ ಕೆಲಸಕ್ಕೂ ಕೈ ಹಾಕದೆಂದು ಅರಿತುಕೊಂಡನು. ಮುಂದಿನ ಧಾಳಿ ಮಾಡಿದರೆ ಮಧ್ಯಯೂರೋಪದಲ್ಲಿ ತನ್ನನ್ನು ಬಗ್ಗು ಬಡಿಯುವರಿಲ್ಲೆಂದು ಮನಗಂಡನು. ಇವನ್ನೆಲ್ಲಾ ತಿಳಿದ ಹಿಟ್ಲರನು ಕಾಲಾಗಲೇ ಕಬ್ಬಿಣವನ್ನು ಬಡಿಯಬೇಕೆಂದು ನಿಶ್ಚಯಿಸಿದನು. ಪ್ರಥಮತಃ ವಾರ್ಸೇಲ್ಸ್ ಒಪ್ಪಂದವನ್ನು ಮುರಿದನು. ಫ್ರಾನ್ಸಕ್ಕೆ ಸೇರಿಸಲ್ಪಟ್ಟ ಜರ್ಮನಿಯ ಭಾಗಗಳನ್ನಾಕ್ರಮಿಸಿದನು. ಆಗಲೂ ಮುಂದೆ ಭಯಂಕರ ಯುದ್ಧವಾಗದೆಂಬ ಗುಂಗಿನಲ್ಲಿದ್ದ ಬ್ರಿಟನು ಮತ್ತು ಫ್ರಾನ್ಸು ಜರ್ಮನಿಯನ್ನು ಎಚ್ಚರಿಸುವ ಗೋಜಿಗೆ ಹೋಗಲಿಲ್ಲ. ಇದರಿಂದ ಆತನಿಗೆ ಹುರುಪೇರಿ ಸಣ್ಣ ಪುಟ್ಟ ರಾಷ್ಟ್ರಗಳನ್ನು ಸರ್ತಿ ಪ್ರಕಾರ ಕಬಳಿಸತೊಡಗಿದನು. ಇತ್ತ ಬ್ರಿಟನಿನ ಪ್ರಧಾನ ಚೇಂಬರ್ಲೇನರು ಸಣ್ಣ ಪುಟ್ಟ ರಾಷ್ಟ್ರಗಳ ಗೆಳೆತನ ಮಾಡತೊಡಗಿದ್ದಾರೆ. ರಷ್ಯಾದ ಸಖ್ಯಕ್ಕೆ ಸಗರ ಪ್ರಯತ್ನ ಮಾಡುತ್ತಿದ್ದಾರೆ. ಕೇವಲ ಸ್ವಾರ್ಥಕ್ಕಾಗಿ ಒಪ್ಪಂದ ಮಾಡಿಕೊಳ್ಳಲು ರಷ್ಯಕ್ಕೆ ಇಷ್ಟವಿಲ್ಲ. ತಮ್ಮನ್ನು ನಂಬಿದ ರಾಷ್ಟ್ರಗಳನ್ನು ರಕ್ಷಿಸುವೆವೆಂಬ ನೈತಿಕ ದೃಷ್ಟಿಯು ಬ್ರಿಟನಿಗಿಲ್ಲ.

ಹಿಟ್ಲರನು ಅತ್ತ ಕಡೆ ಇಟಲಿಯ ಸೈನಿಕರನ್ನೆಲ್ಲಾ ನಾರ್ಥು ಪತ್ತದಂತೆ ತರಬೇತುಗೊಳಿಸಬೇಕೆಂದೂ, ಆ ಬಗ್ಗೆ ಸರ್ವಾಧಿಕಾರಿಗಳಲ್ಲಿ ಐಕ್ಯತೆ ಇರಬೇಕೆಂದೂ ಪ್ರಯತ್ನಿಸುತ್ತಿದ್ದಾನೆ. ಇದು ಇಟಲಿಯನರಿಗೆ ಅಸಮಧಾನವನ್ನುಂಟುಮಾಡಿದೆ. ಮುಸಲೋನಿಗೆ ಹಿಟ್ಲರನನ್ನು ಉಲ್ಲಂಘಿಸಿ ವರ್ತಿಸುವ ಶಕ್ತಿ ಸಾಲದು. ಆದ್ದರಿಂದ ತಟಸ್ಥನಾಗಿದ್ದಾನೆ. ಮುಸಲೋನಿಯು ಆಡಿ ಮಾಡುವವನಾದರೆ ಹಿಟ್ಲರನು ಆಡದೆ ಮಾಡುವವನು. ಆದ್ದರಿಂದ ಇಟಲಿಯಲ್ಲಿ ತನ್ನ ಪ್ರತಿಷ್ಠೆ ನಡೆಯಬೇಕೆಂದು ಹಿಟ್ಲರನು ಪ್ರಯತ್ನಿಸುವುದಾದರೆ ರೋಮ್-ಬರ್ಲಿನ್ ಸಖ್ಯವು ಮುರಿದು ಬೀಳದಿರದು. ಆಗ ಮಾತ್ರ ಜಗತ್ತಿನಲ್ಲಿ ಒಂದು ಹೊಸ ಜೀವನ ಯಾ ಹುರುಪು ಉಂಟಾಗಬಹುದು.

ಝೆಕ್ಕರ ವಿಷಮ ಪರಿಸ್ಥಿತಿ.

ಝೆಕ್ಕರನ್ನು ತಮ್ಮ ಕರಾಳಶಾಸನಗಳ ಹಿಡಿತದಿಂದ ಅಂಕೆಯಲ್ಲಿಟ್ಟುಕೊಂಡಿರುವರೆಂದು ಹಿಂದೆ ಬರೆದಿದ್ದೆವು. ಆದರೂ ಮೊನ್ನೆ ಮೊನ್ನೆ ಜರ್ಮನ್ ಪೋಲೀಸ್ ಆಫೀಸರನೊಬ್ಬನು ಝೆಕ್ಕರಿಂದ ಕೊಲೆ ಮಾಡಲ್ಪಟ್ಟಿರುವನು. ಇದರ ಪರಿಣಾಮವಾಗಿ ಅಲ್ಲಿ ಉಗ್ರ ಶಾಸನಗಳು ತಲೆಯೆತ್ತಿವೆ. ಕೊಲೆಯಾದ ಕಾಪೋನ ಎಂಬ ಸ್ಥಳದಲ್ಲಿಯ ಮುನ್ಸಿಪಲ್ ಕೌನ್ಸಿಲರನ್ನು ತೆಗೆದು ಹಾಕಿ ಝೆಕ್ ಪೋಲೀಸರ ಆಯುಧಗಳನ್ನು ಕಿತ್ತುಕೊಂಡಿರುವದಲ್ಲದೆ ಅರ್ಧ ಮಿಲಿಯ ಝೆಕ್ ಕ್ರೌನ್‌ಗಳ ದಂಡವನ್ನು ವಿಧಿಸಿದ್ದಾರೆ. ಇಷ್ಟರಲ್ಲೇ ನಿಲ್ಲದೆ ದಿನದಿನಕ್ಕೆ ಹೊಸ ಹೊಸ ಶಾಸನಗಳಾಗುತ್ತಿವೆ. ಇಂಥಾ ಹಲವು ನಿಬಂಧನೆಗಳು ಜಾರಿಗೆ ಬಂದು ಕಡಗೆ ಬೊಹೇಮಿಯಾ ಮತ್ತು ಮೊರೆವಿಯಾ ಪ್ರಾಂತಗಳು ಹಿಟ್ಲರನ ವಶವಾಗಬಹುದೊ? ಎಂಬ ಭೀತಿಯು ತಲೆದೋರಿದೆ. ಝೆಕ್ಕರ ಕೈಗಾರಿಕೆ ಕಾರ್ಖಾನೆಗಳೂ, ಯುದ್ಧ ತಯಾರಕ ಮಿಶಿನುಗಳೂ ಜರ್ಮನರ ಅಧೀನವಾಗಿವೆ.

ಡೇನ್ಝಿಗ್

ಒಂದು ಕಡೆ ಹಾಗೆ ಹಾವಳಿ ನಡೆಯುತ್ತಿದ್ದರೆ ಇತ್ತ ಪೋಲೇಂಡಿನ ಡೇನ್ಜಿಗ್ ಪ್ರಾಂತದ ಕಡೆ ಅನೇಕ ಜರ್ಮನರು ವಿಹಾರಕ್ಕೆಂದು ಹೊರಟಿರುವರು. ಅದರೊಡನೆ ಒಂದು ಹಡಗವೂ ಹೊರಟಿರುವದು. ಜರ್ಮನರ ಪ್ರಚಾರ ಮಂತ್ರಿ ಡಾ ಗೊಬೆಲ್ಸ್‌ರವರೂ ಅತ್ತ ಸಾಗುವರಂತೆ. ಇದು ಒಂದು ಸಂಶಯಾಸ್ಪದವ ಯಾತ್ರೆಯೇ ಆಗಿದೆ. ಪೋಲೇಂಡಿನವರು ಸಂಶಯಪಟ್ಟು ಇವನ್ನು ವಿರೋಧಿಸಿದರೆ ಅಲ್ಲಿ ಏನಾದರೊಂದು ಗಲಾಟೆ ಸಂಭವಿಸದಿರದು. ಇದು ಡೇನ್ಜಿಗ್ಗನ್ನು ತನ್ನ ವಶಪಡಿಸಿಕೊಳ್ಳಲು ಯತ್ನಿಸುತ್ತಿರುವ ಹಿಟ್ಲರನ ಪೂರ್ವ ಪೀಠಿಕೆಯೋ ತಿಳಿಯದು. ಅಂತು ಪೋಲೇಂಡಿನವರು ಇವರನ್ನು ಸಂಶಯದಿಂದ ತಡೆದರೆ ಅವರಲ್ಲಿ ಕಲಹವಾಗಿ ಜಗತ್ತಿನ ಶಾಂತಿಗೆ ಧಕ್ಕೆ ಬರಬಹುದಾಗಿದೆ.

ಪಾಲೆಸ್ಟೈನದಲ್ಲಿ ಬ್ರಿಟಿಷರ ದಬ್ಬಾಳಿಕೆ

ಹಸಿವೆಯಿಂದ ಕಂಗೆಟ್ಟು, ಬಳಲಿ, ಬೆಂಡಾಗಿ, ಹೊಟ್ಟೆಗೆ ಬೇಕೆಂದು ಕೂಗಾಡುತ್ತಿರುವ ಜನರ ಮುಂದೆ ಹೊಟ್ಟೆ ತುಂಬಿದ ಜನರು ನಿಂತು ಹುಡುಗಾಟ ಮಾಡಿದರೆ ನಿಮಗೆ ಏನೆನಿಸಬಹುದು? ನಿಮಗಿಂತಲೂ ಹೆಚ್ಚಾದ ಹಸಿವೆಯಿಂದ ಬಳಲುವ ಜನರಿಗೆ ಏನೆನಿಸಬಹುದು? ನೀವೇ ಸ್ವಲ್ಪ ಹೊತ್ತು ವಿಚಾರ ಮಾಡಿರಿ.

ಈ ಪರಿಸ್ಥಿತಿಯನ್ನು ವರ್ಣಿಸುವುದಕ್ಕಿಂತಲೂ ಅನುಭವಿಸುವದು ಲೇಸು. ಪಾಲೆಸ್ಟೈನದ ಪರಿಸ್ಥಿತಿಯಾದರೂ ಹೀಗೆಯೇ ಆಗಿದೆ. ಬಡತನ, ನಿರುದ್ಯೋಗ, ಭಯ, ಕಳವಳ ಮೊದಲಾದ ನೂರಾರು ಪೀಡೆಗಳಿಂದ ಅರಬ, ಯಹೂದಿಯರು ಗೋಳಿಡುತ್ತಿದ್ದಾರೆ. ತಮಗೆ ಸ್ವಾತಂತ್ರ್ಯ ಬೇಕೆಂದು ಅರಬರ ಬೇಡಿಕೆ; ತಮ್ಮ ಆಸ್ತಿಪಾಸ್ತಿಗಳು, ಮನೆಮಾರುಗಳು, ಸುರಕ್ಷಿತವಾಗಿರಬೇಕೆಂದು ಯಹೂದಿಗಳ ಹಂಬಲ; ಆದರೆ ಬ್ರಿಟಿಷರು ಮಾತ್ರ ಇವರಿಬ್ಬರನ್ನೂ ತಮ್ಮ ಕೈಯಲ್ಲಿಟ್ಟುಕೊಂಡು ಸೂತ್ರದ ಗೊಂಬೆಗಳಂತೆ ಅವರನ್ನು ಆಡಿಸಹತ್ತಿದ್ದಾರೆ.

ಇಷ್ಟೇ ಅಲ್ಲದೆ ಅರಬ ಯಹೂದಿಗಳಿಬ್ಬರೂ ಚಿರಕಾಲ ಪರಸ್ಪರ ಬಡಿದಾಡುತ್ತಿರುವಂತೆ ಮಾಡಿ ತಮ್ಮ ಅಸ್ತಿತ್ವವನ್ನು ಭದ್ರಪಡಿಸಿಕೊಳ್ಳಬೇಕೆಂಬುದೇ ಅವರ ಧೋರಣವಾಗಿದೆ. ಇದಕ್ಕಾಗಿ ಅವರು ಅರಬ

(6 ನೇ ಪುಟದ 4 ನೇ ಕಾಲಂ ನೋಡಿ.)

ಕೊಡಗು

ಜೂನ್ ತಾರೀಖು ೧೬ ನೇ ಶುಕ್ರವಾರ ೧೯೩೯.

ಗ್ವಾಲಿಯೊರ್ ಸಂಸ್ಥಾನದಲ್ಲಿ ಸುಧಾರಣೆ.

ಉತ್ತರ ಹಿಂದೂಸ್ಥಾನದ ದೊಡ್ಡ ಸಂಸ್ಥಾನಗಳಲ್ಲಿ ಒಂದಾದ ಗ್ವಾಲಿಯೊರಿನ ಮಹಾರಾಜ ಸಿಂಧ್ಯರವರು ಅವರ ಪ್ರಜೆಗಳಿಗೆ ರಾಜಕೀಯ ಸುಧಾರಣೆಯ ಒಂದು ರಚನೆಯನ್ನು ಈಗ ತಾನೇ ಪ್ರಕಟಿಸಿರುವರು. ಅವರ ಪ್ರಕಾರ ಅಲ್ಲಿಯ ಜನರಿಗೆ ಭಾಷಣ ಸ್ವಾತಂತ್ರ್ಯ ಮತ್ತು ವಾರ್ತಾ ಪತ್ರಿಕೆಗಳ ಸ್ವಾತಂತ್ರ್ಯವಿರುವದು. ಮನಸಾಕ್ಷಿಯ ಸ್ವಾತಂತ್ರ್ಯ ಅಂದರೆ ಅವರಿಗೆ ಒಪ್ಪಿದ ಮತವನ್ನನುಸರಿಸಿ ನಡೆಯುವ ಅನುಕೂಲವಿರುವುದು; ಸಂಘಗಳ ಸ್ವಾತಂತ್ರ್ಯ ಇರುವದು; ಆದರೆ ಇದು ಅಲ್ಲಿ ಶಾಂತಿ ಮತ್ತು ಕ್ರಮಕ್ಕಾಗಿ ಮಾಡಲ್ಪಟ್ಟಿರುವ ಕಾನೂನು ಕಾಯಿದೆಗಳಿಗೆ ವಿರುದ್ಧವಿರಕೂಡದು. ಅಲ್ಲಿ ಇಷ್ಟರವರೆಗೆ ಇದ್ದ ಮಜಲಿಸ್-ಐ. ಆಮ್. ಮತ್ತು ಮಜಲಿಸ್-ಐ. ಕಾನೂನು ಎಂಬ ಸಭೆಗಳ ಬದಲು ಇನ್ನು ಮುಂದೆ ಪ್ರಜಾ ಸಭಾ ಮತ್ತು ಸಾಮಂತ ಸಭಾ-ಇವೆರಡು ಸಭೆಗಳು ಸ್ಥಾಪಿಸಲ್ಪಡುವವು. ಇವು ಮೂರು ವರ್ಷಗಳಿಗೊಮ್ಮೆ ಚುನಾಯಿಸಲ್ಪಡುವವು. ಕೆಳಗಿನ ಸಭೆಯಾದ ಪ್ರಜಾ ಸಭೆಯ 85 ಮೆಂಬರುಗಳ ಪೈಕಿ 50 ಜನರು ಚುನಾಯಿಸಲ್ಪಡುವವರು; 35 ಮೆಂಬರುಗಳು ನೇಮಿಸಲ್ಪಡುವವರು; ಇವರ ಪೈಕಿ 15 ಜನರು ಉದ್ಯೋಗಸ್ಥರು. ಮೇಲಿನ ಸಭೆಯಾದ ಸಾಮಂತ ಸಭೆಯಲ್ಲಿ 40 ಮೆಂಬರುಗಳಿರುವರು. ಇವರ ಪೈಕಿ 20 ಜನರು ಚುನಾಯಿತ ಮೆಂಬರುಗಳು. ಉಳಿದ 20 ನೇಮಿತ ಮೆಂಬರುಗಳಲ್ಲಿ 12 ಜನ ಉದ್ಯೋಗಸ್ಥರು. ಈ ಮೆಂಬರುಗಳನ್ನಾರಿಸಲು ಓಟಿನ ಅರ್ಹತೆಯನ್ನು ನಿಶ್ಚಯಿಸುವುದಕ್ಕಾಗಿ ಒಂದು ಫ್ರಾಂಚೈಸ್ ಕಮಿಟಿಯು ನೇಮಿಸಲ್ಪಡುವದು. ಪ್ರಾಯ ಬಂದವರ ಪೈಕಿ ಶೇಕಡ 20ರಷ್ಟು ಜನರಿಗೆ ಓಟಿನ ಹಕ್ಕು ಕೊಡಲ್ಪಡುವದು. ಈ ಸಭೆಗಳಿಗೆ ಪ್ರಶ್ನೆ ಕೇಳಲಿಕ್ಕೂ, ಠರಾವುಗಳನ್ನು ಪಾಸು ಮಾಡಲಿಕ್ಕೂ, ಹೊಸ ಕಾಯಿದೆಗಳನ್ನು ಮುಂದಿಡಲಿಕ್ಕೂ, ಬಡ್ಜೆಟ್ಟಿನ ಮುಖ್ಯ ವಿಷಯಗಳನ್ನು ಚರ್ಚೆ ಮಾಡಲಿಕ್ಕೂ ಹಕ್ಕಿರುವುದು. ಆದರೆ ಬಡ್ಜೆಟ್ಟಿನಲ್ಲಿ ಅರಸರಿಗೆ ಸಮ್ಮಂಧಪಟ್ಟ ಯಾವ ವಿಚಾರದಲ್ಲೂ, ಪರದೇಶಿ, ರಾಜಕೀಯ, ಸೈನ್ಯ, ಮತ ಸಂಬಂಧ ಮತ್ತು ರಾಜಕೀಯ ರಚನಾ ವಿಚಾರಗಳಲ್ಲೂ ಚರ್ಚೆ ಮಾಡಕೂಡದು. ಈ ಸುಧಾರಣೆಯ ರಚನೆಯನ್ನು ಬದಲಾಯಿಸುವ ಯಾ ರದ್ದುಪಡಿಸುವ, ಈ ಸಭೆಗಳು ಮಾಡಿದ ಕಾನೂನುಗಳನ್ನು ಯಾ ತೀರ್ಮಾನಗಳನ್ನು ಅಂಗೀಕರಿಸುವ ಯಾ ತಿರಸ್ಕರಿಸುವ, ಹೊಸ ಕಾನುನುಗಳನ್ನು ಮಾಡುವ ಅಧಿಕಾರವು ಅರಸರಿಗಿರುವದು. ಇವೆರಡು ಸಭೆಗಳ ತೀರ್ಮಾನಗಳನ್ನು ಅರಸರು ಒಪ್ಪಿದ ವಿನಹ ಅವು ಜಾರಿಗೆ ಬರುವಂತಿಲ್ಲ. ಕ್ರಮೇಣ ಅರಸರು ಪ್ರಜಾ ಸಭದ ಮೆಂಬರುಗಳ ಪೈಕಿ ಒಬ್ಬ ಮುಖ್ಯಸ್ಥರನ್ನು ಆಡಳಿತೆಯ ಕೆಲವು ಇಲಾಖೆಯ ಅಧಿಕಾರದಲ್ಲಿರಲು ಮಂತ್ರಿಯಾಗಿ ನೇಮಿಸುವುದು. ದೇಶೀಯರಿಗೆ ಇರಬೇಕಾದ ಕೆಲವು ಮುಖ್ಯ ಹಕ್ಕುಗಳನ್ನು ಈ ರಚನೆಯಲ್ಲಿ ಕೊಟ್ಟಿರುವ ಕಾರಣ ಅವರ ಈ ಹಕ್ಕುಗಳಿಗೆ ವಿರುದ್ಧ ಬರುವಂತ ಈ ಮೊದಲಿನ ಕೆಲವು ಕಾನೂನುಗಳನ್ನು ರದ್ದು ಯಾ ತಿದ್ದುಪಡಿ ಮಾಡಲ್ಪಡುವದು.

ದೇಶದ ಆಡಳಿತೆಯ ವಿಚಾರದಲ್ಲಿ ಜನರು ಭಾಗವಹಿಸಬೇಕೆಂದು ಜನರಲ್ಲಿ ದಿನೇ ದಿನೇ ಬೆಳೆಯುತ್ತಿರುವ ಕಾಂಕ್ಷೆಯನ್ನು ಗಮನಿಸಿ ಈ ಹೊಸ ರಚನೆಯನ್ನು ಕೊಟ್ಟಿರುವದಾಗಿಯೂ, ಕ್ರಮೇಣ ಅವರು ಶಾಂತ ಮತ್ತು ಕಾಯಿದೆಗನುಸಾರ ರೀತಿಯಲ್ಲಿ ತಮ್ಮ ಉದ್ದೇಶವನ್ನು ನೆರವೇರಿಸಲೆಂದೇ ತಮ್ಮ ಅಭಿಲಾಷೆಯಾಗಿದೆಯೆಂದೂ, ಅಲ್ಲಿಯ ಅರಸರು ಈ ರಚನೆಗೆ ಮುನ್ನುಡಿಯನ್ನು ಬರೆದಿರುವರು. ಹಿಂದೂಸ್ಥಾನದ ಆಶ್ರಿತ ಸಂಸ್ಥಾನಗಳು ರಾಜಕೀಯ ಸುಧಾರಣೆಯ ವಿಚಾರದಲ್ಲಿ ಬಹಳ ಮಟ್ಟಿಗೆ ಹಿಂದೆ ಬಿದ್ದಿರುವವೆಂಬುದು ಎಲ್ಲರೂ ತಿಳಿದ ವಿಷಯವಾಗಿದೆ. ಅಲ್ಲಿಯ ಪ್ರಜೆಗಳು ಇತ್ತೀಚೆಗೆ, ಬ್ರಿಟಿಷ್ ಪ್ರಾಂತ್ಯಗಳಲ್ಲಿರುವ ತಮ್ಮ ಸಹೋದರರು ನಡೆಸುತ್ತಿರುವ ಸ್ವಾತಂತ್ರ್ಯ ಹೋರಾಟದಿಂದ ಹುರಿದುಂಬಿದವರಾಗಿ ತಮಗೂ ಪ್ರಜಾ ಜವಾಬ್ದಾರಿ ಸರ್ಕಾರ ಪಡೆಯಲು, ಎಚ್ಚತ್ತು ನಡೆಸಿದ ಚಳವಳವು ಕೆಲವು ಸಂಸ್ಥಾನಾಧಿಪತಿಗಳನ್ನು ಕಣ್ತೆರೆಸಿದೆ. ಅಂಥವರ ಪೈಕಿ ಗ್ವಾಲಿಯೊರಿನ ಮಹಾರಾಜರೊಬ್ಬರಾಗಿರುವರು. ಆದುದರಿಂದಲೇ ಅವರಾಗಿಯೇ ಮುಂದೆ ಬಂದು ತಮ್ಮ ಪ್ರಜೆಗಳಿಗೆ ಈ ತರಹದ ರಚನೆಯನ್ನು ಕೊಟ್ಟಿದ್ದಾಗಿದೆ. ಇನ್ನೂ ಹಲವು ಆಶ್ರಿತ ರಾಜರುಗಳು ತಮ್ಮ ಪ್ರಜೆಗಳ ಹೋರಾಟವನ್ನು ಅಲಕ್ಷ್ಯ ಮಾಡಿರುವದಲ್ಲದೆ, ಕೆಲವು ಸಂದರ್ಭಗಳಲ್ಲಿ ಅದನ್ನು ಅಡಗಿಸಲು ದಬ್ಬಾಳಿಕೆಯನ್ನೂ ಕೂಡ ಕೈಕೊಂಡಿರುವರು. ಈ ದೃಷ್ಟಿಯಿಂದ ಗ್ವಾಲಿಯೊರಿನ ಮಹಾರಾಜರು ಸುಧಾರಣೆಯನ್ನು ಕೊಡಲು ತಾವಾಗಿ ಮುಂದೆ ಬಂದದ್ದು ಯೋಗ್ಯವಾಗಿದೆ. ಆದರೆ ಈ ಸುಧಾರಣೆಯಲ್ಲಿ ಜನರು ಈಗ ನಿರೀಕ್ಷಣೆ ಮಾಡುತ್ತಿರುವಷ್ಟು ಜವಾಬ್ದಾರಿಯು ಅವರಿಗೆ ಕೊಡಲ್ಪಟ್ಟಿರುವದಿಲ್ಲ. ಪ್ರಜೆಗಳಿಗೆ ನ್ಯಾಯವಾಗಿರಬೇಕಾದ ಹಲವು ಸ್ವಾತಂತ್ರ್ಯಗಳು ಅವರಿಗೆ ಕೊಡಲ್ಪಡಬೇಕೆಂದು ಈ ರಚನೆಯಲ್ಲಿ ಸೂಚಿಸಲ್ಪಟ್ಟಿದ್ದರೂ, ಓಟಿನ ಹಕ್ಕಿರುವ ಶೇಕಡ ಜನ ಸಂಖ್ಯೆಯನ್ನು ಬ್ರಿಟಿಷ್ ಪ್ರಾಂತ್ಯಗಳಿಗಿಂತ ಹೆಚ್ಚಿಸಲ್ಪಡುವದಾದರೂ ಅವರು ಕೊಟ್ಟಿರುವ ಎರಡು ಪ್ರಜಾ ಸಭೆಗಳಿಗೆ ನ್ಯಾಯವಾದ ಹಕ್ಕುಗಳನ್ನು ಕೊಡದಿರುವುದು ವ್ಯಸನಕರ. ಅಧಿಕಾರವೆಲ್ಲವೂ ಅರಸರ ಕೈಯಲ್ಲಿಯೇ ಇಡಲ್ಪಟ್ಟಿದೆ. ರಾಜಕೀಯ ರಚನೆಯನ್ನೂ ಕೂಡ ಈ ಎರಡು ಸಭೆಗಳಲ್ಲಿ ಚರ್ಚಿಸಕೂಡದೆಂದಿರುವಾಗ್ಯೆ ಜನರ ಕೋರಿಕೆಯನ್ನು ತಿಳಕೊಳ್ಳುವ ವಿಧಾನವಾದರೂ ಅರಸರಿಗೆ ಬೇರೆ ಯಾವದ್ದಿದೆಯೆಂದು ತಿಳಿಯದ್ದಾಗಿದೆ. ಹ್ಯಾಗೂ ಸಂಸ್ಥಾನಾಧಿಕಾರಿಗಳು ತಮ್ಮ ಪ್ರಜೆಗಳ ಕೋರಿಕೆಗಳನ್ನು ನೆರವೇರಿಸುವ ದಿನಗಳು ಬಹು ದೂರವಾಗಿಲ್ಲ.

ರಾಜಕೀಯ ಸುಧಾರಣೆಯಲ್ಲಿ ಬಹು ಹಿಂದುಳಿದ ಸಂಸ್ಥಾನಗಳ ಅರಸರುಗಳು ಇತ್ತೀಚೆಗೆ ಎಚ್ಚತ್ತು ತಮ್ಮ ಪ್ರಜೆಗಳಿಗೆ ಸಲ್ಲತಕ್ಕ ಹಕ್ಕುಗಳನ್ನು ಕೊಡಲು ಪ್ರಯತ್ನಿಸುತ್ತಿರುವದಾದರೂ ಕೂಡ ಸಂಸ್ಥಾನಗಳಿಗಿಂತ ಬಹು ಮುಂದುವರಿದಿರುವವೆಂದು ಅಂದುಕೊಳ್ಳುತ್ತಿರುವ ಬ್ರಿಟಿಷ್ ಪ್ರಾಂತ್ಯಗಳ ಸ್ಥಿತಿಯು ಉತ್ತಮಗೊಳ್ಳದಿರುವುದು ಶೋಚನೀಯವಾಗಿದೆ. ನಮ್ಮ ಈ ಕೊಡಗು ಬ್ರಿಟಿಷ್ ಪ್ರಾಂತ್ಯವಾಗಿದ್ದು ಇತ್ತೀಚೆಗೆ ಇಲ್ಲಿಗೆ ಹೊಸ ಸುಧಾರಣೆ ಯಾವುದನ್ನೂ ಕೊಡದೆ ಇರುವುದನ್ನು ಎಷ್ಟು ಖಂಡಿಸಿದರೂ ಸ್ವಲ್ಪವೇ. ಇಲ್ಲಿಯ ಜನರೂ ಬೇರೆ ಬ್ರಿಟಿಷ್ ಪ್ರಾಂತ್ಯಗಳಂತೆಯೇ ಸಾಕಷ್ಟು ಎಚ್ಚೆತ್ತುಗೊಂಡು ಚಳವಳವನ್ನು ನಡೆಸಿರುವರು. ರಾಜಕೀಯ ವಿಚಾರದಲ್ಲೂ, ಆಡಳಿತೆಯ ವಿಚಾರದಲ್ಲೂ ತಕ್ಕಷ್ಟು ಮುಂದುವರಿದಿರುವರು. ಆದರೂ ಕೂಡ ಬ್ರಿಟಿಷ್ ಸರಕಾರದವರು ಇಲ್ಲಿಯ ಜನರ ಕೋರಿಕೆಗೆ ಗಮನಕೊಡದಿರುವದು ದೊಡ್ಡ ಅನ್ಯಾಯವಾಗಿದೆ. ಹಿಂದೆ ಬಿದ್ದಿರುವ ಸಂಸ್ಥಾನಾಧಿಪತಿಗಳ ಉದಾಹರಣೆಯನ್ನಾದರೂ ನೋಡಿ ಬ್ರಿಟಿಷ್ ಸರ್ಕಾರದವರು ಕೊಡಗಿಗೆ ನ್ಯಾಯವಾದ ಸುಧಾರಣೆಯನ್ನು ಬೇಗನೆ ಕೊಟ್ಟು ಇಲ್ಲಿಯ ಜನರನ್ನು ಸಮಾಧಾನಪಡಿಸುವರಾಗಿ ಆಶಿಸುತ್ತೇವೆ.

ಪುರೋಗಾಮಿ ಪಕ್ಷ ಸಮರ್ಥನೆಗೆ ಒಂದು ಪತ್ರಿಕೆ.

'ಪಂಜಾಬಿ ಶೇರ್' ಎಂಬ ಹೆಸರಿನ ರಾಷ್ಟ್ರೀಯ ವೃತ್ತಿಯ ಒಂದು ಸಚಿತ್ರ ಪಂಜಾಬಿ ವಾರಪತ್ರಿಕೆಯು ಶೀಘ್ರದಲ್ಲಿಯೇ ಲಾಹೋರದಲ್ಲಿ ಪ್ರಾರಂಭವಾಗತಕ್ಕದದೆ. ಈ ವಾರಪತ್ರಿಕೆಯು ರೈತರ ಪಕ್ಷವನ್ನು ಮಂಡಿಸುವ ಹಾಗೂ ಶ್ರೀ ಸುಭಾಸಚಂದ್ರ ಬೋಸರ ಪುರೋಗಾಮಿ ಪಕ್ಷಕ್ಕೆ ಬೆಂಬಲವನ್ನೀಯುವ ಕಾರ್ಯವನ್ನು ಮಾಡತಕ್ಕದದೆ.

ಪರರಾಷ್ಟ್ರಗಳ ಪರಿಸ್ಥಿತಿ.

(5 ನೇ ಪುಟದಿಂದ ಸಾಗಿದ್ದು.)

ಯಹೂದಿಗಳ ಬಡಿದಾಟವು ದಿನ ದಿನಕ್ಕೆ ಹೆಚ್ಚಾಗಲೆಂದು ಹಾರೈಸುತ್ತಿರುವರೆಂದು ಹೇಳಿದರೂ ಹೇಳಬಹುದು.

ಇರಲಿ, ಈ ಪಾಲೆಸ್ತಾನದ ಸಮಸ್ಯೆಯನ್ನು ಬಿಡಿಸುವುದಕ್ಕಾಗಿ ಅನೇಕ ಯೋಜನೆಗಳನ್ನು ಮಾಡಿ, ನಿರಾಶರಾದ ಬ್ರಿಟಿಷರು ಈಗ ಮತ್ತೊಂದು ಯೋಜನೆಗೆ ಕೈಹಾಕಿದ್ದಾರೆ. ಕಮಿಷನುಗಳು, ಕಮಿಟಿಗಳು, ವಿಭಜನೆಗಳು, ದುಂಡು ಮೇಜಿನ ಪರಿಷತ್ತುಗಳು ಇವೆಲ್ಲವೂ ಆದವು. ಮಾಡಿದ ಯೋಜನೆಗಳೆಲ್ಲವೂ ವಿಫಲವಾದವು. ಒಂದರಿಂದಲೂ ಅರಬ ಯಹೂದಿಗಳಿಗೆ ಸಮಧಾನವಾಗಲಿಲ್ಲ.

ಕೊನೆಗೆ ಈಗ ನಿರ್ವಾಹವಿಲ್ಲದೆ ಸ್ವರಾಜ್ಯದ ಘೋಷಣೆಯನ್ನು ಮಾಡಲಾಗಿದೆ. ಆದರೆ ಘೋಷಣೆಯಲ್ಲಿ ಏನೂ ಅರ್ಥವಿಲ್ಲವೆಂಬದು ಬ್ರಿಟಿಷರ ಶ್ವೇತ ಪತ್ರಿಕೆಯನ್ನು ಅಭ್ಯಾಸ ಮಾಡಿದವರಿಗೆ ತಟ್ಟನೆ ಹೊಳೆಯುವುದು. ಈ ಯೋಜನೆಯು ನಿರುಪಯೋಗಿ ಇರುವದೆಂದು ಯಹೂದಗಳು ಸಾರಿ ಸಾರಿ ಹೇಳಿದ್ದಾರೆ. ಅದನ್ನು ಎಂದಿಗೂ ಮುಟ್ಟುವುದಿಲ್ಲವೆಂದು ಸ್ಪಷ್ಟವಾಗಿ ನುಡಿದಿದ್ದಾರೆ. ಇಷ್ಟೇ ಅಲ್ಲ, ಕೆಲವು ಉಗ್ರ ಗಾಮಿಗಳು ಉಗ್ರ ಚಳವಳಿಯನ್ನು ಸಹ ನಡೆಸಿದ್ದಾರೆ. ಈ ಯೋಜನೆಯು ಪ್ರಸಿದ್ಧವಾದ ಕೂಡಲೇ ಅದನ್ನು ನೋಡಿ ಸಂತೃಪ್ತರಾದ ಯಹೂದಿಗಳು ಶ್ವೇತ ಪತ್ರಿಕೆಯ ಪ್ರತಿಗಳನ್ನು ರಾಶಿ ರಾಶಿಯಾಗಿ ಒಟ್ಟಿ ಅದಕ್ಕೆ ಬೆಂಕಿ ಹಚ್ಚಿದರಂತೆ. ಅರಬರಲ್ಲಿ ಕೆಲವು ಸೌಮ್ಯವಾದಿಗಳನ್ನು ಬಿಟ್ಟು ಉಳಿದವರೆಲ್ಲ ಈ ಯೋಜನೆಯನ್ನು ಪ್ರತಿಭಟಿಸಿದರು.

ಆದರೂ ಬ್ರಿಟಿಷರು ತಮ್ಮ ಹಟವನ್ನು ಬಿಟ್ಟಿಲ್ಲ. ಏನಾದರೂ ಮಾಡಿ ಈ ಸಲ ತಮ್ಮ ಯೋಜನೆಯನ್ನು ಪಾಲೆಸ್ತಾನದ ಮೇಲೆ ಹೇರಿಯೇ ಬಿಡಬೇಕೆಂದು ಅವರ ಹಟ. ಪಾರ್ಲಿಮೆಂಟಿನಲ್ಲಂತೂ ಇದರ ಚರ್ಚೆಯಾಗಿ ಬೆಂಬಲ ದೊರೆತಿದೆ. ಇನ್ನು ಲೀಗ್ ಕೌನ್ಸಿಲಿನ ಒಪ್ಪಿಗೆ ಸಿಗುವದೊಂದು ಉಳಿದಿದೆ. ಅದೊಂದು ಸಿಕ್ಕಿದ ಕೂಡಲೇ ಬ್ರಿಟಿಷರು ತಮ್ಮ ಯೋಜನೆಯನ್ನು ಪಾಲೆಸ್ಥಾನಿನ ಮೇಲೆ ಹೇರುವರು.

ಬ್ರಿಟಿಷರಿಗೆ ಇಷ್ಟೇಕೆ ಹಟ? ಅರಬ-ಯಹೂದಿಗಳಿಬ್ಬರಿಗೂ ಬೇಡಾದ ಯೋಜನೆಯನ್ನು ಒತ್ತಾಯದಿಂದ ಹೇರುವದೇಕೆ? ಇದಕ್ಕೆ ಕಾರಣಗಳಿಲ್ಲವೆ ಇಲ್ಲ. ಪಾಲೆಸ್ಥಾನವು ಒಂದು ಆಯಕಟ್ಟಿನ ಸ್ಥಳದಲ್ಲಿದೆ. ಬ್ರಿಟಿಷ್ ಸಾಮ್ರಾಜ್ಯದ ರಕ್ಷಣೆಯಾಗಬೇಕಾಗಿದ್ದರೆ, ಪಾಲೆಸ್ಥಾನವು ಬ್ರಿಟಿಷರ ಕೈಯೊಳಗಿರುವದು ಅತ್ಯಂತ ಆವಶ್ಯವಾಗಿದೆ. ಅದರಲ್ಲಿಯೂ ಇತ್ತೀಚೆಗೆ ನಾಝಿ ಜರ್ಮನರು ಫಾಸ್ಟ್ ಇಟಾಲಿಯನರು, ಸೀರಿಯಾ, ತುರ್ಕಸ್ಥಾನ, ಪಾಲೆಸ್ಥಾನ, ಇರಾಣ, ಇರಾಕ, ಪರ್ಶಿಯಾ ಮೊದಲಾದ ದೇಶಗಳಲ್ಲಿ ಬ್ರಿಟಿಷರ ವಿರುದ್ಧ ಚಳವಳ ನಡೆಸಿರುವದರಿಂದ ಬ್ರಿಟನು ಗಾಬರಿಗೊಂಡಿದೆ. ಅದಕ್ಕಾಗಿಯೇ ಈ ಒತ್ತಾಯ, ಈ ದಬ್ಬಾಳಿಕೆ.

ವರ್ತಮಾನ ಸಂಗ್ರಹ.

ಒಳದೇಶ.

ಸೆಂಟ್ ಎಲೋಯಿಸಿಯಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀ ಕುಂಬೆರ ಪೂವಯ್ಯನವರು ಬಿ. ಎ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ಪ್ರಕಟಿಸಿದ್ದೆವು. ಇವರು ಇದೇ ಕಾಲೇಜಿನಲ್ಲಿ 1 ನೇಯವಾಗಿ ಪಾಸಾಗಿರುವರೆಂದೂ, ಇಂಟರ್‌ಮೀಡಿಯೇಟಿನಲ್ಲೂ 1ನೇಯದಾಗಿ ಪಾಸಾಗಿದ್ದರೆಂದೂ ತಿಳಿಸಲು ಸಂತೋಷಪಡುತ್ತೇನೆ.

ಮೂರ್ನಾಡಿನ ಆಸ್ಪತ್ರೆಯಲ್ಲಿ ಸಬ್ ಅಸಿಸ್ಟೆಂಟ್ ಸರ್ಜನರಾಗಿದ್ದ ಮೆ. ಚೇರಂಡ ಅಚ್ಚಯ್ಯನವರು ಈ ತಾ. 22 ರಲ್ಲಿ ರಿಟಯರಾಗುವುದರಿಂದ ಅವರ ಖಾಯಂ ಖಾಲಿ ಸ್ಥಳಕ್ಕೆ ಸಬ್ ಅಸಿಸ್ಟೆಂಟ್ ಸರ್ಜನ್ ಎ. ಪಿ. ವೆಂಕಟಸುಬ್ಬಯ್ಯನವರು ವೀರಾಜಪೇಟೆ ಆಸ್ಪತ್ರೆಗೂ, ಅಸಿಸ್ಟೆಂಟ್ ಸರ್ಜನ್ ಕೋದಂಡ ಕಾರ್ಯಪ್ಪನವರು ರಜೆಯಲ್ಲಿರುವುದರಿಂದ ಅವರ ಬದಲು ಮೆ. ಪಟ್ಟಮಾಡ ಪಿ. ಅಪ್ಪಚ್ಚುರವರು ಮೂರ್ನಾಡಿಗೆ ಸಬ್ ಅಸಿಸ್ಟೆಂಟ್ ಸರ್ಜನರಾಗಿಯೂ ನೇಮಿಸಲ್ಪಟ್ಟಿರುವರು.

ವರ್ಧಂತಿಯ ಬಿರುದು.

ಈ ತಾರೀಕು 8ನೇ ಗುರುವಾರ ನಡೆದ ಇಂಡಿಯಾ ಚಕ್ರವರ್ತಿಯವರ ವರ್ಧಂತಿ ಉತ್ಸವದಲ್ಲಿ ಕೊಡಗಿನವರಾದ ಮದ್ರಾಸು ಪೊಲೀಸು ಅಸಿಸ್ಟೆಂಟ್ ಕಮಿಷನರಾದ ರಾವ್ ಸಾಹೇಬ್ ಪೆನ್ಮಂಡ ಪೊಣ್ಣಪ್ಪನವರಿಗೆ 'ರಾವ್ ಬಹದೂರ್' ಬಿರುದೂ, ಮೆಟ್ಟೂರಿನಲ್ಲಿ ಎಗ್ಸಿಕ್ಯೂಟಿವ್ ಇಂಜಿನೀಯರಾದ ಶ್ರೀ ಪಟ್ಟಮಾಡ ಯಂ. ಚಂಗಪ್ಪನವರಿಗೆ 'ರಾವ್ ಸಾಹೇಬ್' ಬಿರುದೂ ದೊರಕಿರುವದು.

ಮಡಿಕೇರಿ.

ಇಲ್ಲಿ ಮಳೆ ಚೆನ್ನಾಗಿ ಪ್ರಾರಂಭವಾಗಿದೆ. ತಾರೀಕು 10 ರಿಂದ ಇಂದಿನ ವರೆಗೆ ಇಲ್ಲಿ 4 ಇಂಚು 1 ಸೆಂಟು ಮಳೆ ಬಿದ್ದಿದೆ.

ಇಲ್ಲಿ ಕಾಫಿ ಖಂಡಿಗೆ ರೂ. 125 ಯಾಲಕ್ಕಿ ಮಣಕ್ಕೆ ರೂ. 25 ಕ್ರಯವಿರುತ್ತೆ.

1937-38ನೇ ವರ್ಷದ ಕೊಡಗು ಸಹಕಾರಿ ಸಂಘಗಳ ಆಡಳಿತ ವರದಿಯನ್ನು ಆದರದಿಂದ ಸ್ವೀಕರಿಸಿರುವೆವು.

ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು ಈ ತಾ. 29 ರಲ್ಲಿ ನಡೆಯುವದೆಂದು ತಿಳಿಯಬರುತ್ತದೆ.

ಕಮಿಷನರವರು ಈ ತಾ. 16 ರಲ್ಲಿ ಮಡಿಕೇರಿಯಿಂದ ವೀರಾಜಪೇಟೆಗೆ ಹೋಗಿ, ಅಲ್ಲಿ ತಾ. 21 ರ ವರೆಗೆ ಉಳಿದು, ತಾ. 22 ರಲ್ಲಿ ಪೊನ್ನಂಪೇಟೆಕ್ಕೆ ಹೋಗಿ ಅಲ್ಲಿ ತಾ. 29 ರ ವರೆಗೆ ಉಳಿದು ತಾ. 30 ರಲ್ಲಿ ಮಡಿಕೇರಿಗೆ ವಾಪಸು ಬರುವರೆಂದು ತಿಳಿಯಬರುತ್ತದೆ.

ವೀರಾಜಪೇಟೆ.

ಇಲ್ಲಿ ಭತ್ತ ಗಾಡಿಗೆ ರೂ. 46 ಕ್ರಯವಿರುತ್ತೆ.

ಇಲ್ಲಿಯ ಕೊಡಗು ಜೇನು ಮತ್ತು ಮೇಣ ಸಂಘವು ಈ ವರ್ಷ ಪ್ರತಿ ಪಾಲಿಗೂ ನಾಲ್ಕಾಣೆಯಂತೆ ಡಿವಿಡೆಂಡು ಕೊಡುವದಾಗಿ ಬಹಿರಂಗಪಡಿಸಿದೆ.

ಹಿಂದೂದೇಶ.

ಶ್ರೀ. ಸುಭಾಷ್ ಚಂದ್ರ ಭೋಸರವರು ಡೆಕ್ಕಾದಿಂದ ಕಲ್ಕತ್ತೆಕ್ಕೆ ಮರಳುವಾಗ ಅವರಿಗೆ 5 ಸಾವಿರ ರೂಪಾಯಿಗಳದೊಂದು ಥೈಲಿಯು ಅರ್ಪಿಸಲ್ಪಟ್ಟಿತು.

ಬಿಹಾರ್ ಪ್ರಾಂತದಲ್ಲಿ ಜಿಲ್ಲಾ ಬೋರ್ಡುಗಳಿಗೆ ಚುನಾವಣೆ ನಡೆದು ಒಟ್ಟಿಗೆ ದ್ದ 414 ಸ್ಥಾನಗಳಲ್ಲಿ 342 ಮಂದಿ ಕಾಂಗ್ರೆಸ್ಸಿನವರು ಆರಿಸಲ್ಪಟ್ಟಿರುವರು.

ಹೈದ್ರಾಬಾದ ಸಂಸ್ಥಾನದಲ್ಲಿ ಹೊಸ ರಾಜಕೀಯ ಸುಧಾರಣೆಗಳಾಗುವ ಚಿಹ್ನೆಗಳು ತೋರಿಬರುತ್ತಿದ್ದು ಈ ಸುಧಾರಣೆಗಳು 19 ನೇ ಜೂನ್ ದಿವಸ ಪ್ರಕಟವಾಗುವುದಂತೆ.

ಆಸ್ತಿಯ ಸ್ವಾಧೀನತೆಗಾಗಿ ಕೊಟ್ಟ ಆಪ್ಪಣೆಗಳಲ್ಲಿ ಪ್ರವೇಶಿಸಿದ ತಪ್ಪಿಗೆ ಗಡಿನಾಡಿನ ಪ್ರಾಂತದ ಪ್ರಧಾನರಾದ ಡಾ. ಖಾನ್ ಸಾಹೇಬರ ಮಗ ಖಾನ್ ಒಬಿದುಲ್ಲಾ ಖಾನರಿಗೆ ಒಂದುವರೆ ವರ್ಷದ ಕಠಿನ ಸಜೆ ವಿಧಿಸಲಾಗಿದೆ.

ಚೆಂಗಲ್ಪಟ್ಟು ಜಿಲ್ಲೆಯ ಕಂದಾಯದಲ್ಲಿ ಹಲವು ತಾಲೋಕುಗಳ ಹಲವು ಗ್ರಾಮಗಳಿಗೆ 65 ಸಾವಿರ ರೂ. ಗಳಷ್ಟು ತೀರ್ವೆ ಮಾಫಿ ಮಂಜೂರಾಗಿದೆಯೆಂದೂ ಇನ್ನೂ ಕೆಲವು ಪ್ರದೇಶಗಳಿಗೆ ತೀರ್ವೆ ಮಾಫಿಯಾಗಬಹುದೆಂದೂ ತಿಳಿದುಬರುತ್ತಿದೆ.

ಬೊಂಬಾಯಿನಲ್ಲಿ ಸರ್ಕಾರವು ವಿಧಿಸಿರುವ 'ಆಸ್ತಿಗಳ ಮೇಲಿನ ತೆರಿಗೆ' ವಿಷಯದಲ್ಲಿ ಕೋರ್ಟ್ಯಾಧಿಕಾರರಾದ ಸರ್ ಜೈರಾಂಜೀಯವರು ಈ ಶಾಸನವು ನ್ಯಾಯವಿರುದ್ಧವೆಂದು ಹೈಕೋರ್ಟಿಗೆ ಹೋಗುವುದಾಗಿ ಸರ್ಕಾರಕ್ಕೆ ನೋಟೀಸು ಕೊಟ್ಟಿದ್ದಾರೆ.

ಸಂಯುಕ್ತ ಸಂಸ್ಥಾನದಲ್ಲಿ 1725 ಮಂದಿ ಜೈಲರರಿಗೂ, ವಾರ್ಡರುಗಳಿಗೂ ತಕ್ಕ ಶಿಕ್ಷಣ ದೊರೆಯುವಂತೆ ಒಂದು ಶಾಲೆ ಇಂಡಿಯಾದಲ್ಲಿ ಇದೇ ಪ್ರಥಮ ಸಂಸ್ಥೆಯಾಗಿ ಆರಂಭವಾಗಲಿದೆ. ಇದಕ್ಕಾಗಿ ಅಲ್ಲಿನ ಸರ್ಕಾರ 20 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದೆ.

ಸಮಗ್ರ ಭಾರತದ ನೂಲು ಹೊಸೆಯುವ ಸಂಘದ ಬಂಗಾಳ ಶಾಖೆಗೆ ಕೆಲಸ ಹೆಚ್ಚುತ್ತಿರುವದರಿಂದ ಹರಿಜನ ಸೇವಕ ಸಂಘದ ಕೇಂದ್ರ ಸಭೆಯ ಕಾರ್ಯಕಾರಿ ಸಮಿತಿಯವರು 25 ಸಾವಿರ ರೂಪಾಯಿಗಳನ್ನು ಆ ಶಾಖೆಗೆ ಸಾಲವಾಗಿ ಕೊಡಲು ನಿರ್ಧರಿಸಿದ್ದಾರೆ.

ಕಟಕಿನ ಮಧುಸೂದನ ಗ್ರಾಮ ಕೈಗಾರಿಕೆಗಳ ಸಂಸ್ಥೆಯೊಡನೆ ಒಂದು ಚೆಂಕಿ ಕಡ್ಡಿಯ ಕಾರ್ಖಾನೆಯನ್ನು ಹೊರಡಿಸಲು ಒರಿಸ್ಸಾ ಸರ್ಕಾರವು ಮಂಜೂರು ಮಾಡಿದೆ. ಈ ಕಾರ್ಖಾನೆಯ ವಾರ್ಷಿಕ ವೆಚ್ಚವು ಸುಮಾರು ಎಂಟು ಸಾವಿರ ರೂಪಾಯಿಗಳಾಗಬಹುದು.

ನೀಲಗಿರಿ ಪ್ರಾಂತ್ಯದಲ್ಲಿ ಇನ್ನು ಹತ್ತು ಹದಿನೈದು ವರ್ಷಗಳಲ್ಲಿ ಕಟ್ಟಿಗೆಗೆ ಬರಗಾಲ ಬರುವ ಸಂಭವ ತೋರುವುದರಿಂದ ಅಲ್ಲಿನ ರೈತರು ಕಟ್ಟಿಗೆಯ ಮರಗಳನ್ನು ಬೆಳೆಸುವಂತೆ ಅವರಿಗೆ ಉಚಿತವಾಗಿ ಭೂಮಿಯನ್ನೂ, ಬೀಜಗಳನ್ನೂ ಹಂಚುವ ಏರ್ಪಾಡು ನಡೆದಿದೆ.

ಅಪಮಾನಕ್ಕಿಂತ ಮರಣವೇ ಲೇಸು. ಬ್ರಿಟಿಷ್ ಸಾಮ್ರಾಜ್ಯದಲ್ಲಿ ಹಿಂದೀಯರು ಅನುಭವಿಸುತ್ತಿರುವ ಕಷ್ಟವನ್ನು ಮತ್ತಿಲ್ಲಿಯೂ ಅವರು ಸಹಿಸುವುದಿಲ್ಲ. ನಮ್ಮ ಮತ್ತು ಬ್ರಿಟಿಷರ ಸಂಬಂಧವು ಎಂದು ತಪ್ಪುವುದೋ ಬ್ರಿಟಿಷ್ ಸಾಮ್ರಾಜ್ಯವೆಂದು ನಿರ್ನಾಮವಾಗುವುದೋ ಅಂದೇ ನಮ್ಮ ಅಭ್ಯುದಯವಾಗುವುದು—ಎಂದು ನೆಹರುಗಳು ಆಫ್ರಿಕದ ಕಾಂಗ್ರೆಸಿಗೆ ಸಂದೇಶ ಕಳುಹಿಸಿರುವರು.

ಮದರಾಸ್ ಆಧಿಪತ್ಯದ ಕಾಂಗ್ರೆಸ್ ಸರ್ಕಾರದವರು ಹಿಂದೀ ಭಾಷೆಯನ್ನು ಅಲ್ಲಿನ ಕೆಲವು ಪಾಠಶಾಲೆಗಳಲ್ಲಿ ಬಾಲಕ ಬಾಲಕಿಯರಿಗೆ ಕೆಲವು ತಿಂಗಳುಗಳ ಹಿಂದೆ ಕಲಿಸಲು ಪ್ರಾರಂಭಿಸಿದಾಗ, ಅನೇಕ ಮಂದಿ ತಮಿಳರು ತಮ್ಮ ಮಾತೃಭಾಷೆಯ ಅವನತಿಯು ಇದರಿಂದಾಗುವುದೆಂದು ಆಯಾ ಪಾಠ ಶಾಲೆಗಳ ಮುಂದೆ ಹಿಂದೀ ಶಿಕ್ಷಣಕ್ಕೆ ವಿರೋಧವಾಗಿ ನಾನಾ ರೀತಿಯ ಚಳುವಳಿಗಳನ್ನು ಹೂಡಿದರು. ಆ ಸಂಬಂಧದಲ್ಲಿ ಸರ್ಕಾರದವರು ಅನೇಕ ಮಂದಿ ಚಳುವಳಿಗಾರರನ್ನು ದಸ್ತಗಿರಿ ಮಾಡಿಸಿ ಬಂಧನದಲ್ಲಿಟ್ಟರು. ಸದ್ಯಕ್ಕೆ ಆ ಪ್ರಾಂತ್ಯದಲ್ಲಿ ಈ ಹಿಂದೀ ವಿರೋಧ ಚಳುವಳಿಯು ನಿಂತು ಹೋಗಿರುವುದರಿಂದ, ಸರ್ಕಾರದವರು ತಾವು ಹಿಂದೆ ಹಿಡಿಸಿ ಬಂಧನದಲ್ಲಿಟ್ಟಿದ್ದ ಆ ಚಳುವಳಿಗಾರರನ್ನೆಲ್ಲಾ ಕಳೆದ ವಾರ ಬಿಡುಗಡೆ ಮಾಡಿಸಿಬಿಟ್ಟರು.

ವಿದೇಶ

ದಕ್ಷಿಣ ಆಫ್ರಿಕದ ಸರ್ಕಾರವು ಇನ್ನು ಮುಂದೆ ಅಲ್ಲಿ ಕಪ್ಪು ಜನರು ಯಾರ ಇರಕೂಡದೆಂಬ ಉದ್ದೇಶ್ಯದಿಂದ ಅವರಿಗೆ ತೊಂದರೆಗಳುಂಟಾಗುವಂಥಾ ಶಾಸನಗಳನ್ನು ಜಾರಿಗೆ ತರಲು ಪ್ರಾರಂಭಿಸಿರುತ್ತದೆ.

ಚೈನಾದೇಶದ ಸ್ತ್ರೀಯರು ಮಿಲಿಟರಿ ಶಿಕ್ಷಣ ಪಡೆದು ಯುದ್ಧಕ್ಕೆ ತಯಾರಾಗುತ್ತಿದ್ದಾರೆ. ಈಗಾಗಲೇ 40 ಸಾವಿರ ಸ್ತ್ರೀಯರು ಸೈನ್ಯದಲ್ಲಿ ಸೇರಿದ್ದಾರೆ. ದೇಶಭಕ್ತಿ ಹೀಗಿರಬೇಕು!

ಸ್ಪೈಯಿನ್ ದೇಶದಲ್ಲಿ ಅಂತರ್ಯುದ್ಧವು ಕೊನೆಗೊಂಡು ಜನರಲ್ ಫ್ರಾಂಕೊಯವರಿಗೆ ಸಹಾಯಕರಾಗಿದ್ದ ಜರ್ಮನಿಯ ಮತ್ತು ಇಟಲಿಯ ಸೈನಿಕರೆಲ್ಲರೂ ಹಿಂತಿರುಗಿದ ಶುಭ ಸಮಾಚಾರವು ನಮ್ಮ ವಾಚಕರಿಗೆ ತಿಳಿದೇ ಇದೆ. ಈ ಅಂತರ್ಯುದ್ಧದ ದೆಸೆಯಿಂದ ಆ ದೇಶದಲ್ಲಿ ಸೈನ್ಯಕ್ಕೆ ಸೇರಿಸಿಕೊಂಡಿದ್ದ ಸಾಮಾನ್ಯ ಪ್ರಜೆಗಳೆಲ್ಲರನ್ನೂ ಈಗ ಬಿಡುಗಡೆ ಮಾಡಿಸಿ ಅವರು ತಮ್ಮ ಹಿಂದಿನ ವೃತ್ತಿಗಳಿಂದ ಜೀವಿಸುವಂತೆ ಅವಕಾಶ ಕೊಟ್ಟಿರುತ್ತಾರೆ. ಇತ್ತರಲ್ಲಿಯೇ 60,000 ಮಂದಿ ಈ ರೀತಿ ಸೈನ್ಯದಿಂದ ಬಿಡುಗಡೆ ಹೊಂದುವರೆಂದು ಪ್ರಕಟವಾಗಿದೆ.

ಮಾರಾಟಕ್ಕೆ ಇದೆ.

ಮಡಿಕೇರಿ ರಾಜಾಸೀಟ್ ಬಳಿ ವಾಸಕ್ಕೆ ಲಾಯಕ್ಕಾದ ಒಂದು ಮನೆ, ಇದಕ್ಕೆ ಸೇರಿದ ಹೊರಮನೆ, ಅಡಿಗೆ ಮನೆ ವಗೈರೆ ಮತ್ತು ಈ ಮನೆಗೆ ಸೇರಿದ ಹಾಲಿ ತಿಂಗಳಿಗೆ 10 ರೂಪಾಯಿ ಬಾಡಿಗೆ ಬರುವ ಒಂದು ಲೈನ್, ಸಾಧಾರಣ ಎರಡು ಎಕರೆನಷ್ಟು ಮನೆಗೆ ಸೇರಿದ ಜಾಗ ಸಹ ಮಾರಾಟಕ್ಕಿದೆ. ಇಷ್ಟವುಳ್ಳವರು ಮನೆಯನ್ನು ನೋಡಿ ಕಮ್ಮಿ ಬೆಲೆಯನ್ನು ತಿಳಿಸಬಹುದು. ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

"X"
C/o. Editor,
"Kodagu" Ltd.,
4-4 Mercara.

Wanted.

Wanted candidates. Allowance Rs. 28. Uniform, passage and quarter free, Service essential. Classes: Telegraph, Station Master, Wireless, Radio, Elecrtrical, Civil and Automobile Engineering, Commerce, and Filmcraft. Rules and Entrance form on annas eight. Director, Royal Telegraph and Rly. Duties College, Bombay. 8-8

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ ಮತ್ತು ಕೊಡಗು — ಈ ಪ್ರತಿಯೊಂದು ಜಿಲ್ಲೆಗಳಲ್ಲಿ ಜೀವ ವಿಮಾ ಏಜೆನ್ಸಿಗಳನ್ನು ವ್ಯವಸ್ಥೆಗೊಳಿಸಲೂ, ಮೇಲ್ವಿಚಾರ ನಡಿಸಲೂ ಒಬ್ಬೊಬ್ಬ ಸಬ್ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಉತ್ತಮ ಸಂಭಾವನೆ ಇದೆ. ವ್ಯವಸ್ಥೆಗೊಳಿಸುವ ಸಾಮರ್ಥ್ಯವುಳ್ಳ ಅನುಭವಸ್ಥ ಸದ್ಗೃಹಸ್ಥರು ಮಾತ್ರ ಬರೆದುಕೊಳ್ಳಬಹುದು.

BRANCH MANAGER,
Allianz and Stuttgarter Life Insurance Bank, Ltd.,
Post Box No. 451, Bombay.

1

ಅಧಿಕಾರ ಸ್ಥಳಗಳು ಬೇಕೇ?

ಹಾಗಾದರೆ-ಮೂರು ವರ್ಷ

ಕಾಂಗ್ರೆಸ್ ಸದಸ್ಯರಿರತಕ್ಕದ್ದು.

———::———

ಮಹಾತ್ಮರ ಸಮ್ಮುಖದಲ್ಲಿ ನಡೆದ ಘಟನಾ ಉಪಸಮಿತಿಯ ಸಭೆಯು ಸತತ 5 ದಿನಗಳ ವರೆಗೆ ಕಾರ್ಯ ಮಾಡಿ, ಕಾಂಗ್ರೆಸ್ ಘಟನೆಗೆ ಮಹತ್ವದ ತಿದ್ದುಪಡಿಗಳನ್ನು ಸೂಚಿಸಿ ಈ ತಾ. 6 ರಲ್ಲಿ ಮುಕ್ತಾಯವಾಯಿತು.

ಕಾಂಗ್ರೆಸ್ ಬಹಿರಂಗ ಅಧಿವೇಶನಕ್ಕೆ ಪ್ರತಿನಿಧಿಯಾಗಲು ಮತ್ತು ಅಧಿಕಾರ ಸ್ಥಳ ಸ್ವೀಕರಿಸಲು 3 ವರ್ಷ ಕಾಂಗ್ರೆಸ್ ಸದಸ್ಯರಿರಬೇಕು. ಕಾಂಗ್ರೆಸ್ ಖಾಯಂ ರಿಜಿಸ್ಟರ್ ಇರಬೇಕು. ಎ. ಐ. ಸಿ. ಸಿ. ಚುನಾವಣೆಗೆ ಕಾಯಂ ಮತದಾರ ಸಂಘಗಳನ್ನೇರ್ಪಡಿಸಬೇಕು. ಕಾಂಗ್ರೆಸ್ ಚುನಾವಣೆಗೆ ಕಾಯಂ ಮತದಾರ ಸಂಘಗಳಿರತಕ್ಕದ್ದು. ಇವು ಅವರ ಸೂಚನೆಗಳಲ್ಲಿ ಮಹತ್ವವಾದವುಗಳು. ಇವು ಕಾಂಗ್ರೆಸಿನಲ್ಲಿ ಇತ್ತೀಚೆಗೆ ತಲೆದೋರಿದ ಕೊಳೆಯನ್ನು ಕೊಚ್ಚಿಹಾಕಲು ಸಹಾಯಕವಾಗುವವೆಂದು ನಿರೀಕ್ಷಿಸಲಾಗಿವೆ.

ಕಳೆದ 3 ದಿನಗಳಿಂದಲೂ ಮುಂಬಯಿಯಲ್ಲಿ ಸಭೆ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಘಟನಾ ಸಮಿತಿಯು ಅನೇಕ ಮಹತ್ವದ ತಿದ್ದುಪಡಿಗಳನ್ನು ಸೂಚಿಸಿ ಅದರನ್ವಯ ಕಾಂಗ್ರೆಸ್ ಘಟನೆಯನ್ನು ಸಿದ್ಧಪಡಿಸಿ ತಾ. 6ರ ಮಧ್ಯಾಹ್ನ ತನ್ನ ಕಾರ್ಯಕಲಾಪಗಳನ್ನು ಮುಗಿಸಿತು. ಕಾಂಗ್ರೆಸಿನಲ್ಲಿ ಇತ್ತೀಚೆಗೆ ತಲೆದೋರಿದ ಕೊಳೆಯನ್ನು ಕೊಚ್ಚಿಹಾಕಲು ಈ ತಿದ್ದುಪಡಿಗಳು ಬಹಳ ಸಹಾಯ ಮಾಡುವವೆಂದು ನಿರೀಕ್ಷಿಸಲಾಗಿದೆ.

ಘಟನಾ ಸಮಿತಿಯವರ ಸೂಚನೆ.

(1) ಖೊಟ್ಟಿ ಸದಸ್ಯತನವನ್ನು ಹೋಗಲಾಡಿಸಲು ಸದಸ್ಯರ ಕಾಯಂ ರಿಜಿಸ್ಟರು ಇಡಬೇಕು. ಒಮ್ಮೆ ಕಾಂಗ್ರೆಸಿನ ಸಾಲ್ಯಾಣೆಯ ಸದಸ್ಯರಾದವರು ವರ್ಷ ವರ್ಷ ಕಾಂಗ್ರೆಸ್ ಅಜ್ಞಾ ಪತ್ರಕ್ಕೆ ಸಹಿ ಮಾಡದೆ, ಕೇವಲ ನಾಲ್ಕಾಣೆ ಕೊಟ್ಟು ಕಾಂಗ್ರೆಸ್ ಕಾಯಂ ರಿಜಿಸ್ಟರಿನಲ್ಲಿ ಚಿನ್ಹೆ ಇಲ್ಲವೇ ಅಂಕಿತಮಾಡಬೇಕು.

(2) ಬ್ರಹ್ಮದೇಶವನ್ನು ಕಾಂಗ್ರೆಸ್ ಪ್ರಾಂತಗಳಿಂದ ಬೇರ್ಪಡಿಸಬೇಕು.

(3) ಕಾಂಗ್ರೆಸ್ ರಿಜಿಸ್ಟರಿನಲ್ಲಿ ಸತತ 3 ವರ್ಷಗಳ ವರೆಗೆ ಹೆಸರಿಲ್ಲದವರಿಗೆ ಪ್ರತಿನಿಧಿಯಾಗಲು ಮತ್ತು ಅಧಿಕಾರ ಸ್ಥಳ ಸ್ವೀಕರಿಸಲು ಪ್ರತಿಬಂಧ ಹಾಕಬೇಕು.

(4) ಈಗಿನಂತೆ ಪ್ರತಿವರ್ಷ ಬದಲಾಗುವ ಮತದಾರ ಸಂಘವನ್ನು ತೆಗೆದು ಹಾಕಿ ಕಾಯಂ ಮತದಾರ ಸಂಘವನ್ನು ಸ್ಥಾಪಿಸಬೇಕು.

(5) ಯಾವದೇ ಮತದಾರ ಸಂಘದಲ್ಲಿ ನಿರ್ದಿಷ್ಟ ಸದಸ್ಯರಲ್ಲಿ ಅರ್ಧಕ್ಕಿಂತ ಕಡಿಮೆಯಾದರೆ ಪ್ರತಿನಿಧಿಯನ್ನು ಆರಿಸಿ ಕಳುಹಿಸುವ ಆ ಮತದಾರ ಸಂಘದ ಹಕ್ಕು ಹಾರಿ ಹೋಗುತ್ತದೆ.

(6) ಕಾಂಗ್ರೆಸ್ ಚುನಾವಣೆ ಮತ್ತು ರಿಜಿಸ್ಟರದ ಬಗ್ಗೆ ತಕರಾರುಗಳನ್ನು ವಿಚಾರಿಸಲು ಪ್ರಾಂತೀಕ ಹಾಗೂ ಜಿಲ್ಲಾ ಸ್ವತಂತ್ರ ನ್ಯಾಯ ಮಂಡಲಗಳಿರಬೇಕು.

ದೊಡ್ಡ ದೊಡ್ಡ ಪ್ರಾಂತಗಳಲ್ಲಿ ಎ. ಐ. ಸಿ. ಸಿ. ಸದಸ್ಯರನ್ನಾರಿಸಲು ಪ್ರಾದೇಶಿಕ ಮತದಾರ ಸಂಘಗಳಿರಬೇಕು. ಇನ್ನು ಮುಂದೆ ಎ. ಐ. ಸಿ. ಸಿ ಸಭೆಯ ಸದಸ್ಯರಲ್ಲಿ ¼ ಜನರು ದೊಡ್ಡ ಪ್ರಾಂತಗಳ ಪ್ರಾದೇಶಿಕ ಮತದಾರ ಸಂಘಗಳಿಂದ ಆರಿಸಿ ಬರತಕ್ಕದ್ದು. ಉಳಿದ ¾ ಸದಸ್ಯರನ್ನು ಕಾಂಗ್ರೆಸ್ ಕಮಿಟಿಯವರು ಆರಿಸತಕ್ಕದ್ದು. ಪ್ರಾದೇಶಿಕ ಮತದಾರ ಸಂಘಗಳಲ್ಲಿ ಡಿಸ್ಟ್ರಿಬ್ಯೂಟಿವ್ ಮತದಾನ ಪದ್ಧತಿಯನ್ನು ಅನುಸರಿಸಬೇಕು. ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳು ಈಗಿನಂತೆ ಸಿಂಗಲ್ ಟ್ರಾನ್ಸ್‌ಫರೇಬಲ್ ಪದ್ಧತಿಯಂತೆ ಚುನಾವಣೆಗಳನ್ನು ನಡಿಸತಕ್ಕದ್ದು. ಈ ಪದ್ಧತಿಗಳಿಂದ ದೊಡ್ಡ ಪ್ರಾಂತಗಳಲ್ಲಿ ಅಲವು ಬದಲಾವಣೆಗಳಾಗುವವು. ಮುಂಬಯಿ, ಡೆಲ್ಲಿ ಮತ್ತು ಅಜಮೀರ್ . . . ಮೇವಾಡಗಳು ಈಗಿನಂತೆ ತಮ್ಮ ಪಾಲಿನ ಸದಸ್ಯರನ್ನು ಸಿಂಗಲ್ ಟ್ರಾನ್ಸ್‌ಫರೇಬಲ್ ಮತದಾನ ಪದ್ಧತಿಯಿಂದ ಚುನಾಯಿಸಬೇಕು.

ಘಟನಾ ಉಪಸಮಿತಿಯ ಕಾರ್ಯಕಲಾಪಗಳೆಲ್ಲಾ ಮಹಾತ್ಮರ ಸಮ್ಮುಖದಲ್ಲಿ ನಡೆದವು.

———

ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ತಮ್ಮ ವರ್ಚಸ್ಸು ಉಪಯೋಗಿಸಬೇಕು.

ರಾಷ್ಟ್ರಪತಿ ರಾಜೇಂದ್ರರ ಭಾಷಣ.

ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರು ತಾ. 7 ರಲ್ಲಿ ಕಲಕತ್ತೆಗೆ ಹೊರಡುವ ಪೂರ್ವದಲ್ಲಿ, ಆಡಳಿತೆಯ ಮಹತ್ವದ ಮಸೂದೆಗಳ ವಿಷಯವಾಗಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳು ಮತ್ತು ಪ್ರಾಂತಿಕ ಕಾಂಗ್ರೆಸ್ ಮಂತ್ರಿ ಮಂಡಲಗಳು ಇವುಗಳ ನಡುವಿರುವ ಸಂಬಂಧದ ಬಗ್ಗೆ ಸ್ಪಷ್ಟೀಕರಿಸುತ್ತ ಹೇಳಿದ್ದೆನೆಂದರೆ, ಪ್ರಾಂತಿಕ ಮಂತ್ರಿ ಮಂಡಲಗಳು ಮಹತ್ವದ ಧೋರಣೆ ಕೈಕೊಳ್ಳುವಾಗ್ಗೆ ಪ್ರಾಂತಿಕ ಕಮಿಟಿಗಳ ಸಂಗಡ ಆಗಿಂದಾಗ್ಗೆ ವಿಚಾರವಿನಿಮಯ ಮಾಡುತ್ತಿರಬೇಕು. ಆಡಳಿತೆಯಲ್ಲುಂಟಾಗಬಹುದಾದ ಅದರ ಆಗು-ಹೋಗುಗಳನ್ನು ಅವರಿಗೆ ಅರುಹುತ್ತಿರಬೇಕು. ಆದರೆ ಪ್ರಾಂತಿಕ ಕಮಿಟಿಗಳು ಆಡಳಿತೆಯಲ್ಲಿ ತಮ್ಮದೇ ಅಭಿಪ್ರಾಯವನ್ನು ಸಾಧಿಸಲು ಶಕ್ಯವಿಲ್ಲ.

ಆ ಮೇಲೆ ಅವರು ಸಂಸ್ಥಾನಗಳ ವಿಷಯವಾಗಿ ಮಾತನಾಡುತ್ತ ಹೇಳಿದ್ದೇನೆಂದರೆ, ನನ್ನ ಮಟ್ಟಿಗೆ ಹೇಳುವದಾದರೆ ಸಂಸ್ಥಾನಗಳಲ್ಲಿಯ ಪರಿಸ್ಥಿತಿ ದಿನ ದಿನಕ್ಕೆ ಕೆಡುತ್ತ ನಡೆದಿದ್ದು, ಪ್ರಜರ ಅಸಮಾಧಾನವು ಹೆಚ್ಚುತ್ತ ನಡೆದಿದೆ. ಇತ್ತೀಚೆಗೆ ಪ್ರಜರಲ್ಲುಂಟಾದ ಸಾರ್ವತ್ರಿಕ ಜಾಗ್ರತಿಯನ್ನು ರಾಜರು-ಮಹಾರಾಜರು ಕೂಡಲೇ ಅರಿತು ಅವರ ಬೇಡಿಕೆಗಳನ್ನು ಪೂರೈಸುವದೊಳಿತು. ಆದರೆ ಅನೇಕ ಕಡೆಗಳಲ್ಲಿ ಅವರ ಬೇಡಿಕೆಗಳನ್ನು ಹತ್ತಿಕ್ಕಿ ಬಿಡುವ ಸಾಹಸ ಧಾರಾಳವಾಗಿ ನಡೆದಿದೆಯೆಂದು ನ



ಮಗೆ ಇಂದು ಕಂಡು ಬರುತ್ತದೆ. ತಮ್ಮ ಮನೋರಥವನ್ನು ಈಡೇರಿಸಿಕೊಳ್ಳಲು ಸಂಸ್ಥಾನಿಕರು ಕೈಕೊಂಡ ದಬ್ಬಾಳಿಕೆಗಳು ದಿನ ದಿನಕ್ಕೆ ಬೆಳಕಿಗೆ ಬರುತ್ತಲಿವೆ. ಇವರು ಎಷ್ಟೇ ಪ್ರಯತ್ನ ಮಾಡಿದರೂ, ಕೊನೆಯಲ್ಲಿ ರೈತರಿಗೆ ಜಯ ಸಿಕ್ಕುವದು ಖಂಡಿತ. ಜನರಾದರೂ ಈ ಬಗ್ಗೆ ತಮ್ಮಲ್ಲಿರುವ ದೃಢನಿಶ್ಚಯವನ್ನು ವ್ಯಕ್ತಮಾಡಿ, ಅವರು ಕೊಡುವ ಹಿಂಸೆಯನ್ನೆಲ್ಲ ನಗೆಮುಖದಿಂದ ಸಹಿಸಬೇಕು. ಹೀಗಾದಲ್ಲಿ ಸಂಸ್ಥಾನಿಕರು ಪ್ರಜರ ಶಕ್ತಿಯನ್ನು ಬೇಗನೇ ಅರಿತು, ಅವರು ಕೇಳಿದ್ದನ್ನೆಲ್ಲ ಕೊಡುವದರಲ್ಲಿ ಸಂದೇಹವಿಲ್ಲ. ಇಲ್ಲಿಯ ವರೆಗೆ ಸಾಧಿಸಿದಂತೆ ಅವರು ಇನ್ನು ಮುಂದೆ ಸಾಗಲು ಶಕ್ಯವಿಲ್ಲ.

ನಂತರ ದ್ವೀಪಾಂತರಗಳಲ್ಲಿ ನೆಲೆಸಿದ ಭಾರತೀಯರ ಪ್ರಶ್ನೆಯನ್ನೆತ್ತಿ, ಅವರ ಪರಿಸ್ಥಿತಿಯು ದಿನ ದಿನಕ್ಕೆ ಕೆಡುತ್ತ ಸಾಗಿರುವದನ್ನು ನೋಡಿ ಅತ್ಯಂತ ವಿಷಾದವಾಗುತ್ತದೆ. ಸಿಂಹಳದ್ವೀಪದಲ್ಲಿದ್ದ ಭಾರತೀಯರ ಪರಿಸ್ಥಿತಿ ಮತ್ತು ಇವರ ವಿಷಯವಾಗಿ ಅಲ್ಲಿಯ ಸರಕಾರವು ತಳೆದ ಧೋರಣೆ, ಇದಕ್ಕೆ ನಿದರ್ಶನವಾಗಿವೆ. ಇವರ ಕಷ್ಟನಷ್ಟಗಳು ಏನೂ ಉಳಿಯದಂತೆ ಒಮ್ಮೆ ಕೊನೆಗೊಳ್ಳಬೇಕಾದರೆ, ಅವಕ್ಕೆ ಭಾರತ ಸ್ವಾತಂತ್ರ್ಯವೇ ರಾಮಬಾಣ. ಹಿಂದುಸ್ತಾನ ಸರಕಾರದವರಾದರೂ ಈ ವಿಷಯದಲ್ಲಿ ತಮ್ಮ ವರ್ಚಸ್ಸನ್ನುಪಯೋಗಿಸಿ, ಭಾರತೀಯರ ದುಸ್ಥಿತಿಯನ್ನು ಹೋಗಲಾಡಿಸಲು ಆಯಾ ಸರಕಾರಗಳಿಗೆ ಒತ್ತಾಯ ಮಾಡಬೇಕು. ಪ್ರಾಂತಿಕ ಸರಕಾರಗಳೂ ಇದಕ್ಕೆ ಸಹಾಯಕ್ಕೆ ಮಾಡಬೇಕು.

ಬಾತ್ಮಿ.

ಕೊಡಗಿನಲ್ಲಿ ವಿದ್ಯಾಭ್ಯಾಸ.

ಅಯ್ಯಾ,

ತಾ. 27–5–39 ರಲ್ಲಿ ಪ್ರಕಟಿಸಿದ ಮೇಲಿನ ಶಿರೋನಾಮೆಯ ನಿಮ್ಮ ಅಗ್ರಲೇಖನವನ್ನು ಓದಿ ಮನಕರಗಿತು. ಇಲ್ಲಿಯ ಸರ್ಕಾರದವರು ಖರ್ಚು ಖೋತೆಯ ನೆಪದಿಂದ ಮಾಡುತ್ತಿರುವ ಅನ್ಯಾಯವು ಗೊತ್ತಾಯಿತು. ಬಜೆಟನ್ನು ಸರಿಪಡಿಸಲು ಖರ್ಚು ಖೋತೆ ಮಾಡುವಾಗ್ಗೆ ಅನಾವಶ್ಯದ ಖರ್ಚನ್ನು ತೆಗೆದು ಹಾಕಿಯೂ ಕಡಿಮೆ ಮಾಡಿ, ಅವಶ್ಯವಿರುವುದಕ್ಕೆ ಉಪಯೋಗಿಸಬೇಕಾದದ್ದು ಆಡಳಿತದ ಧರ್ಮ. ಅದರ ಬದಲು ಅನಾವಶ್ಯದ ದುಂದುಗಾರಿಕೆಯ ಖರ್ಚನ್ನು ಅಂದರೆ ಸಾವಿರ ಗಟ್ಟಲೆ ಸಂಬಳ ತಿನ್ನುವ ದೊಡ್ಡ ಹುದ್ದೇದಾರರ ಸಂಬಳವನ್ನು ಕಡಿಮೆ ಮಾಡದೆ ಬಡ ರೈತರ ಮಕ್ಕಳಿಗೆ ಅತ್ಯಾವಶ್ಯವಾದ ಓದು ಬರಹವನ್ನು ಕಲಿಸಲಿರುವ ಬಾಲಕಿಯರ ಶಾಲೆಗಳನ್ನು ಮುಚ್ಚಿರುವದು, ಸ್ಕೂಲು ಫೀಜನ್ನು ಹೆಚ್ಚಿಸಿದುದು ಮತ್ತು ಜಿಲ್ಲಾ ಬೋರ್ಡು ಶಾಲೆಗಳಿಗೆ ಕೊಡುತ್ತಿದ್ದ ಗ್ರಾಂಟಿನಲ್ಲಿ ರೂ. 5000 ಕಡಿಮೆ ಮಾಡಿದ್ದು ಯಾವ ರಾಜ ಧರ್ಮವೋ ತಿಳಿಯದು. ಕೊಡಗಿನ ಗ್ರಾಮಸ್ಥರಿಗೂ ಹೊರ ಪ್ರಾಂತ್ಯಗಳ ಗ್ರಾಮಸ್ಥರಿಗೂ ಇದೊಂದು ತಾರತಮ್ಯವಿತ್ತು. ಕೊಡಗಿನ ಹಳ್ಳಿಗರು ಹೊರಗಿನವರಿಗಿಂತ ಹೆಚ್ಚು ವಿದ್ಯಾವಂತರು, ತಿಳುವಳಿಕೆಯುಳ್ಳವರು, ಬಲ್ಲವರು ಹೇಳುವ ವಿಚಾರಗಳನ್ನು ಅರಿತುಕೊಳ್ಳಲು ಶಕ್ತರು. ಇದು ನಮ್ಮ ಸರ್ಕಾರದವರಿಗೆ ಸಹಿಸಲಾರದಾಯಿತೇ? ಗ್ರಾಮಸ್ಥರ ಮಕ್ಕಳು ನಿರಕ್ಷರಕುಕ್ಷಿಗಳಾಗಿರಬೇಕೆಂದು ಅಧಿಕಾರಿಗಳ ಇಚ್ಛೆಯೋ? ಬ್ರಿಟಿಷ್ ಸರ್ಕಾರದವರು ಬೇರೆ ಪ್ರಾಂತ್ಯಗಳಿಗಿಂತ ಇಲ್ಲಿ ಏನಾದರೂ ಸ್ವಲ್ಪ ಉತ್ತಮ ಕೆಲಸ ಮಾಡಿದ್ದರೆ-ಅದು ವಿದ್ಯಾಭ್ಯಾಸಕ್ಕೆ ಕೊಟ್ಟಂಥ ಪ್ರೋತ್ಸಾಹ. ಆ ಕೀರ್ತಿಯನ್ನೂ ಕೂಡ ಹೋಗಲಾಡಿಸಿಕೊಳ್ಳಲು ಅವರು ಮಾಡುವ ಪ್ರಯತ್ನಕ್ಕೆ ಏನನ್ನಬೇಕು?

ಬಡವರ ಮಕ್ಕಳು ವಿದ್ಯಾವಂತರಾಗಿ ಮುಂದೆ ಬಂದು ಸರ್ಕಾರಕ್ಕೆ ಬಹು ಭಯ ಭಕ್ತಿಗಳಿಂದ ವಿಧೇಯರಾಗಿ ನಡೆದುಕೊಳ್ಳುತ್ತಿರುವ ಐಶ್ವರ್ಯವಂತರ ಮಕ್ಕಳನ್ನು ಹಿಂದೆ ಹಾಕಿದರೆಂಬ ಬೇಸರಿಕೆಯಿಂದ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಮಣ್ಣು ಹಾಕಲು ಯತ್ನಿಸುತ್ತಿರುವರೋ ತಿಳಿಯದು. ಇಲ್ಲವಾದರೆ ಹಳ್ಳಿಗರ ಮಕ್ಕಳ ವಿದ್ಯಕ್ಕೆ ಅನುಕೂಲವಾದ ಹುಡುಗಿಯರ ಎಲಿಮೆಂಟರಿ ಶಾಲೆಗಳನ್ನು ಮುಚ್ಚಿ, ಸ್ಕೂಲು ಫೀಜನ್ನು ಹೆಚ್ಚಿಸಿ, ಮತ್ತು ಡಿ. ಬೋರ್ಡು ಶಾಲೆಗಳಿಗೆ ಕೊಡುತ್ತಿದ್ದ ವಂತಿಕೆಯನ್ನು ಕಡಿಮೆ ಮಾಡಿ, ಹೆಚ್ಚಾಗಿ ಐಶ್ವರ್ಯವಂತರ ಮಕ್ಕಳೇ ಓದುತ್ತಿರುವ ಮಡಿಕೇರಿ ಕಾನ್ವೆಂಟ್ ಹೈಸ್ಕೂಲಿಗೆ ಕೊಡುತ್ತಿರುವ ವಾರ್ಷಿಕ ವಂತಿಗೆ ಸುಮಾರು ರೂ. 7500 ಯಲ್ಲಿ ಒಂದಿಷ್ಟು ಕಡಿಮೆ ಮಾಡದೆ ಇರಲು ಕಾರಣವೇನು? ಸ್ಕೂಲು ಫೀಜು ಹೆಚ್ಚಿಸುವುದರಿಂದ ಬರೇ 1500 ರೂ. ಮಾತ್ರ ಹೆಚ್ಚು ಉತ್ಪತ್ತಿ ಬರುತ್ತೆ. ಇಷ್ಟೊಂದು ಚಿಕ್ಕ ಮೊಬಲಗಿಗಾಗಿ ಸರ್ಕಾರದವರು ಬಡವರ ಮಕ್ಕಳ ವಿದ್ಯೆಗೆ ಅಡ್ಡಿ ತಂದು, ದೇಶದಲ್ಲಿ ಇಷ್ಟೊಂದು ಅತೃಪ್ತಿಗೆ ಎಡೆ ಕೊಟ್ಟದ್ದು ಸರಿಯಲ್ಲ. ಇನ್ನಾದರೂ ಸರ್ಕಾರದವರು ಕಣ್ತೆರದು, ಈ ಅನ್ಯಾಯವನ್ನು ಹೋಗಲಾಡಿಸುವರಾಗಿ ನಂಬುತ್ತೇನೆ

ದೇಶೀಯ.

———

ಜನತೆಯ ಆರ್ಥಿಕ ಮುಗ್ಗಟ್ಟಿಗೆ

ಕಾರಣವೇನು?

ಇಂದಿನ ಭಾರತೀಯ ವ್ಯವಸಾಯವು ಶಾಸ್ತ್ರೋಕ್ತ ರೀತಿ ನಡೆಯುತ್ತಿಲ್ಲ. ವ್ಯವಸಾಯಕ್ಕೆ ಸರಕಾರದ ಪೂರ್ಣ ಸಹಾನುಭೂತಿ ಇಲ್ಲ. ವ್ಯವಸಾಯ ಕ್ಷೇತ್ರಗಳು ಚಿನ್ನಭಿನ್ನವಾಗಿ ವಿಭಾಗಿಸಲ್ಪಡುವದು ವ್ಯವಸಾಯಕ್ಕೆ ಶ್ರೇಯಸ್ಕರವಲ್ಲ. ಭಾರತೀಯ ರೈತನು ತನ್ನ ಮೂರು ಆಣೆಯ ದೈನಿಕ ಉತ್ಪತ್ತಿಯಿಂದ ಸುವ್ಯವಸ್ಥಿತ ರೀತಿಯಲ್ಲಿ ವ್ಯವಸಾಯ ಮಾಡಲೊಲ್ಲ. ಕೈಗಾರಿಕೆಗೆ ಪ್ರೋತ್ಸಾಹವಿಲ್ಲ. ಆದ್ದರಿಂದ ಬಡರೈತನು ಕೂಲಿ ರೈತರಾಗಿ ಸಾಯಬೇಕಲ್ಲದೆ ಉಪಾಯವಿಲ್ಲ.

ಇಂದು ಜಗತ್ತಿನ ವಿಚಾರವನ್ನು ಕೂಲಂಕುಶವಾಗಿ ವಿವೇಚಿಸಿದರೆ ಎಲ್ಲೆಲ್ಲೂ ಆರ್ಥಿಕ ಮುಗ್ಗಟ್ಟು ಎಂಬ ಶಬ್ದದ ಪ್ರತಿಧ್ವನಿಯೇ ಕೇಳಬರುವದು. ಬಡತನದ ಬೇಗೆಯಲ್ಲಿ ಬಳಲುತ್ತಿರುವ ಭಾರತೀಯರಾದ ನಾವಾದರೂ ಈ ಮುಗ್ಗಟ್ಟಿನಿಂದ ತಪ್ಪಿಸುವದೆ ಇಲ್ಲ. ಕೆಲವರಿಗೆ ವಿಶ್ವವಿದ್ಯಾಲಯಕ್ಕೆ ಸೇರಲು ಆರ್ಥಿಕ ತೊಡಕೆಂದರೆ ಕೆಲವರಿಗೆ ಉಡಲು ಬಟ್ಟೆಗೇ ತೊಡಕು. ಕೆಲವರಿಗೆ ವಿಲಾಸಿಗಳಾಗಿ ಮೆರೆಯಲು ತೊಡಕೆಂದರೆ ಕೆಲವರಿಗೆ ಹಸಿವೆಗೆ ತುತ್ತನ್ನೊದಗಿಸಿಕೊಳ್ಳಲು ತೊಡಕು. ಹೀಗೆ ಈ ಆರ್ಥಿಕ ಮುಗ್ಗಟ್ಟೆಂಬ ಮಹಾ ಶಕ್ತಿಯು ಬಡವ, ಬಲ್ಲಿದರನ್ನೂ, ಆಬಾಲವೃದ್ಧರನ್ನೂ ತನ್ನ ಹಿಡಿತಕ್ಕೊಳಪಡಿಸಿದೆ. ಅದ ಪ್ರಯುಕ್ತ ಸರ್ವತೋಮುಖವಾಗಿ ಹರಡಿರುವ ಈ ಬಿಕ್ಕಟ್ಟಿಗೆ ಕಾರಣವೇನು? ಭಾರತೀಯರಲ್ಲಿ ಇದು ನೆಲೆನಿಲ್ಲಲು ಹೇಗೆ ಸಾಧ್ಯವಾಯಿತು ಇವೇ ಮೊದಲಾದ ಗಹನ ವಿಚಾರಗಳನ್ನು ಕೆಲವೊಂದು ಲೇಖನ ಪರಂಪರೆಗಳಲ್ಲಿ ವಿವರಿಸಲೆತ್ನಿಸುವೆವು.

ವಾಚಕ ಮಹಾಶಯ-ಭಾರತೀಯರಾದ ನಮ್ಮ ಆರ್ಥಿಕ ಸ್ಥಿತಿಯಲ್ಲಿ ಕೊರತೆಯಿರುವದೆಂಬುದು ನಿರ್ವಿವಾದ. ಇಂದು ಭಾರತೀಯರ ವಾರ್ಷಿಕ ಉತ್ಪನ್ನವನ್ನು ಸರಾಸರಿ ವಿಭಾಗಿಸಿದರೆ ತಲೆಗೆ ವರ್ಷಕ್ಕೆ ರೂ. 60–ಎಂದು ಕಂಡು ಬರುವದು. ಅನೇಕ ಮಹಾನೀಯರು ಈ ವಿಚಾರ ವಿಧವಿಧ ಸಂಖ್ಯೆಗಳನ್ನು ಹೇಳಿದರೂ 1931-32 ನೇ ವರ್ಷದ ಲೆಕ್ಕದ ಮೇರೆ ಇದು ರೂ. 60–ಮೀರಿಲ್ಲ, (ಈಗ ಅದಕ್ಕಿಂಥಾ ಕಮ್ಮಿ ಇರಬಹುದು,) ವಾರ್ಷಿಕ ರೂ 60–ಎಂದರೆ ತಿಂಗಳಿಗೆ ರೂ. 5; ದಿನಕ್ಕೆ ಹೆಚ್ಚು ಕಮ್ಮಿ ಎರಡಾಣೆ ಎಂಟು ಕಾಸು. ಈ ಎರಡು ಮುಕ್ಕಾಲಾಣೆಯಲ್ಲಿ ನಮ್ಮ ದೇಶೀಯನು ಆಹಾರ ಒದಗಿಸಿಕೊಳ್ಳಬೇಕು, ಉಡಿಗೆ, ಮನೆ, ವಿದ್ಯೆ, ಔಷಧ ಮೊದಲಾದ ಇನ್ನೂ ಅನೇಕ ವಿಧದ ಅವಶ್ಯಕಗಳನ್ನು ಒದಗಿಸಿಕೊಂಡು ಜೀವನವನ್ನು ಮಾನವನಾಗಿ ನಡೆಸಬೇಕು. ಈ ಹೃದಯವ್ರಾವಕ ಚಿತ್ರವು ಅತಿಶಯೋಕ್ತಿಯದಲ್ಲ. ಓದುತ್ತಿರುವ ನೀವಾಗಲೀ, ನಾವಾಗಲೀ ಇಂಥಾ ಸ್ಥಿತಿಯಲ್ಲಿಲ್ಲದಿದ್ದರೂ ಭಾರತೀಯರಾದ ನಮ್ಮ ಸಹೋದರರನೇಕರು ಇದಕ್ಕಿಂತಲೂ ವಿಷಮಾವಸ್ಥೆಯಲ್ಲಿ ತೊಂದರೆಪಡುತ್ತಿರುವದು ಸಹಜ. ಈ ದೈನಿಕ ಉತ್ಪತ್ತಿಯಾದ ಎರಡು ಮುಕ್ಕಾಲಾಣೆಯಿಂದ ತಮ್ಮ ಬೇಕು ಬೇಡಿಕೆಗಳನ್ನು ಪಡಗಿಸಿಕೊಳ್ಳುವದು ಅಸಾಧ್ಯ. ಅದರ ಪರಿಣಾಮದಿಂದಾಗಿಯೇ ಲಕ್ಷೋಪಲಕ್ಷ ಜನರು ಕೂಳಿನ ತೃಷೆಯನ್ನು ಸಹಿಸಲಾರದೆ ಮೃತ್ಯುವನ್ನಾಲಿಂಗಿಸುವರು. ತಮ್ಮ ಜೀವನವನ್ನು ಸುಗಮವಾದ ರೀತಿ ಸಾಧಿಸಲಸಾಧ್ಯವಾದ್ದರಿಂದಲೇ ಭಾರತೀಯರು ಸರಾಸರಿ ಬದುಕಿ ಬಾಳುವದು ವರ್ಷ 25 ಮಾತ್ರ. ಇದರಿಂದಾಗಿಯೇ ಶೇಕಡ 20 ರಂತೆ ಶಿಶುಗಳು ಹುಟ್ಟಿದೊಡನೆಯೇ ಜಗತ್ತಿನ ಬೆಳಕನ್ನು ಸಹ ನೋಡದೆ ಮೃತ್ಯುವಶವಾಗುತ್ತಿರುವವು. ಹಾಲು, ಕುಡಿಯುವ ಒಂದು ಆಹಾರವೆಂಬುದನ್ನು ತಿಳಿಯದ ಭಾರತೀಯರೆಷ್ಟು ಮಂದಿ ಇಲ್ಲ! ನಮ್ಮ ಈ ಭರತ ಖಂಡದಲ್ಲಿ ಜೀವಹಿಡಿದು ಬದುಕಿರುವನ್ನು ತಿನ್ನಲು ಕೂಳಿಲ್ಲದ ಅನಾಥರು ಎಷ್ಟಿಲ್ಲ? ಇವರಿಂದಾಗಿ ಅನೇಕ ರೋಗಾದಿಗಳಿಂದ ನರಳಿ ಕೊರಗುತ್ತಿರುವ ಸಹೋದರರೆಷ್ಟಿಲ್ಲ? ಭಾರತೀಯನೊಬ್ಬನಿಗೆ ಸರಾಸರಿ ವರ್ಷಕ್ಕೆ 14 ಗಜ ಬಟ್ಟೆ ಖರ್ಚಾಗುವದೆಂದರೆ ಅತಿ ನಗ್ನತೆಯಲ್ಲಿ ಚಳಿಯ ಹಾಗೂ ಮಳೆಯ ಉಪಟಳದಿಂದ ನೊಂದು ಬೆಂದು ಕಳೆಗುಂದಿರುವ ಭಾರತ ಪುತ್ರರೆಷ್ಟಿಲ್ಲ. ಉಳಕೊಳ್ಳಲು ಮನೆಯಿಲ್ಲದೆ ಬೀದಿಯ ಭಿಕಾರಿಗಳೋಪಾದಿ ತಿರುಗಿ ಅನಾರೋಗ್ಯ ಸ್ಥಳಗಳಲ್ಲಿ ವಾಸಿಸಿ ರೋಗಗ್ರಸ್ತರಾಗಿ ಜೀವನವನ್ನು ದಾರಿದ್ರ್ಯದ ಕರಾಳ ಹಸ್ತದಲ್ಲಿ ಒಪ್ಪಿಸುವರೆಷ್ಟಿಲ್ಲ. ಹೀಗೆ ಮಾನವ ಜೀವನವನ್ನು ನಡೆಸಲು ಪ್ರಾಮುಖ್ಯ ಸಾಧನಗಳಿಗೇ ಅಭಾವವೆಂದರೆ ಆಡಂಭರದ ಹಾಗೂ ಅನುಕೂಲತೆಯ ಜೀವನವು ಭಾರತೀಯ ಸಾಮಾನ್ಯ ಜನತೆಯ ಕನಸಿನಲ್ಲಿಯೂ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು.

ವಾಚಕ ಮಹಾಶಯ–ಭಾರತದ ಆರ್ಥಿಕ ಸ್ಥಿತಿಯು ನೆಟ್ಟಗಿಲ್ಲದ್ದರಿಂದಲೇ ಇಷ್ಟೊಂದು ಅನರ್ಥ ಪರಂಪರೆಗಳು ಬರಲು ಕಾರಣವೆಂಬುದು ನಿಜ. ಈಗ ಜನತೆಯು ತಮ್ಮ ಜೀವನೋಪಾಯವನ್ನು ಹೇಗೆ ಸಾಗಿಸುತ್ತಿರುವದು; ಅವರ ಆರ್ಥಿಕ ಚಲನವಲನವೇನು ಎಂಬುದನ್ನು ನೋಡುವದ ಗತ್ಯ. ಮೂವತ್ತೈದು ಕೋಟಿಗೂ ಹೆಚ್ಚಾಗಿರುವ ಭಾರತ ನಿವಾಸಿಗಳಲ್ಲಿ ಹನ್ನೆರಡು ಕೋಟಿ ಅಂದರೆ ಶೇಕಡ 35 ರಷ್ಟು ಜನರು ಮಾತ್ರ ನಿಜವಾದ ಕೆಲಸಗಾರರೆಂದು 1931 ರ ಖಾನೇಸುಮಾರಿಯಲ್ಲಿ ತಿಳಿದು ಬಂದದೆ. ಇವರಲ್ಲಿ ಎಂಟೂವರೆ ಕೋಟಿಯು ವ್ಯವಸಾಯ ಕಸುಬಿನವರೂ, 1½ ಮಿಲಿಯವು ಕಾರ್ಖಾನೆಗಳ ಕೆಲಸಗಾರರೂ ಬಾಕಿ ಉಳಿದವರು ವ್ಯಾಪಾರ ಮತ್ತು ಉದ್ಯೋಗಸ್ಥರೂ ಆಗಿರುವರು. ಇದರಿಂದ ಕೆಲಸಗಾರರಲ್ಲಿ ಶೇಕಡ 70 ರಷ್ಟು ವ್ಯವಸಾಯಗಾರರೆಂಬುದು ತಿಳಿದುಬರುತ್ತದೆ. ಆದ್ದರಿಂದ ನಮ್ಮ ಆರ್ಥಿಕ ಸ್ಥಿತಿಯಲ್ಲಿ ತೊಂದರೆಯಿದ್ದ ಪಕ್ಷ ನಮ್ಮ ವ್ಯವಸಾಯ ಕ್ರಮದಲ್ಲಿಯೂ ತೊಂದರೆಯೂ ತಪ್ಪು ಇದೆಯೆಂದು ತಿಳಿಯಬೇಕು. ಆದ್ದರಿಂದ ಮೊದಲು ನಾವು ಭಾರತೀಯ ವ್ಯವಸಾಯವನ್ನು ತರ್ಕಿಸಿ ನಂತರ ಭಾರತೀಯ ಕೈಗಾರಿಕೆ, ಹಾಗೂ ವ್ಯಾಪಾರ ಮೊದಲಾದವನ್ನು ವಿವೇಚಿಸಿ ಅವುಗಳ ಪುನರುದ್ಧಾರ ಹೇಗೆಂಬುದನ್ನು ವಿವರಿಸುವೆವು. ಪ್ರಕೃತ ಭಾರತೀಯ ವ್ಯವಸಾಯವನ್ನು ಕೈಗೆತ್ತಿಕೊಳ್ಳುವ.

ಸರಕಾರವು, ವ್ಯವಸಾಯ ಮಾಡಬಹುದೆಂದು ಅಂದಾಜು ಹಾಕಿದ 43½ ಕೋಟಿ ಎಕರೆ ಭೂಮಿಯಲ್ಲಿ ಕೇವಲ 27¾ ಕೋಟಿ ಎಕರೆ ಅಂದರೆ ಶೇಕಡ 65 ರಷ್ಟು ಮಾತ್ರ ವ್ಯವಸಾಯ ಮಾಡಲ್ಪಡುತ್ತಿದೆ. ಬಾಕಿ ಉಳಿದಿರುವ 15¾ ಕೋಟಿ ಎಕರೆಯು ಬಂಜರು ಬಿದ್ದಿದೆ. ಇದರಲ್ಲಿ ಎಷ್ಟು ಭಾಗವು ನಿಜವಾಗಿಯೂ ವ್ಯವಸಾಯಕ್ಕೆ ಯೋಗ್ಯವೋ ತಿಳಿಯದು. ಇದರಲ್ಲಿ ¾ ಭಾಗವಾದರೂ ವ್ಯವಸಾಯಕ್ಕೆ ಯೋಗ್ಯವಾದ ಪಕ್ಷ ನಮ್ಮ ವ್ಯವಸಾಯ ಉತ್ಪತ್ತಿಯು ಶೇಕಡ 25 ರಂತೆ ಏರಿದರದು. ಆದರೆ ಈ ಬಗ್ಗೆ ಯಾವ ಪ್ರಯತ್ನಗಳೂ ನಡೆದಿಲ್ಲ. ಸರಕಾರವು ಇದಕ್ಕೆ ತಕ್ಕ ನಿಗವಿಡದೆ ವ್ಯವಸಾಯ ನಡೆಯದ್ದರಿಂದಲೇ ವ್ಯವಸಾಯ ಉತ್ಪತ್ತಿಯು ಕಡಿಮೆಯಾಗಲು ಕಾರಣ. ವ್ಯವಸಾಯ ಮಾಡಲ್ಪಡುವ 27¾ ಕೋಟಿ ಎಕರೆಯಲ್ಲಿ 5 ಕೋಟಿ ಎಕರೆಯಷ್ಟು ಪಾಳು ಬೀಳುವದರಿಂದ ವ್ಯವಸಾಯ ಉತ್ಪತ್ತಿಯು ಕಡಿಮೆಯಾಗಿದೆ. ಇದರ ಪರಿಣಾಮವಾಗಿ ಐದು ವರ್ಷಕ್ಕೊಮ್ಮೆ ಇಡೀ ವ್ಯವಸಾಯ ಮಾಡುವ ಭೂಮಿಯನ್ನೆಲ್ಲಾ ಪಾಳು ಬಿಟ್ಟಂತಾಯಿತು. ಇದರಿಂದ ಮರುವರ್ಷ ಹುಲುಸಾದ ಬೆಳೆಯಾಗುವದೇನೋ ನಿಜ. ಆದರೆ ಸರಿಯಾಗಿ ಗೊಬ್ಬರ ಹಾಕಿ, ಭೂಮಿಯಲ್ಲಿ ವಿಧವಿಧ (ಅಂದರೆ ಬದಲಾಯಿಸಿ) ಬೆಳೆಯನ್ನು ಬೆಳೆಯುವದರಿಂದ ಹೆಚ್ಚಿನ ಉತ್ಪತ್ತಿಯಾಗಿ ದೇಶದ ಉತ್ಪತ್ತಿಯು ಶೇಕಡ 20 ರಷ್ಟು ಹೆಚ್ಚುವುದರಲ್ಲಿ ಸಂಶಯವಿಲ್ಲ.

ಕೆಲವರೆನ್ನುವಂತೆ ಭೂಮಿಯನ್ನು ಬಂಜರು ಬಿಡುವದರಿಂದ ಒಳ್ಳೆ ಬೆಳೆ ಬರುವದೆಂಬ ವಾದವೂ ಇಲ್ಲಿ ಸರಿಹೋಗದು. ಯಾಕೆಂದರೆ ಭಾರತದಲ್ಲಿ ಎಕ್ರೆಗೆ 1340 ಪೌಂಡು ಅಕ್ಕಿ ಉತ್ಪತ್ತಿಯಾದರೆ ಜಪಾನಿನಲ್ಲಿ 3230 ಪೌಂಡು ಆಗುತ್ತಿದೆ. ಇಂಡಿಯಾದಲ್ಲಿ ಎಕರೆಗೆ 91 ಪೌಂಡು ರೇಷ್ಮೆಯಾದರೆ ಅಮೇರಿಕದಲ್ಲಿ 150 ಪೌಂಡು, ಈಜಿಪ್ಟಿನಲ್ಲಿ 300 ಪೌಂಡುಗಳಷ್ಟಾಗುತ್ತದೆ. ಭಾರತದಲ್ಲಿ ಎಕರೆಗೆ 700 ಪೌಂಡು ಗೋಧಿ ಬೆಳೆದರೆ ಬ್ರಿಟನಿನಲ್ಲಿ 1900 ಪೌಂಡು. ಆದ್ದರಿಂದ ಭಾರತದಲ್ಲಿ ಬೆಳೆಸುವ ಪ್ರಧಾನ ವ್ಯವಸಾಯೋತ್ಪತ್ತಿಗಳನ್ನು ವಿವಿಧ ರಾಷ್ಟ್ರಗಳೊಡನೆ ಹೋಲಿಸಿ ನೋಡಿದರೆ ಭಾರತದಲ್ಲಿ ಸರಿಯಾದ ಉತ್ಪತ್ತಿಯಾಗುತ್ತಿರುವದಿಲ್ಲವೆಂಬುದು ಕಂಡು ಬರುವದು. ಇದರ ಕಾರಣವೇನು?

ಭಾರತದ ವ್ಯವಸಾಯೋತ್ಪತ್ತಿಯು ಕುಗ್ಗಲು ಇಂದಿನ ರೂಢಿಯಲ್ಲಿರುವ ವ್ಯವಸಾಯಾನುಕೂಲ ಭೂಮಿಯನ್ನು ಛಿದ್ರಛಿದ್ರವಾಗಿ ವಿಂಗಡಿಸಿರುವದೇ ಪ್ರಥಮ ಕಾರಣ. ಹೀಗೆ ಚಿಕ್ಕ ಚಿಕ್ಕವಾದ ಭಾಗಗಳನ್ನಾಗಿ ಪರ್ಯವಸಿಸಿಕೊಂಡಿರುವದರಿಂದ ವ್ಯವಸಾಯವು ಕ್ರಮಪ್ರಕಾರವಾಗಿ ನಡೆಯುವದು ಅಸಾಧ್ಯ. ಎರಡನೇಯದಾಗಿ ವ್ಯವಸಾಯಗಾರನಿಗೆ ಅವನಿಗೆ ಬೇಕಾದ ಗೊಬ್ಬರ ವಗೈರೆ ಆವಶ್ಯಕಗಳನ್ನು ಪಡೆಯಲು, ಭೂಮಿಯನ್ನು ವ್ಯವಸ್ಥಿತ ರೀತಿಯಲ್ಲಿಟ್ಟುಕೊಳ್ಳಲು ಬೇಕಾದ ಹಣದ ಅಭಾವವೇ ಕಾರಣ. ಇದಕ್ಕಾಗಿ ಇಂದು ರೈತನು ಹೊರಗಿನಿಂದ ದೊಡ್ಡ ಬಡ್ಡಿಯಲ್ಲಿ ಸಾಲ ತೆಗೆದು ತನ್ನ ವ್ಯವಸಾಯದ ಉತ್ಪತ್ತಿಯನ್ನು ಸಾಲದ ಬಡ್ಡಿಗೇ ಕೊಟ್ಟು ನಷ್ಟಪಡುತ್ತಿದ್ದರೂ ಇಂದು ವ್ಯವಸಾಯವನ್ನು ಬಿಟ್ಟು ಆತನು ಬೇರೆ ಕಸುಬು ಕೈಗೊಳ್ಳಲಾರ. ಅವನಿಗೆ ಬೇಕಾದ ಕಾರ್ಯಕ್ಷೇತ್ರಗಳಿಲ್ಲ. ಆದ್ದರಿಂದ ಸಾಮಾನ್ಯವಾಗಿ ಆತನು ಕೆಲಸವಿಲ್ಲದೆ ಬರೇ ಹೊಟ್ಟೆಯಿಂದ ಬಳಲಿ ಸಾಯುವದಕ್ಕಿಂತ ವ್ಯವಸಾಯದಿಂದ ಅರ್ಧ ಹೊಟ್ಟೆಯನ್ನಾದರೂ ತುಂಬಿಸಿಕೊಳ್ಳುವದು ವಾಸ್ತವ.

ಭಾರತ ವ್ಯವಸಾಯ ಕ್ರಮವನ್ನು ಸ್ವಲ್ಪ ಕೂಲಂಕುಶವಾಗಿ ವಿಚಾರಿಸುವದೊಳಿತು. ವ್ಯವಸಾಯಮಾಡಲ್ಪಡುವ ಭೂಮಿಯನ್ನು ಸಣ್ಣ ಸಣ್ಣ ಭಾಗಗಳಾಗಿ ವಿಂಗಡಿಸಿದರೆ ಕಷ್ಟವೆಂದು ಪ್ರಾಜ್ಞರು ಅಭಿಪ್ರಾಯಪಡುತ್ತಿರುವರು. ವ್ಯವಸಾಯವು ತೃಪ್ತಿಕರವಾಗಿ ನಡೆಯಬೇಕಾದರೆ ಕಮ್ಮಿ ಪಕ್ಷ ಭೂಮಿಯ ಒಂದೊಂದು ಭಾಗವು 15 ಎಕರೆಗಳಷ್ಟಾದರೂ ವಿಶಾಲವಾಗಿರಬೇಕೆಂದು ವ್ಯವಸಾಯ ಪರಿಶೋಧನಾತಜ್ಞರು ಅಭಿಪ್ರಾಯಪಟ್ಟಿರುವರು. ಆದರೆ ಸಾಮಾನ್ಯವಾಗಿ ಇಂದು ಭಾರತದಲ್ಲಿ ಈ ವ್ಯವಸ್ಥಿತ ರೀತಿಯಿಲ್ಲ. 15 ಎಕರೆಗಳಿಗಿಂತ ಕಮ್ಮಿ ಭೂಮಿ ಇರುವ ವ್ಯವಸಾಯಗಾರರೇ ಹೆಚ್ಚು. ಉದಾಹರಣೆಗಾಗಿ ಬೊಂಬಾಯಿ ಪ್ರಾಂತದಲ್ಲಿನ 22 ಲಕ್ಷ ವ್ಯವಸಾಯಗಾರರ ಪೈಕಿ 17 ಲಕ್ಷ ಜನರಿಗೆ 15 ಎಕರೆಗಿಂತ ಕಮ್ಮಿ ಭೂಮಿ ಇರುವದು. ಇವರಲ್ಲಿ 10 ಲಕ್ಷ ಜನರಿಗೆ 2½ ಎಕರೆಗಿಂತ ಕಮ್ಮಿ ಇದೆ. ಕೂಲಂಕುಶವಾಗಿ ವಿವೇಚಿಸಿದರೆ ಒಂದು ಎಕರೆಗಿಂತ ಕಮ್ಮಿ ಭೂಮಿ ಇರುವ ವ್ಯವಸಾಯಗಾರನೂ ಇರುವನು. ಸೂರತ್ ಜಿಲ್ಲೆಯ 431 ವ್ಯವಸಾಯಗಾರರಲ್ಲಿ 143 ಜನರಿ

ಗೆ ಬರೀ ಒಂದು ಎಕರೆಗಿಂತ ಕಮ್ಮಿ ಭೂಮಿ ಇದೆಯೆಂದರೆ ಭಾರತದ ವ್ಯವಸಾಯ ಕ್ಷೇತ್ರ ಎಷ್ಟು ಚಿನ್ನಭಿನ್ನವಾಗಿ ವಿಂಗಡಿಸಲ್ಪಟ್ಟಿರುವದೆಂಬುದು ವಿಶದವಾಗುವದು. ಆದ್ದರಿಂದ ಭಾರತದ ಲಕ್ಷೋಪಲಕ್ಷ ವ್ಯವಸಾಯಗಾರರು ಈ ರೀತಿ ಎಕರೆಗಿಂತ ಕಮ್ಮಿ ಭೂಮಾಲಿಕರೆಂಬುದು ನಿರ್ವಿವಾದ.

ಹೀಗೆ ವಿಂಗಡಿಸಲ್ಪಟ್ಟ ಭೂಮಿಯಾದರೂ ಒಂದೊಂದೇ ಬ್ಲಾಕಿನಲ್ಲಿರದೆ ಇತರರ ಭೂಮಿಯ ಮಧ್ಯ ಮಧ್ಯದಲ್ಲಿರುವದರಿಂದ ಅದು ಇನ್ನಷ್ಟು ವ್ಯವಸಾಯಕ್ಕೆ ತೊಂದರೆ ಕೊಡುತ್ತದೆ. ಒಂದು ಕಡೆಯಲ್ಲಿ ಈ ಗದ್ದೆಗಳಿಗೆ ತೆವರಿಹಾಕುವದರಿಂದ ಭೂಮಿ ಹಾಳಾಗುವದಲ್ಲದೆ ಒಂದು ಕಡೆಯಿಂದ ಒಂದು ಕಡೆಗೆ ಹೋಗಬೇಕಾದ ಪ್ರಯುಕ್ತ ಕೆಲಸವೂ ಹಾಳಾಗುತ್ತದೆ. ಅಲ್ಲದೆ ಮಾಲೀಕನಿಗೆ ತನ್ನ ಎಲ್ಲಾ ಭೂಮಿಯ ಮೇಲೆ ಒಂದೇ ತರದ ದೃಷ್ಟಿಯಿಡಲೂ ಅಸಾಧ್ಯವಾಗುವದು. ಇದೆಲ್ಲಾ ವ್ಯವಸಾಯ ತತ್ವದ ನ್ಯೂನತೆಗಳಾದುದರಿಂದ ಭಾರತದ ವ್ಯವಸಾಯ ಕಸುಬು ಸುವ್ಯವಸ್ಥಿತ ರೀತಿಯಲ್ಲಿ ನಡೆಯುವದಿಲ್ಲವೆಂದು ಹೇಳಬಹುದು. ಹೀಗೆ ಒಂದೆಡೆ ವ್ಯವಸಾಯವು ಹವತಪ್ಪಿ ನಡೆಯುತ್ತಿರಲು ಮನೆ ಕಡೆ ಸಂಸಾರವು ಹೆಚ್ಚಿ ಕೂಳಿಗೆ ಸೊನ್ನೆಯಾಗಿ ನಿರುದ್ಯೋಗಿಗಳಾಗಿ ಅಲೆಯುವದು ಪ್ರಾರಂಭವಾಯಿತು. ಹೀಗೆ ಭಾರತವು ಕೃಷಿಕರ ದೇಶವಾದ್ದರಿಂದ ಕೈಗಾರಿಕೆಗಳಿಗೆ ಸಾಕಷ್ಟು ಪ್ರೋತ್ಸಾಹವಿಲ್ಲ. ಪರದೇಶಿ ಮಾಲುಗಳ ಥಳಕನ್ನು ಜನತೆಯ ಮನಸ್ಸಿನಲ್ಲಿ ನಾಟಿಸಿ ಅದರ ದಾಸರಾಗುವಂತೆ ಮಾಡುವ ಪ್ರಯತ್ನವೊಂದು ಮಾತ್ರ ಸರಕಾರದಿಂದ ಯಶಸ್ವಿಯಾಗಿ ನಡೆಸಲ್ಪಡುತ್ತಿದೆ. ಪರದೇಶಗಳೊಡನೆ ಭಾರತ ವ್ಯಾಪಾರವು ಸರಾಗವಾಗಿ ನಡೆಯುವಂತೆ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿದೆ. ಆದರೆ ಅರ್ಧ ಹೊಟ್ಟೆಯಿಂದ ದಿಕ್ಕು ಕಾಣದೆ ತತ್ತರಿಸುತ್ತಿರುವ ಬಡ ರೈತನ ಆರ್ತಧ್ವನಿಯೂ, ಅತ್ತ ರೈತನಾಗಲೂ ಅನರ್ಹ, ಇತ್ತ ಕೈಗಾರಿಯನ್ನು ಕೈಕೊಳ್ಳಲೂ ಅಯೋಗ್ಯನೆಂದು ಬಹಿಷ್ಕೃತನಾಗಿ ಬೀದಿಯ ಭಿಕಾರಿಯಂತೆ ಅಲೆಯುತ್ತಿರುವ ನಿರುದ್ಯೋಗಿಯ ಕರುಳಿನ ಕೂಗೂ ಸರಕಾರ ಕಿವಿಗೆ ಮುಟ್ಟಿಲ್ಲ. ವ್ಯವಸಾಯಗಾರನ ಮಗನಾಗಿ ಜನಿಸಿ ಬೇರೆ ಕೈಗಾರಿಕೋದ್ಯಮವನ್ನು ಕೈಕೊಳ್ಳಲಾರದೆ ತನ್ನ ಪಿತ್ರಾರ್ಜಿತ ಉದ್ಯಮವನ್ನೇ ಕೈಕೊಂಡು ತಮ್ಮ ಭೂಮಿಯನ್ನು ಇನ್ನಷ್ಟು ಛಿದ್ರಛಿದ್ರವಾಗಿ ವಿಂಗಡಿಸಿಕೊಳ್ಳುವದೊಂದೇ ಇಂದು ನಿರ್ಭಾಗ್ಯ ರೈತನ ಜೀವದಾರಿಯಾಗಿದೆ. ಈ ನೆಲೆಯಿಂದ ನಿಂತಿರುವ ಹವ್ಯಾಸವನ್ನು ನಿಲ್ಲಿಸುವದು ಸುಲಭ ಸಾಧ್ಯವಲ್ಲ. ಹಾಗೆ ಸರಕಾರದ ಖಾಯಿದೆಯ ಮೂಲಕ ಈ ಭಿನ್ನ ಭಿನ್ನ ಕ್ಷೇತ್ರಗಳನ್ನು ಐಕ್ಯಗೊಳಿಸಿ ವ್ಯವಸಾಯ ಯೋಗ್ಯ ಕ್ಷೇತ್ರಗಳಾಗಿ ಮಾಡಿದರೂ ಅದರಿಂದ ದೇಶದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುವದಲ್ಲದೆ ಬೇರೆ ಇಲ್ಲ. ಆದ್ದರಿಂದ ದೇಶದ ವ್ಯವಸಾಯವು ನಿಯಮಬದ್ಧವಾಗಿ ನಡೆಯಬೇಕೆಂಬ ಸರಕಾರವು ವ್ಯವಸಾಯ ಕ್ಷೇತ್ರಗಳನ್ನು ಏಕೀಕರಿಸಿ ಆ ಫಲವಾಗಿ ನಿರುದ್ಯೋಗಿಗಳಾಗುವವರಿಗೆ ಕೈಗಾರಿಕೆಯ ಅನುಕೂಲತೆಯನ್ನು ಕಲ್ಪಿಸಬೇಕು. ದೇಶದಲ್ಲಿ ಕೈಗಾರಿಕೆ ಪ್ರೋತ್ಸಾಹವು ನಡೆದು ವ್ಯವಸಾಯವು ಶಾಸ್ತ್ರೀಯ ರೀತಿಯಲ್ಲಿ ನಡೆಯಬೇಕು.

ಮುಂದಿನ ಲೇಖನದಲ್ಲಿ ಭಾರತ ವ್ಯವಸಾಯ ಕ್ರಮದಲ್ಲಿರುವ ಹೆಚ್ಚಿನ ನ್ಯೂನತೆಗಳನ್ನು ತರ್ಕಿಸುವೆವು.

ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾಸಭೆ.

ತಾ. 10-4-39ರಲ್ಲು ಹೊಸಕೇರಿ, ಮರಗೋಡು, ಕಟ್ಟೆಮಾಡು, ಐಕೊಳ ಗ್ರಾಮಾಂತರದ ಮರಗೋಡು ಸ್ಕೂಲ್ ಬಳಿ ನಡೆಸಿದ ಕೊಡಗು ಗೌಡ ವಿದ್ಯಾ ಸಂಘದ ವಾರ್ಷಿಕ ಮಹಾ ಸಭೆಯ ಪ್ರೊಸಿಡಿಂಗ್ಸ್.

ಈ ದಿನದ ಮಹಾಸಭೆಗೆ ಸಭಾಧ್ಯಕ್ಷರನ್ನಾಗಿ ಶ್ರೀಮಾನ್ ಯನ್. ಮುದ್ದಪ್ಪ ಬಿ. ಎ. ಬಿ. ಎಲ್. ಮುನ್ಸೀಫರವರನ್ನು ಮೆ. ಸಿ. ಕೆ. ಪೊನ್ನಪ್ಪನವರು ಸೂಚಿಸಿ ಮೆ. ಕೆ. ಪಿ. ಸೋಮಪ್ಪನವರು ಅನುಮೋದಿಸಲಾಗಿ ಸರ್ವ ಸಮ್ಮತದಿಂದ ಶ್ರೀಮಾನ್ ಮುದ್ದಪ್ಪನವರು ಸಭಾಧ್ಯಕ್ಷತೆಯನ್ನು ವಹಿಸಿದರು.

ಸ್ವಾಗತ ಅಧ್ಯಕ್ಷರಾದ ಮೆ. ಪರ್ಚನ ಪೂವಯ್ಯನವರು ಮಹಾ ಸಭೆಗೆ ಸ್ವಾಗತ ಬಯಸಿದ ಭಾಷಣವನ್ನು ಓದಿದರು.

ಸಂಘದ ವಾರ್ಷಿಕ ವರದಿಯನ್ನು ಸೆಕ್ರೆಟರಿಯವರು ಓದಲಾಗಿ ವಿಷಯಗಳನ್ನು ಚರ್ಚಿಸಿ ಪ್ರೆಸಿಡೆಂಡರು ಟಿ. ಯಂ. ಅನಂದಯ್ಯನವರ ರಾಜನಾಮೆಯ ಕುರಿತು ಕೂಲಂಕುಶವಾಗಿ ವಿಮರ್ಶಿಸಿದನಂತರ ವರದಿಯನ್ನು ಒಪ್ಪಲಾಯಿತು.

ಗೌಡ ಬಾಲಕ ವಿದ್ಯಾರ್ಥಿನಿ ಬೋರ್ಡಿಂಗಿನ ವರದಿಯನ್ನು ಸದರಿ ಬೋರ್ಡಿಂಗ್ ಮೇನೇಜರಿಂದ ಓದಿ ಒಪ್ಪಲಾಯಿತು.

ಸಂಘದ 1938-39ರ ಲೆಕ್ಕದ ಆಡಿಟ್ ವರದಿಯನ್ನು ಓದಲಾಗಿ ವರದಿಯು ಸರಿಯಾಗಿಲ್ಲವೆಂದು ಕಂಡು ಬಂದು ವರದಿಯನ್ನು ಒಪ್ಪಲಾಗಲಿಲ್ಲ. ಆದುದರಿಂದ ಮೆ. ಗಳಾದ (1) ತೆಕ್ಕಡ ಪೂವಯ್ಯನವರು, ತೆಕ್ಕಡ ಮುತ್ತಪ್ಪನವರು, (3) ಚೆರಿಯಮನೆ ಕೃಷ್ಣಪ್ಪನವರುಗಳನ್ನು ಲೆಕ್ಕದ ಆಡಿಟ್ ಕಮಿಟಿಗಳಾಗಿ ನೇಮಿಸಿ ಪುನಹ ಸಂಘದ ಲೆಕ್ಕವನ್ನು ಸದರಿಯವರು ಆಡಿಟ್ ಮಾಡಿ ಸಂಘದ ಮುಂದಿನ ಕಾರ್ಯ ನಿರ್ವಾಹಕ ಸಭೆಯ ಮುಂದೆ ಇಡುವಂತೆ ತೀರ್ಮಾನಿಸಲಾಯಿತು.

ಗತ ವರ್ಷದ ವಾರ್ಷಿಕ ಮಹಾ ಸಭೆಯ ಪ್ರೊಸಿಡಿಂಗ್ಸನ್ನು ಓದಿ ವಿಮರ್ಶೆಯಿಂದ ಮಂಜೂರು ಮಾಡಲಾಯಿತು.

ಮೆ. ಕೊಡಿಕಲ್ಲು ಕಾರ್ಯಪ್ಪನವರು ಮಡಿಕೇರಿ ಗೌಡ ರೀಡಿಂಗ್ ರೂಮಿನ ಕಟ್ಟಡಕ್ಕೆ ಬೇಕಾದ ಮರಕ್ಕೆ ಅವರ ಕುಟುಂಬದ ಜಾಗದಿಂದ ಮುಫತ್ತಾಗಿ ಮರ ಕೊಟ್ಟದ್ದಕ್ಕೆ ಅವರ ಕುಟುಂಬದ ಹೆಸರಿನ ಶಿಲಾಶಾಸನವನ್ನಿಡುವ ವಿಷಯ ಬರಕೊಂಡ ಅರ್ಜಿಯನ್ನು ಓದಲಾಗಿ ಅಂಗೀಕರಿಸಲಾಯಿತು.

ಶ್ರೀಮತಿ ಯಂ. ಪಿ. ಪಾರ್ವತಿಯವರು ತಾನು ಕಳೆದ ವರ್ಷ ಸಂಗೀತ ತರಬೇತಿಗೆ ಹೋದಾಗ ಗೌಡ ವಿದ್ಯಾ ಸಂಘದಿಂದ ಸ್ಕಾಲರ್‌ಶಿಫ್ ಕೊಟ್ಟು ಇನ್ನು ಒಂದು ವರ್ಷದ ತರಬೇತು ಇರುವ ಕಾರಣ ಸದರಿ ತರಬೇತಿಗಾಗಿ ಸಂಘದಿಂದ 120 ರೂ. ಗಳ ಸ್ಕಾಲರ್‌ಶಿಫ್ ಕೊಡಬೇಕಾಗಿ ಬರಕೊಂಡ ಅರ್ಜಿಯನ್ನು ಓದಲಲಾಗಿ 50 ರೂ. ಸ್ಕಾಲರ್‌ಶಿಫ್ ಕೊಡಬಹುದೆಂದೂ, ಶ್ರೀಯುತ ಬಿ. ಡಿ. ಅಪ್ಪಯ್ಯನವರು ತನಗೆ ಇಂಟರ್ ಮಿಡಿಯೇಟ್ ಕ್ಲಾಸು ಓದುವದಕ್ಕೆ ರೂ. 300 ಕೊಡಿಸಬೇಕೆಂದು ಬರಕೊಂಡ ಅರ್ಜಿಯನ್ನು ಓದಲಾಗಿ ಕಳೆದ ವರ್ಷ ಸಂಘದಿಂದ ಸ್ಕಾಲರ್‌ಶಿಫ್ ಆಯುರ್ವೇದಿಕ್ ಕಾಲೇಜಿನಲ್ಲಿ ಓದುವ ಶ್ರೀಮತಿ ಕೆ. ಬಿ. ಚನ್ನಮ್ಮನವರು ಕೊಡಬಹುದಾದ ಈ ವರ್ಷದ ಸ್ಕಾಲರ್‌ಶಿಫ್ ಅರ್ಜಿಯನ್ನು ನೋಡಿ ಅವರಿಗೆ ಮಂಜೂರು ಮಾಡುವ ಹಣ ಕೊಟ್ಟು, ಸಂಘದ ಖರ್ಚಿನ ಬಗ್ಗೆಬೇಕಾದ ಹಣ ಇಟ್ಟು, ಹೆಚ್ಚಿಗೆ ಹಣ ವಸೂಲಾದಲ್ಲು 100 ರೂ. ಸ್ಕಾಲರ್‌ಶಿಫ್ ರೂಲ್ ಅನುಸರಿಸಿ ಕೊಡಬಹುದೆಂದೂ ತೀರ್ಮಾನಿಸಲಾಯಿತು.

ಮೆ. ಸೂದನ ತಮ್ಮಯ್ಯನವರು ಗೌಡ ಜನಾಂಗದವರಲ್ಲಿ ಮೆಜಾರ್ಟಿಗೆ ಬಂದ ಪ್ರತಿಯೊಬ್ಬ ಮಹನೀಯರಿಂದ ತಲಾ 1ರ ನಾಲ್ಕಾಣೆ ಚಂದಾ ವಸೂಲು ಮಾಡುವದು ಎಂದು ತಂದ ಠರಾವು ಧೀರ್ಘಚರ್ಚೆಯಿಂದ ಒಂದು ವರ್ಷದ ಮಟ್ಟಿಗೆ ಗಂಡಸರೂ, ಹೆಂಗಸರೂ ಸಹ ನಾಲ್ಕಾಣೆಯಂತೆ ಚಂದ ಕೊಡಬೇಕೆಂತ ತೀರ್ಮಾನಿಸಲಾಯಿತು.

ಶ್ರೀಮಾನರಾದ ಚೆರಿಯಮನೆ ಕುಶಾಲಪ್ಪ ಮತ್ತು ಕೋರನ ಮಾದಯ್ಯನವರು ಶಿವಾಧೀನರಾದುದಕ್ಕೆ ಈ ಮಹಾಸಭೆಯು ಸಂತಾಪವನ್ನು ಸೂಚಿಸುತ್ತದೆಂದು ಮೆ. ಯನ್ ಸೋಮಣ್ಣನವರು ಸೂಚಿಸಿದ ಠರಾವು ಪಾಸಾಗಿ ಅಂಗೀಕರಿಸಲಾಯಿತು.

ಗೌಡ ಜನಾಂಗದ ವಿದ್ಯಾರ್ಥಿಗಳಿಗೆ ಎಸ್. ಎಸ್. ಎಲ್.ಸಿ ಕ್ಲಾಸ್ ವರೆಗೆ ಸರಕಾರದವರು ಸ್ಕೂಲ್ ಫೀಸ್ ಮಾಫಿ ಮಾಡಿಸಬೇಕೆಂದು ಈ ಸಭೆಯು ಸರ್ಕಾರದವರನ್ನು ಕೇಳಿಕೊಳ್ಳುತ್ತದೆಯೆಂತ ತೀರ್ಮಾನಿಸಲಾಯಿತು.

ಸರ್ಕಾರದ ಗೌಡ ಬೋರ್ಡಿಂಗನ್ನು ಇತರ ಮಹನೀಯರಿಗೆ ಮದುವೆ ಮುಂತಾದ ಕಾರ್ಯಗಳಿಗೆ ಬಿಟ್ಟು ಕೊಡಬಾರದಾಗಿ ಕೊಡಗು ಕಮಿಶನವರನ್ನು ಈ ಸಭೆಯು ಕೇಳಿಕೊಳ್ಳುತ್ತದೆಂದು ತೀರ್ಮಾನಿಸಲಾಯಿತು.

ಗೌಡಬಾಲಕಿ ವಿದ್ಯಾರ್ಥಿ ಬೋರ್ಡಿಂಗಿನಲ್ಲಿ ಕಮ್ಮಿ ಪಕ್ಷ 10 ಹುಡುಗಿಯರಿದ್ದರೆ ಮಾತ್ರ ಬೋರ್ಡಿಂಗ್ ಬಾಡಿಗೆ ಸಂಘದಿಂದ ಕೊಡಬಹುದೆಂದು ಶ್ರೀಯುತ ದಂಬೆಕೋಡಿ ಮಂದಣ್ಣನವರು ತಂದ ಠರಾವು ಕೊನೆಯ ಪಕ್ಷ 5 ಹುಡುಗಿಯರಿದ್ದರೆ ಬೋರ್ಡಿಂಗ್ ಬಾಡಿಗೆ ಸಂಘದಿಂದ ಕೊಡಬಹುದೆಂದು ತೀರ್ಮಾನವಾಯಿತು.

ಗೌಡ ಬೋರ್ಡಿಂಗ್ ವಾರ್ಷಿಕೋತ್ಸವಕ್ಕೆ ವಸೂಲಾದ ಹಣವನ್ನು ಪೋಸ್ಟಾಫೀಸಿನಲ್ಲಿ ಡಿಪಾಜಿಟ್ ಮಾಡಬೇಕೆಂದು ತೀರ್ಮಾನವಾಯಿತು.

ಈ ಕೆಳಗಿನ ಮಹನೀಯರು ಸಂಘದ ಕಾರ್ಯ ನಿರ್ವಾಹಕ ಮಂಡಳಿಗೆ ಚುನಾಯಿತರಾದರು–

ಮೆ. ಗಳಾದ (1) ಯಂಕನ ಮಾದಯ್ಯನವರು, (2) ಪೇರಿಯನ ಪೂವಯ್ಯನವರು (ಖಜಾನ್ಜಿ), (3) ಕರ್ಣಯ್ಯನ ಮಾದಪ್ಪನವರು, (4) ಟಿ. ಯಸ್. ಬೋಪಯ್ಯನವರು, (5) ಸೂದನ ತಮ್ಮಯ್ಯನವರು, (6) ಕೋರನ ದೇವಯ್ಯನವರು, (7) ಕೋಚನ ದೊಡ್ಡಯ್ಯನವರು, (8) ಚೆರಿಯಮನೆ ಮಂದಣ್ಣನವರು, (9) ದಂಬೆಕೋಡಿ ಮಂದಣ್ಣನವರು, (10) ಮಟಿರ ಪೊನ್ನಪ್ಪನವರು, (11) ಕೆ. ಟಿ. ...ಬ್ಬಯ್ಯನವರು (12) ಕೆದಂಬಾಡಿ ಚೇ...ಪ್ಪನವರು, (13) ಕಟ್ಟೆಮನೆ ಮುತ್ತಪ್ಪ...ವರು, (14) ಎನ್. ಮುದ್ದ... ಬಿ. ಎ. ಬಿ. ಎಲ್. ರವರನ್ನು ಪ್ರೆಸಿಡೆಂಟರನ್ನಾಗಿಯೂ, (15) ಪರ್ಚನ ಪೂವಯ್ಯನವರನ್ನು ವೈಸ್ ಪ್ರೆಸಿಡೆಂಟರನ್ನಾಗಿಯೂ, (16) ಚರಿಯಮನೆ ಪೊನ್ನಪ್ಪನವರನ್ನು ಸೆಕ್ರೆಟರಿಯನ್ನಾಗಿಯೂ ಆರಿಸಲಾಯಿತು.

ಮೆ. ಕುಂಬುಗೌಡನ ಅಪ್ಪಯ್ಯನವರನ್ನು ಗೌಡ ಬೋರ್ಡಿಂಗ್ ಮೇನೇಜರಾಗಿ ನೇಮಿಸಲಾಯಿತು.

ರೂ. 20-14-3 ಚಂದಾ ಮತ್ತು ಕಾಣಿಕೆ ವಸೂಲಾಯಿತು.

ಸಭಾಧ್ಯಕ್ಷರು ಗೌಡ ಜನಾಂಗದ ವಿದ್ಯಾ ಪ್ರಸಾರದ ಮತ್ತು ಚಂದಾ ವಸೂಲಾತಿ ವಿಷಯದಲ್ಲಿ ದೀರ್ಘ ಭಾಷಣ ಮಾಡಿದರು.

ಸಭಾಧ್ಯಕ್ಷರಿಗೂ ಮತ್ತು ಸಭಿಕರಿಗೂ ಸ್ವಾಗತಾಧ್ಯಕ್ಷರು ವಂದಿಸಿ ಮೆ. ಸಿ. ... ಪೊನ್ನಪ್ಪನವರು ಮಂಗಳ ಹಾಡಿದನಂತರ ಸಭೆಯು ಮುಕ್ತಾಯವಾಯಿತು.

ಎನ್. ಮುದ್ದಪ್ಪ,
(ಸಭಾಧ್ಯಕ್ಷರು)

ಕೊಡಂದೇರ ಡಿ. ಮಾಚಯ್ಯ,

L. D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

'DENTAL CLINIC

ನಲ್ಲಿ ವಿಚಾರಿಸಿರಿ. 2

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

8 **Ludhiana.**

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 26ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, **ಸೌತ್ ಪೆರೇಡ್, ಬೆಂಗಳೂರು.**

52–14

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೇ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ ಖರ್ಚು ಬೇರೆ |

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೇ.
ಮತ್ತು ಕಂಪೆನಿ,

(52–27) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ ಮಾದಮ್ಮಯ್ಯನವರು.
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಚೆಲ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಿಲ್ಲದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲವವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ಫ್ರಿಕ್ಸ್ಡ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ. 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಫ್ರಿಕ್ಸ್ಡ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಫ್ರಿಕ್ಸ್ಡ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1–8–1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಸಿ. ದೇವಯ್ಯನವರು.
ಸೆಕ್ರೆಟರಿ:—ಮ. ಎಸ್. ಎನ್. ರಾಮಶೆಟ್ಟಿಯವರು.

ತಾ. 1–1–1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ:

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"
ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(82–23)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. | ತಾ. ೨೩—೬—೧೯೩೯. | ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೯] [ಸಂಚಿಕೆ ೩

THE CANARA BANKING CORPORATION, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000/-
are now issued at
all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9. Sakleshpur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore, 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-27

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೇಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-17

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕಾಲಂ ಉಪದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

30

ನಿಮಗೆ ತೃಪ್ತಿಯ ...ಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–2

The Agricultural &
Industrial Bank Ltd

"ZANDU"

ಝುಂಡೂರವರ	ಝುಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝುಂಡೂ ಆಯೋಡೈಸ್ಡ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತಕ್ಕಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್
(52–38) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು–ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ನಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

[illegible] ಅಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

12–35

ಸಾಮಾಜಿಕ ಕಾದಂಬರಿ.

ದೇವದತ್ತ.

೨೨ ಅಧ್ಯಾಯ.

ವೈದರು ತಮ್ಮ ಆಸನವನ್ನು ಅಲಂಕರಿಸಿದೊಡನೆ ಆ ಸಭೆಯಲ್ಲಿ ಒಂದು ಅರ್ಥರಹಿತವಾದ ಘೋಷವು ನೆಲೆಗೊಂಡಿತು. ಕೆಲವರು ಅವರ ವಾಕ್ಚಾತುರ್ಯವನ್ನು ಹೊಗಳಿದರು. ಕೆಲವರು ತತ್ವವನ್ನು ಶ್ಲಾಘಿಸಿದರು. ಕೆಲವರು ಅವರ ಬುದ್ಧಿವಾದವನ್ನು ಕೊಂಡಾಡಿದರು. ಇನ್ನು ಕೆಲವರು 'ಕಾಲೋಚಿತ ಹೆಚ್ಚಿನ ವಿಷಯಗಳನ್ನು ಒಬ್ಬರಿಂದೊಬ್ಬರು ತಿಳಿದುಕೊಳ್ಳಬಹುದೆಂದರಷ್ಟೇ. ಈ ಮಾತಿನ ಅರ್ಥವೇನು? ಅವರೇನಾದರೂ ನಮ್ಮ ಪಟ್ಟಣದಲ್ಲಿ ನೆಲೆಯಾಗಿ ನಿಲ್ಲುವರೇ? ಹಾಗೇನಾದರೂ ಮಾಡಿದಲ್ಲಿ ನಮ್ಮ ಭಾಗ್ಯವನ್ನು ಎಷ್ಟು ಕೊಂಡಾಡಬೇಕು' ಎಂದು ಒಬ್ಬೊಬ್ಬರು ಒಂದೊಂದು ವಿಧ ಮಾತಾಡುತ್ತಿರುವಷ್ಟರಲ್ಲಿ, ಅಲ್ಲಿ ನೆರೆದವರ ಪೈಕಿ ವೃದ್ಧನೊಬ್ಬನು ಎದ್ದು, 'ಮಿತ್ರರೇ! ನಮ್ಮ ಭಾಗ್ಯವನ್ನು ಎಷ್ಟೆಂದು ಹೊಗಳಿದರೂ ಸಾಲದು. ನಮ್ಮ ಗ್ರಾಮ ದೇವರ ದಯದಿಂದಲೋ ಅಲ್ಲ, ನಮ್ಮ ಗುರುಹಿರಿಯರು ಮಾಡಿದ ಸುಕೃತದ ಫಲದಿಂದಲೋ ಈ ಮಹನೀಯರು ನಮ್ಮ ಈ ಗ್ರಾಮಕ್ಕೆ ದಯಮಾಡಿಸಿದರು. ಅವರ ಯೋಗ್ಯತೆಯನ್ನೂ, ಅವರ ವಿದ್ಯೆಯನ್ನೂ, ಐಶ್ವರ್ಯವನ್ನೂ ಗಣಿಸಿದ್ದಾದರೆ ನಾವೆಲ್ಲ ಅವರ ಕಾಸ್ತಾರರಾಗಿರಲೂ ಸಹ ಯೋಗ್ಯರಲ್ಲ. ಆದರೂ ಅವರು ತಮ್ಮ ಮಹತ್ವದವಿಯನ್ನು ತೃಣಕ್ಕಣೆಯಾಗಿ ಭಾವಿಸಿ ಬಡ ಬಗ್ಗರಾದ ನಮ್ಮಂಥಾ ಹಳ್ಳಿಗೌಡರ ಗುಡಿಸಲುಗಳಿಗೆ ಸಹ ಇಷ್ಟು ಆದರಪೂರ್ವಕವಾಗಿ ದಯಮಾಡಿಸಿ ಕಾಸಿನ ಪ್ರತಿಫಲವನ್ನೂ ಕೂಡ ಅಪೇಕ್ಷಿಸದೆ ಇವರು ನಮಗೆ ತೋರಿಸಿದ ಅದ್ವಿತೀಯವಾದ ಪರೋಪಕಾರಕ್ಕೂ, ಅವರು ಇಂದು ಭೋಧಿಸಿದ ಬುದ್ಧಿವಾದಕ್ಕೂ ನಾವು ಎಂದೆಂದೂ ಋಣಿಗಳಾಗಿದ್ದೇವೆ. ಇವರ ನಿರಹಂಕಾರದ ಸ್ವಭಾವವೂ ಬಡವರ ಮೇಲಿರತಕ್ಕ ಪ್ರೀತಿಯು ನಮಗೂ ಮತ್ತು ನಮ್ಮ ಮಕ್ಕಳಿಗೂ ಉದಾಹರಣೆಯಾಗಿರಬೇಕು. ಇವರನ್ನು ಹೆತ್ತ ಭಾಗ್ಯಶಾಲಿಗಳಾದ ಮಾತೃಪಿತೃಗಳಿಗೆ ನಾವೆಷ್ಟು ಕೃತಜ್ಞರಾಗಿದ್ದರೂ ಸ್ವಲ್ಪವೇ. ಶ್ರೀ ಭಗವಂತನು ಇವರಿಗೂ, ಇವರ ಗೆಳತಿಗೂ ಚಿರಾಯುರಾರೋಗ್ಯ ಐಶ್ವರ್ಯ ಸಂಪದಗಳನ್ನು ಕೊಟ್ಟು ಅನವರತ ರಕ್ಷಿಸಲೆಂದು ದೇವರನ್ನು ಬೇಡಿಕೊಳ್ಳುತ್ತೇನೆ' ಎಂದು ಹೇಳಿ ಕೈಮುಗಿದು ಕುಳಿತನು.

ನೆರೆದಿದ್ದವರೆಲ್ಲರೂ ಕೈಚಪ್ಪಾಳೆ ಹೊಡೆದರು. ಒಬ್ಬಿಬ್ಬರು ಮಕ್ಕಳು ಸಂಗೀತ ಹಾಡಿದರು. ಆ ಮೇಲೆ ಎಲ್ಲರೂ ಗುಣವತಿಗೆ ಭಕ್ತಿಪೂರ್ವಕವಾಗಿ ಪ್ರಣಾಮ ಮಾಡಿ ಸೋಮದತ್ತ ಮತ್ತು ವೈದ್ಯರಿಂದ ಬೀಳ್ಕೊಂಡು ತಂತಮ್ಮ ಮನೆಗಳಿಗೆ ನಡೆದರು.

ಸೋಮದತ್ತನ ಒಬ್ಬಿಬ್ಬರು ಆಪ್ತರು ಮತ್ತು ವೈದ್ಯರು ಆ ದಿವಸ ಅಲ್ಲಿಯೇ ಉಳಿದರು. ರಾತ್ರಿಯಾಯಿತು. ಎಲ್ಲರೂ ತಂತಮ್ಮ ಕಾರ್ಯಗಳನ್ನಾಚರಿಸಿದರು. ಸ್ವಲ್ಪ ಹೊತ್ತಿನಲ್ಲೇ ಊಟವಾಯಿತು. ಎಲ್ಲರೂ ಬಂದು ನಡುಮನೆಯಲ್ಲಿ ಕುಳಿತರು. ಗುಣವತಿಯು ವೈದ್ಯನನ್ನು ಕುರಿತು 'ಮಗನೇ! ನಿನ್ನ ಹೆಚ್ಚಿನ ಚಾರಿತ್ರೆಯನ್ನು ತಿಳಿಯಲು ನಾವೆಲ್ಲಾ ತವಕಿಸುತ್ತಿದ್ದೇವೆ. ಇನ್ನಾದರೂ ತಿಳಿಸಬಾರದೇ?' ಎಂದು ಕೇಳಿದರು.

ವೈದ್ಯರ ಮುಖ ಕಾಂತಿಯು ಹಟಾತ್ತಾಗಿ ಒಮ್ಮೆ ಕಾಂತಿಹೀನವಾಗಿ, ಮರುಕ್ಷಣದಲ್ಲೇ ಕಳೆ ಏರುತ್ತಾ ಬಂದಿತು. ಶರೀರವು ಸೂಕ್ಷ್ಮವಾಗಿ ಕಂಪಿಸತೊಡಗಿತು. ಬಿಕ್ಕುವ ಸ್ವರದಿಂದ ಹೇಳಲಾರಂಭಿಸಿದರು.

'ಮಾತೆಯೇ! ನಿರೂಪಿಸುತ್ತೇನೆ. ನನ್ನ ತಾಯಿಗೆ ನಾವು ಮೂರು ಮಕ್ಕಳು. ಒಂದು ಹೆಣ್ಣು, ಇಬ್ಬರು ಗಂಡು. ನಾನು ಕೆಳಗಿನ ತರಗತಿಯಲ್ಲಿ ಓದುತ್ತಿದ್ದಾಗಲೇ ನನ್ನ ತಂದೆಯು ಸ್ವರ್ಗಸ್ಥರಾದರು. ಆ ಮೇಲೆ ನಮ್ಮ ಸಂಸಾರವನ್ನು ನಡೆಸುವ ಭಾರವು ನನ್ನ ತಾಯಿ ಮತ್ತು ಅಣ್ಣನ ಹೆಗಲ ಮೇಲೆ ಬಿದ್ದಿತು. ಆದುದರಿಂದ ನನ್ನ ಅಣ್ಣನು ತನ್ನ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನು ಕೊಟ್ಟು ಗೃಹಕೃತ್ಯವನ್ನು ನಡೆಸತೊಡಗಿದನು. ವಿದ್ಯೆಯಲ್ಲಿ ನಾನು ಸ್ವಲ್ಪ ಚುರುಕು ಇದ್ದನಾದ ಕಾರಣ ನನ್ನನ್ನು ಶಾಲೆಯಲ್ಲಿ ಮುಂದುವರಿಯಲು ಬಿಟ್ಟರು. ಎರಡು ವರ್ಷಗಳಲ್ಲಿ ನನ್ನ ಸಹೋದರನ ಲಗ್ನವಾಯಿತು.'

'ನಾನು ಕೆಳಗಿನ ತರಗತಿಯಲ್ಲಿ ಓದುತ್ತಿದ್ದಾಗ ನನಗೊಬ್ಬ ಯುವತಿಯ ಮೈತ್ರಿಯು ದೊರೆಯಿತು. ಅವಳೊಬ್ಬ ಜಡ್ಜಿಯ ಮಗಳಾಗಿದ್ದಳು. ನಮ್ಮೊಳಗೆ ಮೊಳಕೆಯೊಡೆದ ಆ ಪ್ರೇಮವು ಕ್ರಮೇಣ ಬಲವಾಗುತ್ತಾ ಬಂತು. ಈ ಮಧ್ಯೆ ಆಕೆಯ ತಂದೆಯು, ತಾನಿದ್ದ ಸ್ಥಳದಿಂದ ಪರ ಸ್ಥಳಕ್ಕೆ ತೆರಳಿದನಾದ ಕಾರಣ ಆ ಯುವತಿಯೂ ಶಾಲೆಯಿಂದ ಅಗಲಿ ಹೋದಳು. ಆದರೆ ನನಗೆ ಅವಳ ಮೇಲಿದ್ದ ಪ್ರೇಮವು ಮಾತ್ರ ಅಳಿಸಲಿಲ್ಲ ಅದು ಬಹುತರವನ್ನು ಹೊಂದತೊಡಗಿತು. ಆದರೆ ಕ್ರಮೇಣ ಅದು ಶಮನವಾಗಹತ್ತಿತು. ಅಂತು ಸುಮಾರು ಐದಾರು ವರ್ಷಗಳ ವರೆಗೆ ನಾವುಒಬ್ಬರನ್ನೊಬ್ಬರು ಕಾಣಲಿಲ್ಲ.'

'ಈ ಮಧ್ಯೆ ನಾನು ಮೆಟ್ರಿಕ್ಯುಲೇಶನ್ ಪಾಸಾಗಿ ಪ್ರೌಢ ವಿದ್ಯಾಭ್ಯಾಸಕ್ಕೆಂದು ಬೊಂಬಾಯಿಗೆ ಹೋದೆನು. ಅಲ್ಲಿ ನನಗೊಬ್ಬ ಐಶ್ವರ್ಯವಂತನ ಸ್ನೇಹವಾಯಿತು. ನಾಲ್ಕು ವರ್ಷಗಳಲ್ಲಿ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿ, ನಾನು ಮರಳಿ ಮನೆಗೆ ಬಂದೆನು.'

'ಎಷ್ಟು ಹೆಣಗಾಡಿದರೂ ನನಗೆ ತಕ್ಕದಾದ ಒಂದು ಉದ್ಯೋಗ ದೊರೆಯಲಾರದೆ ಹೋಯಿತು. ಕಡೆಗೆ ಒಂದು ನೌಕರಿಯ ಸಂಬಂಧವಾಗಿ ರೇವೆ ಪಟ್ಟಣಕ್ಕೆ ಹೋಗಬೇಕಾಯಿತು.'

ಮುದುಕಿಯೂ, ಇತರರೂ ವಿಸ್ಮಯವಾಗಿ ಕೇಳುತ್ತಿದ್ದರು. ವೈದ್ಯರು ಮುಂದುವರಿಸಿದರು.

'ರೇವೆ ಪಟ್ಟಣದಲ್ಲಿ ಆ ರಾತ್ರಿ ಉಳಿದಿದ್ದಾಗ್ಯೆ ಸಮುದ್ರ ದಡದಲ್ಲಿ ನನಗೆ ಬಹು ವರ್ಷದಿಂದ ತಪ್ಪಿಹೋದ ಗೆಳತಿಯ ಸಂಸರ್ಗವಾಯಿತು. ಅವಳನ್ನು ತುಂಟನೊಬ್ಬನು ಬಲತ್ಕಾರದಿಂದ ಬೊಂಬಾಯಿಗೆ ಕದ್ದೊಯ್ಯಲು ಪ್ರಯತ್ನಿಸುತ್ತಿದ್ದನು. ಆ ಅಬಲೆಯ ಸಹಾಯಾರ್ಥವಾಗಿ ನಾನು ಆ ದುಷ್ಟನನ್ನು ಹೊಡೆದೆನು. ಅವನ ಹತ್ತಿರ ತುಂಬಿದ 'ರಿವಾಲ್ವರ್' ಒಂದು ಇತ್ತು. ನಾವು ಹೊಡೆದಾಡುತ್ತಿದ್ದ ಹಾಗೆ ನಾನದನ್ನು ಅವನಿಂದ ಎಳಕೊಂಡೆನು.'

'ಬಂದೂಕವು ನನ್ನ ಕೈವಶವಾಯಿತು. ಆ ದುಷ್ಟನಿಗೆ ಏನು ಮಾಡಲೂ ತೋರದಾಯಿತು. ಈ ದುಷ್ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ನನ್ನ ಗೆಳತಿಯನ್ನು ನನ್ನ ವಶಕ್ಕೊಪ್ಪಿಸಿ ಎಲ್ಲಿಯೋ ಹೊರಟು ಹೋದನು. ಆ ಮೇಲೆ ನಾನು ನನ್ನ ಗೆಳತಿಯನ್ನು ಕುರಿತು 'ನೀನೆಲ್ಲಿಗೆ ಹೋಗಲಿಚ್ಛಿಸುವೆ ಹೇಳು. ನಾನು ನಿನ್ನನ್ನು ಅಲ್ಲಿಗೆ ಸುರಕ್ಷಿತವಾಗಿ ಮುಟ್ಟಿಸುತ್ತೇನೆ'ಂದೆನು. ಆದರೆ ಈ ಮಧ್ಯೆ ನನ್ನ ಗೆಳತಿಯ ಸಂಸಾರ ಸುಖದಲ್ಲಿ ನಾನಾ ಮಾರ್ಪಾಟುಗಳಾಗಿದ್ದವು. ಅವಳು ತಂದೆ ತಾಯಿಗಳಿಬ್ಬರನ್ನೂ ಕಳಕೊಂಡ ಅನಾಥೆಯಾಗಿದ್ದಳು. ಅಷ್ಟೇ ಅಲ್ಲದೆ ಈಗಾಗಲೇ ನಾನು ವಿವರಿಸಿದ ಆ ಕ್ರೂರ ಕೃತ್ಯದಲ್ಲಿ ಅವಳ ಮಲತಾಯಿಯು ಸೂತ್ರಧಾರಿಣಿಯಾಗಿದ್ದಳು. ಆದುದರಿಂದ ಅವಳಲ್ಲಿ ಹೋಗಲೂ ಒಪ್ಪದೆ ನನ್ನೊಡನೆ ಬರುವುದಾಗಿ ಹಟ ಹಿಡಿದಳು. ಅವಳನ್ನು ನನ್ನ ಮನೆಗೆ ಕರೆದೊಯ್ಯಲು ನನ್ನ ಬಡತನವು ಒಪ್ಪಲಿಲ್ಲ. ಆಕೆಯ ಪೆಟ್ಟಿಗೆಯಲ್ಲಿ ಅವಳ ತಂದೆಯ ವಿಲ್ ಇತ್ತು. ಇದರ ಪ್ರಕಾರ ಅವಳ ಹೆಸರಿನಲ್ಲಿ ಇಂಪೀರಿಯಲ್ ಬ್ಯಾಂಕಿನಲ್ಲಿ ಐವತ್ತು ಸಾವಿರ ರೂಪಾಯಿಗಳಿದ್ದವು. ಆದರೆ ಅವಳಿಗೆ 21 ವರ್ಷ ಪ್ರಾಯ ತುಂಬಿದ ಹೊರತು ಆ ಹಣವನ್ನು ಬ್ಯಾಂಕಿನಿಂದ ತೆಗೆಯಲು ಆ ವಿಲ್ಲಿನ ಬರವಣಿಗೆ ಪ್ರಕಾರ ಅಸಾಧ್ಯವಾಗಿತ್ತು. ಆದುದರಿಂದ ನಾನವಳನ್ನು ಬೊಂಬಾಯಿಗೆ ನನ್ನ ಸ್ನೇಹಿತನ ಮನೆಗೆ ಕರೆದೊಯ್ದೆನು. ಅಲ್ಲಿ ಅವಳನ್ನಿರಿಸಿ ಈ ವಿಲ್ಲಿನ ಆಧಾರದ ಮೇಲೆ ಅವರಿಂದ ಸಾಕಷ್ಟು ಹಣವನ್ನು ಪಡೆದು ವಿಲಾಯಿತಿಗೆ ವೈದ್ಯ ಶಾಸ್ತ್ರವನ್ನು ಅಭ್ಯಸಿಸಲು ಹೊರಟು ಹೋದೆನು.'

ಗುಣವತಿಯು ಕಣ್ಣೀರು ಸುರಿಸುತ್ತಾ, 'ಅಯ್ಯೋ ಪಾಪಿಗಳಾದ ನಿನ್ನ ತಾಯಿ ಮತ್ತು ಅಣ್ಣನ ಪಾಡೇನಾಯಿತು. ಅವರೂ ನಮ್ಮ ಹಾಗೆ ಪಾಪಿಗಳೇ ಆದರೆ?' ಎಂದಳು.

'ತಾಯಿಯೇ ನಾನು ಬೊಂಬಾಯಿಯಿಂದ ಇಂಗ್ಲಾಂಡಿಗೆ ಹೊರಡುವುದಕ್ಕೆ ಮೊದಲು, ಅವರಿಗೊಂದು ಕಾಗದವನ್ನು ಬರೆದೆನು. ನನ್ನನ್ನು ಹುಡುಕುವ ಪ್ರಯತ್ನವನ್ನು ಅವರಿಂದೂ ಮಾಡಬಾರದೆಂದೂ ನಾಲ್ಕು ವರ್ಷಗಳು ಕಳೆಯುತ್ತಲೇ ನಾನವರ ಪಾದತಲವನ್ನು ಸೇರುತ್ತೇನೆಂದೂ ಬರೆದೆನು'. ವೈದ್ಯನ ಶರೀರವು ಕಂಪಿಸುತ್ತಿತ್ತು. ಮಾತು ತೊದಲ ಹತ್ತಿತು.

ಗುಣವತಿಯು ಬೆಪ್ಪಾದವಳಂತೆ ವಿಶಾಲವಾಗಿ ಕಣ್ದೆರೆದು, 'ಅಯ್ಯೋ ನೀವು ಯಾರು?' ಎಂದು ಗಟ್ಟಿಯಾಗಿ ಕೇಳಿದಳು ಸೋಮದತ್ತನು ವಿಸ್ಮಯವಾಗಿ ಎದ್ದು ನಿಂತನು. ಸೋಮದತ್ತನ ಪತ್ನಿಯು ಮಾತ್ರ ನಗುಮುಖದಿಂದ, 'ನಾನಾ ದಿವಸವೇ ಹೇಳಲಿಲ್ಲವೇ?' ಎಂದಳು. ಹರೇಂದ್ರ ಕುಮಾರಿಯು ಹಟತ್ತಾಗಿ ಸೋಮದತ್ತನ ಹೆಂಡತಿಯನ್ನು ಆಲಂಗಿಸಿದಳು.

ವೈದ್ಯನು ಎದ್ದು ನಿಂತು, 'ಮಾತೆಯೇ ಮನ್ನಿಸು. ಅಣ್ಣಯ್ಯ ಕ್ಷಮಿಸು' ಎನ್ನುತ್ತಾ ತಾಯಿಯ ಪಾದವನ್ನಪ್ಪಿದನು. ಮನೆಯೆಲ್ಲಾ ಆಹ್ಲಾದದ ಆಲಯವಾಯಿತು. ಎಲ್ಲರೂ ಸಂತೋಷದಿಂದ ಪರವಶರಾದರು. ಕಮಲೆಯು (ಹರೇಂದ್ರ ಕುಮಾರಿ) ಪ್ರಣಾಮ ಮಾಡಿದಳು.

೨೩ನೇ ಅಧ್ಯಾಯ.

ನಾಗೇಶ–ಸ್ವಾಮಿ, ಪರಮಾಶ್ಚರ್ಯಕರವಾದ ಆ ನಂದವಾರ್ತೆಯನ್ನು ಕೇಳಿದಿರಾ? ನಮ್ಮ ಪುಣ್ಯವನ್ನು ಎಷ್ಟು ಹೊಗಳಿದರೂ ಸಾಲದು. ಇದಕ್ಕೆಲ್ಲಾ ಗುರುದತ್ತನ ಪೂರ್ವ ಪುಣ್ಯವೂ, ಗುಣವತಿಯ ಸತೀ ಧರ್ಮವೂ ಕಾರಣ. ಅವರ ಆನಂದಕ್ಕೆ ಪಾರವಿದೆಯೇ?

ಶ್ಯಾಮಣ್ಣ–ಏನು ಸ್ವಾಮಿ! ವಿಶೇಷವೇನು. ಗುಣವತಿಯೇನಾಯಿತು?

ನಾಗೇಶ–ನಿಮಗಿನ್ನೂ ತಿಳಿಯದೋ? ನೀವು ನಿನ್ನೆ ಸೋಮದತ್ತನ ಮನೆ ಔತಣಕ್ಕೆ ದಯಮಾಡಿಸಿದಿರಷ್ಟೆ. ಆ ವೈದ್ಯರು ಯಾರೆಂದು ತಿಳಿದಿರಾ? ನಮ್ಮ ಗುರುದತ್ತನ ಮಗ ದೇವದತ್ತನಲ್ಲವೇ?

ಶ್ಯಾಮಣ್ಣ–ಏನು? ದೇವದತ್ತನೆ?

'ಮತ್ತಾರು? ಸತ್ತು ಹೋದನೆಂದು ಕೆಲವರೂ, ಯಾವಳೋ ಒಬ್ಬಳೊಟ್ಟಿಗೆ ಓಡಿ ಹೋದನೆಂದು ಕೆಲವರೂ ಹೇಳುತ್ತಿದ್ದರಲ್ಲ. ಅವನೊಬ್ಬ ಸ್ನೇಹಿತನ ಸಹಾಯದಿಂದ ಇಂಗ್ಲಾಂಡಿಗೆ ಹೋಗಿ, ವೈದ್ಯ ವಿದ್ಯೆಯಲ್ಲಿ ಪಾರಂಗತನಾಗಿ ಈಗ ಹಿಂದಿರುಗಿ ಬಂದಿರುವನು' ಎಂದು ನಾಗೇಶನು ಹೇಳಿದನು.

'ನನಗೂ ಮೊದಲಿಂದಲೇ ಸಂಶಯವಿತ್ತು. ಆದರೆ ಅವ ಮುಖ ಲಕ್ಷಣಗಳೂ, ಶರೀರ ದಾರ್ಢ್ಯವೂ ಎಷ್ಟರ ಮಟ್ಟಿಗೆ ಬದಲಾಗಿವೆ ನೋಡಿ. ಇವನ ಹಣೆಯಲ್ಲಿ ಒಂದು ಗಾಯವಿದೆಯಲ್ಲವೇ'? ಎಂದು ದೇವದತ್ತನ ಮತ್ತೊಬ್ಬ ಗ್ರಾಮಸ್ಥನು ಹೇಳಿದನು.

'ಬದಲಾಗುವುದರಲ್ಲಿ ಆಶ್ಚರ್ಯವೇನು? ವರ್ಷಗಳೆಷ್ಟು? ಅದರಲ್ಲೂ ವಿಲಾಯಿತಿ ಹವವಲ್ಲವೇ? ಆ ಗಾಯವು ವಿಲಾಯಿತಿಯಲ್ಲಿ ಮೋಟಾರಿನಿಂದ ಬಿದ್ದು ಸಿಕ್ಕಿದ ಗಾಯವಂತೆ. ಆದುದರಿಂದಲೇ ಅವನನ್ನು ಗುರುತಿಸಲು ಆಗಲಿಲ್ಲ. ಬನ್ನಿ! ಹೋಗುವ! ಅವನನ್ನೊಮ್ಮೆ ಮಾತಾಡಿಸಿ ಬರುವ' ಎಂದು ಶ್ಯಾಮಣ್ಣನು ಕರೆದನು. [ಅಪೂರ್ಣ.

—೦0೦—

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–4

The Agricultural &
Industrial Bank Ltd

"ZANDU"

ಝುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝುಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝುಂಡೂ ಆಯೋಡೈಸ್ಡ್
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝುಂಡೂ ಪ್ಲೋಜಿಸ್ಟೆನ್.

ಇದು ನ್ಯುಮೋನಿಯಾ,ಕೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52–38) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತುಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬೆನಾರೀಸ್, ಬೆಳ್ಗಾರಿ, ಬೆಜವಾಡ, ಕಲ್ಕತ್ತಾ, ಕಾವನ್‌ಪುರ, ಡೆಹ್ರ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12–35

ಸಾಮಾಜಿಕ ಕಾದಂಬರಿ.

ದೇವದತ್ತ.

೨೨ ಅಧ್ಯಾಯ.

ವೈದರು ತಮ್ಮ ಆಸನವನ್ನು ಅಲಂಕರಿಸಿದೊಡನೆ ಆ ಸಭೆಯಲ್ಲಿ ಒಂದು ಅರ್ಥರಹಿತವಾದ ಘೋಷವು ನೆಲೆಗೊಂಡಿತು. ಕೆಲವರು ಅವರ ವಾಕ್ಚಾತುರ್ಯವನ್ನು ಹೊಗಳಿದರು. ಕೆಲವರು ತತ್ವವನ್ನು ಶ್ಲಾಘಿಸಿದರು. ಕೆಲವರು ಅವರ ಬುದ್ಧಿವಾದವನ್ನು ಕೊಂಡಾಡಿದರು. ಇನ್ನು ಕೆಲವರು 'ಕಾಲೋಚಿತ ಹೆಚ್ಚಿನ ವಿಷಯಗಳನ್ನು ಒಬ್ಬರಿಂದೊಬ್ಬರು ತಿಳಿದುಕೊಳ್ಳಬಹುದೆಂದರಷ್ಟೇ. ಈ ಮಾತಿನ ಅರ್ಥವೇನು? ಅವರೇನಾದರೂ ನಮ್ಮ ಪಟ್ಟದಲ್ಲಿ ನೆಲೆಯಾಗಿ ನಿಲ್ಲುವರೇ? ಹಾಗೇನಾದರೂ ಮಾಡಿದಲ್ಲಿ ನಮ್ಮ ಭಾಗ್ಯವನ್ನು ಎಷ್ಟು ಕೊಂಡಾಡಬೇಕು' ಎಂದು ಒಬ್ಬೊಬ್ಬರು ಒಂದೊಂದು ವಿಧ ಮಾತಾಡುತ್ತಿರುವಷ್ಟರಲ್ಲಿ, ಅಲ್ಲಿ ನೆರೆದವರ ಪೈಕಿ ವೃದ್ಧನೊಬ್ಬನು ಎದ್ದು, 'ಮಿತ್ರರೇ! ನಮ್ಮ ಭಾಗ್ಯವನ್ನು ಎಷ್ಟೆಂದು ಹೊಗಳಿದರೂ ಸಾಲದು. ನಮ್ಮ ಗ್ರಾಮ ದೇವರ ದಯದಿಂದಲೋ ಅಲ್ಲ, ನಮ್ಮ ಗುರುಹಿರಿಯರು ಮಾಡಿದ ಸುಕೃತದ ಫಲದಿಂದಲೋ ಈ ಮಹನೀಯರು ನಮ್ಮ ಈ ಗ್ರಾಮಕ್ಕೆ ದಯಮಾಡಿಸಿದರು. ಅವರ ಯೋಗ್ಯತೆಯನ್ನೂ, ಅವರ ವಿದ್ಯೆಯನ್ನೂ, ಐಶ್ವರ್ಯವನ್ನೂ ಗಣಿಸಿದ್ದಾದರೆ ನಾವೆಲ್ಲ ಅವರ ಕಾಲಸ್ತ್ರಾರರಾಗಿರಲೂ ಸಹ ಯೋಗ್ಯರಲ್ಲ. ಆದರೂ ಅವರು ತಮ್ಮ ಮಹತ್ವದವಿಯನ್ನು ತೃಣಕ್ಕೆಣೆಯಾಗಿ ಭಾವಿಸಿ ಬಡ ಬಗ್ಗರಾದ ನಮ್ಮಂಥಾ ಹಳ್ಳಿಗೌಡರ ಗುಡಿಸಿಲುಗಳಿಗೆ ಸಹ ಇಷ್ಟು ಆದರಪೂರ್ವಕವಾಗಿ ದಯಮಾಡಿಸಿ ಕಾಸಿನ ಪ್ರತಿಫಲವನ್ನೂ ಕೂಡ ಅಪೇಕ್ಷಿಸದೆ ಇವರು ನಮಗೆ ತೋರಿಸಿದ ಅದ್ವಿತೀಯವಾದ ಪರೋಪಕಾರಕ್ಕೂ, ಅವರು ಇಂದು ಬೋಧಿಸಿದ ಬುದ್ಧಿವಾದಕ್ಕೂ ನಾವು ಎಂದೆಂದೂ ಋಣಿಗಳಾಗಿದ್ದೇವೆ. ಇವರ ನಿರಹಂಕಾರದ ಸ್ವಭಾವವೂ ಬಡವರ ಮೇಲಿರತಕ್ಕ ಪ್ರೀತಿಯು ನಮಗೂ ಮತ್ತು ನಮ್ಮ ಮಕ್ಕಳಿಗೂ ಉದಾಹರಣೆಯಾಗಿರಬೇಕು. ಇವರನ್ನು ಹೆತ್ತ ಭಾಗ್ಯಶಾಲಿಗಳಾದ ಮಾತೃಪಿತೃಗಳಿಗೆ ನಾವೆಷ್ಟು ಕೃತಜ್ಞರಾಗಿದ್ದರೂ ಸ್ವಲ್ಪವೇ. ಶ್ರೀ ಭಗವಂತನು ಇವರಿಗೂ, ಇವರ ಗೆಳತಿಗೂ ಚಿರಾಯುರಾರೋಗ ಐಶ್ವರ್ಯ ಸಂಪದಗಳನ್ನು ಕೊಟ್ಟು ಅನವರತ ರಕ್ಷಿಸಲೆಂದು ದೇವರನ್ನು ಬೇಡಿಕೊಳ್ಳುತ್ತೇನೆ' ಎಂದು ಹೇಳಿ ಕೈಮುಗಿದು ಕುಳಿತನು.

ನೆರೆದಿದ್ದವರೆಲ್ಲರೂ ಕೈಚಪ್ಪಾಳೆ ಹೊಡೆದರು. ಒಬ್ಬಿಬ್ಬರು ಮಕ್ಕಳು ಸಂಗೀತ ಹಾಡಿದರು. ಆ ಮೇಲೆ ಎಲ್ಲರೂ ಗುಣವತಿಗೆ ಭಕ್ತಿಪೂರ್ವಕವಾಗಿ ಪ್ರಣಾಮ ಮಾಡಿ ಸೋಮದತ್ತ ಮತ್ತು ವೈದ್ಯರಿಂದ ಬೀಳ್ಕೊಂಡು ತಂತಮ್ಮ ಮನೆಗಳಿಗೆ ನಡೆದರು.

ಸೋಮದತ್ತನ ಒಬ್ಬಿಬ್ಬರು ಆಪ್ತರು ಮತ್ತು ವೈದ್ಯರು ಆ ದಿವಸ ಅಲ್ಲಿಯೇ ಉಳಿದರು. ರಾತ್ರಿಯಾಯಿತು. ಎಲ್ಲರೂ ತಂತಮ್ಮ ಕಾರ್ಯಗಳನ್ನಾಚರಿಸಿದರು. ಸ್ವಲ್ಪ ಹೊತ್ತಿನಲ್ಲೇ ಊಟವಾಯಿತು. ಎಲ್ಲರೂ ಬಂದು ನಡುಮನೆಯಲ್ಲಿ ಕುಳಿತರು. ಗುಣವತಿಯು ವೈದನನ್ನು ಕುರಿತು 'ಮಗನೇ! ನಿನ್ನ ಹೆಚ್ಚಿನ ಚಾರಿತ್ರ್ಯವನ್ನು ತಿಳಿಯಲು ನಾವೆಲ್ಲಾ ತವಕಿಸುತ್ತಿದ್ದೇವೆ. ಇನ್ನಾದರೂ ತಿಳಿಸಬಾರದೇ?' ಎಂದು ಕೇಳಿದರು.

ವೈದ್ಯರ ಮುಖ ಕಾಂತಿಯು ಹಟಾತ್ತಾಗಿ ಒಮ್ಮೆ ಕಾಂತಿಹೀನವಾಗಿ, ಮರುಕ್ಷಣದಲ್ಲೇ ಕಳೆ ಏರುತ್ತಾ ಬಂದಿತು. ಶರೀರವು ಸೂಕ್ಷ್ಮವಾಗಿ ಕಂಪಿಸತೊಡಗಿತು. ಬಿಕ್ಕುವ ಸ್ವರದಿಂದ ಹೇಳಲಾರಂಭಿಸಿದರು.

'ಮಾತೆಯೇ! ನಿರೂಪಿಸುತ್ತೇನೆ. ನನ್ನ ತಾಯಿಗೆ ನಾವು ಮೂರು ಮಕ್ಕಳು. ಒಂದು ಹೆಣ್ಣು, ಇಬ್ಬರು ಗಂಡು. ನಾನು ಕೆಳಗಿನ ತರಗತಿಯಲ್ಲಿ ಓದುತ್ತಿದ್ದಾಗಲೇ ನನ್ನ ತಂದೆಯು ಸ್ವರ್ಗಸ್ಥರಾದರು. ಆ ಮೇಲೆ ನಮ್ಮ ಸಂಸಾರವನ್ನು ನಡೆಸುವ ಭಾರವು ನನ್ನ ತಾಯಿ ಮತ್ತು ಅಣ್ಣನ ಹೆಗಲ ಮೇಲೆ ಬಿದ್ದಿತು. ಆದುದರಿಂದ ನನ್ನ ಅಣ್ಣನು ತನ್ನ ವಿದ್ಯಾಭ್ಯಾಸಕ್ಕೆ ತಿಲಾಂಜಲಿಯನ್ನು ಕೊಟ್ಟು ಗೃಹಕೃತ್ಯವನ್ನು ನಡೆಸತೊಡಗಿದನು. ವಿದ್ಯೆಯಲ್ಲಿ ನಾನು ಸ್ವಲ್ಪ ಚುರುಕು ಇದ್ದನಾದ ಕಾರಣ ನನ್ನನ್ನು ಶಾಲೆಯಲ್ಲಿ ಮುಂದುವರಿಯಲು ಬಿಟ್ಟರು. ಎರಡು ವರ್ಷಗಳಲ್ಲಿ ನನ್ನ ಸಹೋದರನ ಲಗ್ನವಾಯಿತು.'

'ನಾನು ಕೆಳಗಿನ ತರಗತಿಯಲ್ಲಿ ಓದುತ್ತಿದ್ದಾಗ ನನಗೊಬ್ಬ ಯುವತಿಯ ಮೈತ್ರಿಯು ದೊರೆಯಿತು. ಅವಳೊಬ್ಬ ಜಡ್ಜಿಯ ಮಗಳಾಗಿದ್ದಳು. ನಮ್ಮೊಳಗೆ ಮೊಳಕೆಯೊಡೆದ ಆ ಪ್ರೇಮವು ಕ್ರಮೇಣ ಬಲವಾಗುತ್ತಾ ಬಂತು. ಈ ಮಧ್ಯೆ ಆಕೆಯ ತಂದೆಯು, ತಾನಿದ್ದ ಸ್ಥಳದಿಂದ ಪರ ಸ್ಥಳಕ್ಕೆ ತೆರಳಿದನಾದ ಕಾರಣ ಆ ಯುವತಿಯೂ ಶಾಲೆಯಿಂದ ಅಗಲಿ ಹೋದಳು. ಆದರೆ ನನಗೆ ಅವಳ ಮೇಲಿದ್ದ ಪ್ರೇಮವು ಮಾತ್ರ ಅಳಿಸಲಿಲ್ಲ. ಅದು ಬಹುತರವನ್ನು ಹೊಂದತೊಡಗಿತು. ಆದರೆ ಕ್ರಮೇಣ ಅದು ಶಮನವಾಗಹತ್ತಿತು. ಅಂತು ಸುಮಾರು ಐದಾರು ವರ್ಷಗಳ ವರೆಗೆ ನಾವುಒಬ್ಬರನ್ನೊಬ್ಬರು ಕಾಣಲಿಲ್ಲ.'

'ಈ ಮಧ್ಯೆ ನಾನು ಮೆಟ್ರಿಕ್ಯುಲೇಶನ್ ಪಾಸಾಗಿ ಪ್ರೌಢ ವಿದ್ಯಾಭ್ಯಾಸಕ್ಕೆಂದು ಬೊಂಬಾಯಿಗೆ ಹೋದೆನು. ಅಲ್ಲಿ ನನಗೊಬ್ಬ ಐಶ್ವರ್ಯವಂತನ ಸ್ನೇಹವಾಯಿತು. ನಾಲ್ಕು ವರ್ಷಗಳಲ್ಲಿ ಕಾಲೇಜು ವಿದ್ಯಾಭ್ಯಾಸವನ್ನು ಮುಗಿಸಿ, ನಾನು ಮರಳಿ ಮನೆಗೆ ಬಂದನು.'

'ಎಷ್ಟು ಪ್ರಯತ್ನಿಸಿದರೂ ನನಗೆ ತಕ್ಕದಾದ ಒಂದು ಉದ್ಯೋಗ ದೊರೆಯಬಾರದೆ ಹೋಯಿತು. ಕಡೆಗೆ ಒಂದು ನೌಕರಿಯ ಸಂಬಂಧವಾಗಿ ರೇವೆ ಪಟ್ಟಣಕ್ಕೆ ಹೋಗಬೇಕಾಯಿತು.'

ಮುದುಕಿಯೂ, ಇತರರೂ ವಿಸ್ಮಯವಾಗಿ ಕೇಳುತ್ತಿದ್ದರು. ವೈದ್ಯರು ಮುಂದುವರಿಸಿದರು.

'ರೇವೆ ಪಟ್ಟಣದಲ್ಲಿ ಆ ರಾತ್ರಿ ಉಳಿದಿದ್ದಾಗ್ಯೆ ಸಮುದ್ರ ದಡದಲ್ಲಿ ನನಗೆ ಬಹು ವರ್ಷದಿಂದ ತಪ್ಪಿಹೋದ ಗೆಳತಿಯ ಸಂಸರ್ಗವಾಯಿತು. ಅವಳನ್ನು ಕುಂಟನೊಬ್ಬನು ಬಲತ್ಕಾರದಿಂದ ಬೊಂಬಾಯಿಗೆ ಕದ್ದೊಯ್ಯಲು ಪ್ರಯತ್ನಿಸುತ್ತಿದ್ದನು. ಆ ಅಬಲೆಯ ಸಹಾಯಾರ್ಥವಾಗಿ ನಾನು ಆ ದುಷ್ಟನನ್ನು ಹೊಡೆದೆನು. ಅವನ ಹತ್ತಿರ ತುಂಬಿದ 'ರಿವಾಲ್ವರ್' ಒಂದು ಇತ್ತು. ನಾವು ಹೊಡೆದಾಡುತ್ತಿದ್ದ ಹಾಗೆ ನಾನದನ್ನು ಅವನಿಂದ ಎಳೆಕೊಂಡೆನು.'

'ಬಂದೂಕವು ನನ್ನ ಕೈವಶವಾಯಿತು. ಆ ದುಷ್ಟನಿಗೆ ಏನು ಮಾಡಲೂ ತೋರದಾಯಿತು. ಈ ದುಷ್ಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ನನ್ನ ಗೆಳತಿಯನ್ನು ನನ್ನ ವಶಕ್ಕೊಪ್ಪಿಸಿ ಎಲ್ಲಿಯೋ ಹೊರಟು ಹೋದನು. ಆ ಮೇಲೆ ನಾನು ನನ್ನ ಗೆಳತಿಯನ್ನು ಕುರಿತು 'ನೀನೆಲ್ಲಿಗೆ ಹೋಗಲಿಚ್ಛಿಸುವೆ ಹೇಳು. ನಾನು ನಿನ್ನನ್ನು ಅಲ್ಲಿಗೆ ಸುರಕ್ಷಿತವಾಗಿ ಮುಟ್ಟಿಸುತ್ತೇನೆ'ಂದೆನು. ಆದರೆ ಈ ಮಧ್ಯೆ ನನ್ನ ಗೆಳತಿಯ ಸಂಸಾರ ಸುಖದಲ್ಲಿ ನಾನಾ ಮಾರ್ಪಾಟುಗಳಾಗಿದ್ದವು. ಅವಳು ತಂದೆ ತಾಯಿಗಳಿಬ್ಬರನ್ನೂ ಕಳಕೊಂಡ ಅನಾಥೆಯಾಗಿದ್ದಳು. ಅಷ್ಟೇ ಅಲ್ಲದೆ ಈಗಾಗಲೇ ನಾನು ವಿವರಿಸಿದ ಆ ಕ್ರೂರ ಕೃತ್ಯದಲ್ಲಿ ಅವಳ ಮಲತಾಯಿಯು ಸೂತ್ರಧಾರಿಣಿಯಾಗಿದ್ದಳು. ಆದುದರಿಂದ ಅವಳಲ್ಲಿ ಹೋಗಲೂ ಒಪ್ಪದೆ ಸನ್ನೊಡನೆ ಬರುವುದಾಗಿ ಹಟ ಹಿಡಿದಳು. ಅವಳನ್ನು ನನ್ನ ಮನೆಗೆ ಕರೆದೊಯ್ಯಲು ನನ್ನ ಬಡತನವು ಒಪ್ಪಲಿಲ್ಲ. ಆಕೆಯ ಪೆಟ್ಟಿಗೆಯಲ್ಲಿ ಅವಳ ತಂದೆಯ ವಿಲ್ ಇತ್ತು. ಇದರ ಪ್ರಕಾರ ಅವಳ ಹೆಸರಿನಲ್ಲಿ ಇಂಪೀರಿಯಲ್ ಬ್ಯಾಂಕಿನಲ್ಲಿ ಐವತ್ತು ಸಾವಿರ ರೂಪಾಯಿಗಳಿದ್ದವು. ಆದರೆ ಅವಳಿಗೆ 21 ವರ್ಷ ಪ್ರಾಯ ತುಂಬಿದ ಹೊರತು ಆ ಹಣನ್ನು ಬ್ಯಾಂಕಿನಿಂದ ತೆಗೆಯಲು ಆ [illegible] ದರಿಂದ ನಾನವಳನ್ನು ಬೊಂಬಾಯಿಗೆ ನನ್ನ ಸ್ನೇಹಿತನ ಮನೆಗೆ ಕರೆದೊಯ್ದೆನು. ಅಲ್ಲಿ ಅವಳನ್ನಿರಿಸಿ ಈ ವಿಲ್ಲಿನ ಆಧಾರದ ಮೇಲೆ ಅವರಿಂದ ಸಾಕಷ್ಟು ಹಣವನ್ನು ಪಡೆದು ವಿಲಾಯಿತಿಗೆ ವೈದ್ಯ ಶಾಸ್ತ್ರವನ್ನು ಅಭ್ಯಸಿಸಲು ಹೊರಟು ಹೋದೆನು.'

ಗುಣವತಿಯು ಕಣ್ಣೀರು ಸುರಿಸುತ್ತಾ, 'ಅಯ್ಯೋ ಪಾಪಿಗಳಾದ ನಿನ್ನ ತಾಯಿ ಮತ್ತು ಅಣ್ಣನ ಪಾಡೇನಾಯಿತು. ಅವರೂ ನಮ್ಮ ಹಾಗೆ ಪಾಪಿಗಳೇ ಅದರೆ?' ಎಂದಳು.

'ತಾಯಿಯೇ ನಾನು ಬೊಂಬಾಯಿಯಿಂದ ಇಂಗ್ಲಾಂಡಿಗೆ ಹೊರಡುವುದಕ್ಕೆ ಮೊದಲು, ಅವರಿಗೊಂದು ಕಾಗದವನ್ನು ಬರೆದೆನು. ನನ್ನನ್ನು ಹುಡುಕುವ ಪ್ರಯತ್ನವನ್ನು ಅವರೆಂದೂ ಮಾಡಬಾರದೆಂದೂ ನಾಲ್ಕು ವರ್ಷಗಳು ಕಳೆಯುತ್ತಲೇ ನಾನವರ ಪಾದತಲವನ್ನು ಸೇರುತ್ತೇನೆಂದೂ ಬರೆದೆನು'. ವೈದ್ಯನ ಶರೀರವು ಕಂಪಿಸುತ್ತಿತ್ತು. ಮಾತು ತೊದಲ ಹತ್ತಿತು.

ಗುಣವತಿಯು ಬೆಪ್ಪಾದವಳಂತೆ ವಿಶಾಲವಾಗಿ ಕಣ್ದೆರೆದು, 'ಅಯ್ಯೋ ನೀವು ಯಾರು?' ಎಂದು ಗಟ್ಟಿಯಾಗಿ ಕೇಳಿದಳು. ಸೋಮದತ್ತನು ವಿಸ್ಮಯವಾಗಿ ಎದ್ದು ನಿಂತನು. ಸೋಮದತ್ತನ ಪತ್ನಿಯು ಮಾತ್ರ ನಗುಮುಖದಿಂದ, 'ನಾನಾ ದಿವಸವೇ ಹೇಳಲಿಲ್ಲವೇ?' ಎಂದಳು. ಹರೇಂದ್ರ ಕುಮಾರಿಯು ಹಟಾತ್ತಾಗಿ ಸೋಮದತ್ತನ ಹೆಂಡತಿಯನ್ನು ಆಲಂಗಿಸಿದಳು.

ವೈದ್ಯನು ಎದ್ದು ನಿಂತು, 'ಮಾತೆಯೇ ಮನ್ನಿಸು. ಅಣ್ಣಯ್ಯ ಕ್ಷಮಿಸು' ಎನ್ನುತ್ತಾ ತಾಯಿಯ ಪಾದವನ್ನಪ್ಪಿದನು. ಮನೆಯೆಲ್ಲಾ ಆಹ್ಲಾದದ ಆಲಯವಾಯಿತು. ಎಲ್ಲರೂ ಸಂತೋಷದಿಂದ ಪರವಶರಾದರು. ಕಮಲೆಯು (ಹರೇಂದ್ರ ಕುಮಾರಿ) ಪ್ರಣಾಮ ಮಾಡಿದಳು.

೨೩ನೇ ಅಧ್ಯಾಯ.

ನಾಗೇಶ—ಸ್ವಾಮಿ, ಪರಮಾಶ್ಚರ್ಯಕರವಾದ ಆ ಸಂದವಾರ್ತೆಯನ್ನು ಕೇಳಿದಿರಾ? ನಮ್ಮ ಪುಣ್ಯವನ್ನು ಎಷ್ಟು ಹೊಗಳಿದರೂ ಸಾಲದು. ಇದಕ್ಕೆಲ್ಲಾ ಗುರುದತ್ತನ ಪೂರ್ವ ಪುಣ್ಯವೂ, ಗುಣವತಿಯ ಸತೀ ಧರ್ಮವೂ ಕಾರಣ. ಅವರ ಆನಂದಕ್ಕೆ ಪಾರವಿದೆಯೇ?

ಶ್ಯಾಮಣ್ಣ—ಏನು ಸ್ವಾಮಿ! ವಿಶೇಷವೇನು. ಗುಣವತಿಯೇನಾಯಿತು?

ನಾಗೇಶ—ನಿಮಗಿನ್ನೂ ತಿಳಿಯದೋ? ನೀವು ನಿನ್ನೆ ಸೋಮದತ್ತನ ಮನೆ ಔತಣಕ್ಕೆ ದಯಮಾಡಿಸಿದಿರಷ್ಟೆ. ಆ ವೈದ್ಯರು ಯಾರೆಂದು ತಿಳಿದಿರಾ? ನಮ್ಮ ಗುರುದತ್ತನ ಮಗ ದೇವದತ್ತನಲ್ಲವೇ?

ಶ್ಯಾಮಣ್ಣ—ಏನು? ದೇವದತ್ತನೆ?

'ಮತ್ತ್ಯಾರು? ಸತ್ತು ಹೋದನೆಂದು ಕೆಲವರೂ, ಯಾವಳೋ ಒಬ್ಬಳೊಟ್ಟಿಗೆ ಓಡಿ ಹೋದನೆಂದು ಕೆಲವರೂ ಹೇಳುತ್ತಿದ್ದರಲ್ಲ. ಅವನೊಬ್ಬ ಸ್ನೇಹಿತನ ಸಹಾಯದಿಂದ ಇಂಗ್ಲಾಂಡಿಗೆ ಹೋಗಿ, ವೈದ್ಯ ವಿದ್ಯೆಯಲ್ಲಿ ಪಾರಂಗತನಾಗಿ ಈಗ ಹಿಂದಿರುಗಿ ಬಂದಿರುವನು' ಎಂದು ನಾಗೇಶನು ಹೇಳಿದನು.

'ನನಗೂ ಮೊದಲಿಂದಲೇ ಸಂಶಯವಿತ್ತು. ಆದರೆ ಆವ ಮುಖ ಲಕ್ಷಣಗಳೂ, ಶರೀರ ದಾರ್ಢ್ಯವೂ ಎಷ್ಟರ ಮಟ್ಟಿಗೆ ಬದಲಾಗಿವೆ ನೋಡಿ. ಇವನ ಹಣೆಯಲ್ಲಿ ಒಂದು ಗಾಯವಿದೆಯಲ್ಲವೇ'? ಎಂದು ದೇವದತ್ತನ ಮತ್ತೊಬ್ಬ ಗ್ರಾಮಸ್ಥನು ಹೇಳಿದನು.

'ಬದಲಾಗುವುದರಲ್ಲಿ ಆಶ್ಚರ್ಯವೇನು? ವರ್ಷಗಳೆಷ್ಟು? ಅದರಲ್ಲೂ ವಿಲಾಯಿತಿ ಹವವಲ್ಲವೇ? ಆ ಗಾಯವು ವಿಲಾಯಿತಿಯಲ್ಲಿ ಮೋಟಾರಿನಿಂದ ಬಿದ್ದು ಸಿಕ್ಕಿದ ಗಾಯವಂತೆ. ಆದುದರಿಂದಲೇ ಅವನನ್ನು ಗುರುತಿಸಲು ಆಗಲಿಲ್ಲ. ಬನ್ನಿ! ಹೋಗುವ! ಅವನನ್ನೊಮ್ಮೆ ಮಾತಾಡಿಸಿ ಬರುವ' ಎಂದು ಶ್ಯಾಮಣ್ಣನು ಕರೆದನು. [ಅಪೂರ್ಣ.

-0-

ಭಾರತ ಕೃಷಿವಿಧಾನದಲ್ಲಿಯ ನ್ಯೂನತೆ.

ಯಾವದೊಂದು ವ್ಯಾಪಾರ ಯಾ ಉದ್ಯಮವನ್ನೇ ಪ್ರಾರಂಭಿಸಬೇಕಾದರೂ ಸಹ ಪ್ರಥಮತಃ ಬಂಡವಾಳವು ಬೇಕು. ಬಂಡವಾಳವನ್ನುಪಯೋಗಿಸದೆ ಯಾವ ಕಾರ್ಯವನ್ನೂ ಜಯಪ್ರದವಾಗಿ ನಡೆಸುವದು ಕಷ್ಟ. ಉದಾಹರಣೆಗಾಗಿ ಒಂದು ಮೋಟಾರು ಕಾರನ್ನು ಇಟ್ಟುಕೊಳ್ಳಬೇಕಾದರೆ ಅದಕ್ಕೆ ಬೇಕಾಗುವ ಪೆಟ್ರೋಲಿನ ಖರ್ಚನ್ನು ನಿರ್ವಹಿಸುವಷ್ಟು, ಯಾ, ಯಾವದೊಂದು ಕಾರ್ಖಾನೆಯನ್ನು ನಡೆಸಲು ಅದರ ಸವೆಯುವಿಕೆಯನ್ನು ಸಮಗಟ್ಟುವಷ್ಟು ಹಣವನ್ನು ಬೇರೆ ಇಡದಿದ್ದರೆ ಕಾರ್ಖಾನೆ ಅಥವಾ ಮೋಟಾರನ್ನು ಹೆಚ್ಚು ದಿನ ನಡೆಸಲಿಕ್ಕಾಗಲಿಕ್ಕಿಲ್ಲ. ಅಲ್ಲದೆ ಹೆಚ್ಚಿನ ಧನವನ್ನು ನ್ಯಾಯರೀತಿಯಿಂದ ಖರ್ಚು ಮಾಡಿದರೇನೇ ತಮ್ಮ ಉದ್ಯಮದಲ್ಲಿ ಹೆಚ್ಚಿನ ಉತ್ಪತ್ತಿಯಾದರೂ ಬರುವದೆಂಬುದು ನಿರ್ವಿವಾದ. ಹೇಗೆ ವಿವಿಧ ವ್ಯಾಪಾರೋದ್ಯಮಗಳಿಗೆ ಈ ತತ್ವವು ಅನ್ವಯಿಸುವದೋ ಹಾಗೆಯೇ ವ್ಯವಸಾಯಕ್ಕೂ ಇದು ಅನ್ವಯಿಸುತ್ತದೆ. ಬೇರೆ ವ್ಯಾಪಾರೋದ್ಯಮಗಳಲ್ಲಿನ ಮುಖ್ಯ ವಸ್ತುಗಳಂತೆ ಅಂದರೆ ಕಾರ್ಖಾನೆ ಯಾ, ಮೋಟಾರುಕಾರು ಇವುಗಳಂತೆ ಭೂಮಿಯು ನಾಶವಾಗದಿದ್ದರೂ, ವ್ಯವಸಾಯದ ದೃಷ್ಟಿಯಿಂದ ಅದು ವರ್ಷೇ ವರ್ಷೇ ತನ್ನ ಸತ್ವವನ್ನು ಕಳಕೊಂಡು ಬಂಜರಾಗುವದು ನಿಜ. ಹಾಗೆ ಪ್ರತಿ ವರ್ಷ ಅದು ತನ್ನಿಂದ ಕೆಲವಂಶ ಸತ್ವವನ್ನು ಕಳಕೊಳ್ಳುವದರಿಂದ ಆ ಕಳಕೊಂಡ ಅಂಶವನ್ನು ನಾವು ಭರ್ತಿ ಮಾಡದಿದ್ದರೆ ನಮಗೆ ಸೊಂಪಾದ ಬೆಳೆ ಸಿಗಲಾರದು. ಈ ಕಳೆದು ಹೋದ ಭಾಗವನ್ನು ಭರ್ತಿ ಮಾಡಲು ಭೂಮಿಗೆ ಗೊಬ್ಬರ ಹಾಕಬೇಕು. ಆದ್ದರಿಂದ ಭಾರತ ಕೃಷಿಕನು ಹೇಗೆ ತನ್ನನ್ನು ಸಾಕುತ್ತಿರುವ ಭೂಮಿಯ ಸತ್ವವನ್ನು ಕಾಯ್ದಿಡುತ್ತಿರುವನೆಂಬುವದನ್ನು ನೋಡುವ.

ಈಗಿನ ಆಧುನಿಕ ಶೋಧೆಗಳಿಗನುಸಾರ ತಯಾರಿಸಲ್ಪಟ್ಟ ರಸಾಯನ ಗೊಬ್ಬರಗಳು ಭಾರತ ಕೃಷಿಕನಿಗೆ ತಿಳಿದೇ ಇಲ್ಲ. ಸ್ವತಹ ಕೈಯಿಂದ ತಯಾರಿಸಿ ಗೊಬ್ಬರವನ್ನು ಮಾಡುವ ಹವ್ಯಾಸವು ಮೊದಲೇ ಇಲ್ಲ. ಪರದೇಶಗಳಲ್ಲಿ ಅಮಿತವಾಗಿ ಉಪಯೋಗಿಸಲ್ಪಡುತ್ತಿರುವ ಮತ್ತು ಭಾರತದಲ್ಲಿ ವಿಪುಲವಾಗಿ ಸಿಕ್ಕುವ ಅತ್ಯುತ್ತಮ ಮೂಳೆ ಗೊಬ್ಬರವು ಇಲ್ಲಿ ಉಪಯೋಗಿಸಲ್ಪಡುವದಿಲ್ಲ. ಇದಕ್ಕೆ ಭಾರತ ಕೃಷಿಕನ ಮತ ಭಾವನೆಯು ಅಡ್ಡ ನಿಂತಿದೆ. ಅದ ಪ್ರಯುಕ್ತ ವರ್ಷಂಪ್ರತಿ ಸರಾಸರಿ 100,000 ಟನ್ನುಗಳಷ್ಟು ಈ ಗೊಬ್ಬರವು ಭಾರತದಿಂದ ಇತರ ದೇಶಗಳಿಗೆ ರವಾನಿಸಲ್ಪಟ್ಟು ಅಲ್ಲಿಯ ಸತ್ವಹೀನ ಭೂಮಿಯನ್ನು ಫಲವತ್ತಾಗಿ ಮಾಡುತ್ತಿದೆ. ಭಾರತದಲ್ಲಿ ಎಣ್ಣೆ ಬೀಜಗಳು ಬಹಳವಾಗಿ ಬೆಳೆಯುತ್ತಿದ್ದರೂ ಅದು ಪರದೇಶಗಳಿಗೆ ರವಾನಿಸಲ್ಪಡುವದರಿಂದ ಉತ್ತಮ ಗೊಬ್ಬರವಾದ ಎಣ್ಣೆ ಹಿಂಡಿಯು ಭಾರತದಲ್ಲಿ ಸಿಗುವದೇ ದುರ್ಲಭವಾಗಿದೆ. ಇಲ್ಲಿಯೇ ಉಪಯೋಗಿಸುವ ಎಣ್ಣೆ ಬೀಜಗಳ ಹಿಂಡಿಯಲ್ಲಿಯೂ ಸಹ ವರ್ಷಕ್ಕೆ 250,000 ಟನ್ನುಗಳಷ್ಟಕ್ಕೆ ಕಮ್ಮಿ ಇಲ್ಲದೆ ಪರದೇಶಕ್ಕೆ ರವಾನಿಸಲ್ಪಡುತ್ತಿದೆ. ಅದರೂ ಪ್ರಾಣಿಗಳ ಮೂತ್ರ ಹಾಗೂ ಗೊಬ್ಬರವು ಇನ್ನೂ ವಿಪುಲವಾಗಿದೆ. ಇದೂ ಉತ್ತಮವಾದ ಗೊಬ್ಬರ ಎಂದು ಹೇಳಬೇಕಾಗಿಲ್ಲ. ಭಾರತದಲ್ಲಿಯ ಈ ಗೊಬ್ಬರವನ್ನೆಲ್ಲಾ ವ್ಯವಸಾಯಕ್ಕೆ ಉಪಯೋಗಿಸಿದ್ದೇ ಆದರೆ ಭಾರತದ ವ್ಯವಸಾಯ ಉತ್ಪತ್ತಿಯು ಇನ್ನಷ್ಟು ಹೆಚ್ಚದಿರದು. ಆದರೆ ಇಲ್ಲಿಯೂ ಸಹ ಬಡ ರೈತನ ಹೃದಯದ್ರಾವಕ ಬಡತನವು ಅದನ್ನು ಒಣಗಿಸಿ ಸವುದೆಗಾಗಿ ಮಾರಲು ಪ್ರೇರೇಪಿಸಿದೆ. ಇದರ ಪರಿಣಾಮವಾಗಿ ಭಾರತ ವ್ಯವಸಾಯ ಕ್ಷೇತ್ರವು ಯಾವದೊಂದೂ ಗೊಬ್ಬರವನ್ನೂ ಪಡೆಯುತ್ತಿಲ್ಲವೆಂದು ಹೇಳಬಹುದು. ಆದ್ದರಿಂದ ನಮ್ಮ ಭೂಉತ್ಪತ್ತಿಯು ಕಡಿಮೆಯಾಗಿರುವದಲ್ಲಿ ಯಾವ ಆಶ್ಚರ್ಯವೂ ಇಲ್ಲ. ಭಾರತ ವ್ಯವಸಾಯಗಾರನು ಭೂಮಿಗೆ ಗೊಬ್ಬರ ಹಾಕದಿರುವದೊಂದೇ ಅಲ್ಲ. ಅಸ್ತವ್ಯಸ್ತವಾಗಿರುವ ತನ್ನ ಭೂಮಿಯನ್ನು ಸರಿಪಡಿಸಲು ಸಹ ಆತನಿಗೆ ಚೈತನ್ಯವಿಲ್ಲ, ಆದ್ದರಿಂದ ಭೂಮಿಯು ಪುರಾತನ ಕಾಲದಲ್ಲಿ ಯಾವ ಸ್ವರೂಪದಲ್ಲಿತ್ತೋ ಹಾಗೆಯೇ ಇಂದೂ ಸಹ ಇರುವದಲ್ಲದೆ ತನ್ನ ಸತ್ವವನ್ನು ಕಳಕೊಂಡು ಬಂಜರು ಪ್ರದೇಶವಾಗುವದರಲ್ಲಿದೆ.

ಭಾರತ ರೈತನ ವ್ಯವಸಾಯ ಕ್ರಮವನ್ನಾದರೂ ವಿಚಾರಿಸಿದರೆ ಆಧುನಿಕ ವ್ಯವಸಾಯ ಕ್ರಮವು ಆತನಿಗೆ ತಿಳಿದೇ ಇಲ್ಲ. ಆಧುನಿಕ ಉಪಕರಣಗಳ ಪ್ರಯೋಜನ ಗೊತ್ತಿಲ್ಲ. ತಿಳಿದಿದ್ದರೂ ಆರ್ಥಿಕ ಮುಗ್ಗಟ್ಟಿನಿಂದ ಅದನ್ನು ಕೊಂಡುಕೊಳ್ಳಲಾರ. ಆದ್ದರಿಂದ ಓಬಿರಾಯನ ಕಾಲದ ಆ ಮರದ ನೇಗಿಲು ಮತ್ತು ಆ ಬಡಕಲು ಎತ್ತುಗಳೇ ಇಂದು ಅವನ ವ್ಯವಸಾಯ ಉಪಕರಣಗಳಾಗಿವೆ. ಒಳ್ಳೇ ತರಹದ ಬೀಜದಿಂದ ಉತ್ಪತ್ತಿ ಜಾಸ್ತಿಯಾಗುವದರಿಂದ ಅದನ್ನು ಸಹ ಪರಿಶೀಲಿಸಿ ಒದಗಿಸಿಕೊಳ್ಳಲು ಭಾರತೀಯ ದೀನ ರೈತನಿಗೆ ಚೈತನ್ಯವಿಲ್ಲ. ಅದನ್ನು ಒತ್ತಟ್ಟಿಗಿರಿಸಿ ವ್ಯವಸಾಯ ಮಾಡುವ ರೈತನನ್ನೇ ನೋಡುವ. ಭಾರತದಲ್ಲಿಯ ಮುಕ್ಕಾಲು ರೈತರೆಲ್ಲಾ ನಿರಕ್ಷರ ಕುಕ್ಷಿಗಳೆಂಬುದರಲ್ಲಿ ಸಂದೇಹವಿಲ್ಲ. ವ್ಯವಸಾಯ ಜಗತ್ತಿನಲ್ಲಿ ಎಂಥಾ ಮಾರ್ಪಾಡುಗಳಾಗುತ್ತಿವೆ. ತನ್ನ ಊರಿನ ಹೊರಗೇ ವ್ಯವಸಾಯ ಹೇಗೆ ನಡೆಯುತ್ತಿದೆ ಎಂಬ ಅರಿವು ಅವನಿಗೆ ಮೊದಲೇ ಇಲ್ಲ. ಆತನಿಗೆ ಪ್ರಯಾಣವೆಂಬುದು ಹಬ್ಬ ಬಂದಂತೆ ಅಪರೂಪ. ವ್ಯವಸಾಯ ಕಸುಬಿನ ವಿಚಾರ ತರ್ಕಿಸಲು ವ್ಯವಸಾಯ ಕ್ಲಬ್ಬುಗಳಾಗಲೀ, ವ್ಯವಸಾಯ ನಿಪುಣರ ಸಲಹೆಯಾಗಲೀ ಆತನಿಗೆ ಸ್ವಪ್ನದಲ್ಲಿಯೂ ಇಲ್ಲ. ಕ್ರಮಪ್ರಕಾರ ವ್ಯವಸಾಯ ಮಾಡುವ ಅಥವಾ ಮಾದರಿ ವ್ಯವಸಾಯಗಾರರನ್ನು ಕಾಣುವದು ನಮ್ಮ ದೇಶದಲ್ಲಿ ಅಪರೂಪ. ವಿಶಾಲ ಭೂಮಾಲಿಕರು ತಮ್ಮ ಭೂಮಿಯನ್ನು ನಿರಕ್ಷರ ಕುಕ್ಷಿಗಳಾದ ರೈತರ ಕುತ್ತಿಗೆಗೆ ಕಟ್ಟಿ, ಅವರಿಗೆ ಸರಿಯಾದ ಸಲಹೆಗಳನ್ನೂ ಸಹ ಕೊಡದೆ ಭೂಮಿಯಲ್ಲಿ ಬೆಳೆದರೂ ಯಾ ಬೆಳೆಯದಿದ್ದರೂ ತಮ್ಮ ಪಾಲನ್ನು ಮಾತ್ರ ವಸೂಲ್ಮಾಡಿ ವಿಷಯಲೋಲುಪರಾಗಿ ಪಟ್ಣಗಳಲ್ಲಿ ಮೆರೆಯುತ್ತಿರುವದು ಅಪರೂಪವಲ್ಲ. ಆದ್ದರಿಂದ ನಮ್ಮ ಅವಿದ್ಯಾವಂತನಾದ ಹಾಗೂ ಮಾರ್ಗದರ್ಶಕನಿಲ್ಲದ ಬಡ ರೈತನು ಪಾಶ್ಚಿಮಾತ್ಯ ರಾಷ್ಟ್ರದ ಸುಶಿಕ್ಷಿತ ಹಾಗು ಶಿಸ್ತಿನಿಂದ ಕೆಲಸ ಮಾಡುವ ರೈತನೊಡನೆ ಸ್ಪರ್ಧಿಸಲಾರದಿರುವದು ವಾಸ್ತವ.

ಇದರ ಜೊತೆಗೆ ಬಂಡವಳದಾರರ ಹಿಡಿತಕ್ಕೆ ಶಿಲುಕಿದ ಬಡ ರೈತನು ಸಾಲದ ಬಾಧೆಯಿಂದ ತೊಳಲಿ ಬಳಲುತ್ತಿರುವನು. 1929 ನೇ ವರ್ಷದ ಲೆಕ್ಕದ ಮೇರೆ ಭಾರತ ವ್ಯವಸಾಯಗಾರರ ಒಟ್ಟು ಸಾಲವು ರೂ. 900, ಕೋಟಿಯಾಗಿತ್ತು. ಈಗ ಕಮ್ಮಿ ಪಕ್ಷ ಅದರ ಅರ್ಧದಷ್ಟು ಹೆಚ್ಚಾಗಿರಬಹುದು. ಪಾಶ್ಚಿಮಾತ್ಯ ವ್ಯವಸಾಯಗಾರನ ದೃಷ್ಟಿಯಿಂದ ವ್ಯವಸಾಯ ಮಾಡಲ್ಪಡುವ ಪ್ರತಿಯೊಂದು ಯೇಕರಿಗೆ ಬೀಳುವ ಸಾಲವು ದೊಡ್ಡದಲ್ಲವಾದರೂ ಭೂಮಿಯ ಅಭಾವದಿಂದ ತತ್ತರಿಸುತ್ತಿರುವ, ಅಗರ್ಭ ಬಡತನದಲ್ಲಿ ಬೆಂದು ನೊಂದಿರುವ ಭಾರತೀಯ ವ್ಯವಸಾಯಗಾರನಿಗೆ ಅದು ಹೊರಲಾರದಂಥಾ ಹೊರೆಯೆಂಬುವದರಲ್ಲಿ ಸಂಶಯವಿಲ್ಲ. ಒಂದು ಬಾರಿ ಸಾಲಕ್ಕೆ ಬಲಿಬಿದ್ದ ರೈತನುಎಂದೂ ಅದನ್ನು ಪರಿಹರಿಸಿಕೊಂಡು ತಲೆಯೆತ್ತಲಾರ. ಅದ ಪ್ರಯುಕ್ತ ಆತನು ಕ್ರಮೇಣ ತನ್ನ ಭೂಮಿಯನ್ನು ತನ್ನ ಸಾವುಕಾರನಿಗೆ ಒತ್ತೆ ಇಡಬೇಕಾಗುವದಲ್ಲದೆ, ಅದರಲ್ಲಿ ದುಡಿದು ಸರ್ವಸ್ವವನ್ನು ಸಾವುಕಾರನ ಸಾಲದ ಬಡ್ಡಿಗೇ ತೆತ್ತು ನಿರ್ಗತಿಕನಾಗಿ ಉಳಿಯಬೇಕಾಗುವದು. ಇದರ ಪರಿಣಾಮವಾಗಿ ವ್ಯವಸಾಯಗಾರನಿಗೆ ವ್ಯವಸಾಯದಲ್ಲಿ ಜಿಗುಪ್ಸೆಹುಟ್ಟಿ ಅದನ್ನು ತೊರೆದು ನಿರುದ್ಯೋಗಿಯಾಗಿ ಪ್ರಾಣನೀಗುವನು.

ವಿಶಾಲ ಭೂಮಾಲಿಕರು ಜಮ್ಮಿಗಳಾಗಿ ತಮ್ಮ ಕೈಕೆಳಗೆ ಅನೇಕ ರೈತರನ್ನಿಟ್ಟುಕೊಂಡು ತಮ್ಮ ಇಚ್ಛೆಯಂತೆ ಅವರನ್ನು ಬದಲಾಯಿಸಿ ಹೊಸಬರನ್ನು ಸೇರಿಸುವ ವಗೈರೆ ನಿರಂಕುಶ ವರ್ತನೆಯನ್ನು ನಡೆಸುವದರಿಂದ ಕೈಕೆಳಗೆ ಕೆಲಸ ಮಾಡುವ ವ್ಯವಸಾಯಗಾರನು ತನ್ನ ಇರುವಿಕೆಯು ಜಮ್ಮಿಯ ಮನಸ್ಸಿನ ಬಾಲಾವಣೆಯ ಮೇಲೆ ನಿಂತಿರುವದೆಂದು ತಿಳಿದು ಮುತುವರ್ಜಿತೆಯಿಂದ ವ್ಯವಸಾಯ ಮಾಡದೆ, ಹೆಸರಿಗೆ ರೈತನಾಗಿ ಉಳಿಯುವನು. ಇದರಿಂದ ಭೂಉತ್ಪತ್ತಿಯು ಕಡಿಮೆಯಾಗುವದು. ಇನ್ನೂ ವ್ಯವಸಾಯದಲ್ಲಿರುವ ಒಂದು ನ್ಯೂನತೆ. ಜಮ್ಮಿಗಳು ತಮ್ಮ ಕೈಕೆಳಗಿನ ವ್ಯವಸಾಯಗಾರರನ್ನು ಖಾಯಂ ಇಟ್ಟು ಅವರಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿಕೊಟ್ಟರೆ ವ್ಯವಸಾಯವು ಸುಗಮವಾಗಿ ನಡೆದು ಭಾರತ ವ್ಯವಸಾಯೋತ್ಪತ್ತಿಯು ಹೆಚ್ಚಲನುಕೂಲವಾಗುವದು.

ರೈತನು ಎಷ್ಟೇ ಶ್ರಮವಹಿಸಿದರೂ, ಎಷ್ಟೇ ಗೊಬ್ಬರ ಹಾಕಿ ಬೆಳೆ ನೆಟ್ಟರೂ ಎಲ್ಲವನ್ನೂ ನಿಷ್ಪ್ರಯೋಜನವನ್ನಾಗಿ ಮಾಡುವ ಕಾರಣವೊಂದಿದೆ. ಎಲ್ಲರಿಗೂ ತಿಳಿದಿರುವಂತೆ ಭಾರತದಲ್ಲಿ ವ್ಯವಸಾಯಕ್ಕೆ ಮೂಲಾಧಾರವಾದ ನೀರಿಗೆ ಆಕಾಶದ ಹನಿಯನ್ನು ನಂಬಿ ರೈತನು ನಿಲ್ಲಬೇಕಾಗಿರುವದು. ಭಾರತದಲ್ಲಿ ಕೆಲವೊಂದು ಮಿಲಿಯ ಏಕರೆಗಳು ಮಾತ್ರ ನೀರಿನ ಸರಬರಾಯಿಯ ಕೆಲಸದ ಪರಿಣಾಮವಾಗಿ ಬೆಳೆ ಕೊಡಲಾಪವು. ಇಂಥಾ ಬೆಳೆ ಸಿಕ್ಕುವ ಪ್ರಾಂತವು ಇಡೀ ವ್ಯವಸಾಯ ಮಾಡಲಡುವ ಭೂಮಿಯ ನೂರರಲ್ಲಿ 23 ರಷ್ಟು ಇಲ್ಲ. ಬಾಕಿ ಉಳಿದ ಭೂಮಿಯು ವ್ಯವಸಾಯಕ್ಕೆ ಮಳೆಯೇ ಆಧಾರವಾಗಿರುವದರಿಂದ ಅವುಗಳ ಉತ್ಪತ್ತಿಯು ನಿಶ್ಚಿತವಲ್ಲ. ಭಾರತದ ಅನೇಕ ಪ್ರಾಂತಗಳಲ್ಲಿ ವರ್ಷೇ ವರ್ಷೆ ಮಳೆಯ ಅಭಾವದಿಂದ ಬೆಳೆಯಾಗದೆ ಬರಗಾಲವು ಸಂಭವಿಸುತ್ತಿದೆ. ಅಂದ ಬಳಿಕ ಭಾರತ ವ್ಯವಸಾಯೋತ್ಪತ್ತಿಯು ಕಡಿಮೆಯಾದುದರಲ್ಲಿ ಆಶ್ಚರ್ಯವೇನು? ಹೀಗೆ ಮಳೆಯ ಮೇಲೆ ಆಧರಿಸಿ ನಿಂತಿರುವ ಭೂಮಿಯ ವ್ಯವಸಾಯಗಾರನು ಧೈರ್ಯಗೆಟ್ಟವನಾಗಿ ವ್ಯವಸಾಯದಲ್ಲಿರುವ ತನ್ನ ಅಭಿರುಚಿಯನ್ನು ಕಳಕೊಳ್ಳುವನು. ಆದ್ದರಿಂದ ಎಲ್ಲಾ ಜಮೀನುಗಳಿಗೂ ನೀರು ಸರಬರಾಯಿಯ ಅನುಕೂಲತೆ ಬಂದ ವಿನಹ ಭಾರತ ವ್ಯವಸಾಯ ಉದ್ಯಮವು ಅಭಿವೃದ್ಧಿಗೊಳ್ಳಲಾರದು.

ಹೀಗೆ ಅನಿರೀಕ್ಷಿತವಾಗಿ ವ್ಯವಸಾಯಕ್ಕೆ ಉಂಟಾಗುವ ಧಕ್ಕೆಯಿಂದ ಚೇತರಿಸಿಕೊಳ್ಳುವ ಶಕ್ತಿಯಾವದೂ ವ್ಯವಸಾಯಗಾರನಿಗಿಲ್ಲ. ಈ ನಷ್ಟವನ್ನು ಭರ್ತಿಮಾಡಲು ಆತನಿಗೆ ಇತರ ಉಪಕೈಗಾರಿಕೆಗಳ ಹವ್ಯಾಸವೇ ಇಲ್ಲ. ವ್ಯವಸಾಯದ ಸ್ನೇಹಿತ ಕೈಗಾರಿಕೆಯೆನಿಸಲ್ಪಟ್ಟಿರುವ ಪಶುರಕ್ಷಣೆ, ಹಾಗೂ ಅವುಗಳ ಉತ್ಪನ್ನಗಳ ಮಾರಾಟ ಇದು ಇಂದು ವಿಷಮಾವಸ್ಥೆಯಲ್ಲಿವೆ. ಭಾರತದಲ್ಲಿ 38 ಮಿಲಿಯ ಹಸುಗಳಿವೆಯೆಂದೂ, 15 ಮಿಲಿಯ ಎಮ್ಮೆಗಳಿವೆಯೆಂದೂ ಕೊಚ್ಚಿಕೊಳ್ಳಬಹುದಾದರೂ 10ಕ್ಕೆ ನಾಲ್ಕರಂತೆ ದನಗಳು ತಮ್ಮ ಕರುವಿನ ಉದರ ಪೋಷಣೆಗಿಂಥಾ ಹೆಚ್ಚಿಗೆ ಹಾಲು ಕೊಡಲಾರವು. ಕೆಲವು ಪ್ರಾಂತಗಳಲ್ಲಂತೂ 100 ರಲ್ಲಿ ತೊಂಭತ್ತರಷ್ಟು ಹಾಲು ಕರೆಯಲು ಯೋಗ್ಯವಲ್ಲದ ಹಸುಗಳಿವೆ. ಎಮ್ಮೆಗಳಾದರೂ ಹಾಗೆಯೇ ವರ್ಷಕ್ಕೆ 640 ಸೇರುಗಳಿಗಿಂಥಾ ಹೆಚ್ಚು ಹಾಲು ಎಮ್ಮೆಗಳಿಂದ ಸಿಗಲಾರದು. ಇದರೆ ಇವನ್ನು ಪರದೇಶಗಳೊಂದಿಗೆ ಹೋಲಿಸಿ ನೋಡಿದರೆ ಇದು ಎಷ್ಟು ಕಮ್ಮಿ ಎಂಬುದು ವಿಶದವಾಗುವದು. ಆದ್ದರಿಂದ ಪಶುವೃತ್ತಿಯ ಈ ಉಪಕೈಗಾರಿಕೆಯಿಂದಲೂ ಇಂದು ರೈತನು ಲಾಭ ಪಡೆಯುತ್ತಿಲ್ಲ.

(10ನೇ ಪುಟವನ್ನು ನೋಡಿ)

ಪರರಾಷ್ಟ್ರಗಳ ಪರಿಸ್ಥಿತಿ.

—:—

ಆಂಗ್ಲೊ-ರಷ್ಯಾ ಒಪ್ಪಂದ.

ಬ್ರಿಟನ್-ರಷ್ಯಾ ಒಪ್ಪಂದವೆಂದು ಬರೆದಾಗ ನಿಮಗೆ ಇದೇನು! ರಾಮಾಯಣ! ವರ್ಷವಾಗುತ್ತಾ ಬಂದರೂ ಈ ವಿಚಾರ ಪತ್ರಿಕೆಗಳಲ್ಲಿ ಬರುತ್ತಲೇ ಇವೆಯಲ್ಲಾ ಎಂದು ಬೇಸರವಾಗಬಹುದಲ್ಲವೇ? ಆದರೆ ಬೇಸರ ಪಡುವ ಕಾರಣವಿಲ್ಲ. ಈ ಒಪ್ಪಂದವು ಬಹು ಪ್ರಾಮುಖ್ಯವಾದದ್ದಿದೆ. ಒಮ್ಮೆ ಈ ಒಪ್ಪಂದವಾಯಿತೆಂದರೆ ಸರ್ವಾಧಿಕಾರಿಗಳ ಬೇಳೆ ಬೇಯುವದು ಕಷ್ಟವಾಗುವದು. ಆದ್ದರಿಂದಲೇ ಸರ್ವಾಧಿಕಾರಿಗಳಿಗೆ ಬೆದರಿ ಸಾಯುತ್ತಿರುವ ಬ್ರಿಟನ್ ಮತ್ತು ಫ್ರಾನ್ಸು ಈ ಸಂಧಾನದ ಬಗ್ಗೆ ಹೀಗೆ ಹಗಲಿರುಳು ಪ್ರಯತ್ನಿಸಲು ಕಾರಣ. ಆದರೆ ರಷ್ಯಾ ಇಂದು ಅಂತರ ರಾಷ್ಟ್ರೀಯ ರಾಜಕೀಯ ರಂಗದಲ್ಲಿ ಸಿಲುಕಿಕೊಳ್ಳದೆ ಜಗತ್ತಿನ ಹೊರವುತ್ತಿನಲ್ಲಿ ನಿಂತಿದೆ. ಅದರಷ್ಟು ಬಲಶಾಲಿಯೂ, ಸರ್ವ ಸಮೃದ್ಧವೂ ಆದ ರಾಷ್ಟ್ರ ಬೇರೆ ಇಲ್ಲ. ಇಂದಿನ ಆಧುನಿಕ ಯುಗದ ಮಹಿಮೆಯಂತೆ ಹಣವಿದ್ದವನೇ ಬಲ್ಲಿದನಲ್ಲವೇ? ಅದರಲ್ಲಿಯೂ ಹಣವೂ, ಶಕ್ತಿ ಸಾಮರ್ಥ್ಯವೂ ಇದ್ದ ಮೇಲೆ ಕೇಳಬೇಕೆ? ಅಂತೆಯೇ ಇಂದು ಪ್ರಬಲವಾಗಿರುವ ರಷ್ಯಾದ ಮುಂದೆ ಧನ ಬಲವಿದ್ದರೂ ಜನ ಬಲವಿಲ್ಲದಿರುವ ಬ್ರಿಟನು ತಲೆಬಾಗಬೇಕಾದದು ವಾಸ್ತವ. ಬ್ರಿಟನು ತೋರುವಂತೆ ರಷ್ಯಾಕ್ಕೆ ಪರಣು ಹೊಡೆದರೂ ಅದರಲ್ಲಿ ಕುತಂತ್ರವಿಲ್ಲದೆ ಇಲ್ಲ. ಸ್ವಂತ ಲಾಭದ ಹೆಬ್ಬಯಕೆಯಿಂದ ಅನ್ಯರಾಷ್ಟ್ರಗಳ ಸಖ್ಯ ಬೆಳೆಸಿ, ತನ್ನ ಕಾರ್ಯ ಸಾಧನೆಯಾದೊಡನೆ ಕೈಬೀಸಿ ಮುಂದೆ ನಡೆಯುವದು, ಬ್ರಿಟನ್ ಶತಮಾನಗಳಿಂದ ಅನುಸರಿಸುತ್ತಿರುವ ರಾಜಕಾರಣ. ಅಂತೆಯೇ ಒಮ್ಮೆ ರಷ್ಯವನ್ನು ಬಗ್ಗುಬಡಿದು ಬಿಡಬೇಕೆಂದು ಪ್ರಯತ್ನಿಸಿ ಬ್ರಿಟನು ಸೋತಿತ್ತು. ಅಂದು ಮ್ಯುನಿಚ್ ಒಪ್ಪಂದದ ಸಮಯದಲ್ಲಿ ಇಟಲಿ, ಜರ್ಮನಿ, ಫ್ರಾನ್ಸು ಮತ್ತು ಬ್ರಿಟನುಗಳು ಸೇರಿ, ಬ್ರಿಟನಿನ ಪೌರೋಹಿತ್ಯದಲ್ಲಿ ಝೆಕೋಸ್ಲೋವಾಕಿಯಾವನ್ನು ಬಲಿ ತೆಗೆದುಕೊಂಡಾಗ, ತಮ್ಮ ಆತ್ಮ ಪ್ರತಿಷ್ಠೆಯೆಂಬ ಅಹಂಕಾರದಲ್ಲಿ ಇತರ ರಾಷ್ಟ್ರಗಳನ್ನು ತೃಣೀಕರಿಸಿದವು. ಯಾವ ರಾಷ್ಟ್ರದ ಸಲಹೆಯನ್ನು ಸಹ ಕೇಳದೆ ಝೆಕೋಸ್ಲೋವಾಕಿಯಾವನ್ನು ನಿರ್ನಾಮ ಮಾಡಿದವು. ಬ್ರಿಟನಾದರೂ ಜಗತ್ತಿನಲ್ಲಿ ಶಾಂತಿಯನ್ನು ನೆಲೆಗೊಳಿಸಿದೆನೆಂಬ ತನ್ನ ಘಟ್ಟಿಗತನದಲ್ಲಿ ರಷ್ಯಾವೆಂಬ ರಾಷ್ಟ್ರ ಒಂದಿದೆಯೆಂಬುದನ್ನೂ ಮರೆತು ಮೆರೆದಾಡಿತು. ಆದರೆ ಇಂದು ರಷ್ಯಾದ ಅಂತರಾಳವು ಬ್ರಿಟನಿಗೆ ಗೋಚರವಾಗ ತೊಡಗಿದೆ. ಆದ್ದರಿಂದಲೇ ಈ ಒಪ್ಪಂದದ ಸತತಪ್ರಯತ್ನ.

ರಷ್ಯಾವು ಒಪ್ಪಂದದ ಬಗ್ಗೆ ಒಂದು ಶರತ್ತನ್ನು ಹಾಕಿದೆ. ತಾನು ಯಾವ ರಾಷ್ಟ್ರಗಳೊಡನೆ ಒಪ್ಪಂದ ಮಾಡಿಕೊಂಡಿರುವನೋ, ಯಾವ ರಾಷ್ಟ್ರಗಳು ಸರ್ವಾಧಿಕಾರಿಗಳಿಗೆ ಸೇರಿದರೆ ತನಗೆ ತೊಡಕಿದೆಯೋ, ಅಂಥಾ ರಾಷ್ಟ್ರಗಳ ಮೇಲೆ ಸರ್ವಾಧಿಕಾರಿಗಳು ಕೈ ಮಾಡಿದಲ್ಲಿ ಅವನ್ನು ತಾನು ಎದುರಿಸುವಾಗ ಬ್ರಿಟನ್, ಫ್ರಾನ್ಸು ಸಹಾಯ ಮಾಡಬೇಕು, ಎಂದಿದೆ. ಈ ಭರವಸೆಯನ್ನು ಕೊಡುವದು ಬ್ರಿಟನಿಗೆ ಕಷ್ಟವಾಗಿದೆ. ಮುಖ್ಯ ಬ್ರಿಟಿಷ್ ಪ್ರಧಾನರಾದವರೂ ಸಂಧಾನವನ್ನು ಬೇಗನೆ ಮುಗಿಸುವೆವೆಂಬದಾಗಿ ಸಾರಿಯೂ ಇದ್ದಾರೆ. ಆದರೆ ಈ ಮಧ್ಯೆ ಜರ್ಮನಿ, ಇಟಲಿ, ರಷ್ಯಾ ಇವುಗಳೊಳಗೊಂದು ಒಪ್ಪಂದವಾಗುವ ಪ್ರಯತ್ನ ನಡೆಯುತ್ತಿದೆ. ಹಾಗೇನಾದರೂ ಆದ ಪಕ್ಷ ಕಡಲ್ರಾಣಿ ಎಂಬ ಬಿರುದನ್ನು ಗಳಿಸಿರುವ ಬ್ರಿಟನು ಉತ್ತರ ಧ್ರುವದಲ್ಲಿ ಸಮುದ್ರ ತೆರೆಗಳನ್ನೇ ಆಳಬೇಕಾದೀತು. ಈ ಭಯವಾದರೂ ಚೇಂಬರ್ಲೇನರಿಗೆ ಇಲ್ಲದೆ ಇಲ್ಲ. ಆದ್ದರಿಂದ ಈಗ ಸಂಧಾನ ಪ್ರಯತ್ನಗಳು ಭರದಿಂದ ನಡೆಯುತ್ತವೆ. ಈ ಮಧ್ಯೆ ಸರ್ವಾಧಿಕಾರಿಗಳಾದವರೂ ತಮ್ಮ ಸಿದ್ಧತೆಗಳನ್ನು ಮಾಡಿಕೊಂಡು ಮುನ್ನೋಡುತ್ತಿರುವರು.

ಬ್ರಿಟನ್-ಜಪಾನ್ ಘರ್ಷಣೆ.

ಚೀನೀಯರ ಉದಾರ ಹೃದಯದ ಪರಿಣಾಮವಾಗಿ ಅನೇಕ ಪರದೇಶೀಯರು ಬಂದು ಚೀನಾದಲ್ಲಿರುವರು. ಆದರೆ ಈಗೀಗ ಚೀನೀಯರಿಂದ ಜಪಾನು ವಶಪಡಿಸಿಕೊಂಡಿರುವ ಪ್ರಾಂತಗಳಲ್ಲಿರುವ ಪರದೇಶೀಯರಿಗೆ ಬಹಳ ತೊಂದರೆಯುಂಟಾಗುತ್ತಿದೆ. ಜಪಾನರು ತಾವು ವಶಪಡಿಸಿಕೊಂಡ ಪ್ರಾಂತಗಳಲ್ಲಿ ತಮ್ಮ ಪತಾಕೆಯನ್ನು ನೆಟ್ಟು ಅಲ್ಲಿರುವ ವಿದೇಶಿಯರೂ ಕೂಡ ಅವರ ಆಳಿಕೆಗೆ ಒಳಪಡಬೇಕೆಂದು ಕಂಠೋಕ್ತವಾಗಿ ಹೇಳಿರುವರು. ಟಿಯನ್‌ಸ್ಟೀನ್ ಪ್ರಾಂತವು ಜಪಾನರ ವಶವಾಗಿದೆಯಷ್ಟೆ. ಅಲ್ಲಿರುವ ಬ್ರಿಟಿಷರು ತಮ್ಮ ಆಣೆಗೆ ಒಳಪಟ್ಟು ವರ್ತಿಸಬೇಕೆಂದೂ ತಪ್ಪಿದರೆ ಅಲ್ಲಿಯ ಬ್ರಿಟನರ ಸೊಕ್ಕನ್ನು ಅಡಗಿಸಲಾಗುವದೆಂದೂ ಜಪಾನರು ಸಾರಿದ್ದರು. ಇದರಿಂದ ಅವಮಾನಗೊಂಡ ಬ್ರಿಟನು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿತು. ಜಪಾನರು ಅಲ್ಲಿರುವ ಬ್ರಿಟನರ ಮನೆ ಮಾರುಗಳನ್ನು ಜಪ್ತಿ ಮಾಡುವದಲ್ಲದೆ ಅವರನ್ನು ನಾನಾ ತರದ ತೊಂದರೆಗೀಡು ಮಾಡುತ್ತಿರುವರು. ಮೊದಮೊದಲು ಬ್ರಿಟನರು ಇದನ್ನು ಅಲ್ಲಿಯ ಜಪಾನೀ ತುಂಟರ ಕಾರ್ಯವೆಂದು ಲಕ್ಷಿಸಿರಲಿಲ್ಲ. ಆದರೆ ಟಿಯನ್‌ಸ್ಟೀನಿನಲ್ಲಿ ಮಾಡಿದ ಜಪಾನರ ಈ ಕೃತ್ಯಕ್ಕೆ ಜಪಾನೀ ಸರ್ಕಾರದ ಸಹಿಯು ಇದೀಗ ಬಿದ್ದಿದೆ. ಆದ್ದರಿಂದ ಈ ಬ್ರಿಟನರ ಶಂಕೆಯು ಈಗ ಪರಿಹಾರವಾಗಿದೆ. ಬ್ರಿಟನರು ಈಗ ಜಪಾನರ ಮೇಲೆ ಯಾವ ಕಾರ್ಯ ಕೈಗೊಳ್ಳುವರೋ ನಿರೀಕ್ಷಣೀಯ. ಜಪಾನರು 'ಇಡೀ ಮುಳುಗಿದ ಮೇಲೆ ಚಳಿಯಿಲ್ಲ' ಎಂಬಂತೆ ಯುದ್ಧರಂಗದಲ್ಲಿ ಪೂರ್ಣ ಅನುಭವ ಪಡೆದಿರುವರು. ಬ್ರಿಟನರ ಗೊಡ್ಡು ಬೆದರಿಕೆಗೆ ಹೆದರಿ ಹಿಂಜರಿಯಲಾರರು. ಜಪಾನರ ಭೀಷ್ಮ ಪ್ರತಿಜ್ಞೆಗಳನ್ನು ನೋಡಿದರೆ ಈ ಬಾರಿ ಬ್ರಿಟನ್ ಜಪಾನರೊಳಗೆ ಕಲಹವಾಗಬೇಕು. ಬ್ರಿಟನಾದರೂ ಏಕಾಏಕಿ ಜಪಾನಿನ ಮೇಲೆ ಬೀಳಲು ಜಪಾನು ಪೂರ್ವಾಂತ್ಯದಲ್ಲಿದ್ದರೂ ಭಾರತವಲ್ಲವಷ್ಟೆ? ಅಂತೂ ಜಪಾನು ಟಿಯನ್‌ಸ್ಟೀನಿನಲ್ಲಿ ಬ್ರಿಟನರ ಮೇಲೆ ತಾನು ಹಾಕಿರುವ ನಿರ್ಬಂಧವನ್ನು ತೆಗೆಯಬೇಕಾದರೆ ಬ್ರಿಟನು ಚೈನಾದಲ್ಲಿ ಆರ್ಥಿಕ ವಿಚಾರದ ಬಗ್ಗೆ ಕೈಹಾಕಬಾರದು. ಅಲ್ಲದೆ ಚೀನೀ ಬ್ಯಾಂಕಿನಲ್ಲಿರುವ 50 ಮಿಲಿಯ ಡಾಲರುಗಳನ್ನು ವಾಪಸು ಕೊಡಬೇಕೆಂದು ಶರತ್ತು ಹಾಕಿರುವರು. ಬ್ರಿಟಿಷರು ಈ ಶರತ್ತಿಗೆ ಒಪ್ಪಿದರೆ ಅಲ್ಲಿ ಶಾಂತಿ ಉಳಿಯುವದು. ಇಲ್ಲವೇ ಅಲ್ಲಿ ಕ್ರಾಂತಿಯ ಕಿಡಿ ಏಳಬಹುದು.

ಜರ್ಮನರ ಸಂದಿಗ್ಧ ಪರಿಸ್ಥಿತಿ.

ಹಿಟ್ಲರನು ಜರ್ಮನಿಯ ಭಾಗ್ಯವಿಧಾತನಾಗಿ ಜಗತ್ತನ್ನೇ ತಲ್ಲಣಗೊಳಿಸುತ್ತಿದ್ದರೂ ಆತನಿಗೆ ಇತರ ರಾಷ್ಟ್ರಗಳ ಹೆದರಿಕೆ ಇಲ್ಲದೆ ಇಲ್ಲ. ಪ್ರಜಾ ಪ್ರಭುತ್ವ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸು ಇವೇ ಮೊದಲಾದುವುಗಳು ಸರ್ವಾಧಿಕಾರಿಗಳ ಉದ್ಧಟತನವನ್ನು ನಿಲ್ಲಿಸಲು ಪ್ರಯತ್ನಿಸುತ್ತಿವೆ. ಆದುದರಿಂದಲೇ ಅವು ಪೋಲೆಂಡಿನೊಡನೆ ಸಖ್ಯವನ್ನು ಬೆಳೆಸಿವೆ. ಇತ್ತ ಬ್ರಿಟನು ಟರ್ಕಿಯೊಡನೆ ಸಂಧಾನ ಮಾಡಿಕೊಂಡಿತು. ಜರ್ಮನಿಯು ಟರ್ಕಿಯೊಡನೆ ಒಪ್ಪಂದ ಮಾಡಿಕೊಂಡು ಅದರ ಸಹಾಯದಿಂದ ಅಪ್ರತ್ಯಕ್ಷವಾಗಿ ಬ್ರಿಟನನ್ನು ಹಣ್ಣು ಮಾಡಬೇಕೆಂದು ಹವಣಿಸಿತು. ಆದರೆ ಅದರ ಹಂಬಲ ಕಾದೇರುವ ಮೊದಲೇ ಬ್ರಿಟನ್ ಟರ್ಕಿ ಒಪ್ಪಂದಕ್ಕೆ ಸಹಿ ಬಿದ್ದು ಹೋಗಿತ್ತು. ಆದ್ದರಿಂದ ಹಿಟ್ಲರನಿಗೆ ಒಳಗೊಳಗೆ ಸ್ವಲ್ಪ ಭಯವಾದಂತೆ ತೋರುತ್ತಿದೆ. ಟರ್ಕಿ, ಬ್ರಿಟನ್, ಫ್ರಾನ್ಸು ಮತ್ತು ಪೋಲೆಂಡ್ ಒಂದು ಕಡೆ ನಿಂತಿವೆ. ಜರ್ಮನಿ, ಇಟಲಿ, ಇತ್ತ ಸ್ಪೈಯಿನಿನೊಡನೆ ಇನ್ನೊಂದು ಕಡೆ ನಿಂತಿವೆ. ಕುರುಕ್ಷೇತ್ರದ ಮಹಾ ಯುದ್ಧದಲ್ಲಿ ಕೃಷ್ಣನ ಸಹಾಯವನ್ನು ಪಾಂಡವ ಹಾಗೂ ಕೌರವ ಎರಡು ಪಕ್ಷದವರೂ ಬಯಸಿದಂತೆ ಇಂದು ರಷ್ಯಾದ ಸಖ್ಯಕ್ಕೆ ಈ ಎರಡು ಪಂಗಡಗಳೂ ಹಾತೊರೆಯುತ್ತಿವೆ. ರಷ್ಯಾವು ಯಾವ ಕಡೆ ಒಲಿಯುವುದೆಂಬುದನ್ನು ಜಗತ್ತೇ ನಿರೀಕ್ಷಿಸುತ್ತಿದೆ. ಜರ್ಮನಿಯು ಆಂಗ್ಲೋ-ರಷ್ಯಾ ಒಪ್ಪಂದವು ನೆರವೇರಿದ ಆ [illegible] ನಿ [illegible]

ತೊರೆನೂರು ಮಹಿಷಾಹುತಿ.

(ಬರೆದು ಬಂದದ್ದು.)

ಉತ್ತರ ಕೊಡಗಿನ ಫ್ರೇಜರ್‌ಪೇಟೆ ಹೋಬಳಿಯಲ್ಲಿ ಮಹಿಷಾಹುತಿಯು ಈಗ ಸುಮಾರು 20 ವರ್ಷಗಳಿಂದ ನಿಂತು ಹೋಗಿತ್ತಷ್ಟೆ. ಆದರೆ ಈಗ ಕೆಲವು ವರ್ಷಗಳಿಂದ ಅಲ್ಲಿ ಪ್ಲೇಗಿನ ಉಪದ್ರವ ಪ್ರಾರಂಭವಾದ್ದರಿಂದ ಅಲ್ಲಿನ ಕೆಲವರು ಇದು ಕೋಣನ ಮಾರಿಯ ಉಪದ್ರವವೆಂದು ಭಾವಿಸಿಕೊಂಡು ಆ ಮಾರಿಗೆ ಒಂದು ಕೋಣವನ್ನು ಬಲಿಕೊಡುವದಾಗಿ ಹರಕ್ಕೆ ಮಾಡಿಕೊಂಡಿದ್ದರಂತೆ. ಆ ಕೋಣವು ಪರಾರಿಯಾದ್ದರಿಂದ ಮತ್ತೊಂದು ಕೋಣವನ್ನು ಹರಕೆ ಬಿಟ್ಟು ಅದನ್ನು ಈ ತ.. 20 ರಲ್ಲಿ ಮಾರಿಯ ಮುಂದೆ ವಧಿಸಲು ಸನ್ನಾಹಗಳು ನಡೆಯುತ್ತಿತ್ತು. ಇದನ್ನರಿತು ಪೊಲೀಸಿನವರೂ ಈ ಕ್ರೂರ ವಧೆಯನ್ನು ತಡೆಗಟ್ಟಲು ಪ್ರಯತ್ನ ಮಾಡಿದ್ದು ಬಹಳ ಸ್ತೋತ್ರಾರ್ಹವಾಗಿದೆ.

ಈ ಕೋಣನ ಮಾರಮ್ಮನ ದೇವಸ್ಥಾನವು ತೊರೆನೂರಿನಲ್ಲಿರುವ ಬಸವೇಶ್ವರ ದೇವಸ್ಥಾನದ ಎದುರುಗಡೆಯಲ್ಲಿದೆ. ಪ್ರಾಣಿದಯಾಪರರ ಅವತಾರಿಯೂ, ಅಹಿಂಸಾವಾದಿಯೂ ಆದ ಬಸವೇಶ್ವರ ದೇವಸ್ಥಾನದ ಸಾನಿಧ್ಯದ ಎದುರು ಇಂಥ ಮಹಿಷಾವಧೆಯಂಥ ಕ್ರೌರ್ಯಗಳಿಗೆ ಸ್ಥಾನವಾಗಿದೆಂಬುದು ಎಂಥಹ ಅಪ್ರಾಸಂಗಿಕ ವಿಚಾರ! ಅಂತೂ; ಆ ಬಸವೇಶ್ವರನ ಕೃಪೆಯಿಂದಲೂ ಮತ್ತು ಪ್ರಾಣಿದಯಾಪರರಾದ ಕೆಲವು ಮಹನೀಯರ ಸ್ತುತ್ಯಪ್ರಯತ್ನಗಳಿಂದಲೂ ಮೊನ್ನೆ ಆಗಬೇಕಾಗಿದ್ದ ವಧೆಯು ನಿಲ್ಲಿಸಲಾಯಿತೆಂದು ತಿಳಿಸಲು ಬಹಳ ಆನಂದವೆನಿಸುತ್ತದೆ.

ಆ ದಿನ ಕೋ-ಅಪರೇಟಿವ್ ನಾನ್ ಕ್ರೆಡಿಟ್ ಸೀನಿಯರ್ ಇನ್ಸ್‌ಪೆಕ್ಟರರವರಾದ ಶ್ರೀಮಾನ್ ಪಿ. ಯಂ. ಚೆಂಗಪ್ಪನವರೂ ಮತ್ತು ಶ್ರೀಮಾನ್ ಚೆಟ್ಟಿಂದ ಕೆ. ಗಣಪತಿಯವರೂ ವಧೆಯಾಗಬೇಕಾಗಿದ್ದ ಸ್ಥಳಕ್ಕೆ ಹೋಗಿ ಅಲ್ಲಿ ನೆರೆದಿದ್ದ ಸಮೂಹಕ್ಕೆ ಉತ್ತಮ ಜೀವನದ ಕ್ರಮಗಳ ವಿಷಯವಾಗಿಯೂ, ಮಹಿಷಾವಧೆ ಮೊದಲಾದ ರಾಕ್ಷಸೀಕೃತ್ಯಗಳನ್ನು ಮನ್ನಮಾಡುವ ವಿಷಯದಲ್ಲೂ ಬಹಳ ವಿಸ್ತಾರ ಪೂರ್ಣ ಭಾಷಣಗಳನ್ನು ಮಾಡಿ ನೆರೆದಿದ್ದ ಸಮೂಹದಲ್ಲಿ ಜ್ಞಾನದ ಬೆಳಕನ್ನು ಹರಡಿದ್ದಕ್ಕೆ ಅವರನ್ನು ಬಹಳವಾಗಿ ವಂದಿಸಬೇಕಾಗಿದೆ. ಅಲ್ಲದೆ, ಗೋಮಾಂಸ ಭಕ್ಷಣದ ವಿಚಾರದಲ್ಲೂ ಅಲ್ಲಿ ನೆರೆದಿದ್ದ ಹರಿಜನರಿಗೆ ಬಹಳ ಬೋಧಪ್ರದವಾದ ಭಾಷಣ ಮಾಡಿದ್ದರ ಫಲಿತಾಂಶವಾಗಿ ಅಲ್ಲಿ ನೆರೆದಿದ್ದ ಹರಿಜನರು ಇನ್ನು ಮೊದಲು ಗೋಮಾಂಸ ಭಕ್ಷಣ ಮಾಡುವದಿಲ್ಲವೆಂದು ದೇವಸ್ಥಾನದಮುಂದು ಪ್ರತಿಜ್ಞೆ ಮಾಡಿದರೆಂಬ ವಿಷಯವನ್ನು ಬಹಳ ಕೊಂಡಾಡಬೇಕಾಗಿದೆ. ಈ ವಿಷಯದಲ್ಲಿ ಹರಿಜನರ ಮುಖಂಡರಿಬ್ಬರು ಬಹಳ ಸಹಾಯಕರಾಗಿ ಮುಂದೆ ಬಂದು ಹರಿಜನರಿಗೆಲ್ಲಾ ಮಾರ್ಗದರ್ಶಕರಾದ್ದು ಅತೀ ಅಭಿನಂದನೀಯ ಕಾರ್ಯವಾಗಿದೆ.

ಈ ಪ್ರಕಾರ ಇನ್ನು ಮೊದಲು ಎಲ್ಲರೂ ತಮ್ಮ ಸಮೀಪದವರಾದ ಹರಿಜನರನ್ನು ಉದ್ಧಾರಿಸುವದಕ್ಕಾಗಿಯೂ, ಮಹಿಷಾವಧೆ [illegible] ಅಜ್ಞಾನದ ಕಾ [illegible] ವದಕ್ಕಾಗಿಯೂ ಸಾ [illegible] ವನ್ನು ಬೆಳೆಸಬೇಕಾಗಿ [illegible] ವಾಗಿದೆ.

ಕೊಡಗು

ಜೂನ್ ತಾರೀಖು ೨೩ ನೇ ಶುಕ್ರವಾರ ೧೯೩೯.

ಇದೇಯೋ! ಸಹಕಾರ ಚಳವಳಕ್ಕೆ ಸರಕಾರದ ಸಹಾಯ?

ಇಂದು ಕಡುಬಡತನದಲ್ಲಿ ನರಳುತ್ತಿರುವ, ಜನಸಮುದಾಯಕ್ಕೆ ಪ್ರತ್ಯಕ್ಷ ಸಹಾಯ ಮಾಡುತ್ತಿರುವ ಸರಕಾರಿ ಇಲಾಖೆಗಳಲ್ಲಿ ಸಹಕಾರಿ ಇಲಾಖೆಯು ಅತೀ ಮುಖ್ಯವಾದುದೆಂಬುದು ನಿರ್ವಿವಾದದ ಸಂಗತಿ. ಜನಸಾಮಾನ್ಯರು ದೇಶಾಭಿವೃದ್ಧಿಯ ಯಾವ ಕಾರ್ಯಗಳಲ್ಲೇ ಕೈಹಚ್ಚಬೇಕಾದರೂ ಅವರ ಆರ್ಥಿಕ ಸ್ಥಿತಿಯು ಚೆನ್ನಾಗಿರಬೇಕು. ಅವರ ಜೀವನ ಕ್ರಮವು ಸುಸೂತ್ರವಾಗಿ ನಡೆಯುತ್ತಿರಬೇಕು. ಅವರು ಮಾನವರಂತೆ ಜೀವಿಸುವಷ್ಟು ಅನುಕೂಲವುಳ್ಳವರಾಗಬೇಕು. ಹೀಗೆ ಮಾಡಲು ಗ್ರಾಮ ಜನರನ್ನು ಸುಸಂಘಟಿತರನ್ನಾಗಿ ಮಾಡಿ ಅವರು ಇಂದು ಬಿದ್ದು ನರಳುತ್ತಿರುವ ಬಡತನದ ಕೂಪದಿಂದ ಕೈಹಿಡಿದೆತ್ತಲು ಸತತ ಪ್ರಯತ್ನಿಸುತ್ತಿರುವ ಸಂಸ್ಥೆಗಳೆಂದರೆ ಸಹಕಾರ ಸಂಸ್ಥೆಗಳೇ. ಪ್ರಪಂಚದ ಪ್ರಗತಿ ಪಥದಲ್ಲಿ ನಡೆಯುತ್ತಿರುವ ದೇಶಗಳ ಸ್ಥಿತಿಗತಿಗಳನ್ನು ಪರಿಶೀಲಿಸಿದರೆ ಅವುಗಳ ಇಂದಿನ ಉಚ್ಛ್ರಾಯಸ್ಥಿತಿಗೆ ಸಹಕಾರ ಸಂಸ್ಥೆಗಳೇ ಮೂಲ ಕಾರಣವೆಂದು ಹೇಳಬಹುದು. ನಮ್ಮ ಈ ಭಾರತ ಭೂಮಿಯಲ್ಲಾದರೂ ಹಿಂದಿನ ಕಾಲದಲ್ಲಿ ಜನತೆಯಲ್ಲಿ ಸಹಕಾರ ತತ್ವವು ಚೆನ್ನಾಗಿ ನೆಲೆಗೊಂಡಿದ್ದ ಕಾರಣ ಆಗಿನ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯು ಬಹು ಅಭಿವೃದ್ಧಿಗೊಂಡಿತ್ತು. ಆದರೆ ಇತ್ತಿತ್ತ ಜನತೆಯಲ್ಲಿ ಮೂಡಿ ಹಬ್ಬುತ್ತಿರುವ ಸ್ವಾರ್ಥತೆಯ ಪ್ರವಾಹದಲ್ಲಿ ಪರಸ್ಪರ ಸಹಾಯಕ ತತ್ವವು ಮೂಲೆಗೊತ್ತಲ್ಪಡುತ್ತಿದೆ. ಇದೇ ಇಂದಿನ ವಿಪನ್ನಾವಸ್ಥೆಗೆ ಕಾರಣವೆಂಬುದನ್ನು ಬೇರೆ ಹೇಳಬೇಕಿಲ್ಲ. ಜನತೆಯು ಈ ದಾರಿದ್ರ್ಯವನ್ನು ನೀಗಲು ಇತರ ದೇಶಗಳಲ್ಲಿ ಆಯಾಯ ಸರ್ಕಾರಗಳು ಸಹಕಾರ ಸಂಸ್ಥೆಗಳನ್ನು ಆದರಿಸಿ ಪ್ರಯತ್ನಿಸುತ್ತಿರಲು, ನಮ್ಮ ಕೊಡಗು ಸರಕಾರವಾದರೂ ಅದೇ ರೀತಿ ವರ್ತಿಸಬೇಕಾದುದು ಅದರ ಕರ್ತವ್ಯ. ಆದರೆ ಈ ಬಗ್ಗೆ ನಮ್ಮ ಸರಕಾರವು ಮಾಡುತ್ತಿರುವದೇನು? ಸಹಕಾರ ಸಂಸ್ಥೆಗಳಿಗೆ ಮಾಡುತ್ತಿರುವ ಸಹಾಯವಾದರೂ ಏನು?

ಕೊಡಗಿನಲ್ಲಿ ಸಹಕಾರ ಸಂಸ್ಥೆಯ ಕೇಂದ್ರವೆನಿಸಲ್ಪಟ್ಟಿರುವ ಸೆಂಟ್ರಲ್ ಬ್ಯಾಂಕು ಆರ್ಥಿಕ ಮುಗ್ಗಟ್ಟಿನ ಮತ್ತು ಇತರ ರೀತಿಯ ಕಷ್ಟ ಪರಂಪರೆಗಳ ಮಧ್ಯದಲ್ಲಿ ಯೋಗ್ಯ ಸಹಾಯವನ್ನು ಗ್ರಾಮ ಸಂಘಗಳಿಗೆ ನೀಡಿ ಆ ಮೂಲಕ ಜನತೆಯ ಸೇವೆಯನ್ನು ಮಾಡುತ್ತಿದೆ. ಇಂಥಾ ಸರ್ವಜನಾದರಣೀಯ ಕಾರ್ಯಮಾಡುತ್ತಿರುವ ಕೇಂದ್ರ ಸಂಸ್ಥೆಗೆ ಜನತೆಯ ಹಿತವನ್ನು ಬಯಸುವ ಸರಕಾರವು ಸಹಾಯವನ್ನಿತ್ತು ಪ್ರೋತ್ಸಾಹಿಸುವದು ಧರ್ಮ. ಈ ಬಗ್ಗೆ ಬ್ಯಾಂಕಿನವರು ಸರಕಾರವನ್ನು ಪದೇ ಪದೇ ಕಾಡಿಬೇಡುತ್ತಿದ್ದರೂ ಸರಕಾರವು ಇವರ ಕೂಗನ್ನು ಅರಣ್ಯರೋಧನದಂತೆ ಪರಿಗಣಿಸಿ ತಟಸ್ಥವಾಗಿರುವದು ಶೋಚನೀಯದ ವಿಚಾರ.

ಅದಂತಿರಲಿ, ಕೊಡಗು ಸರಕಾರವು 1933–34 ನೇ ವರ್ಷದಿಂದ ಪ್ರತಿ ವರ್ಷ ಸಹಕಾರ ಸಂಘಗಳ ಹಾಗೂ ಸ್ಟೋರುಗಳಿಗೆ ಕಟ್ಟಡಕ್ಕೆ ಸಹಾಯಕ್ಕಾಗಿ ಹತ್ತು, ಇಪ್ಪತ್ತು ಸಾವಿರದಂತೆ ಒಟ್ಟು 30,000 ರೂಪಾಯಿ ಸಾಲ ಕೊಡುತ್ತಾ ಬರುತ್ತಿದೆ. ಮೊದಮೊದಲು ಈ ಪ್ರಾಂತದಲ್ಲಿ ಸಹಕಾರ ಚಳವಳಿಯು ಶೈಶವಾವಸ್ಥೆಯಲ್ಲಿದ್ದದರಿಂದಲೂ, ಸ್ಟೋರು ಮನೆಗಳನ್ನು ಕಟ್ಟುವ, ಮತ್ತು ಆ ಬಗ್ಗೆಯ ನಿಬಂಧನೆಗಳು ತಯಾರಿಲ್ಲದ್ದರಿಂದಲೂ ಈ ಹಣವು ಸರಿಯಾಗಿ ಉಪಯೋಗಿಸಲ್ಪಡದೆ ಹಾಗೇ ನಿಲ್ಲುತಿತ್ತು. ಆದರೆ ಕ್ರಮೇಣ ಜನತೆಗೆ ಸಹಕಾರದ ಮಹಿಮೆಯು ಅರಿವಾಗ ತೊಡಗಿದೊಡನೇ ಈ ಹಣವು ಸರಿಯಾಗಿ ಉಪಯೋಗಿಸಲ್ಪಡುತಿತ್ತು. ಹೀಗೆ ಜನತೆಯ ಅವಶ್ಯಕತೆಯು ಬೆಳೆದು ಜನತೆಯ ಕೇಳಿಕೆಯನ್ನು ಸಲ್ಲಿಸಲು ಈ ಹಣದಿಂದ ಸಾಧ್ಯವಾಗದ ಸ್ಥಿತಿಗೆ ಇಂದು ತಲಪಿದೆ. ಹೀಗೆ ಸಹಕಾರ ತತ್ವವು ಮುನ್ನಡೆಯುವ ಈ ಸಂದರ್ಭದಲ್ಲಿ, 'ಎತ್ತ ಬರುವಾಗ ಗೂಣ ಮುರಿಯಿತು' ಎಂಬ ನಾಣ್ನುಡಿಯಂತೆ ಈ ಸಾಲದಲ್ಲಿ ರೂ. 20,000 ಕ್ಕೆ ಸರಕಾರವು ಕತ್ತರಿಪ್ರಯೋಗಿಸಲು ನಿಶ್ಚೈಸಿರುವದಂತೆ. ಹಾಗಿದ್ದ ಪಕ್ಷ ಇದರಿಂದ ಕೊಡಗಿನ ಸಹಕಾರ ಸಂಸ್ಥೆಯ ಮುನ್ನಡೆಗೆ ಒಂದು ದೊಡ್ಡ ಧಕ್ಕೆ ಬಂದಂತಾಗುವದರಲ್ಲಿ ಸಂದೇಹವಿಲ್ಲ. ಸ್ಟೋರು ಸಂಘಗಳು ಈಗ ಕೊಡಗಿನಲ್ಲಿ ಕಾಲಿಟ್ಟಿವೆ. ಬತ್ತ ದಾಸ್ತಾನು ಕಟ್ಟಡಗಳ ಅವಶ್ಯಕತೆಯು ತುಂಬಾ ಇದೆ. ಹುದಿಕೇರಿ, ಗೋಣಿಕೊಪ್ಪ, ಕೈಕೇರಿ, ಬಿಟ್ಟಂಗಾಲ, ಶನಿವಾರಸಂತೆ, ಮಡಿಕೇರಿ ಇವೇ ಮೊದಲಾದ ಸ್ಥಳಗಳಲ್ಲಿ ಪತನೆ ಕಟ್ಟಡಗಳಾಗಬೇಕು. ಕಟ್ಟಡಗಳಾದ ಸ್ಥಳದಲ್ಲೂ ಸಹ ಅವುಗಳ ರಿಪೇರಿ ಮತ್ತು ಹೆಚ್ಚಿನ ಅವಶ್ಯಕತೆ ಬಂದರೆ ಹೊಸ ಕಟ್ಟಡ ಇವುಗಳಿಗಾಗಿ ಬೇರೆ ಹಣವಿಡಬೇಕೆಂಬ ನಿಬಂಧನೆಯಿದೆ. ಇಂಥಾ ಅವಶ್ಯಕಗಳೇ ಕಾದು ನಿಂತಿರುವಾಗ ಸಾಲದಲ್ಲಿ ಖೋತೆಯೊಂದರೆ ಅದು ಜನಹಿತಕಾರಕ ವರ್ತನೆಯಲ್ಲವೆಂದೆನ್ನಲಡ್ಡಿಯಿಲ್ಲ. ಕಳೆದ ವಾರ ನಡೆದ ಗ್ರಾಮಾಭಿವೃದ್ಧಿ ಫಂಡಿನ ಮೀಟಿಂಗಿನಲ್ಲಿ ಸ್ಟೋರು ಸಂಘಗಳ ಕಟ್ಟಡಕ್ಕೆ ಕೊಟ್ಟಿರುವ ಸಾಲದಲ್ಲಿ ಶೇಕಡ 25/ ರಂತೆ ಗ್ರಾಮಾಭಿವೃದ್ಧಿ ಫಂಡಿನಿಂದ ಸಹಾಯ ಮಾಡಬೇಕೆಂದು ಒಬ್ಬ ಮಹನೀಯರು ತಂದ ಸೂಚನೆಯನ್ನು ಕೆಲವು ಸರಕಾರಿ ಮೆಂಬರುಗಳು ವಿರೋಧಿಸಿ ಸ್ಟೋರುಗಳು ನಷ್ಟ ಪಟ್ಟುಕೊಂಡಾಗ ಮಾತ್ರ ಇಂಥಾ ಸಹಾಯ ಮಾಡಬಹುದೆಂದರಂತೆ. ಇದು ಸಹಕಾರ ಚಳವಳಕ್ಕೆ ಕೊಟ್ಟ ಪ್ರೋತ್ಸಾಹವೇ? ಸ್ಟೋರು ಸಂಘಗಳ ಕಟ್ಟಡಗಳಿಗಾಗಿ ಕೊಡುತ್ತಿದ್ದ 20,000 ರೂಪಾಯಿಯಲ್ಲಿ 15,000 ಕಮ್ಮಿ ಮಾಡಲೆತ್ನಿಸುತ್ತಿರುವ ಸರಕಾರದ ಧೋರಣೆಯನ್ನು ಎಷ್ಟು ಖಂಡಿಸಿದರೂ ಸಾಲದು.

ಇದಲ್ಲದೆ ಪ್ರಾಥಮಿಕ ಸಂಘಗಳ ಉಪಯೋಗಕ್ಕಾಗಿ ಅಂದರೆ ಹೊಸದಾಗಿ ಸ್ಥಾಪಿಸಲ್ಪಟ್ಟ ಸಂಘಗಳಿಗಾಗಿ, ಇಲ್ಲವೇ ಬಂಡವಾಳವಿಲ್ಲದೆ ಕಷ್ಟಪಡುತ್ತಿರುವ ಸಂಘಗಳಿಗಾಗಿ ಎಂದು ಕೊಡುತ್ತಿದ್ದ ರೂ. 10 ಸಾವಿರದಲ್ಲಿ ರೂ. 5 ಸಾವಿರ ಖೋತೆ ಮಾಡುವದೆಂದರೆ ಅದು ಹೃದಯದ್ರಾವಕ ವಿಷಯ.

ಸೆಂಟ್ರಲ್ ಬ್ಯಾಂಕಿನ ಸೂಪರ್‌ವಿಜನ್ ಬೋರ್ಡಿಗೆ ಕೊಡುತ್ತಿದ್ದ ಗ್ರ್ಯಾಂಟಿನಲ್ಲಿ 1 ಸಾವಿರ ರೂ. ಗಳ ಖೋತೆ ಮಾಡಲೆತ್ನಿಸಿರುವದು ವಿಷಾದಕರ. ಸೂಪರ್‌ವಿಜನ್ ಫಂಡು ಪ್ರಾಥಮಿಕ ಸಂಘಗಳ ಮೇಲ್ವಿಚಾರಣೆ ನಡೆಸುವ ಸೂಪರ್‌ವೈಜರುಗಳ ವೇತನಕ್ಕಾಗಿ ಉಪಯೋಗಿಸಲ್ಪಡುವದು. ಇನ್ನೂ ಜನತೆಯಲ್ಲಿ ಸಹಕಾರ ತತ್ವವು ಚೆನ್ನಾಗಿ ಬೇರೂರದಿರುವ ಪ್ರಯುಕ್ತ ಸಂಗಳ ಮೇಲ್ವಿಚಾರಣೆ, ಹಾಗೂ ಗ್ರಾಮ ಜನಗಳಿಗೆ ಬೋಧನೆ, ಬಹು ದಕ್ಷತೆಯಿಂದ ನಡೆಯಬೇಕಾದುದು ಅವಶ್ಯಕ. ದಕ್ಷತೆಯಿಂದ ಕಾರ್ಯ ನಡೆಯಬೇಕಾದರೆ ಹೆಚ್ಚು ಕೆಲಸಗಾರರು ಆಗತ್ಯ. ಹೆಚ್ಚು ಕೆಲಸಗಾರರನ್ನು ನೇಮಿಸಲು ಬಂಡವಾಳ ಹೆಚ್ಚು ಬೇಕು. ಅಂಥಾದ್ದರಲ್ಲಿ ಮೇಲ್ವಿಚಾರಣಾ ನಿಧಿಗಾಗಿ ಕೊಡುತ್ತಿದ್ದ ಗ್ರ್ಯಾಂಟಿನಿಂದ 1 ಸಾವಿರ ರೂ. ಖೋತೆಯಿಂದರೆ ಸಂಸ್ಥೆಯ ಮುನ್ನಡೆಗೇ ಅಡ್ಡಿ ನಿಂತಂತಾಯಿತು. ಒಂದೆಡೆ ಈ ರೀತಿಯಾದರೆ ಇನ್ನೊಂದೆಡೆ ಹೊಸ ಅಕ್ಟಿನನ್ವಯ ಸಂಘಗಳಿಂದ ಆಡಿಟ್ ಫೀಜು ವಸೂಲು ಮಾಡುವ ಏರ್ಪಾಡು ನಡೆಯುತ್ತಿದೆ. ಮೊದಲೇ ಸಂಘಗಳು ತಮ್ಮ ಮೆಂಬರುಗಳ ಕೇಳಿಕೆಗಳನ್ನು ಸಲ್ಲಿಸಲಾರದೆ ತತ್ತರಿಸುವಾಗ ಅದರ ಮೇಲೆ ಇದೊಂದು ಹೊರೆ ಬಿದ್ದರೆ ಅದು ಚೇತರಿಸಿಕೊಳ್ಳುವದೆಂತು? ಸೂಪರ್‌ವಿಜನ್ ಫಂಡಿನ ಗ್ರ್ಯಾಂಟನ್ನು ಕಮ್ಮಿ ಮಾಡಕೂಡದೆಂದೂ, ಆಡಿಟ್ ಫೀಜು ಹಾಕಬಾರದೆಂದೂ ಕೆಲವೊಂದು ಸಹಕಾರಿಗಳು ಹೋಗಿದ್ದ ಡೆಪ್ಯುಟೇಶನಿನ ಬಗ್ಗೆ ಸರ್ಕಾರವು ಯಾವುದೊಂದು ಜವಾಬನ್ನೂ ಕೊಡದೆ ತಾತ್ಸಾರದಿಂದ ವರ್ತಿಸುತ್ತಿರುವದು ವ್ಯಸನಕರ. ಸಹಕಾರಿ ಸಂಘಗಳ ಆಕ್ಟು ಜಾರಿಗೆ ಬಂದು ಈ ಜೂನ್ ಅಂತ್ಯಕ್ಕೆ ಒಂದು ವರ್ಷವಾಗುವದರಿಂದ ಅದರಂತೆ ಆಡಿಟ್ ಫೀಜಿನ ವಸೂಲಾತಿಗೆ ಬರುವ ಜುಲೈಯಲ್ಲಿ ನೋಟಿಸು ಹೋಗುವದು ವಾಸ್ತವ. ಅದಕ್ಕೆ ಮೊದಲೇ ಸರ್ಕಾರದವರು ಅದನ್ನು ಮನ್ನ ಮಾಡಬೇಕಾಗಿದೆ.

ಸರ್ಕಾರದವರು ಕೊಡಗಿನ ಸಹಕಾರಿ ಚಳವಳದ ಹೆಜ್ಜೆ ಹೆಜ್ಜೆಯಲ್ಲಿಯೂ ತೊಡರುಗಳನ್ನು ಹಾಕುತ್ತಿರುವದು ಸರಿಯಲ್ಲ. ಸಿಬ್ಬಂದಿ ಖೋತೆಯಿಂದು ನೆವನದಿಂದ ಇಡೀ ದೇಶದ ಕಲ್ಯಾಣವನ್ನು ಸಾಧಿಸುತ್ತಿರುವ ಸಂಸ್ಥೆಯ ಬೇರು ಕತ್ತರಿಸುವದು ನ್ಯಾಯವಲ್ಲ. ಅಲ್ಪ ಉಳಿಕೆಯ ದೃಷ್ಟಿಯಿಂದ ಅನೇಕ ಜನರಿಗಾಗುವ ಅಮೋಘ ಸಹಾಯವನ್ನು ತಪ್ಪಿಸುವದು ಧರ್ಮವಲ್ಲ. ದೇಶದ ಪ್ರಗತಿ ಹಾಗೂ ಪ್ರತಿಷ್ಠೆಗೆ ಸಹಕಾರ ಸಂಸ್ಥೆಯು ಹೆದ್ದಾರಿಯೆಂದರೆ ಅತಿಶಯೋಕ್ತಿಯಲ್ಲ. ಅಂಥಾ ಹೆದ್ದಾರಿಗೆ ಮುಳ್ಳು ಹಾಕುವದು ಜನತೆಯ ದೃಷ್ಟಿಯಿಂದ ಶೋಭಿಸುವ ಕಾರ್ಯವಲ್ಲ. ಆದ್ದರಿಂದ ಇನ್ನಾದರೂ ಸರ್ಕಾರದವರು ತಮ್ಮ ಧೋರಣೆಯನ್ನು ಬದಲಾಯಿಸಿ ಯಾವ ವಿಧದ ಕತ್ತರಿ ಪ್ರಯೋಗವನ್ನೂ ಜನೋಪಕಾರಕ ಇಲಾಖೆಯಾದ ಈ ಸಂಸ್ಥೆಗೆ ಮಾಡದೆ ಜನತೆಯ ಕೇಳಿಕೆಗೆ ಮನ್ನಣೆಯನ್ನಿತ್ತು ವರ್ತಿಸುವರಾಗಿ ಆಶಿಸುತ್ತೇವೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು

ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯು ಈ ಸಾರಿ ತಾ. 21ರಿಂದ ಬೊಂಬಾಯಿಯಲ್ಲಿ ಸೇರಿದೆ. ಈ ಸಾರಿಯ ವರ್ಕಿಂಗ್ ಕಮಿಟಿಯ ಮೀಟಿಂಗು ಬಹಳ ಮಹತ್ವದಿದ್ದು ಅನೇಕ ಪ್ರಾಮುಖ್ಯ ಠರಾವುಗಳು ಚರ್ಚಿಸಲ್ಪಡುತ್ತಿವೆ. ಈ ಕಮಿಟಿಯ ಮುಂದಿರುವ ಪ್ರಥಮ ಸಮಸ್ಯೆಯಾವರೂ ಕಾಂಗ್ರೆಸ್ ಶುದ್ಧೀಕರಣ ವಿಚಾರವಾಗಿದೆ. ಅಖಿಲಭಾರತ ಕಾಂಗ್ರೆಸ್ ಕಮಿಟಿಯಲ್ಲಿ ಈ ಬಗ್ಗೆ ನೇಮಕವಾದ ಉಪ ಸಮಿತಿಯು ತನ್ನ ವರದಿಯನ್ನು ವರ್ಕಿಂಗ್ ಕಮಿಟಿಗೆ ಒಪ್ಪಿಸಿದೆ. ಈ ವರದಿಯು ಬಹಳೇ ಕಠಿಣ ತರದದ್ದು ಅದು ಜಾರಿಗೆ ಬಂದದ್ದೇ ಆದರೆ ಪರಿಣಾಮವು ವಿಪರೀತವಾಗಬಹುದೆಂದು ತರ್ಕಿಸಲಾಗಿದೆ. ಅನೇಕ ತಿದ್ದುವಡಿಗಳು ಈಗಾಗಲೇ ತೀವ್ರಗಾಮಿಗಳಿಂದ ವಿರೋಧಿಸಲ್ಪಟ್ಟಿದೆ. ಅಲ್ಲದೆ ಉಪ ಸಮಿತಿಯ ಸದಸ್ಯರಾದ ಜವಾಹರಲಾಲ್ ಮತ್ತು ನರೇಂದ್ರದೇವ್ ಇವರು ಆ ರಿಪೋರ್ಟಿನಲ್ಲಿ ಪ್ರತ್ಯೇಕವಾಗಿ ಕಾಂಗ್ರೆಸ್ ಕಮಿಟಿಯ ಮೆಂಬರುಗಳು ಬೇರೆ ಇತರ ಸಂಸ್ಥೆಗಳ ಸದಸ್ಯರಾಗಕೂಡದೆಂಬ ಶರತನ್ನು ಹಾಕಿರುವರು. ವರ್ಕಿಂಗ್ ಕಮಿಟಿಯು ಈ ರಿಪೋರ್ಟನ್ನು ಪ್ರಥಮದ ಎರಡು ದಿನಗಳ ಮೀಟಿಂಗಿನಲ್ಲಿ ವಿಚಾರಿಸಿ ತಾ. 24 ರ ನಂತರ ಜರಗುವ ಅಖಿಲಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನಲ್ಲಿ ಚರ್ಚಿಸಿಗುವದು.

ಅನಂತರ ವರ್ಕಿಂಗ್ ಕಮಿಟಿಯು ಪ್ರಾಂತೀಕ ಕಾಂಗ್ರೆಸ್ ಸರ್ಕಾರದ ಮಂತ್ರಿಗಳು ಈ ವರೆಗೆ ಮಾಡಿದ ಕಾರ್ಯ ಕಲಾಪಗಳನ್ನು ವಿಮರ್ಶಿಸುವದು. ಈಗಾಗಲೇ ಕಾಂಗ್ರೆಸ್ ಸರ್ಕಾರವು ಆಯಾಯ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳೊಡನೆ ಸಹಕರಿಸಿ ಕೆಲಸ ಮಾಡಬೇಕೆಂದು ಠರಾವು ಬಂದಿರುವದು. ಈ ಬಗ್ಗೆ ಇರುವ

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ತಾ. 17–6–39ರಿಂದ ಇಂದಿನವರೆಗೆ ಇಲ್ಲಿ 3.23 ಇಂಚು ಮಳೆಯಾಗಿದೆ.

ರೆಡ್ ಕ್ರಾಸ್ ಸಂಘದ ಕೊಡಗಿನ ಶಾಖೆಯ ಸುಮಾರು 2,200 ರೂಪಾಯಿಗಳನ್ನು ಸಹಕಾರಿ ಸೆಂಟ್ರಲ್ ಬ್ಯಾಂಕಿನಲ್ಲಿ ಠೇವಣಾತಿ ಇಡಲಾಗಿದೆಯೆಂದು ತಿಳಿಯಬರುತ್ತದೆ.

ಪಿ. ಡಬ್ಲ್ಯು. ಡಿ. ಆಫೀಸಿನ ಮೇನೇಜರರು ಇಪ್ಪತ್ತು ದಿನಗಳ ರಜೆಯಲ್ಲಿ ಹೋಗಿರುವುದರಿಂದ ಅವರ ಬದಲಿಗೆ ಶ್ರೀ. ಬಿ. ಶ್ರೀನಿವಾಸ ಮೂರ್ತಿ, ಬಿ. ಎ., ಇವರನ್ನು ನೇಮಿಸಲಾಗಿದೆಯೆಂದು ತಿಳಿಯುತ್ತೇವೆ.

ಸರ್ವೇಯರಾಗಿದ್ದ ಶ್ರೀ. ಮಾತಂಡ ಪೊನ್ನಪ್ಪನವರು ನಿಧನಹೊಂದಿದ ಪ್ರಯುಕ್ತ ಅವರ ಬದಲು ಉತ್ತರ ಕೊಡಗಿನ ಸರ್ವೇಯರಾಗಿ ಶ್ರೀ. ಕೋಡಿರ ಅಚ್ಚಪ್ಪನವರು ನೇಮಿಸಲ್ಪಟ್ಟಿರುವರು.

ಕೊಡಗು ಸಹಕಾರಿ ಸಂಘಗಳ ರಿಜಿಸ್ಟ್ರಾರಾಗಿರುವ ಶ್ರೀ. ಕರವಂಡ ಚಂಗಪ್ಪನವರು ಬರುವ ಜುಲೈ 17ರಿಂದ ನಿವೃತ್ತರಾಗುವ ಪ್ರಯುಕ್ತ ಅವರನ್ನು ಬೀಳ್ಕೊಡಲು ತಾ. 18ರಲ್ಲಿ ಒಂದು ಚಹಪಾರ್ಟಿಯನ್ನು ಸಹಕಾರಿ ಉದ್ಯೋಗಸ್ಥರು ಏರ್ಪಡಿಸಿರುವರೆಂದು ತಿಳಿಯುತ್ತೇವೆ.

ಬ್ರಿಟಿಷ್ ರಬ್ಬರ್ ವ್ಯವಸಾಯ ಪರಿಶೋಧನಾ ಸಂಸ್ಥೆಯವರು ರಬ್ಬರು ಪರಿಶೋಧನೆಯ ಬಗ್ಗೆ ಒಬ್ಬ ಭಾರತೀಯನನ್ನು ತರಬೇತು ಮಾಡುವ ಏರ್ಪಾಡು ಮಾಡಿರುವದರಿಂದ ಟಾಯಿಸ್ ದಾರರು ಜುಲೈ ತಾ. 1 ರೊಳಗೆ ತಮ್ಮ ಶಿಫಾರಸು ಪತ್ರಗಳೊಂದಿಗೆ ಕಮೀಶನರಿಗೆ ಅರ್ಜಿ ಮಾಡಿಕೊಳ್ಳಬಹುದೆಂದು ಪ್ರಕಟವಾಗಿದೆ.

ಸಾಧ್ಯಾಸಾಧ್ಯತೆಗಳ ವಿಚಾರ ಕಮಿಟಿಯು ತರ್ಕಿಸುವದು.

ಸಿಲೋನ್ ಮತ್ತು ದಕ್ಷಿಣ ಆಫ್ರಿಕದಲ್ಲಿಯ ಭಾರತೀಯರಿಗೆ ಅಲ್ಲಿಯ ಸರಕಾರಗಳು ಕೊಡುತ್ತಿರುವ ಉಪಟಳ, ಆ ಬಗ್ಗೆ ಕಾಂಗ್ರೆಸ್ ಯಾವ ಧೋರಣೆಯನ್ನು ಅನುಸರಿಸಬೇಕೆಂಬ ಬಗ್ಗೆಯೂ, ಭಾರತ ಸಂಸ್ಥಾನಗಳ ಸಮಸ್ಯೆಯ ಬಗ್ಗೆ ಮಹಾತ್ಮರ ನವೀನ ತತ್ವದ ಮೇರೆ ಯಾವ ರೀತಿಯ ಕಾರ್ಯಕ್ರಮವನ್ನು ಕಾಂಗ್ರೆಸ್ ಕೈಕೊಳ್ಳಬೇಕೆಂಬ ಬಗ್ಗೆಯೂ ವಿಚಾರಿಸುವದಲ್ಲದೆ ಇಂಗ್ಲೆಂಡ್ ಮತ್ತು ಭಾರತ ವ್ಯಾಪಾರದ ಒಪ್ಪಂದದ ಬಗ್ಗೆ ವರ್ಕಿಂಗ್ ಕಮಿಟಿಯು ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗಿನಲ್ಲಿ ಒಂದು ಠರಾವನ್ನೂ ಮಂಡಿಸಲಿರುವದು. ಈ ಠರಾವುಗಳೇ ಅಲ್ಲದೆ ತೀರ್ಮಾನವನ್ನು ಕಾಯ್ದುಕೊಂಡಿರುವ ಇತರ ಅನೇಕ ಸಮಸ್ಯೆಗಳೂ ತೀರ್ಮಾನಿಸಲ್ಪಡುವವು. ಅಂತು ಈ ಸಾರಿಯ ಮೀಟಿಂಗು ಬಹಳ ಮಹತ್ವದ್ದಿದೆಯೆಂಬುವುದರಲ್ಲಿ ಯಾವ ಸಂದೇಹವೂ ಇಲ್ಲ.

ವಿದ್ಯಾ ಇಲಾಖೆಯಲ್ಲಿ ಸಿಬ್ಬಂದಿ ಖೋತೆಯ ಪ್ರತಿಧ್ವನಿ.

ಸಿಬ್ಬಂದಿ ಖೋತೆಯ ಕಾರ್ಯವು ಇನ್ನೂ ಪೂರ್ತಿಯಾಗಿಲ್ಲ. ಈ ಮೊದಲು ಇದರ ಪರಿಣಾಮವಾಗಿ ನಿವೃತ್ತಿಪಡಿಸಲ್ಪಟ್ಟ ಸೋಮವಾರಪೇಟೆಯ ಶ್ರೀ. ಚನ್ನಬಸಪ್ಪನವರನ್ನೂ, ಮಡಿಕೇರಿಯ ಶ್ರೀ. ಮತ್ರಂಡ ಬಿದ್ದಯ್ಯನವರನ್ನೂ ಪುನಃ ಕೆಲಸಕ್ಕೆ ಕರೆದಿರುವರಾಗಿಯೂ, ವೀರಾಜಪೇಟೆ ಹೈಸ್ಕೂಲು ಅಧ್ಯಾಪಕರಾದ ಶ್ರೀ. ಸಿ. ಎಸ್. ಮಂಜಯ್ಯನವರು ನಿವೃತ್ತಿಹೊಂದುವರೆಂದೂ, ಸುಪರ್‌ನ್ಯೂಮರರಿಯಾಗಿದ್ದ ಶ್ರೀ. ನಾಯಡ ಚಿಣ್ಣಪ್ಪನವರು ಹೈಸ್ಕೂಲಿನ ಅಧ್ಯಾಪಕರಾಗಿ ನೇಮಿಸಲ್ಪಡುವರೆಂದೂ, ಮಡಿಕೇರಿಯ ಶ್ರೀ. ಚಿನ್ನವೀರಪ್ಪನವರನ್ನು ಅವರ ಮೊದಲಿನ ಸ್ಥಳಕ್ಕೆ ನೇಮಿಸುವರೆಂಯೂ, ಶ್ರೀ. ನಾಳಿಯಂಡ ಕಾಳಪ್ಪನವರನ್ನು ವೀರಾಜಪೇಟೆ ಮೋಡೆಲ್ ಶಾಲೆಯ ಅಸಿಸ್ಟೆಂಟ್ ಟೀಚರಾಗಿ ವರ್ಗಾಯಿಸುವದಲ್ಲದೆ, ಮಡಿಕೇರಿ ಹೈಸ್ಕೂಲು ಅಧ್ಯಾಪಕರಾದ ಶ್ರೀ. ಎ. ಪಿ. ಶ್ರೀನಿವಾಸರಾವ್ ಮತ್ತು ಶ್ರೀ. ಜಿ. ಎಸ್. ಕೇಶವಾಚಾರಿ ಇವರನ್ನೂ ಮತ್ತು ವೀರಾಜಪೇಟೆ ಹೈಸ್ಕೂಲಿನ ಶ್ರೀ. ಡಿ. ಎನ್. ಕೃಷ್ಣಯ್ಯನವರನ್ನೂ ಹೈಯರ್ ಎಲಿಮೆಂಟರಿ ಗ್ರೇಡಿನಲ್ಲಿ ಕೆಲಸಮಾಡಬೇಕೆಂದು ಕೇಳಿರುವರೆಂದೂ, ಸಾಪ್ತೋಕ್ಲಿನ ಶ್ರೀ. ಕೆ. ಆರ್. ಕೃಷ್ಣಯ್ಯ ಮತ್ತು ಶ್ರೀ. ಮುಕ್ತಿರಾವ್ ಇವರಿಗೆ ಸೆಕೆಂಡರಿ ಗ್ರೇಡನ್ನು ಕೊಡಲಾಗುವುದೆಂದೂ, ಶ್ರೀಮತಿ ಎ. ಟಿಕ್ಸಿರಾ ಮತ್ತು ಶ್ರೀಮತಿ ಪೂಳೇಟಿರ ಮುದ್ದವ್ವ ಇವರನ್ನು ಕೆಲಸದಿಂದ ನಿವೃತ್ತಿಗೊಳಿಸಲಾಗುವುದೆಂದೂ ತಿಳಿದುಬರುತ್ತದೆ.

ಹಿಂದೂದೇಶ.

ಡಿಲ್ಲಿಯ ಜಮಿಯಾ ಮಿಲ್ಲಿಯಾ ಇಸ್ಲಾಮಿಯಕ್ಕೆ ಹೈದರಾಬಾದು ಸರಕಾರವು 1 ಲಕ್ಷ ರೂಪಾಯಿಗಳ ದಾನ ಮಾಡಿದೆ.

ಜೆಕ್ಕಾ ಸಮೀಪದಲ್ಲಿಯ ಆಟುಪೋಕೂರಿನ ಕೆರೆಯಲ್ಲಿ ಹತ್ತು ಕೈಗಳುಳ್ಳ ಮಹಿಷಾಸುರ ಮರ್ಧನಿಯ ವಿಗ್ರಹವೊಂದು ದೊರೆತಿರುವುದು, ಅದರ ಎತ್ತರ 5 ಅಡಿ.

ಬೆಜ್ವಾಡ ಮುನ್ಸಿಪಾಲಿಟಿಯು, ತನ್ನ ಯಾವತ್ತು ಎಲಿಮೆಂಟರಿ ಶಾಲೆಗಳಲ್ಲಿಯೂ, ವಾರ್ಧಾ ಶಿಕ್ಷಣದ ಯೋಜನೆಯನ್ನು ಪ್ರವೇಶಗೊಳಿಸಬೇಕೆಂದು ತನ್ನ ಮೀಟಿಂಗಿನಲ್ಲಿ ನಿರ್ಧರಿಸಿದೆ.

ಅಹಮ್ಮದಾಬಾದಿನಲ್ಲಿ 12 ಲಕ್ಷ ರೂಪಾಯಿಗಳ ವೆಚ್ಚದಿಂದ ಅಲ್ಲಿನ ಮುನ್ಸಿಪಾಲಿಟಿಯವರು ಕಟ್ಟಿಸಿದ್ದ ಒಂದು ಹೊಸ ಸೇತುವೆಗೆ ಸರ್ದಾರ್ ವಲ್ಲಭಭಾಯ್ ಪಟೇಲರ ನಾಮಕರಣ ಮಾಡಲಾಯಿತು.

ಪಾಟಿಯಾಲದ 784 ಗ್ರಾಮಗಳ ಕೈಗರು, ಭೂಮಿ ಕಾಣಿಕೆಗಳ ತಮ್ಮ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಚಳವಳವೆಬ್ಬಿಸಿ, ಸಿಮ್ಲದ ಕಡೆಗೆ, ಸತ್ಯಾಗ್ರಹವಾಚರಿಸಲು, ತಂಡ ತಂಡವಾಗಿ ತೆರಳಿದ್ದಾರೆಂದು ಪ್ರಕಟವಾಗಿದೆ.

ಸೇಲಮಿನಲ್ಲಿ ಕಳ್ಳನಾಣ್ಯಗಳನ್ನು ಮಾಡುವ ಚಿನ್ನ ಸಾಮಿ ಪಂಡರಂ ಎಂಬವನನ್ನೂ, ಮತ್ತೆ ಮೂವರನ್ನೂ, ನಾಣ್ಯಗಳನ್ನು ತಯಾರಿಸುವ ಸಾಮಗ್ರಿಗಳೊಂದಿಗೆ, 61 ಒಂದಾಣೆ ನಿಕ್ಕಲ್ ಕೃತಕ ನಾಣ್ಯಗಳೊಂದಿಗೆ ಸೆರೆ ಹಿಡಿದಿದ್ದಾರೆ.

ದಿನವೊಂದಕ್ಕೆ 450 ಸೈಕಲುಗಳನ್ನು ತಯಾರುಮಾಡುವ ಕಂಪೆನಿಯೊಂದು ಪಾಟ್ನಾದಲ್ಲಿ ಸ್ಥಾಪಿಸಲ್ಪಟ್ಟಿದೆ. ಇಂಡಿಯಾದಲ್ಲೆಲ್ಲಾ ಈ ಬಗೆಯ ಕಂಪೆನಿಯು ಮೊದಲನೆಯದು ಇಂಡಿಯಾದೇಶದಲ್ಲಿ ವರ್ಷಂಪ್ರತಿ 5 ಲಕ್ಷ ಸೈಕಲುಗಳು ಬಿಕರಿಯಾಗುವವೆಂದು ಅಂದಾಜು ಹಾಕಿರುವರು.

ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ತಿಳಿಸದೆಯೂ, ಅವರ ಸಮ್ಮತಿ ಪಡೆಯದೆಯೂ ಕಾಳೀಪಟ್ಟಣದ ಸತ್ಯಾಗ್ರಹವನ್ನು ಸಮರ್ಥಿಸಿದುದಕ್ಕಾಗಿ, ಹಾಗೆ ಸಮರ್ಥಿಸಿದ 15 ಮಂದಿ ಕಾಂಗ್ರೆಸಿನವರ ಮೇಲೆ, ಏತಕ್ಕೆ ಶಿಸ್ತು ಭಂಗದ ಕ್ರಮವನ್ನು ಜರುಗಿಸಬಾರದೆಂದು, ಆಂಧ್ರ ಪ್ರಾಂ. ಕಾಂ. ಕಮಿಟಿಯವರು ಅವರಿಗೆಲ್ಲ ನೋಟೀಸು ಕೊಟ್ಟಿದ್ದಾರೆ.

ಮಂಡಿಯ ಅರಸರು, ತಮ್ಮ ಸಂಸ್ಥಾನದ ವಿಧನೆಯನ್ನು ದುಷ್ಟರು ಅಪಹರಿಸಿ, ಅವರನ್ನು ಬ್ರಿಟಿಷ್ ಇಂಡಿಯದಲ್ಲಿ ಸಿಕ್ಕಿದ ಜೆಲಿಗೆ ಮಾರುತ್ತಿರುವರೆಂಬುದನ್ನು ತಿಳಿದವರಾಗಿ, ಗ್ರಾಮಉದ್ಯೋಗಸ್ಥರ, ಸುಧಾರಕರ, ಅಧಿಕಾರ ವರ್ಗದವರದೊಂದು ಮಹಾಸಭೆ ಕರೆದು, ಅವರ ಅಭಿಪ್ರಾಯ ಕೇಳಿ, ತಮ್ಮ ಸಂಸ್ಥಾನದಲ್ಲಿನ ವಿಧವಾ ವಿವಾಹಗಳಿಗೆಲ್ಲಾ ತಾವು ಸಹಾಯ ಮಾಡುವುದಾಗಿ ಪ್ರಕಟಿಸಿರುವರು.

ಮೈಸೂರಿನ ಸ್ಟೇಟ್ ಕಾಂಗ್ರೆಸಿನ ಪ್ರತಿನಿಧಿ ಮಂಡಲವು, ಮಹಾತ್ಮರನ್ನು ಶೇಗಾಂವಿನಲ್ಲಿ ಭೇಟಿಮಾಡಿ, ಮೈಸೂರಿನ ಹೊಸ ಸುಧಾರಣೆಗಳಿಂದ ತೃಪ್ತಿಯಾಗಲಾರದೆಂದೂ, ಸ್ವಾತಂತ್ರ್ಯ ಸಂಪಾದನೆಗಾಗಿ ಅಹಿಂಸೆಯ ಕಾದಾಟವೇ ಅಗತ್ಯವಾದೀತೆಂದೂ ಮುಂತಾಗಿ ಅರಿಕೆಮಾಡಿಕೊಂಡಲ್ಲಿ 'ನಿಮ್ಮ ಕರ್ತವ್ಯವನ್ನು ನೀವೇ ನಿರ್ಧರಿಸಬೇಕು; ಕಾದಾಟದ ನಿರ್ಧಾರದ ಸ್ಥಿತಿಯನ್ನೂ ನೀವೇ ನೋಡಿಕೊಳ್ಳಬೇಕು' ಎಂದು ಅಪ್ಪಣೆಮಾಡಿರುವರು ಮಹಾತ್ಮರು.

ಹಿಂದೂಸ್ಥಾನದಲ್ಲಿ ಸುಮಾರು ಹತ್ತು ಸಹಸ್ರ ಮಂದಿ ಚೀಣಾ ದೇಶೀಯರಿರುವರೆಂದು ಹೇಳಲಾಗಿದೆ. ನಮ್ಮ ಸಂಸ್ಥಾನದ ಹಳ್ಳಿತಾಲೂಕುಗಳಲ್ಲೂ ಸಹ ಬೈಸಿಕಲ್ಲುಗಳಿಗೆ ಬಟ್ಟೆಯ ಮೂಟೆಗಳನ್ನು ಕಟ್ಟಿಕೊಂಡು ಅಂಗಿ, ಷರಾಯಿಗಳನ್ನು ತಾವೇ ಸ್ವಂತವಾಗಿ ಹೊಲಿದು ಕಟ್ಟಿಕೊಂಡು ನಮ್ಮ ದೇಶಭಾಷೆ ಬರದಿದ್ದರೂ ತಮಗೆ ತಿಳಿದ ಭಾಷೆಗಳನ್ನಾಡುತ್ತಾ ವ್ಯಾಪಾರ ಮಾಡುತ್ತಿರುವ ಕುಳ್ಳುಜನರನ್ನು ನಮ್ಮ ವಾಚಕರು ನೋಡಿರಬಹುದು. ಇವರೆಲ್ಲರೂ ಚೀಣಾ ದೇಶೀಯರು. ಇವರು ತಮ್ಮ ದೇಶದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ತಮ್ಮ ಕೈಲಾದ ಸಹಾಯವನ್ನು ಇಲ್ಲಿಂದಲೇ ಮಾಡುತ್ತಿದ್ದಾರೆ.

ವಿದೇಶ

ಬ್ರಿಟಿಷ್ ಚಕ್ರವರ್ತಿ ಸಾರ್ವಭೌಮರವರು ಕಾನಡಾ ದೇಶದಿಂದ ವಾಪಸು ಹಿಂತಿರುಗಿದ ದಿನ ಅವರು ಕ್ರಿಮಿನಲ್ ಕಾನೂನಿಗೆ ವಿರೋಧವಾದ ತಕ್ಸೀರುಗಳನ್ನು ಮಾಡಿ ಮೂರು ತಿಂಗಳ ಅಥವಾ ಅದಕ್ಕಿಂತ ಹೆಚ್ಚು ಕಾಲದ ಸಜಾ ಶಿಕ್ಷೆಯನ್ನು ಆ ದೇಶದ ಅಭ್ಯಂತರದಲ್ಲೂ ಬಂದೀಖಾನೆಗಳಲ್ಲಿ ಅನುಭವಿಸುತ್ತಿದ್ದ ಪ್ರತಿಯೊಬ್ಬ ಖೈದಿಯ ಶಿಕ್ಷೆಯ ಅವಧಿಯನ್ನು ಒಂದು ತಿಂಗಳು ಕಡಮೆ ಮಾಡುವುದಾಗಿ ಅಪ್ಪಣೆ ಮಾಡಿದರೆಂದು ಪ್ರಕಟವಾಗಿದೆ.

ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಕೇಂದ್ರ ಖಜಾನೆಯಲ್ಲಿ ಈಗ 16,00,00,00,000 ಡಾಲರುಗಳಷ್ಟು ಚಿನ್ನ ಶೇಖರವಾಗಿದೆ. ಇದು ಪ್ರಪಂಚದಲ್ಲಿ ನಾಣ್ಯರೂಪದಲ್ಲಿ ಚಲಾವಣೆಯಲ್ಲಿರುವ ಚಿನ್ನದ ಶೇಕಡ 60 ರಷ್ಟೆಂದು ಹೇಳಲಾಗಿದೆ.

Tutorial School, Mercara.

To meet with a long-standing necessity, we have just opened a School where tuition in shorthand, Type-writing and Book-keeping will be given on most upto-date lines. The classes will for the present be held in the upstairs of Mr. Kongatteera P. Appayya's new building, near the bus stand.

Regular classes will begin from 5th July. As accomodation is limited, intending candidates will do well to reserve seats beforehand.

WANTED a clerk, prefarably with a knowledge of Typing and accounts.

The Manager,
Tutorial School,
Mercara.

52—1

ಚೇಂಬರಲೀನರು ಮ್ಯುನಿಕದಲ್ಲಿ ಕುರಿ, ಭಾರತದಲ್ಲಿ ಸಿಂಹ ಆಗಲು ಶಕ್ಯವಿಲ್ಲ!!

ರಾಷ್ಟ್ರಾಧ್ಯಕ್ಷರ ಎಚ್ಚರಿಕೆ.

ಎಂಟು ಕಾಂಗ್ರೆಸ್ ಪ್ರಾಂತೀಯ ಸರಕಾರಗಳು, ಬ್ರಿಟಿಶ ಸಾಮ್ರಾಜ್ಯದ ಪಸಾಹತದಲ್ಲಿ ವಿಶೇಷವಾಗಿ ದಕ್ಷಿಣ ಆಫ್ರಿಕ ಮತ್ತು ಸಿಲೋನದಲ್ಲಿ ವರ್ಣಭೇಧವನ್ನು ಮತ್ತು ಉಪಟಳ ಕೊಡುವದನ್ನು ನಿಲ್ಲಿಸಬೇಕೆಂದು ವ್ಹಾಯಿಟ ಹಾಲ್ ಮತ್ತು ಬ್ರಿಟಿಷ್ ಮಂತ್ರಿಮಂಡಲದ ಮೇಲೆ ವೈಸರಾಯರು ಒತ್ತಾಯ ಹಾಕುವಂತೆ ಮಾಡಬೇಕೆಂದು ರಾಷ್ಟ್ರಾಧ್ಯಕ್ಷರು ತಿಳಿಸಿದ್ದಾರೆ.

ವೈಸರಾಯರು ಈ ಬಗ್ಗೆ ಕೆಲಸ ಮಾಡದಿದ್ದರೆ ಪರದೇಶದಲ್ಲಿನ ಹಿಂದಿಯರ ಸಮಸ್ಯೆಯು ಅಖಿಲ ಭಾರತ ಸಮಸ್ಯೆಯಾಗಿ ಅಖಿಲ ಭಾರತ ಬಿಕ್ಕಟ್ಟು ಉಂಟಾಗುವುದು.

ಪರದೇಶದಲ್ಲಿನ ನಮ್ಮವರು.

'ಪರದೇಶದಲ್ಲಿ ನಮ್ಮವರು' ಎಂಬ ಶಿರೋನಾಮೆಯಲ್ಲಿ ರಾಷ್ಟ್ರಾಧ್ಯಕ್ಷರಾದ ರಾಜೇಂದ್ರ ಬಾಬುಗಳು ಒಂದು ಹೇಳಿಕೆಯನ್ನು ಕೊಟ್ಟು ದಕ್ಷಿಣ ಆಫ್ರಿಕದಲ್ಲಿನ ಹಿಂದಿಯರಿಗೆ 'ನಿಮ್ಮ ಹೋರಾಟವು ನ್ಯಾಯವಾಗಿದೆ, ಸಾಗಿರಿ' ಎಂದು ಬರೆದಿದ್ದಾರೆ. ಮತ್ತು ಹಿಂದುಸ್ಥಾನವು ಸಹಾಯ ಮತ್ತು ಸಹಾನುಭೂತಿಯನ್ನು ಕೊಡಲು ಸದಾ ಸಿದ್ಧವಿದೆ ಎಂದು ಆಶ್ವಾಸನೆಕೊಟ್ಟಿದ್ದಾರೆ 'ಹಿಂದುಸ್ಥಾನವು ತನ್ನ ಪ್ರಜೆಯರಿಗೆ ಆದ ಅಪಮಾನವನ್ನು ಎಂದಿಗೂ ಸಹಿಸಲಾರದು. ಹಿಂದೀಯರ ಬೇಡಿಕೆಗಳು ಪೂರೈಸಲ್ಪಡದಿದ್ದರೆ ಮುಂದೆ ಅನರ್ಥವಾಗುವುದು ಖಂಡಿತ, ಎಂದು ಎಚ್ಚರಿಸಿದ್ದಾರೆ'

ಸಿಂಧ ಮಂತ್ರಿಮಂಡಲದ ಬೆಂಬಲ.

ಪ್ರಗತಿಪರವಾದ ಸಿಂಧ ಮಂತ್ರಿಮಂಡಲವೂ 8 ಕಾಂಗ್ರೆಸ್ ಮಂತ್ರಿಮಂಡಲಗಳೊಂದಿಗೆ ಸಹಕರಿಸಬಹುದೆಂದು ನಿರೀಕ್ಷಿಸಲಾಗಿದೆ. ಇದರಂತೆ ಜಾತೀಯ ಮಂತ್ರಿಮಂಡಲಗಳಾದ ಪಂಜಾಬ ಮತ್ತು ಬಂಗಾಳ ಇವು ಪ್ರಜೆಗಳ ಜನರ ಕರೆಗೆ ಮನ್ನಣೆ ಕೊಟ್ಟು 9 ಮಂತ್ರಿಮಂಡಲಗಳೊಂದಿಗೆ ಸಹಕರಿಸಬಹುದೆಂದು ತಿಳಿಯಲಾಗಿದೆ.

ಮುಸ್ಲಿಂಲೀಗ್ ಮತ್ತು ಹಿಂದೂ ಮಹಾ ಸಭೆಯಲ್ಲಿನ ಮುಂದಾಳು ಧೋರಣದವರು ಕಾಂಗ್ರೆಸಿನ ಬೇಡಿಕೆಗಳಿಗೆ ಬೆಂಬಲ ಕೊಡಬಹುದೆಂದೂ ನಿರೀಕ್ಷಿಸಲಾಗಿದೆ.

ಮಿ. ಚೇಂಬರಲೀನರು ಈಗ ಬರ್ಲಿನ-ರೋಮ, ಟೋಕಿಯೊ-ಮೇಡ್ರಿಡ್ ಇವುಗಳ ನಡುವೆ ಸಿಕ್ಕು ಮತ್ತು ರಶಿಯಾದೊಡನೆ ಒಪ್ಪಂದ ಮಾಡಿಕೊಳ್ಳಲೂ ಸಾಧ್ಯವಿರದೆ ಇರುವದರಿಂದ, ಯುರೋಪದ ರಾಷ್ಟ್ರಗಳು ಹಿಂದುಸ್ಥಾನದ, ಒಕ್ಕಟ್ಟಿನ ಬೇಡಿಕೆಗೆ ತಲೆ ಬಾಗಲೂ ಬೇಕಾಗುವದೆಂದು ರಾಜಕಾರಣಿಗಳು ಅಭಿಪ್ರಾಯಪಡುತ್ತಾರೆ.

ಕುರಿ ಮತ್ತು ಸಿಂಹ.

ಮಿ. ಚೇಂಬರಲೀನರು ಮ್ಯುನಿಕ್ಕದಲ್ಲಿ ಕುರಿಯಾಗಿದ್ದು ಹಿಂದುಸ್ಥಾನದಲ್ಲಿ ಸಿಂಹವಾಗಿ ಪಾತ್ರವಹಿಸಲು ಸಾಧ್ಯವಿಲ್ಲ. ಅಂತರ್‌ರಾಷ್ಟ್ರೀಯ ದಿಗಂತವು ಯುದ್ಧದ ಕಾರ್ಮೋಡಗಳಿಂದ ಮುಸುಕಿರುವಾಗ ಇಂಗ್ಲೆಂಡವು, ಹಿಂದುಸ್ಥಾನದಲ್ಲಿ ಅಸಮಾಧಾನದ ಆಂದೋಲನವನ್ನು ತಡೆಯಲಾರದು. ಹಿಂದುಸ್ಥಾನದಲ್ಲಿರುವ ಯೂರೋಪಿಯನರು, ದಕ್ಷಿಣ ಆಫ್ರಿಕದಲ್ಲಿನ ತಮ್ಮ ಸಂಗಡಿಯರಿಗೆ ಬೆಂಬಲಕೊಡುವದಾದರೆ ಹಿಂದುಸ್ಥಾನದಲ್ಲಿನ ಹಿಂದಿಯರು ಇಲ್ಲಿನ ಯುರೋಪಿಯನ್ನರಿಗೆ ದಕ್ಷಿಣ ಆಫ್ರಿಕದಲ್ಲಿನ ಯೂರೋಪಿಯನ್ನರು ಅಲ್ಲಿನ ಹಿಂದಿಯರಿಗೆ ಕೊಡುವ ಉಪಟಳವನ್ನೇ ಕೊಡುವದು ಖಂಡಿತ ಆಗ ದಕ್ಷಿಣ ಆಫ್ರಿಕದಲ್ಲಿನ ಯೂರೋಪಿಯನರು ಹದಕ್ಕೆ ಬಂದು ಎಚ್ಚರಾಗುವರು

ಕಾಂಗ್ರೆಸ್ಸಿಗೆ ವಿಸ್ಮಯ.

ಕಾಂಗ್ರೆಸಿಗರು ಬಹಳ ಕಳವಳಗೊಂಡಿದ್ದಾರೆ. ಹಿಂದೂಸ್ಥಾನಕ್ಕೆ ರಾಜಕೀಯ ಅಧಿಕಾರವಿಲ್ಲದಿದ್ದರೆ ಇದು ಬೇರೆ ಉಗ್ರ ಉಪಾಯಗಳನ್ನು ಕೈಕೊಳ್ಳಲು ಬರುವಂತಿದೆ. ಅಂದರೆ ಸಾರ್ವಜನಿಕ ಬಹಿಷ್ಕಾರಗಳನ್ನು ಹಾಕುವದು. ಬಂಗ ಬಹಿಷ್ಕಾರದ ಪ್ರಕರಣವನ್ನು ನೆನಪಿಗೆ ತಂದುಕೊಳ್ಳಲಿ ಮತ್ತು ವಿಗಬಿ, ಬನ್ರಹಡಾರಿ, ಮತ್ತು ಲಖನೌಗಳಲ್ಲಿ ಆದ ಪ್ರಕರಣಗಳು ಹಿಂದುಸ್ಥಾನದಲ್ಲಿ ಯುರೋಪಿಯನ್ನರ ಕಣ್ಣಿಗೆ ಅಂಜನ ಹಚ್ಚಿದಂತಾಗಿದೆ ಹಿಂದುಸ್ಥಾನವು ಮನಸ್ಸು ಮಾಡಿದರೆ ಮ್ಯಾಂಚೆಸ್ಟರ ಮತ್ತು ಲಂಕಾಶಾಯರದ ಮಾಲಿಗೆ ಬಹಿಷ್ಕಾರ ಹಾಕಿ ದಕ್ಷಿಣ ಆಫ್ರಿಕವನ್ನು ಗೆಲ್ಲಲು ಶಕ್ಯವಿದೆ.

ಸ. ಕ.

ಬೇಕಾಗಿದ್ದಾರೆ.

ದಕ್ಷಿಣ ಕನ್ನಡ ಮತ್ತು ಕೊಡಗು — ಈ ಪ್ರತಿಯೊಂದು ಜಿಲ್ಲೆಗಳಲ್ಲಿ ಜೀವ ವಿಮೆ ಏಜೆನ್ಸಿಗಳನ್ನು ವ್ಯವಸ್ಥೆಗೊಳಿಸಲೂ, ಮೇಲ್ವಿಚಾರ ನಡಿಸಲೂ ಒಬ್ಬೊಬ್ಬ ಸಬ್ ಇನ್ಸ್‌ಪೆಕ್ಟರರು ಬೇಕಾಗಿದ್ದಾರೆ. ಉತ್ತಮ ಸಂಭಾವನೆ ಇದೆ ವ್ಯವಸ್ಥೆಗೊಳಿಸುವ ಸಾಮರ್ಥ್ಯವುಳ್ಳ ಅನುಭವಸ್ಥ ಸದ್ಗೃಹಸ್ಥರು ಪತ್ರ ಬರೆದುಕೊಳ್ಳಬಹುದು.

BRANCH MANAGER,
Allianz and Stuttgarter
1 **Life Insurance Bank, Ltd.,**
Post Box No. 451, Bombay.

ಬಾತ್ಮಿ.

ವೀರಶೈವರ ವಿದ್ಯಾ ಸಂಘ.

ಅಯ್ಯಾ,

ಈ ಹೆಸರಿನ ಸಂಘವೊಂದು ಸ್ಥಾಪನೆಯಾಗಿ ಈಗ್ಗೆ ಅನೇಕ ವರ್ಷಗಳಾದವು. ಇದರ ಧ್ಯೇಯ ಹಾಗೂ ಕಾರ್ಯಕ್ರಮಗಳ ವಿಚಾರ ಇಲ್ಲಿ ಬರೆಯಬೇಕಿಲ್ಲ. ವೀರಶೈವ ಜನಾಂಗದಿಂದ ಚಂದಾ ಎತ್ತಿ ಈ ಜನತೆಯ ಬಡ ವಿದ್ಯಾರ್ಥಿಗಳ ವ್ಯಾಸಂಗಕ್ಕೂ, ಇತರ ಅವರ ಬೇಡಿಕೆಗಳಿಗೂ ಸಹಾಯವನ್ನಿತ್ತು ಈ ಸಂಘವು ಜಯಪ್ರದವಾಗಿ ಕೆಲಸ ಮಾಡುತ್ತಾ ಬಂದಿದೆ. ಇದರ ಸಹಾಯದ ಫಲವಾಗಿಯೇ ನಮ್ಮ ಜನಾಂಗದಲ್ಲಿ ಒಬ್ಬರು ಲಾಯರಾಗಿಯೂ, ಇನ್ನೂ ಕೆಲವರು ವಿದ್ಯಾವಂತರಾಗಿಯೂ ಮುಂದೆ ಬಂದಿರುವರೆಂದರೆ ಅತಿಶಯೋಕ್ತಿಯಾಗಲಾರದು. ನಮ್ಮ ಜನಾಂಗದ ಹಿತವನ್ನು ಬಯಸುವ ಇಂತಹದ್ದೊಂದು ಸಂಸ್ಥೆಯು ಸುಸೂತ್ರವಾಗಿ ಕೆಲಸ ಮಾಡಿದರೆ ಇದು ನಮ್ಮ ಜನಾಂಗದ ಏಳಿಗೆಯು ಹೆಗ್ಗುರುತ್ತೆನ್ನಬಹುದು. ಆದರೆ ದುರಾದೃಷ್ಟವಶಾತ್ ಈಗ ಸಂಘದ ಕೆಲಸವು ಸುವ್ಯವಸ್ಥಿತ ರೀತಿ ನಡೆಯುತ್ತಿಲ್ಲವೆಂದೂ, ಇದರಿಂದ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಾಯವಾಗುತ್ತಿಲ್ಲವೆಂದೂ ತಿಳಿಯುತ್ತೇನೆ ಸಂಘದಲ್ಲಿ ಸಕಾಲಕ್ಕೆ ಮೀಟಿಂಗುಗಳು ನಡೆಯುವುದಿಲ್ಲವೆಂದ ಮೇಲೆ ಇಂದಿನ ಕಾರ್ಯಕಾರಿ ವರ್ಗದವರ ತರ್ಪಣ್ಯ ನ್ಯೂನತೆಯು ಸಂಘದ ಬುಡಕ್ಕೆ ಕೊಡಲಿ ಹಾಕುತ್ತಿದೆಯೆಂದರೆ ತಪ್ಪಾಗಲಾರದು. ಆದ್ದರಿಂದ ಸಂಘದ ಅಧಿಕಾರಿ ವರ್ಗವು ತಮ್ಮಿಂದ ಆ ಜವಾಬ್ದಾರಿಯನ್ನು ಯಶಸ್ವಿಯಾಗಿ ನಡೆಸಲಾರದ ಪಕ್ಷದಲ್ಲಿ ಅದನ್ನು ಉತ್ಸಾಹಿಗಳಿಗೆ ಬಿಟ್ಟುಕೊಟ್ಟು ಸಂಘದ ಧ್ಯೇಯ ಸಾಫಲ್ಯಕ್ಕೂ, ವೀರಶೈವ ಜನಾಂಗದ ಏಳ್ಗೆಗೂ ಸಹಕಾರಿಗಳಾಗಬೇಕಾಗಿ ಅರಿಕೆ ಮಾಡಿಕೊಳ್ಳುತ್ತೇನೆ.

'ಸಂಘದ ಹಿತಚಿಂತಕ.'

ನೇತ್ರರೋಗ

ನೇತ್ರರೋಗವು ಭಯಂಕರ ರೋಗಗಳಲ್ಲಿ ಒಂದು. ಅಂಥಾ ರೋಗಿಗಳಲ್ಲಿ ಪಳ್ಳಿ ಹಕೀಮರ ಚಿಕಿತ್ಸೆಯಿಂದ ಕೆಲವರು ಗುಣ ಹೊಂದುತ್ತಲೂ, ಕೆಲವರು ನರಳುತ್ತಲೂ ಇದ್ದಾರೆ ಇದರ ಗುಟ್ಟನ್ನು ಅರಿತು ನೋಡುವಲ್ಲಿ ನಾಡು ಹಕೀಮರ ವೈದ್ಯ ವಿಧಾನವು ಮೂಲಿಕೆಯಿಂದಾಗಿರುತ್ತಿ ಮತ್ತು ಎಲ್ಲಾ ತರದ ನೇತ್ರ ರೋಗಕ್ಕೂ ಅದು ಒಂದೇ ತರದ ಔಷಧಿಯನ್ನು ಉಪಯೋಗಿಸುತ್ತ ಬರುವದರಿಂದ ವಿಧವಿಧವಾಗಿ ಸಂಭವಿಸುವ ನೇತ್ರ ರೋಗದ ವಿಧಾನವನ್ನು ತಿಳಕೊಳ್ಳಲು ಶಕ್ತಿ ಅವರಲ್ಲಿ ಇಲ್ಲದಿರುವ ಕಾರಣದಿಂದ ಕೆಲವು ರೋಗಿಗಳ ಕಣ್ಣು ಹಾಳಾಗುತ್ತಲೂ ಇದೆ. ನೇತ್ರ ರೋಗಕ್ಕೆ ಚಿಕಿತ್ಸೆ ಮಾಡುವ ಹಕೀಮರು ವಿಪರೀತ ಜನವಿದ್ದರೂ ಒಬ್ಬ ರೋಗಿಯು ವಿಪರೀತ [illegible] ಸಿಯೂ ಸಹ [illegible] ದಾಹರಣೆಗಳಿವೆ. [illegible] ಮೈಸೂರು, ಬೆಂಗಳೂ[illegible] ಳದಲ್ಲಿ ಇರುವ ನೇ[illegible] ಗಬೇಕಾಗಿ[illegible]

ರು ಅಲ್ಲಿ ಪರಿಯಂತರ ಹೋಗಿ ವಾಸಿ ಮಾಡಿಸಿಕೊಂಡು ಬರಬಹುದು. ಆದರೆ ಬಡ ರೈತರಿಗಿದು ಅಸಾಧ್ಯ. ಕೊಡಗಿನ ಧರ್ಮದ ಆಸ್ಪತ್ರೆಗಳಲ್ಲಿ ನೇತ್ರ ರೋಗವನ್ನು ಗುಣಪಡಿಸುವ ಬಗ್ಗೆ ತಕ್ಕ ಏರ್ಪಾಡು ಮಾಡದಿರುವದು ವಿಷಾದಕರ.

ಕೊಡಗಿನಲ್ಲಿ ಸಿವಿಲ್ ಸರ್ಜನರುಗಳು ಇದ್ದು, ಮಡಿಕೇರಿ, ವೀರಾಜಪೇಟೆ ಮುಂತಾದ ಆಸ್ಪತ್ರೆಗಳಲ್ಲಿ ಸಹ ನೇತ್ರ ರೋಗದ ಬಗ್ಗೆ ಔಷಧ ಸಲಕರಣೆ ಇಲ್ಲವೆಂದರೆ ಅದೊಂದು ಕೊರತೆಯಲ್ಲದೆ, ಬಡ ಜನರಿಗೆ ತುಂಬಾ ಕಷ್ಟವೆಂದೂ ಹೇಳಬೇಕಿಲ್ಲ. ನನ್ನ ತಿಳುವಳಿಕೆ ಮಟ್ಟಿಗೆ ಹೇಳುವದಾದರೆ ಈಗೀಗ ಆಸ್ಪತ್ರೆಗಳು ಬಹಳ ಸುಧಾರಿಸಿ ಯೋಗ್ಯ ರೀತಿಯ ಚಿಕಿತ್ಸೆ ಮಾಡುತ್ತಿರುವವು. ಅನೇಕ ಆಸ್ಪತ್ರೆಗಳಲ್ಲಿ ರೋಗಿಗಳ ಊಟ ಉಪಚಾರಕ್ಕೆ ಏರ್ಪಾಡು, ಗರ್ಭಿಣಿ ಹೆಂಗಸರಿಗೆ ಹೆರಿಗೆ ವಿಷಯ ಮತ್ತು ಕೆಲವು ಆಸ್ಪತ್ರೆಗಳಲ್ಲಿ ಸೂಲಗಿತ್ತಿಯರ ಏರ್ಪಾಡು ವಗೈರೆ ಅನೇಕ ತರದ ಸೌಕರ್ಯಗಳು ಹೆಚ್ಚಿವೆ ಆದರೆ ಬೇರೆ ಎಲ್ಲಾ ತರದ ರೋಗಿಗಳಿಗೆ ಚಿಕಿತ್ಸೆ ಸಲಕರಣೆಗಳನ್ನು ಕೊಡುತ್ತಾ ಇರುವಾಗ ನೇತ್ರ ರೋಗಿಗಳ ಔಷಧ ಕ್ರಮವನ್ನು ಸರಿಪಡಿಸಿ ನೇತ್ರ ರೋಗಿಗಳಿಗೆ ಚಿಕಿತ್ಸೆ ಮಾಡಿಸದ ಗರೀಬರಾಗಿ ನರಳುತ್ತಿರುವ ನೇತ್ರರೋಗಿಗಳನ್ನು ನರಿ ಸಾಯುವ ಮೈಸೂರು, ಬೆಂಗಳೂರಿಗೆ ಹೋಗಲು ಸಲಹೆ ಕೊಡುವ ವಿಷಯ ಗರೀಬ ರೈತರಾದ ಕೊಡಗಿನವರಿಗೆ ಸಹಿಸಲಾರದಷ್ಟು ಕಷ್ಟವನ್ನು ಕೊಡುತ್ತಿದೆ.

ನಮ್ಮ ಕೊಡಗಿನ ಸರ್ಕಾರದವರು ತರಬೇತು ಹೊಂದಿದ ಡಾಕ್ಟರುಗಳನ್ನು, ಅಸಿಸ್ಟೆಂಟ್ ಸರ್ಜನರುಗಳನ್ನು, ಲೇಡಿ ಡಾಕ್ಟರುಗಳನ್ನು, ನರಸುಗಳನ್ನು ಇಟ್ಟುಕೊಂಡು ಚಿಕಿತ್ಸೆ ಕಾರುಬಾರು ನಡಿಸುತ್ತಿರುವಾಗ ತತ್ಕಾಲಕ್ಕೆ ಒಬ್ಬ ಯಾ ಇಬ್ಬರು ನೇತ್ರ ಚಿಕಿತ್ಸೆಯಲ್ಲಿ ತರಪೇತು ಆದವರನ್ನು ನೇಮಕ ಮಾಡಿ ಮಡಿಕೇರಿ ಯಾ ವೀರಾಜಪೇಟೆ ಆಸ್ಪತ್ರೆಗಳಲ್ಲಿ ಇಟ್ಟರ್ರೇ ಅವರ ಕೈಯಲ್ಲಿ ಕಾಸಿಲ್ಲದೆ ನೆರೆ ಪ್ರಾಂತ್ಯಗಳಿಗೆ ಹೋಗಲಾರದವರು ಇಲ್ಲಿಯೇ ಚಿಕಿತ್ಸೆ ಮಾಡಿಸಿಕೊಂಡು ಗುಣಹೊಂದಲು ಅನುಕೂಲವಾಗುತ್ತೆ ಆದುದರಿಂದ ಈ ಸಂಗತಿಯನ್ನು ನಮ್ಮ ಕೊಡಗಿನ ನ್ಯಾಯ ವಿಧಾಯಕ ಸಭೆಯ ಮೆಂಬರು ಡಿ ಬೋ. ಸಭೆಯ ಚುನಾಯಿತ ಮೆಂಬರುಗಳು ಘನ ಸರ್ಕಾರದವರ ಅವಗಾಹನೆಗೆ ತಂದು ಆ ವಿಷಯದಲ್ಲಿ ಚಳವಳ ಮಾಡಿದರೆ ಖಂಡಿತವಾಗಿಯೂ ಸರ್ಕಾರದವರು ಈ ವಿಷಯವನ್ನು ಗಮನಕ್ಕೆ ತಗೆದುಕೊಂಡು ನೇತ್ರ ವೈದ್ಯ ಪ್ರವೀಣರಾದ ಒಬ್ಬಿಬ್ಬರನ್ನು ಕರೆಸಿ ಇಲ್ಲಿಯ ಆಸ್ಪತ್ರೆಯಲ್ಲಿ ಉದ್ಯೋಗಕ್ಕೆ ನೇಮಿಸಿ ಕೊಡಗಿನ ಗರೀಬ ನೇತ್ರ ರೋಗಿಗಳಿಗೆ ಅನುಕೂಲ ಪಡಿಸಿ ಕೊಡದೆ ಇರಲಾರರು. ಆದ್ದರಿಂದ ಇದನ್ನು ಓದುವ ಕೊಡಗಿನ ಪ್ರತಿಯೊಬ್ಬರೂ ಇದಕ್ಕೆ ಒತ್ತಾಯ [illegible] ಪಡಿಸಿ ಫಲಕಾರಿಯ[illegible]

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಥವಾ ಅಮರಸುಳ್ಯದ ಕಾಟಕಾಯಿ.

ಲೇಖಾಂಕ 17.

(ಡಿ. ಎನ್. ಕೃಷ್ಣೈಯ್ಯ ಯಂ. ಎ., ಬಿ. ಇ. ಡಿ.)

(ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.)

ಕ್ರಿ. ಶ. 1836–37ನೆ ಇಸವಿ. ಕೊಡಗು ಬ್ರಿಟಿಷರ ಕೈವಶವಾಗಿ ಎರಡು ವರ್ಷಗಳ ಹತ್ತಿರವಾಗಿದ್ದಿತು. ಈ ಮಧ್ಯೆ ಅಪರಂಪರ ಸ್ವಾಮಿಯೆಂಬ ರಾಜ್ಯಾಭಿಯೋಗಿಯು ತಾನು ಕೊಡಗಿನ ಕೊನೆಯ ಅರಸು ವೀರರಾಜನ ದೊಡ್ಡ ತಂದೆ ಅಪ್ಪಾಜಿ ಅರಸನ ಪ್ರಥಮ ಪುತ್ರ ವೀರಪ್ಪ ಅರಸನೆಂದು ಹೇಳಿಕೊಂಡು ಕೊಡಗಿನ ಸಿಂಹಾಸನಕ್ಕೆ ತನ್ನ ಹಕ್ಕನ್ನು ಸ್ಥಾಪಿಸುವುದಕ್ಕೆ ಪ್ರಯತ್ನಪಟ್ಟಿದ್ದನು. ಆದರೆ ಈತನಿಗೆ ಕೊಡಗಿನಲ್ಲಿ ಹೆಚ್ಚಾಗಿ ಯಾರೂ ಸಹಾಯಕರಿಲ್ಲದ್ದರಿಂದ ಈತನ ಪ್ರಯತ್ನವು ಜಯಪ್ರದವಾಗಲಿಲ್ಲ. ಕೊಡಗು ಸರ್ಕಾರದವರು ಈತನನ್ನು ಸುಲಭವಾಗಿ ಸೆರೆ ಹಿಡಿದು ಕಾರಾಗೃಹದಲ್ಲಿಟ್ಟರು. ಈತನ ಚರಿತ್ರೆಯನ್ನು ಈ ಮೊದಲೇ ಕೊಡಗು ಪತ್ರಿಕೆಯಲ್ಲಿ ಪ್ರಕಟಿಸಿರುವೆನು.

ಇದಾಗಿ ಕೆಲವು ತಿಂಗಳುಗಳ ನಂತರ ಇನ್ನೊಬ್ಬ ರಾಜ್ಯಾಭಿಯೋಗಿಯು ತಲೆಯೆತ್ತಿದನು. ಈತನ ಹೆಸರು ಕಲ್ಯಾಣಸ್ವಾಮಿ. ಕಲ್ಯಾಣಸ್ವಾಮಿಯು ತಾನು ಅಪ್ಪಾಜಿ ಅರಸನ ಎರಡನೆಯ ಮಗ ನಂಜುಂಡಪ್ಪನೆಂದೂ, ತಾನೂ ವೀರರಾಜನ ಕಾಲದಲ್ಲಿ ಸೆರೆಯಿಂದ ತಪ್ಪಿಸಿಕೊಂಡವನೆಂದೂ ಹೇಳಿಕೊಂಡನು. ಈತನೂ ಲಿಂಗಾಯತನಾಗಿದ್ದನು. ಈತನ ಅನುಯಾಯಿಗಳು ಕೊಡಗಿನಲ್ಲಿ ಯೆಡೆನಾಡಿನಲ್ಲಿಯೂ, ಗಡಿನಾಡಿನಲ್ಲಿಯೂ, ಏಳುಸಾವಿರ ಸೀಮೆಯಲ್ಲಿಯೂ ಹೆಚ್ಚಾಗಿದ್ದರು. ಈತನು ಕೊಡಗಿನಲ್ಲಿ ತನ್ನ ಆಳ್ವಿಕೆಯನ್ನು ಸ್ಥಾಪಿಸಲು ಒಳಸಂಚು ನಡೆಸುತ್ತಿದ್ದನು.

ಕಲ್ಯಾಣಸ್ವಾಮಿಯ ಒಳಸಂಚು ಯಶಸ್ವಿಯಾಗುವುದಕ್ಕೆ ಚೆಪ್ಪುಡಿರ ಪೊನ್ನಪ್ಪ ದಿವಾನನು ಅಡ್ಡಿಯಾಗಿದ್ದನು. ಆತನು ವೃದ್ಧನಾಗಿದ್ದನು. ಆತನ ಮಾತಿನಲ್ಲಿ ಜನರಿಗೆ ನಂಬಿಕೆಯಿತ್ತು. ಆತನು ಅಪ್ಪಾಜಿ ಅರಸನ ಮಕ್ಕಳು ಯಾರೂ ಜೀವಂತರಾಗಿಲ್ಲವೆಂದೂ ಇದ್ದಿದ್ದರೆ ವೀರರಾಜನ ಕಾಲದಲ್ಲಿಯೇ ಚೆನ್ನಬಸಪ್ಪನಂತೆ ಬ್ರಿಟಿಷರ ಮರೆಹೋಗುತ್ತಿದ್ದರೆಂತಲೂ, ಕಲ್ಯಾಣಸ್ವಾಮಿಯ ಪಕ್ಷವನ್ನು ಸೇರಿದರೆ ಜನರಿಗೆ ಉಳಿಗಾಲವಿಲ್ಲವೆಂತಲೂ ಜನರಲ್ಲೆಲ್ಲಾ ಹೇಳಿದ್ದನು. ಈತನ ಮಾತಿನ ಮೇರೆ ಮಡಿಕೇರಿ ಮತ್ತು ಅದರ ದಕ್ಷಿಣದ ನಾಡಿನವರು ಯಾವ ಪಕ್ಷವನ್ನೂ ವಹಿಸದೆ ತಟಸ್ಥರಾಗಿದ್ದರು. ಈಗ ಯಾವುದಾದರೊಂದು ಕಾರಣದಿಂದ ಕೊಡಗಿನ ಕಮಿಷನರಿಗೂ, ಸೂಪರಿಂಟೆಂಡೆಂಟರಿಗೂ ಪೊನ್ನಪ್ಪನಲ್ಲಿ ಅವಿಶ್ವಾಸವುಂಟಾಗುವಂತೆ ಮಾಡಿದರೆ ಪೊನ್ನಪ್ಪನಿಗೆ ಜಿಗುಪ್ಸೆಯುಂಟಾಗಿ ಆತನು ರಾಜೀನಾಮೆ ಕೊಡುವನು. ಆಗ ಆತನ ಹೇಳಿಕೆಯಲ್ಲಿರುವಂತ ಜನರೆಲ್ಲರೂ ಬ್ರಿಟಿಷರಿಗೆ ವಿರೋಧವಾಗಿ ನಿಲ್ಲುವರು ಎಂದು ಕಲ್ಯಾಣಸ್ವಾಮಿಯ ಕಡೆಯವರು ಯೋಚಿಸಿದರು. ಈ ಮೊದಲು ಸೂಪರಿಂಟೆಂಡೆಂಟನಾಗಿದ್ದ ಕ್ಯಾಪ್ಟನ್ ಲೀ ಹಾರ್ಡಿಸಾಹೇಬನು ಪೊನ್ನಪ್ಪ ದಿವಾನನ ಹೇಳಿಕೆಯಂತೆ ಕೆಲವು ಮುತ್ಸದ್ದಿಗಳನ್ನು ಕೆಲಸದಿಂದ ತೆಗೆದು ಹಾಕಿದ್ದನು. ಈಗ ಇವರು ಪೊನ್ನಪ್ಪನು ತಮ್ಮ ಮೇಲೆ ಚಾಡಿ ಹೇಳಿ ತಮ್ಮನ್ನು ಕೆಲಸದಿಂದ ವಜಾ ಮಾಡಿಸಿದನೆಂದೂ, ತಮಗೆ ತಿರಿಗಿ ಕೆಲಸ ಕೊಡಿಸಬೇಕೆಂದೂ ಕಮಿಷನರ್ ಸಾಹೇಬರಿಗೆ ಅರ್ಜಿ ಬರೆದುಕೊಂಡರು. ಇವರಿಗೆ ಕೆಲಸವು ಸಿಕ್ಕಿದರೆ ಪೊನ್ನಪ್ಪನಿಗೆ ಅವಮಾನವಾದಂತಾಗುತಿತ್ತು. ಇದಲ್ಲದೆ ಉತ್ತರ ಕೊಡಗು ಮಡಿಕೇರಿ ನಾಡುಗಳಲ್ಲಿ ಕಲ್ಯಾಣಸ್ವಾಮಿಗೆ ಸಹಾಯಮಾಡಬೇಕೆಂದು ಜನರಿಗೆ ಗುಟ್ಟಾಗಿ ಹೇಳುತ್ತಾ ಏಳುಸಾವಿರ ಸೀಮೆಯ ಹುಲಿಕುಂದ ನಂಜೈಯ್ಯನೂ, ಕುಂಬ್ಳೆ ಸುಬ್ಬಯ್ಯನೂ, ಬೀರಣ್ಣ ಬಂಟನೂ ಸುತ್ತಾಡುತ್ತಿದ್ದರು.

ಇದೇ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಮರ ಸುಳ್ಯ ಪುತ್ತೂರು ಮಾಗಣೆಗಳ ಜನರಲ್ಲಿ ಬಹಳ ಅಸಮಾಧಾನವು ತಲೆದೋರಿದ್ದಿತು. ಕಂಪನಿ ಸರ್ಕಾರದವರು 1834 ರಲ್ಲಿ ಕೊಡಗನ್ನು ಹಿಡಿಯುವ ವರೆಗೆ ಆ ಮಾಗಣೆಗಳು ಕೊಡಗು ರಾಜರ ಆಳ್ವಿಕೆಗೊಳಪಟ್ಟಿದ್ದವು. 1834 ರ ನಂತರ ಕಂಪನಿ ಸರ್ಕಾರದವರು ಘಟ್ಟದ ಕೆಳಗಿನ ಮಾಗಣೆಗಳನ್ನು ಮಂಗಳೂರಿಗೆ ಸೇರಿಸಿ ದಕ್ಷಿಣ ಕನ್ನಡ ಜಿಲ್ಲೆಯನ್ನು ದೊಡ್ಡದು ಮಾಡಿದರು. ಕೊಡಗು ರಾಜರ ಆಳ್ವಿಕೆಯಲ್ಲಿ ಅಲ್ಲಿನ ಜನರು ತಾವು ಸರಕಾರಕ್ಕೆ ಕೊಡಬೇಕಾಗಿದ್ದ ತೆರಿಗೆಯನ್ನು ಧಾನ್ಯರೂಪದಲ್ಲಿ ಕೊಡುತ್ತಿದ್ದರು. ಕೊಡಗಿನ ರೈತರೂ ಹಾಗೆಯೇ ತಮ್ಮ ಕಂದಾಯವನ್ನು ಪಾವತಿಮಾಡುತ್ತಿದ್ದರು. ಆದರೆ ದಕ್ಷಿಣ ಕನ್ನಡ ಜಿಲ್ಲೆಗೆ ಆ ಮಾಗಣೆಗಳು ಸೇರಿದ ಮೇಲೆ ಅಲ್ಲಿನ ರೈತರೆಲ್ಲರೂ ತಮ್ಮ ತೀರ್ವೆಯನ್ನು ಹಣದ ರೂಪದಲ್ಲಿಯೇ ಕೊಡಬೇಕೆಂದು ಆ ಜಿಲ್ಲೆಯ ಕಲೆಕ್ಟರನು ಅಪ್ಪಣೆಮಾಡಿದನು. ಆಗಿನ ಕಾಲದಲ್ಲಿ ಹಣವನ್ನು ಒದಗಿಸುವುದು ಬಹಳ ಕಷ್ಟವಾಗಿದ್ದಿತು. ಸ್ವಲ್ಪ ಹಣಕ್ಕೆ ತುಂಬಾ ಧಾನ್ಯವನ್ನು ಕೊಡಬೇಕಾಗಿದ್ದಿತು. ಅಷ್ಟು ಹಣವು ಸಿಕ್ಕಬೇಕಾದರೂ ತಾವು ಬೆಳೆದದ್ದನ್ನು ಸಾಹುಕಾರರಿಗೆ ಕೊಟ್ಟು ಹಣ ಪಡೆಯಬೇಕಾಗಿದ್ದಿತು. ಆ ಸಾಹುಕಾರರು ಇದೇ ಸಮಯವೆಂದು ರೈತರು ಬೆಳೆದದ್ದನ್ನು ಅತೀ ಕಡಿಮೆ ಬೆಲೆಗೆ ಕೊಂಡುಕೊಂಡು ರೈತರಿಗೆ ತೀರ್ವೆಕೊಟ್ಟ ನಂತರ ಜೀವನಕ್ಕೆ ಕಷ್ಟವಾಗುವ ಹಾಗೆ ಮಾಡಿಬಿಡುತ್ತಿದ್ದರು. ಆದುದರಿಂದ ಕಂಪೆನಿಯವರ ಆಳ್ವಿಕೆಯಿಂದ ತಮಗೆ ತೊಡಕಾಯಿತೆಂದು ಅಲ್ಲಿನ ರೈತರು ತಿಳಿದು ಕಂಪನಿಯ ಆಳ್ವಿಕೆಯನ್ನು ತೆಗೆದು ಹಾಕಬೇಕೆಂದು ಯೋಚಿಸಿಕೊಂಡಿದ್ದರು.

ಇವರಿಗೂ ಕಲ್ಯಾಣಸ್ವಾಮಿಯ ಕಡೆಯವರಿಗೂ ರಹಸ್ಯವಾಗಿ ದಿವಾನ್ ಲಕ್ಷ್ಮೀನಾರ್ಣೆಯ್ಯನು ಸಹಾಯ ಮಾಡುತ್ತಿದ್ದನೆಂದು ವರ್ತಮಾನವಿತ್ತು. ಆದರೆ ದಿವಾನ್ ಲಕ್ಷ್ಮೀನಾರ್ಣೆಯ್ಯನು ತನ್ನ ಮೇಲೆ ತನ್ನ ಶತ್ರುಗಳು ಅನ್ಯಾಯವಾಗಿ ಈ ಅಪವಾದವನ್ನು ಹೊರಿಸಿದರೆಂದು ಹೇಳುತ್ತಿದ್ದನು. ಕ್ರಿ. ಶ. 1836 ನೆ ಇಸವಿ ಡಿಸೆಂಬರ್ 5 ರಲ್ಲಿ ಅಪ್ಪಾಜಿ ಅರಸನ ಮಕ್ಕಳ ಕಡೆಯ ಇಬ್ಬರು ಕುದುರೆ ಸವಾರರು ಬಿಸ್ಲೆಘಾಟಿನ ಕಡೆಗೆ ಹೋದರೆಂದೂ, ಕೊಡಗಿನವರೆಲ್ಲರೂ ಅಪ್ಪಾಜಿ ಅರಸನ ಮಕ್ಕಳಿಗೆ ಸಹಾಯ ಮಾಡುವುದಕ್ಕೆ ಮಾತು ಕೊಟ್ಟಿರುವರೆಂದೂ ಕ್ಯಾಪ್ಟನ್ ಲೀ ಹಾರ್ಡಿಸಾಹೇಬನಿಗೆ ಹೇಳಿದ್ದನು. ಆದರೆ ಆ ವರ್ತಮಾನವನ್ನು ತಂದಂಥಾ ಮಲ್ಲ ಎಂಬ ಸೇವಕನನ್ನು ಕ್ಯಾಪ್ಟನ್ ಲೀಹಾರ್ಡಿಸಾಹೇಬನು ತನ್ನ ಬಳಿಗೆ ಕಳುಹಿಸಬೇಕೆಂದು ಹೇಳಿ ಕಳುಹಿಸಿದ್ದರೂ ಲಕ್ಷ್ಮೀನಾರ್ಣೆಯ್ಯನು ಆತನನ್ನು ಸೂಪರಿಂಟೆಂಡೆಂಟನ ಹತ್ತಿರಕ್ಕೆ ಕಳುಹಿಸಲಿಲ್ಲ. ಮಲ್ಲನು ತಂದ ವರ್ತಮಾನದ ನಿಜಾಂಶವನ್ನು ಲಕ್ಷ್ಮೀನಾರ್ಣೆಯ್ಯನು ತಿಳಿಯುವುದಕ್ಕೆ ಪ್ರಯತ್ನಪಡಲಿಲ್ಲ. ಹರಿಕಾರ ಯಂಕಪ್ಪನು ತಂದಂಥಾ ವರ್ತಮಾನವನ್ನು ಲೀ ಹಾರ್ಡಿಸಾಹೇಬನಿಗೆ ತಿಳಿಸಲಿಲ್ಲ. ಕೊನೆಗೆ ಲಕ್ಷ್ಮೀನಾರ್ಣೆಯನು ಸೂಪರಿಂಟೆಂಡೆಂಟ್ ಸಾಹೇಬನಿಗೆ ತಿಳಿಸಿದ ಸಂಗತಿಯನ್ನು ವಿಚಾರಮಾಡಿ ನೋಡಲು ಆ ಸಂಗತಿಯು ಶುದ್ಧ ಸುಳ್ಳೆಂದು ತಿಳಿಯಿತು. ಇದಲ್ಲದೆ ಲಕ್ಷ್ಮೀನಾರ್ಣೆಯ್ಯನಿಗೂ ಸುಳ್ಯದಲ್ಲಿದ್ದ ಆತನ ತಮ್ಮ ರಾಮಪ್ಪೈಯ್ಯನಿಗೂ ನಡೆಯುತ್ತಿದ್ದ ಪತ್ರಗಳಲ್ಲಿದ್ದ ವಿಷಯಗಳು ಲಕ್ಷ್ಮೀನಾರ್ಣೆಯ್ಯನಿಗೆ ಒಳಸಂಚಿನ ಸಂಬಂಧ ಎಲ್ಲಾ ವಿಷಯಗಳು ತಿಳಿದಿರಬೇಕು ಎಂಬ ಸಂಶಯಕ್ಕೆ ಎಡೆಕೊಡುತ್ತಿದ್ದವು. ಈ ಸಂದರ್ಭಗಳಿಂದ ಕ್ಯಾಪ್ಟನ್ ಲೀಹಾರ್ಡಿಯು ದಿವಾನ್ ಲಕ್ಷ್ಮೀನಾರ್ಣೆಯ್ಯನನ್ನು ಕೆಲಸದಿಂದ ತತ್ಕಾಲಕ್ಕೆ ವಜಾ ಮಾಡಿ ವಿಚಾರ ನಡೆಸುತ್ತಲಿದ್ದನು. ದಿವಾನ್ ಲಕ್ಷ್ಮೀನಾರ್ಣೆಯ್ಯನು 1836 ನೆ ಇಸವಿ ಡಿಸೆಂಬರ್ 5 ನೇ ತಾರೀಕಿನಲ್ಲಿ ಸೂಪರಿಂಟೆಂಡೆಂಟ್ ಸಾಹೇಬನಿಗೆ ಬೇಗನೆ ಕೊಡಗಿನಲ್ಲಿ ಬ್ರಿಟಿಷರಿಗೆ ವಿರೋಧವಾಗಿ ದಂಗೆಯುಂಟಾಗುವುದೆಂದು ಹೇಳಿದಂತೆ ದಂಗೆಯೇಳಲಿಲ್ಲ. ಬೇರೆ ದಿವಾನರು ಆ ವರ್ತಮಾನವನ್ನು ಪ್ರಕಟಮಾಡಿದ್ದರಿಂದ ದಂಗೆಯು ನಿಂತು ಹೋಯಿತು. ಆದರಿಂದ ತನ್ನ ಮಾತಿನ ಮೇಲೆ ಲೀ ಹಾರ್ಡಿಸಾಹೇಬನಿಗೆ ಅವಿಶ್ವಾಸವುಂಟಾಯಿತು ಎಂದು ಲಕ್ಷ್ಮೀನಾರ್ಣೆಯ್ಯನೂ ಆತನ ಕಡೆಯವರೂ ಹೇಳುತ್ತಾ ಬಂದರು.

ಕಲ್ಯಾಣಸ್ವಾಮಿಯು ಕೊಡಗಿನಲ್ಲಿ ಜನರ ಅಭಿಪ್ರಾಯವನ್ನು ತಿಳಿಯುವುದಕ್ಕೋಸ್ಕರ ಸ್ವಲ್ಪ ಸುತ್ತಾಡಿದನು, ಆದರೆ ಏಳುಸಾವಿರ ಸೀಮೆಯವರೂ ಗಡಿನಾಡಿನವರು ಕೆಲವರು ಮಾತ್ರವಲ್ಲದೆ ಬೇರೆ ಯಾರೂ ಆತನಿಗೆ ಸಹಾಯ ಮಾಡುವುದಕ್ಕೊಪ್ಪಲಿಲ್ಲ. ಉಮ್ಮತ್ತುನಾಡಿನ ಕೊಡಗರು ಮಾತ್ರ ಆತನು ತಮ್ಮ ನಾಡಿಗೆ ಬಂದಾಗ ಆತನನ್ನು ಗುಟ್ಟಾಗಿ ಅಡಗಿಸಿಟ್ಟಿದ್ದರು. ಅವರು ಕಲ್ಯಾಣಸ್ವಾಮಿಯು ತಮ್ಮ ರಾಜರ ವಂಶಸ್ಥನೆಂದು ನಂಬಿ ಅವನಲ್ಲಿ ಬಹಳ ಭಕ್ತಿಯನ್ನಿಟ್ಟು ಉಪಚರಿಸಿದರು. ಆದರೆ ಕಲ್ಯಾಣಸ್ವಾಮಿಯು ಕಂಪೆನಿ ಸರ್ಕಾರದವರಿಗೆ ವಿರೋಧವಾಗಿ ತನಗೆ ಸಹಾಯ ಮಾಡಬೇಕೆಂದು ಅವರನ್ನು ಕೇಳಲು ಅವರು ಅದಕ್ಕೆ ಒಪ್ಪಲಿಲ್ಲ. ದೇಶವೆಲ್ಲಾ ಬ್ರಿಟಿಷರ ಆಳ್ವಿಕೆಯಲ್ಲಿ ಶಾಂತಿಯಿಂದ ತುಂಬಿದೆಯೆಂತಲೂ, ಕಲ್ಯಾಣಸ್ವಾಮಿಯ ಉದ್ದೇಶವು ಸಫಲವಾಗಲಾರದೆಂದೂ ಅವರು ಆತನೊಡನೆ ಹೇಳಿದರು. ಅನಂತರ ಕಲ್ಯಾಣಸ್ವಾಮಿಯು ಅಲ್ಲಿಂದ ಹೊರಡುವುದಕ್ಕೆ ಇಷ್ಟಪಡಲು ಅಲ್ಲಿನ ಜನರು ಆತನನ್ನು ಗುಟ್ಟಾಗಿ ವೈನಾಡಿಗೆ ತಲಪಿಸಿದರು. ಆದರೆ ಅಷ್ಟರಲ್ಲಿ ಕ್ಯಾಪ್ಟನ್ ಲೀಹಾರ್ಡಿಸಾಹೇಬನಿಗೆ ಹೇಗೋ ಕಲ್ಯಾಣಪ್ಪನು ಕೊಡಗಿನಿಂದ ತಪ್ಪಿಸಿಕೊಂಡು ಹೋದದ್ದು ತಿಳಿದು ಆತನನ್ನು ಸೆರೆ ಹಿಡಿಯಲು ಸಿಪಾಯಿಗಳನ್ನು ಕಳುಹಿಸಿದ್ದನು. ಇಷ್ಟರಲ್ಲಿ ಕಲ್ಯಾಣಸ್ವಾಮಿಯು ವೇಷ ಬದಲಾಯಿಸಿ ಬೈತೂರಿಗೆ ತಲಪಿದ್ದನು. ಆ ಸಿಪಾಯಿಗಳು ಮಲಬಾರಿನ ಸಿಪಾಯಿಗಳ ಸಹಾಯದಿಂದ ಜನವರಿ ತಿಂಗಳ ಅದಿ ಭಾಗದಲ್ಲಿ ಕಲ್ಯಾಣಸ್ವಾಮಿಯನ್ನು ಬೈತೂರಿನಲ್ಲಿ ಸೆರೆ ಹಿಡಿದರು. ಅಲ್ಲಿಂದ ಆತನನ್ನು ಕೊಡಗಿಗಾಗಿ ಪಹರೆಯಲ್ಲಿ ಮೈಸೂರಿಗೆ ಹಿಡಿದುಕೊಂಡು ಹೋಗಿ ಸೆರೆಯಲ್ಲಿಟ್ಟರು. ಕೊಡಗಿಗಾಗಿ ಆತನನ್ನು ಹಿಡಿದುಕೊಂಡು ಹೋಗುವಾಗ ಕೊಡಗಿನ ಜನರಲ್ಲಿ ಯಾವ ತರದ ಭಾವೋದ್ರೇಕಗಳೂ ಉಂಟಾಗಲಿಲ್ಲ.

ಕಲ್ಯಾಣಸ್ವಾಮಿಯನ್ನು ಸೆರೆಹಿಡಿದದ್ದರಿಂದ ಕೊಡಗಿನಲ್ಲಿ ಮತ್ತು ಅಮರ ಸುಳ್ಯದಲ್ಲಿದ್ದ ಆತನ ಅನುಯಾಯಿಗಳ ಒಳಸಂಚಿಗೆ ಯಾವ ವಿಘ್ನವೂ ಉಂಟಾಗಲಿಲ್ಲ. ಅವರು ಕೊಡಗಿನ ಸಿಂಹಾಸನಕ್ಕೆ ಅಪ್ಪಾಜಿ ಅರಸನ ಮಗನ ಹಕ್ಕನ್ನು ಬಹಿರಂಗವಾಗಿ ಸ್ಥಾಪಿಸುವುದಕ್ಕೆ ಕೊಡಗಿನಲ್ಲಿ, ಮಾರ್ಚಿ 5 ನೇ ತಾರೀಕು ಶಿವರಾತ್ರಿಯ ದಿವಸವೂ, ಅಮರ ಸುಳ್ಯದಲ್ಲಿ ಯುಗಾದಿಯ ದಿವಸವೂ ದಂಗೆಯೇಳುವುದೆಂದು ನಿಶ್ಚೈಸಿದ್ದರು. ಆದರೆ ಅದಕ್ಕೆ ಮೊದಲು ಸೆರೆ ಹಿಡಿಯಲ್ಪಟ್ಟ ಕಲ್ಯಾಣಸ್ವಾಮಿಯ ಬದಲು ಇನ್ನೊಬ್ಬ ವ್ಯಕ್ತಿಯನ್ನು ಅಪ್ಪಾಜಿ ಅರಸನ ಮಗನೆಂದು ಜನರ ಮುಂದಿಡಬೇಕಾಗಿದ್ದಿತು; ಯಾಕೆಂದರೆ ಅಮರ ಸುಳ್ಯದ ಜನರಿಗೆ ಕಲ್ಯಾಣಸ್ವಾಮಿಯನ್ನು ಸೆರೆಹಿಡಿದ ವರ್ತಮಾನವು ಹಬ್ಬಿರಲಿಲ್ಲ. ಅಲ್ಲಿನವರು ಬೇಗನೆ ಕಲ್ಯಾಣಸ್ವಾಮಿಯು ತಮ್ಮ ಊರಿಗೆ ಬಂದು ತಮ್ಮ ರಾಜನಾಗುವನೆಂದು ನಂಬಿದ್ದರು. ಅಲ್ಲಿ ಕೆಲವರಿಗೆ ಮಾತ್ರವೇ ನಿಜಸ್ಥಿತಿಯು ಗೊತ್ತಿದ್ದಿತು. ಆದರೆ ಕಲ್ಯಾಣಸ್ವಾಮಿಯ ಪಾತ್ರವನ್ನು ವಹಿಸುವಂತವನು ಸಿಕ್ಕುವುದು ಕಷ್ಟವಾಗಿದ್ದಿತು. ಆತನ ವಯಸ್ಸು ಅಪ್ಪಾಜಿ ಅರಸನ ಎರಡನೆಯ ಮಗನು ಜೀವಿಸಿದ್ದರೆ ಎಷ್ಟು ವಯಸ್ಸಾಗುತ್ತಿತ್ತೊ ಅಷ್ಟಾಗಬೇಕಿದ್ದಿತು. ಆತನಿಗೆ ಹಾಲೇರಿ ಅರಸರ ಚರಿತ್ರೆಯೂ, ಕೊಡಗಿನ ವಿಸ್ತೀರ್ಣ, ಸ್ಥಿತಿಗತಿಗಳೂ ಚೆನ್ನಾಗಿ ತಿಳಿದಿರಬೇಕಿದ್ದಿತು. ಇದಲ್ಲದೆ ಆತನು ಕೊಡಗಿನವರಿಗೂ ಅಮರ ಸುಳ್ಯದ

ವರಿಗೂ ಪರಿಚಿತನಲ್ಲದಿರಬೇಕಾಗಿದ್ದತು. ಕಲ್ಯಾಣಸ್ವಾಮಿಯ ಸ್ಥಾನಕ್ಕೆ ಮೊದಲು ಹುಲಿಕುಂದ ನಂಜೈಯ್ಯನನ್ನೂ ಅನಂತರ ಇನ್ನೊಬ್ಬ ಮನುಷ್ಯನನ್ನೂ ಆರಿಸಿದರು. ಹುಲಿಕುಂದ ನಂಜೈಯ್ಯನ ವಯಸ್ಸು ಹೆಚ್ಚಾಗಿದ್ದಿತು. ಇನ್ನೊಬ್ಬನ ಆಕಾರವು ಒಪ್ಪುವಂತದ್ದಿರಲಿಲ್ಲ. ಕೊನೆಗೆ ಏಳು ಸಾವಿರ ಸೀಮೆಯ ಪುಟ್ಟ ಬಸಪ್ಪನೆಂಬೊಬ್ಬ ಜಂಗಮನನ್ನು ಕರೆದುಕೊಂಡು ಬಂದರು. ಈತನು ಅಪರಂಪರನ ಹಿಂಬಾಲಕನಾಗಿದ್ದನು. ಈತನನ್ನು ಅಮರ ಸುಳ್ಯದಲ್ಲಿ ಓಬ್ಬ ರಾಮಗೌಡನೆಂಬುವನ ಮನೆಗೆ ಕರೆದುಕೊಂಡು ಹೋದರು. ಅಷ್ಟರ ವರೆಗೆ ಪುಟ್ಟಬಸಪ್ಪನಿಗೆ ತಾನು ವಹಿಸಬೇಕಾದ ಪಾತ್ರವು ತಿಳಿದಿರಲಿಲ್ಲ. ಆದರೆ ಅಂದಿನಿಂದ ಪುಟ್ಟಬಸಪ್ಪನು ಕಲ್ಯಾಣಸ್ವಾಮಿ ಅಥವಾ ನಂಜುಂಡರಸು ಎಂಬ ಹೆಸರಿನಿಂದ ಕೊಡಗಿನ ಸಿಂಹಾಸನಕ್ಕೆ ಹಕ್ಕುದಾರನಾದನು.

[ಸಶೇಷ.

(4ನೇ ಪುಟದಿಂದ ಸಾಗಿದ್ದು)

ರೈತನು ಕೈಗೊಳ್ಳಬಹುದಾದ ಇತರ ಕೈಗಾರಿಕೆಗಳು ಉದಾ:–ನೇಯುವದು, ನೂಲುವದು, ಗಾಡಿ ವ್ಯಾಪಾರ, ಚರ್ಮ ಹದಗೊಳಿಸುವದು ಇವೆಲ್ಲಾ ಇಂದಿನ ಆಧುನಿಕ ಯುಗದ ಯಂತ್ರೋಪಕರಣಗಳ ಕೆಲಸಗಳ ಪರಿಣಾಮವಾಗಿ ಮಾಯವಾಗುತ್ತಿವೆ. ಯಂತ್ರಗಳಿಂದ ತಯಾರಿಸಲ್ಪಟ್ಟ ಸಾಮಗ್ರಿಗಳೊಡನೆ ಸ್ಪರ್ಧೆ ನಡೆಸಿ ರೈತನು ತಲೆ ಹತ್ತಲಾರ. ಆದ್ದರಿಂದ ಆತನ ಸ್ಥಿತಿಯು ಇನ್ನಷ್ಟು ಭಯಂಕರವಾಗಲು ಕಾರಣವಾಯಿತು.

ಒಟ್ಟಾಗಿ ಹೇಳುವದಾದರೆ ಭಾರತೀಯ ವ್ಯವಸಾಯಗಾರನು ತನ್ನ ಹೊಲವನ್ನು ದುರಸ್ತಿಪಡಿಸಿಕೊಳ್ಳಲಾರ, ಗೊಬ್ಬರವನ್ನು ಉಪಯೋಗಿಸಲಾರ. ಆತನು ಅವಿದ್ಯಾವಂತ. ಪುರಾತನ ಕಾಲದ ವ್ಯವಸಾಯಕ್ರಮವನ್ನಲ್ಲದೆ ಬೇರೆ ವಿಧ ಮಾಡಲು ಬುದ್ಧಿ ಸಾಲದು. ಆತನಲ್ಲಿ ಶಿಸ್ತಿನ ಕಾರ್ಯಕ್ರಮಗಳಿಲ್ಲ. ಸಾಲದ ಹೊರೆಯಿಂದ ಬಗ್ಗಿ, ಸಾಹುಕಾರರ ಬಲೆಯಲ್ಲಿ ಸಿಕ್ಕಿ ದಿನೇ ದಿನೇ ತನ್ನ ಆಸ್ತಿಯನ್ನು ಕಳಕೊಳ್ಳುತ್ತಿರುವನು. ಮಳೆಯ ಆಧಾರದಿಂದಲ್ಲದೆ ಆತನ ವ್ಯವಸಾಯ ನಡೆಯಲೊಲ್ಲದು. ಇದರಿಂದ ವ್ಯವಸಾಯದಲ್ಲಿ ಆತನಿಗೆ ಜಿಗುಪ್ಸೆ ಹುಟ್ಟುತ್ತಿದೆ. ಮೇಲಾಗಿ ಆತನು ತೀರ ಬಡವ, ಬಡತನವೆಂಬ ಬೆಂಕಿಯಿಂದ ನೆಲೆಗಾಣದೆ ಬೇಯುತ್ತಿರುವ ವಸ್ತುವೆಂದರೆ ಬಡ ರೈತ. ಆದ್ದರಿಂದ ಇದಕ್ಕೆ ಉಪಾಯವೇನು? ಬಡ ರೈತನ ಚಿಂತಾಜನಕ ಸ್ಥಿತಿಗೆ ಯಾವ ವಿಧದ ಔಷಧಿಯೂ ಇಲ್ಲವೇನು?

ನಮ್ಮ ಅಭಿಪ್ರಾಯದಲ್ಲಿ ಈ ಬಡ ಜನತೆಯ ಉದ್ಧಾರ ಕಾರ್ಯವು ಆಗಬೇಕಾದರೆ ಈ ಕೆಳಗಿನವರಿಂದ ಸಾಧ್ಯ.

(1) ಸಂಸ್ಥಾನ ಅಥವ ಸರಕಾರ.
(2) ಜಮ್ಮಿಗಳು.
(3) ಪಟ್ಟಣಿಗರು.

ಭಾರತ ವ್ಯವಸಾಯಗಾರನ ಶೋಚನೀಯಾವಸ್ಥೆಗೆ ಪ್ರಧಾನ ಹಾಗೂ ಪ್ರಥಮ ಕಾರಣವೆಂದರೆ ಸರಕಾರವು ವ್ಯವಸಾಯಗಾರನ ದೃಷ್ಟಿಯಿಂದ ಮಾಡತಕ್ಕದಿದ್ದ ಕರ್ತವ್ಯ ನ್ಯೂನತೆ. ಸರಕಾರವು ಒಬ್ಬ ನಿರಂಕುಶ ಜಮ್ಮಿಯೋಪಾದಿ ಕಂದಾಯವನ್ನು ಬಾಡಿಗೆಯ ರೀತಿಯಲ್ಲಿ ಪರಿಗಣಿಸಿರುವದು. ಈಗಿನ ನಾಗರೀಕ ಜನಾಂಗಗಳಲ್ಲಿ ವಿಶಾಲ ಭೂಮಾಲಿಕರಿಗೆ ನಿಶ್ಚಿತ ಜವಾಬ್ದಾರಿಕೆಗಳಿರುವವು. ಭೂಮಿಯನ್ನು ರೂಪಿತಗೊಳಿಸಿ, ವ್ಯವಸಾಯಗಾರನಿಗೆ ಬೇಕಾದ ಸಲಕರಣೆಗಳನ್ನು ಒದಗಿಸಿ ಆತನ ವ್ಯವಸಾಯ ಬೇಕು ಬೇಡಿಕೆಗಳಿಗೆ ಧನ ಸಹಾಯಮಾಡಿ, ಹೊಸ ರೀತಿಯ ವ್ಯವಸಾಯಕ್ರಮವನ್ನು ಬೋಧಿಸುವದು ಇಂದು ಜಮ್ಮಿಗಳೆಂದೆನಿಸುವ ಭೂಮಾಲಿಕರ ಪಾಲಿಗೆ ಬಿದ್ದದೆ, ಆದರೆ ಭಾರತ ಸರಕಾರವು ತನ್ನ ಮೇಲೆ ಬಿದ್ದಿರುವ ಈ ಕಾರ್ಯಕ್ರಮಗಳನ್ನು ಜಯಪ್ರದವಾಗಿ ನಡೆಸಿಲ್ಲ. ಕೆರೆ, ಬಾವಿಗಳಿಂದ ಗದ್ದೆಗಳಿಗೆ ನೀರು ಹಾಯಿಸುವ ವಿಧಾನಗಳಿಂದು ಪುರಾತನ ಸಂಪ್ರದಾಯವಾಗಿದೆ. ದನಗಳ ಅಭಿವೃದ್ಧಿ ಬಗ್ಗೆ ಅಲ್ಲಲ್ಲಿ ಗೂಳಿಗಳನ್ನಿಟ್ಟು ಪ್ರಯತ್ನಿಸುತ್ತಿರುವದಾದರೂ ಭಾರತದ ಹಾಲಿನಲ್ಲಿ ಹೆಚ್ಚಿನ ಭಾಗವನ್ನು ಕೊಡುತ್ತಿರುವ ಎಮ್ಮೆಗಳ ಮೇಲ್ಮೆಗೆ ಯಾವ ಪ್ರಯತ್ನವೂ ನಡೆದಿಲ್ಲ. ವಿದ್ಯಾಪ್ರಸಾರವು ಇನ್ನೂ ಆಗಿಲ್ಲ. ವಿವಿಧ ದೇಶಗಳಲ್ಲಿ ನಾಗರೀಕತೆಯು ಅಭಿವೃದ್ಧಿಗೊಂಡು ಜನತೆಯು ಸ್ವಾತಂತ್ರ್ಯ ಕಾಂಕ್ಷೆಯಿಂದ ಮುಂದರಿದು ಅಮೋಘ ಕಾರ್ಯಗಳನ್ನು ಮಾಡುತ್ತಿರಲು ಬಡ ಭಾರತೀಯರಲ್ಲಿ ಖಡ್ಡಾಯ ಶಿಕ್ಷಣವು ಸಹ ಕನಸಿನ ಗಂಟಾಗಿ ಉಳಿದಿದ. ಹೆಚ್ಚೇಕೆ? ಕ್ಷಿಪ್ರದಲ್ಲಿ ಹೇಳುವದಾದರೆ ಹಳ್ಳೀ ಭಾರತದ ಹೃದಯದ್ರಾವಕ ಸ್ಥಿತಿಗೆ, ಜನತೆಯ ಆರ್ಥಿಕ ಹಂಬಲಕ್ಕೆ, ಜನತೆಯ ನಿರ್ವೀರ್ಯತೆಗೆ ಸರಕಾರ ಈ ನಿಕೃಷ್ಟಧೋರಣೆಯೇ ಪ್ರಥಮ ಕಾರಣ. ಆಯಾಯ ಪ್ರಾಂತದ ಸರಕಾರಗಳು ಮಧ್ಯವರ್ತಿ ಸರಕಾರದಿಂದ ಸಹಾಯ ಪಡೆದು ಗ್ರಾಮ ಸುಧಾರಣೆಯ ಕ್ರಮವನ್ನು ಕೈಕೊಂಡು ಕಾರ್ಯಪ್ರವರ್ತರಾಗದ ವಿನಹ ಭಾರತ ಹಳ್ಳಿಗನ ಅರ್ಥಾತ್ ಕೃಷಿಕನ ಉತ್ಪತ್ತಿಯು ಹೆಚ್ಚಲಾರದು.

ವಿಶಾಲ ಭೂಮಾಲಿಕರಿಗಾದರೂ ಗ್ರಾಮಜೀವನವನ್ನು ಸುಧಾರಿಸುವ ಜವಾಬ್ದಾರಿಕೆ ಇಲ್ಲದ ಇಲ್ಲ. ಇಂದು ಜಮ್ಮಿಗಳೆಂದೆನಿಸಲ್ಪಟ್ಟ ಇವರು ತಮ್ಮ ಭೂಮಿಯ ಹತ್ತಿರವಿರರು. ಅದಕ್ಕಾಗಿ ಹಣ ಖರ್ಚು ಮಾಡರು. ವ್ಯವಸಾಯಶೋಧನೆ ಮಾಡಿ ಉತ್ತಮ ರೀತಿಯ ವ್ಯವಸಾಯ ಕೈಕೊಳ್ಳಲು ಕನಸಿನಲ್ಲಿ ಸಹ ಯೋಚಿಸರು. ತಮ್ಮ ಭೂಮಿಯಾಗಲೀ, ದನಕರುಗಳಾಗಲೀ ಹೃಷ್ಟಪುಷ್ಟವಾದ ಫಲವನ್ನೀಯಬೇಕೆಂಬ ಕಾಂಕ್ಷೆಯಿಂದಿರರು. ಈ ಜಮ್ಮಿಗಳ ಇರುವಿಕೆಗೇ ಗ್ರಾಮಗಳು ಅಯೋಗ್ಯವೆಂದೆಣಿಸಲ್ಪಟ್ಟಿರುವಾಗ ಗ್ರಾಮದ ಕಡೆಗಿರುವ ಅವರ ಧೋರಣೆಯು ಅವರ್ಣನೀಯ. ಗ್ರಾಮ ಜನರ ಮುಖಂಡನೆಂಬ ಬಿರುದನ್ನು ಇಂದು ಈ ಜಮ್ಮಿಗಳು ಕಳಕೊಂಡು ಪಟ್ಟಣದ ದಾಸರಾಗಿರುವರು. ಆ ಜಮ್ಮಿಗಳು ತಮ್ಮ ಪೂರ್ವಸ್ಥಾನವನ್ನಲಂಕರಿಸಿದಲ್ಲದೆ ವ್ಯವಸಾಯವು ಯಶಸ್ವಿಯಾಗದು.

ಕಡೆಯದಾಗಿ ಇರುವ ಜವಾಬ್ದಾರಿಕೆಯು ನಮ್ಮದು. ಗ್ರಾಮವಾಸಿಗಳ ಅರ್ಥಾತ್ ವ್ಯವಸಾಯಗಾರರ ಮಟ್ಟಿಗೆ ನಾವು ಏನೂ ತಿಳಿಯದವರಾಗಿರುವೆವು. ಪಟ್ಟಣಗಳಲ್ಲಿ ವಾಸಮಾಡುತ್ತಿರುವ ನಾವು ಯಂತ್ರೋಪಕರಣಗಳ ದಾಸರಾಗಿ, ಅದರ ಸೌಲಭ್ಯಸವಲತ್ತುಗಳಿಗೆ ಮರುಳಾಗಿ ಅದರ ಕೃಪೆಯಿಂದ ಜೀವನೋಪಾಯವನ್ನು ತಳ್ಳುತ್ತಿರುವೆವು. ಆದರೆ ಈ ಮಧ್ಯೆ ಈ ಯಂತ್ರಗಳ ಹಾವಳಿಯಿಂದ ಗ್ರಾಮವಾಸಿಯಾದ ಬಡ ರೈತನ ಉಪಕೈಗಾರಿಕೆಗಳು ಮಣ್ಣುಗೂಡುತ್ತಿರುವವೆಂಬ ಅರಿವು ನಮಗಿಲ್ಲ. ಭಾರತ ವ್ಯವಸಾಯಗಾರನ ನಿರುದ್ಯೋಗತನಕ್ಕೆ ನಾವೇ ಪ್ರಥಮ ಕಾರಣರು. ಕಾರ್ಖಾನೆಗಳಲ್ಲಿ ಶ್ರಮಿಸಿ ಯಂತ್ರೋತ್ಪತ್ತಿಗಳಿಗೆ ಪ್ರೋತ್ಸಾಹವಿತ್ತು, ಬಡ ರೈತನ ಉತ್ಪತ್ತಿಯೊಡನೆ ಸ್ಪರ್ಧೆ ನಡೆಸಿ ಅದನ್ನು ಮಣ್ಣುಗೂಡಿಸಿದವರಾದರೂ ನಾವೇ. ಇದರಿಂದಲೇ ಆತನ ವ್ಯವಸಾಯವು ಸುಸೂತ್ರವಾಗಿ ನಡೆಯಲಾರದೆ ಆತನು ಬಡತನವನ್ನಾಲಿಂಗಿಸಿರುವನು. ಆದ್ದರಿಂದ ಯಂತ್ರಗಳ ಮೂಲಕ ಬಡ ರೈತನ ಕರುಳನ್ನು ಹೀರಿ ಸೊಕ್ಕಿರುವ ಪಟ್ಟಣಿಗರು ಗ್ರಾಮವಾಸಿಗಳನ್ನು ಸಲಹುವ ಭಾರವನ್ನು ಹೊರಬೇಕು. ಇದು ಹೇಗೆ ಸಾಧ್ಯವೆಂಬುದನ್ನು ಮುಂದೆ ವಿವರಿಸುವೆವು.

ಮುಂದಿನ ಲೇಖನದಲ್ಲಿ ಭಾರತ ಕೈಗಾರಿಕೆಯ ವಿಚಾರ ಬರೆಯಲಾಗುವದು.

ಒಡಕಿನಿಂದಲೇ ಒಕ್ಕಟ್ಟು.

ಪುರೋಗಾಮಿ ಪಕ್ಷವನ್ನು ಕುರಿತು ಸುಭಾಷರ ಹೇಳಿಕೆ.

ತಾ. 17ರ ರಾತ್ರಿ ಪ್ರಾರಂಭವಾದ ಅಖಿಲಭಾರತ ಉಗ್ರವಾದ ಯುವಕರ ಪರಿಷತ್ತಿಗೆ ಸುಮಾರು 20 ಸಾವಿರಕ್ಕೆ ಮೇಲ್ಪಟ್ಟು ಸ್ತ್ರೀ ಪುರುಷರು ಬಂದಿದ್ದರು. ಶ್ರೀ. ವಿಶ್ವಂಭರ ದಯಾಳು ತ್ರಿಪಾಠಿಯವರು ಅಧ್ಯಕ್ಷರಾಗಿದ್ದರು. ಬಾಬು ಸುಭಾಸಚಂದ್ರ ಬೋಸರೂ ಭಾಷಣ ಮಾಡಿದರು.

ಪ್ರೇಕ್ಷಕರಲ್ಲ ಎಷ್ಟೋ ಜನರು ಟಿಕೇಟುಗಳನ್ನು ಕೊಳ್ಳದೆ ಒಳಗೆ ಹೋಗಿ ನುಗ್ಗಿದ್ದರಿಂದ ಪರಿಷತ್ತಿನ ಮಂಟಪದಲ್ಲಿ ಸ್ವಲ್ಪ ಗೊಂದಲವಾಯಿತು. ಆದರೆ ಸ್ವಲ್ಪ ಹೊತ್ತಿನಲ್ಲಿಯೇ ಅದು ತಣ್ಣಗಾಯಿತು.

ಡಾ. ಸತ್ಯಪಾಲರು ಉದ್ಘಾಟನ ಸಮಾರಂಭವನ್ನು ನೆರವೇರಿಸಿದ ಮೇಲೆ ಶ್ರೀ ವಿಶ್ವಂಭರ ದಯಾಳರು ತಮ್ಮ ಅಧ್ಯಕ್ಷ ಭಾಷಣವನ್ನೋದಿದರು. ಅವರ ಸಾರಾಂಶ ಹೀಗಿದೆ–

'ಗಾಂಧೀ ವಾದದಿಂದ ಇನ್ನು ಮುಂದೆ ಏನೂ ಆಗಲಾರದು. ನಮ್ಮ ಸ್ವಾತಂತ್ರ್ಯ ಸಂಗ್ರಾಮವನ್ನು ಮುಂದೆ ಸಾಗಿಸಬೇಕಾದರೆ ಬೇರೆ ಮಾರ್ಗವನ್ನು ಹುಡುಕಬೇಕಾಗುವದು. ರಾಜಿ ಮಾಡಿಕೊಳ್ಳುವದೇ ಗಾಂಧೀವಾದದ ಮುಖ್ಯ ತಿರುಳಾಗಿದೆ. ಒತ್ತಾಯದಿಂದಲಾದರೂ ಒಪ್ಪಂದ ಮಾಡಿಕೊಳ್ಳಬೇಕೆಂದು ಗಾಂಧಿವಾದಿಗಳು ಅನ್ನುತ್ತಾರೆ. ಈ ಧೋರಣದ ಫಲವಾಗಿಯೇ ಇಂದು ನಮ್ಮಲ್ಲಿ ಘಟನಾತ್ಮಕ ಮನೋವೃತ್ತಿಯು ಬೆಳೆದಿದೆ.

ಬಳಿಕ ಅವರು ಕಾಂಗ್ರೆಸ್ ಸರ್ಕಾರಗಳನ್ನು ಟೀಕಿಸಿ, ಯಾವ ಕಾಂಗ್ರೆಸ್ ಸರಕಾರವೂ ಹಿಂದೆ ಕೊಟ್ಟ ಮಾತಿನ ಪ್ರಕಾರ ನಡೆದಿಲ್ಲವೆಂದು ಹೇಳಿದರು. ಸಂಸ್ಥಾನಗಳ ಸಂಬಂಧವಾಗಿ ಮ. ಗಾಂಧಿಯವರು ಕೊಟ್ಟ ಬುದ್ಧಿವಾದವು ಸಂಸ್ಥಾನ ಪ್ರಜೆಗಳಿಗೆ ಅಪಮಾನ ಮಾಡುವಂಥಾದಿರುವದೆಂದು ಹೇಳಿದರು'.

ಆ ಬಳಿಕ ಬಾಬು ಸುಭಾಷರೆದ್ದು ಒಂದು ಗಂಟೆಯ ವರೆಗೆ ಭಾಷಣ ಮಾಡಿ ಪುರೋಗಾಮಿ ಪಕ್ಷವನ್ನು ಸ್ಥಾಪಿಸಲು ಕಾರಣಗಳೇನು ಎಂಬದನ್ನು ತಿಳಿಸಿದರು. 'ಪ್ರತಿಯೊಂದು ದೇಶದ ರಾಜಕೀಯ ಚಳವಳಿಯ ಇತಿಹಾಸವನ್ನು ನೋಡಿದರೂ ಈ ರೀತಿ ಒಡಕುಗಳುಂಟಾಗಿರುವದು ಕಂಡು ಬರುವದು. ಇಂಥಾ ಒಡಕುಗಳಿಂದಲೇ ಪ್ರಗತಿಯಾಗಿರುವದು. ಪುರೋಗಾಮಿ ಪಕ್ಷದ ಸ್ಥಾಪನೆಯಿಂದ ಕಾಂಗ್ರೆಸ್ಸಿನಲ್ಲಿ ತಿಕ್ಕಾಟ ಉಂಟಾಗಲು ಅವಕಾಶವಾಗಿದೆ. ಈ ತಿಕ್ಕಾಟದಿಂದಲೇ ಒಕ್ಕಟ್ಟುಂಟಾಗುವದು. ಮಂದಗಾಮಿ ಪಕ್ಷದವರು ಬೇಗನೆ ತಮ್ಮ ಧೋರಣೆಯನ್ನು ಬದಲಾಯಿಸಿ ಸನ್ಮಾನ ಒಪ್ಪಂದಕ್ಕೆ ಸಿದ್ಧರಾಗುವರೆಂದು ನಾನು ಭಾವಿಸಿದ್ದೆನು.'

'ಘಟನಾತ್ಮಕ ಮನೋವೃತ್ತಿಯು ನಮ್ಮಲ್ಲಿ ಹೆಚ್ಚಾಗಿ ಬೆಳೆಯಹತ್ತಿದೆ. ಸ್ವಾತಂತ್ರ್ಯವನ್ನು ಪಡೆಯುವುದಕ್ಕೆ ಈಗ ಉತ್ತಮ ಕಾಲ ಬಂದದೆಯೆಂದು ನನ್ನ ಅಭಿಪ್ರಾಯ ಆದರೆ ಮಂದಗಾಮಿ ಪಕ್ಷದವರ ಅಭಿಪ್ರಾಯವು ಇದಕ್ಕೆ ವಿರುದ್ಧವಿದ್ದಂತೆ ತೋರುತ್ತದೆ.'

ಕೊನೆಗೆ ಶ್ರೀ ಭೋಸರು ತಮ್ಮ ಪುರೋಗಾಮಿ ಪಕ್ಷಕ್ಕೆ ಬೆಂಬಲ ಕೊಡಬೇಕೆಂದು ಜನರಿಗೆ ವಿನಂತಿ ಮಾಡಿಕೊಂಡರು. 'ಸ. ಕ.'

ಕೊಡಂದೇರ ಡಿ. ಮಾಚಯ್ಯ,
L. D Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI.
ದಂತ ವೈದ್ಯರು
ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ
DENTAL CLINIC
ನಲ್ಲಿ ವಿಚಾರಿಸಿರಿ. 2
ಸುಲಭ ದರ. ನವೀನ ರೀತಿಯ ಚಿಕಿತ್ಸೆ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,
Ludhiana.

9

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ

ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,
(52–28) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.
ಮೆ. ಮುಕ್ಕಾಟಿರ ಜೋಯಪ್ಪನವರು.
ಟಾಟಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಜಿ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ. ಕೆ. ಮಾಗಪ್ಪನವರು.
ಶಾಂತಳ್ಳಿ—ಮೆ. ಬೆಳ್ಯಪ್ಪಂಗ ಯಂ. ಪೂಣಚ್ಚನವರು.
(ಶಾಂತಳ್ಳಿ ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರಗಳಿಗೆ ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 20ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.

52–15

"ಕೊಡಗು" ಪತ್ರಿಕೆಯ
ಚಂದಾದಾರರಲ್ಲಿ
ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಜೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ–ಅಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ಕ್ರಿಪ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¾ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1–9–1937ರಿಂದ ಬಡ್ಡಿ ದೊರೆಯುತ್ತೆ.

ತಾ. 1–10–1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ಕ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ಕ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1–4–1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1–8–1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ–ಅಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮೆ. ಎಸ್. ಎನ್. ರಾಮಶೆಟ್ಟಿಯವರು.

ತಾ. 1–6–1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	„ 100.	„ 35.	„ 22.	„ 13.
3 ತಿಂಗಳಿಗೆ—	„ 60.	„ 20.	„ 13.	„ 8.
1 ತಿಂಗಳಿಗೆ—	„ 25.	„ 10.	„ 6.	„ 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(52–24)

Printed & Published by P. J. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:— ಪಿ. ಐ. ಬೆಳ್ಯಪ್ಪ.

ತಾ. ೩೦—೬—೧೯೩೯.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೯] [ಸಂಚಿಕೆ ೪

THE CANARA BANKING CORPORATION, Ltd.

(Incorporated in British India)

THREE YEARS' CASH CERTIFICATES

bearing interest at 4% p. a.
in denominations of
Rs. 50/-,100/-,500/-,1,000/- & 5,000 -
are now issued at
all our Branches.

BRANCHES.

1. Udipi, 2. Coondapoor, 3. Car Street, Mangalore. 4. Madras, 5. Shimoga, 6. Bunder, Mangalore. 7. Mercara, 8. Virajpet. 9 Saklespur, 10. Tellicherry, 11. Mysore, 12. Sagar, 13. Shirva, 14. Byndoor, 15. Vellore. 16. Salem, 17. Mettupalayam. 11. Malpe, 19. Erode, 20. Thirthahalli.

Banking business of every description transacted.

For Particulars Call at or write to any of our Branches.

52-28

ಕೇರಳ ಆಯುರ್ವೇದಿಕ್ ವೈದ್ಯಾಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)
52-18 ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ಕೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕೆನೈಟ್, ಎಂದೂ ತುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕಾಲಂ
30 ತಂಪದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮುಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52–8

The Agricultural &
Industrial Bank Ltd

"ZANDU"

ಝಂಡೂರವರ

ದ್ರಾ ಕ್ಷಾ ಸ ವ
ಮತ್ತು
ಚ್ಯ ವ ನ ಪ್ರಾ ಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇ ಸ ರಿ ಜೀ ವ ನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ
ಸೇ ರ ಸ ಪ ರಿ ಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂ ಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—
ಡಾ, ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
(52–39) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು -ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು— ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು--ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಸ್ವಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ: —

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ,

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

[illegible] ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾಸನ್‌ಪುರ, ಡಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚನಾಪಳ್ಳಿ ಮತ್ತು ವೆಲ್ಲೂರು.

12–36

ಜರ್ಮನಿಯ ನೆಪೋಲಿಯನ್

● ಈತನ ಪ್ರಚಂಡ ಕಾರ್ಯಕ್ರಮಗಳಿಂದ ದಂಗು ಬಡೆದಿರುವ ಬ್ರಿಟನ್!
● ಈತನ ಅಮೋಘ ಮುನ್ನಡೆಯಿಂದ ಹುರುಪುಗೊಂಡಿರುವ ಜರ್ಮನಿ!!
● ಈತನ ಸೂತ್ರಚಾಲನೆಯ ಪರಿಣಾಮದಿಂದ ಉರಿಸೆದ್ದಿರುವ ಜಪಾನ್!!!
● ಅಂತು ಈತನ ಕೈವಾಡದಿಂದ ಅಸ್ತವ್ಯಸ್ತವಾಗಿರುವ ಇಡೀ ಜಗತ್ !!!!

ಜಗತ್ತಿನಲ್ಲಿ ಯುದ್ಧ ಕಾರ್ಮೋಡಗಳು ಪಸರಿಸಿ, ವಿವಿಧ ರಾಷ್ಟ್ರಗಳು ರಾಜ್ಯವಿಸ್ತರಣಾ ತೃಷೆಯಿಂದ ವಿನಾಶದ ದಾರಿ ಹಿಡಿದಿರಲು ಪ್ರಗತಿ ಪ್ರಪಂಚದ ಅಗ್ರಸ್ಥಾನದಲ್ಲಿ ಒಂದು ಕಾಲಕ್ಕೆ ವಿರಾಜಿಸುತ್ತಿದ್ದ ಬ್ರಿಟನಿಗೆ ಇಂದು ಪ್ರತಿ ದಿನ ತೊಂದರೆಗಳು ಹೆಚ್ಚಾಗುತ್ತಿವೆ. ಒಂದು ಕಡೆಯಲ್ಲಿ ಪಾಲೆಸ್ತೀನದ ಗಲಭೆಯಾಯಿತು. ಅದನ್ನು ಕಷ್ಟದಿಂದ ಸರಿಪಡಿಸುತ್ತಿದೆ. ಮತ್ತೊಂದೆಡೆ ಹಿಂದೂ ದೇಶದ ಸ್ವಾತಂತ್ರ್ಯ ಚಳವಳಿ; ಅದು ಅವರ ಎದೆ ನಡುಗಿಸುತ್ತಿದೆ. ಇನ್ನೊಂದೆಡೆ ಸರ್ವಾಧಿಕಾರಿಗಳ ಮುನ್ನಡೆ; ಇದರಿಂದ ಅವರ ಧೃತಿಗೆಟ್ಟಿದೆ. ಮಗುದೊಂದೆಡೆ ಜಪಾನು ಅವರನ್ನು ಅಣಕಿಸುತ್ತಿದೆ. ಇದರಿಂದ ಯಾವ ಮಾರ್ಗವನ್ನು ಹಿಡಿದು ಈ ತೊಂದರೆಗಳನ್ನು ಪರಿಹರಿಸಬೇಕೆಂಬ ತಾಳ್ಮೆಯೇ ಅವರಿಗಿಲ್ಲದಾಗಿದೆ.

ಜಪಾನರಿಂದ ತೊಂದರೆ.

ಚೈನಾ ಜಪಾನ್ ಯುದ್ಧದಲ್ಲಿ ಅನೇಕ ವೇಳೆ ಜಪಾನರು ಬ್ರಿಟಿಷ್ ರಾಯಭಾರಿಗಳನ್ನು ಕೊಂದೋ, ಬ್ರಿಟನರ ಠಾಣಗಳಿಗೆ ಬಾಂಬು ಹಾಕಿಯೋ ಯಾ ಬ್ರಿಟಿಷ್ ಹಡಗುಗಳನ್ನು ಮುಳುಗಿಸಿಯೋ ಅನೇಕ ತರಹದ ತೊಂದರೆಗಳನ್ನು ಕೊಡುತ್ತಿದ್ದರು. ಇದರಿಂದ ಅಸಮಾಧಾನಗೊಂಡ ಬ್ರಿಟನರನ್ನು ತಮ್ಮ ಸಭ್ಯತೆಯ ಸೋಗಿನಲ್ಲಿ ಜಪಾನರು ಕ್ಷಮೆ ಕೇಳಿಕೊಂಡು ಬಂದರು. ಇದರಿಂದ ಬ್ರಿಟನರೂ ಸಂತೃಪ್ತರಾಗಿ ಉಳಿದರು. ಆದರೆ ಜಪಾನರು ಟಿಯೆನ್‌ಸ್ಟೀನಿನಲ್ಲಾದ ಘರ್ಷಣೆಯ ನಂತರ ಈಗ ತನ್ನ ಸಭ್ಯತೆಯ ಸೋಗನ್ನು ತೆಗೆದು ಹಾಕಿ ಬಹಿರಂಗವಾಗಿ ಬ್ರಿಟನರನ್ನು ಹಿಂಸಿಸುತ್ತಿದೆ. ಅನೇಕ ಬ್ರಿಟನರು ಅವಮಾನಿಸಲ್ಪಟ್ಟರು; ಅವರಲ್ಲದೆ ಅನೇಕರ ಜೀವನವನ್ನೇ ಅಂತ್ಯಗೊಳಿಸಿರುವರು. ಇದಲ್ಲದೆ ಜಪಾನಿ ಸೈನಿಕರು ಇದು ಆಟದ ವಿಚಾರವಲ್ಲವೆಂದೂ, ತಮಗೆ ಬ್ರಿಟನರನ್ನು ಎದುರಿಸಬೇಕೆಂಬ ನಿಶ್ಚಿತ ಧೋರಣೆಯಿದೆಯೆಂದೂ, ಆದುದರಿಂದಲೇ ತಾವು ಮುದಿ ಸಿಂಹದ ಬಾಲ ಹಿಡಿದು ಕುಣಿಸುತ್ತಿರುವೆವೆಂದೂ ಬಹಿರಂಗವಾಗಿ ಸಾರುತ್ತಿರುವರು. ಒಂದು ಕಾಲಕ್ಕೆ ಚೈನಾದಲ್ಲಿ ಒಂದು ಹೊಸ ಸರಕಾರವನ್ನು ಸ್ಥಾಪಿಸುವ ಬಗ್ಗೆ ಬ್ರಿಟನು ಜಪಾನರೊಡನೆ ಸಹಕರಿಸಬೇಕೆಂದು ಜಪಾನು ಕೇಳಿಕೊಂಡಿತಂತೆ. ಆದರೆ ಬ್ರಿಟನು ಅದನ್ನು ಕೇಳಿಯೂ ಕೇಳದಂತೆ ನಟಿಸಿ ತಿರಸ್ಕರಿಸಿತ್ತು. ಆದರೆ ಇಂದು ಬ್ರಿಟನು ತನ್ನನ್ನು ಆ ಬಗ್ಗೆ ಜಪಾನು ಸರಕಾರವು ಬಹಿರಂಗವಾಗಿ ಕೇಳಲಿಲ್ಲವೆಂಬ ಕಾರಣವನ್ನು ಕೊಟ್ಟು ಆತ್ಮ ಸಮರ್ಥನೆ ಮಾಡುತ್ತಿದೆ. ಆದರೆ ಇಂದಿನ ಯುಗದಲ್ಲಿ ಯುದ್ಧಗಳು ಸಹ ಬಹಿರಂಗಪಡಿಸಲ್ಪಟ್ಟು ನಡೆಯುವುದಿಲ್ಲ. ಸರ್ವಾಧಿಕಾರಿಗಳಂತೂ ತಮ್ಮ ಮನ ಬಂದಂತೆ ಯಾರನ್ನೂ ಲಕ್ಷಿಸದೆ ವರ್ತಿಸುತ್ತಿರುವರು. ಅಂಥಾದ್ದರಲ್ಲಿ ಜಪಾನು ಸರಕಾರವು ಈ ವಿಚಾರ ಬಹಿರಂಗಪಡಿಸಲಿಲ್ಲವೆಂಬುದು ಮನಸಿಗೆ ತೆಗೆದುಕೊಳ್ಳುವಂಥಾ ಕಾರಣವಲ್ಲವೆಂದು ಜಪಾನರು ಹೇಳಿರುವರು. ಚೀನಾದಲ್ಲಿ ಚೀನೀಯರಿಂದ ಸದೆಬಡಿಯಲ್ಪಡುತ್ತಿರುವ ಜಪಾನರಿಗೆ ಬ್ರಿಟನನ್ನು ಅಣಕಿಸುವ ಗತ್ತುಗಾರಿಕೆ ಹೇಗೆ ಎಂಬ ಸಂಶಯ ವಾಚಕರಲ್ಲಿ ಬರಬಹುದಲ್ಲವೇ? ಇಟೆಲಿ ಜರ್ಮನಿಗಳು ಜಪಾನಿಗೆ ತಾವು ಸಹಾಯ ಮಾಡುವೆವೆಂದು ಬಹಿರಂಗವಾಗಿ ಸಾರುತ್ತಿವೆ. ಅಂದ ಮೇಲೆ ಜಪಾನಿಗೆ ಈ ಧೈರ್ಯವು ಬರುವುದರಲ್ಲಿ ಆಶ್ಚರ್ಯವಿಲ್ಲ.

ಬಹು ಕಾಲದ ಹಿಂದೆ ಫ್ರಾನ್ಸಿನ ವೀರ ನೆಪೋಲಿಯನನು ಬ್ರಿಟನಿಗೆ ಹೊರಗಿನ ಯಾವ ಸಾಮಗ್ರಿಗಳನ್ನೂ ಬರದಂತೆ ಮಾಡಿ ಅವರನ್ನು ಕೊಳ್ಳದೆ ನಾಶಪಡಿಸಬೇಕೆಂದು ಯೋಚಿಸಿದ್ದನು. ಇಂದಾದರೂ ಆ ಪುರಾತನ ನೆಪೋಲಿಯನನ್ನು ಜ್ಞಾಪಕಕ್ಕೆ ತರುತ್ತಿರುವ ಹಿಟ್ಲರನು ಬ್ರಿಟನನ್ನು ಬಗ್ಗುಬಡಿದು ಇಡೀ ವಿಶ್ವವನ್ನೇ ಜಯಿಸಬೇಕೆಂಬ ಹಂಬಲದಲ್ಲಿರುವನು. ಪ್ರಜಾಪ್ರಭುತ್ವ ತತ್ವವೆಂಬ ಸೋಗಿನಲ್ಲಿ ಶೋಷಿಸುತ್ತಿರುವ ಬ್ರಿಟನಿನ ಮೆದುಳಿನಲ್ಲಿ ಈ ವಿವಿಧ ರೀತಿಯ ತೊಂದರೆಗಳನ್ನು ತಂದೊಡ್ಡಿ ಅದನ್ನು ದಿಗ್ಭ್ರಾಂತಗೊಳಿಸಿ ತನ್ನ ಮುಂದೆ ಶರಣು ಹೊಡೆಯುವಂತೆ ಮಾಡಬೇಕೆಂದು ಇಂದು ಹಿಟ್ಲರನು ಕನವರಿಸುತ್ತಿರುವನು.

ಪ್ರಜಾ ಪ್ರಭುತ್ವದ ಕಷ್ಟ.

ಸರ್ವಾಧಿಕಾರಿಗಳ ರಾಜ್ಯದಲ್ಲಿ ದೇಶದ ಹಿತಕ್ಕೆಂದು ಯೋಚಿಸುತ್ತಿರುವ ತಲೆಯಾದರೂ ಒಂದು. ಆ ಸರ್ವಾಧಿಕಾರಿಗಳ ತಲೆಯಾದರೂ ಸುತ್ತಮುತ್ತಲಿನ ವಾತಾವರಣವನ್ನು ಪರಿಶೀಲಿಸಿ ತನ್ನ ಸಮಯ ಬಂತೆಂದಾಗ ಏಕಾಏಕಿ ಕಾರ್ಯಪ್ರವರ್ತವಾಗುವುದು. ತಮ್ಮ ಆ ನಿಶ್ಚಿತ ಧೋರಣೆಯನ್ನನುಸರಿಸಿ ಇಡೀ ಜನಾಂಗವು ಮುಂದರಿಯುವುದರಿಂದ ಸರ್ವಾಧಿಕಾರಿಗಳಿಗೆ ತಾವು ಹೇಳಿದ ಕಾರ್ಯವನ್ನು ಮಾಡುವುದು ಸಾಧ್ಯ. ಆದರೆ ಪ್ರಜಾ ಪ್ರಭುತ್ವ ರಾಷ್ಟ್ರಗಳ ವಿಧಾನವೇ ಬೇರೆ. ದೇಶದ ಹಿತಚಿಂತನೆಯಿಂದ ಯೋಚಿಸುವ ತಲೆಗಳು ಅನೇಕ. ಎಂಥಾ ಸುಸಂಧಿ ಬಂದರೂ ಪ್ರಜಾ ಪ್ರಭುತ್ವ ರಾಷ್ಟ್ರಗಳು ಏಕಾಏಕಿ ಕಾರ್ಯಕ್ಕೆಕೊಳ್ಳುವುದು ಅಸಾಧ್ಯ. ಆದ್ದರಿಂದಲೇ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ತೀವ್ರ ಮಾರ್ಪಾಡುಗಳಾಗುವುದು ಕಷ್ಟ. ಪ್ರಜಾ ಪ್ರಭುತ್ವವೆಂದ ಮೇಲೆ ಜನತೆಯು ತನ್ನ ಸ್ವಾತಂತ್ರ್ಯದ ಮೇಲೆ ಹೆಚ್ಚು ಕಣ್ಣಿಡುವುದು. ಆದ್ದರಿಂದ ಎಂಥಾ ಉಪಯೋಗಕಾರಕ ಸಂಗತಿಯಾದರೂ ಜಾರಿಯಲ್ಲಿ ಬರಬೇಕಾದರೆ ಇಡೀ ಜನತೆಯ ಸಮ್ಮತಿ ಆಗತ್ಯ. ಇಂದು ಬ್ರಿಟಿಷ್ ಪ್ರಧಾನ ಮಂತ್ರಿ ನೆವಿಲಿ ಚೇಂಬರ್‌ಲೇನರು ಜಪಾನರೊಡನೆ ಯುದ್ಧ ಹೂಡಲು ನಿರ್ಧರಿಸಿದರೂ, ಇಂಗ್ಲೆಂಡಿನ ಜನತೆಯ ಬಹುಮತವಿಲ್ಲದೆ ಯುದ್ಧ ಪ್ರಾರಂಭಿಸುವುದು ಅಸಾಧ್ಯ. ಇದು ಹಿಟ್ಲರನಿಗೆ ತಿಳಿಯದ್ದಲ್ಲ. ಈ ಸಂದರ್ಭವನ್ನು ಉಪಯೋಗಿಸಿಕೊಳ್ಳಬೇಕೆಂದು ಹಿಟ್ಲರನು ಯೋಚಿಸಿರುವನು. ಇಂದು ಹಿಟ್ಲರನಿಗೆ ಡೇನ್ಜಿಗ್ ಬೇಕು, ಯುಗೊಸ್ಲೇವಿಯಾ ಬೇಕು, ಯೂರೋಪ್ ಬೇಕು, ವಸಾಹತುಗಳು ಬೇಕು, ಇಡೀ ಜಗತ್ತೇ ಅವನಿಗೆ ಬೇಕು. ತನ್ನ ಈ ಧ್ಯೇಯವನ್ನು ಸಾಧಿಸಿಕೊಳ್ಳಲು ಅವನು ಯುದ್ಧದ ಮುಖಾಂತರ ಪ್ರಯತ್ನಿಸಿದನು. ಯುದ್ಧವೆಂಬ ಬಾಯ್ಬೆದರಿಕೆಯಲ್ಲಿಯೇ ಕೆಲವು ರಾಜ್ಯಗಳನ್ನು ವಶಪಡಿಸಿಕೊಂಡನು. ಅಷ್ಟರಲ್ಲಿ ಅವನಿಗೊಂದು ತಡೆಬಂದಿತು. ಮುಂದಗಾಮಿಯಾದ ಪ್ರಜಾ ಪ್ರಭುತ್ವ ರಾಷ್ಟ್ರಗಳ ಮೆದುಳಿಗೆ ಬಿಸಿಹತ್ತಿತ್ತು. ಈ ಬಿಸಿ ಹತ್ತುವದರೊಳಗೆ ಹಿಟ್ಲರನು ಆಸ್ಟ್ರಿಯಾ, ಜೆಕೊಸ್ಲೋವಾಕಿಯಾ ಮತ್ತು ಮೆಮೆಲ್ ಪ್ರಾಂತ್ಯಗಳನ್ನು ನುಂಗಿ ಜೀರ್ಣಿಸಿಕೊಂಡುಬಿಟ್ಟನು. ತಲೆಗೆ ಬಿಸಿಯೇರಿದ ಬ್ರಿಟನು ಹಿಟ್ಲರನ ಮುನ್ನಡೆಯನ್ನು ತಡೆಯಲು ನಿರ್ಧರಿಸಿತು. ಚೇಂಬರ್ಲೇನರು ಆ ಪ್ರಕಾರ ಹೇಳಿಕೆಯನ್ನೂ ಕೊಟ್ಟರು. ಎಲ್ಲಾ ಪ್ರಜಾ ಪ್ರಭುತ್ವ ರಾಷ್ಟ್ರಗಳೂ ಎಚ್ಚೆತ್ತು ತಮ್ಮ ಯುದ್ಧ ಸಾಮಗ್ರಿ ತಯಾರಿಕೆಯಲ್ಲಿ ತೊಡಗಿದವು. ಹಿಟ್ಲರನಿಗೆ ವಿಚಾರ ತಿಳಿಯಿತು. ಕೊನೆಯಲ್ಲಿ ಕೂಡ ಯೋಜನಾಮಗ್ನನಾದನು.

ಹಿಟ್ಲರನ ಹೊಸ ಶೋಧನೆ.

ಬಾಯ್ಬಡುಕತನದ ಯುದ್ಧ ಭಯದಿಂದ ಬೆದರಿಸಿ ತನ್ನ ಕಾರ್ಯ ಸಾಧಿಸುವದು ಇನ್ನು ಅಸಾಧ್ಯವೆಂದು ಹಿಟ್ಲರ್ ತಿಳಿದನು. ಉದಾಹರಣೆಗೆ ತಾನು ಡೇನ್ಜಿಗ್‌ನ ಮೇಲೆ ಬಿದ್ದದ್ದೇ ಆದರೆ ಪೋಲೆಂಡಿನ [illegible] ಪ್ರಜಾ ಪ್ರಭುತ್ವ ರಾಷ್ಟ್ರಗಳ ಬೆಂಬಲದಿಂದ ತನ್ನನ್ನು ಎದುರಿಸುವರೆಂದು ಆತನು ಅರಿತನು. ಆದ್ದರಿಂದ ಆತನು ಪುರಾತನ ಚರಿತ್ರೆಗಳನ್ನು ಶೋಧಿಸಿದನು. ಶೋಧಿಸಿ ಹೊಸ ತತ್ವ ಒಂದನ್ನು ಹೊರ ತೆಗೆದಿರುವನು. ಬ್ರಿಟನಿನ ಜನತೆಯ ಮನಸ್ಸನ್ನು [illegible] ಅವರಲ್ಲಿ ಅಪನಂಬಿಕೆ, ತೊಂದರೆ ಮಾಡಲಾದುದನ್ನು ತುಂಬಿ ಅವರಲ್ಲೇ ಪರಸ್ಪರ ವೈಮನಸ್ಯವನ್ನು ಹಬ್ಬಿಸಿ ತೊಂದರೆಗೊಳಿಸಬೇಕೆಂದು ಹವಣಿಸಿರುವನು. ಇದು ಪುರಾತನ ವೀರನಾದ ನೆಪೋಲಿಯನನ ಮಾರ್ಗವೇ ಆಗಿದೆ. ಆದ್ದರಿಂದಲೇ ಹಿಟ್ಲರನು ಇಂದು ತನ್ನ ಈ ಧ್ಯೇಯಸಾಫಲ್ಯಕ್ಕೆ ಇಂಗ್ಲೆಂಡಿಗೆ ಗೂಢಾಚಾರರನ್ನು ಕಳುಹಿಸಿ ಒಳಗೊಳಗೇ ಪ್ರಚಾರ ಕೆಲಸ ಮಾಡುತ್ತಿರುವನು. ಬ್ರಿಟನ್ ಪೋಲೀಸರು ಇವರಲ್ಲಿ ಕೆಲವರನ್ನು ಹಿಡಿದು ಬಂಧಿಸಿದ್ದರೂ, ಎಲ್ಲರನ್ನೂ ಹಿಡಿದು ಹೊರಹಾಕುವದು ಅಸಾಧ್ಯ. ಅಲ್ಲದೆ ಈ ಸರ್ವಾಧಿಕಾರಿ ಹಿಟ್ಲರನು ಬ್ರಿಟಿಷ್ ಸಾಮ್ರಾಜ್ಯದ ಪ್ರಾಮುಖ್ಯ ಸ್ಥಳಗಳಲ್ಲಿ ತನ್ನ ಕಾರ್ಯ ಮಾಡುತ್ತಿರುವನು. ಹಿಟ್ಲರನು ಒಡನೇ ತನ್ನ ಆರ್ಥಿಕ ನಿಪುಣರನ್ನು ಹಿಂದೂ ದೇಶಕ್ಕೆ ಕಳುಹಿಸುವನು. ಬ್ರಿಟಿಷರ ವ್ಯಾಪಾರ ಗುಟ್ಟುಗಳನ್ನು ರಟ್ಟುಪಡಿಸುವನು. ಕಾದಾಗ ಕಬ್ಬಿಣವನ್ನು ಬಡಿಯಬೇಕೆಂದು ತಿಳಿದಿರುವ ಹಿಟ್ಲರನು ತನ್ನ ವಾರ್ತಾ ಪತ್ರಿಕೆಗಳಲ್ಲಿ ಭಾರತದಲ್ಲಿಯ ಜರ್ಮನಿಯ ಹೊಸ ಮಾರ್ಗವನ್ನು ಬಹಿರಂಗಪಡಿಸುವನು. ಒಡನೇ ಆತನು ಜರ್ಮನ್-ಇಂಡಿಯಾದೊಡನೆ ವ್ಯಾಪಾರ ಸಂಧಾನ ಮಾಡಲೆಳಸುವನು. ಆದರೆ ಬ್ರಿಟನರಿಗೆ ಇದನ್ನು ತಡೆಗಟ್ಟುವದು ಅಸಾಧ್ಯವಾಗುವದು. ಇದು ಹಿಟ್ಲರನ ಹೊಸ ಶೋಧನೆ.

ಪಾಲೇಸ್ತೀನದಲ್ಲಿ ಹಿಟ್ಲರನ ಕೈ.

ಪಾಲೇಸ್ತೀನದಲ್ಲಿ ಹಿಟ್ಲರನು ತನ್ನ ಪ್ರಚಾರವನ್ನು ನಡೆಸದೆ ಬಿಡಲಿಲ್ಲ. ನಾಝಿ ತತ್ವದ ಪ್ರಚಾರವನ್ನು ರೇಡಿಯೋ ಮುಖಾಂತರ ಅಲ್ಲಿ ಸುಸೂತ್ರವಾಗಿ ನಡೆಸಿದನು. ಇದಕ್ಕಾಗಿಯೇ ಬ್ರಿಟನರು ಪಾಲೇಸ್ತೀನದಲ್ಲಿ ಹೊಸ ರೇಡಿಯೋ ಠಾಣೆ ತೆರೆದು ಇವರ ಪ್ರಚಾರವನ್ನು ಪ್ರತಿಭಟಿಸಬೇಕಾಯಿತು. ಇನ್ನಾದರೂ ಆತನ ಕೈ ಅಲ್ಲಿ ನಡೆಯದೆ ಇಲ್ಲ. ಒಳಗೊಳಗೇ ಕಾರ್ಯ ನಡೆಸುತ್ತಿರುವನು. ಅರಬ ರಾಯಭಾರಿಗಳನ್ನು ಸಂದರ್ಶಿಸಿ ವಿಚಾರ ವಿನಿಮಯ ಮಾಡುತ್ತಿರುವನು. ಇದರಿಂದ ಬ್ರಿಟನರ ತಲೆಯು ಕರಡಾಗಿದೆ. ಅವರ ಮುಂದಿನ ಧೋರಣೆಯೇನೆಂಬುದೇ ಅವರಿಗೆ ತಿಳಿಯದಾಗಿದೆ.

ಪಾಲೇಸ್ತೀನದ ವಿಚಾರ ಹಾಗಾದರೆ ಇತ್ತ ಡೇನ್ಜಿಗ್ಗಕ್ಕೆ ಹಿಟ್ಲರನು ತನ್ನ ಪ್ರಚಾರ ಮಂತ್ರಿ ಡಾ. ಗೋಬಲ್ಸ್‌ರವರನ್ನು ಕಳುಹಿಸಿರುವನು. ಅಲ್ಲಿ ರಷ್ಯಾ ಬ್ರಿಟನರೊಳಗೆ ಸಂಧಿ ಪ್ರಯತ್ನಗಳಾಗುತ್ತಿರುವವು. ಹಿಟ್ಲರನಿಗೆ ಆ ಸಂಧಾನವಾಗುವದರಲ್ಲಿ ಇಷ್ಟವಿಲ್ಲ. ಅವನ ಪ್ರೇರಣೆಯಂತೆಯೇ ಡಾ. ಗೋಬೆಲ್ಸರು ಡಾನ್ಜಿಗ್‌ನಲ್ಲಿ ನಿಂತು ತನ್ನ ಅಸಾಧ್ಯ ಪ್ರಚಾರ ಕಾರ್ಯವನ್ನು ಕೈಕೊಂಡು ಗುಡುಗುಟ್ಟುತ್ತಿರುವನು. ಈ ಗುಡುಗಿನ ಶಬ್ದದಲ್ಲಿ ರಷ್ಯಾ-ಬ್ರಿಟನರ ಮಾತುಕತೆಗಳೇ ಪರಸ್ಪರರಿಗೆ ಕೇಳುತ್ತಿಲ್ಲ. ಇದಕ್ಕೆ ಬೆಂಬಲವಾಗಿ ಜರ್ಮನ್ ಪತ್ರಿಕೆಗಳು ಪ್ರಚಾರ ಕಾರ್ಯವನ್ನು ಮಾಡಿ ಗೋಬೆಲ್ಲರನ್ನು ಸಮರ್ಥಿಸುತ್ತಿವೆ. ಬ್ರಿಟಿಷ್ ರಾಜಕಾರಣಿಗಳ ಮುಖಭಂಗ ಮಾಡುತ್ತಿವೆ. ಹಿಟ್ಲರನು ಯುಗೊಸ್ಲೇವಿಯಾದ ಗಡಿಯಲ್ಲಿ ತನ್ನ ಸೈನ್ಯಗಳನ್ನು ಶೇಖರಿಸುತ್ತಿದ್ದರೂ, ತಮಗೆ ಯುಗೊಸ್ಲೇವಿಯಾದ ಮೇಲೆ ಬೀಳುವ ಅಪೇಕ್ಷೆ ಇಲ್ಲವೆಂದೂ ಡೇನ್ಜಿಗ್ ಮಾತ್ರ ತಮಗೆ ಬೇಕೆಂದೂ ಹೇಳುತ್ತಿರುವನು. ಇದೆಲ್ಲಾ ಅವನನ್ನು ಕಣ್ಣಿಟ್ಟು ಪರೀಕ್ಷಿಸುವವರಿಗೆ ಮಣ್ಣೆರಚುವ ಉಪಾಯವಲ್ಲದೆ ಬೇರಿಲ್ಲ. ಈತನ ಈ ರೀತಿ ಕಾರ್ಯಕ್ರಮಗಳಿಂದ ಇತರ ಜನಾಂಗಗ

ಭಾರತೀಯ ಕೈಗಾರಿಕೆ.

ಔದ್ಯೋಗಿಕ ಬದಲಾವಣೆ(Industrial revolution) ಯಾದನಂತರ ಪಟ್ಟಣಗಳಲ್ಲಿ ನಾನಾ ತರಹದ ಕಾರ್ಖಾನೆ ಕೈಗಾರಿಕೆಗಳು ಮೊಳೆಯತೊಡಗಿದವು. ಕ್ರಮೇಣ ಜನರು ಪಟ್ಟಣಗಳ ಕಡೆಸಾಗಹತ್ತಿದರು. ಹಳ್ಳಿಗಳಿಗಿದ್ದ ಪ್ರಾಧಾನ್ಯವು ಪಟ್ಟಣಗಳಿಗೆ ಬರತೊಡಗಿತು. ಕೈಗಾರಿಕೆಯಲ್ಲಿ ವ್ಯವಸಾಯಕ್ಕಿಂತ ಲಾಭವಿದೆಯೆಂಬುದು ಗೋಚರವಾಯಿತು. ಬಹು ಜನರು ವ್ಯವಸಾಯದಲ್ಲಿ ತೊಡಗಿ ಕೆಲವೊಂದು ಜನರು ಮಾತ್ರ ಕೈಗಾರಿಕೆಯಲ್ಲಿ ಕೈಯಿಕ್ಕಿದ್ದರಿಂದ ಕೈಗಾರಿಕಾ ಸಾಮಾನುಗಳ ಮಾರಾಟವು ಬಹು ಹೆಚ್ಚಿನ ದರದಲ್ಲಿ ಯಾವ ತೊಂದರೆಯೂ ಇಲ್ಲದೆ ಸುಲಭವಾಗಿ ನಡೆಯುತ್ತಿತ್ತು. ವ್ಯವಸಾಯದಲ್ಲಿ ಲಾಭವಿಲ್ಲವೆಂದೂ, ಅದರ ಉತ್ಪನ್ನಕ್ಕೆ ಸರಿಯಾದ ಕ್ರಯ ಸಿಗುವದಿಲ್ಲವೆಂದೂ ಜನತೆಗೆ ತಿಳಿಯಿತು. ದೇಶದ ಪ್ರಗತಿಗೆ ಹಾಗೂ ಆರ್ಥಿಕ ಅಭಿವೃದ್ಧಿಗೆ ಕೈಗಾರಿಕೆಯು ಅಗತ್ಯವೆಂದು ಎಲ್ಲರಿಗೂ ಹೊಳೆಯಿತು. ಎಲ್ಲಾ ದೇಶಗಳೂ ಕೈಗಾರಿಕೆಗೆ ಪ್ರೋತ್ಸಾಹವಿತ್ತು ಮುನ್ನಡೆಯ ಹತ್ತಿದವು. ಭಾರತ ದೇಶವಾದರೂ ಈ ಕರೆಯನ್ನು ತಿಳಿಯದಿರಲಿಲ್ಲ. ಅಂತೆಯೇ ಜನತೆಯ ಕೈಗಾರಿಕೆಯೆಡೆಗೆ ತನ್ನ ಒಲವನ್ನು ತೋರಿಸಿತು. ಆದರೆ ಜನತೆಯ ಈ ಹುರುಪಿಗೆ ಬೆಂಬಲವಿತ್ತರೆ ಭಾರತವು ವಿವಿಧ ರಾಷ್ಟ್ರಗಳ ಕೈಗಾರಿಕಾ ಸಾಮಾನಿನ ಸಂತೆಯಾಗಲಾರದೆಂಬುದು ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ತಿಳಿಯದಿರಲಿಲ್ಲ. ಆದ್ದರಿಂದ ಪರದೇಶ ವಸ್ತುಗಳಿಗೆ ಪ್ರೋತ್ಸಾಹ ಸಿಕ್ಕಬೇಕೆಂಬ ಆ ದೃಷ್ಟಿಯನ್ನು ಇಟ್ಟುಕೊಂಡು ಅವರು ಭಾರತದಲ್ಲಿ ತಮ್ಮ ಆಡಳಿತವನ್ನು ನಡೆಸುತ್ತಿರುವರು. ಭಾರತದಲ್ಲಿ ಕೈಗಾರಿಕೆಗೆ ಪ್ರೋತ್ಸಾಹವಿಲ್ಲ. ವಿಪುಲವಾದ ಕಚ್ಚಾ ಮಾಲುಗಳಿದ್ದರೂ, ಕೈಗಾರಿಕೆ ಹಾಗೂ ಯಂತ್ರ ಸಲಕರಣೆಗೆ ತುಂಬಾ ಅನುಕೂಲವಿದ್ದರೂ ಅಧಿಕಾರಿಗಳ ಪ್ರೋತ್ಸಾಹವಿಲ್ಲದ್ದರಿಂದ ಭಾರತ ಕೈಗಾರಿಕೆಯು ಹಿಂದುಳಿದಿದೆ. ಇರುವ ಅಲ್ಪ ಸ್ವಲ್ಪ ಕೈಗಾರಿಕೆಯ ಸಾಮಾನುಗಳಾದರೂ ಪರದೇಶದ ಸುಲಭ ದರದ ಹಾಗೂ ಮನರಂಜಕವಾದ ಸಾಮಾನುಗಳೊಡನೆ ಸ್ಪರ್ಧೆ ನಡೆಸಲಾರದೆ ಮೂಲೆ ಸೇರುತ್ತಿರುವವು. ಸರಕಾರದ ಪ್ರೋತ್ಸಾಹವಿಲ್ಲದಿರುವದರಿಂದಲೇ ಭಾರತೀಯ ಕೆಲಸಗಾರರಲ್ಲಿ ಕೇವಲ ಶೇಕಡ 11 ರಂತೆ ಮಾತ್ರ ಕೈಗಾರಿಕೆ ಕೈಕೊಂಡಿರುವರು. ಉಳಿದ ಜನತೆಯಲ್ಲಿ ಬಹು ಸಂಖ್ಯಾಕರು ವ್ಯವಸಾಯವನ್ನು ಕೈಕೊಂಡಿರುವರು. ವ್ಯವಸಾಯವೂ ಸರಕಾರದ ಸಹಾಯವಿಲ್ಲದೆ ಕ್ರಮಬದ್ಧವಾಗಿ ನಡೆಯುತ್ತಿಲ್ಲ. ಅಂದ ಮೇಲೆ ಭಾರತೀಯನೊಬ್ಬನ ದೈನಿಕ ಉತ್ಪತ್ತಿಯು ಎರಡಾಣೆಯಷ್ಟಿರುವದರಲ್ಲಿ ಆಶ್ಚರ್ಯವೇನು? ಇಂದು ಭಾರತವು ವಿವಿಧ ರಾಷ್ಟ್ರಗಳ ಕೈಗಾರಿಕೆಗೆ ಬೇಕಾದ ಕಚ್ಚಾ ಮಾಲನ್ನು ಒದಗಿಸಿಕೊಟ್ಟು ಪರದೇಶೀ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ದೇಶವಾಗಿದೆ. ಅಲ್ಪ ಕ್ರಯದಲ್ಲಿ ಕಚ್ಚಾ ಮಾಲುಗಳನ್ನು ಪೂರೈಸಿ ಅದರಿಂದ ತಯಾರಾದ ಸಾಮಾನನ್ನು ಪುನಹ ಅಮೋಘ ಬೆಲೆಗೆ ಪಡಕೊಂಡು ವಿದೇಶಿ ವ್ಯಾಪಾರಕ್ಕೆ ಕಳೆಯನ್ನು ಕೊಡುತ್ತಿದೆ. ಭಾರತ ದೇಶವು ತನ್ನದೇ ಕಾಲಿನಲ್ಲಿ ನಿಲ್ಲಲಾರದೆ ವಿದೇಶೀ ಸಾಮಾನುಗಳನ್ನು ಎದುರು ನೋಡುವ ಸ್ಥಿತಿಗೆ ಇಳಿದಿರುವದಾದರೂ ನಮ್ಮ ಘನ ಸರ್ಕಾರದ ಸ್ವಾರ್ಥ ದೃಷ್ಟಿಯ ಪರಿಣಾಮದಿಂದಾಗಿಯೇ. ಇಂದು ತಮ್ಮ ಜನತೆಯ ಸರಕಾರವು ತಮ್ಮ ಜನತೆಯ ಹಿತಕ್ಕಾಗಿಯೇ ಎಂಬ ನುಡಿಯನ್ನು ಬ್ರಿಟಿಷ್ ಸರ್ಕಾರವು ಸಾರ್ಥಕಗೊಳಿಸಿದೆ. ಬ್ರಿಟಿಷ್ ಸರ್ಕಾರದಿಂದ ನಡೆಸಲ್ಪಡುತ್ತಿರುವ ಇಲ್ಲಿಯ ರಾಜ್ಯಭಾರವು ಇಂದು ಅವರ ಹಿತಕ್ಕಾಗಿಯೇ ಆಗಿದೆ. ಭಾರತ ಜನತೆಯ ದಾರುಣವಾದ ಬಡತನವೂ, ಹೃದಯದ್ರಾವಕ ಪರಿಸ್ಥಿತಿಯೂ ಸರಕಾರದ ಮನೋಭಿತ್ತಿಯಲ್ಲಿ ಮಾರ್ಪಾಡನ್ನು ಮಾಡಲಾರದಾಗಿವೆ. ಇದರ ಕಾರಣವಾದರೂ ಏನು? ಅವರಲ್ಲಿರುವ ಸ್ವದೇಶ ಪ್ರೇಮ. ಅವರ ಕೈಗಾರಿಕೆಯು ಮುಂದವರಿಯಬೇಕೆಂಬ ಉತ್ಕಟೇಚ್ಛೆ.

ಭಾರತ ಜನತೆಯಲ್ಲಿ ಶೇಕಡ 11 ರಂತೆ ಮಾತ್ರ ಕೈಗಾರಿಕೆಗೆ ಕೈಯಿಕ್ಕಿರುವರು. ಇವರಿಗೆ ಸರಿಯಾದ ಪ್ರೋತ್ಸಾಹ ಸಿಕ್ಕಿದರೆ ಭಾರತದ ಆರ್ಥಿಕ ಮುಗ್ಗಟ್ಟು ಬಗೆಹರಿಯಲಾಪುದು. ಇಂಗ್ಲೆಂಡಿನಲ್ಲಿ 15 ಮಿಲಿಯ ಜನರು ಮಾತ್ರ ಕೈಗಾರಿಕೆಯಲ್ಲಿ ತೊಡಗಿದ್ದರೂ ಅಲ್ಲಿಯ ಒಬ್ಬ ಮನುಷ್ಯನ ಸರಾಸರಿ ಉತ್ಪತ್ತಿಯು ಭಾರತೀಯನೊಬ್ಬನ ಉತ್ಪತ್ತಿಗಿಂತ 15 ಪಟ್ಟು ಹೆಚ್ಚಾಗಲು ಕಾರಣವೇನು? ಅವರು ತಯಾರಿಸಿದ ಸಾಮಾನುಗಳಿಗೆ ಒಳ್ಳೇ ಪ್ರೋತ್ಸಾಹ ಸಿಕ್ಕುತ್ತಿದೆ. ಆದ್ದರಿಂದ ಅವರಲ್ಲಿ ಸಾಮಾನುಗಳನ್ನು ಹೆಚ್ಚಾಗಿ ತಯಾರಿಸುವ ಹುರುಪು ಬರುವದು ವಾಸ್ತವ. ಹೆಚ್ಚಾಗಿ ಖರ್ಚಾಗುವದರಿಂದ ಅವನ್ನು ಸುಲಭದರದಲ್ಲಿ ಕೊಡುವದೂ ಸಾಧ್ಯ. ಭಾರತೀಯರಿಂದ ತಯಾರಿಸಲ್ಪಟ್ಟ ಸಾಮಾನುಗಳಿಗೆ ಪ್ರೋತ್ಸಾಹವಿಲ್ಲ. ವಿದೇಶೀ ಸಾಮಾನುಗಳ ಪ್ರವಾಹದಲ್ಲಿ ಇವು ಕೊಚ್ಚಿಹೋಗುತ್ತಿವೆ. ಭಾರತ ಜನತೆಯಾದರೂ ತಮ್ಮ ಆರ್ಥಿಕ ಮುಗ್ಗಟ್ಟಿನ ದೆಸೆಯಿಂದ ಸುಲಭ ದರದ ಪರದೇಶೀ ಸಾಮಾನುಗಳನ್ನು ತೆಗೆದುಕೊಳ್ಳಲಾಪರೇ ವಿನಹ ಭಾರತೀಯ ಕೈಗಾರಿಕೆ ಪ್ರೋತ್ಸಾಹವೀಯಲು ಅಸಮರ್ಥರಿರುವರು. ಒಂದು ದೇಶದ ಕೈಗಾರಿಕೆಯು ಅಭಿವೃದ್ಧಿಗೊಳ್ಳಬೇಕಾದರೆ ಪ್ರಥಮತಃ ಬಂಡವಾಳ, ನೈಗಸಾದ ಕೆಲಸ, ಧೈರ್ಯಪೂರಿತ ಮುನ್ನಡೆ ಇವು ಅಗತ್ಯ. ವಿಪುಲವಾದ ಕಚ್ಚಾ ಮಾಲು ಬೇಕು ಅಲ್ಲದೆ ಇಂದಿನ ಜಗತ್ತಿನ ಈ ಸ್ಪರ್ಧೆಯಲ್ಲಿ ಇದಕ್ಕೆ ಆ ದೇಶದ ಸರಕಾರವು ಪೂರ್ಣ ಬೆಂಬಲವನ್ನೀಯಬೇಕು. ಈ ಪ್ರತಿಯೊಂದು ಅವಶ್ಯಕಗಳೂ ಭಾರತದಲ್ಲಿ ಯಾವ ಸ್ಥಿತಿಯಲ್ಲಿದೆಯೆಂಬುವನ್ನು ಪ್ರತ್ಯೇಕ ಪ್ರತ್ಯೇಕವಾಗಿ ವಿಚಾರಿಸುವ.

ಪ್ರಥಮತಃ ಬಂಡವಾಳವನ್ನು ತೆಗೆದುಕೊಳ್ಳುವ. ಜನತೆಯ ಉತ್ಪತ್ತಿಯು ಜಾಸ್ತಿಯಾದರೆ ದೇಶದಲ್ಲಿ ಬಂಡವಾಳವು ಜಾಸ್ತಿಯಿದ್ದಂತೆ. ಹೊಟ್ಟೆಗೆ ಅನ್ನಕ್ಕೇ ಸೊನ್ನೆಯಾಗಿರುವ ಭಾರತದಲ್ಲಿ ಈ ಬಂಡವಾಳ ಎಲ್ಲಿಂದ ಬರಬೇಕು? ಸ್ವಲ್ಪ ಸ್ವಲ್ಪ ಸ್ಥಿತಿವಂತರಾದರೂ ತಮ್ಮಲ್ಲಿ ಹಣ ಉಳಿಸಿಕೊಳ್ಳಬೇಕೆಂದರೆ ಇಲ್ಲಿ ಬೇಂಕಿಂಗ್ ಅಥವಾ ಇತರ ಲೇವಣಾವಿ ಸಂಸ್ಥೆಗಳ ಸಲಕರಣೆಯು ಗ್ರಾಮ ಗ್ರಾಮಗಳಲ್ಲಿವೆಯೇನು? ಒಂದು ದೇಶದ ವ್ಯಾಪಾರೋದ್ಯಮವು ಸುಸೂತ್ರವಾಗಿ ನಡೆಯಬೇಕಾದರೆ ಬ್ಯಾಂಕಿಂಗ್ ಸಲಕರಣೆಯು ಅತ್ಯಾವಶ್ಯಕವೆಂಬುದು ನಿರ್ವಿವಾದ. ಇಡೀ ಭಾರತದಲ್ಲಿರುವ ಬ್ಯಾಂಕುಗಳು ಮತ್ತು ಶಾಖೆಗಳನ್ನು ಸೇರಿಸಿದರೆ ಇಂಗ್ಲೆಂಡಿನಲ್ಲಿಯ ಬ್ಯಾಂಕುಗಳ ಸಂಖ್ಯೆಯ 1/10 ರಷ್ಟು ಮತ್ತು ಜಪಾನಿನ ಸಂಖ್ಯೆಯ 1/7 ರಷ್ಟು ಆಗುವದೆಂದರೆ ಭಾರತವು ಬ್ಯಾಂಕಿಂಗ್ ಸಲಕರಣೆಯಲ್ಲಿ ಎಷ್ಟು ಹಿಂದುಳಿದಿದೆಯೆಂಬುದು ಗೋಚರವಾಗುವದು. ಭಾರತದ ವಿಸ್ತೀರ್ಣವನ್ನು ಯೋಚಿಸಿ ಅದರಲ್ಲಿ ಒಂದು ಅಣುವಂತಿರುವ ಜಪಾನು, ಬ್ರಿಟನುಗಳಲ್ಲಿ ಇಷ್ಟು ಹೆಚ್ಚು ಬ್ಯಾಂಕಿಂಗ್ ಸಲಕರಣೆಯಿದೆಯೆಂದರೆ ಅಲ್ಲಿಯ ವ್ಯಾಪಾರವು ಎಷ್ಟು ಸುಸೂತ್ರವಾಗಿ ನಡೆಯುವದೆಂಬುದು ಸ್ವಯಂವ್ಯಕ್ತ. ಈ ದೇಶದಲ್ಲಿ ಕೈಗಾರಿಕಾ ಬ್ಯಾಂಕು (Industrail Banks) ಗಳಾಗಲೀ ಅಥವಾ ಬ್ಯಾಂಕಿಂಗ್ ಪದ್ಧತಿಯಲ್ಲಿ ಕೈಗಾರಿಕಾ ವೃಷ್ಟಿಯಾಗಲಿ ಇಲ್ಲ. ಕೈಗಾರಿಕಾ ಪ್ರಪಂಚಕ್ಕೆ ಈಗ ಕಾಲಿಟ್ಟ ಜಪಾನು ಹಾಗೂ ಜರ್ಮನಿಯು ತಮ್ಮ ಬ್ಯಾಂಕಿಂಗ್ ಅನುಕೂಲತೆಗಳನ್ನು ಮಾಡಿಕೊಂಡು ಕೈಗಾರಿಕಾ ಪ್ರಪಂಚದಲ್ಲಿ ಅಗ್ರಸ್ಥಾನವನ್ನು ಪಡೆದಿರುವವು. ಭಾರತದಲ್ಲಿ ಈ ವ್ಯವಸ್ಥೆಯು ಇಲ್ಲದ್ದರಿಂದಲೇ ಇಲ್ಲಿಯ ಕೈಗಾರಿಕೆಯು ಮುಂದರಿಯದಿರಲು ಕಾರಣ. ಆದ್ದರಿಂದ ಕೈಗಾರಿಕಾಭಿವೃದ್ಧಿಗೆ ಹೆದ್ದಾರಿಯೆಂದರುವ ಈ ಬಂಡವಾಳದ ಬಗ್ಗೆ ಸರಕಾರವು ಹೆಚ್ಚಿನ ಸಹಾಯ ಇತ್ತಿರುವದಿಲ್ಲ.

ಎರಡನೆಯದಾಗಿ ಕೆಲಸ. ಕೆಲಸದ ಮಟ್ಟಿಗೆ ಭಾರತವು ಎಂದೂ ಹಿಂದಿಲ್ಲ. ಕೆಲಸ ಮಾಡುವ ಶಕ್ತಿಯಿದ್ದರೂ ಅದನ್ನು ಆಧುನಿಕ ರೀತಿ ನೀತಿಯಿಂದ ಸುಧಾರಿಸಿಕೊಳ್ಳುವಷ್ಟು ನಾಗರೀಕತೆಯಿಲ್ಲ. ಅವಿದ್ಯಾವಂತರಾಗಿರುವ ಜನತೆಯಲ್ಲಿ ಈ ಆಧುನಿಕ ಕ್ರಮವಾದರೂ ಬರುವದು ಅಸಾಧ್ಯ. ಈಗ ಕೊಡಲ್ಪಡುತ್ತಿರುವ ವಿದ್ಯೆಯಾದರೂ ಕೇವಲ ಗುಮಾಸ್ತರನ್ನು, ಅಥವ ಇತರ ಉದ್ಯೋಗಸ್ಥರನ್ನು ತಯಾರಿಸುವದೇ ವಿನಹ ಸ್ವತಂತ್ರವಾಗಿ ಜೀವನ ನಡೆಸುವ ಬಗ್ಗೆ ಅದು ಉಪಕಾರಿಯಾಗಲಾರದು. ಕೈಗಾರಿಕೆಗೆ ಇಂದಿನ ವಿದ್ಯೆಯು ಪ್ರೋತ್ಸಾಹವನ್ನೀಯದು. ಆದ್ದರಿಂದ ಇಂದು ಭಾರತದಲ್ಲಿ ಅಸಂಖ್ಯಾತ ಕೆಲಸಗಾರರಿದ್ದರೂ ಪಾಶ್ಚಿಮಾತ್ಯ ದೇಶಗಳ ಸುಧಾರಿಸಿದ ಕೆಲಸಗಾರರೊಡನೆ ಸ್ಪರ್ಧೆ ನಡೆಸಲಾರರು. ಆದ್ದರಿಂದ ಈ ಅಶಿಕ್ಷಣವೇ ಭಾರತ ಕೈಗಾರಿಕೆಯ ಅಧೋಗತಿಗೆ ಎರಡನೇ ಕಾರಣ.

ಮೂರನೆಯದಾಗಿ ಮಧ್ಯಸ್ಥಗಾರ. ಯಾವದೊಂದು ವ್ಯಾಪಾರಕ್ಕೂ ಮಧ್ಯಸ್ಥಗಾರನಿಲ್ಲದಿದ್ದರೆ ವ್ಯಾಪಾರವು ಸುಸೂತ್ರವಾಗಿ ನಡೆಯದು. ಈ ಮಧ್ಯಸ್ಥಗಾರನೇ ಎಂಥಾ ಸಾಮಾನುಗಳನ್ನು ತಯಾರಿಸಬೇಕು ಎಂಥಾ ಸಾಮಾನು ಜನಾದರಣೀಯವಾಗಿವೆ ಎಂಬುದನ್ನು ತಿಳಿಸುವವನು. ಕೆಲಸ ಹಾಗೂ ಬಂಡವಾಳಗಳೊಳಗೆ ಐಕ್ಯತೆಯನ್ನು ತಂದು ಉತ್ಪತ್ತಿಯ ಬೆಲೆಯನ್ನು ನಿರ್ಧರಿಸಿ ಆ ಪ್ರಕಾರ ಅದನ್ನು ಜನತೆಯ ಮುಂದಿಡುವವನೇ ಈ ಮಧ್ಯಸ್ಥಗಾರನು. ಜನತೆಯ ಬೇಡಿಕೆಯಂತೆ ಒಳ್ಳೇ ಸಾಮಾನುಗಳನ್ನು ತಯಾರಿಸಿ ಕೈಗಾರಿಕೆಗೆ ಕಳೆಯೇರಿಸುವನಾದರೂ ಈತನೇ. ಕೈಗಾರಿಕೆಯ ಉನ್ನತಿಯಾದರೂ ಈತನ ಬುದ್ಧಿವಂತಿಕೆಯಲ್ಲಿ ನಿಂತಿದೆ. ಆತನ ಮುಂದಾಲೋಚನೆ ಹಾಗೂ ಧೈರ್ಯಪೂರಿತ ವರ್ತನೆಯ ಮೇಲೆ ಕೈಗಾರಿಕೆಯ ಶ್ರೇಯಸ್ಸು ನಿಂತಿರುವದು. ಆದರೆ ಭಾರತ ಮಧ್ಯಸ್ಥಗಾರರು ಈ ಮೇಲಿನ ಶರತುಗಳನ್ನು ಎಷ್ಟರ ಮಟ್ಟಿಗೆ ಸಲ್ಲಿಸುವನೆಂಬುದು ವಿಚಾರಣೀಯ. ಭಾರತದಲ್ಲಿ ಈ ಮಧ್ಯಸ್ಥಗಾರಿಕೆಯು ಏಜಂಟರುಗಳಿಂದ ನಡಿಸಲ್ಪಡುತ್ತಿದೆ. ಈ ಏಜಂಟರುಗಳಿಗೆ ಕೈಗಾರಿಕಾ ಕೇಂದ್ರಗಳಲ್ಲಿ ಪಾಲಾಗಲೀ ಯಾ ಇತರ ಸಂಬಂಧವಾಗಲೀ ಇರುವದು ಕಡಿಮೆ. ಆದ್ದರಿಂದ ಈ ಏಜಂಟರುಗಳು ಕೈಗಾರಿ

ಳು ಹಿಟ್ಲರನ ಧೋರಣೆಯನ್ನು ಅರಿಯಲಾರದಾಗಿವೆ.

ಈಗ ಜಪಾನಿನಲ್ಲಿ ಉಪಸ್ಥಿತವಾಗಿರುವ ಗೊಂದಲವಾದರೂ ಹಿಟ್ಲರನ ಕೈವಾಡದಿಂದಯೆನ್ನಲಡ್ಡಿಯಿಲ್ಲ. ಇಂದು ಅವನು ಇಟಲಿ ಮತ್ತು ಜಪಾನುಗಳನ್ನು ಮುಂದೆ ಮಾಡಿಕೊಂಡು ಇಡೀ ಜಗತ್ತನ್ನು ವಶಪಡಿಸಿಕೊಳ್ಳುವ ಹೆಬ್ಬಯಕೆಯಲ್ಲಿರುವನು. ಆತನ ಈ ಅಮೋಘ ಕಾರ್ಯದಲ್ಲಿ ಸಹಾಯಕರಾದ ಈ ರಾಷ್ಟ್ರಗಳಿಗೆ ಪ್ರತಿಫಲವಾಗಿ ಕೆಲವೊಂದು ರಾಷ್ಟ್ರಗಳನ್ನು ಆತನು ಬಿಟ್ಟುಕೊಡುವನು. ಇಟಲಿಯು ಅಲ್ಬೇನಿಯಾ ಮತ್ತು ಅಬಿಸೀನಿಯಾವನ್ನು ವಶಪಡಿಸಿಕೊಂಡಿದೆ. ಅದಕ್ಕೆ ಬೆಂಬಲವಾದರೂ ಹಿಟ್ಲರನದೇ. ಈಗ ಜಪಾನನ್ನು ಪೋಷಿಸುವ ಭಾರವನ್ನೂ ಮುಸಿನೋಲಿಯನನು ಹೊತ್ತಿರುವನು. ಹೀಗೆ ವಿವಿಧ ರಾಷ್ಟ್ರಗಳೊಡನೆ ಬಲೆನೆಯ್ದಿರುವ ಹಿಟ್ಲರನ ಈ ಧೋರಣೆಯೇ ಬ್ರಿಟಿಷ್ ರಾಜಕಾರಣಿಗಳನ್ನು ದಂಗುಬಡಿಸಿ ಮುನ್ನಡೆಯಲು ಮಾರ್ಗ ಕಾಣದಂತೆ ಮಾಡಿದೆ. ಬ್ರಿಟಿಷರನ್ನು ಸೈನ್ಯ ಶಕ್ತಿಯಿಂದ ಬಗ್ಗುಬಡಿಯಲು ಅಸಾಧ್ಯವೆಂದು ತಿಳಿದ ಹಿಟ್ಲರನು ಈಗ ಮಾನಸಿಕ ಶಕ್ತಿಯನ್ನು ಉಪಯೋಗಿಸಿ ಬ್ರಿಟಿಷರ ಧೃತಿಗೆಡಿಸುವನು. ಹೀಗೆ ಬ್ರಿಟಿಷರ ಚಿತ್ತದಲ್ಲಿ ವೈಪರೀತ್ಯವನ್ನು ಕಲ್ಪಿಸಿ ಅವರ ಒಗ್ಗಟ್ಟನ್ನು ಮುರಿದು ಸಂದರ್ಭ ಸಿಕ್ಕಿದಲ್ಲಿ ಥಕ್ಕನೆ ನುಗ್ಗಿ ಬಡಿಯಲು ಯತ್ನಿಸಿರುವನು. ಹಿಟ್ಲರನ ಈ ಉಪಾಯವಾದರೂ ಹೇಗೆ ನಡೆದೀತೆಂಬುದು ನಿರೀಕ್ಷಣೀಯ.

ಕಾ ಕೇಂದ್ರವು ತಮ್ಮ ಸಂಸ್ಥೆಯೇ ಆಗಿದೆ ಎಂಬ ದೃಷ್ಟಿಯಿಂದ ಕೆಲಸ ಮಾಡಲಾರರು. ಈ ಕೈಗಾರಿಕಾ ಕೇಂದ್ರಗಳು ಸಾಮಾನುಗಳ ವಿಚಾರ ಶೋಧನೆ ಮಾಡಿ ಹೊಸ ಮಾದರಿಗಳನ್ನು ತಯಾರಿಸಲು ಸಂಶೋಧಕರನ್ನು ನೇಮಿಸಿಲ್ಲ. ಹೆಚ್ಚೇಕೆ? ಭಾರತ ಕೈಗಾರಿಕೋನ್ನತಿಯ ದೃಷ್ಟಿಯಿಂದ ಶ್ರಮಿಸುವ ಏಜಂಟರೇ ಇಲ್ಲವೆನ್ನಬಹುದು. ಆದ್ದರಿಂದ ಕೈಗಾರಿಕೆಯಲ್ಲಿ ಜನತೆಗೆ ಆಶೆಯಿಲ್ಲ. ಅಂದ ಮೇಲೆ ಕೈಗಾರಿಕೆಯು ಮುಂದುವರಿಯದಿರುವುದು ವಿಶೇಷವಲ್ಲ.

ಕಡೆಯದಾಗಿ ಕೈಗಾರಿಕೆಯ ಅಭಿವೃದ್ಧಿಗೆ ಸರ್ಕಾರವು ಹೇಗೆ ಸಹಾಯ ಮಾಡುತ್ತಿದೆ? 1922 ರ ವರೆಗೆ ಇಂಡಿಯಾ ಸರಕಾರವು ಕೈಗಾರಿಕೆಯೆಡೆಗೆ ಕಣ್ಣೆತ್ತಿ ನೋಡಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ಆದರೆ ಇತ್ತಲಾಗಿ ದೇಶದಲ್ಲಿ ಕೈಗಾರಿಕೆಯನ್ನು ಪ್ರೋತ್ಸಾಹಿಸುವ ಬಗ್ಗೆ ಮನಸ್ಸು ಮಾಡಿರುವದೆಂದು ಘೋಷಿಸುತ್ತಿದೆ. ಆದರೆ ಭಾರತದಲ್ಲಿ ಗ್ಲಾಸು ಹಾಗೂ ಉಣ್ಣೆ ಸಾಮಾನಿನ ಕೈಗಾರಿಕೆಯ ಬಗ್ಗೆ ಇದಕ್ಕೆ ಬೇಕಾದ ಕಚ್ಚಾ ಮಾಲುಗಳಿಲ್ಲವೆಂಬ ಕಾರಣದಿಂದ ಭರವಸೆಯನ್ನು ಕೊಡದೆ ಸರ್ಕಾರವು ನಿರಾಕರಿಸಿತು. ಭಾರತ ಕೈಗಾರಿಕೆಯ ಹಿತದೃಷ್ಟಿಯೆಂಬ ನೋಗಿನಿಂದ ಬ್ರಿಟನಿನಿಂದ ಯಂತ್ರ ಸಾಮಗ್ರಿಗಳನ್ನೂ, ಇತರ ಅವಶ್ಯಕತೆಗಳನ್ನೂ ತರುವ ನಿಮಿತ್ತ ಅವುಗಳ ನೋಲಿನ ಕಂದಾಯವನ್ನು ಕಡಿಮೆ ಮಾಡಿ ಇಂಡಿಯಾವನ್ನು ಇನ್ನೊಂದು ವಿಧದಲ್ಲಿ ಬ್ರಿಟನರ ಸಂತೆಯಾಗಿ ಮಾಡಿದೆ. ಇದೇ ಅಲ್ಲ; ಬ್ರಿಟಿಷ್ ಸಾಮ್ರಾಜ್ಯಶಾಹಿಯ ಮರೆಯಲ್ಲಿ ನಿಂತು ಅನೇಕ ರಾಷ್ಟ್ರಗಳು ತಮ್ಮ ಸಾಮಾನುಗಳನ್ನು ಭಾರತದಲ್ಲಿ ತುಂಬಿ ಇಲ್ಲಿಯ ಕೈಗಾರಿಕೆಯ ಕತ್ತುಹಿಸುಕುತ್ತಿವೆ. ಸೂಕ್ಷ್ಮವಾಗಿ ಹೇಳುವದಾದರೆ ನಮ್ಮ ಸರಕಾರವು ಜನಾಂಗದ ಸರಕಾರವಲ್ಲ. ಅದು ಭಾರತ ಕೈಗಾರಿಕೆ ಮುಂದರಿಯಬೇಕೆಂಬ ದೃಷ್ಟಿಯಿಂದ ವರ್ತಿಸುತ್ತಿಲ್ಲ. ಜರ್ಮನಿಯ, ಜಪಾನು ಸರಕಾರಗಳು ತಮ್ಮ ಕೈಗಾರಿಕೋನ್ನತಿಗೆ ಎಂಥಾ ಅವಿಚಲ ಶ್ರಮಪಟ್ಟವೋ ಅಂಥಾ ತೊಂದರೆಯನ್ನು ನಮ್ಮ ಈ ಸಾಮ್ರಾಜ್ಯಶಾಹಿಯು ತೆಗೆದುಕೊಳ್ಳುವಂತಿಲ್ಲ. ಅಂಥಾ ತೊಂದರೆಯನ್ನು ತೆಗೆದುಕೊಳ್ಳದ ವಿನಹ ಭಾರತ ಕೈಗಾರಿಕೆಯು ಅಭಿವೃದ್ಧಿಗೊಳ್ಳುವದಾದರೂ ಕನಸಿನ ಮಾತಾಗಿದೆ.

ಒಟ್ಟಾಗಿ ಹೇಳುವದಾದರೆ ಭಾರತ ಕೈಗಾರಿಕೆಯಲ್ಲಿ ಅನೇಕ ನ್ಯೂನತೆಗಳಿವೆ. ದೇಶದ ಜನತೆಯಲ್ಲಿ ಕೇವಲ ಅಲ್ಪ ಭಾಗವು ಮಾತ್ರ ಕೈಗಾರಿಕೆಗೆ ತೊಡಗಿರುವರು. ಈ ಅಲ್ಪ ಜನಸಂಖ್ಯೆಯಾದರೂ ಪರದೇಶಿ ಕಾರ್ಖಾನೆಗಳ ಬಲೆಗೆ ಬಿದ್ದು ಶ್ರಮಪಡುತ್ತಿರುವರು. ಬಂಡವಾಳವು ಸಾಲದು. ಇರುವ ಬಂಡವಾಳವಾದರೂ ಬ್ಯಾಂಕು ಯಾ ಇತರ ವಹಿವಾಟಿನ ಕ್ರಮವಿಲ್ಲದ್ದರಿಂದ ಯೋಗ್ಯೋಚಿತ ಉಪಯೋಗಿಸಲ್ಪಡುತ್ತಿಲ್ಲ. ಕೆಲಸಗಾರರಿದ್ದರೂ ನವೀನ ರೀತಿಯ ಕೆಲಸಕ ಅನುಭವವಿಲ್ಲ. ಮಧ್ಯಸ್ಥಗಾರರು ಸಂಕುಚಿತ ದೃಷ್ಟಿಯವರಾಗಿ ಕೈಗಾರಿಕೋನ್ನತಿಗೆ ಪ್ರೋತ್ಸಾಹವಿಲ್ಲ. ಸರಕಾರವು ಕೈಗಾರಿಕೆ ಅಭಿವೃದ್ಧಿಯ ವಿಚಾರ ಯಾವ ತೊಂದರೆಯನ್ನೂ ತೆಗೆಯುತ್ತಿಲ್ಲ. ಇವೆಲ್ಲದರ ಪರಿಣಾಮವೆಂದರೆ ಭಾರತ ಕೈಗಾರಿಕೆಯ ಅವನತಿ. ಇವನ್ನು ಸರಿಪಡಿಸುವ ಹಲವು ವಿಧಾನಗಳನ್ನು ಕ್ರಮೇಣ ಬರೆಯಲಾಗುವದು. ಮುಂದಿನ ವಾರ ಇಂಡಿಯಾ ದೇಶಿ ಮತ್ತು ಸೈನ್ಯದ ವಿಚಾರ ತರ್ಕಿಸಲಾಗುವದು.

ಗೌಡ ವಿದ್ಯಾಭಿವೃದ್ಧಿ ಸಂಘದ ಕಾರ್ಯನಿರ್ವಾಹಕ ಮಂಡಳಿಯಲ್ಲಿ ವಿನಂತಿ.

(ಸಿ. ಡಿ. ಮುತ್ತಣ್ಣಗೌಡರಿಂದ)

ಈ ಸಂಘವು ಸ್ಥಾಪಿಸಲ್ಪಟ್ಟು ಹಲವು ವರ್ಷಗಳಾದರೂ ಇದು ಉನ್ನತ ಸ್ಥಿತಿಗೆ ಬರದ ವಿಷಯಕ್ಕೂ; ಈ ಸಂಘಕ್ಕೆ ತಕ್ಕ ಸಹಾಯಗಳನ್ನು ಒದಗಿಸಿಕೊಳ್ಳುವ ಉಪಾಯವನ್ನು ಈ ಸಂಘದ ಕಾರ್ಯ ನಿರ್ವಾಹಕ ಸಭೆಯವರು ಯೋಚಿಸದ್ದಕ್ಕೂ ವಿಷಾದಿಸಬೇಕಾಗಿದೆ. ಈ ಸಂಘದಲ್ಲಿ ಶೇಕರಿಸಲ್ಪಟ್ಟ ಹಣವನ್ನು ಅನೇಕರಿಗೆ ಸಾಲವಾಗಿ ಕೊಟ್ಟು ಅದನ್ನು ಸರಿಯಾದ ರೀತಿಯಿಂದ ವಸೂಲಾತಿ ಮಾಡಿಸಿಕೊಳ್ಳದಿದ್ದುದರಿಂದ ಈ ಶೋಚನೀಯ ದುರವಸ್ಥೆಗೆ ಕಾರಣವೆನ್ನಬಹುದು.

ಈ ವರ್ಷದ ಮಹಾ ಸಭೆಯಲ್ಲಿ ಚುನಾಯಿಸಲ್ಪಟ್ಟ ಕಮಿಟಿ ಮೆಂಬರುಗಳೆಲ್ಲರೂ ಸಂಘದಲ್ಲಿ ಕೆಲಸ ಮಾಡಲು ಉತ್ಸಾಹಿಗಳಾದುದರಿಂದ ತಕ್ಕ ಕ್ರಮಗಳನ್ನನುಸರಿಸಿ ಬಾಕಿದಾರರುಗಳಿಂದ ವಸೂಲುಮಾಡಿ ಮಹಾ ಜನಗಳ ಕೃಪೆಗೆ ಪಾತ್ರರಾಗುವರೆಂದು ನಂಬುತ್ತೇನೆ. ಅಲ್ಲದೆ ಸಂಘದಲ್ಲಿ ಹಣ ಕಡಿಮೆಯಾಗಿರುವುದರಿಂದ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತಕ್ಕ ಸಹಾಯವನ್ನೊದಗಿಸಲು ಕಾರ್ಯಕಾರಿ ಮಂಡಳಿಯವರು ಮಹಾ ಸಭೆಯ ತೀರ್ಮಾನದಂತೆ ಪ್ರತಿಯೊಬ್ಬ ಗೌಡ ಜನಾಂಗದ ಗಂಡಸಿನಿಂದಲೂ, ಹೆಂಗಸಿನಿಂದಲೂ ತಲಾ ಒಂದರ ನಾಲ್ಕಾಣೆಯಂತೆ ಚಂದ ವಸೂಲು ಮಾಡಿಯೂ, ಸಂಘಕ್ಕೆ ಸಮ್ಬಂಧಪಟ್ಟ ಕಟ್ಟಡಗಳ ಬಾಡಿಗೆಯನ್ನು ತಿಂಗಳು ವಾರು ವಸೂಲು ಮಾಡುವುದರಿಂದಲೂ, ಉದ್ಯೋಗಸ್ಥರ ಸಂಬಳದಲ್ಲಿ ವರ್ಷಕ್ಕೆ ಇಂತಿಷ್ಟೆಂದೂ, ಕಣಗಾಲದಲ್ಲಿ ರೈತರಿಂದ ಇಂತಿಷ್ಟೇ ಭತ್ತವೆಂದೂ, ಮದುವೆ ಮುಂತಾದ ಶುಭಾಶೋಭನಗಳಲ್ಲಿ ಇಂತಿಷ್ಟು ಮೊಬಲಗನ್ನು ಸಂಘಕ್ಕೆ ಒಪ್ಪಿಸಬೇಕೆಂದೂ ನಿರ್ಧರಿಸಿ ಆಯಾಯ ನಾಡಿನಿಂದ ಚುನಾಯಿಸಲ್ಪಟ್ಟ ಮೆಂಬರನಿಗೆ ವಸೂಲು ಮಾಡುವ ಅಧಿಕಾರವನ್ನು ಕೊಟ್ಟು ಹಣ ಶೇಖರಿಸುವದಲ್ಲದೆ, ಸರ್ಕಾರದವರ ಅನುಮತಿ ಮೇರೆ ಒಂದು ಲಾಟ್ರಿಯನ್ನು ಸಹ ಏರ್ಪಡಿಸಿ ವಸೂಲಿಯ ಅರ್ಧ ಭಾಗವನ್ನು ಸಂಘಕ್ಕಿಟ್ಟು ಉಳಿದುದನ್ನು ಇನಾಂ ರೂಪದಲ್ಲಿ ಹಂಚುವ ಏರ್ಪಾಡಿನ ಮೇಲೂ ಹಣವನ್ನು ಎತ್ತಾವಳಿ ಮಾಡಿ ಬಡ ವಿದ್ಯಾರ್ಥಿಗಳಿಗ ವೇತನವಾಗಿ ಕಲ್ಪಿಸಿಕೊಟ್ಟು ಅವರ ವ್ಯಾಸಂಗಕ್ಕೆ ಅನುಕೂಲವನ್ನುಂಟು ಮಾಡಬಹುದು.

ತಾ. 18-6-39ರಲ್ಲಿ ಈ ಸಂಘದ ಕಮಿಟಿ ಮೀಟಿಂಗು ಜರುಗಿದಾಗ ನೆರೆ ಪ್ರಾಂತ್ಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ನಾಲ್ಕು ವಿದ್ಯಾರ್ಥಿ,ವಿದ್ಯಾರ್ಥಿನಿಗಳ ಅರ್ಜಿಗಳು ಸಂಘದ ಸ್ಕಾಲರ್‌ಶಿಪ್ಪನ್ನು ದಯಪಾಲಿಸಬೇಕೆಂದು ಕೇಳಿಕೊಂಡಿವೆ. ಅದರೆ ಇವರಲ್ಲಿ (1) ಶ್ರೀಮತಿ ಚೆನ್ನಮ್ಮನವರು ಕಳೆದ ವರ್ಷ ಸ್ಕೂಲ್‌ಫೈನಲ್ ತೇರ್ಗಡೆಯಾಗಿ ಈ ಸಂಘದ ಸ್ಕಾಲರ್‌ಶಿಪ್ಪನ್ನು ಪಡೆದು ಗವರ್ನ್‌ಮೆಂಟ್ ಆಯುರ್ವೇದಿಕ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಾ ಮೊದಲನೆಯ ಅಂತಸ್ತನ್ನು ದಾಟಿದವರು. ಆದುದರಿಂದ ಇವರ ಸ್ಕಾಲರ್‌ಶಿಪ್ಪನ್ನು ಇವರ ಕೋರಿಕೆ ಮೇರೆ ಮುಂದುವರಿಸಬೇಕು. (2) ಕುಜಾಲಿಯಂಡ ಪಿ. ಜೋಪಣ್ಣನವರು ಮೆಡಿಕಲ್ ಕಾಲೇಜಿಗೆ ವ್ಯಾಸಂಗಕ್ಕೆ ಹೋಗುವವರು. ಇವರು ಈ ವರ್ಷ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದವರು. ನಮ್ಮ ಜನಾಂಗದಲ್ಲಿ ಈ ವರೆಗೆ ಯಾರೂ ಡಾಕ್ಟರುಗಳಿಲ್ಲದ್ದರಿಂದ ಇವರು ತಮ್ಮ ವ್ಯಾಸಂಗವನ್ನು ಪೂರ್ತಿಗೊಳಿಸುವ ವರೆಗೆ ಸಂಘದಿಂದ ಕನಿಷ್ಟಪಕ್ಷ 150 ರೂ.ಗಳ ಸ್ಕಾಲರ್‌ಶಿಪ್ಪನ್ನು ದಯಪಾಲಿಸಿ ಅವರ ವ್ಯಾಸಂಗಕ್ಕೆ ಅನುಕೂಲ ಮಾಡಿಸಬೇಕಾಗಿದೆ. ಮೀಟಿಂಗಿನಲ್ಲಿ ಅರ್ಜಿಗಳನ್ನು ವಿಮರ್ಶಿಸುವಾಗ ಕೆಲವು ಮೆಂಬರುಗಳು ಈ ವಿದ್ಯಾರ್ಥಿಯ ತಂದೆಯವರು ಅನುಕೂಲಸ್ಥರೆಂದೂ ಸಗ್ಗೆರೆ ಘೋಷಿಸಿ ಮಾತಾಡಿದರು. ಆದರೆ ಈ ವಿದ್ಯಾರ್ಥಿಯ ಅಣ್ಣನು ಈ ವರ್ಷ ಮೈಸೂರು ಯೂನಿವರ್ಸಿಟಿಯಲ್ಲಿ ಬಿ. ಎ. ಆನರ್ಸ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಬಿ. ಟಿ. ಪರೀಕ್ಷೆಗೆ ಹೋಗುವುದರಿಂದಲೂ ಈತನ ಸಹೋದರನು ಶಿವಮೊಗ್ಗ ಹೈಸ್ಕೂಲಿನಲ್ಲಿ IV ಫಾರಂನಲ್ಲಿ ವ್ಯಾಸಂಗ ಮಾಡುವುದರಿಂದಲೂ ತಂದೆಗೆ ಬಹು ತೊಂದರೆಗಳುಂಟೆಂದು ಭಾವಿಸಬೇಕು. (3) ಬಿ. ಅಪ್ಪಯ್ಯನವರು ಸೀನಿಯರ್ ಇಂಟರ್‌ಮೀಡಿಯೇಟ್ ತರಗತಿಯಲ್ಲಿ ಓದುವವರು. ಇವರು ಬಡ ಕುಟುಂಬದವರು. ಆದುದರಿಂದ ಇವರು ಕೇಳುವ ಮೊಬಲಗಿನಲ್ಲಿ ½ ಭಾಗವನ್ನಾದರೂ ಸಂಘವು ದಯಪಾಲಿಸಬೇಕು. (4) ಶ್ರೀಮತಿ ಪಾರ್ವತಿಯವರು ಕಳೆದ ವರ್ಷ ಈ ಸಂಘದ ಸ್ಕಾಲರ್‌ಶಿಪ್ಪಿನಿಂದ ಸಂಗೀತ, ಕಸೂತಿ ಮೊದಲಾದುವುಗಳಲ್ಲಿ ಪಾಂಡಿತ್ಯವನ್ನು ಪಡೆಯುತ್ತಿರುವವರು. ಇವರು ಇನ್ನು ಒಂದು ವರ್ಷದಲ್ಲಿ ತಮ್ಮ ಪಾಂಡಿತ್ಯವನ್ನು ಮುಗಿಸುವುದರಿಂದ ಇವರಿಗೆ ಕಳೆದ ವರ್ಷ ಕೊಟ್ಟಷ್ಟಾದರೂ ಹಣವನ್ನು ಕೊಟ್ಟು ಈ ನಾಲ್ಕು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲಪಡಿಸಬೇಕಾಗಿ ಜನಾಂಗದ ಪರವಾಗಿ ಕಾರ್ಯಕಾರಿ ಮಂಡಳಿಯವರಲ್ಲೂ, ಸಂಘದ ಅಧ್ಯಕ್ಷರಲ್ಲೂ ಅರಿಕೆ ಮಾಡಿರುತ್ತೇನೆ.

ಕೊಡಂದೇರ ಡಿ. ಮಾಚಯ್ಯ,

L. D. Sc. (COLLEGE OF DENTISTRY)

EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 4

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

Tutorial School, Mercara.

To meet with a long-standing necessity, we have just opened a School where tuition in shorthand, Type-writing and Book-keeping will be given on most upto-date lines. The classes will for the present be held in the upstairs of Mr. Kongatteera P. Appayya's new building, near the bus stand.

Regular classes will begin from 5th July. As accomodation is limited, intending candidates will do well to reserve seats beforehand.

WANTED a clerk, prefarably with a knowledge of Typing and accounts.

The Manager,
Tutorial School,
Mercara.

52—2

ಕೊಡಗು

ಜೂನ್ ತಾರೀಖು ೩೦ ನೇ ಶುಕ್ರವಾರ ೧೯೩೯.

ಅಖಿಲ ಭಾರತ ಕಾಂಗ್ರೆಸ್ ಕಮಿಟಿ ಮೀಟಿಂಗು.

ತ್ರಿಪುರಿ ಕಾಂಗ್ರೆಸ್ ಮಹಾ ಸಭೆಯ ನಂತರ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಎರಡನೇ ಮೀಟಿಂಗು ಈ ತಾ. 24ರಿಂದ 27ರ ವರೆಗೆ ಬೊಂಬಾಯಿಯಲ್ಲಿ ನಡೆಯಿತು. ಕಳೆದ ತಿಂಗಳಲ್ಲಿ ಕಲ್ಕತ್ತಾದಲ್ಲಿ ನಡೆದ ಈ ಸಮಿತಿಯ ಪ್ರಥಮ ಮೀಟಿಂಗಿನಲ್ಲಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀಯುತ ಸುಭಾಸ್‌ಚಂದ್ರಬೋಸ್‌ರವರು ರಾಜಿನಾಮೆ ಕೊಟ್ಟ ಗಡಿಬಿಡಿಯ ಕಾರಣದಿಂದ ಆ ಮೀಟಿಂಗಿನಲ್ಲಿ ಪ್ರಾಮುಖ್ಯ ಸಂಗತಿಗಳನ್ನು ಚರ್ಚಿಸಲು ಸಾಧ್ಯವಾಗಲಿಲ್ಲ. ಆದುದರಿಂದ ಪುನಹ ಇಷ್ಟು ಬೇಗನೆ ಬೊಂಬಾಯಿಯಲ್ಲಿ ಸೇರಿದ್ದಾಗಿದೆ. ಈ ಸಭೆಯಲ್ಲಿ ಹಲವು ಮುಖ್ಯ ವಿಷಯಗಳು ಚರ್ಚೆಯಾಗಿ ತೀರ್ಮಾನಿಸಲ್ಪಟ್ಟವು. ಅವುಗಳಲ್ಲಿ ಕಾಂಗ್ರೆಸ್ಸಿನ ಶುದ್ಧೀಕರಣ ಮತ್ತು ಪ್ರಾಂತೀಕ ಕಾಂಗ್ರೆಸ್ ಕಮಿಟಿಗಳಿಗೂ, ಕಾಂಗ್ರೆಸ್ ಮಂತ್ರಿಗಳಿಗೂ ಇರಬೇಕಾದ ಸಂಬಂಧ—ಇವುಗಳನ್ನು ಕುರಿತ ಗೊತ್ತುವಳಿಗಳು ವಿಶೇಷ ಪ್ರಾಮುಖ್ಯತೆಯುಳ್ಳವಾದ ಕಾರಣ ಇವುಗಳನ್ನು ಕುರಿತು ನಾಲ್ಕಾರು ಮಾತುಗಳನ್ನು ಹೇಳಬೇಕಾಗಿದೆ.

ಇಂಡಿಯಾ ಸರ್ಕಾರದ 1935ನೇ ಇಸವಿಯ ಆಕ್ಟಿನ ಸುಧಾರಣೆಗಳನ್ನು ಜಾರಿಗೆ ತರುವ ಕಾಲದಲ್ಲಿ ಕಾಂಗ್ರೆಸ್ಸಿನವರು ಕೌನ್ಸಿಲ್ ಪ್ರವೇಶವನ್ನು ನಿಶ್ಚಯಿಸಿ, ಚುನಾವಣೆಗೆ ನಿಂತಲ್ಲಿ 11ರ ಪೈಕಿ 7 ಪ್ರಾಂತ್ಯಗಳಲ್ಲಿ ಬಹುಮತವನ್ನು ಪಡೆದರು. ಸ್ವಲ್ಪ ಸಮಯದನಂತರ ಸರ್ಕಾರದ ರಚನೆಯನ್ನು ಮುರಿದು, ಕಾಂಗ್ರೆಸ್ಸಿನ ಶಕ್ತಿಯನ್ನು ಬೆಳೆಸುವ ಉದ್ದೇಶದಿಂದ ಅವರು ಅಧಿಕಾರ ಸ್ವೀಕಾರ ಮಾಡಲು ತೀರ್ಮಾನಿಸಿ, ಮಂತ್ರಿ ಮಂಡಳಿಗಳನ್ನು ರಚಿಸಿದರು. ಅಲ್ಲದೆ ಜಿಲ್ಲಾ ಬೋರ್ಡು, ಮುನ್ಸಿಪಾಲಿಟಿ, ಗ್ರಾಮ ಪಂಚಾಯಿತಿ ಮೊದಲಾದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೆ ನಿಂತು ಅವುಗಳ ಆಡಳಿತವನ್ನು ನಡಿಸುವಂತೆಯೂ ನಿರ್ಧರಿಸಿದರು. ಇದಕ್ಕೆ ದೇಶೀಯರ ಒತ್ತಾಸೆಯು ಚೆನ್ನಾಗಿ ದೊರೆತು ಕಾಂಗ್ರೆಸ್ ಪಕ್ಷದವರಿಗೆ ಜಯವು ದಿನೇ ದಿನೇ ಹೆಚ್ಚಾಯಿತು. ಇದರಿಂದ ತಮ್ಮ ಸ್ಥಾನಪದವಿಗಳನ್ನು ಕಳಕೊಂಡ ಕಾಂಗ್ರೆಸ್ಸಿನ ವಿರೋಧಿಗಳಾದ ಸ್ವಾರ್ಥಿಗಳು ಕಾಂಗ್ರೆಸ್ಸಿನೊಳನುಗ್ಗಲು ಪ್ರಾರಂಭಿಸಿದರು. ಸತ್ಯ, ಅಹಿಂಸೆ, ಖಾದಿ, ಅಸ್ಪೃಶ್ಯತಾ ನಿವಾರಣೆ, ನಿಷಾ ನಿಷೇಧ ಮೊದಲಾದ ಕಾಂಗ್ರೆಸ್ಸಿನ ಮುಖ್ಯ ತತ್ವಗಳಲ್ಲಿ ವಿಶ್ವಾಸವಿಲ್ಲದ ಇವರು ಬರೀ ಹೆಸರಿಗೆ ಮಾತ್ರ ಕಾಂಗ್ರೆಸು ಮೆಂಬರುಗಳಾಗಿ ಸೇರಿ, ನಿಜವಾದ ಕಾಂಗ್ರೆಸ್ ಕೆಲಸಗಾರರನ್ನು ಮೂಲೆಗೊತ್ತಿ ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರಕ್ಕೆ ಬರಲಾರಂಭಿಸಿದರು. ಇದರಿಂದ ತೋರಿಕೆಗೆ ಕಾಂಗ್ರೆಸ್ ಸದಸ್ಯರುಗಳ ಸಂಖ್ಯೆಯೇನೋ ಹೆಚ್ಚಾಯಿತು. ಆದರೆ ಕಾಂಗ್ರೆಸ್ಸಿನ ಶಕ್ತಿಯು ಹೆಚ್ಚಲಿಲ್ಲ. ಇಂಥಾ ಸ್ವಾರ್ಥಿಗಳ ಕಾರ್ಯ ಕಲಾಪಗಳಿಂದ ಕಾಂಗ್ರೆಸ್ಸಿನ ಕೀರ್ತಿಯು ಅಳಿಯುವಂತಾಯಿತು. ಚುನಾವಣೆಗಳಲ್ಲಿ ನ್ಯಾಯವಲ್ಲದ ರೀತಿಗಳನ್ನು ಕೈಕೊಂಡು ಪುಕಾರುಗಳಿಗೆ ಎಡೆ ಉಂಟು ಮಾಡಿದರು. ಇಂಥಾ ಪುಕಾರುಗಳು ಹಲವು ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ತಲಪಿದವು. ಇದು ಮಹಾತ್ಮಗಾಂಧಿಯವರನ್ನೂ, ಇತರ ಕಾಂಗ್ರೆಸ್ ಮುಂದಾಳುಗಳನ್ನೂ ತುಂಬಾ ಅಸಮಧಾನಗೊಳಿಸಿತು. ಆದುದರಿಂದ ತ್ರಿಪುರಿ ಕಾಂಗ್ರೆಸ್ ಮಹಾ ಸಭೆಯಲ್ಲಿ ಕಾಂಗ್ರೆಸನ್ನು ಶುದ್ಧೀಕರಿಸುವ ಉದ್ದೇಶದಿಂದ ಅದರ ರಚನೆಯಲ್ಲಿ ಬದಲಾವಣೆ ಮಾಡುವ ಅಧಿಕಾರವು ಅಖಿಲಭಾರತ ಕಾಂಗ್ರೆಸ್ ಕಮಿಟಿಗೆ ಕೊಡಲಾಯಿತು. ಅದೇ ಮೇರೆ ಈ ಉದ್ದಿಶ್ಯ ಒಂದು ಉಪಕಮಿಟಿಯು ನೇಮಿಸಲ್ಪಟ್ಟಿತು. ಈ ಉಪ ಕಮಿಟಿಯ ವರದಿಯನ್ನು ವರ್ಕಿಂಗ್ ಕಮಿಟಿಯವರು ಆಲೋಚಿಸಿ ಅಖಿಲಭಾರತ ಕಮಿಟಿಯ ಮುಂದಿಟ್ಟರು. ಅಲ್ಲಿ ಈ ವರದಿಯು ಅಲ್ಪ ಸ್ವಲ್ಪ ಬದಲಾವಣೆಗಳಿಂದ ಪಾಸಾಯಿತು. ಈ ಬದಲಾವಣೆಗಳಲ್ಲಿ ಮುಖ್ಯವಾದವು ಯಾವುವೆಂದರೆ— ಕಾಂಗ್ರೆಸ್ ಚುನಾವಣೆಗಳಲ್ಲಿ ಓಟಿನ ಹಕ್ಕು ಪಡೆಯಬೇಕಾದರೆ ಒಬ್ಬನು ಕಾಂಗ್ರೆಸ್ ಮೆಂಬರಾಗಿ 12 ತಿಂಗಳಾಗಿರಬೇಕು. ಕಾಂಗ್ರೆಸ್ ಕಮಿಟಿಯ ಮೆಂಬರಾಗಬೇಕಾದರೆ ಒಬ್ಬನು ಮೂರು ವರ್ಷಗಳಿಂದ ಕಾಂಗ್ರೆಸ್ ಮೆಂಬರಾಗಿರತಕ್ಕದ್ದು. ಇದರಿಂದ ಅಧಿಕಾರದ ಆಸೆಯಿಂದ ತತ್ಕಾಲಕ್ಕೆ ಮಾತ್ರ ಕಾಂಗ್ರೆಸ್ ಮೆಂಬರುಗಳಾಗಿ ಸೇರುವವರನ್ನು ತಡೆದಂತಾಗುತ್ತದೆ. ಈ ಬದಲಾವಣೆಗಳಿಂದಲೇ ಕಾಂಗ್ರೆಸ್ಸಿನ ಪೂರ್ಣ ಶುದ್ಧೀಕರಣವಾಗುವದೆಂದು ಹೇಳಲಾಗುವುದಿಲ್ಲ. ಇವು ಬಹುಮಟ್ಟಿಗೆ ಸಹಾಯ ಮಾಡಬಹುದು. ಇದರೊಂದಿಗೆ ಕಾಂಗ್ರೆಸ್ ಕೆಲಸಗಾರರು ಕಾಂಗ್ರೆಸ್ಸಿನ ಕೀರ್ತಿಯನ್ನು ಕಾಪಾಡಲು ಬಹಳ ಎಚ್ಚರಿಕೆಯಿಂದಲೂ, ಪ್ರಮಾಣಿಕತನದಿಂದಲೂ ಕೆಲಸ ಮಾಡಬೇಕು. ಪ್ರಾಥಮಿಕ ಮೆಂಬರುಗಳನ್ನು ಸೇರಿಸುವುದರಲ್ಲಿ ಜಾಗ್ರತೆಯಿಂದ ವರ್ತಿಸಬೇಕು.

ಕಾಂಗ್ರೆಸು ಪಕ್ಷದವರು ಅಧಿಕಾರಕ್ಕೆ ಬಂದಂದಿನಿಂದ ಕಾಂಗ್ರೆಸ್ಸಿನ ವಿರೋಧಿಗಳು ಕಾಂಗ್ರೆಸು ಮಂತ್ರಿ ಮಂಡಳಿಗಳ ಆಡಳಿತವನ್ನು ಸಿಕ್ಕಾಬಟ್ಟೆ ಟೀಕಿಸುತ್ತಿರುವುದು ಆಶ್ಚರ್ಯವೇನೂ ಅಲ್ಲ. ಕಾಂಗ್ರೆಸ್ಸಿನವರ ದೆಸೆಯಿಂದ ತಮ್ಮ ಅಧಿಕಾರ ಸ್ಥಳಗಳನ್ನು ಕಳಕೊಂಡವರು ಕಾಂಗ್ರೆಸ್ಸಿನ ಮೇಲೆ ಗದೆ ಎತ್ತಿರುವುದರ ಅರ್ಥವು ಎಲ್ಲರಿಗೂ ವೇದ್ಯವಾಗುತ್ತದೆ. ಆದರೆ ಕಾಂಗ್ರೆಸ್ಸಿನವರೊಳಗೇ ಕೆಲವರು ಮುಖ್ಯವಾಗಿ ಸಮತಾವಾದಿಗಳು ಯಾ ಎಡಪಕ್ಷದವರು ಕಾಂಗ್ರೆಸು ಮಂತ್ರಿಗಳ ಕಾರ್ಯಕಲಾಪಗಳನ್ನು ಮನಸೋ ಇಚ್ಛೆ ಟೀಕಿಸುತ್ತಿರುವುದು ಮಾತ್ರವಲ್ಲ; ಕೆಲವೆಡೆಗಳಲ್ಲಿ ಸತ್ಯಾಗ್ರಹವನ್ನೂ ಕೂಡ ಹೂಡಲೆತ್ನಿಸುವುದರಿಂದ ಕಾಂಗ್ರೆಸಿನ ಆಡಳಿತಕ್ಕೆ ಅಡಚಣೆ ಉಂಟಾಗುವುದಲ್ಲದೆ ಕಾಂಗ್ರೆಸು ಸಂಸ್ಥೆಯಲ್ಲಿ ಶಿಸ್ತು ಕಡಿಮೆಯಾಗಿ ಅದರ ಶಕ್ತಿಯು ಕುಂದುವದೆಂದು ಕಾಂಗ್ರೆಸು ಮುಂದಾಳುಗಳಿಗೆ ಮನವಟ್ಟಾಯಿತು. ಆದುದರಿಂದ ಕಾಂಗ್ರೆಸಿನವರ್‍ಯಾರೂ ಪ್ರಾಂತೀಕ ಕಾಂಗ್ರೆಸು ಕಮಿಟಿಯ ಅನುಮತಿ ಇಲ್ಲದೆ ವಯಕ್ತಿಕವಾಗಿ ಸತ್ಯಾಗ್ರಹ ಹೂಡುವದಾಗಲಿ, ಸತ್ಯಾಗ್ರಹ ಚಳವಳಿ ನಡಿಸಲು ಸಹಾಯ ಮಾಡುವದಾಗಲಿ ಕೂಡದೆಂದೂ, ಕಾಂಗ್ರೆಸು ಮಂತ್ರಿ ಮಂಡಳಿಗಳು ಮತ್ತು ಪ್ರಾಂತೀಕ ಕಾಂಗ್ರೆಸು ಕಮಿಟಿಗಳು ಪರಸ್ಪರ ವಿಶ್ವಾಸದಿಂದ ವರ್ತಿಸಬೇಕಲ್ಲದೆ, ಕಾಂಗ್ರೆಸು ಕಮಿಟಿಗಳು ಮಂತ್ರಿ ಮಂಡಳಿಗಳ ಕಾರುಬಾರುಗಳಿಗೆ ಅಡ್ಡಿ ಬರುವದಾಗಲೀ, ಮಂತ್ರಿಗಳ ಆಡಳಿತವನ್ನು ಬಹಿರಂಗವಾಗಿ ಟೀಕಿಸುವುದಾಗಲೀ ಕೂಡದೆಂದೂ ಅ. ಭಾ. ಕಾಂಗ್ರೆಸು ಕಮಿಟಿಯವರು ತೀರ್ಮಾನಿಸಿರುವುದು ಯೋಗ್ಯವಾಗಿದೆ. ಕಾಂಗ್ರೆಸ್ಸಿನ ಆಡಳಿತವನ್ನು ಜಯಪ್ರದ ಮಾಡುವುದು ಪ್ರತಿಯೊಬ್ಬ ಕಾಂಗ್ರೆಸಿನವನ ಕರ್ತವ್ಯವಾಗಿದೆ. ಆ ಕಾರಣ ಕಾಂಗ್ರೆಸ್ಸಿನವರೆಲ್ಲಾ ಕಾಂಗ್ರೆಸು ಅಧಿಕಾರಿಗಳಿಗೆ ಎಲ್ಲಾ ವಿಧದಲ್ಲಿಯೂ ಸಹಾಯವನ್ನೀಯಬೇಕಲ್ಲದೆ ಅವರ ಕೆಲಸ ಕಾರ್ಯಗಳಿಗೆ ಅಡ್ಡಿ ತರುವುದು ಸರಿಯಲ್ಲ. ಕಾಂಗ್ರೆಸು ಮಂತ್ರಿಗಳ ವರ್ತನೆಯನ್ನು ಬಹಿರಂಗವಾಗಿ ಟೀಕಿಸುವುದರಿಂದ ಕಾಂಗ್ರೆಸ್ಸಿನ ವಿರೋಧಿಗಳಿಗೆ ಬೆಂಬಲವಿತ್ತಂತಾಗುವುದು. ಕಾಂಗ್ರೆಸ್ಸಿನ ಆಡಳಿತದಲ್ಲಿ ಕುಂದು ಕೊರತೆಗಳು ಕಂಡು ಬಂದರೆ ಅವುಗಳನ್ನು ಕಾಂಗ್ರೆಸು ಪಾರ್ಲಿಮೆಂಟರಿ ಬೋರ್ಡಿನ ಮೂಲಕ ಹೋಗಲಾಡಿಸಿಕೊಳ್ಳಬಹುದು. ಹೇಗೂ ಕಾಂಗ್ರೆಸು ಪಕ್ಷದವರು ಆಡಳಿತ ವಿಚಾರದಲ್ಲಿ ಪರೀಕ್ಷಾರ್ಥವಾಗಿ ಮಾಡುತ್ತಿರುವ ಪ್ರಯತ್ನಕ್ಕೆ ಎಲ್ಲರೂ ಬೆಂಬಲವನ್ನು ಕೊಟ್ಟು, ಅದನ್ನು ಜಯಪ್ರದವಾಗಿ ಮಾಡಿ ಕಾಂಗ್ರೆಸು ಸಂಸ್ಥೆಯ ಶಕ್ತಿಯನ್ನೂ, ಕೀರ್ತಿಯನ್ನೂ ಹೆಚ್ಚಿಸಲು ಸಹಾಯಕರಾಗುವರಾಗಿ ಆಶಿಸುತ್ತೇವೆ.

ಅಖಿಲಭಾರತ ಕಾಂಗ್ರೆಸ್ ಕಮಿಟಿ.

ಪಾಸಾದ ಪ್ರಾಮುಖ್ಯ ಠರಾವುಗಳು.

ವರ್ಕಿಂಗ್ ಕಮಿಟಿಯವರು ಕಾಂಗ್ರೆಸಿನ ರಚನೆಯ ಉಪಸಮಿತಿಯವರು ರಚನೆಯ 7 ನೆಯ ಪ್ರಕರಣದ ವಿಷಯವಾಗಿ ಮಾಡಿದ ತಿದ್ದುಪಡಿಯ ಸಲಹೆಯನ್ನು ಅಂಗೀಕರಿಸಿರುವರು. 'ಚುನಾವಣೆಯ ಕ್ರಮದ ಮಾರ್ಪಾಡೂ, ದೇಶವನ್ನು ವಿವಿಧ ಪ್ರದೇಶವಾರು (ಟೆರಿಟೋರಿಯಲ್) ಓಟುದಾರರ ಮಂಡಲಿಗಳಾಗಿ ರಚನೆಮಾಡುವುದೂ, ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಸಮಿತಿಯ ಸದಸ್ಯರ ಚುನಾವಣೆಯಲ್ಲಿ ಮೂರರಲ್ಲಿ ಎರಡು ಪಾಲು ಜನರನ್ನು ಇನ್ನು ಮುಂದೆ ಚುನಾವಣೆಮಾಡುವಾಗ ಬೊಂಬಾಯಿ, ದೆಹಲಿ ಮತ್ತು ಅಜ್ಮೀರ್-ಮೇರ್‍ವಾರಾ ಪ್ರಾಂತ್ಯಗಳ ವಿನಾ ಇತರ ಎಲ್ಲಾ ಪ್ರಾಂತ್ಯಗಳಲ್ಲಿ 'ಸಿಂಗಲ್ ಡಿಸ್ಟ್ರಿಬ್ಯೂಟಿವ್ ಓಟ್'ನಿಂದಲೇ ಆರಿಸಿಕೊಳ್ಳಬೇಕೇ ಹೊರತು 'ಸಿಂಗಲ್ ಟ್ರಾನ್ಸ್‌ಫರಬಲ್ ಓಟ್'ನಿಂದ ಅಲ್ಲವೆಂಬುದೂ' ಆ ಉಪಸಮಿತಿಯವರು 7 ನೆಯ ಪ್ರಕರಣದಲ್ಲಿ ಮಾಡಿದ ತಿದ್ದುಪಡಿಯಾಗಿದೆ.

'ಹಿಂದೂದೇಶಕ್ಕೆ ನೆರೆಯವರೂ ಆ ದೇಶದವರೊಂದಿಗೆ ಸಾಂಸ್ಕೃತಿಕ ಸಂಬಂಧಾದಿಗಳುಳ್ಳವರೂ ಆದ ಸಿಲೋನ್ ದೇಶದವರ ಸರ್ಕಾರದ ಅಧಿಕಾರಿಗಳು ತಮ್ಮ ದೇಶಕ್ಕೆ ಆಮದಾಗಿ ಬರುವ ಹಿಂದೂ ದೇಶದ ಅಕ್ಕಿಯ ಮೇಲೆ ತೆರಿಗೆ ಹಾಕಿದ್ದೂ ಮತ್ತು 20,000 ಮಂದಿ ಭಾರತೀಯರನ್ನು ಆ ದ್ವೀಪದಿಂದ ಹೊರಡಿಸಿಬಿಟ್ಟದ್ದೂ ಕಾರ್ಯಕಾರಿ ಸಮಿತಿಯವರ ಜತೆಯಲ್ಲಿದ್ದ ಗಾಂಧಿಜೀಯವರಿಗೆ ದುಃಖಪೂರಿತವಾದ ನಿರಾಶೆಯನ್ನು ಹುಟ್ಟಿಸಿತು. ಈ ವಿಚಾರ ಸಿಲೋನ್ ಸರ್ಕಾರದವರೊಡನೆ ವಿಚಾರಿಸಲು ಪಂಡಿತ ಜವಾಹರಲಾಲ್ ನೆಹರೂಯವರು ಕಾಂಗ್ರೆಸ್ ಪಕ್ಷದವರ ಪರವಾಗಿ ರಾಯಭಾರಿಗಳಾಗಿ ಸಿಲೋನ್ ದೇಶಕ್ಕೆ ಹೋಗುವರು.

ಮಹಾತ್ಮ ಗಾಂಧಿಯವರು ದೇಶೀಯ ಸಂಸ್ಥಾನಗಳಿಗೆ ಕೊಟ್ಟ ಆ ಪ್ರಸಿದ್ಧ ಸಂದೇಶವನ್ನು ಸಹ ಕಾಂಗ್ರೆಸ್ ಸಭೆಯವರು ಅಂಗೀಕರಿಸಿದರು.

ಮೆಂಬರುಗಳ ಅರ್ಹತೆಯ ವಿಚಾರದಲ್ಲಿ ಒಬ್ಬರು ಕಾಂಗ್ರೆಸ್ಸಿನಲ್ಲಿ ಅವಿಚ್ಛಿನ್ನವಾಗಿ ಮೂರು ವರ್ಷಕಾಲ ಸದಸ್ಯರಾಗಿದ್ದರೆ ಮಾತ್ರ ಅವರು ಕಾಂಗ್ರೆಸ್ ಅಧಿವೇಶನಕ್ಕೆ ಪ್ರತಿನಿಧಿಯಾಗುವುದು ಇಲ್ಲವೆ ಪ್ರಾಂತ್ಯ ಅಥವಾ ಜಿಲ್ಲಾ ಕಾಂಗ್ರೆಸ್ ಸಮಿತಿಯಲ್ಲಿ ಸದಸ್ಯನಾಗುವುದೂ ಸಾಧ್ಯವು. ಆದರೆ ಇವರು ಚುನಾವಣೆಯಾಗುವ ಕಾಲದಲ್ಲಿ ಇದೇ ವಿಧವಾದ ಇತರ ಕಾಂಗ್ರೆಸ್ ಉಪಸಮಿತಿಗಳ ಸದಸ್ಯರಾಗಿ ಇರಕೂಡದು. ಈ ಷರತ್ತುಗಳಿಂದ ಒಬ್ಬರನ್ನು ಬಿಡುಗಡೆಮಾಡಿ ಅವರು 1939 ಮತ್ತು 1940 ನೆಯ ವರ್ಷಗಳ ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶ ಮಾಡಿಕೊಡುವ ಹಕ್ಕು ಪ್ರಾಂತ್ಯದ ಕಾಂಗ್ರೆಸ್ ಸಭೆಯ ಕಾರ್ಯಕಾರಿಸಮಿತಿಯವರಿಗೆ ಇರುವುದು.

ಈ ಪ್ರಕರಣಕ್ಕೆ ಮಿ. ಮೋಹನಲಾಲ್ ಗೌತಮರವರು ಒಂದು ತಿದ್ದುಪಡಿಯನ್ನು ಮಾಡಿದರು—'ವಿದೇಶೀ ವಸ್ತ್ರಗಳು ಮತ್ತು ಬ್ರಿಟಿಷ್ ಸರಕುಗಳ ಇಲ್ಲವೆ ಬಂದ, ಸರಾಯಿ ಮುಂತಾದವುಗಳ ವ್ಯಾಪಾರ ಮಾಡುವವರೂ, ಮದ್ಯಪಾನ ಮಾಡುವ ಅಭ್ಯಾಸವುಳ್ಳವರೂ ಕಾಂಗ್ರೆಸ್ ಸದಸ್ಯರಾಗಿರುವ ಹಕ್ಕುಳ್ಳವರಲ್ಲ.' ಈ ತಿದ್ದುಪಡಿಯು ಬಹುಮತದಿಂದ ಮಂಜೂರಾಯಿತು.

6 ನೆಯ ಪ್ರಕರಣದಲ್ಲಿ 'ಒಂದು ಲಕ್ಷ ಜನರಿಗೆ ಒಬ್ಬ ಪ್ರತಿನಿಧಿಯು ಕಾಂಗ್ರೆಸ್ ಅಧಿವೇಶನಕ್ಕೆ ಬರಬೇಕು' ಎಂಬ ಸಲಹೆಯು ಕೂಡ ಮಂಜೂರಾಯಿತು.

ವರ್ತಮಾನ ಸಂಗ್ರಹ.

ಒಳದೇಶ.

ಸಹಕಾರಿ ಇಲಾಖೆಯ ಉದ್ಯೋಗಸ್ಥರು ಮತ್ತು ಸಹಕಾರಿ ಸಂಸ್ಥೆಗಳ ಮೇಲುಸ್ತುವಾರಿಯೂ ಆಡಿಟ್ ಮಾಡುವವರು ವಿನಹ ಉಳಿದ ಸರ್ಕಾರಿ ಉದ್ಯೋಗಸ್ಥರು ಅವರು ಕೆಲಸ ಮಾಡುತ್ತಿರುವ ಕಾರ್ಯಕ್ಷೇತ್ರದೊಳಗೆ ಪತ್ತಿನದಲ್ಲದ (ನಾನ್‌ಕ್ರೆಡಿಟ್) ಸಂಘಗಳ ಕಾರುಬಾರುಗಳಲ್ಲಿ ಭಾಗವಹಿಸಬಹುದೆಂದು ಚೀಫ್ ಕಮಿಷನರು ಹುಕುಂ ಮಾಡಿರುವರಾಗಿ ತಿಳಿಯಬರುತ್ತದೆ.

ಮಡಿಕೇರಿ.

ಇಲ್ಲಿಯ ಕಾನ್ವೆಂಟು ಹೈಸ್ಕೂಲು ಮಳೆಗಾಲದ ರಜೆಗಾಗಿ ನಾಳೆಯಿಂದ ಒಂದು ತಿಂಗಳ ವರೆಗೆ ಮುಚ್ಚಲ್ಪಡುವುದೆಂದು ತಿಳಿಯುತ್ತೇವೆ.

ಸಿವಿಲ್ ಸರ್ಜನರು 10 ದಿನ ಕೆಲಸ ಮತ್ತು 4 ದಿನ ರಜೆಯಲ್ಲಿ ಈ ತಾ. 30 ರಲ್ಲಿ ಬೆಂಗಳೂರಿಗೆ ಹೋಗಿ, ಬರುವ ಜುಲೈ ತಾ. 13ರಲ್ಲಿ ವಾಪಸು ಬರುವರೆಂದೂ, ಅಷ್ಟರ ವರೆಗೆ ಡಾಕ್ಟರು ಕೋಪಂಡ ಮೇದಪ್ಪನವರು ಅವರ ಕೆಲಸದ ಚಾರ್ಜಿನಲ್ಲಿರುವರೆಂದೂ ತಿಳಿಯುತ್ತೇವೆ.

ಈ ತಾ. 21 ರಿಂದ ಇಂದಿನ ವರೆಗೆ ಇಲ್ಲಿ 3 ಇಂಚು 84 ಸೆಂಟು ಮಳೆಯಾಗಿದೆ. ಈ ವರ್ಷ ಒಟ್ಟು ಜೂನ್ ತಿಂಗಳಲ್ಲಿ ಇಲ್ಲಿಗೆ 12 ಇಂಚು 92 ಸೆಂಟು ಮಳೆಯಾಗಿದೆ. ಕಳೆದ ವರ್ಷ ಈ ತಿಂಗಳಲ್ಲಿ 36 ಇಂಚು 12 ಸೆಂಟು ಮಳೆಯಾಗಿತ್ತು.

ಇಲ್ಲಿಯ ಮುನ್ಸಿಪಲ್ ತೆರಿಗೆದಾರರ ಸಂಘದ ವಾರ್ಷಿಕ ಮಹಾ ಸಭೆಯು ತಾ. 8-7-39 ನೇ ಶನಿವಾರ ಅಪರಾಹ್ನ 3-30 ಗಂಟೆಗೆ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುತ್ತದೆಂದು ತಿಳಿಯಬರುತ್ತದೆ.

ಡಾಕ್ಟರ್ ಎಂ. ವಿ. ನ ಯದುನಂದರು ಇಲ್ಲಿಯ ಗಣಪತಿ ಬೀದಿಯಲ್ಲಿ 'ಜಗನ್ನಾಥ' ಅಕ್ಕಿ ಮತ್ತು ಕಾಫಿ ಗಿರಣಿಯನ್ನು ತೆರೆದಿರುವರು.

ರಿಜಿಸ್ಟ್ರಾರಾದ ಶ್ರೀ ಕರವಂಡ ಬೆಂಗಪ್ಪನವರು ನಿವೃತ್ತಿ ಹೊಂದುವಾಗ ಅವರಿಗೆ ಸಹಕಾರಿ ಇಲಾಖೆಯವರು ಒಂದು ಚಹ ಪಾರ್ಟಿಯನ್ನು ಕೊಡುವರೆಂದು ಕಳೆದ ವಾರ ತಪ್ಪಾಗಿ ಪ್ರಕಟಿಸಲಾಗಿತ್ತು. ಆ ಸಲ ಆ ದಿನ ಅವರ ಖಾಸಗಿ ಸ್ನೇಹಿತರು ಒಂದು ಔತಣವನ್ನು ಕೊಡುವರೆಂದು ಇತ್ತಲಾಗಿ ತಿಳಿಯಬರುತ್ತದೆ.

ಕುಂಬಾರ ಗಡಿಗೆ ಅಣ್ಣಾಚಾರಿಯೆಂಬವನು ಬೆಟ್ಟದಳ್ಳಿ ಪುಟ್ಟಾಚಾರಿಯನ್ನು ಹಿಂಸೆ ಮಾಡಿ ಕೊಂದನೆಂಬ ಅಪವಾದದಲ್ಲಿ ಆತನನ್ನು ಕ್ಷೇಮ ಮಾಡಿ ಸೆಷನ್ ಕೋರ್ಟಿನಲ್ಲಿ ಮರಣ ಶಿಕ್ಷೆ ವಿಧಿಸಿದ್ದರು. ಇದರ ಅಪೀಲು ಬೆಂಗಳೂರು ಜುಡಿಷಿಯಲ್ ಕಮಿಷನರ ಕೋರ್ಟಿನಲ್ಲಿ ನಡೆದು ಮರಣ ಶಿಕ್ಷೆಯು ವಜಾಆಗಿ ಆತನನ್ನು ಖುಲಾಸ್ ಮಾಡಿರುವುದಾಗಿಯೂ ಅಣ್ಣಾಚಾರಿಯ ಪರ ಶ್ರೀ ಕೆ. ಎಸ್. ಶಂಕರನಾರಾಯಣರವರೂ, ಸರ್ಕಾರದ ಕಡೆ ಶ್ರೀ ಎ. ಸಿ. ಸುಬ್ಬಯ್ಯನವರೂ ವಾದಿಸಿದರೆಂದೂ ತಿಳಿಯುತ್ತೇವೆ.

ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮೀಟಿಂಗು ಜುಲೈ ತಾ. 8 ನೇ ಶನಿವಾರ ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ವೀರರಾಜಪೇಟೆ.

ಇಲ್ಲಿಯ ಕೋವಿ ಮತ್ತು ಮದ್ದು ಸಗ್ರಿ ವ್ಯಾಪಾರಿಯಾದ ಶ್ರೀ ಪಟ್ಟಡ ಚೀಯಣ್ಣನವರು ಕಳೆದ ತಿಂಗಳಲ್ಲಿ ಮಾಲ್ದಾರೆಯಲ್ಲಿ ವನ ಕರುಗಳಿಗೆ ಬಹಳವಾಗಿ ತೊಂದರೆ ಕೊಡುತ್ತಿದ್ದ ಒಂದು ಹೆಬ್ಬುಲಿಯನ್ನು ಗುಂಡು ಹೊಡೆದು ಕೊಂದರೆಂದು ತಿಳಿಯುತ್ತೇವೆ.

ಈ ತಾ. 21 ನೇ ಬುಧವಾರ ದಿನ ಬೆಳಿಗ್ಗೆ 5-15 ಗಂಟೆಗೆ ಕುಕ್ಲೂರು ಗ್ರಾಮದ ಶ್ರೀ ಬಲ್ಲಡ ಕುಶಾಲಪ್ಪನವರಲ್ಲಿ ಕೆಲಸಕ್ಕಿರುವ ಎರವರ ಹೆಂಗಸೊಬ್ಬಳು 3 ಹೆಣ್ಣು ಮಕ್ಕಳನ್ನು ಪ್ರಸವಿಸಿದಳೆಂದೂ, ಅವರೆ ಅರ್ಧ ಗಂಟೆಯೊಳಗೆ ಆ ಮೂರು ಮಕ್ಕಳೂ ಸತ್ತುಹೋದವೆಂದೂ, ಆಕೆಯು ಸೌಖ್ಯದಿಂದಿರುವಳೆಂದೂ ತಿಳಿಯಬರುತ್ತದೆ.

ಅಮ್ಮತ್ತಿ.

ಈ ವಾರ ಇಲ್ಲಿ ಭತ್ತ ಗಾಡಿಗೆ ರೂ. 47 ರ ವರೆಗೆ ಕ್ರಯವಿಕ್ರಯ ತಿಳಿಯಬರುತ್ತದೆ.

ಕೊಡ್ಲಿಪೇಟೆ.

ಇಲ್ಲಿ ಪ್ರತಿ ಭಾನುವಾರ ಹೆಂಗಸು ಆಸ್ಪತ್ರೆಯು ತೆರೆಯಲ್ಪಡುತ್ತಿದೆ.

ಶನಿವಾರಸಂತೆ.

ಈ ಭಾಗದಲ್ಲಿ ಮಳೆಯು ಆರಂಭದ ವೇಳೆಗೆ ವಿಪರೀತ ತೊಂದರೆಯಾಗಿರುವದೆಂದೂ, ಅದ ಪ್ರಯುಕ್ತ ಕೃಷಿಕಾರರಲ್ಲಿ ಕ್ಷೋಭೆಯುಂಟಾಗಿದೆಯೆಂದೂ ತಿಳಿಯುತ್ತೇವೆ.

ಸೋಮವಾರಪೇಟೆ.

ಇಲ್ಲಿ ಹಾಗೂ ಕ್ರಿಯಾಂಗಲು ಸಾಮಗಳಲ್ಲಿ ಮಳೆಯಿಲ್ಲದೆ ಪೈರುಗಳು ಒಣಗಿ ಹೋಗುತ್ತಿವೆಯೆಂದೂ, ಅಲ್ಪ ಸ್ವಲ್ಪ ಜನರು ಬೀಜ ಹಾಕಿದರೂ ಸಹ ಬೆಳೆ ಗದ್ದೆಗಳಿಗೆ ನೀರಿಲ್ಲದ ಪ್ರಯುಕ್ತ ವ್ಯವಸಾಯವು ನಿಂತಿದೆಯೆಂದೂ, ಇದರಿಂದ ಪ್ರತಿಯೊಬ್ಬರಲ್ಲಿಯೂ ಕ್ಷಾಮದ ಭಯವು ಕವಿದಿರುವದಾಗಿಯೂ ತಿಳಿಯಬರುತ್ತದೆ.

ವಿರಾಜಪೇಟೆ.

ವೀರರಾಜಪೇಟೆ ಆಸ್ಪತ್ರೆಯಲ್ಲಿ ನರ್ಸಾಗಿದ್ದ ಶ್ರೀ ಮೋರಿ ಕುಂಡರ ಕಾವೇರಮ್ಮನವರು ಈ ತಾ. 28ರಲ್ಲಿ ಸೇವೆಯಿಂದ ನಿವೃತ್ತಿಗೊಳಿಸಲ್ಪಟ್ಟ ಕಾರಣ ಅವರ ಸ್ಥಳಕ್ಕೆ ಮೂರ್ನಾಡಿನ ನರ್ಸಾದ ಶ್ರೀ ಮತಿ ಬಿದ್ದಂಡ ಸುಬ್ಬಮ್ಮನವರನ್ನೂ, ಮೂರ್ನಾಡಿಗೆ ಶ್ರೀ ಬಾಚರಣಿಯಂಡ ಅಮ್ಮವ್ವನವರನ್ನೂ ನೇಮಿಸಿ, ತತ್ಕಾಲ 1½ ತಿಂಗಳ ಮಟ್ಟಿಗೆ ಮಡಿಕೇರಿ ನರ್ಸೊಬ್ಬಳು ರಜೆಯಲ್ಲಿರುವದರಿಂದ ಮೊಟಮಂಡ ಸುಬ್ಬಮ್ಮನವರು ಮಡಿಕೇರಿ ಆಸ್ಪತ್ರೆಯಲ್ಲಿಯೂ, ಚೌಂಡಿರ ತಾಯಮ್ಮನವರು ವೀರಾಜಪೇಟೆ ಆಸ್ಪತ್ರೆಯಲ್ಲಿಯೂ ಕೆಲಸ ಮಾಡುವಂತೆ ಹುಕುಂ ಆಗಿದೆಯಾಗಿ ತಿಳಿಯಬರುತ್ತೆ.

ನಿಧನ ವಾರ್ತೆ.

ಅಂಡಮಾನ ದ್ವೀಪದಲ್ಲಿ ಫಾರೆಸ್ಟರಾಗಿದ್ದ ಕಾವಾಡಿ ಗ್ರಾಮದ ಮ. ಮಾಚಿಮಂಡ ಚಿಣ್ಣಪ್ಪನವರ ಪುತ್ರ ಕಾರ್ಯಪ್ಪನವರು ಕಳೆದ ಮೇ ತಾ. 28 ರಲ್ಲಿ ಅಂದಮಾನದಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನವಡುತ್ತೇವೆ.

ಹಿಂದೂದೇಶ.

ಇದೇ ವರ್ಷ ಡಿಸೆಂಬರ್ ತಿಂಗಳ ಕೊನೇ ವಾರದಲ್ಲಿ ಜರಗಲಿರುವ ರಾಷ್ಟ್ರೀಯ ಮಹಾ ಸಭೆಯ ಅಧಿವೇಶನದ ಕಾರ್ಯಕ್ರಮವನ್ನು ವರ್ಕಿಂಗ್ ಕಮಿಟಿಯು ಪ್ರಕಟಿಸಿದೆ—ಮೆಂಬರುಗಳನ್ನು ದಾಖಲ್ಮಾಡಿಕೊಳ್ಳುವ ಕೊನೆಯ ದಿನ ಸೆಪ್ಟೆಂಬರ್ ತಾ. 15; ಡೆಲಿಗೇಟರುಗಳ ಚುನಾವಣೆ ನವಂಬರ್ ತಾ. 8; ಪ್ರೆಸಿಡೆಂಟರ ನಾಮಕರಣ ಪತ್ರಗಳು ನವಂಬರ್ ತಾ. 15 ರ ವರೆಗೆ; ಸಮಗ್ರ ಭಾರತ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಮತ್ತು ಮೆಂಬರುಗಳನ್ನು ಆರಿಸಲು ಡೆಲಿಗೇಟರ ಮೀಟಿಂಗು ನವಂಬರ್ ತಾ. 29; ಅಧ್ಯಕ್ಷರ ಚುನಾವಣೆಯ ಪ್ರಕಟಣೆ ಡಿಸೆಂಬರ್ ತಾ. 3.

ಬೊಂಬಾಯಿಯ ಮುಸ್ಲಿಂ ಲೀಗಿನವರು ಆ ಪ್ರಾಂತದಲ್ಲಿ ಮದ್ಯನಿಷೇಧ ಕಾರ್ಯಕ್ರಮವನ್ನು ತಮ್ಮದೊಂದು ಠರಾವಿನ ಮೂಲಕ ಧಿಕ್ಕರಿಸಿದ್ದಾರೆ.

ಸಮಗ್ರ ಭಾರತ ದೇಶೀ ಸಂಸ್ಥಾನದ ಪ್ರಜೆಗಳ ಸ್ಥಾಯೀ ಸಮಿತಿಯು ಅಧಿವೇಶನವು ಬೊಂಬಾಯಿಯಲ್ಲಿ ಶ್ರೀ ಜವಾಹಿರ್‌ಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆಯಿತು. ಮಹಾತ್ಮರ ಅಭಿಮತದಂತೆ ಸಂಸ್ಥಾನಗಳ ಮುಂದಿನ ಧೋರಣೆಯನ್ನು ಕಲ್ಪಿಸುವ ಕುರಿತು ಜನಾಬ್ ಅಬ್ದುಲ್ ಒಂದು ಸ್ಟೇಟ್ ಮೆಂಟ್ ದಯಪಾಲಿಸಿದರು. ದೇಶೀಯ ಸಂಸ್ಥಾನಗಳ ವಿಚಾರದಲ್ಲಿ ಆಧಾರ ಸಹಿತವಾದ ಒಂದು ಗ್ರಂಥ ಬರೆಯಲು ಆಗತ್ಯವಿರುವ ಸಾಧನಗಳ ಸಂಗ್ರಹಕ್ಕಾಗಿ ಒಂದು ಸಬ್ ಕಮಿಟಿಯು ರಚನೆಯಾಯಿತು.

ಬಂಗಾಳದ ಪ್ರಾಂತೀಕ ಕಾಂಗ್ರೆಸ್ ಕಮಿಟಿಗಾಗಿ ಒಂದು ಹೊಸ ಮಂದಿರವು ಕಲ್ಕತ್ತದಲ್ಲಿ ಕಟ್ಟಲ್ಪಡುವದು. ಅದರ ಶಂಕುಸ್ಥಾಪನೆಯನ್ನು ಕವಿ ರವೀಂದ್ರರು ಮಾಡುವರು. ಮುಂದಿನ ತಿಂ 4 ನೇ ತಾರೀಖಿಗೆ ಪ್ರಾರಂಭವಾಗುವದು.

ಮದರಾಸ್ ಪ್ರಾಂತದಲ್ಲಿ ಚೌಕಿದಾರರ ತೆರಿಗೆ ಕೊಡಬಾರದೆಂಬ ಚಳುವಳಿ ನಡೆಯುತ್ತಿದೆ. ಈ ಸಂಬಂಧ ಸುಮಾರು 50-60 ಮಂದಿ ಕಿಸಾನರ ಕೈದಾಗಿದೆ.

ಒರಿಸ್ಸಾದಲ್ಲಿ ಕಳೆದ ಸಲದ ನೆರೆಯ ಹಾವಳಿಯಿಂದ ರೈತರು ತಮ್ಮ ಹೊಟ್ಟೆಗಿಲ್ಲದೆ ನೂರಾರು ಮಂದಿಯ ಸ್ತ್ರೀ ಪುರುಷರ ಗುಂಪುಗಳಾಗಿ ಹಲವು ಕಡೆಗಳಿಂದ ಬೆರಹಾಂಪುರಕ್ಕೆ ಯಾತ್ರೆ ಮಾಡಿ ಅಲ್ಲಿನ ಅಧಿಕಾರಿಗಳಲ್ಲಿ ಮೊರೆಯಿಡುತ್ತಿರುವರು.

ಸಂಯುಕ್ತ ಪ್ರಾಂತದ ಸರಕಾರವು ತನ್ನ ಅಧೀನ ವರ್ಗದವರ ಕೈಶುದ್ಧಿಯೇ ಮೊದಲಾದ ಕೆಟ್ಟ ಚಾಳಿಗಳನ್ನು ನಿಲ್ಲಿಸುವ ಕುರಿತು ಒಂದು ಕಮಿಟಿಯನ್ನು ಸ್ಥಾಪಿಸಿದ್ದಿತು. ಅದೀಗ ವರದಿಯನ್ನು ಒಪ್ಪಿಸಿರುವಲ್ಲಿ ಅದರ ಕೆಲವು ಶಿಫಾರಸ್ಸುಗಳನ್ನು ಕೆಲವು ಜಿಲ್ಲೆಗಳಲ್ಲಿ ಆಚರಣೆಗೆ ತಂದು ಪರೀಕ್ಷಿಸಬೇಕೆಂದು ಆ ಸರಕಾರದ ಸಂಕಲ್ಪ. ಶಿಫಾರಸುಗಳು ತಕ್ಕಷ್ಟು ಬಿಗಿಯಾಗಿವೆ.

ರಾಷ್ಟ್ರ ಯೋಜನಾ ಸಮಿತಿಯ ಜಂಟಿ ಕಾರ್ಯದರ್ಶಿಯಾದ ಮಿ. ಹೆಚ್. ವಿ. ಕಾಮತ್‌ರವರು ತಮ್ಮ ಪದವಿಗೆ ರಾಜಿನಾಮೆಯನ್ನಿತ್ತಿರುತ್ತಾರೆ. ತಾವು ರಾಜಕೀಯ ವಿಚಾರಗಳಲ್ಲಿ ಪ್ರವೇಶಿಸಲು ಈ ಕಾರ್ಯದರ್ಶಿಯ ಪದವಿಯು ಬಂಧಕವಾಗಿರುವುದರಿಂದ ಈ ರೀತಿ ಮಾಡಿರುವರೆಂದು ಅವರು ಸೂಚಿಸಿರುತ್ತಾರೆ. ಮಿ. ಕಾಮತ್‌ರವರು ಇಂಡಿಯನ್ ಸಿವಿಲ್ ಸರ್ವಿಸ್ ಉದ್ಯೋಗವನ್ನು ತ್ಯಜಿಸಿ ಕಾಂಗ್ರೆಸ್ ಪಕ್ಷವನ್ನು ಸೇರಿದರೆಂಬುದು ನಮ್ಮ ವಾಚಕರಿಗೆ ತಿಳಿದೇ ಇದೆ.

ಜ್ಞಾನಾರ್ಜನೆಗೆ ಹೆದ್ದಾರಿ.

ಮಹನೀಯರೇ,

ಜಗತ್ತಿನ ಆಗುಹೋಗುಗಳನ್ನು ತಿಳಿಯಬೇಕೆನ್ನುವಿರಾ? ಹಾಗಾದರೆ ದಿನ, ವಾರ ಹಾಗೂ ಮಾಸ ಪತ್ರಿಕೆಗಳಿಗೆ ನಮ್ಮಲ್ಲಿ ವಿಚಾರಿಸಿರಿ.

ಎಸ್. ಕೆ. ಮೂರ್ತಿ.
ನ್ಯೂಸ್ ಏಜಂಟ್,
ಶಿಡ್ಡ, ಶನಿವಾರಸಂತೆ.

ಖ್ಯಾತಿ.

ಖ್ಯಾತಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦—

ಅಪಸ್ವರ.

ಹಿಂದೂ ದೇಶದ ಹನ್ನೊಂದು ಪ್ರಾಂತಗಳ ಪೈಕಿ 8 ಪ್ರಾಂತಗಳಲ್ಲಿ ಕಾಂಗ್ರೆಸಿನವರೇ ಸರ್ಕಾರವನ್ನು ನಡೆಸುತ್ತಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಕೊಡಗಿನವರು ಸ್ವಾತಂತ್ರ್ಯದ ಹೋರಾಟದಲ್ಲಿ ಅನುಭವಿಸಿದ ಕಷ್ಟ ನಷ್ಟಗಳ ಮತ್ತು ತ್ಯಾಗ ಬಲಿಗಳ ಫಲಿತಾಂಶವಾಗಿ ಕೊಡಗೂ ಈ ಎಂಟು ಪ್ರಾಂತಗಳೊಂದಿಗೆ ಒಂದಾಗಬೇಕಿತ್ತು. ಅಂದರೆ ಇಲ್ಲಿಯೂ ಕೂಡ ಕಾಂಗ್ರೆಸ್ ಪಕ್ಷದವರೇ ಸರ್ಕಾರ ನಡೆಸಬೇಕಿತ್ತು. ಆದರೆ ಕೊಡಗಿನ ದುರಾದೃಷ್ಟದಿಂದ ಇತರ ಬ್ರಿಟಿಷ್ ಪ್ರಾಂತಗಳಂತೆ ಪ್ರಾಂತೀಕ ಸ್ವರಾಜ್ಯದ ಸುಧಾರಣೆಯು ದೊರೆಯಲಿಲ್ಲ ಮತ್ತು ಇಲ್ಲಿಯ ಶಿಫಾರಸ್ಸು ಕೌನ್ಸಿಲಿನ ರಚನೆಯ ಮೇರೆ ಕಾಂಗ್ರೆಸಿನವರಿಗೆ ಚುನಾಯಿತ ಮೆಂಬರುಗಳಲ್ಲಿ ಬಹುಮತ ದೊರೆತರೂ ಸಹ ಇಡೀ ಕೌನ್ಸಿಲಿನಲ್ಲಿ ಬಹುಮತ ದೊ

ಯುವ ಅವಕಾಶವಿಲ್ಲ. ಆದರೆ ಈ ಪ್ರಾಂತದವರು ಕಾಂಗ್ರೆಸಿನ ತತ್ವವನ್ನು ಚೆನ್ನಾಗಿ ಅರಿತವರಾಗಿ ಕಾಂಗ್ರೆಸಿನ ಮೇಲೆ ತಮಗಿರುವ ಭಕ್ತಿ ಮತ್ತು ವಿಶ್ವಾಸವನ್ನು ಡಿ. ಬೋರ್ಡು ಚುನಾವಣೆಯಲ್ಲಿ ಪ್ರದರ್ಶಿಸಿದರು. ಆದ್ದರಿಂದಲೇ ಡಿ. ಬೋರ್ಡಿನ ಈಗಿರುವ ರಚನೆಯು ಮೇರೆ ಬೇರೆ ಕಡೆಗಳಂತೆ ಎಲ್ಲರೂ ಚುನಾಯಿತ ಮೆಂಬರುಗಳಲ್ಲದಿದ್ದರೂ ಕೂಡ ಕಾಂಗ್ರೆಸ್ ಪಕ್ಷದವರು ಪ್ರಥಮ ಚುನಾವಣೆಯಲ್ಲಿ ಶೇಕಡ 90 ರಷ್ಟು ಜಯಪಡೆದರು. ಆದರೂ ಕೂಡ ಕಾಂಗ್ರೆಸಿನ ವಿರೋಧಿಗಳು ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸಿನವರನ್ನು ಅಧಿಕಾರಕ್ಕೆ ಬರಲು ಬಿಡಲಿಲ್ಲ. ಕಾಂಗ್ರೆಸಿನವರು ಪುನಹ ದೇಶೀಯರಿಗೆ ಅಪೀಲು ಮಾಡಿ ಎರಡನೇ ಚುನಾವಣೆಯಲ್ಲಿ ಶೇಕಡ ನೂರರಷ್ಟು ಜಯವನ್ನು ಪಡೆದರು. ಆ ಕಾರಣ ಕಾಂಗ್ರೆಸಿನವರೇ ಬೋರ್ಡಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಂದಿನಿಂದ ಡಿ. ಬೋರ್ಡಿನಲ್ಲಿ ಕಾಂಗ್ರೆಸ್ ಪಕ್ಷದವರು ದೇಶೀಯರಿಗೆ ಸಾಧ್ಯವಾದಷ್ಟು ಉಪಯುಕ್ತವಾದ ಕೆಲಸಗಳನ್ನು ಮಾಡಲು ಪ್ರಯತ್ನ ಮಾಡುತ್ತಿರುವರು. ಈ ಮಧ್ಯೆ ಸರಕಾರದವರು ಡಿ. ಬೋರ್ಡಿಗೆ ಕೊಡುತ್ತಿರುವ ವಂತಿಗೆಯಲ್ಲಿ ಸುಮಾರು 7,000 ದಷ್ಟು ಕಡಿಮೆ ಮಾಡಿದರೂ ಕೂಡ, ವಿದ್ಯಾ ಮತ್ತು ವೈದ್ಯ ಇಲಾಖೆಗಳ ಸಂಸ್ಥೆಗಳನ್ನು ಕಡಿಮೆ ಮಾಡದೆಯೂ ಬದಲು ಸಾಧ್ಯವಾದಷ್ಟು ಅವುಗಳನ್ನು ಬಡಾವಣೆ ಮಾಡುತ್ತಲೂ ತಮ್ಮನ್ನು ಆರಿಸಿ ಕಳುಹಿಸಿದವರ ವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತಿರುವರು.

ಇದನ್ನೆಲ್ಲಾ ನೋಡಿ ಕೆಲವು ಕಾಂಗ್ರೆಸ್ ವಿರೋಧಿಗಳಿಗೆ ಸಹಿಸಲಾರದಷ್ಟು ಖೇದ ಉಂಟಾಗುತ್ತಿದೆ. ಮುಖ್ಯವಾಗಿ ಕಳೆದ ಕೌನ್ಸಿಲು, ಡಿ. ಬೋರ್ಡು, ಸೆಂಟ್ರಲ್ ಬ್ಯಾಂಕು ಮೊದಲಾದ ಸಾರ್ವಜನಿಕ ಸಂಸ್ಥೆಗಳ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ವಿರುದ್ಧ ನಿಂತು ಹೋರಾಡಿ ಇವೆಲ್ಲವುಗಳಲ್ಲಿಯೂ ಅಪಜಯವನ್ನು ಹೊಂದಿದಂಥಾ ಕೆಲವು ಮಹನೀಯರುಗಳು ಡಿ. ಬೋರ್ಡಿನಲ್ಲಿ ಕಾಂಗ್ರೆಸ್ ಪಕ್ಷದವರು ಮಾಡುತ್ತಿರುವ ಕೆಲಸಗಳ ವಿಚಾರವಾಗಿ ವಿಶೇಷ ಅಪಪ್ರಚಾರ ಮಾಡುತ್ತಿರುವರು. ಇತ್ತೀಚೆಗೆ ಕೊಡಗಿನ ಒಂದು ಪತ್ರಿಕೆಯಲ್ಲಿಯೂ ಮತ್ತು ನಮ್ಮ ನೆರೆ ಜಿಲ್ಲೆಯ ಮಂಗಳೂರು ಪಟ್ಟಣದ ಒಂದು ಪತ್ರಿಕೆಯಲ್ಲಿಯೂ ಆಗಾಗ್ಯೆ ಇಂಥಾ ಅಪಪ್ರಚಾರಕ್ಕೆ ತುಂಬಾ ಎಡೆ ದೊರೆಯುತ್ತಿದೆ. ಸ್ಥಳೀಯ ಪತ್ರಿಕೆಯು ಇಂಥಾ ಸುಳ್ಳು ವಾರ್ತೆಗಳ ಪ್ರಚಾರದಲ್ಲೇ ಮಗ್ನವಾಗಿರುವದಕ್ಕೆ ಹೆಚ್ಚಿನ ಕಾರಣ ಕೊಡಬೇಕಾಗಿಲ್ಲ. ವಾಚಕರಿಗೆ ಈ ಕಾರಣಗಳು ಅಂಗೈ ಹುಣ್ಣಿನಂತೆ ವಿಷಧವಾಗಿವೆ. ಆದರೆ ಮಂಗಳೂರಿನ ಪತ್ರಿಕೆಯು ಇಂಥಾ ಅಪಪ್ರಚಾರಕ್ಕೆ ಎಡೆಕೊಡಲು ಕಾರಣವೇನೆಂದು ಕೆಲವರಿಗೆ ಸಂಶಯ ಹುಟ್ಟಬಹುದು. ಆದರೆ ಸಂಪಾದಕರು ನಮ್ಮ ಕೊಡಗಿನವರೇ ಅವರೂ ಕೂಡ ಆವಾಗ ಇಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿಚಾರಗಳು ಚೆ... ...ದಿರಬಹುದು. ಅವರು ರವಸೆಯಿಟ್ಟು ಇಂಥಾ ಅಪಪ್ರಚಾರಕ್ಕೆ ಎಡೆಕೊಡುತ್ತಿರಬಹುದು. ಈ ಬಾತ್ಮಿದಾರರು ಕಾಂಗ್ರೆಸಿನ ಬದ್ಧ ವಿರೋಧಿಗಳಾದ್ದರಿಂದಲೇ ಇವರಿಗೆ ಕೊಡಗಿನಲ್ಲಿ ಕಾಂಗ್ರೆಸಿನವರು ಮಾಡಿರುವ ಒಳ್ಳೇ ಕೆಲಸಗಳು ಯಾವುವೂ ಅವರ ದೃಷ್ಟಿಗೆ ಬೀಳುವುದಿಲ್ಲ. ಈ ಪತ್ರಿಕೆಯು ಕೊಡಗಿನ ವಿಚಾರದಲ್ಲಿ ಸತ್ಯ ಸಂಗತಿಗಳನ್ನು ಪ್ರಚಾರ ಮಾಡಿದ್ದಾದರೆ ಇದು ಹೆಚ್ಚಿನ ಜನಾದರಣೀಯವಾಗುತ್ತಿತ್ತು.

'ಸ್ವತಂತ್ರ ಭಾರತ' ಪತ್ರಿಕೆಯ ಒಂದು ಸಂಚಿಕೆಯಲ್ಲಿ—ಈ ಅರ್ಥದ ಬಾತ್ಮಿಯೊಂದು ಪ್ರಕಟವಾಗಿತ್ತು. ಕೊಡಗಿನ ಸರಕಾರದವರು ಕೆಲವು ವರ್ಷಗಳ ಹಿಂದೆ ಇಂಡಿಯಾ ಸರ್ಕಾರಕ್ಕೆ ಬರೆದ ಅರ್ಜಿಯಲ್ಲಿ "ಕೊಡಗಿನ ಮನೆತನಗಳೊಳಗೆ ವೈಶಮ್ಯವು ವಿಪರೀತವಾಗಿರುವ ಕಾರಣ ಇಲ್ಲಿ ಮಂತ್ರಿಯಾಗಲು ಎಲ್ಲರ ಪ್ರೀತಿಗೆ ಪಾತ್ರರಾದ ಮುಖಂಡರೊಬ್ಬರು ದೊರೆಯುವುದು ದುರ್ಲಭವಾಗಿರುವದರಿಂದ ಇಲ್ಲಿಗೆ ಜವಾಬ್ದಾರಿ ಸರ್ಕಾರ ಕೊಡಲು ಆಗುವುದಿಲ್ಲ ಎಂದು ಬರೆದಿದ್ದರು. ಇದು ಈಗ ನಿಜವಾಗುತ್ತಿದೆ. ಈಗಿನ ಡಿ. ಬೋರ್ಡಿನಲ್ಲಿ ಕಾಂಗ್ರೆಸ್ ಪಕ್ಷದವರು ಅಧಿಕಾರಕ್ಕೆ ಬಂದು ಅಧ್ಯಕ್ಷರು ತಮ್ಮ ಸ್ನೇಹಿತರೊಬ್ಬರ ಮಗನಿಗೆ ವಿದ್ಯಾರ್ಥಿ ವೇತನ ಮಂಜೂರು ಮಾಡಿಸಿಕೊಟ್ಟಿರುವರು." ಒಂದು ವೇಳೆ ಕೊಡಗಿನ ಸರ್ಕಾರದವರು ಹಾಗೆ ಬರೆದಿದ್ದರೂ ಕೂಡ ಅವನ್ನು ಸಮರ್ಥಿಸಲು ಹೊರಟ ಬಾತ್ಮಿದಾರರು ಸ್ವಲ್ಪವೂ ಆತ್ಮಗೌರವವಿಲ್ಲದವರೆಂದೇ ಹೇಳಬೇಕಾಗಿದೆ. ಅವರ ರಕ್ತದಲ್ಲಿ ಒಂದು ತೊಟ್ಟು ಕೊಡಗಿನ ರಕ್ತವಿಲ್ಲವೆಂದೇ ತೋರುತ್ತದೆ. ಹಿಂದೀಯರೊಳಗೆ ಒಗ್ಗಟ್ಟಿಲ್ಲ, ಆದ್ದರಿಂದ ಅವರಿಗೆ ಸ್ವರಾಜ್ಯ ಕೊಡಲಿಕ್ಕಾಗುವುದಿಲ್ಲವೆಂದು ಹೇಳುತ್ತಿರುವ ಸರಕಾರದವರು ಕೊಡಗಿನ ಜನರ ವಿಚಾರದಲ್ಲಿ ಇಂಥಾ ಅಭಿಪ್ರಾಯ ಸೂಚಿಸಿರುವದು ಆಶ್ಚರ್ಯವೇನೂ ಅಲ್ಲ. ಬ್ರಿಟಿಷರು ಎಷ್ಟು ಅಪವಾದಗಳನ್ನು ಹಿಂದೀಯರ ಮೇಲೆ ಹೊರಿಸುತ್ತಿದ್ದರೂ ಕೂಡ ಹಿಂದೀಯರು ಸ್ವರಾಜ್ಯವನ್ನು ಪಡೆಯಲು ಎಡೆಬಿಡದೆ ಹೋರಾಟವನ್ನು ನಡೆಸುತ್ತಿರುವಂತೆಯೇ ಕೊಡಗಿನವರೂ ಅವರ ಮೇಲೆ ಬ್ರಿಟಿಷರು ಹೊರಿಸಿರುವ ಅಪವಾದದಿಂದ ಅಸಮಾಧಾನಗೊಂಡು ಜವಾಬ್ದಾರಿ ಸರಕಾರ ಪಡೆಯಲು ಮತ್ತಷ್ಟು ಹುರುಪಿನಿಂದ ಹೋರಾಡಬೇಕಾದದ್ದು ಅವರ ಕರ್ತವ್ಯವಾಗಿದೆ. ಅದರ ಬದಲು ಸರಕಾರದವರ ಅಪವಾದವು ಸತ್ಯವೆಂದು ಸಮರ್ಥಿಸಿದಂಥ ಬಾತ್ಮಿದಾರರ ಆತ್ಮಗೌರವಕ್ಕೆ, ದೇಶಭಕ್ತಿಗೆ ಏನೆಂದು ಹೇಳಲಿ! ಅವರು ಇನ್ನಾದರೂ ಇಂಥಾ ನಾಚಿಕೆಗೇಡಿನ ವರ್ತನೆಗೆ ಎಡೆಕೊಡಲಿಕ್ಕಿಲ್ಲವಾಗಿ ನಂಬುತ್ತೇನೆ.

ಅದರೊಂದಿಗೆ ಡಿ. ಬೋರ್ಡಿನ ಪ್ರೆಸಿಡೆಂಟರು ಅವರ ಸ್ನೇಹಿತರೊಬ್ಬರ ಮಗನಿಗೆ ವಿದ್ಯಾರ್ಥಿವೇತನ ಕೊಡಿಸಿದ್ದೆಂದು ಹೇಳುವುದು ಪೂರಾ ಸುಳ್ಳಾಗಿದೆ. ನಿಜ ಸಂಗತಿಯು ಹೀಗಿದೆ. ಮದರಾಸಿನ ರಾಮಕೃಷ್ಣ ವಿಶನಿನ ವಿದ್ಯಾರ್ಥಿ ಭವನದ ಸಂ... ಜಿಲ್ಲಾ ಬೋರ್ಡುಗಳು ತಮ್ಮ ಆಟೋಮೋಬಾಯಿಲ್ ಇಂಜಿನೀಯರಿಂಗ್ ಶಾಖೆಯನ್ನು ನಡೆಸಲು ದ್ರವ್ಯಸಹಾಯ ಕೊಡುತ್ತಿರುವಂತೆ ಇಲ್ಲಿಯ ಡಿ. ಬೋರ್ಡಿನವರೂ ಕೊಡಬೇಕೆಂದು ಒಂದು ಅಪೀಲು ಮಾಡಿದ್ದರು. ಇದರೊಂದಿಗೆ ಈ ಸಂಸ್ಥೆಯಲ್ಲಿ ಕೊಡಗಿನಿಂದ ಬಂದು ಓದುತ್ತಿರುವ ಇಬ್ಬರು ವಿದ್ಯಾರ್ಥಿಗಳ ಪೈಕಿ ಒಬ್ಬರು ತನಗೊಂದು ಸ್ಕಾಲರ್‌ಶಿಪ್ ಕೊಡಬೇಕೆಂದು ಕೊಡಗಿನ ಜಿಲ್ಲಾ ಬೋರ್ಡಿಗೆ ಅಪೀಲ್ ಮಾಡಿದ್ದರು. ಬೋರ್ಡಿನವರು ಈ ಎರಡೂ ಅರ್ಜಿಗಳನ್ನು ಆಲೋಚಿಸಿ ವಿದ್ಯಾರ್ಥಿಯ ಅರ್ಜಿಯನ್ನು ತಿರಸ್ಕರಿಸಿ ಈ ರಾಮಕೃಷ್ಣ ಸಂಸ್ಥೆಗೆ ಈ ವರ್ಷ ರೂ 100 ವಂತಿಗೆ ಕೊಡುವಂತೆ ತೀರ್ಮಾನ ಮಾಡಿರುವರು. ಯಾವ ವಿದ್ಯಾರ್ಥಿಗೂ ಸ್ಕಾಲರ್ ಶಿಪ್ ಕೊಡಲು ತೀರ್ಮಾನಿಸಿರುವದಿಲ್ಲ.

ಡಿ. ಬೋರ್ಡಿನ ಕಾಂಗ್ರೆಸ್ ಪಾರ್ಟಿಯವರ ಮೇಲೆ ಹೊರಿಸುತ್ತಿರುವ ಇನ್ನೊಂದು ಅಪವಾದವು ಯಾವುದೆಂದರೆ ಡಿ. ಬೋರ್ಡಿನ ಅಧ್ಯಕ್ಷರ ಭತ್ಯವನ್ನು 500 ರಿಂದ 1000 ರೂಪಾಯಿಗೆ ಏರಿಸಬೇಕೆಂದು ಅವರ ಸಮ್ಮಂಧಿಕರಾದ ಒಬ್ಬ ಮೆಂಬರು ಠರಾವನ್ನು ಬೋರ್ಡಿನಲ್ಲಿ ತಂದರೆಂಬುದು ಇದು ನಿಜವಲ್ಲ. ಪ್ರೆಸಿಡೆಂಟರಿಗೆ ಈಗಿರುವ ರೂ 500 ಬತ್ಯದಿಂದ ಸಾಕಷ್ಟು ಮೇಲ್ವಿಚಾರ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲದ್ದರಿಂದಲೂ, ಬೋರ್ಡಿನ ಉಪಾಧ್ಯಕ್ಷರ ಪ್ರಯಾಣದ ಭತ್ಯಕ್ಕಾಗಿ ಹಣ ಪ್ರತ್ಯೇಕವಿಡದ್ದರಿಂದಲೂ ಇವರಿಬ್ಬರೂ ಸೇರಿ ಸಾಕಷ್ಟು ಮೇಲುಸ್ತುವಾರಿ ಕೆಲಸ ನಡೆಸಲಿಕ್ಕಾಗಿ ಇವರಿಬ್ಬರ ಭತ್ಯ ಸೇರಿ ರೂಪಾಯಿ 1000 ಮಾಡಬೇಕೆಂದು ಒಬ್ಬ ಮೆಂಬರು ಠರಾವನ್ನು ಕಳುಹಿಸಿದ್ದರು. ಈ ಠರಾವು ಬೋರ್ಡಿನ ಮೀಟಿಂಗಿಗೆ ಮುಂದೆ ನಡೆದ ಕಾಂಗ್ರೆಸ್ ಪಕ್ಷದವರ ಮೀಟಿಂಗಿನಲ್ಲಿ ಚರ್ಚಿಸಿ ಇದನ್ನು ಬೋರ್ಡಿನ ಮುಂದಿಡುವದು ಅವಶ್ಯವಿಲ್ಲವೆಂದು ತೀರ್ಮಾನಿಸಿದ ಮೇಲೆ ಸೂಚಕರು ಈ ಠರಾವನ್ನು ಬೋರ್ಡಿನ ಮುಂದಿಡದ ವಾಪಾಸು ತೆಗೆದುಕೊಂಡರು.

ಜಿಲ್ಲಾ ಬೋರ್ಡಿನ ಮೇಲಿನ ಮೂರನೇ ಅಪವಾದ—ಬಡ ಉಪಾಧ್ಯಾಯರುಗಳನ್ನು 8 ವರ್ಷದ ನಂತರ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾಯಿಸಿ ಅವರಿಗೆ ತುಂಬಾ ತೊಂದರೆ ಕೊಡುತ್ತಿರುವದು. ನಿಜ ಸಂಗತಿ ಹೀಗಿದೆ—ಬೋರ್ಡಿನ ಸುಮಾರು 225 ಉಪಾಧ್ಯಾಯರುಗಳ ಪೈಕಿ ಬರೇ 50 ಉಪಾಧ್ಯಾಯರುಗಳು 8 ವರ್ಷಗಳಿಂದ ಸುಮಾರು 23 ವರ್ಷಗಳವರೆಗೂ ಕೂಡ ತಮ್ಮ ಮನೆ ಸಮೀಪದ ಒಂದೇ ಸ್ಕೂಲಿನಲ್ಲಿ ಮಾಸ್ಟರುಗಳಾಗಿದ್ದರು. ಇವರಿಗೆ ಅತ್ತಿತ್ತ ವರ್ಗಾವರ್ಗಿಯೇ ಇರಲಿಲ್ಲ. ಉಳಿದ ಸುಮಾರು 175 ಮಾಸ್ಟರುಗಳಿಗೆ ಆಗಾಗ್ಯೆ ವರ್ಗಾವರ್ಗಿಯಿತ್ತು. ಕೆಲವು ಗ್ರಾಮದ ಅನಾನುಕೂಲವಾದ ಮೂಲೆಗಳಲ್ಲಿರುವ ಶಾಲೆಗಳಿಗೆ ಅಲ್ಲಿಯ ಸ್ಥಳೀಕರು ಉಪಾಧ್ಯಾಯರುಗಳಾಗಿ ದೊರೆಯದ್ದರಿಂದ ದೂರದಿಂದ ಕಳುಹಿಸಲ್ಪಟ್ಟ ... ... ಕಷ್ಟವನ್ನು ಅನುಭವಿಸುತ್ತಲೇ ಇದ್ದರು. ಅಲ್ಲದೆ ಅಂಥಾ ಕಡೆಗಳಿಗೆ ಉತ್ತಮವಾದ ಉಪಾಧ್ಯಾಯರು ಸಿಕ್ಕುವದು ದುರ್ಲಭವಾಗಿತ್ತು. ಇತ್ತ ಮನೆಯ ಹತ್ತಿರವೇ ಬಹು ಕಾಲದಿಂದ ಉಪಾಧ್ಯಾಯರುಗಳಾಗಿದ್ದ 50 ಮಾಸ್ಟರುಗಳ ಪೈಕಿ ಕೆಲವರು ತಮ್ಮ ಆಸ್ತಿ ಪಾಸ್ತಿಗಳನ್ನು ವೃದ್ಧಿಗೊಳಿಸುವದರಲ್ಲೇ ಮಗ್ನರಾಗಿ ಗ್ರಾಮದಲ್ಲಿ ನಡೆಯುವ ಪಾರ್ಟಿಪಂಗಡಗಳಲ್ಲಿ ಕೈಹಾಕಿಕೊಂಡು ಶಾಲೆಯ ಕೆಲಸವನ್ನು ಅಲಕ್ಷ್ಯಮಾಡುತ್ತಿದ್ದರೂ ಕೂಡ ವರ್ಗಾವರ್ಗಿಯಿಲ್ಲದೆ ಅವರು ಮನೆಯ ಸಮೀಪದಲ್ಲಿಯ ಶಾಲೆಯ ಅನುಕೂಲವನ್ನು ಅನುಭವಿಸುತ್ತಿದ್ದರು. ಇಂಥಾವರ ಪೈಕಿ ಒಳ್ಳೇ ಕೆಲಸ ಮಾಡುತ್ತಿದ್ದ ಇನ್ನು ಕೆಲವರ ಸೇವೆಯು ಒಂದೊಂದೇ ಮುಂದುವರಿದ ಶಾಲೆಗೆ ದೊರೆಯುತಿತ್ತೇ ಹೊರತು ಹಿಂದೆ ಬಿದ್ದ ಮೂಲೆಯ ಶಾಲೆಗಳಿಗೆ ಸಿಗುತ್ತಿರಲಿಲ್ಲ. ಇದನ್ನೆಲ್ಲಾ ನೋಡಿ ಎಲ್ಲಾ ಉಪಾಧ್ಯಾಯರುಗಳು ಒಂದೇ ಸಮನಾಗಿ ಅನುಕೂಲ ಅನಾನುಕೂಲಗಳನ್ನು ಅನುಭವಿಸಬೇಕೆಂದೂ, ಎಲ್ಲಾ ಶಾಲೆಗಳ ಅಭಿವೃದ್ಧಿಯು ಒಂದೇ ಸಮನಾಗಿ ಸಾಧಿಸಲ್ಪಡಬೇಕೆಂದೂ ಡಿ. ಬೋರ್ಡಿನವರು 8 ವರ್ಷದ ಮೇಲೆ ಒಬ್ಬ ಮಾಸ್ಟರು ಒಂದೇ ಕಡೆ ಇರಬಾರದೆಂದು ತೀರ್ಮಾನಿಸಿದ್ದಾಗಿದೆ. ಈ ತೀರ್ಮಾನವನ್ನು ಬೋರ್ಡಿನ ಪ್ರೆಸಿಡೆಂಟರು ಜಾರಿಗೆ ತಂದದ್ದು ನ್ಯಾಯಸಮ್ಮತವಾಗಿದ.

ನಿಜಸಂಗತಿ ಈ ರೀತಿ ಇದ್ದರೂ ಸಹ ಇವುಗಳನ್ನು ಮರೆಮಾಚಿ ಕಾಂಗ್ರೆಸಿನವರ ಮೇಲೆ ಇಲ್ಲಸಲ್ಲದ ಆರೋಪಗಳನ್ನು ಹೊರಿಸುವದಕ್ಕಾದರೂ ಕಾರಣವಿಲ್ಲವೆ ಇಲ್ಲ. ಕಾಂಗ್ರೆಸ್ ಪಕ್ಷದವರು ತಮ್ಮ ಚುನಾವಣೆಯ ಪ್ರತಿಜ್ಞೆಯ ಪ್ರಕಾರ ತಮ್ಮ ಕರ್ತವ್ಯವನ್ನು ಮಾಡುತ್ತಾ ದಿನೇ ದಿನೇ ಜನರ ಪ್ರೀತಿಗೆ ಹೆಚ್ಚೆಚ್ಚಾಗಿ ಪಾತ್ರರಾಗುತ್ತಿರುವದನ್ನು ನೋಡಿ ಸಹಿಸಲಾರದೆ ಯಾವದಾದರೂ ಕಾರಣದಿಂದ ಅವರು ಒಳ್ಳೆದೇ ಮಾಡಲೀ, ಕೆಟ್ಟದೇ ಮಾಡಲೀ ಅವರನ್ನು ದೂಷಿಸಿ ಮುಂದಿನ ಚುನಾವಣೆಗೆ ವಾತಾವರಣವನ್ನು ಸಜ್ಜುಗೊಳಿಸುತ್ತಿರುವ ಪ್ರಯತ್ನವು ಇದೆಂದರೆ ತಪ್ಪಾಗಲಾರದು. ಕಾಂಗ್ರೆಸಿನವರು ಸತ್ಯಾಗ್ರಹ ಹೋರಾಟದಲ್ಲಿ ಭಾಗವಹಿಸಿ ಜೈಲುಗಳಲ್ಲಿ ಕಷ್ಟಪಡುತ್ತಿದ್ದಾಗ ಕಾಂಗ್ರೇಸೇತರರು ಡಿ. ಬೋರ್ಡು ಮತ್ತು ಕೌನ್ಸಿಲು ಸಭೆಗಳಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಮಗ್ನರಾಗಿದಾಗ ಕಾಂಗ್ರೆಸಿನವರ ವರ್ತನೆಯನ್ನು ಟೀಕಿಸುತ್ತಾ ಮಾಡಿದ ಕಾರುಬಾರುಗಳನ್ನೂ, ಈಗ ಕಾಂಗ್ರೆಸ್ ಪಕ್ಷದವರು ಬೋರ್ಡಿನಲ್ಲಿಯೂ, ಕೌನ್ಸಿಲಿನಲ್ಲಿಯೂ ಮಾಡುತ್ತಿರುವ ಜನೋಪಯೋಗಿ ಕಾರುಬಾರಗಳನ್ನೂ ಹೋಲಿಸಿ ನೋಡಿದರೆ ಈ ಅಪಪ್ರಚಾರದ ಗುಟ್ಟಿನ ಅರ್ಥ ವಾಚಕರಿಗೆ ವೇದ್ಯವಾಗದಿರದು. ಎಂಥ ಅಪಪ್ರಚಾರ ನಡೆಸಿದರೂ ಸಹ ಕಾಂಗ್ರೆಸಿನ ತತ್ವಗಳನ್ನರಿತ ದೇಶೀಯರು ಅದಕ್ಕೆ ಲಕ್ಷ್ಯಕೊಡಲಿಕ್ಕಿಲ್ಲವೆಂಬುದರಲ್ಲಿ ಸಂಶಯವಿಲ್ಲ.

'ದೇಶೀಯ.'

ಸಾಮಾಜಿಕ ಕಾದಂಬರಿ.

ದೇವದತ್ತ.

೨೩ನೇ ಅಧ್ಯಾಯ.

ನಾಗೇಶ–ಇಲ್ಲ ಸ್ವಾಮಿ. ಅವರೀಗಾಗಲೇ ಪಟ್ಟಣಕ್ಕೆ ನಡೆದರು. ನಮ್ಮ ಪಟ್ಟಣದಲ್ಲಿ ಈಗ ಕಲ್ಲಿಕೋಟೆಯಿಂದ ಬಂದು ನೆಲಸಿರುವರಲ್ಲ, ಆ ನಮ್ಮ ಪೂರ್ವದ ಜಡ್ಜಿಯವರ ವಿಧವೆಯರನ್ನು ನೋಡಲು ಎಲ್ಲರೂ ಹೊರಟು ಹೋದರು. ಆ ಹುಡುಗಿಯು ಆ ಜಡ್ಜಿಯ ಮಗಳಂತೆ. ಹೀಗೆ ಹೇಳಿ ಮುಂದಡಿ ಇಟ್ಟನು, 'ಓಹೊ! ಈ ಕಡೆ ನೋಡಿ ನಮ್ಮ ದೊರೆಯವರು ದಯಮಾಡಿಸುತ್ತಿದ್ದಾರೆ. ಸವಾರಿ ಇನ್ನೆತ್ತ ಹೋಗಿತ್ತೋ?

ಹೋಗುವುದಲ್ಲಿಗೆ? ಇನ್ನು ಯಾರ ಜಮೀನಿನ ಮೇಲೆ ಕಣ್ಣು ಬಿದ್ದಿದೆಯೋ? ಏನಾದರೊಂದನ್ನು ವಶಮಾಡುವುದಕ್ಕಲ್ಲದೆ, ಹೊರಹೋಗುವುದುಂಟೆಯೇ? ಏನು ಅಲ್ಪಾಶೆ ಇರತಕ್ಕ ಮನುಷ್ಯನಪ್ಪಾ. ನಮ್ಮ ಜಮೀನಿನ ಬಳಿ ಒಂದು ಹಸನಾದ ಬೀಟೆ ಮರವಿದೆ ನೋಡಿ. ಅದು ಹೇಗೋ ಈ ರಾಕ್ಷಸನ ಕಣ್ಣಿಗೆ ಬಿದ್ದಿದೆ. ಮೊನ್ನೆ ಪೇಟೆಯಲ್ಲಿ ಕಂಡೊಡನೆ ಅವರೇ ನಮಸ್ಕಾರ ಮಾಡಿ ಮಾತಾಡಿಸಿದರು. ಆಗಲೇ ಇದರಲ್ಲೇನೋ ರಹಸ್ಯವಿರಬೇಕೆಂದು ಯೋಚಿಸಿದೆನು. ಅದು ಇದು ಮಾತಾಡುತ್ತಾ ಹೋಗುತ್ತಿದ್ದ ಹಾಗೆ ಈ ಪ್ರಸ್ತಾಪವನ್ನೆತ್ತಿದರು. ಏನು ಮಾಡುವುದು? ಈಗ ಕೊಡುವುದಿಲ್ಲವೆಂದರೆ, ಒಂದಲ್ಲದಿದ್ದರೆ ಮತ್ತೊಂದು ದಾರಿಯಲ್ಲಿ ನನ್ನನ್ನು ಕಷ್ಟಕ್ಕೆ ಗುರಿಮಾಡುತ್ತಾರೆ. ಇವನ ಎಡೆಯಲ್ಲಿ ನಮ್ಮಂಥವರಿಗೆ ಬದುಕುವುದೇ ಕಷ್ಟವಾಗಿದೆ.

ನಾಗೇಶ–ಬಹುಕಷ್ಟವಪ್ಪ. ಅವರ ಜಮೀನಿನ ಸಮೀಪವಿದ್ದ ನನ್ನ ಒಂದು ಪಕ್ಕ ಜಾಗವನ್ನು ಉಪಾಯದಿಂದ ವಶಪಡಿಸಿ ಬಿಟ್ಟನಲ್ಲ. ಅವರ ತಂದೆಗೆ ಆ ಜಾಗದ ಮೇಲೆ ದೃಷ್ಟಿ ಇತ್ತು. ಈಗ ಅವನಂತೂ ಅದನ್ನು ಹೊಡೆದೇ ಬಿಟ್ಟ.'

ಶ್ಯಾಮಣ್ಣ–ಅದು ಹೇಗೆ ಆಗುವುದು. ಅದು ನಿಮ್ಮ ಪಿತ್ರಾರ್ಜಿತ ಸ್ವತ್ತಲ್ಲವೇ. ಅದನ್ನು ನೀವು ಮಾರುವುದು ಹೇಗೆ?

ನಾಗೇಶ–ಅವಕ್ಕೆಲ್ಲಾ ಉಪಾಯ ಅವರಿಗೆ ಕಲಿಸಬೇಕೇ? ಕಾನೂನೇ ಅವರ ವಶದಲ್ಲಿದೆ. ಅದನ್ನು ರೂಢಿಸುವ ನೆಪದಿಂದ ನನಗೆ ಮುನ್ನೂರು ರೂಪಾಯಿ ಟಿಕಾವಿ ಹಣಕ್ಕೆ ಬರೆಯ ಹೇಳಿದರು. ಬರೆದಂತೆ ಮಂಜೂರು ಮಾಡಿಸಿಯೂ ಕೊಟ್ಟರು. ಆ ಮೇಲೆ ಹಣವನ್ನು ಕಟ್ಟಬೇಡವೆಂದರು, ನಾನು ಕಟ್ಟಲಿಲ್ಲ. ಅದು ಹರಾಜು ಆಯಿತು. ಇನ್ನೊಬ್ಬರಿಂದ ಕೂಗಿಸಿ ಆ ಮೇಲೆ ಅವನಿಂದ ಇವರೇ ತೆಗೆದುಕೊಂಡರು. ಮಾರಿದ್ದರೆ ಅದರ ಎರಡರಷ್ಟು ಬೆಲೆ ಸಿಕ್ಕುತ್ತಿತ್ತು. ಮಾಡುವುದೇನು? ಅವರ ಮಾತಿನಂತೆ ವರ್ತಿಸದಿದ್ದರೆ ಮಾರಿಯ ದೃಷ್ಟಿಗೆ ಬಿದ್ದಂತಾಗುವುದು.

ಶ್ಯಾಮಣ್ಣ–ದೇವದತ್ತನು ಈ ಊರಲ್ಲೇ ನೆಲಸಿದ್ದಾದರೆ, ಇನ್ನು ಇವನ ಕೋಡು ಮುರಿದಂತಾಗುವುದು. ಇಷ್ಟು ದಿವಸ ತೋರಿಸಿದ ನಡತೆಗಳಿಗೆ ಇನ್ನು ಆಸ್ಪದವಿರಲಾರದು.

ನಾಗೇಶ–ಅದು, ಅವನ ಮಾತಿನಿಂದಲೇ ನಿನ್ನೆ ತಿಳಿಯಿತಷ್ಟೆ? ಇರಲಿ, ಇನ್ನು ನೋಡುವ. ಈ ಕಡೆಯೇ ಬರುತ್ತಿರುವನು. ಈ ಸಂಗತಿಯು ಅವನಿಗೇನಾದರೂ ತಿಳಿದಿರುವುದೋ ಇಲ್ಲವೋ?

ಅಷ್ಟರಲ್ಲಿಯೇ ಚಾರುದತ್ತನು ಅವರನ್ನು ಸಮೀಪಿಸಿದನು. ಗ್ರಾಮಸ್ಥರಿಬ್ಬರೂ ತಲೆ ಬಗ್ಗಿಸಿ ಭಕ್ತಿಪೂರ್ವಕವಾಗಿ ಪ್ರಣಾಮ ಮಾಡಿದರು. ಚಾರುದತ್ತನು, ತನ್ನ ಹಸ್ತ ಚಲನೆಯಿಂದ ಅವರ ಅಭಿವಂದನೆಯನ್ನು ಸ್ವೀಕರಿಸಿ, 'ಏನು ವಿಶೇಷ' ಎನ್ನುತ್ತಾ ಅಲ್ಲಿ ನಿಲ್ಲದೆ ಸ್ವಲ್ಪ ನಿಧಾನವಾಗಿ ಮುಂದಡಿ ಇಟ್ಟನು. ಗ್ರಾಮಸ್ಥರಿಬ್ಬರೂ ಅವನನ್ನು ಹಿಂಬಾಲಿಸುತ್ತಾ, 'ಅಲ್ಲ, ದೇವದತ್ತನ ವಿಷಯ ಮಾತಾಡುತ್ತಿದ್ದೆವು' ಎಂದರು. ಚಾರುದತ್ತನು ವಿಸ್ಮಯನಾಗಿ, 'ಏನು! ದೇವದತ್ತನ ವಿಷಯವೇ? ಎಲ್ಲಿ ಆತ? ಎಂದು ಆಶ್ಚರ್ಯ ಚಕಿತನಾಗಿ ಕೇಳಿದನು.

'ಖಾವಂದರ ಸನ್ನಿಧಾನಕ್ಕೆ ಇನ್ನು ತಿಳಿಯದೇನೋ! ನಮ್ಮೂರಿಗೆ ಈಗ ದಯಮಾಡಿಸಿ, ಗುಣವತಿಗೂ, ಇನ್ನಿತರರಿಗೂ ಚಿಕಿತ್ಸೆ ಮಾಡುತ್ತಾರಲ್ಲಾ ಆ ವೈದ್ಯರು ಮತ್ತಾರೂ ಅಲ್ಲವಂತೆ. ಅವರೇ ದೇವದತ್ತನಂತೆ. ಅವನು ಒಬ್ಬ ಸ್ನೇಹಿತನ ಸಹಾಯದಿಂದ ವಿಲಾಯಿತಿಗೆ ಹೋಗಿ ಅಲ್ಲಿ ವೈದ್ಯ ವಿದ್ಯೆಯಲ್ಲಿ ಪಾರಂಗತನಾಗಿ ಈಗ ನಮ್ಮೂರಿಗೆ ಬಂದಿದ್ದಾನೆ. ತಾವು ಸೋಮದತ್ತನ ಮನೆಗೆ ದಯಮಾಡಿಸಿದಲ್ಲಿ ಎಲ್ಲವೂ ಸಾಂಗವಾಗಿ ನಿವೇದ್ಯವಾದೀತು' ಎಂದು ಗ್ರಾಮಸ್ಥನೊಬ್ಬನು ಹೇಳಿದನು.

ಚಾರುದತ್ತನ ಮುಖವು ಒಮ್ಮೆಯೇ ರಕ್ತಹೀನವಾಯಿತು. ಆದರೂ ತನ್ನ ಅಂತರ್ಯದ ಭಾವವನ್ನಡಗಿಸತಕ್ಕ ಒಂದು ನಾಟ್ಯ ನಗೆಯನ್ನು ಸೂಚಿಸುತ್ತಾ, 'ಈ ಸಂಗತಿ ನಿಜವೋ? ಅಲ್ಲಿಗೆ ಹೋಗಿ ತಿಳಿಯಬಹುದೆಂದರೆ, ಸಮಯವಿಲ್ಲ. ಆಫೀಸಿನಿಂದ ಬಂದು ನಾಲ್ಕು ಗಂಟೆಗೆ ಹೋಗುವೆನು. ನಿಜವಾಗಿಯೂ ಅವನು ದೇವದತ್ತನಾದರೆ ನಮ್ಮ ಭಾಗ್ಯಕ್ಕೆ ಎಣೆ ಇದೆಯೇ?' ಎನ್ನುತ್ತಾ ಮುಂದಡಿ ಇಟ್ಟನು.

ಗ್ರಾಮಸ್ಥರು ಸ್ವಲ್ಪ ದೂರ ಅವನನ್ನು ಅನುಸರಿಸಿದರು. ಚಾರುದತ್ತನು ಅವಸರವಾಗಿ ನಡೆದುದರಿಂದ, ಅವನನ್ನು ಬೀಳ್ಕೊಂಡು, ಹಿಂದಿರುಗಿದರು. ಚಾರುದತ್ತನು ತನ್ನ ಮನೆಗೆ ನಡೆದನು.

'ಏನು ಅವನ ಮುಖವೇ ಕಪ್ಪಾಯಿತು! ಆಶ್ಚರ್ಯವೋ, ಸಂತೋಷವೋ ಅಲ್ಲ ಹೊಟ್ಟೆಯುರಿಯೋ?' ಎಂದು ಒಬ್ಬನು ಹೇಳಿದನು.

ಮತ್ತೊಬ್ಬ–ಏನು? ಸಂತೋಷವೇ? ಇನ್ನೆಲ್ಲಾ ಆಯಿತು ಕಿಚ್ಚಿನಿಂದ ಅವನ ಮನಸ್ಸು ಕುದಿಯುತ್ತಿರುವುದೇನೋ! ನೀನವನ ಮುಖ ನೋಡಲಿಲ್ಲವೇ? ಮೊದಲೇ ಹುಳುಕಿನ ಗುಡ್ಡೆ. ಇನ್ನಂತೂ ದೇವದತ್ತನ ಆ ಅವಸ್ಥೆಯನ್ನು ನೋಡಿ ಸೈರಿಸುವುದಿದೆಯೇ? ನೋಡಬೇಕು. ಇನ್ನು ಇವನ ಸ್ಥಿತಿಯು ಹೇಗಾಗುವುದೆಂದು. ನಿಮ್ಮ ಅಭಿಪ್ರಾಯವೇನು? ನಾನೆಲ್ಲ ಅವನಿಗೆ ಮನವಲಿದು ಮರ್ಯಾದೆ ಕೊಡುತ್ತಿದ್ದೇನೆಂದು ತಿಳಿದಿರುವಿರಾ! ಎಂದೂ ಇಲ್ಲ. ಅವನ ಆಟವು ಚಿಕ್ಕಂದಿನಿಂದಲೇ ನನಗೆ ಒಗ್ಗದು. ಆದರೆ ಮಾಡತಕ್ಕದ್ದೇನು? ಗ್ರಾಮದಲ್ಲಿ ಒಬ್ಬ ವಿದ್ಯಾವಂತ, ಐಶ್ವರ್ಯವಂತ, ಅದರ ಮೇಲೂ, ಒಬ್ಬ ಸರಕಾರಿ ನೌಕರ. ಏನಾದರೂ ಕಾರ್ಯವಾಗಬೇಕಾಗುತ್ತೆ ನೋಡಿ. ಸಹಾಯವಿಲ್ಲದಿದ್ದರೂ ಸರಿಯೇ. ಎದುರು ಬಾರದ ಹಾಗಾದರೂ ನೋಡಿಕೊಳ್ಳಬೇಕಲ್ಲವೇ? ಅದಕ್ಕಾಗಿ ಅವನಿಗೆ ಅಷ್ಟಾದರೂ ಗೌರವ.'

'ನೀವು ಮಾತ್ರವಲ್ಲ, ಎಲ್ಲರೂ ಹಾಗೆ. ಮಾಡುವುದೇನು? ಕಾನೂನೇ ಅವರ ಕೈಯಲ್ಲಿದೆ. ಯೋಚಿಸಿದನೆಂದರೆ ಏನಾದರೂ ಮಾಡಬಲ್ಲನು. ಈ ಸರಕಾರಿ ಉದ್ಯೋಗಸ್ಥರು ನೆಲಸಿರತಕ್ಕ ಗ್ರಾಮಗಳೆಲ್ಲಾ ಹೀಗೆಯೆ. ನಮ್ಮಂಥ ಬಡಬಗ್ಗರಿಗೆ ಅವರ ಕಾಟವೇ ಕಾಟ.

'ನೀವು ನಿನ್ನೆ ದೇವದತ್ತನ ಭಾಷಣವನ್ನು ಕೇಳಿದಿರಷ್ಟೆ. ಆ ರೀತಿಯಲ್ಲಿ ಅವನು ನಡೆದುದಾದರೆ ಇನ್ನಿವನ ಕೋಡು ಮುರಿದ ಹಾಗೆಯೇ ಆಯಿತು.'

ಇಷ್ಟು ಮಾತಾಡುತ್ತಾ ನಡೆಯುವುದರೊಳಗಾಗಿ ಅವರಿಬ್ಬರೂ ತಂತಮ್ಮ ಮನೆಗಳಿಗೆ ತಿರುಗುವ ಸ್ಥಳಕ್ಕೆ ತಲಪಿದುದರಿಂದ, ಇಬ್ಬರೂ ಒಬ್ಬರನ್ನೊಬ್ಬರು ಬೀಳ್ಕೊಂಡು ನಿಜಭವನಾಭಿಮುಖವಾಗಿ ನಡೆದರು.

೨೪ ಅಧ್ಯಾಯ.

ಗುರುಪುರದ ರಂಗಭೂಮಿಯಲ್ಲಿ ಅಖಂಡವಾದ ನಾಯಕತ್ವವನ್ನು ನಡೆಸುತ್ತಿದ್ದ ಚಾರುದತ್ತನಿಗೆ ದೇವದತ್ತನ ಪುನರಾಗಮನವು ಕಠಿಣವಾದ ಮನೋವ್ಯಥೆಯನ್ನುಂಟುಮಾಡಿತು. ಇಷ್ಟು ದಿವಸವೂ ಅವಿಭಾಗಿತವಾದ ನಿರಂಕುಶ ಪ್ರಭುತ್ವವನ್ನು ನಡೆಸುತ್ತಿದ್ದನು. ವಿದ್ಯಾಹೀನರೂ, ಸಾಧುಸ್ವಭಾವದವರೂ ಸ್ವಾಭಿಮಾನರಹಿತರೂ ಆಗಿದ್ದ ಅವನ ಗ್ರಾಮಸ್ಥರು ಇವನ ಯೋಗ್ಯತೆಗೂ, ವಿದ್ಯೆಕ್ಕೂ, ಪದವಿಗೂ ಮೀರಿದ ಗೌರವವನ್ನು ಕೊಡುತ್ತಿದ್ದರು. ಗ್ರಾಮದ ಪ್ರತಿಯೊಂದು ಆಟ ಕೂಟಗಳಲ್ಲೂ, ಶುಭಶೋಭನಗಳಲ್ಲೂ ಇವನು ದಯಮಾಡಿಸಿದನೆಂದರೆ, ಅಗ್ರಾಸನವನ್ನು ಇವನಿಗೇ ಕೊಡುತ್ತಿದ್ದರು. ಅಸಾಧಾರಣವಾದ ಆದರದಿಂದಲೂ ಕಾಣುತ್ತಿದ್ದರು.

ಗ್ರಾಮಸ್ಥರ ಮನೆಗಳಿಗೆ ಮದುವೆ ಮುಂಜಿಗಳಿಗೆ ಅವನು ಪ್ರಾಯಶಃವಾಗಿ ಹೋಗುತ್ತಲೇ ಇರಲಿಲ್ಲ. ಏನಾದರೂ ದಯಮಾಡಿಸಿದನೆಂದರೆ ಆ ಮನೆಯವರಿಗೆ ತಮ್ಮ ಭಾಗ್ಯ ದೇವತೆಯೇ ಬಂದಷ್ಟು ಆನಂದವಾಗುವುದು. ಹೋದೆಡೆಯೆಲ್ಲಾ ಅವನಿಗೆ ಪ್ರತ್ಯೇಕ ಮರ್ಯಾದೆಗಳು. ಪ್ರತ್ಯೇಕ ಆಸನಗಳು ಮತ್ತು ಆದರಣೆಗಳು. ಊರಿನ ಕೆಲವು ಹಿರಿಯರು ಮತ್ತು ಪ್ರಮುಖರು ಅವನ ಸುತ್ತಲೂ ಕುಳಿತು, ಅವನ ಬಾಯಿಯಿಂದ ಹೊರಡತಕ್ಕ ಒಂದೊಂದು ಮಾತುಗಳನ್ನು ಬಹು ನಮ್ರಭಾವದಿಂದ ಕೇಳುವರು. ಅವನಾಡಿದ್ದೆಲ್ಲ ದೇವವಾಕ್ಯವೇ. ಇತರರ ಮುಖದಿಂದ ಬಂದರೆ, ಯಾರ ಲಕ್ಷ್ಯವನ್ನೂ ಆಕರ್ಷಿಸಲಯೋಗ್ಯವಾದ ಮಾತುಗಳೂ ಸಹ ಇವನ ಮುಖ ಗೌರವದ ಮಹಿಮೆಯಿಂದ ಕೂಡಿದ ಸಭೆಯನ್ನೆಲ್ಲಾ ಆನಂದದಿಂದ ತುಂಬಿಸುತ್ತಿದ್ದುವು.

ತಿಂಡಿ ತೀರ್ಥಗಳಲ್ಲೂ ಸಹ ಇವನಿಗೆ ಹೋದೆಡೆ ಪ್ರತ್ಯೇಕ ಏರ್ಪಾಡುಗಳೇ ನಡೆಯುತ್ತಿದ್ದವು. ಕೆಲವರು ಶಕ್ತಿ ಮೀರಿ ಖರ್ಚು ಮಾಡಿ ಕೆಲವು ವಿಶೇಷ ಪದಾರ್ಥಗಳನ್ನು ಇವನಿಗೋಸ್ಕರ ತರಿಸುತ್ತಿದ್ದರು. ಇಂಗ್ಲಿಷ್ ವಿದ್ಯೆ ಕಲಿತವರೂ, ಶ್ರೀಮಂತರೂ, ಸರಕಾರಿ ಉದ್ಯೋಗಸ್ಥರೂ ಆದುದರಿಂದ ಇವರೆಲ್ಲ ಬಹು ಹುಸನಾಗಿ ಪಕ್ವಮಾಡಿದ ಆಹಾರಗಳನ್ನೇ ನಿಯಮಕ್ಕೆ ಸಂಯೋಗಿ ಭುಂಜಿಸುವರೆಂಬುದೇ ಇವರ ಅಭಿಪ್ರಾಯ. ಇವರಿಗೆಲ್ಲ ನಮ್ಮ ನಾಡಿನ ತಿಂಡಿ ತೀರ್ಥಗಳೂ, ನಡಾವಳಿಕೆಗಳೂ ಒಗ್ಗಲಾರವೆಂಬುದೇ ಇವರ ಮತ. ಕೆಲವು ಹಳಬರು ಚಾರುದತ್ತನನ್ನು ಮೆಚ್ಚಿಸುವ ನಿಮಿತ್ತ ಕೆಲವೇಳೆ ಈ ತರಹದ ಸ್ತುತ್ಯಮಾತನ್ನು ಅವನೆದುರಿನಲ್ಲೇ ಹೇಳುತ್ತಿದ್ದರು.

ಇನ್ನು ಮುಂದಕ್ಕೆ ಈ ತರಹದ ಆದರಣೆಗಳನ್ನು ಅನಾಯಾಸವಾಗಿ ಪಡೆಯಲು ಸಾಧ್ಯವಿರಲಾರದೆಂಬುದು ಚಾರುದತ್ತನಿಗೆ ಆ ದಿವಸ ದೇವದತ್ತನು ವೈದ್ಯನ ಸ್ಥಿತಿಯಿಂದ ತನ್ನೊಡನೆ ಆಡಿದ ಸಂಭಾಷಣೆಯಿಂದಲೇ ವ್ಯಕ್ತವಾಗಿತ್ತು.

ಚಾರುದತ್ತನಿಗೆ ದೇವದತ್ತನ ಮೇಲೆ ಆದಿಯಿಂದಲೂ ಮಹತ್ತರವಾದ ಮತ್ಸರವಿತ್ತು. ಅವನ ಅಸಾಧಾರಣವಾದ ಪ್ರತಿಭೆಯೂ, ಇತರರು ಅವನ ಮೇಲೆ ತೋರಿಸುತ್ತಿದ್ದ ಮಹತ್ತರವಾದ ಪ್ರೀತಿಯೂ ಇದಕ್ಕೆ ಕಾರಣಗಳಾಗಿದ್ದವು ಈಗ ಅವನಿಗೆ ದೊರೆತಿರುವ ಅತ್ಯುನ್ನತ ಪದವಿಯೂ, ವಿದ್ಯಾ ನೈಪುಣ್ಯವೂ, ಜನರ ಪ್ರೀತಿಯೂ ಇವಕ್ಕೆಲ್ಲಕ್ಕೂ ಮೇಲಾಗಿ ಇನ್ನು ಮುಂದಕ್ಕೆ ಅವನು ತನ್ನ ಉನ್ನತಿಗೂ, ಪ್ರಭುತ್ವಕ್ಕೂ ಎದುರು ನಿಲ್ಲುವ ಕಂಟಕನಾಗುವನೆಂಬ ಭಾವನೆಯೂ ಚಾರುದತ್ತನ ಮನಸ್ಸಿನ ಆ ಜನ್ಮ ಅಸೂಯೆಯನ್ನು ಇಮ್ಮಡಿಗೊಳಿಸಿತು.

[ಅಪೂರ್ಣ.

—oOo—

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಥವಾ ಅಮರಸುಳ್ಯದ ಕಾಟಕಾಯಿ.

ಲೇಖಾಂಕ 17.

(ಡಿ. ಎನ್. ಕೃಷ್ಣಯ್ಯ ಯಂ. ಎ., ಬಿ. ಇ. ಡಿ.)

(ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.)

(ಕಳೆದ ಸಂಚಿಕೆಯಿಂದ ಸಾಗಿದ್ದು.)

ಅಮರಸುಳ್ಯದಲ್ಲಿ ಏಪ್ರಿಲ್ ಆರನೇ ತಾರೀಕು ಯುಗಾದಿಯ ದಿವಸ ದಂಗೆ ಏಳುವುದೆಂದು ನಿಶ್ಚೈಸಿದ್ದರೂ ಅದಕ್ಕೆ ಎಂಟು ದಿವಸಗಳ ಮೊದಲೇ ಜನರು ದಂಗೆಯೆದ್ದರು. ಇದಕ್ಕೆ ಮಡಿಕೇರಿಯ ದಿವಾನ ಲಕ್ಷ್ಮೀನಾರ್ಣಯ್ಯನ ತಮ್ಮ ರಾಮಪ್ಪಯ್ಯನು ಈ ಒಳಸಂಚಿನ ವರ್ತಮಾನವನ್ನು ಮಂಗಳೂರಿನ ಕಲೆಕ್ಟರನಿಗೆ ತಿಳುಹಿಸುವನೆಂಬ ಹೆದರಿಕೆಯೇ ಕಾರಣವಾಗಿದ್ದಿತು. ರಾಮಪ್ಪಯ್ಯನು ತಾನು ದಿವಾನನ ತಮ್ಮನೆಂದು ಗರ್ವಿತನಾಗಿದ್ದು ಅಮರ ಸುಳ್ಯದಲ್ಲಿ ತಾನೊಬ್ಬ ಅರಸನಂತೆ ವರ್ತಿಸುತ್ತಿದ್ದನಂತೆ. ಆತನು ತನ್ನನ್ನು ಹತ್ತೂರು ದೊರೆ ಅಥವ ರಾಜನೆಂದು ಕರೆಸಿಕೊಳ್ಳುತ್ತಿದ್ದನಂತೆ. ಅಮರಸುಳ್ಯದ ಜನರೆಲ್ಲರೂ ಈತನ ಹೇಳಿಕೆಯಂತೆ ನಡೆಯಬೇಕಿತ್ತು. ಇಲ್ಲದಿದ್ದರೆ ಈತನು ಬಲಾತ್ಕಾರದಿಂದ ಅವರ ಆಸ್ತಿಪಾಸ್ತಿಗಳನ್ನು ಕಿತ್ತುಕೊಳ್ಳುತ್ತಿದ್ದನು. ಇವನ ಮನೆಯಲ್ಲಿ ಇವನ ವೈಗಾವಲಿಗೆ ದೃಢಕಾಯರಾದ ಕೆಲವು ಜನರನ್ನು ಇವನು ನೇಮಿಸಿಕೊಂಡಿದ್ದನು. ಇದಲ್ಲದೆ ಇವನಿಗೆ ಆಗಾಗ ವೀಳ್ಯದೆಲೆ ತಿನ್ನುವುದಕ್ಕೆ ಎಲೆ ಅಡಿಕೆಗಳನ್ನು ಜೋಡಿಸಿ ಮಡಿಸಿಕೊಡುವುದಕ್ಕೆ ಸುಬ್ರಾಯನೆಂಬ ಒಬ್ಬ ಸೇವಕನು ಹತ್ತಿರವೇ ಇರಬೇಕಿತ್ತು. ಹೀಗೆ ಈತನು ತನ್ನ ಅಧಿಕಾರವನ್ನು ನಡೆಸುತ್ತಾ ಇರಲು ಪುಟ್ಟಬಸಪ್ಪನು ಕಲ್ಯಾಣಸ್ವಾಮಿ ಅಥವಾ ನಂಜುಂಡರಸು ಎಂಬ ಹೆಸರಿನಿಂದ ಕೊಡಗು ಅಮರಸುಳ್ಯಗಳ ರಾಜ್ಯಕ್ಕೆ ಹಕ್ಕುದಾರನಾಗಿ ಅಮರ ಸುಳ್ಯದಲ್ಲಿ ಪ್ರಕಟವಾದನು. ಇದು ರಾಮಪ್ಪಯ್ಯನಿಗೆ ಸಮ್ಮತವಾಗಲಿಲ್ಲವೆಂದು ತೋರುತ್ತದೆ. ಹೇಗೂ ರಾಮಪ್ಪಯ್ಯನಿಗೆ ಅವನ ಅರಸುತನದಿಂದ ಶತ್ರುಗಳು ಹೆಚ್ಚಾಗುತ್ತ ಬಂದರು. ಆ ಊರಿನಲ್ಲಿದ್ದ ಒಬ್ಬ ರಾಮಗೌಡನೆಂಬುವನು ಇವನ ಅಧಿಕಾರವನ್ನು ಮನ್ನಿಸಲಿಲ್ಲ. ಕೆಲವರು ಇವನ ಹೆಸರು ಸುಬ್ರಾಯನೆಂದೂ ಹೇಳುವರು. ರಾಮಗೌಡನು ಅಥವಾ ಸುಬ್ರಾಯನು ತುಂಬಾ ಭೂಸ್ಥಿತಿಯುಳ್ಳವನಾಗಿದ್ದು ತನ್ನ ಗ್ರಾಮದಲ್ಲಿ ಒಬ್ಬ ಮುಖ್ಯಸ್ಥನಾಗಿದ್ದನು. ಆದರೂ ರಾಮಪ್ಪಯ್ಯನು ತನ್ನ ಕಡೆಯ ಜನರನ್ನು ಕಳುಹಿಸಿ ರಾಮಗೌಡನ ಆಸ್ತಿಪಾಸ್ತಿಗಳನ್ನು ಬಲಾತ್ಕಾರದಿಂದ ವಶಪಡಿಸಿಕೊಂಡು ಆತನಿಂದ ಕರಾರಿಗೆ ರುಜು ಹಾಕಿಸಿಕೊಂಡನು. ಅಂದಿನಿಂದ ರಾಮಗೌಡನು ರಾಮಪ್ಪಯ್ಯನನ್ನು ನಿರ್ನಾಮಗೊಳಿಸಬೇಕೆಂದು ಹಟತೊಟ್ಟನು. ರಾಮಗೌಡನು ಮುಂದಾಳಾಗಿ ನಿಲ್ಲಲು ಎಲ್ಲರೂ ಆತನಿಗೆ ಸಹಾಯಕರಾದರು. ರಾಮಗೌಡನು ಉಪಾಯದಿಂದ ರಾಮಪ್ಪಯ್ಯನ ಮೈಗಾವಲಿನವರನ್ನೂ, ವೀಳ್ಯದೆಲೆ ಮಡಿಸಿಕೊಡುವವನನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡರು. ಇಷ್ಟರಲ್ಲಿ ರಾಮಪ್ಪಯ್ಯನು ತನ್ನ ವಿರೋಧಿಗಳು ಹೆಚ್ಚಾದುದನ್ನು ನೋಡಿ ಅವರಿಗೆ ಬೆದರಿಕೆಯನ್ನುಂಟುಮಾಡಬೇಕೆಂದು ತಾನು ಅವರ ಒಳಸಂಚಿನ ವಿಷಯ ಮಂಗಳೂರಿನ ಕಲೆಕ್ಟರನಿಗೆ ತಿಳಿಸುವನೆಂದು ಹೇಳಿದನು. ಇದರಿಂದ ಆ ಒಳಸಂಚಿಗೆ ಸೇರಿದವರು ಹೇಗಾದರೂ ಮಾಡಿ ರಾಮಪ್ಪಯ್ಯನನ್ನು ಬೇಗನೆ ಕೊಲ್ಲಬೇಕೆಂದು ನಿಶ್ಚೈಸಿದರು. ಅದಕ್ಕೋಸ್ಕರ ಇವರೆಲ್ಲರೂ ಸೇರಿ ರಾಮಪ್ಪಯ್ಯನನ್ನು ಒಂದು ವಿವಾದ ತೀರಿಸುವುದಕ್ಕೆ ತಮ್ಮಲ್ಲಿಗೆ ಬರಬೇಕೆಂದು ಹೇಳಿ ಕಳುಹಿಸಿದರು. ಆ ದಿವಸ ರಾಮಪ್ಪಯ್ಯನ ಮೈಗಾವಲಿನವರೂ ವೀಳ್ಯದೆಲೆ ಮಡಿಸಿಕೊಡುವವನೂ ಆತನ ಜತೆಯಲ್ಲಿರಲಿಲ್ಲ. ಅದರ ಹಿಂದಿನ ರಾತ್ರಿ ಆತನ ಪತ್ನಿಗೆ ಬಹಳ ದುಸ್ವಪ್ನಗಳು ಬಿದ್ದಿದ್ದುವು. ಆದುದರಿಂದ ಆಕೆಯು ತನ್ನ ಪತಿಯನ್ನು ಹೋಗಬಾರದೆಂದು ಬಹಳ ತಡೆದಳು. ಆದರೆ ರಾಮಪ್ಪಯ್ಯನು ಅಹಂಕಾರಿಯಾಗಿದ್ದರೂ ಅಷ್ಟೇ ಶೂರನಾಗಿದ್ದನು 'ಹುಟ್ಟಿದ ಮನುಷ್ಯನು ಒಮ್ಮೆಯೇ ಸಾಯುವನು. ಹೆಚ್ಚು ಬಾರಿ ಸಾಯುವುದಿಲ್ಲ' ಎಂದು ಹೇಳುತ್ತಾ ತನ್ನ ಹೆಂಡತಿಯ ಮಾತಿಗೆ ಗಮನ ಕೊಡದೆ ಆತನು ಕುದುರೆಯನ್ನೇರಿ ತಾನು ಹೋಗಬೇಕಾಗಿದ್ದ ಸ್ಥಳಕ್ಕೆ ಹೊರಟನು. ಹಾಗೆ ಹೋಗುತ್ತಿರುವಾಗ ಕಾಂತಮಂಗಲಸಂಬಲ್ಲಿ ಹಿಂದಿನಿಂದ ಯಾರೋ ಒಂದು ಕತ್ತಿಯಿಂದ ಅವನಿಗೆ ಒಂದು ಏಟು ಹಾಕಿದರು. ರಾಮಪ್ಪಯ್ಯನು ಆ ಪೆಟ್ಟನ್ನು ಸಹಿಸಿಕೊಂಡು ಮುಂದಿನ ಗದ್ದೆಯೊಂದಲ್ಲಿಗೆ ಕುದುರೆಯನ್ನು ಓಡಿಸಿಕೊಂಡು ಹೋದನು. ಆದರೆ ಅಲ್ಲಿ ಹೋದೊಡನೆ ಅವನ ಶತ್ರುಗಳು ಅವನನ್ನು ಸೆರೆಹಿಡಿದು ಕೊಂದು ಬಿಟ್ಟರಂತೆ. ಸಾಯುವುದಕ್ಕೆ ಸ್ವಲ್ಪ ಮೊದಲು ರಾಮಪ್ಪಯ್ಯನು ತನ್ನನ್ನು ಹೀಗೆ ಮೋಸದಿಂದ ಕೊಲ್ಲಬಾರದಿತ್ತು ತನಗೆ ನಿಜಸ್ಥಿತಿ ಹೇಳಿದರೆ ತಾನು ಧೈರ್ಯದಿಂದ ಯುದ್ಧ ಮಾಡಿ ಸಾಯುತ್ತಿದ್ದನು, ಎಂದನಂತೆ. ಅಮರಸುಳ್ಯದ ರೈತರು ರಾಮಪ್ಪಯ್ಯನನ್ನು ಕೊಂದ ನಂತರ ತಾವು ಒಂದು ದೊಡ್ಡ ಹುಲಿಯನ್ನು ಕೊಂದುಬಿಟ್ಟೆವು, ಇನ್ನೇನು ಕಂಪನಿ ಸರ್ಕಾರದ ಆಳ್ವಿಕೆಯನ್ನು ಸುಲಭವಾಗಿ ಕೊನೆಗಾಣಿಸುವೆವು ಎಂದು ಅಹಂಕಾರದಿಂದ ತುಂಬಿದರು. ಅವರ ಜತೆಗೆ ಸುತ್ತುಮುತ್ತಲಿನ ಗ್ರಾಮಗಳ ಜನರು ಸೇರಿದರು. ಪುಟ್ಟಬಸಪ್ಪನು ಅಥವ ಕಲ್ಯಾಣಸ್ವಾಮಿಯು ಕೊಡಗಿನ ರಾಜನೆಂದು ಈಗ ಬಹಿರಂಗವಾಗಿ ಕರೆಯಲ್ಪಟ್ಟನು. ಇವನ ಪಕ್ಷದ ಅನೇಕ ಜನರಿಗೆ ಸರಿಯಾದ ಆಯುಧಗಳೇ ಇರಲಿಲ್ಲ. ಕೈಗೆ ಸಿಕ್ಕಿದ್ದನ್ನು ಹಿಡಿದುಕೊಂಡಿದ್ದರು. ಇವರಲ್ಲಿ ಕೆಲವರನ್ನು ಕುರಿತು ಒಬ್ಬ ಕವಿಯು 'ತೊತ್ತಳಿಗೆಯಂ ಪಿಡಿದ ಭಟರೊಂದು ಸಾಲಿನಲಿ' ಎಂದರೆ ತೆಂಗಿನ ಮರದ ಮಡಲುಗಳನ್ನು ಹಿಡಿದ ಸೈನಿಕರು ಒಂದು ಸಾಲಿನಲ್ಲಿ ನಿಂತಿದ್ದರ ಎಂದು ವರ್ಣಿಸಿದ್ದರು. ಕೆಲವರು ಕೈಯಲ್ಲಿ ಕಲ್ಲುಗಳನ್ನು ಹಿಡಿದುಕೊಂಡಿದ್ದರಂತೆ. ಕಲ್ಯಾಣಸ್ವಾಮಿಯು ಬೆಳ್ಳಾರೆಗೆ ಹೋಗಿ ಅಲ್ಲಿ ಖಜಾನೆಯಲ್ಲಿದ್ದ ಹಣವನ್ನೆಲ್ಲಾ ಸ್ವಾಧೀನಪಡಿಸಿಕೊಂಡನು, ನಂತರ ಬೆಳ್ಳಾರೆಯಿಂದ ರಾಜಭಕ್ತಿಯುಳ್ಳ ತನ್ನ ಪ್ರಜೆಗಳೆಲ್ಲರೂ ಆಯುಧಸಹಿತವಾಗಿ ಅಲ್ಲಿಗೆ ಬಂದು ತನ್ನನ್ನು ಸೇರಬೇಕೆಂದು ಇಸ್ತಿಹಾರುಗಳನ್ನು ಹೊರಡಿಸಿದನು. ಈ ಇಸ್ತಿಹಾರುಗಳು ಘಟ್ಟದ ಬುಡದಲ್ಲಿದ್ದ ಚೆಂಬು ಪೆರಾಜೆ ಗ್ರಾಮಗಳಿಗೆ ತಲಪಿದೊಡನೆ ಅಲ್ಲಿನ ರೈತರೆಲ್ಲರೂ ತಮ್ಮ ಅಧಿಕಾರಿಗಳ ಸಮೇತ ಹೊರಟು ಆಯುಧಪಾಣಿಗಳಾಗಿ ಬೆಳ್ಳಾರೆಗೆ ಹೋಗಿ ದಂಗೆಗಾರರೊಡನೆ ಸೇರಿಕೊಂಡರು. ಇಸ್ತಿಹಾರಿನ ಪ್ರತಿಗಳು ತಾವ್ಯನಾಡು ಬೇಂಗುನಾಡುಗಳಿಗೆ ತಲಪಿದವು. ಅಲ್ಲಿನ ಜನರು ಕಲ್ಯಾಣಸ್ವಾಮಿಯ ಪಕ್ಷ ವಹಿಸಬೇಕೆಂಬುವಷ್ಟರಲ್ಲಿ ನಾಲ್ಕುನಾಡಿನ ಸುಭೇದಾರ್ ಮಾದೈಯ್ಯನು ಅಲ್ಲಿಗೆ ಹೋಗಿ ಅವರನ್ನು ತಡೆದನು. ಇಷ್ಟರಲ್ಲಿ ಎಂದರೆ ಮಾರ್ಚಿ 31 ರಲ್ಲಿ ಇಸ್ತಿಹಾರಿನ ಪ್ರತಿಯೊಂದು ಮಡಿಕೇರಿಯಲ್ಲಿದ್ದ ಸುಪರಿಂಟೆಂಡೆಂಟನ ಕೈ ಸೇರಿತು. ಆ ವರ್ತಮಾನವು ಅಮರಸುಳ್ಯದ ದಂಗೆಯನ್ನು ಕುರಿತು ಅವನಿಗೆ ಕೈ ಸೇರಿದ ಮೊದಲನೆಯ ವರ್ತಮಾನವಾಗಿದ್ದಿತು.

ಆದರೆ ಅಮರಸುಳ್ಯದಲ್ಲಿ ಕಲ್ಯಾಣಸ್ವಾಮಿಯು ಹೆಸರಿನಲ್ಲಿ ರಾಜ್ಯಾಭಿಯೋಗಿಯು ತಲೆಯೆತ್ತಿರುವನೆಂಬ ವರ್ತಮಾನವನ್ನು ಮಡಿಕೇರಿಯ ಜನರು ಮೊದಲು ನಂಬಲಿಲ್ಲ. ಅದಕ್ಕೆ ಎರಡು ಮೂರು ತಿಂಗಳುಗಳ ಮೊದಲು ನಿಜವಾದ ಕಲ್ಯಾಣಸ್ವಾಮಿಯು ಕೊಡಗಿನಲ್ಲಿ ಸುತ್ತಾಡಿದುದೂ, ಅವನು ಸೆರೆಹಿಡಿಯಲ್ಪಟ್ಟದ್ದೂ ಮಡಿಕೇರಿಯ ಜನರಿಗೆ ಗೊತ್ತಿತ್ತು. ಆದುದರಿಂದ ಈಗ ಯಾರೂ ನಿಜವಾಗಿ ತಲೆಯೆತ್ತಿರಲಾರರು. ಈ ವರ್ತಮಾನವನ್ನು ದಿವಾನ್ ಲಕ್ಷ್ಮೀನಾರಾಯಣನ ವಿರೋಧಿಗಳು ಅವನಿಗೆ ಇನ್ನಷ್ಟು ಕೆಡುಕುಂಟಾಗಬೇಕೆಂದು ಹರಡಿರಬೇಕೆಂದು ಯೋಚಿಸಿದರು. ಈ ಸಮಯದಲ್ಲಿ ದಿವಾನ್ ಲಕ್ಷ್ಮೀನಾರಾಯಣನನ್ನು ಕಲ್ಯಾಣಸ್ವಾಮಿಗೆ ಒಳಗಿಂದೊಳಗೆ ಸಹಾಯ ಮಾಡುತ್ತಿದ್ದನೆಂಬ ಅಪಾದನೆ ಮೇರೆ ಮೈಸೂರಿನಲ್ಲಿದ್ದ ಕೊಡಗಿನ ಕಮಿಷನರು ಲಕ್ಷ್ಮೀನಾರಾಯಣನನ್ನು ಕೆಲಸದಿಂದ ವಜಾಮಾಡಿ ವಿಚಾರಣೆಗೊಳಪಡಿಸಿದ್ದನು. ಲಕ್ಷ್ಮೀನಾರಾಯಣನು ಮಾರ್ಚಿ ಏಪ್ರಿಲ್ ತಿಂಗಳುಗಳಲ್ಲಿ ಪ್ರಾರಂಭವಾದ ಒಳಸಂಚಿನ ವಿಷಯ ತನಗೆ ಗೊತ್ತಿದ್ದರೂ ಸೂಪರಿಂಟೆಂಡೆಂಟನಿಗೆ ತಿಳುಹಿಸಲಿಲ್ಲವೆಂಬುದು ಆತನ ಮೇಲೆ ಹೊರಿಸಿದ ಒಂದು ಅಪರಾಧವಾಗಿದ್ದಿತು. ಆದರೆ ಅದಕ್ಕೆ ಲಕ್ಷ್ಮೀನಾರಾಯಣನು ತಾನು ಡಿಸೆಂಬರಿನಲ್ಲಿ ದಂಗೆಯುಂಟಾಗುತ್ತದೆಂದು ಹೇಳಿದ್ದನ್ನು ಬೇರೆ ದಿವಾನರು ಪ್ರಕಟಮಾಡಿ ದಂಗೆಯೇಳದಂತೆ ಮಾಡಿ ತನ್ನ ಮೇಲೆ ಸುಪರಿಂಟೆಂಡೆಂಟನಿಗೆ ಅವಿಶ್ವಾಸವುಂಟಾಗುವಂತೆ ಮಾಡಿದರು. ಈಗಲೂ ತಾನು ಒಳಸಂಚಿನ ವಿಷಯ ಹೇಳಿದರೆ ಹಾಗೆಯೇ ಆಗಬಹುದೆಂದು ಯೋಚಿಸಿ ತಾನು ಹೇಳಲಿಲ್ಲ, ಆದರೆ ತನ್ನ ತಮ್ಮ ರಾಮಪ್ಪಯ್ಯನಿಗೆ ಮಂಗಳೂರಿನ ಅಧಿಕಾರಿಗಳಿಗೆ ಈ ವಿದ್ರೋಹದ ವಿಷಯ ತಿಳಿಸುವುದಕ್ಕೆ ಬರೆದಿದ್ದೆನು ಎಂದು ಉತ್ತರ ಕೊಟ್ಟನು. ಅಂತೂ ಲಕ್ಷ್ಮೀನಾರಾಯಣನ ವಿಚಾರಣೆಯು ನಡೆದು ಪಂಚಾಯತದಾರರು ಆತನನ್ನು ನಿರ್ದೋಷಿಯೆಂದು ತೀರ್ಮಾನಿಸಿದರು. ಆದರೆ ಕಂಪೆನಿ ಸರ್ಕಾರದವರು ಮಾತ್ರ ಆತನನ್ನು ಸರಕಾರಿ ಉದ್ಯೋಗದಿಂದ ವಜಾ ಮಾಡಿದಂತೆ ತೋರುತ್ತದೆ.

ಮಡಿಕೇರಿಯ ಜನರು ಕಲ್ಯಾಣಸ್ವಾಮಿಯ ಇಸ್ತಿಹಾರನ್ನು ಮೊದಲು ನಂಬದಿದ್ದರೂ ಏಪ್ರಿಲ್ ಎರಡನೆಯ ತಾರೀಖಿನಲ್ಲಿ ಚೆಂಬು ಪೆರಾಜೆಯ ರೈತರು ಪುಟ್ಟಬಸಪ್ಪನ ಜನರನ್ನು ಸೇರಿಕೊಂಡರೆಂದೂ, ಪುಟ್ಟಬಸಪ್ಪನು ಬಿಸ್ಲೆ ಘಾಟಿಗಾಗಿ ಕೊಡಗಿಗೆ ಬರುವನೆಂದೂ, ಕೊಡಗಿನ ಉತ್ತರದ ಉಕ್ಕಡಗಳನ್ನು ಪುಟ್ಟಬಸಪ್ಪನ ಸೈನಿಕರು ವಶಪಡಿಸಿಕೊಂಡಿರುವರೆಂದೂ ವರ್ತಮಾನ ಕೇಳಿ ಸುಪರಿಂಟೆಂಡೆಂಟ್ ಸಾಹೇಬನು ಗಾಬರಿಯಾದನು. ಆತನು ತತ್‍ಕ್ಷಣವೇ ಕೋಟೆಯಲ್ಲಿದ್ದ ಸಿಪಾಯಿಗಳನ್ನೂ ಸೈನಾಧಿಕಾರಿಗಳನ್ನು ಏಳುಸಾವಿರ ಸೀಮೆಯ ಕಡೆಗೆ ಕಳುಹಿಸಿದನು. ದಿವಾನ್ ಬೋಪುವನ್ನೂ ಕೆಲವು ಕೊಡಗರೊಡನೆ ಈ ಸೈನ್ಯದೊಡನೆ ಕಳುಹಿಸಿಕೊಟ್ಟನು. ಇಷ್ಟರವರೆಗೆ ಕೊಡಗಿನ ಮುಖ್ಯ ಉದ್ಯೋಗಸ್ಥರನೇಕರಿಗೆ, ಕ್ಯಾಪ್ಟನ್ ಲೀಹಾರ್ಡಿ ಸಾಹೇಬನಿಗೆ ತಮ್ಮ ಪ್ರಾಮಾಣಿಕತೆಯ ಮೇಲೆ ವಿಶ್ವಾಸವಿಲ್ಲವೆಂದು ಮನಸ್ಸು ನೊಂದುಕೊಂಡಿದ್ದಿತು. ಇದು ಲೀಹಾರ್ಡಿಸಾಹೇಬನಿಗೆ ತಿಳಿದು ಕೊಡಗಿನವರೆಲ್ಲರೂ ಪುಟ್ಟಬಸಪ್ಪನ ಪಕ್ಷ ವಹಿಸಿದರೆ ದಂಗೆಯನ್ನು ಮುರಿಯುವುದಕ್ಕೆ ದೊಡ್ಡ ಸೈನ್ಯವು ಬೇಕಾಗಬಹುದೆಂದು ಅವರೊಡನೆ ಬಹಳ ಬುದ್ಧಿವಂತಿಕೆಯಿಂದ ವರ್ತಿಸಿದನು. ಮಡಿಕೇರಿ ಕೋಟೆಯಲ್ಲಿದ್ದ 36 ನೇ ರೆಜಿಮೆಂಟನ್ನು ಉತ್ತರ ಕೊಡಗಿಗೆ ಕಳುಹಿಸಿ ಕೋಟೆಯ ಕಾವಲಿಗೆ ಕೊಡಗರನ್ನೇ ನೇಮಿಸಿದನು. ಹೀಗೆ ತಮ್ಮಲ್ಲಿ ವಿಶ್ವಾಸವಿಟ್ಟದ್ದರಿಂದ ಎಲ್ಲಾ ನಾಡುಗಳ ಮುಖ್ಯಸ್ಥರು ತಾವೂ ತಮ್ಮ ನಾಡಿನ ರೈತರೂ ಈ ಕಾಟಕಾಯಿಯಲ್ಲಿ ಬ್ರಿಟಿಷರ ಪಕ್ಷದಿಂದ ಕಾದುವುದಕ್ಕೆ ಸಿದ್ಧರಾಗಿರುವೆವೆಂದು ಒಂದು ಅರ್ಜಿಯನ್ನು ಸೂಪರಿಂಟೆಂಡೆಂಟ್ ಸಾಹೇಬನಿಗೆ ಕೊಟ್ಟರು. [ಸಶೇಷ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

10 **Ludhiana.**

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಶೀ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗ್ಯೆ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗ್ಯೆ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ರಕ್ತ ಉಂಟಾಗುವದು. ಬಾಟ್ಲಿಗೆ 1 ರೂ.

ಗಜಾನನ ರಾಮಚಂದ್ರ ಕರ್ಶೀ.

ಮತ್ತು ಕಂಪೆನಿ,

(52–29) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸಹಿ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಬೋಪಯ್ಯನವರು.

ಬಾಚಮ್ಮನ ಕರ್ಣಪ್ಪನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂದೇಪಂಡ ಸೋಮಯ್ಯನವರು,

ಮ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮ ಸಿ. ಜಿ. ಮುದ್ದಮ್ಮಯ್ಯನವರು.

ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಬಿ ಪೊನ್ನಮ್ಮಯ್ಯನವರು.

ನಾಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ದಾದಯ್ಯನವರು

ಸೋಮವಾರಪೇಟೆ—ಮ ಕೆ ಮಾಗಪ್ಪನವರು.

ನಾಪೋಕ್ಲು—ಮ. ಚೆಪ್ಪುಡಿರ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮ. ಎಚ್. ಎಂ. ಕೃಷ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮ್ಯಾನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ...ರ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–16

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮ್ಯಾನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—ಜಮಾ, ಖರ್ಚು, ಸಾಲ ಮೂಲದ ರಿಜಿಸ್ಟರು, ಸಾಲದ ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, ಡಿಪಾಜಿಟ್ಟು ರಿಜಿಸ್ಟರು, ಕೋರ್ಟು ಖರ್ಚು, ಆರ್ಬಿಟ್ರೇಶನ್ ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಬಾಸನೂಸು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಫೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಾಬಂದಿ ಮಾರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ತ್ರಿಫ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು.
ಸೆಕ್ರೆಟರಿ:—ಮ. ಎಸ್. ಎನ್ ರಾಮಶೆಟ್ಟಿಯವರು.

ತಾ. 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35	ರೂ 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೇಯಿನ್ ರೋಡ್, ಮಡಿಕೇರಿ.

ಅಥವಾ

ಬ್ರ್ಯಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(52-25)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

"ಕೊಡಗು"

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ತಾ. ೭—೭—೧೯೩೯. ವಾರ್ಷಿಕ ಚಂದಾ ರೂ. ೩—

ಸಂಪುಟ ೧೯] [ಸಂಚಿಕೆ ೨

YOURS FAITHFULLY

"Yours faithfully" has been a common subscription in all business letters. But with the CORPORATION it has not been MERELY A SUBSCRIPTION.

For the last THIRTY THREE years The CORPORATION has served its constituents most faithfully, very truly and quite sincerely. Thousands of customers have been pleased on account of the satisfying, honest Banking Service offered by the Corporation. The Corporation is proud to serve you and to say.

FAITHFULLY YOURS

The Canara Banking Corporation, Limited.

(Incorporated In British India)

Estd. 1906.

52-29

ಕೇರಳ ಆಯುರ್ವೇದಿಕ್ ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾಕ್ಷಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬೇಕಂಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗ ತಕ್ಕಂತೆ ಚಿಕಿತ್ಸೆ ಮಾಡಲ್ಪಡುತ್ತದೆ.

ಜಾತಕ, ಪ್ರಶ್ನೆ, ಅಷ್ಟಮಂಗಲ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ದೇಶೀಯರೂ ಸಹ ಕೋರುತ್ತೇವ ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಚೀಟಿಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)
ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-19

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ನೋವಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ಹುಳುಕು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ವಲ್ಕನೈಟ್, ಎಂದೂ ತುಂಡಾಗದ ಸೆಕೊಲಾಯಿಟ್ ಅಥವಾ ಚಿನ್ನದಿಂದ: ಪ್ರತಿಯೊಂದು ಕೆಲಸದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವವು.

31

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—"ಲಕ್ಷ್ಮೀನಿವಾಸ್" ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊಡೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-9

The Agricultural &
Industrial Bank Ltd

"ZANDU"

ಝಂಡೂರವರ

ದ್ರಾ ಕ್ಷಾ ಸ ವ

ಮತ್ತು

ಚ್ಯ ವ ನ ಪ್ರಾ ಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇ ಸ ರಿ ಜೀ ವ ನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್

ಸೇ ರ ಸ ಪ ರಿ ಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂ ಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-40) ಮತ್ತು ಆಯುರ್ವೇದ ವಿದ್ವಾನ್

ವೀರರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್.
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆಕ್ಲಿ, ಬೀಹಾರ್, ಬನಾರೀಸ್, ಬಳ್ಳಾರಿ, ಬಿಜಾಪುರ, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಸಿಲ್ಹಟ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12-37

ಸಾಮಾಜಿಕ ಕಾದಂಬರಿ.

ದೇವದತ್ತ.

೨೪ ನೇ ಅಧ್ಯಾಯ.

ಇವರಿಬ್ಬರೂ ವಿದ್ಯಾರ್ಥಿಗಳಾಗಿರುವಾಗಲೂ ಸಹ ಚಾರುದತ್ತನು ಅಂತರಂಗದಲ್ಲಿ ಅವನನ್ನು ಬಹುವಾಗಿ ದ್ವೇಷಿಸುತ್ತಿದ್ದನು ದೇವದತ್ತನನ್ನು ಯಾರಾದರೂ ಹೊಗಳಿದರೆಂದರೆ ಅದು ಇವನಿಗೆ ಒಗ್ಗುತ್ತಿರಲಿಲ್ಲ. ಅಂಥಾ ಸಂದರ್ಭಗಳಲ್ಲಿ ಕೆಲವೇಳೆ ಇವನ ಅಂತರಂಗಿಕ ಭಾವನೆಗಳು ಮುಖ ವಿಕಾರದ ರೂಪದಲ್ಲೂ, ಅಂಗಚಲನೆಯ ವಿಕಾರದಿಂದಲೂ, ಮಾತಿನ ಕಾಠಿಣ್ಯದಿಂದಲೂ ಸೂಕ್ಷ್ಮದೃಷ್ಟಿಯಿಂದ ನೋಡುವವರಿಗೆ ಬೋಧೆಯಾಗುತಿತ್ತು. ದೇವದತ್ತನ ಪ್ರಾಣ ಸ್ನೇಹಿತನಂತೆ ನಟಿಸುತ್ತಿದ್ದನಾದ ಕಾರಣ ತನ್ನ ಮನೋಭಿಪ್ರಾಯವನ್ನು ಯಾರೊಡನೆಯೂ ಹೇಳುತ್ತಿರಲಿಲ್ಲ.

ದೇವದತ್ತನ ಅಲ್ಪ ಕಾಲದ ಅದೃಶ್ಯವು ತನ್ನ ಮನಸಿನಲ್ಲಿ ಅಡಗಿದ್ದ ವಿಷಯವನ್ನು ನಾನಾ ಕಥಾ ರೂಪದಲ್ಲಿ ಓಕರಿಸುವುದಕ್ಕೂ, ಗ್ರಾಮದಲ್ಲಿ ತನ್ನ ನಿರಂಕುಶ ಪ್ರಭುತ್ವವನ್ನು ಸ್ಥಾಪಿಸಲಿಕ್ಕೂ ಸರಿಯಾದ ಎಡೆಯನ್ನು ಕೊಟ್ಟಿತು. ದೇವದತ್ತನ ನಡತೆಯ ವಿಷಯವಾಗಿ ಅನೇಕ ಅನ್ಯಾಯದ ಕಲ್ಪನಾ ಕಥೆಗಳನ್ನು ಹೊರಡಿಸಿ ಈ ಮೊದಲು ಅವನ ಗುಣ ನಡತೆಗಳನ್ನು ಶ್ಲಾಘಿಸಿ ಮಾತಾಡುತ್ತಿದ್ದವರನ್ನೆಲ್ಲಾ ಕಂಡ ಕಂಡಲ್ಲಿ ಅಣಕಿಸಿ ಹಿಯ್ಯಾಳಿಸುತ್ತಿದ್ದನು.

ಅನ್ನೆಲ್ಲಾ ಮಾಡಿದ್ದು ಸಾಲದೆ ವೈದ್ಯನ ಸ್ಥಿತಿಯಲ್ಲಿದ್ದ ದೇವದತ್ತನನ್ನು ಅವನೆದುರಿನಲ್ಲೇ ಹಿಯ್ಯಾಳಿಸಿ ಇಲ್ಲದ ಆಲೋಚನೆಗಳಿಗೆ ಗುರಿಮಾಡಿದ್ದನು. ಈಗ ಆ ಅಪರಾಧಗಳನ್ನೆಲ್ಲಾ ಹೋಗಲಾಡಿಸುವುದು ಹೇಗೆ? ಅವನನ್ನೀಗ ಎದುರುಗೊಳ್ಳುವುದು ತಾನೇ ಹೇಗೆ? ಅವನ ಪೂರ್ವದ ಮಿತ್ರರೆಲ್ಲ ಈಗಾಗಲೇ ಅವನನ್ನು ಕಂಡು ಬಂದಿರುವರು. ತಾನು ಹೋಗದೆ ನಿಂತರೆ ತನ್ನ ಪೂರ್ವದ ಸ್ನೇಹವು ಕೃತ್ರಿಮ ವಿರಬೇಕೆಂದೂ, ತನಗೆ ಈಗ ದೇವದತ್ತನ ಸ್ಥಿತಿಯನ್ನು ಕಂಡು ಅಸೂಯೆ ಹುಟ್ಟಿರಬಹುದೆಂದೂ ದೇವದತ್ತನೂ, ಜನರೂ ಗ್ರಹಿಸಿಯಾರೆಂಬ ಹೆದರಿಕೆಯು ಅವನನ್ನು ಬಾಧಿಸತೊಡಗಿತು. ಈಗಾಗಲೇ ಒಂದು ದಿವಸವು ಕಳೆದುಹೋಯಿತು. ಏನು ಮಾಡಲೂ ದಾರಿ ತೋಚದು. ಮನಸ್ಸಿಗೆ ಸಮಾಧಾನವೇ ಇಲ್ಲ, ಕಡೆಗೆ ಅವನಿಗೆ ಒಂದು ಉಪಾಯವು ತಲೆದೋರಿತು.

ದೇವದತ್ತನ ಗುಣವನ್ನು ಮೊದಲಿನಿಂದಲೇ ಆತನು ಸರಿಯಾಗಿ ತಿಳಿದಿದ್ದನು. ಈಗ ತಾನು ಅವನ ಮೇಲೆ ಹೊರಿಸಿದ ಅಪವಾದಗಳಲ್ಲಿ ಕೆಲವನ್ನು ಹಾಸ್ಯಾಸ್ಪದವಾಗಿ ತಿರುಗಿಸಿ, ಬಾಕಿ ಕೆಲವನ್ನು ಸತ್ತುಹೋದ ರಮೇಶನ ಮೇಲೆ ಹೊರಿಸಿದ್ದಾದರೆ, ಇನ್ನು ದೇವದತ್ತನ ಪ್ರೀತಿಯನ್ನೂ, ತನ್ನ ನಡತೆಯಲ್ಲಿ ನಂಬುಗೆಯನ್ನೂ ಸಂಪಾದಿಸಲು ಸಾಧ್ಯವಿದೆಯೆಂದು ತಿಳಿದು ದೇವದತ್ತನ ಮನೆಗೆ ಬಂದನು.

ದೇವದತ್ತನು ಮಾತ್ರ ಮನೆಯಲ್ಲಿದ್ದನು. ಇತರರೆಲ್ಲಾ 'ಹರೇಂದ್ರ ಕುವರಿಯ (ಕಮಲ) ಮನೆಗೆ ಆಗ ತಾನೇ ಹೊರಟು ಹೋಗಿದ್ದರು. ಚಾರುದತ್ತನು ನಗು ಮುಖದಿಂದ ಕೂಡಿ 'ನಮಸ್ಕಾರ ದೇವದತ್ತಾ! ನಿನ್ನಂತಹ ಮೋಸಗಾರರು ಯಾರಾದರೂ ಇರುವರೇ. ನಿನ್ನ ನಡತೆಗೆ ಸರಿಯಾಗಿಯೇ ನಾನು ವರ್ತಿಸಿದ್ದಾಯಿತು.' ಎಂದು ಹೇಳುತ್ತಾ ಬಹು ಹರ್ಷಯುಕ್ತನಾಗಿ ಬಂದು ದೇವದತ್ತನೊಡನೆ ಕೈಯ್ಯಲ್ಲಾಡಿಸಿದನು. ದೇವದತ್ತನು ಹಸನ್ಮುಖನಾಗಿ 'ಕ್ಷಮಿಸು ಚಾರು' ಎನ್ನುತ್ತ ಚಾರುದತ್ತನಿಗೆ ಒಂದು ಆಸನವನ್ನು ಕೊಟ್ಟು, ತಾನೂ ಎದುರಿನಲ್ಲಿ ಕುಳಿತನು. ಇಬ್ಬರೂ ಬಲವಾಗಿ ನಗುತ್ತಾ ಒಬ್ಬರ ಕೈಯನ್ನು ಮತ್ತೊಬ್ಬರು ಹಿಡಿದುಕೊಂಡರು. ಚಾರುದತ್ತನ ಹರ್ಷವು ಮಾತ್ರ ಕಳಾಹೀನವಾಗಿತ್ತು. ಇಬ್ಬರೂ ಕ್ಷಣ ಕಾಲ ಮೌನವಾಗಿದ್ದರು. ಕಡೆಗೆ ಚಾರುದತ್ತನು; 'ದೇವದತ್ತ! ನೀ ಮಾಡಿದ ವಿಶೇಷ ಕಾರ್ಯಗಳೇನು! ನೀನೇನೇನು ಮಾಡಿರುವಿ ಎಂಬ ಸಂಗತಿಗಳನ್ನು ಕೇಳಲು ನನ್ನ ಮನಸ್ಸು ತವಕಿಸುತ್ತದೆ. ದಯವಿಟ್ಟು ಹೇಳು' ಎಂದನು

ದೇವದತ್ತನು ಸಂಕ್ಷೇಪವಾಗಿ ನಡೆದ ಸಂಗತಿಗಳನ್ನೆಲ್ಲಾ ತಿಳಿಸಿದನು. ಚಾರುದತ್ತನು ಅಸೂಯೆಮಿಶ್ರಿತ ಕಾಪಟ್ಯ ನಗೆಯನ್ನು ಸೂಚಿಸುತ್ತಾ ಎದ್ದು ನಿಂತು ದೇವದತ್ತನ ಕೈಗಳನ್ನು ತನ್ನ ಎರಡು ಕೈಗಳಿಂದಲೂ ಹಿಡಿದು 'ದೇವಾ! ನೀನೇ ಭಾಗ್ಯಶಾಲಿ, ನಿನ್ನ ನಿಜವಾದ ಗುಣ ನಡತೆಗಳನ್ನು ತಿಳಿಯದೆ ರಮೇಶನು ನಿನ್ನ ವಿಷಯ ಹೊರಡಿಸಿದ ಕೃತಕ ಕಥೆಗಳನ್ನು ನಂಬಿ, ನಾನು ಮಾಡಿದ ಅಪರಾಧಗಳನ್ನೆಲ್ಲಾ ಕ್ಷಮಿಸು. ಇನ್ನು ಮುಂದಕ್ಕೆ ನಾವಿಬ್ಬರೂ ಪರಮ ಮಿತ್ರರಾಗಿರಬೇಕು, ಯಾವದೊಂದು ವೈಮನಸ್ಸಿನ್ನಿರದೆ, ಇನ್ನು ಮುಂದಕ್ಕೆ ನಾವು ಸಹೋದರರಂತೆ ವರ್ತಿಸುವ. ಈಗ ಹೊತ್ತಾಯಿತು, ನಾನು ಹೋಗುತ್ತೇನೆ' ಎಂದನು.

ದೇವದತ್ತನ ಕಣ್ಣುಗಳಲ್ಲಿ ಆಶ್ರು ಜಲವು ತುಂಬಿಕೊಂಡಿತು. ಆತನಿಗೆ ತಮ್ಮ ಪೂರ್ವದ ಗೆಳೆತನವೂ, ತನಗೆ ಚಾರುದತ್ತನ ಮೇಲಿದ್ದ ಪ್ರೀತಿಯೂ, ಅದಕ್ಕೆ ಬದಲಾಗಿ ಅವನು ತನ್ನ ವಿಷಯವಾಗಿ ಆಗಾಗ್ಯೆ ತೋರ್ಪಡಿಸುತ್ತಿದ್ದ ಅಸೂಯಕಾರ್ಯಗಳೂ ಒಮ್ಮೆಯೇ ಮನಸನ್ನಾವರಿಸಿದವು. ಅವನು ಗದ್ಗದ ಸ್ವರದಿಂದ ಚಾರುದತ್ತನ ಕೈಗಳನ್ನು ಹಿಡಿದು, ಬಹು ಸ್ನೇಹಪುರಸ್ಕರವಾಗಿ 'ಚಾರು! ಆದದ್ದಾಯಿತು. ಅವುಗಳನ್ನು ಯೋಚಿಸುವುದರಿಂದ ಪ್ರಯೋಜನವಿಲ್ಲ. ನಾನು ನಿನ್ನನ್ನು ಚಿಕ್ಕಂದಿನಿಂದಲೇ ನನ್ನ ಒಡಹುಟ್ಟಿದ ತಮ್ಮನೆಂದೇ ಭಾವಿಸಿರುವೆನು. ನಿನ್ನ ಕೆಲವು ನಡತೆಗಳು ನನಗೆ ಅತ್ಯಂತ ನಿರಾಶೆಯನ್ನುಂಟುಮಾಡಿತ್ತಾದರೂ ನಿನ್ನ ಮೇಲಿದ್ದ ಪ್ರೀತಿಯು ನಿನ್ನನ್ನು ದೂಷಿಸಲು ಬಿಡಲಿಲ್ಲ. ನಾವಿಬ್ಬರೂ ಸಹೋದರರಂತೆ ಒಬ್ಬರನ್ನೊಬ್ಬರು ಪ್ರೀತಿಸುತ್ತಿರಬೇಕೆಂದೇ ನನ್ನ ಮನಸ್ಸಿನ ಇಂಗಿತವಾಗಿದೆ. ನೀನು ನಿಜವಾಗಿ ನನ್ನನ್ನು ಒಡಹುಟ್ಟಿದವನಂತೆ ಕಾಣುವೆನೆಂದು ಭಾಷೆ ಇತ್ತುದಾದರೆ ನನ್ನ ಮನಸ್ಸಿಗೆ ಅದಕ್ಕಿಂತಲೂ ಅಧಿಕವಾದ ಆನಂದವನ್ನು ಮತ್ತೊಂದೀಯದು.' ಎಂದನು. ಚಾರುದತ್ತನ ಕಣ್ಣುಗಳಿಂದಲೂ ನೀರು ಬರಲಾರಂಭಿಸಿತು. ಅವನು ದೇವದತ್ತನ ಹೃದಯವು ಎಂತಹ ಸದ್ಭಾವದ್ದು ಎಂಬುದನ್ನು ಪೂರ್ತಿಯಾಗಿ ತಿಳಿದನು. ತಾನು ಆತನ ವಿಷಯವಾಗಿ ಅಂದಿನ ವರೆಗೆ ಗುಪ್ತವಾಗಿರಿಸಿದ್ದ ಭಾವನೆಗಳಿಗೆಲ್ಲ ಅವನು ಪಶ್ಚಾತ್ತಾಪಪಟ್ಟನು. ದೇವದತ್ತನ ಮೇಲೆ ಅನನ್ಯವಾದ ಪ್ರೀತಿಯು ತಲೆದೋರಿತು. ತಾನು ಈಗಾಗಲೇ ಮಾಡಿದ್ದ ಅಪರಾಧಗಳನ್ನೆಲ್ಲಾ ಅಳಿಸುವಷ್ಟು ಬಲವಾದ ಪ್ರೀತಿಯಿಂದ ಅವನನ್ನು ಇನ್ನು ಮುಂದಕ್ಕೆ ಕಾಣುತ್ತಾ ಗೌರವಿಸಬೇಕೆಂಬ ದೃಢಸಂಕಲ್ಪವು ಅವನ ಮನಸ್ಸಿನಲ್ಲಿ ಅಂಕುರಿಸಿತು. ಅವನು ನಗುತ್ತಾ, 'ದೇವಾ! ಅಪರಾಧಗಳನ್ನು ಮನ್ನಿಸು. ನಿಜವಾಗಿಯೂ ನಾವಿಬ್ಬರೂ ಇನ್ನು ಮುಂದಕ್ಕೆ ಸಹೋದರರಲ್ಲದೆ ಅನ್ಯರಲ್ಲ. ಇದು ಮನಃಪೂರ್ವಕವಾದ ನನ್ನ ಮಾತಾಗಿದೆ' ಎಂದು ದೇವದತ್ತನ ಕೈಯನ್ನಲ್ಲಾಡಿಸಿ, ಎಲ್ಲಾ ಅಪರಾಧಗಳನ್ನು ಸತ್ತು ಹೋದ ರಮೇಶನ ಮೇಲೆ ಹೊರಿಸಿ ತಾನು ಹೊರಡಲುದ್ಯುಕ್ತನಾದನು. 'ಅದೆಲ್ಲಾ ಮರೆತು ಹೋಗಲಿ. ಚೆಲ್ಲಿ ಹೋದ ಹಾಲಿಗೆ ಅತ್ತೇನು ಪ್ರಯೋಜನ! ನಾನು ಅದಾವುದನ್ನೂ ಯೋಚಿಸೆನು. ಸ್ವಲ್ಪ ತಡೆ ಚಾರು! ಈಗಾಗಲೇ ನಮ್ಮವರೆಲ್ಲರೂ ಬರುವ ಹೊತ್ತಾಯಿತು. ಮಧ್ಯಾಹ್ನದ ಭೋಜನವನ್ನು ತೀರಿಸಿ ಹೋಗಬಹುದು.' ಎಂದು ದೇವದತ್ತನು ಚಾರುದತ್ತನನ್ನು ಅಡ್ಡಗಟ್ಟಿದನು.

ಚಾರು—ಕ್ಷಮಿಸು ದೇವಾ! ನಾಳೆ ಖಂಡಿತವಾಗಿಯೂ ಬರುತ್ತೇನೆ. ಮನೆಯಲ್ಲಿ ನನ್ನ ಬಾವನವರು ಬಂದಿರುವರು. ಅತಿಥಿಯನ್ನು ಬಿಟ್ಟು ಇಲ್ಲಿರುವುದು ಹೇಗೆ.

ದೇವಾ—ನಾಳೆ ಬರದೆ ಇರಬೇಡ. ಕಮಲೆಯನ್ನು ನೀನು ಕಂಡಿರುವುದಿಲ್ಲವಷ್ಟೆ? ನೀವಿಬ್ಬರೂ ಒಬ್ಬರನ್ನೊಬ್ಬರ ಪರಿಚಯವನ್ನು ಆಗುವಷ್ಟು ಬೇಗನೆ ಮಾಡಿಕೊಳ್ಳುವುದು ಯುಕ್ತವಾಗಿದೆ.' ಚಾರುದತ್ತನು ನಗುತ್ತಾ ಹೊರಟು ಹೋದನು. ಅವನು ಅದೃಶ್ಯನಾಗುವ ವರೆಗೆ ಅವನನ್ನೇ ನೋಡುತ್ತಿದ್ದು, ದೇವದತ್ತನು ಜಲವಂದ ನಿಟ್ಟುಸಿರನ್ನು ಬಿಟ್ಟು ಮರಳಿ ತನ್ನಾಸನದಲ್ಲಿ ಕುಳಿತು ವೃತ್ತಾಂತ ಪತ್ರಿಕೆಯನ್ನು ಕೈಗೊಂಡನು.

೨೫ ನೇ ಅಧ್ಯಾಯ.

ದೇವದತ್ತನು ತನ್ನ ಹೃದಯದ ಬಾಗಿಲನ್ನು ತೆರೆದು ಅದರಂತರ್ಯದಲ್ಲಿ ಹುದುಗಿದ್ದ ಅಕಲ್ಮಷವಾದ ಪ್ರೀತಿಯನ್ನು ತೋರಿಸಲು, ಅದರ ಪ್ರಭಾವದಿಂದ ಚಾರುದತ್ತನ ಮನಸ್ಸಿನಲ್ಲಿದ್ದ ಅಜನ್ಮಜನಿತವಾದ ಕಳಂಕವು ಸ್ವಲ್ಪ ಸಮಯದ ವರೆಗೆ ಅದೃಶ್ಯವಾಯಿತು. ಅಷ್ಟೇ ಅಲ್ಲ; ಅವನು ತನ್ನ ಪೂರ್ವದ ನಡತೆಗಳನ್ನೂ, ದೇವದತ್ತನಲ್ಲಿ ತನಗಿದ್ದ ಅಸೂಯೆಯನ್ನೂ ಕುರಿತು ಪಶ್ಚಾತ್ತಾಪ ಸಹ ಪಟ್ಟನು 'ನಿಜವಾಗಿಯೂ ದೇವದತ್ತನು ನನ್ನ ಅಪರಾಧಗಳನ್ನು ಮನ್ನಿಸಿರುವನೇ? ಅಲ್ಲ, ನನ್ನ ಪ್ರೀತಿಯನ್ನು ಸಂಪಾದಿಸಲು ಹೀಗೆ ನಟಿಸಿರಬಹುದೇ? ನಾನೆಂತಹ ಅಪರಾಧಗಳನ್ನು ಮಾಡಿದನು. ಇಷ್ಟಕ್ಕೆ ಸಾಲದುದಕ್ಕೆ ಅಂದು ವೈದ್ಯನ ವೇಷದಲ್ಲಿದ್ದ ಅವನನ್ನು ಅವನೆದುರಿನಲ್ಲೇ ಹೀಯಾಳಿಸಿದೆನಲ್ಲವೇ? ಇಂತಹ ಅಪರಾಧಗಳನೆಲ್ಲಾ ಮನ್ನಿಸಲು ಸಾಧ್ಯವೇ!.. ... ಏನೇ ಇರಲಿ, ನನ್ನ ನಡತೆಯನ್ನು ನಾನಿನ್ನು ತಿದ್ದಿಕೊಳ್ಳಬೇಕು. ನನ್ನ ಮುಂದಿನ ವರ್ತನೆಯು ನಾನು ಈ ವರೆಗೆ ದೇವದತ್ತನಿಗೆ ಮಾಡಿದ ಅಪರಾಧಗಳನ್ನು ಮರೆಯಿಸುವಂತಿರಬೇಕು, ಅಹಹಾ! ಎಂತಹ ವಿಚಿತ್ರ!! ಯಾರಾದರೂ ಎಂದಾದರೂ ಈ ತರಹದ ವೈಚಿತ್ರ್ಯವನ್ನು ಕನಸಿನಲ್ಲಿ ಸಹ ಊಹಿಸಿರಬಹುದೇ? ಅವನ ದಂಡದ ಪೂರ್ವೋತ್ತರವೇನು? ಅವನ ವಂಶದಲ್ಲಿ ಮೂರಕ್ಷರ ಇಂಗ್ಲಿಷ್ ಕಲಿತ ಒಬ್ಬನಾದರೂ ಇಂದಿನ ವರೆಗೆ ಇರಲಿಲ್ಲ. ಅವನ ತಂದೆ ತಾಯಿಗಳಿದ್ದ ಸ್ಥಿತಿಯೇನು? ಅವನು ಚಿಕ್ಕಂದಿನಲ್ಲಿದ್ದ ಅವಸ್ಥೆ ಏನು? ಅವನ ಈಗಿನ ಪದವಿ ಏನು? ಭಾಗ್ಯವು ಬರುವುದೆಂದರೆ ಹೀಗಲ್ಲವೇ? ಒಂದರ ಹಿಂದೆ ಒಂದು ಬರುತ್ತಲೇ ಇರುವವು.' ಎಂಬುದಾಗಿ ನಾನಾ ಸಂಗತಿಗಳನ್ನು ಯೋಚಿಸುತ್ತಾ ಬರುತ್ತಿರುವಷ್ಟರಲ್ಲಿ ತನ್ನ ಮನೆ ಸಮೀಪಿಸಿತು. ಚಾರುದತ್ತನ ಹೃದಯದಲ್ಲಿ ಹೇಗೆ ವಿಧವಿಧ ಯೋಚನೆಗಳು ತಲೆದೋರಿದವೋ, ಅದಕ್ಕೆ ಸರಿಯಾಗಿ ಮನಸ್ಸಿನ ಭಾವವೂ ಮಾರ್ಪಾಡಾಗಹತ್ತಿತ್ತು. ದೇವದತ್ತನ ನಿರ್ಮಲ ಹೃದಯದ, ಜ್ಯೋತಿಯಿಂದ ತನ್ನ ಮನಸ್ಸಿನಲ್ಲಿ ಅಂಕುರಿಸಿದ್ದ ಸ್ಮಶಾನ ವೈರಾಗ್ಯದಂತ ಪಶ್ಚಾತ್ತಾಪವು ಕ್ರಮಕ್ರಮವಾಗಿ ಅಳಿಸುತ್ತಾ ಅದರ ಸ್ಥಳದಲ್ಲಿ ಪೂರ್ವದ ಅಸೂಯೆಯು ಪುನರುತ್ಪತ್ತಿಯಾಗತೊಡಗಿತು.

ಕಾವು ಹೋದ ಹಾಗೆ ಚಾರುದತ್ತನ ಹೃದಯದಲ್ಲಿ ತಲೆದೋರಿದ್ದ ಕಿಚ್ಚನ್ನು ಬಹುವಾಗಿ ಜ್ವಲಿಸಿ, ದೇವದತ್ತನಲ್ಲಿ ತನಗೆ ಪ್ರೀತಿಯುಂಟಾಗುವುದರ ಬದಲು ವೈರ್ಯವನ್ನು ಬೇರೂರಿಸತಕ್ಕ ಸಂಗತಿಗಳನೇಕ ಒಂದರ ಹಿಂದೆ ಒಂದು ಕಾಣಿಸಿಕೊಳ್ಳಲಾರಂಭಿಸಿದವು.

[ಅಪೂರ್ಣ.

—೦0೦—

ಭಾರತೀಯ ನಾಣ್ಯಚಲಾವಣೆ ಮತ್ತು ಆರ್ಥಿಕ ವ್ಯವಸ್ಥೆ.

ಹಣವೆಂದರೇನು? ಕೇವಲ ನಾಣ್ಯದ ಬಿಲ್ಲೆ, ಯಾ ಕಾಗದದ ಚೂರು. ಅದರ ನಿಜಸ್ಥಿತಿಯಿಂದ ಅದನ್ನು ವಿವೇಚಿಸಿದರೆ 'ನಾಯಿ ಸಹ ಮುಟ್ಟದ ನಾಣ್ಯ'ವೆಂಬ ನಾಣ್ಣುಡಿಯಂತೆ ಈ ಲೋಹದ ಚೂರು, ಯಾ ಕಾಗದದ ತುಂಡು ಯಾವ ಉಪಯೋಗಕ್ಕೂ ಬಾರದು. ಅದು ಕೇವಲ ವ್ಯಾಪಾರೋದ್ಯಮಗಳನ್ನು ಸುಲಭಗೊಳಿಸುವ ಒಂದು ಚಿನ್ಹೆ. ವಿನಿಮಯ ಪದ್ಧತಿ ಪ್ರಕಾರ ವ್ಯಾಪಾರೋದ್ಯಮಗಳು ಸಾಗುವದಾದರೆ ಸರಕುಗಳನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಕಷ್ಟವಾಗಿ ವ್ಯಾಪಾರದಲ್ಲಿ ಜಡತ್ವವು ತಲೆದೋರುವದು. ವ್ಯಾಪಾರದ ಅನುಕೂಲಕ್ಕಾಗಿ ಹಾಗೂ ವಹಿವಾಟಿನ ಪ್ರಯೋಜನಾರ್ಥವಾಗಿ ಈ ತರಹದ ಒಂದು ವಿನಿಮಯ ಸಾಧನವನ್ನಿಡುವದಾಗಿದೆ. ಈ ಸಾಧನದ ಅಂತಸ್ಥಿನಿಂದಲೇ ಜನತೆಯ ಕೆಲಸ, ಸಾಮಾನುಗಳ ಯೋಗ್ಯತೆ, ಇವೇ ಮೊದಲಾದ ಎಲ್ಲಾ ವ್ಯವಸ್ಥೆಗಳನ್ನು ಅಳೆಯುವದರಿಂದ ಒಂದನೆಯದಾಗಿ, ಜನತೆಗೆ ಈ ವಿನಿಮಯ ಸಾಧನದ ಮೇಲೆ ನಂಬಿಕೆ ಇರಬೇಕು. ಎರಡನೆಯದಾಗಿ ದೇಶದ ಅಥವ ರಾಷ್ಟ್ರದ ಕಾರ್ಯ ಕಲಾಪಗಳು ಅಭಿವೃದ್ಧಿಗೊಂಡಂತೆ ಅದರ ಪೂರೈಕೆಯೊಡನೆ ಮುಂದರಿಯಬೇಕು. ಅಲ್ಲದೆ ವ್ಯಾಪಾರೋದ್ಯಮಗಳ ಯಾ ಇತರ ವಿಧದಿಂದ ವಿವಿಧ ರಾಷ್ಟ್ರಗಳೊಡನೆ ಸಂಬಂಧವಿರುವದರಿಂದ ಆ ದೇಶಗಳ ವಿನಿಮಯ ಸಾಧನಕ್ಕೂ, ಇದಕ್ಕೂ ಒಂದು ನಿಶ್ಚಿತ ಸಂಬಂಧವಿರಬೇಕು. ಇದಕ್ಕೆ ವಿನಿಮಯ ದರವೆಂದು ಹೇಳುವರು. ಈ ವಿನಿಮಯ ದರವು ಸರ್ಕಾರದವರಿಂದ ಬದಲಾಯಿಸಲ್ಪಡಲೂ ಬಹುದು. ಅಂತು ಒಂದು ದೇಶದ ಆರ್ಥಿಕ ಜೀವನವು ಸುಗುಮವಾಗಿ ನಡೆಯಬೇಕಾದರೆ ಈ ಬಗ್ಯೆ ಸರಕಾರದ ಧೋರಣೆಯು ಅತಿ ಗಣನೀಯವಾದ ಸಂಗತಿಯಾಗಿದೆ. ಆದ್ದರಿಂದ ಭಾರತೀಯ ವಿನಿಮಯ ವ್ಯವಸ್ಥೆಯು ಯಾವ ರೀತಿ ನಡೆಯುತ್ತಿದೆ ಎಂಬುದನ್ನು ವಿಚಾರಿಸುವ.

ಪ್ರಥಮತಃ ನಮ್ಮ ಈಗಿನ ವಿನಿಮಯ ಸಾಧನವಾದ ರೂಪಾಯಿಯು ಜನತೆಯ ನಂಬಿಕೆಗೆ ಪಾತ್ರವಾಗಿದೆಯೇನು? ಈ ಪ್ರಶ್ನೆಗೆ ಯಾರೂ ಇಲ್ಲವೆಂಬ ಉತ್ತರವನ್ನೀಯಲಾರರು. ವಸ್ತುತಃ ರೂಪಾಯಿಯನ್ನು ಪರಿಶೀಲಿಸಿದರೆ ಅದರಲ್ಲಿ ಬರೇ 165 ಗ್ರೇನು ಬೆಳ್ಳಿಯಿದೆ ಅಂದರೆ ಇಂದಿನ ಧಾರಣೆಯಂತೆ 7½ ಆಣೆಯ ಬೆಳ್ಳಿಯಿರುವದು. ಇದು ಜನತೆಗೆ ತಿಳಿದಿರುವ ಪ್ರಯುಕ್ತವೇ ಇಂದು ಜನತೆಯು ತಮ್ಮ ಸಂಪಾದನೆಯನ್ನು ಈ ಬೆಳ್ಳಿ ನಾಣ್ಯಗಳ ಮುಖಾಂತರ ಇಡದೆ ಚಿನ್ನದ ಮೂಲಕ ಇಡುತ್ತಿರುವರು. ಹೀಗೆ ಜನತೆಯು ರೂಪಾಯಿಯನ್ನು ಶೇಕರಿಸದ್ದರಿಂದ ಜನತೆಯಲ್ಲಿ ರೂಪಾಯಿಯ ಚಲಾವಣೆಯು ಯಥೇಚ್ಛವಾಗಿ ನಡೆಯದೆ ವಿವಿಧ ಕೈಗಾರಿಕೆ ಹಾಗೂ ವ್ಯವಸಾಯಕ್ಕೆ ಬಂಡವಾಳವಿಲ್ಲದೆ ಕೈಗಾರಿಕೋದ್ಯಮಗಳು ಮೂಲೆ ಸೇರುತ್ತಿರುವವು. ಭಾರತದ ನಾಣ್ಯ ಚಲಾವಣೆಯ ವಿಚಾರ ಪರಿಶೋಧಿಸಿದ ಹಿಲ್ಟನ್‌ಯಂಗ್ ಸಮಿತಿಯು ಈ ತೊಡಕನ್ನು ಕಂಡುಹಿಡಿದು ಇಲ್ಲಿಯ ನಾಣ್ಯದ ಚಲಾವಣೆಯು ಚಿನ್ನದ ಮೂಲದ ಅಂದರೆ ರೂಪಾಯಿಗೆ 8.5 ಗ್ರೈನಿನ ಚಿನ್ನದಂತೆ ನಡೆಯಬೇಕೆಂದು ಸರಕಾರಕ್ಕೆ ಶಿಫಾರಸ್ಸು ಮಾಡಿತು. ದುರಾದೃಷ್ಟವಶಾತ್ ಈ ಶಿಫಾರಸ್ಸನ್ನು ಸರ್ಕಾರವು ನಿರಾಕರಿಸಿತು. ಪರಿಣಾಮವೆಂದರೆ ಭಾರತದ ನಾಣ್ಯ ಚಲಾವಣೆಯ ಅಥವಾ ಈ ವಿನಿಮಯ ಸಾಧನದ ನ್ಯೂನ್ಯತೆಯು ಹಾಗೆಯೇ ನಿಂತಿದೆ. ತತ್ಪರಿಣಾಮವಾಗಿ ಜನತೆಯಲ್ಲಿ ಈ ವಿನಿಮಯ ಸಾಧನದ ಮೇಲೆ ಪೂರ್ಣ ವಿಶ್ವಾಸವಿಲ್ಲದಾಗಿದೆ. ಉದಾ:–ರೂಪಾಯಿಯನ್ನು ಕೊಟ್ಟರೆ ಒಂದು ರೂಪಾಯಿಯ ಬೆಳ್ಳಿ ಸಿಗದೆ ಬರೇ 7½ ಆಣೆಯ ಬೆಳ್ಳಿ ಸಿಗುವದೆಂದಮೇಲೆ ಜನತೆಯಲ್ಲಿ ನಂಬಿಕೆಯು ಇರಲಾರದು.

ಅದರ ಸರಬರಾಯಿ ಹೇಗೆ ಆಗುತ್ತಿದೆಯೆಂದು ವಿಚಾರಿಸಿದರೆ, ನಮ್ಮ ಭಾರತ ಭೂಮಿಯಂಥಾ ಒಂದು ದೇಶದಲ್ಲಿ ಬ್ಯಾಂಕಿಂಗ್ ಸೌಕರ್ಯಗಳು ಮುಂದರಿಯದ ಸ್ಥಿರವಾವಸ್ಥೆಯಲ್ಲಿದ್ದು ಚೆಕ್ಕಿನ ವಹಿವಾಟಿನ ಬದಲು ನೋಟುಗಳ ಚಲಾವಣೆಯು ಜಾರಿಯಲ್ಲಿರುವಾಗ ದೇಶದ ಕಾರ್ಯಕಲಾಪಗಳು ಹೆಚ್ಚಿದಂತೆ ಈ ನೋಟುಗಳ ಸರಬರಾಯಿಯಾದರೂ ಹೆಚ್ಚಬೇಕು ಆದರೆ ಇಂದಿನ ನಮ್ಮ ನೋಟಿನ ಕಾರ್ಖಾನೆಯಲ್ಲಿ ಈ ರೀತಿಯ ವ್ಯವಸ್ಥೆಗೆ ಎಡೆಯಿಲ್ಲ. ನಮ್ಮೊಳಗೆ ಯಾವ ರೀತಿಯ ವ್ಯಾಪಾರ ವಹಿವಾಟುಗಳು ನಡೆದರೂ ಸಹ ಈ ಹಣದ ಸರಬರಾಯಿಯು ಅಭಿವೃದ್ಧಿಗೊಳ್ಳುವಂತಿಲ್ಲ. ನಮ್ಮಲ್ಲಿ ಈ ಅನುಕೂಲತೆಗಳನ್ನು ಹೆಚ್ಚಿಸಿಕೊಳ್ಳಲು ನಾವು ಮಾಡಬೇಕಾದ ಒಂದೆ ವಿಧಾನವೆಂದರೆ ಪರದೇಶಗಳೊಡನೆ ನಾವು ವ್ಯಾಪಾರ ವಿಪುಲವಾಗಿ ಮಾಡಬೇಕು. ಒಳಗೆ ನಮ್ಮಲ್ಲಿ ಕೈಗಾರಿಕೋದ್ಯಮವನ್ನು ಅಭಿವೃದ್ಧಿಗೊಳಿಸಲು ಬಂಡವಾಳವಿಲ್ಲದೆ ತಳಮಳಿಸುತ್ತಿರುವಾಗ ನಾವು ರಫ್ತುಮಾಡುವದಾದರೂ ಏನನ್ನು? ಬರೇ ಕಚ್ಚಾ ಮಾಲುಗಳನ್ನು. ಇದರ ಅರ್ಥವಾದರೂ ಏನು? ಭಾರತವು ಪರದೇಶೀಯರನ್ನು ಪೋಷಿಸುವ ಕಾರ್ಯಕ್ಷೇತ್ರವಾಗಿ ಪರಿಣಮಿಸುವದು. ಇಂದು ನಮ್ಮನ್ನಾಳುವ ಈ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಈ ನಿರ್ದಿಷ್ಟ ಧೋರಣೆಯಿಂದಲೇ ಹಿಂದೂ ಮಾತೆಯು ಬ್ರಿಟಿಷರ ಕೂಲಿಯಾಳಿನೋಪಾದಿಯಲ್ಲಿ ಅವರ ಶಬ್ದದಲ್ಲೇ ಹೇಳಬೇಕಿದ್ದರೆ (A hewer of wood and a drawer of water for Britain) ಬ್ರಿಟಿಷರ ಮರ ಕಡಿಯುವ ಹಾಗೂ ನೀರು ಸೇದುವ ಸ್ಥಿತಿಗೆ ಇಳಿಸಲ್ಪಟ್ಟಿರುವಳು. ಮೊದಲಿನ ಇಂಪೀರಿಯಲ್ ಬ್ಯಾಂಕ್ ಆಫ್ ಇಂಡಿಯಾ ಆಕ್ಟಿನಲ್ಲಿ ಅಂಥಾ ತುರಿತದ ಸಂದರ್ಭದಲ್ಲಿ ದೇಶೀಯ ವ್ಯಾಪಾರ ಬಿಲ್ಲುಗಳ ಆಧಾರದ ಮೇಲೆ 12 ಕೋಟಿ ರೂಪಾಯಿಯನ್ನಾದರೂ ಚಲಾಯಿಸುವ ಅಧಿಕಾರವಿತ್ತು. ಈ ಶರತ್ತೂ ಸಹ ಈಗಿನ ಹೊಸ ಆಕ್ಟಿನಲ್ಲಿ ಮಾಯವಾಗಿದೆ. ದೇಶೀಯ ಬೇಡಿಕೆಯೂ ಆವಶ್ಯಕ್ಯನುಗುಣ ನಾಣ್ಯದ ಚಲಾವಣೆಯು ನಡೆಯದೆ ಅಲ್ಪ ಸ್ವಲ್ಪ ವಹಿವಾಟಾದರೂ ನಡೆಯಲು ಪರದೇಶಗಳೊಡನೆ ಸಂಬಂಧ ಬೆಳೆಸಬೇಕಿರುವದರಿಂದ ನಾಣ್ಯದ ಚಲಾವಣೆಯು ಸುಗಮವಾದ ಹಾದಿಯಲ್ಲಿ ನಡೆಯುತ್ತಿಲ್ಲ. ಬ್ರಿಟನಿನ ವ್ಯಾಪಾರ ಕೈಗಾರಿಕೆಯ ಅಭಿವೃದ್ಧಿಯನ್ನೇ ಮನದಲ್ಲಿಟ್ಟು ವರ್ತಿಸುತ್ತಿರುವ ಬ್ರಿಟಿಷ್ ಸಾಮ್ರಾಜ್ಯ ಶಾಹಿಯ ಧೋರಣೆಯಿಂದ ದೇಶದ ಕೈಗಾರಿಕೆಯು ಮೂಲೆಗುಂಪಾಗಿ ಒಂದು ಕಾಲಕ್ಕೆ ಕೈಗಾರಿಕೆಯ ಅತ್ಯುಚ್ಛ ಶಿಖರಕ್ಕೇರಿದ್ದ ಭಾರತವು ಇಂದು ವ್ಯವಸಾಯಗಾರರ ಬೀಡಾಗಿ ಅರೆಹೊಟ್ಟೆಯಿಂದ ತಳಮಳಿಸುವಂತಾಗಿದೆ.

ಮೂರನೆಯದಾಗಿ ವಿನಿಮಯ ದರ. ಈ ವಿಚಾರ ವಿವೇಚಿಸಿದರೆ ಇದರ ಪೂರ್ಣ ಅಧಿಕಾರವು ವೈಸರಾಯರ ಕೈಯಲ್ಲಿದೆ. ಭಾರತ ನ್ಯಾಯವಿಧಾಯಕ ಸಭೆಗಳಾಗಲೀ, ಜನತೆಯಾಗಲೀ ಎಷ್ಟು ಮೊರೆಯಿಟ್ಟರೂ ಅವರ ಮಂಜೂರಾತಿ ಇಲ್ಲದೆ ಈ ದರವನ್ನು ಏರಿಸುವ ಯಾ ಇಳಿಸುವ ಕಾರ್ಯಸಾಗದು. ಒಂದು ದೇಶದ ಆರ್ಥಿಕ ಉನ್ನತಿಗೆ ಯಾ ಅವನತಿಗೆ ಈ ವಿನಿಮಯ ದರವೇ ಪ್ರಾಮುಖ್ಯ ಸಾಧನವೆಂದು ಬೇರೆ ಹೇಳಬೇಕಿಲ್ಲ. ಆದರೆ ಇಂದು ಈ ಆರ್ಥಿಕ ಪ್ರಪಂಚದ ಘೋರ ಯುದ್ಧದಲ್ಲಿ ಅತ್ಯುತ್ತಮ ಆಯುಧವಾದ ಈ ವಿನಿಮಯ ದರದ ಹಿಡಿತವನ್ನು ಕೆಲಸಕ್ಕೆ ಬಾರದ ದೂರದಲ್ಲೊಂದು ಕೋಣೆಯಲ್ಲಿಟ್ಟು ಆಯುಧ ಹೀನರಾಗಿ ಹಿಮ್ಮೆಟ್ಟುತ್ತಿರುವವು. ಇದನ್ನು ವಿಶದವಾಗಿ ವಿವರಿಸುವದಿದ್ದರೆ ಪ್ರಥಮತಃ ನಮ್ಮೊಳಗಿನ ವ್ಯಾಪಾರ ವಹಿವಾಟುಗಳು ಅಂದರೆ ನಮ್ಮೊಳಗಿನ ಸಾಮಾನುಗಳ ಬೆಲೆಯು ಪರದೇಶೀಯರ ಕೈವಶವಾಗಿರಕೂಡದು. ಉದಾಹರಣೆಗೆ ಇಂಗ್ಲೆಂಡಿನಲ್ಲಿ ಸಾಮಾನುಗಳ ಪೂರೈಕೆಯು ಹೆಚ್ಚಾಗಿ ಅದರ ಬೆಲೆಯು ಇಳಿದರೆ ಸುಲಭವಾಗಿ ದೊರೆಯುವದರಿಂದ ಅದನ್ನು ವಿವಿಧ ದೇಶೀಯರೂ ವಿಪುಲವಾಗಿ ತರಿಸುವರು ತತ್ಪರಿಣಾಮದಿಂದ ಇಲ್ಲಿಯೂ ಅದರ ಬೆಲೆತಗ್ಗುವದು. ಅಂದ ಮೇಲೆ ನಮ್ಮ ವಿನಿಮಯ ದರವು ಬದಲಾಗಬೇಕು. ಅದು ನಿರ್ದಿಷ್ಟವಾಗಿರಲು ಸಾಧ್ಯವಿಲ್ಲ. ದೇಶದಲ್ಲಿ ಕ್ರಯವು ಬಿದ್ದರೆ ಮುಗ್ಗಟ್ಟುಂಟಾಗಿ ಆರ್ಥಿಕ ಜಾಗ್ರತಿಯು ಸುಸುಪ್ತಾವಸ್ಥೆಯನ್ನು ಹೊಂದುವದು. ಭಾರತದ ವ್ಯವಸಾಯ ತೊಂದರೆಗಳ ಪ್ರಯುಕ್ತ ವ್ಯವಸಾಯೋತ್ಪತ್ತಿಯ ಬೆಲೆಯನ್ನು ಏರಿಸುವ ಬಗ್ಯೆ ನಮ್ಮ ವಿನಿಮಯ ದರವು ಇಷ್ಟೇ ಎಂದು ನಿರ್ದಿಷ್ಟಗೊಳಿಸಲ್ಪಟ್ಟ ಪಕ್ಷ ಸರ್ಕಾರವು ಏನೂ ಮಾಡಲಾರದು. ಅಮೇರಿಕ, ಬ್ರಿಟನ್ ಈ ರಾಷ್ಟ್ರಗಳಲ್ಲಿ ಕ್ರಯ ಹೆಚ್ಚದ ವಿನಹ ಭಾರತದಲ್ಲಿ ಕ್ರಯ ಹೆಚ್ಚಲು ಸಾಧ್ಯವಿಲ್ಲ. ಅದರ ಬದಲು ಭಾರತದ ಈ ವಿನಿಮಯ ದರವು ಆಗಾಗ್ಯೆ ದೇಶದ ಹಿತಾಹಿತದಂತೆ ಬದಲಾಯಿಸಲ್ಪಡುವಂಥಾದ್ದಾಗಿದ್ದ ಪಕ್ಷ ವಿದೇಶಗಳನ್ನು ಆದರಿಸಿ ವರ್ತಿಸುವ ಆಗತ್ಯವಿದ್ದಿಲ್ಲ. ಆದ್ದರಿಂದ ಈ ವಿನಿಮಯ ದರದ ನ್ಯೂನತೆಯೇ ಇಂದು ಭಾರತದ ಅಧೋಗತಿಗೆ ಕಾರಣವೆನ್ನಬಹುದು.

ಭಾರತದ ಈ ಹಣದ ಚಲಾವಣೆಯ ವಿಚಾರದಲ್ಲಿರುವ ನ್ಯೂನತೆಯನ್ನು ಒಟ್ಟಿಗೆ ಹೇಳುವದಾದರೆ ನಮ್ಮ ಈ ವಿನಿಮಯ ಸಾಧನದ ಮೇಲೆ ಏಕೋ ರೀತಿಯ ನಂಬಿಕೆಯು ಜನತೆಯಲ್ಲಿಲ್ಲ. ಆದ್ದರಿಂದ ಹಣವನ್ನು ಕೂಡಹಾಕುವ ಹವ್ಯಾಸವು ಜನತೆಯಲ್ಲಿ ಹೆಚ್ಚಾಗಿದೆ. ಪರಿಣಾಮವೆಂದರೆ ಆರ್ಥಿಕ ಕ್ಷೋಭೆ. ನಮ್ಮ ವಿನಿಮಯ ಸಾಧನವು ದೇಶದ ಐಹಿಕ ಕೈಗಾರಿಕೆಯು ಮುಂದರಿದಂತೆ ಹೆಚ್ಚಾಗದ್ದರಿಂದಲೂ, ಇದು ಹೆಚ್ಚಾಗಲು ನಾವು ಪರದೇಶೀಯನ್ನು ನಂಬಿ ಕೂಡ್ರಬೇಕಿರುವದರಿಂದಲೂ ಭಾರತದ ಆರ್ಥಿಕ ಅಭಿವೃದ್ಧಿಗೆ ಗದಾಪ್ರಯೋಗವಾದಂತಾಗಿದೆ. ಕಡೆಯದಾಗಿ ವಿನಿಮಯ ದರವನ್ನು ಬದಲಾಯಿಸುವದು ನಮ್ಮ ಕೈಯ್ಯಲ್ಲಿಲ್ಲದ ಪ್ರಯುಕ್ತ ವಿವಿಧ ರಾಷ್ಟ್ರಗಳಿಗೆ ಆರ್ಥಿಕ ವ್ಯವಸ್ಥೆಗನುಸಾರ ನಮ್ಮ ಆರ್ಥಿಕ ಯೋಜನೆಯಾದರೂ ಮಾರ್ಪಟ್ಟು ದೇಶದಲ್ಲಿ ಆರ್ಥಿಕ ಸ್ಥಿಮಿತತೆ ಇಲ್ಲದಿರುವುದು. ವಿವಿಧ ರಾಷ್ಟ್ರಗಳ ಆರ್ಥಿಕ ಜೀವನದ ಬಿರುಗಾಳಿಗೆ ಸಿಲುಕಿ ಭಾರತೀಯ ಆರ್ಥಿಕ ಜೀವನವು ನೆಲೆಯಿಲ್ಲದೆ ತತ್ತರಿಸುತ್ತಿದೆ ಆದರೂ ನಮ್ಮ ಸರಕಾರವು ದೇಶದ ಆರ್ಥಿಕ ದೃಷ್ಟಿಯಿಂದ ಅಥವಾ ಕೈಗಾರಿಕೋನ್ನತಿಯ ಯೋಜನೆಯಿಂದ ಯಾವದೊಂದೂ ಕಾರ್ಯಪ್ರವರ್ತರಾಗಲು ತಯಾರಿಲ್ಲ.

ನಮ್ಮ ಆರ್ಥಿಕ ಜೀವನದ ನ್ಯೂನತೆಯನ್ನು ಸೂಕ್ಷ್ಮವಾಗಿ ವಿವರಿಸುವೆವು. ಒಂದು ದೇಶದ ಆರ್ಥಿಕ ಅಡಿಪಾಯವು ಅಲ್ಲಾಡದೆ ಗಟ್ಟಿ ಇರಬೇಕಾದರೆ ನಾವು ಎತ್ತುವ ಕಂದಾಯ ಕಾಣಿಕೆಗಳು ಕ್ರಮಬದ್ಧವಾಗಿರಬೇಕು. ಯಾರು ಕಂದಾಯ ಕೊಡಲು ಶಕ್ತರೋ, ಅಂಥವರಿಂದ ವಸೂಲು ಮಾಡಿ ಯಾರು ಖರ್ಚಿಗೆ ದುಡ್ಡಿಲ್ಲದೆ ತೊಂದರೆಪಡುತ್ತಿರುವರೋ ಅಂಥವರಿಗಾಗಿ ಖರ್ಚುಮಾಡಲ್ಪಡಬೇಕು. ಈ ರೀತಿಯ ಖರ್ಚಿನಿಂದ ತನ್ನ ವ್ಯವಸಾಯ ಸಲಕರಣೆಗಳನ್ನು ಪಡಕೊಳ್ಳಲಾರದ ಯಾ ತನ್ನ ಕೈಗಾರಿಕಾ ಸಾಮಾನುಗಳನ್ನು ಕೊಂಡುಕೊಳ್ಳಲಾರದೆ ಕಷ್ಟ ಪಡುತ್ತಿರುವವರನ್ನು ಸಂಪಾದನೆಯ ದಾರಿಯಲ್ಲಿ ಹಚ್ಚಬೇಕು. ಇಂಥಾ ಲಾಭದಾಯಕವಾದ ಖರ್ಚು ಬಡವರ ಬೀಡಾಗಿರುವ ಭಾರತ ದೇಶದಲ್ಲಿ ಅತ್ಯಾವಶ್ಯ. ಸೈಮನ್ ಕಮಿಷನಿನ ಆರ್ಥಿಕ ಎಸೆಸರಾಗಿದ್ದ ಸರ್ ವಾಲ್ಟರ್ ಲೇಟನರವರು ಹೇಳಿರುವಂತೆ 'ಆರೋಗ್ಯ ಮತ್ತು ವಿದ್ಯೆಯ ಮೇಲೆ ಖರ್ಚು ಮಾಡುವ ಹಣವು ಸಂಭಾವನೆಗೆ ಅರ್ಹತೆಯುಳ್ಳದ್ದು ಇದರಿಂದ ದೇಶದ ಸಂಪತ್ತುಗಳಿಸುವ ಶಕ್ತಿಯು ಹೆಚ್ಚುವದು. ದೇಶವು ಹೆಚ್ಚು ಕಂದಾಯವನ್ನು ತೆರುವ ಶಕ್ತಿಯುಳ್ಳದಾಗುವದು. ಆದರೆ ಭಾರತದ ಖರ್ಚು ದೇಶದ ಸಂಪತ್ಸಾಧನಕ್ಕೆ ಸ

(೯ನೇ ಪುಟವನ್ನು ನೋಡಿ)

ಪರದೇಶಗಳ ಪರಿಸ್ಥಿತಿ.

ಜರ್ಮನಿ.

ಹಿಟ್ಲರನು ಆತನಸ್ನೇಹಿತರು ಯಾರಿಗೂ ತಿಳಿಯದಂತೆ ಕಾರ್ಯ ಕೈಕೊಳ್ಳುವ ಕೆಚ್ಚೆದೆಯ ವೀರ. ಆತನ ಕಾರ್ಯ ಕಲಾಪಗಳನ್ನು ಕಣ್ಣಿಟ್ಟಯಿಸ್ಕದೆ ಅನೇಕ ರಾಜಕಾರಣಿಗಳು ಪರಿಶೀಲಿಸಿದ್ದರೂ ಆತನ ಧ್ಯೇಯವನ್ನು ಕಂಡು ಹಿಡಿಯಲು ಯಾರಿಗೂ ಸಾಧ್ಯವಿಲ್ಲ. ಇಂದು ಹಿಟ್ಲರನು ಡೇನ್ಜಿಗನ ಮೇಲೆ ಕೈ ಮಾಡುವನೋ ಎಂಬಂತೆ ಭಾಸವಾಗುತ್ತಿದೆ. ಪೋಲೆಂಡಿನವರು ಧೈರ್ಯದಿಂದ ಹಿಟ್ಲರನ ಯಾವ ವರ್ತನೆಯನ್ನೂ ವಿರೋಧಿಸಲು ತಯಾರಿದ್ದಾರೆ. ಇವರ ಹಿಂದೆ ಪ್ರಜಾ ಪ್ರಭುತ್ವ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸು ಸೇರಿ ಬೆನ್ನು ತಟ್ಟುತ್ತಿವೆ. ನಾಝಿಗಳು ಡೇನ್ಜಿಗನ್ನು ವಶಪಡಿಸಿಕೊಳ್ಳುವ ಎಲ್ಲಾ ಪ್ರಯತ್ನಗಳನ್ನೂ ಕೈಕೊಂಡಿರುವರು. ಪ್ರಾಪರ್ ಪ್ರಶ್ಯಾದ ಮೂಲಕ ಜರ್ಮನರು ತಮ್ಮ ಸೈನಿಕರನ್ನೂ, ಯುದ್ಧ ಸಾಮಗ್ರಿಗಳನ್ನೂ ಗುಟ್ಟಾಗಿ ಡೇನ್ಜಿಗ್ಗಕ್ಕೆ ಸಾಗಿಸುತ್ತಿರುವರು. ತತ್ಕಾಲ ಡೇನ್ಜಿಗ್ಗಿನ ಪರಿಸ್ಥಿತಿಯು ಭಯಂಕರವಾಗಿ ಕಾಣಬದ್ದರೂ ಜರ್ಮನರಿಗೆ ಅಲ್ಲಿಯ ಖರಾರಿನನ್ವಯ ಪೋಲೀಸರನ್ನು ಕೂಡಿಸುವ ಅಧಿಕಾರವಿರುವದರಿಂದ ಜರ್ಮನರು ಈ ಪೋಲೀಸರನ್ನು ಸೇರಿಸುವನೆಂಬ ನೆವನದಿಂದ ಜನರನ್ನು ತಂದು ಡೇನ್ಜಿಗ್‌ನಲ್ಲಿ ತುಂಬುತ್ತಿದ್ದಾರೆ. ಈ ವಿಚಾರದಲ್ಲಿ ಯೂರೋಪಿನ ಎಲ್ಲಾ ಕಡೆಗಳಲ್ಲಿಯೂ ಗೊಂದಲವೆದ್ದಿದೆ. ಫ್ರಾನ್ಸಿನ ಗಡಿಯಲ್ಲಿಯೂ ಜರ್ಮನ್ ಸೈನಿಕರ ಓಡಾಟವು ಹೆಚ್ಚಿರುವದೆಂದೂ ಸುದ್ದಿ.

ಅಂತೂ ಇಂದಿನ ಮಟ್ಟಿಗೆ ಹಿಟ್ಲರನು ಡೇನ್ಜಿಗದ ಮೇಲೆ ದೃಷ್ಟಿ ಇಟ್ಟಂತೆ ತೋರುತ್ತದೆ. ಹಿಟ್ಲರನು ಡೇನ್ಜಿಗದ ಮೇಲೆ ಬಿದ್ದರೆ ಯುದ್ಧವು ಅನಿವಾರ್ಯವೆಂಬುದು ಸಿದ್ಧಾಂತವಾದಂತೆಯಿತು. ಈ ಬಗ್ಗೆ ಪೋಲೆಂಡ್, ಬ್ರಿಟನ್, ಫ್ರಾನ್ಸು ಇವು ತಮ್ಮ ನಿರ್ಧಿಷ್ಟ ಧೋರಣೆಯನ್ನೂ ಸಾರಿಬಿಟ್ಟಿವೆ. 'ನಾವು ಯುದ್ಧ ಮಾಡದ ಶರಣಾಗತರಾಗಲಾರೆವು' ಎಂದು ಕಂಠೋಕ್ತವಾಗಿ ಪೋಲೆಂಡು ಉದ್ಗರಿಸಿದೆ. ಫ್ರಾನ್ಸಾದರೂ, ಜರ್ಮನಿಯು ಡೇನ್ಜಿಗದ ಮೇಲೆ ಬಿದ್ದರೆ ಪೋಲೆಂಡಿನ ಬೆಂಬಲಕ್ಕೆ ತಾನು ನಿಲ್ಲುವದೇ ಖಂಡಿತವೆಂದು ಖಚಿತಪಡಿಸಿ ಜಗತ್ತಿಗಿನ್ನೊಮ್ಮೆ ಸಾರಿದೆ. ಇನ್ನು ಬ್ರಿಟನು. ಇನ್ನಾದರೂ ಎಷ್ಟು ದಿನ ಈ ಸಂದಿಗ್ಧ ಸ್ಥಿತಿಯನ್ನು ಮುಂದೂಡುವದೆಂದು ನಿರ್ಧರಿಸಿ, ತನ್ನ ಪೌರೋಹಿತ್ಯವನ್ನು ತೋರಿಸಿದೆ. ಇದೇ ಈಗ ಲಾರ್ಡ್ ಹ್ಯಾಲಿಫಾಕ್ಸರು ಜರ್ಮನಿಗೆ ಘನವಾದ ರೀತಿಯಲ್ಲಿ ಎಚ್ಚರಿಕೆ ಕೊಟ್ಟಿದ್ದಾರೆ. ಅಂತು ಹಿಟ್ಲರನು ಮುಂಪಡಿಯಿಟ್ಟರೆ ಈ ರಾಷ್ಟ್ರಗಳು ಎದ್ದೇಳದಿರಲಾರವು. ಇರಲಿ, ಹಿಟ್ಲರನ ಕಾರ್ಯಕ್ರಮವಾದರೂ ಏನು? ಹಿಟ್ಲರನು ಈ ತಾ. 20ರಲ್ಲಿ ಡೇನ್ಜಿಗಕ್ಕೆ ಹೋಗಲು ನಿರ್ಧರಿಸಿರುವನು. ಈ ಯಾತ್ರೆಯ ಪರಿಣಾಮವೇನೆಂದು ಹೇಳಬರುವಂತಿಲ್ಲ. ಅಂತರಾಷ್ಟ್ರೀಯ ರಾಜಕೀಯದಲ್ಲಿ ಈಗೊಂದು ಬಿಕ್ಕಟ್ಟು ತಲೆದೋರಿ ರಾಜ್ಯವಿಸ್ತರಣಾ ಲಾಲಸೆಯೆಂಬ ಬೆಂಕಿಯ ಝಳದಿಂದ ಒಣಗಿ ಹದಗೆಡಯಂತಿರುವ ಈ ವಿವಿಧ ರಾಷ್ಟ್ರಗಳಲ್ಲಿ ಯಾವಾಗ ಬೆಂಕಿಯ ಕಿಡಿಯು ಸೇರಿ ಇಡೀ ಜಗತ್ತೇ ನಾಶವಾಗುವದೋ ಅದು ನಿರೀಕ್ಷಣೀಯ ವಿಚಾರ. ಅಂತೂ ಜಗತ್ತಿನ ಯುದ್ಧವೊಂದು ಅನಿವಾರ್ಯವೆಂಬುವುದು ಖಂಡಿತ. ಈಗ ಉಳಿದಿರುವುದೆಂದರೆ ಯಾವಾಗ ಮತ್ತು ಎಲ್ಲಿ ಪ್ರಾರಂಭವಾಗುವದೆಂಬುವುದು ಮಾತ್ರ. ಡೇನ್ಜಿಗ್ಗೇ ಅದರ ಉಗಮಸ್ಥಾನವಾಗಿ ಪರಿಣಮಿಸಿದರೂ ಆಗಬಹುದು. ಎಲ್ಲವೂ ಕಾಲಗರ್ಭದಲ್ಲಿ ಅಡಗಿರುವ ವಿಚಾರ.

ಇಟಲಿ.

ಜರ್ಮನಿಯು ಒಂದೆಡೆ ಮುನ್ನಡೆಯುತ್ತಿದ್ದರೆ ಇಟಲಿಯಾದರೂ ಸುಮ್ಮನೆ ಕೈಕಟ್ಟಿ ಕೂತಿಲ್ಲ. ಜರ್ಮನಿಯು ತನ್ನ ಬಾಯ್ಬಡಿಕತನದಲ್ಲಿ ಇಡೀ ಜಗತ್ತಿಗೇ ತಿಳಿಯುವಂತೆ ಘೋಷಿಸಿ ಕಾರ್ಯ ನಡಿಸಿದರೆ ಇತ್ತ ಇಟಲಿಯು ಬಾಹ್ಯ ಪ್ರಪಂಚದಲ್ಲಿ ಒಂದು ಮಾತನ್ನೂ ಆಡದೆ ಒಳಗೊಳಗೇ ಕಾರ್ಯ ಕೈಕೊಳ್ಳಲು ಹವಣಿಸುತ್ತಿದೆ. ಇದೀಗ ಅದರ ಕಣ್ಣು ಕೆಂಪು ಸಮುದ್ರದಲ್ಲಿರುವ ಶೇಕ್‌ಶೆಡ್ ದ್ವೀಪದ ಮೇಲೆ ಬಿದ್ದಿದ. ಈ ದ್ವೀಪವು ಬ್ಯಾಬಲ್ ಮಂಡೇಬ್ ಹಾಗೂ ಕ್ರಮಸಾವಾಗಳ ಮಧ್ಯದಲ್ಲಿದ್ದು ಯೇಮನ್‌ನ ಇಮಾಮ್‌ನಿಗೆ ಸೇರಿದೆ. ಕೆಂಪು ಸಮುದ್ರದಲ್ಲಿ ಸಾಗುವ ತನ್ನ ಸೈನ್ಯ ಹಾಗೂ ನೌಕಾ ಪಡೆಯ ಆಶ್ರಯಕ್ಕಾಗಿ ಈ ದ್ವೀಪದಲ್ಲಿ ಒಂದು ನೌಕಾ ನಿಲ್ದಾಣವನ್ನು ರಚಿಸಬೇಕೆಂಬ ಕಾಂಕ್ಷೆಯಲ್ಲಿದ್ದಿತು. ಆದರಿಂದಾಗಿ ವಿಧ ವಿಧ ರೀತಿಯಿಂದ ಈ ದ್ವೀಪದೊಡನೆ ವ್ಯಾಪಾರ ಖರಾರುಗಳನ್ನು ಮಾಡಲು ಯತ್ನಿಸಿತು. ಇದು ಫಲಕಾರಿಯಾಗಲಿಲ್ಲ. ಆದ್ದರಿಂದ ಯೆಮನ್‌ನ ಸುಲ್ತಾನನಿಗೆ ಒಂದು ಎಚ್ಚರಿಕೆಯ ಪತ್ರವನ್ನು ಕಳುಹಿಸಿ ಸುಮಾರು ಒಂದು ಸಾವಿರ ಇಟಲಿಯನರಿರುವ ಆ ದ್ವೀಪದಲ್ಲಿ ಇಟಲಿಯ ಪ್ರತಿನಿಧಿಯೊಬ್ಬನು ಅಗತ್ಯಬೇಕೆಂದೂ, ಇದಕ್ಕೊಪ್ಪದಿದ್ದರೆ ತಮ್ಮ ಮಂದಿಯ ಹಕ್ಕುಗಳ ಭದ್ರತೆಗಾಗಿ ತಾನು ಮಾಡಬೇಕಾದ ಕಾರ್ಯವನ್ನು ಮಾಡಿಯೇ ಮಾಡಬೇಕಾಗುವದೆಂದೂ ತಿಳಿಸಿತು. ಇದನ್ನು ಕೇಳಿ ಸುಲ್ತಾನನು ಒಡನೆಯೇ ಈ ದ್ವೀಪ ರಕ್ಷಣೆಯ ಸಾಧನೆಯನ್ನು ಕೈಕೊಂಡನು. ದ್ವೀಪದ ಕರಾವಳಿಯನ್ನು ಭದ್ರಪಡಿಸಿ 30 ಸಾವಿರ ಸೈನಿಕರ ಒಂದು ದಳವನ್ನು ಅಲ್ಲಿಗೆ ಸಾಗಿಸಿರುವನು. ಇಷ್ಟರಲ್ಲಿ ಬ್ರಿಟನ್ ಫ್ರಾನ್ಸುಗಳು ತಾವು ಸುಲ್ತಾನನಿಗೆ ಸಹಾಯ ಮಾಡುವುದಾಗಿ ಘೋಷಿಸಿದವು. ಇಟಲಿಯು ತಣ್ಣಗಾಯಿತು. ಮುಂದೆ ಸಂದರ್ಭ ನೋಡುತ್ತಾ ಇಟಲಿಯು ತಟಸ್ಥವಾಗಿದೆ.

ಚೀನೀ-ಜಪಾನ್ ಯುದ್ಧ.

ಈ ಕದನಾರಂಭವಾಗಿ ವರ್ಷ ಎರಡಾಗುತ್ತಾ ಬಂದರೂ ಜಯಾಪಜಯಗಳ ನಿರ್ಣಯವು ಇನ್ನೂ ಆಗಿಲ್ಲ. ಈಗೀಗ ಚೀನೀಯರ ಕೈವಾಡವು ಹೆಚ್ಚಾಗ ಹತ್ತಿದೆ. ಕಳೆದ ಎರಡು ವಾರಗಳಲ್ಲಿ ಚೀನೀ ವಿಮಾನ ಪಡೆಯು ಜಪಾನರ ಹಿಡಿಕೆಯಲ್ಲಿರುವ ಕೇಂಟನ್ನಿನ ಮೇಲೆ ಧಾಳಿ ನಡೆಸಿತು. ಇದರಿಂದ ಜಪಾನರ ಆಹಾರ ಸಾಮಗ್ರಿಗಳ ಉಗ್ರಾಣವು ಭಸ್ಮವಾಗಿರುವವು. ಅಂತೆಯೇ ಕಿಯಾಂಗ್ಸು ಹೊನಾನ್, ಕಿಯಾಂಗ್ಸಿ ಮತ್ತು ಹೂಪೇಗಳಲ್ಲಿ ಜಪಾನರಿಗಾದ ಅಪಜಯದಿಂದ ಜಪಾನರ ಧೃತಿಗೆಟ್ಟಿದೆ. ಜಪಾನಿ ಸೈನ್ಯಾಧಿಕಾರಿಗಳು ಸ್ವತಹ ಹಾಂಕೋದಿಂದ 30 ಸಾವಿರ ಸೈನ್ಯವನ್ನು ತರಿಸಿ ಚೀನೀಯರನ್ನು ಎದುರಿಸುವ ಹವಣಿಕೆಯಲ್ಲಿರುವರು. ಚೀನೀಯರ ಗೊರಿಲ್ಲಾ ಯುದ್ಧ ಕ್ರಮವನ್ನು ಕೇಳುವವರಿಗೆ ರೋಮಾಂಚನವಾಗದಿರದು. ಹೈನಾನ್ ದ್ವೀಪ ಮತ್ತು ಚೀನೀಯರ ಅಂಕೆಗೆ ಬಿದ್ದಿರುವ ವಸಾಹತುಗಳಲ್ಲಿರುವ ಚೀನೀ ಗೊರಿಲ್ಲಾ ಯುದ್ಧ ಭಟರು ಆಗಾಗ್ಯೆ ಹೊರಬಿದ್ದು ಜಪಾನರನ್ನು ಬಡಿದು ನಷ್ಟಗೊಳಪಡಿಸುತ್ತಿದ್ದಾರೆ. ಜಪಾನರ ಸೈನ್ಯದ ಈ ಕಾದಾಟವು ಪ್ರಬಲವಾಗುತ್ತಾ ಬರುತ್ತದೆ. ಕ್ವ್ಯಾಂಗ್ ಶಾನಿನಲ್ಲಿ ಜೂನ್ 9ನೇ ತಾರೀಕಿನಂದು ಚೀನೀ ವಾನರ ಸೇನೆಯು ತಮ್ಮ ಜೀವನದ ಹಂಗು ತೊರೆದು ಖಡ್ಗಧಾರಿಗಳಾಗಿ ಮುಂದೊತ್ತಿ 40 ಜಪಾನಿ ಸೈನಿಕರ ರುಂಡಗಳನ್ನು ಹಾರಿಸಿತು. ಮರುದಿನ ಜಪಾನರ ಪ್ರಚಂಡ ಸೇನೆಯು ಅಲ್ಲಿಗ ಬಂದಿತು. ಅಷ್ಟರಲ್ಲಿ ಈ ಗೊರಿಲ್ಲಾ ಯುದ್ಧ ಭಟರ ಸುಳಿವೇ ಇಲ್ಲ. ಇನ್ನೊಂದು ಕಡೆಯಲ್ಲಿ ಹೋಗಿ ತಮ್ಮ ಹಾವಳಿಯನ್ನು ಪ್ರಾರಂಭಿಸಿದ್ದರು. ಹೀಗೆ ಚೈನೀಯರ ಹಾವಳಿಯಿಂದ ಜಪಾನರು ದಿಗ್ಭ್ರಾಂತರಾಗಿರುವರು.

ರಷ್ಯಾ-ಬ್ರಿಟನ್ ಸಂಧಾನ.

ಈ ಒಪ್ಪಂದವೂ ಇನ್ನೂ ಆಗಿಲ್ಲ ಮತ್ತು ಆಗುವ ಹಾಗೂ ಇಲ್ಲ. ಈ ವಿಳಂಬಕ್ಕಾದರೂ ಕಾರಣ ಇಲ್ಲದೆ ಇಲ್ಲ. ಸಮಾನತೆಯ ತತ್ವಗಳನ್ನು ಅನುಸರಿಸದೆ ಫ್ರಾನ್ಸುಮತ್ತು ಬ್ರಿಟನು ಸೇರಿ ಅವುಗಳ ಮನಸಿಗೊಪ್ಪುವಂತೆ ಒಂದು ಸಂಧಿಯು ರಷ್ಯಾದೊಡನಾಗಬೇಕೆಂದರೆ ರಷ್ಯಾವು ಹೇಗೆ ತಾನೇ ಒಪ್ಪೀತು? ಒಬ್ಬ ಕೂಲಿಯವನಂತೆ ಕರೆದರೆ ಬರುವಂತೆ ರಷ್ಯಾವನ್ನು ಮಾಡಬೇಕೆಂಬ ಹವಣಿಕೆಯಲ್ಲಿ ಈ ರಾಷ್ಟ್ರಗಳು ತಲೆ ಕೆರೆದು ಹೊಡಿಕೊಳ್ಳುತ್ತಿರಲು ಈ ಸಂಧಾನಕ್ಕೆ ರಷ್ಯಾವು ಮುಂದಾದೀತೇ? ತಮ್ಮ ಸ್ವಾರ್ಥಸಾಧನೆಗಾಗಿ ಒಂದು ಆಟದ ಸಾಧನದಂತೆ ಆಡಿಸಲೂ, ಕುಣಿಸಲೂ ನೋಡುವ ಇವರಿಗೆ ಆತ್ಮಗೌರವವಿರುವ ಒಂದು ರಾಷ್ಟ್ರವು ಸುಮ್ಮನಿದ್ದೀತೇ? ಅಂಥಾದ್ದರಲ್ಲಿ ರಷ್ಯಾದ ಘನತೆಯೂ, ಬಲವೂ, ಇಡೀ ಜಗತ್ತಿಗೇ ವೇದ್ಯವಿರುವಾಗ ರಷ್ಯಾವು ಇಂಥಾ ಸಂಧಿಗೆ ಸಹಿ ಹಾಕೀತೆ? ಒಟ್ಟಿನಲ್ಲಿ ರಷ್ಯಾದ ಹೇಳಿಕೆಯಂತೆ ಸಮಾನತೆಯ ಶರತುಗಳನ್ನು ಇಟ್ಟು ಮಾಡಬೇಕೆನ್ನುವ ಒಪ್ಪಂದಕ್ಕೆ ಸ್ವಾರ್ಥಿಗಳಾಗಿ ಮೆರೆಯುವ ಪ್ರಜಾಪ್ರಭುತ್ವ ರಾಷ್ಟ್ರಗಳು ಸಹಿ ಹಾಕುವಂತಿಲ್ಲ. ಇಂದು ಬ್ರಿಟಿಷ್ – ರಷ್ಯಾ ಒಪ್ಪಂದವು ಬರೇ ಮಾತಿನ ಗೊಂದಲವಾಗಿ ಉಳಿದಿದೆ. ಜನಾಂಗಗಳನ್ನು ಸಂತೈಸಲು 'ನೋಡಿಯಪ್ಪಾ ರಷ್ಯಾ ಏನು ಮಾಡಿದರೂ ಒಪ್ಪುವುದಿಲ್ಲ' ಎಂದು ಹೇಳಿ ಬ್ರಿಟನು ತನ್ನ ಪ್ರತಿಷ್ಠೆಯನ್ನು ಉಳಿಸಿಕೊಳ್ಳಲು ಯತ್ನಿಸುತ್ತಿದ.

ಬ್ರಿಟನಿನ ಪ್ರಜಾಪ್ರಭುತ್ವ.

ಬ್ರಿಟನು ಪ್ರಜಾ ಪ್ರಭುತ್ವ ರಾಷ್ಟ್ರಗಳ ಮುಂದಾಳೆಂದೆನಿಸಿಕೊಂಡು ಅಂತರರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಅವುಗಳ ಪರ ಪೌರೋಹಿತ್ಯ ವಹಿಸಿ ಸರ್ವಾಧಿಕಾರಿಗಳಿಗೆ ವ್ಯತಿರಿಕ್ತ ವರ್ತಿಸಲಾರದೆ ಒಳಗೊಳಗೆ ಸಣ್ಣ ಪುಟ್ಟ ರಾಷ್ಟ್ರಗಳನ್ನು ಬಲಿ ಕೊಡುತ್ತಾ ಬಂದದ್ದು ಅನುಭವದ ಮಾತು. ಈಗ ವಿಚಾರಗಳನ್ನು ಸೂಕ್ಷ್ಮವಾಗಿ ವಿವೇಚಿಸಿದಲ್ಲಿ ಬ್ರಿಟನಿನಲ್ಲಿ ಪ್ರಜಾ ಪ್ರಭುತ್ವವೆಂಬ ಹೆಸರೊಂದು ಉಳಿದಿದೆಯಲ್ಲದೆ ವಾಸ್ತವವಾಗಿ ಪ್ರಜಾ ಪ್ರಭುತ್ವ ತತ್ವಗಳು ಜಾರಿಯಲ್ಲಿಲ್ಲವೆಂಬುದು ಮನನೀಯವಾಗುವದು. ಬ್ರಿಟನು ಸರ್ವಾಧಿಕಾರಿಗಳ ಮುನ್ನಡೆಯನ್ನು ಪರೋಕ್ಷವಾಗಿ ಮನ್ನಿಸುತ್ತಾ ಬಂದಿದೆ. ಅಬಿಸಿನೀಯಾದಲ್ಲಿ ಇಟಲಿಯನರ ಧಾಳಿಯನ್ನು ಒಪ್ಪಿಕೊಂಡಿತು. ಹಿಟ್ಲರನ ಮುನ್ನಡೆಗೆ ಆಗಾಗ್ಯೆ ತೋರಿಕೆಯ ಬೆದರಿಕೆಯನ್ನು ಹಾಕಿದರೂ ಆತನ ಕಾರ್ಯವನ್ನು ಮನ್ನಿಸುತ್ತಾ ಬಂದಿದೆ. ಸ್ಪೈಯಿನಿನಲ್ಲಿ ಸರ್ವಾಧಿಕಾರಿಗಳ ಪ್ರೇರಣೆಯಿಂದ ನಡೆಯುತ್ತಿದ್ದ ಯಾದವೀ ಕಲಹದಲ್ಲಿ ಜನರಲ್ ಫ್ರಾಂಕೋವು ವಿಜಯಿಯಾಗಲು ಆತನ ಅಧಿಕಾರವನ್ನು ಸ್ಪೈಯಿನಿನಲ್ಲಿ ಬ್ರಿಟನು ಅಂಗೀಕರಿಸಿತು. ಅಲ್ಲದೆ ಇತ್ತಿತ್ತಲಾಗಿ ಸರ್ವಾಧಿಕಾರಿಗಳೊಡನೆ ಗುಪ್ತವಾಗಿ ಸೇರಿ ಜಪಾನಿಗೆ ಒಳಗೊಳಗೇ ಸಹಾಯಮಾಡುತ್ತಿದೆಯೆಂದೂ ಸುದ್ದಿ ಇದೆ. ಅಂತು ಸದ್ಯ ಬ್ರಿಟಿಷ್ ಸರಕಾರವೆಂದರೆ ಚೇಂಬರ್ಲೇನರೇ ಆಗಿದ್ದಾರೆ. ಇಂಗ್ಲೆಂಡಿನ ಜನತೆಗೆ ಸರಕಾರವು ಮಾಡುತ್ತಿರುವ ಕಾರ್ಯಗಳ ಅರಿವೇ ಇಲ್ಲ; ಅಂದ ಬಳಿಕ ಪ್ರಜಾ ಜವಾಬ್ದಾರಿ ಸರಕಾರವೆಂದು ಘೋಷಿಸುತ್ತಿರುವ ಬ್ರಿಟನರ ಮಾತಿನಲ್ಲಿ ಅರ್ಥವೇನಿದೆ? ಅಂತು ಒಳಗೊಳಗೇ ಎಂಥಾ ಭಯಂಕರ ಕೃತ್ಯವನ್ನಾದರೂ ಮಾಡಿ ತಮ್ಮ ಪ್ರತಿಷ್ಠೆಯನ್ನು ಕಾಪಾಡಿಕೊಳ್ಳಲು ಬ್ರಿಟನು ಸಿದ್ಧವೇ ಇದೆ. ಅದರ ವೇಶವು ಯಾವ ಯಾವ ರೀತಿ ಪಲ್ಲಟವಾಗುವದೆಂಬುದನ್ನು ನಿರೀಕ್ಷಿಸುತ್ತಿರುವ.

ಕೊಡಗು

ಜುಲೈ ತಾರೀಖು ೭ನೇ ಶುಕ್ರವಾರ ೧೯೩೮.

ಮಿ. ವಟ್ಸಾಲರವರ ವರದಿ.

ಕೊಡಗಿನ ಸರ್ಕಾರದ ವೆಚ್ಚವು ಆದಾಯವನ್ನು ಮೀರುತ್ತಿದ್ದ ಕಾರಣ, ಇವೆರಡನ್ನು ಸಮಗಟ್ಟಲು ಇಂಡಿಯಾ ಸರ್ಕಾರದವರು ಮದ್ರಾಸಿನ ಎಕೌಂಟೆಂಟ್ ಜನರಲರಾದ ಮಿ. ಪಿ. ಕೆ ವಟ್ಸಾಲ್‌ರವರನ್ನು ನೇಮಿಸಿದ್ದು ಎಲ್ಲರಿಗೂ ತಿಳಿದ ವಿಷಯವಾಗಿದೆ. ಇವರ ನೇಮಕವಾಗಿ, ವರ್ಷಕ್ಕಿಂತ ಹೆಚ್ಚಾದರೂ ಇವರ ವರದಿಯು ಇನ್ನೂ ಹೊರಬಿದ್ದಿರುವುದಿಲ್ಲ. ಆದರೆ ವರದಿಯು ತಯಾರಾಗಿ ಕೆಲವು ತಿಂಗಳುಗಳ ಹಿಂದೆಯೇ ಇಂಡಿಯಾ ಸರ್ಕಾರಕ್ಕೆ ಒಪ್ಪಿಸಲ್ಪಟ್ಟಿದೆಯೆಂದೂ, ಅದರಲ್ಲಿರುವ ಸೂಚನೆಗಳ ಮೇಲೆ ಇಂಡಿಯಾ ಸರ್ಕಾರದವರು ಹುಕುಂ ಮಾಡಿದ ನಂತರ ಅದು ಬಹಿರಂಗಪಡಿಸಲಾಗುವದೆಂದೂ ಚೀಫ್ ಕಮಿಷನರವರು ಕೌನ್ಸಿಲು ಸಭೆಯಲ್ಲಿ ಹೇಳಿದ್ದರು. ಅದರ ಮೇಲೆ ಕೇಂದ್ರ ಸರ್ಕಾರದ ಹುಕುಂ ಆಗುವ ಮೊದಲೇ ಇಲ್ಲಿ ಅನೇಕ ಚಿಕ್ಕ ಉದ್ಯೋಗಗಳನ್ನು ತೆಗೆದು ಹಾಕಲು ಕಾರಣವೇನೆಂದು ಕೇಳಿದ ಪ್ರಶ್ನೆಗೆ ಉತ್ತರವಾಗಿ–ಗಜೆಟೆಡ್ ಉದ್ಯೋಗಗಳ ಖೋತೆಯ ವಿಚಾರವಾಗಿ ಮಾತ್ರ ಇಂಡಿಯಾ ಸರ್ಕಾರದವರು ಹುಕುಂ ಮಾಡುವರೆಂದೂ, ಚೀಫ್ ಕಮಿಷನರವರ ನೇಮಕಕ್ಕೆ ಒಳಪಟ್ಟ ಇತರ ಉದ್ಯೋಗಗಳ ಖೋತೆಯ ಸೂಚನೆಗಳ ಮೇಲೆ ತಾವು ಹುಕುಂ ಮಾಡಿ, ಅದನ್ನು ಜಾರಿಗೆ ತಂದಿರುವುದೆಂದೂ ಚೀಫ್ ಕಮಿಷನರವರು ತಿಳಿಸಿದ್ದರು.

ಮಿ. ವಟ್ಸಾಲರವರ ವರದಿಯ ಮೇಲೆ ಮಧ್ಯವರ್ತಿ ಸರ್ಕಾರದವರು ಹುಕುಂ ಪಾಸುಮಾಡಿ ಚೀಫ್ ಕಮಿಷನರವರಿಗೆ ತಿಳಿಸಿರುವರೆಂದೂ, ಅದನ್ನು ಚೀಫ್ ಕಮಿಷನರವರು ಇಲ್ಲಿಯ ಕೌನ್ಸಿಲು ಸಭೆಗೆ ತಿಳಿಸಬಹುದೆಂದೂ, ಕೊಡಗಿಗೆ ಕೇಂದ್ರ ಸರ್ಕಾರದಿಂದ ವಾರ್ಷಿಕ ವಂತಿಗೆ (ಸಬ್‌ವೆನ್ಷನ್) ದೊರೆಯುವ ಸಂಭವವಿಲ್ಲವೆಂದೂ ಕಳೆದ ಶನಿವಾರದ "ಮದ್ರಾಸು ಮೆಯಿಲ್" ಪತ್ರಿಕೆಯಲ್ಲಿ ಅದರ ಸಿಮ್ಲಾ ಬಾತ್ಮಿದಾರರ ಪ್ರಕಟಿಸಲಾಗಿತ್ತು. ಆದರೆ ಈ ವರ್ತಮಾನವು ಅಧಿಕಾರಯುಕ್ತವಾಗಿ ಪ್ರಕಟವಾಗುವ ವರೆಗೆ ಎಷ್ಟರ ಮಟ್ಟಿಗೆ ನಿಜವೆಂದು ಹೇಳಲಿಕ್ಕಾಗುವದಿಲ್ಲ. ಕೊಡಗಿನ ಆಡಳಿತದಲ್ಲಿ ಸಾವಿರಗಟ್ಲೆ ಸಂಬಳ ತಿನ್ನುವ ಗಜೆಟೆಡ್ ಉದ್ಯೋಗಗಳ ಸಂಖ್ಯೆಯನ್ನು ಅನಾವಶ್ಯವಾಗಿ ಹೆಚ್ಚಿಸಿ ದುಂದುಗಾರಿಯ ಖರ್ಚನ್ನು ಮಾಡಿದ್ದರಿಂದಲೇ ಇಲ್ಲಿಯ ಖರ್ಚು ಆದಾಯವನ್ನು ಮೀರಿದ್ದೆಂದೂ, ಆದುದರಿಂದ ಬಜೆಟನ್ನು ಸರಿಗಟ್ಟಲು ಮುಖ್ಯವಾಗಿ ಈ ದೊಡ್ಡ ಉದ್ಯೋಗಗಳಲ್ಲಿ ಖೋತೆಯನ್ನು ಮಾಡಬೇಕೆಂದೂ ಜನರ ಪ್ರತಿನಿಧಿಗಳು ಕೌನ್ಸಿಲಿನ ಒಳಗೂ ಹೊರಗೂ ಸಾಕಷ್ಟು ಒತ್ತಿ ಹೇಳಿದ್ದರು. ಆದಕಾರಣ ಸಿಬ್ಬಂದಿ ಖೋತೆಯ ವಿಚಾರದಲ್ಲಿ ಕಮಿಷನರವರು, ಚೀಫ್ ಫಾರೆಸ್ಟ್ ಆಫೀಸರವರು, ಡಿವಿಜನಲ್ ಫಾರೆಸ್ಟ್ ಆಫೀಸರು, ಎಗ್ಸಿಕ್ಯುಟಿವ್ ಇಂಜಿನೀಯರು, ಸಿವಿಲ್ ಸರ್ಜನರು, ಆಸಿಸ್ಟೆಂಟ್ ಕಮಿಷನರು, ಸಬ್ ಜಡ್ಜರು ಮೊದಲಾದ ದೊಡ್ಡ ಹುದ್ದೆಗಳಲ್ಲಿ ಖೋತೆಯೇ ಮುಖ್ಯವಾಗಿ ಜಾರಿಗೆ ತರಲ್ಪಡುವದೆಂದು ದೇಶದವರು ನಿರೀಕ್ಷಣೆ ಮಾಡುತ್ತಿದ್ದರು. ಆದರೆ ಇವುಗಳ ಸಂಬಂಧ ಇಂಡಿಯಾ ಸರ್ಕಾರದಿಂದ ಹುಕುಂ ಆಗುವದಕ್ಕೆ ಹಲವು ತಿಂಗಳುಗಳ ಮುಂಚಿತವಾಗಿಯೇ ಅಲ್ಪ ಸಂಬಳದ ಜವಾನರುಗಳು, ಕಾನ್‌ಸ್ಟೇಬಲರುಗಳು, ಚೌಡಿಕಾರರು, ಫಾರೆಸ್ಟ್ ಗಾರ್ಡುಗಳು, ಉಪಾಧ್ಯಾಯರುಗಳು, ಗುಮಾಸ್ತರುಗಳ ನೇಕರನ್ನು ಮನೆಗೆ ಕಳುಹಿಸಿ ಅವರಿಗೆ ತುಂಬಾ ಕಷ್ಟವನ್ನುಂಟು ಮಾಡಿದರು. ಮಕ್ಕಳ ಸ್ಕೂಲ್ ಫೀಸನ್ನು ಏರಿಸಿ, ಬಡ ಜನರ ತಾಯಿಗಳ ಹೊರೆಯನ್ನು ಹೆಚ್ಚಿಸಿದರು. ಈ ಸ್ಕೂಲು ಫೀಸು ಏರಿಸುವುದರಿಂದ ಇಡೀ ವರ್ಷದಲ್ಲಿ ದೊರೆಯಬಹುದಾದ ಹೆಚ್ಚಿನ ಆದಾಯವು ಕಮಿಶನರವರ ಯಾ ಚೀಫ್ ಫಾರೆಸ್ಟ್ ಆಫೀಸರವರ ಒಂದು ತಿಂಗಳ ಸಂಬಳವಷ್ಟೂ ಕೂಡ ಆಗಲಿಕ್ಕಿಲ್ಲವೆಂದರೆ ತಪ್ಪಾಗಲಾರದು. ಹುಡುಗಿಯರ ಪ್ರೈಮರಿ ಶಾಲೆಗಳನ್ನೆಲ್ಲಾ ತೆಗೆದು ಹಾಕಿ ಅವರ ವಿದ್ಯಾಭ್ಯಾಸಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿರುವದಿಲ್ಲ. ಇದೆಲ್ಲಾ ಆದಮೇಲೆ ಈಗ ಇಂಡಿಯಾ ಸರ್ಕಾರದವರು ದೊಡ್ಡ ಹುದ್ದೆಗಳ ಖೋತೆಯ ಸಂಬಂಧ ಹುಕುಂ ಮಾಡಿರುವರಂತೆ. ಹಾಗಾದರೆ ಗಜೆಟೆಡ್ ಉದ್ಯೋಗಗಳಲ್ಲಿ ಒಂದಾದ ಸಹಕಾರಿ ಸಂಘಗಳ ರಿಜಿಸ್ಟ್ರಾರರ ಹುದ್ದೆಯನ್ನು ತೆಗೆದು ಹಾಕುವ ತೀರ್ಮಾನವು ಯಾರಿಂದ ಮತ್ತು ಹೇಗೆ ಈ ಮೊದಲೇ ಮಾಡಲ್ಪಟ್ಟಿತ್ತೆಂಬುದು ಗೊತ್ತಾಗುವುದಿಲ್ಲ. ಅನಾವಶ್ಯವ ದುಂದುಗಾರಿಕೆಯ ಚೀಫ್ ಫಾರೆಸ್ಟ್ ಆಫೀಸರಂತಹ ಹುದ್ದೆಯ ವಿಷಯ ಏನೊಂದೂ ತೀರ್ಮಾನ ಮಾಡದೆ ಜನರ ಅಭಿವೃದ್ಧಿಗೆ ಬೇಕಾದ ಹುದ್ದೆಗಳನ್ನು ತೆಗೆದು ಹಾಕಿ ದೇಶದಲ್ಲಿ ಅತೃಪ್ತಿಗೆ ಕಾರಣವನ್ನುಂಟುಮಾಡಿದರು.

ಸಿಬ್ಬಂದಿಖೋತೆಯ ಪ್ರಾರಂಭದಲ್ಲಿಯೇ ತಿಳಿಯಲಪೇಕ್ಷಿಸುತ್ತಿದ್ದ ಇಂಡಿಯಾ ಸರ್ಕಾರದವರ ಹುಕುಮನ್ನು ಅರಿತುಕೊಳ್ಳಲು ಜನರು ಬಹು ಆತುರರಾಗಿರುವರು. ಆದರೆ ಈ ಹುಕುಮನ್ನು ಕೌನ್ಸಿಲ್ ಸಭೆಗೆ ತಿಳಿಸಲು ಚೀಫ್ ಕಮಿಷನರವರು ಕೌನ್ಸಿಲ್ ಮೀಟಿಂಗನ್ನು ಕಾಯುತ್ತಿರಬಹುದು. ಕೌನ್ಸಿಲ್ ಮೀಟಿಂಗು ಅಕ್ಟೋಬರ್ ತಿಂಗಳಿಗೆ ಮುಂಚಿತವಾಗಿ ನಡೆಯುವ ಸಂಭವ ಕಡಿಮೆ. ಆದುದರಿಂದ ಅಷ್ಟರವರೆಗೆ ಕಾದು, ಜನರ ಸಮಾಧಾನವನ್ನು ಪರೀಕ್ಷಿಸುವುದರ ಬದಲು ಗಜೆಟಿನಲ್ಲಿ ಪ್ರಕಟಿಸುವುದು ಅಥವಾ ಕೌನ್ಸಿಲ್ ಮೆಂಬರುಗಳಿಗೆ ಸೀದಾ ತಿಳಿಸುವುದು ಉತ್ತಮವಾಗಿದೆ. ಅಲ್ಲದೆ ವಟ್ಸಾಲ್‌ರವರ ವರದಿಯನ್ನೂ ಕೂಡಲೇ ಪ್ರಕಟಿಸುವುದು ಅವಶ್ಯವಾಗಿದೆ. ಇನ್ನೂ ನಾವಕಾಶ ಮಾಡಿ ಜನರಲ್ಲಿ ಉಂಟಾಗಿರುವ ಅತೃಪ್ತಿಯನ್ನು ಹೆಚ್ಚಿಸುವುದು ಉಚಿತವಲ್ಲ.

ಮಿ. ವಟ್ಸಾಲ್‌ರವರು ತಮ್ಮ ವರದಿಯನ್ನು ಬರೆಯುವ ಮುಂಚೆ ಮಡಿಕೇರಿಗೆ ಬಂದು ಇಲಾಖಾ ಮುಖ್ಯಾಧಿಕಾರಿಗಳ ಮತ್ತು ಕೆಲವು ಕೌನ್ಸಿಲು ಮೆಂಬರುಗಳ ಅಭಿಪ್ರಾಯ ತೆಗೆದಾಗ್ಯೆ ಚಿಕ್ಕ ಹುದ್ದೆಗಳನ್ನು ಖೋತೆ ಮಾಡುವದು ಯುಕ್ತವಲ್ಲವೆಂತಲೂ, ದೊಡ್ಡ ಉದ್ಯೋಗಗಳಲ್ಲಿ ಆಗುವಷ್ಟು ಖೋತೆ ಮಾಡಿ ಬಜೆಟ್ಟನ್ನು ಸರಿಗಟ್ಟಲು ಸಾಧ್ಯವಾಗದಿದ್ದರೆ ಮಧ್ಯವರ್ತಿ ಸರ್ಕಾರದಿಂದ ವಾರ್ಷಿಕ ವಂತಿಗೆ ಪಡೆಯಬೇಕೆಂತಲೂ ಜನರ ಪ್ರತಿನಿಧಿಗಳು ಕೆಲವರು ಸೂಚಿಸಿದಾಗ, ಕೊಡಗಿನ ಸರ್ಕಾರದ ಆದಾಯ ವೆಚ್ಚವನ್ನು ಸರಿಪಡಿಸುವದನ್ನೇ ತನ್ನ ಕೆಲಸವಲ್ಲದೆ ಸಬ್‌ವೆನ್ಷನ್ ಕೇಳುವುದು ತನಗೆ ಸಂಬಂಧಪಟ್ಟ ವಿಷಯವಲ್ಲವೆಂದು ಮಿ. ವಟ್ಸಾಲ್‌ರವರು ಹೇಳಿದ್ದರೆಂದು ತಿಳಿಯಬರುತ್ತದೆ. ಅಂದ ಮೇಲೆ ಈಗ ಕೇಂದ್ರ ಸರ್ಕಾರದವರು ವಟ್ಸಾಲ್‌ರವರ ವರದಿಯ ಮೇಲೆ ತಮ್ಮ ಹುಕುಮನ್ನು ಮಾಡುವಾಗ್ಯೆ ಕೊಡಗಿಗೆ ಸಬ್‌ವೆನ್ಷನ್ ಕೊಡುವ ಸಂಭವವಿಲ್ಲವೆಂದು ತೀರ್ಮಾನಿಸಲು ಕಾರಣವೇನೆಂದು ತಿಳಿಯುವುದಿಲ್ಲ. ಒಂದು ವೇಳೆ ಮಿ. ವಟ್ಸಾಲ್‌ರವರು ಕೊಡಗಿನ ಆದಾಯದಿಂದಲೇ ಆಡಳಿತದ ಖರ್ಚನ್ನು ನಿರ್ವಹಿಸಬಹುದೆಂದು ಸೂಚಿಸಿರಬಹುದು. ಅಂದ ಮಾತ್ರಕ್ಕೆ ಕೊಡಗಿಗೆ ವಂತಿಗೆಯ ಆವಶ್ಯವಿಲ್ಲವೆಂದಾಗಲಿಲ್ಲ. ಆಡಳಿತೆಯು ಬರೇ ದಿನಚರ್ಯೆಯ ಕೆಲಸಗಳನ್ನು ಮಾಡಿಕೊಂಡು ಹೋದರೆ ಸಾಲದು. ದೇಶಾಭಿವೃದ್ಧಿಯ ಹಲವು ಕಾರ್ಯಗಳನ್ನು ಮಾಡಲಿಕ್ಕಿದೆ ಅದಕ್ಕಾಗಿ ವಂತಿಗೆಯು ಅತ್ಯವಶ್ಯಕ ಬೇಕಾಗಿದೆ. ವಟ್ಸಾಲರವರ ವರದಿಯನ್ನು ನೋಡಿದನಂತರ ಸಬ್‌ವೆನ್ಷನಿನ ಹೋರಾಟವನ್ನು ನಡಿಸಲು ಜನರು ಕಾಯುತ್ತಿರುವುದಾಗಿದೆ. ಆದುದರಿಂದ ವಟ್ಸಾಲ್‌ರವರ ವರದಿಯೂ, ಅದರ ಮೇಲೆ ಇಂಡಿಯಾ ಸರ್ಕಾರದವರ ತೀರ್ಮಾನವೂ ಹೊರಬಿದ್ದ ಮೇಲೆ ಈ ವಿಚಾರ ಹೆಚ್ಚು ಬರೆಯುವುದು ಯುಕ್ತವೆಂದು ತೋರುತ್ತದೆ.

ಕೊಡಗಿನ ವ್ಯವಸಾಯ ಮತ್ತು ಪಶುವೈದ್ಯ ಶಾಖೆಗಳ ಅಭಿವೃದ್ಧಿಯನ್ನು ಕುರಿತು ಆಜಮಾಯಿಸಲು ಇಂಡಿಯಾ ಸರಕಾರದಿಂದ ನೇಮಿಸಲ್ಪಟ್ಟ ಶ್ರೀ. ಯಜ್ಞನಾರಾಯಣ ಐಯ್ಯರ್‌ರವರ ವರದಿಯು ಈ ತಿಂಗಳ 3ನೇ ವಾರದಲ್ಲಿ ಸಿಮ್ಲಾದಲ್ಲಿ ನಡೆಯುವ ಎಗ್ರಿಕಲ್ಚರ್ ರೀಸರ್ಚ್‌ನ ಇಂಪೀರಿಯಲ್ ಕೌನ್ಸಿಲಿನ ಗವರ್ನಿಂಗ್ ಬಾಡಿಯವರ ಮೀಟಿಂಗಿನಲ್ಲಿ ಚರ್ಚಿಸಲ್ಪಡುವದೆಂದೂ ವರ್ತಮಾನ ಪ್ರಕಟವಾಗಿದೆ. ಕೊಡಗಿನಂಥ ವ್ಯವಸಾಯಗಾರರ ದೇಶಕ್ಕೆ ಇವೆರಡು ಇಲಾಖೆಗಳ ಬಢಾವಣೆಯು ಎಷ್ಟರ ಮಟ್ಟಿಗೆ ಅತ್ಯಾವಶ್ಯವಾಗಿದೆಯೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಆದಕಾರಣ ಸ್ಥಳೀಯ ಸರ್ಕಾರದವರೂ, ಮಿ. ಯಜ್ಞನಾರಾಯಣ ಐಯ್ಯರ್‌ರವರೂ ಈ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಕೊಡಗಿಗೆ ಸಾಕಷ್ಟು ಸಹಾಯ ಪಡೆಯಲು ಸರ್ವ ಪ್ರಯತ್ನ ಮಾಡುವರಾಗಿ ನಂಬುತ್ತೇವೆ.

ಗಾಂಧಿಯವರ ಗಡಿನಾಡು ಪ್ರಯಾಣ.

ಪೂಜ್ಯ ಗಾಂಧಿಜಿಯವರು ಗಡಿನಾಡಿಗೆ ಪ್ರಯಾಣ ಬೆಳೆಸಿರುವರು. ಖಾನ್ ಅಬ್ದುಲ್ ಗಫಾರ್ ಖಾನರವರು ಅವರನ್ನು ಟೇಕ್ಸಿಲಾ ಎಂಬಲ್ಲಿ ಎದುರುಗೊಳ್ಳುವ ಸಿದ್ಧತೆ ಮಾಡುತ್ತಿರುವರ. ಅಲ್ಲಿಂದ ಗಾಂಧಿಜೀಯವರು ಬಾಟಾಬಾದಿಗೆ ಹೋಗುವರು. ಗಡಿನಾಡಿನಲ್ಲಿ ಅವರು ಎಷ್ಟು ದಿನ ಇರುವರೆಂದು ನಿರ್ದಿಷ್ಟ ತಿಳಿದಿಲ್ಲ. ಹಜರಾ ಜಿಲ್ಲೆಯಲ್ಲಿ ಅವರು ಆರೋಗ್ಯಲಾಭಕ್ಕಾಗಿ ಕೆಲವು ದಿನ ಇರುವರೆಂದೂ, ಅಲ್ಲಿಯ ಉಣ್ಣೆ ಕೈಗಾರಿಕೆಯನ್ನು ಅವರು ಪರಿಶೀಲಿಸುವರೆಂದೂ ತಿಳಿದು ಬಂದಿದೆ. ಡಾ. ಖಾನ್ ಸಾಹೇಬರು ಅವರನ್ನು ಅಬಾಟಾಬಾದಿನಲ್ಲಿ ಭೇಟಿ ಮಾಡುವರು.

ಜ್ಞಾನಾರ್ಜನೆಗೆ ಹೆದ್ದಾರಿ.

ಮಹನೀಯರೇ,

ಜಗತ್ತಿನ ಆಗುಹೋಗುಗಳನ್ನು ತಿಳಿಯಬೇಕೆನ್ನುವಿರಾ? ಹಾಗಾದರೆ ದಿನ, ವಾರ ಹಾಗೂ ಮಾಸ ಪತ್ರಿಕೆಗಳಿಗೆ ನಮ್ಮಲ್ಲಿ ವಿಚಾರಿಸಿರಿ.

ಎನ್. ಕೆ. ಮೂರ್ತಿ.
ನ್ಯೂಸ್ ಏಜೆಂಟ್,
ನಿಡ್ತ, ಶನಿವಾರಸಂತೆ.

ವರ್ತಮಾನ ಸಂಗ್ರಹ.

ಒಳದೇಶ.

ಮದ್ರಾಸು ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕೆಮಿಸ್ಟ್ರಿ, ಬಿ. ಎ. ಹಾನರ್ಸ್ (ಪೋಸ್ಟ್ ಗ್ರಾಜ್ಯುವೇಟ್) ತರಬೇತಿಗೆ ಇದ್ದ ಎರಡು ಸ್ಥಳಗಳಲ್ಲಿ ಒಂದಕ್ಕೆ ಶ್ರೀ ಕುಂಬೆರ ಪೂವಯ್ಯ ಬಿ. ಎ. ಯವರನ್ನು ಆರಿಸಲಾಗಿದೆ ಯೆಂದು ತಿಳಿಸಲು ಸಂತೋಷಪಡುತ್ತೇವೆ.

ಬೊಂಬಾಯಿ ವಿಶ್ವವಿದ್ಯಾಲಯದಲ್ಲಿ ಎಲ್. ಎಲ್. ಬಿ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವ ಶ್ರೀ ಕೇದಂಬಾಡಿ ಪಿ. ಮುದ್ದಪ್ಪ ಬಿ. ಎ ಯವರೂ ಮತ್ತು ಎನ್. ವಿ. ನಾರಾಯಣ ಬಿ. ಎ ಯವರೂ ತಮ್ಮ ಪ್ರಥಮ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಸತ್ಯನಾರಾಣ ಬಸ್ಸುಗಳೆರಡು ಆಚೆ ಈಚೆಯಿಂದ ಬರುವಾಗ್ಯೆ ಕೂಟು ಹೊಳೆಯಿಂದ ಸುಮಾರು 2 ಮೈಲು ದೂರದಲ್ಲಿ ಪೊನ್ನಂಪೇಟೆಯಿಂದ ಹೋದ ಮಲಿಯಾಳದವನೊಬ್ಬನು ತಲೆ ಹೊರಗೆ ಹಾಕಿಕೊಂಡಿದ್ದ ಪ್ರಯುಕ್ತ ತಲೆಗೆ ಬಸ್ಸು ತಗಲಿ ಒಡೆದು ಹೋಗಿ ಮೃತನಾದನೆಂದು ತಿಳಿಯುತ್ತದೆ.

ಏಲಕ್ಕಿ ದಾಸ್ತಾನು ಮತ್ತು ಮಾರಾಟ ಸಂಘಗಳು ಭಾಗಮಂಡಲದಲ್ಲಿ ರಾ. ಬ. ಶ್ರೀಪತಿರಾಯರ ಅಧ್ಯಕ್ಷತೆಯಲ್ಲಿಯೂ, ಕಕ್ಕಬೆಯಲ್ಲಿ ದಿ ಬ ಕೆ. ಚಂಗಪ್ಪನವರ ಅಧ್ಯಕ್ಷತೆಯಲ್ಲೂ, ತೆರೆಯಲ್ಪಟ್ಟವೆಂದೂ, ಮಡಿಕೇರಿ ಮತ್ತು ಸೋಮವಾರ ಪೇಟೆಗಳಲ್ಲಿ ಒಡನೆ ತೆರೆಯಲ್ಪಡುವವೆಂದೂ ತಿಳಿಯಬರುತ್ತೆ.

ಬೆಂಗಳೂರು ಕೊಡವ ಸಂಘವನ್ನು ಮೈಸೂರು ಸೊಸೈಟಿಗಳ ಆಕ್ಟ್ ಪ್ರಕಾರ ರಿಜಿಸ್ಟರು ಮಾಡಲಾಗಿರುವುದೆಂದೂ, ಎಂಟು ಜನರಿಂದ ಕೂಡಿದ ಕಾರ್ಯನಿರ್ವಾಹಕ ಕಮಿಟಿಯನ್ನು ಸ್ಥಾಪಿಸಿರುವರೆಂದೂ, ಶ್ರೀ ಸಿ. ಮಾಚಯ್ಯ ಬಿ. ಎ ಯವರು ಪ್ರಸಿಡೆಂಟರಾಗಿಯೂ ಶ್ರೀ ಕೆ. ಕರುಂಬಯ್ಯನವರು ವೈಸ್ ಪ್ರಸಿಡೆಂಟರಾಗಿಯೂ, ಶ್ರೀ ಐ. ಬಿ ಮಾದಪ್ಪ ಬಿ. ಎ. ಯವರು ಖಜಾನ್ಸಿಯರಾಗಿಯೂ, ಶ್ರೀ ಸಿ. ಎನ್. ಮಾದಯ್ಯ ಬಿ. ಎ ಯವರು ಸೆಕ್ರೆಟರಿಯವರಾಗಿಯೂ ಮತ್ತು ಶ್ರೀ ಕೆ. ಎ ಅಪ್ಪಣ ಬಿ. ಎ. ಯವರು ಆಟೋಟಗಳ ಮುಖ್ಯಸ್ಥರಾಗಿಯೂ ನೇಮಿಸಲ್ಪಟ್ಟಿರುವರೆಂದು ತಿಳಿಯುತ್ತೇವೆ.

ಮಡಿಕೇರಿ.

ಇಲ್ಲಿ ತಾರೀಕು 1 ರಿಂದ ಇಂದಿನ ವರೆಗೆ 10 ಇಂಚು 62 ಸೆಂಟು ಮಳೆಯಾಗಿದೆ.

ರಜೆಯಲ್ಲಿದ್ದ ಶ್ರೀ. ಕೇಳಪಂಡ ಐಯ್ಯಣ್ಣನವರನ್ನು ಸಬ್‌ಜಡ್ಜ್ ಕೋರ್ಟಿನ ಶಿರಸ್ತೆದಾರರಾಗಿ ನೇಮಿಸಿರುವರೆಂದು ವಾರ್ತೆ.

ಕೊಡಗು ಟ್ರಾಫಿಕ್ ಬೋರ್ಡಿನ ಮೀಟಿಂಗು ತಾ. 3-7-39ರಲ್ಲಿ ನಡೆದು ಹೊಸ ಬಸ್ ಬಿಡಲು ಬರಕೊಂಡ ಅರ್ಜಿಗಳೆಲ್ಲವನ್ನು ತಿರಸ್ಕರಿಸಿರುವರಾಗಿ ತಿಳಿಯುತ್ತೇವೆ.

ಕೊಡಗು ಬಸ್ ಮಾಲೀಕರ ಸಂಘದ ಮೀಟಿಂಗು ತಾ. 2-7-39ರಲ್ಲಿಯೂ, ಆದಿ ಶ್ರೀ ಕಾವೇರಿ ಬಸ್ ಸರ್ವಿಸಿನ ಡೈರೆಕ್ಟರುಗಳ ಮೀಟಿಂಗು ತಾ. 3-7-39 ರಲ್ಲಿಯೂ ಇಲ್ಲಿ ನಡೆಯಿತು

ಕೊಡಗಿನ ವ್ಯವಸಾಯ ಹಾಗೂ ಜಮೀನುದಾರುಗಳ ಆವಶ್ಯಕತೆಗಳನ್ನು ಕುರಿತು ಶೋಧನೆ ಮಾಡಲು ಕಳುಹಿಸಲ್ಪಟ್ಟಿದ್ದ ಶ್ರೀ ಯಜ್ಞನಾರಾಯಣ ಐಯರ್‌ರವರ ವರದಿಯನ್ನು ವ್ಯವಸಾಯ ಪರಿಶೋಧನಾ ಕೌನ್ಸಿಲಿನವರು ತಮ್ಮ ಬರುವ ಮೀಟಿಂಗಿನಲ್ಲಿ ಚರ್ಚಿಸುವರೆಂದು ತಿಳಿಯುತ್ತೇವೆ.

ರಿಟ್ರೆಂಚ್‌ಮೆಂಟ್ ಆಫೀಸರ್ ಮಿ. ಪಿ. ಕೆ. ಪಟ್ವಾಲ್‌ರವರ ರಿಪೋರ್ಟನ್ನು ಇಂಡಿಯಾ ಸರಕಾರದವರು ವಿಮರ್ಶಿಸಿ ಅವರ ಅಭಿಪ್ರಾಯವನ್ನು ಚೀಫ್ ಕಮಿಷನರವರಿಗೆ ಕಳುಹಿಸಿರುವರೆಂದೂ, ಇದನ್ನು ಕೌನ್ಸಿಲಿನಲ್ಲಿ ತಿಳಿಸಬಹುದೆಂದೂ, ಸಬ್‌ವೆನ್ಷನ್ ಸಿಕ್ಕುವ ಸಂದರ್ಭವು ಕಡಿಮೆಯೆಂದೂ 'ಮದ್ರಾಸ್ ಮೇಲ್' ಪತ್ರಿಕೆಯ ಸಿಮ್ಲಾದ ಸ್ವಂತ ವಾರ್ತಾದಾರರು ಬರೆದಿರುವರು.

ವೀರಾಜಪೇಟೆ.

ಕೊಡಗು ಇಸ್ಲಾಹುಲ್ ಮುಸ್ಲಿಮೀನ್ ಸಭೆಯ ಮಹಾ ಸಭೆಯು ತಾ. 17-6-39 ರಲ್ಲಿ ಶ್ರೀ ಯಂ. ಯಂ ಪೊನ್ನಪ್ಪ ಬಿ ಎ. ಬಿ. ಎಲ್. ರವರ ಅಧ್ಯಕ್ಷತೆಯಲ್ಲಿ ನಡೆದು ಈ ಸಭೆಗೆ ಒಂದು ಬೈಲಾವನ್ನು ತಯಾರಿಸುವಂತೆ ತೀರ್ಮಾನವಾಗಿದೆ.

ಇಲ್ಲಿಯ ಹೈಸ್ಕೂಲಿನ ಸ್ಕೂಲ್ ಫೈನಲ್ ಪರೀಕ್ಷೆಯ ಸಪ್ಲಿಮೆಂಟರಿ ರಿಜಲ್ಟಿನಲ್ಲಿ ಶ್ರೀಮತಿ ಬಿದ್ದಂಡ ಗೌರಮ್ಮನವರು ಮತ್ತು ಶ್ರೀಗಳಾದ ಪಟ್ಟಡ ಯು. ಬೆಳ್ಯಪ್ಪ, ಮಂಡೇಪಂಡ ಅಪ್ಪಚ್ಚು ಇವರುಗಳು ತೇರ್ಗಡೆಯಾಗಿರುವರು. ಇವರಿಗೆ ನಮ್ಮ ಅಭಿನಂದನೆಗಳಿವೆ.

ಕಳೆದ ತಾ 21-6-39 ರಲ್ಲಿ ಉದ್ಯೋಗದಿಂದ ನಿವೃತ್ತರಾದ ರಾ. ಶ್ರಿ. ಸಿ. ಯ ನ್. ಮಂಜಯ್ಯನವರಿಗೆ ತಾ. 29-6-39 ರಲ್ಲಿ ಶಾಲಾ ವಿದ್ಯಾರ್ಥಿಗಳೆಲ್ಲರೂ, ಸೇರಿ ಒಂದು ಬಿನ್ನಹ ಪತ್ರವನ್ನೂ, ಉಪಾಧ್ಯಾಯರುಗಳೆಲ್ಲರೂ ಸೇರಿ ಒಂದು ಟೀಪಾರ್ಟಿಯನ್ನು ಕೊಟ್ಟು ಬೀಳ್ಕೊಟ್ಟರೆಂದು ತಿಳಿಯಬರುತ್ತದೆ.

ಇಲ್ಲಿಯ ಮಹಿಳಾ ಸಮಾಜದ ಕಟ್ಟಡಕ್ಕಾಗಿ ಮಿಸೆಸ್ ಕಡೇಮಾಡ ಬೆಳ್ಯಪ್ಪನವರು ರೂ. 50 ನ್ನೂ, ಮಿಸೆಸ್ ಕಡೇಮಾಡ ಕರುಂಬಯ್ಯನವರು ರೂ. 25 ನ್ನೂ, ಮಿಸೆಸ್ ಮಂಡೇಪಂಡ ಬೋಪಯ್ಯನವರು ರೂ. 15 ನ್ನೂ, ಮಿಸ್ಟರ್ ಕೊಡಂದೇರ ಯಂ. ನಂಜಪ್ಪನವರು ರೂ. 10 ನ್ನೂ, ಅಮ್ಮತ್ತಿನಾಡು ಯೂನಿಯನ್ ಪ್ರಸಿಡೆಂಟರೂ, ನಾಂಗಾಲ ಸಂಘದ ಪ್ರಸಿಡೆಂಟರೂ ರೂಪಾಯಿ ಒಂದೊಂದರಂತೆ ಧನ ಸಹಾಯ ಮಾಡಿರುವರಾಗಿ ಸಮಾಜದ ಪ್ರೆಸಿಡೆಂಟರು ತಿಳಿಸುತ್ತಾರೆ.

ಗಜೆಟ್.

ಕೋಪರೇಟಿವ್ ಇನ್ಸ್‌ಪೆಕ್ಟರಾದ ಶ್ರೀ ಕೆ. ಎ ಸೋಮಯ್ಯನವರನ್ನು ದಕ್ಷಿಣ ಕೊಡಗಿನ ನಾನ್-ಕ್ರೆಡಿಟ್ ಇನ್ಸ್‌ಪೆಕ್ಟರಾಗಿ ನೇಮಿಸಿರುವದರಿಂದ ಪೊನ್ನಂಪೇಟೆಯ ಕೋಪರೇಟಿವ್ ಇನ್ಸ್‌ಪೆಕ್ಟರಾದ ಶ್ರೀ ಕೊಕ್ಕೆಂಗಳ ಪೊಣ್ಣಪ್ಪನವರನ್ನು ಬಿಳುಗುಂದ ಪಂಚಮ ದವಸ ಭಂಡಾರದ ಲಿಕ್ವಿಡೇಟರನ್ನಾಗಿ ನೇಮಿಸಿರುವರು.

ಕಳೆದ ಮೇ ತಿಂಗಳಲ್ಲಿ ಕೊಡಗಿನಲ್ಲಿ 342 ಜನನಗಳೂ, 321 ಮರಣಗಳೂ ಸಂಭವಿಸಿದವೆಂದು ಪ್ರಕಟಿಸಿದೆ.

ಸ್ಟೇಂಡಿಂಗ್ ಜನರಲ್ ಪರ್ಪಸಸ್ ಕಮಿಟಿಗೆ ಶ್ರೀ ಐವರ್ ಬುಲ್, ಯಂ. ಎಲ್. ಸಿ, ಶ್ರೀ ಸಿ. ಐ. ಚಿಣ್ಣಪ್ಪ ಯಂ. ಎಲ್. ಸಿ, ಶ್ರೀ ಕೆ. ಮಲ್ಲಪ್ಪ ಯಂ ಎಲ್. ಸಿ. ಮತ್ತು ಶ್ರೀ ಅಬ್ದುಲ್ ರಹಮಾನ್ ಖಾನ್ ಯಂ ಎಲ್ ಸಿ ಯವರನ್ನು ನೇಮಿಸಿರುವದಾಗಿ ಪ್ರಕಟವಾಗಿದೆ.

ಉತ್ತರ ಕೊಡಗು ದವನನಾಡು ಗಡಿನಾಡು, ನಿಡ್ತ ಮತ್ತು ಕೈಸ್‌ಕಲ್‌ನಲ್ಲಿ ಕಿರುಗಾಡುತ್ತಿರುವ 'ಹಿರಿಕೇರಿ ರೋಗ' ಎಂಬ ಪುಂಡಾನೆಯನ್ನು ಕೊಲ್ಲಲು ಮಾಸಿ ಪೈಕೆ ನೀ ಕೊಡಬಹುದಾಗಿ ಪ್ರಕಟವಾಗಿದೆ.

ಹಿಂದೂದೇಶ.

ಕಳೆದ ವಾರ ಮೈಸೂರಲ್ಲಿ ಮೂರು ಬಸ್ಸುಗಳ ಆಕಸ್ಮಿಕ ನಡೆದು ಒಂದರಲ್ಲಿ 6 ಜನರು ಮೃತರಾದರೆಂದೂ, ಇನ್ನೊಂದರಲ್ಲಿ ಒಬ್ಬನು ಸತ್ತನೆಂದೂ ಮತ್ತೊಂದರಲ್ಲಿ ಹಲವರಿಗೆ ಘಾಯಗಳಾಗಿವೆಯೆಂದು ವರ್ತಮಾನ.

ಶ್ರೀ. ಸುಭಾಸ್‌ಚಂದ್ರ ಬೋಸರು ತಾ 4 ಮತ್ತು 5ನೇ ಜುಲೈಯಲ್ಲಿ ಜಬ್ಬಲ್‌ಪುರದಲ್ಲಿ ಕೂಡಲಿರುವ ಮಹಾ ಕೋಸಲ ರಾಷ್ಟ್ರೀಯ ಯುವಕ ಪರಿಷತ್ತಿನ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವುದಕ್ಕೆ ಒಪ್ಪಿಕೊಂಡಿದ್ದಾರೆ.

ಪುರೋಗಾಮಿ ಪಕ್ಷದ ಸ್ಥಾಪಕರಾದ ಶ್ರೀ. ಸುಭಾಷ್ ಚಂದ್ರಬೋಸ್ ಇವರು ಆ ಪಕ್ಷದ ಪ್ರಚಾರಾರ್ಥವಾಗಿ ತಮಿಳು, ಆಂಧ್ರ ಮತ್ತು ಕರ್ನಾಟಕ ಸಂಚಾರವನ್ನು ಕೈಕೊಳ್ಳಲು ನಿರ್ಧರಿಸಿದ್ದಾರೆ. ಅವರು ಜುಲೈ 2 ನೇ ವಾರದಲ್ಲಿ ಕರ್ನಾಟಕಕ್ಕೆ ಬರುವರೆಂದು ತಿಳಿಯುತ್ತದೆ.

ಸಂಸ್ಥಾನದ ಯಾವತ್ತೂ ಜೈಲುಗಳ ಕೈದಿಗಳಿಗೂ ದಂಡನೆಯ ಅವಧಿಯಲ್ಲಿ 6 ತಿಂಗಳು ಮಾಫಿ; ಹಳೇ ಪಂಚಾಯತು ಬೋರ್ಡುಗಳ ಜೀರ್ಣೋದ್ಧಾರ; 26 ಮಂದ ನಾಮಕರಣದ ಸದಸ್ಯರೊಡನೆ ಆಲ್ಲಿನ ಪ್ರಜಾ ಪರಿಷತ್ತಿನ ಜೋಡಣೆ, ಹೈಕೋರ್ಟಿನ ಪುನರ್ ವ್ಯವಸ್ಥೆ-ಇವಿಷ್ಟು ಸುಧಾರಣೆಗಳನ್ನು ಥೇನ್ನನಲ್ ವಿಭಾಗ

ಳು ತಮ್ಮ ಪ್ರಜೆಗಳಿಗೆ ಕೊಟ್ಟಿರುತ್ತಾರೆ.

ಸಿಖ್ಖ ಧರ್ಮೀಯರು ತಮ್ಮ ಧರ್ಮೀಯ ಅರಸನಾದ ಪಾಟಿಯಾಲಾ ಮಹಾರಾಜರನ್ನು ಸಿಮ್ಲಾದಲ್ಲಿ ವಿವಿಧ ರೀತಿಯಿಂದ ಆದರಿಸಿ, ಉಪಚರಿಸಿ ಮನ್ನಿಸಿದನ್ ಸನ್ಯಾಲ್, ಪಿ. ಸಿ ಜೋಷಿ, ಭಾರದ್ವಾಜ, ಸತ್ಯರಂಜನ್ ಭಕ್ಷಿ, ಬಿ. ಡಿ. ತ್ರಿಪತಿ, ಸೋಮನಾಥ ಲಹರಿ, ವಿ. ಬಿ. ಕರ್ಣಿಕ್ ಹಾಗೂ ಸ್ವಾಮಿ ಸಹಜಾನಂದ. ಈ ಕಮಿಟಿಯ ಕಾರ್ಯಾಲಯ ಕಲ್ಕತ್ತಾ.

ಫಾರ್ವರ್ಡ್ ಬ್ಲಾಕಿಗೆ ಸಂಬಂಧಿಸಿದ ಕನ್‌ಸಾಲಿಡೇಶನ್ ಕಮಿಟಿಯ ರಚನೆಯಾಗಿದೆ-ಶ್ರೀ. ಗಳಾದ ಸುಭಾಸ್ ಚಂದ್ರ ಬೋಸ್ (ಕನ್ವೀನರ್ ಮತ್ತು ಲೀಡರ್) ಜಯಪ್ರಕಾಶ ನಾರಾಯಣ, ಆಚಾರ್ಯ ನರೇಂದ್ರದೇವ್, ಎಂ. ಎನ್. ರಾಯ್, ಮೆಹೆರಾಲಿ, ಎನ್. ಜಿ. ರಂಗ, ಭೂಸೇರು. ಅರಸರು ಈ ವೇಳೆ ಅಲ್ಲಿನ ಸಿಖ್ಖ ಸಂಘಕ್ಕೆ ರೂ. 5000 ವನ್ನೂ ದಾನ ಮಾದರು. ಸಿಖ್ಖ ಕನ್ಯಾ ವಿದ್ಯಾಲಯದ ಮಕ್ಕಳಿಗೆ ಮಿಠಾಯಿ ಹಂಚಲು ರೂ 101 ದಾನ ಮಾಡಿದರು.

ಬಿಹಾರ್ ಪ್ರಾಂತೀಕ ಕಾರ್ಯಕಾರಿ ಕಮಿಟಿಯ ಎಲ್ಲಾ ಮೆಂಬರರ ಮೇಲೆ (ಅವರ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರ ಹೊರತು) ಅಲ್ಲಿನ ಜಿಲ್ಲಾ ಬೋರ್ಡಿನ ಉಮೇದುವಾರರನ್ನು ನೇಮಿಸಿದ ಸಂಬಂಧ ಉಂಟಾದ ಅತೃಪ್ತಿಯ ಪರಿಣಾಮವಾಗಿ ಒಂದು ಅವಿಶ್ವಾಸದ ಠರಾವು ಬಂದದೆಯಲ್ಲದೆ ಆ ಪ್ರಾಂತದ ಮಂತ್ರಿಮಂಡಲದ ಕೆಲಸ ಕಾರ್ಯಗಳನ್ನು ವಿಮರ್ಶಿಸಬೇಕೆಂದು ಬಾಬು ರಾಜೇಂದ್ರ ಪ್ರಸಾದರಲ್ಲಿ ಒಂದು ವಿನಂತಿಯೂ ಆಗಿದೆ. ಆದರೆ ಇವರಲ್ಲಿ ಅವಿಶ್ವಾಸದ ಠರಾವು ಬಿಹಾರ್ ಪ್ರಾಂತೀಕ ಕಾಂಗ್ರೆಸ್ ಕಮಿಟಿಯಲ್ಲಿ ವಿಫಲವಾಯಿತು.

ಹೆಬ್ಬಾಲೆ ನೋಟಿಫೈಡ್ ಏರಿಯದ
ಪ್ರೆಸಿಡೆಂಟರ ಆಫೀಸ್,
ಸೋಮವಾರಪೇಟೆ, 3-7-1939.

ಪ್ರಕಟಣೆ.

ಫ್ರೇಜರ್‌ಪೇಟೆ ಹೋಬಳಿ ಹೆಬ್ಬಾಲೆ ನೋಟಿಫೈಡ್ ಏರಿಯದ ಕಾರ್ಯಕಲಾಪ ನಡೆಸುವ ಉದ್ದೇಶ್ಯ ತಿಂಗಳಿಗೆ 15 ರೂಪಾಯಿ ವೇತನಕ್ಕೆ ಮಾರದ ಒಬ್ಬ ಕ್ಲಾರ್ಕ್ ಅವಶ್ಯವಿದೆ.

ಉಮೇದುವಾರರು ತಮ್ಮ ವಿದ್ಯಾ ಅನುಭವ ವಗೈರೆಯನ್ನು ಕುರಿತು ತಾರೀಕು 15-7-1939ರ ಒಳಗಾಗಿ ಉತ್ತರ ಕೊಡಗು ತಾಲೋಕಿನ ನೋಟಿಫೈಡ್ ಏರ್ಯದ ಪ್ರಸಿಡೆಂಟರಿಗೆ ಸೋಮವಾರಪೇಟೆಗೆ ತಲಪುವಂತೆ ಅರ್ಜಿಗಳನ್ನು ಬರೆದುಕೊಳ್ಳಬಹುದು.

ಕೆ. ಬಿ. ಪೊನ್ನಪ್ಪ,
ಪ್ರೆಸಿಡೆಂಟ್,
ಹೆಬ್ಬಾಲೆ ನೋಟಿಫೈಡ್ ಏರ್ಯ.

ಭಾರತೀಯ ನಾಣ್ಯಚಲಾವಣೆ ಮತ್ತು ಆರ್ಥಿಕ ವ್ಯವಸ್ಥೆ.

(4ನೇ ಪುಟದಿಂದ ಸಾಗಿದ್ದು.)

ಕಾರಿಯಾಗಿಲ್ಲವೆಂದು ಹೇಳಬೇಕಿದೆ. ಉದಾಹರಣೆಗೆ 1929 ನೇ ವರ್ಷದ ಇಡೀ ಖರ್ಚಿನ ಶೇಕಡ 80 ರಷ್ಟನ್ನು ಸೈನ್ಯ, ನ್ಯಾಯ ಆಡಳಿತ ಇವುಗಳೇ ಮೊದಲಾದ ಲಾಭದಾಯಕವಲ್ಲದ ಕಾರ್ಯಗಳಿಗಾಗಿ ವ್ಯಯಿಸಿ ಖರ್ಚಿನ ಶೇಕಡ 20 ಕ್ಕಿಂತ ಕಮ್ಮಿಯಾಗಿ ಬೇರೆ ಉತ್ಪತ್ತಿಯ ಕಾರಣಗಳಿಗೆ ಖರ್ಚು ಮಾಡಿರುವರೆಂದರೆ 'ದೇಶದ ಸಂಪತ್ಸಾಧನೆಯ ಬಗ್ಗೆ ಸರಕಾರವು ಎಷ್ಟು ಮುತುವರ್ಜಿತೆ ವಹಿಸಿರುವದೆಂಬುದು ವ್ಯಕ್ತವಾಗದಿರದು. ಕೇವಲ ಅಲ್ಪ ಭಾಗವು ಮಾತ್ರ ದೇಶದ ಆರ್ಥಿಕ ಅಂತಸ್ತನ್ನು ಮೇಲೆತ್ತುವ ಕಾರ್ಯಗಳಿಗಾಗಿ ಉಪಯೋಗಿಸಲ್ಪಡುವದರಿಂದ ಜನತೆಯ ಸ್ಥಿತಿಯಾದರೂ ಸುಧಾರಿಸದಿರಲಿಕ್ಕೆ ಕಾರಣವಾಗಿದೆ. ಈ ರೀತಿಯ ಲಾಭಾಲಾಭ ನಿರೀಕ್ಷಣೆಯಿಲ್ಲದ ಖರ್ಚೇ ಭಾರತದ ಇಂದಿನ ದಾರುಣ ಬಡತನದ ಕಾರಣಗಳಲ್ಲೊಂದಾಗಿದೆ.

ಭಾರತದ ಬಜೆಟ್ಟಿನಲ್ಲಿ ಮುಕ್ಕಾಲು ಪಾಲು ಹಣವು ಈ ಲಾಭದಾಯಕವಲ್ಲದ ಸೈನ್ಯ ಹಾಗೂ ಆಡಳಿತ ಖರ್ಚಿಗೆ ವಿನಿಯೋಗಿಸಲ್ಪಡುತ್ತಿದೆ. ಇಂದಿನ ಅಂತರರಾಷ್ಟ್ರೀಯ ಆಂದೋಲನದ ಪರಿಣಾಮವಾಗಿ ರಾಷ್ಟ್ರಗಳಲ್ಲಿ ಈ ಖರ್ಚು ಹದ್ದು ಮೀರಿ ನಡೆಯುತ್ತಿದೆ. ಅಂತೆಯೇ ಬಡ ಭಾರತದಲ್ಲಾದರೂ ಈ ಖರ್ಚು ಮೇರೆ ಮೀರಿದೆ. ಭಾರತದಲ್ಲಿರುವ ಸೈನ್ಯದಲ್ಲಾದರೂ ಗಣನೀಯವಾದ ಒಂದು ಭಾಗವು ಐರೋಪ್ಯರಿಂದ ಕೂಡಿದೆ. ಆಡಳಿತದಲ್ಲಾದರೂ ಐರೋಪ್ಯರಿಗೆ ಗಣನೀಯ ಸ್ಥಾನವಿದೆ. ಒಬ್ಬ ಐರೋಪ್ಯನ ಖರ್ಚು ಐದು ಜನ ಭಾರತೀಯ ಉದ್ಯೋಗಸ್ಥರಿಗೆ ಸಮನಿರುವಾಗ ಸೈನ್ಯ ಮತ್ತು ಆಡಳಿತಕ್ಕಾಗಿ ಖರ್ಚು ಮಾಡುವ ಈ ಹಣದ ಬಹು ಭಾಗವು ಐರೋಪ್ಯರನ್ನು ಪೋಷಿಸುವದಕ್ಕೆ ವಿನಿಯೋಗಿಸಲ್ಪಡುತ್ತಿದೆಯೆಂದೆನ್ನಬಹುದು. ಆದ್ದರಿಂದ ಸೈನ್ಯದ ದಕ್ಷತೆಗೆ ಕುಂದು ಬಾರದಂತೆ ಕಮ್ಮಿ ಖರ್ಚಿನಿಂದ ಇಂದಿರುವಷ್ಟೇ ಸೈನ್ಯವನ್ನು ಇಡಬಹುದೆಂಬುದು ವಿಷದ. ಆಡಳಿತ ವಿಚಾರದಲ್ಲಿ ಹೇಳುವದಾದರೆ ಭಾರತದಲ್ಲಿಯ ಐರೋಪ್ಯರ ವೇತನವು ಅಮೋಘವಾಗಿದೆ. ಜಗತ್ತಿನಲ್ಲಾ ರಾಷ್ಟ್ರಗಳಿಗಿಂತಲೂ ಹೆಚ್ಚಾದ ವೇತನ ಕೊಡುವ ದೇಶವೆಂದರೆ ಭಾರತ. ಅದರಲ್ಲೂ ಇಂಪೀರಿಯಲ್ ಸರ್ವಿಸಿನಲ್ಲಿರುವವರ ವಿಚಾರ ಈ ಬಡ ಲೇಖನಿಯೇನು ಬರೆಯಬಲ್ಲುದು. ಕೇವಲ ಇದು ಭಾರತವನ್ನು ಸುಲಿಗೆ ಮಾಡುವ ಹೆದ್ದಾರಿಯೆಂದಷ್ಟೇ ಹೇಳುವೆವು. ಉದಾಹರಣೆಗೆ ಇಂದು ಜಗತಿನಲ್ಲಿ ಸಂಪತ್ಸಮೃದ್ಧಿಯಿಂದ ವಿರಾಜಿಸುತ್ತಿರುವ ಅಮೇರಿಕದ ನ್ಯೂಯಾರ್ಕಿನ ತನ್ನ ಗವರ್ನರಿಗೆ 10,000 ಡಾಲರುಗಳನ್ನು ಅಂದರೆ ಅಲ್ಲಿ ಒಬ್ಬ ನಾಗರೀಕನ ಉತ್ಪತ್ತಿಯ 14 ಪಾಲಿನಷ್ಟು ಕೊಟ್ಟರೆ ಬಡತನದಿಂದ ನೊಂದು ಬಳಲುತ್ತಿರುವ ಭಾರತವು ತನ್ನ ಬೊಂಬಾಯಿ ಗವರ್ನರನಿಗೆ 45,000 ಡಾಲರು ಅಂದರೆ ಇಲ್ಲಿಯ ಒಬ್ಬ ನಾಗರೀಕನ ಉತ್ಪತ್ತಿಯ 2,400 ಪಾಲಿನಷ್ಟು ಹೆಚ್ಚು ಕೊಡುತ್ತಿರುವದು. ಹೀಗೆ ದೇಶದ ಉತ್ಪನ್ನವು ಪರದೇಶೀಯರ ಸೌಲಭ್ಯಕ್ಕಾಗಿ ವ್ಯಯವಾಗುತ್ತಿರುವಾಗ ಬಡ ಭಾರತವು ಉದ್ಧಾರವಾದೀತು ಹೇಗೆ? ಭಾರತವು ಈ ಹೃದಯದ್ರಾವಕ ಬಡಸ್ಥಿತಿಯಿಂದ ಚೇತರಿಸಿಕೊಳ್ಳಬೇಕಾದರೆ ಈಗಿನ ಏರ್ಪಾಡುಗಳು ಶುದ್ಧ ಪಲ್ಲಟವಾಗಬೇಕು. ಸಂಪತ್ಸಾಧನೆಯ ಕಾರ್ಯಗಳಿಗೆ ಹೆಚ್ಚು ಹಣ ಖರ್ಚಾಗಬೇಕು. ಕಂದಾಯ ಕಾಣಿಕೆಗಳಾದರೂ ಪಾತ್ರಾಪಾತ್ರವರಿತು ವಿಧಿಸಲ್ಪಡಬೇಕು. ಬಿಸಿಲಿನ ತಾಪದಿಂದ ಸಮುದ್ರದ ನೀರು ಆವಿಯಾಗಿ ಗಗನದಲ್ಲಿ ಸೇರಿ ಮಳೆಯಾಗಿ ಸಮುದ್ರ, ಭೂಮಿಯೆಂದೆನ್ನದೆ ಏಕೋ ರೀತಿಯಲ್ಲಿ ಬೀಳುವಂತೆ ಸಮುದಾಯಕವಾಗಿ ಖರ್ಚು ಮಾಡಲ್ಪಡಬೇಕು. ಒಟ್ಟಿನಲ್ಲಿ ನಾಣ್ಯದ ಚಲಾವಣೆ ಮತ್ತು ಆರ್ಥಿಕ ವ್ಯವಸ್ಥೆ ಇವು ಆರ್ಥಿಕ ಜೀವನದ ಎರಡು ಶಾಖೆಗಳು. ಇವೆರಡೂ ಸಮೂಲವಾಗಿ ಸರಕಾರದ ಕೈಯಲ್ಲಿವೆ. ಶಿಸ್ತಿನಿಂದಿಲ್ಲದ ಜನತೆಯ ಕೈಯಲ್ಲಿರುವ ಕಾರ್ಯಕಲಾಪಗಳು ಬದಲಾವಣೆಯಾಗುವದು ಕಷ್ಟ. ಸರ್ಕಾರದ ಕೈಯೊಳಗಿರುವ ವಿಚಾರಗಳು ಬೇಗ ಬದಲಾವಣೆ ಹೊಂದಲು ಸಾಧ್ಯವಿದೆ. ಆದ್ದರಿಂದ ಸರ್ಕಾರವನ್ನು ತನ್ನ ಪ್ರಜ್ಞೆಗೆ ತಂದು, ಅದರ ಸ್ಮೃತಿ ಪಥದಲ್ಲಿ ಜನತೆಯ ಆವಶ್ಯಕಗಳ ಯೋಚನೆಯನ್ನು ಹಚ್ಚಿ, ಇಂದಿನ ಭಾರತೀಯ ಸ್ಥಿತಿ ಅರ್ಥಾತ್ ಆಡಳಿತ ವ್ಯವಸ್ಥೆಯನ್ನು ಸರಿಪಡಿಸುವಂತೆ ಪ್ರೇರೇಪಿಸುವ ಅಮೋಘ ಕಾರ್ಯವಾದರೂ ಭಾರತೀಯ ಬಡಜನತೆಯ ಹೆಗಲಿನಲ್ಲೇ ಉಳಿದಿದೆ.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦೦—

ವೀರಾಜಪೇಟೆ ಹೈಸ್ಕೂಲು ಬೋರ್ಡಿಂಗ್ ಮನೆ.

ಈ ವಿಷಯದಲ್ಲಿ ವೀರಾಜಪೇಟೆಯ ಮತ್ತು ದಕ್ಷಿಣ ಕೊಡಗಿನ ನಿವಾಸಿಗಳು ಹಲವು ಜನರು ಈ ಮೊದಲೇ ಮೀಟಿಂಗು ನಡೆಸಿದರೂ, ಪತ್ರದ ಮೂಲಕವೂ ತಮ್ಮ ಹವಾಲುಗಳನ್ನು ಸರ್ಕಾರಿ ಅಧಿಕಾರಿಗಳಿಗೆ ತಿಳಿಸಿದರೂ ಸರಕಾರದವರು ತಮ್ಮ ಧೋರಣೆಯನ್ನು ಬಯಲಾಯಿಸಿದಂತೆ ಕಾಣುವುದಿಲ್ಲ.

ಈ ಮಧ್ಯೆ ಈಗ ಇರುವ ಸರ್ಕಾರಿ ಕಟ್ಟಡವನ್ನು ಅಲ್ಲಿ ಸ್ವಲ್ಪ, ಇಲ್ಲಿ ಸ್ವಲ್ಪ ರಿಪೇರಿ ಮಾಡಿ ದೇಶದ ಜನರನ್ನು ತೃಪ್ತಿಪಡಿಸಲು ಆಲೋಚನೆ ನಡೆಯುತ್ತಾ ಇದೆಯೆಂದು ತಿಳಿಯುತ್ತೆ. ಇದು ನಿಜವಾದ ಪಕ್ಷ ಸರ್ಕಾರದವರು ಜನತೆಯ ಕೂಗನ್ನು ನಿರ್ಲಕ್ಷಿಸಿ ವರ್ತಿಸುವರೆಂದರೆ ಅತಿಶಯೋಕ್ತಿಯಾಗಲಾರದು. ದೇಶಹಿತಕಾರಕಗಳಾದ ಇಂಥಾ ಪ್ರಾಮುಖ್ಯ ಸಮಸ್ಯೆಗಳಲ್ಲೂ ಪ್ರಜೆಗಳ ಕೂಗನ್ನು ಕೇಳದೆ ಉದಾಸೀನರಾಗುವದು ಸರಿಯಲ್ಲ.

ಈಗ ಬೋರ್ಡಿಂಗ್ ಇರುವ ಕಟ್ಟಡಗಳನ್ನು ನಾನು ಹೋಗಿ ನೋಡಿರುವೆನು. ಅವುಗಳು ಯಾವ ವಿಧದಲ್ಲೂ ವಿದ್ಯಾರ್ಥಿಗಳ ವಾಸಕ್ಕೆ ತಕ್ಕುದ್ದಲ್ಲ. ಅದರ ಅನಾನುಕೂಲಗಳನ್ನು ಬರೆಯುವದು ಕಷ್ಟ.

ಮೊದಲಾಗಿ ವಿದ್ಯಾರ್ಥಿಗಳು ಓದುವ ಕೊಠಡಿಯನ್ನು ನೋಡುವ. ಅದು ಈಗ ಇರುವ 66 ವಿದ್ಯಾರ್ಥಿಗಳಿಗೆ ಸಾಕೋ. ಮಕ್ಕಳ ಆರೋಗ್ಯ ಚೆನ್ನಾಗಿರಬೇಕಾದರೆ ಅದರೊಳಗೆ ಓದುವ ಪ್ರತಿ ವಿದ್ಯಾರ್ಥಿಗೆ 400 ಘನ ಅಡಿ ಸ್ಥಳವಿರಬೇಕು. ಎಷ್ಟು ಕಡಿಮೆಯಾದರೂ 210 ಘನ ಅಡಿಗಳಿಗೆ ಕಡಿಮೆಯಾಗಕೂಡದೆಂದು ಡಾಕ್ಟರುಗಳ ಅಭಿಪ್ರಾಯ. 66 ಮಕ್ಕಳು ಓದುವ ಈ ಕೊಠಡಿ ಅಂದಾಜು ಉದ್ದ 30 ಅಡಿ, ಅಗಲ 18 ಅಡಿ ಮತ್ತು ಉತ್ತರ 14 ಅಡಿ ಇದೆ. ಅಂದರೆ ಇದರ ಒಳಭಾಗವು ಅಂದಾಜು 8,000 ಘನ ಅಡಿ ಇದೆಯೆನ್ನಬಹುದು. ಅಂದಾಜು 1,000 ಘನ ಅಡಿ ಮೇಜ, ಬೆಂಚು ಇತ್ಯಾದಿ ಸಾಮಾನುಗಳಿಗೆ ವಜವಾದರೆ ಉಳಿದ ಸ್ಥಳದಲ್ಲಿ ತಲೆಯೊಂದರ 106 ಘನ ಅಡಿ ಸ್ಥಳವಿದ್ದು ಅಷ್ಟು ವಾಯು ದೊರಕುತ್ತೆ ಇದು 210 ರ ಅರ್ಧದಷ್ಟಾಯಿತು. ಇದಕ್ಕೆ ಕಿಟಕಿ ಬಾಗಿಲುಗಳೇನಾದರೂ ತೃಪ್ತಿಕರವಾಗಿವೆಯೋ? ಎರಡು ಬಾಗಿಲುಗಳು ತೃಪ್ತಿಕರವಾಗಿದ್ದರೂ 6 ಕಿಟಕಿಗಳು ಸಣ್ಣ ಸಣ್ಣವಾಗಿವೆ. ಅಲ್ಲದೆ ಸ್ಥಳ ಸಾಲದ ಕಾರಣ ರಾತ್ರಿ 10 ಗಂಟೆಯ ವರೆಗೆ ಎರಡು ಮೂರು ಪೆಟ್ರೊಮೇಕ್ಸ್ ದೀಪಗಳು ಉರಿದೂ, ಮಕ್ಕಳ ಶ್ವಾಸದಿಂದಲೂ ಗಾಳಿಕೆಟ್ಟ ನಂತರ ಕೆಲವು ವಿದ್ಯಾರ್ಥಿಗಳು ಇಲ್ಲೇ ಮಲಗುವರು. ಅವರ ಆರೋಗ್ಯಕ್ಕೆ ಇದು ಎಷ್ಟರ ಮಟ್ಟಿಗೆ ಅನುಕೂಲವಾಗಬಹುದೆಂದು ಯೋಚಿಸಿ. ಈ ಕೊಠಡಿಯಲ್ಲಿ ಮಕ್ಕಳು ಬೆಳಿಗ್ಗೆ 3 ಗಂಟೆ ಕಾಲವೂ, ಸಾಯಂಕಾಲ 4 ಗಂಟೆ ಕಾಲವೂ, ಮಲಗುವಾಗಲೂ ಇರುವದಾದರೆ ಅವರ ಆರೋಗ್ಯ ಮುಂದೆ ಹೇಗಾಗಬಹುದು. ಅವರ ಓದುಗಾರಿಕೆ ಎಷ್ಟರ ಮಟ್ಟಿಗೆ ಸರಿಯಾಗಬಹುದು. ಮುಂದೆ ನಾಲ್ಕು ವರ್ಷಗಳಲ್ಲಿ ಅವರಿಗೆ ಕ್ಷಯ ರೋಗವು ಅಂಟುವುದರಲ್ಲಿ ಸಂಶಯವೇನಿದೆ?

ಇನ್ನು ಮಲಗುವ ಕೋಣೆಗಳನ್ನು ನೋಡೋಣ. ಇವುಗಳಲ್ಲಿ ಕೆಲವು ಬಹು ಸಣ್ಣವು. ಒಂದು 13 × 10 × 8 ಅಡಿಗಳ ವಿಸ್ತಾರವೂ, ಇನ್ನೊಂದು 13 × 10 × 8 ರ ವಿಸ್ತಾರವೂ ಇದ್ದು ಇವುಗಳ ಒಂದೊಂದರಲ್ಲಿ 9, 10 ಹಾಸಿಗೆಗಳಿವೆ. ಮಂಚಗಳ ನಡುವೆ ನಡೆಯಲಿಕ್ಕೆ ಸ್ಥಳವಿಲ್ಲ. ಸದ್ಯಕ್ಕೆ ಇವುಗಳಲ್ಲಿ ಗಾಳಿ ಸಾಕೇ? ಮಲಗುವ ಎಲ್ಲಾ ಕೋಣೆಗಳು ಹೀಗಿದ್ದು ಆ ಮಂಚಗಳ ಕೆಳಗೆ ಗುಡಿಸಲು ಸಹ ಅವಕಾಶವಿಲ್ಲ.

ಅಡಿಗೆಯ ಕೋಣೆಯು ಅಂದಾಜು 10 × 10 ಚದರವಿದೆ. ಇದರಲ್ಲಿ ನಾಲ್ಕೈದು ಜನ ಅಡಿಗೆಯವರು ಹ್ಯಾಗೆ ಅಡಿಗೆ ಮಾಡಬೇಕು? ಹೊಗೆಯಿಂದ ಅವರ ಕಣ್ಣುಗಳ ಪಾಡೇನು?

ಸ್ನಾನದ ಕೋಣೆ ಅಡಿಗೆ ಕೋಣೆಗಿಂತಲೂ ಚಿಕ್ಕದು. ಒಂದೆರಡು ಜನ ಸ್ನಾನ ಮಾಡಲು ಏರ್ಪಾಡು ಇದೆ. 66 ಮಕ್ಕಳು ಒಂದು ಸಾಯಂಕಾಲ ನಾಲ್ಕು ಗಂಟೆಯ ನಂತರ ಎಷ್ಟು ಹೊತ್ತಿಗೆ ಸ್ನಾನ ಮುಗಿಸಬಹುದು? ಮೂತ್ರ ವಿಸರ್ಜನೆಯ ಸ್ಥಳವು 4 × 4 ಅಡಿ ಇದ್ದು ಪೂರ್ತಿ ಸಾಲದು. ಅದರಂತೆ ತಕ್ಕ ಕಕ್ಕುಸ್ ಸಹ ಇರುವುದಿಲ್ಲ.

ಈ ರೀತಿ ಇಕ್ಕಟ್ಟಾಗಿ ಮಾಡು ಎತ್ತರವಿಲ್ಲದೆ ಮಳೆಗಾಲಕ್ಕೆ ಬಹು ಶೀತವಾಗಿರುವ ಈ ಕಟ್ಟಡಗಳು ವಿದ್ಯಾರ್ಥಿಗಳ ವಾಸಕ್ಕೆ ಅಯೋಗ್ಯವಾದವುಗಳು. ಹೈಸ್ಕೂಲು ಕ್ಲಾಸುಗಳಿಗೆ ಸ್ಥಳ ಸಾಲದೆಂದು ತಿಳಿದುಬರುತ್ತದೆ. ಈ ಕಟ್ಟಡಗಳನ್ನು ಅದಕ್ಕಾಗಿ ಉಪಯೋಗಿಸಿ ಬೋರ್ಡಿಂಗನ್ನು ಅದಕ್ಕಾಗಿಯೇ ತಯಾರಿಸಿದ ಎಲ್ಲಾ ಅನುಕೂಲಗಳಿಂದ ಕೂಡಿರುವ ರಾಮಕೃಷ್ಣ ಮಠದವರ ಕಟ್ಟಡಕ್ಕೆ ಸರಕಾರದವರು ಒಡನೆ ವರ್ಗಾಯಿಸುವರೆಂದು ಭಾವಿಸುತ್ತೇನೆ. ಈಗ ಇರುವಂತೆ ಆದರೆ ವಿದ್ಯಾರ್ಥಿಗಳು ತಪ್ಪು ಮಾಡದಿದ್ದರೂ ಬಂಧಿಖಾನೆಯ ವಾಸದಲ್ಲಿ ಇರುವಂತೆ ಆಗುವದು. ಬೋರ್ಡಿಂಗಿನಲ್ಲಿ ಮಕ್ಕಳ ಸಂಖ್ಯೆ ಏರುತ್ತಾ ಇದೆ. 75ಕ್ಕೆ ಹತ್ತುವ ಸಂಭವವಿದೆ. ಆಗಲಂತೂ ಈ ಕಟ್ಟಡಗಳು ಬಹು ಇಕ್ಕಟ್ಟಾಗಿ ತುಂಬಾ ಅನಾರೋಗ್ಯವಾಗುವುದರಲ್ಲಿ ಸಂಶಯವಿಲ್ಲ. ಅಂಟು ರೋಗಗಳು ಖಂಡಿತ ಹರಡುವುವು.

ಆದ್ದರಿಂದ ಸರಕಾರದವರು ತಕ್ಕ ಆಲೋಚನೆಯಿಂದ ಈ ಬೋರ್ಡಿಂಗನ್ನು ಮೊದಲಿದ್ದ ಕಟ್ಟಡಕ್ಕೆ ವರ್ಗಾಯಿಸಬೇಕೆಂದು ಕೇಳಿಕೊಳ್ಳುತ್ತೇನೆ.

'ಮಕ್ಕಳ ತಂದೆ.'

Shorthand, Typing etc.

ಶೊರ್ಟ್‌ಹೆಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—3

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 24-6-39 ರಲ್ಲು ಬೆಳಿಗೆ 11 ಗಂಟೆಗೆ ಬ್ಯಾಂಕು ಆಫೀಸಿನಲ್ಲಿ ಶ್ರೀಮಾನ್ ಪಂದ್ಯಂಡ ಐ ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್) 2. ಪಿ. ಜಿ. ಐಯ್ಯಪ್ಪನವರು, 3. ರಾ. ಬ. ಪಿ. ದೇವಯ್ಯನವರು, (ಟ್ರೆಜರರ್) 4. ಯಂ. ಸಿ. ದೇವಯ್ಯನವರು, 5. ಕೆ. ಕೆ. ಗಣಪತಿಯವರು, 6. ಕೆ. ಸಿ. ಕರುಂಬೈಯ್ಯನವರು, 7. ಐ. ಪಿ. ಕಾರ್ಯಪ್ಪನವರು, 8. ಪಿ. ಸಿ. ಕರುಂಬೈಯ್ಯನವರು, 9. ಕೆ. ಯಂ. ಕುಶಾಲಪ್ಪನವರು, 10. ಬಿ. ಪಿ. ಮೊಣ್ಣೈಯ್ಯನವರು, 11. ಹೆಚ್. ಯಂ. ಪುಷ್ಪಣ್ಣನವರು, 12. ಎನ್. ಬಿ. ಸೋಮಯ್ಯನವರು, 13. ಯಂ. ಎಸ್. ಸೋಮಯ್ಯನವರು, 14. ಎನ್. ಶಂಕರಯ್ಯನವರು, ಮತ್ತು 15. ಎಸ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ.)

ಸಹಕಾರ ಸಂಘಗಳ ರಿಜಿಸ್ಟ್ರಾರನವರೂ ಮತ್ತು ಸೀನಿಯರ್ ಸಾನ್‌ಕ್ರೆಡಿಟ್ ಇನ್‌ಸ್ಪೆಕ್ಟರರೂ ಸಹ ಹಾಜರಿದ್ದರು.

1. ಕಳೆದ ಮೀಟಿಂಗಿನ ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಮೇ ತಿಂಗಳ ಜಮಾ ಖರ್ಚಿನ ಲೆಕ್ಕ ಓದಿ ಮಂಜೂರ್ಮಾಡಲಾಯಿತು.

ಹಿಂದಿನ ಶಿಲ್ಕು	21,223	8	10
ಸದರಿ ತಿಂಗಳ ವಸೂಲಿ	29,203	12	0
ಜುಮ್ಲ	50,427	4	10
ಆ ತಿಂಗಳಲ್ಲಿ ಖರ್ಚು	31,213	3	6
ಬಾಕಿ ಶಿಲ್ಕು	19,214	1	4

4. ಈ ಕೆಳಗಿನ ಸೊಸೈಟಿಗಳಿಗೆ ಸಾಲಗಳು ಮಂಜೂರಾದವು. 1. ಹುದಿಕೇರಿ ಟೌನ್ ಸೊಸೈಟಿಗೆ ರೂ. 500, 2. ಜೇನು ಮತ್ತು ಮೇಣ ಸಂಘಕ್ಕೆ ರೂ. 3000. 3. ಮೂರ್ನಾಡು ಸ್ಟೋರಿಗೆ ರೂ. 500, 4. ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1000, 5. ಕುಟ್ಟ ಸೊಸೈಟಿಗೆ ರೂ. 500, 6. ಬಾಡಗರಕೇರಿ ಸೊಸೈಟಿಗೆ ರೂ. 2000, 7. ಕೊಳಕೆರೆಬೈಲು ಗೋಡು ಸೊಸೈಟಿಗೆ ರೂ. 200, 8. ಚೇಲಾವರ ಸೊಸೈಟಿಗೆ ರೂ. 780. 9. ಬಾಳಲೆ ಸೊಸೈಟಿಗೆ ರೂ. 750, 10. ಬಿಳಿಗೇರಿ ಸೊಸೈಟಿಗೆ ರೂ. 790, 11. ಕುಂದಳ್ಳಿ, ಕುಮರಳ್ಳಿ ಸೊಸೈಟಿಗೆ ರೂ. 1500, 12. ಹೊದವಾಡ ಸೊಸೈಟಿಗೆ ರೂ. 1000, 13. ಚಿಕ್ಕ ಮುಂಡೂರು ಸೊಸೈಟಿಗೆ ರೂ. 1500 14. ಆರ್ಜಿ ಸೊಸೈಟಿಗೆ ರೂ. 400, 15. ತಿತಿಮತಿ ಶ್ರೀರಾಮ ಸೊಸೈಟಿಗೆ ರೂ. 500 ಮತ್ತು 16. ರುದ್ರಗುಪ್ಪೆ ಸೊಸೈಟಿಗೆ ರೂ. 750.

ಕೊಡಗಿನ ಬೆಡಗು.

ಪಡುವಣ ಬೆಟ್ಟದ ಸಾಲೊಳು ಅಡಗಿದ ಕೊಡಗಿನ ಬೆಡಗನು ಬಣ್ಣಿಪೆನು.
ಕೊಡಗಿನ ಒಡಲೊಳು ವಿಧ ವಿಧ ವೃಕ್ಷಗಳಂದದಿ ಚಂದದಿ ಅಡಗಿಹವು.
ಸುತ್ತಲು ತವಕದಿ ನೋಡಲು ಕಾಂಬುವು ಅಂದದ ಬೆಟ್ಟದ ಸಾಲುಗಳು.
ಸುತ್ತಲು ಹಾಸಿದ ಹಸುರಾಗಿರುತಿಹ ಚೆಂದದ ಅಂದದ ಕಂಬಳಿಯು.
ಬಣ್ಣ ಬಣ್ಣದಾ ಪುಷ್ಪಗಳಿಂದಲಿ ನೆಯ್ದಿಹ ಸೊಗಸಿನ ಕಂಬಳಿಯು.
ತನ್ನಯ ಬಣ್ಣವನೆಂದಿಗು ಕಳೆಯದೆ ಅಳಿಯದೆ ಉಳಿಯುವ ಕಂಬಳಿಯು.
ಚಳಿಯಲಿ, ಬಿಸಿಯಲಿ ಬಳಲುವ ಜೀವಿಗಳೆಲ್ಲವ ಸಲಹುವ ಕಂಬಳಿಯು.
ಮಳೆಯಲಿ, ಬಿಸಿಲಲಿ, ಚಳಿಯಲಿ ಸಿಕ್ಕಲು ಅಳಿಯದ ಬೆಡಗಿನ ಕಂಬಳಿಯು.
ಇದರೊಳು ಮುತ್ತಿನ ತೆರದೊಳು ಹೊಳೆಯುವ ವಿಧವಿಧ ಬಣ್ಣದ ಹಣ್ಣುಗಳು.
ವಿಧವಿಧ ರೂಪಲಿ ತೋರುತ, ಬಾಗುತ ಸೆಳೆವವು ಸರ್ವರ ಮನವನ್ನು.
ಇವುಗಳ ನೋಡುತ, ಮುದದೊಳು ತಿನ್ನುತ ಮೆರೆಯುವ ವಿಧವಿಧ ಜೀವಿಗಳು.
ತವಕದಿ ತಮ್ಮಯ ಬೆಡಗನು ತೋರುತ ಸವಿಯಲಿ ಹಾಡುತ ನಲಿಯುವವು.
ಪರಿ ಪರಿ ವಿಧದೊಳು ಹಾಡುತ, ನಲಿಯುತ, ಹರಿಯುವ ನದಿಗಳ ಸೊಬಗೆಂತು!
ಪರದೇಶೀಯರನು ಭರದೊಳು ಸೆಳೆಯುತ ಬೆಳಗುವ ಅಂದದ ಜೋಗುಗಳು.
ಬಡಗಣ ದೇಶದ ಗಂಗಾನದಿಯೊಳ್ಮೆರೆಯುವ ಸವಿಯೊಂದಿಲ್ಲಿಹುದು
ಕೊಡಗಿನ ಬೆಡಗನು ಹೊರಗಡೆ ಹರಡುತ್ತಿರುವುದೆ ನಮ್ಮಯ ಕಾವೇರಿ.
ಬೆಟ್ಟದ ತುದಿಯೊಳು ಬೆಳಗುವ ದಿನಪನ ತೆರದೊಳು ಬೆಳಗುವ ಪುರವಿಹುದು.
ನೆಟ್ಟನೆ ಅರಸರು ರಾಜ್ಯವನಾಳಿದ ಪುರವಿದು ನಮ್ಮಯ ಮಡಿಕೇರಿ.
ಅಂದದ ವೃಕ್ಷಗಳಿಂದಲಿ ಬೆಳಗುವ ನಮ್ಮಯ ಹೊನ್ನಿನ ದೇಶವಿದು.
ಎಂದಿಗೂ ಅಳಿಯದೆ ರಂಜಿಸ ನಮ್ಮಯ ಕೀರ್ತಿಯು, ಖ್ಯಾತಿಯ ದೇಶವಿದು.

ಪಾಲೇಂಗಡ ಕೆ. ತಿಮ್ಮಯ್ಯ.

5. ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಕಾರಣಾಂತರಗಳಿಂದ ತಿರಸ್ಕರಿಸಲಾಯಿತು. 1. ಮೂರ್ನಾಡು ವಿದ್ಯಾರ್ಥಿಯರ ಸೊಸೈಟಿಗೆ, 2. ಶ್ರೀಮಂಗಲ ಸೊಸೈಟಿಗೆ ಮತ್ತು 3. ಕುಂಜಿಲಗೇರಿ ಸೊಸೈಟಿಗೆ.

6. ಬಾವಲಿ ಸೊಸೈಟಿಗೆ ಕಳೆದ ತಿಂಗಳಲ್ಲು ಮಂಜೂರಾದ 850 ರೂಪಾಯಿಗಳ ಬದಲು ಡೈರೆಕ್ಟರು ಮೆ. ಕೆ. ಯಂ. ಕುಶಾಲಪ್ಪನವರ ರಿಪೋರ್ಟಿನ ಮೇರೆ ಬರೀ 550 ರೂಪಾಯಿಗಳನ್ನು ಮಾತ್ರ ಕೊಡುವಂತೆ ತೀರ್ಮಾನವಾಯಿತು.

7. ಡೈರೆಕ್ಟರು ಮೆ. ಐ. ಪಿ. ಕಾರ್ಯಪ್ಪನವರ ರಿಪೋರ್ಟಿನ ಮೇರೆ ಶನಿವಾರಸಂತೆ ಕ್ರಾಪ್, ಲೋನ್ ಸೇಲ್ ಅಂಡ್ ಸಪ್ಲೈ ಸೊಸೈಟಿಗೆ ಕಳೆದ ತಿಂಗಳಲ್ಲು ಮಂಜೂರಾದ 800 ರೂಪಾಯಿಗಳನ್ನು ಕೊಡಬಹುದೆಂತ ತೀರ್ಮಾನವಾಯಿತು.

8. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರೆದುಕೊಂಡ ಶ್ರೀಮತಿ ಕುಂಜ್ಞಿಯಂಡ ಪೊನ್ನಪ್ಪನವರನ್ನು ಮತ್ತು ಶ್ರೀಮತಿ ಮಂದ್ಯಂಡ ಮುತ್ತಪ್ಪನವರನ್ನು ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

9. ಗೋಣಿಕೊಪ್ಪಲು ಟೌನ್ ಸೊಸೈಟಿಯವರು ತಮಗೆ ಕಳೆದ ತಿಂಗಳಲ್ಲಿ ಬ್ಯಾಂಕಿನಿಂದ ಮಂಜೂರಾದ 1000 ರೂಪಾಯಿಗಳಿಗೆ ಕೊಟ್ಟ ಕಂತುಗಳನ್ನು ಬದಲಾಯಿಸಿಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು

10. ರೆಸೊಲ್ಯೂಶನ್ ನಂಬ್ರ 4946 ರ ಮೇರೆ ತಾನು ಬಾವಲಿ ಸೊಸೈಟಿಯನ್ನು ಸಂದರ್ಶಿಸಿದ್ದಕ್ಕಾಗಿ ಕಾರು ಬಾಡಿಗೆ ಮತ್ತು ಬಸ್ ಚಾರ್ಜು ಕೊಡಬೇಕೆಂದು ಡೈರೆಕ್ಟರು ಮೆ. ಕೆ. ಯಂ. ಕುಶಾಲಪ್ಪನವರು ಕಳುಹಿಸಿದ ಬಿಲ್ಲನ್ನು ಚೆಕ್ಕಿಸಿ, ಸದರಿಯವರಿಗೆ ಜುಮ್ಲ ರೂ. 5-8-0 ಕೊಡಬಹುದೆಂತ ತೀರ್ಮಾನವಾಯಿತು.

11. ಮಡಿಕೇರಿನಾಡು ಸ್ಟೋರಿನ ಮೇಲೆ ವಡೆದ ಡಿಕ್ರಿ ನಂಬ್ರ 1205 ರ ಬಾಬ್ತು ಬರಲಿಕ್ಕಿರುವ ಹಣವನ್ನು ವಸೂಲು ಮಾಡುವ ಬಗ್ಗೆ ವಕೀಲರಿಗೆ ವಕಾಲತ್ತು ಸಹಿ ಹಾಕುವ ಅಧಿಕಾರವನ್ನು ಪ್ರೆಸಿಡೆಂಟರಿಗೆ ಕೊಡಲಾಯಿತು.

12 ಬ್ಯಾಂಕಿನ ಎರಡನೇ ಗುಮಾಸ್ತರ ಬಡ್ತಿಯ ವಿಷಯ ಆಲೋಚಿಸಲು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

ಕೊಡಂದೇರ ಡಿ. ಮಾಚಯ್ಯ,

L.D Sc. (COLLEGE OF DENTISTRY)

EX-SUPERVISOR, LAXMIBAI PATEL DENTAL HOSPITAL KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 5

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

13. ಅಂಕನಳ್ಳಿ ಸೊಸೈಟಿಯವರು ಬ್ಯಾಂಕಿಗೆ ಪಾವತಿ ಮಾಡಲಿಕ್ಕಿರುವ ವಾಯಿದೆ ಸಾಲಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

14. ಒಬ್ಬ ಮಹಿಸೀಯನು ಬ್ಯಾಂಕಿನಲ್ಲಿರುವ ತನ್ನ ಡಿಪಾಜಿಟು ಮೊಬಲಗನ್ನು ಈ ನೊಡಲೇ ವಾಯಿದೆ ಗತಿಸಿದ್ದರಿಂದ ಅದನ್ನು ವಾಪ್ಸು ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ಓದಲಾಯಿತು.

ಸದರಿಯವರು ಡಿಪಾಜಿಟು ರಶೀತಿಯನ್ನು ಕಳಕೊಂಡಿರುವುದರಿಂದ ಒಬ್ಬ ಮೇಜಿಸ್ಟ್ರೇಟರ ಸರ್ಟಿಫಿಕೇಟನ್ನು ಪಡೆದು ಆನಂತರ ಹಣ ಹೊಂದಿಕೊಳ್ಳಬೇಕೆಂತ ತೀರ್ಮಾನವಾಯಿತು.

15. ಕಳೆದ ತಿಂಗಳಲ್ಲು ನರಿಯಂದಡ ಸೊಸೈಟಿಗೆ ಮಂಜೂರಾದ 400 ರೂಪಾಯಿ ಸಾಲಕ್ಕೆ 5 ಕಂತುಗಳ ಬದಲು 10 ಕಂತುಗಳನ್ನು ಕೊಡಬೇಕೆಂದು ಸದರಿ ಸಂಘದ ಪ್ರೆಸಿಡೆಂಟರು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

16 ಮಡಿಕೇರಿ ಸಾದರ್ ಟ್ರೆಜರಿಯಲ್ಲಿ ಬ್ಯಾಂಕು ಇಟ್ಟುಕೊಂಡಿರುವ ಕಬ್ಬಿಣದ ಹಣದ ಪೆಟ್ಟಿಗೆಯು ಚೀಫ್ ಕಮಿಷನರವರು ತೀರ್ಮಾನಿಸಿರುವ ಮೇರೆ ಬ್ಯಾಂಕಿನ ಸ್ವಂತ ಜವಾಬ್ದಾರಿಕೆಯಲ್ಲಿ ಇಟ್ಟುಕೊಂಡಿರುವುದು ಎಂಥ ಬ್ಯಾಂಕಿನವರು ಪತ್ರ ಬರೆದು ಕಳುಹಿಸಬೇಕೆಂದು ಟ್ರೆಜರಿ ಆಫೀಸರು ತಾರೀಕು 20-6-39 ರಲ್ಲು ಕಳುಹಿಸಿದ ಪತ್ರ ನಂಬ್ರ 189/39 ನ್ನು ಓದಲಾಗಿ ಅದರಂತೆ ಪತ್ರ ಬರೆಯಲು ತೀರ್ಮಾನವಾಯಿತು.

17. ಬ್ಯಾಂಕಿನ ಎಟೆಂಡರ್ ಕಳೆದ ಸಾರಿ ಒಂದು ತಿಂಗಳು ರಜದಲ್ಲಿ ಹೋಗಿದ್ದಾಗ ಒಂದು ವಾರಕ್ಕೆ ಹಿಡಿದಿದ್ದ ತನ್ನ ಅರ್ಧ ಸಂಬಳವನ್ನು ಕೂಡ ಕೊಡಬೇಕೆಂದು ಬರೆಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

18. ಬ್ಯಾಂಕಿನ ಎಟೆಂಡರಿನ ಉಪಯೋಗಕ್ಕಾಗಿ 3 ರೂಪಾಯಿಗಳಿಗೆ ಮೀರದೆ ಒಂದು ಕೊಡೆಯನ್ನು ಕೊಂಡುಕೊಳ್ಳಬಹುದೆಂತ ತೀರ್ಮಾನವಾಯಿತು.

19. ಬರುವ ಜುಲೈ ತಾರೀಕು 18 ರಲ್ಲು ಕೆಲಸದಿಂದ ನಿವೃತ್ತರಾಗುವ, ಕೊಡಗು ಸಹಕಾರ ಸಂಘಗಳ ರಿಜಿಸ್ಟ್ರಾರಾದ ಶ್ರೀಮಾನ್ ಕೆ. ಜೆ. ಜಂಗಪ್ಪನವರು ಬ್ಯಾಂಕಿನ ಡೈರೆಕ್ಟರುಗಳೊಂದಿಗೆ ವಿಶ್ವಾಸಪೂರ್ವಕವಾಗಿ ಸಹಕರಿಸಿ ಅವರ ಕೆಲಸ ಕಾರ್ಯಗಳಲ್ಲಿ ಅವರು ರಿಜಿಸ್ಟ್ರಾರಾಗಿದ್ದ 5 ವರ್ಷ ಕಾಲದಲ್ಲಿ ಯೋಗ್ಯವಾದ ಸಲಹೆಗಳನ್ನು ಕೊಟ್ಟು ಅವರ ಅಭಿವೃದ್ಧಿಯನ್ನು ಕೋರಿಸಿ ಅವರ ಉನ್ನತಿಯನ್ನು ಬಯಸಿದ್ದಕ್ಕಾಗಿಯೂ ಡೈರೆಕ್ಟರುಗಳು ಒನ್ನುತದಿಂದ ಅವರು ಮಾಡಿದ ಒಳ್ಳೆ ಕೆಲಸಕ್ಕೆ ಮೆಚ್ಚಿಗೆಯನ್ನು ಸಂತೋಷದಿಂದ ರಿಕಾರ್ಡು ಮಾಡುವಂತೆ ತೀರ್ಮಾನಿಸಲಾಯಿತು.

ಪಿ ಐ. ಬೆಳ್ಯಪ್ಪ,
ಅಧ್ಯಕ್ಷರು.

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಥವಾ ಅಮರಸುಳ್ಯದ ಕಾಟಕಾಯಿ.

ಲೇಖಾಂಕ 17.

(ಡಿ ಎನ್. ಕೃಷ್ಣಯ್ಯ ಯಂ. ಎ, ಬಿ. ಇ. ಡಿ.)

(ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.)

(ಕಳೆದ ಸಂಚಿಕೆಯಿಂದ ಸಾಗಿದ್ದು.)

ಈ ಮಧ್ಯೆ ಪುಟ್ಟಬಸಪ್ಪನೂ, ಅವನ ಅನುಯಾಯಿಗಳೂ ಕೊಡಗಿನವರಿಗೆ ಹಿಂದಿನ ರಾಜ ಮನೆತನಗಳಲ್ಲಿದ್ದ ಭಕ್ತಿಯನ್ನು ತೋರಿಸಬೇಕೆಂದೂ, ಕೊಡಗನ್ನು ಸ್ವತಂತ್ರವಾಗಿ ಮಾಡುವುದಕ್ಕೆ ಸಿಕ್ಕುವ ಸಂದರ್ಭವನ್ನು ಕಳೆದುಕೊಳ್ಳಬಾರದೆಂದೂ ಇಸ್ತಿಹಾರುಗಳನ್ನು ಕಳುಹಿಸಿದರು. ಭೂಮಿ ಕಂದಾಯವನ್ನು ಮೂರು ವರ್ಷಗಳ ವರೆಗೆ ಎತ್ತುವುದಿಲ್ಲವಾಗಿಯೂ, ದಕ್ಷಿಣಕನ್ನಡದಲ್ಲಿ ಉಪ್ಪು ಮತ್ತು ಹೊಗೆಸೊಪ್ಪು ಮಾರಾಟದ ಗುತ್ತಿಗೆಯನ್ನು ತೆಗೆದುಬಿಡುವುದಾಗಿಯೂ ಭರವಸೆಕೊಟ್ಟರು. ಬೇರೆ ದೇಶಗಳಲ್ಲಿ ಬ್ರಿಟಿಷರ ಅಧಿಕಾರವು ಅಡಗಿ ಹೋಗಿದೆಯೆಂದೂ, ಕಾಶಿಗೆ ಕಳುಹಿಸಲ್ಪಟ್ಟ ವೀರರಾಜನು ಅಲ್ಲಿಂದ ತಪ್ಪಿಸಿಕೊಂಡು ಬಂದು ತಮ್ಮ ಪಾಳೆಯದಲ್ಲಿರುವನೆಂದೂ ವರ್ತಮಾನವನ್ನು ಹರಡಿದರು. ಆದರೆ ಕೊಡಗಿನಲ್ಲಿ ಈ ವರ್ತಮಾನಗಳಿಂದ ಯಾವ ಪರಿಣಾಮವೂ ಉಂಟಾಗಲಿಲ್ಲ.

ಕ್ಯಾಪ್ಟನ್ ಲೀಹಾರ್ಡಿ ಸಾಹೇಬನು 36ನೇ ರಿಜಿಮೆಂಟನ್ನು ಕೆಲವು ಕೊಡಗರ ಸಮೇತ ಉತ್ತರದ ಗಡಿಗೆ ಕಳುಹಿಸಿದನು. ಪುಟ್ಟಬಸಪ್ಪನು ಬಿಸ್ಲೆ ಘಟ್ಟವನ್ನು ಹತ್ತಿ ಏಳುಸಾವಿರ ಸೀಮೆಗೆ ಬರುವನೆಂಬ ವರ್ತಮಾನವು ಹರಡಿತ್ತು. ಅದಕ್ಕೋಸ್ಕರ 36ನೇ ರಿಜಿಮೆಂಟು ಮತ್ತು ಬೋಪು ದಿವಾನನೂ ಆತನ ಕಡೆಯವರು ಸೋಮವಾರಪೇಟೆ ದಾಟಿ ಶಾಂತಳ್ಳಿ ಎಂಬಲ್ಲಿಗೆ ಹೋದರು. ಶತ್ರುಗಳು ಬಿಸ್ಲೆಘಟ್ಟದ ಮೇಲೆ ಒಂದು ಗುಡ್ಡದಲ್ಲಿದ್ದರು. ಆದರೆ ಪುಟ್ಟಬಸಪ್ಪನೂ ಅಮರ ಸುಳ್ಯದ ಅವನ ಅನುಯಾಯಿಗಳೂ ಅಲ್ಲಿರಲಿಲ್ಲ. ಆ ಗುಡ್ಡದ ಮೇಲಿದ್ದ ಶತ್ರುಗಳು ಇಂಗ್ಲಿಷರ ಸೈನ್ಯವನ್ನು ನೋಡಿ ಬಿಸ್ಲೆಘಟ್ಟವನ್ನು ಇಳಿದು ಸುಬ್ರಹ್ಮಣ್ಯಕ್ಕೆ ಹೋದರು.

ಈ ಮಧ್ಯೆ ಪುಟ್ಟಬಸಪ್ಪನು ಅಥವಾ ಕಪಟ ಕಲ್ಯಾಣ ಸ್ವಾಮಿಯು ತನ್ನ ಜನರನ್ನು ಕರೆದುಕೊಂಡು ಪುತ್ತೂರಿಗೆ ಹೊರಟನು. ಅಮರ ಸುಳ್ಯದಲ್ಲಿ ಜನರು ಸರಕಾರದವರಿಗೆ ತಿರುಗಿ ಬಿದ್ದಿರುವರೆಂಬ ವರ್ತಮಾನವನ್ನು ಮಂಗಳೂರಿನಲ್ಲಿದ್ದ ಕಲೆಕ್ಟರನು ಕೇಳಿ ತನ್ನ ಶಿರಸ್ತೇದಾರನಾದ ಕರಣಿಕ ದೇವಪ್ಪಯ್ಯನನ್ನೂ, ಸಿಪಾಯಿಗಳ ಒಂದು ಸಣ್ಣ ಸೈನ್ಯವನ್ನೂ ತೆಗೆದುಕೊಂಡು ಬಂದಿದ್ದನು. ಅಲ್ಲಿಗೆ ಬಂದು ಕಚ್ಚೇರಿ ಮಾಡಿ ಕೂತುಕೊಳ್ಳುವಷ್ಟರಲ್ಲಿ ಪುಟ್ಟ ಬಸಪ್ಪನು ದೊಡ್ಡ ಬಸಪ್ಪನು ದೊಡ್ಡ ಸೈನ್ಯದೊಡನೆ ಪುತ್ತೂರಿಗೆ ಬಂದನೆಂಬ ವರ್ತಮಾನವನ್ನು ಕೇಳಿ ಕಲೆಕ್ಟರನು ಕುದುರೆ ಹತ್ತಿ ಮಂಗಳೂರು ಬಂದೋಬಸ್ತಿಗೆ ಹೋದನು. ಪುತ್ತೂರಿನಲ್ಲಿ ಕರಣಿಕ ದೇವಪ್ಪಯ್ಯನೂ ಇನ್ನೂ ಕೆಲವು ಸಿಪಾಯಿಗಳೂ ಇದ್ದರು. ಪುಟ್ಟಬಸಪ್ಪನು ಕಚ್ಚೇರಿಗೆ ಬಂದು ಕಲೆಕ್ಟರನು ಕುಳಿತುಕೊಳ್ಳುವ ಆಸನದಲ್ಲಿ ತಾನು ಕುಳಿತುಕೊಂಡನು. ಆತನ ಸುತ್ತಲೂ ಕತ್ತಿಗಳನ್ನೂ, ಕೋವಿಗಳನ್ನೂ, ಕೊರಡೆಗಳನ್ನೂ ಹಿಡಿದುಕೊಂಡು ಸೈನಿಕರು ನಿಂತಿದ್ದರು. ಆಗ ಪುಟ್ಟಬಸಪ್ಪನು ಕರಣಿಕ ದೇವಪ್ಪಯ್ಯನನ್ನು ತನ್ನ ಮುಂದೆ ಎಳೆದು ತರಿಸಿ ಆತನನ್ನು ತನ್ನ ಮುಂದೆ ಎಳೆದು ತರಿಸಿ ಆತನನ್ನು ಕರಣಿಕನಾಗಬೇಕೆಂದು ಹೇಳಿದನು. ಆಗ ಕಲ್ಯಾಣ ಸ್ವಾಮಿಯು ಸಿಟ್ಟಿನಿಂದ 'ನೀನು ಯಾರ ಜೊತೆಯಲ್ಲಿ ಮಾತನಾಡುತ್ತೀ, ನಿನ್ನ ಆಜ್ಞೆಗೆ ವಿರೋಧವಾಗಿ ನಡೆದರೆ ನಿನ್ನ ತಲೆ ಕಡಿಸಿ ಬಿಟ್ಟೇನು. ಈಗ ರಾಜ್ಯವು ನಮಗಾಯಿತು' ಎಂದು ಹೇಳಿ ಅವನನ್ನು ಸೆರೆಯಲ್ಲಿಡಿಸಿದನು. ಕಲ್ಯಾಣ ಸ್ವಾಮಿಯ ಪರಿಚಾರಕರಲ್ಲಿ ಅನಂತು ಎಂಬವನೊಬ್ಬನಂತೆ. ಅವನನ್ನು ದೇವಪ್ಪಯ್ಯನಿಗೆ ಮೊದಲೇ ಗೊತ್ತಿದ್ದಿತು. ದೇವಪ್ಪನು ಅನಂತುವನ್ನು ಕಂಡು ಕೊಂಕಣಿ ಭಾಷೆಯಲ್ಲಿ 'ತು ಹಮುಗತಿ ಅಂತೂ, ಮ ಅನಂತುರೆ' ಎಂದರೆ 'ನೀನು ನಮ್ಮ ಅಂತೂ ಮಗ ಅನಂತು ಪ್ರೋ' ಎಂದು ಹೇಳಿದನು ಆಗ ಅನಂತುವು ತಾನು ಕೊಡಗಿನ ರಾಜನ ಊಳಿಗದನೆಂಬ ಅಹಂಕಾರದಿಂದ ದೇವಪ್ಪಯ್ಯನಿಗೆ 'ಮಹಾ ಸ್ವಾಮಿಯವರ ಅಪ್ಪಣೆಯಾದರೆ ತಲೆ ಕಡಿಸಿ ಬಿಟ್ಟೇನು' ಎಂದು ಉತ್ತರ ಕೊಟ್ಟನು. ಆದರೂ ದೇವಪ್ಪನು ಅವನಲ್ಲಿ ವಿಶ್ವಾಸವನ್ನು ಬೆಳೆಸಿ ತಾನು ಸೆರೆಯಿಂದ ತಪ್ಪಿಸಿಕೊಂಡು ಹೋಗುವ ಉಪಾಯವನ್ನು ಹುಡುಕುತ್ತಿದ್ದನು. ಕೊನೆಗೆ ಅವನು ನಂದಾವರದಲ್ಲಿ ಇಂಗ್ಲಿಷರಿಂದ ಮಲ್ಲಿಖಾನೆಯನ್ನು ಪಡೆಯುತ್ತಿದ್ದ ಲಕ್ಷ್ಮಪ್ಪ ಬಂಗರಾಜನು ಕಲ್ಯಾಣ ಸ್ವಾಮಿಗೆ ಸಹಾಯ ಮಾಡುವನೆಂದು ಅನಂತು ಮೂಲಕ ಕಲ್ಯಾಣ ಸ್ವಾಮಿಗೆ ಹೇಳಿಸಿ ತಾನು ಬಿಡುಗಡೆಯನ್ನು ಹೊಂದಿದನು.

ಕಲ್ಯಾಣ ಸ್ವಾಮಿಯು ಪುತ್ತೂರನ್ನು ಸುಲಿಗೆ ಮಾಡಿ ಪಾಣೆ ಮಂಗಳೂರಿಗೆ ಹೋದನು. ಅಲ್ಲಿ ಲಕ್ಷ್ಮಪ್ಪ ಬಂಗರಸನು ಕಲ್ಯಾಣ ಸ್ವಾಮಿಯ ದೊಡ್ಡ ಸೈನ್ಯವನ್ನು ನೋಡಿ ಬ್ರಿಟಿಷರ ಆಳ್ವಿಕೆಯು ತೀರಿತೆಂದು ಯೋಚಿಸಿ ಅವನ ಕಡೆ ಸೇರಿಕೊಂಡನು. ಅವನ ಸೈನ್ಯಕರಿಗೆ ಊಟ ಉಪಚಾರಕ್ಕೆ ಬೇಕಾದ ಸಾಹಿತ್ಯಗಳನ್ನು ಒದಗಿಸಿಕೊಟ್ಟನು. ಕಲ್ಯಾಣ ಸ್ವಾಮಿ ಅಲ್ಲಿಂದ ಹೊರಟು ಬಂಟವಾಳಕ್ಕೆ ಬಂದು ಆ ಊರನ್ನು ಸುಲಿಗೆ ಮಾಡಿದನು. ಈ ಅನಂತರ ಕಲ್ಯಾಣ ಸ್ವಾಮಿಯು ಮಂಗಳೂರಿಗೆ ಹೊರಟನು. ಹೋಗುವಾಗ ದಾರಿಯಲ್ಲಿ ಇವನ ಕಡೆಯ ಜನರು ಹೆಚ್ಚುತ್ತಾ ಬಂದರು. ಆತನು ಮಂಗಳೂರಿಗೆ ಹೋಗುವಷ್ಟರಲ್ಲಿ ಅಲ್ಲಿದ್ದ ಇಂಗ್ಲಿಷ್ ಅಧಿಕಾರಿಗಳು ಪಟ್ಟಣವನ್ನು ಬಿಟ್ಟು ನದಿಯನ್ನು ದಾಟಿ ಕನ್ನನೂರಿಗೆ ಹೋಗುವುದಕ್ಕೆ ಹಡಗನ್ನು ಕಾಯುತ್ತಿದ್ದರು. ಪುಟ್ಟಬಸಪ್ಪನು ಅಥವಾ ಕಲ್ಯಾಣ ಸ್ವಾಮಿಯು ತನ್ನ ಜನರೊಡನೆ ಸೆರೆಮನೆಗೆ ಹೋಗಿ ಅಲ್ಲಿದ್ದ ಕೈದಿಗಳನ್ನು ಸೆರೆಯಿಂದ ಬಿಡಿಸಿ ಅವರನ್ನು ಸೇರಿಕೊಂಡು ತಾಲೋಕು ಕಚ್ಚೇರಿಗೆ ಹೋಗಿ ಖಜಾನೆಯನ್ನು ಒಡೆದು ಹಣವನ್ನು ತೆಗೆದುಕೊಂಡನು. ಇದಾದ ಮೇಲೆ ಅಲ್ಲಿದ್ದ ಇಂಗ್ಲಿಷ್ ಉದ್ಯೋಗಸ್ಥರ ಮನೆಗಳಿಗೆಲ್ಲಾ ಬೆಂಕಿ ಕೊಡಿಸಿದನು. ಇದೇ ಸಮಯದಲ್ಲಿ ತಾನೂ ಒಬ್ಬ ರಾಜನಾಗಬಹುದೆಂದು ತೆಂಕುಂಬಳೆ ಕೋಟೆಯ ಹತ್ತಿರ ವಾಸವಿದ್ದ ಸುಬ್ರಾಯ ಹೆಗ್ಡೆ ಎಂಬವನು ಜನರನ್ನು ಸೇರಿಸಿ ಕಲ್ಯಾಣ ಸ್ವಾಮಿಯ ಸಹಾಯಕ್ಕೆ ಹೊರಟು ಬಂದನು. ಇವನು ದಾರಿಯಲ್ಲಿ ಮಂಜೇಶ್ವರ, ಉಳ್ಳಾಲಗಳಿಗಾಗಿ ದಾಟುವಾಗ ಆ ಊರುಗಳ ಜನರು ಸುಬ್ರಾಯ ಹೆಗ್ಗಡೆಯ ಜನರಿಗೆ ಊಟ ಉಪಚಾರ ಮಾಡಿಸಿ ಉಡಿಗೆಗಳನ್ನು ಕೊಟ್ಟು ತಮ್ಮ ಊರುಗಳನ್ನು ಕೊಳ್ಳೆ ಹೊಡೆಯದಂತೆ ಮಾಡಿಕೊಂಡರು. ಸುಬ್ರಾಯ ಹೆಗ್ಡೆಯು ಮಂಗಳೂರಿಗೆ ಹೊರಟ ಕೂಡಲೇ ಕುಂಬಳೆಯ ಅರಸನು ತನ್ನ ರಾಜ್ಯದಲ್ಲಿ ದಂಗೆಯೆಬ್ಬಿಸಿದ್ದಾರೆಂದು ತಲಚೇರಿಯಲ್ಲಿದ್ದ ಇಂಗ್ಲಿಷ ಅಧಿಕಾರಿಗೆ ಹೇಳಿ ಕಳುಹಿಸಿದನು. ಸುಬ್ರಾಯ ಹೆಗ್ಡೆಯು ಉಳ್ಳಾಲದಿಂದ ಮಂಗಳೂರಿಗೆ ಬರಬೇಕಾದರೆ ನೇತ್ರಾವತಿ ನದಿಯನ್ನು ದಾಟಿ ಬರಬೇಕಾಗಿದ್ದಿತು. ಹಾಗೆ ದೋಣಿಯಲ್ಲಿ ದಾಟುತ್ತಿರುವಾಗ ಬೋಳಾರದಲ್ಲಿದ್ದ ಕೆಲವು ಕಂಪನಿ ಸರ್ಕಾರದ ಸಿಪಾಯಿಗಳು ಗುಂಡು ಹೊಡೆದು ದೋಣಿ ಸಮೇತ ಸುಬ್ರಾಯ ಹೆಗ್ಡೆಯನ್ನೂ, ಅವನ ಜನರನ್ನೂ ಮುಳುಗಿಸಿದರು. ಇವರಲ್ಲಿ ಕೆಲವರು ಮಾತ್ರ ಈಜಿ ತಮ್ಮ ಪ್ರಾಣ ರಕ್ಷಿಸಿಕೊಂಡರು. ಇದಾದ ಒಂದೆರಡು ದಿವಸಗಳಲ್ಲಿ ತಲಚೇರಿಯಿಂದ ಹೊರಟ ಸೈನ್ಯವೂ, ಬೆಂಗಳೂರಿನಿಂದ ಹೊರಟ ದಂಡೂ ಮಂಗಳೂರನ್ನು ತಲಪಲು ಕಲ್ಯಾಣ ಸ್ವಾಮಿಯ ಸೈನ್ಯವು ಚದರಿ ಹೋಯಿತು. ಕಲ್ಯಾಣ ಸ್ವಾಮಿಯು ಸುಳ್ಯಕ್ಕೆ ಓಡಿ ಬಂದನು.

ಇತ್ತಲಾಗಿ ತಾವುನಾಡು, ಬೇಂಗುನಾಡುಗಳ ಜನರು ಸ್ವಲ್ಪ ದಿವಸಗಳ ವರೆಗೆ ಕಲ್ಯಾಣ ಸ್ವಾಮಿಯ ಪಕ್ಷವನ್ನು ವಹಿಸಬೇಕೋ, ಬೇಡವೋ ಎಂದು ಚಂಚಲ ಮನಸಿನಿಂದ ಇದ್ದರು. ಇಷ್ಟರಲ್ಲಿ ಅವರಿಗೆ ವೀರರಾಜನು ಕಾಶಿಯಿಂದ ತಪ್ಪಿಸಿಕೊಂಡು ಸುಳ್ಯಕ್ಕೆ ಬಂದಿರುವನೆಂದೂ, ಹಿಂದುಸ್ಥಾನದಲ್ಲೆಲ್ಲಾ ಬ್ರಿಟಿಷರ ಆಳ್ವಿಕೆಯು ನಿಂತುಹೋಯಿತೆಂದೂ ಇವರಿಗೆ ವರ್ತಮಾನವು ತಲಪಿತು ಅದೇ ಸಮಯದಲ್ಲಿ ಗುಡ್ಡೆಮನೆ ಅಪ್ಪಯ್ಯನೆಂಬವನು ತಾವುನಾಡಿಗೆ ಬಂದು ವೀರರಾಜನು ಸುಳ್ಯದಲ್ಲಿರುವನೆಂದೂ, ತಾನು ಅವನನ್ನು ನೋಡಿರುವೆನೆಂದೂ ಹೇಳಿದನು. ಇದನ್ನು ಕೇಳಿ ತಾವುನಾಡಿನಿಂದ ನಾಲ್ಕುನಾಡಿನ ವರೆಗಿನ ಅನೇಕ ಮುಖ್ಯ ಗೃಹಸ್ಥರೂ, ಮಾಜಿ ಉದ್ಯೋಗಸ್ಥರೂ ಸೇರಿ ತಾವು ರಾಜನ ಪಕ್ಷ ವಹಿಸುವವೆಂದು ಸುಳ್ಯಕ್ಕೆ ಕಾಗದ ಬರದು ಕಳುಹಿಸಿದರು. ಹಾಗೆಯೇ ತಮ್ಮ ನಿಷ್ಠೆಯ ಮೊದಲನೇ ಗುರುತಾಗಿ ತಮ್ಮನ್ನು ಅದು ವರೆಗೆ ತಡೆದಿದ್ದ ಸುಭೇದಾರ್ ಮಾದಯ್ಯನನ್ನು ಹಿಡಿದು ಸುಳ್ಯಕ್ಕೆ ಕಳುಹಿಸಿ ವಿದ್ರೋಹಿಗಳಿಗೆ ಒಪ್ಪಿಸಿಬಿಟ್ಟರು.

ತಾವುನಾಡು, ಬೇಂಗುನಾಡು ಮತ್ತು ನಾಲ್ಕುನಾಡುಗಳಲ್ಲಿ ಜನರು ಕಲ್ಯಾಣ ಸ್ವಾಮಿಯ ಪಕ್ಷವನ್ನು ಸೇರಿದುದನ್ನು ನೋಡಿ ಕೊಡಗಿನವರೆಲ್ಲರೂ ತನಗೆ ವಿರೋಧವಾಗಿ ನಿಂತರೆ ದಂಗೆಯನ್ನು ಅಡಗಿಗಿಸುವುದಕ್ಕೆ ಒಂದು ಸೈನ್ಯವೇ ಬೇಕಾಗಬಹುದೆಂದು ಹೆದರಿ ಲೀಹಾರ್ಡಿ ಸಾಹೇಬನು ಬೋಪು ದಿವಾನನ್ನು ಆತನ ಜನರೊಡನೆ ಭಾಗಮಂಡಲಕ್ಕೆ ಕಳುಹಿಸಿದನು. ದಿವಾನ್ ಬೋಪುವು ಭಾಗಮಂಡಲಕ್ಕೆ ಹೋಗಿ ಅಲ್ಲಿನ ಜನರಿಗೆ ಕಲ್ಯಾಣ ಸ್ವಾಮಿಯು ಅಪ್ಪಾಜಿ ರಾಜನ ಮಗನಲ್ಲವೆಂದು ಮುಂತಾಗಿ ಹೇಳಿ ವಿದ್ರೋಹಿಗಳೊಡನೆ ಸೇರುವುದನ್ನು ತಡೆದನು. ಇತ್ತಲಾಗಿ ಲೀಹಾರ್ಡಿ ಸಾಹೇಬನನ್ನು ಶತ್ರುಗಳ ಕೈಗೆ ಬೀಳಗೊಡದಂತೆ ಅಲ್ಲಿ 36ನೇ ರಿಜಿಮೆಂಟು ಸೈನಿಕರನ್ನು ಇರಿಸಿ ತುಂಬಾ ಆಹಾರ ಸಾಮಗ್ರಿಯನ್ನೂ ಶೇಖರಿಸುವುದಕ್ಕೆ ತೊಡಗಿದನು.

ಸಶೇಷ.

ಪರಿಹಾಸ್ಯ ಮಾಡುವವರಿಗೆ ಎಚ್ಚರಿಕೆ.

ಪೊಲೀಸು ದಾರಿ ತೋರುವ ತನಕ ನಿಮ್ಮ ಕಾರು ಮಾರ್ಗದಲ್ಲೇ ನಿಂತು ಆತ ಹೋಗಬಹುದೆಂದ ಮೇಲೆ ಹೋಗಬೇಕಷ್ಟೆ? ನ್ಯೂ ಯಾರ್ಕಿನ ಬೀದಿಗಳು ನಮ್ಮ ಬೀದಿಗಳಂತಲ್ಲ. ಅಲ್ಲಿ ನಿಮಿಷಕ್ಕೆ ಹತ್ತಾರು ಕಾರುಗಳು ಒಂದರ ಹಿಂದೊಂದು ಸರಿಯುತ್ತಿರುತ್ತವೆ. ಇದೇ ರೀತಿ ಹಾಲಿವುಡ್ ಇರುವ ಕೇಲಿಫೋರ್ನಿಯಾದಲ್ಲೂ. ಕಲಿಫೋರ್ನಿಯಾದ ಸಂತಾ ಮೋನಿಕಾ ಎಂಬಲ್ಲಿನ ಡೇವಿಡ್ ಓ. ವಿಲ್‌ಸನ ಎಂಬಾತ ಕಾರು ಪೊಲೀಸಿನ ಬಳಿ ದಾರಿಗಾಗಿ ನಿಂತಾಗಲೆಲ್ಲಾ ಈತನ ಹಿಂದೆ ನಿಂತ ಕಾರಿನವರು ಬೇಕೆಂದೇ ಹಾರ್ನ್ ಮಾಡುವ ರೂಢಿ. ಅವನ್ನು ತಪ್ಪಿಸಲು ಈ ಒಂದು ಶೋಧ ನಡೆಸಿದ. ಕಾರಿನ ಹಿಂಬದಿಗೊಂದು ನಾಯಿಯ ಮುಖ. ಕಾರು ನಿಂತು ಹಿಂದಿನವರು ಹಾರ್ನ್ ಮಾಡೊಡನೆ ಡೇವಿಡ್ ಇವರ ಒಂದು ಗುಂಡಿ ಒತ್ತಿಬಿಡುವನು. ಕೂಡಲೇ ಆ ಮುಖ ನಾಲಗೆ ಹೊರಗೆ ಹಾಕಿ ಪರಿಹಾಸ್ಯ ಮಾಡುವಂತೆ ಮಾಡಿ, ಹಿಂದಿನ ಡ್ರೈವರರನ್ನು ಸುಮ್ಮನಾಗಿಸುದು. ಇದೀಗ ಬುದ್ಧಿವಂತಿಗೆ!

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

11 **Ludhiana.**

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿಸು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಸ್ಮೆಂಟ್ ವಿಮಾ ಪತ್ರ... ...೦ 1೦,೦ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2..ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್

ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–17

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.

ಮತ್ತು ಕಂಪನಿ,

(52–30) ಗಿರಗಾಂವ, ಮುಂಬಯಿ ೪,

"ಕೊಡಗು" ಪತ್ರಿಕೆಯ

ಚಂದಾದಾರರಲ್ಲಿ

ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,

"ಕೊಡಗು" ಲಿಮಿಟೆಡ್, ಮಡಿಕೇರಿ.

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸವ್ಟ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.

ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,

ಮೆ. ಕೆ. ಯಂ. ಸುಬ್ರಾಯನವರು.

ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.

ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಮ್ಮಯ್ಯನವರು.

ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.

ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.

ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.

ನಾಪೋಕ್ಲು—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು.

(ನಾಪೋಕ್ಲು ಸ್ಟೋರ್ಸ್)

ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,

'ಕೊಡಗು' ಲಿಮಿಟೆಡ್, ಮಡಿಕೇರಿ

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,

'ಕೊಡಗು' ಲಿಮಿಟೆಡ್,

ಮಡಿಕೇರಿ.

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಥವಾ ಅಮರಸುಳ್ಯದ ಕಾಟಕಾಯಿ.

ಲೇಖಾಂಕ 17.

(ಡಿ. ಎನ್. ಕೃಷ್ಣಯ್ಯ ಯಂ. ಎ, ಬಿ. ಇ. ಡಿ.)

(ಎಲ್ಲಾ ಹಕ್ಕುಗಳೂ ಕಾಯ್ದಿಡಲ್ಪಟ್ಟಿವೆ.)

(ಕಳೆದ ಸಂಚಿಕೆಯಿಂದ ಸಾಗಿದ್ದು)

ಈ ಮಧ್ಯೆ ಪುಟ್ಟಬಸಪ್ಪನೂ, ಅವನ ಅನುಯಾಯಿಗಳೂ ಕೊಡಗಿನವರಿಗೆ ಹಿಂದಿನ ರಾಜ ಮನೆತನಗಳಲ್ಲಿದ್ದ ಭಕ್ತಿಯನ್ನು ತೋರಿಸಬೇಕೆಂದೂ, ಕೊಡಗನ್ನು ಸ್ವತಂತ್ರವಾಗಿ ಮಾಡುವುದಕ್ಕೆ ಸಿಕ್ಕುವ ಸಂದರ್ಭವನ್ನು ಕಳೆದುಕೊಳ್ಳಬಾರದೆಂದೂ ಇಸ್ತಿಹಾರುಗಳನ್ನು ಕಳುಹಿಸಿದರು. ಭೂಮಿ ಕಂದಾಯವನ್ನು ಮೂರು ವರ್ಷಗಳ ವರೆಗೆ ಎತ್ತುವುದಿಲ್ಲವಾಗಿಯೂ, ದಕ್ಷಿಣಕನ್ನಡದಲ್ಲಿ ಉಪ್ಪು ಮತ್ತು ಹೊಗೆಸೊಪ್ಪು ಮಾರಾಟದ ಗುತ್ತಿಗೆಯನ್ನು ತೆಗೆದುಬಿಡುವುದಾಗಿಯೂ ಭರವಸೆಕೊಟ್ಟರು. ಬೇರೆ ದೇಶಗಳಲ್ಲಿ ಬ್ರಿಟಿಷರ ಅಧಿಕಾರವು ಅಡಗಿ ಹೋಗಿದೆಯೆಂದೂ, ಕಾಶಿಗೆ ಕಳುಹಿಸಲ್ಪಟ್ಟ ವೀರರಾಜನು ಅಲ್ಲಿಂದ ತಪ್ಪಿಸಿಕೊಂಡು ಬಂದು ತನ್ನ ಪಾಳೆಯದಲ್ಲಿರುವನೆಂದೂ ವರ್ತಮಾನವನ್ನು ಹರಡಿದರು. ಆದರೆ ಕೊಡಗಿನಲ್ಲಿ ಈ ವರ್ತಮಾನಗಳಿಂದ ಯಾವ ಪರಿಣಾಮವು ಉಂಟಾಗಲಿಲ್ಲ.

ಕ್ಯಾಪ್ಟನ್ ಲೀಹಾರ್ಡಿ ಸಾಹೇಬನು 36ನೇ ರೆಜಿಮೆಂಟನ್ನು ಕೆಲವು ಕೊಡಗರ ಸಮೇತ ಉತ್ತರದ ಗಡಿಗೆ ಕಳುಹಿಸಿದನು. ಪುಟ್ಟಬಸಪ್ಪನು ಬಿಸ್ಲೆ ಘಟ್ಟವನ್ನು ಹತ್ತಿ ಏಳುಸಾವಿರ ಸೀಮೆಗೆ ಬರುವನೆಂಬ ವರ್ತಮಾನವು ಹರಡಿತ್ತು. ಅದಕ್ಕೋಸ್ಕರ 36ನೇ ರೆಜಿಮೆಂಟು ಮತ್ತು ಬೋಪು ದಿವಾನನೂ ಆತನ ಕಡೆಯವರು ಸೋಮವಾರಪೇಟೆ ದಾಟಿ ಶಾಂತಳ್ಳಿ ಎಂಬಲ್ಲಿಗೆ ಹೋದರು. ಶತ್ರುಗಳು ಬಿಸ್ಲೆಘಟ್ಟದ ಮೇಲೆ ಒಂದು ಗುಡ್ಡದಲ್ಲಿದ್ದರು. ಆದರೆ ಪುಟ್ಟಬಸಪ್ಪನೂ ಅಮರ ಸುಳ್ಯದ ಅವನ ಅನುಯಾಯಿಗಳೂ ಅಲ್ಲಿರಲಿಲ್ಲ. ಆ ಗುಡ್ಡದ ಮೇಲಿದ್ದ ಶತ್ರುಗಳು ಇಂಗ್ಲಿಷರ ಸೈನ್ಯವನ್ನು ನೋಡಿ ಬಿಸ್ಲೆಘಟ್ಟವನ್ನು ಇಳಿದು ಸುಬ್ರಹ್ಮಣ್ಯಕ್ಕೆ ಹೋದರು.

ಈ ಮಧ್ಯೆ ಪುಟ್ಟಬಸಪ್ಪನು ಅಥವಾ ಕಪಟ ಕಲ್ಯಾಣ ಸ್ವಾಮಿಯು ತನ್ನ ಜನರನ್ನು ಕರೆದುಕೊಂಡು ಪುತ್ತೂರಿಗೆ ಹೊರಟನು. ಅಮರ ಸುಳ್ಯದಲ್ಲಿ ಜನರು ಸರಕಾರದವರಿಗೆ ತಿರುಗಿ ಬಿದ್ದಿರುವರೆಂಬ ವರ್ತಮಾನವನ್ನು ಮಂಗಳೂರಿನಲ್ಲಿದ್ದ ಕಲೆಕ್ಟರನು ಕೇಳಿ ತನ್ನ ಶಿರಸ್ತೇದಾರನಾದ ಕರಣಿಕ ದೇವಪ್ಪಯ್ಯನನ್ನೂ, ಸಿಪಾಯಿಗಳ ಒಂದು ಸಣ್ಣ ಸೈನ್ಯವನ್ನೂ ತೆಗೆದುಕೊಂಡು ಬಂದಿದ್ದನು. ಅಲ್ಲಿಗೆ ಬಂದು ಕಚ್ಚೇರಿ ಮಾಡಿ ಕೂತುಕೊಳ್ಳುವಷ್ಟರಲ್ಲಿ ಪುಟ್ಟ ಬಸಪ್ಪನು ದೊಡ್ಡ ಬಸಪ್ಪನು ದೊಡ್ಡ ಸೈನ್ಯದೊಡನೆ ಪುತ್ತೂರಿಗೆ ಬಂದನೆಂಬ ವರ್ತಮಾನವನ್ನು ಕೇಳಿ ಕಲೆಕ್ಟರನು ಕುದುರೆ ಹತ್ತಿ ಮಂಗಳೂರು ಬಂದೋಬಸ್ತಿಗೆ ಹೋದನು. ಪುತ್ತೂರಿನಲ್ಲಿ ಕರಣಿಕ ದೇವಪ್ಪಯ್ಯನೂ ಇನ್ನೂ ಕೆಲವು ಸಿಪಾಯಿಗಳೂ ಇದ್ದರು. ಪುಟ್ಟಬಸಪ್ಪನು ಕಚ್ಚೇರಿಗೆ ಬಂದು ಕಲೆಕ್ಟರನು ಕುಳಿತುಕೊಳ್ಳುವ ಆಸನದಲ್ಲಿ ತಾನು ಕುಳಿತುಕೊಂಡನು. ಆಸನದ ಸುತ್ತಲೂ ಕತ್ತಿಗಳನ್ನೂ ಕೋವಿಗಳನ್ನೂ, ಕೊರಡೆಗಳನ್ನೂ ಹಿಡಿದುಕೊಂಡು ಸೈನಿಕರು ನಿಂತಿದ್ದರು. ಆಗ ಪುಟ್ಟಬಸಪ್ಪನು ಕರಣಿಕ ದೇವಪ್ಪಯ್ಯನನ್ನು ತನ್ನ ಮುಂದೆ ಎಳೆದು ತರಿಸಿ ಆತನನ್ನು ತನ್ನ ಮುಂದೆ ಎಳೆದು ತರಿಸಿ ಆತನನ್ನು ಕರಣಿಕನಾಗಬೇಕೆಂದು ಹೇಳಿದನು. ಆಗ ಕಲ್ಯಾಣ ಸ್ವಾಮಿಯು ಸಿಟ್ಟಿನಿಂದ 'ನೀನು ಯಾರ ಜೊತೆಯಲ್ಲಿ ಮಾತನಾಡುತ್ತೀ, ನನ್ನ ಆಜ್ಞೆಗೆ ವಿರೋಧವಾಗಿ ನಡೆದರೆ ನಿನ್ನ ತಲೆ ಕಡಿಸಿ ಬಿಟ್ಟೇನು. ಈಗ ರಾಜ್ಯವು ನಮಗಾಯಿತು' ಎಂದು ಹೇಳಿ ಅವನನ್ನು ಪಹರೆಯಲ್ಲಿಡಿಸಿದನು. ಕಲ್ಯಾಣ ಸ್ವಾಮಿಯ ಪರಿಚಾರಕರಲ್ಲಿ ಅನಂತು ಎಂಬವನೊಬ್ಬನಂತೆ. ಅವನನ್ನು ದೇವಪ್ಪಯ್ಯನಿಗೆ ಮೊದಲೇ ಗೊತ್ತಿದ್ದಿತು. ದೇವಪ್ಪನು ಅನಂತುವನ್ನು ಕಂಡು ಕೊಂಕಣಿ ಭಾಷೆಯಲ್ಲಿ 'ತು ಹಮಗತಿ ಅಂತೂ, ತು ಅನಂತುರೆ' ಎಂದರೆ 'ನೀನು ನನ್ನ ಅಂತೂ ನುಗ ಅನಂತು ಪ್ರೋ' ಎಂದು ಹೇಳಿದನು. ಆಗ ಅನಂತುವು ತಾನು ಕೊಡಗಿನ ರಾಜನ ಊಳಿಗದವನೆಂಬ ಅಹಂಕಾರದಿಂದ ದೇವಪ್ಪಯ್ಯನಿಗೆ 'ಮಹಾ ಸ್ವಾಮಿಯವರ ಅಪ್ಪಣೆಯಾದರೆ ತಲೆ ಕಡಿಸಿ ಬಿಟ್ಟೇನು ಎಂದು ಉತ್ತರ ಕೊಟ್ಟನು. ಆದರೂ ದೇವಪ್ಪನು ಅವನಲ್ಲಿ ವಿಶ್ವಾಸವನ್ನು ಬೆಳೆಸಿ ತಾನು ಸೆರೆಯಿಂದ ತಪ್ಪಿಸಿಕೊಂಡು ಹೋಗುವ ಉಪಾಯವನ್ನು ಹುಡುಕುತ್ತಿದ್ದನು. ಕೊನೆಗೆ ಅವನು ನಂದಾವರದಲ್ಲಿ ಇಂಗ್ಲಿಷರಿಂದ ಮಲ್ಲಿಖಾನೆಯನ್ನು ಪಡೆಯುತ್ತಿದ್ದ ಲಕ್ಷ್ಮಪ್ಪ ಬಂಗರಾಜನು ಕಲ್ಯಾಣ ಸ್ವಾಮಿಗೆ ಸಹಾಯ ಮಾಡುವನೆಂಬು ಅನಂತು ಮೂಲಕ ಕಲ್ಯಾಣ ಸ್ವಾಮಿಗೆ ಹೇಳಿಸಿ ತಾನು ಬಿಡುಗಡೆಯನ್ನು ಹೊಂದಿದನು.

ಕಲ್ಯಾಣ ಸ್ವಾಮಿಯು ಪುತ್ತೂರನ್ನು ಸುಲಿಗೆ ಮಾಡಿ ಪಾಣೆ ಮಂಗಳೂರಿಗೆ ಹೋದನು. ಅಲ್ಲಿ ಲಕ್ಷ್ಮಪ್ಪ ಬಂಗರಸನು ಕಲ್ಯಾಣ ಸ್ವಾಮಿಯ ದೊಡ್ಡ ಸೈನ್ಯವನ್ನು ನೋಡಿ ಬ್ರಿಟಿಷರ ಆಳ್ವಿಕೆಯು ತೀರಿತೆಂದು ಯೋಚಿಸಿ ಅವನ ಕಡೆ ಸೇರಿಕೊಂಡನು. ಅವನ ಸೈನ್ಯಕರಿಗೆ ಊಟ ಉಪಚಾರಕ್ಕೆ ಬೇಕಾದ ಸಾಹಿತ್ಯಗಳನ್ನು ಒದಗಿಸಿಕೊಟ್ಟನು. ಕಲ್ಯಾಣ ಸ್ವಾಮಿ ಅಲ್ಲಿಂದ ಹೊರಟು ಬಂಟವಾಳಕ್ಕೆ ಬಂದು ಆ ಊರನ್ನು ಸುಲಿಗೆ ಮಾಡಿದನು. ಅ ಅನಂತರ ಕಲ್ಯಾಣ ಸ್ವಾಮಿಯು ಮಂಗಳೂರಿಗೆ ಹೊರಟನು. ಹೋಗುವಾಗ ದಾರಿಯಲ್ಲಿ ಇವನ ಕಡೆಯ ಜನರು ಹೆಚ್ಚೆಚ್ಚಾಗುತ್ತಾ ಬಂದರು. ಆತನು ಮಂಗಳೂರಿಗೆ ಹೋಗುವಷ್ಟರಲ್ಲಿ ಅಲ್ಲಿದ್ದ ಇಂಗ್ಲಿಷ್ ಅಧಿಕಾರಿಗಳು ಪಟ್ಟಣವನ್ನು ಬಿಟ್ಟು ನದಿಯನ್ನು ದಾಟಿ ಕನ್ನನೂರಿಗೆ ಹೋಗುವುದಕ್ಕೆ ಹಡಗನ್ನು ಕಾಯುತ್ತಿದ್ದರು. ಪುಟ್ಟಬಸಪ್ಪನು ಅಥವಾ ಕಲ್ಯಾಣ ಸ್ವಾಮಿಯು ತನ್ನ ಜನರೊಡನೆ ಸೆರೆಮನೆಗೆ ಹೋಗಿ ಅಲ್ಲಿದ್ದ ಕೈದಿಗಳನ್ನು ಸೆರೆಯಿಂದ ಬಿಡಿಸಿ ಅವರನ್ನು ಸೇರಿಕೊಂಡು ತಾಲೋಕು ಕಚ್ಚೇರಿಗೆ ಹೋಗಿ ಖಜಾನೆಯನ್ನು ಒಡೆದು ಹಣವನ್ನು ತೆಗೆದುಕೊಂಡನು. ಇದಾದ ಮೇಲೆ ಅಲ್ಲಿದ್ದ ಇಂಗ್ಲಿಷ್ ಉದ್ಯೋಗಸ್ಥರ ಮನೆಗಳಿಗೆಲ್ಲಾ ಬೆಂಕಿ ಕೊಡಿಸಿದನು. ಇದೇ ಸಮಯದಲ್ಲಿ ತಾನೂ ಒಬ್ಬ ರಾಜನಾಗಬಹುದೆಂದು ತೆಂಕುಂಬಳೆ ಕೋಟೆಯ ಹತ್ತಿರ ವಾಸವಿದ್ದ ಸುಬ್ರಾಯ ಹೆಗ್ಡೆ ಎಂಬವನು ಜನರನ್ನು ಸೇರಿಸಿ ಕಲ್ಯಾಣ ಸ್ವಾಮಿಯ ಸಹಾಯಕ್ಕೆ ಹೊರಟು ಬಂದನು. ಇವನು ದಾರಿಯಲ್ಲಿ ಮಂಜೇಶ್ವರ, ಉಳ್ಳಾಲಗಳಿಗಾಗಿ ದಾಟುವಾಗ ಆ ಊರುಗಳ ಜನರು ಸುಬ್ರಾಯ ಹೆಗ್ಗಡೆಯ ಜನರಿಗೆ ಊಟ ಉಪಚಾರ ಮಾಡಿಸಿ ಉಡಿಗೆಗಳನ್ನು ಕೊಟ್ಟು ತಮ್ಮ ಊರುಗಳನ್ನು ಕೊಳ್ಳೆ ಹೊಡೆಯದಂತೆ ಮಾಡಿಕೊಂಡರು. ಸುಬ್ರಾಯ ಹೆಗ್ಡೆಯು ಮಂಗಳೂರಿಗೆ ಹೊರಟ ಕೂಡಲೇ ಕುಂಬಳೆಯ ಅರಸನು ತನ್ನ ರಾಜ್ಯದಲ್ಲಿ ದಂಗೆಎಬ್ಬಿಸಿದ್ದರೆಂದು ತಲಚೇರಿಯಲ್ಲಿದ್ದ ಇಂಗ್ಲಿಷ್ ಅಧಿಕಾರಿಗೆ ಹೇಳಿ ಕಳುಹಿಸಿದನು. ಸುಬ್ರಾಯ ಹೆಗ್ಡೆಯು ಉಳ್ಳಾಲದಿಂದ ಮಂಗಳೂರಿಗೆ ಬರಬೇಕಾದರೆ ನೇತ್ರಾವತಿ ನದಿಯನ್ನು ದಾಟಿ ಬರಬೇಕಾಗಿದ್ದಿತು. ಹಾಗೆ ದೋಣಿಯಲ್ಲಿ ದಾಟುತ್ತಿರುವಾಗ ಬೋಳಾರದಲ್ಲಿದ್ದ ಕಲವು ಕಂಪನಿ ಸರ್ಕಾರದ ಸಿಪಾಯಿಗಳು ಗುಂಡು ಹೊಡೆದು ದೋಣಿ ಸಮೇತ ಸುಬ್ರಾಯ ಹೆಗ್ಡೆಯನ್ನೂ, ಅವನ ಜನರನ್ನೂ ಮುಳುಗಿಸಿದರು. ಇವರಲ್ಲಿ ಕೆಲವರು ಮಾತ್ರ ಈಜಿ ತಮ್ಮ ಪ್ರಾಣ ರಕ್ಷಿಸಿಕೊಂಡರು. ಇದಾದ ಒಂದೆರಡು ದಿವಸಗಳಲ್ಲಿ ತಲಚೇರಿಯಿಂದ ಹೊರಟ ಸೈನ್ಯವೂ, ಬೆಂಗಳೂರಿನಿಂದ ಹೊರಟ ದಂಡೂ ಮಂಗಳೂರನ್ನು ತಲಪಲು ಕಲ್ಯಾಣ ಸ್ವಾಮಿಯ ಸೈನ್ಯವು ಚದರಿ ಹೋಯಿತು. ಕಲ್ಯಾಣ ಸ್ವಾಮಿಯು ಸುಳ್ಯಕ್ಕೆ ಓಡಿ ಬಂದನು.

ಇತ್ತಲಾಗಿ ತಾವುನಾಡು, ಬೇಂಗು ನಾಡುಗಳ ಜನರು ಸ್ವಲ್ಪ ದಿವಸಗಳ ವರೆಗೆ ಕಲ್ಯಾಣ ಸ್ವಾಮಿಯ ಪಕ್ಷವನ್ನು ವಹಿಸಬೇಕೋ, ಬೇಡವೋ ಎಂದು ಚಂಚಲ ಮನಸ್ಸಿನಿಂದ ಇದ್ದರು. ಇಷ್ಟರಲ್ಲಿ ಅವರಿಗೆ ವೀರರಾಜನು ಕಾಶಿಯಿಂದ ತಪ್ಪಿಸಿಕೊಂಡು ಸುಳ್ಯಕ್ಕೆ ಬಂದಿರುವನೆಂದೂ, ಹಿಂದುಸ್ಥಾನದಲ್ಲೆಲ್ಲಾ ಬ್ರಿಟಿಷರ ಆಳ್ವಿಕೆಯು ನಿಂತುಹೋಯಿತೆಂದೂ ಇವರಿಗೆ ವರ್ತಮಾನವು ತಲಪಿತು. ಅದೇ ಸಮಯದಲ್ಲಿ ಗುಡ್ಡೆಮನೆ ಅಪ್ಪಯ್ಯನೆಂಬವನು ತಾವುನಾಡಿಗೆ ಬಂದು ವೀರರಾಜನು ಸುಳ್ಯದಲ್ಲಿರುವನೆಂದೂ, ತಾನು ಅವನನ್ನು ನೋಡಿರುವೆನೆಂದೂ ಹೇಳಿದನು. ಇದನ್ನು ಕೇಳಿ ತಾವುನಾಡಿನಿಂದ ನಾಲ್ಕುನಾಡಿನ ವರೆಗಿನ ಅನೇಕ ಮುಖ್ಯ ಗ್ರಹಸ್ಥರೂ, ಮಾಜಿ ಉದ್ಯೋಗಸ್ಥರೂ ಸೇರಿ ತಾವು ರಾಜನ ಪಕ್ಷ ವಹಿಸುವವೆಂದು ಸುಳ್ಯಕ್ಕೆ ಕಾಗದ ಬರೆದು ಕಳುಹಿಸಿದರು. ಹಾಗೆಯೇ ತಮ್ಮ ನಿಶ್ಚಯದ ಮೊದಲನೇ ಗುರುತಾಗಿ ತಮ್ಮನ್ನು ಆದು ವರೆಗೆ ತಡೆದಿದ್ದ ಸುಭೇದಾರ್ ಮಾದಯ್ಯನನ್ನು ಹಿಡಿದು ಸುಳ್ಯಕ್ಕೆ ಕಳುಹಿಸಿ ವಿದ್ರೋಹಿಗಳಿಗೆ ಒಪ್ಪಿಸಿಬಿಟ್ಟರು.

ತಾವುನಾಡು, ಬೇಂಗುನಾಡು ಮತ್ತು ನಾಲ್ಕುನಾಡುಗಳಲ್ಲಿ ಜನರು ಕಲ್ಯಾಣ ಸ್ವಾಮಿಯ ಪಕ್ಷವನ್ನು ಸೇರಿದುದನ್ನು ನೋಡಿ ಕೊಡಗಿನವರಲ್ಲರೂ ತನಗೆ ವಿರೋಧವಾಗಿ ನಿಂತರೆ ದಂಗೆಯನ್ನು ಅಡಗಿಸುವುದಕ್ಕೆ ಒಂದು ಸೈನ್ಯವೇ ಬೇಕಾಗಬಹುದೆಂದು ಹೆದರಿ ಲೀಹಾರ್ಡಿ ಸಾಹೇಬನು ಬೋಪು ದಿವಾನನ್ನು ಆತನ ಜನರೊಡನೆ ಭಾಗಮಂಡಲಕ್ಕೆ ಕಳುಹಿಸಿದನು. ದಿವಾನ್ ಬೋಪುವು ಭಾಗಮಂಡಲಕ್ಕೆ ಹೋಗಿ ಅಲ್ಲಿನ ಜನರಿಗೆ ಕಲ್ಯಾಣ ಸ್ವಾಮಿಯು ಅಪ್ಪಾಜಿ ರಾಜನ ಮಗನಲ್ಲವೆಂದು ಮುಂತಾಗಿ ಹೇಳಿ ವಿದ್ರೋಹಿಗಳೊಡನೆ ಸೇರುವುದನ್ನು ತಡೆದನು. ಇತ್ತಲಾಗಿ ಲೀಹಾರ್ಡಿ ಸಾಹೇಬನನ್ನು ಶತ್ರುಗಳ ಕೈಗೆ ಬೀಳಗೊಡದಂತೆ ಅಲ್ಲಿ 36ನೇ ರೆಜಿಮೆಂಟು ಸೈನಿಕರನ್ನು ಇರಿಸಿ ತುಂಬಾ ಆಹಾರ ಸಾಮಗ್ರಿಯನ್ನೂ ಶೇಖರಿಸುವುದಕ್ಕೆ ತೊಡಗಿದನು.

ಸಶೇಷ.

— - —

ಪರಿಹಾಸ್ಯ ಮಾಡುವವರಿಗೆ ಎಚ್ಚರಿಕೆ.

ಪೊಲೀಸು ದಾರಿ ತೋರುವ ತನಕ ನಿಮ್ಮ ಕಾರು ಮಾರ್ಗದಲ್ಲೇ ನಿಂತು ಆತ ಹೋಗಬಹುದೆಂದ ಮೇಲೆ ಹೋಗಬೇಕಷ್ಟೆ? ನ್ಯೂ ಯಾರ್ಕಿನ ಬೀದಿಗಳು ನಮ್ಮ ಬೀದಿಗಳಂತಲ್ಲ. ಅಲ್ಲಿ ನಿಮಿಷಕ್ಕೆ ಹತ್ತಾರು ಕಾರುಗಳು ಒಂದರ ಹಿಂದೊಂದು ಸರಿಯುತ್ತಿರುತ್ತವೆ. ಇದೇ ರೀತಿ ಹಾಲಿವುಡ್ ಇರುವ ಕೇಲಿಫೋರ್ನಿಯಾದಲ್ಲೂ. ಕೆಲಿಫೋರ್ನಿಯಾದ ಸಂತಾ ಮೋನಿಕಾ ಎಂಬಲ್ಲಿನ ಡೇವಿಡ್ ಓ. ವಿಲ್ಸನ್ ಎಂಬಾತ ಕಾರು ಪೊಲೀಸಿನ ಬಳಿ ದಾರಿಗಾಗಿ ನಿಂತಾಗಲೆಲ್ಲಾ ಈತನ ಹಿಂದೆ ನಿಂತ ಕಾರಿನವರು ಬೇಕೆಂದೇ ಹಾರ್ನ್ ಮಾಡುವ ರೂಢಿ. ಅದನ್ನು ತಪ್ಪಿಸಲು ಈತ ಒಂದು ಶೋಧ ನಡೆಸಿದ. ಕಾರಿನ ಹಿಂಬದಿಗೊಂದು ನಾಯಿಯ ಮುಖ. ಕಾರು ನಿಂತು ಹಿಂದಿನವರು ಹಾರ್ನ್ ಮಾಡಿದೊಡನೆ ಡೇವಿಡ್ ಇವರ ಒಂದು ಗುಂಡಿ ಒತ್ತಿಬಿಡುವನು. ಕೂಡಲೇ ಆ ಮುಖ ನಾಲಗೆ ಹೊರಗೆ ಹಾಕಿ ಪರಿಹಾಸ್ಯ ಮಾಡುವಂತೆ ಮಾಡಿ, ಹಿಂದಿನ ಡ್ರೈವರರನ್ನು ಸುಮ್ಮನಾಗಿಸುದು. ಇದೀಗ ಬುದ್ಧಿವಂತಿಗೆ!

———

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,
Ludhiana.

11

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲವ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ಸಾವಿರ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಕರಾರುಗಳಿಗೆ 2..ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52–17

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪನಿ

ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪನಿ,
ಗಿರಗಾಂವ, ಮುಂಬಯಿ ೪,

(52-30)

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿದೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಜಿ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ. ಕೆ. ಮೊಗಪ್ಪನವರು.
ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು (ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡತಕ್ಕದ್ದಾಗಿ ಈ ಮೂಲಕ ತಿಳಿಸಲಾಗಿದೆ,

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಕರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ...ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮಾಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ತ್ರಿಪ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಡಿಟ್ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು".

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಪರರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್".

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(52-26)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ
ಮುದ್ರಣ ಕೆಲಸಗಳನ್ನು
"ಕೊಡಗು"
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ. ತಾ. ೧೪—೭—೧೯೩೯. ವಾರ್ಷಿಕ ಚಂದಾ ರೂ. ೩—೮—೦

ಸಂಪುಟ ೧೯] [ಸಂಚಿಕೆ ೫

YOURS FAITHFULLY

"Yours faithfully" has been a common subscription in all business letters. But with the CORPORATION it has not been MERELY A SUBSCRIPTION.

For the last THIRTY THREE years The CORPORATION has served its constituents most faithfully, very truly and quite sincerely. Thousands of customers have been pleased on account of the satisfying, honest Banking Service offered by the Corporation. The Corporation is proud to serve you and to say.

FAITHFULLY YOURS

The Canara Banking Corporation, Limited.

(Incorporated In British India)

Estd. 1906.

52-30

ಕೇರಳ ಆಯುರ್ವೇದಿಕ್ ವೈದ್ಯಶಾಲಾ,
ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್,)
ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.

52-20

ಡಾ. ಕೆ. ಕೆ. ನಂಬಿಯಾರ್,

ಇವರ
ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ
ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇನೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ಶುಚಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು—ಪರ್ಕ್ಸ್‌ಪೆಟ್, ಎಂದೂ ಮುಂಡಾಗದ ಹೆಕೊಲಾಯಿಟ್ ಅಥವಾ ಚಿನ್ನದುವು: ಪ್ರತಿಯೊಂದು ಕಾಲಂ ಕಾವದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

32

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಷ್ಟಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಕ್ಷೇಮವಾಗಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ ೫ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ; ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-10

The Agricultural &
Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ ಶೀರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಫ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಪ್ಪತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ. ಎಂ. ಎಸ್

(52-41) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ!
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

12-38

ಸಾಮಾಜಿಕ ಕಾದಂಬರಿ.

ದೇವದತ್ತ.

೨೫ ನೇ ಅಧ್ಯಾಯ.

ತನ್ನ ಪೂರ್ವದ ಜನ್ಮಭೂಮಿಯಲ್ಲಿ ದೇವದತ್ತನ ಪುನರಾಗಮನವು ನಿರಂಕುಶ ಪ್ರಭುತ್ವವನ್ನು ಅನುಭವಿಸುತ್ತಿದ್ದ ಚಾರುದತ್ತನ ಜೀವನದಲ್ಲಿ ಒಂದು ಅಧ್ಯಾಯವನ್ನು ಮುಗಿಸಿತು. ಈತನ ಸರಕಾರಿ ಉದ್ಯೋಗದ ಪದವಿಗೆ ಹೆದರಿ ಸಾಧು ಸಜ್ಜನರೂ, ವಿದ್ಯಾಹೀನರೂ ಆದ ಗ್ರಾಮಸ್ಥರೂ ಇವನನ್ನು ತಮ್ಮ ಗ್ರಾಮದ ಮುಖ್ಯಸ್ಥನೆಂದು ಭಾವಿಸಿ ಗೌರವಿಸುತ್ತಿದ್ದರು. ಅವನಿಗೆ ಇಷ್ಟರ ವರೆಗೆ ಹೋದೆಡೆಯಲ್ಲೆಲ್ಲಾ ಅಗ್ರಾಸನ, ಪ್ರತ್ಯೇಕ ಆದರಣೆ, ಇಷ್ಟಾದರೂ ದುರಹಂಕಾರಿಯಾದ ಆತನು ಗ್ರಾಮಸ್ಥರು ತನಗೆ ತೋರಿಸುತ್ತಿದ್ದ ಅನಾರ್ಜಿತ ಆದರಣೆಯನ್ನು ಸೌಜನ್ಯದಿಂದಲೂ, ಪ್ರೀತಿಯಿಂದಲೂ, ಸಹಕಾರದಿಂದಲೂ ಹೆಚ್ಚಿಸಿಕೊಳ್ಳುವುದರ ಬದಲು ಅದು ತನ್ನ ಆಜನ್ಮ ಹಕ್ಕೆಂದು ಭಾವಿಸಿ ಅವರಲ್ಲಿ ಮತ್ತಷ್ಟು ದೊಡ್ಡಸ್ತಿಕೆಯಿಂದ ವರ್ತಿಸುತ್ತಿದ್ದನು. ಆತನ ಈ ತರಹದ ದುರ್ನಡತೆಯು ಯಾರಿಗೂ ಒಗ್ಗುತ್ತಿರಲಿಲ್ಲವಾದರೂ ಆ ಬಡ ಗ್ರಾಮಸ್ಥರು ಇವನ ಉದ್ಯೋಗಕ್ಕೂ ಐಶ್ವರ್ಯದ ಮದಕ್ಕೂ ಹೆದರಿ ಅವನನ್ನು ಗೌರವಿಸುವವರಂತೆ ನಟಿಸುತ್ತಿದ್ದರು.

ಎಂದು ಸತ್ಯ, ಸೌಜನ್ಯ, ಔದಾರ್ಯಗಳ ಮೂರ್ತಿಸ್ವರೂಪನಾದ ದೇವದತ್ತನು ತಮ್ಮ ಗ್ರಾಮದಲ್ಲಿ ನೆಲೆಸಿದನೋ ಆ ದಿವಸದಿಂದಲೇ ಚಾರುದತ್ತನ ಉನ್ನತಿಕೆಯ ಗ್ರಹವು ತನ್ನ ಉಚ್ಚ ಸ್ಥಾನದಿಂದ ಕೆಳಗಿಳಿಯತೊಡಗಿತು. ವಿದ್ಯಾ ವಿಶಾರದನೂ, ಕರುಣ ಹೃದಯನೂ, ಐಶ್ವರ್ಯವಂತನೂ ಆದ ದೇವದತ್ತನು ತನ್ನ ಸರಳ ಸ್ವಭಾವದಿಂದ ತನ್ನ ಗ್ರಾಮಸ್ಥರ ಅಕಳಂಕಿತ ಪ್ರೀತಿಯನ್ನೂ, ಸಹಾನುಭೂತಿಯನ್ನೂ ಒಡನೆಯೇ ಆಕರ್ಷಿಸಿಬಿಟ್ಟನು. ಈ ಗ್ರಾಮಸ್ಥರು ಇವನ ಮೇಲಿದ್ದ ತಮ್ಮ ಪ್ರೀತಿಯನ್ನು ನಾನಾ ವಿಧದಲ್ಲಿ ತೋರಿಸುತ್ತಿದ್ದರೂ, ಇದರಿಂದ ತೃಪ್ತಿಪಡದೆ ಅದನ್ನು ಹೆಚ್ಚಿಸುವ ಭ್ರಾಂತಿಯಿಂದ ಚಾರುದತ್ತನ ಗುಣ ನಡತೆಗಳನ್ನೂ, ಮಾತುಗಳನ್ನೂ, ಅಭಿಪ್ರಾಯಗಳನ್ನು ಅಲ್ಲಲ್ಲಿ ದೂಷಿಸುವುದಕ್ಕೂ, ಖಂಡಿಸುವುದಕ್ಕೂ ತೊಡಗಿದರು. ದೇವದತ್ತನಿಗೆ ಗ್ರಾಮಸ್ಥರ ಈ ತರಹದ ವರ್ತನೆಯು ಕೇವಲ ಒಗ್ಗುತ್ತಿರಲಿಲ್ಲ. ಚಾರುದತ್ತ ಮತ್ತು ಗ್ರಾಮಸ್ಥರೊಳಗೆ ಬಲವಾದ ಅನ್ಯೋನ್ಯವನ್ನು ಸ್ಥಾಪಿಸಬೇಕೆಂದು ತಾನು ಬಹಳವಾಗಿ ಪ್ರಯತ್ನಿಸುತ್ತಿದ್ದನು.

ಚಾರುದತ್ತನ ಮನಸ್ಸಿನಲ್ಲಿ ದೇವದತ್ತನ ಮೇಲೆ ಉದ್ಭವಿಸಿದ ಕ್ಷಣಿಕವಾದ ಪ್ರೀತಿಯು ಮರುಕ್ಷಣದಲ್ಲೇ ಮಾಯವಾಯಿತಷ್ಟೆ. ಅಷ್ಟಕ್ಕೂ ನಿಲ್ಲದೆ ಅದು ಕಾಲವು ಹೋದ ಹಾಗೆ ಬಹು ಕಠಿಣ ತರದ ಆಂತರಿಕ ವೈರತ್ವದ ಘೋರ ರೂಪವನ್ನು ಧರಿಸತೊಡಗಿತು. ಈ ಭಾವನೆಯ ಅಂಕುರಕ್ಕೆ ತನ್ನ ಗ್ರಾಮದಲ್ಲಿ ಕೀಳು ಮನೆತನದವನಾಗಿದ್ದ ದೇವದತ್ತನಿಗೆ ಅನಾಯಾಸವಾಗಿ ಒಡನೆಯೇ ಕೈ ಸೇರಿದ ಉನ್ನತಿಯೇ ಮುಖ್ಯ ಕಾರಣವಾಗಿತ್ತು. ಈ ಅಸೂಯೆಗೆ ದೇವದತ್ತನು ದಿನ ದಿನಕ್ಕೆ ಪ್ರಸಿದ್ಧನಾಗುತ್ತಾ ಬರುತ್ತಿರುವುದರಿಂದಲೂ, ಗ್ರಾಮಸ್ಥರು ತನ್ನ ವಿಷಯದಲ್ಲಿ ತೋರಿಸುತ್ತಿದ್ದ ಅನಾದರಣೆಯಿಂದಲೂ ಅವನ ಕಿಚ್ಚಿಗೆ, ಬೆಂಕಿಗೆ ತುಪ್ಪ ಹೊಯ್ದಂತೆ ಕಳೆ ಏರಿತು.

ಗ್ರಾಮದ ಎಲ್ಲಾ ಶುಭ ಶೋಭಾನಗಳಲ್ಲೂ, ಆಟ ಕೂಟಗಳಲ್ಲೂ ದೇವದತ್ತನೇ ಉಚ್ಚ ಸ್ಥಾನವನ್ನಲಂಕರಿಸತೊಡಗಿದನು. ತನಗೆ ಮೊದಲು ದೊರೆಯುತ್ತಿದ್ದ ಆದರಣೆಯ ಬದಲು ಈಗ ಹೋದಲ್ಲೆಲ್ಲಾ ತಿರಸ್ಕಾರವು ದೊರೆಯತೊಡಗಿತು. ಕೆಲವು ಜನರು ಚಾರುದತ್ತನ ವಿಷಯದಲ್ಲಿ ಸ್ವಹೃದಯದಲ್ಲಿ ಹುದುಗಿಟ್ಟಿದ್ದ ಮಾತುಗಳನ್ನು ಈಗ ಹೋದೆಡೆಯೆಲ್ಲಾ ಬಹಿರಂಗವಾಗಿ ಓಕರಿಸತೊಡಗಿದರು.

ಗ್ರಾಮಸ್ಥರ ನಡತೆಯಲ್ಲಿ ಈ ರೀತಿಯಲ್ಲಿ ತಲೆದೋರಿದ ಮಾರ್ಪಾಡಿಗೆ ದೇವದತ್ತನೇ ಕಾರಣನೆಂದು ಚಾರುದತ್ತನು ಖಂಡಿತವಾಗಿಯೂ ತಿಳಿದನು. ಆದರೂ ಅವನು ತನ್ನ ನಡತೆಯನ್ನೂ, ಸ್ವಭಾವವನ್ನೂ ಬದಲಾಯಿಸಿ, ಅವರ ಪ್ರೀತಿಯನ್ನು ಪ್ರೀತಿಯಿಂದಲೇ ಸಂಪಾದಿಸಿಕೊಳ್ಳಬೇಕೆಂಬ ಯೋಜನೆಯನ್ನು ಮಾಡಲಿಲ್ಲ. ಅದರ ಬದಲು ಸಮಯ ಸಿಕ್ಕಿದ ಹಾಗೆ ಅವರು ತನಗೀಗ ಮಾಡಿರತಕ್ಕ ಅವಮರ್ಯಾದೆಗೆ ತಕ್ಕಂತೆ ಶಿಕ್ಷೆಯನ್ನು ಮಾಡಿ ಅವರ ಮೇಲಿರತಕ್ಕ ಸೇಡನ್ನು ತೀರಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡನು. ಈ ತರದ ತನ್ನ ಮನೋಕಾಂಕ್ಷೆಯನ್ನು ಕಾರ್ಯತಹ ನೆರವೇರಿಸಿಕೊಳ್ಳಲು ದೇವದತ್ತನ ಮನಸನ್ನು ತನ್ನ ಕಡೆಗೆ ತಿರುಗಿಸಿಕೊಳ್ಳುವುದು ಕೇವಲ ಅಸಾಧ್ಯವೆಂದೇ ತಿಳಿದಿದ್ದನು. ಅಂತು ದೇವದತ್ತನು ಆ ಗ್ರಾಮದಲ್ಲಿ ನೆಲೆಸಿದಷ್ಟು ದಿವಸಗಳು ತನಗೆ ಯಾವುದೊಂದು ಸುಖವಿಲ್ಲವೆಂಬುದು ಅವನಿಗೆ ಖಂಡಿತವಾಗಿಯೂ ವ್ಯಕ್ತವಾಯಿತು.

ಅನೇಕ ವರ್ಷಗಳ ವರೆಗೆ ಅಖಂಡವಾದ ಉನ್ನತ ಪದವಿಯನ್ನು ಅನುಭವಿಸಿದವರಿಗೆ ಯಾರಾದರೂ ಮತ್ತೊಬ್ಬ ಭಾಗಿಗಳು ತಲೆ ಎತ್ತಿದರೆಂದರೆ ಅದನ್ನು ಸಹಿಸಲು ಅವರಿಗೆ ಆಗುವುದಿಲ್ಲ. ಅದರಲ್ಲೂ ತನಗಿಂತಲೂ ತುಚ್ಛನೆಂದು ಭಾವಿಸಲ್ಪಟ್ಟಿದ್ದ ಯಾರಾದರೂ ಉನ್ನತ ಸ್ಥಾನವನ್ನು ವಹಿಸಿ ತನ್ನ ಅಭಾಗಿಕ ಪ್ರಭುತ್ವವನ್ನು ಅಪಹರಿಸಲು ಮೊದಲು ಮಾಡಿದರೆ ಅದನ್ನು ಅವರಿಗೆ ನೋಡಲು ಆಗುವುದೇ ಇಲ್ಲ. ಇದೊಂದು ಸಾಮಾನ್ಯ ಮನುಷ್ಯನ ಸ್ವಾಭಾವಿಕ ಗುಣವಾಗಿದೆ. ಅದರಲ್ಲೂ ಚಾರುದತ್ತನಂಥಾ ಅಸೂಯಾಪರನಾದ ಶ್ರೀಮಂತನಿಗೆ ದೇವದತ್ತನಂಥಾ ಕೀಳು ಕುಲದ ಮನುಷ್ಯನು ತನ್ನ ಎದುರಿನಲ್ಲಿ ಪ್ರಭುತ್ವವನ್ನು ಮಾಡುವುದೆಂದರೆ ಕೇವಲ ಸಹಿಸಲಸದಳವಾದ ಸಂಗತಿಯಾಗಿ ಕಾಣಹತ್ತಿತು. ಅವನು ಅನೇಕ ಗೇಳೆ ಯೋಚಿಸತೊಡಗಿದನು. ‘ದೇವದತ್ತನು ಹುಟ್ಟಿ ಬೆಳೆದದ್ದೇ ಅಂಥಾ ಹೀನ ಸ್ಥಿತಿಯಲ್ಲಿ. ಅಂದಾ ಕೆಟ್ಟ ಸುಳಿಯವನಿಗೆ ಕುಲೀನರಾದ ಶ್ರೀಮಂತರ ನಡತೆಗಳೆಲ್ಲಿಂದ ಬಂದೀತು? ಅವನ ವಿದ್ಯೆ ಏನು? ಐಶ್ವರ್ಯವೇನು? ಇದೆಲ್ಲಾ ಅಲ್ಪನಿಗೆ ಐಶ್ವರ್ಯ ಬಂದಂತೆ. ಇಲ್ಲದಿದ್ದರೆ ಈ ತರದ ನಡತೆಯು ಅವನ ಪದವಿಗೆ ತಕ್ಕುದೇ? ವಿಲಾಯಿತಿಯಲ್ಲಿ ವಿದ್ಯಾವ್ಯಾಸಂಗ ಮಾಡಿ ಬಹು ಕುಲೀನನೆನಿಸಿದ ನಿವೃತ್ತ ಜಡ್ಜಿ ಹರೀಂದ್ರನಾಥರ ಮಗಳನ್ನು ಮದುವೆಯಾಗಿಯೂ ಸಹ ಇವನ ಸಹವಾಸವಾರೋ ಯಾರೊಡನೆ? ಆ ವಿದ್ಯಾಹೀನರಾದ ಕಾಡು ಮನುಷ್ಯರಂಥಾ ತುಚ್ಛ ಗ್ರಾಮಸ್ಥರೊಡನೆ! ಬಡ ತಿರುಕರೊಡನೆ. ಇವನಿಗೆ ಯೋಗ್ಯತೆ ಗೊತ್ತಿದೆಯೇ? ಗೊತ್ತಿರುವುದು ತಾನೇ ಹೇಗೆ? ತಾನು ಹುಟ್ಟಿದುದೇ ಆ ಸ್ಥಿತಿಯಲ್ಲಿ. ಕತ್ತೆಯನ್ನು ಸಿಂಹ ಮಾಡಿದರೆ ಅದೆಂದಾದರೂ ಸಿಂಹವಾದೀತೇ? ಹಾಗೆಯೇ ಇವನ ಹುಟ್ಟು ಗುಣವು ಚಟ್ಟ ಹತ್ತಿದರೂ ಬಿಡಲೊಲ್ಲದು. ಇನ್ನೊಬ್ಬರ ಬುದ್ಧಿವಾದವನ್ನಾದರೂ ಕೇಳುವ ಹಾಗಿದೆಯೇ? ಅದನು ಮಾಡುವುದಲ್ಲದೆ ನನ್ನನ್ನೂ ಆ ದಾರಿಗೆ ಎಳೆಯಲು ಪ್ರಯತ್ನಿಸುತ್ತಿರುವನು. ನನ್ನ ನಾಯಿ ಸಹ ಈ ಬಡ ನಾಯಿಗಳಾದ ಗ್ರಾಮಸ್ಥರ ಅಂಗಳಕ್ಕೆ ಕಾಲು ಹಾಕಲಾರದು. ನಾನೆಂದರೇನು? ಅವರೆಂದರೇನು? ಅವರನ್ನು ವಿದ್ಯಾವಂತರನ್ನಾಗಿ ಮಾಡಬೇಕಂತೆ. ಮುಂದಕ್ಕೆ ತರಲು ಪ್ರಯತ್ನಿಸಬೇಕಂತೆ. ಆ ಮೇಲೆ ನಮ್ಮ ಕೂಲಿ ಮಾಡತಕ್ಕವರಾರು? ನಮ್ಮ ಮಕ್ಕಳು ಅವರ ಕೂಲಿ ಮಾಡಬೇಕೇನೊ? ಇಷ್ಟೆಲ್ಲಾ ಪ್ರಯತ್ನ ಅದಕ್ಕೇನೆ. ಅದಕ್ಕೆ ಸರಿಯಾಗಿ ಆ ಬಡ ಸೂಳೆ ಮಕ್ಕಳ ಚೇಷ್ಟೆಯೇ? ಮೊದಲು ಅಷ್ಟು ಗೌರವ ಕೊಡುತ್ತಿದ್ದವರು ಈಗ ನನ್ನ ಮೇಲೆ ಸವಾರಿ ಮಾಡಲು ತೊಡಗಿರುವರಲ್ಲಾ! ಏನು ಹೇಳಲಿ! ಹೂ! ಕೊಲೆಯಾದೇ; ಇಷ್ಟಕ್ಕೆಲ್ಲಾ ಕಾರಣನಾರು? ಆ ಕೀಳು ದೇವದತ್ತನಲ್ಲವೇ? ಆ ನೀಚನು ಇರುವಷ್ಟು ದಿವಸ ನನಗೆ ಸುಖವಿರದು. ನನ್ನ ಜೀವನವೆಲ್ಲಾ ಅನಂತವಾದ ವ್ಯಸನಸಾಗರದಲ್ಲೇ ಮುಗಿಯುವುದು. ದೇವದತ್ತನ ಮೇಲಿರತಕ್ಕ ಈ ತಿಳಿಗೇಡಿಗಳಾದ ಪ್ರಾಣಿಗಳ ಪ್ರೀತಿಯನ್ನು ತಪ್ಪಿಸಿ, ಅವನನ್ನು ದೂಷಿಸುವಂತೆ ಮಾಡಲು ನನಗೆಂದೂ ಸಾಧ್ಯವಿಲ್ಲ. ಈಗ ಸಾಧ್ಯವಿರುವ ದಾರಿಯೊಂದೆ ದೇವದತ್ತನ ಸೊಲ್ಲನ್ನು ಹೇಗಾದರೂ ಮಾಡಿ ಅಡಗಿಸಬೇಕು. ಇದನ್ನು ವೈರತ್ವದಿಂದ ಸಾಧಿಸಲು ಪ್ರಯತ್ನಪಟ್ಟಿದ್ದಾದರೆ ರಹಸ್ಯವು ಬಯಲಾಗಿ ಪರಿಣಾಮವು ವಿಪರೀತವಾದೀತು. ದೇವದತ್ತನಾದರೂ ಬಹು ನಿರ್ಮಲ ಸ್ವಭಾವದವನು. ಇತರರ ಅಂತರ್ಯದ ಮೋಸಕೃತ್ಯಗಳು ಆತನಿಗೆ ಸುಲಭವಾಗಿ ತಿಳಿಯುವುದಿಲ್ಲ. ಆದಕಾರಣ ಆತನ ಆಪ್ತ ಸ್ನೇಹಿತನಂತೆ ನಟಿಸುತ್ತಿದ್ದು ನನ್ನ ಮನೋಕಾಂಕ್ಷೆಯನ್ನು ಕೈಗೂಡಿಸಿಕೊಳ್ಳಬೇಕೆಂದು ನಿರ್ಧರಿಸಿಕೊಂಡನು.

ಕುಟಿಲವ್ಯಾಪಾರಿಯಾದ ಚಾರುದತ್ತನು ಸ್ವಕಾರ್ಯಸಾಧನೆಯಲ್ಲಿ ಬಹು ಚತುರನಿದ್ದನು. ಈ ತನ್ನ ಮನಸ್ಸಿನ ಪೈಶಾಚಿಕ ಇಂಗಿತವನ್ನು ಕಾರ್ಯತಃ ಕೈಗೂಡಿಸಲು ಒಬ್ಬ ಯೋಗ್ಯನಾದ ಸಖನ ಸಹಾಯ ಬೇಕಾಗಿತ್ತು. ಆ ಮನುಷ್ಯನಿಗೂ ದೇವದತ್ತನಲ್ಲಿ ಏನಾದರೊಂದು ಮನಸ್ತಾಪವಿರಬೇಕು. ಇಲ್ಲದಿದ್ದರೆ ತನ್ನ ಮನೋಭೀಷ್ಟವನ್ನು ಅವನಲ್ಲಿ ಬಿಚ್ಚಿಡಲು ಸಾಧ್ಯವಿಲ್ಲ. ದೇವದತ್ತನ ಯೋಗ್ಯತೆಯೂ, ನಡವಳಿಕೆಯೂ ಅಂದಿನ ವರೆಗೆ ಯಾವನೊಬ್ಬ ಶತ್ರುವನ್ನು ಸಂಪಾದಿಸಿರಲಿಲ್ಲ. ಆದರೂ ಚಾರುದತ್ತನು ಖಿನ್ನನಾಗಲಿಲ್ಲ. ಯಾತಕ್ಕೆಂದರೆ ಅವನು ಅನೇಕರ ಹಾಗೆ ಹಿಡಿದ ಕಾರ್ಯವನ್ನು ಒಂದೆರಡು ದಿವಸಗಳಲ್ಲೇ ಹಿಂದು ಮುಂದೆ ನೋಡದೆ ಸಾಧಿಸಿಬಿಡಬೇಕೆಂದು ಪ್ರಯತ್ನಪಡುವ ಜನರ ವರ್ಗಕ್ಕೆ ಸೇರಿದವನಲ್ಲ. ಹಿಡಿದ ಕಾರ್ಯವನ್ನು ಕೈಗೂಡಿಸುವುದರಲ್ಲಿ ಈತನಿಗೆ ಬಹಳ ಶ್ರದ್ಧೆಯೂ, ಸಮಾಧಾನವೂ ಇತ್ತು. ಅಷ್ಟೇ ಅಲ್ಲ. ಸಮಯಕ್ಕೆ ಸರಿಯಾದ ಯಾವ ತರಹದ ವೇಷವನ್ನು ಧರಿಸಲು ಸಮರ್ಥನಿದ್ದನು.

ಮನಸಿನಲ್ಲಿ ಈ ತರದ ತರಂಗಗಳು ಒಂದರ ಹಿಂದೆ ಒಂದು ತಲೆದೋರುತ್ತ ದಿನ ದಿನಕ್ಕೆ ದೇವದತ್ತನ ಮೇಲೆ ತನ್ನ ದ್ವೇಷವು ಹೆಚ್ಚಾಗುತ್ತಾ ಬೆಳೆಯುತ್ತಿತ್ತಾದರೂ, ಚಾರುದತ್ತನು ಬಹಿರಂಗಿಕ ವ್ಯವಹಾರಗಳಲ್ಲಿ ಮಾತ್ರ ದೇವದತ್ತನ ಮನಸಿನಲ್ಲಿ ಮಾತ್ರವಲ್ಲ; ಇತರರ ಮನಸಿನಲ್ಲಿಯೂ ತಿಲ ಮಾತ್ರವಾದರೂ ಸಂಶಯಕ್ಕೆಡೆಗೊಡದೆ ದೇವದತ್ತನ ಪ್ರಾಣಸಖನಂತೆ ವರ್ತಿಸುತ್ತಿದ್ದನು. ದೇವದತ್ತನು ತನ್ನ ಯೋಗ್ಯತೆಗೂ ಸ್ಥಿತಿಗೂ ತಕ್ಕುದಾದ ಒಂದ ಹಸನಾದ ಬಂಗಲೆಯನ್ನು ಕಟ್ಟಿಸಿ ಅದರ ಸುತ್ತು ಮುತ್ತಲೂ ಒಂದು ಹೂದೋಟ ಒಂದನ್ನು ನಿರ್ಮಿಸಿದನು.

ದೇವದತ್ತನು ಪ್ರಬಲಿಸುತ್ತಿದ್ದ ಪ್ರಾಮುಖ್ಯತೆಯ ಪ್ರಕಾಶದಲ್ಲಿ ಚಾರುದತ್ತನ ಯೋಗ್ಯತೆಯು ಕ್ರಮ ಕ್ರಮವಾಗಿ ಶಿಥಿಲವಾಗುತ್ತಾ ಬಂದು ಕಡೆಗಳಿಸಿಯೇ ಹೋಯಿತು. ತನ್ನ ದೊಡ್ಡಸ್ತಿಕೆಯು ಕ್ಷಯವಾದ ಹಾಗೆ ಅವನ ಹೃದಯದ ದ್ವೇಷವು ಬೆಳೆಯುತ್ತಾ ಬಂದಿತು. ದೇವದತ್ತನನ್ನು ಮುರಿಯಲು ನಾನಾ ತರದ ದಾರಿಯನ್ನೂ ಈ ಕಾರ್ಯ ಸಾಧನೆಯಲ್ಲಿ ತನಗೆ ಬೆಂಬಲವಾದ ಒಬ್ಬ ಗೆಳೆಯನನ್ನು ಯೋಚಿಸಿ, ಯೋಚಿಸಿ ಕಡೆಗೆ ಒಂದು ದಾರಿಯು ತೋರಿತು.

ಒಂದು ದಿವಸ ಬೆಳಗ್ಗೆ ಎದ್ದು ಚಾರುದತ್ತನು ಒಂದು ಮಾವಿನ ಎಲೆಯಿಂದ ಹಲ್ಲನ್ನು ಉಜ್ಜುತ್ತಾ ನಿಜಗೃಹದಿಂದ ಏನನ್ನೋ ಯೋಚಿಸುತ್ತಾ ಒಬ್ಬನೇ ಹೊರಟನು. ಸ್ವಲ್ಪ ಹೊತ್ತಿನಲ್ಲೇ ಒಂದು ಬೈಲಿಗೆ ಬಂದಿಳಿದನು. ಈ ಬೈಲಿನ ಮಧ್ಯಕ್ಕಾಗಿ ಒಂದು ಕಾಲುದಾರಿ ಹಾದು, ಒಂದು ಸಣ್ಣ ನಿರ್ಜನವಾದ ಕಾಡನ್ನು ದಾಟಿ ಒಂದು ಗದ್ದೆಗೆ ಇಳಿದಿತ್ತು. ಆ ಗದ್ದೆಯ ಆಚೆ ವಡದಲ್ಲಿ ಬೆಳೆದುಕೊಂಡಿದ್ದ ನಾನಾ ಕಾಡು ಮರಗಳ ಬುಡದಿಂದ ಮೇಲಕ್ಕೇಳುತ್ತಿದ್ದ ಧೂಮರಾಶಿಯು ಆ ಮರದ ಬುಡದಲ್ಲಿ ಮನುಷ್ಯನ ಒಂದು ವಾಸ ಸ್ಥಾನವಿರಬಹುದೆಂಬ ಸುಳಿವನ್ನು ದೂರದ ಪ್ರೇಕ್ಷಕರಿಗೆ ತಿಳಿಯಪಡಿಸುತ್ತಿತ್ತು. ಚಾರುದತ್ತನು ಈ ಕುಟೀರದ ಕಡೆಗೆ ಹೋದನು. [ಅಪೂರ್ಣ.

ಹಿಂಸಾ ಮತ್ತು ಅಹಿಂಸಾತತ್ವ ವಿವೇಚನೆ.

(ಲೇಖಕ- ಮಹಾತ್ಮ ಗಾಂಧಿ)

ಹಿಂಸಾತತ್ವವು ಎಷ್ಟೇ ಪ್ರಖರವಾಗಿ ಮುನ್ನಡೆದಿರಲಿ; ಯಾ ಜನತೆಯನ್ನು ಮಾರ್ಪಡಿಸಿರಲಿ; ಒಬ್ಬನೇ ಒಬ್ಬ ವ್ಯಕ್ತಿಯು ಅಹಿಂಸಾತತ್ವದ ಮೂಲವನ್ನರಿತ್ತಿದ್ದ ಪಕ್ಷ ಆ ಹಿಂಸಾತತ್ವವನ್ನು ಎದುರಿಸುವ ಮಾರ್ಗವನ್ನು ಸುಲಭವಾಗಿ ಕಂಡುಕೊಳ್ಳಬಲ್ಲನು. ನಾನು ಆಗಾಗ್ಯೆ ಅಹಿಂಸಾತತ್ವದ ಪೂರ್ಣ ಪರಿಶ್ರಮವು ನನಗಿಲ್ಲವೆಂದು ಒಪ್ಪಿಕೊಂಡಿರುವೆನು ನಿಜವಾದ ಅಹಿಂಸಾತತ್ವದ ಭಕ್ತನೆಂದೆನ್ನಲು ನನಗೆ ಶಕ್ತಿ ಸಾಲದು ಅಹಿಂಸಾದಲ್ಲಿ ಅರಿತು ನುರಿತವನು ನಾನೆನ್ನಲು ಆಗದು. ನಾನು ಅಹಿಂಸಾ ಮಾರ್ಗದಲ್ಲಿ ಪ್ರಯತ್ನಪಡುತ್ತಿರುವವನು ಅಹಿಂಸಾ ಮಾರ್ಗದ ನನ್ನ ಅನುಭವವು ಈ ವರೆಗಿನ ಬಿಕ್ಕಟ್ಟುಗಳನ್ನು ಸುಸೂತ್ರವಾಗಿ ಪರಿಹರಿಸಲು ಸಾಧ್ಯವಾಯಿತು. ಆದರೆ ಇಂದು ಸುತ್ತುಗಟ್ಟಿ ಮೇರೆ ಮೀರಿ ಹಬ್ಬುತ್ತಿರುವ ಹಿಂಸಾಚರಣೆಯಿಂದಾಗಿ ನಾನು ನಿರುಪಾಯನಾಗಿರುವೆನು. 'ಸ್ಟೇಟ್ಸ್‌ಮನ್' ಪತ್ರಿಕೆಯ ಪ್ರಧಾನ ಲೇಖನ ಒಂದರಲ್ಲಿ ಅವರ ಸಂಪಾದಕರು, ಐರೋಪ್ಯರು ನಮ್ಮ ಚಳವಳವನ್ನು ನಿಜವಾದ ಸತ್ಯಾಗ್ರಹವೆಂದು ಪರಿಗಣಿಸಿಲ್ಲವೆಂದೂ, ಅದು ನಿಜವಾದ ಒಂದು ದಂಗೆಯೇ ಆಗಿದ್ದರೂ ಕೂಡ, ಈ ವಿಚಾರವನ್ನು ಐರೋಪ್ಯರು ಮನಸಿಗೆ ತೆಗೆದುಕೊಳ್ಳದೆ ಮುಂದುವರಿಯಲು ಬಿಟ್ಟಿದ್ದರೆಂದೂ, ದಂಗೆಗಾರರಿಗೂ, ಸತ್ಯಾಗ್ರಹಿಗಳಿಗೂ ಈಗ ಕಂಡು ಬರುತ್ತಿರುವ ಭೇದವು ಬರೇ ಅವರ ಆಯುಧತ್ಯಾಗ ಒಂದಲ್ಲದೆ ಇನ್ನಾವುದೂ ಇಲ್ಲವೆಂದೂ, ಉದ್ಗರಿಸಿದ್ದರು. ಈ ಲೇಖನವನ್ನು ಓದಿದೊಡನೆ ಅದರ ಮರ್ಮವನ್ನು ಅರಿತೆನು ನಮ್ಮ ಚಳವಳವನ್ನೊಮ್ಮೆ ಪರೀಕ್ಷಿಸಿ ನೋಡಿದರೆ ನಾನು ಯೋಚಿಸಿದಂತೆ ಅದು ಶುದ್ಧ ಅಹಿಂಸಾ ರೀತಿಯಿಂದ ನಡಿಯಬೇಕಾಗಿದ್ದಾಗ್ಯೂ ಕೂಡ ಹಿಂದೆ ಕಳೆದ ವಿಚಾರಗಳನ್ನು ಪರಿಶೀಲಿಸಿದರೆ ಹಿಂಸಾತತ್ವವು ನಮ್ಮ ಚಳವಳದಲ್ಲಿ ಭಾಗವಹಿಸಿದ್ದನ್ನು ಕಾಣುವದು ಅಪರೂಪವಲ್ಲ. ನಾನು ಅಹಿಂಸಾತತ್ವದಲ್ಲಿ ಪೂರ್ಣ ನುರಿತವನಾಗಿದ್ದ ಪಕ್ಷ ನಮ್ಮ ಚಳವಳದ ಹೆಜ್ಜೆ ಹೆಜ್ಜೆಯಲ್ಲಿಯೂ ಅಹಿಂಸಾತತ್ವವೇ ಮುನ್ನಡೆದು ಹಿಂಸಾತತ್ವವು ನಮ್ಮ ಚಳವಳದಲ್ಲಿ ಕಾಲಿಡುವದನ್ನು ಆ ಕ್ಷಣ ನಿರೋಧಿಸಿ ಖಂಡಿಸುತ್ತಿದ್ದೆನು.

ಹಿಂದೂ-ಮುಸ್ಲಿಮರ ಒಮ್ಮತದ ಸತ್ಯಾಗ್ರಹ ಸಮರ್ಥನೆಯು ಸತ್ಯಾಗ್ರಹದೊಳಗಿನ ಹಿಂಸಾಚರಣೆಯನ್ನು ನನ್ನ ಗೋಚರಕ್ಕೆ ತರಲು ಅಡ್ಡಿ ಮಾಡಿತೆಂದು ನಾನು ಊಹಿಸುತ್ತೇನೆ. ಪರರಾಷ್ಟ್ರ ರಾಜಕಾರಣದಲ್ಲಿ ಹಾಗೂ ರಾಜ್ಯಾಳಿತದಲ್ಲಿ ನುರಿತವರಾದ ಬ್ರಿಟಿಷರು ಕಾಂಗ್ರೆಸಿನಂತಹ ಒಂದು ಅಮೋಘ ಸಂಸ್ಥೆಯನ್ನು ಶಕ್ತಿ ಸಾಮರ್ಥ್ಯದಿಂದ ಬಗ್ಗು ಬಡಿಯಲೆತ್ನಿಸುವದಕ್ಕಿಂಥಾ ಅದರ ಕೇಳಿಕೆಯಲ್ಲಿ ತಮಗೆ ನ್ಯಾಯವಾಗಿ ಕಾಣುವ ಕಿಂಚಿತ್ ಭಾಗವನ್ನು ಕೊಟ್ಟು ಸಮಾಧಾನಪಡಿಸಿ ತಮ್ಮ ಸ್ಥಳದ ಭದ್ರತೆಯನ್ನು ಕಾಯ್ದುಕೊಳ್ಳತೊಡಗಿರುವರು. ನನ್ನ ಮಟ್ಟಿಗೆ ಹೇಳುವದಾದರೆ ನಮ್ಮ ಚಳವಳವಾದರೂ ಪ್ರಾಮುಖ್ಯವಾಗಿ ಅಹಿಂಸೆಯಿಂದ ಕೂಡಿತೆನ್ನುವವರಲ್ಲಿ ಸಂಶಯವಿಲ್ಲ. ಅಂತೆಯೇ ಮುಂದಿನ ಚರಿತ್ರಕಾರರಾದರೂ ಇದನ್ನು ಒಪ್ಪಲೇಬೇಕು. ಸತ್ಯಾ ಮತ್ತು ಅಹಿಂಸಾ ಶೋಧಕನಾಗಿ, ನಾನು ಹೃದಯಾಂತರಾಳದಿಂದ ಉಕ್ಕಿ ಬಾರದ, ಕೇವಲ ಕರ್ತವ್ಯ ದೃಷ್ಟಿಯಿಂದ ಕೆಲಸ ಮಾಡುವ ಕೆಲಸಕ್ಕಾಗಿ ತೃಪ್ತಿಪಟ್ಟುಕೊಳ್ಳಬಾರದು. ಆ ಕಾಲದಲ್ಲಿ (ಅಂದರೆ ಕಳೆದ ಚಳವಳಿಯಲ್ಲಿ) ಅನುಸರಿಸಿದ ಅಹಿಂಸಾತತ್ವವು ಇಂದು ನಾನು ವಿವರಿಸುತ್ತಿರುವ ಅಹಿಂಸಾತತ್ವಕ್ಕಿಂದಾ ತೀರಾ ಹಿಂದಿತ್ತು. ಅಂತರಿಕ ಪ್ರೇರಣೆಗೆ ವಿರುದ್ಧವಾಗಿ ಯಾವದಾದರೂ ಬಲಾತ್ಕಾರದಿಂದ ಅನುಸರಿಸುವಂಥಾ ಅಹಿಂಸವು ಫಲಕಾರಿಯಾಗಲಾರದು. ಇದರ ಅನುಭವವಾದರೂ ನಮಗೆ ಅನೇಕ ಬಾರಿ ಆಗದೆ ಇಲ್ಲ ಹಿಂದೂ ಮುಸ್ಲಿಮರೊಳಗಿನ ಕಲಹವನ್ನು ನೋಡಿದರೆ ಎರಡು ಪಕ್ಷದವರೂ ಒಬ್ಬರ ಮೇಲೊಬ್ಬರು ಹಲ್ಲೆ ಮಾಡಲು ಆಯುಧಪಾಣಿಗಳಾಗುವರು. ಅಸಹಕಾರ ಚಳವಳದ ಕಾಲದಲ್ಲಿ ಹೃದಯದಲ್ಲಿ ಮುಚ್ಚಿಮಾಡಿ ಇಟ್ಟಿದ್ದ ಹಿಂಸಾ ಬೀಜವು ಈಗ ಮೊಳೆತು ಹಬ್ಬುತ್ತಿದೆಯೋ ಎನ್ನುವಂತೆ ಇಂದು ಭಾಸವಾಗುತ್ತದೆ. ಜನತೆಯಲ್ಲಿ ಉದ್ರೇಕಗೊಂಡಿದ್ದ ಹಿಂಸಾತತ್ವವು ಕೇವಲ ನಮ್ಮ ಧ್ಯೇಯಸಾಧನೆಯ ಗೊಂದಲದಲ್ಲಿ ಕ್ಷಣಕಾಲ ಮರೆಯಾಗಿದ್ದು ಈಗ ತಡೆಗಡಿದು ಮುಂಬರುವ ನೀರಿನೋಪಾದಿ ಜನತೆಯಲ್ಲಿ ಹಬ್ಬುತ್ತಿದೆ. ಜನತೆಯಲ್ಲೇ ಯಾಕೆ? ಕಾಂಗ್ರೆಸಿನೊಳಗೆ ಕಾಂಗ್ರೆಸಿಗರಲ್ಲಿ ಈ ಹಿಂಸಾತತ್ವವು ಬೇರೂರಿದೆ. ಅಧಿಕಾರ ಹೊತ್ತ ಮಂತ್ರಿಮಂಡಳಿಗಳೂ ಕೆಲವೊಂದು ರೀತಿಯಿಂದ ಇದಕ್ಕೆ ಬಲಿಯಾಗದೆ ಇಲ್ಲ. ಇಂದು ಕೂಲಂಕುಶವಾಗಿ ಪರಿಶೀಲಿಸಿದರೆ ಭಾರತ ಬಾಹ್ಯಾಕಾಶವು ಹಿಂಸಾತತ್ವದಿಂದ ತುಂಬಿದೆಯೆನ್ನಲಡ್ಡಿಯಿಲ್ಲ ಆದ್ದರಿಂದ ಈ ಹಿಂಸಾತತ್ವವು ಮಾಯವಾಗದ ವಿನಹ ಅಹಿಂಸಾತತ್ವಕ್ಕೆ ಬೆಂಬಲ ಸಿಗಲಾರದು. ಅರ್ಥಾತ್ ಸಮಗ್ರ ಜನತೆಯ ಏಕೋರೀತಿಯ ಚಳವಳವು ಅಸಾಧ್ಯ. ದೈನಂದಿನ ಕಾರ್ಯಗಳಲ್ಲಿ ನಮ್ಮ ಸುತ್ತು ಮುತ್ತು ನಡೆಯುತ್ತಿರುವ ವಿಚಾರಗಳಿಗೆ ಕಿವಿಗೊಡದೆ ತಟಸ್ಥವಾಗಿರುವದಾದರೂ ವಿವೇಕವೆನಿಸದು. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಕಾಯಿದೆ ಭಂಗ ಚಳವಳ ಕೈಗೊಳ್ಳಬೇಕೆಂದೂ, ಹಾಗಾದರೇನೆ ಹಿಂದೂ ಮುಸ್ಲಿಮರ ಭಿನ್ನಭೇದ, ಕಾಂಗ್ರೆಸಿನೊಳಗಿರುವ ಪರಸ್ಪರ ವೈಶಮ್ಯ, ಸ್ವಾರ್ಥಸಾಧನೆ ಇವು ಮಾಯವಾಗುವವೆಂದು ಅನೇಕರು ನನಗೆ ಸೂಚಿಸಿರುವರು. ಆದರೆ ಈ ವಿಚಾರದ ನನ್ನ ಅಭಿಪ್ರಾಯವು ತೀರಾ ಭಿನ್ನವಾಗಿರುವದು. ಈಗ ಅಹಿಂಸಾದೃಷ್ಟಿಯಿಂದ ಯಾವುದೊಂದು ಚಳವಳವನ್ನು ಕೈಕೊಂಡರೂ ಸಹ ಕ್ರಮೇಣ ಅದು ಹದ್ದುಬಸ್ತಿಲ್ಲದ ಹಿಂಸಾತತ್ವದಲ್ಲಿ ಪರಿಣಮಿಸದಿರದೆಂಬುದು ಸತ್ಯ. ಇದರಿಂದಾಗಿ ಕಾಂಗ್ರೆಸಿನ ಪ್ರತಿಷ್ಠೆಯು ಕೆಡುವದಲ್ಲದೆ, ಕಾಂಗ್ರೆಸಿನಲ್ಲಿ ಅವ್ಯವಸ್ಥೆಯನ್ನು ಬರುವದು. ಕಾಂಗ್ರೆಸಿನ ಪವಿತ್ರಧ್ಯೇಯವಾದ ಸ್ವಾತಂತ್ರ್ಯ ಸಂಪಾದನೆಯು ದೂರಉಳಿದು ಅನೇಕ ಕುಟುಂಬಗಳು ನಾಶವಾಗಬಹುದು. ಇದು ನನ್ನ ನಿರ್ಬಲತೆಯಿಂದಾಗಿ ಉದಿಸಿದ ಹೆದರಿಕೆಯಾಗಿರಬಹುದು. ಈ ಹೆದರಿಕೆಯು ನನ್ನಿಂದ ತೊಲಗದ ಹೊರತು ಹೆಚ್ಚು ವಿವೇಕ ಹಾಗೂ ಚಾತುರ್ಯ ಬೇಕಿರುವ ಯಾವದೊಂದು ಚಳವಳವನ್ನು ನಾನು ನಡೆಸಲಾರೆನು.

ಇಂದು ನಾನು ಸುಗಮವಾದ ಅಹಿಂಸಾ, ಮಾರ್ಗ ಒಂದನ್ನು ಜನತೆಯ ಮುಂದಿಡದ ಪಕ್ಷ ಖಂಡಿತವಾಗಿಯೂ ಹಿಂಸಾಚರಣೆಯು ತಲೆದೋರುವದು. ನಾನು ಜನತೆಗೆ ಸೂಚಿಸಿರುವ ಹಾಗೂ ಕಾಂಗ್ರೆಸಿನಿಂದ ಅಂಗೀಕರಿಸಲ್ಪಟ್ಟಿರುವ ವಿಧಾಯಕ ಕಾರ್ಯಕ್ರಮಗಳಿಂದ ಜನತೆಯು ಇಂದು ತೃಪ್ತವಾಗಿಲ್ಲ ವಿಧಾಯಕ ಕಾರ್ಯಕ್ರಮದಲ್ಲಿಯ ಅನಾಸಕ್ತಿಯೇ ಜನತೆಯಲ್ಲಿ ಅಹಿಂಸಾತತ್ವವು ಬೇರೂರಿಲ್ಲವೆಂಬುವನ್ನು ನಿವೇದಿಸುತ್ತದೆ. ಹಿಂಸಾತತ್ವಾನುಚರಣೆಯಿಂದಾಗಿ ದಂಗೆಯಾದರೂ ಸಹ ಅದರಲ್ಲಿ ಕಾರಣವಿಲ್ಲದೆ ಇಲ್ಲ. ನಮ್ಮ ಕನಸಿನಲ್ಲೇ ಉಳಿದಿರುವ ಸ್ವಾತಂತ್ರ್ಯಸಾಧನೆಯ ಆ ಧ್ಯೇಯದಿಂದ ನಾವು ದೂರ ಸರಿದಿರುವೆವು ದೇಶದ ಆದಾಯದಲ್ಲಿ ಶೇಕಡ 80 ರಷ್ಟನ್ನು ಕೇವಲ ಆಡಳಿತ ಹಾಗೂ ಸೈನ್ಯಕ್ಕಾಗಿ ವೆಚ್ಚಮಾಡಿ ಬಡ ಜನರನ್ನು ಬಗ್ಗು ಬಡಿದು ಮೂಲೆಸೇರಿಸುತ್ತಿರುವ ಸರ್ಕಾರದವರ ವರ್ತನೆಯಾದರೂ ಅಸಹನೀಯವಾಗಿದೆ,

ಹೆಚ್ಚಿನ ಸಂಸ್ಥಾನಗಳಲ್ಲಿ ಅನಾಯಕತ್ವದ ಪರಮಾವಧಿಯು ಕಂಡು ಬರುತ್ತಿರುವದು ಅನೇಕ ರಾಷ್ಟ್ರಗಳಲ್ಲಿ ಕಾಯಿದೆ ಭಂಗ ಚಳವಳವನ್ನು ನಿಲ್ಲಿಸಿದ ಜವಾಬ್ದಾರಿಯು ನನ್ನದು. ಇದು ಸಂಸ್ಥಾನಾಧೀಶರಲ್ಲಿ ಹಾಗೂ ಜನತೆಯಲ್ಲಿ ನೀತಿಭ್ರಷ್ಟತೆಯನ್ನುಂಟುಮಾಡಿದೆ. ಜನತೆಯು ನಿರಾಶೆಯು ಹುಟ್ಟಿ ಎಲ್ಲಾ ಪ್ರಯತ್ನವು ವಿಫಲವಾಯಿತೆಂಬ ಯೋಚನೆ ಹುಟ್ಟಿದೆ. ಅಧಿಕಾರಿಗಳಾದರೂ ಜನತೆಯಿಂದ ಇನ್ನೇನೂ ನಡೆಯಲಾರದೆಂದು ನಂಬಿರುವರು. ಈ ಎರಡು ಅಭಿಪ್ರಾಯಗಳೂ ತಪ್ಪು. ಚಳವಳವನ್ನು ನಿಲ್ಲಿಸುವ ಮೊದಲೇ ಈ ರೀತಿ ನಡೆಯುವದೆಂಬುದಾಗಿ ನಾನು ಭವಿಷ್ಯ ನುಡಿದಿದ್ದೆ. ಜನತೆಯಲ್ಲಿ ಉಪಸ್ಥಿತವಾಗಿರುವ ಹೆದರಿಕೆಯಿಂದ ಅವರಲ್ಲಿ ಅಹಿಂಸಾತತ್ವವು ಮೂಡಿಲ್ಲವೆಂದೂ, ಮಾತಿನಲ್ಲಾಡಿದ್ದನ್ನು ಕೃತಿಯಲ್ಲಿ ತರುತ್ತಿಲ್ಲವೆಂಬುದೂ ಹೊಳೆಯುವದು. ಸಂಸ್ಥಾನಾಧೀಶರು ಕೇವಲ ಕಣ್ಣು ಕಟ್ಟುವ ಸುಧಾರಣೆಗಳಿಂದ ಜನತೆಯನ್ನು ತೃಪ್ತಿಪಡಿಸಬಹುದೆಂದು ನಂಬಿರುವದೂ ಕನಸಿನ ಮಾತೆ. ಜನತೆಯು ನನ್ನ ಉಪದೇಶದಂತೆ ಶಾಂತ ರೀತಿಯಿಂದ ತಮ್ಮೊಳಗೆ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಜನತೆಯಲ್ಲಿ ಚೈತನ್ಯವನ್ನು ತುಂಬಿ ವರ್ತಿಸುತ್ತಿದ್ದರೆ ಯೋಗ್ಯವಿತ್ತು. ಸಂಸ್ಥಾನಾಧಿಕಾರಿಗಳು ಚಳವಳವನ್ನು ನಿಲ್ಲಿಸಿದ ಈ ಸಂದರ್ಭವನ್ನು ಸದುಪಯೋಗಿಸಿಕೊಂಡು ನ್ಯಾಯಕ್ಕಾಗಿ, ನ್ಯಾಯದೃಷ್ಟಿಯಿಂದ ಜನತೆಗೆ ನ್ಯಾಯವಾದ ಸುಧಾರಣೆಗಳನ್ನು ಕೊಡುವದು ಹಿತವಿದೆ. ಕಾಲಸ್ಥಿತಿಯನ್ನರಿತು ಅಧಿಕಾರಿಗಳು ವರ್ತಿಸಬೇಕು. ಜನತೆಯಾಗಲೀ, ಅಧಿಕಾರಿಗಳಾಗಲೀ ತಮ್ಮ ನಿರ್ದಿಷ್ಟ ಕರ್ತವ್ಯವನ್ನು ಕೈಗೊಳ್ಳಲು ಇನ್ನೂ ಸಮಯ ಮೀರಿಲ್ಲ.

ಈ ಸಂದರ್ಭದಲ್ಲಿ ಕೇಂದ್ರ ಸರಕಾರವನ್ನು ಮರೆಯಲಿಕ್ಕಾಗುವದಿಲ್ಲ. ತಮ್ಮ ಪ್ರಜೆಗಳಿಗೆ ತಮಗೆ ತೋಚಿದಂತಾ ಸುಧಾರಣೆಗಳನ್ನು ಕೊಡಬಹುದೆಂದು ಕೇಂದ್ರ ಸರಕಾರದವರು ಮಾಡಿದ ಘೋಷಣೆಯ ಬಗ್ಗೆ ಈಗ ಅವರು ವ್ಯಸನಪಡುವಂತೆ ಕಾಣುತ್ತಿದೆ. ರಾಜರುಗಳಾದರೂ ಈ ಪ್ರಕಟಣೆಯನ್ನು ಅಕ್ಷರಶಃ ತೆಗೆದುಕೊಳ್ಳಲಿಕ್ಕಿಲ್ಲವೆಂಬ ಗೊಂದಲವೂ ಕೇಳುತ್ತಿದೆ ಕೇಂದ್ರ ಸರಕಾರಕ್ಕೆ ವಿರೋಧವಾಗುವ ಯಾವದೊಂದು ಕಾರ್ಯವನ್ನಾದರೂ ಅರಸರು ಕೈಕೊಳ್ಳರೆಂಬುದು ಎಲ್ಲರಿಗೂ ವಿದಿತವಿರುವ ವಿಚಾರ. ಕೇಂದ್ರ ಸರಕಾರಕ್ಕೆ ವಿರೋಧವಿರುವ ಜನರೊಡನೆ ಭೇಟಿಯಾಗಲು ಸಹ ಈ ಸಂಸ್ಥಾನಾಧೀಶರು ಹೆದರುವರೆಂಬುದರಲ್ಲಿ ಸಂಶಯವಿಲ್ಲ. ಪರಿಸ್ಥಿತಿ ಹೀಗಿದ್ದು ಅರಸರ ಮೇಲೆ ಕೇಂದ್ರ ಸರಕಾರದ ಕೈವಾಡವು ಇಷ್ಟು ಬಲವತ್ತರವಾಗಿರುವಾಗ ಅನೇಕ ಸಂಸ್ಥಾನಗಳಲ್ಲಿ ನಡೆಯುತ್ತಿರುವ ಅಪ್ರಾಸಂಗಿಕ ಅನಾಯಕತ್ವಕ್ಕೆ ಜವಾಬ್ದಾರರಾದರೂ ಕೇಂದ್ರ ಸರಕಾರದವರೆಂಬುದರಲ್ಲಿ ಅಭಿಪ್ರಾಯ ಭೇದವಿಲ್ಲ. ದುರಾದೃಷ್ಟ ಭಾರತ ಭೂಮಿಯಲ್ಲಿ ಹಿಂಸಾಚರಣೆಯು ಪ್ರಾರಂಭವಾದರೆ ಅದಕ್ಕೆ ಕೇಂದ್ರ ಸರಕಾರ ಯಾಗೂ ಸಂಸ್ಥಾನಾಧೀಶರು ಜವಾಬ್ದಾರರಲ್ಲದೆ ಅದರ ಹೆಚ್ಚಿನ ಜವಾಬ್ದಾರಿಕೆಯು ಕಾಂಗ್ರೆಸಿನ ಮೇಲೆ ಬೀಳುವದು. ಯಾಕೆಂದರೆ ಕೇಂದ್ರ ಸರಕಾರವಾಗಲೀ, ಸಂಸ್ಥಾನದ ಅಳರಸರಾಗಲೀ ತಾವು ಅಹಿಂಸಾ ಪ್ರತಿಪಾದಕರೆಂದಿಲ್ಲ. ಆದರೆ ಕಾಂಗ್ರೆಸು 1920 ರಿಂದಲೇ ತನ್ನ ಪ್ರತಿಯೊಂದು ಹೆಜ್ಜೆ ಹೆಜ್ಜೆಯಲ್ಲಿಯೂ ಅಹಿಂಸಾತತ್ವಕ್ಕೆ ಪ್ರಾತಿನಿಧ್ಯವನ್ನು ಕೊಟ್ಟಿದೆ ಈಗ ಕಾಂಗ್ರೆಸಿನವರು ಅಹಿಂಸೆಯನ್ನು ಪ್ರತಿಪಾದಿಸದಿದ್ದರೆ ತತ್ಪರಿಣಾಮದಿಂದ ಉದ್ಭೂತವಾಗುವ ತೊಂದರೆಯನ್ನು ಎದುರಿಸಲೇಬೇಕು. ಅಹಿಂಸವು ಬಲೋತ್ಕಂಥದ ಮಾರ್ಗವಲ್ಲ. ನಾವು ಸಂಸ್ಥಾನಾಧಿಕಾರಿಗಳನ್ನು ಐರೋಪ್ಯ ಆಡಳಿತಗಾರರನ್ನೂ ಅಹಿಂಸಾತತ್ವಕ್ಕೆ ಮತಾಂತರಿಸಲು ಅಸಮರ್ಥರಾಗಿರುವೆವು. ಸತ್ಯಾಗ್ರಹವು ಕೇವಲ ಹೊಸದೊಂದು ಪರೀಕ್ಷಾಕ್ಷೇತ್ರವೆಂದು ಹೇಳಿರುವೆನು. ಕಾಂಗ್ರೆಸಿನವರು ಹೃದಯಪೂರ್ವಕ ಪರೀಕ್ಷೆಮಾಡಿಯೂ ಅದು ಫಲಕಾರಿಯಾಗಲ್ಲದಿದ್ದರೆ ಅವ

ಜರ್ಮನ್ ಹೊಸ ಯೋಜನೆ.

ಇದೀಗ ಕೆಲವು ದಿವಸಗಳಿಂದ ಜರ್ಮನಿಯು ಡೇನ್ಜಿಗದ ಕಡೆ ತನ್ನ ಕೈಯನ್ನು ಚಾಚಿ ದಕ್ಷಿಣ ದಿಕ್ಕಿಗೆ ತನ್ನ ದೃಷ್ಟಿಯನ್ನು ಹರಿಯಬಿಟ್ಟನೆ. ಆದ ಪ್ರಯುಕ್ತ ಇಡೀ ರಾಷ್ಟ್ರಗಳ ದೃಷ್ಟಿಯೂ ಆ ಕಡೆಗೇ ಕೇಂದ್ರೀಕೃತವಾಗಿರುವವು. ಇಡೀ ಜಗತ್ತಿಗೆ ತಿಳಿಯುವ ಹಾಗೆ ತಾರೀಕು 20ರಲ್ಲಿ ತಾನು ಡೇನ್ಜಿಗಿಗೆ ಹೋಗುವೆನೆಂದು ಹಿಟ್ಲರನು ಸಾರಿದ್ದರೂ, ಜಗತ್ತಿನ ರಾಷ್ಟ್ರಗಳ ದೃಷ್ಟಿ ಸಮ್ಮೇಳನವು ಡೇನ್ಜಿಗ್‌ನಲ್ಲಿ ನಡೆಯುತ್ತಿರುವಾಗ್ಗೆ ತಾನು ಮಲ್ಲನೆ ಯಾರಿಗೂ ಅರಿಯದಂತೆ ರೊಮೇನಿಯಾದ ಮೇಲೆ ಬೀಳುವ ಒಂದು ಹಂಚಿಕೆಯನ್ನು ಹಿಟ್ಲರನು ಮಾಡಿರುವನು. ಪೋಲೇಂಡಿನೊಡನೆ ಡೇನ್ಜಿಗನ್ನು ವಶಪಡಿಸಿಕೊಳ್ಳುವೆನೆಂದು ಘೋಷಿಸಿ ಅವರ ತಲೆಗೆ ಬೇಸರ ಹಿಡಿಸಿ ಹಂಗೇರಿಯೊಡನೆ ಮೈತ್ರಿ ಸಾಧಿಸಿ, ರುಮೇನಿಯಾದ ಮೇಲೆ ಬೀಳುವ ಸಮಯ ನೋಡುತ್ತಿರುವನು. ಝೆಕೋಸ್ಲೋವಾಕಿಯಾದ ಜರ್ಮನೀಕರಣ ಹಸ್ತವು ದಿನೇ ದಿನೇ ಕಠಿಣವಾಗುತ್ತಿದೆ. ಝೆಕೋಸ್ಲೋವಾಕಿಯಾವನ್ನು ಬೇರ್ಪಡಿಸಿ ರುಮೇನಿಯಾಕ್ಕೆ ನುಗ್ಗುವದಾದರೂ ಹಿಟ್ಲರನಿಗೆ ಅಸಾಧ್ಯವಲ್ಲ. ಜರ್ಮನಿಯು ಕಠಿಣ ರಾಜಶಾಸನಗಳಿಂದ ಮನನೊಂದ ಝೆಕೊಸ್ಲೋವಾಕಿಯನರು ದೇಶ ತ್ಯಾಗ ಮಾಡದಂತೆ ಗೆಸ್ಟೇಪೋ ಗೂಢಾಚಾರರು ಅಲ್ಲಿ ಸರ್ಪಕಾವಲು ನಡೆಸುತ್ತಿದ್ದಾರೆ. ಕೆಲವು ದಿನಗಳಲ್ಲೇ ಬೊಹೇಮಿಯಾ, ಮೊರೇವಿಯಾ, ಸ್ಲೋವಾಕಿಯಗಳು ಜರ್ಮನರ ರಕ್ಷಣೆಯಲ್ಲಿರುವವೆಂದು ಸಾರಿ 'ಜರ್ಮನ್ ರಾಷ್ಟ್ರ'ಗಳೆಂದು ಅವುಗಳ ಹೆಸರು ಬದಲಾಯಿಸಲು ನಾಝಿ ಸರಕಾರವು ಪ್ರಯತ್ನಿಸುತ್ತಿದೆ.

ನ್ನು ಬಿಟ್ಟು ಬಿಡಬೇಕಾಗುವದು. ಯಾವದೊಂದು ತತ್ವವಾದರೂ ಹೃದಯಪೂರ್ವಕವಾಗಿ ಪರೀಕ್ಷಿಸಲ್ಪಡಬೇಕು. ನಾವು ಇನ್ನೂ ಹಾಗೆ ಪರೀಕ್ಷಿಸಿಲ್ಲ. ಆದ್ದರಿಂದ ಕಾಂಗ್ರೆಸಿನವರು ಕೇಂದ್ರ ಸರಕಾರದ ಹೃದಯ ಪಲ್ಲಟವಾಗಲು ಯತ್ನಿಸಿ ಸಫಲರಾದರೆ ಸಂಸ್ಥಾನಾಧಿಕಾರಿಗಳು ತಾವಾಗಿಯೇ ಮಾರ್ಪಡುವರು.

ಆದರೆ ಕಾಂಗ್ರೆಸಿನವರು ಅಹಿಂಸಾಪಥದಲ್ಲಿ ಈಗ ಮುಂದರಿದಿರುವಲ್ಲಿಂದ ಮುನ್ನಡೆಯಲಾರದ ಪಕ್ಷ, ಕೇಂದ್ರ ಸರಕಾರವೂ, ಸಂಸ್ಥಾನಾಧೀಶರೂ ಸ್ವಾರ್ಥದೃಷ್ಟಿಯಿಂದ ನ್ಯಾಯಬದ್ಧವಾಗಿ ನಡೆಯದ ಪಕ್ಷ, ಮತ್ತು ಈಗಿನ ಆ ಹಿಂಸಾಪಥದಿಂದ ಹಿಂಸೆಯ ಬದಲು ಹೊಸತೊಂದು ಸುಗಮ ಹಾದಿಯು ಕಾಣದ ಪಕ್ಷ ನಮ್ಮ ದಾರುಣ ಕಡುಕಾರ್ಪಣ್ಯಗಳನ್ನು ನೀಗಲು ದೇಶವು ಹಿಂಸಾಮಾರ್ಗವನ್ನವಲಂಬಿಸಲು ತಯಾರಾಗಿರಬೇಕು. ಹಿಂಸಾತತ್ವವು ಜಯವನ್ನು ಪಡೆಯುದೆಂಬ ತತ್ವವು ಈ ದಂಗೆಯನ್ನು ತಡೆಯಲು ವಿರೋಧವಿಲ್ಲದು. ಕೇವಲ ರಾಜಶಾಸನಾನುರೂಪದ ಚಳವಳವು ಸಾಲದು.

ಪರದೇಶಗಳ ಪರಿಸ್ಥಿತಿ.

ಡೇನ್ಜಿಗ್‌ನಲ್ಲಿ ಜರ್ಮನಿಯು ತನ್ನ ಕೈವಾಡವನ್ನು ಸುರಕ್ಷಿತವಾಗಿ ನಡೆಸುತ್ತಿದೆ. ಅಲ್ಲಿಯ ಒಪ್ಪಂದ ಶರತ್ತುಗಳಿಗನ್ವಯವಾಗಿ ನ್ಯಸ್ತಸಾಗಿಸಲು ಅಸಾಧ್ಯವಾದ್ದರಿಂದ ಜರ್ಮನರು ಪ್ರಯಾಣಿಕರ ವೇಷ ಧರಿಸಿ ಡೇನ್ಜಿಗ್‌ನಲ್ಲಿ ತುಂಬಿರುವರು. ಅವರ ಉಪಯೋಗಕ್ಕಾಗಿ ಆಟದ ಮೈದಾನುಗಳನ್ನೂ ಇನ್ನಿತರ ಹಲವು ವಿಧದ ಕ್ರಮಗಳನ್ನು ಕೈಕೊಂಡು ಒಂದು ರೀತಿಯಿಂದ ತಮ್ಮ ಹಕ್ಕು ಸ್ಥಾಪನೆ ನಡೆಸುತ್ತಿರುವರು. ಜರ್ಮನಿಯ ದೃಷ್ಟಿಯಲ್ಲಿರುವ ಈ ಡೇನ್ಜಿಗ್ ಪಟ್ಟಣವು ಒಂದು ಪ್ರಾಮುಖ್ಯ ಬಂದರಾಗಿದೆ. ಇದು ಜರ್ಮನರ ಕರಗತವಾದರೆ ಜರ್ಮನಿಯ ಮುಂದಿನ ರಾಜ್ಯ ವಿಸ್ತರಣಾಭಿಲಾಷೆಯ ಸಾಫಲ್ಯಕ್ಕೆ ಇದು ಬಹು ಸಹಕಾರಿಯಾಗುವದೆಂದು ಬೇರೆ ಹೇಳಬೇಕಿಲ್ಲ. ಇದೊಂದು ಸಣ್ಣ ಪಟ್ಟಣಕ್ಕಾಗಿ ಜರ್ಮನಿಯು ಯುದ್ಧ ಕೈಕೊಂಡರೆ ಇಡೀ ವಿಶ್ವಶಾಂತಿಯೇ ಹಾಳಾಗುವುದರಲ್ಲಿ ಸಂಶಯವಿಲ್ಲ. ಹಿಟ್ಲರನು ಮುಂದಡಿ ಇಟ್ಟರೆ ಇತರ ರಾಷ್ಟ್ರಗಳು ವಿರೋಧಿಸದೆ ಗತ್ಯಂತರವಿಲ್ಲ. ಈ ಸಂಧಿಗ್ಧ ಬಿಕ್ಕಟ್ಟಾವಸ್ಥೆಯು ಹೇಗೆ ನಿವಾರಣೆಯಾಗುವದೆಂಬುದು ಕಾಲಗರ್ಭದಲ್ಲಡಗಿದ ವಿಚಾರ.

ಇಟಲಿ.

ಇಟಲಿಯು ಇಂದು ಆವಾವ ಸಾಹಸಕ್ಕೂ ಮುಂದಡಿಯಿಡಲಾರದವಾಗಿದೆ. ದೇಶದ ಆರ್ಥಿಕ ಸ್ಥಿತಿಯು ವಿಪನ್ನಾವಸ್ಥೆಯಲ್ಲಿರುವದೇ ಇದಕ್ಕೆ ಕಾರಣ. ಇಟಲಿಯು ಅಬಿಸೀನಿಯಾ ಯುದ್ಧದಲ್ಲಿ ತನ್ನ ಭಂಡಾರವನ್ನು ಖರ್ಚು ಮಾಡಿತು. ಅದಲ್ಲದೆ ಅಲ್ಲಿಯ ಜನತೆಯನ್ನು ಹತೋಟಿಯಲ್ಲಿಡಲು ಅದು ಇನ್ನಷ್ಟು ಹಣ ವ್ಯಯಿಸುತ್ತಿದೆ. ಸ್ಪೆಯಿನ್ ಸಮರದಲ್ಲಿ ಇಟಲಿಯು ಭಾಗವಹಿಸಿ ತನ್ನಿಂದ ಸಾಧ್ಯವಿಲ್ಲದಷ್ಟು ಹಣವನ್ನು ವ್ಯಯಿಸಿತು. ಇದೀಗ ಅಲ್ಬೇನಿಯಾವಾದರೂ ಯೋಗ್ಯ ಸ್ಥಿತಿಗೆ ಬರಬೇಕಾದರೆ ಇಟಲಿಯು ಪೂರ್ಣ ವ್ಯಯ ಮಾಡಬೇಕಿದೆ. ಹೀಗೆ ಅಗಣಿತ ದ್ರವ್ಯವು ಖರ್ಚಾಗಬೇಕಾದ ಕಾರ್ಯಗಳು ಕಾದು ಕೂತಿರುವಾಗ ಇಟಲಿಯು ಏಕಾಏಕಿ ಹೊಸ ಯಾವುದೊಂದು ಕೆಲಸಕ್ಕೂ ಕೈ ಹಾಕಲಾರದು. 1937ರಲ್ಲಿ ಇಟಲಿಯ ಬಜೆಟ್ಟಿನಲ್ಲಿ 60 ಮಿಲಿಯ ಪವನುಗಳ ಕಡಿಮೆ ಇದ್ದಿದ್ದರೂ ಅದು ಸುಧಾರಿಸಿಕೊಂಡಿತು. ಆದರೆ ಈ ವರ್ಷ ಹಾಗೆ ಸುಧಾರಿಸಿಕೊಳ್ಳಲು ಅಸಕ್ಕೆ ಅಸಾಧ್ಯವೇ ಆಗಿದೆ. ಇಟಲಿಯ ಸುಂದರ ನೋಟಗಳನ್ನು ನೋಡಲು ಜಗತ್ತಿನ ವಿವಿಧ ರಾಷ್ಟ್ರಗಳ ಜನರು ಬರುತ್ತಿದ್ದು ಅದರಿಂದಲೇ ಇಟಲಿಗೆ 70 ಮಿಲಿಯ ಪವನುಗಳ ಲಾಭವಾಗುತ್ತಿತ್ತು. ಆದರೆ ಈ ವರ್ಷವಾದರೂ ಯುದ್ಧ ಭಯದಿಂದ ಯಾರೂ ಆ ಕಡೆ ಸುಳಿಯಲಾರದ್ದರಿಂದ ಇಟಲಿಯ ಆರ್ಥಿಕ ಸ್ಥಿತಿಯು ದಿನೇ ದಿನೇ ಕೃಶವಾಗುತ್ತಿದೆ. 'ಆರ್ಥಿಕ ಸಂಪತ್ತೇ ಅಧಿಕಾರದ ಮೂಲ'ವೆಂಬ ನಾಣ್ಣುಡಿಯಿರುವುದರಿಂದ ಇಂದು ಆರ್ಥಿಕ ಬಿಕ್ಕಟ್ಟಿನಲ್ಲಿರುವ ಇಟಲಿಯು ಅಧಿಕಾರ ಚಲಾಯಿಸಲಾರದು. ದಿನೇ ದಿನೇ ಅವರ ಅಧಿಕಾರ ದರ್ಪವು ಕಡಿಮೆಯಾಗುತ್ತಾ ಬರುತ್ತಿರುವದೇ ಇದಕ್ಕೆ ನಿದರ್ಶನ.

ಬ್ರಿಟನು.

ಬ್ರಿಟನಿಗೆ ಇಂದೊಂದು ಸಂದಿಗ್ಧ ಕಾಲ. ಚೈನಾದಲ್ಲಿ ಒಂದೆಡೆ ಜಪಾನರು ಜರ್ಮನಿಗೆ ಸಹಾಯ ಮಾಡುತ್ತಿರುವರೋ ಎಂಬಂತೆ ಬ್ರಿಟಿಷ್ ಮುದಿ ಸಿಂಹದ ಬಾಲ ಹಿಡಿದು ಕುಣಿಸುತ್ತಿರುವರು. ಬ್ರಿಟನು ಜಪಾನರನ್ನು ಎದುರಿಸಿ ಬಗ್ಗು ಬಡಿಯುವದೆಂದರೆ ಇತ್ತ ಕಡೆ ಹಿಟ್ಲರನು ಡೇನ್ಜಿಗ್, ಕೊರಿಡೋರನ್ನು ನುಂಗಲು ಯತ್ನಿಸುತ್ತಿರುವನು. ಆದ್ದರಿಂದ ಬ್ರಿಟನು ದಿಗ್ಭ್ರಾಂತಗೊಂಡಿದೆ. ಜಪಾನ ಪ್ರಧಾನ ಮಂತ್ರಿಗಳು ಒಂದು ಘೋಷಣೆಯನ್ನು ಹೊರಡಿಸಿ, ಬ್ರಿಟನು ಜಪಾನಿನ ಹಕ್ಕು ಬಾಧ್ಯತೆಗಳನ್ನೊಪ್ಪದ್ದರೆ ಬ್ರಿಟನ್ ಜಪಾನಿನೊಳಗೆ ನಡೆಯುತ್ತಿರುವ ಸಂಭಾಷಣೆಯು ಕುಸಿದು ಬೀಳುವದು ಎಂದಿದ್ದಾರೆ. ಅದ್ದರಿಂದ ಜಪಾನರನ್ನು ಸಮಾಧಾನಪಡಿಸಲು ಬ್ರಿಟನು ಅವರ ಶರತ್ತನ್ನು ಅಂಗೀಕರಿಸಬೇಕಾಗುವದು. ಬ್ರಿಟನನ್ನು ಹೆದರಿಸುವ ಈ ಕೆಚ್ಚೆದೆಯು ಜಪಾನಿಗೆಲ್ಲಿಂದ? ಹಿಟ್ಲರನು 'ನಾವೂ ನಿಮ್ಮ ಜತೆಯಲ್ಲಿದ್ದೇವೆ. ಬೆದರಬೇಡಿ' ಎಂದು ಜಪಾನರ ಬೆನ್ನು ತಟ್ಟಿರಬೇಕು. ಇಲ್ಲದಿದ್ದರೆ ಚೀನೀಯರಿಂದ ಕಷ್ಟಕ್ಕೀಡಾಗಿರುವ ಜಪಾನು ಹೇಗೆ ಈ ರೀತಿಯ ದಿಟ್ಟ ವರ್ತನೆಯನ್ನು ತೋರೀತು? ಸರ್ವಾಧಿಕಾರಿಗಳ ಕೈವಾಡವಿಲ್ಲದ ರಾಷ್ಟ್ರವೇ ಇಂದಿಲ್ಲವಾಗಿದ. ಬ್ರಿಟನು ತನ್ನ ಪೌರೋಹಿತ್ಯವನ್ನು ವಹಿಸಿ ಇಂದಿನ ಈ ಬಿಕ್ಕಟ್ಟಿನ ರಂಗದಲ್ಲಿ ಯಾವ ಪಾತ್ರವಹಿಸುವದೆಂಬುದು ನಿರೀಕ್ಷಣೀಯ.

ಚೈನಾ.

ಚೈನಾ ಜಪಾನು ಯುದ್ಧದ ಎರಡನೇ ವರ್ಧಂತಿಯು ನಡೆಯಿತು. ಚೀನೀಯರ ಮುಖಂಡನಾದ ಮಾರ್ಷಲ್ ಚಿಯಾಂಗ್ ಕೈಶೇಕನು ಆ ದಿನ ತನ್ನ ಜನರಿಗೆ ಈ ರೀತಿಯ ಸಂದೇಶ ಒಂದನ್ನು ಕೊಟ್ಟಿರುವನು. 'ಚೀನಾ ಜಪಾನುಗಳೊಳಗೆ ಸಂಧಿಯಿಲ್ಲ ಜಪಾನಿನ ವಿರುದ್ಧವಾಗಿ ಹೋರಾಡುವದೇ ಚೀನಾದ ನಿರ್ಧಾರ!' ಇದರಿಂದ ಸ್ವದೇಶಾಭಿಮಾನಿಗಳಾದ ಅದೆಷ್ಟು ಚೀನೀಯರಿಗೆ ಆನಂದವಾಗಿರಲಿಕ್ಕಿಲ್ಲ. ಈಗ ಚೀನಿಯುದ್ಧದಲ್ಲಿ ಜಯವನ್ನು ಪಡೆಯುತ್ತಿರುವ ಚೀನೀಯೋಧರಿಗೆ ಈ ಸಂತೋಷದ ಜೊತೆಗೆ ತಮ್ಮ ನಾಯಕನ ನಿರ್ಧಾರವು ಎಷ್ಟು ಆನಂದ ಕೊಡಲಿಕ್ಕಿಲ್ಲ? ಈ ಮಧ್ಯೆ ಜಪಾನಿನಲ್ಲಿಯೂ ಯುದ್ಧವರ್ಧಂತ್ಯುತ್ಸವವು ನಡೆಯಿತು. ಬ್ರಿಟಿಷರು ಚೈನೀಯರನ್ನು ಆದರಿಸುವ ನೀತಿಯನ್ನು ಬದಲಾಯಿಸಬೇಕೆಂದು ಆಸನ್ವಯದಲ್ಲಿ ರಣವು ಮಾಡಿರುವರು. ಅಲ್ಲದೆ ಜಪಾನೀ ದೇಶಭಕ್ತರ ಗುಂಪೊಂದು ಟೋಕಿಯೋ ಬ್ರಿಟಿಷ್ ರಾಯಭಾರಿಗಳ ಮಂದಿರದ ಮುಂದೆ ಬ್ರಿಟಿಷರ ವಿರುದ್ಧ ಪ್ರದರ್ಶನ ಮಾಡಿದುದಲ್ಲದೆ, 'ಬ್ರಿಟಿಷರ ಏಷ್ಯದಿಂದ ಹಿಂದಿರುಗಿರಿ' ಎಂದು ಬರೆದ ಪಟಗಳನ್ನೂ ಕೆಲ ಕೆಲವರು ಕೆಲ ಕೆಲವು ಕಡೆ ಮೆರವಣಿಗೆ ಮಾಡಿದರು.

ಪೋಲೆಂಡ್.

ಡೇನ್ಜಿಗ್ ಪ್ರಕರಣದಲ್ಲಿ ಹೆಚ್ಚಿಗೆ ಸಮ್ಮಂದಪಟ್ಟಿರುವ ಹತ್ತಿರದ ರಾಷ್ಟ್ರವೇ ಇದು. ಡೇನ್ಜಿಗಿನಲ್ಲಿ ತನ್ನ ಅಧಿಕಾರವು ನಡೆಯಬೇಕೆಂಬ ಹಿರಿಯಾಸೆಯು ಇದಕ್ಕಿದೆ. ಎಂಥಾ ಸಂದಿಗ್ದದಲ್ಲಾದರೂ ಡೇನ್ಜಿಗಿಗಾಗಿ ಅದು ಯುದ್ಧ ಮಾಡಲು ತಯಾರಿದೆ. ಹೆಚ್ಚಾಗಿ ಅದು ಫ್ರಾನ್ಸ್, ಬ್ರಿಟನುಗಳ ಪ್ರೇರಣೆಯಂತೆ ವರ್ತಿಸುತ್ತಿದೆ. ಅದು ಸದ್ಯಕ್ಕೆ ತನ್ನ ಧೋರಣೆಯನ್ನು ಯಾರಿಗೂ ತಿಳಿಸುವ ಬಯಕೆಯಲ್ಲಿಲ್ಲ. ತನ್ನ ಮಿಲಿಟರಿ ಸಿದ್ಧತೆಗಳನ್ನು ಮಾಡಿಕೊಳ್ಳುವದರಲ್ಲಿ ಅದು ಮಗ್ನವಾಗಿದೆ. ಅದು ಬ್ರಿಟನ್-ಫ್ರಾನ್ಸ್‌ಗಳನ್ನು ಕಲ್ಲಿನಂತೆ ಗಟ್ಟಿಯಾಗಿ ನಂಬಿದೆ. ರಷ್ಯಾವಾದರೂ ಅದರೊಡನೆ ಮಾಡಿಕೊಂಡ ಒಪ್ಪಂದದಂತೆ ಬಿಕ್ಕಟ್ಟಿನಲ್ಲಿ ಅದಕ್ಕೆ ಸಹಾಯನೀಡಲು ಸದಾ ತಯಾರಿದೆ. ಅಂತು ಇಂದಿನ ಪ್ರಪಂಚದ ತತ್ಕಾಲಿಕ ಶಾಂತಿಯು ಪೋಲೆಂಡಿನ ಧೋರಣೆಯ ಮೇಲೆ ನಿಂತಿದೆ. ವಿವಿಧ ರಾಷ್ಟ್ರಗಳನ್ನು ನಂಬಿ ರಣಾಂಗಣಕ್ಕೆ ಧುಮುಕಲು ತಯಾರಾಗಿರುವ ಪೋಲೆಂಡಿನ ಸ್ಥಿತಿಯೇನಾಗುವದೆಂದು ನೋಡುವಾ. ಝೆಕೋಸ್ಲೋವಾಕಿಯಾದ ಗತಿಯನ್ನು ಈ ರಾಷ್ಟ್ರಗಳು ಅದಕ್ಕೆ ಕಾಣಿಸಿಯಾವೇ? ಅದೂ ನಿರೀಕ್ಷಣೀಯ.

ಬ್ರಿಟನ್, ಫ್ರಾನ್ಸ್ ಮತ್ತು ರಷ್ಯ.

ಸರ್ವಾಧಿಕಾರಿಗಳು ಇತರ ರಾಜ್ಯಗಳ ಮೇಲೆ ರಾಜ್ಯ ವಿಸ್ತರಣಾ ದಾಹದಿಂದ ಬಿದ್ದು ನಿರಪರಾಧಿಗಳ ರಕ್ತದ ಚೆಲ್ಲಾಟವಾಡುವದನ್ನು ತಡೆ ಕಟ್ಟುವುದಕ್ಕಾಗಿ ಈ ಮೇಲ್ಕಂಡ ತ್ರಿ ರಾಷ್ಟ್ರಗಳು ಒಪ್ಪಂದ ಪ್ರಯತ್ನಕ್ಕೆ ತೊಡಗಿ ಸಮಯ ಬಹಳವಾಯಿತು. ಆದರೆ ಒಪ್ಪಂದವು ಇನ್ನೂ ಕೈಗೂಡಿಲ್ಲ. ಯುರೋಪಿನಲ್ಲಿರುವ ಸ್ವತಂತ್ರ ರಾಷ್ಟ್ರಗಳನ್ನು ಜರ್ಮನಿಯಾಗಲೀ, ಇಟಲಿಯಾಗಲೀ, ಮುತ್ತಿಗೆ ಹಾಕಿದ ಪಕ್ಷ ಅವುಗಳಲ್ಲಿ ಯಾವ ಯಾವುದನ್ನು ರಕ್ಷಿಸುವ ಭಾರವನ್ನು ಯಾವ ಯಾವ ರಾಷ್ಟ್ರಗಳು ಹೊರಬೇಕೆಂಬ ಎಗ್ಗೆ ಇವುಗಳೊಳಗೆ ಸಮರ್ಪಕವಾದ ತೀರ್ಮಾನವಾಗಿಲ್ಲ. ಇದೇ ಇವುಗಳೊಳಗಿನ ಸಂಧಾನದ ಸಾಫಲ್ಯಕ್ಕೆ ತೊಂದರೆಯನ್ನು ತಂದಿದೆ. ದಿನ ಹೋದಂತೆ ಈ ಒಪ್ಪಂದದ ಮಾತು ಕತೆಗಳು ಸಡಿಲವಾಗುತ್ತಾ ಬರುತ್ತವೆ. ಇತ್ತ ಡೇನ್ಜಿಗ್ ಹಾಗೂ ರೊಮೇನಿಯಾದ ಕಡೆ ಗಲಾಟೆ ಹೆಚ್ಚಾಗತೊಡಗಿರುವದರಿಂದ ಈ ರಾಷ್ಟ್ರಗಳ ದೃಷ್ಟಿಯು ಆ ಕಡೆ ಸೆಳೆಯಲ್ಪಟ್ಟು ಕ್ರಮೇಣ ಈ ಒಪ್ಪಂದದ ಯೋಚನೆಯೇ ಮಾಯವಾಗುವದೋ ಎನ್ನುವಂತೆ ಭಾಸವಾಗುತ್ತದೆ.

(6ನೇ ಪುಟದ 3ನೇ ಕಲಂ ನೋಡಿ.)

ಕೊಡಗು

ಜುಲೈ ತಾರೀಕು ೧೪ ನೇ ಶುಕ್ರವಾರ ೧೯೩೯.

ಕಾಂಗ್ರೆಸ್ಸಿನಲ್ಲಿ ಶಿಸ್ತು.

ಯಾವ ಸಂಸ್ಥೆಯಲ್ಲೇ ಆಗಲಿ ಶಿಸ್ತು ಕಾಪಾಡಲ್ಪಡದಿದ್ದರೆ ಅದರ ಕಾರ್ಯಕಲಾಪಗಳು ಸುಸೂತ್ರವಾಗಿ ನಡೆಯಲಾರವು ಎಂಬದನ್ನು ಯಾರೂ ಅಲ್ಲಗಳೆಯಲಾರರು. ಅಂದ ಮೇಲೆ, 45 ಲಕ್ಷಕ್ಕಿಂತ ಹೆಚ್ಚು ಸದಸ್ಯರುಗಳಿದ್ದು, ಇಡೀ ಪ್ರಪಂಚದಲ್ಲೇ ಅತಿ ದೊಡ್ಡ ಸಂಸ್ಥೆಯಾಗಿರುವ ಕಾಂಗ್ರೆಸು ಮಹಾಸಭಾದಲ್ಲಿ ಎಷ್ಟರ ಮಟ್ಟಿಗೆ ಶಿಸ್ತನ್ನು ಪಾಲಿಸಬೇಕೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇಂಥಾದ್ದರಲ್ಲಿ ಶ್ರೀ ಸುಭಾಸ್ ಚಂದ್ರಬೋಸರಂಥ ದೊಡ್ಡ ಮುಂದಾಳು ಕಾಂಗ್ರೆಸ್ಸಿನಲ್ಲಿ ಶಿಸ್ತಿಗೆ ವಿರೋಧವಾಗಿ ವರ್ತಿಸಿದ್ದು ತುಂಬಾ ಶೋಚನೀಯವಾಗಿದೆ.

ಕಳೆದ ತಿಂಗಳ ಅಂತ್ಯದಲ್ಲಿ ಬೊಂಬಾಯಿಯಲ್ಲಿ ಜರುಗಿದ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ಮೀಟಿಂಗಿನಲ್ಲಿ—ಪ್ರಾಂತೀಕ ಕಾಂಗ್ರೆಸು ಕಮಿಟಿಯ ಅನುಮತಿ ಇಲ್ಲದೆ ಯಾವನೊಬ್ಬ ಕಾಂಗ್ರೆಸ್ಸಿನವನೂ ಸತ್ಯಾಗ್ರಹವನ್ನು ಕೈಕೊಳ್ಳಕೂಡದೆಂದೂ, ಕಾಂಗ್ರೆಸು ಮಂತ್ರಿ ಮಂಡಳಿಗಳು ಮತ್ತು ಪ್ರಾಂತೀಕ ಕಾಂಗ್ರೆಸು ಕಮಿಟಿಗಳು ಪರಸ್ಪರ ವಿಶ್ವಾಸದಿಂದ ಸಹಕರಿಸಬೇಕಲ್ಲದೆ, ಮಂತ್ರಿಗಳ ಕಾರುಬಾರುಗಳನ್ನು ಕಾಂಗ್ರೆಸು ಕಮಿಟಿಗಳು ಬಹಿರಂಗವಾಗಿ ಟೀಕಿಸುವುದು ಸರಿಯಲ್ಲವೆಂದೂ—ತೀರ್ಮಾನಗಳಾದವು. ಈ ಗೊತ್ತುವಳಿಗಳಿಗೆ ಸುಭಾಸ್ ಚಂದ್ರಬೋಸ್‌ರವರೂ ಮತ್ತು ಎಡ ಪಕ್ಷದವರೂ ವಿರೋಧಿಸಿದರು.. ದೀರ್ಘ ಚರ್ಚೆ ನಡೆದ ನಂತರ ಈ ಠರಾವುಗಳು ದೊಡ್ಡ ಬಹು ಮತದಿಂದ ಪಾಸಾದವು. ಸುಭಾಸ್ ಬೋಸರು ಕಮಿಟಿ ಮೀಟಿಂಗಿನಲ್ಲಿ ತನ್ನ ವಿರೋಧದಿಂದ ತೃಪ್ತರಾಗದೆ, ಈ ತೀರ್ಮಾನಗಳನ್ನು ನಿಷೇಧಿಸಲು ಇಡೀ ಹಿಂದೂಸ್ಥಾನದಲ್ಲಿ ಈ ತಾ. 9 ರಲ್ಲಿ ಸಾರ್ವಜನಿಕ ಸಭೆಗಳನ್ನು ನಡಿಸಬೇಕೆಂದು ಕಾಂಗ್ರೆಸ್ಸಿನವರಲ್ಲಿ ಅಪ್ಪೀಲು ಮಾಡಿದರು. ಇದನ್ನು ನೋಡಿದ, ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದರವರು—ಹೀಗೆ ನಿಷೇಧ ಮೀಟಿಂಗುಗಳನ್ನು ನಡಿಸಿ, ಕಾಂಗ್ರೆಸ್ಸಿನಲ್ಲಿ ಶಿಸ್ತು ಮುರಿಯುವದು ಸರಿಯಲ್ಲವೆಂದು ಬೋಸರವರಿಗೆ ತಂತೀ ಕೊಟ್ಟರಲ್ಲದೆ, ಕಾಂಗ್ರೆಸು ಕಮಿಟಿಗಳೂ ಮತ್ತು ಅವುಗಳ ಕೆಲಸಗಾರರೂ ಅಖಿಲ ಭಾರತ ಕಾಂಗ್ರೆಸು ಕಮಿಟಿಯ ತೀರ್ಮಾನಗಳಿಗೆ ವಿರುದ್ಧ ವರ್ತಿಸಕೂಡದೆಂದು ಪ್ರಕಟಣೆಯನ್ನು ಹೊರಡಿಸಿದರು. ಈ ಪ್ರಕಟಣೆಯನ್ನು ನೋಡಿದ ಕೂಡಲೆ, ಪಂಡಿತ ಜವಾಹರ್‌ಲಾಲ್ ನೆಹರುರವರೂ—ಬೋಸರ ಈ ವರ್ತನೆಯು ಬಹು ಅಪಾಯಕರ ತೀರ್ಮಾನವನ್ನನುಸರಿಸಿ ನಡೆಯುವುದು ಪ್ರತಿಯೊಬ್ಬ ಕಾಂಗ್ರೆಸು ಕೆಲಸಗಾರನ ಕರ್ತವ್ಯವೆಂದೂ, ಈ ತರಹದ ವರ್ತನೆಯು ಕಾಂಗ್ರೆಸ್ಸಿನ ಚರಿತ್ರೆಯಲ್ಲಿ ಇದೇ ಪ್ರಥಮವೆಂದೂ, ಕಾಂಗ್ರೆಸು ಮಹಾ ಸಂಸ್ಥೆಗೆ ಇದೊಂದು ಸೀದಾ ಪಂಥವಾಗಿದೆಯೆಂದೂ, ಇದನ್ನು ಮುಂದರಿಸಿದರೆ ಕಾಂಗ್ರೆಸ್ಸಿನೊಳಗೆ ಪಂಗಡಗಳುಂಟಾಗಿ ಕಾಂಗ್ರೆಸ್ಸಿನ ಶಕ್ತಿಯು ಕಡಿಮೆಯಾಗುವದೆಂದೂ ಮೊದಲಾಗಿ ಅಭಿಪ್ರಾಯವನ್ನು ಪ್ರಕಟಿಸಿದರು. ಆದರೂ ಕೂಡ ಬೋಸ್‌ರವರೂ, ಅವರ ಅನುಯಾಯಿಗಳೂ ತಾ. 9 ರಲ್ಲಿ ನಿಷೇಧ ಮೀಟಿಂಗಳನ್ನು ನಡಿಸಿದರು. ಹೀಗೆ ಕೆಲವು ಕಾಂಗ್ರೆಸು ಕೆಲಸಗಾರರು ಶಿಸ್ತನ್ನು ಮುರಿದದ್ದರಿಂದ ಅವರ ಮೇಲೆ ಯಾವ ತರಹದ ಕ್ರಮ ಜರುಗಿಸಬೇಕೆಂದು ಬೊಂಬಾಯಿ ಮೊದಲಾದ ಪ್ರಾಂತೀಕ ಕಾಂಗ್ರೆಸು ಕಮಿಟಿಯವರು ಕಾಂಗ್ರೆಸ್ಸಿನ ಅಧ್ಯಕ್ಷರ ಸಲಹೆಯನ್ನು ಕೇಳಿರುವರು. ಇದು ಇಡೀ ಹಿಂದೂಸ್ಥಾನಕ್ಕೆ ಸಂಬಂಧಪಟ್ಟ ವಿಷಯವಾದುದರಿಂದ ಇದನ್ನು ಕುರಿತು ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯವರು ಆಲೋಚಿಸುವರೆಂದು ತಿಳಿಯಬರುತ್ತದೆ.

ಅಖಿಲ ಭಾರತ ಕಾಂಗ್ರೆಸು ಕಮಿಟಿಯು ಕಾಂಗ್ರೆಸು ಸಂಸ್ಥೆಯ ಅತ್ಯುಚ್ಚ ಕಾರ್ಯಕಾರಿ ಮಂಡಳಿಯಾಗಿದೆ. ಅದರ ತೀರ್ಮಾನಗಳನ್ನು ಜಾರಿಗೆ ತರುವುದು ಅದರ ಕೆಳಗಿನ ಎಲ್ಲಾ ಕಾಂಗ್ರೆಸು ಕಮಿಟಿಗಳ ಮತ್ತು ಅವುಗಳ ಕೆಲಸಗಾರರ ಧರ್ಮವಾಗಿದೆ. ಬಹುಮತದ ತೀರ್ಮಾನವನ್ನು ಅಂಗೀಕರಿಸಿ ನಡೆಯುವುದು ಪ್ರಜಾಪ್ರತಿನಿಧಿತ್ವದ ತತ್ವವಾಗಿದೆ. ಅದರ ಬದಲು ಬಹುಮತದ ತೀರ್ಮಾನವನ್ನು ಅಲ್ಪ ಪಕ್ಷದವರು ವಿರೋಧಿಸುತ್ತಾ ಚಳವಳಿ ನಡಿಸಿದರೆ ಅದು ಮೇಲಿನ ತತ್ವಕ್ಕೆ ವಿರುದ್ಧವಾಗುವದು ಮಾತ್ರವಲ್ಲ, ಶಿಸ್ತನ್ನು ಮುರಿದಂತೆಯೂ ಆಗುತ್ತದೆ. ಬಹುಮತದ ತೀರ್ಮಾನಗಳನ್ನು ಅನುಸರಿಸಿ ನಡೆದು ಶಿಸ್ತನ್ನು ಪಾಲಿಸದಿದ್ದರೆ ಯಾವ ಪ್ರಜಾಪ್ರತಿನಿಧಿತ್ವದ ಸಂಸ್ಥೆಯ ಕಾರ್ಯಕಲಾಪಗಳು ಸರಿಯಾಗಿ ನಡೆಯಲಾರವು ಮತ್ತು ಅದರ ಶಕ್ತಿಯೂ ಕುಂದಿ ಹೋಗುವುದು. ಸುಭಾಸ್ ಬೋಸರವರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಶಿಸ್ತನ್ನು ಪಾಲಿಸಲು ಜಾಗರೂಕರಾಗಿದ್ದರು. ಅವರು ಇಂದು; 'ಶಿಸ್ತಿನ ಕ್ರಮವನ್ನು ತನ್ನ ಮೇಲೆ ಜಾರಿಗೆ ತಂದರೆ ತಾನು ಹೆದರುವುದಿಲ್ಲ'ವೆಂದು ಹೇಳುವುದು ಬಹು ವ್ಯಸನಕರ. ಇವರಂಥಾ ಧುರೀಣರ ಬಾಯಿಯಲ್ಲಿ ಈ ಮಾತುಗಳು ಬರ ಬಾರದಿತ್ತು. ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟವರು ಈ ರೀತಿ ವರ್ತಿಸಿದರೆ ಇತರ ಕಾಂಗ್ರೆಸ್ ಮೆಂಬರುಗಳ ಪಾಡೇನು? ಇವರು ಕಾಂಗ್ರೆಸ್ಸಿನ ಅಧ್ಯಕ್ಷಪದವಿಗೆ ರಾಜಿನಾಮೆ ಕೊಟ್ಟಂದಿನಿಂದ ಕಾಂಗ್ರೆಸ್ಸಿನಿಂದ ದೂರವಾಗುವ ಯತ್ನಗಳನ್ನೇ ಮಾಡುತ್ತಿರುವಂತೆ ಕಾಣುತ್ತದೆ. ಇವರ ಅಧ್ಯಕ್ಷತೆಯಲ್ಲಿ ಒಪ್ಪಿಗೆ ಕೊಟ್ಟದ್ದಂಥಾ ಬೊಂಬಾಯಿ ಪಟ್ಟಣದ ನಿಷಾನಿಷೇಧದ ಯೋಜನೆಯನ್ನು ಇವರು ಮೊನ್ನೆ ಖಂಡಿಸಿ ಮಾತಾಡಿದರು. ಈ ತರಹದ ವರ್ತನೆಯು ಕಾಂಗ್ರೆಸ್ ತತ್ವಕ್ಕೆ ಪೂರ್ಣ ವಿರುದ್ಧವಾಗಿದೆ. ಇದರಿಂದ ಕಾಂಗ್ರೆಸ್ಸಿನ ವಿರೋಧ ಪಕ್ಷಗಳ ಶಕ್ತಿಯನ್ನು ಹೆಚ್ಚಿಸಿದಂತಾಗುತ್ತದೆ. ಕಾಂಗ್ರೆಸ್ಸಿನ ಈಗಿನ ಬಲಪಕ್ಷದವರ ಮುಂದಾಳುತನವನ್ನು ಮುರಿದು ಹಾಕುವ ಆತುರತೆಯಿಂದ ಬೋಸರವರು ಹೀಗೆ ವರ್ತಿಸುತ್ತಿರುವರೋ ಏನೋ ತಿಳಿಯದು. ಹೇಗೂ ದೇಶಕ್ಕಾಗಿ ಬಹು ಮಟ್ಟಿಗೆ ತ್ಯಾಗ ಮಾಡಿರುವ ಇವರಂಥಾ ಮುಂದಾಳು ಈ ರೀತಿ ವರ್ತಿಸಿ, ಕಾಂಗ್ರೆಸ್ ಸಂಸ್ಥೆಯ ಶಕ್ತಿಯನ್ನು ಕುಂದಿಸಲು ಯತ್ನಿಸುವದು ದುಃಖದ ವಿಷಯವಾಗಿದೆ. ಇನ್ನಾದರೂ ಇವರು ಬಹುಮತದ ಅಭಿಪ್ರಾಯವನ್ನು ಮನ್ನಿಸಿ, ಕಾಂಗ್ರೆಸ್ ಸಂಸ್ಥೆಯ ಬಲವನ್ನು ವೃದ್ಧಿಗೊಳಿಸುವ ರೀತಿ ವರ್ತಿಸುವಂತೆ ಇವರಿಗೆ ದೇವರು ಬುದ್ಧಿ ಕೊಡಲೆಂದು ಪ್ರಾರ್ಥಿಸುತ್ತೇವೆ.

(5ನೇ ಪುಟದಿಂದ್ದ ಸಾಗಿದೆ.)

ಡಾನ್ಜಿಗ್.

ಇಂದಿನ ಅಂತರರಾಷ್ಟ್ರೀಯ ಬಿಕ್ಕಟ್ಟಿಗೆ ಕಾರಣವಾದ ಈ ಬಂದರದ ಪ್ರಾಮುಖ್ಯತೆಯನ್ನು ಇಲ್ಲಿಷ್ಟು ವಿವರಿಸದೆ ತೀರದು ಇದು ಒಂದು ಪ್ರಾಮುಖ್ಯ ಬಂದರಾಗಿದ್ದು ಪೋಲೆಂಡಿನ ಆರ್ಥಿಕ ಅಭಿವೃದ್ಧಿಗೆ ಸೋಪಾನದಂತಿರುವದು. ಇದು ಸ್ವತಂತ್ರವಾಗಿರುವದರಿಂದ ಪೋಲೆಂಡೂ ತನ್ನ ಶ್ರೇಯೋಭಿವೃದ್ಧಿಯ ದೃಷ್ಟಿಯಿಂದ ಇದನ್ನು ವಶಪಡಿಸಿಕೊಳ್ಳಲು ಹಠ ತೊಟ್ಟಿದೆ. ಇದರ ವಿಚಾರದಲ್ಲಿ ಪೋಲೇಂಡಿನವರ ಮನೋಭಿಪ್ರಾಯವು ಈ ರೀತಿ ಇದೆ. (1) ಈಗಿರುವಂತೆಯೇ ಇನ್ನು ಮುಂದೆಯೂ ಡಾನ್ಜಿಗ್ಗು ಜರ್ಮನಿ ಸರ್ಕಾರದ ಗಡಿಯಿಂದಾಚೆ ಸ್ವತಂತ್ರ ಪ್ರದೇಶವಾಗಿರಬೇಕು. (2) ಇದು ಪೋಲೇಂಡಿನವರಿಗೆ ಸುಂಕ ವಸೂಲು ಮಾಡಲು ಹಕ್ಕಿರುವ ಆವರಣದೊಳಗಿರಬೇಕು. (3) ಡಾನ್ಜಿಗಿನಲ್ಲಿ ಪೋಲೇಂಡಿನವರಿಗಿರುವ ಹಕ್ಕು ಬಾಧ್ಯತೆಗಳು ಯಾವ ಪರ ರಾಷ್ಟ್ರಗಳ ಮೇಲಧಿಕಾರಕ್ಕೆ ಆಧೀನವಾಗಿರತಕ್ಕದ್ದಲ್ಲ. ಮತ್ತು (4) ಡಾನ್ಜಿಗ್ಗಿನ ಪ್ರಜಾ ಸ್ತೋಮಕ್ಕೆ ಅವರವರ ಆಚಾರ ವಿಚಾರಗಳನ್ನು ಅನುಸರಿಸಲು ಮೊದಲಿನಂತೆಯೇ ಸ್ವಾತಂತ್ರ್ಯವಿರಬೇಕು. ಆದರೆ ಜರ್ಮನಿಯು ಇದಕ್ಕೆ ವ್ಯತಿರಿಕ್ತವಾಗಿ ಶರತುಗಳನ್ನಿಟ್ಟಿದೆ. ನಾಝಿಗಳ ಪ್ರಚಾರವು ಮೇರೆ ಮೀರಿ ನಡೆಯುತ್ತಿದೆ. ಡಾನ್ಜಿಗ್ ಸಿನೇಟ್ ಸಭೆಯು ಇದನ್ನು ವಿರೋಧಿಸಿ ಠರಾವುಗಳನ್ನು ಮಾಡಿರುವದು. ಪರಿಸ್ಥಿತಿ ನೋಡಬೇಕು.

IN THE COURT OF THE DISTRICT JUDGE,
Civil and Military Station
Bangalore.

O. P. No. 37 of 1939.

In the matter of th[e] winding of the Planter[s'] Produce Marketing Co. Ltd Bangalore.

M. S. Ayappa,
Managing Director,
Planters' Marketing Co. Ltd,
Bangalore, residing at 3,
Dispensary Road, Bangalore ...
Petitione[r]

NOTICE.

Notice is hereby give[n] that the Petitioner abo[ve] named has filed the abov[e] petition for winding up the Planters' Produce Marketing Co. Ltd., Bangalore, and the said petition is posted for hearing to 31-7-1939 at 11 a. m. Any person interested in opposing the same will have to do so either in person or by pleader on the said date.

P. S. D'Souza, B.A., B.L.,
Advocate for Petitioner,
26 Cubbon Road,
10-7-1939 Bangalore.

ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ,
ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್,
ಬೆಂಗಳೂರು.

ಓ. ಪಿ. ನಂ. 1939ರದ್ದು.

ಪ್ಲಾಂಟರ್ಸ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಕಂಪೆನಿ ಲಿಮಿಟೆಡ, ಬೆಂಗಳೂರು ಇದನ್ನು ಒಡೆದು ಹಾಕುವ ಉದ್ದಿಶ್ಯ.
ಅರ್ಜಿದಾರರು:—ಎಂ. ಎಸ್. ಐಯ್ಯಪ್ಪ ಮೇನೇಜಿಂಗ್ ಡೈರೆಕ್ಟರು, ಪ್ಲಾಂಟರ್ಸ್ ಮಾರ್ಕೆಟಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು. ವಾಸವಿರುವ ಸ್ಥಳ-3. ಡಿಸ್ಪನ್ಸರಿ ರೋಡ್, ಬೆಂಗಳೂರು.

ನೋಟೀಸು.

ಮೇಲ್ಕಂಡ ಅರ್ಜದಾರರು, ಪ್ಲಾಂಟರ್ಸ್ ಪ್ರಾಡ್ಯೂಸ್ ಮಾರ್ಕೆಟಿಂಗ್ ಕಂಪೆನಿ ಲಿಮಿಟೆಡ್, ಇದನ್ನು ಒಡೆಯಬೇಕೆಂಬ ಬಗ್ಗೆ ಮೇಲ್ಕಂಡ ಅರ್ಜಿಯನ್ನು ದಾಸ್ತು ಮಾಡಿರುವರು. ಇದರ ವಿಚಾರಣೆ ತಾ. 31-7-39ನೇ ಸೋಮವಾರ 11 ಗಂಟೆಗೆ ನಡೆಯುವದು. ಈ ಬಗ್ಗೆ ವಿರೋಧಾಭಿಪ್ರಾಯವಿರುವರು ತಾವೇ ಖುದ್ದಾಗಿಯಾಗಲೀ, ಲಾಯರು ಮುಖಾಂತರವಾಗಲೀ ಹಾಗೇ ಮಾಡಬೇಕೆಂದು ಈ ಮೂಲಕ ತಿಳಿಸಿದೆ.

ಪಿ. ಎಸ್. ಡಿಸೋಜ,
ಬಿ. ಎ. ಬಿ. ಎಲ್.
(ಅರ್ಜಿದಾರರಿಗಾಗಿ)
26. ಕಬ್ಬನ್ ರೋಡ್,
ಬೆಂಗಳೂರು.
ತಾ. 10-7-39.

ವರ್ತಮಾನ ಸಂಗ್ರಹ.

ಒಳದೇಶ.

ಇಂಡಿಯಾಸರಕಾರದಿಂದ ಕಳುಹಿಸಲ್ಪಟ್ಟಿದ್ದ ವ್ಯವಸಾಯ ನಿಪುಣರಾದ ಶ್ರೀ ಯಜ್ಞನಾರಾಯಣ ಅಯ್ಯರ್‌ರವರ ವರದಿಯನ್ನು ಚೀಫ್ ಕಮಿಷನರವರೊಂದಿಗೆ ಚರ್ಚಿಸುವ ಉದ್ದೇಶ್ಯ ಕಮಿಷನರು ತಾ. 13 ರಲ್ಲಿ ಬೆಂಗಳೂರಿಗೆ ಹೋಗಿರುವರು.

ಫಾರೆಸ್ಟರಾಗಿದ್ದ ಶ್ರೀ ಕುಂಬೆರ ಸೋಮಯ್ಯನವರು ಮದ್ರಾಸು ಫಾರೆಸ್ಟ್ ರೇಂಜರ್ಸ್ ಕಾಲೇಜಿನಲ್ಲಿ ತಮ್ಮ ಎರಡು ವರ್ಷದ ತರಬೇತನ್ನು ಮುಗಿಸಿಕೊಂಡು ಪ್ರಥಮ ತರಗತಿಯಲ್ಲಿ ಉತ್ತೀರ್ಣರಾಗಿರುವರಲ್ಲದೆ 'ದಿ ಬೆಸ್ಟ್ ಅವುಟ್ ಡೋರ್ ರೇಂಜರ್ಸ್' ಇನಾಮನ್ನು ಪಡೆದಿರುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಮಡಿಕೇರಿ.

ಇಲ್ಲಿಯ ಹೈಸ್ಕೂಲು ಮಳೆಗಾಲ ರಜಕ್ಕಾಗಿ ಈ ತಾ. 14 ರಿಂದ ಬರುವ ತಿಂಗಳ 7 ರ ವರೆಗೆ ಮುಚ್ಚಲ್ಪಟ್ಟಿದೆ.

ತಾರೀಕು 8 ರಿಂದ 14 ರ ವರೆಗೆ ಇಲ್ಲಿ 13 ಇಂಚು 88 ಸೆಂಟು ಮಳೆಯಾಗಿದೆ. ಜೋರಾಗಿ ಮಳೆ ಬಿದ್ದ ತಾರೀಕು 12 ರಲ್ಲಿ 3 ಇಂಚು 60 ಸೆಂಟಾಗಿತ್ತು.

ಇಲ್ಲಿಯ ಸಹಕಾರಿ ಸಂಘಗಳ ಹಂಗಾಮಿ ಇನ್ಸ್‌ಪೆಕ್ಟರಾಗಿರುವ ಶ್ರೀ ಮುಕ್ಕಾರ ಮಂಜಣ್ಣನವರು ಮದ್ರಾಸ್ ಗವರ್ನ್‌ಮೆಂಟ್ ಟೆಕ್ನಿಕಲ್ ಪರೀಕ್ಷೆಯ ಲೋವರ್ ಗ್ರೇಡ್ ಬುಕ್ ಕೀಪಿಂಗ್‌ನಲ್ಲಿ ತೇರ್ಗಡೆಯಾಗಿರುವರೆಂದು ತಿಳಿಯ ಬರುತ್ತದೆ.

ಕೊಡವ ವಿದ್ಯಾನಿಧಿ ಸಂಘದ ವಾರ್ಷಿಕ ಮಹಾಸಭೆಯು ಆಗೊಸ್ಟ್ ತಾ. 2 ನೇ ಬುಧವಾರ ಸಾಯಂಕಾಲ 5 ಗಂಟೆಗೆ ಇಲ್ಲಿಯ ಸಬ್ ಜಡ್ಜಿಯವರ ಕೋರ್ಟು ಕೊಠಡಿಯಲ್ಲಿ ನಡೆಯುವದೆಂದೂ, ಸದಸ್ಯರೆಲ್ಲರೂ ಅದಕ್ಕೆ ಹಾಜರಾಗಬೇಕೆಂದೂ, ವಾರ್ಷಿಕ ಚಂದಾವನ್ನು ಎಲ್ಲರೂ ಕಳುಹಿಸಿ ಕೊಡಬೇಕೆಂದೂ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಪೊನ್ನಂಪೇಟೆ.

ಪೊನ್ನಂಪೇಟೆನಾಡು ಅರ್ವತೊಕ್ಕಲು ಗ್ರಾಮದ ಶ್ರೀ ಮನೆಯಂಡ ಜಿ. ಪೂವಯ್ಯನವರು ತಾ. 8 ರಲ್ಲಿ ಶಿವಾಧೀನರಾದರೆಂದು ತಿಳಿಸಲು ವ್ಯಸನಪಡುತ್ತೇವೆ.

ಹಿಂದೂದೇಶ.

ಬೊಂಬಾಯಿ ನಗರದಲ್ಲಿ 24 ಗಂಟೆಗಳಲ್ಲಿ 12 ಇಂಚು ಮಳೆ! ಕೆಲವು ಬೀದಿಗಳಲ್ಲಿ ನೀರು ತುಂಬಿ ವಹಿವಾಟಕ್ಕೆ ತೊಂದರೆಯಾಗಿತ್ತು.

ಮದ್ರಾಸಿನ ಹೊಸ ಗವರ್ನರರಾದ ಮಿ. ಆರ್ಥರ್ ಹೋಪರಿಗೆ ಚಕ್ರವರ್ತಿಗಳು ಭೇಟಿ ಕೊಟ್ಟು ಜಿ. ಸಿ. ಐ. ಇ. ಬಿರುದಿನಿಂದ ಬಹುಮಾನಿಸಿದರು.

ಶ್ರೀ. ಸುಭಾಸ್ ಚಂದ್ರಬೋಸರು ದಕ್ಷಿಣ ಇಂಡಿಯಾದಲ್ಲಿನ ತಮ್ಮ ಪ್ರವಾಸವನ್ನು ನಡೆಸುವಾಗ ಮೈಸೂರಿಗೂ ದಯಮಾಡಿಸಬೇಕೆಂದು ಸ್ಟೇಟ್ ಕಾಂಗ್ರೆಸಿನವರು ಆಹ್ವಾನಿಸಿರುವರೆಂದು ತಿಳಿದು ಬಂದಿದೆ.

ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಸಂಚಾರಾರ್ಥವಾಗಿ ಹೊರಟಿರುವ ಶ್ರೀಮತಿ ಕಮಲಾ ದೇವಿಯವರು ಕೈರೋ ನಗರದಲ್ಲಿ ವಾಫ್ದ್ ಪಕ್ಷದ ಧುರೀಣರಿಂದ ಅಭೂತಪೂರ್ವ ಸ್ವಾಗತವನ್ನು ಪಡೆದು, ಅಲ್ಲಿಯ ಅನೇಕ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ

ಮುಂದೆ ಲಂಡನಿಗೆ ಪ್ರಯಾಣ ಮಾಡಿದರು. ಲಂಡನಿನಲ್ಲಿ ಸೇರಿದ ಎರಡು ಬಾರಿ ಸಭೆಗಳಲ್ಲಿ 'ಪ್ರಜಾಪ್ರಭುತ್ವ ಮತ್ತು ಬಾರತಸ್ತ್ರೀ' ಎಂಬ ವಿಷಯದಲ್ಲಿ ಭಾಷಣಗಳನ್ನು ಮಾಡಿದರು.

ಬೊಂಬಾಯಿ ನಗರದಲ್ಲಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆಗಳ ಕಟ್ಟಡಗಳಿಗಾಗಿ ಶೇಟ್ ಆನಂದಿಲಾಲ್ ಪೊದಾರ ಎಂಬವರು 3½ ಲಕ್ಷ ರೂಪಾಯಿಗಳನ್ನು ಆ ಸರ್ಕಾರಕ್ಕೆ ಒಪ್ಪಿಸಿದ್ದಾರೆ.

ಇತ್ತೀಚಿನ ವರೆಗೆ ಇಂಡಿಯಾ ಸರಕಾರದ ವಿದ್ಯಾ, ಆರೋಗ್ಯ, ಮುಂತಾದ ಶಾಖೆಯ ಜಾಯಿಂಟ್ ಸೆಕ್ರೆಟರಿಗಳಾಗಿದ್ದ ಶ್ರೀ. ಸಿ. ಡಿ. ದೇಶಮುಖ್ ಐ. ಸಿ. ಎಸ್. ರವರು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಒಬ್ಬ ಡೈರೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ.

ಬರ್ಮಾದಲ್ಲಿ ಮರಣ ದಂಡನೆಯನ್ನು ತೆಗೆದು ಹಾಕಲು ಅಲ್ಲಿಯ ಮಂತ್ರಿ ಮಂಡಲವು ಯೋಚಿಸುತ್ತಿರುವದು. ಇದಕ್ಕಾಗಿ ಹೈಕೋರ್ಟು ಜಡ್ಜಿಗಳು, ಮ್ಯಾಜಿಸ್ಟ್ರೇಟರು ಮುಂತಾದವರ ಅಭಿಪ್ರಾಯಗಳನ್ನು ಬರಮಾಡಿಕೊಳ್ಳುತ್ತಿದ್ದಾರೆಂದು ತಿಳಿಯಬಂದಿದೆ.

ನಂಜನಗೂಡು ತಾಲೋಕು ಹುಲ್ಲಹಳ್ಳಿಯ ಬಳಿ ಕಪಿನಿ ನದಿಗೆ ಒಂದು ಅಣೆಕಟ್ಟು ಹಾಕಬೇಕೆಂಬ ಯೋಜನೆಯನ್ನು ಮೈಸೂರು ಸರ್ಕಾರದವರು ಮಾಡುತ್ತಿದ್ದಾರೆ. ಇದಕ್ಕೆ 53 ಲಕ್ಷ ರೂ. ಖರ್ಚು ತಗಲುತ್ತದೆಂದು ಊಹಿಸಲಾಗಿದೆ. ಇದಕ್ಕೆ ಮದ್ರಾಸು ಸರ್ಕಾರದವರ ಆಜ್ಞೆ ಬೇಕು.

ಪಾಲ್ಘಾಟಿನ ತಾಲೋಕು ಕಾಂಗ್ರೆಸ್ ಕಮಿಟಿಯು ಒಂದು ಮೀಟಿಂಗು ಅಲ್ಲಿ ಜರುಗಿ, ಅದರಲ್ಲಿ ಮದ್ರಾಸ್ ಸರ್ಕಾರವು ಮಲಬಾರಿಗೆ ಇನ್ನು ಹೆಚ್ಚಿಗೆ ರಿವರ್ಸ್ ಮಾಡಿ ಕೊಡಲಾಗುವದಿಲ್ಲವೆಂದು ತಿಳಿಸಿದ ಕುರಿತು ಆ ಸರ್ಕಾರದ ವರ್ತನೆಯನ್ನು ಖಂಡಿಸುವದೇ ಅಲ್ಲದೆ, ಡಿ. ಬೋರ್ಡಿನ ಯಾವತ್ತು ಮೆಂಬರರೂ, ಮಲಬಾರಿನ ನ್ಯಾಯವಿಧಾಯಕ ಸಭೆಗಳ ಸಕಲ ಸದಸ್ಯರೂ ರಾಜಿನಾಮೆ ಕೊಡಬೇಕೆಂದೂ ಹಾರೈಸಿದೆ.

ಜುಲಾಯಿ ತಾ. 9ನ್ನು ಎ. ಐ. ಸಿ. ಸಿ. ನಿರ್ಣಯದ ನಿಷೇಧಾರ್ಥವಾಗಿ ಆಚರಿಸಬೇಕೆಂದು ಶ್ರೀ ಸುಭಾಸರೂ ಎಡಪಕ್ಷೀಯರೂ ನಿರ್ಣಯಿಸಿರುವದನ್ನು ನಿಷೇಧಿಸಿ ಪಂಡಿತ ನೆಹರುಗಳು ಅದು ಕಾಂಗ್ರೆ

(ಫಾರ್ವರ್ಡ್ ಬ್ಲಾಕಿನ ಮುಖಂಡರು)

ಸಿನೊಡನೇ ಹೋರಾಡಿದಂತಾಗುವದೆಂದೂ ಕಾಂಗ್ರೆಸ್ ಹಿತಕ್ಕೆ ಧಕ್ಕೆ ತರುವ ಅನ್ಯಾಯಕರ ಸೂಚನೆಯೆಂದೂ, ತೀರಾ ಸಂಕುಚಿತ ದೃಷ್ಟಿಯ ಪರಿಣಾಮವೆಂದೂ ಖಂಡನೆಗಳಾದ ಹೇಳಿಕೆಯೊಂದನ್ನಿತ್ತಿದ್ದಾರೆ.

ಮಹಾತ್ಮಾಗಾಂಧಿಯವರು ತಮ್ಮ ಕಾರ್ಯದರ್ಶಿಯಾದ ಶ್ರೀ. ಮಹದೇವ ದೇಸಾಯಿಯವರೊಡನೆ ತಾ. 7 ನೇ ಶುಕ್ರವಾರ ಅಬ್ಬಟಾಬಾದ್ ನಗರವನ್ನು ತಲಪಿದರು. ಟಾಕ್ಸಿಲ್ಲಾ ನಗರದಲ್ಲಿ ಖಾನ ಅಬ್ದುಲ್ ಗಫಾರ್ ಖಾನ್‌ರವರು ಮಹಾತ್ಮಾಜೀಯವರಿಗೆ ಹೂವಿನ ಹಾರವನ್ನು ಹಾಕಿ ಅವರನ್ನು ಅಲ್ಲಿಂದ ಮೋಟಾರಿನಲ್ಲಿ ಅಬ್ಬಟಾಬಾದಿಗೆ ಕರೆದುಕೊಂಡು ಹೋದರು. ಮಹಾತ್ಮಾಗಾಂಧಿಯವರು ಕೇಂದ್ರ ನ್ಯಾಯವಿಧಾಯಕ ಸಭೆಯಲ್ಲಿ ಗಡಿನಾಡಿನ ಸದಸ್ಯರಾಗಿರುವ ರಾಯ್ ಸಾಹೇಬ್ ಪರಮಾನಂದ ರವರ ಗೃಹದಲ್ಲಿ ಇಳಿದಿರುತ್ತಾರೆ. ... ಕೆಲವು ದಿನಗಳ ವರೆಗೆ ಅಲ್ಲೇ ಇರುವರೆಂದೂ, ಅಲ್ಲಿನ ಹವಾಗುಣವು ಅವರ ಆರೋಗ್ಯಕ್ಕೆ ಅನುಕೂಲವಾಗಿದ್ದಲ್ಲಿ ಇನ್ನೂ ಸ್ವಲ್ಪ ಕಾಲ ಅಲ್ಲೇ ವಿಶ್ರಮಿಸಿಕೊಳ್ಳುವರೆಂದೂ ಹೇಳಲಾಗಿದೆ.

ಬ್ರಿಟಿಷ್ ಸರಹದ್ದಿನಿಂದಾಚೆ ವಾಯವ್ಯ ಸರಹದ್ದಿನಲ್ಲಿರುವ ಕೈರಾ ಎಂಬ ಗ್ರಾಮದಲ್ಲಿ ವಾಸವಾಗಿರುವ ಕೆಲವು ಮಂದಿ ಒಂದು ದಿನ ಬೆಟ್ಟಗುಡ್ಡಗಳ ಮೇಲೆ ಹೋಗುತ್ತಿದ್ದಾಗ ಮೂರು ಭಾರಿ ಸರ್ಪಗಳನ್ನು ಕಂಡು ಅವುಗಳ ಪೈಕಿ ಎರಡನ್ನು ಕೊಂದರು. ಮೂರನೆಯದು ತಪ್ಪಿಸಿಕೊಂಡು ಹೋಯಿತು. ಮಾರನೆಯ ದಿನ ಆ ಗ್ರಾಮದಲ್ಲಿ ಅನೇಕ ಕಡೆ ಅದೇ ಜಾತಿಯ ಸರ್ಪಗಳು ಕಾಣಿಸಿಕೊಂಡವು. ಆ ಗ್ರಾಮಸ್ಥರೆಲ್ಲರೂ ಸೇರಿ ಅವುಗಳನ್ನು ಬಡಿದು ಕೊಂದರು. ಮೂರನೆಯ ದಿನ ಇನ್ನೂ ಅಧಿಕವಾಗಿ ಸರ್ಪಗಳು ಬಂದು ಗ್ರಾಮದಲ್ಲೆಲ್ಲಾ ತುಂಬಿಕೊಂಡವು. ಗ್ರಾಮಸ್ಥರುಗಳು ಬಂದೂಕಗಳಿಂದ ಆ ಪೈಕಿ ಅನೇಕ ಹಾವುಗಳನ್ನು ಹೊಡೆದು ಕೊಂದರು. ಕೆಲವು ತಪ್ಪಿಸಿಕೊಂಡು ಹೋದವು. ಈಗ ಆ ಗ್ರಾಮದ ಸುತ್ತಲೂ ಈ ವಿಷಸರ್ಪಗಳು ನೆಲೆಸಿಕೊಂಡಿರುವವೆಂದೂ, ಆ ಗ್ರಾಮದ ಬಳಿ ಬೆಟ್ಟಗುಡ್ಡಗಳಲ್ಲಿ ಓಡಾಡುವವರನ್ನು ಕಚ್ಚಿ ಕಾಡುತ್ತಿವೆಯೆಂದೂ ಹೇಳಲಾಗಿದೆ.

ಚರಿತ್ರ ಪ್ರಸಿದ್ಧರಾದ ಸುರಾಜ್-ಉದ್ದೌಲರವರ ದಿನವು ಕಳೆದ ವಾರ ಹಿಂದೂಸ್ಥಾನದ ನಾನಾ ಭಾಗಗಳಲ್ಲಿ ಆಚರಿಸಲ್ಪಟ್ಟಿತು. ಆ ಸಮಯದಲ್ಲಿ ಢಾಕಾ ನಗರದಲ್ಲಿ ನಡೆದ ಸಭೆಯೊಂದರಲ್ಲಿ ಆ ಜಿಲ್ಲೆಯ ಮುಸ್ಲಿಮ್ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಯು ಮಾತನಾಡುತ್ತಾ-ಕಲ್ಕತ್ತಾ ನಗರದಲ್ಲಿರುವ ಕತ್ತಲೆ ಕೋಣೆಯ ಸ್ಮಾರಕವನ್ನು ಒಂದು ತಿಂಗಳೊಳಗೆ ತೆಗೆಯದ ಹೋದಲ್ಲಿ ಅದಕ್ಕಾಗಿ ಪ್ರಬಲವಾದ ಚಳುವಳಿಯೊಂದು ಪ್ರಾರಂಭವಾಗುವದೆಂದೂ ತಾವು ಉಪವಾಸದ ಮುಷ್ಕರವನ್ನು ಹಿಡಿಯುವರೆಂದೂ ಹೇಳಿದರು. ಖಾನ್ ಬಹದ್ದೂರ್ ಕೆ. ಎಂ. ಇಸ್ಮಾಯಿಲ್‌ರವರು ಮಾತನಾಡುತ್ತಾ-ಕತ್ತಲೆ ಕೋಣೆಯ ದುರಂತ ನಡೆಯಿತೆಂಬುದು ಬರೀ ಕಟ್ಟುಕಥೆಯೆಂಬುದು ನಿಸ್ಸಂದೇಹವಾದ ರೀತಿಯಲ್ಲಿ ತೀರ್ಮಾನವಾಗಿದೆ. ಆಧಾರವಿಲ್ಲದ ಈ ಕಥೆಯ ಜ್ಞಾಪಕ ಸೂಚಕವಾದ ಈ ಸ್ಮಾರಕವು ಇನ್ನೂ ಇರುವುದು ಅವಮಾನಕರವಾದುದು. ಅದಕ್ಕಾಗಿ ತೀವ್ರವಾದ ಚಳುವಳಿಯೊಂದನ್ನು ಹೂಡಲೇಬೇಕು. ಅದು ಎಷ್ಟು ಜಾಗ್ರತೆ ಪ್ರಾರಂಭವಾದರೆ ಅಷ್ಟು ಒಳ್ಳೆಯದು ಎಂದು ಹೇಳಿದರು.

ಬ್ರಿಟನಿನಲ್ಲಿಯ ಇಂಟರ್ ಪ್ಲಾನೆಟರಿ ಸಂಘದವರು 15 ವರ್ಷಗಳ ಕಾಲ ಕಷ್ಟಪಟ್ಟು 2½ ಲಕ್ಷ ಪೌಂಡುಗಳು ವ್ಯಯ ಮಾಡಿ ಒಂದು ಯಂತ್ರವನ್ನು ಕಂಡು ಹಿಡಿದಿರುವರು. ಅದರ ಮೂಲಕ ಮೂರು ಮಂದಿ ಚಂದ್ರಲೋಕದ ಯಾತ್ರೆಯನ್ನು ಮಾಡಿ ಮೂರು ವಾರಗಳಲ್ಲಿ ಭೂಲೋಕಕ್ಕೆ ಹಿಂತಿರುಗಬಹುದು. ಯಂತ್ರವು ಚಂದ್ರಲೋಕದಲ್ಲಿ 15 ದಿನಗಳು ಇರುತ್ತದೆ.

ಸ್ಪೈನ್ ದೇಶದ ಅಂತರ್ಯುದ್ಧ ನಡೆಯುತ್ತಿದ್ದ ಸಮಯದಲ್ಲಿ ಆ ದೇಶದಿಂದ ಓಡಿಹೋದ ಜನರ ಪೈಕಿ ಸುಮಾರು 3,50,000 ಮಂದಿ ಸ್ಪೈನ್ ದೇಶದ ಜನರು ಇನ್ನೂ ಫ್ರಾನ್ಸಿನಲ್ಲೇ ಇರುತ್ತಾರೆ. ಇವರ ಸಂರಕ್ಷಣಾರ್ಥವಾಗಿ ಫ್ರೆಂಚ್ ಸರ್ಕಾರದವರಿಗೆ ದಿನವೊಂದಕ್ಕೆ 34,000 ಪೌಂಡುಗಳು ಖರ್ಚಾಗುತ್ತಿವೆಯೆಂದು ಹೇಳಲಾಗಿದೆ.

ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗು.

ತಾರೀಕು 8-7-39 ರಲ್ಲಿ ಮಡಿಕೇರಿ ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆದ ಕೊಡಗು ಜಿಲ್ಲಾ ಕಾಂಗ್ರೆಸ್ ಕಮಿಟಿ ಮೀಟಿಂಗಿನ ನಡವಳಿಕೆ.

ಇಪ್ಪತ್ತಾರು ಮೆಂಬರುಗಳ ಪೈಕಿ 18 ಜನರು ಹಾಜರಿದ್ದರು.

ಕಳೆದ ಮೀಟಿಂಗಿನ ನಡವಳಿಕೆಯನ್ನು ಓದಿ ಅಂಗೀಕರಿಸಿದ ಮೇಲೆ, ಗತ ವರ್ಷದಲ್ಲಿ ಕಾಂಗ್ರೆಸ್ ಸದಸ್ಯರನ್ನು ಸೇರಿಸಿದ ರಶೀತಿ ಪುಸ್ತಕಗಳು ಸಿಕ್ಕದ್ದರಿಂದ ಸಬ್ ಕಮಿಟಿಯವರಿಗೆ ಲೆಕ್ಕ ನೋಡಲು ಅನಾನುಕೂಲವಾಯಿತೆಂಬ ಅವರ ಹೇಳಿಕೆಯಂತೆ ಇನ್ನಾದರೂ ಒಡನೆ ಪುಸ್ತಕಗಳನ್ನು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯಿಂದ ತರಿಸಿಕೊಂಡು ಒಡನೆ ಲೆಕ್ಕಗಳನ್ನು ಸರಿಪಡಿಸಿ ಇನ್ನೊಂದು ಮೀಟಿಂಗಿಗೆ ವರದಿ ಮಾಡುವಂತೆ ಉಪಕಮಿಟಿಯವರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

ಹಾಲಿ ವರ್ಷ ಕಾಂಗ್ರೆಸ್ ಸದಸ್ಯರನ್ನು ಸೇರಿಸಲಿಕ್ಕಾಗಿ ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯಿಂದ ಬಂದ 50 ರಶೀತಿ ಪುಸ್ತಕಗಳನ್ನು ಈ ಕೆಳಗೆ ನಮೂದಿಸಿದ ರೀತಿ ಬಟವಾಡೆ ಮಾಡಲು ತೀರ್ಮಾನವಾಯಿತು.

(1) ಸೋಮವಾರಪೇಟೆ ತಾಲೋಕಿಗೆ 5, (2) ಪಾಡಿನಾಲ್ಕುನಾಡು ತಾಲೋಕಿಗೆ 5, (3) ಎಡೆನಾಲ್ಕುನಾಡಿಗೆ 13, (4) ಕಿಗ್ಗಟ್ಟುನಾಡಿಗೆ 14, (5) ಮಡಿಕೇರಿನಾಡಿಗೆ 13 ಪುಸ್ತಕಗಳು.

ಪುಸ್ತಕಗಳು ಸಾಲದ್ದರಿಂದ ಇನ್ನೂ 25 ಪುಸ್ತಕಗಳನ್ನು ತರಿಸಲು ತೀರ್ಮಾನವಾಯಿತು.

ಒಂಭತ್ತು ಸದಸ್ಯರಿಂದ ಕೂಡಿದ ಒಂದು ಪಾರ್ಲಿಮೆಂಟರಿ ಬೋರ್ಡನ್ನು ರಚಿಸುವಂತೆಯೂ. ಇದರ ಸಭೆ ನಡೆಸಲು ಕೋರಂಗೆ ಕಮ್ಮಿ 5 ಜನರಿರಬೇಕೆಂದೂ ಈ ಸಭೆಯು ಕೌನ್ಸಿಲು, ಡಿ. ಬೋರ್ಡು, ಮುನಿಸಿಪಾಲಿಟಿ ಮತ್ತು ಇತರ ಎಲ್ಲಾ ಸಾರ್ವಜನಿಕ ಸಂಸ್ಥೆಗಳಿಗಾಗಿ ಚುನಾವಣಾ ಕಾರ್ಯಭಾರವನ್ನು ನಡೆಸುವ, ಈ ಸಂಸ್ಥೆಗಳಲ್ಲಿ ಕಾಂಗ್ರೆಸು ಮೆಂಬರುಗಳ ಕೆಲಸ ಕಾರ್ಯಗಳ ಮೇಲ್ವಿಚಾರಣೆ ಮಾಡುವ ಇವೇ ಮೊದಲಾದ ಕಾರ್ಯಕ್ರಮಗಳನ್ನು ಮಾಡುವದೆಂದು ನಿರ್ಧರಿಸಲಾಯಿತು.

ಪಾರ್ಲಿಮೆಂಟರಿ ಬೋರ್ಡಿನ ಸದಸ್ಯರಾಗಿ ಚುನಾಯಿಸಲು ಶ್ರೀ ಮಾಚೆಟ್ಟಿರ ಮುತ್ತಣ್ಣನವರು, ಶ್ರೀ ಗಳಾದ 1. ಪಿ. ಐ. ಬೆಳ್ಯಪ್ಪ, 2. ಕೆ. ಸಿ. ಕರುಂಬಯ್ಯ, 3. ಬಿ. ಯಂ. ಕಾರ್ಯಪ್ಪ, 4. ಐ. ಪಿ. ಕಾರ್ಯಪ್ಪ, 5. ಹೆಚ್. ಯಂ. ಪುಷ್ಪಣ್ಣ, 6. ಎಸ್. ಎನ್. ರಾಮಶೆಟ್ಟಿ, 7. ಪಿ. ಜಿ. ಮುದ್ದಮ್ಮಯ್ಯ, 8. ಜಿ. ಎ. ಮಾದಪ್ಪ ಮತ್ತು 9. ಕಾಳೇಂಗಡ ಚಿಣ್ಣಪ್ಪ ಇವರುಗಳ ಹೆಸರುಗಳನ್ನು ಸೂಚಿಸಿದರು. ಶ್ರೀ ಜನ್ಮಾಡ ಮಾದಪ್ಪನವರು ಅನುಮೋದಿಸಿದರು.

ಶ್ರೀ ಪಿ. ಜಿ. ಮುದ್ದಮ್ಮಯ್ಯನವರು ಶ್ರೀ ಗಳಾದ ಸಿ. ಯಂ. ಪೂಣಚ್ಚ ಮತ್ತು ಬಿ. ಕೆ. ನಂಜುಂಡೇಶ್ವರ ಇವರುಗಳ ಹೆಸರುಗಳನ್ನು ಸೇರಿಸಬೇಕೆಂದು ಸೂಚಿಸಿದರು. ಆದರೆ ಇವರಿಬ್ಬರೂ ತನಗೆ ಅನಾನುಕೂಲವೆಂದು ವಾಪ್ಸು ತೆಗೆದುಕೊಂಡದ್ದರಿಂದ ಶ್ರೀ ಮುತ್ತಣ್ಣನವರು ಸೂಚಿಸಿದ 9 ಹೆಸರುಗಳು ಅಂಗೀಕೃತವಾದವು.

ಕೊಡಗಿನ ಭವಿಷ್ಯತ್ತಿನ ವಿಷಯವನ್ನು ಚರ್ಚಿಸಲಾಗಿ, ಇದು ಮಹತ್ವರವಾದ ವಿಷಯವಾದ ಕಾರಣ, ಈ ವಿಷಯವನ್ನು ಕೂಲಂಕುಶವಾಗಿ ವಿವೇಚಿಸುವ ಬಗ್ಗೆ ತಾ. 22-7-39 ರಲ್ಲಿ ವೀರಾಜಪೇಟೆಯಲ್ಲಿ ಒಂದು ಮೀಟಿಂಗಿಡುವಂತೆಯೂ, ಆ ದಿನ ಇದೊಂದೇ ಠರಾವನ್ನು ತರ್ಗಿಸುವಂತೆಯೂ, ಗೈರಾಜರಾದ ಮೆಂಬರುಗಳಿಗೆ ಮಾತ್ರ ನೋಟೀಸು ಕೊಡುವಂತೆಯೂ ತೀರ್ಮಾನವಾಯಿತು.

ಶ್ರೀ ಪೂಜಾರಿ ರಾಮಪ್ಪನವರು ತಾವು ನಡೆಸುತ್ತಿರುವ ಮೇಕೇರಿ ಶಾಲೆಗೆ ಕಾಂಗ್ರೆಸಿನಿಂದ ಧನ ಸಹಾಯ ಮಾಡಬೇಕೆಂದು ಬರೆಕೊಂಡ ಪತ್ರವನ್ನು ದೀರ್ಘ ಚರ್ಚೆಯ ನಂತರ ವಾಪಾಸು ತೆಗೆದುಕೊಂಡರು.

ಶ್ರೀಯುತ ಬಿದ್ದಂಡ ಐ. ಬೋಪಯ್ಯನವರು, ಸರಕಾರದಿಂದ ತಾನು ಹೊಂದಿಕೊಂಡ ಸಾಲದ ಈ ವರ್ಷದ ಕಂತಿಗಾಗಿ ತನ್ನ ಹೆಚ್ಚು ಬೆಲೆ ಬಾಳುವ ಭೂಮಿ, ತೋಟಗಳನ್ನು ಕಮ್ಮಿ ಕ್ರಯಕ್ಕೆ ಸರಕಾರದವರು ಹರಾಜುಮಾಡಿ ತನ್ನನ್ನು ನಿರ್ಗತಿಕನನ್ನಾಗಿ ಮಾಡಿರುವದರಿಂದ ಈ ಹರಾಜು ರದ್ದಾಗುವ ವರೆಗೆ ಉಪವಾಸವ್ರತ ಕೈಕೊಳ್ಳಲು ಅನುಮತಿ ಕೊಡಬೇಕೆಂದು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಗೆ ಜಿಲ್ಲಾ ಕಮಿಟಿಯ ಮೂಲಕ ಬರೆಕೊಂಡ ಪತ್ರವನ್ನು ಚರ್ಚಿಸಿ, ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಗೆ ಕಳುಹಿಸಲು ತೀರ್ಮಾನವಾಯಿತು.

ರೂ. 5 ರೊಳಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಉಪಯೋಗಕ್ಕಾಗಿ ಒಂದು ರಬ್ಬರಿನ ಸೀಲು ಮತ್ತು ರಿಕಾರ್ಡುಗಳನ್ನಿಡಲು ಒಂದು ಪೆಟ್ಟಿಗೆಯನ್ನು ಸಹ ಕೊಂಡುಕೊಳ್ಳಲು ತೀರ್ಮಾನಿಸಲಾಯಿತು.

ನಂತರ ಸಭೆಯು ಬರಕಾಸ್ತಾಯಿತು.

ಕೆ. ಸಿ. ಕರುಂಬಯ್ಯ,
(ಅಧ್ಯಕ್ಷ.)

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦೦—

ರಿಟ್ರೆಂಚ್‌ಮೆಂಟ್.

ಕೆಳದರ್ಜೆಯ ಉದ್ಯೋಗಸ್ಥರ ರಿಟ್ರೆಂಚ್‌ಮೆಂಟ್ ಕೆಲವು ಮಟ್ಟಿಗೆ ಆಯಿತೆಂದು ಭಾವಿಸೋಣ. ಇದರ ಫಲಿತಾಂಶವೇನು? ಚೆನ್ನಾಗಿ ಪರ್ಯಾಲೋಚಿಸಿದರೆ, ನನ್ನಿಂದ ನೀ ಕೆಟ್ಟೆ, ನಿನ್ನಿಂದ ನಾ ಕೆಟ್ಟೆ ಎಂಬ ಹಳೆ ಗಾದೆಗೆ ಸರಿ ಹೋಲುತ್ತೆಯಾಗಿ ಕಾಣುತ್ತೆ. ಉದಾಹರಣೆಗಾಗಿ ವಿರಾಜಪೇಟೆ ಸಬ್ ರಿಜಿಸ್ಟ್ರಾರ್‌ರವರ ಆಫೀಸನ್ನು ತೆಗೆದುಕೊಳ್ಳುವ-ಖರಾರು ರಿಜಿಸ್ಟರಿಗೆ ಕೊಟ್ಟು ತಿಂಗಳು ಎರಡಾದರೂ ಖರಾರು ಹಿಂದಕ್ಕೆ ಸಿಕ್ಕುವುದಿಲ್ಲವೇ ಇಡ. ಕೇಳಿದರೆ ತಯಾರು ಆಗಲಿಲ್ಲವೆಂದು ಹೇಳುವದರಲ್ಲೇ ಇದ್ದಾರೆ. ಇದರಿಂದ ಯಾರಿಗೆ ನಷ್ಟ? ರೈತನಿಗೋ, ಸರ್ಕಾರಕ್ಕೋ? ಒಬ್ಬನು ಒಂದು ಸ್ವತ್ತನ್ನು ಕ್ರಯಕ್ಕೆ ತೆಗೆದುಕೊಂಡು ಪುನಹ ಅದನ್ನು ಪರಾಧೀನ ಮಾಡಬೇಕೆಂದು ಇದ್ದರೆ ಮುಂದೆ ಆದ ಖರಾರು ಅವಶ್ಯವಿದೆಯೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅಲ್ಲದೆ ಕ್ರಯಕ್ಕೆ ತೆಗೆದುಕೊಂಡ ಒಬ್ಬನ ಹೆಸರಿಗೆ ಜಮಾಬಂದಿ ವರ್ಗವಾಗಬೇಕಾದರೂ ಖರಾರಿನ ಅವಶ್ಯಕತೆ ಇದೆ. ನಾಡು ಕಚ್ಚೇರಿಯವರಂತೂ ಖರಾರಿಲ್ಲದೆ ಜಮಾಬಂದಿ ವರ್ಗ ಮಾಡುವ ಪದ್ಧತಿಯನ್ನು ಇಟ್ಟುಕೊಳ್ಳಲೇ ಇಲ್ಲ. ಇದಕ್ಕಾಗಿ ಸಬ್ ರಿಜಿಸ್ಟ್ರಾರವರನ್ನು ದೂರಿ ಏನು ಫಲ. ಅವರೇನು ಮಾಡಿಯಾರು? ಪ್ರತೀ ಖರಾರು ಪತ್ರವನ್ನು ರಿಜಿಸ್ಟರ್ ಮಾಡುವದಲ್ಲದೆ ಅವುಗಳ ನಕಲನ್ನು ಉತ್ತರಿಸಿ ಕಂಪೇರ್ ಮಾಡಬೇಕಲ್ಲದೆ ಹಣದ ಮುಗ್ಗಟ್ಟಿನಿಂದ ಯಾವನಾದರೂ ಗಿರ್ವಿ, ಬೋಗ್ಯ ವಗೈರೆಯಾಗಿ ಯಾವ ತರದ ಸಾಲವನ್ನು ತೆಗೆಯಬೇಕಾದರೂ ಖರಾರಿನ ಅವಶ್ಯವಿಲ್ಲದೆ ಆಗುವದೇ ಇಲ್ಲ. ಸಿವಿಲ್, ಕ್ರಿಮಿನಲ್ ಸಮ್ಮಂಧವಾಗಿ ಖರಾರಿನ ನಕಲು ಅವಶ್ಯವಿದ್ದಲ್ಲಿ ತಯಾರಾಗದೆ ಕೊಡುವುದಕ್ಕೆ ಆಗುವುದೇ ಇಲ್ಲ. ಯಾವ ಇಲಾಖೆಯಲ್ಲಿ ಉತ್ಪತ್ತಿ ಕಮ್ಮಿಯಾದರೂ ಇದಕ್ಕೆ ಒಂದಕ್ಕೆ ಏದರಿಂದ ಹತ್ತು ಪಾಲಿನ ವರೆಗೆ ಉತ್ಪತ್ತಿ ಇದೆಯೆಂದು ಭಾವಿಸಬಹುದು. ಇನ್ನೂ ಜೋತೆಗೆ ಸಹಕಾರ ಸಂಘಗಳ ದಸ್ತಾವೇಜುಗಳಿಗೆ ಸ್ಟಾಂಪು ಡ್ಯೂಟಿ ಮತ್ತು ಫೀಸು ಸಹ ಹಾಕರುತ್ತಾರೆ. ಎಷ್ಟು ಉತ್ಪತ್ತಿ ಇದ್ದರೂ ರೈತನಿಗೆ ಕಷ್ಟವಲ್ಲದ ನೌಕರರಿಗೆ ಆಗಲಿ, ಸರ್ಕಾರದವರಿಗಾಗಲೀ ಖಂಡಿತವಾಗಿಯೂ ಕಷ್ಟ ಇಲ್ಲವೆಂದು ಭಾವಿಸಬೇಕಾಗಿದೆ.

ಇನ್ನಾದರೂ ಸರಕಾರದವರು ಒಡನೆ ಸಬ್ ರಿಜಿಸ್ಟ್ರಾರವರ ಆಫೀಸಿಗೆ ಸರಿಯಾದ ಏರ್ಪಾಡು ಮಾಡಿ ರೈತರ ಕಷ್ಟವನ್ನು ನೀಗಿಸುವರಾಗಿ ಕೋರುವ.

ಬಡ ರೈತ.

ಭಾರತ ಶಕ್ತಿ.

ಭಾರತದ ಶಕ್ತಿ ಅಳಿದಿದೆ ಎನ್ನುವುದು ಸುಳ್ಳೆಂದೂ, ಭಾರತೀಯರು ಜಗತ್ತನ್ನೇ ಇಂದಿಗೂ ಬೆರಗಾಗಿಸಬಲ್ಲರೆಂದೂ, ಜಗತ್ಪ್ರಖ್ಯಾತ ಮಾಯಾಜಾಲ (ಮೇಜಿಕ್) ಆಟಗಾರರಾದ ಶ್ರೀ. ಪಿ. ಸಿ. ಸರ್ಕಾರರು ಇದೀಗ ತಿಳಿಸಿದ್ದಾರೆ. ಮೈದಾನಿನಲ್ಲಿ ಸುರುಳಿ ಬಿದ್ದ ಹಗ್ಗವನ್ನು ನೇರಾಗಿ ಯಾವ ಆಧಾರವೂ ಇಲ್ಲದಂತೆ ನಿಲ್ಲಿಸಿ, ಅದನ್ನು ಕಂಬವೇರಿದಂತೆ ಏರುವ ಆಟ, ಇಂದು ತಾನು ತೋರಿಸಬಲ್ಲೆನೆಂದು, ಸರ್ಕಾರರು ಲಂಡನಿನ ಮೇಜಿಕ್ ಆಟಗಾರರ ಸಂಸ್ಥೆಗೆ ತಿಳಿಸಿದ್ದಾರೆ. ಆ ಆಟ ಸಾಧ್ಯವಿಲ್ಲವೆನ್ನುವವರಿಗೆ ಸಾಧ್ಯಮಾಡಿ ತೋರಿಸಬಲ್ಲೆನೆನ್ನುವವರು, ಇಂದು ಜಗತ್ತಿನಲ್ಲಿ ಇವರೊಬ್ಬರೇ. ಅಲ್ಲದೆ, ಇವರು, ಲಂಡನ್ನಿಗೆ ಕೆಂಪಗೆ ಕಾದ ಕಬ್ಬಿಣದ ಸಲಾಕಿಯನ್ನು ಚೀಪುವ, ಅದಾವುದೇ ತರದ ಘೋರ ವಿಷವನ್ನೂ ಕುಡಿದ, ಪುಡಿಗಾಜನ್ನು, ಪಿನ್, ಸೂಜಿ, ಹಾಗೂ ಭೀಕರ ವಿಷ ಸರ್ಪ ನುಂಗುವ, ಕುದಿವ ರಸಗಳನ್ನು ಕುಡಿವ, ಬೆಂಕಿಯ ಮೇಲೆ ನಡೆವ ಆಟಗಳನ್ನು ತೋರಲಿದ್ದಾರೆ. ಸಭಿಕರಲ್ಲಿ ಯಾರನ್ನು ಬೇಕಿದ್ದರೂ ಮೂರ್ಛೆಗೊಳಿಸಬಲ್ಲೆ, ಸಮಾಧಿಯಲ್ಲಿ ನಿದ್ರೆಮಾಡಿಸಬಲ್ಲೆನೆಂದೂ ಸಾರಿದ್ದಾರೆ! ಆಹಾ-ಭಾರತ ಶಕ್ತಿ, ಬ್ರಹ್ಮಾಂಡವನ್ನು ನಾಚಿಸುತ್ತಿದೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪರೇಶನ್, ಲಿಮಿಟೆಡ್, ವೀರಾಜಪೇಟೆ.

ನೋಟೀಸು.

ಈ ಕೆಳಗೆ ಕಾಣಿಸಿದ ಹೆಸರಿನವರು, ಈ ಬ್ಯಾಂಕಿನಿಂದ ಚಿನ್ನಾಭರಣಗಳ ಮೇಲೆ ಪಡಕೊಂಡ ಸಾಲದ ಅಸಲನ್ನಾಗಲೀ, ಬಡ್ಡಿಯನ್ನಾಗಲೀ,ಇಷ್ಟರ ತನಕ ಕೊಡದೆ ಇರ್ರುವುದರಿಂದಲೂ, ಸದರಿ ಸಾಲಗಾರರಿಗೆ ಬಿಟ್ಟ ಟಪ್ಪಾಲು ರಿಜಿಸ್ತ್ರಿ ನೋಟೀಸುಗಳು ಜಾರಿಯಾಗದೆ-"ಕೆಲವರು ಪೌತ್ಯಾಗಿರುತ್ತಾರೆಂತಲೂ, ಕೆಲವರ ಪತ್ತೆ ಇರುವುದಿಲ್ಲವೆಂತಲೂ" ವಾಪಸ್ಸು ಬಂದಿರುವದರಿಂದಲೂ, ಸದರಿ ಸಾಲಗಳಲ್ಲಿ ಜವಾಬ್ದಾರಿ ಇರತಕ್ಕ ನಗಗಳನ್ನು ಇದೇ ತಿಂಗಳ 29ನೇ ಶನಿವಾರ ಮಧ್ಯಾಹ್ನ 1 ಗಂಟೆಗೆ, ಯಾ, ಬ್ಯಾಂಕಿಗೆ ಯುಕ್ತ ತೋರುವ ಇನ್ನಿತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬಹಿರಂಗವಾಗಿ ಏಲಂ ಮಾಡಲಾಗುವುದು.

ಜಂಪ್ರ ನಂಬ್ರ	ಸಾಲದ ನಂಬ್ರ.	ವಿಳಾಸಗಾರರ ಹೆಸರು ಮತ್ತು ವಿಳಾಸ.	ಸಾಲದ ಮೊಬಲಗು.
(1)	835/36.	ಪಿ. ಎನ್. ಮುದ್ದಯ್ಯ, S/o. ನಂಜಪ್ಪ, ಮೇಕೂರು ಎಸ್ಟೇಟ್, ಪೊಳ್ಳಿಬೆಟ್ಟ.	30-0-0
(2)	968/36.	ಕೊರಿಯರ ದೇವಯ್ಯ, S/o. ಮುರುದೇವ, ಕಡಂಗಮೂರೂರು ಗ್ರಾಮ.	60-0-0
(3)	120/37.	ಎಂ. ಸೋಮಯ್ಯ, S/o. ಸುಬ್ಬಯ್ಯ, ನಲ್ವತ್ತೊಕ್ಲು ಗ್ರಾಮ.	25-0-0
(4)	825/38.	ಬಿ. ಜತ್ತಪ್ಪ, S/o. ಸಂಕಪ್ಪ, ಸಿದ್ದಾಪುರ.	35-0-0
		do. do.	6-0-0
(5)	1019/38.		
(6)	1280/38.	ಕೆ. ಸಿ. ಅಪ್ಪಯ್ಯ, S/o. ಕಣ್ಣ, ಮಾಲ್ದಾರಿ, ಸಿದ್ದಾಪುರ.	90-0-0

ಬ್ಯಾಂಕಿನ ಆಫೀಸು: ವೀರಾಜಪೇಟೆ, 9-7-1939.

ಬಿ. ಉಮೇಶ್‌ರಾವ್,
ಏಜೆಂಟ್.

ರಾಷ್ಟ್ರದ ಸಂಪತ್ತಿನ ವಿತರಣ ಮತ್ತು ವಿನಿಯೋಗ.

ಈ ವರೆಗೆ ಭಾರತದ ಉತ್ಪತ್ತಿಯ ವಿಚಾರ ತರ್ಕಿಸಿದ್ದಾಯಿತು. ಈ ಲೇಖನದಲ್ಲಿ ಕೆಲವು ಹೊಸ ಸಮಸ್ಯೆಗಳನ್ನು ತರ್ಕಿಸುವೆವು. ಈಗ ಭಾರತದಲ್ಲಾಗುವ ಉತ್ಪತ್ತಿಯು ಸರಿಯಾಗಿ ವಿಭಾಗಿಸಲ್ಪಟ್ಟದೆಯೋ? ಅದು ಸರಿಯಾಗಿ ವಿನಿಯೋಗಿಸಲ್ಪಡುತ್ತಿದೆಯೊ? ಎಂಬುದನ್ನು ನೋಡಬೇಕು. ಉತ್ಪತ್ತಿಯನ್ನು ಹಂಚುವ ವಿಚಾರದಲ್ಲಿ ಎರಡು ಸಂಗತಿಗಳನ್ನು ವಿವೇಚಿಸಬೇಕು. (1) ಭಾರತ ಉತ್ಪತ್ತಿಯ ಹಂಚುವಿಕೆಯಲ್ಲಿ ತಾರತಮ್ಯವಿದೆಯೆ? (2) ಈ ತಾರತಮ್ಯವೇ ನಮ್ಮ ಜನತೆಯ ದಾರುಣ ಬಡತನಕ್ಕೆ ಕಾರಣವೊ? ಈ ವಿಚಾರ ವಿವೇಚಿಸುವ ಮೊದಲು ಒಂದು ದೇಶದ ಉತ್ಪನ್ನಗಳ ವಿಭಾಗಕ್ರಮವನ್ನು ಅರಿಯಬೇಕಾದರೆ ಅಲ್ಲಿಯ ಜನತೆಯು ಕೊಡುವ ಆದಾಯ ಕಂದಾಯದ ಪರಿಶೀಲನೆಯೇ ಪ್ರಥಮದ್ವಾರಿಯಾಗಿದೆ. ಆದರೆ ನಮ್ಮ ಭಾರತ ದೇಶದಲ್ಲಿ ಕೃಷಿ ಉತ್ಪನ್ನದ ಮೇಲೆ ಆದಾಯ ಕಂದಾಯವಿಲ್ಲದ ಪ್ರಯುಕ್ತ, ನಮ್ಮ ದೇಶದ ಉತ್ಪನ್ನ ವಿಭಾಗಕ್ರಮವನ್ನು ಅರಿಯಬೇಕಾದರೆ ಕೈಗಾರಿಕೋದ್ಯಮಗಳನ್ನು ಕೈಕೊಂಡಿರುವ ಅಂದರೆ ವ್ಯವಸಾಯಗಾರರಲ್ಲದವರ ಸ್ಥಿತಿಯಿಂದ ತಿಳಿಯಬೇಕಿದೆ.

1931 ನೇ ಇಸ್ವಿಯ ಖಾನೇಸುಮಾರಿ ಲೆಕ್ಕದಂತೆ 280 ಲಕ್ಷ ಜನರು ಉದ್ಯೋಗ ಅಥವ ಇತರ ಕೈಗಾರಿಕೆಗಳನ್ನು ಕೈಕೊಂಡಿದ್ದರು. ಇವರಲ್ಲಿ ವರ್ಷಕ್ಕೆ 1000 ರೂಪಾಯಿಯ ಮೇಲೆ ಅಂದರೆ ಅಂದಾಜು ತಿಂಗಳಿಗೆ 84 ರೂಪಾ.ಯ ಆದಾಯದ ಜನರು ಕೇವಲ 5½ ಲಕ್ಷ. ಅಂದರೆ ಕೈಗಾರಿಕೋದ್ಯಮದಲ್ಲಿ ಜೀವನ ಹೊರೆಯುತ್ತಿರುವ 280 ಲಕ್ಷ ಜನರಲ್ಲಿ ಶೇಕಡ 98 ರಷ್ಟು ಜನರು ತಿಂಗಳಿಗೆ ರೂ. 83 ಕ್ಕಿಂತ ಕಮ್ಮಿ ಉತ್ಪತ್ತಿಯುಳ್ಳವರು. ಇವರ ಸರಾಸರಿ ತಿಂಗಳಿನ ಉತ್ಪತ್ತಿಯು ರೂ. 25 ಕ್ಕಿಂತ ಕಮ್ಮಿ. ಕಮ್ಮಿ ವೇತನದ ಆದಾಯದ ಇವರಲ್ಲಿಯೂ ಸಹ ಅಜಗಜಾಂತರ ವ್ಯತ್ಯಾಸ. ಕೆಲವರಿಗೆ ತಿಂಗಳಿಗೆ ರೂ. 7 ಕ್ಕಿಂತ ಕಡಿಮೆ. ಕೆಲವರಿಗೆ ತಿಂಗಳಿಗೆ ರೂ. 85. ಇವನ್ನು ಕೂಲಂಕುಷವಾಗಿ ವಿಚಾರಿಸಿದರೆ ಭಾರತ ಕೈಗಾರಿಕೋತ್ಪತ್ತಿಯು ಕೇವಲ ಒಂದು ಗೋಪುರದ ಆಕಾರದಲ್ಲಿ ವಿಭಾಗಿಸಲ್ಪಡುವದು. ಅನೇಕ ಸಂಖ್ಯಾಕರು ಅಲ್ಪ ಆದಾಯವನ್ನು ಪಡೆದು ಕೆಲವೊಬ್ಬರು ಮಾತ್ರ ಅಧಿಕ ಆದಾಯದಿಂದ ಗೋಪುರದ ಅಗ್ರಸ್ಥಾನದಲ್ಲಿರುವರು. ಅವಿಶ್ರಾಂತವಾಗಿ ಕೆಲಸ ಮಾಡುವ ಒಬ್ಬ ಕೂಲಿಯವನ ಮಾಸಿಕ ಸಂಪಾದನೆಯು ರೂ. 6 ಎಂದರೆ ಅತ್ಯಧಿಕ ಸಂಬಳ ಪಡೆಯುವ ಕೆಲಸಗಾರನೊಬ್ಬನಿಗೆ ರೂ. 50000. ಎಂಥಾ ವ್ಯತ್ಯಾಸ, ಕೆಲಸಗಾರರಲ್ಲಿ ಶೇಕಡ 38 ರಷ್ಟು ಜನರು ಒಟ್ಟು ಆದಾಯದ 17 ರಷ್ಟನ್ನು ವಿನಿಯೋಗಿಸುವದಾದರೆ ಕೆಲಸಗಾರರಲ್ಲಿ ಶೇಕಡ 1 ಕ್ಕಿಂತ ಕಮ್ಮಿ ಜನರು ಆದಾಯದ 10 ಕ್ಕಿಂಥಾ ಮೇಲ್ಪಟ್ಟು ಹಣವನ್ನು ಖರ್ಚು ಮಾಡುವರು. ಆದ್ದರಿಂದ ವ್ಯವಸಾಯಗಾರರಲ್ಲದ ಈ ಕೈಗಾರಿಕೋದ್ಯಮಿಗಳ ಮಟ್ಟಿಗೆ ಆದಾಯದ ವಿಭಾಗಕ್ರಮದಲ್ಲಿ ಅಮೋಘ ಅವ್ಯವಸ್ಥೆಯಿದೆಯೆಂಬುದು ನಿರ್ವಿವಾದ. ಕೆಲವೊಂದು ಅಲ್ಪ ಸಂಖ್ಯಾಕರು ಉತ್ಪತ್ತಿಯ ಅಮೋಘಭಾಗವನ್ನು ವಿನಿಯೋಗಿಸಿಕೊಂಡು ಬಹು ಸಂಖ್ಯಾಕರನ್ನು ಕಷ್ಟಕ್ಕೀಡು ಮಾಡುತ್ತಿರುವ ವಿಚಾರವು ಇದರಿಂದ ತಿಳಿಯುತ್ತದೆ.

ವ್ಯವಸಾಯಗಾರರ ಕಡೆಗೊಮ್ಮೆ ದೃಷ್ಟಿ ಹೊರಳಿಸಿ ಅವರ ಆದಾಯ ವ್ಯವಸ್ಥೆಯನ್ನು ಪರಿಶೀಲಿಸಿದರೆ, ವ್ಯವಸಾಯಗಾರರ ಆದಾಯ ವಿತರಣವು ದೃಷ್ಟಿಗೋಚರವಾಗದು. ಇವಕ್ಕೆ ವ್ಯವಸಾಯಗಾರರಿಗೆ ಆದಾಯ ಕಂದಾಯವಿಲ್ಲದುದೊಂದು ಕಾರಣ. ಆದರೂ ಕೂಡ ಬೊಂಬಾಯಿ ಪ್ರಾಂತದ ವ್ಯವಸಾಯಗಾರರ ಲೆಕ್ಕದಿಂದ ಈ ಸಮಸ್ಯೆಯನ್ನು ಸಾಕಷ್ಟು ಸಮಂಜಸವಾಗಿ ತರ್ಕಿಸಬಹುದು. ಬೊಂಬಾಯಿ ಪ್ರಾಂತದಲ್ಲಿ 22 ಲಕ್ಷ ವ್ಯವಸಾಯಗಾರರಿರುವರು. ಇವರಲ್ಲಿ 10 ಲಕ್ಷಕ್ಕಿಂಥಾ ಹೆಚ್ಚು ಜನರಿಗೆ 5 ಏಕರೆಗಿಂತ ಕಮ್ಮಿ ಭೂಮಿ ಇರುವದು. ಕೇವಲ ಏಕರೆಗಿಂತಾ ಕಮ್ಮಿ ಇರುವ ವ್ಯವಸಾಯಗಾರರೂ ಇರುವರು. ಅಂದರೆ ವ್ಯವಸಾಯಗಾರರಲ್ಲಿ ಶೇಕಡ 48 ರಷ್ಟು ಜನರಿಗೆ ಒಟ್ಟು ವ್ಯವಸಾಯಕ್ಷೇತ್ರದ ಶೇಕಡ 9 ರಷ್ಟು ಭೂಮಿ ಇರುವದು. ಆದರೆ ವ್ಯವಸಾಯಗಾರರಲ್ಲಿ ಶೇಕಡ 1 ಕ್ಕಿಂಥಾ ಕಮ್ಮಿ ಇರುವ ಜನರು ವ್ಯವಸಾಯಕ್ಷೇತ್ರದ ಶೇಕಡ 16 ಕ್ಕಿಂಥಾ ಮೇಲ್ಪಟ್ಟು ಸ್ಥಳವನ್ನು ಅನುಭೋಗಿಸುತ್ತಿರುವರೆಂದರೆ ವ್ಯವಸಾಯಗಾರರಲ್ಲಿಯೂ ತಮ್ಮ ಉತ್ಪತ್ತಿ ವಿತರಣದ ಬಗ್ಗೆ ಇರುವ ಅವ್ಯವಸ್ಥೆಯು ಒಡೆದು ತೋರುವದು. ಇದಲ್ಲದೆ ಇದೇ ಪ್ರಾಂತದಲ್ಲಿ 25 ಲಕ್ಷ ವ್ಯವಸಾಯ ಕೂಲಿಗಾರರು ಯಾವದೊಂದೂ ಮಾರ್ಗವಿಲ್ಲದೆ ಅರೆಹೊಟ್ಟೆಯಿಂದಿರುವರು. ಹಾಗೆಯೇ ಮದ್ರಾಸು ಪ್ರಾಂತವೆಲ್ಲಾದರೂ ಈ ಅವ್ಯವಸ್ಥೆಯು ಇಲ್ಲದೆ ಇಲ್ಲ. ಯಾಕೆ? ಇಡೀ ಭಾರತದಲ್ಲೇ ಈ ತರದ ವಿತರಣನ್ಯೂನತೆಯು ಕಂಡು ಬರುತ್ತಿದೆ. ಕೆಲವರು ವಿಶಾಲ ಭೂಕ್ಷೇತ್ರ ಮಾಲಿಕರಾಗಿ ಜಮ್ಮಗೆಂದು ಮೆರೆಯುತ್ತಿದ್ದರೆ ಅನೇಕರು ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಕಷ್ಟಪಡುತ್ತಿರುವರು. ಇವರ ಕಾರಣವಾದರೂ ಉತ್ಪತ್ತಿವಿತರಣವು ಸಮಂಜಸವಾಗಿ ನಡೆಯದ್ದೇ ಆಗಿದೆ. ಮೇಲಿನ ವಿವರಣೆಯಿಂದ ವ್ಯವಸಾಯಗಾರರಲ್ಲಿ ಹಾಗೂ ಕೈಗಾರಿಕೋದ್ಯಮಿಗಳಲ್ಲಿ ಏಕರೀತಿಯಿಂದಿರುವ ಈ ಉತ್ಪತ್ತಿ ಹಂಚುವಿಕೆಯ ನ್ಯೂನತೆಯು ಜನತೆಯ ಅವ್ಯವಸ್ಥೆಗೆ ಸಹಕಾರಿಯಾಗಿರುವದು. ಈ ವ್ಯವಸಾಯಗಾರರಲ್ಲಿಯೂ ಕೈಗಾರಿಕೋದ್ಯಮಿಗಳ ಮಧ್ಯದಲ್ಲಿ ಏನೊಂದೂ ಕೆಲಸ ಮಾಡದೆ ಆದಾಯದ ಬಹು ಭಾಗವನ್ನು ನುಂಗುವರೆಷ್ಟು ಮಂದಿ ಇಲ್ಲ. ಜಮ್ಮಿಗಳು ಕೆಲಸ ಮಾಡದಿದ್ದರೂ ಕೇವಲ ಭೂಮಿಯ ಒಡೆಯರೆಂಬ ಕಾರಣದಿಂದ ಭೂಮಿಯ ಉತ್ಪನ್ನದ ಬಹುಭಾಗವನ್ನು ಹೊಂದಿ ವಿಲಾಸಿಗಳಾಗಿ ಮೆರೆಯುವರು. ಕೈಗಾರಿಕೋದ್ಯಮದಲ್ಲಾದರೂ ಇದೇ ರೀತಿ. ಇವರು ಏನೊಂದು ಪರಿಶ್ರಮ ಪಡದೆ ಬಡ ಕೆಲಸಗಾರರು ರಕ್ತವನ್ನು ಬೆವರಾಗಿ ಸುರಿಸಿ ಶ್ರಮಿಸಿದ ಉತ್ಪನ್ನದಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸಿ ನಿರಂಕುಶ ವರ್ತನೆ ನಡೆಸುವದೇ ಇಂದು ಭಾರತೀಯರ ಹೃದಯದ್ರಾವಕ ಬಡತನಕ್ಕೆ ಒಂದು ಕಾರಣ.

ಉತ್ಪನ್ನದ ವಿತರಣ ನ್ಯೂನತೆಯೇ ಭಾರತೀಯರ ಬಡತನಕ್ಕೆ ಕಾರಣವೇ ಎಂಬ ನಮ್ಮ ಎರಡನೇ ಪ್ರಶ್ನೆಯನ್ನು ವಿಮರ್ಶಿಸಿದರೆ ಆದಾಯದ ಹಂಚುವಿಕೆಯ ಅವ್ಯವಸ್ಥೆಯು ಬಡ ಭಾರತೀಯರ ಅಧೋಗತಿಗೆ ಕಾರಣವಲ್ಲ. ಭಾರತೀಯ ಉತ್ಪನ್ನವೇ ಕಡಿಮೆಯಿರುವದು. ಇಡೀ ಉತ್ಪನ್ನವನ್ನು ಸಮವಾಗಿ ವಿಂಗಡಿಸಿದರೆ ಪ್ರತಿಯೊಬ್ಬನ ತಿಂಗಳಿನ ಆದಾಯವು ರೂ. 5 ಆಗುವದು. ಆದಾಯ ವಿತರಣೆಯಲ್ಲಿರುವ ಕೊರತೆಗಳು ಭಾರತೀಯನ ಹೃದಯದ್ರಾವಕ ಸ್ಥಿತಿಯನ್ನು ಇನ್ನಷ್ಟು ಶೋಚನೀಯವಾಗಿ ಮಾಡುವವು.

ನಮ್ಮ ಅಲ್ಪ ಉತ್ಪನ್ನ, ವಿತರಣೆಯ ನ್ಯೂನತೆ ಇವೇ ಅಲ್ಲದೆ ನಮ್ಮ ಉತ್ಪತ್ತಿಯ ವಿನಿಯೋಗವಾದರೂ ಆರ್ಥಿಕ ಹಾಗೂ ಲಾಭದಾಯಕ ದೃಷ್ಟಿಯಿಂದ ಸುಗಮವಾದ ಹಾದಿಯಲ್ಲಿ ನಡೆಯುತ್ತಿಲ್ಲವೆನ್ನಬಹುದು. ಬಡ ಜನರು ಸಂಪಾದಿಸುವ ಅಲ್ಪ ಸೊಬಲಗಳಲ್ಲಿ ಬಹು ಭಾಗವು ಕೇವಲ ಮಾದಕ ಪದಾರ್ಥಗಳಿಗಾಗಿ ವಿನಿಯೋಗಿಸಲ್ಪಡುತ್ತಿದೆ. ಮಾದಕ ಪದಾರ್ಥವು ಆರೋಗ್ಯಕರವಾದ ವಸ್ತುವಲ್ಲವೆಂಬುದನ್ನು ಬೇರೆ ಹೇಳಬೇಕಿಲ್ಲ. ಪಟ್ಟಣಗಳಲ್ಲಿ ಮಾದಕ ಪಾನೀಯಗಳಿಗಾಗಿಯೇ ಪೌಷ್ಟಿಕ ಆಹಾರಗಳಾದ ಹಾಲು ಮೊದಲಾದುವಕ್ಕಿಂಥಾ ಹೆಚ್ಚಾಗಿ ಧನವ್ಯಯ ಮಾಡುತ್ತಿರುವರು. ಈಗಿನ ನವೀನ ವಿಧಾನದ ಆಹಾರ ಮೊದಲಿಗೆಲ್ಲಾ ಆರೋಗ್ಯಕ್ಕೆ ಹೆಚ್ಚಿನ ಸಹಕಾರಿಗಳಾಗವು. ಉದಾ—ಕೈಯಿಂದ ಬೀಸಿದ ಅಕ್ಕಿ ಹುಡಿಯಲ್ಲಿ ಆರೋಗ್ಯ ವರ್ಧಕ ಶಕ್ತಿಯು ಯಂತ್ರದಲ್ಲಿ ಮಾಡಿದ ಹುಡಿಗಿಂಥಾ ಧಾರಾಳವಿರುವದು. ಯಂತ್ರದಲ್ಲಿ ಮಾಡಿದ ಅಕ್ಕಿಯೂ ಇತರ ಯಾವ ಸಾಮಗ್ರಿಯೂ ತನ್ನ ಪೌಷ್ಟಿಕ ಹಾಗೂ ಧಾತುವರ್ಧಕ ಗುಣವನ್ನು ಕಳೆದುಕೊಳ್ಳುತ್ತದೆ. ಈಗೀಗ ಶಕ್ತಿವರ್ಧಕವಾದ ಬೆಲ್ಲದ ಉಪಯೋಗವು ಕಮ್ಮಿಯಾಗಿ ಬಿಳೀ ಸಕ್ಕರೆಯ ಉಪಯೋಗವು ಹೆಚ್ಚಿದೆ. ವೈಜ್ಞಾನಿಕ ಶೋಧೆಗಳಿಂದ ಭಾರತೀಯರ ಅದರಲ್ಲೂ ದಕ್ಷಿಣ ಭಾರತೀಯರ ಆಹಾರ ಕ್ರಮವು ಪೂರಾ ಅತೃಪ್ತಿಕರವೆಂದೂ, ಪೌಷ್ಟಿಕ ಆಹಾರವು ದಕ್ಷಿಣದಲ್ಲಿ ಉಪಯೋಗಿಸಲ್ಪಡುವದಿಲ್ಲವೆಂದೂ ತಿಳಿದು ಬಂದಿದೆ. ಆದ್ದರಿಂದ ಭಾರತೀಯರಾದ ನಾವು ಮಾಡುತ್ತಿರುವ ಅನೇಕ ಖರ್ಚುಗಳು ಆರೋಗ್ಯದೃಷ್ಟಿಯಿಂದ ನಡೆಯುತ್ತಿಲ್ಲ. ನಮ್ಮ ಆಹಾರ ಕ್ರಮವು ಬದಲಾಗಬೇಕು. ನಮ್ಮ ಸಂಪಾದನೆಯ ಹೆಚ್ಚಿನ ಭಾಗವು ನಮ್ಮ ಆರೋಗ್ಯಲಾಭಕ್ಕಾಗಿ ಸುಪುಷ್ಟ ಆಹಾರಗಳಿಗಾಗಿ ವಿನಿಯೋಗಿಸಲ್ಪಡಬೇಕು. ಸದ್ಯಕ್ಕೆ ನಮ್ಮ ವಿನಿಯೋಗಕ್ರಮವು ಅಬದ್ಧವಾಗಿದೆ.

ಒಟ್ಟಾಗಿ ಹೇಳುವದಾದರೆ, ರಾಷ್ಟ್ರದ ಸಂಪತ್ತು ಜನತೆಯಲ್ಲಿ ಸರಿಯಾಗಿ ಹಂಚಲ್ಪಡುತ್ತಿಲ್ಲ. ಅಲ್ಪ ಸಂಖ್ಯಾಕರು ಉತ್ಪನ್ನದ ಅಮೋಘ ಭಾಗವನ್ನು ತಿಂದು ಅರಮನೆಗಳಲ್ಲಿ ವಿಲಾಸಿಗಳಾಗಿ ಮೆರೆದು ತಮ್ಮ ಧನ ಬಲದಿಂದ ಲಕ್ಷಾವಧಿ ಜನರನ್ನು ಗುಲಾಮರನ್ನಾಗಿ ಮಾಡುತ್ತಿರುವರು ಆದರೆ ಬಹು ಸಂಖ್ಯಾಕರು ಈ ವಿಲಾಸಿಗಳಿಂದ ಕೊಳ್ಳೆ ಹೊಡೆಯಲ್ಪಟ್ಟು ಹೊಟ್ಟೆ ಬಟ್ಟೆಗಿಲ್ಲದೆ ಬಡತನದ ಕರಾಳ ಕೈಯಲ್ಲಿ ಕುರಿಮರಿಗಳಂತಾಗಿರುವರು. ಈ ಕೂಲಿಕಾರರ ಕರುಳಿನ ಕೂಗು ಅಂತಃಕರಣವನ್ನು ಕೆರಳಿಸುತ್ತಿದೆ. ಉತ್ಪತ್ತಿಯಲ್ಲಿ ಈ ಬಹು ಸಂಖ್ಯಾಕರಿಗಾಗಿ ಉಳಿದಿರುವ ಅಲ್ಪ ಧನವಾದರೂ ವ್ಯವಸ್ಥಿತ ರೀತಿಯಿಂದ ವಿನಿಯೋಗಿಸಲ್ಪಡದೆ ಅದರಿಂದ ಆಗಬಹುದಾದ ಕಿಂಚಿತ್ ಆರೋಗ್ಯ ಲಾಭವಾದರೂ ತಪ್ಪಿಹೋಗುತ್ತಿದೆ. ಆದ್ದರಿಂದ ಭಾರತೀಯ ಸಂಪತ್ತಿನ ವಿತರಣ ಹಾಗೂ ವಿನಿಯೋಗದಲ್ಲಿ ಸುಧಾರಣೆಗಳಾಗಬೇಕು. ಸರ್ಕಾರವು ಕೇವಲ ಸಮಾಜೋಪಯುಕ್ತ ಕಾರ್ಯಗಳನ್ನು ಕೈಕೊಂಡರೆ ಬಡವರ ಬಡತನವು ಹಿಂಗುವದಿಲ್ಲ. ಇದರಿಂದ ರಾಷ್ಟ್ರದ ಉತ್ಪನ್ನವು ಬೆಳೆಯಬಹುದು. ಆದರೆ ಅಸಂಖ್ಯಾತ ಜನತೆಯಲ್ಲಿ ಬೇರೂರಿ ನಿಂತಿರುವ ಬಡತನವು ಅಳಿಯಲಾರದು. ಅನ್ನ ಅನ್ನವೆಂದು ಬರೀ ಹೊಟ್ಟೆಯಿಂದ ಕೂಗುವ ಕೋಟ್ಯಾವಧಿ ಜನರಿಗೆ ಅನ್ನವು ದೊರೆಯಲಾರದು. ಆದ್ದರಿಂದ ಶ್ರಮಜೀವನವಿಲ್ಲದೆ ಕೂತು ತಿನ್ನುವ ವರ್ಗವು ಮಾಯವಾಗಿ ಇಡೀ ರಾಷ್ಟ್ರವು ಶ್ರಮಜೀವಿಯಾಗಬೇಕು. ರಾಷ್ಟ್ರದ ಧನೋತ್ಪಾದನವು ಎಲ್ಲರಿಗೂ ಸರಿಯಾದ ರೀತಿಯಲ್ಲಿ ಮುಟ್ಟುವದರಲ್ಲಿಯೇ ರಾಷ್ಟ್ರದ ಕಲ್ಯಾಣವಾದರೂ ಇದೆ. ಹೀಗಾಗಬೇಕಾದರೆ **ವ್ಯಕ್ತಿ ಒಡೆತನವು ಮಾಯವಾಗಬೇಕು.** ಯಾವುದೊಂದೇ ರಾಷ್ಟ್ರವು ಮುನ್ನಡೆಯಬೇಕಾದರೆ ಸಮಾಜದ ಅರ್ಥಾತ್ ಮಾನವ ಜನಾಂಗದ ಹಿತವಾಗುವಂತೆ ರಾಷ್ಟ್ರದ ಸಂಪತ್ತು ವಿತರಣವಾಗುವದೇ ಪ್ರಥಮ ದಾರಿಯಾಗಿದೆ. ಇದೇ ಮಾನವನ ಪ್ರಗತಿಯ ಕುರುಹು.

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಥವಾ ಅಮರಸುಳ್ಯದ ಕಾಟಕಾಯಿ.

ಲೇಖಾಂಕ 17.

(ಡಿ. ಎನ್. ಕೃಷ್ಣಯ್ಯ ಎಂ. ಎ., ಬಿ. ಇ. ಡಿ.)

(ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.)

(ಕಳೆದ ಸಂಚಿಕೆಯಿಂದ ಸಾಗಿದ್ದು.)

ತಾವುನಾಡಿನ ಜನರು ವಿದ್ರೋಹಿಗಳ ಪಕ್ಷ ಸೇರಿರುವರೆಂಬ ವರ್ತಮಾನವನ್ನು ತಿಳಿದು ಎಡೆನಾಡು ಗಡಿನಾಡುಗಳ ಜನರೂ ತಾವು ದಂಗೆಯೆದ್ದರು. ಇವರ ಮುಖಂಡನು ಗುಡ್ಡೆ ಮನೆ ಅಪ್ಪಯ್ಯನಾಗಿದ್ದನು. ಇವರ ಜೊತೆಗೆ ಬಿಸ್ಲೆ ಕಡೆಯಿಂದ ಸುಮಾರು 150 ಕನ್ನಡಿಗ ವಿದ್ರೋಹಿಗಳು ಬಂದು ಸೇರಿಕೊಂಡರು. ಇವರು ಒಟ್ಟಾಗಿ ಸುಮಾರು 1000 ಅಥವಾ 1500 ಮಂದಿ ಜನರಿದ್ದರು. ಇವರು ಉತ್ತರದ ಗಡಿ ಪಹರೆಗೆ ನೇಮಿಸಿದ 60 ಜನ ಕೊಡಗರನ್ನು ಸೆರೆ ಹಿಡಿದು ಮಡಿಕೇರಿಯನ್ನು ತಾವುನಾಡಿನವರ ಸಹಾಯದಿಂದ ಹಿಡಿದುಕೊಳ್ಳಬೇಕೆಂದು ಹೊರಟು ಬಂದರು. ಇವರ ಮುಖಂಡನಾದ ಗುಡ್ಡೆಮನೆ ಅಪ್ಪಯನು ತಾವುನಾಡಿನವರು ಮಡಿಕೇರಿಯನ್ನು ದಕ್ಷಿಣದಿಂದಲೂ, ಅಮರ ಸುಳ್ಯದವರು ಪಶ್ಚಿಮದಿಂದಲೂ, ಎಡೆನಾಡಿನವರು ಉತ್ತರದಿಂದಲೂ ಮುತ್ತಿಗೆ ಹಾಕಬೇಕೆಂದು ಏರ್ಪಡಿಸಿದ್ದನು. ಉತ್ತರ ಕೊಡಗಿನವರು ಅದೇ ಪ್ರಕಾರ ಹೊರಟು ಏಪ್ರಿಲ್ [illegible]ನೇ ತಾರೀಕಿನ ದಿವಸ ಮಡಿಕೇರಿ-ಸೋಮವಾರಪೇಟೆ ದಾರಿಯಲ್ಲಿ ಮಡಿಕೇರಿಯಿಂದ ನಾಲ್ಕು ಮೈಲಿಗಳ ದೂರದಲ್ಲಿ ಬಂದು ತಾವುನಾಡಿನವರಲ್ಲಿಗೆ ಕಳುಹಿಸಿದ ಬೇಹುಗಾರರ ದಾರಿಯನ್ನು ಕಾಯುತ್ತಿದ್ದರು. ಇವರು ದಂಗೆಯೆದ್ದ ವಿಚಾರವನ್ನು ಲೀ ಹಾರ್ಡಿ ಸಾಹೇಬನು ತಿಳಿದು ಮಡಿಕೇರಿಯಲ್ಲಿ ಮತ್ತು ಅದರ ಸುತ್ತುಮುತ್ತಲೂ ಬೋಪು ದಿವಾನನ ಸಂಗಡ ಹೋಗದೆ ಉಳಿದಿದ್ದ ಜನರನ್ನು ಸೇರಿಸಿ ವಿದ್ರೋಹಿಗಳನ್ನು ಎದುರಿಸಲು ಕಳುಹಿಸಿದನು. ಅವರು ಸಂಖ್ಯೆಯಲ್ಲಿ ಕಡಿಮೆಯಾಗಿದ್ದುದರಿಂದ ವಿದ್ರೋಹಿಗಳನ್ನು ಎದುರಿಸಲಿಕ್ಕಾಗಲಿಲ್ಲ. ಆದರೆ ವಿದ್ರೋಹಿಗಳು ನಡೆದು ಬಂದ ದಾರಿಗಳನ್ನು ಆಕ್ರಮಿಸಿ ಹಿಂದಿನಿಂದ ಅವರಿಗೆ ತೊಂದರೆಯನ್ನು ಕೊಡಲಾರಂಭಿಸಿದರು. ಇಷ್ಟರಲ್ಲಿ ಈ ವಿದ್ರೋಹಿಗಳಿಗೆ ತಾವುನಾಡಿನಲ್ಲಿ ದಂಗೆಯೇಳುವ ಪ್ರಯತ್ನವು ಅಡಗಿಸಲ್ಪಟ್ಟಿತೆಂದು ತಿಳಿಯಲು ಇವರು 17ನೇ ತಾರೀಕಿನ ರಾತ್ರಿ ಲೀಹಾರ್ಡಿ ಸಾಹೇಬನಿಗೆ ತಮಗೆ ದಯೆಯನ್ನು ತೋರಿಸುವುದಾದರೆ ತಾವು ಶರಣಾಗತರಾಗುತ್ತೇವೆಂದು ಹೇಳಿ ಕಳುಹಿಸಿದರು. ಲೀ ಹಾರ್ಡಿ ಸಾಹೇಬನು ಅದಕ್ಕೆ ಸಮ್ಮತಿಸಿ ಅವರಿಂದ ಕತ್ತಿ ಕೋವಿಗಳನ್ನು ಕಿತ್ತಿಟ್ಟುಕೊಂಡು ಅವರನ್ನು ಬಿಟ್ಟುಬಿಟ್ಟನು. ಆದರೆ ಮುಖಂಡರನ್ನು ಮಾತ್ರ ಹಿಡಿದು ಸೆರೆಯಲ್ಲಿಟ್ಟನು.

ನಾಲ್ಕುನಾಡು ತಾವುನಾಡುಗಳಿಗೆ ಪುಟ್ಟಬಸಪ್ಪನ ಇಸ್ತಿಹಾರಿನ ಪ್ರತಿಗಳು ತಲುಪಿದ ಹಾಗೆಯೇ ಬೆಪ್ಪುನಾಡಿಗೂ ತಲುಪಿದವು. ಅಲ್ಲಿನ ಜನರು ಏನು ಮಾಡುವದೆಂದು ತಿಳಿಯದೆ ಮಡಿಕೇರಿಗೆ ದಿವಾನರನ್ನು ಕಾಣುವುದಕ್ಕೆ ತಮ್ಮ ಮುಖಂಡರನ್ನು ಕಳುಹಿಸಿದರು. ದಿವಾನರು ಬೆಪ್ಪುನಾಡಿನ ಜನರನ್ನು ಅಮರ ಸುಳ್ಯದಲ್ಲಿ ದಂಗೆಯನ್ನು ಅಡಗಿಸುವುದಕ್ಕೆ ಬರುವಂತೆ ಹೇಳಿದರು.

ಕೊಡಗಿನಲ್ಲಿ ದಂಗೆಯೇಳುವವನ್ನು ನಿಲ್ಲಿಸಿದನಂತರ ಅಮರ [illegible] ವಿದ್ರೋ[illegible]ದು ಉಳಿದಿತ್ತು. ಅಮರಸುಳ್ಯದ ವಿದ್ರೋಹಿಗಳೊಡನೆ ಕೆಲವು ನಾಲ್ಕುನಾಡಿನ ಜನರು ಸೇರಿದ್ದರು. ಇವರಲ್ಲಿ ಅನೇಕರು ರಾಜ ಉದ್ಯೋಗಸ್ಥರೂ, ದಿವಾನ್ ಬೋಪುವಿನ ಹತ್ತಿರ ಸಂಬಂಧಿಕರೂ ಆಗಿದ್ದರು. ಕ್ಯಾಪ್ಟನ್ ಲೀಹಾರ್ಡಿ ಸಾಹೇಬನು ಬೋಪು ದಿವಾನನೊಡನೆ ಸಿಪಾಯಿಗಳನ್ನು ತೆಗೆದುಕೊಂಡು ಸುಳ್ಯದ ದಾರಿಯಲ್ಲಿ ಸಂಪಾಜೆ ವರೆಗೆ ಬಂದನು. ಅವರೆ ಅಲ್ಲಿ ಶತ್ರುಗಳ ಸುಳುವೇ ಇರಲಿಲ್ಲ. ಸಂಪಾಜೆಯಲ್ಲಿರುವಾಗ ಲೀಹಾರ್ಡಿ ಸಾಹೇಬನಿಗೆ ವಿದ್ರೋಹಿಗಳು ಬಿಸ್ಲೆ ಘಟ್ಟದ ಕಡೆಗೆ ಹೋಗಿರುವರೆಂಬ ವರ್ತಮಾನವು ಸಿಕ್ಕಿತು. ಸಂಪಾಜೆಯಿಂದ ಬಿಸ್ಲೆಘಟ್ಟಕ್ಕೆ ಹೋಗುವುದಕ್ಕೆ ಕಾಡು ದಾರಿಗಳು ಸಹ ಸರಿಯಾಗಿರಲಿಲ್ಲ. ಹಾಗಾಗಿ ಲೀಹಾರ್ಡಿ ಸಾಹೇಬನು ಮಡಿಕೇರಿಗೆ ಹಿಂದಿರುಗಿ ಅಲ್ಲಿಂದ ಉತ್ತರದಿಕ್ಕಿನ ನಾಡುಗಳಿಗಾಗಿ ಬಿಸ್ಲೆಘಟ್ಟದ ಬುಡಕ್ಕೆ ಬೋಪು ದಿವಾನ ಮತ್ತು ಸಿಪಾಯಿಗಳೊಡನೆ ಹೋದನು. ಅಲ್ಲಿಯೂ ಕಲ್ಯಾಣ ಸ್ವಾಮಿಯ ಅಥವಾ ಆತನ ಜನರ ಸುಳುವೇ ಕಾಣಲಿಲ್ಲ. ಆಗ ಲೀಹಾರ್ಡಿ ಸಾಹೇಬನಿಗೆ ಬೋಪು ದಿವಾನನು ವಿದ್ರೋಹಿಗಳು ಸಂಪಾಜೆಯಲ್ಲಿರುವರೆಂದು ತನಗೆ ಸಿಕ್ಕಿದ ವರ್ತಮಾನವನ್ನು ಹೇಳಿದನು. ಲೀಹಾರ್ಡಿ ಸಾಹೇಬನು ಒಡನೆ ಹಿಂತಿರುಗಿ ಮಡಿಕೇರಿಗೆ ಬಂದು ಕಡಮಕಲ್ಲು ಮಾರ್ಗವಾಗಿ ಸಂಪಾಜೆಗೆ ಹೋದನು. ಆದರೆ ಆಗಲೂ ಅಲ್ಲಿ ವಿದ್ರೋಹಿಗಳು ಕಂಡು ಬರಲಿಲ್ಲ. ಅಲ್ಲಿಂದ ಲೀಹಾರ್ಡಿ ಸಾಹೇಬನು ಮಡಿಕೇರಿಗೆ ಹಿಂತಿರುಗಿ ಬಂದನು. ಆಗ ಪೊನ್ನಪ್ಪ ದಿವಾನನು ಲೀಹಾರ್ಡಿ ಸಾಹೇಬನಿಗೆ ಬೋಪು ದಿವಾನನ ಹತ್ತಿರ ಸಂಬಂಧಿಕರು ಕೆಲವರು ವಿದ್ರೋಹಿಗಳೊಡನೆ ಸೇರಿರುವರೆಂದು ಹೇಳಿದನು. ಇದನ್ನು ಕೇಳಿದೊಡನೆ ದಿವಾನ್ ಬೋಪುವಿನಲ್ಲಿ ಮೊದಲೇ ಸಂಶಯಪಟ್ಟಿದ್ದ ಲೀಹಾರ್ಡಿ ಸಾಹೇಬನಿಗೆ ಬೋಪುವು ಒಳಗಿಂದೊಳಗೆ ವಿದ್ರೋಹಿಗಳ ಪಕ್ಷ ಸೇರಿರುವನೆಂಬ ನಂಬಿಗೆಯು ಬಲವಾಯಿತು. ಆಗ ಆತನು ಬೋಪುವನ್ನು ಕರೆದು 'ಘಟ್ಟದ ಕೆಳಗೆ ನೀನು ಹೋಗಿ ನೀನು ನಿನ್ನ ಸ್ನೇಹಿತರಾದ ವಿದ್ರೋಹಿಗಳೊಡನೆ ಸೇರು. ಹೀಗೆ ಎದುರಿಗೆ ನಮ್ಮ ಮಿತ್ರನಂತೆ ತೋರಿಸಿಕೊಂಡು ಒಳಗಿಂದೊಳಗೆ ಶತ್ರುಗಳ ಪಕ್ಷ ಸೇರಿರುವುದರ ಬದಲು ನೇರಾ ಹೋಗಿ ಶತ್ರುಗಳೊಡನೆ ಸೇರಿಕೋ, ಆಗ ನಾನು ನಿನ್ನೊಡನೆ ಯುದ್ಧಕ್ಕೆ ಬರುವೆನು. ನಿನ್ನನ್ನು ಹಿಡಿದರೆ ನಿನ್ನನ್ನು ತೂಗಿಸಿಬಿಡುವೆನು' ಎಂದನು. ಈ ಮಾತುಗಳನ್ನು ಕೇಳಿ ಬೋಪುವಿಗೆ ಬಹಳ ಗಾಬರಿಯಾಯಿತು. ಆತನೂ ಪೊನ್ನಪ್ಪನ ಹಾಗೆ ಕಂಪೆನಿ ಸರಕಾರದ ಪ್ರಾಮಾಣಿಕನಾದ ಸೇವಕನಾಗಿದ್ದನು. ಆತನು ಕಂಪೆನಿ ಸರಕಾರದ ಪಕ್ಷದಲ್ಲೇ ಇದ್ದನು. ಆದರೆ ಆತನ ಹತ್ತಿರದ ಸಂಬಂಧಿಕರೂ, ನಾಡಿನವರೂ ದಂಗೆಯೋರರೊಡನೆ ಸೇರಿದ್ದುದರಿಂದ ಆತನ ಮೇಲೆ ಸಂಶಯಕ್ಕೆ ಕಾರಣವಾಯಿತು. ಈಗ ಬೋಪುವಿಗೆ ತಾನು ಲೀಹಾರ್ಡಿ ಸಾಹೇಬನ ವಿಶ್ವಾಸವನ್ನು ತಿರುಗಿ ಹೇಗೆ ಸಂಪಾದಿಸಲಿ ಎಂಬ ಚಿಂತೆಯು ಬಾಧಿಸಹತ್ತಿತು. ಆತನ ಕಣ್ಣುಗಳಲ್ಲಿ ಬಳಬಳನೆ ನೀರು ಬಿದ್ದಿತು. ಆತನು ನಿರಾಶೆಯಿಂದ ಉತ್ತೇಜಿತನಾಗಿ ತನ್ನ ಪ್ರಮಾಣಿಕತನವನ್ನು ಕುರಿತು ಲೀಹಾರ್ಡಿ ಸಾಹೇಬನಿಗೆ ತನಗೆ ಸಾಧ್ಯವಿದ್ದಷ್ಟು ಮನದಟ್ಟು ಮಾಡಿದನು. 'ನೀವು ಇಲ್ಲಿಯೇ ಇರಿ, ನಾನೊಬ್ಬನೇ ನನ್ನ ಜನರೊಡನೆ ಹೋಗಿ ಈ ಹಾಳು ವಿದ್ರೋಹವನ್ನು ಅಡಗಿಸುವೆನು, ಸಂದರ್ಭಕ್ಕೆ ಅನುಸಾರವಾಗಿ ನಡೆದುಕೊಳ್ಳುವುದಕ್ಕೆ ನನಗೆ ಅನುಮತಿ ಕೊಟ್ಟು ಈ ಕೆಲಸವನ್ನು ಪೂರ್ತಿ ನನ್ನ ಜವಾಬ್ದಾರಿಗೆ ಬಿಟ್ಟು ಬಿಟ್ಟರೆ ನಾನು ಈಗಲೇ ಹೊರಟು ವಿದ್ರೋಹಿಗಳ ಮುಖಂಡರನ್ನು ಜೀವಂತರಾಗಿ ಅಥವಾ ಕೊಂದು ಹಿಡಿದು ತರುವೆನು' ಎಂದು ಹೇಳಿದನು. ಕೆಪ್ಟನ್ ಲೀಹಾರ್ಡಿ ಸಾಹೇಬನು ಬೋಪುವಿನ ಮಾತಿನಲ್ಲಿ ವಿಶ್ವಾಸವಿಟ್ಟು ಆತನ ಇಷ್ಟದಂತೆ ಮಾಡುವುದಕ್ಕೆ ಅನುಮತಿಯನ್ನು ಕೊಟ್ಟನು.

ಇಷ್ಟರಲ್ಲಿ ಬೆಪ್ಪುನಾಡು ಮತ್ತು ಇತರ ನಾಡುಗಳಿಂದ ಜನರು ಬಂದು ಮಡಿಕೇರಿಯಲ್ಲಿ ಸೇರಿದರು. ಇವರಲ್ಲಿ 60 ಜನರನ್ನು ಸುಭೇದಾರ್ ಅಪ್ಪಚ್ಚನ ಕೈಕೆಳಗೆ ಕೊಡಗಿನ ಉತ್ತರ ಗಡಿಗ ಬೋಪುವು ಕಳುಹಿಸಿ ತನ್ನ ಆಪ್ತರಿಂದ ಕೂಡಿದ ಒಂದು ಸೈನ್ಯದೊಡನೆ ಸಂಪಾಜೆಗೆ ಹೊರಟನು. ಆತನೊಡನೆ ಒಂದೊಂದು ಹೊರೆ ಬೆತ್ತದ ಕೋಲುಗಳನ್ನು ಹೊತ್ತ ಇಬ್ಬರು ಆಳುಗಳೂ ಇದ್ದರು. ಬೋಪುವು ತನ್ನ ಆಪ್ತ ಸ್ನೇಹಿತರಲ್ಲಿ ನೂರು ಜನರನ್ನು ತನಗಿಂತ ಸ್ವಲ್ಪ ಮುಂದೆ ಹೋಗುತ್ತಿರುವಂತೆ ಹೇಳಿ ಕಳುಹಿಸಿದನು. ಇವರು ಹೋಗುವ ದಾರಿಯಲ್ಲಿ ಹೊಂಡ ಹಾಕಿಕೊಂಡಿರುವರೋ ಎಂದು ನೋಡಿ ಬೋಪುವಿಗೆ ಎಚ್ಚರಿಕೆಯನ್ನು ಕೊಡಬೇಕಾಗಿದ್ದಿತು. ವಿದ್ರೋಹಿಗಳೊಡನೆ ಸೇರಿದ ನಾಲ್ಕುನಾಡಿನ ಜನರಲ್ಲಿ ಮಲೆ ಕುಡಿಯರೆಂಬ ನಿಮ್ನ ವರ್ಗಕ್ಕೆ ಸೇರಿದ ಚೆಟ್ಟಿ ಕುಡಿಯನೆಂಬವನು ಒಬ್ಬನಾಗಿದ್ದನು. ಇವನು ವೀರ ರಾಜನಿಗೆ ಗುರಿ ಹೊಡೆಯುವುದಕ್ಕೆ ಕಲಿಸಿದವನಾಗಿದ್ದನು. ಮತ್ತು ವೀರ ರಾಜನ ಅತ್ಯಂತ ಆಪ್ತನೂ ಆಗಿದ್ದನು. ಈತನು ಗುರಿ ಹೊಡೆಯುವುದರಲ್ಲಿ ಎಷ್ಟು ನಿಪುಣನಾಗಿದ್ದನೆಂದರೆ ಹಾರುವ ಹಕ್ಕಿಯ ಕಣ್ಣಿಗೆ ಗುಂಡು ತಗಲಿಸಬಲ್ಲನೆಂದು ಜನರು ಅನ್ನುತ್ತಿದ್ದರು. ಅಂಥಾ ಗುರಿಗಾರನಾದ ಚೆಟ್ಟಿ ಕುಡಿಯನು ಈಗ ಬೋಪು ದಿವಾನನ್ನು ದೃಷ್ಟಿಗೆ ಬಿದ್ದ ಕೂಡಲೇ ಗುಂಡು ಹೊಡೆದು ಕೊಲ್ಲುವೆನೆಂದು ಶಪಥ ತೊಟ್ಟಿದ್ದನು. [ಸಶೇಷ.

ಕೊಡಂದೇರ ಡಿ. ಮಾಚಯ್ಯ,
L. D. Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL, KARACHI.
ದಂತ ವೈದ್ಯರು
ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ
DENTAL CLINIC
ನಲ್ಲಿ ವಿಚಾರಿಸಿರಿ. 6
ಸುಲಭ ದರ. ನವೀನ ರೀತಿಯ ಚಿಕಿತ್ಸೆ.

Shorthand, Typing etc.
ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಆೈಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.
The Manager,
Tutorial School,
52—4 Mercara.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,
Ludhiana.

12

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ[illegible] 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2[illegible]ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,
12, ಸೌತ್ ಪೆರೇಡ್, ಬೆಂಗಳೂರು.

52–18

೪೩ ವರ್ಷಗಳಿಂದ ಅನುಭವಸಿಟ್ಟು ಪ್ರಖ್ಯಾತಿ ಹೊಂದಿದ

ಕರ್ಕರೆ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕರೆ.
ಮತ್ತು ಕಂಪೆನಿ,
(52-31) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ತಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಕೆ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಕೆ. ಮಾದಮ್ಮಯ್ಯನವರು.
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ಶಾಂತೇಕಲ್ಲು—ಮೆ. ಬೆಳ್ಳಿಯಂಡ ಯಂ. ಪೂಣಚ್ಚನವರು.
(ಶಾಂತೇಕಲ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಕೂಡದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

“ಕೊಡಗು” ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಹೊಸ ವರ್ಷವು ಈ ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
“ಕೊಡಗು” ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ–ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ತ್ರಿಫ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ–ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-6-1939

ಉತ್ತಮ ಪ್ರಚಾರ! **ಜ್ಞಾನಭಂಡಾರ!**

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"
ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೇಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್
ಸೌತ್ ಪೆರೇಡ್, ಬೆಂಗಳೂರು.

(52–27)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

" ಕೊಡಗು "

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಐ. ಬೆಳ್ಯಪ್ಪ. ತಾ. ೨೧—೭—೧೯೩೯. ವಾರ್ಷಿಕ ಚಂದಾ ರೂ. ೩—೮—೦

ಸಂಪುಟ ೧೯] [ಸಂಚಿಕೆ ೫

YOURS FAITHFULLY

"Yours faithfully" has been a common subscription in all business letters. But with the CORPORATION it has not been MERELY A SUBSCRIPTION.

For the last THIRTY THREE years The CORPORATION has served its constituents most faithfully, very truly and quite sincerely. Thousands of customers have been pleased on account of the satisfying, honest Banking Service offered by the Corporation. The Corporation is proud to serve you and to say.

FAITHFULLY YOURS

The Canara Banking Corporation, Limited.

(Incorporated In British India)

Estd. 1906.

52-31

ಕೇರಳ ಆಯುರ್ವೇದಿಕ್ ವೈದ್ಯಶಾಲಾ,

ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿದ್ದಾವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯುಂಬುಗಳು, ತೈಲಗಳು, ಲೇಪನಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ

ಕೆ. ಪಿ. ಕೆ. ಪಣಿಕರ್,

ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್.)

ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

52-23

ಡಾ. ಕೆ. ಕೆ. ನಂಬಿಯಾರ್,

ಇವರ

ದಂತಚಿಕಿತ್ಸಾಲಯವನ್ನು ಸಂದರ್ಶಿಸಿ ಶಾಸ್ತ್ರೀಯ ರೀತ್ಯಾ ಕಾಪಾಡಿಕೊಳ್ಳಿರಿ. ವೀರಾಜಪೇಟೆ, ಕೊಡಗು.

ಪರೀಕ್ಷಾಭಿಪ್ರಾಯಗಳೆಲ್ಲ ಧರ್ಮಾರ್ಥ.

ಶುಶ್ರೂಷೆಗಾಗಿ ಸಿದ್ಧರಿದ್ದೇವೆ. ತೀರ ಸಾಮಾನ್ಯ ಸುಲಭ ದರಗಳು.

ನಮ್ಮ ಮುಖ್ಯ ಸಿದ್ಧತೆ.



ಬೇನೆಯಿಲ್ಲದೆ ಹಲ್ಲು ಕೀಳುವುದು. ನೋವಿಲ್ಲದೆ ಹಲ್ಲು ತುಂಬಿಮಾಡುವುದು. ಶಾಶ್ವತವಾಗಿರುವಂತೆ ಹಲ್ಲು ತೂತು ತುಂಬುವುದು.

ನಮ್ಮಲ್ಲಿ ಕೃತಕ ದಂತಗಳು-ವಲ್ಕೆನೈಟ್, ಎಂದೂ ಒಡೆಯಾಗದ ಹೆಕೊಲಾಯಿಟ್ ಅಥವಾ ಚಿನ್ನದವು: ಪ್ರತಿಯೊಂದು ಕೂಲಂಕುಷದಲ್ಲಿ ಸಂಪೂರ್ಣ ಜಾಗ್ರತೆಯಿಂದ ತಯಾರಾಗುವುವು.

31

ನಿಮಗೆ ತೃಪ್ತಿಯಾಗಬೇಕೆಂಬುದೊಂದೇ ನಮ್ಮ ಧ್ಯೇಯ.

ನೆನಪಿರಲಿ! ಹಲ್ಲಿದ್ದಂತೆ ಆರೋಗ್ಯ! ನೆನಪಿರಲಿ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ। **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವ್ಯಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು

52–11

The Agricultural & Industrial Bank Ltd

"ZANDU"

ಝುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝುಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝುಂಡೂ ಅಯೋಡೈಸ್ಡ
ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝುಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯೂ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅದ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ಫತ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟೋಕಿಸ್ಟ—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52–42)

ವೀರಾಜಪೇಟೆಯ ಏಜೆಂಟರು–ಕೆ ಕೃಷ್ಣರಾವ್, ವೀರಾಜಪೇಟೆ. (ದ ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವಶಾಖೆಗಾದರೂ ಬರೆಯಿರಿ —

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆಕ್ಕಲಿ, ಬೀಹಾರ್, ಬೆನಾರೀಸ್, ಬೆಳ್ಗಾವಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52–28

ಸಾಮಾಜಿಕ ಕಾದಂಬರಿ.

ದೇವದತ್ತ.

೨೭ ನೇ ಅಧ್ಯಾಯ.

ಕುಟೀರದ ಅಂಗಳವೂ, ಅಜುಬಾಜೂ ಬಹು ಅಸಹ್ಯವಾಗಿತ್ತು. ಎದುರಿನ ಅಂಗಳದ ಬಲಭಾಗದಲ್ಲಿ ನಾಲ್ಕೈದು ನಾಯಿಗಳು ಸಾಲಾಗಿ ಗೂಟಗಳಿಗೆ ಕಟ್ಟಲ್ಪಟ್ಟಿದ್ದವು. ರೋಮರಹಿತವಾದ ಈ ನಾಯಿಗಳ ಶರೀರದೊಳಗಿದ್ದ ಎಲುಬುಗಳನ್ನು ದೂರದಿಂದಲೇ ನೋಡಿ ಎಣಿಸುವಂತಿದ್ದವು. ಕೆಲವು ಪುಚ್ಛರಹಿತವಾಗಿದ್ದುವು. ಎರಡು ಏಕೀಕರ್ಣಗಳಾಗಿದ್ದುವು, 'ಲಂಭಕರ್ಣ' ಕುಟುಂಬಕ್ಕೆ ಸೇರಿದ ಇನ್ನೆರಡು ನಾಯಿಗಳ ಕೋಡುಗಳಂತೆ ಬೆಳೆದಿದ್ದ ಕಿವಿಗಳು ಮಧ್ಯದಿಂದ ಕತ್ತರಿಸಲ್ಪಟ್ಟಿದ್ದವು. ಇವುಗಳ ಎದುರಿನಲ್ಲಿ ಅದಕೆಗರಿಯ ಹಾಳೆಯಿಂದ ನಿರ್ಮಿಸಲ್ಪಟ್ಟಿದ್ದ ಒಂದೊಂದು ಪಾತ್ರೆಗಳು ಬಿದ್ದಿದ್ದವು. ಈ ಬಡ ಪ್ರಾಣಿಗಳು ಬೆಳಗಿನ ಚಳಿಯನ್ನು ಸಹಿಸಲಾರದೆ ಹಿಂಗಾಲುಗಳ ಮೇಲೆ ಕುಳಿತು ನಡುಗುತ್ತಾ ನಾನಾ ವಿಕಾರ ಧ್ವನಿ ಮಾಡುತ್ತಿದ್ದವು. ಆದರೂ ಯಾರೂ ಅವುಗಳ ಗೋಜಿಗೆ ಹೋಗುತ್ತಿರಲಿಲ್ಲ.

ಮನೆಯ ಎದುರಿನ ಎಡ ಭಾಗದಲ್ಲಿ ಮೂರು ಆಡುಗಳು ಕಟ್ಟಲ್ಪಟ್ಟಿದ್ದವು. ಈ ಮನೆತನಕ್ಕೆ ಸೇರಿದ ಪ್ರಾಣಿಗಳ ಬಾಲಗಳೂ, ಕಿವಿಗಳೂ ನಾನಾ ತರದ ರೂಪಾಂತರಗಳನ್ನೈದಿದ್ದುವು. ಮನೆಯ ಎದುರಿನಲ್ಲಿ ಒಂದೆರಡು ಬಲೆಗಳು ನೇತಾಡುತ್ತಿದ್ದುವು. ಒಂದೆಡೆ ನಾಲ್ಕೈದು ಹಲಸಿನ ಕಾಯಿಗಳು ಗುಡ್ಡೆಯಾಗಿ ಬಿದ್ದಿದ್ದುವು. ಆಗ ತಾನೇ ಕಡಿದು ಬಿಸುಟ ಹಲಸಿನ ಬೀಜಗಳೂ, ಸಿಪ್ಪೆಗಳೂ ಅಲ್ಲಲ್ಲಾ ಕೆದರಿ ಹೋಗಿದ್ದುವು. ಕೆಲವು ಆಡಿನ ಮರಿಗಳು ಮನೆಯ ಒಳಭಾಗದಲ್ಲಿ ತಮ್ಮ ಮಲ ಮೂತ್ರಗಳ ಮೇಲೆ ಮಲಗಿ ಮೆಲುಕಾಡುತ್ತಿದ್ದವು. ಅಂಗಳದಲ್ಲಿ ನಾಯಿ ಕೋಳಿಗಳ ಮಲಗಳೂ, ಅನೇಕ ದಿವಸದಿಂದ ಬಿದ್ದಿರತಕ್ಕ ಸೊಪ್ಪುಸೆದೆಗಳೂ ದುರ್ಗಂಧದಿಂದ ತುಂಬಿ ದರಿದ್ರ ದೇವಿಗೆ ಸುಸ್ವಾಗತವನ್ನು ಬಯಸುವಂತಿದ್ದವು.

ಕಾರ್ಯಾರ್ಥಿಯಾದ ಚಾರುದತ್ತನು ಇದನ್ನೇನೂ ಗಣಿಸದೆ ಅಂಗಳಕ್ಕೆ ಬಂದಳಿದನು. ಅಷ್ಟರಲ್ಲಿ ಒಳಗಿನಿಂದ ತಂಡ ತಂಡವಾಗಿ ಬರುತ್ತಿದ್ದ ಧೂಮವು ಗೃಹಿಣಿಯು ಆಗತಾನೇ ಅಗ್ನಿ ದೇವನಿಗೆ ಹೋಮಗೈದ (ಮೀನುಗಳ) ಹವಿರ್ಭಾಗವನ್ನು ಚಾರುದತ್ತನಿಗೂ ಸ್ವಲ್ಪ ತಂದು ಕೊಟ್ಟಿತು. ಚಾರುದತ್ತನು ತನ್ನ ಸಂತೃಪ್ತಿಯನ್ನು ತೋರ್ಪಡಿಸಲು ಕಿಸೆಯಿಂದ ಅಂಗವಸ್ತ್ರವನ್ನು ತೆಗೆದು ಮೂಗಿಗಿಟ್ಟನು.

ಅಕಾರಣವಾಗಿ ಚಂಡಿ ಹಿಡಿದು ಅಳುತ್ತಿದ್ದ ಸಣ್ಣ ಪಿಳ್ಳೆಗಳನ್ನು ಕುರಿತು ಬೇರುವ ಗೃಹಿಣಿಯ ಕೋಪಯುಕ್ತವಾದ ಕಠೋರ ಧ್ವನಿಯು ಚಾರುದತ್ತನ ಕಿವಿಗೆ ಆಗಾಗ ಕೇಳಿಸುತಿತ್ತು. ಚಾರುದತ್ತನು ಅಂಗಳವನ್ನು ದಾಟಿ ಜಗಲಿಯ ಹತ್ತಿರಕ್ಕೆ ಬಂದು ಮಲಿನವಾಗಿದ್ದ ಅದನ್ನು ಸ್ವಲ್ಪ ಉರುವಿ, ಒಂದೆಡೆ ಕುಳಿತನು. ಅಷ್ಟರಲ್ಲಿ ನಾಯಿಗಳು ಬಲವಾಗಿ ಬೊಗಳಲು ಭೀಕರ ಧ್ವನಿಯಿಂದ 'ಏನೇ! ನಾಯಿಗಳಿಗೆ ಗಂಜಿ ಕೊಟ್ಟೆಯೋ' ಎನ್ನುತ್ತಾ ದೃಢಾಂಗನಾದ ಪುರುಷನೊಬ್ಬನು ಬಲಗೈಯ್ಯಲ್ಲಿ ಒಂದು ತುಪಾಕಿಯನ್ನು ಹಿಡಿದು ಹೊರಗೆ ಬಂದನು. ಆತನು ಕಪ್ಪು ಬಣ್ಣದ ಒಂದು ಕೋಟನ್ನೂ, ಶರಾಯಿಯನ್ನೂ ತೊಟ್ಟಿದ್ದನ್ನು. ಕೋಟಿನ ಒಳಗೆ ಶರಟಾಗಲೀ ಬನೀನಾಗಲೀ ಇರಲಿಲ್ಲ. ಹೊರಗಿನ ಬೆಳಕೂ, ಗಾಳಿಯೂ ಸರಾಗವಾಗಿ ಒಳ ಹೋಗಲಿಕ್ಕೂ, ಒಳಗಿನ ಬೆವರಿನ ದುರ್ಗಂಧವು ಹೊರ ಹೊರಡಲಿಕ್ಕೂ ಇಟ್ಟ ಗವಾಕ್ಷಗಳೋ ಎಂಬ ಹಾಗೆ ಆ ಕೋಟಿನಲ್ಲಿ ಅಲ್ಲಲ್ಲಿ ಕಾಣಿಸುತ್ತಿದ್ದ ರಂಧ್ರಗಳು ಅದು ತನ್ನ ಯಜಮಾನನಿಗೆ ಅಂದಿನ ವರೆಗೆ ಮಾಡಿರತಕ್ಕ ದೀರ್ಘ ಕಾಲದ ಸೇವೆಯನ್ನು ಎಲ್ಲರಿಗೂ ತಿಳಿಸುವಂತಿದ್ದುವು. ತನ್ನ ಕೋಟಿನ ಗುಂಡಿಗಳನ್ನು ಕೂಡಿಸಿರಲಿಲ್ಲವಾದ ಕಾರಣ ಆತನ ವಿಶಾಲವಾದ ವಕ್ಷಸ್ಥಳದ ಮೇಲೆ ಹೇರಳವಾಗಿ ಬೆಳೆದಿದ್ದ ಕೇಶ ರಾಶಿಯು ಅವನಲ್ಲಡಗಿದ್ದ ಅಸಾಧಾರಣವಾದ ಧೈರ್ಯವನ್ನೂ ಇತರರಿಗೆ ಸಾರುವಂತಿದ್ದುವು. ಆತನು ಹೊರಗೆ ಬರಲು ಜಗಲಿಯಲ್ಲಿ ಗ್ರಾಮದ ಮುಖ್ಯ ಮನುಷ್ಯನೂ, ಶ್ರೀಮಂತನೂ, ಸರ್ಕಾರಿ ನೌಕರನೂ ಆದ ಚಾರುದತ್ತನು ಕುಳಿತಿರುವುದನ್ನು ನೋಡಿ, ಆಶ್ಚರ್ಯದಿಂದಲೂ, ಹೆದರಿಕೆಯಿಂದಲೂ, ನಾಚಿಕೆಯಿಂದಲೂ, ಚಕಿತನಾದನು. ಆತನು ಒಡನೆ ತುಪಾಕಿಯನ್ನು ಮೂಲೆಯಲ್ಲಿರಿಸಿ, ಕೋಟಿನ ಗುಂಡಿಗಳನ್ನು ಕೂಡಿಸಿಕೊಂಡು ಸಮೀಪಕ್ಕೆ ಬಂದು ದೈನ್ಯಭಾವದಿಂದ ನಮಸ್ಕರಿಸಿದನು. ಆತನ ಮುಖದಲ್ಲಿ ಹೊಳೆಯುತ್ತಿದ್ದ ಒಂದು ತರದ ಕಳಾಹೀನವಾದ ಆನಂದವು ತನ್ನ ನಿಜಸ್ಥಿತಿಯು ಎಷ್ಟು ಹೇಸಿಗೆಯಲ್ಲಿದೆ ಎಂಬ ಸಂಗತಿಯನ್ನು ಅವನು ಆ ಕ್ಷಣದಲ್ಲಿ ಸಂಪೂರ್ಣ ತಿಳಿದನೆಂಬುವುದನ್ನು ಇತರರಿಗೆ ತೋರ್ಪಡಿಸುವಂತಿತ್ತು. ನಾಟ್ಯ ನಗೆಯನ್ನು ಬಲತ್ಕಾರದಿಂದ ಮುಖದ ಮೇಲೆ ತೋರ್ಪಡಿಸುತ್ತಾ ತಲೆಯ ವಸ್ತ್ರದಿಂದ ಚಾರುದತ್ತನು ಕುಳಿತ ಸ್ಥಳದ ಪಕ್ಕವನ್ನು ಗುಡಿಸಿ ಹೊಲಸಿಗೆ ಮುಕ್ಕಳನ್ನು ಕಾರಣ ಕೊಡುತ್ತಾ, ಕ್ಷಮಾಪಣೆಯನ್ನು ಬೇಡುತ್ತಾ, 'ಮಹನೀಯರು ನನ್ನಂಥಾ ಹೊಲಸು ಮನುಷ್ಯನ ಗುಡಿಸಲಿಗೆ ದಯಮಾಡಿಸಿದ ಕಾರಣ ತಿಳಿಯಲಿಲ್ಲ. ಕುಟುಂಬಕ್ಕೆಲ್ಲಾ ಕ್ಷೇಮವಷ್ಟೆ' ಎಂದು ಬಹು ದೀನಸ್ವರದಿಂದ ಕೇಳಿದನು.

ಚಾರುದತ್ತನು ತನ್ನ ಮನಸಿನ ನಿಜ ಸ್ಥಿತಿಗೆ ಸರಿಯಾಗಿ ನಡೆದುದಾದರೆ ಕೇಸರಿಪಾಣಿಯ ಮನೆಯ ಸಮೀಪಕ್ಕೂ ಸಹ ಕಾಲಿಡಲಾರನು. ಆದರೆ ತನ್ನ ಕಾರ್ಯ ಸಾಧನೆಗೋಸ್ಕರ ಯಾವುದೊಂದು ತರದ ಹೇಸಿಗೆಯ ಚಿಹ್ನೆಯನ್ನೂ ತೋರ್ಪಡಿಸದೆ ಹಸನ್ಮುಖನಾಗಿ 'ಬೇಡ ಕುಳಿತ ಸ್ಥಳವು ಚೆನ್ನಾಗಿದೆ' ಎನ್ನುತ್ತಾ, 'ಶಿಕಾರಿಗೆ ಹೊರಟಿದ್ದೀಯಾ?' ಎಂದು ಪ್ರಶ್ನೆ ಮಾಡಿದನು.

ಕೇಸರಿಪಾಣಿ–ಹೌದು ಮಹಾ ಸ್ವಾಮಿ! ಕೆಲಸವಿಲ್ಲದ್ದಕ್ಕೆ ಅದೊಂದೇ ಭ್ರಾಂತಿ. ಸುಮ್ಮನೆ ತಿರುಗುವುದೊಂದೇ; ಜಾತಿಗಳೇ ಕಡಿಮೆ' ಎಂದು ಹೇಳಿ ಕೇಸರಿಪಾಣಿಯು ಒಳಗೆ ಹೋದನು. ಅಷ್ಟರಲ್ಲಿ ಕೇವಲ ನಿರಾಂಬರಿಯಾದ ಕೇಸರಿಪಾಣಿಯ ಸಣ್ಣ ಮಗುವೊಂದು ತನ್ನ ಎಡಗೈಯ್ಯಲ್ಲಿ ಒಂದು ರೊಟ್ಟಿಯನ್ನು ಹಿಡಿದು, ಅದರ ಮೇಲಿದ್ದ ಪದಾರ್ಥವು ಚೆಲ್ಲಿಹೋಗದ ಹಾಗೆ ಅದರ ಪಕ್ಕಗಳನ್ನು ಮುಂದು ತಿನ್ನುತ್ತಾ ಹತ್ತಿರ ನಿಂತಿತ್ತು. ಚಾರುದತ್ತನು, 'ಇತ್ತ ಬಾ, ನನಗೆ ಸ್ವಲ್ಪ ರೊಟ್ಟಿ ಕೊಡು' ಎಂದು ಕರೆಯುತ್ತಾ ಅದರ ತೋಳನ್ನು ಹಿಡಿದು ಸಮೀಪಕ್ಕೆ ಎಳೆಯಲು ಪ್ರಯತ್ನಿಸಿದನು. ಕೇವಲ ಬಡವರಾಗಿ ಗ್ರಾಮಗಳಲ್ಲೇ ವಾಸ ಇರುವ ಮಕ್ಕಳ ಸ್ವಭಾವಕ್ಕನುಗುಣವಾಗಿ ಈ ಮಗುವು ಅಳುತ್ತಾ ಒಳಹೋಯಿತು.

ಅಷ್ಟರಲ್ಲಿ ಕೇಸರಿಪಾಣಿಯು ಒಂದು ತಟ್ಟೆಯಲ್ಲಿ ಕೆಲವು ಹಸನಾದ ಕಿತ್ತಳೆ ಹಣ್ಣುಗಳನ್ನು ತಂದು ಚಾರುದತ್ತನ ಮುಂದಿಟ್ಟು ಕೈಕಟ್ಟಿ ನಿಂತನು.

ಚಾರು–'ಬಹಳ ಸಂತೋಷ, ಬಹು ಹಸನಾದ ಹಣ್ಣುಗಳು' ಒಂದನ್ನು ತೆಗೆದುಕೊಂಡು, 'ಸರಿ, ನಿನ್ನಿಂದ ನನಗೆ ಒಂದು ಸಣ್ಣ ಕೆಲಸವಾಗಬೇಕಾಗಿದೆ, ಖಂಡಿತ ಮಾಡಿಕೊಡಬೇಕು'

ಕೇಸರಿಪಾಣಿ–ಕೇವಲ ಗರೀಬನಾದ ನನ್ನಿಂದ ತಮ್ಮಂಥಾ ಮಹನೀಯರಿಗಾಗಬೇಕಾದ ಕಾರ್ಯವೇನಿರುವದೋ ನಾನರಿಯೆ. ಆದರೂ ಆಜ್ಞಾಪಿಸಿದಲ್ಲಿ ನನ್ನಿಂದ ಸಾಧ್ಯವಿದ್ದರೆ ಆಗುವಷ್ಟು ಪ್ರಯತ್ನಿಸಿ ನೋಡುವೆನು. ನಿಮ್ಮಂತವರು ಆಜ್ಞಾಪಿಸುವುದೆಂದರೇನು? ನಾವದಕ್ಕೆ ಆಗುವುದಿಲ್ಲವೆಂಬುದುಂಟೇ?

ಚಾರು–ಮತ್ತೇನಿಲ್ಲ, ನನಗೆ ಎರಡು ಸೇರು ಹಸನಾದ ಸಿಹಿ ಸೇಂದಿ ನಾಳೆ ಬೆಳಗ್ಗೆ ಬೇಕಾಗಿದೆ. ಕಲೆಕ್ಟರ್ ಸಾಹೇಬರು ನಮ್ಮವರಲ್ಲಿ ಕೇಂಪ್ ಮಾಡಿದ್ದಾರೆ. ಅವರ ಬಟ್ಲರ್ ಇದ್ದಾರೆ ನೋಡು ಅವರು ನಿನ್ನೆ ಹೇಳಿ ಕಳುಹಿಸಿದ್ದಾರೆ. ಏನು ಮಾಡುವುದು? ದೊರೆ ಕಾಟಕ್ಕಿಂತ ಅವರ ಆಳುಗಳ ಕಾಟವೇ ಜೋರಾಗಿದೆ. ಕೊಡದೆ ಹೋದರೆ ಇಲ್ಲದ ಸಲ್ಲದ ದೂರು ಹೇಳುತ್ತಾರೆ.

ಕೇಸರಿ–ಇದಕ್ಕಾಗಿ ಇಷ್ಟು ದೂರ ಬರಬೇಕಾಗಿತ್ತೆ. ಯಾರಾದರೊಬ್ಬ ಜವಾನನ್ನು ಕಳುಹಿಸಿದ್ದರೆ ಸಾಕಾಗಿತ್ತಲ್ಲ. ನಾಳೆ ಕೋಳಿ ಕೂಗುವ ಹೊತ್ತಿಗೆ ನಿಮ್ಮ ಕಾಲಬುಡಕ್ಕೆ ತಲಪಿಸಿಬಿಡುತ್ತಿದ್ದೆನು. ಸುಮ್ಮನೆ ಇಷ್ಟು ಶ್ರಮ ತೆಗೆದಿರಿ.

ಚಾರು–'ಚಿಂತೆ ಇಲ್ಲ, ಆತುರದಿಂದ ಬೇಕಾಗಿತ್ತು. ಆದುದರಿಂದ ನಾನೇ ಬಂದದ್ದಾಯಿತು,' ಎನ್ನುತ್ತಾ ಕಿಸೆಯಿಂದ ಒಂದು ರೂಪಾಯಿ ನಾಣ್ಯವನ್ನು ತೆಗೆದು ಕೇಸರಿಪಾಣಿಗೆ ಕೊಡಲು ಹೋದನು.

ಕೇಸರಿ–ನಮಸ್ಕಾರ, ನಿಮ್ಮ ದಯೆಯೊಂದಿದ್ದರೆ ಸಾಕು. ನಾಳೆ ತಲಪಿಸಿಬಿಡುತ್ತೇನೆ. ಬೇಡಿ, ಬೇಡಿ ಎಂದು ಹಿಂದೆ ಸರಿದನು.

'ಹಾಗಾದರೆ ನಿನಗಿರಲಿ' ಎಂದು ಬದಿಯಲ್ಲಿ ನಿಂತಿದ್ದ ಕೇಸರಿಪಾಣಿಯ ಒಬ್ಬ ಮಗನಿಗೆ ಅದನ್ನು ಕೊಟ್ಟು ತಾನು ಹೊರಡಲು ಎದ್ದನು. ಕೇಸರಿಪಾಣಿಯು ಕಿತ್ತಳೆಹಣ್ಣುಗಳನ್ನು ತೆಗೆದುಕೊಳ್ಳಬಹುದಾಗಿತ್ತು. ಆದರೆ ತನ್ನ ಜೇಬು ಹಾಳಾಗುತ್ತೆ ಎಂಬ ದೈನ್ಯಭಾವದಿಂದ ತನ್ನ ಮನಸಿನ ಅಸಮಂಬಗೆಯನ್ನು ತೋರ್ಪಡಿಸಿದನು.

ಚಾರು–ಚಿಂತೆ ಇಲ್ಲ, ಎರಡು ತೆಗೆದುಕೊಳ್ಳುತ್ತೇನೆ.

ಕೇಸರಿ–ಹಾಗಾದರೆ ಬಾಕಿ ಇರುವುದನ್ನು ನಾನು ನಾಳೆ ಬರುವಾಗ ನಿಮ್ಮಲ್ಲಿಗೆ ತಲಪಿಸಿಬಿಡುತ್ತೇನೆ.

ಚಾರುದತ್ತನು ಹೊರಟನು. ಗೃಹಿಣಿಯು ಬಾಗಿಲಿನಲ್ಲಿ ನಿಂತು ನೋಡುತ್ತಿದ್ದಳು. ಕೇಸರಿಪಾಣಿಯು ಗದ್ದೆಯ ವರೆಗೆ ಹಿಂಬಾಲಿಸಿದನು. ಆ ಮೇಲೆ ಚಾರುದತ್ತನು ಅವನನ್ನು ಹಿಂದಕ್ಕೆ ಕಳುಹಿಸಿ ಮುಂದಿನ ತನ್ನ ಕಾರ್ಯವನ್ನು ಯೋಚಿಸುತ್ತಾ ನಿಜ ಭವನವನ್ನು ಸೇರಿದನು.

೨೮ನೇ ಅಧ್ಯಾಯ.

ಕೇಸರಿ ಪಾಣಿಯು ತನ್ನ ಮಾತಿಗೆ ತಪ್ಪಲಿಲ್ಲ. ಮಾರಣೆ ದಿವಸ ಬೆಳಕು ಹರಿಯುವುದಕ್ಕೆ ಮೊದಲೆ ಆತನು ಚಾರುದತ್ತನ ಅಂಗಳವನ್ನು ತಲಪಿದನು.

ಕೇಸರಿಪಾಣಿಗೆ ಊರಲ್ಲಿರತಕ್ಕ ಸಕಲ ಬಿಲ್ಲವರೂ ಆಪ್ತ ಸ್ನೇಹಿತರು. ಕೈಯಲ್ಲಿ ಕಾಸಿಲ್ಲದಿದ್ದರೂ, ಅವನ ನಿತ್ಯ ಅಭ್ಯಾಸಕ್ಕನುಗುಣವಾಗಿ ತಪ್ಪದೆ ಎರಡು ಸೇರು ಹೆಂಡವು ಸಿಕ್ಕಿಯೇ ಸಿಕ್ಕುತಿತ್ತು. ಅದರ ಸಲುವಾಗಿ ಅವನು ಬಿಲ್ಲವರಿಗೆ ಸಾಕಷ್ಟು ಕೃತನಾಗಿಯೇ ಇದ್ದನು. ಅವರಿಗೆ ಬೇಕಾದ ಏಣಿಗಳು, ಬಳ್ಳಿಗಳು ಇಲ್ಲವೇ ಮನೆ ಅಥವಾ ಕೊಟ್ಟಿಗೆ ಕಟ್ಟಲಿಕ್ಕೆ ಬೇಕಾದ ಗಳಗಳು, ಮರಗಳು, ಮತ್ತು ಇನ್ಯಾವ ಸೌಕರ್ಯಗಳೇ ಬೇಕಾಗಿದ್ದಲ್ಲು ಕೇಸರಿಪಾಣಿಗೆ ಒಂದು ಅಪ್ಪಣೆ ಇತ್ತರೆಂದರೆ ಸಾಕು. ಸಕಲವೂ ಮರುಕ್ಷಣದಲ್ಲೇ ಅವರ ಕಾಲುಬುಡದಲ್ಲಿ ಬೀಳುತಿದ್ದವು. ತನ್ನ ದೃಢಕಾಯಕ್ಕೆ ಸರಿಯಾದ ಸಾಮರ್ಥ್ಯವೂ, ಧೈರ್ಯವೂ ಅವನಲ್ಲಿ ಹೇರಳವಾಗಿದ್ದವು. ಎಂಥಾ ನಿರ್ಜನವಾದ ಅರಣ್ಯ ಪ್ರದೇಶದಲ್ಲಾದರೂ ಆತನು ಯಾವ ಹೊತ್ತಿನಲ್ಲಿಯೂ ಏಕಾಂಗಿಯಾಗಿ ತಿರುಗಬಲ್ಲನು. ಎಂಥಾ ಎತ್ತರವಾದ ಮರಕ್ಕಾದರೂ ಹತ್ತಬಲ್ಲನು.

ತನ್ನಲ್ಲಡಕವಾಗಿದ್ದ ಈ ಅಸಾಧಾರಣ ಸಾಮರ್ಥ್ಯಗಳನ್ನು ಆತನು ತನ್ನ ಸ್ವಂತ ಗೃಹಕೃತ್ಯದಲ್ಲಿ ವಿನಿಯೋಗಿಸುತ್ತಿರಲಿಲ್ಲ. ಆತನ ಪಿತ್ರಾರ್ಜಿತ ಜಮೀನುಗಳೆಲ್ಲಾ ಜಾನುವಾರುಗಳಿಗೆ ಮೇಯತಕ್ಕ ಹುಲ್ಲುಗಾವಲುಗಳಾಗಿದ್ದು, ತೋಟಗಳೆಲ್ಲಾ ಕಾಡು ಸೇರಿಕೊಂಡಿದ್ದಿತ್ತಾದರೂ, ಕೇಸರಿಪಾಣಿಯ ಮನೆಯಲ್ಲಿ ಮಾತ್ರ ಹಣ್ಣುಹಂಪಲುಗಳಿಗಾಗಲೀ ನಾನಾ ತರದ ತರಕಾರಿಗಳಿಗಾಗಲೀ ಎಂದೂ ಬಡತನವಿರಲಿಲ್ಲ. ಯಾವ ವಸ್ತುಗಳನ್ನು ಇತರ ಗ್ರಾಮಸ್ಥರು ಬೆಳಿಸಲು ಅನೇಕ ದಿವಸಗಳ ವರೆಗೆ ಕಷ್ಟಪಡುತ್ತಿದ್ದರೋ ಅಂಥಾ ವಸ್ತುಗಳ ಪೈಕಿ ನೂತನವಾದ ಮತ್ತು ಹಸನಾದ ವಸ್ತುಗಳನ್ನು ಕೇಸರಿಪಾಣಿಯು ತನ್ನ ಸಾಮರ್ಥ್ಯ ಬಲದಿಂದ ಒಂದು ರಾತ್ರಿ ನಿದ್ರೆಗೆಟ್ಟನೆಂದರೆ ಉಂಡು ಮಿಕುವಷ್ಟು ಸಂಪಾದಿಸಿಬಿಡುತ್ತಿದ್ದನು. [ಅಪೂರ್ಣ.

—o—

ಕೊಡಗನ್ನು ಮೈಸೂರಿಗೆ ಸೇರಿಸಬೇಕೇ?

(ಲೇಖಕ:— ಮಿ. ಕೆ. ಕುಶಾಲಪ್ಪ.)

ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂಬ ಒಂದು ಚಿಕ್ಕ ಪುಸ್ತಕವು ನನ್ನ ಕೈ ಸೇರಿತು. ಅದನ್ನು ಓದಿ ನೋಡಿದ ನನಗೆ ಒಂದು ಜವಾಬು ಬರೆಯಬೇಕೆಂಬ ಕುತೂಹಲವುಂಟಾಯಿತು. ಅದರಂತೆಯೇ ಈ ಲೇಖನವನ್ನು ಬರೆದದ್ದಾಗಿದೆ.

ಕೊಡಗಿನ ಈಗಿನ ಉತ್ಪತ್ತಿಯು ಈಗಿನ ಖರ್ಚಿಗಿಂಥ ಕಮ್ಮಿಯಾಗುವದರಿಂದ ಕೊಡಗು ಪ್ರತ್ಯೇಕವಾಗಿದ್ದು ಅಭಿವೃದ್ಧಿಗೆ ಬರಲು ಸಾಧ್ಯವಿಲ್ಲವೆಂದು ಬರೆದಿರುವರು. ವಿಚಾರಿಸಿದರೆ ಮೈಸೂರು ದೇಶದ ಉತ್ಪತ್ತಿಯು ಖರ್ಚಿಗೆ ಸಾಲದೆ ಅನೇಕ ವರ್ಷಗಳಿಂದ ಮೈಸೂರು ಸರಕಾರವು ಹೆಚ್ಚು ಸಾಲಮಾಡಿ ಅವರ ದೇಶಕ್ಕೆ ಬೇಕಾದ ನೀರು ಸರಬರಾಯಿಯ ಕೆಲಸ ಮತ್ತು ಅನೇಕ ತರದ ಕಾರ್ಖಾನೆಗಳನ್ನು ಮಾಡಿ ದೇಶದ ಅಭಿವೃದ್ಧಿಗೆ ಕೆಲಸ ಮಾಡಿದಲ್ಲದೆ ಅವರ ಉತ್ಪತ್ತಿಯ ಹಣದಿಂದ ಮಾಡಿದ್ದಲ್ಲವೆಂಬುದು ತಿಳಿಯಬರುವದು. ಹಾಗೆಯೇ ನಮ್ಮ ದೇಶದಲ್ಲೂ ಸಹ ಹೊರಗಿನಿಂದ ಸಾಲ ಹೊಂದಿಕೊಂಡು ದೇಶದ ಅಭಿವೃದ್ಧಿಗೆ ಪ್ರಯೋಜನಕರವಾದ ಕೆಲಸವನ್ನು ಮಾಡಿದರೆ ಉತ್ಪತ್ತಿ ಹೆಚ್ಚುವದಲ್ಲದೆ ದೇಶವು ಅಭಿವೃದ್ಧಿಯಾಗಲು ಅನುಕೂಲವಿದೆ. ಹಣದ ಅಭಾವವು ಪ್ರತಿಯೊಂದು ದೇಶದಲ್ಲೂ ಇದೆ. ಇದಕ್ಕಾಗಿ ಬೇರೆ ದೇಶಕ್ಕೆ ಸೇರಬೇಕೆಂಬುದು ಸಮಂಜಸವಾದ ಕಾರಣವಾಗದು.

ಕೊಡಗು ದೇಶವನ್ನು ನಾವೇ ಆಳಬೇಕೋ ಯಾ ಬೇರೆಯವರು ಆಳಬೇಕೆಂಬ ಪ್ರಶ್ನೆಯು ದೇಶದ ಮುಂದೆ ಬಂದದ್ದು ಇದೇ ಮೊದಲಲ್ಲವೆಂದೂ, ಇದಕ್ಕೆ ಮೊದಲು ಎರಡು ಸಾರೆ ತಲೆದೋರಿತ್ತೆಂದು ಆ ಎರಡು ವೇಳೆಯಲ್ಲಿಯೂ ಆ ಸಮಸ್ಯೆಯು ವಿವೇಕವಾದ ರೀತಿಯಲ್ಲಿ ಬಗೆ ಹರಿಸಲ್ಪಟ್ಟಿತೆಂದೂ ಬರೆಯುತ್ತಾರೆ. ಹಾಗೆ ಯೋಗ್ಯ ರೀತಿಯಲ್ಲಿ ಬಗೆ ಹರಿಸಲ್ಪಟ್ಟಿದ್ದರೆ ಪುನಹ ಅದೇ ಸಮಸ್ಯೆಯು ತಲೆಯೆತ್ತುತ್ತಿರಲಿಲ್ಲ. ಆದ್ದರಿಂದ ಮೊದಲು ಎರಡು ಸಾರೆ ಮಾಡಿದ ಏರ್ಪಾಡು ಸರಿಯಲ್ಲವೆಂಬದು ಎಲ್ಲರೂ ಒಪ್ಪಬೇಕಾದ ಸಂಗತಿಯಾಗಿದೆ. ಹೇಗೆಂದರೂ ಪುಸ್ತಕದ ಕರ್ತರು ಬರೆದ ಮೇರೆ 500 ವರ್ಷಗಳ ಹಿಂದೆ ಇಕ್ಕೇರಿ ರಾಜನಿಗೆ ರಾಜ್ಯಾಡಳಿತವನ್ನು, ಬಿಟ್ಟುಕೊಟ್ಟದ್ದರಿಂದ ದೇಶೀಯರು ರಾಜರ, ಕ್ರೂರ ಆಡಳಿತಕ್ಕೆ ಒಳಪಡಬೇಕಾಯಿತು. ಇದನ್ನು ತಪ್ಪಿಸಲಿಕ್ಕೆ ಬ್ರಿಟಿಷ್ ಸರಕಾರದ ಮರೆ ಹೊಕ್ಕು ಅವರನ್ನು ವಶಮಾಡಿಸಿಕೊಳ್ಳಬೇಕಾಯಿತು. ಈ ಬಗೆ 100 ವರ್ಷಗಳಲ್ಲಿ ಬ್ರಿಟಿಷರು ದೇಶವನ್ನು ಯಾರು ಆಳಬೇಕೆಂಬ ಪ್ರಶ್ನೆಯನ್ನು ಕೇಳುವಾಗ್ಯೆ ನಾವೇ ಆಳಿಕೊಳ್ಳುತ್ತೇವೆಂಬ ತೀರ್ಮಾನ ಮಾಡಿದ್ದಾರೆ. ಈಗ್ಯೆ ನಮ್ಮ ದೇಶವು ಬೇರೆಯವರ ಮರೆಹೋಗಬೇಕೆಂಬ ಪ್ರಶ್ನೆಯು ತಲೆದೋರುತಿಲ್ಲ. ಈಗಲೂ ಸಹ ನಾವು ಮೈಸೂರಿಗೆ ಸೇರಬೇಕೆಂಬ ಅಭಿಪ್ರಾಯಪಟ್ಟದ್ದೇ ಆದರೆ ಇನ್ನು ಕೆಲವು ಕಾಲದಲ್ಲಿ ಮುಂದ ದೇಶವು ಹೇಗೆ ನಡೆಯಬೇಕೆಂಬ ಪ್ರಶ್ನೆಯು ಬರಬಹುದು. ನಾನು ಮೇಲೆ ಹೇಳಿದ ರೀತಿ ಎರಡು ಸಾರೆ ನಾವು ಬೇರೆಯವರ ಜೊತೆ ಸೇರಿ ಅದರ ಕಟುಫಲವನ್ನು ತಿಂದಿರುವೆವು. ಪುನಹ ಇನ್ನೊಂದು ಸಾರೆ ನಮ್ಮ ಸ್ವಾತಂತ್ರ್ಯವನ್ನು ಮಾರಿಕೊಳ್ಳಲು ಪ್ರಯತ್ನಿಸುತ್ತಿರುವ ಕೆಲವೊಂದು ಜನರ ನಡತೆಯು ಲಾಂಛನಾಸ್ಪದವಾದದ್ದು.

ಕೊಡಗಿನ ಆದಾಯ ವ್ಯಯವನ್ನು ಸಮಗಟ್ಟಲು ಖರ್ಚನ್ನು ಜೋತಾಮಾಡುವದರಿಂದ ಸರ್ಕಾರಿ ಕೆಲಸಗಳ ದಕ್ಷತೆಗೂ, ಜನತೆಯ ಸುರಕ್ಷತೆಗೂ ಕುಂದಕ ಉಂಟಾಗುವದೆಂದು ಬರೆಯುತ್ತಾರೆ. ಕೊಡಗಿನಲ್ಲೇ ಅಲ್ಲ; ಇಡೀ ಹಿಂದುಸ್ಥಾನದ ರಾಜ್ಯಾಡಳಿತವು ತಲೆ ಭಾರವಾದದ್ದೆಂದೂ, ಇದೇ ಆಡಳಿತವನ್ನು ಅದೆಷ್ಟೋ ಕಮ್ಮಿ ಖರ್ಚಿನಿಂದ ಮಾಡಬಹುದೆಂಬ ಅಭಿಪ್ರಾಯವು ಅನೇಕ ಅಖಂಡ ಮುಖಂಡರಿಂದಲೇ ಘೋಷಿಸಲ್ಪಟ್ಟಿದೆ. ಇದಕ್ಕೆ ದೃಷ್ಟಾಂತರವಾಗಿ—ಮದ್ರಾಸ್ ವಗೈರೆ ದೊಡ್ಡ ಪ್ರಾಂತ್ಯಗಳ ಮಂತ್ರಿಗಳಿಗೆ ಕೊಡುತ್ತಿದ್ದ ಸಾವಿರಗಟ್ಲೆ ಸಂಬಳದ ಕೆಲಸವನ್ನು ಈಗಿನ ಕಾಂಗ್ರೆಸ್ ಮಂತ್ರಿಗಳು 500 ರೂಪಾಯಿ ಸಂಬಳದಲ್ಲಿ ಬಹು ದಕ್ಷತೆಯಿಂದ ನಡಿಸುತ್ತಿರುವದನ್ನು ಕೊಡಬಹುದು. ಆದ್ದರಿಂದ ಖರ್ಚನ್ನು ನ್ಯಾಯರೀತಿಯಿಂದ ಕಮ್ಮಿ ಮಾಡಿದರೆ ಅವ್ಯವಸ್ಥೆ ಉಂಟಾಗುವದೆಂಬುದು ಕೇವಲ ಮಾನಸಿಕ ಕಲ್ಪನೆಯೇ ಆಗಿದೆ.

ಕೊಡಗಿನ ಜನಸಂಖ್ಯೆಯು ಕಡಿಮೆಯಾಗುತ್ತಾ ಬರುತ್ತಿದೆಯೆಂದೂ ಹೇಳುತ್ತಾರೆ. ಇದು ಕಾಫಿಗೆ ಕ್ರಯವಿಲ್ಲದೆ ತೋಟದ ಕೂಲಿಯಾಳುಗಳನ್ನು ಸೇರಿಸುವದು ಕಮ್ಮಿ ಮಾಡಿದ ಕಾರಣವಾಗಿದೆ. ಗ್ರಾಮಾಂತರಗಳಲ್ಲಿ ಜನರ ಆರೋಗ್ಯವು ಅಷ್ಟು ಕೆಟ್ಟಿಲ್ಲ, ಜನಸಂಖ್ಯೆಯೂ ಕಮ್ಮಿಯಾಗಿಲ್ಲ, ಕೊಡಗಿನ ಆಡಳಿತ ವೆಚ್ಚದಲ್ಲಿ ಹೆಚ್ಚು ಸಂಬಳಗಳುಳ್ಳ ಉದ್ಯೋಗಗಳಿಗೆ ಸಂಬಳ ಕಮ್ಮಿಯಾಗಬೇಕೆಂಬದು ಎಲ್ಲರ ಒಪ್ಪತಕ್ಕ ಮಾತಾಗಿದೆ. ಇದಕ್ಕಾಗಿಯೇ ದೇಶೀಯರು ಆಡಳಿತದಲ್ಲಿ ನಮ್ಮ ಕೈವಾಡವು ನಡೆಯಬೇಕೆಂದೂ ಕೇಳುವದಾಗಿದೆ. ಆಡಳಿತ ಸ್ವಾತಂತ್ರ್ಯ ಸಿಕ್ಕಿದಲ್ಲಿ ಆಯವ್ಯಯವನ್ನು ಆಡಳಿತಕ್ಕೆ ತೊಂದರೆ ಬಾರದ ರೀತಿ ಸಮಗಟ್ಟುವದು ಬಹು ಸುಲಭದ ಕೆಲಸ. ಉದ್ಯೋಗಸ್ಥರ ಸಂಬಳ ಕಮ್ಮಿ ಮಾಡಿದ ಮಾತ್ರಕ್ಕೆ ದೇಶದ ಪ್ರಾಮುಖ್ಯತೆಯು ಕಮ್ಮಿ ಆಗಲಿಕ್ಕೆ ಕಾರಣವಿಲ್ಲ. ಮದ್ರಾಸಿನ ಮಂತ್ರಿಗಳಿಗೆ ರೂ.500 ಸಂಬಳ ಕೊಡುವದರಿಂದ ಮದ್ರಾಸು ಪ್ರಾಂತ್ಯದ ಪ್ರಾಮುಖ್ಯತೆಯು ಕಮ್ಮಿಯಾಗಿರುವದೇನು?

ಕೊಡಗಿನಲ್ಲಿ ಜವಾಬ್ದಾರಿ ಸರಕಾರ ಏರ್ಪಡಿಸಿ ನಡೆಸಲು ಸಾಧ್ಯವಿಲ್ಲವೆಂದು ಬರೆಯುತ್ತಾರೆ. ಆಯ ವೆಚ್ಚದ ಅಧಿಕಾರವು ಸಿಕ್ಕಿದಲ್ಲಿ ಆಯ ವೆಚ್ಚವನ್ನು ಸರಿಗಟ್ಟಿಕೊಂಡು ದೇಶದ ಅಭಿವೃದ್ಧಿಯನ್ನು ಯೋಗ್ಯ ರೀತಿ ನಡಿಸಿಕೊಂಡು ಹೋಗಬಹುದು. ಇದಕ್ಕಾಗಿ ಎಲ್ಲರೂ ಒಮ್ಮನಸಿನಿಂದ ಹೋರಾಡಬೇಕಾಗಿದೆ. ಪ್ರೌಢ ವಿದ್ಯಾಭ್ಯಾಸಕ್ಕೂ, ವೃತ್ತಿ ಶಿಕ್ಷಣಕ್ಕೂ ಅನುಕೂಲವಿಲ್ಲವೆಂದು ಹೇಳುತ್ತಾರೆ. ಈ ಒಂದು ಕಾರಣಕ್ಕಾಗಿ ನಾವು ಮೈಸೂರು ದೇಶಕ್ಕೆ ಸೇರಿ ಶರಣು ಹೊಡೆಯಬೇಕಾದ್ದಿಲ್ಲ. ನಮಗೆ ಅವಶ್ಯವಿರುವ ತರಬೇತಿಗೆ ಬೇರೆ ಯಾವ ದೇಶಕ್ಕಾದರೂ ಕಳುಹಿಸಿ ತರಬೇತು ನಡಿಸಬಹುದು. ಇದು ಪ್ರತಿಯೊಂದು ದೇಶದವರು ಮಾಡುವ ಪದ್ಧತಿಯಾಗಿದೆ.

ಕೇಂದ್ರ ಸರಕಾರದಿಂದ ಸಹಾಯ ದ್ರವ್ಯ ಸಿಕ್ಕಿದ ಹೊರತು ರಾಜ್ಯಾಡಳಿತವನ್ನು ನಡೆಸಕೂಡದೆಂದೂ, ಕೊಡಗು ಸರಕಾರದವರು ಪ್ರಯತ್ನ ಪಟ್ಟರೂ ಅದು ಫಲಕಾರಿಯಾಗಲಿಲ್ಲವೆಂದೂ, ಇದಕ್ಕಾಗಿ ಕೊಡಗನ್ನು ಮೈಸೂರಿಗೆ ಸೇರಿಸಬೇಕೆಂದೂ ಒಂದು ಹೇಳಿಕೆ. ಈಗ್ಯೆ 100 ವರ್ಷಗಳಿಂದ ನಮ್ಮನ್ನು ಆಳುತ್ತಿರುವ, ನಮ್ಮ ದೇಶದ ಉತ್ಪತ್ತಿಯನ್ನು ಹೊಂದಿಕೊಂಡಿರುವ ಬ್ರಿಟಿಷ್ ಸಾಮ್ರಾಜ್ಯ ಶಾಹಿಯಿಂದ ಪುರೋಭಿವೃದ್ಧಿಯನ್ನು ಸಾಧಿಸಲಾಗದಿದ್ದರೆ ಇಮ್ಮಡಿ ಗುಲಾಮಗಿರಿಗೆ ಸಿಲುಕಿರುವ ಮೈಸೂರು ಸರಕಾರದವರಿಂದ ಎಂದಿಗೂ ಸಾಧ್ಯವಾಗದು. ಮೈಸೂರು ಸರಕಾರದವರು ನಮ್ಮ ದೇಶದ ಆಡಳಿತಕ್ಕೆ ವರ್ಷಂಪ್ರತಿ ಲಕ್ಷಗಟ್ಲೆ ರೂಪಾಯಿ ಕೊಡುವಂತೆ ಒಪ್ಪಿದ್ದಾರೆಯೇ? ತಮ್ಮ ಜನತೆಯ ಹಿತವನ್ನು ಬಯಸುವ ಯಾವದೊಂದು ರಾಷ್ಟ್ರವು ಹಾಗೇ ಮಾಡಿ ತನ್ನ ಪ್ರಜೆಗಳನ್ನು ಕಷ್ಟಕ್ಕೆ ಸಿಲುಕಿಸಲಿಕ್ಕಿಲ್ಲ. ಮಿ ಮುತ್ತಣ್ಣನವರು, ಮೈಸೂರಿಗೆ ಸೇರಿದರೆ ನಮ್ಮ ಆಡಳಿತವನ್ನು ಅವರ ಹಣದಿಂದ ನಡಿಸಿಕೊಂಡು ಹೋದಾರೆಂದು ನಂಬಿಕೊಂಡಿರುವ ಹಾಗೆ ಕಾಣುತ್ತೆ. ಇದು ತಿರುಕನ ಸ್ವಪ್ನದಂತಾಗುವದು. ದೇಶೀಯರು ಒಗ್ಗಟ್ಟಿನಿಂದ ಕೆಲಸ ಮಾಡಿದಲ್ಲಿ ಕೇಂದ್ರ ಸರಕಾರದಿಂದ ಖಂಡಿತವಾಗಿಯೂ ವಂತಿಗೆ ಸಿಕ್ಕಬಹುದು.

ಕೊಡಗು ದೇಶದಲ್ಲಿ ಉತ್ಪತ್ತಿ ಕಮ್ಮಿಯಾದ್ದರಿಂದ ಪ್ರತ್ಯೇಕ ಸರಕಾರ ನಡೆಸಲು ಕಂದಾಯವನ್ನು ಹೆಚ್ಚಿಸಬಹುದೆಂದು ಇವರ ಊಹನೆ. ಮೈಸೂರಿಗೆ ಸೇರಿದ ಮಾತ್ರಕ್ಕೆ ಇಂದು ಸಾಲದಲ್ಲಿ ತಾನೇ ಮುಳುಗಿರುವ ರಾಷ್ಟ್ರವು ಯಾವ ಕೊಡುಗೈಯಿಂದ ಕೊಡಗನ್ನು ಮನ್ನಿಸೀತು? ಇದರಿಂದ ಕೊಡಗು ಮೈಸೂರಿನೊಂದಿಗೆ ಸಂಯೋಜನೆಯಾದರೆ ಎಸೆಂಬ್ಲಿಯಲ್ಲಿ ಸಿಕ್ಕಬಹುದಾದ ಒಂದೆರಡು ಸ್ಥಳದಿಂದ ಹೇಗೆ ಕೊಡಗಿನ ಹಿತಸಾಧನೆಯನ್ನು ಮಾಡಲಾದೀತು? ಬಹುಮತದಿಂದ ಕೂಡಿರುವ ಮೈಸೂರು ಜನರ ಕೋಲಾಹಲದಲ್ಲಿ ನಮ್ಮ ಕೊಡಗಿನ ಆರ್ತಧ್ವನಿಯು ಕೇಳೀತೇ?

ಕೊಡಗಿನ ಸಾಗಿನ ದರದ ಭೂಕಂದಾಯ ಏಕ್ರೆಗೆ 2-8-0 ರೂಪಾಯಿಯಿಂದ 4-8-0 ರೂಪಾಯಿ ವರೆಗೆ ಇರುತ್ತೆ. ಸರಾಸರಿ ನೋಡಿದರೆ ಏಕ್ರೆ ಒಂದರ 3-0-0 ರೂಪಾಯಿ ಬೀಳುತ್ತೆ. ಮೈಸೂರು ದೇಶದ ಕಂದಾಯ ಏಕ್ರೆ ಒಂದರ 4-0-0, 8-0-0, 12-0-0 ಈ ನೇರೆ ಇರುವದು. ಇದನ್ನು ಸರಾಸರಿ ನೋಡಿದರೆ ಏಕ್ರೆ ಒಂದಕ್ಕೆ 8-0-0 ಬೀಳುತ್ತೆ, ಮೈಸೂರು ರೈತನಿಂದ 8 ರೂಪಾಯಿ ದರದ ಕಂದಾಯ ವಸೂಲ್ಮಾಡಿ ಕೊಡಗಿನಲ್ಲಿ 3-0-0 ದರದ ಕಂದಾಯ ಕೊಡುವವರನ್ನು, ಸಾಕುವದೆಂಬುದು ಒರೇ ಕನಸಿನ ಮಾತು. ಆದ್ದರಿಂದ ಮೈಸೂರಿಗೆ ಸೇರಿದರೆ ಕಂದಾಯ ಹೆಚ್ಚಾಗುವದು. ಇದರಿಂದ ಆಡಳಿತ ಖರ್ಚು ಕಳೆದು ನಿಲ್ಲುವ ಉಳುವರಿಯಾದರೂ ಮೈಸೂರು ಸರಕಾರದಲ್ಲೇ ಉಳಿಯುವದೆಂಬುದು ತಿಳಿದ ವಿಷಯ. ದೇಶದಲ್ಲಿ ಕ್ಷಾಮಡಾಮರಗಳು ತಲೆದೋರಿದಾಗ ಈಗ ನಾವು ಕೇಂದ್ರ ಸರಕಾರವನ್ನು ಬೇಡುತ್ತಿರುವಂತೆಯೇ ಮೈಸೂರು ಸರಕಾರವನ್ನು ಬೇಡಬೇಕಾಗುವದು. ನಾವು ಬೇರೆ ಇದ್ದು ಹೆಚ್ಚು ಕಂದಾಯ ಹಾಕಿದ ಪಕ್ಷ ಹಣದ ವಿಲೆವಾರಿ ನಮ್ಮಲ್ಲಿರುತ್ತೆ. ಆದ್ದರಿಂದ ನಮ್ಮ ಇಚ್ಛೆಯ ಮೇರೆ ದೇಶದ ಅಭಿವೃದ್ಧಿಗೆ ಕೆಲಸ ಮಾಡಬಹುದು. ಈ ಕಾರಣಗಳಿಂದಲೂ ಮೈಸೂರಿಗೆ ಸೇರುವದರಿಂದ ಕ್ಷೇಮವಿಲ್ಲ. ನಾವು ಪ್ರತ್ಯೇಕವಿರಲು ಗರೀಬ ರೈತನಿಗೆ ತೆರಿಗೆಯನ್ನು ಹೊರಿಸದೆ ಬೇರೆ ವ್ಯಾಪಾರ ವಗೈರೆ ಅನುಕೂಲಸ್ಥರಿಗೆ ತೆರಿಗೆ ಹಾಕುವದರಿಂದ ಆಯ ವ್ಯಯವನ್ನು ಸರಿಗಟ್ಟಬಹುದು. ಆದ್ದರಿಂದ ದೇಶಪ್ರೇಮವಿರುವ ನಮ್ಮ ದೇಶೀಯರು ನಮ್ಮಲ್ಲಿರುವ ಅಸೂಯೆಯನ್ನು ಬಿಟ್ಟು ಒಗ್ಗಟ್ಟಿನಿಂದ ದೇಶದ ಸ್ವತಂತ್ರಕ್ಕ ಹೋರಾಡಿ ಸ್ವತಂತ್ರವನ್ನು ಪಡೆದುಕೊಂಡು, ದೇಶದ ಏಳಿಗೆಗಾಗಿ ಒಗ್ಗಟ್ಟಿನಿಂದ ಕೆಲಸ ಮಾಡಬೇಕಿದೆ. ಕೊಡಗನ್ನು ಮದ್ರಾಸು ಪ್ರಾಂತ್ಯದೊಡನೆ ಸೇರಿಸಕೂಡದೆಂದು ಮಿ. ಮುತ್ತಣ್ಣನವರು ಅಭಿಪ್ರಾಯಪಟ್ಟದಕ್ಕೆ ನಾನು ವಂದಿಸುತ್ತೇನೆ. ಇವರು ಮದ್ರಾಸಿನೊಂದಿಗೆ ಸೇರಿಸಬಾರದೆಂಬ ಕಾರಣಗಳ ಪೈಕಿ ಒಂದು, ದೊಡ್ಡ ಪ್ರಾಂತ್ಯದೊಂದಿಗೆ ಸೇರಿದರೆ, ಚಿಕ್ಕ ಕೊಳದ ಮೇಲೆ ಸಮುದ್ರದ ನೀರನ್ನು ಬಿಟ್ಟರೆ ಕೊಳವು ಹೇಗೆ ಕೊಚ್ಚಿಹೋಗುವದೋ, ಹಾಗೆ ಕೊಚ್ಚಿಹೋಗಬಹುದೆಂದು ಹೇಳುತ್ತದ. ಅಂದ ಮೇಲೆ, ನಮ್ಮ ದೇಶಕ್ಕಿಂತ 8 ಪಾಲು ದೊಡ್ಡ ಮೈಸೂರಿನೊಡನೆ ಸೇರಿದರೆ ಕೊಡಗಿನ ಪಾಡು ಅದೇ ಸ್ಥಿತಿಗಿಳಿದೀತೆಂಬ ಭಾವನೆಯು ಅವರ ಮನಸಿನಲ್ಲಿ ಮೂಡದಿರಲು ಮೈಸೂರು ಸಂಯೋಜನೆಯ ಮಹತ್ವಾಕಾಂಕ್ಷೆಯೇ ಕಾರಣ ಇರಬಹುದು.

ಆಂಧ್ರರು, ಕರ್ನಾಟಕರು ಮತ್ತು ಕೇರಳ ತಮಿಳುನಾಡಿನವರು ಸಹ ತಮ್ಮ ತಮ್ಮ ಹಕ್ಕು ಬಾಧ್ಯತೆಗೆ ಮುಂದೆ ಅಡಚಣೆ ಬರಬಹುದೆಂಬ ಭೀತಿಯಿಂದ ಬೇರೆ ಪ್ರತ್ಯೇಕ ಪ್ರಾಂತ್ಯವಾಗಿ ಮಾಡಿಕೊಳ್ಳುವದಕ್ಕೆ ಪ್ರಯತ್ನಮಾಡುತ್ತಾರೆಂದು ಬರೆಯುತ್ತಾರೆ. ಹಾಗಾದರೆ, ಪ್ರಾಂತ್ಯಗಳು ಅದನ್ನು ಚಿಕ್ಕದಾಗಿರಬೇಕೆಂದೂ 'ದೊಡ್ಡ

ಪ್ರಾಂತ್ಯಗಳಲ್ಲಿ ಸೇರಿರುವುದು ಅನುಕೂಲವಲ್ಲವೆಂದೂ ಶ್ರೀ. ಮುತ್ತಣ್ಣನವರ ಹೇಳಿಕೆಯಿಂದಲೇ ಸ್ಪಷ್ಟವಾಗುತ್ತದೆ. ಕೊಡಗಿನ ವಿಚಾರದಲ್ಲಿ ಮಾತ್ರ ಶ್ರೀ ಮುತ್ತಣ್ಣನವರು ತಮ್ಮ ಈ ಉದ್ಗಾರಕ್ಕೆ ವಿರೋಧರ? ಹಾಗಾದ ಪಕ್ಷ ಅವರ ತಿಳುವಳಿಕೆ ?

ಮದ್ರಾಸಿಗೆ ಸೇರಿದರೆ ನಮ್ಮ ವಿದ್ಯಾವಂತ ಯುವಕರಿಗೆ ಉದ್ಯೋಗ ಸಿಕ್ಕುವದು ಕಷ್ಟವೆಂದು ಅವರು ಹಿತೈಷಿಗಳನ್ನೆಲ್ಲ ಕ್ಷೇಮದ ಅಲ್ಲಲ್ಲಿದು ಮೈಸೂರಿನವರಿಗೆ ಸೇರಬೇಕೆಂದು ಗೊತ್ತುಮಾಡಿಕೊಂಡಿರುವಂದು ಒಪ್ಪುತ್ತಾರೆ. ಮೈಸೂರಿಗೆ ಸೇರಿದ ಪಕ್ಷ ಉದ್ಯೋಗವಲ್ಲಿ ಕೊಡಗು ದೇಶೀಯರಿಗೇನೇ ಸಿಕ್ಕಬಹುದೆಂದು ಶ್ರೀ. ಮುತ್ತಣ್ಣನವರು ಸಂಶಯಪಡುವ ಕಾಣುತ್ತೆ. ಮೈಸೂರಿನವರಾದರೂ ಹೇಳ್ಕೊಂಡಂತೆ ಖಾನೂನು ಮಾಡಿಕೊಂಡಿರುವದು ಅವರ ಚಿತ್ತಕ್ಕೆ ಇನ್ನೂ ಬಂದಿಲ್ಲವೇನೋ? ಶ್ರೀ ಮುತ್ತಣ್ಣನವರು ಯೋಚನೆ ಮಾಡಿಕೊಂಡಿರುವ ರೀತಿ ಉದ್ಯೋಗವಲ್ಲಿ ಕೊಡಗು ದೇಶೀಯರಿಗೇ ಸಿಕ್ಕಬಹುದೆಂಬುದು ಪೂರಾ ಕನವರಿಕೆಯ ಮಾತು.

ಶಾಲೆಗಳ ಅನುಕೂಲತೆಗಳನ್ನು ಬರೆಯುತ್ತಾರೆ. ನಮ್ಮ ಕೊಡಗಿನಲ್ಲಿ ಪ್ರತಿ 5 ಮೈಲುಗಳಿಗೆ ಒಂದರಂತೆ ಶಾಲೆಗಳಿವೆ. ಮೈಸೂರು ರೈತರಿಗೆ ಶಾಲೆಗಳ ಅನುಕೂಲತೆ ಬಹಳ ಕಮ್ಮಿ ಎಂಬುದು ಎಲ್ಲರು ತಿಳಿದಿರುವ ಸಂಗತಿಯಾಗಿದೆ. ನಮ್ಮ ಕಾಲೇಜಿಗೆ ಹೋಗುವ ಯುವಕರು ಮದ್ರಾಸ್ ಕಾಲೇಜಿನಲ್ಲಿ ಕಲಿಯಲಿಕ್ಕೆ ಹೆಚ್ಚಾಗಿ ಹೋಗುವದರಿಂದ ನಮಗೆ ಮೈಸೂರು ಕಾಲೇಜಿನ ಅವಶ್ಯಕತೆ ಅಷ್ಟಿಲ್ಲ; ಹೇಗೂ ಕೊಡಗು, ವಿದ್ಯೆಯಲ್ಲಿ ಮೈಸೂರಿಗಿಂತ ಎಷ್ಟೋ ಮುಂದಿದೆ. ವಿದ್ಯಾರ್ಜನೆಗೆಂದು ನಾವು ಮೈಸೂರಿಗೆ ಸೇರಿದರೆ ಪ್ರಗತಿ ಪಥದಲ್ಲಿ ನಡೆಯುತ್ತಿರುವ ನಾವು ಹಿಂದಡಿಯಿಡಬೇಕಾದೀತು.

ನಮ್ಮ ದೇಶದಲ್ಲಿ ಪ್ರತಿ 10 ಮೈಲಿಗೂ ಒಂದು ಆಸ್ಪತ್ರೆಯಿದೆ. ಮೈಸೂರು ಹಳ್ಳಿಗಳಲ್ಲಿ ಇಂಥ ಅನುಕೂಲವಿಲ್ಲ. ಆಸ್ಪತ್ರೆಗೆ ಬೇಕಾದ ಯುಕ್ತ ವ್ಯವಸ್ಥೆಯನ್ನು ಏರ್ಪಡಿಸಿಕೊಳ್ಳುವದು ದೊಡ್ಡದಲ್ಲ. ಇಷ್ಟು ಸಣ್ಣ ಕೆಲಸಕ್ಕಾಗಿ ಮೈಸೂರಿಗೆ ಸೇರಬೇಕೆಂಬ ಅಭಿಪ್ರಾಯವು ಪುಕ್ಕಲತನದ ಪರಿಣಾಮವೆಂದರೆ ಅತಿಶಯೋಕ್ತಿಯಾಗಲಾರದು.

ಮೈಸೂರಿನ ಅಭಿವೃದ್ಧಿಯ ಕೆಲಸದ ವಿಷಯ ಎತ್ತಿ ಬರೆದಿದ್ದಾರೆ. ಆದರೆ ನಮ್ಮ ದೇಶದಲ್ಲು ನಾವುಗಳು ಒಗ್ಗಟ್ಟಿನಿಂದ ಕೆಲಸ ಮಾಡಿದರೆ ನಮ್ಮ ರಾಜ್ಯಪಾಲಿತದಲ್ಲು ಸ್ವಾತಂತ್ರ್ಯವನ್ನು ಪಡೆದುಕೊಂಡು ದೇಶದ ಅಭಿವೃದ್ಧಿಯ ಕೆಲಸವನ್ನು ಯೋಗ್ಯರೀತಿಯಿಂದ ನಡಿಸಿಕೊಂಡು ಹೋಗಬಹುದೆಂಬುದರಲ್ಲಿ ಲವಲೇಶ ಅನುಮಾನವಿಲ್ಲ. ಇಡೀ ಜಗತ್ತು ಇಂದು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸ್ವಾತಂತ್ರ್ಯ ಪಥದಲ್ಲಿ ಧಾವಿಸುತ್ತಿರುವಾಗ ನಮ್ಮ ದೇಶದ ಕೆಲವರು ಅನೇಕ ವರ್ಷಗಳಿಂದ ಸ್ವತಂತ್ರವಾಗಿರುವ ನಮ್ಮ ಈ ಸುಂದರ ದೇಶವನ್ನು ಬೇರೆ ಪ್ರಾಂತದೊಂದಿಗೆ ಸೇರಿಸಿ, ಅದರಲ್ಲೂ ಮೈಸೂರಿನಂಥಾ ಇಮ್ಮಡಿ ಗುಲಾಮಗಿರಿಯಲ್ಲಿರುವ ಸಂಸ್ಥಾನದೊಂದಿಗೆ ಸೇರಿಸಿ ನಮ್ಮ ವ್ಯಕ್ತಿತ್ವವನ್ನು ಕಳಕೊಳ್ಳಲೆತ್ನಿಸುವದು ತೀರ ಅವಿವೇಕದ ವಿಚಾರ. ಸ್ವಾತಂತ್ರ್ಯ ಪ್ರೇಮಿಗಳಾಗಿ, ಸ್ವಾತಂತ್ರ್ಯದ ವೇದಿಕೆಯಲ್ಲಿ ನಲಿದು ಮೆರೆದ ಪೂರ್ವದ ಕೆಚ್ಚೆದೆಯ ಕಟ್ಟಾಳುಗಳ ಉದಾಹರಣೆಯನ್ನು ಕಂಡೂ, ಕೇಳಿಯೂ ಇಂದು ಕೇವಲ ಭೀರುಗಳಾಗಿ ತಮ್ಮ ಸ್ವಾತಂತ್ರ್ಯವನ್ನು ಮಾರಿಕೊಳ್ಳಲೆತ್ನಿಸುವದು ಶೋಭಿಸುವ ಕಾರ್ಯವಲ್ಲ. ಆವಶ್ಯಯುಕ್ತ ದೇಶೀಯರು ತಮ್ಮೊಳಗಿನ ವೈರಸ್ಯ ವ್ಯಕ್ತಿಮಾಪಣೆಗಳನ್ನು ಬಿಟ್ಟು ಒಗ್ಗಟ್ಟಿನಿಂದ ಏಕೀಕರಿಸಿ ದೇಶದ ವ್ಯಕ್ತಿತ್ವವನ್ನು ಉಳಿಸಿ ‘ಕೊಡಗಿನವರು ಇನ್ನಾದರೂ ಸ್ವಾತಂತ್ರ್ಯ ಪ್ರಿಯರೇ’ ಎಂಬ ಗೌರವವನ್ನು ಉಳಿಸಲು ಪ್ರಯತ್ನಿಸಬೇಕಾಗಿದೆ.

ಜಿಲ್ಲಾ ಬೋರ್ಡು ಮೀಟಿಂಗು

ಪ್ರಥಮ ದಿನ.

ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು ಈ ಆ. 17 ಮತ್ತು 18ರಲ್ಲಿ ಕೌನ್ಸಿಲ್ ಹಾಲ್‌ನಲ್ಲಿ ನಡೆಯಿತು. ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಪಿ. ಐ. ಬೆಳ್ಯಪ್ಪನವರು ಅಧ್ಯಕ್ಷರಾಗಿದ್ದರು. ಶ್ರೀ ಅಜ್ಜಿಕುಟ್ಟಿರ ಪೊನ್ನಪ್ಪನವರು ಮತ್ತು ಡಾ. ಎ. ಎ. ವಾರುಣಯವರ ವಿನಹ ಉಳಿದ 16 ಮೆಂಬರುಗಳು ಹಾಜರಿದ್ದರು.

ಬೆಳಿಗ್ಗೆ 11 ಗಂಟೆಗೆ ಮೀಟಿಂಗು ಪ್ರಾರಂಭವಾಗುವ ಮೊದಲು ಕಾಂಗ್ರೆಸ್ ಪಕ್ಷದವರು ‘ವಂದೇ ಮಾತರಂ’ ರಾಷ್ಟ್ರ ಗೀತೆಯನ್ನು ಹಾಡಿದರು. ಆಗ ಎಲ್ಲರೂ ಎದ್ದು ನಿಂತಿದ್ದರು.

1. ಕಳೆದ ಮೀಟಿಂಗಿನ ನಡವಳಿಕೆಯನ್ನು ಓದಿ ಅಂಗೀಕರಿಸಲಾಯಿತು.

2. ಆರೋಗ್ಯ ಇಲಾಖೆಗೆ ಬೋರ್ಡಿನಿಂದ ಕೊಡುತ್ತಿರುವ ಗ್ರಾಂಟಿನಲ್ಲಿ ರೂ. 2000 ಕಮ್ಮಿ ಮಾಡಿದ್ದನ್ನು, ಕೊಡಬೇಕೆಂಬ ಶರತ್ತಿನ ಮೇಲೆ 1939-40ನೇ ವರ್ಷದ ಅಂದಾಜು ಬಜೆಟ್ಟನ್ನು ಮಂಜೂರ್ಮಾಡಿದ ಚೀಫ್ ಕಮಿಷನರ ಸೆಕ್ರೆಟರಿಯವರ ಪತ್ರ ಓದಿ ಅದರಂತೆ ಹೇಳ್ಕಂಡ ಗ್ರಾಂಟಿನಲ್ಲಿ ಮಾಡಿದ ರೂ. 2000 ಕೋತೆಯನ್ನು ಕೊಡಲು ತೀರ್ಮಾನವಾಯಿತು.

3. ಶಾಲೆಗಳ ಸಂಖ್ಯೆಯನ್ನು ನಿಶ್ಚಯಿಸಲು ಮತ್ತು ಡಿ. ಬೋರ್ಡು ನೌಕರರಿಗೆ ಗ್ರೇಡ್ ಕ್ರಮದ ಸಂಬಳವನ್ನು ತರುವದನ್ನು ಆಲೋಚಿಸಲು ನೇಮಕವಾದ ವಿದ್ಯಾಸಮಿತಿಯ ವರದಿಯನ್ನು ಓದಿ ಅಂಗೀಕರಿಸಲಾಯಿತು.

4. ಸರಕಾರದ ಕೆಳ ನೌಕರರನ್ನು ಡಿ. ಬೋರ್ಡಿಗೂ, ಡಿ. ಬೋರ್ಡಿನ ನೌಕರರನ್ನು ಸರಕಾರ ಸರ್ವಿಸಿಗೂ ಪರಸ್ಪರ ವರ್ಗಾಯಿಸುವ ಬಗ್ಗೆ ಕಮಿಷನರಿಂದ ಬಂದ ಪತ್ರವನ್ನು ಓದಿ, ಡಿ. ಬೋರ್ಡಿನ ಹಾಗೂ ಸರಕಾರ ನೌಕರರೊಳಗೆ ಪರಸ್ಪರ ವರ್ಗಾವರ್ಗಿ ಇರಬೇಕೆಂದು ತೀರ್ಮಾನಿಸಲಾಯಿತು.

5. ಫ್ರೇಜರ್‌ಪೇಟೆ 1937-38ರ ಟೋಲ್‌ಗೇಟ್ ಕಂಟ್ರಾಕ್ಟರಿಂದ ಬರತಕ್ಕದ್ದಿರುವ ರೂ. 410ನ್ನು ವಸೂಲ್ಮಾಡಕೂಡದೆಂದು ಬಂದ ಲಾಯರು ನೋಟೀಸನ್ನು ಓದಿ, ಜಾಮೀನ್ದಾರರ ಒಪ್ಪಿಗೆಯಿಂದ ರೂ. 200ನ್ನು ವಜಾ ಬಿಡಬಹುದೆಂದೂ, ಹಾಗೆ ಬಿಡಬೇಕಾದರೆ ಕಂಟ್ರಾಕ್ಟುದಾರನು ಮೂರು ತಿಂಗಳೊಳಗೆ ಬಾಕಿಯನ್ನು ಪಾವತಿ ಮಾಡಬೇಕೆಂದೂ, ಇದಕ್ಕೆ ತಪ್ಪಿದರೆ ಪೂರ್ತಿ ಹಣದ ವಸೂಲಿಗೆ ದಾವೆ ಹಾಕಬೇಕೆಂದೂ ತೀರ್ಮಾನವಾಯಿತು.

6. 1938-39ನೇ ವರ್ಷದ ಆನೆಚೌಕೂರು ಟೋಲ್‌ಗೇಟ್ ಕಂಟ್ರಾಕ್ಟರಿಂದ ವಸೂಲು ಬರಲಿರುವ ರೂ. 600ರ ಬಗ್ಗೆ ದಕ್ಷಿಣ ಕೊಡಗು ಸುಬೇದಾರರ ಪತ್ರ ಓದಿ, ಅವನಿಗೆ ಏನೊಂದೂ ವಜಾ ಬಿಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

7. ನಾಪೋಕ್ಲಿನಲ್ಲಿರುವ ಹುಡುಗಿಯರ ಶಾಲೆಯ ಕಟ್ಟಡವನ್ನು ಬೋರ್ಡಿನವರ ವಶಕ್ಕೆ ವರ್ಗಾಯಿಸುವ ವಿಷಯ ಎಗ್ಸಿಕ್ಯೂಟಿವ್ ಇಂಜಿನೀಯರರು ಕಮಿಷನರಿಗೆ ಬರೆದ ಪತ್ರವನ್ನು ಓದಿ ಆ ಕಟ್ಟಡವನ್ನು ಕಾಯಿಲಸ್ಥರ ಉಪಯೋಗದ ವಾರ್ಡಿಗಾಗಿ ಬೋರ್ಡಿನ ಅಧೀನಕ್ಕೆ ತೆಗೆದುಕೊಳ್ಳುವಂತೆಯೂ, ಅದರ ವಾರ್ಷಿಕ ರಿಪೇರಿ ಖರ್ಚನ್ನು ಬೋರ್ಡೇ ನಿರ್ವಹಿಸುವಂತೆಯೂ ತೀರ್ಮಾನಿಸಲಾಯಿತು.

8. ಸಿದ್ದಾಪುರ ಮಾರ್ಕೆಟ್ ಕಂಟ್ರಾಕ್ಟರಿಂದ 1938-39ನೇ ವರ್ಷಕ್ಕೆ ಬರತಕ್ಕದ್ದಿರುವ ರೂ. 40 ಬಿಟ್ಟು ಕೊಡಬೇಕೆಂದು ಬಂದ ಅರ್ಜಿಯನ್ನು ಓದಿ ತಿರಸ್ಕರಿಸಲಾಯಿತು.

9. 1938-39ರಲ್ಲಿ ಅಮ್ಮತ್ತಿನಾಡಿನ ಜಾಡಮಾಲಿಗಳ ಉಪಯೋಗಕ್ಕಾಗಿ ತೆಗೆದುಕೊಟ್ಟ ನಾಲ್ಕು ಕಂಬಳಿಗಳ ಖರ್ಚಿನ ಬಗ್ಗೆ ಬೋರ್ಡಿನವರ ನಿಶ್ಚಿತ ಮಂಜೂರಾತಿಯು ಬೇಕೆಂಬ ಮದ್ರಾಸ್ ಎಕೌಂಟೆಂಟ್ ಜನರಲರವರ ಪತ್ರ ಓದಿ, ಮಂಜೂರಾತಿ ಕೊಡಲಾಯಿತು.

10. 1937-38ನೇ ವರ್ಷದ ಆನೆಚೌಕೂರು ಟೋಲ್‌ಗೇಟ್ ಕಂಟ್ರಾಕ್ಟರಿಂದ ಬರಬೇಕಿರುವ ರೂ. 2318ಗಳ ವಸೂಲಾತಿ ಬಗ್ಗೆ ದಕ್ಷಿಣ ಕೊಡಗು ಸುಬೆದಾರರಿಂದ ಬಂದ ಪತ್ರವನ್ನು ಓದಿ, ಕಂಟ್ರಾಕ್ಟರ ಜಾಮೀನ್ದಾರನ ಒಪ್ಪಿಗೆಯಿಂದ ರೂ. 1000 ಮಾಫಿ ಬಿಡುವಂತೆಯೂ ಹಾಗೆ ಬಿಡಬೇಕಾದರೆ ಅವನು ಬಾಕಿ ಮೊಬಲಗನ್ನು ನಾಲ್ಕು ತಿಂಗಳೊಳಗೆ ಪಾವತಿ ಮಾಡಬೇಕೆಂದೂ ಹಾಗೆ ಮಾಡಲು ತಪ್ಪಿದರೆ ಪೂರ್ತಿ ಹಣಕ್ಕೆ ದಾವೆ ದಾಖಲ್ಲು ಮಾಡುವಂತೆಯೂ ತೀರ್ಮಾನವಾಯಿತು.

11. 1938-39ನೇ ವರ್ಷದ ಗೋಣಿಕೊಪ್ಪ ಮಾರ್ಕೆಟ್ ಕಂಟ್ರಾಕ್ಟರರಿಂದ ಬರತಕ್ಕದ್ದಿರುವ ರೂ. 238 ವಸುಲಾತಿ ಬಗ್ಗೆ ದಕ್ಷಿಣ ಕೊಡಗು ಸುಬೆದಾರರ ಪತ್ರ ಓದಿ, ಅದರಲ್ಲಿ ವಜವೇನೂ ಬಿಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

12. 1938-39ನೇ ವರ್ಷದ ಮಾವ್ರಕೂಟೆ ಕಂಟ್ರಾಕ್ಟರಿನಿಂದ ಬಾಕಿ ಬರಲಿಕ್ಕಿರುವ ರೂ. 454ನ್ನು ವಜಾಬಿಡಬೇಕೆಂಬ ಅರ್ಜಿಯನ್ನೂ, ಅದನ್ನು ಕುರಿತ ದಕ್ಷಿಣ ಕೊಡಗು ಸುಬೇದಾರರು ಬರೆದ ಪತ್ರವನ್ನೂ ಓದಿ, ಅರ್ಜಿಯನ್ನು ತಿರಸ್ಕರಿಸಲಾಯಿತು.

13. ಡಿ. ಬೋರ್ಡ್ ಆಫೀಸಿನ ಕ್ಲಾರ್ಕರಾದ ಶ್ರೀ ಪಿ. ಎ. ಕಾರ್ಯಪ್ಪನವರ ಸಂಬಳ ಬಡ್ತಿ ಬಾಕಿಯ ಹಕ್ಕಿನ ಬಗ್ಗೆ ವಿಚಾರಿಸುವ ಸಂಬಂಧ ಚೀಫ್ ಕಮಿಷನರ ಸೆಕ್ರೆಟರಿಯವರಿಂದ ಬಂದ ಪತ್ರವನ್ನು ಓದಿ, ಇದರ ಇತ್ಯರ್ಥವನ್ನು ಇನ್ನೊಂದು ಮೀಟಿಂಗಿಗೆ ಮುಂದರಿಸಿಡಲಾಯಿತು.

14. ಶಿರಂಗಾಲ ಗ್ರಾಮಪಂಚಾಯಿತಿಗೆ, ಬೋರ್ಡು ಕೊಡುತ್ತಿರುವ 250 ರೂ. ಗ್ರಾಂಟನ್ನು ರೂ. 500ಂದ ಹೆಚ್ಚಿಸಬೇಕೆಂಬ ಉತ್ತರ ಕೊಡಗು ಸುಬೆದಾರರ ಪತ್ರ ಓದಿ ತೀರ್ಮಾನಕ್ಕೆ ಬಜೆಟ್ ಮೀಟಿಂಗಿಗೆ ಇಡಲಾಯಿತು.

15. ರಾಮಪುರ ಮಾರ್ಕೆಟ್ ಕಂಟ್ರಾಕ್ಟರಿಂದ 1937-38ನೇ ವರ್ಷಕ್ಕೆ ಬರತಕ್ಕದ್ದಿರುವ ರೂ. 30ನ್ನು ವಸೂಲಾಡಬಾರದೆಂಬ ಲಾಯರು ನೋಟೀಸನ್ನು ಓದಿ, ಅವನಿಗೆ ವಜವೇನೂ ಬಿಡಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

16. ಕೊಡ್ಲಿಪೇಟೆ, ಜಂಬೂರು ಮತ್ತು ಕಾರ್ಗುಂದದಲ್ಲಿರುವ ಇನ್ಸ್‌ಪೆಕ್ಷನ್ ಬಂಗ್ಲೆಗಳನ್ನು ಮಾರಾಟಮಾಡುವ ಬಗ್ಗೆ ಕಮಿಷನರ ಪತ್ರವನ್ನು ಓದಿ, ಹೇಳ್ಕಂಡ ಬಂಗ್ಲೆಗಳನ್ನು ಬೋರ್ಡಿನ ಅಧೀನಕ್ಕೆ ತೆಗೆದುಕೊಂಡು ಅವುಗಳ ಉಸ್ತುವಾರಿಯನ್ನು ಬೋರ್ಡೇ ನಡೆಸುವಂತೆ ತೀರ್ಮಾನಿಸಲಾಯಿತು.

17. ರಿಟೈಯರ್ಡ್ ಸಬ್ ಅಸಿಸ್ಟೆಂಟ್ ಸರ್ಜನರಾದ ಶ್ರೀ ಜೆ. ವಿ. ನಾಯಡುರವರ ಪೆನ್ಷನಿನ ಕಮ್ಯೂಟೆಡ್ ಮೊಬಲಗಿನ ಬಗ್ಗೆ ಬೋರ್ಡಿನಿಂದ ರೂ. 3264 ಕೊಡಬೇಕೆಂಬ ಚೀಫ್ ಕಮಿಷನರ ಪತ್ರ ಓದಿ ಅದನ್ನು ಅಂಗೀಕರಿಸಿದ್ದಲ್ಲದೆ ಎಕೌಂಟೆಂಟ್ ಜನರಲ್‌ರವರಿಗೆ ಬರೆದು ಈ ಪೂರ್ತಿ ಹಣವನ್ನು ಬೋರ್ಡೇ ತೆರಬೇಕೋ ಎಂಬುದನ್ನು ತಿಳಿಯಲು ತೀರ್ಮಾನಿಸಲಾಯಿತು.

18. ಕೆದಮುಳ್ಳೂರಿನ ಗ್ರಾಂಟ್-ಇನ್-ಏಯಿಡ್ ಶಾಲೆಯ ಕಟ್ಟಡ ರಿಪೇರಿಗೆ 1938ನೇ ವರ್ಷದಲ್ಲಿ ಕೊಟ್ಟ ರೂ. 34-4-0ರ ಬಗ್ಗೆ ಡಿ. ಬೋರ್ಡಿನವರ ಮಂಜೂರಾತಿ ಬೇಕೆಂಬ ಎಕೌಂಟೆಂಟ್ ಜನರಲ್‌ರ ಪತ್ರವನ್ನು ಓದಿ, ಅದರಂತೆ ಮಂಜೂರಾತಿ ಕೊಡಲಾಯಿತು.

19. ನಗರಳ್ಳಿ ಗ್ರಾಮದ ಶ್ರೀ ಮದ್ದೆಗೌಡನ ಅಣ್ಣಯ್ಯನವರು ಸುಮಾರು 400 ರೂ. ಖರ್ಚುಮಾಡಿ ನಗರಳ್ಳಿ ಹೊಸ ರಸ್ತೆ ಮಾಡಿಸಿದಕ್ಕಾಗಿ ಅವರಿಗೆ ಬೋರ್ಡಿನಿಂದ ರೂ. 50 ಕೊಡುವಂತೆಯೂ, ಆ ರಸ್ತೆಯ ವಾರ್ಷಿಕ ರಿಪೇರಿ ಖರ್ಚನ್ನು ಬೋರ್ಡು ವಹಿಸಿಕೊಳ್ಳುವಂತೆಯೂ ತೀರ್ಮಾನಿಸಲಾಯಿತು.

(ಮುಂದುವರಿಯುವುದು.)

ಕೊಡಗು

ಜುಲೈ ತಾರೀಕು ೨೦ ನೇ ಶುಕ್ರವಾರ ೧೯೩೪.

ಸಿಂಹಳ ದ್ವೀಪದಲ್ಲಿ ಹಿಂದೀಯರ ಪಾಡು.

ರಾಮಾಯಣವನ್ನು ಓದಿರುವ ಯಾ ಕೇಳಿರುವ ಪ್ರತಿಯೊಬ್ಬ ಹಿಂದೀಯನಿಗೂ ಪೂರ್ವದಲ್ಲಿ ಹಿಂದೂ ದೇಶಕ್ಕೂ ಲಂಕಾ ದ್ವೀಪಕ್ಕೂ ಇದ್ದ ಸಂಬಂಧವು ತಿಳಿಯದ ಇಲ್ಲ. ಆರ್ಯರ ನಂತರ ದಕ್ಷಿಣ ಇಂಡಿಯಾದ ದ್ರಾವಿಡರೂ ಹೋಗಿ ಅಲ್ಲಿ ನೆಲೆಸಿದರು. ಅಶೋಕ ಚಕ್ರವರ್ತಿಯ ಕಾಲದಲ್ಲಿ ಅಲ್ಲಿ ಬೌದ್ಧ ಪ್ರಚಾರವು ನಡೆಯಿತು. ಈಗ ಅಲ್ಲಿ ಬೌದ್ಧ ಮತಸ್ಥರೇ ಹೆಚ್ಚಾಗಿರುವರು. ಅಲ್ಲಿಯ ನಿವಾಸಿಗಳಲ್ಲಿ ಒಂದು ಭಾಗದವರು ಕಲವು ಕಾಲದ ಹಿಂದೆ ವ್ಯಾಪಾರಕ್ಕಾಗಿ ಬಂದ ಡಚ್ ಜನಾಂಗದವರೂ, ಇನ್ನೊಂದು ಭಾಗದವರು ಆ ಉದ್ದೇಶ್ಯದಿಂದ ಬಂದ ಮೂರ್ ಜನಾಂಗಿಕರಾದ ಮುಸಲ್ಮಾನರೂ ಆಗಿರುವರು. ಇತ್ತೀಚೆಗೆ ಅಲ್ಲಿ ಕಾಫಿ ವ್ಯವಸಾಯವು ವೃದ್ಧಿಗೊಳ್ಳುತ್ತಾ ಬಂತು. ಈ ಕೆಲಸಕ್ಕೆ ಅಲ್ಲಿಯ ಜನರು ಸಾಲದವರು. ಆದುದರಿಂದ ಕಾಫಿ, ಟೀ ಮತ್ತು ರಬ್ಬರ್ ತೋಟಗಳಲ್ಲಿ ಕೆಲಸ ಮಾಡಲು ಹಿಂದೂಸ್ಥಾನದಿಂದ ಜನರನ್ನು ಬರಮಾಡಿಕೊಂಡರು. ಹಿಂದೀಯರು ಅಲ್ಲಿಯ ನಿವಾಸಿಗಳಿಗಿಂತ ಹೆಚ್ಚು ಶ್ರಮವಹಿಸಿ ದುಡಿಯುವವರಾದುದರಿಂದ ಇವರಿಗೇನೇ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಸಾವಿರಗಟ್ಟಲೆ ಜನರು ಇಂಡಿಯಾದಿಂದ ಅಲ್ಲಿಗೆ ಹೋಗತೊಡಗಿದರು. ಹಿಂದೀಯರು ಅಲ್ಲಿ ಪೆಟ್ಟಿಗಾಗಿ ನಲಸಿಲ್ಲದೆ ವ್ಯಾಪಾರದಲ್ಲಿಯೂ ಮುಂದುವರಿದರು. ಕ್ರಮೇಣ ಪಾಸಗಿ ಕಂಪೆನಿಗಳು, ಸ್ಥಳೀಯ ಸಂಸ್ಥೆಗಳು ಮತ್ತು ಸರಕಾರಿ ಇಲಾಖೆಗಳಲ್ಲೂ ಉದ್ಯೋಗವನ್ನು ಪಡೆಯುತ್ತಾ ಬಂದರು. ಕಾರ್ಯನಿಪುಣತ್ವದ ಪೈಪೋಟಿಯಲ್ಲಿ ಹಿಂದೀಯರು ಅಲ್ಲಿಯವರನ್ನು ಬಹುಮಟ್ಟಿಗೆ ಮೀರಿದರು. ಈಗ ಅಲ್ಲಿರುವ ೫೭ ಲಕ್ಷ ಜನಸಂಖ್ಯೆಯಲ್ಲಿ ಆರು ಲಕ್ಷದಷ್ಟು ಹಿಂದೀಯರಿರುವರು.

ಹಲವು ವರ್ಷಗಳಿಂದ ಸಿಂಹಳೀಯರೂ, ಹಿಂದೀಯರೂ ಸಹೋದರ ಭಾವದಿಂದ ಜೀವಿಸುತ್ತಾ ಬಂದರು. 1931 ರಲ್ಲಿ ಅಲ್ಲಿಗೆ ಕೆಲವು ರಾಜಕೀಯ ಸುಧಾರಣೆಗಳು ಕೊಡಲ್ಪಟ್ಟವು. ಇದರಿಂದ ಸ್ಥಳೀಕ ಮುಂದಾಳುಗಳು ಮಂತ್ರಿಗಳಾದರು. ಪ್ರಾಯಬಂದ ದೇಶೀಯರಿಗೆಲ್ಲರಿಗೂ ಮತ್ತು ಐದು ವರ್ಷಗಳಿಂದ ಅಲ್ಲಿ ನೆಲೆಸಿದ ಇತರರಿಗೂ ಓಟಿನ ಹಕ್ಕು ದೊರಕಿಯಿತು. ಇದರಿಂದ ಭಾರತೀಯರಿಗೂ ಚುನಾವಣೆಯಲ್ಲಿ ಹಾಗೂ ಸರ್ಕಾರದ ಆಡಳಿತದಲ್ಲಿ ಭಾಗವಹಿಸುವ ಅವಕಾಶ ದೊರೆಯಿತು. ಇದು ಅಲ್ಲಿಯ ಕೆಲವು ರಾಜಕೀಯ ಧುರೀಣರಿಗೆ ಸಹಿಸಲಾರದಾಯಿತು. ಆದರೂ ತೋಟದ ಮಾಲೀಕರ ದೆಸೆಯಿಂದ ಹಿಂದೀಯರು ಅಲ್ಲಿಗೆ ಹೋಗುವುದನ್ನು ತಡೆಯಲು ಸಾಧ್ಯವಾಗಲಿಲ್ಲ. ಹೇಗೂ ಸಿಂಹಳೀಯರಿಗಲ್ಲದೆ ಇತರರಿಗ್ಯಾರಿಗೂ ಸರ್ಕಾರಿ ಉದ್ಯೋಗ ಕೊಡಕೂಡದೆಂದು 1931 ರಲ್ಲಿ ಕಾನೂನು ಮಾಡಿಕೊಂಡರು.

ಇದರಿಂದ ತೃಪ್ತರಾಗದೆ ಈಗ ನವೀನತರದೊಂದು ಆಜ್ಞೆಯನ್ನು ಜಾರಿಗೆ ತಂದಿರುವರು. ಇದರ ಫಲಿತಾಂಶವಾಗಿ 1934 ರ ಡಿಸೆಂಬರಿಗೆ ಸರ್ಕಾರಿ ನೌಕರಿಗೆ ಸೇರಿದ ದಿನಗಟ್ಲೆ ಸಂಬಳದ ಒಂದು ಸಾವಿರ ಹಿಂದೀಯರು ಕೆಲಸಬಿಡಬೇಕಾಗಿದೆ. ಇವರಿಗೆ ಒಂದು ತಿಂಗಳ ಸಂಬಳವು ಇನಾಮಾಗಿ ಕೊಡಲ್ಪಡುವುದಂತೆ! 5 ವರ್ಷಗಳಿಗಿಂತ ಹೆಚ್ಚು ಸರ್ಕಾರಿ ನೌಕರಿಯಲ್ಲಿರುವ ನೂರು ಎಂಟು ಸಾವಿರ ದಿನಗಟ್ಲೆ ಸಂಬಳದವರು ಬರುವ ಡಿಸೆಂಬರು ತಿಂಗಳೊಳಗೆ ಕೆಲಸ ಬಿಡುವದಾದರೆ ಅವರಿಗೂ ಒಂದು ತಿಂಗಳ ಸಂಬಳದ ಪುರಸ್ಕಾರ ಇರುವುದು! ಹಾಗೆ ಮಾಡದಿದ್ದರೆ ಏನೊಂದೂ ರಿಯಾಯಿತಿ ಇಲ್ಲದೆ ಅವರನ್ನು ಉದ್ಯೋಗದಿಂದ ನಿವೃತ್ತಿಗೊಳಿಸುವರು. ಮುನ್ಸಿಪಾಲಿಟಿಯೇ ಮೊದಲಾದ ಸ್ಥಳೀಯ ಸಂಸ್ಥೆಗಳಲ್ಲಿಯೂ ಸಿಂಹಳೀಯರಲ್ಲದವರನ್ನು ಕೆಲಸದಿಂದ ಹೊರದೂಡುವ ಏರ್ಪಾಡುಗಳು ಮಾಡಲ್ಪಡುತ್ತಿವೆ. ಗ್ರಾಮಸಂಸ್ಥೆಗಳಲ್ಲಿ ಅವರಿಗೆ ಓಟಿನ ಹಕ್ಕಿಲ್ಲದೆ ಮಾಡುವ ಏರ್ಪಾಡಾಗುತ್ತಿದೆ. ತೋಟದ ಮಾಲೀಕರೂ ಇತರ ಖಾಸಗಿ ಸಂಸ್ಥೆಗಳವರೂ ಕೂಡ ಇನ್ನು ಮೇಲೆ ಹಿಂದೀಯರನ್ನು ಕೆಲಸಕ್ಕೆ ಇಟ್ಟುಕೊಳ್ಳಬಾರದೆಂದು ನಿರ್ಬಂಧಮಾಡುತ್ತಿದ್ದಾರೆ, ಸಿಂಹಳೀಯರಲ್ಲದವರನ್ನು ಕೆಲಸಕ್ಕೆ ಇಟ್ಟುಕೊಳ್ಳುವವರ ಮೇಲೆ ತೆರಿಗೆ ಹಾಕುವ ಏರ್ಪಾಡು ನಡೆಯುತ್ತಿದೆ. ಭಾರತೀಯ ಕೆಲಸಗಾರರ ಮತ್ತು ವ್ಯಾಪಾರಿಗಳ ವಿರುದ್ಧ ಬಲವಾದ ಚಳವಳಿಯು ನಡಿಸಲ್ಪಡುತ್ತಿದೆ.

ಇದರಿಂದಾಗಿ ಸಿಂಹಳದಲ್ಲಿ ಭಾರತೀಯರ ಸ್ಥಿತಿಯು ಬಹಳ ಕಠಿಣಾವಸ್ಥೆಯನ್ನು ಹೊಂದಿದೆ. ಹಲವು ವರ್ಷಗಳಿಂದ ಲಂಕೆಯಲ್ಲಿ ನೆಲಸಿ, ಅದನ್ನೇ ತಮ್ಮ ಮನೆಯಾಗಿ ಮಾಡಿಕೊಂಡಿರುವ ಹಿಂದೀಯರಿಗೆ ಇಂದು ಈ ಪಾಡು ಉಂಟಾದದ್ದು ಅತಿ ಶೋಚನೀಯ. ಸಿಂಹಳೀಯರಲ್ಲಿ ನಿರುದ್ಯೋಗವು ಹೆಚ್ಚಾದುದೇ ಇದಕ್ಕೆ ಕಾರಣವೆಂದು ಅಲ್ಲಿಯ ಸರ್ಕಾರದ ಹೇಳಿಕೆ. ಸರ್ಕಾರದಲ್ಲಿ ದುಂದುಗಾರಿಕೆಯ ಖರ್ಚು ನಡಿಸಲ್ಪಡುತ್ತಿರುವುದು ಈ ನಿರುದ್ಯೋಗತನಕ್ಕೆ ಮುಖ್ಯ ಕಾರಣವಾಗಿದೆ. ಹೇಗೂ ಈ ನಿರುದ್ಯೋಗತನವ ಸಮಸ್ಯೆಯನ್ನು ಬಿಡಿಸುವ ಪ್ರಯತ್ನದಲ್ಲಿ ಅಲ್ಲಿಯ ಖಾಯಂ ನಿವಾಸಿಗಳಾಗಿರುವ ಇತರರ ಹಿತವನ್ನೂ ಕಾಪಾಡುವುದು ನ್ಯಾಯವಾಗಿದೆ. ಸಿಂಹಳ ದ್ವೀಪವೂ, ಹಿಂದೂಸ್ಥಾನವೂ ಆಳಿತ ವಿಚಾರದಲ್ಲಿ ಸ್ವಲ್ಪ ಬೇರೆ ಬೇರೆಯಾಗಿದ್ದರೂ, ಸಂಸ್ಕೃತಿ ಮತ್ತು ಆರ್ಥಿಕ ವಿಚಾರಗಳಲ್ಲಿ ಇವೆರಡು ದೇಶಗಳಿಗೆ ಬಹು ಪೂರ್ವದಿಂದಲೇ ನಿಕಟ ಸಂಬಂಧವಿದೆ. ವಿಶಾಲವಾದ ಹಿಂದೂಸ್ಥಾನವನ್ನು ಸಂಪೂರ್ಣ ವಿನಾಯಿಸಿ, ತನ್ನ ವ್ಯವಹಾರಗಳನ್ನು ನಿರಾತಂಕವಾಗಿ ನಡಿಸಲು ಸಿಂಹಳಕ್ಕೆ ಸಾಧ್ಯವಾಗಲಾರದು. ತಾತ್ಕಾಲಿಕ ಅಲ್ಪ ಲಾಭವನ್ನು ಬಯಸಿ, ಸಿಂಹಳೀಯರು ಮುಂದಾಲೋಚನೆ ಇಲ್ಲದೆ ವರ್ತಿಸಲಾರರಾಗಿ ನಂಬುತ್ತೇವೆ. ಈ ವಿಚಾರ ಸಮ್ಮತದ ಒಂದು ತೀರ್ಮಾನಕ್ಕೆ ಬರಲಿಕ್ಕಾಗಿ ಕಾಂಗ್ರೆಸ್ ಮಹಾಸಭೆಯ ವರ್ಕಿಂಗ್ ಕಮಿಟಿಯವರು ಪಂಡಿತ ಜವಾಹರಲಾಲ್ ನೆಹರೂರವರನ್ನು ಸಿಂಹಳಕ್ಕೆ ರಾಯಭಾರಿಯಾಗಿ ಕಳುಹಿಸಿರುವರು. ಈ ಕೆಲಸಕ್ಕೆ ಇವರಿಗಿಂತ ಉತ್ತಮರು ಮತ್ತಾರೂ ಇಲ್ಲವೆನ್ನಬೇಕು. ಇವರು ಅಲ್ಲಿಯ ಮಂತ್ರಿ ಮಂಡಲಿಯವರೊಡನೆ ಈಗ ಈ ವಿಚಾರ ಚರ್ಚೆ ನಡಿಸುತ್ತಿದ್ದಾರೆ. ಇವರ ಪ್ರಯತ್ನದ ಫಲಿತಾಂಶವು ಹೇಗಾಗುವದೆಂದು ಈಗಲೇ ಹೇಳಲು ಸಾಧ್ಯವಿಲ್ಲದಿದ್ದರೂ, ಇವರ ಉದ್ದೇಶವು ಸೈಗಂಡಿ, ಇವೆರಡು ದೇಶಗಳ ಬಾಂಧವ್ಯವು ಬೆಳೆಯುವಲು ಇದರಿಂದಲೇ ಮುಂದಕ್ಕೂ ಚೆನ್ನಾಗಿ ನಡೆಯಲ್ಪಡುವುದೆಂದು ಹಾರೈಸುತ್ತೇವೆ.

ಎಲ್ಲರೂ ಕಾಂಗ್ರೆಸ್ ಸದಸ್ಯರಾಗಿರಿ!

ಇದೀಗ ಕಾಂಗ್ರೆಸ್ ಪ್ರಾಥಮಿಕ ಸದಸ್ಯರನ್ನು ಸೇರಿಸುವ ಕಾಲ. ಈ ವರ್ಷದವರೂ ಕಾಂಗ್ರೆಸ್ ಬಹಿರಂಗ ಅಧಿವೇಶನವು ಡಿಸೆಂಬರ ತಿಂಗಳಲ್ಲಾಗುವ ಪ್ರಯುಕ್ತ ಸದಸ್ಯರನ್ನು ಮಾಡುವ ಕಾರ್ಯವು ಬೇಗ ಒಂದು ಸಪ್ಟೆಂಬರ್ 19 ರೊಳಗೆ ಸದಸ್ಯರನ್ನು ಸೇರಿಸುವ ಅವಧಿಯು ಮುಗಿಯುವ ಕಾರಣ ಬೇಗನೆ ಹುರುಪಿನಿಂದ ಈಗಲೇ ಕೆಲಸ ಮಾಡಬೇಕು. ಕಳೆದ ಸಲದಲ್ಲಿ ಕೊಡಗಿನಲ್ಲಿ ಎರಡು ಸಾವಿರಕ್ಕೆ ಮಿಕ್ಕು ಪ್ರಾಥಮಿಕ ಸದಸ್ಯರಾಗಿದ್ದರು. ಕಾಂಗ್ರೆಸ್ಸು ದಿನೇ ದಿನೇ ಪ್ರಬಲವಾಗುತ್ತಿರುವ ಸಂಸ್ಥೆ. ಕೊಡಗಿನಲ್ಲೂ ಅದು ಬೇರು ಬಿಡಬೇಕೆಂಬುದನ್ನು ವ್ಯಕ್ತಪಡಿಸಲು ಇಲ್ಲಿ ಯಾರೂ ವರ್ಷಂಪ್ರತಿ ಸದಸ್ಯರ ಸಂಖ್ಯೆ ಹೆಚ್ಚಬೇಕು. ಇದು ಕೊಡಗಿನ ಮಟ್ಟಿಗೆ ವ್ಯಸನದ ವಿಷಯವಾದರೂ ಪ್ರತಿಯೊಬ್ಬನೂ ಕಾಂಗ್ರೆಸ್ಸಿನ ಸದಸ್ಯನಾಗಿ, ಕೊಡಗಿನ ಹಾಗೂ ಭಾರತ ಮಾತೆಯ ಕಲ್ಯಾಣಕ್ಕೆ ಎಡೆ ಬಿಡದೆ ಹೋರಾಡುತ್ತಿರುವ ಜಗತ್ತಿನ ಇಂದಿನ ಮಹಾ ಸಂಸ್ಥೆಯಾದ ಕಾಂಗ್ರೆಸ್ಸಿನ ಧ್ಯೇಯ ಸಾಫಲ್ಯಕ್ಕೆ ಸಹಕರಿಗಳಾಗಬೇಕಾಗಿ ಹಾರೈಕೆ.

ಪಂಡಿತ ಜವಾಹರರ ರಾಯಭಾರ.

ಹಿಂದುಸ್ಥಾನದ [illegible] ಸಿಂಹಳ ದ್ವೀಪದ [illegible] ಕಲ್ಯಾಣಕ್ಕೆ [illegible] ತಾರೀಖು 16 ರಲ್ಲಿ ವಿಮಾನ [illegible] ಅವರ ಬರವನ್ನು ಸಿಂಹಳ ದ್ವೀಪದ [illegible] ಅವರಿಗೆ [illegible] ಸ್ವಾಗತವನ್ನಿತ್ತರು. [illegible] ಅಲ್ಲಿಯ [illegible] ಮಂತ್ರಿಗಳ [illegible] ಹಿಂದೀಯ [illegible] 17 ರಲ್ಲಿ [illegible] ಸಿಲೋನಿನ [illegible] ಜನ ಸಂದಣಿ [illegible] ತಾ. 21 ರಲ್ಲಿ ಸಿಲೋನಿನ [illegible] ನಗರವಾದ [illegible]

ಒಳದೇಶ.

ಮಡಿಕೇರಿ

ಸೆಂಟ್ರಲ್ ಬ್ಯಾಂಕು ಡೈರೆಕ್ಟರುಗಳ ಮೀಟಿಂಗು ತಾ 29-7-39ರಲ್ಲಿ ನಡೆಯತಕ್ಕದು

ಛೀಫ್ ಕಮಿಷನರರವರು ತಾ 13ರಲ್ಲಿ ಬೆಂಗಳೂರಿಗೆ ಹೋಗಿದ್ದು ತಾ 19ರಲ್ಲಿ ಮರಳಿ ಬಂದಿರುವರು

ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು ತಾ 17 ಮತ್ತು 18ರಲ್ಲಿ ಕೌನ್ಸಿಲ್ ಹಾಲಿನಲ್ಲಿ ನಡೆಯಿತು

ಬೆಂಗಳೂರಿಗೆ ಹೋಗಿದ್ದ ಸಿವಿಲ್ ಸರ್ಜನರು ತಾ 13-7-39ರಲ್ಲಿ ಇಲ್ಲಿಗೆ ಬಂದು ತಮ್ಮ ಉದ್ಯೋಗದ ಚಾರ್ಜನ್ನು ವಹಿಸಿಕೊಂಡಿರುವರು

ಈ ತಾ 14ರಿಂದ ಇಂದಿನ ವರೆಗೆ 8 ಇಂಚು 21 ಸೆಂಟು ಮಳೆಯಾಗಿದೆ ಹೆಚ್ಚಾಗಿ ಮಳೆ ಹೊಡೆದ ತಾ 16ರಲ್ಲಿ 2 ಇಂಚು 80 ಸೆಂಟು ಮಳೆ ಆಗಿದ್ದು ಜೂನ್ 1ರಿಂದ ಈ ವರೆಗೆ 44 ಇಂಚು 80 ಸೆಂಟು ಮಳೆಯಾಗಿದೆ

ಸಹಕಾರ ಸಂಘಗಳ ರಿಜಿಸ್ಟ್ರಾರಾಗಿದ್ದ ಶ್ರೀ ಕರವಂಡ ಚಂಗಪ್ಪನವರು ತಾ 18ರಿಂದ ಕೆಲಸದಿಂದ ನಿವೃತ್ತರಾದರೆಂದೂ ಆ ದಿನ ಅವರ ಸ್ನೇಹಿತರು ಅವರಿಗೆ ಒಂದು ಔತಣವನ್ನು ಕೊಟ್ಟರೆಂದೂ ತಿಳಿಯುತ್ತೇವೆ

ಕ್ಷಯ ರೋಗ ನಿವಾರಣೆ ಸಂಬಂಧ ಮಡಿಕೇರಿ ಸೆಂಟ್ರಲ್ ಕಮಿಟಿಯ ಮೀಟಿಂಗ, ಸೋಮವಾರಪೇಟೆ ಲೋಕಲ್ ಕಮಿಟಿಯ ಮೀಟಿಂಗು ಆಗೋಸ್ಟು ತಾ 1ರಲ್ಲಿ ಇಲ್ಲಿಯ ಕೌನ್ಸಿಲ್ ಹಾಲಿನಲ್ಲಿ ನಡೆಯುವದು.

ಮದ್ರಾಸ ಯೂನಿವರ್ಸಿಟಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಶ್ರೀ [illegible] ಬಿಯಂಡ ಎಸ ಮುತ್ತಣ್ಣನವರು ಹಾ[illegible] ಪೇಟೆ ಬಿ ಎಲ ಪರೀಕ್ಷೆಯಲ್ಲಿ [illegible] ಡೆ [illegible] ಕೊಡಗು [illegible] ಗಳಲ್ಲಿ ಪ್ರಥಮ [illegible] ರೆಂದೂ [illegible] ಸಂತೋಷಪಡುತ್ತೇವೆ

ಸೋಮವಾರಪೇಟೆ

ಉತ್ತರ ಕೊಡಗು ಯಡವನಾಡು [illegible] ವಾರೆಸ್ಟಿನಲ್ಲಿ ಕೆಲವರ ಕೊಡುತ್ತಿದ್ದ 'ಹಿರೀಕಂಠ ರೋಗ' ಎಂಬ ಫ್ರೆಂಡಾನಯನ್ನು ಶ್ರೀ ಗಣಪತಿ ಸಿದ್ದಣ್ಣನವರು ಮತ್ತು ಡಿ ಡಿ ದಾಸಪ್ಪನವರು ತಾ 11ರಲ್ಲಿ ಗುಂಡು ಹೊಡೆದು ಕೊಂದರು. ಆನೆಯ ಕೊಂಬು ಏಳು ಅಡಿ ಉದ್ದವಿತ್ತೆಂದೂ ತಿಳಿಯಬರುತ್ತದೆ

ಗಜೆಟ್.

ಸ್ಪೆಷಲ್ ಕ್ಲಾಸ್ ಫೈಲ್ಡ್ ಎಸಿಸ್ಟೆಂಟ ಗಳ ನೇಮಕಕ್ಕೆ ಏಳು, ಟ್ಯುಟ ಬೆಯಿನನೆಗ [illegible] ಮತ್ತು ಸ್ಪೆಷಲ್ ಕರಬೇಕಾದ [illegible] ಸ್ಥರದ ಹೀಗೆ ಹತ್ತೊಂಬತ್ತು ಜನರ ನೇಮಕದ ಬಗ್ಗೆ ಒಂದು ಪರೀಕ್ಷೆಯು ಡಿಸೆಂಬರು ತಾ 1ರಲ್ಲಿ ಡೆಲ್ಲಿಯಲ್ಲಿ ನಡೆಯುವದೆಂದೂ, ಇಚ್ಛಿಸುವವರ ಅರ್ಜಿಗಳು ಆಗೋಸ್ಟು ತಾ. 15ರೊಳಗೆ ಸರ್ವಿಸ್ ಕಮಿಷನಿಗೆ **ತಲಪಬೇಕೆಂತಲೂ, ಹೇಳಿದೆ.**

ವರ್ತಮಾನ ಸಂಗ್ರಹ.

[illegible] ಸೆಂಟ್ರಲ್ ರಿಪಬ್ಲಿಕ್ ಸ [illegible] ಬರ [illegible]

ಮಹಾ [illegible] 13ರಲ್ಲಿ [illegible] ನಡೆಯುತ್ತೇವೆ

ಹಿಂದೂ ದೇಶ.

ಹಿಂದುಳಿದ [illegible] ಪಶ್ಚಿಮ ರೈಲ್ವೆ [illegible] ಬ್ಬಿನವರು ಈಗಾಗಲೇ 21,000 ಒಡಿಗ [illegible] ಹೋಗಿರುವರು [illegible] ಆರೋಗ್ಯ [illegible] ವರು

ಹೈದರಾಬಾದಿನ ಸತ್ಯಾಗ್ರಹದ ಸಂಬಂಧ [illegible] ವ [illegible] 91 ಸಂಬಂಧಿ [illegible] ಸತ್ಯಾಗ್ರಹಿಗಳಿಗೆ ತಲಾ 1-1 ವರ್ಷದ ಕಠಿಣ [illegible]

"[illegible] ವರ್ಷಗಳಲ್ಲಿ, [illegible] ಸಂಪೂರ್ಣವಾಗಿ ಅಕ್ಷರ [illegible] ನಾನು [illegible] ಹಾಗಿಲ್ಲ [illegible]" ಎಂದು [illegible] ಭಾಷಣದಲ್ಲಿ [illegible]

ಹಿಂದೂಸ್ಥಾನದಲ್ಲಿ ಟೆನ್ನಿಸ್ [illegible] ಗಾಸ [illegible] ದಲ್ಲಿನ ನಗರದಲ್ಲಿ [illegible] ಲ್ಲಿ [illegible]

ಇಂಡಿಯಾದ [illegible] ಗಿ [illegible] ಅವರಲ್ಲಿ [illegible] ಸಂಪೂರ್ಣವಾಗಿ [illegible]

ವೈಸರಾಯ [illegible] ಸಂಗತ್ಯವೂ [illegible] 15,000 ರೂಪಾಯಿ ಕೊಟ್ಟುಕೊಂಡು [illegible] ಬಾಯಿಗ ಬಂದರು. ಈ ಹಸುಗಳ ಪ್ರತಿಯೊಂದು ದಿನವೊಂದಕ್ಕೆ 80 ಸೇರು **ಹಾಲನ್ನು ಕೊಡುವುದೆಂದು ಹೇಳಲಾಗಿದೆ.**

ತಂಜಾವೂರಿನ ಹಿರಿಯ ರಾಜಕುಮಾರನು, [illegible]

[illegible] 16 [illegible]

ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗದಲ್ಲಿ ವಿಪರೀತ ಹಿಮ, ಬಿರುಗಾಳಿ ಇವುಗಳಿಂದ ಹಲವು ಮರಗಳು ಉರುಳಿ, ವಿದ್ಯುಚ್ಛಕ್ತಿಯ ಸರಿಗೆಗಳನ್ನು ಮುರಿದು ಬಿದ್ದವು. ಇದನ್ನು ತಿಳಿಯದ ಒಬ್ಬ ಹುಡುಗ ರಸ್ತೆಯಲ್ಲಿ ಬಿದ್ದಿದ್ದ ಒಂದು [illegible] ಅವನ ಇದ್ದ [illegible] ವಿದ್ಯುಚ್ಛಕ್ತಿ ಸರಿಗೆ ಅವನನ್ನು [illegible] ಅವನನ್ನು [illegible] ಗೆ [illegible] 1 [illegible] ಹೀಗೆಯೇ ಸತ್ತರು.

ಪ್ರಸಿದ್ಧ [illegible] ಪ್ರಜಾತ [illegible] ರವಲ್ಲಿ [illegible] ಶ್ರೀ [illegible] ಬಳಿ [illegible] ಉಪವಾಸ [illegible] ಕೈಕೊಂಡಿದ್ದರು. ಅವರ [illegible] ಚಿಂತಾಜನಕ [illegible] ಡಾಕ್ಟರರು [illegible] ಸಲ್ಲಿಸಿದರು [illegible] ಅವರ ಕೋರಿಕೆಯನ್ನು ಸಲ್ಲಿಸಲು [illegible] ಅವರು [illegible] ದಿನ ಉಪವಾಸ [illegible] ನಿಲ್ಲಿಸಿದರು

ಜಯಪುರದಲ್ಲಿ [illegible] ತ [illegible] ಯಾವುದೂ ತಪ್ಪು ಮಾಡದಿದ್ದರು [illegible] ಆರೋಗ್ಯದ [illegible] ಆರೋಗ್ಯದ [illegible] ಜಯಪುರದಲ್ಲಿ [illegible] ಉಪಯೋಗಿಸುವ [illegible] ಅಸ್ಪೃಶ್ಯರಲ್ಲವೆಂದೂ [illegible]

[illegible] ರಾಯ [illegible] ಕ [illegible] ದಕ್ಷಿಣ [illegible] ಶ್ರೀ ಪಿ ವೈದ್ಯನಾಥ ಅಯ್ಯರು ಎಂಬ ಒಬ್ಬ ನಿವೃತ್ತ [illegible] ಮ್ಯಾಜಿಸ್ಟ್ರೇಟರನ್ನು ನಂಬಿಸಿ, ಮಂಕು ಬೂದಿ ಎರಚಿ ಅವರಿಂದ 6350 **ರೂ. ಗಳನ್ನೂ, ಇತರ ಪದಾರ್ಥಗಳನ್ನೂ ಪಡೆದು, ಅವರಿಗೆ ದಗೆ ಮಾಡಿದನೆಂದು** ಮೊಕದ್ದಮ್ಮೆಯಾಗಿ, ಮದ್ರಾಸಿನ ಚೀಫ್ ಮೆಜಿಸ್ಟ್ರೇಟರು, ಅವನಿಗೆ 2 ವರ್ಷ ಕಠಿಣ ಸಜೆ ಹಾಗೂ 1 ಸಾವಿರದ ಜುಲ್ಮಾನೆ ತಪ್ಪಿದರೆ ಮತ್ತಾರು ತಿಂಗಳ ಸಜೆ, ಎಂದು [illegible]

[illegible]

[illegible] ಗಾಂಧಿಯವರ [illegible] ಸರ್ಕಾರದವರಿಗೆ [illegible] ಸೆರೆಮನೆಯಲ್ಲಿ [illegible] ಕೀರ್ತಿಯು [illegible] ಮಹಾತ್ಮಾ ಗಾಂಧಿಯವರ ಕೇಳಿರುತ್ತಾರೆ ಬಂದಿವಾನರು ಬಿಡುಗಡೆಯನ್ನು ಹೊಂದುವುದಕ್ಕಾಗಿ ಉಪವಾಸವ್ರತವನ್ನು ಕೈಕೊಂಡಿರುವುದನ್ನು ಮಹಾತ್ಮಾಜಿಯವರು ಖಂಡಿಸಿ, ಯಾವ ಬಂದೀವಾನನೂ ಸಹ ಆಹಾರವನ್ನು ಸೇವಿಸುವುದಿಲ್ಲವೆಂದು ತಿರಸ್ಕರಿಸುವುದರಿಂದ ಬಿಡುಗಡೆ ಹೊಂದಕೂಡದೆಂದೂ ಈ ರೀತಿ ಉಪವಾಸ ಮಾಡುವುದು ತಪ್ಪೆಂದೂ ಅಭಿಪ್ರಾಯಪಟ್ಟಿರುತ್ತಾರೆ

ಬೊಂಬಾಯಿ ಇದಿವರೆಗಿನ ಗವರ್ನರಾದ ಸರ್ ರೋಜರ್ ಲಮ್ಲಿಯವರು ಒಂದು ಹೇಳಿಕೆಯನ್ನು ಹೊರಡಿಸಿ ಬೊಂಬಾಯಿಯಲ್ಲಿ ಆಗಸ್ಟ್ ತಾ 1ರಿಂದ ಪಾನನಿರೋಧ ಶಾಸನವು ಜಾರಿಗೆ ಬಂದಾಗ ತಾವು ಸರ್ಕಾರಿ ಬಂಗಲೆಯಲ್ಲಿ ನಡೆಯುವ [illegible] ಔತಣ ದಿನಗಳಲ್ಲಿ ಮದ್ಯಗಳನ್ನು ಉಪಯೋಗಿಸುವುದು ಇಲ್ಲವೆಂದೂ, ಆ ಪ್ರಾಂತಗಳಿಗೆ [illegible] ನಡೆಸುವ [illegible] ಗಳಲ್ಲೂ ಸಹ ಮದ್ಯಪಾನ ಮಾಡಲು ಸರ್ಕಾರದವರ ಅನುಮತಿಯನ್ನು ಪಡೆಯದಿರುವ ಅತಿಥಿಗಳಿದ್ದಲ್ಲಿ ಅಗಲೂ ಆ ಪಾನದ್ರಾವಕವನ್ನು ಉಪಯೋಗಿಸುವುದಿಲ್ಲವೆಂದೂ ಸರ್ಕಾರಿ [illegible] ದಲ್ಲಿ ತಾವೂ ತಮ್ಮ [illegible] ಸಹ ಮದ್ಯವನ್ನು [illegible] ವಿಷಯದಲ್ಲಿ ಸರ್ಕಾರದವರ [illegible] ರೀತಿಯಲ್ಲಿ [illegible] ತಿಳಿಯಪಡಿಸಿರುತ್ತಾರೆ

ಜಾಹಿರಾತು.

1939ನೇ ಅಕ್ಟೋಬರು [illegible] ಬಾಗಾಯಿತ [illegible] ರ ರಸ್ತೆಗಳ ಮತ್ತು [illegible] ಕಟ್ಟಡಗಳ ರಿಪೇರಿ [illegible] ಟೆಂಡರುಗಳು [illegible] 9 ಜನ [illegible] ಗಳು [illegible] ತಿಂಗಳಿಗೆ 20/- [illegible] ಮೇಲ್ಕಂಡ ಕೆಲಸಗಳಲ್ಲಿ [illegible] ಇರುವ [illegible] ಕೊಡಗು [illegible] 1939ನೇ ಆಗಸ್ಟ್ ತಾರೀಕು 15ರೊಳಗೆ [illegible] ಮಾಡಲ್ಪಟ್ಟವರಿಗೆ ಒಪ್ಪಿಸತಕ್ಕದ್ದು

ಪಿ. ಐ. ಬೆಳ್ಯಪ್ಪ,
ಅಧ್ಯಕ್ಷರು,
ಕೊಡಗು ಜಿಲ್ಲಾ ಬೋರ್ಡ್.

ಪರದೇಶಗಳ ಪರಿಸ್ಥಿತಿ.

ಚೀನಾ-ಜಪಾನ್.

ಈ ಎರಡು ರಾಷ್ಟ್ರಗಳೊಳಗೆ ಯುದ್ಧ ಪ್ರಾರಂಭವಾಗಿ ಕಳೆದ ತಾ. 7ಕ್ಕೆ ಎರಡು ವರ್ಷಗಳು ಸಂದವು. ಚೈನಾವನ್ನು ಕೆಲವೊಂದು ವಾರಗಳಲ್ಲಿ ಬಗ್ಗುಬಡಿದು ತನ್ನ ರಾಜ್ಯ ವಿಸ್ತರಣಾ ತೃಷೆಯನ್ನು ಅಡಗಿಸಿಕೊಳ್ಳಬಹುದೆಂದು ಕನಸರಿಸಿ ಯುದ್ಧರಂಗಕ್ಕೆ ಧುಮುಕಿದ ಜಪಾನರ ಆಶಾಕಾಂಕ್ಷೆಗಳು ಇನ್ನೂ ನೆರವೇರಲಿಲ್ಲ. ಕೆಲವೇ ತಿಂಗಳುಗಳಲ್ಲಿ ಚೈನಾವನ್ನು ತಮ್ಮ ಹತೋಟಿಗೆ ತರಬಹುದೆಂದು ಘರ್ಜಿಸಿದ ಜಪಾನಿನ ಯುದ್ಧ ಮಂತ್ರಿಗಳು, ಈ ಸಂಗ್ರಾಮ ಮುಗಿಯಲು ಹತ್ತು ವರ್ಷಗಳು, ಯಾಕೆ? ಇಪ್ಪತ್ತು ವರ್ಷಗಳು ಕೂಡ ಆಗಬಹುದೆಂದಿದ್ದಾರೆ.

ಈ ಎರಡು ವರ್ಷಗಳ ತೀವ್ರ ಹೋರಾಟದಲ್ಲಿ ಮೃತರಾದ ಹಾಗೂ ಗಾಯಗೊಂಡವರ ಸಂಖ್ಯೆಯನ್ನು ಸರಿಯಾಗಿ ಎಣಿಸಬರುವುದಿಲ್ಲವಾದರೂ ಅಂದಾಜಿನ ಸಂಖ್ಯೆ ಈ ರೀತಿ ಇರಬಹುದೆಂದು ಹೇಳಲಾಗಿದೆ. ಚೀನಾದ ಕಡೆಯಲ್ಲಿ ಗಾಯಗೊಂಡವರು ಹತ್ತು ಲಕ್ಷ, ಸತ್ತವರು ಹತ್ತು ಲಕ್ಷ ಅಂತೂ ಜುಮ್ಲ ಇಪ್ಪತ್ತು ಲಕ್ಷ. ಜಪಾನಿನ ಕಡೆಯಲ್ಲಿ ಗಾಯಗೊಂಡವರು ಆರು ಲಕ್ಷ, ಮೃತಪಟ್ಟವರು ನಾಲ್ಕು ಲಕ್ಷ, ಜುಮ್ಲ ಹತ್ತು ಲಕ್ಷ. ಈ ಸಂಖ್ಯೆಗಳಲ್ಲಿ ಚೀನೀಯರ ಕಡೆ ಯುದ್ಧದ ಆಘಾತದಿಂದ ಸತ್ತವರ ಸಂಖ್ಯೆ ಹೆಚ್ಚೆಂದೂ ಜಪಾನರ ಕಡೆ ರೋಗ ರುಜಿನಗಳ ಆಘಾತದಿಂದ ಮೃತಪಟ್ಟವರೇ ಹೆಚ್ಚೆಂದೂ ತಿಳಿದು ಬಂದಿದೆ.

ಈ ವರೆಗಿನ ಯುದ್ಧದಲ್ಲಿ ಜಪಾನರು ಚೀನೀಯರ ಪ್ರಾಮುಖ್ಯ ನಗರಗಳನ್ನು ವಶಪಡಿಸಿಕೊಂಡಿರುವರು. ಕೇಂಟನ್, ಶಂಘಾಯಿ, ನಾನ್ಕಿಂಗ್, ಹಾಂಗ್‌ಕೊ, ಟಿಯೊನ್‌ಸ್ಟಿನ್ ಮೊದಲಾದ ಪ್ರಾಮುಖ್ಯ ನಗರಗಳೂ, ಶಂಗಾಹಿ-ನಾನ್ಕಿಂಗ್, ಶಂಗಾಹಿ-ಹಂಗ್ಚೊ; ಟಿಯೊನ್‌ಸ್ಟೀನ್ ಪೂಕೌ ಮೊದಲಾದ ರೈಲ್ವೆಗಳನ್ನು ಇವರು ವಶಪಡಿಸಿಕೊಂಡಿರುವರು. ಹೀಗೆ ಚೀನದ ಬಹು ಭಾಗವು ಜಪಾನರ ಅಂಕೆಗೆ ಬಂದಿದೆ.

ಆದರೆ ಆರು ತಿಂಗಳ ಇತ್ತಲಾಗಿ ಕಾಣಬರುತ್ತಿರುವ ವಿಚಿತ್ರವೆಂದರೆ ಚೀನೀಯರಲ್ಲಿ ಗಾಯಗೊಳ್ಳುವ ಹಾಗೂ ಮರಣಕ್ಕೀಡಾಗುವವರ ಸಂಖ್ಯೆಯು ಕಮ್ಮಿಯಾಗುತ್ತಿದೆ. ಜಪಾನರಲ್ಲಿ ಇದು ಹೆಚ್ಚುತ್ತಿರುವದು. ಇದರ ಮುಖ್ಯಕಾರಣವೆಂದರೆ ಚೀನೀಯರು ಯುದ್ಧದ ಪ್ರಾರಂಭದಲ್ಲಿ ಮಾಡಿದಂತೆ ಜಪಾನಿಯರ ಎದುರು ನಿಂತು ಯುದ್ಧ ಮಾಡದೆ ಗೊರಿಲ್ಲಾ ಯುದ್ಧಕ್ರಮವನ್ನು ಕೈಕೊಂಡದ್ದೇ ಆಗಿದೆ. ಚೀನೀಯರು ಗೊರಿಲ್ಲಾ ಯುದ್ಧಕ್ರಮದಿಂದ ಜಪಾನಿಯರನ್ನು ಸದೆ ಬಡೆಯುತ್ತಿರುವರು. ಯುದ್ಧ ಸಾಮಗ್ರಿಗಳ ಮಟ್ಟಿಗೆ ಚೀನೀಯರು ಅಮೋಘವಾಗಿ ತಮ್ಮ ಯುದ್ಧ ಸಾಹಿತ್ಯಗಳನ್ನು ಸಜ್ಜುಗೊಳಿಸುತ್ತಿದ್ದರೂ ಜಪಾನರ ಮಟ್ಟಕ್ಕೆ ಇನ್ನೂ ಬಂದಿರುವದಿಲ್ಲ. ಅವರಿಗೆ ಸಾಕಷ್ಟು ವಿಮಾನಗಳಿಲ್ಲ. ವಿಮಾನಗಳನ್ನು ಗುಂಡು ಹಾರಿಸಿ ಕೆಡಹುವ, ದೊಡ್ಡ ಕೋವಿಗಳಿಲ್ಲ, ಫಿರಂಗಿಗಳಿಲ್ಲ. ಆದ್ದರಿಂದಲೇ ಕೆಲವೊಂದು ವೇಳೆ ಚೀನೀಯರು ಪರಾಜಯವನ್ನು ಹೊಂದಬೇಕಾಗುವದು. ಆದರೆ ಇತ್ತಲಾಗಿ ಅವರು ತಮ್ಮ ಆರ್ಥಿಕ ಮುಗ್ಗಟ್ಟಿನಿಂದ ಸುಧಾರಿಸಿ ಮೇರೆಮೀರಿ ಮುಂದರಿಯುತ್ತಿರುವದು. ಈ ಎರಡು ವರ್ಷಗಳಲ್ಲಿ ಜಪಾನರ ಕೈವಾಡವೇ ಮೇಲಾಗಿದ್ದರೂ ಈಗೀಗ ಚೀನೀಯರು ಮುಂದರಿದು ಜಪಾನರ ವಶವಿರುವ ನಗರಗಳನ್ನು ಒಂದೊಂದಾಗಿ ವಶಪಡಿಸಿಕೊಳ್ಳುತ್ತಿರುವರು. ಅನೇಕ ಕಡೆಗಳಲ್ಲಿ ಚೀನೀಯರು ತಮ್ಮ ಗೊರಿಲ್ಲಾ ಯುದ್ಧಕ್ರಮದಿಂದ ಜಪಾನರ ಸೈನ್ಯದಲ್ಲಿ ಧಾಳಿ ನಡಿಸಿ, ಜಪಾನರ ಆಹಾರ ಹಾಗೂ ಯುದ್ಧ ಸಾಮಗ್ರಿಗಳನ್ನು ಅಪಹರಿಸಿ ಅವರನ್ನು ದಿಗ್ಭ್ರಾಂತಗೊಳಿಸಿವೆ. ಇಂಥಾ ಶುಭ ಚಿನ್ಹೆಗಳಿಂದ ಚೀನವು ತನ್ನ ಸ್ವಾತಂತ್ರ್ಯ ಸಂಪಾದನೆಗಾಗಿ ಹಟತೊಟ್ಟು ಮೂರನೇ ವರ್ಷದ ಯುದ್ಧಕ್ಕೆ ಕಾಲಿಕ್ಕಿರುವದು. ಈ ವರ್ಷ ಚೀನೀಯರು ವಿಜಯಿಗಳಾಗಿ ಕಳೆದು ಹೋದ ತಮ್ಮ ಪ್ರಾಂತಗಳನ್ನು ಪುನಹ ವಶಪಡಿಸಿಕೊಂಡು ಸ್ವತಂತ್ರರಾಷ್ಟ್ರವಾಗಿ ಮೆರೆಯಲೆಂಬುದೇ ನಮ್ಮ ಹಿರಿಯಾಸೆ.

ಪ್ರಕೃತ ಜಪಾನರು ಶಾನ್ಸಿಯಲ್ಲಿರುವ ಚೈನೀಯರನ್ನು ಸುತ್ತುಗಟ್ಟಿ ನಾಶ ಮಾಡಲು ಪ್ರಯತ್ನಿಸುತ್ತಿರುವರು. ಇವನ್ನು ಅರಿತು 1 ಲಕ್ಷ ಜನರಿಂದ ಕೂಡಿದ ಚೀನೀ ಪಡೆಯೊಂದು ಅತ್ತ ಧಾವಿಸಿದೆ. ಎರಡು ಕಡೆಯವರಿಗೂ ಘೋರ ಯುದ್ಧವಾಗುತ್ತಿದೆ. ಚೀನೀಯರು ಜಪಾನರನ್ನು ಜಯಪ್ರದವಾಗಿ ಹಿಮ್ಮೆಟ್ಟಿಸುತ್ತಿರುವರು. ಈ ವರೆಗೆ 3 ಸಾವಿರ ಮಂದಿ ಜಪಾನರು ಹತರಾಗಿರುವರೆಂದು ತಿಳಿದುಬಂದಿದೆ. ಈ ಮಧ್ಯೆ ಮಧ್ಯ ಚೈನಾದಲ್ಲಿ ಜಪಾನ್ ಸೈನ್ಯವನ್ನೆಲ್ಲಾ ಏಕೀಕರಿಸಿ ಹೊನಾನು ಪ್ರಾಂತದ ಮುಖ್ಯ ಪಟ್ಟಣವಾದ ಚಂಗ್‌ಶಾ ನಗರದ ಮೇಲೆ ಧಾಳಿ ಇಡುವ ಏರ್ಪಾಡು ನಡೆದಿದೆ. ಈ ಯುದ್ಧದಲ್ಲಿ 4 ಲಕ್ಷ ಜಪಾನರು ಭಾಗವಹಿಸಬಹುದೆಂದು ತಿಳಿಯಬಂದಿದೆ.

ಜಪಾನರಿಗೆ ಇಟೆಲಿಯ ಸಹಾಯ.

ಅಂದೊಮ್ಮೆ ಸ್ಪೈನಿನಲ್ಲಿ ಕದನವಾದಾಗ ಇಟೆಲಿಯು ಶಕ್ತಿ ಮೀರಿ ಜನರಲ್ ಫ್ರಾಂಕೋವಿಗೆ ಸಹಾಯ ಮಾಡಿತು. ಅದನ್ನು ಕಂಡ ಯೂರೋಪಿನ ವಿವಿಧ ಜನಾಂಗಗಳಾದರೂ ನಿಷೇಧ ವ್ಯಕ್ತಪಡಿಸಿ ಇಟೆಲಿಯು ತನ್ನ ಸೈನ್ಯವನ್ನು ಹಿಂದೆಗೆಯಬೇಕೆಂದರೇ ವಿನಹ ಯಾರೂ ಮುಂದಿನ ಪ್ರಸಂಗಕ್ಕೆ ಕೈಹಚ್ಚಲಿಲ್ಲ. ಈ ಗೊಂದಲದ ನಡುವೆ ಫ್ರಾಂಕೋವು ಈ ಸರ್ವಾಧಿಕಾರಿಗಳ ಶಕ್ತಿಯಿಂದ ಸ್ಪೈನನ್ನು ಬಗ್ಗುಬಡಿದು ವಿಜಯ ಪತಾಕೆಯನ್ನು ಹಿಡಿದನು. ಬ್ರಿಟನ್ ಫ್ರಾನ್ಸ್‌ಗಳೇ ಮೊದಲಾದ ರಾಷ್ಟ್ರಗಳು ಅದಕ್ಕೆ ತಲೆಬಾಗಿ ಅಲ್ಲಿ ಆತನ ವಿಜಯವನ್ನು ಸಮರ್ಥಿಸಿದುವು. ಆದರೆ ಈಗ ಇಟೆಲಿಯು ಜಪಾನರಿಗೆ ಸಹಾಯ ಮಾಡಲು ಒಪ್ಪಿದೆಯಂತೆ. ತಮ್ಮ ನೆರೆಮನೆಯಂತಿದ್ದ ಸ್ಪೈನಿನಲ್ಲಿ ನಡೆಸಿದ ಅತ್ಯಾಚಾರವನ್ನು ಖಂಡಿಸದ ರಣಭೀರುಗಳು ಇಂದು ಇಟೆಲಿಯು ಜಪಾನರ ಪರ ನಿಂತು ಚೈನಾವನ್ನು ಬಗ್ಗು ಬಡೆಯುವಾಗ ತಲೆಯೆತ್ತಿ ನೋಡಿಯಾರೆ? ಇಟೆಲಿಯು ಹೀಗೆ ಜಪಾನರ ಪರ ನಿಂತಿರುವಾಗ ಅವಕ್ಕೊಂದು ಎಚ್ಚರಿಕೆಯನ್ನಾದರೂ ಕೊಡಲು ತಯಾರಿಲ್ಲದ ರಾಷ್ಟ್ರಗಳ ವರ್ತನೆಯು ಇಂದು ಜಗತ್ತಿನಲ್ಲಿ ಸ್ವಾತಂತ್ರ್ಯದ ಕತ್ತು ಹಿಸುಕುತ್ತಿದೆಯೆಂದರೆ ಅತಿಶಯೋಕ್ತಿಯೇನು? ಇಟೆಲಿಯಾದರೋ ಈ ಸಂದರ್ಭದಲ್ಲಿ ತನ್ನ ಸೊಬಗತನವನ್ನು ಪ್ರದರ್ಶಿಸಿ, 'ಪೌರ್ವಾತ್ಯದಲ್ಲಿ ನಮ್ಮ ಕೈವಾಡವೇನೂ ಇಲ್ಲ ಎಲ್ಲವೂ ಅವರವರ ಸ್ವಂತ ಜವಾಬುದಾರಿಯದು; ಆತ್ಮ ಸಂತೋಷದ್ದು' ಎಂದು ಅಂದಿರುವರು. ಇದು ಕೇವಲ ಕಣ್ಣಿಗೆ ಮಣ್ಣೆರಚುವ ವಿಚಾರ. ಇತ್ತ ರೋಮ್, ಬರ್ಲಿನ್ ಮತ್ತು ಟೋಕಿಯೋಗಳು ಒಂದಾಗಿ ಮುಂದರಿಯುತ್ತಿರುವಾಗ ಬಡ ಚೀನಾದ ಬಗ್ಯೆ ಕಿರು ಬೆರಳನ್ನಾದರೂ ಎತ್ತುವ ಧೈರ್ಯಶಾಲಿಯಾದ ರಾಷ್ಟ್ರವಿಲ್ಲ. ಬ್ರಿಟನು ಬಾಹ್ಯಾಡಂಬರದಲ್ಲೇ ಕಾಲ ನೂಕುತ್ತಿದೆ. ಇತ್ತ ಜಪಾನು ಬ್ರಿಟನು ಹಾಗೂ ಚೈನಾದೊಡನೆ ಯುದ್ಧ ಮಾಡಬಲ್ಲೆನೆನ್ನುತ್ತಿದೆ. ಅಂತೂ ಸರ್ವಾಧಿಕಾರಿಗಳ ಸಂಪರ್ಕದಿಂದ ಜಪಾನಿನ ಭಾಗ್ಯೋದಯವಾದೀತೇ? ಎಂಬುದು ನಿರೀಕ್ಷಿಸತಕ್ಕ ವಿಚಾರ.

ಜರ್ಮನಿ.

ಡೇನ್ಜಿಗ್‌ನಲ್ಲಿರುವ ನಾಜಿ ಮುಖಂಡನಾದ ಹರ್ ಫೋರ್‌ಸ್ಟರ್ ಮತ್ತು ಪ್ರಚಾರ ಶಾಖೆಯ ಮುಖಂಡನಾದ ಹರ್ ಜೂಸ್ಕ ಎಂಬವರು ಜರ್ಮನಿಗೆ ಬಂದು ಹಿಟ್ಲರನ ಭೇಟಿ ತೆಗೆದುಕೊಂಡು ಹೋಗಿರುವರು. ಇವರ ಅಭಿಪ್ರಾಯದಂತೆ ಹಿಟ್ಲರನು ಡೇನ್ಜಿಗ್‌ನ ಮೇಲೆ ಯುದ್ಧ ಮಾಡುವುದಿಲ್ಲವೆಂಬುವುದು ತಿಳಿದು ಬರುತ್ತೆ. ಪೋಲೇಂಡಿನೊಡನೆ ಒಪ್ಪಂದ ಮಾಡಿಕೊಂಡರೆ ಮಾತ್ರ ತಮ್ಮ ಕಾರ್ಯ ಸಾಫಲ್ಯವಾದೀತೆಂದು ಹಿಟ್ಲರನ ವಾದವಂತೆ. ಬೇರೆ ಜನಾಂಗಗಳ ಕೈವಾಡವಿಲ್ಲದಿದ್ದರೆ ಈ ಒಪ್ಪಂದದಿಂದ ತಮ್ಮ ರೊಟ್ಟಿಯ ಮೇಲೆ ಜೆತ್ತಿ ಬೀಳಿಸಲು ಸುಲಭ ಸಾಧ್ಯವೆಂದು ಹಿಟ್ಲರನಂದಿರುವನಂತೆ. ಡೇನ್ಜಿಗ್‌ನ ಸಮಸ್ಯೆಯು ಬಹು ಪ್ರಾಮುಖ್ಯವಾದ ಪ್ರಯುಕ್ತ ಅಲ್ಲಿ ಸೈನ್ಯ ಹಾಗೂ ಯುದ್ಧೋಪಕರಣಗಳ ತಯಾರಿಕೆಯು ಸರಾಗವಾಗಿ ನಡೆಯುತ್ತಿರಲೇ ಬೇಕೆಂದೂ, ಸದ್ಯಕ್ಕೆ ಜರ್ಮನಿಯಿಂದ ಕಳುಹಿಸುವ ಸೈನ್ಯ ಸರಂಜಾಮುಗಳನ್ನು ನಿಲ್ಲಿಸಲಾಗುವದೆಂದೂ ಹಿಟ್ಲರನ ಹೇಳಿಕೆಯಂತೆ. ಡೇನ್ಜಿಗ್‌ನಲ್ಲಿ ವಾರ್ತಾವಾಹಕ ಸಂಸ್ಥೆಯೊಂದನ್ನು ಏರ್ಪಡಿಸಿ ತನ್ನ ಅಮೋಘ ಪ್ರಚಾರ ಕಾರ್ಯವನ್ನು ಕೈಕೊಂಡಿರುವರಂತೆ. ನಾಜಿಗಳು ಡೇನ್ಜಿಗ್ ಜನತೆಯ ಮನವನ್ನು ಪಲ್ಲಟ ಮಾಡಿ ಅವರೊಡನೆ ಯುದ್ಧ ಮಾಡಬೇಕೆಂದೂ ಕಲಹ ಮಾಡದೆ ಉಪಾಯದಲ್ಲಿ ಅದನ್ನು ತಮ್ಮ ಬಗಲಲ್ಲಿ ಹಾಕುವ ಯೋಜನೆಯನ್ನು ನಡೆಸುತ್ತಿರುವರು. ಡೇನ್ಜಿಗ್ ಜರ್ಮನರ ವಶವಾದರೆ ಪೋಲೇಂಡಿನ ಕಾಲು ಮುರಿದಂತೆ. ಮುಂದೆ ಅದು ಅನಾಯಾಸವಾಗಿ ಜರ್ಮನರ ಕರಗತವಾಗದಿರದು. ಇದಿಷ್ಟು ನಡೆದರೆ ಹಿಟ್ಲರನ ಮಧ್ಯೆ ಯೂರೋಪದ ಮಹತ್ವಾಕಾಂಕ್ಷೆಯು ಸಫಲವಾದಂತೆಯೇ. ಇನ್ನುಳಿದ ರಾಷ್ಟ್ರಗಳನ್ನು ಸುಲಭವಾಗಿ ಮುರಿದು ಕರಗತ ಮಾಡಿಕೊಳ್ಳುವದು ಆತನಿಗೆ ಕಷ್ಟವೆನಿಸದು. ಇಂದು ಮಧ್ಯ ಪ್ರಾಂತದ ರಾಷ್ಟ್ರಗಳಲ್ಲೊಂದಾದ ಹಂಗೇರಿಯೂ ಹಿಟ್ಲರನ ತಾಳದಂತೆ ಹೆಜ್ಜೆ ಹಾಕುತ್ತಿರುವದು. ಅಂದಮೇಲೆ ಇನ್ನುಳಿದ ಚಿಕ್ಕ ರಾಷ್ಟ್ರಗಳು ಹಿಟ್ಲರನ ಬೆದರಿಕೆಯಿಂದಲೇ ಶಸ್ತ್ರ ವಿನ್ಯಾಸವನ್ನು ಕೈಕೊಂಡು ಶರಣಾಗತವಾಗುವವು.

ಕೊಡಂದೇರ ಡಿ. ನಾಚಪ್ಪ,

L.D Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL KARACHI

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ.
ಇವರ ಮಡಿಕೇರಿ ಬಸ್ಸ್ ಸ್ಟಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 7

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

Shorthand, Typing etc.

ಶೊರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಉತ್ಕೃಷ್ಟ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಐಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
52—5 Mercara.

ಕೃಷಿಕರ ಕೈಗನ್ನಡಿ.

ಕೊಡಗಿನಲ್ಲಿ ಮುಕ್ಕಾಲು ಪಾಲು ಜನರು ಗ್ರಾಮಾಂತರಗಳಲ್ಲಿ ವಾಸಮಾಡುವವರಾಗಿರುತ್ತಾರೆ. ಇವರೆಲ್ಲರೂ ಮುಖ್ಯವಾಗಿ ವ್ಯವಸಾಯವನ್ನು ಕೈಕೊಂಡಿರುತ್ತಾರೆ. ಹೀಗಾಗಿ ವ್ಯವಸಾಯವು ನಮ್ಮ ನಾಡಿನ ಬೆನ್ನೆಲುಬಾಗಿದೆ. ಸಾಗುವಳಿಯ ಸಾಮಗ್ರಿಗಳಾದರೋ ಇನ್ನಿತರ ದೇಶೀಯರಲ್ಲಿರುವಂತೆ ನಮ್ಮ ಕೊಡಗು ದೇಶದಲ್ಲಿರುವುದಿಲ್ಲ. ನಮ್ಮವರು ಸಧ್ಯಕ್ಕೆ ಅಶಿಕ್ಷಿತರೂ, ಬಡವರೂ ಆಗಿರುವುದರಿಂದ ಮುಖ್ಯವಾಗಿ ಶಿಕ್ಷಣವೂ, ಭಂಡವಾಳವೂ ಅತ್ಯವಶ್ಯಕವಾದುವುಗಳಾಗಿವೆ. ಯಂತ್ರಗಳ ಉಪಯೋಗವಿಲ್ಲದಿರೋಣವರಿಂದ ದನಗಳು ಈಗ ನಮ್ಮ ಗ್ರಾಮಾಂತರೀಯರ ಬೆನ್ನು ಮೂಳೆಗಳಾಗಿವೆ. ಮುಖ್ಯವಾಗಿ ಯೂಪ ಉದ್ಯೋಗವನ್ನೇ ಆಚರಿಸಿದಾಗ್ಯೂ ಅವರ ಜಯಾಪಜಯಗಳು ಅದನ್ನು ಆಚರಿಸುವವರ ಮೇಲೆಯೇ ಹೆಚ್ಚಾಗಿ ಅವಲಂಬಿಸಿರುತ್ತವೆ. ಆದ ಕಾರಣ ಗ್ರಾಮಾಂತರೀಯರ ಜಯಾಪಜಯಗಳು ಅಲ್ಲಿ ವಾಸಮಾಡುತ್ತಿರುವವರ ಮೇಲೆಯೇ ಅವಲಂಬಿಸಿವೆ. ಅಮೇರಿಕಾ ದೇಶಿಯರಲ್ಲಿ ತಜ್ಞರಿದ್ದು ಸ್ವಂತ ಒಕ್ಕಲುತನವು ಯಶಸ್ವಿಯಾಗಿರಲು ಕಾರಣವಾಗಿದೆ. ಅಲ್ಲದೆ ಇಂಗ್ಲೆಂಡ್, ಫ್ರಾನ್ಸ್, ಡೆನ್ಮಾರ್ಕ್ ಮೊದಲಾದ ಯೂರೋಪ್ ಖಂಡದ ದೇಶಗಳಲ್ಲಿ [illegible] ಗ್ರಾಮಗಳು ಅಭಿವೃದ್ಧಿಯಲ್ಲಿರಲು ಅಲ್ಲಿಯ ರೈತರೇ ಕಾರಣಭೂತರು. ನಮ್ಮ ದೇಶದಲ್ಲಿ ಗ್ರಾಮಾಂತರೀಯರು ಹಿಂದುಳಿದಿರುವುದಕ್ಕೆ ನಾವೇ ಕಾರಣರು. ಇಂದ ಮೇಲೆ ನಮ್ಮ ಗ್ರಾಮಾಂತರಗಳು ಸುಧಾರಣೆ ಹೊಂದಿ ನಮ್ಮ ಸಮಸ್ತ ನಾಡಿನ ಸಾಂಪತ್ತಿಕ ಸ್ಥಿತಿಯು ಉತ್ತಮಗೊಳ್ಳುವುದು ನಮ್ಮ ಗ್ರಾಮಾಂತರೀಯರ ಮೇಲೆಯೇ ಅವಲಂಬಿಸಿದೆ ಎಂದು ಬೇರೆ ಹೇಳಬೇಕಿಲ್ಲ.

ವಿದ್ಯಾವಂತರಾದ ಯುವಕರ ಧ್ಯೇಯವೇನು ?

ಗ್ರಾಮಾಭಿವೃದ್ಧಿಯು ಸರ್ಕಾರದವರ ಮತ್ತು ದೇಶಾಭಿಮಾನಿಗಳಾದ ಖಾಸಗಿ ಜನರ ಧ್ಯೇಯವಾಗಿರುವಾಗ ಇನ್ನುಮುಂದೆ ಗ್ರಾಮಾಂತರಗಳಲ್ಲಿ ಸರ್ವತೋಮುಖವಾದ ಏಳಿಗೆಯು ಕಂಡು ಬರುವುದೆಂಬುವಕ್ಕೆ ಸಂಶಯವಿಲ್ಲ. ಗ್ರಾಮಾಭಿವೃದ್ಧಿ ಕೆಲಸಗಳನ್ನು ಶ್ರದ್ಧಾಶಕ್ತಿಗಳಿಂದ ಮಾಡುವವರು ಇದು ವರೆಗೆ ಸಿಕ್ಕದಿದ್ದು, ಈಗ ನಿರುದ್ಯೋಗ ಸಮಸ್ಯೆಯ ಫಲವಾಗಿ ವಿಧ್ಯಾವಂತರು ಗ್ರಾಮಾಂತರಗಳಲ್ಲಿ ನೆಲೆಸುವಂತವರಾಗಿರುವುದರಿಂದ ಅಲ್ಲಿನ ಅಭಿವೃದ್ಧಿ ಕಾರ್ಯಗಳು ಇನ್ನುಮುಂದೆ ತೀವ್ರವಾಗಿ ನಡೆಯುವುವೆಂದು ಹೇಳಬೇಕಾಗಿದೆ. ಸರ್ಕಾರಿ ನೌಕರಿಯ ಹಂಬಲವನ್ನಿಟ್ಟುಕೊಂಡು ವಿದ್ಯಾರ್ಜನೆ ಮಾಡುತ್ತಿದ್ದವರು ವರ್ಷಂಪ್ರತಿ ಪ್ರೌಢ ವಿಧ್ಯಾಭ್ಯಾಸಮಾಡಿ ಪದವೀಧರರಾಗಿ ಬರುವ ನೂರಾರು ಮಂದಿಗೂ ಸರ್ಕಾರದವರು ನೌಕರಿಗಳನ್ನು ಒದಗಿಸಲಾರರೆಂಬ ನಿಜಾಂಶವನ್ನು ಮನದಟ್ಟು ಮಾಡಿಕೊಂಡಿರುವರು. ಅಲ್ಲದೆ ಸರ್ಕಾರಿ ನೌಕರಿಯ ಆಶೋತ್ತರದ ಮೇಲೆ ವಿದ್ಯಾವಂತರಾದವರ ಸಂಖ್ಯೆಯು ಹೆಚ್ಚಿ, ಅಲ್ಪ ಸಂಬಳದ ಕೆಲಸಗಳಿಗೂ ದೊಡ್ಡ ಪದವೀಧರರು ಉಮೇದುವಾರರಾಗುತ್ತಾ ಬರುತ್ತಿರುವುದರಿಂದ ಸಂಬಳದಲ್ಲಿ ಸುಖಜೀವನವಾಗುತ್ತೆಂಬ ನಿರೀಕ್ಷೆಯು ಮಾಯವಾಗುತ್ತಿರುವುದು. ಇದರಿಂದ ವಿಧ್ಯಾವಂತರು ಜೀವನೋಪಾಯಕ್ಕಾಗಿ ಇತರ ಮಾರ್ಗಗಳಿಗೆ ಮನಗೊಡಬೇಕಾಗಿದೆ. ವಿಧ್ಯಾವಂತರು ಹಾರೈಸುವ ಅನೇಕ ಯುಕ್ತಿಗಳು ದ್ರವ್ಯಭಾವದ ದೆಸೆಯಿಂದ ಅವರ ಹಸ್ತಗತವಾಗುವಂತಿಲ್ಲ. ದೂರದೇಶ ಪ್ರವಾಸ ಮಾಡುವುದು ನಮ್ಮ ಜನರಲ್ಲಿ ಇನ್ನು ಅಭ್ಯಾಸಕ್ಕೆ ಬಂದಿರುವುದಿಲ್ಲವಾಗಿದೆ. ವಿದ್ಯಾವಂತರಾದ ಮಹನೀಯರು ಸ್ವದೇಶದಲ್ಲೇ ಇದ್ದು ಬಹು ಮಟ್ಟಿಗೆ ಸ್ವಸ್ಥಳದಲ್ಲಿ ಹಿರಿಯರ ವೃತ್ತಿಯನ್ನಾದರೂ ಕೈಗೊಂಡು ಅಕ್ಷರ ತಿಳಿಯದ ಗ್ರಾಮದ ಸಹೋದರ ಸಹೋದರಿಯರಿಗೆ ಅಕ್ಷರಗಳನ್ನು ಕಲಿಸಿ ಅವರ ಸಂಗಡ ಭೂಮಿ ವ್ಯವಸಾಯವನ್ನು ಕೈಗೊಳ್ಳುವುದು ಉತ್ತಮ. ಭಾರತ ಮಾತೆಯ ಪ್ರಥಮ ಗೌರವವು ಅವರಿಗೆ ಸಲ್ಲುತ್ತದೆ. ಮಹಾತ್ಮ ಗಾಂಧೀಜಿಯವರು ಹಳ್ಳಿಯ ಜೀವನ ಮತ್ತು ಗ್ರಾಮಾಂತರಗಳ ಉದ್ಧಾರಕ್ಕಾಗಿ ತಮ್ಮ ಜೀವಮಾನವನ್ನೇ ಧಾರೆಯೆರೆದಿದ್ದಾರೆ. ಇದೇ ರೀತಿ ವಿದ್ಯಾವಂತರಾದ ಹಿರಿಯರು ಕಿರಿಯರು ಎಲ್ಲರೂ ತಮ್ಮ ಕೈಲಾದ ಸಹಾಯವನ್ನು ಹಳ್ಳಿಗಳಿಗೂ, ಗ್ರಾಮಾಂತರಗಳಿಗೂ ಸಲ್ಲಿಸಿ ತಮ್ಮ ವಿದ್ಯವನ್ನು ಪ್ರಚಾರಗೊಳಿಸುವುದು, ಭೂವ್ಯವಸಾಯವನ್ನು ಮಾಡುವುದು ನಮ್ಮ ಕೊಡಗಿನ ವಿದ್ಯಾವಂತರಿಗೆ ಸಲ್ಲತಕ್ಕ ಗೌರವದ ಭಾಗ್ಯವಾಗಿದೆ. ವಿದ್ಯಾವಂತರು ಗ್ರಾಮಾಂತರಗಳ ಮುಖ್ಯೋದ್ಯೋಗವಾದ ವ್ಯವಸಾಯಕ್ಕೆ ತಕ್ಕ ಪರಿಶ್ರಮವಿಲ್ಲದವರೆಂದು ಅವರ ಆಡಳಿತದಲ್ಲಿ ಅದು ಇನ್ನೂ ಹೀನಸ್ಥಿತಿಗೆ ಬರುವುದೆಂದು ವಯಸ್ಕರಾದ ಗ್ರಾಮಸ್ಥರ ನಂಬಿಕೆಯಾಗಿದೆ. ಆದರೂ ಪವಾಗಿ ಈ ಕೆಲಸಕ್ಕೆ ಕೈಹಾಕಿ ಇಲಾಖೆಯವರಿಂದ ಯುಕ್ತವಾದ ತಿಳುವಳಿಕೆಯನ್ನು ಪಡೆಯದೆ, ವ್ಯವಸಾಯವನ್ನು ಮಾಡತೊಡಗಿದ ವಿದ್ಯಾವಂತರು ಈ ರೀತಿ ಅಪಹೇಳನಕ್ಕೆ ಗುರಿಯಾಗಬಹುದು. ಆದರೆ ಶಾಸ್ತ್ರೀಯವಾದ ವ್ಯವಸಾಯವನ್ನು ಮಾಡುತ್ತಿರುವ ವಿಧ್ಯಾವಂತರು ಇದರಿಂದ ಅಧಿಕಪ್ರಯೋಜನವನ್ನು ಪಡೆಯುತ್ತ, ಇತರರಿಗೆ ಮಾರ್ಗದರ್ಶಕವಾಗಿರುವುದಕ್ಕೆ ಅನೇಕ ದೃಷ್ಟಾಂತಗಳು ನಮ್ಮ ಕೊಡಗಿನಲ್ಲೇ ದೊರೆಯುತ್ತಿವೆ. ಪಾಶ್ಚಾತ್ಯ ಕೃಷಕರು ಕೊಡಗಿನಲ್ಲಿ ಇದ್ದುಕೊಂಡು ತಮ್ಮ ಕಾಫಿತೋಟ ಮತ್ತು ವ್ಯವಸಾಯವನ್ನು ಹೇಗೆ ವೃದ್ಧಿಪಡಿಸಿರುತ್ತಾರೆಂದು ನಮ್ಮ ಜನರಿಗೆ ಹೊಸದಾಗಿ ಹೇಳಬೇಕಿಲ್ಲ. ಪಾಶ್ಚಾತ್ಯ ರೈತರು ವಿದ್ಯೆಗೆ ತಕ್ಕ ಬೆಲೆಯನ್ನು ವ್ಯವಸಾಯಕ್ಕೆ ತಕ್ಕ ಹಣವನ್ನು ಗಳಿಸಬಲ್ಲರು. ಇತರ ವ್ಯಕ್ತಿಗಳನರಿಗಿಂತ ಉತ್ತಮವಾಗಿ ಜೀವನ ಮಾಡುವುದು ನಮ್ಮ ಜನರಿಗೆ ದೇವರು ಕೊಡಲಿಲ್ಲವೆಂದು ಗ್ರಾಮಾಂತರಗಳಲ್ಲಿ ಅವಿದ್ಯಾವಂತರ ಅಭಿಪ್ರಾಯವಾಗಿದೆ. ಇಂಥ ಮೂಢ ನಂಬಿಕೆಯನ್ನು ಬಿಟ್ಟು ಭೂಮಾತೆಯ ಸೇವೆಯಲ್ಲಿ ನಿರುತರಾಗಿ ತಮ್ಮ ಉತ್ತಮ ಜೀವನವನ್ನು ಕೈಕೊಳ್ಳಬೇಕು.

ಮಿಶ್ರ ವ್ಯವಸಾಯ ಮತ್ತು ಸಂಘಗಳು.

ಗ್ರಾಮಾಭಿವೃದ್ಧಿಗೆ ಭೂವ್ಯವಸಾಯವೊಂದೇ ಮುಖ್ಯವಲ್ಲ. ಇದರ ಅನುಯಾ ಹಣ್ಣು ಹಂಪಲುಗಳ ಅಂದರೆ ಕಿತ್ತಳೆ, ದಾಳಿಂಬೆ,ನಿಂಬೆ,ಮಾವಿನ ಹಣ್ಣಿನ ವ್ಯವಸಾಯ ಇವುಗಳನ್ನು ವಿದ್ಯಾವಂತರು ಕೈಗೊಂಡು ಮುಂದುವರಿಸಬೇಕಾಗಿದೆ. ಸಧ್ಯದಲ್ಲಿ ಸಹಕಾರಿ ಸಂಘಗಳು ಗ್ರಾಮಾಂತರಗಳಲ್ಲಿ ಇರುವಂತೆ ಒಂದೊಂದು ಕಸಬಿಗೂ ಪ್ರತ್ಯೇಕವಾಗಿ ಸ್ಥಾಪನೆಯಾಗಬೇಕಾಗಿರುವುದರಿಂದ ಈ ಕೆಲಸಗಳನ್ನು ವಿದ್ಯಾವಂತರು ವಹಿಸಿಕೊಂಡು,ಒಂದೊಂದು ವ್ಯಕ್ತಿಗೂ ಅನುಕೂಲವಾಗಿ ಮಾರುವುದಕ್ಕೂ ಕೊಳ್ಳುವುದಕ್ಕೂ ಸಂಘಗಳನ್ನು ಏರ್ಪಡಿಸುವುದರಿಂದ ಇಮ್ಮಡಿಯಾದ ಪ್ರತಿಫಲವು ಗ್ರಾಮಾಂತರದ ರೈತರಿಗೆ ಖಂಡಿತವಾಗಿ ದೊರೆಯುವುದು. ಅಲ್ಲದೆ ಒಂದೊಂದು ಪದಾರ್ಥವನ್ನೂ ಅತ್ಯುತ್ತಮಸ್ಥಿತಿಗೆ ತರಬೇಕೆಂಬ ಆಶೆಯು ಹುಟ್ಟಿ ಪಾಶ್ಚಾತ್ಯ ದೇಶಗಳಾದ ಡೆನ್ಮಾರ್ಕ್, ಹಾಲೆಂಡ್, ಸ್ಕಾಟ್ಲೆಂಡ್ ಮುಂತಾದ ದೇಶಗಳಂತೆ ಒಂದೊಂದು ಶ್ರೇಷ್ಟವಸ್ತುವಿಗೆ ಹೆಸರುವಾಸಿಯನ್ನು ಪಡೆಯಬಹುದು. ಹಾಲೆಂಡ್, ಡೆನ್ಮಾರ್ಕ್‌ಗಳಿಂದ ಬರುವ ಟಿನ್ನಿನ ಹಾಲು ಮತ್ತು ಹಣ್ಣಿನ ರಸಗಳು ಸ್ಕಾಟ್ಲೆಂಡಿನಿಂದ ಬರುವ ಬಿಸ್ಕತ್ ಮತ್ತು ಹಣ್ಣಿನ ಮುರಬ್ಬಗಳು ಹೀಗೆ ನಾನಾದೇಶದಿಂದ ರಫ್ತಾಗುತ್ತಿರುವುದನ್ನು ನೋಡಿದರೆ ಅಲ್ಲಿನ ರೈತರು ತಮ್ಮ ಬೆಳಸುಗಳನ್ನು ಅತ್ಯುತ್ತಮಸ್ಥಿತಿಗೆ ತಂದಿರುವುದೂ ಕಂಡು ಬರುವುದು. ಮತ್ತು ಅವುಗಳಿಂದ ಹೆಚ್ಚು ಹೆಚ್ಚಾಗಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಾಪಾರದ ಶಾಖೆಯನ್ನೇರ್ಪಡಿಸಿ ತಾವು ಬೆಳೆದ ಹಣ್ಣು ಹಂಪಲಿಗೆ ಬೇಕಾದ ಗಿರಾಕಿಯನ್ನು ಹೊಂದಿಸಿ ರೈತರಿಗೆ ಹೆಚ್ಚು ಹೆಚ್ಚಾಗಿ ಸಹಾಯವನ್ನು ಮಾಡುತ್ತಾರೆ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿ.

ಕಾಂಗ್ರೆಸ್ ಸದಸ್ಯರನ್ನು ಮಾಡುವದು

ಈ ವರ್ಷ ಪ್ರಾಥಮಿಕ ಸದಸ್ಯರನ್ನು ಮಾಡುವ ಕೊನೆಯ ತಾ. 15-9-39 ಎಂದು ವರ್ಕಿಂಗ್ ಕಮಿಟಿಯವರು ನಿರ್ಣಯಿಸಿರುವರು. ಇನ್ನು ಎರಡು ತಿಂಗಳು ಮಾತ್ರ ಈ ಕೆಲಸಕ್ಕೆ ಉಳಿದಿರುವದು. ಅಷ್ಟರಲ್ಲಿಯೇ ಎಲ್ಲಾ ಅಧೀನ ಸಮಿತಿಗಳು ಈ ಬಗ್ಗೆ ನಾವು ಆಗಾಗ್ಯೆ ಕೊಟ್ಟ ನಿಯಮ ಸಲಹೆಗಳನ್ನು ಲಕ್ಷ್ಯದಲ್ಲಿಟ್ಟು ಮನಮುಟ್ಟಿ ಕಾರ್ಯ ಮಾಡಬೇಕು. ಮೊನ್ನೆ ಮುಂಬಯಿಯಲ್ಲಿ ಸೇರಿದ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಕೆಲವು ಘಟನಾತ್ಮಕ ತಿದ್ದುಪಡಿಗಳಾದ್ದರಿಂದ ಸದಸ್ಯತ್ವ ಫಾರ್ಮಿನಲ್ಲಿ ತುಸು ಹೆಚ್ಚು ಕಡಿಮೆಯಾಗಿರುವದು. ಆದರೆ ಈಗಾಗಲೇ ಮುಕ್ಕಾಲು ಪಾಲು ಸದಸ್ಯತ್ವ ಪುಸ್ತಕಗಳು ಜಿಲ್ಲಾ ಸಮಿತಿಗಳ ಮುಂದೆ ತಾಲೋಕು ಸಮಿತಿ ಹಾಗೂ ವ್ಯಕ್ತಿಗಳಿಗೆ ಹಂಚಲಾಗಿದೆ. ಕಾರಣ-ಈ ಸಲ ಬದಲಾವಣೆ ಮಾಡಲು ಸಾಧ್ಯವಿಲ್ಲ. ಆದರೂ ಸಹ ಫಾರ್ಮುಗಳನ್ನು ಇನ್ನು ಮುಂದೆ ತುಂಬುವಾಗ್ಗೆ ಸದಸ್ಯರಾಗಲಿಚ್ಛಿಸುವವರ ಪುರುಷರಿದ್ದರೆ ತಂದೆಯ ಹೆಸರನ್ನೂ, ಸ್ತ್ರೀ ಇದ್ದರೆ ಗಂಡನ ಹೆಸರನ್ನೂ ಅವಿವಾಹಿತ ಹಾಗೂ ವಿಧವೆ ಇದ್ದರೆ ತಂದೆಯ ಹೆಸರಿಗೂ ಬರೆಯಬೇಕು. ಸದಸ್ಯನ ಸಹಿ ಹಾಗೂ ಹಣ ಪಡೆಯುವವನ ಸಹಿ, ಈ ಮಧ್ಯದಲ್ಲಿ ಒಬ್ಬ ಸಾಕ್ಷಿದಾರನ ಸಹಿಯನ್ನೂ ಹಾಕಬೇಕು.

ಈ ಪ್ರಕಾರ ಕಾಂಗ್ರೆಸ್ ಘಟನೆಗಳಲ್ಲಿ ಬದಲಾವಣೆಗಳನ್ನು ಮಾಡಲು ಮುಖ್ಯ ಕಾರಣವೆಂದರೆ ಸದ್ಯಕ್ಕೆ ಪ್ರಚಲಿತದಲ್ಲಿರುವ ಖೊಟ್ಟಿ ಸದಸ್ಯತನವನ್ನು ಮನ್ನ ಮಾಡುವದು. ಈ ಉದ್ದೇಶದಿಂದಲೇ ಇಲ್ಲಿ ಕೆಲವು ಸೂಚನೆಗಳನ್ನು ಕೊಡಲಾಗಿದೆ. ಅವುಗಳನ್ನೆಲ್ಲಾ ಅಧೀನ ಸಮಿತಿಗಳು ಮನಪೂರ್ವಕವಾಗಿ ಹಾಗೂ, ಕಟ್ಟುನಿಟ್ಟಿನಿಂದ ಅನುಸರಿಸಿದರೆ ಬಹು ಮಟ್ಟಿಗೆ ಈ ಕೊಳೆಯು ದೂರವಾಗುವುದರಲ್ಲಿ ಸಂದೇಹವಿಲ್ಲ.

1. ಸದಸ್ಯತ್ವವನ್ನು ಮಾಡಲು ಪುಸ್ತಕಗಳನ್ನು ತೆಗೆದುಕೊಂಡ ವ್ಯಕ್ತಿಗಳು ತಾಲೋಕು ಸಮಿತಿಗಳ ಕಡೆಗೆ ಸಕಾಲಕ್ಕೆ (1) ಸದಸ್ಯತ್ವದ ಪೂರ್ಣ ವರದಿ. ಸದ ಸದಸ್ಯರಾದಷ್ಟು 0-4-0 ಹಣ (3) ಸಂಪೂರ್ಣವಾಗಿ ಮುಗಿದ ಪುಸ್ತಕಗಳು-ಇವೆಲ್ಲವುಗಳನ್ನು ಒಪ್ಪಿಸಬೇಕು. (ಕೊಟ್ಟ ಪುಸ್ತಕಗಳನ್ನೆಲ್ಲಾ ಪೂರ್ಣ ಮುಗಿಸಿ ಎಲ್ಲವನ್ನೂ ಲೆಕ್ಕದೊಂದಿಗೆ ಒಪ್ಪಿಸಿದ ಬಳಿಕ ಆಯಾ ವ್ಯಕ್ತಿಗಳಿಗೆ ಹೊಸ ಪುಸ್ತಕಗಳನ್ನು ಕೊಡಬೇಕು.

2. ಗ್ರೂಪ ಹಾಗೂ ಗ್ರಾಮ ಸಮಿತಿಗಳು ತಾಲೋಕು ಸಮಿತಿಗೆ ಸಕಾಲಕ್ಕೆ ವರದಿಯನ್ನು ಒಪ್ಪಿಸಬೇಕಲ್ಲದೆ ಸದಸ್ಯರಾದಷ್ಟು ನಾಲ್ಕಾಣೆ ಹಣವನ್ನು (ಪೂರ್ಣ) ಎಂಟು ದಿನಕ್ಕೊಮ್ಮೆ ತಾಲೋಕು ಕಾಂಗ್ರೆಸ್ ಸಮಿತಿಗಳಲ್ಲಿ ಜಮೆ ಮಾಡಿ ಪಾವತಿ ಮಾಡಬೇಕು.

3. ತಾಲೋಕು ಕಮಿಟಿಗಳು ಜಿಲ್ಲಾ ಸಮಿತಿಗೆ ಪ್ರತಿ ವಾರಕ್ಕೊಮ್ಮೆ ಈ ಕೆಳಗಿನ ಮಾಹಿತಿ ಕಳುಹಿಸಬೇಕು. (1) ತಮ್ಮ ತಾಲೋಕಿನಲ್ಲಿಯ ಆ ವಾರದಲ್ಲಿ ಹಾಗೂ ಅಲ್ಲಿಯವರೆಗೆ ಆದ ಒಟ್ಟು ಸದಸ್ಯರ ಸಂಖ್ಯೆ, (2) ತಾವು ವ್ಯಕ್ತಿಗಳಿಗೆ ಕೊಟ್ಟಿರುವ ಪುಸ್ತಕಗಳ ಪೂರ್ಣ ವಿವರ. (ಇವರಲ್ಲಿ ವ್ಯಕ್ತಿಗಳ ವಿಳಾಸ, ಕೊಟ್ಟ ಪುಸ್ತಕಗಳ ಮೇಲಿನ ಕ್ರಮಾಂಕ ಹಾಗೂ ಸಂಖ್ಯೆ ಸೇರುವದು)

4. ಜಿಲ್ಲಾ ಸಮಿತಿಗಳು ತಮ್ಮ ಜಿಲ್ಲಾ ಸದಸ್ಯರ ಸಂಖ್ಯೆ ಹಾಗೂ ವ್ಯಕ್ತಿಗಳಿಗೆ ಕೊಡಲ್ಪಟ್ಟ ಪುಸ್ತಕಗಳ ಪೂರ್ಣ ವಿವರ (ಮೇಲಿನಂತೆ) ಗಳನ್ನೊಳಗೊಂಡ ಒಂದು ವರದಿಯನ್ನು ಪ್ರತಿ 15 ದಿನಗಳಿಗೊಮ್ಮೆ ಪ್ರಾಂತೀಯ ಸಮಿತಿಗೆ ಕಳುಹಿಸಬೇಕು.

ಕೊಡಗಿನ ಚರಿತ್ರೆಯ ಕಥೆಗಳು.

ರಾಜ್ಯಾಭಿಯೋಗಿ ಕಲ್ಯಾಣಸ್ವಾಮಿ ಅಥವಾ ಅಮರಸುಳ್ಯದ ಕಾಟಕಾಯಿ.

ಲೇಖಾಂಕ 17.

(ಡಿ. ಎನ್. ಕೃಷ್ಣಯ್ಯ ಯಂ. ಎ., ಬಿ. ಇ. ಡಿ.)

(ಎಲ್ಲಾ ಹಕ್ಕುಗಳು ಕಾಯ್ದಿಡಲ್ಪಟ್ಟಿವೆ.)

(ಕಳೆದ ಸಂಚಿಕೆಯಿಂದ ಸಾಗಿದ್ದು.)

---:::---

ನಾವು ವರ್ಣಿಸುವ ಸಂಗತಿಗಳು ನಡೆಯುವ ಕಾಲದಲ್ಲಿ ಕೊಡಗಿನಲ್ಲಿ ರಸ್ತೆಗಳು ಇರಲಿಲ್ಲ. ಸಂಪಾಜೆಗೆ ಕಾಲು ದಾರಿಗಾಗಿ ಹೋಗಬೇಕಾದ್ದಿತು. ಆ ಕಾಲು ದಾರಿಯೂ ರಾಜಾಸೀಟಿನ ಬಲಪಾರ್ಶ್ವಕ್ಕಾಗಿ ಹೋಗುತ್ತಲಿತ್ತು. ಈಗ ರಾಜಾಸೀಟಿಗಾಗಿ ತಾಳತ್‍ಮಾನಿಗೆ ಹೋಗುವ ಕಾಲುದಾರಿಯು ರಾಜರ ಕಾಲದಲ್ಲಿದ್ದ ದಾರಿಗನ ನೆನಪನ್ನು ನಮಗೆ ಈಗಲೂ ಮಾಡಿಕೊಡುತ್ತದೆ. ಇದೇ ದಾರಿಗಾಗಿ ಬೋಪುವು ಹೊರಟು ರಾಜಾಸೀಟನ್ನು ದಾಟಿ ಆ ಗುಡ್ಡೆಯನ್ನು ಇಳಿಯುತ್ತಿದ್ದನು. ಅಷ್ಟರಲ್ಲಿ ಅವನಿಗೆ ಎದುರಾಗಿ ಮಾಜಿ ಸುಭೇದಾರ್ ಮುದ್ದಯ್ಯನೂ, ಮಾಜಿ ಪಾರುಪತ್ಯಗಾರ್ ಅಪ್ಪಯ್ಯನೂ ಬರುತ್ತಿದ್ದರು. ಇವರಿಗೆ ವಿದ್ರೋಹದ ವಿಷಯ ಗೊತ್ತಿದ್ದಿತು. ಇವರು ಬೋಪುವಿಗೆ ಪರಿಚಿತರಾಗಿದ್ದರು. ಇವರು ಬೋಪುವಿಗೆ ವಿದ್ರೋಹದ ಸಂಬಂಧ ತಮಗೆ ತಿಳಿದಿರುವ ವಿಷಯಗಳನ್ನು ತಿಳುಹಿಸಿದರೆ ಬೋಪುವಿಗೆ ಉಂಟಾದ ಅವಮಾನವೂ, ಕೆಟ್ಟ ಹೆಸರೂ ತಪ್ಪುತ್ತಿದ್ದವು. ಆದುದರಿಂದ ಇವರನ್ನು ಕಂಡೊಡನೆ ಬೋಪುವು ತನ್ನ ಜನರಿಂದ ಅವರನ್ನು ಹಿಡಿದು ತರಿಸಿ, ಅವರ ಮೇಲಂಗಿಗಳನ್ನು ಬಿಚ್ಚಿಸಿ ಪ್ರತಿಯೊಬ್ಬರಿಗೂ ಬೆತ್ತಗಳಿಂದ ಹೊಡೆಸಿದನು. ಅವರು ತಮ್ಮನ್ನು ಯಾತಕ್ಕೆ ಹೊಡೆಯುವುದೆಂದು ಕೇಳಿದ್ದಕ್ಕೆ ಅವರಿಗೆ ಇನ್ನಷ್ಟು ಪೆಟ್ಟುಗಳು ಬಲವಾಗಿ ಬಿದ್ದುವು. ಕೊನೆಗೆ ಅವರಿಬ್ಬರನ್ನು ಹೊಡೆದು ಅರೆಜೀವ ಮಾಡಿ ಬಿಟ್ಟು ಬೋಪುವು ತನ್ನ ದಾರಿಯಲ್ಲಿ ಮುಂದಕ್ಕೆ ಹೋದನು. ಸಂಪಾಜೆಗೆ ಅರ್ಧ ದಾರಿಯಲ್ಲಿ ಆಯುಧ ಸಮೇತರಾದ ಒಂದು ಗುಂಪು ನಾಲ್ಕುನಾಡಿನ ಕೊಡಗರು ಬರುತ್ತಿದ್ದರು. ಇವರೆಲ್ಲರೂ ಬೋಪುವಿನ ಪರಿಚಯವಿದ್ದವರೇ ಆಗಿದ್ದರು. ಇವರ ಸಂಖ್ಯೆಯು ಬೋಪುವಿನ ಜನರ ಸಂಖ್ಯೆಗಿಂತ ಕಡಿಮೆ ಇದ್ದುದರಿಂದ ಇವರು ಬೋಪುವಿನ ಜನರ ಮೇಲೆ ಬೀಳಲು ಸಾಹಸವುಳ್ಳವರಾಗಿರಲಿಲ್ಲ. ಆಗ ಬೋಪುವು ಅವರನ್ನೆಲ್ಲಾ ಹಿಡಿಸಿ ಒಬ್ಬನನ್ನು ಬಿಟ್ಟು ಉಳಿದ ಎಲ್ಲರಿಗೂ ಬೆತ್ತದ ಪೆಟ್ಟುಗಳನ್ನು ಹೊಡೆಸಿದನು. ಆ ಒಬ್ಬನು ವಿದ್ರೋಹಿಗಳ ವಿಷಯ ತನಗೆ ತಿಳಿದದ್ದನ್ನು ಬೋಪು ದಿವಾನನಿಗೆ ಹೇಳಿ ಪೆಟ್ಟು ತಪ್ಪಿಸಿಕೊಂಡನು. ಇದರ ನಂತರ ಬೋಪು ದಿವಾನನು ಉತ್ಸಾಹದಿಂದ ಮುಂದೆ ಹೊರಟನು. ಸಂಪಾಜೆಯಲ್ಲಿ ವಿದ್ರೋಹಿಗಳೊಡನೆ ತಾವುನಾಡು, ಬೇಂಗುನಾಡಿನವರು ಹಿಡಿದೊಪ್ಪಿಸಿದ್ದ ನಾಲ್ಕುನಾಡು ಸುಭೇದಾರ್ ಮಾದಯ್ಯನಿದ್ದನು. ಈತನು ಮೊದಲು ವಿದ್ರೋಹಿಗಳಿಗೆ ವಿರೋಧವಾಗಿದ್ದರೂ, ಅಮರ ಸುಳ್ಯದಲ್ಲಿ ಅವರ ಬಲವನ್ನು ನೋಡಿ ಅವರ ಪಕ್ಷವನ್ನು ಸೇರಿಕೊಂಡಿದ್ದನು. ಈಗ ಬೋಪು ದಿವಾನನು ಅವನನ್ನು ತನ್ನ ಬಳಿ ಬರಮಾಡಿ ಆತನಿಗೆ ಬುದ್ಧಿವಾದವನ್ನು ಹೇಳಿ ಆತನನ್ನು ತನ್ನ ಕಡೆಗೆ ಸೇರಿಸಿಕೊಂಡನು. ಸುಭೇದಾರನಂತಹ ದೊಡ್ಡ ಅಧಿಕಾರಿಯು ಬೋಪುವಿನ ಪಕ್ಷ ಸೇರಿದ್ದನ್ನು ನೋಡಿ ವಿದ್ರೋಹಿಗಳಿಗೆ ಧೈರ್ಯಗುಂದಿತು. ಅವರು ಬೋಪುವಿನ ಜನರನ್ನು ಕಂಡು ದಿಕ್ಕಾಪಾಲಾಗಿ ಓಡಿಹೋದರು. ಸಂಪಾಜೆಯಿಂದ ಹೊರಟು ದಿವಾನ್ ಬೋಪುವು ಸುಳ್ಯಕ್ಕೆ ಏಪ್ರಿಲ್ 24ನೇ ತಾರೀಕಿನಲ್ಲಿ ತಲಪಿ ಆ ಪೇಟೆಯನ್ನು ವಿದ್ರೋಹಿಗಳ ಕೈಯಿಂದ ವಶಪಡಿಸಿಕೊಂಡನು. ಅಲ್ಲಿಂದ ಹೊರಟು ಬೆಳ್ಳಾರೆಗೆ ಹೋಗಿ ಅಲ್ಲಿ ಖಜಾನೆಯನ್ನು ಸ್ವಾಧೀನಪಡಿಸಿಕೊಂಡನು.

ಇಷ್ಟರಲ್ಲಿ ಮಂಗಳೂರು ಕಡೆಯಿಂದ ಬಂದ ಸಿಪಾಯಿಗಳ ಸೈನ್ಯವೂ ಸುಳ್ಯವನ್ನು ತಲಪಿತು. ಇತ್ತಲಾಗಿ ಕಪಟ ಕಲ್ಯಾಣಸ್ವಾಮಿಯು ಅಥವಾ ಪುಟ್ಟ ಬಸಪ್ಪನು ಬೈತೂರಿಗೆ ಓಡಿ ಹೋದನು. ಇತರ ಮುಖಂಡರೂ ಬೇರೆ ಬೇರೆ ದಿಕ್ಕುಗಳಿಗೆ ಹೋಗಿ ಅಡಗಿಕೊಂಡರು. ಸರ್ಕಾರದವರು ಇವನನ್ನು ಹಿಡಿದುಕೊಟ್ಟವರಿಗೆ ಕೆಳಗೆ ಬರೆದಿರುವ ಹಣವನ್ನು ಬಹುಮಾನವಾಗಿ ಕೊಡುವೆವೆಂದು ಸಾರಿದರು.

ಪುಟ್ಟ ಬಸಪ್ಪನನ್ನು ಹಿಡಿದು ಕೊಟ್ಟವರಿಗೆ 10,000 ರೂಪಾಯಿಗಳು. ಕುಕ್ಕನೂರು ಚೆನ್ನಯನನ್ನು ಹಿಡಿದುಕೊಟ್ಟವರಿಗೆ 5,000 ರೂಪಾಯಿಗಳು, ಕರಣಿಕ ಸುಬ್ರಾಯನನ್ನು ಹಿಡಿದು ಕೊಟ್ಟವರಿಗೆ 5,000 ರೂಪಾಯಿಗಳು. ಹೀಗೆ ಬಹುಮಾನಗಳನ್ನು ಹಂಚುವುದಾಗಿ ಸಾರಿದರು. ಉಳಿದ ಮುಖಂಡರಾದ ಪಾಡಿನಾಲ್ಕುನಾಡಿನ ಉತ್ತು, ಶಾಂತಳ್ಳಿ ಮಲ್ಲಯ್ಯ, ಗುಡ್ಡೆಮನೆ ಅಪ್ಪಯ್ಯ, ಚೆಟ್ಟಿ ಕುಡಿಯ, ಕರ್ತು ಕುಡಿಯ ಮೊದಲಾದವರನ್ನು ಮೊದಲೇ ಹಿಡಿದು ಸೆರೆಯಲ್ಲಿಟ್ಟಿದ್ದರು. ಪುಟ್ಟಬಸಪ್ಪನೂ ಉಳಿದ ಇಬ್ಬರು ವಿದ್ರೋಹಿ ಮುಖಂಡರು ಹಿಡಿಯಲ್ಪಟ್ಟರು. ಇವರನ್ನು ಸೈನ್ಯಾಧಿಕಾರಿಗಳೇ ವಿಚಾರಣೆ ನಡೆಸಿ ಪುಟ್ಟಬಸಪ್ಪನಿಗೂ ಇತರ ಮುಖಂಡರಿಗೂ ಮರಣ ದಂಡನೆಯನ್ನು ವಿಧಿಸಿದರು. ಉಳಿದವರಿಗೆ ಏಳರಿಂದ ಹದಿನಾಲ್ಕು ವರ್ಷಗಳ ವರೆಗೆ ಕಾರಾಗೃಹದಲ್ಲಿ ಸಶ್ರಮ ಸೆರೆಯನ್ನು ವಿಧಿಸಿದರು. ಚೆಟ್ಟಿ ಕುಡಿಯ ಮತ್ತು ಕರ್ತು ಕುಡಿಯ ಇವರಿಗೆ ದ್ವೀಪಾಂತರ ಶಿಕ್ಷೆ ವಿಧಿಸಿ ಸಿಂಗಾಪುರಕ್ಕೆ ಕಳುಹಿಸಿದರು.

ಇತ್ತಲಾಗಿ ಬೋಪು ದಿವಾನನಿಗೂ, ಆತನ ಜನರಿಗೂ ಕಂಪನಿ ಸರ್ಕಾರದವರು ಅವರೇ ವಿದ್ರೋಹಿಗಳಿಂದ ಕಿತ್ತುಕೊಂಡ 20, ಸಾವಿರ ರೂಪಾಯಿಗಳನ್ನು ಇನಾಮಾಗಿ ಕೊಟ್ಟರು. ಆದರೆ ಇವರು ಈ ಇನಾಮಿನ ಹಣವನ್ನು ತಮ್ಮೊಳಗೆ ಹಂಚಿಕೊಳ್ಳುವುದಕ್ಕೆ ಇಷ್ಟಪಡದೆ ಅದಕ್ಕೆ ಬದಲಾಗಿ ತಮಗೆ ಶಾಶ್ವತವಾಗಿ ಉಳಿಯುವಂಥಾ ಬಹುಮಾನಗಳನ್ನು ಕೊಡಬೇಕೆಂದು ಕೇಳಿಕೊಂಡರು. ಅವರ ಕೋರಿಕೆ ಮೇರೆ ಸರ್ಕಾರದವರು ಅವರಿಗೆ ಜಹಗೀರು ಭೂಮಿಗಳನ್ನೂ, ಯುದ್ಧದಲ್ಲಿ ಸತ್ತುಹೋದವರ ಕುಟುಂಬದವರಿಗೆ ಮೂರು ತಲೆಗಳ ವರೆಗೆ 'ಪೆನ್ಶನ್'ನ್ನೂ ಕಾಟಕಾಯಿಯಲ್ಲಿ ಭಾಗವಹಿಸಿದವರ ಯೋಗ್ಯತೆಗನುಸಾರವಾಗಿ ಚಿನ್ನ, ಬೆಳ್ಳಿ, ಪದಕಗಳನ್ನೂ ಕೊಟ್ಟರು. ಚಿನ್ನದ ಪದಕವು ಸರಪಣಿ ಸಮೇತ ಹನ್ನೊಂದುವರೆ ತೊಲೆ ತೂಕವುಳ್ಳದ್ದಾಗಿ ಎರಡು ಇಂಚು ವ್ಯಾಸವುಳ್ಳದಾಗಿದ್ದಿತು. ಆ ಪದಕದ ಒಂದು ಬದಿಯಲ್ಲಿ ಒಬ್ಬ ಕೊಡಗು ವೀರನು ಯುದ್ಧ ಮಾಡುವ ಹಾಗೆ ಅಚ್ಚೊತ್ತಿದೆ. ಇನ್ನೊಂದು ಬದಿಯಲ್ಲಿ ಪೀಚೆಕತ್ತಿ ಮತ್ತು ಒಡಿಕತ್ತಿಗಳನ್ನು ಒಂದು ಹಾರದಲ್ಲಿ ಕಟ್ಟಿ ಸಿಕ್ಕಿಸಿದ ಹಾಗೆ ಬಿಡಿಸಿದೆ. ಇದಲ್ಲದೆ ಆ ಪದಕದ ಒಂದು ಬದಿಯಲ್ಲಿ ಇಂಗ್ಲಿಷಿನಲ್ಲಿ 'For distinguished conduct and loyalty to the British Government, Coorg April 1897' ಎಂದು ಬರೆದಿದೆ. ಅದರ ತರ್ಜುಮೆಯು ಕನ್ನಡದಲ್ಲಿ ಇನ್ನೊಂದು ಬದಿಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಪನಿ ಸಿಪಾಯಿಗಳು ಗುಂಡು ಹೊಡೆದು ಕೊಂದ ಒಬ್ಬ ಬ್ರಾಹ್ಮಣನ ಕುಟುಂಬದವರಿಗೆ ಮೂರು ತಲೆಗಳ ವರೆಗೆ ಆತನ ಭೂಮಿ ಕಂದಾಯವನ್ನು ವಜ ಮಾಡಿಬಿಟ್ಟರು. ಈತನು ಪುತ್ತೂರಿನಿಂದ ಇಂಗ್ಲಿಷ್ ಸೈನ್ಯವು ಹಿಂದಕ್ಕೆ ಮಂಗಳೂರಿಗೆ ಹೋಗುವಾಗ ಆ ಸೈನ್ಯಕ್ಕೆ ಬಹಳ ಸಹಾಯವನ್ನು ಮಾಡಿದ್ದನು. ಈತನು ಆ ಸೈನ್ಯಕ್ಕೆ ತುಂಬಾ ಅಕ್ಕಿಯನ್ನೂ, ಇತರ ಸಾಮಗ್ರಿಗಳನ್ನೂ ಸಹಾಯ ಮಾಡಿದ್ದರಿಂದ ಈತನಿಗೆ 'ಚಾವಲ್‌ಕೀರಾಜ' ಅಥವಾ ಅಕ್ಕಿಯ ಅರಸು ಎಂದು ಹೆಸರಾಯಿತು. ಈತನು ಸೈನ್ಯಕ್ಕೆ ಬಂಟ್ವಾಳದಲ್ಲಿ ನದಿಯನ್ನು ದಾಟಲು ದೋಣಿಗಳನ್ನೂ ಒದಗಿಸಿಕೊಟ್ಟ ಹಾಗೆ ತೋರುತ್ತದೆ.

ಹೀಗೆ 1837ನೇ ಇಸವಿ ಮಾರ್ಚಿ ಅಂತ್ಯಭಾಗದಲ್ಲಿ ಅಮರ ಸುಳ್ಯದಲ್ಲಿ ಪ್ರಾರಂಭವಾದ ದಂಗೆ ಅಥವಾ ಕಾಟಕಾಯಿಯು ನಡುವೆ ಭೀಕರ ಸ್ವರೂಪವನ್ನು ತಾಳಿ ಅನಂತರ ಬೇಗನೆ ಅಂದರೆ ಒಂದು ತಿಂಗಳೊಳಗಾಗಿ ತಣ್ಣಗಾಯಿತು. ಅಂದಿನಿಂದ ಕೊಡಗಿನಲ್ಲಿ ಅಥವಾ ಅಮರ ಸುಳ್ಯದಲ್ಲಿ ಯಾವುದೊಂದೂ ಗಲಾಟೆಯುಂಟಾಗಲಿಲ್ಲ.

ಈ ಕಥೆಯಲ್ಲಿ ಬರೆದಿರುವ ವಿಷಯಗಳನ್ನು ಈ ಕೆಳಗಿನ ಪುಸ್ತಕ ಮತ್ತು ಲೇಖನಗಳಿಂದ ಸಂಗ್ರಹಿಸಿದ್ದೇನೆ. ಕೆಲವು ಸಂಗತಿಗಳನ್ನು ಸುಳ್ಯದಲ್ಲಿ ಕೆಲವು ಮಹನೀಯರಿಂದ ತಿಳಿದು ಬರೆದಿದ್ದೇನೆ.

(1) ಕೆನರಾ ಸಾರಸ್ವತ್ ಮಾಸಪತ್ರಿಕೆಯ 'ಕರಣಿಕ ದೇವಪ್ಪಯ್ಯ'ನೆಂಬ ಲೇಖನ.

(2) ಶ್ರೀ ಗಣಪತಿ ರಾವ್ ಐಗಳ ದಕ್ಷಿಣ ಕನ್ನಡದ ಇತಿಹಾಸ.

(3) ಕ್ಯಾಪ್ಟನ್ ಲೀಹಾರ್ಡಿಯ ವರದಿಗಳು.

(4) ರಿಕ್ಟರ್ ಸಾಹೇಬನ ಕೊಡಗು ಚರಿತ್ರೆ.

ಕಾಟಕಾಯಿಯಲ್ಲಿ ಪದಕ ಬಹುಮಾನವಾಗಿ ಸಿಕ್ಕಿದ ಕುಟುಂಬದವರು ದಯವಿಟ್ಟು ಈ ಲೇಖಕನಿಗೆ ಆ ಪದಕದ ಫೋಟೋ ತೆಗೆಯುವುದಕ್ಕೆ ಅನುಕೂಲ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಈ ಸಂಬಂಧವಾಗಿ ತಾರೀಕುಗಳು ಎಲ್ಲರಿಗೂ ಅನುಕೂಲವಾಗಿರಬೇಕೆಂದು ಕೆಳಗಿನಂತೆ ಗೊತ್ತುಪಡಿಸಿದೆ.

(ಅ) ಪ್ರತಿ ತಿಂಗಳು 1, 8, 15 ಮತ್ತು 22ನೇ ತಾರೀಕುಗಳಲ್ಲಿ ತಾಲೋಕು ಸಮಿತಿಗಳು ಜಿಲ್ಲಾ ಸಮಿತಿಗೆ ಮೇಲ್ಕಾಣಿಸಿದ ಮಾಹಿತಿ ಕಳುಹಿಸುವದು.

(ಬ) ಪ್ರತಿ ತಿಂಗಳ 5 ಹಾಗೂ 20ನೇ ತಾರೀಕುಗಳಲ್ಲಿ ಜಿಲ್ಲಾ ಸಭೆಗಳು ಪ್ರಾಂತೀಯ ಸಮಿತಿಗೆ ವರದಿಯನ್ನು ಒಪ್ಪಿಸಬೇಕು.

ಈ ಸಂಬಂಧ ಮೊದಲನೇ ವರದಿಯು ತಾಲೋಕು ಸಮಿತಿಗಳಿಂದ ಜಿಲ್ಲಾ ಸಮಿತಿಗಳಿಗೆ 15-7-39ರ ಒಳಗಾಗಿ ಹಾಗೂ ಜಿಲ್ಲೆಗಳಿಂದ ಪ್ರಾಂತೀಯ ಸಮಿತಿಗೆ ತಾ. 20-7-39ರೊಳಗಾಗಿ ಒಪ್ಪಿಸಲ್ಪಡಬೇಕು.

ಈ ಸದಸ್ಯತ್ವದ ಸಂಬಂಧವಾಗಿ ಪ್ರಾಂತೀಯ ವೇಳಾ ಪತ್ರಿಕೆಯಲ್ಲಿ ಬೇಗನೆ ಪ್ರಸಿದ್ಧಿಸಲಾಗುವದ. ಅದರಲ್ಲಿ ಜಿಲ್ಲಾ ಸಮಿತಿಗಳು ಪ್ರಾಂತೀಯ ಸಮಿತಿಗೆ ಹಣ ಯಾದಿ ಪುಸ್ತಕಗಳನ್ನು ಒಪ್ಪಿಸುವ ಕೊನೆಯ ತಾರೀಕು ನಿರ್ದೇಶಿಸಲ್ಪಡುವದು. ಅಷ್ಟರಲ್ಲಿ ಸಂಪೂರ್ಣ ಮಾಹಿತಿಯು ಒಪ್ಪಿಸಲ್ಪಡಲೇ ಬೇಕು. ಎಲ್ಲಾ ಪುಸ್ತಕಗಳೂ ನಿರ್ದಿಷ್ಟ ಅವಧಿಯಲ್ಲಿ ಪ್ರಾಂತೀಯ ಸಮಿತಿಗೆ ಬಾರದೆ ಇದ್ದಲ್ಲಿ ಜಿಲ್ಲಾ ಸಮಿತಿಗಳಿಂದ ಪ್ರತಿಯೊಂದು ಪುಸ್ತಕಕ್ಕೂ ರೂ. 12-8-0ಯಂತೆ ವಸೂಲು ಮಾಡಲೂ ಬರುವದು. (ಅವಧಿ ಮೀರಿ ಪುಸ್ತಕ ಒಪ್ಪಿಸಿದರೆ ದಂಡದ ಹಣದಲ್ಲಿ ಕಡಿತವು ಸಿಗಲಾರದು.

ಈ ಬಂಧನಗಳನ್ನು ಹೇರುವ ಉದ್ದೇಶಗಳನ್ನು ಅಧೀನ ಸಮಿತಿಗಳು ಸಂಪೂರ್ಣವಾಗಿ ತಿಳಿದುಕೊಂಡು ಈಗಿನಿಂದಲೇ ಸರಿಯಾಗಿಯೂ, ಅಚ್ಚುಕಟ್ಟಾಗಿಯೂ ಕೆಲಸ ಮಾಡಲು ಪ್ರಾರಂಭಿಸಬೇಕು. ಅಂದರೆ ಸದಸ್ಯರನ್ನು ಮಾಡುವ ಕಾರ್ಯದಲ್ಲಿ ಶ್ರೇಯಸ್ಸು ದೊರೆಯುವದು.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

13 **Ludhiana.**

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕರೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕರೆ.
ಮತ್ತು ಕಂಪನಿ,
(52-34) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಶಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು
ಪೊನ್ನಂಪೇಟೆನಾಡು—ಮೆ ಪಿ. ಕೆ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ ಅಜ್ಜಮಾಡ ಮಾಚಪ್ಪನವರು ಮತ್ತು ಮೆ ಕೆ. ಮಾದಮ್ಮಯ್ಯನವರು.
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಚೆಟ್ಟಿಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ...೦ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-19

"ಕೊಡಗು" ಪತ್ರಿಕೆಯ ಚಂದಾದಾರರಲ್ಲಿ ವಿನಂತಿ.

ಮಹನೀಯರೇ,

ಹೊಸ ವರ್ಷವು ಜೂನ್ ತಾರೀಕು 1 ರಿಂದ ಪ್ರಾರಂಭವಾಗಿರುವದರಿಂದ ಎಲ್ಲರೂ ತಮ್ಮ ತಮ್ಮ ಚಂದಾಹಣ ಬಾಕಿಯನ್ನು ಖುದ್ದು ಆಫೀಸಿಗಾಗಲೀ ಯಾ ಸ್ಥಳೀಯ ಏಜಂಟರಿಗಾಗಲೀ ಪಾವತಿಮಾಡಿ ರಶೀತಿ ಪಡೆಯಬೇಕು. ಇಲ್ಲವೇ ಬಾಕಿ ಇರುವವರಿಗೆ ಪತ್ರಿಕೆ ಕಳುಹಿಸಲು ಅಸಾಧ್ಯವೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್, ಮಡಿಕೇರಿ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು. **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಸಮ್ಮತಿ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಆಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಅ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ತ್ರಿಫ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯನವರು.
ಸೆಕ್ರೆಟರಿ:—ಮೆ. ಎಸ್. ಎನ್. ರಾಮಶೆಟ್ಟಿಯವರು.

ತಾ. 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22
6 ತಿಂಗಳಿಗೆ—	,, 100.	,, 35.	,, 22.	,, 13
3 ತಿಂಗಳಿಗೆ—	,, 60.	,, 20.	,, 13.	,, 8
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯಂತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62-28)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ

ಮುದ್ರಣ ಕೆಲಸಗಳನ್ನು

"ಕೊಡಗು"

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

Reg No. M. 1550

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಸಿ. ಪಿ. ಬೆಳ್ಯಪ್ಪ.

ತಾ. ೨೮—೭—೧೯೩೯.

ವಾರ್ಷಿಕ ಚಂದಾ ರೂ. ೩-೮-೦

ಸಂಪುಟ ೧೯] [ಸಂಚಿಕೆ ೩

YOURS FAITHFULLY

"Yours faithfully" has been a common subscription in all business letters. But with the CORPORATION it has not been MERELY A SUBSCRIPTION.

For the last THIRTY THREE years The CORPORATION has served its constituents most faithfully, very truly and quite sincerely. Thousands of customers have been pleased on account of the satisfying, honest Banking Service offered by the Corporation. The Corporation is proud to serve you and to say.

FAITHFULLY YOURS

The Canara Banking Corporation, Limited.

(Incorporated In British India)

Estd 1906.

52-32

1876ನೇ ಇಸವಿಯಿಂದಲೂ ಪ್ರಸಿದ್ಧಿಯಾದ ಔಷಧಿಗಳು.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಸ್ಪ್ಲೀನ್ ಮಿಕ್ಸ್ಚರ್

ದೀರ್ಘಕಾಲದ ಜ್ವರದಿಂದಾಗಲಿ ಯಾ ಇನ್ನಿತರ ಕಾರಣದಿಂದಾಗಲಿ ಉಂಟಾಗುವ ಜ್ವರಗಡ್ಡೆ, ಆಗಾಗ್ಗೆ ಜ್ವರಬರುವಿಕೆ, ಹೊಟ್ಟೆಹಸಿವು ಇಲ್ಲದಿರುವಿಕೆ, ಅಗ್ನಿಮಾಂದ್ಯ, ಪಿತ್ಥವಿಕಾರ, ಅಶಕ್ತತೆ, ಮಲಬದ್ಧತೆ, ಮುಂತಾದವುಗಳನ್ನು ಹೋಗಲಾಡಿಸಿ, ಶಕ್ತಿಯನ್ನುಂಟು ಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು. ಬಾಟ್ಲಿ 1ರ ರೂ. 0-10-0.

ಮಲೇರಿಯಾ ನಿವಾರಣಿ

ಚಳಿಜ್ವರ, ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಇನ್‌ಫ್ಲುಯೆಂಜಾ, ಕಫಜ್ವರ, ಜ್ವರಗೆಡ್ಡೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 1—8—0, ಸಣ್ಣ ಬಾಟ್ಲಿ 1ರ ಆಣೆ 13.

☞ ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್,
ನಂಬ್ರ ೩, ರಥಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ

ಗಣೇಶ ಸುಂದರ ಪ್ರಭು, ಸುಳ್ಯ. ಮಂಗಳೂರು ಸ್ಟೋರ್ಸ್, ಮಡಿಕೇರಿ. ಯಂ. ಎಸ್. ಮಾಚಯ್ಯ ಮರ್ಚೆಂಟ್, ಸುಂಟಿಕೊಪ್ಪ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರಾಜಪೇಟೆ. ಎ. ಎಸ್. ಹುಚ್ಚಯ್ಯ ಮರ್ಚೆಂಟ್, ಗೋಣಿಕೊಪ್ಪಲು. 1

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಶೇಖರಿಸಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! ಇಚ್ಛಿಸಿದಾಗ ಹಣ ಹಿಂದಕ್ಕೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಿಗಳಿಗೆ ವೈಯಕ್ತಿಕವಾನ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗಾ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-12

The Agricultural &
Industrial Bank Ltd

"ZANDU"

ಝುಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝುಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝುಂಡೂ ಅಯೋಡೈಸ್ಡ ಸೇರಸಪರಿಲ್ಲಾ

ಇದು ರಕ್ತಶೋಧಕ್ಕೆ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝುಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
ಮತ್ತು ಆಯುರ್ವೇದ ವಿದ್ವಾನ್

(52-43)

ವೀರಾಜಪೇಟೆಯ ಏಜೆಂಟರು-ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ!
ಅಥವಾ
ಎಂ. ಸಿ. ಸಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ್ದಶಾಖೆಗಾದರೂ ಬರೆಯಿರಿ—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬೆರೈಲಿ, ಬೀವಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ್, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮುಥುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-29

ಸರಕಾರಕ್ಕೆ ಒಂದು

ಆರ್ಥಿಕ ಧೋರಣೆಯ ಅವಶ್ಯಕತೆ.

ಭಾರತದ ಆರ್ಥಿಕ ನ್ಯೂನತೆಯ ವಿಚಾರ ಇಷ್ಟರ ವರೆಗೆ ತರ್ಕಿಸಿದೆವು. ಇದರಿಂದ ಭಾರತದ ಉತ್ಪನ್ನವು ಅತ್ಯಲ್ಪ. ಇದರ ವಿತರಣವು ಅಸಮಾನ, ಮತ್ತು ವಿನಿಯೋಗವು ಅಪ್ರಾಸಂಗಿಕವೆಂದು ವಾಚಕರಿಗೆ ಮನವರಿಕೆಯಾಗಿರಬಹುದು. ಆದ್ದರಿಂದ ಈಗ ಈ ವರೆಗೆ ನಾವು ತರ್ಕಿಸಿದ ನ್ಯೂನತೆಗಳ ಪರಿಹಾರದ ಬಗ್ಗೆ ಕೆಲವೊಂದು ಯೋಜನೆಗಳನ್ನು ವಾಚಕರ ಮುಂದಿಡುವೆವು.

ಪ್ರಥಮತಃ ಈ ವರೆಗೆ ನಾವು ಹೇಳಿದಂತೆ ನಮ್ಮ ಆರ್ಥಿಕ ವ್ಯವಸ್ಥೆಯು ಕೆಳ ಅಂತಸ್ತಿನಲ್ಲಿದೆ; ನಮ್ಮ ವ್ಯವಸಾಯ ಮತ್ತು ಕೈಗಾರಿಕಾ ಉತ್ಪತ್ತಿಯು ಪೂರಾ ಕಮ್ಮಿ ಇದೆ; ನಮ್ಮ ಉತ್ಪತ್ತಿಯು ಎರಡು ಪಟ್ಟಿಯೊ ಮೂರು ಪಟ್ಟು ಹೆಚ್ಚದಿದ್ದರೆ ನಮ್ಮ ಜನತೆಯ ಜೀವನ ಸ್ಥಿತಿಯನ್ನು ಉಚ್ಛ್ರಾಯಸ್ಥಿತಿಗೆ ತರಲು ಪ್ರಯತ್ನಿಸುವದಾದರೂ ನಿಷ್ಪ್ರಯೋಜನಕಾರಿ. ನಮ್ಮ ಉತ್ಪತ್ತಿಯನ್ನು ಹೆಚ್ಚಿಸುವ ವಿಧಾನಗಳಾದರೂ ಏನು ಎಂಬುದನ್ನು ವಿವರಿಸುವದು ಕಷ್ಟಸಮಸ್ಯೆ. ಆದರೂ ಕೆಲವೊಂದು ವಿಚಾರ ಇಲ್ಲಿ ಸಂಕ್ಷೇಪವಾಗಿ ವಿವರಿಸಲು ಪ್ರಯತ್ನಿಸುವೆವು.

ನಮ್ಮ ಭಾರತ ದೇಶದ ಮಟ್ಟಿಗೆ ಜನಾಂಗದ ಉತ್ಪತ್ತಿಯು ಅಭಿವೃದ್ಧಿಗೊಳ್ಳಬೇಕಾದರೆ ಸರಕಾರವು ಆರ್ಥಿಕಾಭಿವೃದ್ಧಿಯ ಹಾಗೂ ಜನಾಂಗದ ಶ್ರೇಯಸ್ಸಿನ ವಿಚಾರ ಪ್ರಾಮುಖ್ಯ ಪಾತ್ರವಹಿಸಬೇಕು. ಸರಕಾರವು ಒಂದು ನಿಶ್ಚಿತ ಆರ್ಥಿಕಾಭಿವೃದ್ಧಿಯ ಯೋಜನೆಯನ್ನು ತಯಾರಿಸಿ ಅದನ್ನು ಕಾರ್ಯರಂಗಕ್ಕೆ ತರಬೇಕು. ಈ ಯೋಜನೆಯನ್ನು ಎರಡು ವಿಧವಾಗಿ ಕೊಡಬಹುದು. 1. ವ್ಯವಸಾಯ ಉತ್ಪತ್ತಿಗಳನ್ನು ಹೆಚ್ಚಿಸುವದು. 2. ಕೈಗಾರಿಕೋತ್ಪತ್ತಿಯ ಅಭಿವೃದ್ಧಿಯನ್ನು ಬಯಸುವದು.

ಇವುಗಳಲ್ಲಿ ವ್ಯವಸಾಯ ಉತ್ಪತ್ತಿಯನ್ನು ಹೆಚ್ಚಿಸುವ ಬಗ್ಗೆ ಸರಕಾರವು ಅನೇಕ ವಿಧಾನಗಳನ್ನು ಕೈಕೊಳ್ಳಬಹುದು. ವ್ಯವಸಾಯ ಕ್ಷೇತ್ರಗಳು ದೊಡ್ಡದಾಗಿರಬೇಕು. ಸರಿಯಾದ ರೀತಿಯಲ್ಲಿ ಭೂಮಿಯು ಉಳಲ್ಪಡಬೇಕು. ಉತ್ತಮ ತರಹದ ಬೀಜಬಿತ್ತಬೇಕು. ಹೆಚ್ಚಾದ ಗೊಬ್ಬರ ಹಾಕಲ್ಪಡಬೇಕು, ಇವೆಲ್ಲವುಗಳಿಗಿಂಥಾ ರೈತನಲ್ಲಿ ತಕ್ಕ ಅನುಕೂಲತೆಗಳಿರಬೇಕು. ವ್ಯವಸಾಯವು ಸಂತೋಷದ ಹಾಗೂ ಲಾಭದಾಯಕ ವೃತ್ತಿ ಎಂಬ ಭಾವವು ಆತನಲ್ಲಿರಬೇಕು, ಎಂದರೇನೆ ಭೂಉತ್ಪತ್ತಿಯು ಹೆಚ್ಚಾಗುವದು. ಆದರೆ ಈ ಮೇಲ್ಕಂಡ ಅವಶ್ಯಕಗಳನ್ನೆಲ್ಲ ರೈತನೇ ಸಾಧಿಸಿಕೊಳ್ಳಲಾರನು. ಈ ಮೊದಲು ಹೇಳಿದಂತೆ ಬಹು ರೈತರಿಗೆ ಐದು ಎಕರೆಗಳಿಗಿಂಥಾ ಕಮ್ಮಿ ಭೂಮಿ ಇರುವದು. ಇವಾದರೂ ಒಂದೆಡೆಯಲ್ಲಿರದೆ ಛಿದ್ರಛಿದ್ರವಾಗಿ ಹರಿದು ಹಂಚಿಹೋಗಿರುವವು. ಈ ಭೂಮಿಯನ್ನು ಒಂದೇ ದೊಡ್ಡ ಕ್ಷೇತ್ರವಾಗಿ ಮಾಡುವದು ತೀರಾ ಕಷ್ಟ. ಈ ತುಂಡುಗಳನ್ನು ಒಂದಾಗಿ ಮಾಡುವ ಅನುಕೂಲತೆಯಿದ್ದರೂ ಅವಕ್ಕೆ ಸಾಕಷ್ಟು ಹಣ ವ್ಯಯಿಸದೆ ವಿನಹ ಅದು ಸಾಧ್ಯವಿಲ್ಲ. ಉತ್ತಮ ರೀತಿಯ ಉಳುಮೆ, ಉತ್ತಮ ತರಹದ ಬೀಜ, ಮತ್ತು ಸಾರವತ್ತಾದ ಗೊಬ್ಬರ ಇವೆಲ್ಲವಕ್ಕೂ ಹಣವೇ ಮೂಲ. ಆದರೆ ರೈತನಲ್ಲಿ ಎಲ್ಲಿದೆ ಈ ಹಣ? ರೈತನಲ್ಲಿ ಹಣವಿಲ್ಲದಿರಲು ಈ ನವೀನ ವಿಧವಿಧ ವ್ಯವಸಾಯಕ್ರಮಗಳನ್ನು ಬೋಧಿಸುವದರ ಪ್ರಯೋಜನವಾದರೂ ಏನು? ಆದ್ದರಿಂದ ಬಡವರಾಗಿರುವ ಬಹುಜನ ರೈತರ ದೃಷ್ಟಿಯಿಂದ, ಅವರ ಭೂಉತ್ಪತ್ತಿಯು ಹೆಚ್ಚಬೇಕಾದರೆ ಕೆಲವು ಮಹತ್ವದ ಸುಧಾರಣೆಗಳಾಗಬೇಕು, ಇದಕ್ಕೆ ಸರಕಾರವು ಈ ವರೆಗೆ ಅದು ಮಾಡದಂಥಾ ಧೈರ್ಯಪೂರಿತ ಕಾರ್ಯಕ್ರಮನ್ನು ಕೈಗೊಳ್ಳಬೇಕು. ದೇಶದ ವ್ಯವಸಾಯಗಾರರನ್ನು, ವ್ಯವಸಾಯಕ್ರಮಕ್ಕನುಗುಣವಾಗಿ, ವಿಶಾಲ ಭೂಮಿಯಿರುವದೊಂದು ಪಕ್ಷ. ಅದಕ್ಕಿಂಥಾ ಕಮ್ಮಿ ಭೂಮಿಯಿರುವ ಇದೂ ಛಿದ್ರಛಿದ್ರವಾಗಿ ಹರಿದು ಹಂಚಲ್ಪಟ್ಟಿರುವ ವರದೊಂದು ಪಕ್ಷ ಹೀಗೆ ಎರಡು ವಿಧಾನವಾಗಿ ವಿಂಗಡಿಸಬಹುದು. ಪ್ರಥಮ ಪಕ್ಷದವರ ವಿಚಾರ ಸರಕಾರವು ಹೆಚ್ಚಿನ ನಿಗವಹಿಸದಿದ್ದರೂ ದ್ವಿತಿಯ ಪಕ್ಷದವರ ಸ್ಥಿತಿಯು ಪೂರಾ ಭಯಾನಕವಿರುವದರಿಂದ ಆ ಬಗ್ಗೆ ಯಥೋಚಿತ ಕಾರ್ಯಕ್ರಮಗಳನ್ನು ಬೇಗ ಕೈಕೊಳ್ಳಬೇಕಾದ್ದು ಅದರ ಆದ್ಯಕರ್ತವ್ಯ. ಇವರ ಬಗ್ಗೆ ಸರಕಾರವು ಮಾಡಬೇಕಿರುವ ಕರ್ತವ್ಯವು ಪ್ರಾಮುಖ್ಯವಿರುವದರಿಂದ ಅದರ ಕೂಲಂಕುಷ ವಿವೇಚನೆಯು ಅಪ್ರಸ್ತುತವಾಗಲಾರದು. ಪ್ರಥಮತಃ ಈ ಸಣ್ಣ ಸಣ್ಣ ಭೂಮಾಲಿಕರನ್ನು ಒಂದು ಗೂಡಿಸಿ, ಇವರ ಭೂಮಿಯನ್ನು ನವೀನ ವ್ಯವಸಾಯಕ್ರಮಕ್ಕನುಗುಣವಾಗಿ ಏಕೀಕರಿಸಿ, ಅವರು ಸಾಮೂಹಿಕವಾಗಿ ವ್ಯವಸಾಯ ಕೈಕೊಳ್ಳಲು ಅನುಕೂಲವಾಗುವಂತೆ ಪರಸ್ಪರ ಸಹಕಾರ ಅಭಿಪ್ರಾಯವನ್ನು ಅವರಲ್ಲಿ ಹುಟ್ಟಿಸಮಾಡಬೇಕು. ನಂತರ ಈ ವ್ಯವಸಾಯ ಕ್ಷೇತ್ರಗಳಲ್ಲಿ ವ್ಯವಸಾಯವು ಸುಗಮವಾಗಿ ನಡೆಯುವ ಬಗ್ಗೆ ಸರಕಾರವು ಅವರ ಬೇಕುಬೇಡಿಕೆಗಳನ್ನು ಸಲ್ಲಿಸಿ ಪ್ರೋತ್ಸಾಹಿಸಬೇಕು. ಈ ಸಂದರ್ಭದಲ್ಲಿ ಅವರಿಗೆ ದ್ರವ್ಯಸಹಾಯಮಾಡಿ ಪ್ರೋತ್ಸಾಹಿಸಬೇಕೆಂದು ನಾವು ಹೇಳಲಾರೆವು. ಅವರೂ ಸರಕಾರವು ಭೂಮಿಗೆ ಅನುಗುಣವಾಗಿ ಉತ್ತಮೋತ್ತಮವಾದ ಬೀಜ, ವ್ಯವಸಾಯ ಸಲಕರಣೆಗಳು, ಉತ್ತಮ ತಳಿಯ ಎತ್ತುಗಳು, ಅವುಗಳಿಗೆ ಸರಿಯಾದ ನೀರಾವರಿವ್ಯವಸ್ಥೆ, ಮತ್ತು ಭೂಮಿಗೆ ಬೇಕಾಗಬಹುದಾದ ನವೀನ ರೀತಿಯ ಗೊಬ್ಬರ ಇವುಗಳನ್ನು ಕೊಟ್ಟು ವ್ಯವಸಾಯವು ಸುಧಾರಿಸಿದ ರೀತಿಯಲ್ಲಿ ನಡೆಯಲು ಅನುಮಾಡಿಕೊಡಬೇಕು. ಇವಕ್ಕೆ ಪ್ರತಿಫಲವಾಗಿ ಸರಕಾರವು ಪೂರ್ಣ ಪರಿಶೀಲನೆಯ ನಂತರ ರೈತನ ಜೀವನ ವ್ಯವಸ್ಥೆಗೆ ಇಟ್ಟು ತನಗೆ ನ್ಯಾಯವಾಗಿ ಸಲ್ಲಬೇಕಾದ ಪಾಲನ್ನು ಪರಿಗ್ರಹಿಸಬೇಕು. ರೈತನು ತನ್ನ ಪಾಲಿನ ಉತ್ಪತ್ತಿಯನ್ನು ಕಮ್ಮಿಧಾರಣೆಯಿಂದ ಮಾರಿ ನಷ್ಟ ಪಡದ ರೀತಿ ಸರಕಾರವು ಅದಕ್ಕೆ ಸರಿಯಾದ ವ್ಯವಸ್ಥೆ ಮಾಡಿಸಬೇಕು. ಸರಕಾರವು ಇಂಥಾ ವ್ಯವಸ್ಥೆ ಮಾಡುವ ಮೊದಲು ಬಡತನದಿಂದ ಬಳಲಿ ದಿಕ್ಕೆಟ್ಟಿರುವ ಬಡ ರೈತನ ಸಾಲದ ಬಾಧೆಯನ್ನು ಪರಿಹರಿಸಿರಬೇಕು. ವ್ಯವಸಾಯಮಾಡುವ ರೈತನು ಬರೇ ವಾರಗಾರನಾಗಿದ್ದ ಪಕ್ಷ ಆತನ ಹಿಡುವಳಿ ಭದ್ರತೆಗೆ ಭರವಸೆಕೊಡಬೇಕು. ಇಂದು ಜಮ್ಮಿಗಳು ತಮ್ಮ ಭೂವ್ಯವಸಾಯಮಾಡುವ ಹಿಡುವಳಿದಾರರು ಬೆಳೆದ ಬೆಳೆಯನ್ನೆಲ್ಲಾ ಅಧಿಕಾರವಾಣಿಯಿಂದ ಅಪಹರಿಸಿ ವಿಲಾಸಿಗಳಾಗಿ ಮೆರೆಯುವದನ್ನು ಸರಕಾರವು ಖಂಡಿಸಿ ಪೂರ್ಣ ವಿವೇಚನೆಯಿಂದ ಜಮ್ಮಿಗಳಿಗೆಷ್ಟು ಸಲ್ಲತಕ್ಕದ್ದೆಂಬುದನ್ನು ನಿರ್ಣಯಿಸಬೇಕು. ವ್ಯವಸಾಯಗಾರನು ಸಾಲದಿಂದ ಬೆಂದು ಬಳಲಿರುವವನಾದ ಪಕ್ಷ ಸರಕಾರವು ಅಂಥಾವನ ಭೂವ್ಯವಸಾಯಕ್ರಮವನ್ನು ತನ್ನ ಅಂಕೆಗೆ ತೆಗೆದುಕೊಂಡು ಸಾಲದ ಹೊರೆಯ ಜವಾಬ್ದಾರಿಯನ್ನು ತಾನು ಹೊತ್ತು ಭೂಮಿಯಲ್ಲಿ ಬೆಳೆದ ಉತ್ಪತ್ತಿಯಲ್ಲಿ ರೈತನ ಜೀವನಕ್ಕೆ ಇಟ್ಟು, ಸಾಲಗಾರನ ಕಂತಿಗೆ ಬೇಕಾದ ಬತ್ತವನ್ನು ತಾನೇ ಮಾರಿ ಆತನಿಗೆ ಸಲ್ಲಿಸಿ ಉಳಿದದ್ದನ್ನು ತನ್ನ ಪರಿಶ್ರಮಕ್ಕೆ ಪ್ರತಿಫಲವಾಗಿ ತೆಗೆದುಕೊಳ್ಳಬೇಕು.

ಇದನ್ನು ಸಂಕ್ಷೇಪವಾಗಿ ಹೇಳುವದಾದರೆ ಸರಕಾರವು ಈ ಸಣ್ಣ ಸಣ್ಣ ಭೂಮಾಲಿಕರನ್ನು ಒಟ್ಟುಗೂಡಿಸಿ ತಾನು ಒಬ್ಬ ಭೂಮಾಲಿಕನಂತೆ ಕಾರ್ಯಮಾಡಬೇಕು. ಇಂಥಾ ಕಾರ್ಯಕ್ರಮಕ್ಕೆ ತಳೆಬಾಗಿ ವ್ಯವಸಾಯಗಾರರು ಒಂದು ಗೂಡಿ ಸಾಮೂಹಿಕ ರೀತಿಯಿಂದ ಕಾರ್ಯಪ್ರವರ್ತರಾಗಲು ಒಪ್ಪದಿದ್ದ ಪಕ್ಷ ಸರಕಾರವು ಬಲಾತ್ಕಾರ ಪ್ರಯೋಗದಿಂದ ಅವರನ್ನು ಅಂಕೆಗೆ ತರಲು ಪ್ರಯತ್ನಿಸಬಾರದು. ಅದು ಸ್ವತಃ ಇಂಥಾ ಸಾಮೂಹಿಕ ವ್ಯವಸಾಯಕ್ಷೇತ್ರಗಳನ್ನೇರ್ಪಡಿಸಿ ಜನತೆಯಲ್ಲಿ ಅದರ ಉಪಯೋಗವನ್ನು ಮನದಟ್ಟಾಗುವಂತೆ ಮಾಡಬೇಕು.

ವಿಶಾಲ ಭೂಮಾಲಿಕರ ಬಗ್ಗೆ ಸರಕಾರವು ಹೆಚ್ಚಿನ ನಿಗವಹಿಸುವ ಅಗತ್ಯವಿಲ್ಲ. ಯಾಕೆಂದರೆ ಅವರಲ್ಲಿ ಅವರ ಬೇಕುಬೇಡಿಕೆಗಳನ್ನು ಸಲ್ಲಿಸಿಕೊಳ್ಳಲು ಆರ್ಥಿಕ ಸವಲತ್ತು ಇರುವದು. ಆದರೆ ವಿಶಾಲ ಭೂಮಾಲಿಕರು... ಆರ್ಥಿಕ ... ಗಲ್ಲಿ ಗಟ್ಟಿಯಿಲ್ಲದವರಿಗೆ ಸರಕಾರವು ಮೇಲ್ಕಂಡಂತೆ ಸಹಾಯಮಾಡಬೇಕಾದುದಗತ್ಯ. ಈ ಮೇಲ್ಕಂಡ ನಮ್ಮ ಸೂಚನೆಗಳು ವಾಚಕರಿಗೆ ಅಗಾಧವಾಗಿ ತೋರಬಹುದು. ಆದರೆ ಇದರಲ್ಲಿ ಬಲಾತ್ಕಾರವಿಲ್ಲ. ವ್ಯವಸಾಯಗಾರರ ಅನುಕೂಲತೆ ಹಾಗೂ ಅಭಿವೃದ್ಧಿಯ ಬಗ್ಗೆ ವ್ಯವಸಾಯಗಾರರೇ ಏಕೀಕರಿಸಿ ಸರಕಾರದ ಪ್ರೇರಣೆಯಂತೆ ನಡೆಯುವದು ಯಾರಿಗೂ ಅಹಿತವೆನಿಸದು. ಸರಕಾರವು ಮಾತ್ರ ತನ್ನ ಗುರಿಯಿಲ್ಲದ ಹಾಗೂ ಅವ್ಯವಸ್ಥೆಯ ಕಾರ್ಯಕ್ರಮವನ್ನು ಬದಲಾಯಿಸಿ ರೈತನ ಹಿತಚಿಂತಕನಾಗಿ ಒಂದು ನಿಶ್ಚಿತ ಧೋರಣೆಯನ್ನು ವಹಿಸಿ ಕಾರ್ಯಮಾಡಬೇಕಿದೆ. ಈ ರೀತಿಯ ಒಂದು ಕಾರ್ಯಕ್ರಮವು ನಡೆಯದ ವಿನಹ ಇಂದು ವ್ಯವಸಾಯ ಕ್ಷೇತ್ರದಲ್ಲಿ ಪಸರಿಸಿರುವ ದಾರುಣ ಹಾಗೂ ಭಯಾನಕ ಪರಿಸ್ಥಿತಿಗಳು ತೀವ್ರಗೊಂಡು ದೇಶದ ಬೆನ್ನೆಲುಬಾದ ರೈತನು ತನ್ನ ಅವ್ಯವಸ್ಥೆಯ ಪರಮಾವಧಿಯಲ್ಲಿ ಕಂಗೆಟ್ಟು ಇಡೀ ದೇಶವೇ ಅಧೋಗತಿಗಿಳಿಯಬೇಕಾದೀತು. ಇಂಥಾ ಪರಿಸ್ಥಿತಿಯಿಂದ ರೈತನನ್ನು ಕೈಹಿಡಿದೆತ್ತಿ ದೇಶದ ಕಲ್ಯಾಣವನ್ನು ಸಾಧಿಸಬೇಕಾದರೆ ಇಂದು ಕಡು ಬಡತನದಲ್ಲಿ ನರಳುತ್ತಿರುವ ರೈತನಿಗೆ ಆತನ ಆವಶ್ಯಕಗಳ ಸರಬರಾಯಿಯಾಗಬೇಕು. ಇದನ್ನು ಸರಕಾರವೊಂದು ಮಾಡಬಲ್ಲುದಲ್ಲದೆ ಇನ್ನಾವ ರೀತಿಯಿಂದಲೂ ಅದು ಅಸಾಧ್ಯ. ರೈತನನ್ನು ಸುಧಾರಿಸಲು ಸರಕಾರವು ಮುಂದಡಿಯಿಡದಿದ್ದರೆ, ವ್ಯವಸಾಯ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದು ಕೂಗುವ ಸುಧಾರಕರ ಘೋಷಣೆಯಾಗಲೀ, ಅರಿವು ನಸ್ಸಿನಿಂದ ನವೀನ ರೀತಿಯ ವ್ಯವಸಾಯ ಕ್ರಮವನ್ನು, ಕೈಯಲ್ಲಿ ಕಾಸಿಲ್ಲದ ಬಡ ರೈತನ ಮುಂದೆ ಬೋಧಿಸುತ್ತಿರುವ ವ್ಯವಸಾಯ ಇಲಾಖೆಯವರ ಪ್ರಯತ್ನವಾಗಲೀ ಮರಳುಕಾಡಿನಲ್ಲಿ ಸರೋವರವನ್ನು ಬಯಸಿದಂತೆಯೇ ಆಗುವದು.

ಇನ್ನು ಕೈಗಾರಿಕೋನ್ನತಿಯ ವಿಚಾರ ತರ್ಕಿಸುವದಾದರೂ ಸರಕಾರವೇ ಇಲ್ಲಿಯೂ ಮುಖಂಡತ್ವವನ್ನು ವಹಿಸಬೇಕು. ದೇಶದಲ್ಲಿ ಕೈಗಾರಿಕೆಯ ಬಗ್ಗೆ ಅಭಿಲಾಷೆ ಹುಟ್ಟಬೇಕಾದರೆ ಪರದೇಶಗಳಿಂದ ಬರುವ ಸಾಮಾನುಗಳ ಮೇಲೆ ಸರಕಾರವು ಕರ ಹೇರಬೇಕು. ದೇಶದೊಳಗಿನ ಕೈಗಾರಿಕಾ ಕಲಾಕೌಶಲ್ಯವು ಹೆಚ್ಚಿ ಸಾಮಾನುಗಳು ಜನಮನವನ್ನಾಕರ್ಷಿಸುವ ರೀತಿ ನೋಗಸಾಗಿರಲು ಸರಕಾರವು ಪ್ರಯತ್ನಿಸಬೇಕು. ಪರದೇಶದ ವಸ್ತುಗಳ ಸಂತೆಯಾಗಿ ದೇಶವು ಮಾರ್ಪಡುವದನ್ನು ಸರಕಾರವು ತಡೆಗಟ್ಟಬೇಕು. ಅಂದರೆ ದೇಶೀಯರಲ್ಲಿ ಕೈಗಾರಿಕೆಯ ಬಗ್ಗೆ ಅಭಿಲಾಷೆಯು ಒಮ್ಮೆಲೆ ಉದ್ರೇಕಗೊಳ್ಳದಿರದು. ಜನತೆಯ ಅತ್ಯಾವಶ್ಯಕ ವಸ್ತುಗಳು ದೇಶದಲ್ಲೇ ತಯಾರಿಸಲ್ಪಟ್ಟು ಸುಲಭ ದರದಿಂದ ವಿಕ್ರಯಿಸಲ್ಪಡುವ ಏರ್ಪಾಡು ಮಾಡಬೇಕು. ದೇಶದ ಕೈಗಾರಿಕೆಗಳಿಗಾಗಿ ಹೊರಗಿನಿಂದ ತರಿಸುವ ಯಂತ್ರಸಾಮಾನುಗಳ ಮೇಲೆ ಸುಂಕಬೀಳದಂತೆ ಸರಕಾರವು ನೋಡಿಕೊಳ್ಳಬೇಕು. ಬಂಡವಾಳಗಾರರು ತಮ್ಮ ಹಣವನ್ನು ಕೈಗಾರಿಕೆಯಲ್ಲಿ ಹಾಕಿದರೆ ಹೆಚ್ಚು ಲಾಭ ಪಡೆಯಬಹುದೆಂದೆನ್ನುವಂತಾಗಬೇಕು. ಸರಕಾರದ ಪರ್ಯಾಯವು ಅವರಲ್ಲಿ ನಂಬಿಕೆ ಹುಟ್ಟಿಸಬೇಕು. ಇದಕ್ಕೆ ಸಹಕಾರಿಯಾಗಿ ಸರಕಾರವು ತನ್ನ ವಿನಿಮಯ ಧೋರಣೆಯ ವಿಚಾರ ಹೆಚ್ಚು ನಿಗವಿಟ್ಟಿರಬೇಕು. ದೇಶದ ಉತ್ಪತ್ತಿಯು ವೃದ್ಧಿಯಿಂದ ಈ ವಿನಿಮಯ ದರವು ಬದಲಾಯಿಸಲ್ಪಡಬೇಕು.

ದ್ರವ್ಯಗಳಾದರೂ ಕೇವಲ ವಹಿವಾಟ

ನ ಸಾಧನಗಳಾಗಿ ಪರಿಗಣಿಸಲ್ಪಟ್ಟು, ದೇಶೀಯ ಹಾಗೂ ಪರದೇಶೀಯ ಸಾಮಾನುಗಳು ಏಕರೀತಿಯಿಂದ ಸಾಗಿಸುತ್ತಿರುವದು ದೇಶಹಿತದೃಷ್ಟಿಯಿಂದ ಶುದ್ಧ ತಪ್ಪು ರೈಲ್ವೆಗಳು ಕೇವಲ ದೇಶೀಯ ಕೈಗಾರಿಕೆ ಹಾಗೂ ಇತರ ಉತ್ಪನ್ನಗಳ ವಹಿವಾಟಿನ ಸಲಕರಣಗಳಾಗಿ ಉಳಿಯಬೇಕು ಈ ದೃಷ್ಟಿಯಿಂದ ರೈಲ್ವೆ ದರವಾದರೂ ನಿಷ್ಕರ್ಷಿಸಲ್ಪಡಬೇಕು ಸಣ್ಣ ಸಣ್ಣ ಕೈಗಾರಿಕೆಗಳ ದೃಷ್ಟಿಯಲ್ಲಿ ಸರಕಾರವು ನಾವು ಮೇಲೆ ವಿವರಿಸಿದಂತೆ ಸಣ್ಣ ಸಣ್ಣ ಭೂಮಾಲಿಕರ ಯಾ ರೈತರ ದೃಷ್ಟಿಯಿಂದ ಮಾಡಬೇಕಾದ ಕರ್ತವ್ಯವನ್ನೇ ಮಾಡಬೇಕು ಈ ಚಿಕ್ಕ ಕೈಗಾರಿಕಾ ಕೆಲಸಗಾರರ ಕೇಂದ್ರ ಒಂದನ್ನು ಸ್ಥಾಪಿಸಿ, ಅವರಿಗೆ ಬೇಕಾದ ಕಚ್ಚಾಮಾಲುಗಳನ್ನು ಒದಗಿಸಿಕೊಟ್ಟು, ಅವರ ಉತ್ಪನ್ನಗಳಿಗೆ ಸರಿಯಾದ ಬೆಲೆ ದೊರಕಿಸಿ ಕೊಡುವದು ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದ ಸರಕಾರವು ಮಾಡತಕ್ಕ ಪ್ರಥಮ ಕರ್ತವ್ಯ ಇದಲ್ಲದೆ ಕೈಗಾರಿಕೆಯು ಆರ್ದಿಕ ತೊಂದರೆಯಿಂದ ನಿಂತು ಹೋಗದ ರೀತಿ ಬ್ಯಾಂಕಿನ ವಹಿವಾಟುಗಳನ್ನೇರ್ಪಡಿಸಿ ಸರಕಾರವು ಪ್ರೋತ್ಸಾಹಿಸಬೇಕು

ಈ ವರೆಗೆ ಕೈಗಾರಿಕೆಯ ವಿಚಾರ ಸರಕಾರದ ಕರ್ತವ್ಯವನ್ನು ವಿಚಾರಿಸಿದ್ದಾಯಿತು ಉತ್ಪತ್ತಿಯ ವಿತರಣ ಹಾಗೂ ವಿನಿಯೋಗದ ಬಗ್ಗೆ ಸರಕಾರವು ಗಮನವಿಡಬೇಕು ಈ ವಿಚಾರಗಳು ಜಾರಿಯಲ್ಲಿ ಬಂದರೆ ಸಾಮಾಜಿಕ ಹಿತದೃಷ್ಟಿಯಿಂದ ರಾಷ್ಟ್ರದ ಸಂಪತ್ತಿನಲ್ಲಿ ನಿರುದ್ಯೋಗ ವಿಮಾ, ವಿವಾಹ ಸಲಕರಣೆ, ವೃದ್ಧಾಪ್ಯದ ನಿವೃತ್ತಿ ವೇತನ, ಧರ್ಮಾರ್ಥ ವೈದ್ಯಚಿಕಿತ್ಸೆ ಇವೇ ಮೊದಲಾದ ಕಾರ್ಯಗಳಿಗೆ ಅಮೋಘ ಹಣ ವ್ಯಯಮಾಡಿ ಸರಕಾರವು ಮಾಡಬೇಕಿದ ಈ ಖರ್ಚನ್ನು ಸರಕಾರವು ಅನುಕೂಲಸ್ಥರ ಮೇಲೆ ಕಂದಾಯ ಹಾಕಿ ಭರ್ತಿಮಾಡಿಕೊಳ್ಳಬಹುದು ಶಾಲಾ ಮಕ್ಕಳಿಗೆ ಧರ್ಮಾರ್ಥ ಹಾಲನ್ನು ಸರಬರಾಯಿ ಮಾಡುವ, ಉಚಿತ ವೈದ್ಯ ಚಿಕಿತ್ಸೆ ಕೈಕೊಳ್ಳುವ, ಮತ್ತು ಮಿಡ್ಡ್ಣಯ ಶಾರೀರಿಕ ಶಿಕ್ಷಣಕೊಡುವ ವ್ಯವಸ್ಥೆಯಾಗಬೇಕು ಸರಕಾರವು ಧೈರ್ಯಪೂರಿತ ಹೆಜ್ಜೆಯಿಂದ ಮೇಲ್ಕಂಡಂತೆ ಕಾರ್ಯಸಾಧಿಸಿದರೆ ಇಂದು ಭಾರತದ ಆರ್ಥಿಕ ಸ್ಥಿತಿಯಲ್ಲಿರುವ ಅನೇಕ ನ್ಯೂನತೆಗಳು ಮಾಯವಾಗಿ ಬಡತನದ ಬೇಗೆಯಿಂದ ಬಳಲುತ್ತಿರುವ ಭಾರತೀಯರ ಹೃದಯವಿದ್ರಾವಕ ಸ್ಥಿತಿಯು ಸುಧಾರಿಸದಿರದು

ಈ ಮಧ್ಯೆ ಎಲ್ಲಾ ಭಾರವನ್ನೂ ಸರಕಾರದ ಮೇಲಿಟ್ಟು ತಟಸ್ಥರಾಗಿ ಉಳಿಯುವದು ಹಿತವಲ್ಲ ನಮ್ಮ ಕೈಲಾದ ಕಾರ್ಯಕ್ರಮಗಳನ್ನು ನಾವೇ ಮಾಡಿಕೊಂಡು ಸರಕಾರವು ನಮ್ಮ ಹಿತಚಿಂತನೆಯಲ್ಲಿ ಕೈಯಿಕ್ಕುವಂತೆ ಪ್ರೇರೇಪಿಸುವದಾದರೂ ನಮ್ಮ ಕೈಯಲ್ಲೇ ಉಳಿದಿದೆ. ನಾವು ಸ್ವತಃ ಮಾಡಬೇಕಾದ ಕಾರ್ಯಗಳು ಬಹಳ ಇವೆ ಎಲ್ಲೆಲ್ಲಿ ಸ್ವದೇಶಿ ವಸ್ತುಗಳನ್ನು ಉಪಯೋಗಿಸಲು ಸಾಧ್ಯವೋ ಅಲ್ಲಿ [illegible] ಪರದೇಶಿ ವಸ್ತುಗಳಿಗೆ ಬಹಿಷ್ಕಾರ ಹಾಕಬೇಕು ಜನತೆಯಲ್ಲಿ ಹರಡುವ ನಿರಕ್ಷರತೆಯನ್ನು ಹೋಗಲಾಡಿಸಲು ಸರಕಾರದೊಡನೆ ಸಹಕರಿಸಿ ತನ್ನ ಗ್ರಾಮದ ಗೆಳೆಯರಲ್ಲಿ ಸಾಕ್ಷರತಾ ಪ್ರಸಾರ ನಡೆಸಬೇಕು ಗ್ರಾಮಾಭಿವೃದ್ಧಿಯ ಕಾರ್ಯಗಳಲ್ಲಿ ಆಸಕ್ತಿ ವಹಿಸಿ ಗ್ರಾಮದ ಉನ್ನತಿಯನ್ನು ಸಾಧಿಸಬೇಕು ಬಡತನದಿಂದ ಕಷ್ಟಪಡುತ್ತಿರುವ ನೆರೆಹೊರೆಯವರಿಗೆ ದೇಹಪರಿಶ್ರಮದಿಂದ ಸಹಾಯಮಾಡಬೇಕು ಖಾದಿ ಪ್ರಚಾರದ ಕಾರ್ಯ ಕೈಕೊಂಡು ಗ್ರಾಮಕೈಗಾರಿಕೆಗಳಿಗೆ ಪ್ರೋತ್ಸಾಹಕೊಡಬೇಕು. ಇವು ರಾಷ್ಟ್ರದ ಅಭಿವೃದ್ಧಿಯ ಬಗ್ಗೆ ಸಾಮಾನ್ಯನೊಬ್ಬನು ಮಾಡಬಹುದಾದ ಕೆಲಸಗಳಲ್ಲಿ ಕೆಲವಾಗಿವೆ ಹೀಗೆ ಒಂದು ಕಡೆಯಿಂದ ನಮ್ಮ ಕರ್ತವ್ಯವನ್ನು ಮಾಡಿ ಸರಕಾರವನ್ನು ನಮ್ಮ ಸಹಾಯಕ್ಕೆ ಬರಲು ಪ್ರಾರ್ಥಿಸುವದರಲ್ಲಾದರೂ ಅರ್ಥವಿದೆ. ಕಾರ್ಯಮಾಡದ್ದೆ ಕೇವಲ ಬಾಹ್ಯಾಡಂಬರದ ಭಾಷಣಗಳನ್ನು ಮಾಡುವದರಿಂದ ಹೆಚ್ಚಿನ ಪ್ರಯೋಜನವಾಗದು.

ಜಿಲ್ಲಾ ಬೋರ್ಡು ಮೀಟಿಂಗು

(ಕಳೆದ ಸಂಚಿಕೆಯಿಂದ ಸಾಗಿದ್ದು)

20 ಚೆಟ್ಟದಳ್ಳಿ ಕುಂದಳ್ಳಿರೋಡಿನ ರಿಪೇರಿಗಾಗಿ ರೂ 100 ಕೊಡಬೇಕೆಂಬ ಅರ್ಜಿಯನ್ನು ಓದಿ ರಸ್ತೆ ರಿಪೇರಿ ಬಾಬಿನಲ್ಲಿ ಹಣ ಉಳಿದರೆ ರೂ 75 ಕೊಡುವಂತೆ ಮಂಜೂರ್ಮಾಡಲಾಯಿತು.

21 ಸರ್ಕಾರಿ ಕಟ್ಟಡಗಳಲ್ಲಿ ರಿಯಾಯಿತಿ ದರದ ಬಾಡಿಗೆಯನ್ನು ನಿಲ್ಲಿಸಿ ಸರಿಯಾದ ದರ ಬಾಡಿಗೆಯನ್ನು ಕೊಡಬೇಕೆಂಬ ವಿಚಾರ ಎಗ್ಸಿಕ್ಯೂಟಿವ್ ಇಂಜನೀಯರು ಬರೆದ ಪತ್ರ ಓದಿ, ಬೋರ್ಡಿನ ಆರ್ಥಿಕ ಸ್ಥಿತಿಯು ಚೆನ್ನಾಗಿಲ್ಲದ್ದರಿಂದ ಬೋರ್ಡಿನ ಆಫೀಸಿಗಾಗಿ ಉಪಯೋಗಿಸುವ ಕಟ್ಟಡಕ್ಕೆ ಈಗಿರುವ ದರವನ್ನೇ ಬೋರ್ಡು ಕೊಡುವ ಬಗ್ಗೆ ಸರಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು

22 ಬೋರ್ಡಿನ ನೌಕರರಿಗೆ ಹೊಸ ದರದ ಸಂಬಳದ ದರವು ಯಾವ ತಾರೀಕಿನಿಂದ ಜಾರಿಗೆ ಬರಬೇಕೆಂಬದನ್ನು ನಿಶ್ಚಯಿಸುವ ಬಗ್ಗೆಯ ಪತ್ರವನ್ನು ಓದಿ ಸರಕಾರವು ನಿಶ್ಚಯಿಸಿರುವಂತೆ 16-7-31 ರಿಂದ ಜಾರಿಗೆ ಬರಬೇಕೆಂದೂ, ಆ ತಾರೀಕಿನಿಂದ ಸೇರಿದ ಉದ್ಯೋಗಸ್ಥರಿಗೆ ಹೊಸ ಸ್ಕೇಲಿನ ಸಂಬಳ ಕೊಡುವಂತೆಯೂ ತೀರ್ಮಾನವಾಯಿತು.

ಎರಡನೇ ದಿನ.

ಬೋರ್ಡು ಮೀಟಿಂಗು ತಾ 18ನೇ ಮಂಗಳವಾರ ಪುನಹ ಕೌನ್ಸಿಲ್ ಹಾಲ್‌ನಲ್ಲಿ ಬೆಳಿಗ್ಗೆ 10 ಗಂಟೆಗೆ ಸೇರಿತು ಶ್ರೀಗಳಾದ ಯಂ ಎಸ್ ಸೋಮಯ್ಯ, ಕೆ ಎಸ್ ಗಣಪತಿ ಮತ್ತು ಎ ಎಸ್ ಪೊನ್ನಪ್ಪ ಇವರು ಮೂವರಲ್ಲದೆ ಉಳಿದವರು ಹಾಜರಿದ್ದರು

23 ಔದ್ಯೋಗಿಕ ಉತ್ಪತ್ತಿಗಳ ಸೋಲೆ ತೆರಿಗೆಯ ದರವನ್ನು ತಿದ್ದುವ ವಿಚಾರ ಕಮಿಷನರ ಪತ್ರವನ್ನು ಓದಲಾಯಿತು ತೆರಿಗೆ ಹಾಕಬಹುದಾದ ಕನಿಷ್ಟ ಮಿತಿಯ ಆದಾಯ ರೂ 150ಕ್ಕೂ, ತೆರಿಗೆಯ ಹೆಚ್ಚಿನ ಮಿತಿಯನ್ನು ರೂ 40ಕ್ಕೂ ನಿಶ್ಚಯಿಸುವಂತೆ ತೀರ್ಮಾನವಾಯಿತು.

24 ಕೆಳಗೆ ನಮೂದಿಸಿರುವ ಟೋಲ್‌ಗೇಟ್ ಕಂಟ್ರಾಕ್ಟುದಾರರುಗಳಿಂದ 37-38 ಕ್ಕೆ ಬರತಕ್ಕ ಮೊಬಲಗಿನ ವಸೂಲಾತಿಗೆ ಕ್ರಮ ಜರುಗಿಸುವ ಬಗ್ಗೆ ಪತ್ರಗಳನ್ನು ಮತ್ತು ಈ ಬಾಕಿಗಳನ್ನು ವಸೂಲುಮಾಡಕೂಡದೆಂದು ಲಾಯರುಗಳಿಂದ ಬಂದ ರಿಜಿಸ್ಟರ್ಡ್ ನೋಟೀಸುಗಳನ್ನು ಓದಿ ಅವರವರ ಜಾಮೀನುದಾರರ ಒಪ್ಪಿಗೆಯಿಂದ (1) ವಿರಂಗಾಲ ಟೋಲ್‌ಗೇಟ್ ಕಂಟ್ರಾಕ್ಟರಿಂದ ಬರತಕ್ಕದ್ದಿರುವ ರೂ 813 ರಲ್ಲಿ ರೂ 400 ಮಾಫಿ ಬಿಡುವಂತೆಯೂ, (2) ಗದ್ದಿಗೆ ಟೋಲ್‌ಗೇಟ್ ಕಂಟ್ರಾಕ್ಟರಿಂದ ಬರಬೇಕಿರುವ ರೂ 674 ರಲ್ಲಿ ರೂ 350 ಬಿಡುವಂತೆಯೂ, (3) ಮಾಪ್ಪುಕೂಟ ಕಂಟ್ರಾಕ್ಟರಿಂದ ಬರಬೇಕಾದ ರೂ 540 ರಲ್ಲಿ ರೂ 300 ಬಿಡುವಂತೆಯೂ, (4) ಸಿದ್ದಾಪುರ ಮಾರ್ಕೆಟ್ ಕಂಟ್ರಾಕ್ಟರಿಂದ ಬರತಕ್ಕದ್ದಿರುವ ರೂ 429 ರಲ್ಲಿ ರೂ 229 ಬಿಡುವಂತೆಯೂ ಇವರೆಲ್ಲರೂ ಬಾಕಿ ಮೊಬಲಗುಗಳನ್ನು 3 ತಿಂಗಳ ಅವಧಿಯೊಳಗೆ ಪಾವತಿ ಮಾಡದೆ ತಪ್ಪಿದರೆ ಪೂರ್ತಿ ಬಾಕಿ ವಸೂಲಾತಿ ಬಗ್ಗೆ ದಾವ ದಾಖಲು ಮಾಡುವಂತೆಯೂ ತೀರ್ಮಾನವಾಯಿತು

25 1937-38 ನೇ ವರ್ಷದ ಗೋಣಿಕೊಪ್ಪಲು ಮಾರ್ಕೆಟ್ ಕಂಟ್ರಾಕ್ಟುದಾರರಿಂದ ಬರಬೇಕಾದ ರೂ 431-8-0 ವಸೂಲಾತಿ ಬಗ್ಗೆ ದಕ್ಷಿಣ ಕೊಡಗು ಸುಬೆದಾರರ ಪತ್ರವನ್ನು ಓದಿ, ಜಾಮೀನುದಾರರ ಒಪ್ಪಿಗೆಯಿಂದ ರೂ 200 ಮಾಫಿ ಬಿಡುವಂತೆಯೂ, ಬಾಕಿಯನ್ನು 3 ತಿಂಗಳುಗಳೊಳಗೆ ಪಾವತಿ ಮಾಡದಿದ್ದರೆ ಪೂರ್ತಿ ಹಣದ ವಸೂಲಾತಿ ಬಗ್ಗೆ ದಾವ ಹಾಕುವಂತೆಯೂ ತೀರ್ಮಾನವಾಯಿತು

26 ಹೈಯರ್ ಎಲಿಮೆಂಟರಿ ಶಾಲೆಗಳಲ್ಲಿ ಹಿಂದಿಯನ್ನು ಕಲಿಸಬೇಕೆಂಬ ಸೂಚನೆಯನ್ನು ಓದಿ ಒಮ್ಮತದಿಂದ ಅಂಗೀಕರಿಸಲಾಯಿತು ಅಲ್ಲದೆ ಇದರ ಖರ್ಚಿನ ಹಾಗೂ ಕಲಿಸುವ ಸಮಯದ ವಿಚಾರ ಬರುವ ಮೀಟಿಂಗಿನಲ್ಲಿ ಚರ್ಚಿಸುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಶೇಕರಿಸುವಂತೆ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು

27 ಸಂತೆಗಳಲ್ಲಿ ಮಾಂಸ ಮಾರಾಟದ ದರವನ್ನು ನಿಶ್ಕರ್ಷಿಸಬೇಕೆಂಬ ಪತ್ರವನ್ನು ಓದಿ, ಒಂದನೇ ತರಗತಿಯ ಮಾಂಸಕ್ಕೆ ಒಂಭತ್ತಾಣೆಗೆ ಮೀರದಂತೆಯೂ, ಎರಡನೇ ತರಗತಿಯದಕ್ಕೆ ಎಳಾಣೆಗೆ ಮೀರದಂತೆಯೂ ನಿಶ್ಚಯಿಸಿದ್ದಲ್ಲದೆ ಗಜೆಟಿನಲ್ಲಿ ಇದು ಪ್ರಕಟವಾದಂದಿನಿಂದ ಜಾರಿಗೆ ಬರಬೇಕೆಂದು ತೀರ್ಮಾನವಾಯಿತು

28 ಹೊಟೇಲುಗಳನ್ನು 1ನೇ, 2ನೇ ಮತ್ತು 3 ನೇ ತರಗತಿಯವುಗಳೆಂದು ವಿಭಾಗಿಸುವ ವಿಚಾರದ ಪತ್ರಗಳನ್ನು ಓದಿ ಈ ಸಂಬಂಧ ತಾ 22-6-39 ರ ಗಜೆಟಿನಲ್ಲಿ ಪ್ರಕಟವಾದ ನಿಬಂಧನೆಗಳನ್ನು ಅಂಗೀಕರಿಸಲಾಯಿತು

29. ಕೆಲವು ಶಾಲೆಗಳ ಕಕ್ಕುಸಿಗಾಗಿ ಮಂಜೂರಾದ ರೂ 100 ನ್ನು, ಬೋರ್ ಹೋಲ್ ತೆಗೆಯುವ ಯಂತ್ರ ಪಡಕೊಳ್ಳಲು ವಿನಿಯೋಗಿಸಬಹುದೆಂಬ ಡಿಸ್ಟ್ರಿಕ್ಟ್ ಎಜ್ಯುಕೇಶನಲ್ ಆಫೀಸರ ಪತ್ರವನ್ನು ಓದಲಾಯಿತು ಸಿವಿಲ್ ಸರ್ಜನರು ಶಾಲೆಗಳ ಉಪಯೋಗಕ್ಕಾಗಿ ಒಂದು ಯಂತ್ರವನ್ನು ಎರವು ಕೊಡುತ್ತೇನೆಂದು ಮಾತುಕೊಟ್ಟದ್ದರಿಂದ ಯಂತ್ರವನ್ನು ತೆಗೆಯುವದು ಬೇಡವೆಂದು ತೀರ್ಮಾನವಾಯಿತು.

30 ಸುಂಟಿಕೊಪ್ಪ ಮಾರ್ಕೇಟ್ ಕಂಟ್ರಾಕ್ಟರಿಂದ ಬರಬೇಕಿರುವ 1935-36 ರ ರೂ 91 ಮತ್ತು 1936-37 ರ ರೂ 169 ಇವುಗಳ ವಸೂಲಾತಿ ಬಗ್ಗೆಯ ಪತ್ರವನ್ನು ಓದಿ 1935-36 ರ ಬಾಕಿಯ ಬಗ್ಗೆ ಅವಧಿಯ ವಿಚಾರದಲ್ಲಿ ವಕೀಲರ ಸಲಹೆ ಪಡೆದು ಅದರ ವಸೂಲಾತಿ ಬಗ್ಗೆ ಕ್ರಮ ಜರುಗಿಸಲು ಪ್ರೆಸಿಡೆಂಟರಿಗೆ ಅಧಿಕಾರ ಕೊಡಲಾಯಿತು 1936-37 ನೇ ವರ್ಷದ ಬಾಕಿಯಲ್ಲಿ ರೂ 69 ನ್ನು ಜಾಮೀನುದಾರನ ಒಪ್ಪಿಗೆಯಿಂದ ಮಾಫಿ ಬಿಡುವಂತೆಯೂ, ಬಾಕಿ ಹಣವನ್ನು ಎರಡು ತಿಂಗಳುಗಳೊಳಗೆ ಆತನು ಪಾವತಿ ಮಾಡುವಂತೆಯೂ ತಪ್ಪಿದರೆ ಪೂರ್ತಿ ಹಣಕ್ಕೆ ದಾವ ದಾಖಲುಮಾಡುವಂತೆಯೂ ತೀರ್ಮಾನವಾಯಿತು

31 37-38 ನೇ ವರ್ಷದ ಮೂರ್ನಾಡು ಮಾರ್ಕೆಟ ಕಂಟ್ರಾಕ್ಟುದಾರನಿಂದ ಬರಬೇಕಾದ ರೂ 109 ರ ವಸೂಲಾತಿಯ ವಿಚಾರದ ಪತ್ರಗಳನ್ನು ಓದಲಾಯಿತು ಇದರಲ್ಲಿ ಜಾಮೀನುದಾರನ ಒಪ್ಪಿಗೆಯಿಂದ ರೂ 50 ಮಾಫಿ ಬಿಡುವಂತೆಯೂ, ಬಾಕಿಯನ್ನು ಕಂಟ್ರಾಕ್ಟುದಾರನು ಒಂದು ತಿಂಗಳೊಳಗೆ ಪಾವತಿ ಮಾಡುವಂತೆಯೂ ತಪ್ಪಿದರೆ ಪೂರ್ತಿ ಹಣದ ವಸೂಲಾತಿಗೆ ದಾವ ದಾಖಲು ಮಾಡುವಂತೆಯೂ ತೀರ್ಮಾನಿಸಲಾಯಿತು.

32 ಹುದಿಕೇರಿ, ನಾಲ್ಕೇರಿ ಮತ್ತು ವಾರಂಣೆಗಳಲ್ಲಿರುವ ಹುಡುಗಿಯರ ಶಾಲಾ ಕಟ್ಟಡಗಳನ್ನು ಮಾರುವ ವಿಚಾರ ಕಮಿಷನರಿಂದ ಬಂದ ಪತ್ರ ಓದಿ ಅವುಗಳನ್ನು ಬೋರ್ಡಿನ ಅಧೀನಕ್ಕೆ ತೆಗೆದುಕೊಂಡು ಅವುಗಳ ಉಸ್ತುವಾರಿ ಖರ್ಚನ್ನು ಬೋರ್ಡು ವಹಿಸುವಂತೆ ತೀರ್ಮಾನವಾಯಿತು.

33 ಆಹಾರ ಪದಾರ್ಥಗಳನ್ನು ಬೆರಕೆಯಿಂದ ಕೆಡಿಸುವದನ್ನು ನಿಲ್ಲಿಸುವ ಬಗ್ಗೆ ಒಂದು ಕಾನೂನನ್ನು ಜಾರಿಗೆ ತರುವ ಬಗ್ಗೆಯ ಕಮಿಷನರವರ ಪತ್ರವನ್ನು ಓದಿ ಒಪ್ಪಲಾಯಿತು.

34. ಫ್ರೇಜರ್‌ಪೇಟೆ ಹೋಬಳಿಯ ಹೆಬ್ಬಾಲೆ ಗ್ರಾಮದ ನೀರಿನ ಸರಬರಾಯಿ ಯೋಜನೆಗೆ ಈ ಮೊದಲು ಮಂಜೂರಾದ ರೂ. 1400 ರ ಜೊತೆಗೆ ರೂ. 1600 ಕೊಡಿಸಿಕೊಡಬೇಕೆಂಬ ಆ ಗ್ರಾ [illegible]

ಗೀಕರಿಸಿ 1940-41 ರ ಬಜೆಟ್ಟಿನಲ್ಲಿ ಇದಕ್ಕೆ ಹಣ ಇಡಲು ತೀರ್ಮಾನವಾಯಿತು.

35. ಅಂಕನಳ್ಳಿ ಶಾಲೆ ರಿಪೇರಿ ಖರ್ಚಿನ ಅರ್ಧವನ್ನು ಬೋರ್ಡಿನಿಂದ ಕೊಡಬೇಕೆಂಬ ಡಿಸ್ಟ್ರಿಕ್ಟ್ ಎಜ್ಯುಕೇಷನ್ ಆಫೀಸರರ ಶಿಫಾರಸ್ಸನ್ನು ಓದಿ, ಶಾಲಾ ಕಟ್ಟಡ ರಿಪೇರಿಯ ಅರ್ಧ ಖರ್ಚು ಅಂದರೆ ರೂ. 25 ಮಂಜೂರ್ಮಾಡಲಾಯಿತು.

36. ಗ್ರಾಮಾಭಿವೃದ್ಧಿ ಕಮಿಟಿಯವರು ಬೋರ್ಡನ್ನು ಕೇಳಿಕೊಂಡ ಈ ಕೆಳಗಿನ ರಿಂಖಾಪುಗಳನ್ನು ಓದಲಾಯಿತು.

(1) 'ಗ್ರಾಮಾಭಿವೃದ್ಧಿ ಕಮಿಟಿಯು ನಾಪೋಕ್ಲು-ಪಾಲೂರು-ಭಾಗಮಂಡ್ಲ ರಸ್ತೆಗಾಗಿ ರೂಪಾಯಿ 255 ಮಂಜೂರ್ಮಾಡಿದೆ. ಡಿ. ಬೋರ್ಡು ಇದರ ವಾರ್ಷಿಕ ಖರ್ಚನ್ನು ವಹಿಸಿಕೊಳ್ಳಬೇಕು.'

ಇದರ ವಾರ್ಷಿಕ ರಿಪೇರಿ ಖರ್ಚನ್ನು ಬೋರ್ಡು ನಿರ್ವಹಿಸುವಂತೆ ತೀರ್ಮಾನವಾಯಿತು.

(2) 'ಪಾಲಂಗಾಲ-ವೀರಾಜಪೇಟೆ ರಸ್ತೆಗಾಗಿ ಗ್ರಾಮಾಭಿವೃದ್ಧಿ ಫಂಡಿನಿಂದ ರೂ. 300 ಮಂಜೂರ್ಮಾಡಿರುವದರಿಂದ ಅದರ ವಾರ್ಷಿಕ ಖರ್ಚನ್ನು ಬೋರ್ಡು ವಹಿಸಬೇಕು.'

ಇದರ ವಾರ್ಷಿಕ ರಿಪೇರಿ ಖರ್ಚನ್ನು ನಿರ್ವಹಿಸುವಂತೆ ತೀರ್ಮಾನಿಸಲಾಯಿತು.

(3) 'ಪೊನ್ನಂಪೇಟೆ-ಕಾನೂರು-ನಡಿಕೇರಿ ರಸ್ತೆಯನ್ನು ಗ್ರಾಮಾಭಿವೃದ್ಧಿ ಫಂಡಿನಿಂದ ಮಾಡಿಸಿದರೆ ಬೋರ್ಡು ಅದರ ವಾರ್ಷಿಕ ಖರ್ಚನ್ನು ನಿರ್ವಹಿಸುವದೋ ಎಂಬ ಕೇಳಿಕೆ.'

ಬೋರ್ಡು, ಈ ರಸ್ತೆಯ ವಾರ್ಷಿಕ ಖರ್ಚನ್ನು ನಿರ್ವಹಿಸುವದೆಂದು ತೀರ್ಮಾನವಾಯಿತು.

(4) 'ಬಲ್ಯಮುಂಡೂರಿಗಾಗಿ ಲಕ್ಷ್ಮಣ ತೀರ್ಥ ನದಿಗೆ ಪಾಂಡಿಗೆ ಒಂದು ತಂತಿಯನ್ನು ಕೊಂಡುಕೊಳ್ಳುವ ಬಗ್ಗೆ ರೂ. 100 ಡಿ. ಬೋರ್ಡಿನಿಂದ ಕೊಡಲು ಸಾಧ್ಯವಿದೆಯೆ? ಎಂಬ ಕೇಳಿಕೆ.'

ತಂತಿಯ ಕ್ರಯದ 2/3 ಭಾಗವನ್ನು ಗ್ರಾಮಾಭಿವೃದ್ಧಿ ಫಂಡಿನವರು ಕೊಡುವದಾದರೆ ⅓ ಭಾಗವನ್ನು ಬೋರ್ಡಿನಿಂದ ಕೊಡಲು ತೀರ್ಮಾನವಾಯಿತು.

(5) 'ಟಿ. ಶೆಟ್ಟಿಗೇರಿ- ಕೊಂಗಣಕ್ಕಾಗಿ ಹೊಸ ರಸ್ತೆಯನ್ನು ಗ್ರಾಮಾಭಿವೃದ್ಧಿ ಫಂಡಿನಿಂದ ಮಾಡಿದರೆ ಬೋರ್ಡು ಅದರ ವಾರ್ಷಿಕ ರಿಪೇರಿ ಖರ್ಚನ್ನು ವಹಿಸುವದೊ? ಎಂಬ ಕೇಳಿಕೆ.'

ಬೋರ್ಡು ಈ ರಸ್ತೆಯ ವಾರ್ಷಿಕ ಖರ್ಚನ್ನು ನಿರ್ವಹಿಸುವದೆಂದು ತೀರ್ಮಾನವಾಯಿತು.

37. ಕೊಡಗು ಬಾಲಚನಮೂ ಸಂಸ್ಥೆಯ ವಾರ್ಷಿಕ ಮಹಾಸಭೆಯಲ್ಲಿ, ಬೋರ್ಡಿನಿಂದ ಅದಕ್ಕೆ ಕೊಡುವ ವಂತಿಗೆಯನ್ನು ಕೊಡಬೇಕೆಂದು ಪುನಹ ಮಂಜೂರ್ಮಾಡಿದ ಠರಾವನ್ನು ಓದಿ, ಡಿ. ಬೋರ್ಡು ಶಾಲೆಗಳ ಸ್ಕಾಟುಗಳಿಗೆ, ಕೊಡಗಿನಲ್ಲಿ ಪಂಡಿತ ಮದನ ಮೋಹನ ಮಾಳವೀಯನವರ ಸೇವಾಸಮಿತಿಯ ಶಾಖೆ ಇಲ್ಲದಿರುವವರೆಗೆ ಬಾಯ್ಸ್ ಸ್ಕಾಟ್ ಸಂಸ್ಥೆಗೆ ರೂ. 50 ಕೊಡಲು ತೀರ್ಮಾನವಾಯಿತು.

38. 1937-38 ನೇ ವರ್ಷದ ಹೆಬ್ಬಾಲೆ ಟೋಲ್‌ಗೇಟ್ ಕಂಟ್ರಾಕ್ಟರಿಂದ ಬರಬೇಕಿರುವ ರೂ 78 ರ ವಸೂಲಾತಿ ಬಗ್ಗೆ ಉತ್ತರ ಕೊಡಗು ಸುಭೆದಾರರ ಪತ್ರವನ್ನು ಓದಿ, ಜಾಮೀನ್ದಾರನ ಒಪ್ಪಿಗೆಯಂತೆ ರೂ 38 ಮಾಫಿ ಮಾಡುವಂತೆ ಮತ್ತು ಬಾಕಿ ಹಣವನ್ನು ಒಂದು ತಿಂಗಳೊಳಗೆ ವಸೂಲು ಮಾಡಬೇಕೆಂದು, ಇಲ್ಲದಿದ್ದರೆ ಪೂರ್ತಿ ಹಣದ ವಸೂಲಾತಿಗೆ ದಾವಾ ದಾಖಲು ಮಾಡುವಂತೆಯೂ ತೀರ್ಮಾನವಾಯಿತು.

39. ರೂ 12 ರ ಸಂಬಳದಲ್ಲಿ ಉಪಾಧ್ಯಾಯರನ್ನು ನೇಮಿಸುವ ಬೋರ್ಡಿನ ತೀರ್ಮಾನವನ್ನು ಪುನರಾಲೋಚಿಸಬೇಕೆಂಬ ಪೊನ್ನಂಪೇಟೆ ಸೆಂಟರಿನ ಉಪಾಧ್ಯಾಯರ ಮೀಟಿಂಗಿನ ರಿಂಖಾವನ್ನು ಓದಿ, ಆ ಠರಾವಿನಲ್ಲಿರುವ 'ಖಂಡಿಸುತ್ತದೆ' ಎಂಬ ಶಬ್ದವನ್ನು ವಾಪಾಸು ತೆಗೆಯಲು ಠರಾವನ್ನು ಹಿಂದಕ್ಕೆ ಕಳುಹಿಸುವಂತೆ ತೀರ್ಮಾನವಾಯಿತು.

40. ಶ್ರೀ ಸಿ. ಯಂ. ಪೂಣಚ್ಚನವರ ಠರಾವುಗಳು :—

(1) ಮೂರ್ನಾಡು-ಬೆಟ್ಟಗೇರಿ ರಸ್ತೆಯನ್ನು ಸರ್ಕಾರವು ವಹಿಸಿಕೊಳ್ಳುವಂತೆ ಸರಕಾರವನ್ನು ಬೋರ್ಡು ಕೇಳಿಕೊಳ್ಳುತ್ತದೆ

ಮಂಜೂರಾಯಿತು.

(2) ಕಿರುಗೂರು ಶಾಲೆಗೆ ಕೊಡುವ ಗ್ರಾಂಟನ್ನು ರೂ. 40 ಕ್ಕೆ ಏರಿಸಬೇಕು.

ಬಜೆಟ್ ಮೀಟಿಂಗಿಗೆ ಮುಂದರಿಸಿಲಾಯಿತು.

(3) ವೀರಾಜಪೇಟೆಯಲ್ಲಿ ಹುಡುಗಿಯರ ಬೋರ್ಡಿಂಗೊಂದನ್ನು ತೆರೆಯಬೇಕು.

ವೀರಾಜಪೇಟೆಯಲ್ಲಿ ಹುಡುಗಿಯರಿಗಾಗಿ ಒಂದು ಬೋರ್ಡಿಂಗ್ ಮನೆಯನ್ನು ತೆರೆಯುವಂತೆ ಸರಕಾರವನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

41. ಶ್ರೀ ಎಸ್. ಮಾದಪ್ಪನವರ ಠರಾವುಗಳು :—

(1) ಬಿಳಿಗೇರಿ ಗ್ರಾಮದಲ್ಲಿ ಒಂದು ಬಾವಿಯನ್ನು ತೋಡುವ ಬಗ್ಗೆ ರೂ. 100 ಮಂಜೂರ್ಮಾಡಬೇಕು.

ಈ ಕೆಲಸಕ್ಕೆ ಹಣ ಕೊಡುವಂತೆ ಗ್ರಾಮಾಭಿವೃದ್ಧಿ ಫಂಡಿನ ಪ್ರೆಸಿಡೆಂಟರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

(2) ಕಲ್ಲಂದೂರು ಗ್ರಾಮದಲ್ಲಿ ಒಂದು ಬಾವಿತೋಡಲು ಬೋರ್ಡಿನಿಂದ ರೂ. 100 ಕೊಡಬೇಕು.

ಈ ಕೆಲಸಕ್ಕೆ ದ್ರವ್ಯಸಹಾಯ ಮಾಡುವಂತೆ ಗ್ರಾಮಾಭಿವೃದ್ಧಿ ಫಂಡಿನ ಪ್ರೆಸಿಡೆಂಟರನ್ನು ಕೇಳಿಕೊಳ್ಳಲು ತೀರ್ಮಾನವಾಯಿತು.

42. 1939-40 ನೇ ವರ್ಷದ ಶನಿವಾರಸಂತೆ ಮಾರ್ಕೆಟ್ ಕಂಟ್ರಾಕ್ಟರಿನ ಮಾಫಿ ಅರ್ಜಿಯನ್ನು ಓದಿ, ತಿರಸ್ಕರಿಸಲಾಯಿತು.

43. 'ಕೊಡಗಿನ ಪ್ರಾಥಮಿಕ ಶಾಲೆಗಳಲ್ಲಿ ಶೇಕಡ 90 ರಷ್ಟು ಶಾಲೆಗಳು ಡಿ. ಬೋರ್ಡಿನ ಅಧೀನದಲ್ಲಿರುವದರಿಂದ ಟೆಕ್ಸ್ಟ್‌ಬುಕ್ ಕಮಿಟಿಯಲ್ಲಿ ⅔ ಭಾಗದಷ್ಟು ಬೋರ್ಡಿನ ಪ್ರತಿನಿಧಿಗಳು ಇರುವಂತೆ ಪುನಃ ಟೆಕ್ಸ್ಟ್‌ಬುಕ್ ಕಮಿಟಿಯನ್ನು ನೇಮಿಸಲು ಚೀಫ್ ಕಮಿಷನರನ್ನು ಕೇಳಿಕೊಳ್ಳುವಂತೆ ತೀರ್ಮಾನಿಸುತ್ತದೆ' ಎಂಬ ಠರಾವನ್ನು ಶ್ರೀ ಎಸ್. ಎನ್. ರಾಮಶೆಟ್ಟಿಯವರು ಸೂಚಿಸಿದರು. ಶ್ರೀ ಎಸ್. ಮಾದಪ್ಪನವರು ಅನುಮೋದಿಸಲ್ಪಟ್ಟು, ಪಾಸಾಯಿತು.

44. ಡಿ ಬೋರ್ಡಿನ ಹೆಡ್ ಗುಮಾಸ್ತರ ಸಂಬಳದ ಸ್ಕೇಲಿನ ವಿಚಾರ ಪುನರಾಲೋಚಿಸುತ್ತ, ಇಲ್ಲವೆ ರೂ 60-5/2-90 ರಂತೆ ನಿಶ್ಚಯಿಸಬೇಕೆಂದು ಸೂಚಿಸುವ ಕಮಿಷನರ ಪತ್ರ ಓದಿ, ಬಜೆಟ್ ಮೀಟಿಂಗಿನಲ್ಲಿ ಬೋರ್ಡು ನಿರ್ಣಯಿಸಿದ ತೀರ್ಮಾನವನ್ನು ಅಂದರೆ ರೂ. 50-2½/2-75 ರ ಸ್ಕೇಲಿನ ಸಂಬಳವನ್ನು ಬದಲಾಯಿಸಕೂಡದೆಂದು ನಿಶ್ಚಯಿಸಲಾಯಿತು.

45. 1939 ನೇ ಮಾರ್ಚಿಯಲ್ಲಿ ಸೂಲಗಿತ್ತಿಯರ ಮನೆ ಬಾಡಿಗೆಗಾಗಿ ಕೊಟ್ಟ ರೂ 25 ನ್ನು 1939-40 ರ ಬೋರ್ಡಿನ ಬಜೆಟ್ಟಿನಲ್ಲಿ ಸೇರಿಸಬೇಕೆಂಬ ಸಿವಿಲ್ ಸರ್ಜನರ ಪತ್ರ ಓದಿ ರೂ. 25 ಮಂಜೂರ್ಮಾಡಲಾಯಿತು.

46 ಭಾಗಮಂಡ್ಲ ಆಯುರ್ವೇದ ಡಾಕ್ಟರಿಗೆ 1939 ನೇ ಮಾರ್ಚ ತಿಂಗಳಲ್ಲಿ ಮನೆ ಬಾಡಿಗೆಗಾಗಿ ಕೊಟ್ಟ ರೂ. 8-8-0 ಗೆ 1939-40 ನೇ ವರ್ಷದ ಬೋರ್ಡಿನ ಬಜೆಟ್ಟಿನಿಂದ ಕೊಡಬೇಕೆಂಬ ಪತ್ರ ಓದಿ ರೂ 8-8-0 ಮಂಜೂರ್ಮಾಡಲಾಯಿತು

47. ಬೋರ್ಡು ಆಫೀಸಿನ ಉಪಯೋಗಕ್ಕಾಗಿ ರೂ 168 ಕ್ರಯದ ಒಂದು ಡ್ಯೂಪ್ಲಿಕೇಟರ್ ಟೈಪಿಂಗ್ ಮಿಷಿನನ್ನು ಕೊಂಡುಕೊಳ್ಳಬೇಕೆಂಬ ಸೂಚನೆಯನ್ನು ಓದಿ ಅಂಗೀಕರಿಸಲಾಯಿತು.

48 ಈ ವರ್ಷ ವರ್ಗಾಯಿಸಲ್ಪಟ್ಟ ಉಪಾಧ್ಯಾಯರಿಗೆ ಭತ್ಯಕೊಡುವ ವಿಚಾರದ ಪತ್ರಗಳನ್ನು ಓದಲಾಯಿತು.

ಶ್ರೀ ಎಸ್. ಎನ್. ರಾಮಶೆಟ್ಟಿಯವರಿಂದ ಸೂಚಿಸಲ್ಪಟ್ಟು, ಶ್ರೀ ಹೆಚ್. ಯಂ. ಪುಪ್ಪಣ್ಣನವರಿಂದ ಅನುಮೋದಿಸಲ್ಪಟ್ಟ ಮೇರೆ-ಎರಡು ಮಕ್ಕಳಿಗಿಂತ ಕಮ್ಮಿ ಇರುವ ಉಪಾಧ್ಯಾಯರಿಗೆ ಒಂದೇ(ಸಿಂಗಲ್) ಪ್ರಯಾಣದ ಭತ್ಯವೂ, ಎರಡು ಮಕ್ಕಳು ಮತ್ತು ಎರಡಕ್ಕಿಂತ ಜಾಸ್ತಿ ಇರುವವರಿಗೆ ಎರಡು ಪೈಲೇಜ್ ಭತ್ಯ ಕೊಡುವಂತೆಯೂ ತೀರ್ಮಾನವಾಯಿತು.

49. ಶ್ರೀಮಂಗಲ ಆಸ್ಪತ್ರೆಯ ವಾರ್ಡ್ ಕಟ್ಟಡದ ಪ್ರಸಿದ್ಧರಾದ ಎತ್ತಿ ಅಲ್ಲಿಯ ಒಬ್ಬರು ಆಸ್ಪತ್ರೆಗೆ ಸಂಬಂಧಿಸಿ ಒಂದು ವಾರ್ಡು ಕಟ್ಟುವ ಬಗ್ಗೆ ಬೋರ್ಡಿನಿಂದ ರೂ 350 ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಓದಿ ಅಲ್ಲಿಯ ಜನರು ರೂ 150 ವಸುಲ್ಮಾಡಿ ರೇವಣಾತಿ ಇಟ್ಟ ಪಕ್ಷ ಬರುವ ಬಜೆಟಿನಲ್ಲಿ ರೂ. 350 ಕೊಡಲು ತೀರ್ಮಾನವಾಯಿತು.

50. ಬಾಳೆಲೆ ಆಸ್ಪತ್ರೆಗೆ ರೂ 8 ರ ಸಂಬಳದಲ್ಲಿ ಒಬ್ಬ ಜವಾನನನ್ನು ನೇಮಿಸುವ ವಿಚಾರದ ಪತ್ರಗಳನ್ನು ಓದಿ 1939 ನೇ ಆಗಸ್ಟ್ 1 ರಿಂದ ಒಬ್ಬನನ್ನು ಇಡಲು ತೀರ್ಮಾನವಾಯಿತು.

51 1939-40 ನೇ ವರ್ಷಕ್ಕೆ ಹರಾಜಾದ ಟೋಲ್‌ಗೇಟುಗಳ ಫಲಿತಾಂಶದ ಪಟ್ಟಿಯನ್ನು ಓದಿ ಮಂಜೂರುಮಾಡಲಾಯಿತು. (1) ಮಾವುಕೂಟ ರೂ. 675 (2) ಆನೆಚೌಕೂರು ರೂ. 3095 (3) ಸಿದ್ದೇಶ್ವರನ ಗದ್ದೆಗೆ ರೂ 1040 (4) ಕುಟ್ಟ ರೂ. 325, (5) ಸಂಪಾಜೆ ರೂ. 700, (6) ಫ್ರೇಜರ್‌ಪೇಟೆ ರೂ. 415 (7) ಶಿರಂಗಾಲ ರೂ. 1810, (8) ಹೆಬ್ಬಾಲೆ ರೂ. 415, (9) ಎಡೆಹಳ್ಳಿ ರೂ. 400 ಕ್ರಮವತ್ತು (10) ನಿಲುವಾಗಿಲು ರೂ 1400.

52. ಬೋರ್ಡಿನ ಪ್ರತಿಯೊಂದು ಮೀಟಿಂಗಿನಲ್ಲೂ, ಟೋಲ್‌ಗೇಟುಗಳ, ಮಾರ್ಕೆಟ್ಟುಗಳ ಹಾಗೂ ದೋಣಿ ಕಂಟ್ರಾಕ್ಟಿನ, ಹರಾಜಾದ ಮೊಬಲಗು,ವಸೂಲಾತಿ ಬಂದದ್ದು, ಬಾಕಿ ವಸೂಲಾತಿಗೆ ತೆಗೆದುಕೊಂಡ ತರಮೂದು-ಇವುಗಳ ಒಂದು ಪಟ್ಟಿಯನ್ನಿಡಬೇಕೆಂಬ ಶ್ರೀ ಸಿ. ಯಂ. ಪೂಣಚ್ಚನವರ ಠರಾವನ್ನು ಓದಿ ಅಂಗೀಕರಿಸಲಾಯಿತು.

ಪಿ. ಐ. ಬೆಳ್ಯಪ್ಪ,
(ಪ್ರೆಸಿಡೆಂಟ್.)

ಪರದೇಶಗಳ ಪರಿಸ್ಥಿತಿ.

ಬ್ರಿಟನಿನ ಭೀತಿ.

ಬ್ರಿಟನಿನ ರಾಜಕಾರಣವನ್ನು ಕೂಲಂಕುಶವಾಗಿ ವಿಚಾರಿಸಿದರೆ ಅದು ಲಾಭವಿಲ್ಲದೆ ಬೇರೊಂದು ರಾಷ್ಟ್ರದೊಂದಿಗೆ ಸ್ನೇಹ ಮಾಡದೆಂಬುದು ಗೊತ್ತಾಗದಿರದು. ಒಮ್ಮೆ ಅದರೊಂದಿಗೆ ಸ್ನೇಹ ಮಾಡಿ ಅದರ ಫಲವನ್ನುಂಡ ಯಾವ ರಾಷ್ಟ್ರವೂ ಇನ್ನೊಮ್ಮೆ ಅದರ ಸ್ನೇಹಕ್ಕೆ ಕೈನೀಡದು. ಬ್ರಿಟನು ತಾನು ಹಿಡಿದ ನಿರ್ದಿಷ್ಟ ಕಾರ್ಯವು ಸಫಲವಾಗದ ವಿನಹ ಅನ್ಯರ ಹಿತಕಾರ್ಯಕ್ಕೆ ಸಹಕಾರಿಯಾಗದು. ತನ್ನ ಸಂಕಟ ಸಮಯದಲ್ಲಿ ಅನ್ಯ ರಾಷ್ಟ್ರಗಳಿಂದ ವಿವಿಧ ಯೋಜನೆಗಳ ಮೂಲಕ ಸಹಾಯ ಪಡೆದು ತನ್ನ ಸಹಾಯಕರು ತೊಂದರೆಯಲ್ಲಿದ್ದಾಗ ಮಾತಿನ ಸಹಾನುಭೂತಿಯನ್ನು ತೋರುವ ವಿಲಕ್ಷಣ ರಾಜಕಾರಣ ಬ್ರಿಟನಿನದು. ಬಿಕ್ಕಟ್ಟಿನ ಸಂದರ್ಭದಲ್ಲಿ ತನ್ನ ಸವಿ ಮಾತಿನ ಪ್ರಯೋಗಗಳಿಂದ ಬೇರೆ ರಾಷ್ಟ್ರಗಳನ್ನು ಮೆಚ್ಚಿಸಿ, ಕುಯುಕ್ತಿಯಿಂದ ಒಳಗೊಳಗೆ ರಾಷ್ಟ್ರದ ವ್ಯಕ್ತಿತ್ವವನ್ನೇ ಹಾಳುಮಾಡುವ ವಿಚಿತ್ರ ರಾಜಕಾರಣ ಬ್ರಿಟನಿನದು. ತಮ್ಮ ಜನತೆಯ ಹಿತಕ್ಕಾಗಿ ಹಿಂದು ಮುಂದು ನೋಡದೆ ಎಂಥಾ ಕಾರ್ಯವನ್ನೂ ಕೈಕೊಳ್ಳಲು ಹಿಂಜರಿಯದ ರಾಜಕಾರಣ ಬ್ರಿಟನಿನದು. ಇಂಥಾ ಸ್ವಾರ್ಥ ಸಾಧನೆಯ ದೃಷ್ಟಿಯೇ ಇಂದು ಬ್ರಿಟನ್-ರಷ್ಯಾ ಸಂಧಾನಕ್ಕೆ ಅಡ್ಡ ಗೋಡೆಯಂತಿದೆ. ಇಂದು ಪ್ರಪಂಚದ ರಾಜಕಾರಣಗಳ ಮನದ

(8ನೇ ಪುಟವನ್ನು ನೋಡಿ.)

ಕೊಡಗು

ಜುಲೈ ತಾರೀಕು ೨೮ನೇ ಶುಕ್ರವಾರ ೧೯೩೯.

ಜಮಾನು ರೈತರ ಕೈತಪ್ಪಿಹೋಗುತ್ತಿದೆ.

ದೇಶದ ಅಂದರೆ ಅಲ್ಲಿಯ ನಿವಾಸಿಗಳ ಹಿತವನ್ನು ಕಾಪಾಡಲಿಕ್ಕೂ ಮತ್ತು ಅಭಿವೃದ್ಧಿಯನ್ನು ಸಾಧಿಸಲಿಕ್ಕೂ ಏರ್ಪಾಡಾಗಿರುವ ಸಂಸ್ಥೆಯೇ ಸರ್ಕಾರ. ಈ ಸಂಸ್ಥೆಯು ತನ್ನ ಈ ಉದ್ದೇಶಗಳನ್ನು ನೆರವೇರಿಸಲು ಬೇಕಾಗುವ ಖರ್ಚು ವೆಚ್ಚಗಳಿಗಾಗಿ ಪ್ರಜೆಗಳು ಕಂದಾಯ ಕಾಣಿಕೆಗಳನ್ನು ಕೊಡುತ್ತಿರುವರು. ಅಂತ ಮೇಲೆ ನ್ಯಾಯಬದ್ಧವಾದ ಖಾನೂನಿನ ಮೇರೆ ನಿಶ್ಚಯಿಸಲ್ಪಟ್ಟಿರುವ ತೆರಿಗೆಗಳನ್ನು ಜನರು ಕೊಡಬೇಕಾದದ್ದು ಅವರ ಕರ್ತವ್ಯವಾಗಿದೆ. ಹಾಗೆ ಕೊಡದೆ ತಪ್ಪಿದಲ್ಲಿ ಸರ್ಕಾರಕ್ಕೆ ತನ್ನ ಕಾರುಬಾರುಗಳನ್ನು ಸುಸೂತ್ರವಾಗಿ ನಡಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ಬಾಕಿ ನಿಂತ ಕರಕಂದಾಯಗಳ ವಸೂಲಿ ಬಗ್ಗೆ ಸರ್ಕಾರದವರು ಪ್ರಯತ್ನಿಸಬೇಕಾದದ್ದು ಅವರ ಕರ್ತವ್ಯವಾಗಿದೆ. ಆದರೆ ಇಂಥಾ ಪ್ರಯತ್ನದಲ್ಲಿ ಯಾರ ಹಿತಕ್ಕಾಗಿ ಸರ್ಕಾರ ನಡಿಸಲ್ಪಡುತ್ತಿದೆಯೋ ಅವರ ಅಹಿತವನ್ನು ಸಾಧಿಸುವುದು ನ್ಯಾಯವಲ್ಲ; ಅವರನ್ನು ಅಧೋಗತಿಗೆ ಇಳಿಸುವುದು ಯೋಗ್ಯವಲ್ಲ.

ಕೊಡಗು ಪ್ರಾಮುಖ್ಯವಾಗಿ ವ್ಯವಸಾಯಗಾರರ ಸೀಮೆಯಾಗಿದೆ. ಆದುದರಿಂದ ಅವರ ಕಷ್ಟ ನಷ್ಟಗಳ ಕಡೆಗೆ ಸರ್ಕಾರದವರು ಹೆಚ್ಚಾಗಿ ಗಮನ ಕೊಡಬೇಕಾಗಿದೆ. ಆದರೆ ಇಂದು ಹಾಗಾಗುತ್ತಿಲ್ಲವೆಂದೇ ರೈತರ ಕೂಗು. ದೇಶದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಪ್ರತಿಯೊಬ್ಬನಿಗೂ ಜಮಾನು ಇರುವಂತೆ ಮಾಡಿ, ಅವನು ಸುಖಜೀವನ ನಡಿಸಲು ತಕ್ಕ ಸಹಾಯ ಒದಗಿಸಬೇಕಾದದ್ದು ಸರ್ಕಾರದ ಕೆಲಸವಾಗಿರಬೇಕು. ಆದರೆ ಇಂದಿನ ಸ್ಥಿತಿಯು ಇದಕ್ಕೆ ವ್ಯತಿರಿಕ್ತವಾಗಿ ಕಾಣುತ್ತಿದೆ. ವರ್ಷ ವರ್ಷವೂ ಜಮಾನು ಬಡ ರೈತರ ಕೈದಾಟಿ ಹೋಗುತ್ತಿದೆ ಜಮಾನುದಾರರ ಸಂಖ್ಯೆಯು ಕಡಿಮೆಯಾಗುತ್ತಿದೆ. ಈ ಶೋಚನೀಯ ಸ್ಥಿತಿಗೆ ಸರ್ಕಾರದವರ ಕಂದಾಯ ಮತ್ತು ಸಾಲ ವಸೂಲಾತಿಯ ಕ್ರಮವೇ ಮುಖ್ಯ ಕಾರಣವಾಗಿದೆ.

ರೈತರು ತಮ್ಮ ಹಿಡುವಳಿಯನ್ನು ಕಳಕೊಳ್ಳುವಂತೆ ಮಾಡಬೇಕೆಂಬ ಉದ್ದೇಶದಿಂದಲೇ ಸರ್ಕಾರದವರು ಕಂದಾಯ ಬಾಕಿಯ ವಸೂಲಿಗಾಗಿ ಮೊದಲು ಅವರಿಗೆ ನೋಟೀಸು ಕೊಡುವುದು, ನಂತರ ಸಮನ್ಸ್ ಕಳುಹಿಸುವುದು, ಆ ಮೇಲೆ ದಸ್ತಗಿರಿ ಮಾಡುವುದು; ಚರಸೊತ್ತನ್ನು ಹರಾಜು ಮಾಡುವುದು ಮತ್ತು ಕಡೆಗೆ ಸ್ಥಿರಸೊತ್ತನ್ನು ಹರಾಜು ಮಾಡುವುದು; ಈ ವಿಧಾನಗಳನ್ನು ಕೈಕೊಳ್ಳಬಹುದೆಂದು ನಿಬಂಧನೆ ಮಾಡಿರುವುದಾಗಿದೆ. ಕೆಲವು ವರ್ಷಗಳ ಹಿಂದೆ ಸರ್ಕಾರದ ಬಾಕಿಗಾಗಿ ಜಮಾನನ್ನು ಹರಾಜಿಗೆ ಬಿಡುವುದೆಂದರೆ ರೈತರಿಗೆ ದೊಡ್ಡ ಅವಮರ್ಯಾದೆಯಾಗಿತ್ತು. ಹರಾಜಿನಲ್ಲಿ ನೂರಾರು ಜನರು ಸೇರಿ ಸ್ಪರ್ಧೆಯಿಂದ ಭೂಮಿಯನ್ನು ಕೊಂಡುಕೊಳ್ಳುತ್ತಿದ್ದರು. ಆದರೆ ಇಂದು ಆ ನಾಚಿಕೆಯು ರೈತರಿಂದ ದೂರ ತೊಲಗಿ ಹೋಗಿದೆ. ಎಷ್ಟೋ ಜಮಾನುಗಳು ಹರಾಜು ಮಾಡಲ್ಪಡುತ್ತಿವೆ; ಆದರೆ ಹರಾಜಿನಲ್ಲಿ ಕೊಂಡುಕೊಳ್ಳುವವರೇ ಇಲ್ಲದಾಗಿದೆ. ಅಂಥಾ ಸಂದರ್ಭಗಳಲ್ಲಿ ಸರ್ಕಾರದವರೇ ಆ ಭೂಮಿಗಳನ್ನು ವಹಿಸಿಕೊಳ್ಳುವ ಖಾನೂನನ್ನೂ ಮಾಡಿಕೊಂಡಿರುತ್ತಾರೆ. ಇದಕ್ಕೆಲ್ಲಾ ಕಾರಣಗಳು ಸರ್ಕಾರಕ್ಕೆ ತಿಳಿಯದ್ದಲ್ಲ.

ಕೆಲ ಕಾಲದ ಹಿಂದೆ ವ್ಯವಸಾಯಗಾರರ ಆರ್ಥಿಕ ಸ್ಥಿತಿಯು ಉತ್ತಮವಾಗಿತ್ತು. ಆಗ್ಯೆ ಅವರು ಸರ್ಕಾರದ ಕಂದಾಯವನ್ನೂ, ಟಕ್ಕಾವಿ ವಗೈರೆ ಸಾಲಗಳನ್ನೂ ಸಕಾಲದಲ್ಲಿ ವಾಪತಿ ಮಾಡುತ್ತಿದ್ದರು. ಆದರೆ ಈಗ ಕಾಲಕ್ಕೆ ಸರಿಯಾಗಿ ಮಳೆಯಾಗದೆ ಬೆಳೆಯು ಕಡಿಮೆಯಾಗಿಯೂ, ಹಾಗೆ ಬೆಳೆದ ದವಸ ಧಾನ್ಯಗಳಿಗೆ ಬೆಲೆಯು ಮತ್ತಷ್ಟೂ ಇಳಿದು ಹೋಗಿಯೂ ವ್ಯವಸಾಯಗಾರರ ಸ್ಥಿತಿಯು ಬಹು ಹೀನಾವಸ್ಥೆಗೆ ತಲಪಿದೆ. ಹೊಟ್ಟೆಗೂ ಬಟ್ಟೆಗೂ ಇಲ್ಲದೇನೇ ಗೋಳಾಡುತ್ತಿರುವಂಥ ರೈತರು ಕಂದಾಯವನ್ನಾಗಲೀ, ಸಾಲಗಳನ್ನಾಗಲೀ ವಾಪತಿ ಮಾಡುವುದು ತಾನೇ ಹೇಗೆ? ವ್ಯವಸಾಯಗಾರರ ಈ ಗೋಳನ್ನು ನೋಡಿಯೇ ಹಿಂದುಸ್ಥಾನದ ಇತರ ಭಾಗಗಳಲ್ಲಿ ಕಂದಾಯ ವಸೂಲಾತಿಗೆ ಕಠಿಣ ವಿಧಾನಗಳನ್ನು ಕೈಕೊಳ್ಳದ ರಿಯಾಯಿತಿಗಳನ್ನು ತೋರಿಸುತ್ತಾ, ಅವರ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಹಲವು ತರಹದ ಅನುಕೂಲತೆಗಳ ಏರ್ಪಾಡುಗಳನ್ನು ಸರ್ಕಾರದವರು ಮಾಡುತ್ತಿರುವರು. ಆದರೆ ನಮ್ಮ ಇಲ್ಲಿಯ ಸರ್ಕಾರದವರು ಕಂದಾಯ ಮತ್ತು ಸರ್ಕಾರಿ ಸಾಲ ವಸೂಲಾತಿಗಾಗಿ ಕೈಕೊಳ್ಳುತ್ತಿರುವ ರೀತಿಗಳು ರೈತರಿಗೂ, ಕಾಫಿ ವ್ಯವಸಾಯಗಾರರಿಗೂ ತುಂಬಾ ಕಷ್ಟಕರವಾಗಿ ಪರಿಣಮಿಸಿವೆ. ಆರ್ಥಿಕ ದುಸ್ಥಿತಿಯ ದೆಸೆಯಿಂದ ಹರಾಜಿನಲ್ಲಿ ಜಮಾನನ್ನು ಕೊಂಡುಕೊಳ್ಳುವವರು ದೊರೆಯದ್ದರಿಂದ ಸರ್ಕಾರದವರೇ ಅಂಥಾ ಜಮಾನನ್ನು ವಹಿಸಿಕೊಳ್ಳುವಂಥಾ ಖಾನೂನನ್ನು ಸರ್ಕಾರದವರು ಕಳೆದ ವರ್ಷ ಮಾಡಿಕೊಂಡರು. ಆಗ್ಯೆ ಜನರ ಪ್ರತಿನಿಧಿಗಳು ಕೌನ್ಸಿಲಿನ ಒಳಗೂ, ದೇಶೀಯರು ಕೌನ್ಸಿಲಿನ ಹೊರಗೂ ಬಹಳವಾಗಿ ವಿರೋಧವನ್ನು ಮಾಡಿದರು. ಉಳಿದ ಎಲ್ಲಾ ವಿಧಾನಗಳನ್ನು ಮುಗಿಸಿದ ಮೇಲೆಯೇ ಜಮಾನನ್ನು ಹರಾಜಿಗೆ ತರಬೇಕೆಂದೂ, ಮೂರು ಸಾರಿ ಹರಾಜು ಮಾಡಿದಲ್ಲು ಕೊಂಡುಕೊಳ್ಳುವವರ್ಯಾರೂ ದೊರೆಯದಿದ್ದರೆ ಮಾತ್ರ ಸರ್ಕಾರದವರು ವಹಿಸಿಕೊಳ್ಳಬಹುದೆಂತಲೂ, ಹಾಗೆ ವಹಿಸಿಕೊಂಡು ಒಂದು ವರ್ಷದೊಳಗೆ ಕಂದಾಯವನ್ನು ಮಾಲೀಕನು ವಾಪತಿ ಮಾಡಿದರೆ ಆ ಜಮಾನನ್ನು ಹಿಡುವಳಿ ಬದಲಾಯಿಸದೆ ಅವನಿಗೆ ಬಿಟ್ಟು ಕೊಡಬೇಕೆಂದೂ ಮೊದಲಾಗಿ ದೇಶದವರು ಎಷ್ಟು ಹೇಳಿಕೊಂಡರೂ ಅಧಿಕಾರಿಗಳು ಅದಕ್ಕೆ ಗಮನಕೊಡಲಿಲ್ಲ. ಅಲ್ಲದ ಈ ಮೊದಲು ಭೂಮಿ ಹರಾಜು ಮಾಡಿ ಒಂದು ತಿಂಗಳ ನಂತರವೇ ಅದನ್ನು ಖಾಯಂ ಮಾಡುತ್ತಿದ್ದರು. ಅದರೊಳಗೆ ಸರ್ಕಾರದ ಬಾಕಿಯನ್ನು ಮಾಲೀಕನು ಸಲ್ಲಿ ಮಾಡಿದಲ್ಲು ಹರಾಜನ್ನು ವಜಮಾಡುತ್ತಿದ್ದರು. ಹೀಗೆ ಮಾಡಬೇಕೆಂಬ ನಿಬಂಧನೆ ಇಲ್ಲದಿದ್ದರೂ ರಿವೆನ್ಯು ಮ್ಯಾನ್ಯುವೆಲಿನಲ್ಲಿ ಹರಾಜಾದ ನಂತರ ಒಂದು ತಿಂಗಳ ವರೆಗೆ ತಕರಾರು ಅರ್ಜಿಗೆ ಸಮಯವಿಡಲಾಗಿದೆ, ನಂತರವೇ ಹರಾಜನ್ನು ಖಾಯಂ ಮಾಡತಕ್ಕದ್ದು. ಆದರೆ ಈಗ ಹರಾಜಾದ ಕೂಡಲೇ ಅದನ್ನು ಖಾಯಂ ಮಾಡುತ್ತಿದ್ದಾರೆಂದು ಪುಕಾರುಗಳು ಕೇಳಿಬರುತ್ತವೆ. ಇದು ನಿಜವಾದರೆ ಸರ್ಕಾರದವರ ಉದ್ದಿಶ್ಯವೇನೆಂದು ಗೊತ್ತಾಗುವುದಿಲ್ಲ. ಇಲ್ಲಿಯ ರಿಯಾಯಿತಿ ಹಿಡುವಳಿಗಳನ್ನು ಆಗುವಷ್ಟು ಕಡಿಮೆ ಮಾಡಬೇಕೆಂದೋ ಅಥವಾ ಬಡ ರೈತರನ್ನು ಜಮಾನು ಹೀನರನ್ನಾಗಿ ಮಾಡಬೇಕೆಂದೋ? ಬರೇ ಕಂದಾಯ ವಸೂಲಾತಿಯೇ ಅಧಿಕಾರಿಗಳ ಉದ್ದಿಶ್ಯವಾದರೆ ಇಷ್ಟು ಕಠಿಣ ರೀತಿಯನ್ನು ಕೈಕೊಳ್ಳದೆ, ಬಾಕಿಯನ್ನು ವಾಪತಿ ಮಾಡುವ ಎಲ್ಲಾ ಅವಕಾಶಗಳನ್ನು ರೈತರಿಗೆ ಕೊಡಬಹುದಲ್ಲವೇ?

ಇನ್ನೊಂದು ಕಡೆ ಕಾಫಿ ಪ್ಲಾಂಟರುಗಳ ಪಾಡು ಅವರ್ಣನೀಯವಾಗಿದೆ ಕಾಫಿಯ ಬೆಳೆಯೂ ಮತ್ತು ಬೆಲೆಯೂ ವಿಶೇಷವಾಗಿ ಕಡಿಮೆಯಾಗಿ ಪ್ಲಾಂಟರುಗಳು ಸರ್ಕಾರದಿಂದ ೫ ವರ್ಷಗಳ ಕಂತಿನಲ್ಲಿ ಪಡಕೊಂಡ ಸಾಲವನ್ನು ಮರುವಾಪತಿ ಮಾಡಲಾರದೆ ಸಂಕಷ್ಟದಲ್ಲಿ ಬಿದ್ದಿರುವರು. ಕಂತುಗಳನ್ನು ಹತ್ತಕ್ಕಾದರೂ ಹೆಚ್ಚಿಸಿಕೊಡಬೇಕೆಂಬ ಅವರ ಕೂಗು ಅರಣ್ಯರೋಧನವಾಯಿತು. ಕಾಫಿ ವ್ಯವಸಾಯದ ಸಹಾಯಕ್ಕೆಂದು ಸರ್ಕಾರದವರು ಕೊಟ್ಟ ಸಾಲವು ಇಂದು ಕಾಫಿ ತೋಟಗಳ ಮಾಲೀಕರಿಗೆ ವಿನಾಶದ ಮಾರಿಯಂತೆ ಪರಿಣಮಿಸುತ್ತಿದೆ. ಪ್ಲಾಂಟರುಗಳು ಸಾಲದ ಕಂತನ್ನು ಕಾಲಕ್ಕೆ ಸರಿಯಾಗಿ ಮರುವಾಪತಿ ಮಾಡಲಾರದವರಾಗಿ ತಮ್ಮ ಸಾವಿರಾರು ರೂಪಾಯಿ ಬೆಲೆ ಬಾಳುವ ತೋಟಗಳನ್ನು ಹರಾಜಿನಲ್ಲಿ ಬಹು ಅಲ್ಪ ಮೊಬಲಗಿಗೆ ಕಳಕೊಳ್ಳುತ್ತಿರುವರು. ಇದರಿಂದಾಗಿ ಕೆಲವರು ನಿರ್ಗತಿಕರಾಗುತ್ತಿದ್ದಾರೆಂದರೆ ಅತಿಶಯೋಕ್ತಿಯಾಗಲಾರದು. ಜೀವನದ ಆಧಾರವಾಗಿದ್ದ ಆಸ್ತಿಯನ್ನು ಕಳಕೊಂಡು, ಹೆಂಡತಿ ಮಕ್ಕಳನ್ನು ಉಪವಾಸ ಬೀಳಿಸುವುದರ ಬದಲು, ತಾನೇ ನಿರಾಹಾರ ವ್ರತವನ್ನು ಕೈಕೊಂಡು ಪ್ರಾಣವನ್ನು ಬಿಡುವುದು ಉಚಿತವೆನಿಸುವಷ್ಟು ಜನರನ್ನು ನಿರಾಶೆಗೆ ಇಳಿಸಿರುವ ಸ್ಥಿತಿಯು ಎಷ್ಟು ಕಠಿಣತರದ್ದಾಗಿರಬೇಕೆಂದು ವಾಚಕ ಮಹಾಶಯರು ಊಹಿಸಿಕೊಳ್ಳಬಹುದು.

ಇದು ಒಬ್ಬಿಬ್ಬರ ಸ್ಥಿತಿಯಲ್ಲ. ಇದನ್ನು ನಾಚಿಕೆಯಿಂದ ಹೇಳಲಾರದೆ, ಮೌನದಲ್ಲಿ ಕಷ್ಟವನ್ನು ಸಹಿಸುತ್ತಿರುವವರು ಹಲವರಿರುವರು. ಈ ಸ್ಥಿತಿಯು ದಿನೇ ದಿನೇ ಹೆಚ್ಚಾಗುತ್ತಿದೆ. ದೇಶದ ಜನರು ಜಮಾನನ್ನು ಕಳಕೊಂಡು, ನಿರ್ಗತಿಕರೂ, ನಿರಾಶಿತರೂ ಆಗುತ್ತಿರುವದು ದೇಶದ ಏಳಿಗೆಗೂ, ಸರ್ಕಾರದ ಭದ್ರತೆಗೂ ಬಹು ಅಪಾಯಕರವೆಂಬುವನ್ನು ದೇಶೀಯರೂ ಹಾಗೂ ಸರ್ಕಾರದವರೂ ಮರೆಯದಿರಲಿ. ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಸರ್ಕಾರದವರು ಕೂಡಲೇ ಕೈಹಚ್ಚಬೇಕು ಇಲ್ಲವಾದರೆ ಸರ್ಕಾರದವರನ್ನು ಎಚ್ಚರಗೊಳಿಸುವ ಕಾರ್ಯವು ದೇಶೀಯರದ್ದಾಗಿದೆ

ಸುಸಮಯ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ.

ಅಮ್ಮತ್ತಿನಾಡು ಬೈರಂಬಾಡ ಗ್ರಾಮದಲ್ಲು ಅಮ್ಮತ್ತಿ-ಮೂರ್ನಾಡು ರಸ್ತೆಯ ಬಳಿ ೫ನೇ ಮೈಲಿನಲ್ಲು ಇರುವ ಕಾವೇರಿ ಕಾಫಿ ತೋಟ. ಒಟ್ಟು ವಿಸ್ತೀರ್ಣ 225 ಏಕರೆ.

ನಾಗಿನ ಗದ್ದೆ	17.64	ಏಕರೆ.
ರಬಸ್ಟ ಕಾಫಿ	11	,,
ಅರಾಬಿಕಾ ಕಾಫಿ	10	,,
ಫಸಲಿಗೆ ಬಂದ ಕಿತ್ತಳೆ	5	,,
3 ವರ್ಷ ಪ್ರಾಯದ ಕಿತ್ತಳೆ	3	,,
ಟೀ ತೋಟ	7	,,

ಬಾಕಿ ಜಾಗ ಕಿತ್ತಳೆ, ಕಾಫಿಗೆ ಉತ್ತಮವಾದದ್ದು. ಹಂಚಿನ ಬಂಗ್ಲೆ, ಲೈನ್ಸ್, ದನವಿನ ಕೊಟ್ಟಿಗೆ, ಇತ್ಯಾದಿ ಒಳ್ಳೆಯ ಉತ್ತಮವಾದ ಆರೋಗ್ಯ ಸ್ಥಳವಲ್ಲಿದೆ. ಹೆಚ್ಚಿನ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿ. ಗೋಪಾಲಸ್ವಾಮಿ ನಾಯುಡು,
ಹೊಸಹಳ್ಳಿ, ಪಾಲಿಬೆಟ್ಟ ಪೋಸ್ಟು,
4-1 ಕೊಡಗು.

For Immediate SALE.

1. One 12½ H. P. Ruston Crude oil Engine in perfect order.

2. One Flour Mill 10" plate.

3. One No. 7 Englebury Rice Huller.

4. One Coffee Mill Complete with accessories.

Price Rs. 2250/-or near offer.

For particulars apply to:-

C. S. Deviaha,
Manager,
Allicutty Estate,
Somwarpet P. O.
4-1 N. Coorg.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ

ಕೊಡಗು ನ್ಯಾಯವಿಧಾಯಕ ಸಭೆಯ ಮೀಟಿಂಗು ಅಕ್ಟೋಬರ್ ತಾ 4ರಲ್ಲಿ ನಡೆಯುವದೆಂದು ವರ್ತಮಾನ

1940ನೇ ಡಿಶಂಬರಿಗೆ ಅಂತ್ಯವಾಗುವ ಕೊಡಗು ನ್ಯಾಯವಿಧಾಯಕ ಸಭೆಯ ಅವಧಿಯನ್ನು 1941ನೇ ಮಾರ್ಚಿ ತಿಂಗಳ ವರೆಗೆ ಮುಂವರಿಸುವ ಬಗ್ಗೆ ಏರ್ಪಾಡುಗಳಾಗುತ್ತಿವೆಯೆಂದು ವಾರ್ತೆ

ಈ ವಾರ ಇಲ್ಲಿ 3 ಇಂಚು 72 ಸಂಟು ಮಳೆಯಾಗಿದೆ ಈಗ ಮೂರು ನಾಲ್ಕು ದಿನಗಳಿಂದ ಮಳೆಯೇ ಇಲ್ಲ ಆಕಾಶವು ಶುಭ್ರವಾಗಿ ಮೋಡರಹಿತವಾಗಿದೆ ಮಳೆಗೆ ಬದಲಾಗಿ ಬಿಸಿಲು ಇಲ್ಲಿಯೇ ಮಳೆಗೆ ಸೊನ್ನೆಯಾಗಿದೆ

ವೀರಾಜಪೇಟೆ.

ಇಲ್ಲಿ ಭತ್ತ ಗಾಡಿಗೆ ರೂ 46 ಕ್ರಯವಿರುವುದಾಗಿ ತಿಳಿಯುತ್ತೇವೆ

ಮಳೆಗಾಲದ ರಜೆಗಾಗಿ ಇಲ್ಲಿಯ ಹೈಸ್ಕೂಲು ತಾ 30-7-'39ರ ಅನಂತರ ಮೂರು ವಾರಗಳ ವರೆಗೆ ಮುಚ್ಚಲ್ಪಟ್ಟಿದೆ

ಕಳೆದ ವಾರ ಇಲ್ಲಿ ನಾಲ್ಕು ದಿನ ಮಟ್ಟಿಗೆ ಮಳೆಯಿತ್ತು ಈ ವಾರ ಮಳೆಯೇ ಇಲ್ಲ ರೈತರು ನಾಟಿ ಕೆಲಸಕ್ಕೆ ಪ್ರಾರಂಭಿಸಿರುತ್ತಾರೆ ಕೆಲವು ಗದ್ದೆಗಳಲ್ಲಿ ನೀರಿಲ್ಲದೆ ಒಣಗಿಹೋಗಿ ರೈತರಲ್ಲಿ ಚಿಂತೆ ಹುಟ್ಟಿದೆ

ಈ ತಾ 15ರಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರ್‌ರವರಾದ ಶ್ರೀಮಾನ್ ರಾವ್ ಚಂಗಪ್ಪನವರು ಉದ್ಯೋಗದಿಂದ ನಿವೃತ್ತರಾದ ಕಾರಣ ವೀರಾಜಪೇಟೆಯ ಕೆಲವು ಸಹಕಾರಿಗಳು ಸೇರಿ ಈ ತಾ 26ರಲ್ಲಿ ಸಾಯಂಕಾಲ 1 30 ಗಂಟೆಗೆ ಇಲ್ಲಿಯ ಮುನ್ಸಿಪಲ್ ಹಾಲಿನಲ್ಲಿ ಬಿನ್ನಹ ಪತ್ರವನ್ನೂ ಮತ್ತು ಟೀಪಾರ್ಟಿಯನ್ನೂ ಕೊಟ್ಟರೆಂದೂ, ಮತ್ತು ಅದೇ ದಿನ ರಾತ್ರೆ 8 ಗಂಟೆಗೆ ಸ್ನೇಹಿತರುಗಳು ಸೇರಿ ಒಂದು ಔತಣವನ್ನು ಕೊಟ್ಟು ಬೀಳ್ಕೊಟ್ಟಿದ್ದಾರೆಂದೂ ತಿಳಿಯಬರುತ್ತದೆ

ಪೊನ್ನಂಪೇಟೆ.

ನಾಟಿ ಕೆಲಸವು ಪ್ರಾರಂಭವಾಗಿದೆ ಕೆಲಸವು ಬಿರುಸಿನಿಂದ ನಡೆಯುವ ಈ ಸಮಯದಲ್ಲಿ ಮಳೆಯ ಅಭಾವದಿಂದಾಗಿ, 'ಎತ್ತು ಒಂದು ಕಡೆಗೆ ಗಾಣ ಮತ್ತೊಂದು ಕಡೆಗೆ' ಎಂಬಂತೆ ಕೆಲಸವು ಬಾಕಿಯಾಗುವ ಸಂಭವ ಕಾಣುತ್ತಿದೆ ಇನ್ನೊಂದು ವಾರದೊಳಗೆ ಮಳೆಯಾಗದೆ ಹೋದರೆ ನಾಟಿ ಕೆಲಸವು ಪೂರ್ತಿ ನಿಂತು ಭೂಮಿಯೆಲ್ಲಾ ಒಣಗಿ ತುಂಬಾ ಅನಾಹುತವಾಗಬಹುದು ಈಗಲೇ ಕೆಲವೆಡೆ ರೈತರಲ್ಲಿ ಹಾಹಾಕಾರವೆದ್ದಿದೆ

ಮಾದಾಪುರ.

ಕೆಲವು ತಿಂಗಳುಗಳ ಹಿಂದೆ ತಾಕೇರಿ ಗ್ರಾಮದಲ್ಲಿ ಈರಪ್ಪನೆಂಬವನು ತನ್ನ ಹೆಂಡತಿಯನ್ನು ಕೊಂದನೆಂಬ ಅಪಾದನೆಯ ಮೇಲೆ ಸಬ್‌ಜಡ್ಜ್ ಕೋರ್ಟಿನಲ್ಲಿ ವಿಚಾರಣಾಗಿ ಅಪರಾಧಿಗೆ ಶುಲ್ಕ ನೀಡಿದ್ದನ್ನು ಪುನಹ ಪೋಲೀಸ ಆಫೀಲ್ ಮಾಡಿ ಅಪರಾಧಿಯನ್ನು ಸೆಷನ್ಸ್ ಕೋರ್ಟಿಗೆ ಹಾಜರುಪಡಿಸಿರುವರಾಗಿಯೂ, ಇದರ ವಿಚಾರಣೆ ಈ ತಾ. 25ರಿಂದ ತಾ 27ರ ವರೆಗೆ ನಡೆಯಿತಾಗಿಯೂ ಜಡ್ಜಿಮೆಂಟು ಬರುವ ತಾ 2ರಲ್ಲಿ ಆಗುವದೆಂದೂ ವರ್ತಮಾನ

ಸಂಪಾಜೆ

ಚೆಂಬು ಗ್ರಾಮದ ಪಾಲೆ ಕವುಡನ ಮಗ ನಾರ್ಕುಲನೆಂಬ 4 ವರ್ಷದ ಹುಡುಗನು ಈ ತಾ 6ರಲ್ಲಿ ಗದ್ದೆಗೆಂದು ಹೋದವನು ದಾರಿ ತಪ್ಪಿ ಪರಾರಿಯಾಗಿದ್ದನು ದೂ, ಇತ್ತಲಾಗಿ ಆತನ ಮೂಳೆಗಳು ಪವರಿಗಾ ಮುರ ಬೆಟ್ಟದಲ್ಲಿ ಈ ತಾ 20ರಲ್ಲಿ ಪತ್ತೆಯಾಗಿದೆಯೆಂದೂ ಪೋಲೀಸರು ತನಿಕೆ ನಡೆಸಿದರಾಗಿಯೂ ವರ್ತಮಾನ

ಹಿಂದೂದೇಶ.

ಬೆಂಗಳೂರಿನಲ್ಲಿ ಒಂದು ಬ್ರಾಡ್ ಕ್ಯಾಸ್ಟಿಂಗ್ ಸ್ಟೇಷನನ್ನು ಸ್ಥಾಪಿಸಲು ಸರ್ಕಾರದವರು ಈ ವರ್ಷದಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುವರು

ರಾಷ್ಟ್ರಪತಿಗಳಾದ ಬಾಬು ರಾಜೇಂದ್ರ ಪ್ರಸಾದರವರು ಖುಲಾಸದಲ್ಲಿರುವ ಒಂಗಿದ ವ್ಯಥಿಗಳ ವಿಚಾರದಲ್ಲಿ ಒಂಗಾಳದ ಪ್ರಧಾನರೊಡನೆ ಮಾತಾಡಲು ಶ್ರೀ ಪಾತ್ರಿಯರನ್ನು ನಾಮಿಸಿರುವರು.

ಆಗಸ್ಟ್ ೯ ದಿನದಲ್ಲಿ ನಡೆಯಬೇಕಾದ ಕಾಂಗ್ರೆಸ್ ಆಚರಣೆಗಳಲ್ಲಿ ಒಂದಾದ ಕಾರ್ಯಕ್ರಮ ಜರಗಿದ್ದು, ಖಾದಿ, ಹಿಂದೀ ಕ್ಲಿಪ್ಪ, ಧ್ವಜ, ವಂದೇ ಮಾತರಂ ಗೀತೆ ಇತ್ಯಾದಿ ಸರ್ದಾರ ವಲ್ಲಭಭಾಯಿ ಪಟೇಲರು ಸಂದೇಶವನ್ನು ಸಂಬೋಧಿಸಿ 'ಈ ಪ್ರಚಾರ ಸಂದೇಶವನ್ನು ಪ್ರತಿ ಜನಗಳೂ ಮುಟ್ಟಿಸಿ' ಎಂದರು

ಶ್ರೀ ವಿನಾಯಕ ರಾವ್ ಎಂಬವರು ತನ್ನ 1300 ಮಂದಿ ಅನುಯಾಯಿಗಳೊಡನೆ ಶೋಲಾಪುರದಲ್ಲಿ ಸತ್ಯಾಗ್ರಹ ಹೂಡಲು ಸಿದ್ಧರಾಗಿದ್ದಾಗಲೇ ಅಂತರ ಜನಾಂಗ ಆರ್ಯನ್ ಲೀಗಿನ ಕಾರ್ಯದರ್ಶಿಯವರು 'ಸ್ವಲ್ಪ ತಾಳಿ' ಎಂದಿರುವರು ಇನ್ನೊಂದು ವಾರದ ವರೆಗೆ ಯಾವ ಜಾತಿಗಳೂ ಹೈದರಾಬಾದಿಗೆ ಹೋಗದಿರಲಿ ಎಂದಿರುವರು ಇವರ ಆರ್ಡರ್ 'ರಾಜ'!

ಪಂಡಿತ ನೆಹರೂ ಹಾಗೂ ಸಿಲೋನಿನ ಮಂತ್ರಿ ಮಂಡಲಗಳೊಳಗೆ ನಡೆದ ಸಂಧಾನದ ಪರಿಣಾಮವಾಗಿ ಅಲ್ಲಿನ ಮಂತ್ರಿ ಮಂಡಲವು ಭಾರತೀಯ ಉದ್ಯೋಗಿಗಳನ್ನು ನಿವೃತ್ತಿಪಡಿಸುವ ಬಿಲ್ಲಿನ ವಿಚಾರವಾಗಿ ಪುನರಾಲೋಚಿಸಲು ನಿರ್ಧರಿಸಿದೆ ಇದಾಗಲೇ ಕೊಡಲ್ಪಟ್ಟ ನೋಟೀಸು ಮುಂತಾದ ಸಕಲ ಆಜ್ಞೆಗಳೂ ನಡೆಯದೆ ತಡೆಯಲ್ಪಡುವವು ನೆಹರುಗಳು ಆಗಲೇ ಮದ್ರಾಸಿಗೆ ಹೊರಟಿರುವರು

ಮೈಸೂರು ಯುವರಾಜರು ಯುರೋಪಿಗೆ ಹೋಗುವ ಸಂದರ್ಭದಲ್ಲಿ ಮದ್ರಾಸಿನ ಶ್ರೀನಿವಾಸನ್ ಎಂಬವರ ಪತ್ನಿಯನ್ನು ಜೊತೆಯಲ್ಲಿ ಕರಕೊಂಡು ಹೋಗುವರೆಂಬ ವಾರ್ತೆ ಕೇಳಿ ಶ್ರೀನಿವಾಸನ್‌ರವರು ಹಾಗೆ ತನ್ನ ಪತ್ನಿಯನ್ನು ಕರಕೊಂಡು ಹೋಗಕೂಡದೆಂದೂ, ಮತ್ತು ತನ್ನ ಮತ್ತು ಪತ್ನಿಯ ಸಂಬಂಧವನ್ನು ಸ್ಥಾಪಿಸಿ ಕೊಡಬೇಕೆಂದೂ ಅರ್ಜಿ ಹಾಕಿಕೊಂಡ ಮೇರೆ ಕೋರ್ಟಿನ ತೀರ್ಮಾನವಾಗಿ ಶ್ರೀನಿವಾಸನರ ಪತ್ನಿಯು ಯುವರಾಜರೊಡನೆ ಯೂರೋಪಿಗೆ ಹೋಗುವದು ಬಾಕಿಯಾಗಿರುವದಂತೆ

ಮಹಾತ್ಮಾ ಗಾಂಧಿಯವರು ಕಳೆದ ಒಂದು ವಾರದಿಂದಲೂ ಗಡಿನ ಡಿಸಲ್ಲಿರುವರಷ್ಟೆ ಕಳೆದ ವಾರ ಅವರು ಆ ಪ್ರಾಂತದ ಅನೇಕ ಮಂದಿ ಪ್ರಜಾ ಮುಖಂಡರುಗಳನ್ನೂ, ಸರ್ಕಾರದ ಮುಖ್ಯಾಧಿಕಾರಿಗಳನ್ನೂ ಭೇಟಿ ಮಾಡಿ ವಿಮರ್ಶ ಕಾಲಗಳ

ವರೆಗೆ ಅವರೊಡನೆ ಸಂಭಾಷಣೆಗಳನ್ನು ನಡಿಸಿದರು ಅಲ್ಲಿನ ಮಂತ್ರಿಗಳೊಡನೆ ಸರ್ಕಾರದ ಆಂತರಿಕ ವಿಷಯಗಳನ್ನು ಚರ್ಚಿಸಿದರೆಂದು ತಿಳಿಯುವುದು ಮಹಾತ್ಮಾಜಿಯವರು ಶ್ರೀನಗರಕ್ಕೆ ಪ್ರಯಾಣ ಮಾಡಬೇಕೆಂದಿದ್ದರು ಕಾರಣಾಂತರಗಳಿಂದ ತಮ್ಮ ಆ ಪ್ರವಾಸವನ್ನು ನಿಲ್ಲಿಸಿಬಿಟ್ಟಿರುತ್ತಾರೆ

ಕರಾಚಿಯ ಪೌರ ಸಭೆಯವರು ತಮ್ಮ ಸರಹದ್ದಿನೊಳಗಿರುವ ಪ್ರತಿಯೊಂದು ಹಿಂದೂ ದೇವಾಲಯದ ಹರಿಜನರಿಗೆ ಆ ಹಾರ್ದ, ಸನ್ನಿಯಮಗಳನ್ನು ಕೊಡಲು ತೀರ ಸ್ಕರಿಸಲೂಡದೆಂದು ಠರಾವು ಮಾಡಿರುತ್ತಾರೆ ಆ ರೀತಿ ಯಾರಾದರೂ ನಿಮ್ನ ಕುಲಸ್ಥರಿಗೆ [illegible] ಸಹಾಯ [illegible] ಅವರು ಆ ಕೂಡಲೇ [illegible] ಪಾಲ್ಪಡುವರ ರಹದಾರಿಯನ್ನು ರದ್ದುಪಡಿಸುವರು ಆ ನಗರದ ಪೌರಸಭೆಯ ಸದಸ್ಯರೊಬ್ಬರಿಗೆ ಹಿಂದೂ ದೇವಾಲಯವೊಂದಕ್ಕೆ ಪ್ರವೇಶಿಸಲು ಅವಕಾಶ ದೊರಕುವ್ರದೇ ಈ ಹೊಸ ನಿಯಮಕ್ಕೆ ಕಾರಣವಾಯಿತೆಂದು ಹೇಳಲಾಗಿದೆ

ಇಂಡಿಯಾ ಸರಕಾರದ ಹೊಸ ಇನ್‌ಕಮ್‌ಟ್ಯಾಕ್ಸ್ ನಿಬಂಧನೆಯ ಪ್ರಕಾರ ಐ ಸಿ. ಎಸ್ ಉದ್ಯೋಗಿಗಳು ಹೆಚ್ಚು ಇನ್‌ಕಮ್‌ಟ್ಯಾಕ್ಸು ಕೊಡಬೇಕಾಗಿ ಬರುವದರಿಂದ ಅವರೆಲ್ಲರೂ ಆ ತೆರಿಗೆಯನ್ನು ತಗ್ಗಿಸಲು ಕೋರಿರುವರು

ಅಖಿಲ ಹಿಂದೂಸ್ಥಾನದ ಕಾಂಗ್ರೆಸು ಸಮಿತಿಯವರ ನಿರ್ಣಯದ ವಿಷಯದಲ್ಲಿ ಅಸಮಾಧಾನಪಟ್ಟು ಪ್ರತಿಭಟನಾ ಸಭೆಗಳನ್ನು ನಡೆಸಿದ ಸುಭಾಷ ಚಂದ್ರಬೋಸರವರಿಗೂ, ಬಂಗಾಳದ ಇತರ ಕಾಂಗ್ರೆಸು ನಾಯಕರಿಗೂ ಕಾಂಗ್ರೆಸು ಅಧ್ಯಕ್ಷರಾದ ಡಾ ರಾಜೇಂದ್ರ ಪ್ರಸಾದರವರು ಕಾಗದಗಳನ್ನು ಬರೆದು ಕಾಂಗ್ರೆಸಿನ ವಿಷಯದಲ್ಲಿ ನಿಮ್ಮ ಮನೋಭಾವನೆಗಳೇನೆಂಬದನ್ನು ವಿವರಪಡಿಸಿರೆಂದು ಪ್ರಾರ್ಥಿಸಿರುವದಾಗಿ ತಿಳಿಯುವುದು.

ಅಂತರ ರಾಷ್ಟ್ರೀಯ ಆರ್ಯನ್ ಲೀಗ್ ಸಂಸ್ಥೆಯವರು ಕಳೆದ ವಾರ ದೇಹಲಿ ನಗರದಲ್ಲಿ ಸಭೆ ನಡಿಸಿ ಹೈದರಾಬಾದಿನ ಪರಿಸ್ಥಿತಿಯನ್ನು ಕೂಲಂಕಷವಾಗಿ ವಿಮರ್ಶಿಸಿದರು ಹೈದರಾಬಾದಿನಲ್ಲಿ ಆರ್ಯ ಸಮಾಜದವರಿಗಿರುವ ಕುಂದುಕೊರತೆಗಳನ್ನು ಸಾರ್ವಜನಿಕರು ಸರ್ಕಾರದವರಿಗೆ ಮನವರಿಕೆ ತಿಳಿಯಪಡಿಸುವುದಕ್ಕಾಗಿ ಕೆಲವು ಮಂದಿ ಪ್ರತಿನಿಧಿಗಳನ್ನು ಇಂಗ್ಲೆಂಡಿಗೆ ಕಳುಹಿಸಿಕೊಡಬೇಕೆಂದು ನಿಶ್ಚಯಿಸಿರುತ್ತಾರೆ ಇತ್ತಲಾಗಿ ಹೈದರಾಬಾದಿನ ಸರ್ಕಾರದವರು ರಾಜಕೀಯ ಸುಧಾರಣೆಗಳನ್ನು ಪ್ರಕಟಪಡಿಸಿರುವದರಿಂದ ಅಲ್ಲಿ ಪ್ರಸ್ತುತ ಪರಿಸ್ಥಿತಿಯನ್ನೂ, ಸುಧಾರಣೆಗಳನ್ನೂ ವಿಮರ್ಶಿಸುವುದಕ್ಕಾಗಿ ಆರ್ಯ ಸಮಾಜದ ಸ್ವಯಂ ಸೇವಕರು ಹೈದರಾಬಾದಿನಲ್ಲಿ ಸತ್ಯಾಗ್ರಹವನ್ನು ಒಂದು ವಾರದ ವರೆಗೆ ನಿಲ್ಲಿಸಬೇಕೆಂದು ತೀರ್ಮಾನಿಸಿರುತ್ತಾರೆ

ವಿದೇಶ

ಜರ್ಮನಿಯ ನಾಜಿ ನಾಯಕ ಹಿಟ್ಲರನಿಗೆ ಅವನ ಭಕ್ತರು ಚಿನ್ನದ ಒಂದು ಕಿರೀಟವನ್ನು ಕೊಡಲು ಹಣವನ್ನು ಕೂಡ ಹಾಕುತ್ತಿರುವದಾಗಿಯೂ ಜರ್ಮನ್ 'ಕ್ರಿಟಿಕ' ಪತ್ರಿಕೆಯು ಆ ಕಿರೀಟದ ಚಿತ್ರವನ್ನು ಪ್ರಕಟಿಸುವುದಾಗಿಯೂ ತಿಳಿಯಬಂದಿದೆ

ಬ್ರಿಟಿಷ್ ಸರ್ಕಾರದವರು ಅಮೇರಿಕಾ ದೇಶದವರಿಂದ ತಮಗೆ ಬೇಕಾದ ವಿಮಾನಗಳೆಲ್ಲವನ್ನೂ ಮಾಡಿಸಿ ತರಿಸಿಕೊಂಡಿರುತ್ತಾರೆ ಆದರೆ ಫ್ರಾನ್ಸ್ ದೇಶದವರಿಗೆ ಅವರು ಆಪೇಕ್ಷಿಸಿರುವುದರಲ್ಲಿ ಸುಮಾರು ಕಾಲು ಭಾಗದಷ್ಟು ಮಾತ್ರ ದೊರಕಿದೆಯೆಂದು ತಿಳಿಯುವುದು ಕಳೆದ ಆರು ತಿಂಗಳಿಂದ ಬ್ರಿಟಿಷ ಸರ್ಕಾರದವರು ಸುಮಾರು 1,15.00,000 ಡಾಲರುಗಳಷ್ಟು ಯುದ್ಧೋಪಕರಣಗಳನ್ನೂ, ಫ್ರೆಂಚ್ ಸರ್ಕಾರದವರು 90,00,000 ಡಾಲರುಗಳಷ್ಟು ಸಾಮಾಗ್ರಿಗಳನ್ನೂ ಅಮೇರಿಕಾದವರಿಂದ ಕೊಂಡಿರುವದಾಗಿ ಪ್ರಕಟವಾಗಿದೆ

ಪ್ರಾಂತೀಕ ಸ್ವಾಯತ್ತತೆ ಅಥವಾ ಪ್ರಾಂತೀಕ ವೈರತ್ವ.

ಲೇ.—ಎಂ. ಕೆ. ಗಾಂಧಿ. (ಹರಿಜನ ತಾ. 22-7-1939)

“ಪ್ರಾಂತೀಕ ಸ್ವಾಯತ್ತತೆಯು ಜಾರಿಯಲ್ಲಿ ಬಂದ ಮೇಲೆ ಪ್ರಾಂತಗಳೊಳಗೆ ದೊಡ್ಡ ಹಾಗೂ ಕ್ಷುಲ್ಲಕ ಕಾರಣಗಳಿಗಾಗಿ ಬೆಳೆದಿರುವ ವೈರತ್ವ ಮತ್ತು ದ್ವೇಷಗಳನ್ನು ನೋಡಿದರೆ ಒಬ್ಬನಿಗೆ ವ್ಯಸನವಾಗದಿರದು. ಪ್ರಾಂತೀಯ ಸ್ವಾಯತ್ತತೆಯು ನಮಗೆ ಶುಭದಾಯಕವಾಗಿ ಪರಿಣಮಿಸುವದರ ಬದಲು ಹಾನಿಗಳನ್ನು ತರುತ್ತಿದೆ. ಇದರಿಂದ ರಾಷ್ಟ್ರೀಯತಾ ಚೈತನ್ಯವು ಅಭಿವೃದ್ಧಿಗೊಳ್ಳುವ ಬದಲು ಪ್ರಾಂತೀಯತಾ ಅಸಹಕಾರವು ತಲೆದೋರಿದೆ. ಪ್ರಾಂತೀಕ ಸ್ವಾಯತ್ತತೆಯ ಮೊದಲು ‘ನನ್ನ ದೇಶ’ ಎಂಬ ವಿಶಾಲ ದೃಷ್ಟಿಯಿಂದ ಸಂಭೋಧಿಸುತ್ತಿದ್ದವರು ಇಂದು ‘ನನ್ನ ಪ್ರಾಂತ’ವೆಂಬ ಸಂಕುಚಿತ ಭಾವವನ್ನು ತಳೆದಿರುವರು. ಆದ್ದರಿಂದ ದೇಶದ ಜನತೆಯಲ್ಲಿ ಈ ಸಂಕುಚಿತ ಭಾವವು ಬೇರೂರುವ ಮೊದಲೇ ಜನತೆಯನ್ನು ಎಚ್ಚರಿಸಿ ಸತ್ಪಥದಲ್ಲಿ ಹಚ್ಚುವದು ಕರ್ತವ್ಯವಲ್ಲವೇ?” ಎಂಬ ಅರ್ಥದ ಒಂದು ಪತ್ರವನ್ನು ಶ್ರೀ ಜಮ್‌ಶೇದ್‌ಜೀ ಮೆಹತಾರವರು ನನಗೆ ಬರೆದಿರುವರು.

ಈ ಕಾಗದವು ಗುಜರಾತಿ ಭಾಷೆಯಲ್ಲಿದೆ. ಅದರ ಸ್ವಾಭಾವಿಕ ಸುಲಭಾರ್ಥವನ್ನು ಮೇಲೆ ಕೊಟ್ಟಿರುವೆನು. ಜಮ್‌ಶೆದ್‌ಜೀಯವರ ಮೇಲ್ಕಂಡ ಉದ್ಗಾರದಲ್ಲಿ ತಿರುಳಿದೆ. ಪ್ರಾಂತಗಳು ದೊಡ್ಡ ದೊಡ್ಡವಾಗಿದ್ದರೂ ಸಹ ಅವುಗಳೊಳಗ ಭಿನ್ನಾಭಿಪ್ರಾಯ ಇಲ್ಲದಿರುವಾಗ ಅವುಗಳನ್ನು ಪ್ರತ್ಯೇಕ ಪ್ರತ್ಯೇಕ ಇರಿಸುವದರಲ್ಲಿ ಅರ್ಥವಿಲ್ಲ. ನಮ್ಮ ಪ್ರಾಂತೀಯತಾ ಭಾವನೆಯು ಸಂಕುಚಿತ ಯಾ ಅಸಹಕಾರದಿಂದ ಕೂಡಿರಬಾರದು. ಈ ಪ್ರಾಂತಗಳು ರಾಷ್ಟ್ರದ ಭಾಗಗಳಾಗಿರುವದರಿಂದ ಅವುಗಳ ವರ್ತನೆಯು ರಾಷ್ಟ್ರದ ಹಿತಸಾಧನೆಯಿಂದ ನಡೆಯಬೇಕು. ಇವುಗಳನ್ನು ದೊಡ್ಡ ನದಿಯ ಉಪ ನದಿಗಳಾಗಿ ಹೋಲಿಸಬಹುದು. ಉಪ ನದಿಗಳಾದರೂ ದೊಡ್ಡ ನದಿಯ ಪ್ರಾಮುಖ್ಯತೆಗೆ ಹೇಗೆ ಕಾರಣಗಳೋ ಹಾಗೆಯೇ ರಾಷ್ಟ್ರದ ಘನತೆಗೆ ಯಾ ಧ್ಯೇಯಸಾಫಲ್ಯಕ್ಕೆ ಪ್ರಾಂತಗಳಾದರೂ ಸಹಕರಿಸಿಯೇ ತೀರಬೇಕು. ಪ್ರಾಂತಗಳು ಮಾಡುವ ಪ್ರತಿಯೊಂದು ಕಾರ್ಯವೂ ರಾಷ್ಟ್ರದ ಪ್ರಗತಿ, ಪ್ರತಿಷ್ಠೆಯ ದೃಷ್ಟಿಯಿಂದಲೇ ಆಗಬೇಕು. ಕವಿ ರವೀಂದ್ರನಾಥ ಠಾಗೋರರವರ ಖ್ಯಾತಿಯು ಬಂಗಾಳವನ್ನು ಶೋಭಿಸುವದಾದರೆ ಅದು ಭಾರತವನ್ನೂ ಶೋಭಿಸುವದು. ಅವರ ಖ್ಯಾತಿಯು ಇಡೀ ಭಾರತದಲ್ಲಿ ಹಬ್ಬಿಲ್ಲವೇನು? ದಾದಭಾಯಿ ನವರೋಜೀಯವರು ಕೇವಲ ಪಾರ್ಸಿ ಜನಾಂಗಕ್ಕಾಗಿ ಜೀವಿಸಲಿಲ್ಲ ಕೇವಲ ಬೊಂಬಾಯಿ ಪ್ರಾಂತಕ್ಕಾಗಿ ಜೀವಿಸಲಿಲ್ಲ, ಇಡೀ ಭಾರತವರ್ಷಕ್ಕಾಗಿ ಜೀವಿಸಿದವರು. ಇಂಡಿಯಾವು ತನ್ನ ವ್ಯಕ್ತಿತ್ವವನ್ನು ಕಳಕೊಂಡು ಭಿನ್ನ ಭಿನ್ನವಾಗಿ ವಿಂಗಡಿಸಲ್ಪಟ್ಟು ಆ ಭಾಗಗಳು ತಮ್ಮೊಳಗೆ ಯುದ್ಧ ಮಾಡಿಕೊಂಡು ಒಂದನ್ನೊಂದು ಲೂಟಿ ಮಾಡುವಂತಾಗುವ ವರೆಗೆ, ಪ್ರಾಂತ ಪ್ರಾಂತಗಳೊಳಗಿನ ವೈರತ್ವ, ಅಸಹಕಾರ ಇವಕ್ಕೆ ಸ್ಥಳವಿಲ್ಲ. ಇಂಥಾ ಒಂದು ಆಪತ್ತು ಭಾರತಕ್ಕೆ ಬಂದುದಾದರೆ ಕಾಂಗ್ರೆಸು ಈ ವರೆಗೆ ಜೀವಿಸಿದ್ದುದು ನಿರರ್ಥಕವೇ ಸರಿ. ಭಾರತವನ್ನು ಪರಸ್ಪರ ಸಂಬಂಧವಿಲ್ಲದ ಪ್ರಾಂತಗಳನ್ನಾಗಿ ವಿಂಗಡಿಸುವ ಎಲ್ಲಾ ಪ್ರಯತ್ನಗಳು ಖಂಡಿಸಲ್ಪಡಬೇಕು. ಇಡೀ ಭಾರತವು ಸ್ವತಂತ್ರ ಜನಾಂಗವಾಗಿ ಜಗತ್ತಿನ ಮುನ್ನಡೆಗೆ ತನ್ನ ಪಾಲಿನ ಕರ್ತವ್ಯವನ್ನು ಸಲ್ಲಿಸಿ ಮೆರೆಯುವದೇ ಅದರ ಕರ್ಮಗತಿಯಾಗಿರುವದು. ನಮ್ಮ ದೇಶ ಪ್ರೇಮವು ಯಾವ ವಿಧದಿಂದಲೂ ಸಂಕುಚಿತವಾಗಿರಲಿಕ್ಕಾಗದು. ಬೇರೆ ಜನಾಂಗಗಳ ಮೇಲೆ ಅಧಿಕಾರ ನಡಸಿ ನಾವು ಅಭಿವೃದ್ಧಿಯಾಗಬೇಕೆಂಬ ಇಚ್ಛೆಯು ಭಾರತೀಯರಾದ ನಮಗಿಲ್ಲ. ಭಾರತದ ನಾಗರೀಕರಾಗಿರುವದು ಜಗತ್ತಿನ ಯಾವ ರಾಷ್ಟ್ರದ ನಾಗರೀಕರಿಗೂ ಹಿಂದಿಲ್ಲವೆಂದು ಹೇಳುವ ಒಂದು ಕಾಲವು ಬರಬೇಕಿದೆ. ಆದರೆ ಸ್ವತಂತ್ರ ಭಾರತದ ನಾಗರೀಕರಾಗಿ ಮೆರೆಯುವ ವಿಧಾನವು ನಮಗೆ ತಿಳಿಯದ ಪಕ್ಷ ಆ ದಿನವು ಬರಲಾರದು. ಹಾನಿಕಾರಕ ಪ್ರಾಂತೀಯತಾ ಸಂಕುಚಿತ ಭಾವನೆಯು ಇರುವ ತನಕ ನಾವು ಆ ವಿಧಾನವನ್ನು ಕಲಿಯಲಾರೆವು. ನಿಜವಾದ ರಾಷ್ಟ್ರೀಯ ಜೀವನವು ವ್ಯಕ್ತಿಯಿಂದ ಪ್ರಾರಂಭವಾಗಬೇಕು. ನಾವು ಶಕ್ತಿಯುತರೂ, ಸ್ವತಂತ್ರರೂ ಆಗಬೇಕು. ಇದರಿಂದ ನಮ್ಮ ನೆರೆಹೊರೆಯವರೂ ಲಾಭಪಡೆಯುವಂತಾಗಬೇಕು. ನಾವು ನಮ್ಮ ವ್ಯಕ್ತಿತ್ವದ ಮಟ್ಟಿಗೆ ಯಾ ಪ್ರಾಂತಗಳ ಮಟ್ಟಿಗೆ ಮಾತೃಭೂಮಿಯ ಸ್ವಾತಂತ್ರ್ಯವೇದಿಕೆಯಲ್ಲಿ ನಮ್ಮ ಸತ್ಪ್ರಯತ್ನಗಳನ್ನು ಅರ್ಪಿಸಬೇಕು.

ಪರದೇಶಗಳ ಪರಿಸ್ಥಿತಿ.

(5 ನೇ ಪುಟದಿಂದ ಸಾಗಿದ್ದು.)

ಲ್ಲಾದರೂ ಈ ಸಂಧಾನ ಯಾವಾಗ ಆದೀತು? ಇದರ ಪರಿಣಾಮವೇನಾದೀತು? ಎಂಬುದೇ ಸಮಸ್ಯೆಯಾಗಿದೆ. ಒಂದೆಡೆ ಜರ್ಮನಿ ಸರ್ವಾಧಿಕಾರಿ ಸರ್ಕಾರದ ಧೋರಣೆ, ಮಧ್ಯ ಯೂರೋಪದಲ್ಲಿ ಡೇನ್ಜಿಗ್ ತನಗೆ ಬೇಕೆಂದು ಕೂಗುತ್ತಾ ದಕ್ಷಿಣಕ್ಕೆ ಕೈಚಾಚುತ್ತಿರುವ ಅವರ ವರ್ತನೆ. ಒಟ್ಟಿನಲ್ಲಿ ಮೌನ ವ್ರತವನ್ನು ತಾಳಿ ಕಾರ್ಯಸಾಧಿಸುವ ಯೋಜನೆ ಇದೆಲ್ಲಾ ಬ್ರಿಟನಿಗೆ ಬಿಡಿಸಲಾಗದ ಸಮಸ್ಯೆಯಾಗಿದೆ. ಇದಕ್ಕೆ ಸರಿಯಾಗಿ ರಷ್ಯಾ ಸಂಧಾನವು ಇನ್ನೂ ಮುಗಿಯದ ತಿಂಗಳುಗಳೇ ಉರುಳಿದರೂ ಯಾವದೊಂದೂ ತೀರ್ಮಾನವಿಲ್ಲದ ಉಳಿದಿರುವದು ಬ್ರಿಟನಿನ ಎದೆಗೆ ಇನ್ನೊಂದು ಶೂಲವಾಗಿದೆ. ರಷ್ಯಾ-ಬ್ರಿಟನ್ ಒಪ್ಪಂದವಾದರೂ ಮೂರು ರಾಷ್ಟ್ರಗಳ ಸಹಕಾರದಿಂದ ನಡೆಯಬೇಕಾಗಿದೆ. ಫ್ರಾನ್ಸು ಯಾವ ಪಾತ್ರವನ್ನು ವಹಿಸದೆ ಹಿಂದೆ ನಿಂತು ಬ್ರಿಟನು ಮಾಡಿದ ಕಾರ್ಯಗಳಿಗೆಲ್ಲಾ ತಲೆಬಾಗಿಸುತ್ತಿರುವಾಗ ಸಹ ರಷ್ಯಾ-ಬ್ರಿಟನಿನ ಒಪ್ಪಂದ, ಕಷ್ಟಪಂದ ಮೇಲೆ ಫ್ರಾನ್ಸೂ ತನ್ನ ವ್ಯಕ್ತಿತ್ವವನ್ನು ಮಾರಿಕೊಳ್ಳದೆ ವರ್ತಿಸುತ್ತಿದ್ದರೆ ಈ ಸಂಧಾನದ ಕಾರ್ಯವು ಯಾವ ಅಂತಸ್ತಿಗೆ ತಲುಪುತ್ತಿತ್ತೆಂದು ಹೇಳಲಿಕ್ಕಾಗದು.

ಈ ಮಧ್ಯೆ ಬ್ರಿಟನಿಗೆ ಒಂದು ತಲೆನೋವು ಹಿಡಿದಿದೆ. ಬಾಲ್ಟಿಕ್ ರಾಷ್ಟ್ರಗಳ ಮೇಲೆ ಹಿಟ್ಲರನು ಇಂದೋ, ನಾಳೆಯೋ ಕೈ ಮಾಡುವದು ಖಂಡಿತ. ಆದ್ದರಿಂದ ರಷ್ಯಾ ಬ್ರಿಟನು ಸಂಧಾನವಾದರೆ ಮೊದಲು ಬ್ರಿಟನು ಫ್ರಾನ್ಸು ಈ ಪ್ರಾಂತಕ್ಕೆ ರಕ್ಷಾ ದೂಡನೆ ಸಹಕರಿಸಿ ಸಹಾಯ ನೀಡಬೇಕು. ಮೊದಲಾಗಿ ತಾವು ರಷ್ಯಾಕ್ಕೆ ಸಹಾಯ ಮಾಡಬೇಕಲ್ಲಾ ಎಂಬ ಭಯ ಬ್ರಿಟನಿಗೆ ಬಂದದೆ. ರಷ್ಯಾಕ್ಕೆ ಬ್ರಿಟನು ಸಹಾಯ ಮಾಡದಿದ್ದರೆ ರಷ್ಯಾವಾದರೂ ತಾಟಸ್ಥ್ಯ ಭಾವವನ್ನು ತಳೆದು ಬಿಡುವುದರಿಂದ ಮಧ್ಯ ಯೂರೋಪದಲ್ಲಿ ಹಿಟ್ಲರನ ಕೈಮೇಲಾಗಿ ಆತನೂ ಮೇರೆ ಮೀರಿ ಬೆಳೆಯಲು ಆಸ್ಪದವಾಗುವದು. ಇದರಿಂದ ಆತನು ಒಂದು ಕಾಲಕ್ಕಾದರೂ ಬ್ರಿಟಿಷ್ ಸಾಮ್ರಾಜ್ಯವನ್ನು ನಡುಗಿಸದೆ ಇರಲಾರ. ಆದ್ದರಿಂದ ಜರ್ಮನಿಯ ಮುನ್ನಡೆಯು ಬ್ರಿಟನಿಗೆ ತುಂಬಾ ಖೇದವನ್ನುಂಟುಮಾಡಿದೆ.

ರಷ್ಯಾದ ನೀತಿ.

ಜಗತ್ತಿನ ರಾಷ್ಟ್ರಗಳು ರಷ್ಯಾವನ್ನು ಕಡೆಗಣ್ಣಿನಿಂದ ಸಹ ನೋಡದ ಒಂದು ಕಾಲವಿತ್ತು. ಸನಾತನಿಗಳು ಹರಿಜನರನ್ನು ಕಂಡಂತೆ ಜಗತ್ತಿನ ಪ್ರಭಲ ರಾಷ್ಟ್ರಗಳಾದ ಬ್ರಿಟನು ಮೊದಲಾದವು ಅದನ್ನು ತಮ್ಮ ಯಾವುದೊಂದು ಪ್ರಾಮುಖ್ಯ ಸಂಭಾಷಣಕ್ಕಾಗಲೀ, ಯಾ ಯಾವ ವಿಚಾರದ ವಿವೇಚನೆಗಾಗಲೀ ಯೋಚಿಸುತ್ತಲೇ ಇರಲಿಲ್ಲ. ಉನ್ನತಿಯ ಅತ್ಯುಚ್ಚ ಶಿಖರದಲ್ಲಿದ್ದ ಬ್ರಿಟನಿಗೆ ಜಗತ್ತಿನಲ್ಲಿ ರಷ್ಯಾವೆಂಬ ಒಂದು ರಾಷ್ಟ್ರವಿದೆಯೆಂಬ ಯೋಚನೆಯೇ ಇರಲಿಲ್ಲ. ಆದರೆ ರಷ್ಯಾವು ತನ್ನೊಳಗೇ ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಂಡು ಪ್ರಜಾ ಸತ್ತಾತ್ಮಕ ರಾಜ್ಯಕ್ರಮವನ್ನು (ಬಹಿರಂಗವಾಗಿ ಪ್ರಜಾಪ್ರಭುತ್ವ ಸರಕಾರವೆಂದು ಘೋಷಿಸುವ ಈ ಪ್ರಭಲ ರಾಷ್ಟ್ರಗಳಿಗೆ ಮಾದರಿ ರೀತಿಯಲ್ಲಿ) ಸ್ಥಾಪಿಸಿ ಇಂದು ಅಜೇಯವಾಗಿ ನಿಂತಿದೆ. ಬ್ರಿಟನೇ ಮೊದಲಾದ ರಾಷ್ಟ್ರಗಳ ಕಣ್ಣು ಈಗ ತೆರೆದಿದೆ. ರಷ್ಯಾವಾದರೂ ತಾನು ಮುಂದಿನಿಂದ ಅನುಸರಿಸುತ್ತಾ ಬಂದ ತಾಟಸ್ಥ್ಯ ಭಾವನೆಯೇ ಹಿತವೆಂದು ಮನಗಂಡಿದೆ. ಆದರೆ ಇಂದಿನ ರಾಜಕೀಯ ಸ್ಥಿತಿಯು ಬ್ರಿಟಿಷರನ್ನು ರಷ್ಯಾದ ಕಾಲಿಗೆ ಬೀಳುವಂತೆ ಮಾಡಿದೆ. ಬ್ರಿಟನಿನ ಕೌಟಿಲ್ಯದ ಕಟುಫಲವನ್ನುಂಡ ರಷ್ಯಾವು ಇಂದು ಈ ಬಾಹ್ಯಾಡಂಬರದ ಪ್ರಜಾ ರಾಷ್ಟ್ರಗಳನ್ನು ಹೇಗೆ ನಂಬೀತು?

ಜರ್ಮನಿಯ ರೀತಿ.

ಜರ್ಮನಿಯು ಹೇಗೆ ತನ್ನ ವಿಚಿತ್ರ ವೈವಿಧ್ಯ ಕೈಗಾರಿಕೆಗಳಿಗೆ ಹೆಸರುವಾಸಿಯಾಗಿದೆಯೋ ಅಲ್ಲದೆ ಹೇಗೆ ಇತರ ರಾಷ್ಟ್ರಗಳು ಅದರ ಅಂಧಾನುಕರಣೆ ಮಾಡುತ್ತಿರುವವೋ ಅಂತೆಯೇ ಇಂದು ರಾಜಕೀಯ ರಂಗದಲ್ಲಿ ವೈವಿಧ್ಯಗಳಾಗುತ್ತಿವೆ. ಜರ್ಮನಿಯ ಭಾಗ್ಯವಿಧಾತ ಹಿಟ್ಲರನು ಇತರರ ಅನುಕರಣೆಯಲ್ಲ. ತನ್ನ ಕಾರ್ಯಕ್ರಮಗಳನ್ನು ಇತರರು ಅನುಕರಿಸುವಂತೆ ಮಾಡುವವನಾತ. ಈಗ ಆತನು ಹೊಸ ರೀತಿಯ ಕಾರ್ಯಕ್ರಮಗಳನ್ನು ಜರ್ಮನಿಯಲ್ಲಿ ಪ್ರಾರಂಭಿಸಿರುವನು. ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡುವೆನು. ಬೇಸಿಗೆ ಕಾಲದಲ್ಲಿ ವಿದ್ಯಾಲಯಗಳಿಗೆ ರಜೆ ಕೊಡುವದು ಎಲ್ಲಿಯೂ ವಾಡಿಕೆ. ಜರ್ಮನಿಯ ವಿಶ್ವವಿದ್ಯಾಲಯದಲ್ಲಿರುವ 30 ಸಾವಿರ ವಿದ್ಯಾರ್ಥಿಗಳು ಈ ಬೇಸಿಗೆ ರಜಾ ಸಮಯದಲ್ಲಿ ದೇಶದ ನಾನಾಭಾಗಗಳಿಗೆ ತಿರುಗಿ ರೈತರ ಬೆಳೆಯ ಕಟಾವಿಗೆ ಸಹಾಯ ಕೊಡಬೇಕು. ಕೈಗಾರಿಕೆ ಹಾಗೂ ಮಿಲಿಟರಿ ಕಾರ್ಯಕ್ರಮಗಳಿಂದ ಜರ್ಮನಿಯಲ್ಲಿ ವ್ಯವಸಾಯ ಮಾಡಲು ಗಂಡಸರಿಗೆ ಅಭಾವವಾಗಿದೆಯೆಂದು ಮೊದಲೊಮ್ಮೆ ಬರೆದಿದ್ದೆವು. ವಿದ್ಯಾರ್ಥಿಯರ ಸಹಾಯದಿಂದ ಈಗ ವ್ಯವಸಾಯವು ಸುಸೂತ್ರವಾಗಿ ನಡೆಯುವಂತಾಯಿತು. ಕೈಗಾರಿಕೆಯು ಶಕ್ತಿ ಮೀರಿ ಬೆಳೆಯಲು ಅನುವಾಯಿತು. ಟ್ರಾಮ್‌ಕಾರಿನ ಕಂಡಕ್ಟರು ಮೊದಲಾದ ಸ್ಥಳಗಳಿಗೆ ಹಿಟ್ಲರನು ಹೆಂಗಸರನ್ನೇ ನೇಮಿಸುತ್ತಿರುವನು. ಇದೀಗ ಜರ್ಮನಿ ಹೆಂಗಸರು ಮುಂದೆ ಬಂದು ವ್ಯವಸಾಯ, ಕೈಗಾರಿಕಾ ವಿವಿಧ ಕ್ಷೇತ್ರಗಳಲ್ಲಿ ಕಾರ್ಯಮಾಡಿ ಗಂಡಸರ ಸಮಭಾಗಿನಿಯೆಂಬ ಹೆಸರನ್ನು ಸಾರ್ಥಕಗೊಳಿಸುತ್ತಿರುವರು. ಮುಂದಿನ ಯುದ್ಧದ ಸಂಭವವನ್ನರಿತ ಹಿಟ್ಲರನು ಮುಂಜಾಗ್ರತೆ ವಹಿಸಿ ಜರ್ಮನಿಯು ಯುದ್ಧಕ್ಕೆ ಸದಾ ಸಿದ್ಧವಿರುವಂತೆ ಮಾಡಿರುವನು.

ಬೇಕಾಗಿದ್ದಾರೆ.

1939ನೇ ಅಕ್ಟೋಬರು ತಿಂಗಳ ಲಾಗಾಯಿತು ಎರಡು ತಿಂಗಳು ಗ್ರಾಮಾಂತರ ರಸ್ತೆಗಳ ಮತ್ತು ಶಾಲಾ ಕಟ್ಟಡಗಳ ರಿಪೇರಿ ಮೇಲುಸ್ತುವಾರಿಯನ್ನು ನೋಡಿಕೊಳ್ಳಲು ಪ್ರತಿ ನಾಡಿಗೊಬ್ಬರಂತೆ 9 ಜನ ಸುಪರ್‌ವೈಜರುಗಳು ಬೇಕಾಗಿ[illegible] ಸಂಬಳ ತಿಂಗಳಿಗೆ 20|- ರೂಪ[illegible] ಮೇಲ್ಕಂಡ ಕೆಲಸಗಳಲ್ಲಿ ಮಾಹಿತ[illegible]ಕ್ಕವರ ಅರ್ಜಿಗೆ ಹೆಚ್ಚಿಗೆ ಗಮನ[illegible]ಲಾಗುವದು. ಅರ್ಜಿಯನ್ನು 19[illegible] ಆಗಸ್ಟ್ ತಾರೀಕು 15ರೊಳಗೆ ಕಳ[illegible]ಜು ಮಾಡಲ್ಪಟ್ಟವರಿಗೆ ಬರೆದುಕೊ[illegible]ಳ್ಳದ್ದು.

ಪಿ. ಐ. ಬೆಳ್ಯಪ್ಪ[illegible]
ಅಧ್ಯಕ್ಷರು,
ಕೊಡಗು ಜಿಲ್ಲಾ ಬೋ[illegible]

ಸಾಮಾಜಿಕ ಕಾದಂಬರಿ.

ದೇವದತ್ತ.

೨೮ನೇ ಅಧ್ಯಾಯ.

ಕಾಡು ಮೃಗಗಳಿಗೆ ಅವನ ಮನೆಯು ಒಂದು ತರದ ಉಗ್ರಾಣವಾಗಿತ್ತು. ಆ ಊರ ಬಿಲ್ಲವರಿಗೂ, ಕೆಲವು ಉದ್ಯೋಗಸ್ಥರಿಗೂ, ತಾನು ಹೊಡೆದ ಪ್ರಾಣಿಗಳ ತೊಡೆಗಳನ್ನೋ, ಸ್ವಲ್ಪ ಮಾಂಸವನ್ನೋ ಕೊಟ್ಟು ತನ್ನ ನಿತ್ಯ ಶಿಕಾರಿಗೆ ಬೇಕಾದಷ್ಟು ಮದ್ದು ಗುಂಡುಗಳನ್ನು ಸಂಪಾದಿಸಿಕೊಳ್ಳುತ್ತಿದ್ದನು.

ಕೇಸರಿಪಾಣಿಯು ಬಂದು ಅಂಗಳದಲ್ಲಿ ನಿಂತಿರುವನು ಎಂಬ ಸಂಗತಿಯನ್ನು ಕೇಳಿದೊಡನೆ ಚಾರುದತ್ತನು ಹೊರಗೆ ಬಂದು ಅವನನ್ನು ಮರ್ಯಾದೆ ಪೂರ್ವಕವಾಗಿ ಒಳಗೆ ಕರೆದನು. ಕೇಸರಿಪಾಣಿಯು ಮೆಲ್ಲಗೆ ಜಗಲಿಗೆ ಬಂದನು. ಚಾರುದತ್ತನು ಅವನ ಕೈಯ್ಯಲ್ಲಿದ್ದ ಹೆಂಡವನ್ನೂ ಕಿತ್ತಳೆ ಹಣ್ಣುಗಳನ್ನೂ ತೆಗೆದುಕೊಂಡು ಕೇಸರಿಪಾಣಿಗೆ ಕುಳಿತುಕೊಳ್ಳಲು ಸೌಜ್ಞೆ ಮಾಡಿ ಒಳ ಹೋದನು. ಹೋದವನು ಸುರುಕ್ಷಣದಲ್ಲೇ ಹಿಂದಿರುಗಿ, ಕೇಸರಿಪಾಣಿಗೆ ಕುರ್ಚಿಯ ಮೇಲೆ ಕುಳಿತುಕೊಳ್ಳಲು ಹೇಳಿದನು. ಕೇಸರಿಪಾಣಿಗೆ ಧೈರ್ಯ ಬರಲಿಲ್ಲ 'ಚಿಂತೆ ಇಲ್ಲ' ಎನ್ನುತ್ತಾ ಅವನು ದೈನ್ಯಭಾವದಿಂದ ನಿಂತುಕೊಳ್ಳಲು ಪ್ರಯತ್ನಿಸಿದನು. ಆದರೆ ಚಾರುದತ್ತನು ಬಹುವಾಗಿ ಒತ್ತಾಯ ಮಾಡಿದ್ದರಿಂದ ಅವನು ಕುರ್ಚಿಯನ್ನು ಬಿಟ್ಟು ಹಿಂಭಾಗದ ಒಂದು ಬೆಂಚಿನ ಮೇಲೆ ಭಕ್ತಿಪೂರ್ವಕವಾಗಿ ಕುಳಿತನು. ಚಾರುದತ್ತನು ಎದುರಿನ ಕುರ್ಚಿಯಲ್ಲಿ ಕುಳಿತನು.

ಚಾರು–ನಿನಗೆಷ್ಟು ಮಕ್ಕಳು?

ಕೇಸರಿ–ಒಟ್ಟು ೫ ಮಂದಿ, ಮೂರು ಹೆಣ್ಣು, ಎರಡು ಗಂಡು. ಹಿರಿಯರಿಬ್ಬರೂ ಗಂಡು ಮಕ್ಕಳು.

ಚಾರು–ಹಿರಿಯವನ ಪ್ರಾಯವೆಷ್ಟಿರಬಹುದು?

ಕೇಸರಿ–ಅವನಿಗೆ ಈಗಾಗಲೇ ಆಯಿತು ಹದಿನಾರು ವರ್ಷ, ಎರಡನೆಯವನು ಅವನಿಗಿಂತ ಎರಡು ವರ್ಷಗಳಿಗೆ ಕಿರಿಯವನು.

ಚಾರು–ಇಬ್ಬರೂ ಶಾಲೆಗೆ ಹೋಗುತ್ತಾರೇನೊ?

ಕೇಸರಿ–ನಮ್ಮಂಥಾ ಬಡವರಿಗೆಲ್ಲಿ ಶಾಲೆ!

ಚಾರು–ಹಾಗಾಗಿ ವ್ಯವಸಾಯಕರಾಗಿ ಇರುವರೇನೋ?

ಕೇಸರಿ–(ನಾಚಿಕೆಯಿಂದ ತಲೆಬಾಗಿಸಿ) ಈಗ ಮೂರನೆ ವರ್ಷ ದೊಡ್ಡ ಕಾಯಿಲೆ ಬಂದು ನನ್ನ ಎತ್ತುಗಳೆಲ್ಲಾ ಸತ್ತುಹೋದವು. ಆ ಲಾಗಾಯಿತಿನಿಂದ ನನ್ನ ಜಮೀನುಗಳನ್ನು ನೆಟ್ಟಲೇ ಇಲ್ಲ, ಎತ್ತುಗಳನ್ನು ಕೊಂಡುಕೊಳ್ಳಲು ಹಣವಿಲ್ಲ; ಯಾರೂ ಕೊಡುವ ಹಾಗಿಲ್ಲ.

ಚಾರು–ಹಾಗಾದರೆ ನಿಮಗೆ ಜೀವನಕ್ಕೆ ಬಹು ತೊಂದರೆಯಲ್ಲವೇ?

ಕೇಸರಿ–ಹೌದು ಮಹಸ್ವಾಮಿ! ನನ್ನ ಹೆಂಗಸು ಮತ್ತು ಹಿರಿಮಗಳು ಕೂಲಿ ಕೆಲಸಕ್ಕೆ ಹೋಗುತ್ತಾರೆ. ನಾನು ಸ್ವಲ್ಪ ಸಂಪಾದಿಸುತ್ತೇನೆ ಮಕ್ಕಳಿಬ್ಬರೂ ದುಡಿಯುತ್ತಾರೆ. ಹೀಗೆಲ್ಲಾ ಬಂಡಾಟದ ಜೀವನ.

ಚಾರು–ಪಾಪ, ಕಷ್ಟ. ನೀವು ಈ ವರ್ಷ ನಿಮ್ಮ ಜಮೀನನ್ನು ವ್ಯವಸಾಯ ಮಾಡಿ. ನಾನು ಎತ್ತು ತೆಗೆಯುವುದಕ್ಕೂ, ಇತರ ಖರ್ಚಿಗಳಿಗೂ ಬೇಕಾದ ಹಣ ಕೊಡುತ್ತೇನೆ. ನೀವು ತಂದೆ ಮಕ್ಕಳಿಬ್ಬರೂ ದುಡಿದು ಕೊಟ್ಟರೆ ಸಾಕು. ಹಣಕ್ಕೆ ಬಡ್ಡಿ ಏನೂ ಬೇಡ.

ಅಷ್ಟರಲ್ಲಿ ಕಾಫಿ ತಯಾರಾಯಿತೆಂದು ಅಡಿಗೆಯವನು ಬಂದು ಹೇಳಲು, ಚಾರುದತ್ತನು ಕೇಸರಿಪಾಣಿಗೆ ಮುಖ ತೊಳೆಯಲು ನೀರು ಕೊಟ್ಟನು. ಕೇಸರಿಪಾಣಿಗೆ ಬಹು ಆಶ್ಚರ್ಯವಾಯಿತು.

ಚಾರುದತ್ತನ ಗುಣ ನಡತೆಗಳ ವಿಷಯ ಕೇಸರಿಪಾಣಿಗೆ ಹೆಚ್ಚಿನ ಅನುಭವ ಜ್ಞಾನವಿದ್ದಿಲ್ಲವಾದರೂ, ಜನರು ಹಳ್ಳಿಗಳಲ್ಲಿ ಆಡಿಕೊಳ್ಳುತ್ತಿದ್ದ ಅನೇಕ ಸಂಗತಿಗಳನ್ನು ಅವನು ಕೇಳಿ ತಿಳಿದಿದ್ದನು. ಚಾರುದತ್ತನು ಬಹು ಜಂಭವಿರತಕ್ಕ ಒಬ್ಬ ನಾಗರೀಕ, ಬಹು ದುರಹಂಕಾರಿ, ಯಾರೊಡನೆಯೂ ಸಲಿಗೆಯಿಂದ ನಡೆಯತಕ್ಕವನಲ್ಲ. ಅದರಲ್ಲೂ ಬಡವರನ್ನೂ, ವಿದ್ಯಾಹೀನರನ್ನೂ, ನಾಡಾಡಿಗರನ್ನೂ ಬಹು ತುಚ್ಛ ರೀತಿಯಿಂದ ಕಾಣುತ್ತಾನೆ ಅಂತವರ ಮನೆಗೆ ಆತನೆಂದೂ ಹೋಗುವುದಿಲ್ಲ ಅಂತವರ್‍ಯಾರಾದರೂ ಅವನ ಮನೆಗೆ ಬಂದರೆ ಅವರನ್ನು ಅಂಗಳದಿಂದಲೇ ಒಂದೆರಡು ಮಾತಾಡಿಸಿ ಕಳುಹಿಸಿಬಿಡುತ್ತಾನೆ ಎಲ್ಲರೂ ಅವನೊಡನೆ ಮಾತಾಡಲಿಕ್ಕೂ, ಅವನ ಮನೆಗೆ ಹೋಗಲಿಕ್ಕೂ ಹಿಂಜರಿಯುತ್ತಾರೆ' ಎಂಬೀ ಮೊದಲಾದ ನಾನಾ ರೀತಿಯ ಗಾಳಿಸುದ್ದಿಗಳನ್ನು ಕೇಳಿದ್ದರಿಂದಲೇ ಕೇಸರಿಪಾಣಿಯು ಚಾರುದತ್ತನ ಅಂಗಳದಲ್ಲೇ ಕಾದಿದ್ದು, ಅವನನ್ನು ಒಳಗೆ ಕರೆಯುವಾಗಲೇ ಅವನಿಗೆ ಒಂದು ತರದ ಆಶ್ಚರ್ಯವೂ ಅಪನಂಬಿಕೆಯೂ ಉಂಟಾಯಿತು. ಚಾರುದತ್ತನು ಎಷ್ಟು ಒತ್ತಾಯ ಮಾಡಿದ್ದಾಗ್ಯೂ ಅವನು ಕುರ್ಚಿಯ ಮೇಲೆ ಕೂತುಕೊಳ್ಳಲೇ ಇಲ್ಲ. ಈಗಲಂತೂ ಫಲಾಹಾರಕ್ಕೆ ಕರೆದೊಡನೆ ಅವನಿಗೆ ಅತ್ಯಂತ ವಿಸ್ಮಯವು ತಲೆದೋರಿತು ಬೇಡವೆನ್ನುವಷ್ಟು ಧೈರ್ಯವಿರಲಿಲ್ಲ. ಚೆಂಬಿನಲ್ಲಿದ್ದ ನೀರಿನಿಂದ ಮುಖ ತೊಳೆದನು. ಹತ್ತಿರದಲ್ಲಿ ಇಟ್ಟಿದ್ದ ಟವಲಿನಿಂದ ಮುಖ ಒರಸಲು ಅವನಿಗೆ ಧೈರ್ಯ ಬರಲಿಲ್ಲ. ತನ್ನ ವಂಚಿಯ ತುದಿಯಿಂದ ಒರಸಿಕೊಂಡನು

ಫಲಾಹಾರಕ್ಕೆ ಒಳಗೆ ಹೋದರು ಕೇಸರಿಪಾಣಿಯು ನೆಲದಲ್ಲೆಲ್ಲಾದರೂ ತನಗೊಂದು ಮಣೆ ಇಟ್ಟಿರಬಹುದೆಂದು ನೆನಸಿ, ಅತ್ತಿತ್ತ ನೋಡಿದನು ಚಾರುದತ್ತನು ಫಲಾಹಾರ ಇಟ್ಟಿದ್ದ ಮೇಜಿನ ಬದಿಯಲ್ಲಿದ್ದ ಕುರ್ಚಿಗಳ ಪೈಕಿ ಒಂದನ್ನು ಕೇಸರಿಪಾಣಿಗೆ ತೋರಿಸಿ, ತಾನೊಂದರಲ್ಲಿ ಕುಳಿತನು. ಕೇಸರಿಪಾಣಿಗೆ ಏನು ಹೇಳಲೂ ತೋಚಲಿಲ್ಲ. ಜನರು ಚಾರುದತ್ತನ ನಡತೆಯ ವಿಷಯ ಹೇಳುತ್ತಿದ್ದದ್ದೆಲ್ಲಾ ಸುಳ್ಳೆಂದು ತಿಳಿದನು ಅವರು ಇವನ ಮುಖ ವಿಕಾರವನ್ನು ನೋಡಿಯೋ, ಅಲ್ಲ ಬಹಿರಂಗ ಕಠಿಣ ಪ್ರವರ್ತನೆಯನ್ನು ಕಂಡೋ, ಅಲ್ಲ ವಿನಾ ಕಾರಣವಾಗಿಯೋ ಅಂತಾದರೋ ಹಾಗೆಲ್ಲಾ ಹೇಳಿಕೊಳ್ಳಬಹುದು. ಆದರೆ ನಿಜವಾಗಿ ನಮ್ಮ ದೇಶದಲ್ಲಿ ಇಂಥಾ ಸರಳ ಸ್ವಭಾವದ ಮನುಷ್ಯನಿರಲ್ಲವೆಂದು ಯೋಚಿಸುತ್ತಾ, ತಾನು ಬಹು ಅನಾನುಕೂಲದಿಂದ ಕುರ್ಚಿಯ ಮೇಲೆ ಕುಳಿತನು. ಫಲಾಹಾರವಾಯಿತು. ಆಗಲೂ ಚಾರುದತ್ತನು ಮುಂದಕ್ಕಾದರೂ ಜಮೀನನ್ನು ನಡೆಸಿ ಸುಖಜೀವನ ಮಾಡಬೇಕೆಂದೂ ಈ ವಿಷಯದಲ್ಲಿ ತನ್ನಿಂದಾಗತಕ್ಕ ಧನ ಸಹಾಯವನ್ನು ತಾನು ಮಾಡುವುದಾಗಿಯೂ ವಾಗ್ದಾನವಿತ್ತನು ಫಲಾಹಾರವಾದನಂತರ ಕೇಸರಿಪಾಣಿಯನ್ನು ಗೇಟಿನ ವರೆಗೆ ಹಿಂಬಾಲಿಸಿ ಬೀಳ್ಕೊಟ್ಟನು.

೨೯ ನೇ ಅಧ್ಯಾಯ.

ಕಪಟನಾಟಕ ಸೂತ್ರಧಾರನಾದ ಚಾರುದತ್ತನು ತನ್ನ ನಾಟಕವನ್ನು ಬಹು ಜಾಗರೂಕತೆಯಿಂದ ಅಭಿನಯಿಸತೊಡಗಿದನು. ದೇವದತ್ತನ ಮೇಲೆ ತನಗಿರತಕ್ಕ ವೈರತ್ವದ ಬಗ್ಗೆ ದೇವದತ್ತನಾಗಲೀ, ಅಥವಾ ಇತರರಾರೇ ಆಗಲಿ ತಿಲ ಮಾತ್ರದಷ್ಟು ಸಂಶಯಗ್ರಸ್ತರಾಗದಂತೆ ತಾನು ನಡೆಯತೊಡಗಿದನು. ದೇವದತ್ತನನ್ನು ದಿನಕ್ಕೊಮ್ಮೆಯಾದರೂ ಕಾಣುತ್ತಿದ್ದನು. ಆತನ ಮನೆಗೆ ಹೋದನೆಂದರೆ ಅನೇಕ ತಾಸುಗಳ ವರೆಗೆ ಮಾತಾಡುತ್ತಿದ್ದನು. ದೇವದತ್ತನ ಬಂಧು ವರ್ಗದವರಿಗೆ ಮೊದಲು ಚಾರುದತ್ತನ ಮುಖ ಕಂಡರಾಗದು. ಈಗ ಅವರು ಸಹ ಇವನನ್ನು ಕೆಲವು ಮಟ್ಟಿಗೆ ಪ್ರೀತಿಸತೊಡಗಿದರು.

ದೇವದತ್ತನ ಆಪ್ತ ಮಿತ್ರರೊಡನೆಯೂ, ಬಂಧುಗಳೊಡನೆಯೂ ಅವನ ಗುಣ ಸ್ವಭಾವಗಳನ್ನು ಶ್ಲಾಘಿಸಿ ಆಗಿಂದಾಗ್ಗೆ ಮಾತಾಡುತ್ತಿದ್ದನು. ಅವನನ್ನಗಲಿರುವುದು ತನಗೆ ಕೇವಲ ಅಸಾಧ್ಯವೆಂದು ಆಗಿಂದಾಗ್ಗೆ ಹೇಳುತ್ತಿದ್ದನು. ಕೆಲವು ವೇಳೆ ಕಮಲೆಯೊಡನೆ ಮಾತಾಡುವಾಗ ದೇವದತ್ತನಿಗೆ ಎಳೆವಯಸ್ಸಿನಲ್ಲಿ ತಾನು ಮಾಡಿದ ಒಂದೆರಡು ಅಪರಾಧಗಳನ್ನು ಹೇಳಿ ಅದಕ್ಕೆ ಪಶ್ಚಾತ್ತಾಪಪಡುವನು. ದೇವದತ್ತನ ಸಂಪೂರ್ಣ ವಿಶ್ವಾಸವನ್ನು ಸಂಪಾದಿಸುವ ನಿಮಿತ್ತ ತನ್ನ ಒಂದೆರಡು ಗೃಹಕೃತ್ಯದ ಗುಟ್ಟು ಮಾತುಗಳನ್ನು ಸಹ ಅವನಿಗೆ ಒಮ್ಮೊಮ್ಮೆ ಹೇಳುತ್ತಿದ್ದನು.

ಅಮಲ ಮನಸ್ಕನಾದ ದೇವದತ್ತನು ಚಾರುದತ್ತನ ವರ್ತನೆಯನ್ನು ಸತ್ಯವೆಂದೇ ಭಾವಿಸಿ ತನ್ನ ಹೃದಯದಲ್ಲಿ ಆತನಿಗೆ ಸಂಪೂರ್ಣ ನೆಲೆಯನ್ನು ಕೊಟ್ಟನು. ಅನೇಕ ವೇಳೆ ಚಾರುದತ್ತನು ತನ್ನ ಮೇಲೆ ತೋರಿಸುತ್ತಿದ್ದ ಅಧಿಕವಾದ ಪ್ರೀತಿಯನ್ನು ಹೊಗಳುತ್ತಾ ಅವನ ಈಗಿನ ಮತ್ತು ಪೂರ್ವದ ನಡತೆಗಳನ್ನು ಹೋಲಿಸುತ್ತಾ ಅವನು ಸಂಪೂರ್ಣವಾಗಿಯೂ ಈಗ ಒಳ್ಳೇ ಸಜ್ಜನನೇ ಆಗಿರುವನೆಂದು ದೃಢವಾಗಿ ಹೇಳುವನು.

ದಿನಗಳು ಹೋದ ಹಾಗೆ ಚಾರುದತ್ತನ ನಟನಾ ಪ್ರೀತಿಯು ಮತ್ತಷ್ಟು ಪ್ರಬಲವಾಯಿತು. ಈ ಮಧ್ಯೆ ದೇವದತ್ತನಿಗೆ ಒಂದು ಗಂಡು ಮಗುವು ಜನಿಸಿತು. ಚಾರುದತ್ತನು ನಾನಾ ರಿತಿಯಲ್ಲಿ ತನಗೆ ಮಹತ್ತರವಾದ ಸಂತೋಷ ಉಂಟಾಗಿರುವ ಹಾಗೆ ತೋರ್ಪಡಿಸಿದನು.

ಕಾಲವು ಕಳೆದ ಹಾಗೆ ಕಮಲೆಗೂ ಚಾರುದತ್ತನಲ್ಲಿ ಅತ್ಯಧಿಕವಾದ ಪ್ರೀತಿಯುಂಟಾಯಿತು. ಈ ಮಧ್ಯೆ ಚಾರುದತ್ತನ ಪ್ರಿಯೆಗೆ ನವಮಾಸ ತುಂಬಿತು. ಅವಳ ಸರಳ ಸ್ವಭಾವವೂ, ನಿರ್ಮಲ ಹೃದಯವೂ, ಸಕಲರಲ್ಲಿಯೂ ಆಕೆಗಿದ್ದ ಅಕಲ್ಮಶ ಪ್ರೀತಿಯೂ ಎಲ್ಲರನ್ನೂ ತನ್ನ ಪ್ರೀತಿಗೆ ಪಾತ್ರರನ್ನಾಗಿ ಮಾಡಿದ್ದವು. ಅದರಲ್ಲೂ ಕಮಲೆಗೆ ಅವಳಲ್ಲಿದ್ದ ಪ್ರೇಮವು ಅನ್ಯಾದೃಶವಾದದು. ದೇವದತ್ತನಿಗೂ ಆಕೆಯಲ್ಲಿ ಅತ್ಯಂತ ಪ್ರೇಮವಿದ್ದಿತು. ಈಗಲಂತೂ ಕಮಲೆಗೆ ಅವಳ ಯೋಗ ಕ್ಷೇಮ ವಿಚಾರವೇ ತನ್ನ ಮುಖ್ಯ ಕರ್ತವ್ಯವಾಗಿತ್ತು. ಇತ್ತ ಸುಶೀಲೆಗೆ ಕಾಲು ಮತ್ತು ಮುಖವು ಊದಿಕೊಂಡಿತು. ಒಂದೆರಡು ದಿನಗಳಲ್ಲಿ ಜ್ವರದ ಚಿಹ್ನೆಗಳೂ ಕಾಣಿಸಿದವು. ತುಂಬಿದ ಗರ್ಭಿಣಿಯಾದುದರಿಂದ ಯಾವುದೊಂದು ತರಹದ ಔಷಧಿಯನ್ನು ಕೊಡಲು ಅವಕಾಶವಿರಲಿಲ್ಲ. ದೇವದತ್ತನು ಆಕೆಯನ್ನು ಬಲವಾದ ರಕ್ಷಣೆಯಲ್ಲಿಟ್ಟನು. ಕೋಣೆಯಿಂದ ಹೊರಗೆ ಬರಲಿಕ್ಕಾಗಲೀ, ಹಾಸಿಗೆಯಿಂದ ಕೆಳಗೆ ಇಳಿಯಲಿಕ್ಕಾಗಲೀ ಆಕೆಗೆ ಅಪ್ಪಣೆ ಇರಲಿಲ್ಲ. ಬರೇ ಹಾಲೇ ಹೊಟ್ಟೆಗೆ ಆಧಾರವಾಗಿತ್ತು.

ಇಷ್ಟೆಲ್ಲಾ ಜಾಗರೂಕತೆ ತೆಗೆದುಕೊಂಡರೂ ರೋಗವು ಮಾತ್ರ ದಿನೇ ದಿನೇ ಪ್ರಬಲವಾಗುತ್ತಾ ಬಂದಿತು. ದೇವದತ್ತನು ತನಗೆ ತಿಳಿದಿದ್ದ ಸಕಲ ವೈದ್ಯ ವಿದ್ಯಾ ಚಾತುರ್ಯವನ್ನೆಲ್ಲಾ ವಿನಿಯೋಗಿಸಿದನು. ಆದರೂ ಯಾವುದೊಂದು ಪ್ರಯೋಜನವೂ ಆಗಲಿಲ್ಲ. ಕಡೆಗೆ ಸುಶೀಲೆಯು ಹೊಟ್ಟೆಯಲ್ಲೇ ಮೃತಪಟ್ಟ ಒಂದು ಹೆಣ್ಣು ಶಿಶುವನ್ನು ಪ್ರಸವಿಸಿ ತಾನೂ ಪರಲೋಕವನ್ನೈದಿದಳು.

ಸುಶೀಲೆಯ ಅಕಾಲ ಮರಣವು ಆಕೆಯನ್ನು ತಿಳಿದಿದ್ದ ಪ್ರತಿಯೊಬ್ಬರ ಕಣ್ಣಿನಿಂದಲೂ ಒಂದೆರಡು ತೊಟ್ಟು ನೀರನ್ನು ತಂದಿತು. ದೇವದತ್ತನೂ, ಕಮಲೆಯೂ ತಮ್ಮ ವ್ಯಸನವನ್ನು ನಾನಾ ರೀತಿಯಿಂದ ತೋರ್ಪಡಿಸಿದುದಲ್ಲದೆ ಚಾರುದತ್ತನ ವ್ಯಸನವನ್ನು ನೀಗುವುದೇ ತಮ್ಮ ಮುಖ್ಯ ಕರ್ತವ್ಯವೆಂದು ಭಾವಿಸಿದರು. ಆಗಾಗ್ಯೆ ಅವನಲ್ಲಿಗೆ ಹೋಗಿ ಅವನಿಗೆ ಸಮಾಧಾನೋಕ್ತಿಗಳನ್ನು ಹೇಳುತ್ತಿದ್ದರು. ದೇವದತ್ತನಿಗೆ ಇತರರ ಆಮಂತ್ರಣವು ಹೆಚ್ಚಾಗಿ ಚಾರುದತ್ತನನ್ನು ಕಾಣಲು ಆಗದಿದ್ದಾಗಲೆಲ್ಲಾ ಕಮಲೆಯನ್ನು ಕಳುಹಿಸುತ್ತಿದ್ದನು. ಸಮಯವೂ, ದೇವದತ್ತನ ಪ್ರೀತಿಯೂ, ಕಮಲೆಯ ಉಪಚಾರೋಕ್ತಿಗಳೂ ಚಾರುದತ್ತನ ವ್ಯಸನಸಾಗರದ ತರಂಗಗಳನ್ನು ಕ್ರಮ ಕ್ರಮವಾಗಿ ಶಮನಗೊಳಿಸಿದುವು. ಚಾರುದತ್ತನು ವ್ಯಸನವನ್ನು ಮರೆತು ಹಸನ್ಮುಖನಾಗಿ ಕಾಣಿಸಿದನೆಂದರೆ ಅವಕ್ಕಿಂತಲೂ ಅಧಿಕವಾದ ಸಂತೋಷವು ದೇವದತ್ತ ಕಮಲೆಯರಿಗೆ ಆಗ ಬೇರೆ ಇರಲಿಲ್ಲ.

[ಅಪೂರ್ಣ.

ಕೊಡವ ಸಮಾಜ ಸುಧಾರಣೆ.

(ಲೇಖಕ:- ಕೆ. ಬಿ. ಚಂಗಪ್ಪ.)

ವಾಚಕ ಮಹಶಯರೇ,

ಮೇಲಿನ ನಾಮಾಂಕಿತದಿಂದ 'ಕೊಡಗು' ಪತ್ರಿಕೆಯಲ್ಲು ಪ್ರಕಟವಾದ ಲೇಖನಗಳಿಗೆ ಉತ್ತರವಾಗಿ 'ಕೊಡಗು' ಮತ್ತು 'ಸ್ವತಂತ್ರ ಭಾರತ' ಪತ್ರಿಕೆಗಳಲ್ಲು ಕೆಲವು ವಾರಗಳ ಹಿಂದೆ ಪ್ರಕಟವಾದ ಲೇಖನದಲ್ಲು ಹಿರಿಯರನ್ನು ದೂಷಿಸಿ ಕಿರಿಯರನ್ನು ಪೋಷಿಸುವ ರೀತಿಯ ಶೈಲಿಗಳೇ ಶೋಭಿಸುತ್ತಿತ್ತೇ ಹೊರತಾಗಿ ಹಿರಿಯರ ತಪ್ಪನ್ನು ಹೋಗಲಾಡಿಸಿಕೊಂಡು ಯಾವ ರೀತಿ ಮುಂದುವರಿಯಬೇಕು, ಇದಕ್ಕಾಗಿ ಕಿರಿಯರು ಏನು ಮಾಡಬೇಕು ಎಂಬ ಉತ್ತಮವಾದ ಸೂಚನೆಗಳೊಂದೂ ಕಂಡುಬರಲಿಲ್ಲ. ಬದಲಾಗಿ ತಲೆಬುಡವಿಲ್ಲದ ರೀತಿಗಳೇ ಕಂಡುಬಂತು. ಇದರಿಂದ ಕಿರಿಯರ ಮುನ್ನಡೆಗೆ ಏನು ತಾನೇ ಪ್ರಯೋಜನ ಮಾಡಿದಂತಾಯಿತೆಂಬದು ಗೊತ್ತಾಗಲಿಲ್ಲ.

ಭಾಷಣಕಾರರ ಅಥವಾ ಲೇಖನಕಾರರ ಕಾರ್ಯಕಲಾಪಗಳನ್ನು ಮತ್ತು ನ್ಯಾಯಶೀಲತೆಗಳನ್ನು ಮುಂದಾಗಿ ಅರಿತುಕೊಳ್ಳದೆ ವಾಕ್ಚಾತುರ್ಯಕ್ಕಾಗಲೀ ಅಥವಾ ಲೇಖನದ ಶೈಲಿಯ ಸೊಬಗಿಗಾಗಲೀ ಮರುಳಾದಲ್ಲಿ ಮೋಸಹೋಗುವದು ಖಂಡಿತವೆಂಬದನ್ನು ಯಾರೂ ಮರೆಯಬಾರದು.

ಇಂದಿನ ಕಿರಿಯರು ನಾಳೆಯ ಹಿರಿಯರು. ಈ ರೀತಿ ಮುಂದರಿಯುತ್ತಾ ಹೋಗುತ್ತಲಿರುವ ಪ್ರಪಂಚದಲ್ಲಿ ಒಬ್ಬರು ಮಾಡಿದ್ದು ಯಾ ಆಡಿದ್ದು ಸರಿಯೆಂದೂ ಇನ್ನೊಬ್ಬರದು ತಪ್ಪೆಂದೂ ಹೇಳಲಿಕ್ಕೆ ಸಾಧ್ಯವಿರುವಂತೆ ತೋರುವದಿಲ್ಲ. ಆಯಾಯ ಕಾಲಾನುಗುಣಕ್ಕನುಸಾರ ತಿಳಿದೋ, ತಿಳಿಯದೆಯೋ ಮುನ್ನಡೆಯುತ್ತಾ ಬಂದದ್ದರಿಂದಲೇ ಇಂದಿನ ಸುಖ ಸಂಪತ್ತನೆಲ್ಲ ಕಳೆದುಕೊಂಡವರಾಗಿ ಶೇಕಡ 99 ರಷ್ಟು ಜನರು ಕಷ್ಟದ ಬಾಳ್ವೆ ನಡೆಸುವದಾಗಿದೆ.

ಮಹಾತ್ಮ ಗಾಂಧಿಯವರು ಹೇಳುವಂತೆ ಡಿಗ್ರಿಗಳನ್ನು ಪಡೆದವರ ಸಂಖ್ಯೆ ಹೆಚ್ಚುತ್ತಾ ಬಂದಂತೆಲ್ಲ ಪರದೇಶೀ ಮಾಲುಗಳ ವ್ಯಾಪಾರಿಗಳಿಗೆ ದಲ್ಲಾಳಿಗಳ ಸಂಖ್ಯೆ ಹೆಚ್ಚುತ್ತಾ ಬಂದಂತಾಗಿ ಸಮಾಜಗಳ ಹಾಗೂ ಗ್ರಾಮಾಂತರಗಳ ಸ್ಥಿತಿಗತಿಗಳೆಲ್ಲ ಹಾಳಾಗುತ್ತಾ ಬಂದಿದೆ ಎಂಬದಾಗಿ ಹೇಳುವರು. ವಿದ್ಯಾವಂತರ ನಡವಳಿಕೆಗಳಿಂದ ಖಂಡಿತವಾಗಿ ಬದಲಾವಣೆ ಬರಲಾರದು.

'ವಿಪರೀತ ಬುದ್ಧಿ ವಿನಾಶ ಕಾಲ' ಎಂಬಂತೆ ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಾ ಬಂದದರ ಫಲವಾಗಿ ಇಂದು ವಿಶ್ವಶಾಂತಿಗೆ ನೆಲೆ ಇಲ್ಲದಂತಾಗಿದೆ. ಎಂಬದಾಗಿ ಹೇಳಿದರೆ ಅತಿಶಯೋಕ್ತಿಯಾಗಲಾರದು. ಆ ಮಾತ್ರಕ್ಕೆ ವಿದ್ಯೆ, ಬುದ್ಧಿ ಹೆಚ್ಚಬಾರದೆಂಬ ಅಭಿಪ್ರಾಯವಲ್ಲ. ವಿಶ್ವಶಾಂತಿಗೆ ತಕ್ಕುದಾದ ಸತ್ಯ, ನ್ಯಾಯ ಮತ್ತು ಧರ್ಮಗಳನ್ನನುಸರಿಸಿ ನಡೆಯಲು ಜ್ಞಾನವನ್ನು ಹೆಚ್ಚಿಸುವ ವಿದ್ಯೆಯು ಪ್ರತಿ ಒಬ್ಬ ಮಾನವನಿಗೂ ಅಗತ್ಯವಾಗಿ ಸಿಕ್ಕಬೇಕಿದೆ. ತಾನು ಹುಟ್ಟಿ ಬೆಳೆದ ಊರು, ಕೇರಿ, ನಾಡುಗಳನ್ನು ಮರೆತು ಪಟ್ಟಣವನ್ನು ಅಭಿವೃದ್ಧಿಗೊಳಿಸುವ ವಿದ್ಯಾವಂತನಿಗಿಂತ ಅವಿದ್ಯಾವಂತನೇ ಮೇಲೆನಿಸದಿರಲಾರನು. ಈ ರೀತಿಯಿಂದ ನೋಡಿದರೆ ವಿದ್ಯಾವಂತರೆನಿಸಿಕೊಂಡಿರುವ ಕಿರಿಯರು ನಮ್ಮಂಥಾ ಜನಾಂಗಕ್ಕಾಗಲೀ, ದೇಶಕ್ಕಾಗಲೀ ಮಾಡುತ್ತಿರುವ ಸೇವೆಯಾದರೂ ಏನು?

ಹಿರಿಯರ ತಪ್ಪನ್ನು ಮುಂದಿಟ್ಟುಕೊಂಡು ಕಿರಿಯರ ತಪ್ಪನ್ನು ಬಚ್ಚಿಟ್ಟುಕೊಂಡು ಮುನ್ನಡೆಯಬೇಕೆನ್ನುವವರನ್ನು ಹಿಂಬಾಲಿಸುತ್ತಾ ಹೋದಲ್ಲಿ ಮುಂದೆ ಒದಗಬಹುದಾದ ಕಷ್ಟ ಸುಖಗಳನ್ನು ಹೆಚ್ಚೆಚ್ಚಾಗಿ ಅನುಭವಿಸುವವರು ಕಿರಿಯರೇ ಹೊರತು ಹಿರಿಯರಲ್ಲವೆಂಬದನ್ನು ಯಾರೂ ಮರೆಯಬಾರದು. ಉದಾಹರಣೆಗಾಗಿ ಹೇಳುವದಾದರೆ ಶಾಸ್ತ್ರಿಮಾತ್ಯರು ತಂದ ಲಂತಾನದ ಸೊಬಗಿಗೆ ಮರುಳಾದ ಹಿರಿಯರು ಅದನ್ನು ಸಂಪಾದಿಸಲು ಹೋಗಿ ಶಿಕ್ಷೆಗೆ ಗುರಿಯಾದರೆಂದು ಹೇಳುವದು ಕೇಳಿರುತ್ತೇನೆ. ತಂದ ಪುಣ್ಯಾತ್ಮನಾಗಲೀ, ಅಥವಾ ಅವನ ಮಕ್ಕಳಾಗಲೀ ದೇಶದಲ್ಲಿ ಇದ್ದಾರೋ, ಇಲ್ಲವೋ ತಿಳಿಯದು. ಅವನ್ನು ಪೋಷಿಸಿದ ನಮ್ಮ ಹಿರಿಯರಲ್ಲಿ ಅದೆಷ್ಟೋ ಮಂದಿ ಅದರ ಫಲವನ್ನು ಅನುಭವಿಸದೆ ಕಣ್ಮರೆಯಾಗಿ ಹೋಗಿರುತ್ತಾರೆ. ಅದು ಮಾತ್ರ ಅಭಿವೃದ್ಧಿಗೊಂಡು ದೇಶವನ್ನೆಲ್ಲಾ ಆವರಿಸುತ್ತಾ ಬಂದದರ ಫಲವಾಗಿ ಹೊಡಲಿಕ್ಕೆ ಎತ್ತುಗಳೂ, ಕರೆಯಲಿಕ್ಕೆ ಹಸುಗಳೂ ಇಲ್ಲದಂತಾಗಿ ವರ್ಷ ವರ್ಷ ಏನೇ ಕಮ್ಮಿ ಎಂದರೆ 50 ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟು ಕ್ರಯ ಬಾಳುವ ಹೊರ ಪ್ರಾಂತ್ಯದಿಂದ ಬರುವ ದನಗಳನ್ನು ನಾವು ಕೊಳ್ಳುವಂತಾಗಿ ತುಂಬಾ ಕಷ್ಟ ನಷ್ಟಗಳಿಗೆ ಒಳಗಾಗಿದ್ದೇವೆ ಎಂಬದು ತಿಳಿಯದಲ್ಲ.

ಒಂದಾನೊಂದು ಕಾಲದಲ್ಲಿ ಲಂತಾನದ ಹಾವಳಿಯನ್ನು ತಡೆಗಟ್ಟಬೇಕೆಂದು ಮನಗಂಡ ಅಧಿಕಾರಿಗಳ ಸಂಕೇತದಿಂದ ಕಾನೂನು ಪ್ರಕಾರವಲ್ಲದಿದ್ದರೂ ಪಬ್ಲಿಕ್ಕಿನ ರೂಪದಲ್ಲಿ ಅದೆಷ್ಟೋ ಮಂದಿ ಜಡಿಪೆಟ್ಟುಗಳನ್ನು ಅನುಭವಿಸಿದರು. ನ್ಯಾಯವಾದ ವಿಚಾರವೇನಂದರೆ-ಅಷ್ಟು ಸಂಪಾದಿಸಹೋಗಿ ಶಿಕ್ಷೆ ಅನುಭವಿಸಿದ. ಮಗ ಅದನ್ನು ನಾಶಮಾಡಲು ಶಿಕ್ಷೆ ಅನುಭವಿಸಿದ. ಇವಲ್ಲವೇ ನಮಗೆ ಪಾಶ್ಚಾತ್ಯರಿಂದ ದೊರಕಿದ ಫಲಗಳು. ಆ ಕಾಲದಲ್ಲಿ ನಾನೊಬ್ಬ ಸಣ್ಣ ಹಾಜೇದಾರನಾಗಿ ಜಡಿಪೆಟ್ಟುಗಳನ್ನು ಹೊಡದ ಅಪರಾಧಿತನಾಗಿರುತ್ತೇನೆ. ಅಧಿಕಾರಿಯ ಸಂಕಲ್ಪದಂತೆ ಲಂತಾನವನ್ನು ನಾಶ ಮಾಡಬೇಕೆಂಬ ಕಾನೂನು ಜಾರಿಗೆ ಬಂದಿದ್ದರೆ ಇಂದು ಅದರ ಸವಿಯನ್ನು ನಾವು ಉಣ್ಣಬೇಕಿತ್ತು. ಶಿಕ್ಷೆಯನ್ನು ತಪ್ಪಿಸಿಕೊಂಡವನಾದರೂ ಅದರ ಹಾವಳಿಯಿಂದ ಕಷ್ಟ ನಷ್ಟಗಳನ್ನು ಅನುಭವಿಸುತ್ತಲಿದ್ದೇನೆ. ಇದರಂತೆಯೇ ಕಾಸು ಇರುವ ವರೆಗೆ ಪಾಶ್ಚಿಮಾತ್ಯರ ಅನುಕರಣೆಗಳಿಂದ ತುಂಬಾ ಸಂತೋಷಗೊಂಡವರು ಕಾಸು ಇಲ್ಲದಾಗ ತುಂಬಾ ಕಷ್ಟಗಳಿಗೆ ಒಳಗಾಗಿದ್ದಾರೆಂಬದಾಗಿ ಹೇಳಿದರೆ ಅತಿಶಯೋಕ್ತಿಯಾಗಲಾರದು.

ಲಂತಾನವನ್ನು ನಾಶಮಾಡಬೇಕೆಂಬದಾಗಿ ಮನಗಂಡ ಅಧಿಕಾರಿಯ ಉತ್ತಮವಾದ ಭಾವನೆಯಿಂದಾಗಿ ಎಷ್ಟೋ ಜಾಗಗಳು ರಿಯಾಯಿತಿ ಮೇರೆ ಸಾಗುವಳಿಗೆ ಕೊಡಲ್ಪಟ್ಟವು. ಅಲ್ಲದೆ ಬಹುಮಾನಗಳನ್ನು ಸಹ ಕೊಡಲ್ಪಡುವಂತಾ ಏರ್ಪಾಡು ಮಾಡಲ್ಪಟ್ಟದ್ದು ಇಂದು ಜಾರಿಯಲ್ಲಿದೆ. ಆಗ ಬುದ್ಧಿವಂತರಾದವರು ಕಿತ್ತಳೆ ವಗೈರೆ ವ್ಯವಸಾಯ ಮಾಡಿಕೊಂಡು ಇದರ ಸವಿಯನ್ನುಣ್ಣುತ್ತಾರೆ. ಆಗ ಘೋರಣೆಯನ್ನು ತೋರಿಸಿದವರೆಲ್ಲ ಅಯ್ಯೋ! ನಾವು ವ್ಯವಸಾಯ ಮಾಡದೆ ಕೆಟ್ಟೆವು. ಎಂದು ಅಂದುಕೊಳ್ಳುತ್ತಲಿದ್ದಾರೆ. ಹಿರಿಯರು ಮಾಡಿದ ಅಪರಾಧವೆಂದು ಅದನ್ನು ಪೋಷಿಸಬೇಕೇ ಯಾ ನಾಶಮಾಡಬೇಕೇ? ರಾಜಕೀಯ ವಿಷಯವಾದರೂ ಇದಕ್ಕನುಗುಣವಾಗಿರುವದರಿಂದ ಸ್ವತಂತ್ರ ಪಡಿಯಬೇಕೇ ಯಾ ಬೇಡವೇ?

ಒಂದನೇ ಲೇಖನಕಾರರು ವಿದ್ಯಾವಂತರಾದ ಸ್ತ್ರೀ ಮತ್ತು ಪುರುಷರಲ್ಲಿ ಹಲ ಕೆಲವರು ಆಧುನಿಕ ರೀತಿಯ ಉಪಕರಣಗಳ ಸಹಾಯದಿಂದ ತಾಯಿತನಕ್ಕೆ ತಿಲಾಂಜಲಿಯನ್ನೀಯಲು ಹಿಂದೂ ಮುಂದೂ ಯೋಚಿಸುವುದಿಲ್ಲವೆಂಬದಾಗಿ ಬರೆದದ್ದಕ್ಕೆ ಟೀಕಾಕಾರರು ಉದ್ರೇಕಗೊಂಡಂತೆ ಕಂಡುಬರುತ್ತೆ. ಹಾಗೆ ಉದ್ರೇಕಗೊಳ್ಳಲು ಕಾರಣ ತೋರುವದಿಲ್ಲ. ಯಾಕೆಂದರೆ ಸ್ವಭಾವಿಕವಾಗಿ ದೇಹದೊಳಗೆ ಅಡಕವಾಗಿರುವ ಕಾಮ, ಕ್ರೋಧಾದಿ ಅರಿಷಡ್ವೈರಿಗಳನ್ನು ಗೆಲ್ಲಲು ವಿಶ್ವಾಮಿತ್ರ ಮತ್ತು ಕಣ್ವ ಮೊದಲಾದ ತಪಸ್ವಿಗಳಿಂದಲೇ ಸಾಧ್ಯವಾಗಲಿಲ್ಲವೆಂಬದಾಗಿ ಪುರಾಣಗಳಲ್ಲಿ ಹೇಳುವದಕ್ಕನುಗುಣವಾಗಿ ಬ್ರಹ್ಮಚರಿಯವನ್ನು ಪಾಲಿಸುವದು ಹೇಳುವಷ್ಟು ಸುಲಭಸಾಧ್ಯವಲ್ಲವೆಂಬದಾಗಿ ಮಹಾತ್ಮ ಗಾಂಧಿಯವರು ಸಹ ಹೇಳುತ್ತಿರುವಾಗ ಮನಸೋ ಇಚ್ಛೆ ಪ್ರಪಂಚ ವ್ಯವಹಾರಗಳಲ್ಲಿ ಕುಣಿದಾಡುತ್ತಿರುವ ನಾವು ಅದನ್ನು ನ್ಯಾಯರೀತಿಯಿಂದ ಪಾಲಿಸುತ್ತೇವೆ ಎಂದು ಹೇಳುವವರು ಇರುವದಾದರೆ ಅದು ತೀರಾ ಅಬದ್ಧವೆಂದು ಯಾರು ತಾನೇ ಹೇಳಲಾರರು.

....

....

'ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆಯುರಿಯಿತು' ಎಂಬಂತೆ ಒಂದನೆಯವರು ತಮಗುಂಟಾಗಿರುವ ಅನುಭವದಿಂದ ತಾನು, ತನ್ನ ಗ್ರಾಮಸ್ಥರು, ನಾಡವರು ಹಾಗೂ ದೇಶಸ್ಥರು ಪಡುತ್ತಿರುವ ಅನೇಕ ತರದ ಕುಂದುಕೊರತೆಗಳಿಗೆ ಕಾರಣಗಳನ್ನು ತಿಳಿದವರಾಗಿ ಅದರ ಪರಿಹಾರಕ್ಕೆ ಪ್ರಯತ್ನಿಸುವಾಗ ಅದಕ್ಕೆ ಅಹಿತವನ್ನು ಎಣಿಸುವದು ಯಾರಿಗೂ ಶೋಭಿಸದು. ಆ ಮಾತ್ರಕ್ಕೆ ಅವರಲ್ಲಿ ಲೋಪಗಳಿಲ್ಲವೆಂದಲ್ಲ. ಅಂಥವುಗಳಿದ್ದರೆ ಅದರನ್ನೂ ಸಹ ತಿದ್ದಿಕೊಳ್ಳುವಂತೆ ಮಾಡಿ ಗ್ರಾಮಗಳ ಉದ್ಧಾರಕ್ಕಾಗಿ ಪ್ರಯತ್ನಿಸುವ ವಿದ್ಯಾವಂತರಾಗಲೀ, ಬುದ್ಧಿವಂತರಾಗಲೀ ಯಾರಾದರೂ ಇದ್ದರೆ ದೇಶಸ್ಥರು ಅವರಿಗೆ ತಕ್ಕ ಪ್ರೋತ್ಸಾಹ ಮತ್ತು ಬೆಂಬಲವನ್ನು ಕೊಟ್ಟು ಗ್ರಾಮಗಳ ಉದ್ಧಾರಕ್ಕೆ ಸಹಾಯ ಮಾಡದೆ ಹೋದಲ್ಲಿ ಗ್ರಾಮಗಳು ನಾಮಶೇಷವಾಗುವದರಲ್ಲಿ ಸಂದೇಹಪಡಬೇಕಾದುದಿಲ್ಲ.

ಕೊಡಂದೇರ ಡಿ. ಮಾಚಯ್ಯ,

L. D. Sc. (COLLEGE OF DENTISTRY)

EX-SUPERVISOR, LAXMIDAS PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 8

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

Shorthand, Typing etc.

ಶೋರ್ಟ್‌ಹೇಂಡ್, ಟ್ಯಾಯ್‌ಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಟ್ರಾಡಿಯಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—6

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

14 **Ludhiana.**

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕಿ ಕಂಪೆನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕಿ.
ಮತ್ತು ಕಂಪೆನಿ,
(52-33) ಗಿರಗಾಂವ, ಮುಂಬಯಿ ೪,

ನೋ ಟೀ ಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸರ್ಟಿ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರು ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಯಪ್ಪನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ—ಮ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ.
ಜಿ. ಮಾದಮ್ಮಯ್ಯನವರು.
ಕುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ. ಕೆ. ಮಾಗಪ್ಪನವರು.
ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ತೆಗೆದುಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ...ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ ...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-20

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿಸುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕುಳಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರಿಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್, (ರಿಜಿಸ್ಟರ್ಡ್)
52-24 **ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಬೈಲಾಸು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮೀನು ಜಾಮೀನು ಕರಾರಿನಾಮೆ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟು ಪ್ರಕಾರ ರಿಜಿಸ್ಟರಾಗಿದೆ.)

(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	46510	0	0
ಜಮೂಬಂದ ಠೇವಣಾತಿ	-	23,4205	8	4
ವಸೂಲಾದ ಕ್ಷೇಮನಿಧಿ	-	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	26,719	0	4
ತ್ರಿಫ್ಟ್ ಡಿಪಾಜಿಟ್ಟು	-	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅದರ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟಿವೆ ಇವರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್:-ಪಂದ್ಯಂಡ ಐ ಬೆಳ್ಳಿಯಪ್ಪನವರು ಎಂ ಎಲ್ ಸಿ
ಟ್ರಜರರ್.—ರಾವ್ ಬಹದ್ದೂರ್ ಪಿ ದೇವಯ್ಯನವರು
ಸೆಕ್ರೆಟರಿ:—ಮೆ ಎಸ್ ಎನ್ ರಾಮಶೆಟ್ಟಿಯವರು

ತಾ 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55.	ರೂ 35	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60.	,, 20.	,, 13	,, 8
1 ತಿಂಗಳಿಗೆ—	,, 25	,, 10	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ
'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ
ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ
ಹಿತಚಿಂತನೆಯಿಂದ ಅಮೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"
ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(62-29)

Printed & Published by P. I. Belliappa, at 'Kodagu' Press Mercara for 'Kodagu' Ltd.

ನಿಮ್ಮ ಮುದ್ರಣ ಕೆಲಸಗಳನ್ನು "ಕೊಡಗು" ಪ್ರೆಸ್ಸಿನಲ್ಲೇ ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಕೆ. ಐ. ಬೆಳ್ಯಪ್ಪ. ವಾರ್ಷಿಕ ಚಂದಾ ರೂ. ೩—೮—೦

ತಾ. ೪—೮—೧೯೩೯. ಸಂಪುಟ ೧೯] [ಸಂಚಿಕೆ ೧೦

YOURS FAITHFULLY

"Yours faithfully" has been a common subscription in all business letters. But with the CORPORATION it has not been MERELY A SUBSCRIPTION

For the last THIRTY THREE years The CORPORATION has served its constituents most faithfully, very truly and quite sincerely. Thousands of customers have been pleased on account of the satisfying, honest Banking Service offered by the Corporation. The Corporation is proud to serve you and to say.

FAITHFULLY YOURS

The Canara Banking Corporation, Limited.

(Incorporated In British India)

Estd. 1906.

52-33

1876ನೇ ಇಸವಿಯಿಂದಲೂ ಪ್ರಸಿದ್ಧಿಯಾದ ಔಷಧಿಗಳು.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—8—0.

ಸ್ಪ್ಲೀನ್ ಮಿಕ್ಶ್ಚರ್

ದೀರ್ಘಕಾಲದ ಜ್ವರದಿಂದಾಗಲಿ ಯಾ ಇನ್ನಿತರ ಕಾರಣದಿಂದಾಗಲಿ ಉಂಟಾಗುವ ಜ್ವರಗಡ್ಡೆ, ಆಗಾಗ್ಗೆ ಜ್ವರಬರುವಿಕೆ, ಹೊಟ್ಟೆಹಸಿವು ಇಲ್ಲದಿರುವಿಕೆ, ಅಗ್ನಿಮಾಂದ್ಯ, ಪಿತ್ಥವಿಕಾರ, ಅಶಕ್ತತೆ, ಮಲಬದ್ಧತೆ, ಮುಂತಾದವುಗಳನ್ನು ಹೋಗಲಾಡಿಸಿ, ಶಕ್ತಿಯನ್ನುಂಟು ಮಾಡುವುದು. ಬಾಟ್ಲಿ 1ರ ರೂ. 1—2—0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುಡು ಶಬ್ದ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು. ಬಾಟ್ಲಿ 1ರ ರೂ. 0-10-0.

ಮಲೇರಿಯಾ ನಿವಾರಣಿ

ಚಳಿಜ್ವರ, ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಇನ್‌ಫ್ಲ್ಯುಯೆಂಜಾ, ಕಫಜ್ವರ, ಜ್ವರಗೆಡ್ಡೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸುವುದು.

ಬಾಟ್ಲಿ 1ರ ರೂ. 1—8—0, ಸಣ್ಣ ಬಾಟ್ಲಿ 1ರ ಆಣೆ 13.

☞ ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್, ನಂಬ್ರ ೩, ರಥಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ

ಗಣೇಶ ಸುಂದರ ಪ್ರಭು, ಸುಳ್ಯ. ಮಂಗಳೂರು ಸ್ಟೋರ್ಸ್, ಮಡಿಕೇರಿ. ಯು. ಎಸ್. ಮಾಚಯ್ಯ ಮರ್ಚೆಂಟ್, ಸುಂಟಿಕೊಪ್ಪ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ದಿ ಕೂರ್ಗ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರಾಜಪೇಟೆ. ಎ. ಎನ್. ಹುಚ್ಚಯ್ಯ ಮರ್ಚೆಂಟ್, ಗೋಣಿಕೊಪ್ಪಲು. 2

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು.)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು.

52-13

The Agricultural &
Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ರೋಗ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ,ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ—
ಡಾ. ಬಿ. ಕೆ. ಸಂಜುಂಡೇಶ್ವರ, ಎಲ್. ಎ. ಎಂ. ಎಸ್
(52-44) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ. ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಕೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎಸ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವಶಾಖೆಗಾದರೂ ಬರೆಯಿರಿ —

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ್, ಬನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತ, ಕಾನ್‌ಪುರ, ಢಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಥುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-30

ಸಾಮಾಜಿಕ ಕಾದಂಬರಿ

ದೇವದತ್ತ.

೨೯ ನೇ ಅಧ್ಯಾಯ.

ಕ್ರಮ ಕ್ರಮವಾಗಿ ಚಾರುದತ್ತನು ತನ್ನ ವ್ಯಸನವನ್ನು ಸಂಪೂರ್ಣವಾಗಿ ಮರೆತು ಬಿಟ್ಟನು. ವ್ಯಸನವು ಕಡಮೆಯಾದ ಹಾಗೆ ದೇವದತ್ತನ ಮೇಲೆ ಅವನ ಅಸೂಯೆಯು ಬಲವಾಗುತ್ತಾ ಬಂದಿತು. ಚಾರುದತ್ತನು ಕೇಸರಿ ಪಾಣಿಗೆ ಎತ್ತು ತೆಗೆಯಲಿಕ್ಕೂ, ಜಮೀನನ್ನು ಸಾಗು ಮಾಡಲಿಕ್ಕೂ ಬೇಕಾದ ಸಕಲ ಸಹಾಯವನ್ನೂ ಕೊಟ್ಟನು. ಇವರಿಬ್ಬರ ಸಹಕಾರವು ಊರಲ್ಲಿ ಮತ್ಯಾರಿಗೂ ಗೊತ್ತಿರಲಿಲ್ಲ. ಯಾಕೆಂದರೆ ಕೇಸರಿ ಪಾಣಿಯು ಚಾರುದತ್ತನ ಮನೆಗೆ ಹಗಲು ಬರುವುದು ಬಹು ವಿರಳ. ಅವರ ವ್ಯಾಪಾರವೆಲ್ಲಾ ರಾತ್ರಿಯಲ್ಲೇ ಏಕಾಂತದಲ್ಲಿ ನಡೆಯುತ್ತಿತ್ತು. ಚಾರುದತ್ತನು ಕೇಸರಿ ಪಾಣಿಯನ್ನು ತನ್ನ ವಶೀಕರಿಸಲು ನಾನಾ ರೀತಿಯಲ್ಲಿ ಸುತ್ತು ಮುತ್ತಲೂ ಬಲೆ ಒಡ್ಡುತ್ತಿದ್ದನೇ ಹೊರತು ತನ್ನ ಮನಸ್ಸಿನ ಅಭಿಪ್ರಾಯವು ಏನೆಂಬುದನ್ನೂ ಅತನಿಗೆ ಎಳ್ಳಷ್ಟೂ ಎಂದೂ ತಿಳಿಯಗೊಡಿಸಲಿಲ್ಲ.

ಹೀಗಿರಲು ಒಂದಾನೊಂದು ದಿವಸ ರಾತ್ರಿ ಚಾರುದತ್ತನೂ, ದೇವದತ್ತನೂ ಕೂಡಿ ಚಾರುದತ್ತನ ಮನೆಯಲ್ಲಿ ಮಾತಾಡುತ್ತಿರುವಾಗ್ಯೆ ಕೇಸರಿ ಪಾಣಿಯು ಸ್ವಲ್ಪ ಅಮಲೇರಿದವನಾಗಿ ಅಲ್ಲಿಗೆ ಬಂದನು. ಚಾರುದತ್ತನ ಮುಖವು ಕಳಾಹೀನವಾಯಿತು. ಕೇಸರಿ ಪಾಣಿಯನ್ನು ಹೊರಗೆ ಕೂತುಕೊಳ್ಳಲು ಸಾಜ್ಞೆ ಮಾಡಿದನು. ಅವನು ದೇವದತ್ತನಿಗೆ ನಮಿಸಿ ಕುಳಿತನು.

ದೇವದತ್ತ—ಚಾರುದತ್ತಾ ಇವರಾರು? ಅವರ ಕೆಲಸವೇನೆಂದು ವಿಚಾರಿಸಿ ಅವರನ್ನು ಕಳುಹಿಸು—ನಾವು ಆ ಮೇಲೆ ಮಾತಾಡಬಹುದು.

ಚಾರು—ಚಿಂತೆ ಇಲ್ಲ. ಅವರಿಗೇನು ಆತುರವಿಲ್ಲ ನಮ್ಮ ವಾರಗಾರರು.

ದೇವದತ್ತ—ವಾರಗಾರರೆ! (ಆಗಂತುಕನ ಕಡೆಗೆ ತಿರುಗಿ) ನಿಮ್ಮ ಹೆಸರೇನು? ವಾಸ ಎಲ್ಲಿ?

ಕೇಸರಿ ಪಾಣಿ—ಈ ಊರಿಗೆ ಹತ್ತಿರುವ ಬೆಟ್ಟದ ಪುರವೇ ನನ್ನ ಗ್ರಾಮ. ನನ್ನ ಹೆಸರು ಕೇಸರಿ ಪಾಣಿ.

ದೇವದತ್ತ—ಕಸಬೇನು? ವ್ಯವಸಾಯವೇ?

ಕೇಸರಿ ಪಾಣಿಗೆ ಸಮಯಕ್ಕೆ ಸರಿಯಾಗಿ ಕಥೆಯನ್ನು ಕಟ್ಟಲು ಸಾಕಷ್ಟು ಚಟುವಟಿಕೆ ಇರಲಿಲ್ಲ. ಆದುದರಿಂದ ನಿಜಾಂಶವನ್ನೇ ಹೇಳಿದನು. ಚಾರುದತ್ತನು ಮೇಲ್ಬಾಯ್ದು, 'ಅವರಿಗೆ ಸಾಲ ವಿಪರೀತವಾಗಿ ವ್ಯವಸಾಯವನ್ನು ಬಿಟ್ಟಿದ್ದರು. ನಾನು ಆ ದಿವಸ ಅವರನ್ನು ಕಂಡು, ಜಮೀನನ್ನು ಆ ರೀತಿ ಬಿಟ್ಟಿರಲು ಕಾರಣವೇನೆಂದು ಕೇಳಲು ಅವರು ಅವರ ತೊಂದರೆಗಳನ್ನು ಹೇಳಿಕೊಂಡರು. ಆದುದರಿಂದ ನನ್ನ ಕೈಲಾಗುವ ಮಟ್ಟಿಗೆ ಸಹಾಯ ಮಾಡುತ್ತೇನೆ. ನೀವಂತು ನಿಮ್ಮ ಜಮೀನನ್ನು ಸಾಗುವಳಿ ಮಾಡಿಯೇ ತೀರಬೇಕೆಂದು ಹೇಳಿದೆನು. ಅವರು ಒಪ್ಪಿರುತ್ತಾರೆ' ಎಂದನು.

'ನಮ್ಮ ದೇಶದ ಆರ್ಥಿಕ ಸ್ಥಿತಿಯು ಇಷ್ಟು ಶೋಚನೀಯಾವಸ್ಥೆಯಲ್ಲಿರುವುದಕ್ಕೆ ಮುಖ್ಯ ಕಾರಣವೇ ನಮ್ಮ ವ್ಯವಸಾಯಗಾರರು ವಿದ್ಯೆಯಲ್ಲಿಯೂ ಜ್ಞಾನದಲ್ಲಿಯೂ, ಮುಂದುವರಿಯದಿರುವುದು. ಅವರಿಗೆ ತಾವು ಮಾಡುವ ಕೆಲಸಗಳ ಜ್ಞಾನವೇ ಇಲ್ಲ. ಏನೋ ಪೂರ್ವದವರು ಮಾಡುತ್ತಿದ್ದರು. ನಾವು ಮಾಡದಿದ್ದರೆ ನೆರೆಕರೆಯವರು ಏನು ಹೇಳಿಯಾರು ಎಂಬ ಲೋಕಾಪವಾದಕ್ಕೆ ಹೆದರಿ, ಪದ್ಧತಿಯನ್ನು ನಡೆಸತಕ್ಕವರಂತೆ ವ್ಯವಸಾಯ ಮಾಡತಕ್ಕ ಜನರು, ಸಹ ಎಷ್ಟೋ ಇದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣಗಳೆರಡೇ. ಸೋಮಾರಿತನ ಮತ್ತು ಕುಡುಕತನ. ಎಷ್ಟೋ ಜನರು ಈ ಎರಡು ರೋಗಗಳಿಗೆ ತುತ್ತಾಗಿ ತಮಗಂತೂ ಮಾನ ಮರ್ಯಾದೆ ಇಲ್ಲದಷ್ಟೇ, ತಮ್ಮ ವಂಶಕ್ಕೂ, ಕುಲಕ್ಕೂ ಇನ್ನು ಮುಂದೆ ಬರತಕ್ಕ ತಮ್ಮ ಮಕ್ಕಳಿಗೂ ಸಹ, ಎಂದೂ ಹೋಗದ ಕಳಂಕವನ್ನು ಸಂಪಾದಿಸುತ್ತಾರೆ. ಅವರಿಗೇನು ಶರೀರ ಶಕ್ತಿಗೆ ಕಮ್ಮಿಯೇ? ಶ್ರದ್ಧೆಯಲ್ಲಿ ಮಂದರ್ಭವೇ? ಇವೆಲ್ಲ ಬೇಕಾದಷ್ಟು ಇವೆ. ಆದರೆ ಸೋಮಾರಿತನವು ಅವೆಲ್ಲಕ್ಕಿಂತಲೂ ಹೆಚ್ಚಾಗಿದೆ. ಇತರರ ಕೂಲಿ ಕೆಲಸವನ್ನು ಎಷ್ಟು ಶ್ರದ್ಧೆಯಿಂದ ಮಾಡುತ್ತಾರೆ. ಊರ ಬಿಲ್ಲವರಿಗೆ ಬೇಕಾದರೆ ಹಿಮಾಲಯದಿಂದ ಸಂಜೀವನವನ್ನಾದರೂ ಹುಡುಕಿ ತಂದಾರು. ಆದರೆ ತಮ್ಮ ಸ್ವಂತ ಮನೆಗಳನ್ನು ದನಗಳ ಕೊಟ್ಟಿಗೆಗಿಂತಲೂ ಕಡೆಯಾಗಿ ಇಟ್ಟಿರುತ್ತಾರೆ. ಒಂದು ಪಕ್ಷಿ ಸಹ ಸಿಕ್ಕದಿದ್ದರೂ ಸರಿಯೇ, ಹಗಲಿರುಳು ಬೇಕಾದರೂ ಬೆಟ್ಟ ಗುಡ್ಡಗಳನ್ನು, ಹೆಗಲ ಮೇಲೆ ಒಂದು ತುಪಾಕಿಯನ್ನು ಇಟ್ಟು ಸುತ್ತುವರು. ಆದರೆ ತಮ್ಮ ಮನೆಗೆಲಸವೆಂದರೆ ಅವರಿಗೆ ಇಲ್ಲದ ಬೇಸರಗಳು. ಒಂದು ಸೇರು ಹೆಂಡದ ಸಲುವಾಗಿ ನಾಲ್ಕಾಳು ಮಾಡಬೇಕಾದ ಕೆಲಸವನ್ನು ಒಬ್ಬನೇ ಜರಗಿಸುವನು. ಆದರೆ ತಮ್ಮ ಮನೆಯ ಸುತ್ತು ಮುತ್ತಲಿನ ಅಂಗಳವನ್ನು ನೋಡಿದರೆ ಅಲ್ಲಿರುವುದು ಕಾಡುಕಳೆಗಳೇ' ಎಂಬದಾಗಿ ದೇವದತ್ತನು ಗ್ರಾಮಸ್ಥರ ಅನೇಕ ಲೋಪಗಳನ್ನು ಕುರಿತು ಮಾತಾಡಿದನು. ಈ ಮಾತಿಗೆಲ್ಲಾ ಒಬ್ಬ ನಾಯಕನು ಬೇಕೆಂದಿದ್ದರೆ, ಅದಕ್ಕೆ ಕೇಸರಿಪಾಣಿಗಿಂತಲೂ ಯೋಗ್ಯರಾದವರು ಮತ್ತೊಬ್ಬರಿರರು.

ಸತ್ಯವನ್ನೇ ಹೇಳುವುದಕ್ಕಿಂತಲೂ ಕಠಿಣವಾದ ಕೆಲಸವು ಲೋಕದಲ್ಲಿ ಮತ್ತೊಂದಿರದು. ಸಹಸಲಸದಳವಾದ ಮಾಘ ಕಾಲದಲ್ಲಿ ಹಿಮಾಲಯ ಪರ್ವತವನ್ನು ದಾಟುವುದಕ್ಕಿಂತಲೂ ಕಷ್ಟತರವಾಗಿದೆ. 'ಕಂಡದ್ದನ್ನು ಹೇಳಿದರೆ ಕೆಂಡದಂತ ಕೋಪ'ವೆಂಬ ಬಲ್ಲವರ ನುಡಿಯು ಎಲ್ಲರಿಗೂ ಗೊತ್ತೇ ಇದೆಯಷ್ಟೆ. ಅದೇ ರೀತಿಯಲ್ಲಿ ದೇವದತ್ತನ ಬುದ್ಧಿವಾದದ ಮಾತಿನಲ್ಲಿ ಏನೊಂದು ಸ್ವಾರ್ಥಲೇಶ ಇದ್ದಿಲ್ಲವಾದರೂ, ಅದು ಕೇಸರಿಪಾಣಿಗೆ ಮಾತ್ರ ರುಚಿಸಲಿಲ್ಲ. ಅಷ್ಟೇ ಅಲ್ಲ; ಅವನ ಮನಸ್ಸಿನಲ್ಲಿ ಒಂದು ತರಹದ ದ್ವೇಷವು ತಲೆದೋರಿತು.

ಸ್ವಲ್ಪ ಹೊತ್ತಿನಲ್ಲಿ ದೇವದತ್ತನು ಎದ್ದು ಹೊರಟು ಹೋದನು. ಚಾರುದತ್ತನು ಅದೇ ಸಮಯವೆಂದರಿತು ದೇವದತ್ತನ ಪೂರ್ವದ ಸ್ಥಿತಿಯನ್ನೂ, ಈಗಿನ ಸ್ಥಿತಿಯನ್ನು ಹೋಲಿಸಿ, ಅವನಲ್ಲಿದ್ದ ಕೆಲವು ದೋಷಗಳನ್ನು ಅತಿಶಯವಾಗಿ ವಿವರಿಸಿ ಕೇಸರಿಪಾಣಿಯ ಮನಸ್ಸಿನಲ್ಲಿ ಜನಿಸಿದ್ದ ದ್ವೇಷವನ್ನು ಚಿಗುರುವಂತೆ ಮಾಡಿದನು. ಆ ಮೇಲೆ ಇಬ್ಬರೂ ಸ್ವಲ್ಪ ಸರಾಯಿಯನ್ನು ಕುಡಿದರು. ರಾತ್ರಿ ಬಹು ಹೊತ್ತಾಗಿತ್ತು. ಶುಕ್ಲ ಪಕ್ಷದ ದಿವಸವಾದರೂ ಆಕಾಶವೆಲ್ಲಾ ಕಾರ್ಮೋಡದಿಂದ ಕವಿದಿತ್ತು. ಆ ಘೋರಾಂಧಕಾರದಲ್ಲಿ ನಿಶಾಚರನಂತೆ ಕೇಸರಿಪಾಣಿಯು ಚಾರುದತ್ತನಿಂದ ಬೀಳ್ಕೊಂಡವನಾಗಿ ಹೊರಟು ಹೋದನು.

೩೦ ಅಧ್ಯಾಯ.

ಮಾರಣೆ ದಿವಸ ಚಾರುದತ್ತನು ದೇವದತ್ತನ ಮನೆಗೆ ಬಂದನು, ಇಬ್ಬರೂ ಏನೋ ಮಾತಾಡುತ್ತಾ ಕುಳಿತಿದ್ದರು. ಅಷ್ಟರಲ್ಲಿ ಗ್ರಾಮಸ್ಥನೊಬ್ಬನು ಬಂದು, ಇಬ್ಬರಿಗೂ ಕೈ ಮುಗಿದು, 'ದೇವದತ್ತಾ ನೀನು ನಮಗೆ ಆಗಾಗ್ಯೆ 'ಕೋರ್ಟು ಕಚೇರಿಗಳಿಗೆ ಹೋಗಬಾರದು. ನಿಮ್ಮೊಳಗೆ ಏನಾದರೂ ಮೊಕದ್ದಮೆಗಳಿದ್ದರೆ ಅವನ್ನು ಆಗುವಷ್ಟು ಪ್ರಯತ್ನಮಾಡಿ ಗ್ರಾಮಗಳಲ್ಲೇ ವಿಲೇವಾರಿ ಮಾಡಿಕೊಳ್ಳಬೇಕೆಂದು ಹೇಳುವೆಯಷ್ಟೇ. ಈಗ ಬಾ, ಈ ಸಂಗತಿಯನ್ನು ವಿಚಾರಿಸಿ ತೀರಿಸು ಈ ಪಾಪಿಯಿಂದ ನಮಗೆ ಗ್ರಾಮಗಳಲ್ಲಿ ಬದುಕುವುದೇ ಕಷ್ಟವಾಗಿದೆ. ನೆನ್ನೆ ರಾತ್ರಿ ಸುಮಾರು ಹನ್ನೆರಡು ಗಂಟೆ ಸಮಯದಲ್ಲಿ ನಾಯಿಗಳು ಒಂದೇ ಸಮನೆ ಬೊಗಳಲಾರಂಭಿಸಿದವು, ಅಷ್ಟರಲ್ಲಿ ಕೋಳಿಗಳು ಕೂಗುವ ಶಬ್ದವೂ ಕೇಳಿಸಿತು. ನಾನೂ ಮಕ್ಕಳಿಬ್ಬರೂ ಎದ್ದು ಹೊರಗೆ ಬರುತ್ತಲೇ, ಒಬ್ಬನು ಕೊಟ್ಟಿಗೆಯಿಂದ ಹೊರಟು ಓಡಲಾರಂಭಿಸಿದನು. ಆದರೆ ಅಕಸ್ಮಾತ್ತಾಗಿ ಕಾಲಿಗೆ ಕಲ್ಲು ತಗಲಿ ಬಿದ್ದು ಬಿಟ್ಟನು. ಕೂಡಲೆ ನನ್ನ ಮಕ್ಕಳು ಅವನನ್ನು ಹಿಡಿದು ಕಟ್ಟಿ ಹಾಕಿದರು. ಈ ನೀಚನಾದ ಕೇಸರಿ ಪಾಣಿಯ ಕಾಟದಿಂದ ನಮಗೆ ಆಡು ಕೋಳಿಗಳನ್ನು ಸಾಕುವುದಕ್ಕೂ ಏನೊಂದು ತರಕಾರಿ ಬೆಳಸಲಿಕ್ಕೂ ಆಗುವುದೇ ಇಲ್ಲ. ಎಲ್ಲದರಲ್ಲಿಯೂ ಇವನಿಗೊಂದು ಪಾಲು ಕೊಟ್ಟೇ ತೀರಬೇಕು.' ಎಂದನು.

ಚಾರುದತ್ತನು ಬಲವಾಗಿ ನಕ್ಕನು, ದೇವದತ್ತನ ಮುಖವು ಕಪ್ಪೇರಿತು. 'ಯಾರವನು! ನಿನ್ನ ವಾರಗಾರನೇ?' ಎಂದು ಚಾರುದತ್ತನನ್ನು ಕೇಳಿದನು. ಹೌದು ಅವನಿಂತಹ ಕಳ್ಳನೆಂದು ಯಾರು ಬಲ್ಲರು? ನಡೆ ಹೋಗುವ. ಎಲ್ಲವನ್ನು ವಿಚಾರಿಸಿ ನಿಜಾಂಶವನ್ನು ತಿಳಿದ ಮೇಲಲ್ಲವೇ ನಮ್ಮ ಅಭಿಪ್ರಾಯವನ್ನು ಕೊಡಬೇಕಾದದ್ದು, ಅವನ ಮಾತು ಹೇಗಿದೆಯೋ? ಅಂತು ತಪ್ಪಿತಸ್ಥನಾದರೆ ಬಲವಾದ ಶಿಕ್ಷೆಯನ್ನೇ ವಿಧಿಸಬೇಕು.'

ತಾವು ಒಡನೆ ಬರುವುದಾಗಿ ಅಭಯವನ್ನಿತ್ತು, ಗ್ರಾಮಸ್ಥನನ್ನು ಕಳುಹಿಸಿ, ದೇವದತ್ತನು ಉಡುಪನ್ನು ಧರಿಸಲು ಹೋದನು. ಸ್ವಲ್ಪ ಹೊತ್ತಿನಲ್ಲಿ ಇಬ್ಬರೂ ಹೊರಟು ಗ್ರಾಮಸ್ಥರಲ್ಲಿಗೆ ಬಂದರು. ದಾರಿಯುದ್ದಕ್ಕೂ ಚಾರುದತ್ತನು ಮಾತಾಡಲೇ ಇಲ್ಲ. ಈಗ ದೈವವಶಾತ್ ದೊರೆತಿರತಕ್ಕಂತ ಸುಸಂದರ್ಭವನ್ನು ತನ್ನ ಮುಂದಿನ ಕಾರ್ಯಸಾಧನೆಯ ಸಲುವಾಗಿ ಹೇಗೆ ಉಪಯೋಗಿಸಿಕೊಳ್ಳಬೇಕೆಂಬ ಯೋಚನೆಯೇ ಅವನ ಮನಸ್ಸನ್ನೆಲ್ಲಾ ಸಂಪೂರ್ಣ ಆವರಿಸಿದ್ದಿತು. ದೇವದತ್ತನೂ ಮೌನವಾಗಿಯೇ ಇದ್ದನು. ಹಟತ್ತಾಗಿ ಚಾರುದತ್ತನು, 'ದೇವ! ನಾವಿಂತಹ ಸಂದರ್ಭಗಳಲ್ಲಿ ಒಂದೊಂದು ಪಂಗಡಗಳನ್ನು ವಹಿಸಿ ಎರಡು ಪಂಗಡದವರಿಗೂ ತಮ್ಮ ತಮ್ಮ ತಪ್ಪುಗಳು ಮುಂದಟ್ಟಾಗುವ ರೀತಿಯಲ್ಲಿ ವಾದ ಮಾಡಿ ಕಾರ್ಯಕ್ರಮವನ್ನು ಜರಗಿಸಬೇಕು. ಆಗ ಇಕ್ಕಡೆಯವರಿಗೂ ತಮ್ಮ ತಮ್ಮ ತಪ್ಪುಗಳು ಸರಿಯಾಗಿ ಗೊತ್ತಾಗುತ್ತವೆ. ಅಂತು ಇನ್ನು ಮುಂದಕ್ಕೆ ಅಂತಹ ತಪ್ಪುಗಳನ್ನು ಯಾರೂ ಮಾಡಬಾರದು. ಅವರ ಬದಲು ನಾವು ಇಬ್ಬರೂ ಒಂದೇ ಕಡೆ ನಿಂತು, ಮಾತಾಡಿದರೆ ಅದು ಒಂದು ಪಕ್ಷ ಗ್ರಾಮದಲ್ಲಿ ಒಡಕನ್ನು ತರಲಿಕ್ಕೂ ಸಾಕು. ಪಿರ್ಯಾದಿಯಸ್ಥರು ನಮ್ಮಿಬ್ಬರ ಒತ್ತಾಸೆಯು ಅವರ ಪರವಿದೆಯೆಂಬ ಸಂಗತಿಯನ್ನು ತಿಳಿದೊಡನೆ ತಪ್ಪಿತಸ್ಥರನ್ನು ನಾನಾವಿಧದಲ್ಲಿ ಪೀಡಿಸಿ ಕಾಡುತ್ತಾರೆ. ಆದುದರಿಂದ ಇಂದಿನ ಈ ಕಾರ್ಯದಲ್ಲಿ ನಾನು ಕೇಸರಿಪಾಣಿಯ ಪರವಾಗಿ ವಾದ ಮಾಡುತ್ತೇನೆ. ಆದರೆ ನೀನು ಬಹು ಕಠಿಣವಾದ ರೀತಿಯಲ್ಲಿ ಆತನ ಕೆಲಸವನ್ನು ಖಂಡಿಸಿ, ಅವನನ್ನು ಶಿಕ್ಷಿಸಬೇಕೆಂದೇ ಹಟಹಿಡಿಯಬೇಕು. ಆಗ ಆತನಿಗೆ ಬಲವಾದ ನಾಚಿಕೆಯಾಗಿ ಅವನು ತನ್ನ ಹೇಯವಾದ ಕೃತ್ಯಗಳನ್ನು ಇನ್ನು ಮುಂದಕ್ಕೆ ಬಿಟ್ಟು ಬಿಡುತ್ತಾನೆ. ನಾನವನಿಗೆ ಒತ್ತಾಸೆಯಾಗಿ ಮಾತಾಡುವುದರಿಂದ ಇತರರಿಗೆ ಅವನನ್ನು ಕಂಡಾಬಟ್ಟೆ ಹಿಯಾಳಿಸಲಿಕ್ಕೂ ಆಸ್ಪದವಿರುವುದಿಲ್ಲ.

ನಿರ್ಮಲ ಹೃದಯನಾದ ದೇವದತ್ತನಿಗೆ ಚಾರುದತ್ತನ ಮಾತಿನ ಇಂಗಿತವನ್ನು ಊಹಿಸಲು ಆಗಲಿಲ್ಲ. ಆವನು ಅದು ಸರಿಯಾದ ದಾರಿಯೆಂದೇ ಭಾವಿಸಿ ಅದಕ್ಕೆ ಸಮ್ಮತಿಸಿದನು. ಅಷ್ಟರಲ್ಲಿ ಅವರು ಊರವರು ಸೇರಿದ್ದ ಸ್ಥಳವನ್ನು ಸೇರಲು, ಎಲ್ಲರೂ ಇಬ್ಬರಿಗೂ ವಂದಿಸಿದರು.

[ಅಪೂರ್ಣ.

—o0o—

ಕಾಂಗ್ರೆಸ್ ಕಾರ್ಯಕ್ಷೇತ್ರ.



ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮವನ್ನು ಹೋರಾಡಲಿಕ್ಕೆ ಕಳೆದ ಐವತ್ತು ವರ್ಷಗಳ ಸತತ ಪರಿಶ್ರಮದಿಂದ ತಯೊರುಮಾಡಿದ ಅಮೋಘ ಧನುಸ್ಸೆಂದರೆ ಕಾಂಗ್ರೆಸ್. ಈ ಧನುಸ್ಸಿನಲ್ಲಿ ಪ್ರಯೋಗಮಾಡಬೇಕಾದ ಬ್ರಹ್ಮಾಸ್ತ್ರಗಳೆಂದರೆ ಅಹಿಂಸಾ, ಸತ್ಯ, ಶಿಸ್ತು ಇವೇ ಮೊದಲಾದವಾಗಿವೆ. ಈ ಅಸ್ತ್ರಗಳನ್ನು ಸರಿಯಾಗಿ ಪಾಲಿಸದಿದ್ದರೆ ಅವು ಮೊಂಡಬಿದ್ದು ನಿಶಕ್ತಿಗೊಳ್ಳುವವು. ಆದ್ದರಿಂದ ಕಳೆದ ಅರ್ಧ ಶತಮಾನದಲ್ಲಿ ಅನುಭವಿಸಿದ ಕಡುಕಾರ್ಪಣ್ಯಗಳನ್ನು ಮನದಲ್ಲಿಟ್ಟು ಈ ಅಸ್ತ್ರಗಳನ್ನು ಆದಷ್ಟು ಹರಿತಮಾಗಿಡಲು ಪ್ರಯತ್ನಿಸಬೇಕೇ ವಿನಹ ಅನ್ಯಥಾ ಮಾಡುವದರಿಂದ ದೇಶದ ಹಿತಸಾಧನೆ ಸರ್ವಥಾ ಆಗಲಾರದು.

ಬೋಸರ ಬದಲಾವಣೆ.

ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ನಿರ್ಣಯಗಳನ್ನುಲ್ಲಂಘಿಸಿ ನಿಷೇಧ ಸಭೆಗಳನ್ನು ಜರಗಿಸಿದ ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಸುಭಾಷ ಚಂದ್ರಬೋಸರ ಮೇಲೆ ಶಿಸ್ತುಭಂಗ ಕಾರ್ಯಕ್ರಮವನ್ನು ಕೈಗೊಳ್ಳುವರೇ? ಹಾಗಾದರೆ ಅವರ ಪರಿಣಾಮವೇನಾಗುವದು? ಶಿಸ್ತುಭಂಗ ಕಾರ್ಯಕ್ರಮ ಕೈಗೊಳ್ಳದಿದ್ದರೆ ಏನಾದೀತು? ಕಾಂಗ್ರೆಸ್ ಅಧಿಕಾರಿ ವರ್ಗದ ಮನೋವೃತ್ತಿಯೇನು? ಇವೇ ಮೊದಲಾದ ಪ್ರಶ್ನೆಗಳು ದೇಶದ ಪ್ರತಿಯೊಂದು ಮೂಲೆಯಿಂದಲೂ ಕೇಳಿಬರುತ್ತಿವೆ. ಆದ್ದರಿಂದ ಈ ಬಗ್ಗೆ ಸ್ವಲ್ಪ ವಿವರಣೆಯನ್ನಿಲ್ಲಿ ಕೊಡುವೆವು.

ಶಿಸ್ತು ಭಂಗಕ್ಕೆ ಶಿಕ್ಷೆ.

ಯಾವದೊಂದು ಸಂಸ್ಥೆಯೇ ಆಗಲಿ, ಅದರ ಕಾರ್ಯಕಲಾಪಗಳು ವ್ಯವಸ್ಥಿತ ರೀತಿಯಿಂದ ನಡೆಯಲು ಶಿಸ್ತು ಪಾಲನೆಯು ಅಗತ್ಯ. ಶಿಸ್ತು ಭಂಗ ಮಾಡಿದವನು ಯಾವ ಮುಖಂಡನೇ ಇರಲಿ, ಸಂಸ್ಥೆಯ ಹಿತದೃಷ್ಟಿಯಿಂದ ಆತನ ಮೇಲೆ ಶಿಸ್ತು ಭಂಗದ ಕಾರ್ಯಕ್ರಮ ಕೈಕೊಳ್ಳದಿದ್ದರೆ ಸಂಸ್ಥೆಯು ಸರಿಯಾಗಿ ಕೆಲಸ ಮಾಡಲಾರದು. ಅದರಲ್ಲೂ ಇಂದು 40 ಲಕ್ಷ ಸದಸ್ಯರಿಂದ ಕೂಡಿರುವ ಜಗತ್ತಿನ ಅತ್ಯಮೋಘ ಸಂಸ್ಥೆಯಾದ ಕಾಂಗ್ರೆಸು ಶಿಸ್ತನ್ನು ಪರಿಪಾಲಿಸದಿದ್ದರೆ ತನ್ನ ಕಾರ್ಯಸಾಗಿಸುವದು ಕಷ್ಟ. ಆದ್ದರಿಂದ ಯಾವ ಮುಖಂಡನೂ ಕಾಂಗ್ರೆಸ್ ಸಂಸ್ಥೆಗೆ ಮಿಗಿಲಾದವನಲ್ಲ. ಶಿಸ್ತಿನಲ್ಲೇ ಬಲ, ಎಂಬ ದೃಷ್ಟಿಯಿಂದ ಸುಭಾಷರ ಮೇಲೆ ಕಟ್ಟಳೆ ಹಾಕುವದು ಕಾಂಗ್ರೆಸ್ ಕಾರ್ಯಕರ್ತರ ಕರ್ತವ್ಯ. ಆದರೆ ಇಂದಿನ ಪರಿಸ್ಥಿತಿಯು ಭಯಾನಕವಾಗಿದೆ. 'ಅತ್ತ ಹೋದರೆ ಕೆರೆ, ಇತ್ತ ಹೋದರೆ ತೊರೆ' ಎಂಬ ಬಿಕ್ಕಟ್ಟಿನಲ್ಲಿ ಇಂದು ಕಾಂಗ್ರೆಸ್ ಕಾರ್ಯಕರ್ತರ ಪರಿಸ್ಥಿತಿಯಿದೆ. ಬೋಸರಾದರೂ ಕಾಂಗ್ರೆಸ್ ಕಾರ್ಯಕರ್ತರ ಯಾವ ಶಿಸ್ತಿನ ಚಾಟಿಗೂ ಹೆದರೆನೆಂದು ಕಂಠೋಕ್ತವಾಗಿ ಸಾರಿಯೇ ಬಿಟ್ಟಿರುವರು. ಆದ್ದರಿಂದ ಬೋಸರ ಮೇಲೆ ಶಿಸ್ತಿನ ಕಾರ್ಯಕ್ರಮವನ್ನು ಕೈಕೊಂಡರೂ ಬೋಸ್ ಮತ್ತು ಅವರ ಅನುಯಾಯಿಗಳು ಇನ್ನಷ್ಟು ಉದ್ವಿಗ್ನರಾಗಿ ವಿರೋಧ ಕಾರ್ಯಕ್ರಮ ನಡೆಸದಿರರು. ಬೋಸರಂತಹ ಪ್ರಚಂಡ ವ್ಯಕ್ತಿಯು ದೇಶದಲ್ಲಿ ನಿಶೇಧ ಕಾರ್ಯಕ್ರಮ ಕೈಕೊಂಡರೆ ಅವರಿಂದ ಕಾಂಗ್ರೆಸ್ಸಿಗೆ ಧಕ್ಕೆತಾಗದಿರದು. ಇವರ ಮೇಲೆ ಶಿಸ್ತಿನ ಕಾರ್ಯಕ್ರಮ ಕೈಕೊಳ್ಳದಿದ್ದರೆ ಕಾಂಗ್ರೆಸ್ಸಿನಲ್ಲಿ ಶಿಸ್ತು ಇಲ್ಲದಂತಾಗಿ ಕಾಂಗ್ರೆಸ್ಸಿನ ಹಿತ ಹಾಗೂ ಭದ್ರತೆಗೆ ಗಂಡಾಂತರ ಒದಗದಿರದು. ಆದ್ದರಿಂದ ಅಧಿಕಾರಿವರ್ಗವು ಪೂರ್ಣ ವಿವೇಚನೆಯಿಂದ ಕಾರ್ಯಕ್ರಮ ಕೈಕೊಳ್ಳಬೇಕಾಗಿದೆ. ಆದ್ದರಿಂದಲೇ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ವಿಶೇಷ ಅಧಿವೇಶನವು ಆಗಸ್ಟ ೯ರಲ್ಲಿ ಪಾಟ್ನಾದಲ್ಲಿ ಸೇರುವುದು. ಈ ಬಗ್ಗೆ ಅಲ್ಲಿ ತೀವ್ರ ಚರ್ಚೆಯಾಗುವದು. ಅಂತು ಅಧಿಕಾರಿ ವರ್ಗದ ಸ್ಥಿತಿಯು ಸಂದಿಗ್ಧಾವಸ್ಥೆಯಲ್ಲಿದೆ.

ಬದಲಾವಣೆ.

ಇಂದು ಬೋಸರು ಶೀರ ಪಲ್ಲಟವಾಗಿದ್ದಾರೆ. ಅಂದು ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಇದ್ದ ಸೌಮ್ಯ ಹಾಗೂ ಮೃದು ಹೃದಯದ ಬೋಸರಲ್ಲ. ಅವರಲ್ಲಿ ಹಿಂದಿಗಿಂಥಾ ಸೂರ್ಮಣಿ ಚಟುವಟಿಕೆ ಕಾಣಿಸುತ್ತಿದೆಯೆಂದು ಅವರನ್ನು ಬಲ್ಲವರ ಹೇಳಿಕೆ—ಅಂತೂ ಅವರ ಇಂದಿನ ಕಾರ್ಯಕಲಾಪದಿಂದ ಅವರಲ್ಲಿ ಒಂದು ಸ್ಫೂರ್ತಿಯು ಉದ್ಭವಿಸಿರುವದು ಎಲ್ಲರಿಗೂ ಕಂಡುಬರುವದು. ಈಗ ದಿನವಹಿ 18 ತಾಸು ದುಡಿದು ಕೆಲಸ ಮಾಡುತ್ತಿರುವರು. ಫಾರ್ವರ್ಡ ಬ್ಲಾಕಿನ ಮುನ್ನಡೆಗಾಗಿ ಪೂರಾ ಶ್ರಮವಹಿಸುತ್ತಿರುವರು. ಕಿಸಾನ್, ಮುಸ್ಲಿಂ ಹಾಗೂ ಇತರ ಮುಖಂಡರು ಅವರ ಭೇಟಿಯಾಗುತ್ತಿರುವರು. ಅವರ ಭಾಷಣಗಳು ಇಂದು ಜನರನ್ನು ಕಿಕ್ಕಿರಿದು ಸೇರಿಸುತ್ತಿವೆ. ದಿನವಹಿ ಭಾಷಣವೇದಿಗಳಲ್ಲಿ ನಿಂತು ಘೋಷಣೆ ಮಾಡುತ್ತಿರುವರು. 'ಫಾರ್ವರ್ಡ ಬ್ಲಾಕಿ'ನ ಬೆಳವಣಿಗೆಗಾಗಿ ಅನೇಕ ಕಡೆಗಳಿಂದ ಅನಿರೀಕ್ಷಿತ 'ಹೊನ್ನಿನ ಹಸ್ತ'ಗಳು ಬರುತ್ತಿರುವವು. ಅಲ್ಲದೆ ಬೋಸರು ಕಾಂಗ್ರೆಸ್ ಅಧಿಕಾರಿ ವರ್ಗವು ಮಾಡುವ ಕಾರ್ಯವನ್ನು ಟೀಕಿಸುವ ಕಾರ್ಯವನ್ನೂ ಕೈಕೊಂಡಿರುವರು. ಬೊಂಬಾಯಿ ಮಧ್ಯಪಾನ ನಿಶೇಧದ ಟೀಕೆಯಾಯಿತು. ಕಾಂಗ್ರೆಸ್ ಠರಾವುಗಳ ನಿಶೇಧ ಪ್ರದರ್ಶನವಾಯಿತು. ಅಂತೂ ಇಂದು ಬೋಸರು ಭಾರತದ ದೃಷ್ಟಿಯನ್ನೇ ತನ್ನೆಡೆಗೆ ಆಕರ್ಷಿಸುತ್ತಿರುವರು. ಅವರ ಮೇಲೆ ಗಾಂಧಿಜೀಯವರ ಟೀಕೆಯಾಯಿತು. ನೆಹರುಗಳ ಗುಣದೋಷ ವಿವೇಚನೆಯಾಯಿತು. ಕಾಂಗ್ರೆಸ್ ಅಧ್ಯಕ್ಷರ ಖಂಡನೆಯಾಯಿತು. ಇನ್ನೂ ಅನೇಕರ

ನಿಮಂತ್ರಣೆಯೂ ಆಯಿತು. ಅಂತೂ ಅವರು ತಮ್ಮ ಪಥದಲ್ಲೇ ಧಾವಿಸುತ್ತಿರುವರು. ಇವರ ಶೀಘ್ರ ಪರಿಣಾಮವು ಬಂಗಾಲ ಪ್ರಾಂತೀಕ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡಬೇಕಾಗಿಬರುವದೇ ಆಗಬಹುದು.

ನೆಹರುಗಳ ವರ್ತನೆ.

ಕಾಂಗ್ರೆಸಿನ ಎಡಬಲ ಪಕ್ಷಗಳಿಗೆ ಸರಿಹೋಗುವಂತೆ ವರ್ತಿಸುತ್ತಿರುವ ಏಕ ವ್ಯಕ್ತಿಯೆಂದರೆ ನೆಹರೂರವರು. ಈಗ ನೆಹರು ಮತ್ತು ಬೋಸರಲ್ಲಿ ದ್ವೇಷವು ಅಂಕುರಿಸುತ್ತಿದೆಯೆಂದು ಕೆಲವರ ಅಂಬೋಣ. ಆದರೆ ನೆಹರೂಗಳು ಎರಡು ಪಂಗಡಗಳಿಗೂ ಮಧ್ಯೆ ಇರುವ ಸೇತುವೆಯಂತೆ ವರ್ತಿಸುತ್ತಿರುವರು. 'ಬಹುಮತದಿಂದ ಮಂಜೂರಾದ ಯಾವದೊಂದು ಠರಾವಾದರೂ ಇಡೀ ಸಂಸ್ಥೆಯ ಸದಸ್ಯರಿಗೇ ಅನ್ವಯಿಸುವದು. ಇಂತಿರುವಾಗ ಅದನ್ನು ವಿರೋಧಿಸುವವರು ಆ ಸಂಸ್ಥೆಯಲ್ಲಿ ತಮಗಿರುವಸ್ಥಾನಗಳನ್ನು ಬಿಡಬೇಕಾಗುವದು.' ಇದೇ ಬೋಸರ ಧೋರಣೆಯ ಬಗ್ಗೆ ನೆಹರೂಗಳ ಅಭಿಪ್ರಾಯ. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯಲ್ಲೇ ಶಿಸ್ತಿನ ಕಾರ್ಯಕ್ರಮ ಕೈಕೊಳ್ಳುವ ಬಗ್ಗೆ ಬಿಸಾ ಬಿಸಾಯಾಗಿಸುವದು. ನೆಹರೂಗಳು ಬೋಸರು ಮಾಡಿದ ನಿಷೇಧ ಕಾರ್ಯಕ್ರಮವನ್ನು ತೀವ್ರವಾಗಿ ಖಂಡಿಸಿದರೂ ಶಿಸ್ತಿನ ಕಾರ್ಯಕ್ರಮದ ವಿಚಾರ ಮಾತೆತ್ತಲಿಲ್ಲ. ಇದರಿಂದ ಅವರು ತಮ್ಮ ಪ್ರತಿಷ್ಠೆಯನ್ನು ವಿವೇಕದಿಂದ ಉಳಿಸಿಕೊಂಡರೆಂದು ಹಲವರ ಅಭಿಮತ. ನೆಹರುಗಳ ಈ ವರ್ತನೆಯಿಂದ ಅವರ ಧ್ಯೇಯವೇನೆಂದು ತಿಳಿಯುವದು ಕಷ್ಟತರವಾಗಿದೆ. ಗಾಂಧೀಜಿಯವರ ಮರುದಿನಕ್ಕೆ ಭಾರತವನ್ನು ಮುನ್ನಡೆಸುವ ಪದದಲ್ಲಿ ನಡೆಸುವರೆಂದೆನಿಸಿಕೊಂಡಿರುವ ಈ ಅಖಂಡ ವ್ಯಕ್ತಿಯ ಅಂತರ್ಯವನ್ನರಿತರಾರು? ಎಲ್ಲವೂ ಕಾಲಗರ್ಭದಲ್ಲಡಗಿರುವ ವಿಚಾರವಾದ್ದರಿಂದ ಮುಂದ ನಿರೀಕ್ಷಿಸೋಣ.

ಕೆಲವು ಮುಸ್ಲಿಂಮರ ಧೋರಣೆ.

ಜಗತ್ತಿನಲ್ಲಿ ಅಜಾತ ಶತ್ರುವೆಂದು ಕರೆಯಲ್ಪಡತಕ್ಕಂಥ ಏಕಮೇವ ವ್ಯಕ್ತಿಯೆಂದರೆ ಮಹಾತ್ಮಾ ಗಾಂಧಿ. ಇವರಂಥಾ ಮಹಾ ವಿಭೂತಿಯನ್ನು ಶತ್ರುಗಳು ಸಹ ಗೌರವ ದೃಷ್ಟಿಯಿಂದ ನೋಡುತ್ತಿರುವರು. ಅವರ ಗಡಿನಾಡಿನಿಂದ ಗಾಂಧೀಜಿಯವರು ಹಿಂದಿರುಗಾಗ ಮುಸ್ಲಿಂ ಲೀಗಿನ ಕೆಲವು ಸದಸ್ಯರು ಅನುಚಿತ ಪ್ರದರ್ಶನ ಮಾಡಿದರೆಂಬ ಸುದ್ದಿಯು ಬಂದಿದೆ. ಹಿಂದೂ ಮುಸ್ಲಿಂ ಐಕ್ಯದ ಸಲುವಾಗಿ ತನ್ನ ಜೀವನವನ್ನೇ ಸವೆಯಿಸುತ್ತಿರುವ ಈ ಮಹಾ ಮಹಿಮರ ಬಗ್ಗೆ 'ಗಾಂಧಿ ಮುರ್ದಾಬಾದ್' ಎಂಬ ಶ್ಲೋಕವನ್ನು ಹಾಡಿದರಂತೆ. ಇದನ್ನು ಕೇಳುವಾಗ ಮುಸ್ಲಿಂ ಲೀಗಿನಲ್ಲಿ ಉತ್ತಮ ಸಂಸ್ಕೃತಿಯ ಜನರಿಲ್ಲವೇ? ಅವರ ಮನಸ್ಸು ಉತ್ತಮ ಮಟ್ಟಕ್ಕೆ ಮುಟ್ಟಿಲ್ಲವೇ? ಎಂಬ ಸಂಶಯವು ಬರುವದು. ಈ ತರಹದ ಮುಸ್ಲಿಮರ ಧೋರಣೆಯು ತೀರಾ ಶೋಚನೀಯವಾದದೆಂಬುದರಲ್ಲಿ ಭಿನ್ನಾಭಿಪ್ರಾಯವಿಲ್ಲ. 'ವಿಶಾಲವಾದ ಮುಸಲ್ಮಾನ ಸಾಮ್ರಾಜ್ಯ' ಸ್ಥಾಪಿಸುವ ಕನವರಿಕೆಯಲ್ಲಿರುವ ಜಿನ್ನಾ ಸಾಹೇಬರ ಅನುಯಾಯಿಗಳ ವರ್ತನೆಯು ತೀರಾ ಕಳಂಕಪ್ರಾಯವಾಗಿದೆ. ಮಹಾ ವಿಭೂತಿಗಳಾದ ಪೈಗಂಬರರ ಅನುಯಾಯಿಗಳಲ್ಲಿ ಇಂಥವರಿರುವದು ಭಾರತದ ದುರ್ದೈವ.

ಪರದೇಶಗಳ ಪರಿಸ್ಥಿತಿ.

ಜರ್ಮನಿಯ ರಾಕ್ಷಸೀ ಮಹತ್ವಾಕಾಂಕ್ಷೆಯ ಪ್ರದರ್ಶನ. ಪ್ರಜಾಸತ್ತಾತ್ಮಕ ಬ್ರಿಟನಿನ ಘಾತಕತನ ತನ್ನ ಉದ್ಧಾರಕನೆಂದ ಬ್ರಿಟನನ್ನು ಬಗ್ಗಿಸಿರುವ ಜಪಾನ. ಅಹಿತವನ್ನು ಬಗೆದರೂ ಹಿಂಜರಿಯದಿರುವ ಸೈಂ. ರಷ್ಯಾ-ಬ್ರಿಟನ್ ಸಂಧಾನದ ಬಗ್ಗೆ ಬ್ರಿಟನಿನ ಸಂಶಯ. ಅಂತೂ ಇಂಥಾ ಜಗತ್ತಿನ ಅವ್ಯವಸ್ಥೆಯ ದರ್ಶನ.

ಚೈನಾಕ್ಕೆ ಇಂಗ್ಲೆಂಡಿನ ದಗೆ.

ಚೈನಾಯುದ್ಧ ಪ್ರಾರಂಭವಾದಂದಿನಿಂದ ಬ್ರಿಟನು ಚೈನಾಕ್ಕೆ ಹಿತಗಲ್ಲಾದರೂ ತನ್ನ ಸಹಾನುಭೂತಿಯನ್ನು ತೋರಿಸುತ್ತ ಬಂದಿದೆ. ಇದೊಂದು ಅನಿರೀಕ್ಷಿತ ಸಹಾಯದಿಂದ ಚೈನಾವು ಹುರುಪುಗೊಂಡು ಜಪಾನನ್ನು ಹಿಂದಟ್ಟುವ ಸ್ವಭಾವವನ್ನು ತೋರಿದೆ. ಆದರೆ ಇತ್ತಲಾಗಿ ಟಿಯಾನ್‌ಸ್ಟೀನ್‌ನಲ್ಲಿ ಜಪಾನರು ಬ್ರಿಟಿಷ್ ಅಧಿಕಾರಿ ವರ್ಗದ ಮೇಲೆ ಬೇಗ ಬಿದ್ದು ಅನೇಕ ಪ್ರಜೆಗಳನ್ನು ಅವಮಾನಿಸಿದ್ದಲ್ಲದೆ ಒಂದು ಬಗೆಯಿಂದ ಅವರನ್ನು ಯುದ್ಧಕ್ಕೂ ಆಹ್ವಾನಿಸಿತು. ಇದಲ್ಲದೆ ಬ್ರಿಟಿಷರ ದುರ್ಬಲತನವನ್ನರಿದು ಜಪಾನು ಕೆಲವು ಶರತ್ತುಗಳನ್ನು ಬ್ರಿಟಿಷರ ಮುಂದಿಟ್ಟಿತು. (1) ಚೈನಾದೇಶದ ನಾಯಕನಾದ ಚಿಯಾಂಗ್ ಕೈಶೆಕನಿಗೆ ಇಂಗ್ಲೆಂಡು ಸಾಲದ ಸವಲತ್ತನ್ನು ಕೊಡಕೂಡದು. ಹಾಗೆ ಕೊಡುವದಾದರೆ ಜಪಾನಿನ ವಿರೋಧ ಪ್ರದರ್ಶಿಸಿದಂತೆ ಭಾಸವಾಗುವದು. (2) ಚೈನಾಕ್ಕೆ ಯಾವ ವಿಧದಿಂದಲೂ ಸಹಾಯ ಮಾಡಕೂಡದು. (3) ಆರ್ಥಿಕ ಮತ್ತು ವಾಣಿಜ್ಯ ವಿಷಯದಲ್ಲಿ ಬ್ರಿಟನು ಟಿಯಾನ್‌ಸ್ಟೀನ್‌ನಲ್ಲಿ ಜಪಾನಿಗೆ ಸಹಾಯಮಾಡಬೇಕು. ಇವೇ ಮೊದಲಾದ ಶರತ್ತುಗಳನ್ನು ಹಾಕಿತು. ಇದರ ತರ್ಕವಿತರ್ಕಕ್ಕಾಗಿಯೇ ಟೋಕಿಯೋದಲ್ಲಿ ಆಂಗ್ಲೋ ಜಪಾನರ ಮಧ್ಯದ ಮಾತುಕತೆ ನಡೆಯಿತು. ಇದರ ಪರಿಣಾಮವು ಚೀನಾಕ್ಕೆ ತುಂಬಾ ಧಕ್ಕೆಯನ್ನು ತಂದಿದೆ. ಈ ಸಂಧಾನವನ್ನು ಎರಡನೇ ಮ್ಯೂನಿಚ್ ಎಂದೂ ಅನ್ನಬಹುದು. ಅಂದು ಮ್ಯೂನಿಚ್‌ನಲ್ಲಿ ಹಿಟ್ಲರನೊಡನೆ ಸಂಧಿ ಮಾಡಿಕೊಂಡು ಝೆಕೊಸ್ಲೊವಾಕಿಯಾದ ಕತ್ತು ಹಿಸುಕಿದಂತೆ ಇಂದಾದರೂ ಬ್ರಿಟನು ಜಪಾನಿನೊಡನೆ ಸಂಧಾನ ಮಾಡಿಕೊಂಡು ಚೈನಾದ ಕತ್ತು ಹಿಸುಕಿದೆ.

ಪ್ರಧಾನ ಮಂತ್ರಿಗಳಾದ ಚೇಂಬರ್‌ಲೇನರು ಕಾಮನ್ಸ್ ಸಭೆಯಲ್ಲಿ ಈ ಸಂಧಿಸಾಫಲ್ಯದ ಸಂತೋಷದಲ್ಲಿ ಭಾಷಣ ಮಾಡುತ್ತ 'ಚೈನಾ-ಜಪಾನು ಯುದ್ಧ ಮುಗಿಯುವವರೆಗೂ ಜಪಾನು ಈಗ ವಶಮಾಡಿಕೊಂಡಿರುವ ಪ್ರಾಂತಗಳಲ್ಲಿ ಚೈನಾಕ್ಕೆ ಯಾವ ಸಹಾಯವನ್ನೂ ಮಾಡಬಾರದು. ಈ ಬಗ್ಗೆ ಬ್ರಿಟಿಷ್ ಅಧಿಕಾರಿಗಳು ಚೈನಾದಲ್ಲಿ ಎಚ್ಚರದಿಂದ ವರ್ತಿಸತಕ್ಕದ್ದು' ಎಂದಿರುವರು. ಅಂತು ಬ್ರಿಟನು ಚೈನಾದಲ್ಲಿ ತನ್ನ ರಾಕ್ಷಸೀ ಮಹತ್ವಾಕಾಂಕ್ಷೆಯಿಂದ ರಾಜ್ಯವಿಸ್ತರಣ ಮಾಡುತ್ತಿರುವ ಜಪಾನರ ಕಾರ್ಯಕ್ರಮವನ್ನು ಒಪ್ಪಿದಂತಾಯಿತು. ಪ್ರಜಾಸತ್ತಾತ್ಮಕ ರಾಜ್ಯವೆಂದು ಹೊಗಳಿಕೊಳ್ಳುತ್ತಿರುವ ಬ್ರಿಟನು ಸರ್ವಾಧಿಕಾರಿಗಳು ರಾಜ್ಯವಿಸ್ತರಣಾ ತೃಷೆಯಿಂದ ರಕ್ತದ ಕಾಲುವೆ ಹರಿಸಿ ಜಗತ್ತಿನಲ್ಲಿ ಘೋರತಾಂಡವನಾಡುತ್ತಿದ್ದರೂ ಸಹ ಅವಕ್ಕೆ ಪ್ರತಿಬಂಧ ನಡೆಯಲಾರದೆ ಅವರ ತಾಳಿಗಂತೆ ಕುಣಿಯುತ್ತಿರುವದು ಸ್ವರಾಜ್ಯ ನಾಚಿಕೆಗೇಡಿನ ವಿಚಾರ. ಇಂದು ತನ್ನ ಉನ್ನತಿಯ ಅತ್ಯುಚ್ಚಸ್ಥಾನದಲ್ಲಿರುವ ಬ್ರಿಟನು ಎಲ್ಲಿ ಯುದ್ಧರಂಗಕ್ಕೆ ಇಳಿದು, ಆ ಸರ್ವಾಧಿಕಾರಿಗಳನ್ನು ತಡೆಗಟ್ಟುವ ಪ್ರಯಾಸದಲ್ಲಿ ಇಳಿದರೆ ತನ್ನ ಸ್ಥಾನಚ್ಯುತಿಯಾದೀತೋ ಎಂಬ ಭಯದಿಂದ ಜಗತ್ತಿನಲ್ಲಿ ಯಾವ ಅನ್ಯಾಯ ಅನಾಹುತಗಳು ನಡೆದರೂ ಭಯವಿಲ್ಲ. ತಾವು ಮಾತ್ರ ತಟಸ್ಥ ಉಳಿದರೆ ಸಾಕೆಂಬ ಘೋರತನವನ್ನು ತಳೆದಂತೆ ಕಾಣುತ್ತಿದೆ. ಬ್ರಿಟಿಷರ ಹೆಸರಿಗೆ ಮರುಳಾಗಿ ಅಬಲ ರಾಷ್ಟ್ರಗಳು ಅದನ್ನು ನಂಬಿ ವಿನಾಶದ ದಾರಿ ಹಿಡಿಯುತ್ತಿವೆ. ಬ್ರಿಟನು ಹೀಗೆ ಪೌರೋಹಿತ್ಯವನ್ನು ವಹಿಸಿ ಅಬಲ ರಾಷ್ಟ್ರಗಳನ್ನು ಸರ್ವಾಧಿಕಾರಿಗಳ ಕರಾಳ ಹಸ್ತಕ್ಕೆ ಹಾಕಿ ತಾನು ಬದುಕಲಿಚ್ಛಿಸುವದು ಬೀರತ್ವಕ್ಕಲ್ಲದ ವರ್ತನೆ. ಹೀಗೆ ಹೆಚ್ಚುಕಾಲ ಬದುಕಲಿಕ್ಕಾಗುವದಿಲ್ಲವೆಂಬುದನ್ನಾದರೂ ಬ್ರಿಟನು ಮರೆಯದಿರಲಿ. ಈವರೆಗೆ ಬ್ರಿಟನದ ಸಹಾಯವಿಲ್ಲದ್ದರಿಂದ ತಮ್ಮ ವ್ಯಕ್ತಿತ್ವವನ್ನು ಕಳಕೊಂಡ ರಾಷ್ಟ್ರಗಳಂತೆ ಚೀನವು ವರ್ತಿಸದು. ಇಂದು ಜಗತ್ತಿಗೆ ಚೀನವು ತನ್ನ ದೇಶಭಕ್ತಿ ಹಾಗೂ ಸ್ವಾತಂತ್ರ್ಯಾಭಿಲಾಷೆಯನ್ನು ಎತ್ತಿ ತೋರಿಸಿದೆ. ಬ್ರಿಟನಿನಿಂದ ಮೇಲಿನ ಸಂಧಾನ ಪ್ರಕಾರ ಚೀನಕ್ಕೆ ಸಹಾಯ ಸಿಗದಿದ್ದರೂ ಅವಕ್ಕೆ ಚೀನಾನಾಯಕನಾದ ಚೈಯಾಂಗ್ ಕೈಶೆಕನು ಬೆದರಿ ಶರಣಾಗತನಾಗುವವನಲ್ಲ. ಯಾವ ರಾಷ್ಟ್ರವು ಎಂಥಾ ಕುಹಕತನವನ್ನು ಬಗೆದರೂ ಚೀನವು ವಿಜಯಶಾಲಿಯಾಗುವದರಲ್ಲಿ ಸಂದೇಹವಿಲ್ಲ.

ಅಮೇರಿಕ.

ಜಗತ್ತಿನಲ್ಲಿ ಇಂದು ನಡೆಯುತ್ತಿರುವ ಪಾಶವೀ ಕೃತ್ಯಗಳ ಗೋಜಿಗೆ ಹೋಗದೆ ತನ್ನಷ್ಟಕ್ಕೆ ತಾನೇ ವ್ಯಾಪಾರ ವಹಿವಾಟುಗಳನ್ನು ನಡೆಸಿ ಪ್ರಪಂಚದಲ್ಲೇ ಧನಿಕ ರಾಷ್ಟ್ರವಾಗಿ ಅಮೇರಿಕವು ಮೆರೆಯುತ್ತಿದೆ. ಈಗ ಚೀನಾದ ವ್ಯಕ್ತಿತ್ವಕ್ಕೆ ಕೊಡಲೀ ಪೆಟ್ಟನ್ನು ಹಾಕಿದ ಬ್ರಿಟನದ ಘಾತುಕತನದ ಈ ಸಂದರ್ಭದಲ್ಲಿ ಅಮೇರಿಕಾವು ಒಂದು ಸಮಯೋಚಿತ ಕಾರ್ಯ ನಡೆಸಿದೆ. 1911 ನೇ ಇಸವಿಯಲ್ಲಿ ಜಪಾನು ಅಮೇರಿಕಾಗಳೊಡನೆ ನಡೆದ ಆರ್ಥಿಕ ಮತ್ತು ನೌಕಾಹಿಂಕ ಸಂಧಾನವನ್ನು ಸಮಾಪ್ತಿಗೊಳಿಸಿ ಮುಂದೆ ಜಪಾನಿಗೆ ರಫ್ತುಮಾಲುಗಳನ್ನು ಸರಬರಾಯಿ ಮಾಡುವದಿಲ್ಲೆಂದೂ, ಜಪಾನಿನ ಚಿನ್ನ ಬೆಳ್ಳಿಗಳನ್ನು ಅಮೇರಿಕವು ಮುಂದೆ ಕೊಂಡುಕೊಳ್ಳಲಾರದೆಂದೂ ತಿಳಿಸಿದೆ. ಜಪಾನು ಇದರಿಂದ ದಿಗ್ಭ್ರಾಂತಗೊಂಡಿದೆ. ಚೈನಾಕ್ಕೆ ಇದರಿಂದ ಪೂರ್ಣ ಧೈರ್ಯವುಂಟಾಗುವದೆಂದು ಅನುಭವಿಸಿದೆ. ಅಲ್ಲದೆ ಜಪಾನಿನ ಬಟ್ಟೆ ಬರೆ ಹಾಗೂ ಇತರ ರಫ್ತು ಸಾಮಾನುಗಳ ಮೇಲೆ ಅಮೇರಿಕವು ಸುಂಕ ಹಾಕುವ ಏರ್ಪಾಡು ನಡೆಸಿದ್ದು ಜಪಾನಿ ಚಿತ್ತಗೆ ಭ್ರಮೆಯನ್ನುಂಟುಮಾಡಿದೆ.

ಜರ್ಮನಿ ಮತ್ತು ಇಟಲಿ.

ಇಡೀ ಜಗತ್ತನ್ನೇ ತನ್ನ ಅಂಕಿತಕ್ಕೆ ತಂದು ತನ್ನ ಪತಾಕೆಯನ್ನು ಜಗತ್ತಿನ ಭಾಗ್ಯಾಕಾಶದಲ್ಲಿ ಹಾರಿಸಿ ಜಗತ್ತನ್ನೇ ಆಳಲು ಯತ್ನಿಸುತ್ತಿರುವ ಜರ್ಮನಿಯ ಮಹಾತ್ವಾಕಾಂಕ್ಷೆಯು ಎಲ್ಲರಿಗೂ ತಿಳಿದಿದೆ. ಈ ಮಹತ್ವಾಕಾಂಕ್ಷೆಯೇ ಇಂದು ಜರ್ಮನಿ ಇಟಲಿಗಳೊಡನೆ ಮನಸ್ತಾಪದ ಬೀಜವನ್ನು ಬಿತ್ತುತ್ತಿದೆ. ಜರ್ಮನ್ ಇಟಲಿ ಸ್ನೇಹದಿಂದ ಇಟಲಿಗೆ ಹೆಚ್ಚಿನ ಉಪಕಾರವೇನೂ ಇಲ್ಲ. ಇಟಲಿ ಜರ್ಮನ್ ಗಡಿಯಲ್ಲಿ ಸ್ವಲ್ಪ ಬೇರಾದು ಬಲಿದೋರಿದ. ಆದ್ದರಿಂದ ಈ ಗಡಿಗಳಲ್ಲಿ ಏನೂ ಬದಲಾವಣೆಯಾಗದಿದ್ದರೂ ಎಂದಾದರೊಮ್ಮೆ ಈ ಇಟಲಿಯಾನ್ ಪ್ರಾಂತವು ಜರ್ಮನಿಯೊಳಗೆ ಸೇರಬಹುದೆಂದು ನಂಬಿ ಅಲ್ಲಿಯ ಇಟಲಿಯಾನರು ಇದಕ್ಕೆ ತಕ್ಕ ಯೋಜನೆ ಮಾಡುತ್ತಿರುವರು. ಮುಸಲೋನಿಯಾದರೋ ಈ ಭಾಗವು ಜರ್ಮನಿಗೆ ಸೇರುವ ಸಂಭವವು ಎಂದೂ ಅಳಿಯದೆಯೆಂದು ಸಾರಿರುವನು. ಕಳೆದ ಏಪ್ರಿಲ್‌ನಲ್ಲಿ ಹಿಟ್ಲರನು, 'ನಮ್ಮ ಗಡಿಗಳು ಸರಿಯಿಲ್ಲದೆ ನಮ್ಮ ಕೆಲವು ಪ್ರಜೆಗಳು ಜರ್ಮನಿಯಿಂದ ಹೊರಗಿರುವಂಥಾಗಿದೆ' ಯೆಂದು ಹೇಳಿರುವನು. ಇದರ ಅರ್ಥವು ಮುಸಲೋನಿಗೆ ಆಗದೆ ಇಲ್ಲ. ಇದರಿಂದಲೇ ಅವನು ಇಟಲಿ ಹಾಗೂ ಆಸ್ಟ್ರಿಯಾದ ಗಡಿಯಲ್ಲಿರುವ ಜರ್ಮನರು ಕೂಡಲೇ ಜರ್ಮನಿಯ ಅಥವಾ ಇಟಲಿಯ ಬೇರೆ ಬೇರೆ ಭಾಗಗಳಿಗೆ ಹೋಗಬೇಕೆಂದು ಆಜ್ಞೆ ಮಾಡಿ ಹಿಟ್ಲರನಿಗೆ ಇಳಿಯದೆ ಗಡಿಯನ್ನು ವಿಸ್ತರಿಸುವ ಉಪಾಯಮಾಡಿ ಬಿಟ್ಟಿದ್ದಾನೆ.

ಅದರೆ ಜರ್ಮನಿಯಲ್ಲಿರುವ ಇಟಲಿಯನರಿಗಿಂಥಾ ಇಟಲಿಯಲ್ಲಿ ಜರ್ಮನರು

ಹೆಚ್ಚಿರುವರ. [illegible] ಗೂಡಾ [illegible] ಬಂದಂತೆ [illegible] ಇಟಲಿಯ ರಾ[illegible] ನಡೆಯುತ್ತಿರುವಂತೆ ಜರ್ಮನ[illegible]ವರು. [illegible]ದಲ್ಲಿ ಪ[illegible]ವಾರು?

ರಷ್ಯಾ—ಬ್ರಿಟನ್.

ಈ ವಾರ ಒಪ್ಪಂದ[illegible] ಒಂದು ಹೊಸ ತಿರುವೇರಿದಂತಿದೆ. ಈವರೆಗೆ ನಿದ್ರಾವಸ್ಥೆಯಲ್ಲಿದ್ದ ಈ ಸಂಧಾನ ಪ್ರಯತ್ನವು ವಿಫಲವಾಗುವದೆಂದು ಭಯವಾಗಿತ್ತು. ಆದರೆ ಸ್ವದೇಶ ಪ್ರತಿನಿಧಿ ಒತ್ತಾಯದಿಂದ ಸಂಧಾನ ನಡೆಸಲು ಯತ್ನಿಸುತ್ತಿರುವದರಿಂದ ಸಂಧಾನ ಸಫಲ[illegible] ಆಂಗ್ಲೋ-ಫ್ರೆಂಚರ ಕೆಲವು ಮಿಲಿಟರಿ ಪ್ರತಿನಿಧಿಗಳು ಹೋಗಿ ರಷ್ಯಾದೊಡನೆ ಸಂಧಾನ ಪ್ರಯತ್ನ ಮಾಡು[illegible] ಒಡೆ[illegible] ಒಂದು [illegible] ಪರಿಸ್ಥಿತಿ ನಿರೀಕ್ಷಣೀಯ.

ಡೇನ್ಜಿಗ್‌ದಲ್ಲಿ ಘರ್ಷಣೆ.

[illegible] ಪ್ರದೇಶಗಳೊಳಗ [illegible] ವ್ಯಾಪಾರ [illegible] ನಡೆಯುತ್ತಿತ್ತು. ಆದರೆ ಈಗ ಡೇನ್ಜಿಗ್ [illegible] ತನು [illegible] ಕಾ[illegible] ಆದ್ದರಿಂದ [illegible] ವರ್ತಿಸಬೇಕಾದ್ದರಿಂದ [illegible] ಜಗಳವಾಗುವ [illegible] ಕಾರಣ [illegible] ಡೇನ್ಜಿಗ್ [illegible] ಕೆಲವು ಪಂಚಾಳಿ [illegible] ಬರಬಾರದೆಂದು [illegible] ಇದರಿಂದ ಡೇನ್ಜಿಗ್‌ನವರು ತಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ಬಂತೆಂದು ಉದ್ವಿಗ್ನಚಿತ್ತರಾಗಿರುವರು. ಡೇನ್ಜಿಗ್‌ನಲ್ಲಿರುವ ನಾಝಿಗಳ ಮುಸಲತ್ತಿನ ಪರಿಣಾಮದಿಂದ ಇವೆಲ್ಲ ಕೊಳಗೆ ಈ ಒಡಕು ಬಂದಿರುವದೋ ಯಾ ಇದಕ್ಕೆ ಬೇರೆ ಹೇತುವಾದರೂ ಇದ್ದು ಕಾರಣವಿರಬಹುದೋ ಎಂಬುದು ಇನ್ನೂ ತಿಳಿದಿಲ್ಲ.

ಕೊಡಗು

ಆಗೋಸ್ಟು ತಾರೀಕು ೪ನೇ ಶುಕ್ರವಾರ ೧೯೩೯.

ಬೊಂಬಾಯಿಯಲ್ಲಿ ನಿಷಾನಿಷೇಧ.

ಬೊಂಬಾಯಿ ಪಟ್ಟಣದಲ್ಲಿ ಈ ತಾ. 1ರಲ್ಲಿ ಒಂದು ಹೊಸ ಯುಗವು ಪ್ರಾರಂಭವಾಯಿತು. ಅಲ್ಲಿಯ ಕಾಂಗ್ರೆಸ್ ಸರಕಾರದವರು ಆ ದಿನ ಅಲ್ಲಿ ಸಂಪೂರ್ಣ ನಿಷಾ ನಿಷೇಧದ ಕಾನೂನನ್ನು ಜಾರಿಗೆ ತಂದರು. ಈ ಸಮಾರಂಭ ಕಾಲದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರು ಮುಂದಾಳುತನದಲ್ಲಿ ನಡೆಸಲ್ಪಟ್ಟ, ಇಷ್ಟರ ವರೆಗೆ ಅಲ್ಲಿ ಕೇಳರಿಯದ ಮೆರವಣಿಗೆಯಿಂದಲೂ, ಅನೇಕ ಸಭೆಗಳಿಂದಲೂ, ನೂರು ಎರಡುನೂರು ಲಕ್ಷಕ್ಕಿಂತ ಹೆಚ್ಚು ಜನರು ಸೇರಿ ನಡೆಸಿದ ಪ್ರಾರ್ಥನೆಯಿಂದಲೂ ಸರ್ಕಾರದ ಈ ಯೋಜನೆಗೆ ಅಲ್ಲಿಯ ಜನ ಸಮುದಾಯದ ಉತ್ಸಾಹವು ಎಷ್ಟರ ಮಟ್ಟಿಗೆ ಇದೆಯೆಂಬುದು ವ್ಯಕ್ತವಾಗುತ್ತದೆ. ಹಿಂದೂಗಳೂ, ಮುಸಲ್ಮಾನರೂ, ಕ್ರೈಸ್ತರೂ ಈ ಉತ್ಸಾಹ [illegible] ಕೈಗೊಂಡಿದ್ದರು. ಆದರೆ ಪಾರ್ಸಿಗಳ ಸಂಸ್ಥೆಯು ವಿರೋಧಿಸಿತ್ತು. ನಿಷಾ ಪದಾರ್ಥಗಳ ವ್ಯಾಪಾರವು ಹೆಚ್ಚಾಗಿ ಪಾರ್ಸಿಗಳಿಂದ ನಡೆಸಲ್ಪಡುತ್ತಿತ್ತು. ನಿಷಾ ನಿಷೇಧ ಕಾನೂನಿನಿಂದ ಅವರ ಆದಾಯಕ್ಕೆ ದೊಡ್ಡ ಧಕ್ಕೆ ತಗಲುವ ಕಾರಣ ಅವರು ಈ ಯೋಜನೆಗೆ ವಿರೋಧಿಗಳಾದರು. ಮಾತ್ರವಲ್ಲ, ಈ ಕಾನೂನಿನ ಕಾರಣಭೂತರಾದ ಅಲ್ಲಿನ ಇಬ್ಬರು ಪಾರ್ಸಿ ಮಂತ್ರಿಗಳಾದ ಡಾಕ್ಟರ್ ಗಿಲ್ಡರವರನ್ನು [illegible] ಬಹಿಷ್ಕಾರ ಹಾಕಬೇಕೆಂದೂ ಸಹ ಅವರಲ್ಲಿ ಅನೇಕರು ಸೇರಿ ನಿರ್ಧರಿಸಿರುವರು. ಆದರೂ ಕೂಡ ಡಾ. ಗಿಲ್ಡರವರು ಧೈರ್ಯ ಕುಂದದೆ ತಾವು ಹಿಡಿದ ಈ ಉತ್ತಮ ಕಾರ್ಯವನ್ನು ಮುಂದುವರಿಸುತ್ತಿರುವುದು ಶ್ಲಾಘನೀಯವಾಗಿದೆ.

ಕಾಂಗ್ರೆಸ್ ಸಂಸ್ಥೆಯ ಮುಖ್ಯ ಧ್ಯೇಯಗಳಲ್ಲಿ ನಿಷಾ ನಿಷೇಧವು ಒಂದಾಗಿದೆ. ಹಿಂದೂಸ್ಥಾನದಲ್ಲಿ ಸಂಪೂರ್ಣ ನಿಷಾ ನಿಷೇಧವನ್ನು ಸಾಧಿಸಬೇಕೆಂದು ಕಾಂಗ್ರೆಸ್ ಸಭೆಯು 1920ರಲ್ಲೇ ತೀರ್ಮಾನಿಸಿದೆ. ಇದನ್ನನುಸರಿಸಿಯೇ ಕಾಂಗ್ರೆಸ್ ಕೆಲಸಗಾರರು ಈ ಚಳವಳಿಯನ್ನು ನಡೆಸುತ್ತಾ ಬಂದಿದ್ದಲ್ಲದೆ, ಕಳೆದ ಸತ್ಯಾಗ್ರಹದ ಕಾಲದಲ್ಲೂ ಅಮಲು ಪದಾರ್ಥಗಳ ಅಂಗಡಿಗಳನ್ನು 'ಪಿಕೆಟ್' ಮಾಡಿ ಲಾಠಿ ಪೆಟ್ಟುಗಳನ್ನೂ, ಜೈಲುವಾಸವನ್ನೂ ಅನುಭವಿಸಿದ್ದಾಗಿದೆ. ಅಗ್ಗ ನಿಷಾ ನಿಷೇಧವು ಬರೇ ಕನಸಿನ ಮಾತೆಂದೂ, ಜಾರಿಗೆ ತರಲಸಾಧ್ಯವಾದದ್ದೆಂದೂ ಬ್ರಿಟಿಷ್ ಸರ್ಕಾರದವರು ಕಾಂಗ್ರೆಸ್ಸಿನವರನ್ನು ಅಪಹಾಸ್ಯ ಮಾಡುತ್ತಿದ್ದರು. ಆದುದರಿಂದ ಕಾಂಗ್ರೆಸ್ಸು ಅಧಿಕಾರಕ್ಕೆ ಬಂದ ಕೂಡಲೇ ತನ್ನ ಈ ಧ್ಯೇಯವನ್ನು ಜಾರಿಗೆ ತರಬೇಕಾದದ್ದು ಅದರ ಕರ್ತವ್ಯವಾಗಿತ್ತು. ಮದ್ರಾಸು ಪ್ರಾಂತ್ಯದ ಕಾಂಗ್ರೆಸ್ ಮಂತ್ರಿ ಮಂಡಳಿಯವರು ಸೇಲಂ ಜಿಲ್ಲೆಯಲ್ಲಿಯೂ, ಬೊಂಬಾಯಿ ಸರ್ಕಾರದವರು ಅಹ್ಮದಾಬಾದಿನಲ್ಲಿಯೂ ಪಾನ ನಿರೋಧದ ಕಾನೂನನ್ನು ಜಾರಿಗೆ ತಂದು, ಉತ್ತಮವಾದ ಫಲವನ್ನು ಪಡೆದಿರುವರು. ಅಲ್ಲಿಯ ಜನರ ಆರ್ಥಿಕ ಸ್ಥಿತಿಯು ವೃದ್ಧಿಗೊಂಡಿದೆ. ಜನರು ಸಾಲದ ಬಾಧೆಯಿಂದ ತಪ್ಪುತ್ತಿದ್ದಾರೆ. ಮನೆ ಮಾರುಗಳನ್ನೂ, ಉಡಿಗೆ ತೊಡಿಗೆಗಳನ್ನೂ ಚೊಕ್ಕಟವಾಗಿಡುತ್ತಿದ್ದಾರೆ. ಜನರೊಳಗೆ ಕಲಹ ಕದನಗಳು ಬಹುಮಟ್ಟಿಗೆ ಕಡಿಮೆಯಾಗಿ ಪರಸ್ಪರ ಪ್ರೀತಿಯು ಹೆಚ್ಚಾಗುತ್ತಿದೆ. ಜನರಲ್ಲಿ ಕಾರ್ಯಸಾಧಕತ್ವವು ವೃದ್ಧಿಯಾಗುತ್ತಿದೆ. ರೋಗಗಳು ಕಡಿಮೆಯಾಗಿ ಆರೋಗ್ಯವು ಉತ್ತಮಗೊಳ್ಳುತ್ತಿದೆ. ಒಟ್ಟಾರೆ ಹೇಳುವುದಾದರೆ ಅಲ್ಲಿಯ ಜನರು ಈ ಮೊದಲಿಗಿಂತ ಹೆಚ್ಚಿನ ಸುಖಜೀವನವನ್ನು ನಡೆಸುತ್ತಿರುವರು.

ಈ ಫಲಿತಾಂಶದಿಂದ ಪ್ರೋತ್ಸಾಹಗೊಂಡ ಬೊಂಬಾಯಿ ಮಂತ್ರಿಗಳು ಬೊಂಬಾಯಿ ಪಟ್ಟಣದಲ್ಲಿಯೇ ಈ ಕಾನೂನನ್ನು ಜಾರಿಗೆ ತರಲು ನಿಶ್ಚಯಿಸಿದರು. ಬೊಂಬಾಯಿಯು ಇಂಡಿಯಾದ ಒಂದನೇ ಪಟ್ಟಣವಾಗಿದೆ. ಪರದೇಶೀಯರು ಹೆಚ್ಚಾಗಿ ಬಂದಿಳಿಯುವ ಮುಖ್ಯ ಬಂದರಾಗಿದೆ. ಕಾರ್ಖಾನೆಗಳಿಂದಲೂ, ಗಿರಣಿಗಳಿಂದಲೂ ತುಂಬಿ, ವ್ಯಾಪಾರದಲ್ಲಿ ಹೆಸರುಗೊಂಡ ಪಟ್ಟಣವಾಗಿದೆ. ಈ ಸ್ಥಳದಲ್ಲಿ [illegible] ಈ ಪರೀಕ್ಷೆಯು ಸಾಧಾರಣದ್ದೇನೂ ಅಲ್ಲ. ಇಡೀ ಪ್ರಪಂಚವೇ ಇದರ ಫಲಿತಾಂಶವನ್ನು ಎದುರು ನೋಡುತ್ತಿದೆ. ಅಂದ ಮೇಲೆ ಇದರ ಪ್ರಾಮುಖ್ಯತೆಯನ್ನು ಪ್ರತ್ಯೇಕ ವಿವರಿಸಬೇಕಾಗಿಲ್ಲ. ಈ ಪ್ರಯತ್ನವು ಜಯಪ್ರದವಾದರೆ ನಿಷಾ ನಿಷೇಧವನ್ನು ಇಡೀ ಭಾರತ ಭೂಮಿಯಲ್ಲಿ ಜಾರಿಗೆ ತರುವುದು ಸುಲಭ ಸಾಧ್ಯವಾಗುವುದು. ಈ ಕಾರ್ಯವನ್ನು ಮೂರು ವರ್ಷಗಳಲ್ಲಿ ಸಾಧಿಸಬೇಕೆಂದು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿಶ್ಚಯಿಸಿದೆ. ಆದುದರಿಂದ ಕಾಂಗ್ರೆಸ್ ಸರ್ಕಾರದ ಪ್ರಾಂತ್ಯಗಳೆಲ್ಲವೂ ಈ ಕಾರ್ಯಕ್ಕೆ ಬೇಗನೆ ಕೈ ಹಚ್ಚಬೇಕಾಗಿದೆ.

ನಿಷಾನಿಷೇಧದಿಂದ ಸರ್ಕಾರಕ್ಕೆ ಉಂಟಾಗುವ ನಷ್ಟವನ್ನು ಭರ್ತಿ ಮಾಡಲು 'ಸೂರಾಟ್' ತೆರಿಗೆ, 'ಆಸ್ತಿ' ತೆರಿಗೆ ಮೊದಲಾದವುಗಳನ್ನು ಹಾಕಿರುವರು. ಕುಡುಕತನವು ಹೆಚ್ಚಾಗಿ ಬಡವರನ್ನು ಅಧೋಗತಿಗೆ ಇಳಿಸುತ್ತಿದೆ. ಇವರ ಉದ್ಧಾರಕ್ಕಾಗಿ ಆಸ್ತಿವಂತರೂ, ವ್ಯಾಪಾರಿಗಳೂ ಸ್ವಲ್ಪ ಹೆಚ್ಚಿನ ತೆರಿಗೆಯನ್ನು ಕೊಡಬೇಕಾದದ್ದು ಅವರ ಧರ್ಮವಾಗಿದೆ. ಅಲ್ಲದೆ, ಕುಡಿಕತನವನ್ನು ನಿಲ್ಲಿಸಿದ್ದೇ ಆದರೆ ಅದಕ್ಕಾಗಿ ವೆಚ್ಚವಾಗುತ್ತಿರುವ ಅಪಾರ ದ್ರವ್ಯವು ಜನರಲ್ಲಿಯೇ ಉಳಿಯುತ್ತದೆ. ಅವರ ಒಂದಂಶವನ್ನು ತಮ್ಮ ಮಕ್ಕಳ ವಿದ್ಯಾಭ್ಯಾಸದ ಖರ್ಚಿಗೆ ಕೊಡಲು ಜನರು ಹಿಂಜರಿಯಲಾರರು. ಈಗಿರುವಂತೆ ನಿಷಾಸೇವನೆಯ ದುರ್ವ್ಯಸನದಿಂದುಂಟಾಗುವ ಆದಾಯದಿಂದ ಮಕ್ಕಳ ವಿದ್ಯಾಭ್ಯಾಸವನ್ನು ನಡಿಸುವುದು ಎಂದೂ ಯೋಗ್ಯವಲ್ಲ. ಒಂದು ವೇಳೆ ಈ ತರಹದ ತೆರಿಗೆಗಳಿಂದ ಅಬ್ಕಾರಿ ಇಲಾಖೆಯ ನಷ್ಟವನ್ನು ಭರ್ತಿ ಮಾಡಲು ಸಾಧ್ಯವಿಲ್ಲವಾದರೆ, ಸರ್ದಾರ್ ವಲ್ಲಭಭಾಯಿ ಪಟೇಲರು ಸೂಚಿಸಿದಂತೆ, ಮಿಲಿಟರಿ ಖರ್ಚನ್ನು ಕಡಿಮೆ ಮಾಡಿ, ಆ ಉಳಿಕೆ ಹಣವನ್ನು ಈ ನಷ್ಟ ಭರ್ತಿಗೆ ಕೊಡಬೇಕೆಂದು ಇಂಡಿಯಾ ಸರ್ಕಾರವನ್ನು ಕೇಳುವುದೂ, ಈ ಕೋರಿಕೆಯನ್ನು ಅವರು ತಿರಸ್ಕರಿಸಿದರೆ, ಕಾಂಗ್ರೆಸ್ಸು ಮಂತ್ರಿ ಮಂಡಳಿಗಳು ರಾಜೀನಾಮೆ ಕೊಡುವುದೂ ಯುಕ್ತವಾಗಿದೆ. ಹೇಗೂ ಇಡೀ ಹಿಂದೂಸ್ಥಾನವು ಸಂಪೂರ್ಣ 'ಒಣಗಿ'ಸಲ್ಪಡಬೇಕು. ನಿಷಾದೇವಿಗೆ ಭಾರತ ಭೂಮಿಯಲ್ಲಿ ಸ್ಥಳವಿಲ್ಲದಾಗಬೇಕು. ನಿಷಾನಿಷೇಧವು ಅಮೋಘವಾದ ಕಾರ್ಯವನ್ನು ನಡಿಸಲು ಹಿಂದೂಸ್ಥಾನವು ಯೋಗ್ಯವೆಂದು ತೋರಿಸಬೇಕಾಗಿದೆ. ಈ ವಿಚಾರದಲ್ಲಿ ಅನೇಕವಾದ [illegible] ಇಂಡಿಯಾದ [illegible] ನಿಷಾಸೇವನೆಯನ್ನು ಖಂಡಿಸುತ್ತವೆ. [illegible] ಕೋಟಿಗಳಲ್ಲಿ [illegible] ತಿರಸ್ಕಾರವಿದೆ. ಆದುದರಿಂದ ಈ ವಿಷಯದಲ್ಲಿ ಪ್ರಪಂಚಕ್ಕೆ [illegible] ಇಂಡಿಯಾಕ್ಕೆ ಇದರಲ್ಲಿ ಬೇರೆ ಮಾರ್ಗಾಂತರವೇ ಇಲ್ಲ.

ಹಿಂದೂ ದೇಶದ ಇತರ ಭಾಗಗಳು ಬೇಗನೆ ಮುಂದುವರಿಯುತ್ತಿರುವ ಕಾಲದಲ್ಲಿ ನಮ್ಮ ಪ್ರಾಂತ್ಯದ ಸರ್ಕಾರದವರು ಈ ವಿಚಾರದಲ್ಲಿ ಇನ್ನೂ ನಿದ್ರಿಸುತ್ತಿರುವುದು ಬಹು ಶೋಚನೀಯ. ಸಂಪೂರ್ಣ ಪಾನನಿರೋಧವನ್ನಲ್ಲದಿದ್ದರೂ ಮಿತಪಾನದ ತತ್ವವನ್ನಾದರೂ ಜಾರಿಗೆ ತರಲು ಯತ್ನವಿದೆ. ಇರುವ ಇಲ್ಲಿಯ ಸರ್ಕಾರದ [illegible] ಪ್ರವೃತ್ತಿಯನ್ನು ಎಷ್ಟು ಖಂಡಿಸಿದರೂ ಸ್ವಲ್ಪವೇ. ನಿಷಾ ನಿಷೇಧದಲ್ಲಿ ಸಂಪೂರ್ಣ ನಂಬಿಕೆ ಇರುವ ಕಾಂಗ್ರೆಸ್ಸು ಇಲ್ಲಿ ಅಧಿಕಾರಕ್ಕೆ ಬಾರದೆ ಇರುವುದೇ ಸರ್ಕಾರಿ ಅಧಿಕಾರಿಗಳ ಈ ತರದ ಮನೋವೃತ್ತಿಗೆ ಕಾರಣವಾಗಿದೆ. ಜನರು ಎಚ್ಚೆತ್ತು ತೀವ್ರ ಚಳವಳಿ ನಡಿಸದೆ ಈ ಸ್ಥಿತಿಯು ಹೆಚ್ಚಿನ ಕಾಲ ಮುಂದರಿಯಲಾರದು.

ಬೊಂಬಾಯಿಯಲ್ಲಿ ಗೋಲಿಬಾರು.

42 ಜನರಿಗೆ ಗಾಯ.

ತಾರೀಕು 1 ರಲ್ಲಿ ಬೊಂಬಾಯಿಯಲ್ಲಿ ನಿಷಾನಿಷೇಧ ಕಾನೂನು ಜಾರಿಗೆ ಬಂದಿತಷ್ಟೆ. ಆದರೆ ಈ ಕಾನೂನಿನಿಂದ ಕಷ್ಟವಾಗುವ ಸರಕಾರದ ಉತ್ಪತ್ತಿಯನ್ನು ಭರ್ತಿ ಮಾಡಲು ಅಲ್ಲಿಯ ಸರಕಾರವು ಹೊಸ ರೀತಿಯ ತೆರಿಗೆಗಳನ್ನು ಹಾಕಿದೆ. ಅದರಲ್ಲಿ ಆಸ್ತಿ ತೆರಿಗೆಯು ಒಂದು. ಸರಕಾರದ ಈ ಅಭಿಪ್ರಾಯವನ್ನು ವಿರೋಧಿಸಿ ಕೆಲವು ಮುಸ್ಲಿಂ ಸಂಘದವರು ತಾ. 1 ರಲ್ಲಿ ಸಭೆ ನಡಿಸುವ ಯತ್ನದಲ್ಲಿದ್ದರು. ಆದರೆ ಇವನ್ನರಿತ ಸರಕಾರದವರು ತಾರೀಕು 1ರಲ್ಲಿ ಮದ್ಯ ನಿಷೇಧ ಕಾನೂನು ಜಾರಿಗೆ ಬರುವುದರಿಂದ ಆ ದಿನ ನಿಷೇಧ ಸಭೆ ಮಾಡಕೂಡದೆಂದೂ, ಬೇರೆ ದಿನಗಳಲ್ಲಿ ಮಾಡಬಹುದೆಂದೂ ಸೂಚಿಸಿದ್ದರು. ಆದರೆ ಮುಸ್ಲಿಮರು ಇದನ್ನು ಲಕ್ಷಿಸದೆ ತಾರೀಕು 1ನೇ ಮಂಗಳವಾರ 2-30 ಗಂಟೆಗೆ ಬೊಂಬಾಯಿ ಪಟ್ಟಣದಲ್ಲಿ ಮೆರವಣಿಗೆ ಪ್ರಾರಂಭಿಸಿದರು. ಮೆರವಣಿಗೆಯು [illegible] ಕೊಂಡವರೆಯಲ್ಲಿ [illegible] ನಡೆಯುವ ಸ್ಥಾನಕ್ಕೆ ಬಂತು. ಸಭೆ ಪ್ರಾರಂಭವಾಗುವ ಸಂದರ್ಭದಲ್ಲಿ ಕಲ್ಲು ಹಿಂದುಗಳು ಕಲ್ಲೆಸೆದರೆಂದೂ, ಪೋಲೀಸರು ಈ ದಳ್ಳಿತವನ್ನು ನಿಲ್ಲಿಸಲು ಮುಂದರಿದಾಗ ಮರದ [illegible] ಬಂದ [illegible] [illegible] ಪೋಲೀಸರು ಲಾಠಿ [illegible] ಮಾಡಬೇಕಾಯಿತಂತೆ. [illegible] ಹಾಗೂ ಪರಸ್ಪರ ಜಗಳ ನಿಲ್ಲದ್ದರಿಂದ ಪೋಲೀಸರು ಗುಂಡು ಹಾರಿಸಬೇಕಾಯಿತು. ಈ ಜಗಳದಲ್ಲಿ ಒಟ್ಟು 42 ಜನರಿಗೆ ಗಾಯಗಳಾದುವು. ಇವರಲ್ಲಿ 25 ಪೋಲೀಸರೂ (5 ಅಧಿಕಾರಿಗಳು) ಸೇರಿಕೊಂಡಿರುವರು. 9 ಜನ ಮುಸಲ್ಮಾನರಿಗೆ ಗುಂಡಿನ ಏಟು ತಗಲಿದೆ. ಹೆಚ್ಚಿನ ಪೋಲೀಸರ ಸಹಾಯದಿಂದ ಅಲ್ಲಿ ಶಾಂತಿ ನೆಲೆಸಲ್ಪಟ್ಟಿದೆ. ಸರಕಾರದವರು ಕರ್ಫ್ಯೂ ಆರ್ಡರು ಹೊರಡಿಸಿ 5 ಜನರಿಗಿಂತ ಮೇಲ್ಪಟ್ಟು ಜನರು ರಾತ್ರಿ 10 ಗಂಟೆಯ ಮೇಲೆ ಒಟ್ಟುಗೂಡುವುದನ್ನು ನಿಷೇಧಿಸಿದ್ದಾರೆ. ಅಂತೂ ವಾತಾವರಣವು ಶಾಂತವಾಗಿದೆ.

THANKS OFFERING.

We thank our numerous Friends, relatives, welwishers for the condolence letters sent to us for the bereavement in our family the sad demise of our son. We regret our inability to reply individually.

Mr. & Mrs. K. M. Atchaya,
Balugodu.

ವರ್ತಮಾನ ಸಂಗ್ರಹ.

ಒಳದೇಶ.

ದೋಹದನಲ್ಲಿ ಬಿ. ಬಿ. ಮತ್ತು ಸಿ. ಐ. ರೈಲ್ವೆಯ ಸೇನಿಟರಿ ಸುಪರಿಂಟೆಂಡೆಂಟರಾದ ಶ್ರೀ ಬೋಂಗೇಡ ಕುಟ್ಟಪ್ಪನವರನ್ನು ರೈಲ್ವೆ ಕಂಪೆನಿಯವರು, ಮಲೇರಿಯಾ ನಿವಾರಣಾ ಹೆಚ್ಚಿನ ತರಬೇತಿನ ಬಗ್ಗೆ ಡೆಲ್ಲಿಯಲ್ಲಿರುವ ಇಂಡಿಯಾ ಸರಕಾರದ ಮಲೇರಿಯಾ ಸಂಶೋಧನಾ ಸಂಸ್ಥೆಗೆ ಕಳುಹಿಸುವರೆಂದು ತಿಳಿಸಲು ಸಂತೋಷಪಡುತ್ತೇವೆ.

ಮಡಿಕೇರಿ.

ಸೋಮವಾರಪೇಟೆನಾಡು ಚಾಕೇರಿ ಗ್ರಾಮದ ಕಳ್ಳಿರ ನಾಡಪ್ಪನೆಂಬವನನ್ನು ಅತನ ಮಗನೇ ಆವಿಮ ಕೊಂದನೆಂಬ ಮೊಕದ್ದಮೆಯು ವಿಚಾರಣೆಗಾಗಿ ತಾ. 2-8-39 ರಲ್ಲಿ ಅಪರಾಧಿಗೆ ಜೀವಸ್ಯಕಾರಾಗೃಹ ಶಿಕ್ಷೆ ವಿಧಿಸಲಾಗಿದೆಯೆಂದು ತಿಳಿಯಬರುತ್ತದೆ.

ತಾ. 29-7-39 ರಿಂದ ಇಂದಿನ ವರೆಗೆ ಇಲ್ಲಿ ಒಟ್ಟು 1 ಇಂಚು 22 ಸೆಂಟು ಮಳೆಯಾಗಿದೆ. ಕಳೆದ ವರ್ಷ ಜುಲೈ ತಿಂಗಳಲ್ಲಿ 47 ಇಂಚು 20 ಸೆಂಟು ಮಳೆಯಾಗಿತ್ತು. ಈ ವರ್ಷ ಒಟ್ಟು 37 ಇಂಚು 07 ಸೆಂಟು ಮಳೆಯಾಗಿದೆ. ಇಲ್ಲಿಯ ಬಿಸಿಲಿನ ರೀತಿ ನೋಡಿದರೆ ಆರ್ದ್ರತೆಯನ್ನು ನೋಡಿದರೆ ಮಳೆ ಬರುವ ಸಂಭವವು ಕಾಣುವುದಿಲ್ಲ.

ಕೊರವಂಡ ಅಪ್ಪಯ್ಯನವರ ವಿದ್ಯಾನಿಧಿಯ ಮೀಟಿಂಗು ತಾ. 2-8-39 ರಲ್ಲಿ ನಡೆದು ಶ್ರೀ. ಕೊರವಂಡ ಯಂ. ಸೋಮಣ್ಣ (ಎಕ್ಸಿಕ್ಯುಟಿವ್ ಆಫೀಸರು) ಇವರಿಗೆ ತಿಂಗಳಿನ ರೂ. 25ರಂತೆ 10 ತಿಂಗಳ ವರೆಗೂ, ಸೆಂಟ್ರಲ್ ಸ್ಕೂಲಿನ ಶ್ರೀ. ಗಣಪತಿ ಮಕ್ಕಳಾದ ಎ. ಮಾದಪ್ಪ, ಕುತ್ತಿಯಂಡ ಸಿ. ಮುತ್ತಣ್ಣ, ಮಾಳೇಟಿರ ಯಂ. ಪೂಣಚ್ಚ, ಮುಂಡಿಯಂಡ ಎ. ಮುತ್ತಪ್ಪ, ಬಟ್ಟೀರ ಬಿ. ಅಪ್ಪಚ್ಚು ಮತ್ತು ಕೊಕ್ಕಲೆಂಗಡ ಬಿ. ಸುಬ್ಬಯ್ಯ ಇವರುಗಳಿಗೆ ತಿಂಗಳಿಗೆ ರೂ. 5ರಂತೆ 10 ತಿಂಗಳ ವರೆಗೂ ವಿದ್ಯಾರ್ಥಿ ವೇತನ ಕೊಡಲು ತೀರ್ಮಾನವಾಗಿದೆ.

ಕೊಡಗು ಫ್ಲಾಂಟರ್ಸ್ ಫಂಡಿನ ಮೀಟಿಂಗು ತಾ. 31-7-39 ರಲ್ಲಿ ನಡೆದು ಚೆಕ್ಕೆರ ಕೋಸಿಗೆ ಶ್ರೀ ಗಣಾದ ನಡಿಕೇರಿಯಂಡ ಗಣಪತಿ, ಬೊಳ್ಳಿರ ಅಪ್ಪಯ್ಯ ಮತ್ತು ಮುತ್ತಟ್ಟಿರ ಬೆಳ್ಳಿಯಪ್ಪನವರುಗಳಿಗೂ, ಆರ್ಟ್ಸ್ ಕೋರ್ಸಿಗೆ ಶ್ರೀ ನಳ್ಳಾದ ಬಿಟ್ಟಿಯಂಡ ಮೊಣ್ಣಪ್ಪನವರಿಗೂ ಮತ್ತು ನಿಕೇತನ ವಿದ್ಯಾರ್ಥಿ ವೇತನವನ್ನು ಶ್ರೀ ಗಿಲಾನ ಚೌರಿರ ಚಿಣ್ಣಪ್ಪ, ಮುಂದಿನ ಅಪ್ಪಣ್ಣ, ಕುರ್ಚಾಂಗಡ ಸುಬ್ಬಯ್ಯ. ಯಂ. ಬಿ. ಬೆಂಗಪ್ಪ ಮತ್ತು ಶ್ರೀಪತಿ ಕೋದಂಡ ಎಸ್. ಬೋಪಣ್ಣನವರುಗಳಿಗೂ ಕೊಡಲಾಯಿತೆಂದೂ ತಿಳಿಯಬರುತ್ತದೆ.

ವೀರಾಜಪೇಟೆ.

ಇಲ್ಲಿ ಬತ್ತ ಗಾಡಿಗೆ ರೂ. 47 ಕ್ರಯಕಿರುವದಾಗಿ ತಿಳಿಯುತ್ತೇವೆ.

ಕೋರಂ ಇಲ್ಲಗೆ ಮುಂದುವರಿದ್ದು ಕೊಡಗು ಜಿಲ್ಲಾ ಕಾಂಗ್ರೆಸ್ ಮೀಟಿಂಗು ತಾರೀಖು 12-8-39 ನೇ ಶನಿವಾರ 11 ಗಂಟೆಗೆ ವೀರಾಜಪೇಟೆಯಲ್ಲಿ ನಡೆಯುವದೆಂದು ತಿಳಿಯುತ್ತೇವೆ.

ಶ್ರೀಮಂಗಲ.

ಬೇಸಿಗೆಯಲ್ಲಿ ಈ ಭಾಗದ ಎಲ್ಲಾ ಕಡೆಯಾಗಿ ಬಂದ ನೀರಿನ ಬಾಧೆಯು ನಂದ ಭಾಗದಲ್ಲೇ ನೀರಿಲ್ಲದೆ ಕಷ್ಟಪಡುತ್ತಿರುವ ನಾಡು ಇದು. ಅಂಥಾದ್ದರಲ್ಲಿ ಬೇರೆ ಕಡೆಯೇ ನೀರಿಲ್ಲದೆ ಕೊಂಡವರ ಹಳ್ಳಗಳಿಗಿಂತ ಈಗ ಇಲ್ಲಿಯ ಜಾಗ್ರತೆಯನ್ನು ವಹಿಸುವದಕ್ಕಿಂತ ಉತ್ತಮ ಕ್ರಮವೇ ಉಚಿತ. ಅನೇಕ ಗದ್ದೆಗಳು ಬೀಳು ಬೀಳುವಂತಾಗಿವೆ. ಬೇರೆ ನೀರಿನ ಸರಬರಾಯಿಯ ಯೋಜನೆಯು ಇಂಥಾ ಅಸಾಧ್ಯವಿರುವದರಿಂದ ಕಷ್ಟವಾದ ಪೂರ್ಣ ಹಿಂಸೆಯು ಸಾಲ್ಪಡುತ್ತಿದೆಯೆನ್ನುವಂತಾಗಿದೆ.

ಗೋಣಿಕೊಪ್ಪ.

ಜೂನ್ ತಿಂಗಳಲ್ಲಿ ಕೊಡಗಿನಲ್ಲಿ 368 ಜನನಗಳೂ, 368 ಮರಣಗಳೂ ನಡೆದಿವೆಯೆಂದು ಪ್ರಕಟವಾಗಿದೆ.

ವೀರಾಜಪೇಟೆ ಮತ್ತು ಮಡಿಕೇರಿ ಮುನ್ಸಿಪಾಲಿಟಿಗಳಲ್ಲದ, ಪೇಟೆಗಳಲ್ಲಿ ಮೂಂತ ವ್ಯಾಪಾರದ ದರವು ಒಂದನೇ ತರಗತಿಗೆ ಒಂಭತ್ತಣೆಗೆ ಮೀರದಂತೆಯೂ, ಎರಡನೇ ತರಗತಿಗೆ ಎಂಟಾಣೆಗೆ ಮೀರದಂತೆಯೂ, ಇದು ಸೆಪ್ಟಂಬರ್ ತಾರೀಖು 1ರಿಂದ ಜಾರಿಯಲ್ಲಿ ಬರುವದೆಂದೂ ಪ್ರಕಟವಾಗಿದೆ.

ಸಿ. ಬೋಪಣ್ಣನವರಲ್ಲಿ ಡಿ. ಇನ್ಸ್‌ಪೆಕ್ಟರರ ಬದಲು ಡಿ. ಎಂ. ಕೇಶವರಾವ್ ಆಫೀಸರು ನೇಮಿಸಲ್ಪಟ್ಟಿದ್ದಾರೆಂದು ಪ್ರಕಟವಾಗಿದೆ.

ಪೊನ್ನಂಪೇಟೆ ಮತ್ತು ಮಡಿಕೇರಿ ಮುನಿಸಿಪಾಲಿಟಿಗಳಲ್ಲಿ ಖಾಲಿಯಿರುವ ಇನ್ಸ್‌ಪೆಕ್ಟರರ ಬದಲು ಆ. ಎಮ್ಮೆಕೇರ ನಲ್ ಆಫೀಸರ ನೇಮಕ ಮಾಡಲಾಗಿರುವದಕ್ಕೆ ಪೈಮಾಶಿ ಹುಕುಂ ಹೊರಡಿಸುವರು.

ಫೆಬ್ರವರಿ ತಾ. 10ನೇ ಮತ್ತು ನವಂಬರ 20ನೇ ತಾರೀಖುಗಳ ಬದಲು ಇನ್ನು ಮುಂದೆ ಫೆಬ್ರವರಿ ತಾ. 10 ಮತ್ತು ನೊವೆಂಬರ ತಾ. 15ರಲ್ಲಿ ಕಂದಾಯವನ್ನು ಸಲ್ಲಿಸಬೇಕೆಂದು ಚೀಫ್ ಕಮಿಶನರವರು ರೈತರು, ಬ್ಯಾಂಕುಗಳಲ್ಲಿ ತಮ್ಮ ಹಣ ಹಾಕಿದ್ದರು.

ಕೊಡಗು ಡಿ. ಪಿ. ಡಬ್ಲ್ಯು. ಇಲಾಖೆಯ ಸ್ಪೆಶಲ್ ಟೆಸ್ಟ್ ಪರೀಕ್ಷೆಯು 1940 ನೇ ಜನವರಿ 15 ಮತ್ತು 16ರಲ್ಲಿ ನಡೆಯುವದೆಂದೂ, ಪರೀಕ್ಷೆಗೆ ಕೂಡಲು ಇಚ್ಛಿಸುವವರ ಅಪ್ಲಿಕೇಶನುಗಳು ಬರುವ ನವಂಬರು ತಾ. 1ರೊಳಗೆ ಎಕ್ಸಿಕ್ಯೂಟಿವ್ ಇಂಜಿನೀಯರಿಗೆ ಕಳುಹಬೇಕೆಂದೂ ಪ್ರಕಟವಾಗಿದೆ.

ಕಿಗ್ಗಟ್ಟುನಾಡು ಮತ್ತು ಮಡಿಕೇರಿ ನಾಡು ಸಹಕಾರಿ ಸ್ಟೋರು ಸಂಘಗಳ ರಿಜಿಸ್ಟ್ರೇಷನ್ ರದ್ದುಮಾಡಲಾಗಿದೆಯೆಂದೂ, ಕಿಗ್ಗಟ್ಟುನಾಡು ಸ್ಟೋರು ಸಂಘಕ್ಕೆ ದಕ್ಷಿಣ ಕೊಡಗಿನ ಕೊಆಪರೇಟಿವ್ ಇನ್ಸ್‌ಪೆಕ್ಟರಾದ ಶ್ರೀ ಕಲಿಯಂಡ ಸೋಮಯ್ಯನವರನ್ನೂ ಮಡಿಕೇರಿನಾಡು ಸ್ಟೋರಿಗೆ ಉತ್ತರ ಕೊಡಗಿನ ಕೋಆಪರೇಟಿವ್ ಇನ್ಸ್‌ಪೆಕ್ಟರಾದ ಶ್ರೀ ಪಂಡಕುತ್ತಿರ ಬಂಗಪ್ಪನವರನ್ನು ಲಿಕ್ವಿಡೇಟರುಗಳನ್ನಾಗಿ ನೇಮಿಸಲಾಗಿದೆಯೆಂದು ಪ್ರಕಟವಾಗಿದೆ.

ಹಿಂದೂದೇಶ.

ಮಹಾತ್ಮಾಗಾಂಧಿಯವರು ದಕ್ಷಿಣ ಸಹಿತರಾಗಿ ಡೆಲ್ಲಿಯಿಂದ ವಾರ್ಧಾಕ್ಕೆ ಬಂದಿರುವರು.

ಹಿಮಾಲಯ ಪರ್ವತಾರೋಹಣಕ್ಕಾಗಿ ಹೊರಟಿದ್ದ ಪೋಲೆಂಡಿನ ವೀರರಲ್ಲಿ ಆ ಗುಂಪಿನ ನಾಯಕನೂ, ಇನ್ನೊಬ್ಬನೂ ಮೃತಪಟ್ಟರು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮತ್ತು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮೀಟಿಂಗುಗಳು ವಾರ್ಧಾದಲ್ಲಿ ಇದೇ ತಾ. 9 ರಲ್ಲಿ ಸೇರುತ್ತವೆ.

ಶ್ರೀ. ಸುಭಾಷ ಚಂದ್ರಬೋಸರ ಫಾರ್ವರ್ಡ್ ಬ್ಲಾಕಿನ ರಕ್ಷಣೆಯ ವ್ಯವಸ್ಥೆಯನ್ನು ಮಹಾರಾಷ್ಟ್ರದಲ್ಲಿ ಸೇನಾಪತಿ ಬಾಪಟರವರು ನೋಡಿಕೊಳ್ಳತಕ್ಕವರಾಗಿದ್ದಾರೆ.

ತಾತಾ ಸಂಸ್ಥಾನದಲ್ಲಿನ ಅರಸರು ತಮ್ಮ ಪ್ರಜೆಗಳಿಗೆ ಸುಧಾರಣೆಗಳನ್ನು ಕೊಡಲು ಯೋಚಿಸುತ್ತಾರೆ. ಚುನಾಯಿಸಲ್ಪಟ್ಟ ಪ್ರತಿನಿಧಿಗಳುಳ್ಳ ಒಂದು ಎಸೆಂಬ್ಲಿಯು ಅಲ್ಲಿ ಬೇಗನೇ ಸ್ಥಾಪಿಸಲ್ಪಡುವುದು.

ಕಾಡುಮೃಗಗಳ ಹಾವಳಿಯಿಂದ ಬೆಳೆಗಳನ್ನು ಕಾಪಾಡಿಕೊಳ್ಳುವಂತೆ, 20 ಎಕ್ರೆ ಜಮೀನು ಇರುವ ಪ್ರತಿಯೊಬ್ಬ ವ್ಯವಸಾಯಗಾರರಿಗೂ ಕೋವಿ ಲೈಸನ್ಸು ಕೊಡುವಂತೆ ಮಧ್ಯ ಪ್ರಾಂತ ಸರಕಾರವು ನಿರ್ಧರಿಸಿದೆ.

ಜನಾಂಗ ಸಂಘದ ಮುಂದಿನ ಅಧಿವೇಶನಕ್ಕೆ ಸೇರಲಿರುವ ವಿಶ್ವಮಂಡಲದ ಒಬ್ಬ ಸದಸ್ಯರಾಗಿ, ಪಂಜಾಬಿನ ಅರ್ಥ ಸಚಿವರಾದ ಪೂಜ್ಯ ಶ್ರೀ ಲಾಲಾ ಮನೋಹರಲಾಲರು ಆರಿಸಲ್ಪಟ್ಟಿದ್ದಾರೆ. ಇಂಡಿಯಾ ಸರಕಾರವು ಇದಕ್ಕೆ ಒಬ್ಬ ಪ್ರಾಂತಿಕ ಮಂತ್ರಿಯನ್ನು ಆರಿಸಿದ್ದು ಇದೇ ಮೊದಲು.

ಹೈದರಾಬಾದ ನಗರದಲ್ಲಿ ದೊಡ್ಡ ಗಲಾಟೆ. ಇಲ್ಲಿನ ಸುಧಾರಣೆಗಳಿಂದ ಅತೃಪ್ತರಾದ ಸಾವಿರಾರು ಜನರು ಗುಂಪುಕೂಡಿ, ಅಲ್ಲಿನ ರಸ್ತೆಗಳಲ್ಲಿ ಮೆರವಣಿಗೆ ಹೊರಟು, ಕಲ್ಲು, ಸೋಡಾಬಾಟ್ಲಿಗಳನ್ನು ಎಸೆದು ಸುತ್ತಮುತ್ತಲೆಲ್ಲ ಗಲಭೆ ಎಬ್ಬಿಸಿದರು. ಆ ಸಂದರ್ಭದಲ್ಲಿ ಪೊಲೀಸರು ಗುಂಡು ಹಾರಿಸಬೇಕಾಯಿತು. ಇದರಿಂದ ಇಬ್ಬರು ಸತ್ತರು. ಹಾಗೇ ನೈಜಾಮರ ಅರಮನೆಯ ಮುಂದೆಯೂ ಕೆಲವು ಮುಸ್ಲಿಮರು ಕಲ್ಲು ನಿಜಾಮರಿಗೆ ಪ್ರಾರ್ಥನೆ ಮಾಡಿದರು. ಈಗ ಅಲ್ಲಿ 144 ನೇ ಪ್ರಕರಣವೂ, ಕರ್ಫ್ಯೂ ಆರ್ಡರೂ ಜಾರಿಗೆ ಬಂದಿವೆ.

ಶ್ರೀ. ಬೋಸರವರು ಬಂಗಾಳ ಪ್ರಾಂತ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿ ಇನ್ನೊಮ್ಮೆ ಚುನಾಯಿತರಾಗಿರುತ್ತಾರೆ. ಆ ಸಮಿತಿಯಲ್ಲಿ 149 ಸದಸ್ಯರಿರುವರು. ಪ್ರಸ್ತುತದಲ್ಲಿ ಅಖಿಲ ಹಿಂದೂಸ್ಥಾನದ ಕಾಂಗ್ರೆಸ್ ಸಮಿತಿಯ ಸದಸ್ಯರಾದ ಡಾ. ಬಿ. ಸಿ. ರಾಯರವರ ಮತ್ತು ಡಾ. ಪ್ರಫುಲ್ಲ ಚಂದ್ರಘೋಷರವರ ಪಕ್ಷಕ್ಕೆ ಸೇರಿದ 40 ಮಂದಿ ಬಂಗಾಳ ಪ್ರಾಂತಿಕ ಸದಸ್ಯರು ಹಿಂದಿನ ಕಾರ್ಯಕಾರಿ ಸಮಿತಿಯಲ್ಲಿದ್ದರು. ಆದರೆ ನೂತನವಾಗಿ ರಚಿಸಿದ ಕಾರ್ಯಕಾರಿ ಸಮಿತಿಯಲ್ಲಿ ಗಾಂಧೀಜಿಯವರನ್ನು ಅನುಸರಿಸುವ ಪಂಗಡದವರಾದ ಆ 40 ಮಂದಿಯಲ್ಲಿ 13 ಜನರು ಮಾತ್ರ ಸದಸ್ಯರಾಗಿರುವರು.

ಬೊಂಬಾಯಿ ನಗರದಲ್ಲಿ ಪಾರ್ಸಿ ಜನಾಂಗದವರೆಲ್ಲರೂ ಕಳೆದ ವಾರ ಸಭೆ ಸೇರಿ ಬೊಂಬಾಯಿ ಆಧಿಪತ್ಯದ ಮಂತ್ರಿ ಮಂಡಳಿಯಲ್ಲಿರುವ ಜನಾರೋಗ್ಯದ ಖಾತೆಯ ಸಚಿವರಾದ ಡಾ. ಯಂ. ಡಿ. ಗಿಲ್ಡರ್‌ರವರನ್ನು ತಮ್ಮ ಸಮಾಜದಿಂದ ಬಹಿಷ್ಕರಿಸತಕ್ಕದೆಂದು ಒಂದು ನಿರ್ಣಯವನ್ನು ಸರ್ವಾನುಮತದಿಂದ ಮಂಜೂರು ಮಾಡಿದರು. ಇದಕ್ಕೆ ಕಾರಣವೇನೆಂದರೆ, ಬೊಂಬಾಯಿ ಆಧಿಪತ್ಯದ ಸರ್ಕಾರದವರು ಆಗಸ್ಟ್ ತಾ. 1 ರಿಂದ ಮದ್ಯಪಾನ ನಿರೋಧವನ್ನು ಬೊಂಬಾಯಿಯಲ್ಲಿ ಜಾರಿಗೆ ತರುವವರಾಗಿದ್ದಾರೆ. ಸರ್ಕಾರದ ಈ ಪಾನನಿರೋಧದ ಕ್ರಮವನ್ನು ಪಾರ್ಸಿ ಜನಾಂಗದವರು ಖಂಡಿಸಿ ಪ್ರತಿಭಟಿಸುತ್ತಲಿದ್ದಾರೆ. ಇಂಥಾ ಸಂದರ್ಭದಲ್ಲಿ ತಮ್ಮ ಜನಾಂಗಕ್ಕೆ ಸೇರಿದ ಡಾ. ಗಿಲ್ಡರ್‌ರವರು ಈ ಪಾನನಿರೋಧವನ್ನು ಅತ್ಯಂತ ಆಸಕ್ತಿಯಿಂದ ಜಾರಿಗೆ ತರಬೇಕೆಂದು ಕಾರ್ಯಸಾಧನೆ ಮಾಡುತ್ತಿರುವುದು ಪಾರ್ಸಿ ಜನಾಂಗದವರಿಗೆ ಅಸಹನೀಯವಾಗಿದೆ.

ವಿದೇಶ

ಸಿಲೋನಿನಲ್ಲಿ ಕೂಲಿಮಾಡುವುದಕ್ಕಾಗಿ ಹಿಂದೂಸ್ಥಾನದಿಂದ ಸಹಾಯ ಪಡೆದವರು, ಸ್ವತಂತ್ರವಾಗಿಯೂ ಆಗಸ್ಟ್ ತಾ. 1ರಿಂದ ಯಾರೂ ಅಲ್ಲಿ ಹೋಗಕೂಡದೆಂದು ಇಂಡಿಯಾ ಸರ್ಕಾರದವರು ಅಪ್ಪಣೆಮಾಡಿರುತ್ತಾರೆ. ಸಿಲೋನ್ ಸರ್ಕಾರದವರು ಆ ದೇಶದಿಂದ ದಿನ ಕೂಲಿಯ ಭಾರತೀಯರನ್ನು ಓಡಿಸಿಬಿಡಬೇಕೆಂದು ಮಾಡಿರುವ ಯೋಜನೆಯನ್ನು ಪ್ರತಿಭಟಿಸಲು ಇಂಡಿಯಾ ಸರ್ಕಾರದವರು ಕೈಕೊಂಡಿರುವ ಪ್ರತೀಕಾರ ಕೃತಿ ಇದೇ ಮೊದಲನೆಯದೆಂದು ಹೇಳಬಹುದಾಗಿದೆ. ಇಂಡಿಯಾ ಸರ್ಕಾರದವರು ಅಕ್ಟೋಬರ್ ತಿಂಗಳು ಕಳೆದ ನಂತರ ಸಿಲೋನಿನಿಂದ ಯಾವ ವಸ್ತುವೂ ಹಿಂದೂಸ್ಥಾನಕ್ಕೆ ಆಮದಾಗದಂತೆ ಪ್ರತಿಬಂಧಿಸಬಹುದೆಂಬ ನಿರೀಕ್ಷೆಯೂ ಜನರಲ್ಲಿ ಇದೆ.

ಬೊಂಬಾಯಿಯಲ್ಲಿ

ಪಾನ ನಿರೋಧ.

ಜಯಪ್ರದವಾಗುವದೆಂಬ ಸಂಬಿಕೆ.

ಜಾರಿಗೆಬಂದ ಮೊದಲಿನ ದಿನದ ಲವಲವಿಕೆ.

ಬೊಂಬಾಯಿ ನಗರ ಮತ್ತು ಸುತ್ತು ಮುತ್ತಲಿನ ಪಟ್ಟಣ ಹೀಗೆ ಒಟ್ಟು 166 ಚದರ ಮೈಲಿಗಳ ವಿಸ್ತೀರ್ಣದಲ್ಲಿ ಮದ್ಯಪಾನವನ್ನು ನಿಷೇಧಿಸಿದೆ ಎಂದು ಬೊಂಬಾಯಿ ಪ್ರಾಂತದ ಪ್ರಧಾನ ಮಂತ್ರಿ ಮಾನ್ಯ ಬಾಲ ಗಂಗಾಧರ ಖೇರ್‌ರವರು ಅಪ್ಪಣೆ ಹೊರಡಿಸಿರುವರು. ಅವರ ಪ್ರಕಟಣೆ ಹೀಗಿದೆ–'ಇಂದಿನ ದಿನದಿಂದ (ತಾ. 1-8-39) ಬೊಂಬಾಯಿ ನಗರ ಮತ್ತು ಸುತ್ತು ಮುತ್ತಲಿನ ಪಟ್ಟಣಗಳಲ್ಲಿ ಪರವೀತಿ ಅಮಲು ಪಾನೀಯಗಳನ್ನೂ, ಸೇಂದಿ, ಅಫೀಮು ಮತ್ತಿತರ ಮಾದಕ ಪದಾರ್ಥಗಳನ್ನೂ ಮಾರುವದು ಯಾ ಉಪಯೋಗಿಸುವದು ಕೂಡದೆಂದು ಸರ್ಕಾರವು ನಿಷೇಧಿಸಿದೆ.'

ಕಾರ್ಯಕ್ರಮದ ಮುಂದಿನ ದಿನ.

ಮದ್ಯಪಾನ ಪ್ರತಿಬಂಧಕ ಕಾನೂನು ತಾರೀಕು 1ರಿಂದ ಜಾರಿಗೆ ಬರುವದೆಂದು ತಿಳಿದಿದ್ದ ಬೊಂಬಾಯಿ ನಗರದ ಜನತೆಯಲ್ಲಿ ತಾ. 31ರಲ್ಲಿ ಒಂದು ಅಪೂರ್ವ ಹುರುಪಿತ್ತು. ಇನ್ನು ಮುಂದೆ ತಮಗೆ ಮಾದಕ ಪಾನೀಯಗಳು ಸಿಗಲಾರದೆಂದು ಆ ದಿನ ಜನರು ಹದ್ದು ಮೀರಿ ಕುಡಿದು ಮೆರೆದಾಡಿದರು. ಜನರ ನುಗ್ಗಾಟವು ಅಂಗಡಿಗಳಲ್ಲಿ ವಿಪರೀತವಾಗಿ, ಕೆಲವೆಡೆ ಅಂಗಡಿಗಳ ಬಾಗಿಲು ಮುಚ್ಚಿ, ಸರದಿ ಮೇರೆ ಒಬ್ಬೊಬ್ಬರಿಗೇ ಕೊಡಬೇಕಾಗಿ ಬಂತು. ಕೆಲವು ಅಂಗಡಿಗಳಲ್ಲಿಯ ಸಾರಾಯಿ ವಗೈರೆ ಪಾನೀಯಗಳೇ ತೀರಿಹೋಗಿ ಬರಿದಾಗಿದ್ದುವಂತೆ. ಈ ನೂಕು ನುಗ್ಗಾಟದ ದೆಸೆಯಿಂದ ವೈಪರೀತ್ಯಗಳೇನಾದರೂ ಸಂಭವಿಸಬಹುದೆಂಬ ಸಂಶಯದಿಂದ ಪ್ರತಿಯೊಂದು ಅಂಗಡಿಯ ಮುಗ್ಗಲಲ್ಲಿ ಕೆಲವು ಪೊಲೀಸರನ್ನು ನಿಲ್ಲಿಸಬೇಕಾಯಿತು. ಕ್ರಿಕೆಟ್ ಕ್ಲಬ್ ಮೊದಲಾದ ಇತರ ಸಂಘ ಸಂಸ್ಥೆಗಳು ತಮ್ಮ ಕೂಟವನ್ನು ಸೇರಿಸಿ ಪಾನೀಯದ ಕಡೇ ಸೇವನೆಯನ್ನು ಮುಗಿಸಿದರು. ಕೆಲವು ಕಡೆಗಳಲ್ಲಿ ವ್ಯಾಪಾರಸ್ಥರೇ ಅಂಗಡಿಯ ಬೋರ್ಡುಗಳನ್ನು ಕಳಚಿ ಹಾಕಿ ತಮ್ಮ ನಿಷ್ಠೆಯನ್ನು ತೋರ್ಪಡಿಸಿದರು.

ತಾ. 1ರ ಕಾರ್ಯಕ್ರಮ.

ರಾತ್ರಿ ಸರಿ 11 ಗಂಟೆಯ ಸಮಯಕ್ಕೆ ಪೊಲೀಸರೂ ಮತ್ತು ಪಾನ ನಿರೋಧ ಕಾರ್ಯಕರ್ತರೂ ಪ್ರತಿಯೊಂದು ಅಂಗಡಿಗೂ ಹೋಗಿ ಖರ್ಚಾಗದೆ ಉಳಿದಿರುವ ಪಾನೀಯಗಳನ್ನು ಸೀಲು ಹಾಕಿ ಸರ್ಕಾರ ಉಗ್ರಾಣ ಶಾಲೆಗಳಿಗೆ ಸಾಗಿಸಿದರು. ಅರ್ಧ ಗಂಟೆಯನಂತರ ಅವರು ಎಲ್ಲಾ ಕ್ಲಬ್ ಮತ್ತು ಹೊಟೆಲ್‌ಗಳಿಗೆ ಹೋಗಿ ಅಲ್ಲಿದ್ದ ಪಾನೀಯ ಮತ್ತು ನಿಶಾ ಪದಾರ್ಥಗಳನ್ನು ಸೀಲು ಮಾಡಿ ಸರ್ಕಾರಿ ಉಗ್ರಾಣಕ್ಕೆ ಕಳುಹಿಸಿದರು. ಬೊಂಬಾಯಿ ನಗರವೇ ತಾಗ ಶಾಂತ ವಾತಾವರಣದಲ್ಲಿದೆ. ಕಾಂಗ್ರೆಸ್ಸಿನ ಈ ಪ್ರಚಂಡ ಕಾರ್ಯಕ್ರಮವು ಬೊಂಬಾಯಿಯಲ್ಲಿ ಜಾರಿಮಾಡಲ್ಪಟ್ಟಿದೆ. ಪಾನ ನಿರೋಧದ ವಿರೋಧಿಗಳಾದರೂ ತಟಸ್ಥರಾಗಿ ಯಾವ ತೊಂದರೆಯನ್ನೂ ಈ ಪವಿತ್ರ ಕಾರ್ಯಕ್ರಮಕ್ಕೆ ಮಾಡಲಿಲ್ಲ.

ಬೊಂಬಾಯಿ ಪ್ರಾಂತ್ಯದ ಕಾಂಗ್ರೆಸ್ ಮಂಡಳವು ಧೈರ್ಯದಿಂದ ಇಂಥಾ ಪ್ರಚಂಡ ಕಾರ್ಯಕ್ರಮವನ್ನು ಜಾರಿಗೆ ತಂದದ್ದನ್ನು ಹೊಗಳಿ ಅದರ ಜಯವನ್ನು ಬಯಸಿ ಅನೇಕಾನೇಕ ಕಡೆಗಳಿಂದ ಸಂದೇಶ ಪತ್ರಗಳು ಬಂದಿವೆ. ಪಾನ ನಿರೋಧದಿಂದ ನಿರುದ್ಯೋಗಿಗಳಾಗಿರುವ 2 ಸಾವಿರ ಜನರಿಗೆ ತಾವು ಉದ್ಯೋಗ ಕಲ್ಪಿಸಿ ಕೊಡುವೆವೆಂದು ಬೊಂಬಾಯಿ ಹೋಟೇಲು ಮಾಲೀಕರ ಸಂಘವು ಮುಂದೆ ಬಂದಿರುವದಾದರೂ ಜನತೆಯಲ್ಲಿ ಪಾನ ನಿರೋಧದ ಮೇಲಿರುವ ಶ್ರದ್ಧೆಯನ್ನು ಎತ್ತಿ ತೋರಿಸುತ್ತಿದೆ. ಅಂತೂ ಕಾರ್ಯಕ್ರಮವು ಜಯಪ್ರದವಾಗಿ ನಮ್ಮ ಭಾರತ ದೇಶವು ಈ ನಿಶಾ ಪಿಶಾಚಿಯಿಂದ ಬಿಡುಗಡೆಗೊಳ್ಳಲಿ.

ಬಾತ್ಮಿ.

ರೈತರ ಪಕ್ಷದವರೇ, ಕಾಂಗ್ರೆಸ್ಸಿಗೆ ಸೇರಿರಿ!

ಕೊಡಗು ದೇಶದಲ್ಲಿ ಹಲವು ವರ್ಷಗಳಿಂದ ಕೌನ್ಸಿಲ್ ಡಿ. ಬೋರ್ಡುಗಳಿಗೆ ಸದಸ್ಯರನ್ನು ಮೂರು ವರ್ಷಕ್ಕೊಂದು ಸಾರಿ ಆರಿಸುವದು ವಿದಿತವಾದದ್ದಾಗಿದೆ. ಈ ಆರಿಸುವಿಕೆಯಲ್ಲಿ ಕೆಲವು ಮಹನೀಯರುಗಳು ಏನೂ ತಿಳಿಯದ ರೈತರಿಗೆ ತಮಗಳ ಧನ ಬಲ, ವಿದ್ಯಾ ಬಲ ಮತ್ತು ವಾಕ್ಚಾತುರ್ಯವೆಂಬ ವರ್ಣನವನ್ನು ಬೀರಿ ಮರುಳುಗೊಳಿಸಿ ಓಟುಗಳನ್ನು ಪಡೆದು ಜಯಶೀಲರಾಗಿ ವೈಭವದಿಂದ ಮೆರೆಯುತ್ತಾ ಈ ಸಂಸ್ಥೆಗಳ ಸದಸ್ಯತನವು ತಮಗಳ ಮೂಲ ಹಕ್ಕೆಂದು ನಿರೀಕ್ಷಿಸಿಕೊಂಡಿದ್ದರು. ತಮಗಳ ಕಾರ್ಯವು ಸಾಧಿಸಿತೆಂದರೆ ರೈತರನ್ನು ಸ್ವಪ್ನದಲ್ಲಿಯೂ ಯೋಚಿಸುತ್ತಿರಲಿಲ್ಲ. ಇವರುಗಳ ಮುಖ ದರ್ಶನವು ಪುನಹ ಚುನಾವಣೆಯ ಕಾಲ ಬಂದರೇನೇ ಲಭಿಸುವದು ಎಂದು ಹೇಳಿದರೆ ತಪ್ಪಾಗಲಾರದು.

ಮಾಮೂಲಂತೆ ಕಳೆದ ಡಿ. ಬೋರ್ಡು ಚುನಾವಣೆ ನಡೆದು ಕಾಂಗ್ರೆಸ್ ಹಾಗೂ ಕಾಂಗ್ರೆಸೇತರ ಪಕ್ಷದಲ್ಲಿ ವಾಗ್ವಾದ ನಡೆದ ಪ್ರಯುಕ್ತ ಆರು ತಿಂಗಳಲ್ಲೇ ಸದಸ್ಯತನವು ಅಂತ್ಯವಾಗಿ ಪುನಹ ಹೊಸ ಚುನಾವಣೆಯ ಕಾಲದಲ್ಲಿ ಪ್ರತಿ ನಾಡಿಗೆ ಒಬ್ಬೊಬ್ಬರಂತೆ ಕಾಂಗ್ರೆಸ್ ಪಾರ್ಟಿಯವರೂ ಈ ಪಾರ್ಟಿಗೆ ವಿರೋಧವಾಗಿ ನಾಡಿಗೆ ಒಬ್ಬೊಬ್ಬರಂತೆ ರೈತರ ಪಕ್ಷವೆಂದು ನಾಮಾಂಕಿತವಿಟ್ಟು ಕೆಲವು ಮಹನೀಯರುಗಳೂ ಚಳವಳವನ್ನು ಹೂಡಿ ಪ್ರಚಾರ ನಡಿಸಿದರು. ಮಹಾತ್ಮರ ಸದ್ಬೋಧನೆಯನ್ನು ಅರಿತು ನುರಿತ ಮಹನೀಯರುಗಳು ಇಲ್ಲಿಯೂ ಕಾಂಗ್ರೆಸಿಗೆ ಬೆಂಬಲ ಕೊಡಬೇಕೆಂದು ಮೀಟಿಂಗುಗಳನ್ನು ನಡೆಸಿ ಬೋಧನೆಯನ್ನು ರೈತರಿಗೆ ಕೊಡುತ್ತಾ ಬರುತ್ತಿರುವಾಗ್ಯೆ ರೈತರ ಪಕ್ಷದವರು ಕಾಂಗ್ರೆಸ್ಸಿಗೆ ವಿರೋಧವಾಗಿ ವಾಕ್ಚಾತುರ್ಯವನ್ನು ನಡೆಸುತ್ತಾ ಬಂದದ್ದು ಎಲ್ಲರ ಹೃದಯದಲ್ಲಿ ಈಗಲೂ ಅಂಕುರಿಸಿದೆ.

ದೇಶದ ಹಿತೈಷಿಗಳು ಮತ್ತು ರೈತರು ಸಹ ಹಿಂದೆ ಡಿ. ಬೋರ್ಡ್ ಸದಸ್ಯರಾಗಿ ಇವರುಗಳು ರೈತರ ಹಿತವನ್ನು ಸಾಧಿಸಿದ್ದನ್ನು ಪರಿಶೀಲಿಸಿ, ಇವರು ನಾಮಾಂಕಿತಕ್ಕೆ ಮಾತ್ರವಲ್ಲದೆ ದೇಶದ ಅಭಿವೃದ್ಧಿಯನ್ನು ಬಯಸುವವರಲ್ಲವೆಂಬದಾಗಿ ದೃಢ ನಂಬಿಕೆಯಿಂದ ಕಾಂಗ್ರೆಸ್ ಉಮೇದುವಾರರಿಗೇ ಹೆಚ್ಚಿಗೆ ಓಟು ಕೊಟ್ಟು ಜಯಶೀಲರನ್ನಾಗಿ ಮಾಡಿದರು. ರೈತರ ಪಕ್ಷದವರು ತಮಗಳ ಹಿಂದಿನ ಜಯದ ಹುರುಪಿಂದ ತಮಗಳ ತನು ಮನ ಧನವನ್ನು ಸೂರೆ ಮಾಡಿದರೂ ಅಪಜಯವನ್ನೇ ಹೊಂದಬೇಕಾಯಿತು.

ಡಿ. ಬೋರ್ಡಿಗೆ ಸದಸ್ಯರಾಗಿ ಆರಿಸಿ ಬಂದ ಕಾಂಗ್ರೆಸ್ ಪಾರ್ಟಿಯ ಮಹನೀಯರು ತಮಗಳನ್ನು ಜಯಶೀಲರನ್ನಾಗಿ ಮಾಡಿದಕ್ಕಾಗಿ ದೇಶದ ಹಿತವನ್ನು ಕಿಂಚಿತ್ತಾದರೂ ತಮಗಳಿಂದ ನಡೆಸಬೇಕೆಂದು ನಿಶ್ಚಯಿಸಿ ಕಾರ್ಯ ನಡೆಸಲು ಪ್ರಾರಂಭ ಮಾಡುವಾಗಲೇ ಬೋರ್ಡಿಗೆ ಒಂದು ದೊಡ್ಡ ಧಕ್ಕೆಯು ತಗಲಿತು. ಬೋರ್ಡಿಗೆ ಸರಕಾರವು ಕೊಡುತ್ತಿರುವ ವಂತಿಗೆಯನ್ನು ಕಡಿಮೆ ಮಾಡಲಾಯಿತು. ಇದನ್ನು ನಿಷೇಧಿಸಿ ಮಾಡಿದ ಜನತೆಯ ಕೂಗಾದರೂ ಅರಣ್ಯರೋದನದಂತಾಯಿತು. ಆದರೂ ಧೃತಿಗೆಡದೆ ಬೋರ್ಡಿನ ಸದಸ್ಯರುಗಳು ಪರ್ಯಾಲೋಚಿಸಿ ಬೋರ್ಡಿನ ಆದಾಯ ಖರ್ಚನ್ನು ಸುಸೂತ್ರವಾಗಿ ನಡೆಸುತ್ತಾ ಹಂಗಾಮಿ ಆಸ್ಪತ್ರೆಗಳನ್ನೂ, ರಸ್ತೆ ರಿಪೇರಿಯನ್ನು ಉತ್ತಮಗೊಳಿಸಿಯೂ, ಕೆರೆ ಬಾವಿ ವಗೈರೆ ರಿಪೇರಿಯಿಂದ ಸಾರ್ವಜನಿಕ ಕೆಲಸಗಳನ್ನೂ ಮಾಡುತ್ತಾ ಬರುವದಲ್ಲದೆ ರಸ್ತೆ ರಿಪೇರಿಯ ಮೇಲ್ವಿಚಾರಕ್ಕೂ ಮತ್ತು ಕೆರೆಗಳ ಉಸ್ತುವಾರಿಗೂ ಸಹ ನಾಡಿಗೊಬ್ಬೊಬ್ಬರಂತೆ ಮುಖಂಡರುಗಳನ್ನು ಹಂಗಾಮಿಯಾಗಿ ನೇಮಿಸಲು ತೊಡಗಿರುವದು ಸ್ತೋತ್ರಾರ್ಹವಾಗಿರುತ್ತದೆ. ಈ ಮಹನೀಯರುಗಳು ಹಣದ ಅಭಾವದ ಆತಂಕವನ್ನು ನಿರೀಕ್ಷಿಸದೆ ಇಂಥಾ ಕಾರ್ಯಗಳನ್ನು ನಡೆಸಲು ಮುಂದೆ ಸಾಗುತ್ತಿರುವದು ಆನಂದದಾಯಕವಾಗಿರುತ್ತದೆ. ಇವರುಗಳನ್ನು ಎಷ್ಟು ವಂದಿಸಿದರೂ ಅಲ್ಪವೆಂದೇ ಹೇಳಬೇಕಾಗಿದೆ.

ರೈತರ ಪಕ್ಷದ ನಾಮಾಂಕಿತವನ್ನು ಇಟ್ಟುಕೊಂಡಿದ್ದ ಮಹನೀಯರೇ, ತಮಗೆ ಅಪಜಯವಾಯಿತೆಂದು ತಾವುಗಳು ಮನಸ್ಸಿನ ನಿರಾಶರಾಗಬೇಡಿ. ಹಿಂದೂದೇಶದಲ್ಲಿ ಕಾಂಗ್ರೆಸ್ಸಿನ ಪ್ರಭಾವವು ನಡೆಯುತ್ತಿರುವದು ತಮಗಳಿಗೆ ತಿಳಿದಿಲ್ಲವೇ? ಪಾನ ನಿರೋಧ, ಸಾಕ್ಷರತಾ ಪ್ರಚಾರ, ಇದೇ ಮೊದಲಾದ ಚಳವಳಗಳು ಎಲ್ಲಾ ಕಡೆಗಳಲ್ಲಿ ಹಬ್ಬುತ್ತಿರುವಾಗ ನಮ್ಮ ಕೊಡಗಿನಲ್ಲಿ ಅವನ್ನು ಕೈಕೊಳ್ಳಲು ಅನಾಥವೇ? ತಾವುಗಳು ಸಹ ಹಿಂದಿನ ಪಕ್ಷವನ್ನು ಬಿಟ್ಟು ಕಾಂಗ್ರೆಸ್ಸಿನ ಸದಸ್ಯರಾಗಿ ಇಲ್ಲಿಯೂ ಸಹಭಾಗಿಗಳಾಗಿ ದುಡಿದಲ್ಲಿ ದೇಶದ ಕಲ್ಯಾಣವಾಗುವುದಿಲ್ಲವೇ? ದೇಶಬಾಂಧವರುಗಳೇ, ಇದೀಗ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಸಮಯವಾಗಿರುತ್ತದೆ. ಸರ್ವರೂ ಕಾಂಗ್ರೆಸ್ಸಿಗೆ ಸದಸ್ಯರಾದಲ್ಲಿ ಕಾಂಗ್ರೆಸ್ಸಿನ ವರ್ಚಸ್ಸು ಹೆಚ್ಚಿ ಮುಂದಿನ ಕಾರ್ಯಕ್ಕೆ ಅನುಕೂಲವಾಗುವುದಿಲ್ಲವೇ? ಈ ಸಮಯವನ್ನು ಕಳೆದುಕೊಂಡಲ್ಲಿ ಮುಂದಿನ ವರ್ಷದ ವರೆಗೆ ಸದಸ್ಯರಾಗಲು ಕಾಯಬೇಕಾಗಿರುತ್ತದೆ. ಕಾಂಗ್ರೆಸ್ ಸದಸ್ಯರುಗಳು ನಡೆಸುತ್ತಿರುವ ಕಾರ್ಯ ಕಲಾಪಗಳನ್ನು ಯೋಚಿಸಿ ಒಡನೆ ಸದಸ್ಯರಾಗಲು ಪ್ರಯತ್ನಿಸುವಿರಾಗಿ ಆಶಿಸುವೆ.

(ರೈತರ ಪಕ್ಷ ಹಿತೈಷಿ).

Shorthand, Typing etc.

ಶೊರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—7

ಕೊಡಂದೇರ ಡಿ. ಮಾಚಯ್ಯ,
L. D. Sc. (COLLEGE OF DENTISTRY)
EX-SUPERVISOR LAXMIDAI PATEL DENTAL HOSPITAL KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 9

ಸುಲಭ ದರ. ನವೀನ ಕ್ರಮ [illegible]

ಡಿಸ್ಟ್ರಿಕ್ಟ್ ಬೋರ್ಡಿನಿಂದ ನೇಮಿಸಲ್ಪಟ್ಟ ಶಾಲಾ ಕಮಿಟಿಯ ವರದಿ

ಶಾಲೆಗಳ ಸಂಖ್ಯೆಗಳನ್ನು ನಿರ್ಣಯಿಸಿ, ಶಾಲೆಗಳ ಕ್ರಿಯಾ ಶಕ್ತಿಗೆ ಧಕ್ಕೆ ಬಾರದಂತೆ ಖರ್ಚನ್ನು ಕಮ್ಮಿ ಮಾಡಲು ಮತ್ತು ಉಪಾಧ್ಯಾಯರ ಸಂಬಳವನ್ನು ಮಿತವ್ಯಯ ದೃಷ್ಟಿಯಿಂದ ನಿಶ್ಚಯಿಸಲು ನೇಮಕವಾದ ವಿದ್ಯಾ ಕಮಿಟಿಯ ಮೆಂಬರುಗಳಾದ ನಾವು ಈ ಕೆಳಗಿನ ನಮ್ಮ ವರದಿಯನ್ನರ್ಪಿಸುವೆವು.

ಈ ಕಮಿಟಿಯು ಕಳೆದ ಮೇ 18ರಲ್ಲಿ ಮಡಿಕೇರಿಯಲ್ಲಿ ಸೇರಿ ಪ್ರತಿಯೊಂದು ಶಾಲೆಯನ್ನೂ ಅದರ ಮಕ್ಕಳ ಸಂಖ್ಯೆ ಸರಾಸರಿ ಹಾಜರಿ, ಉಪಾಧ್ಯಾಯರ ಸಂಖ್ಯೆ ಇವುಗಳ ಆಧಾರದಿಂದ ಪರಿಶೀಲಿಸಿ, ಕೆಲವು ಶಾಲೆಗಳಿಗೆ ಹೋಗಿ ಅವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಿ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ಬರಲು ತೀರ್ಮಾನವಾಯಿತು.

ಅದೇ ಮೇರೆ ಈ ಕಮಿಟಿಯು ತಾ. 26-5-39ರಲ್ಲು ತೆರಾಲು, ಬಿರುನಾಣಿ ಪರಕಟಗೇರಿ ಮತ್ತು ಬಾಡಗರಕೇರಿ ಶಾಲೆಗಳನ್ನೂ, ತಾ. 27-5-39ರಲ್ಲು ಮಂಚಳ್ಳಿ, ಶ್ರೀಮಂಗಲ, ನಾಲ್ಕೇರಿ, ಹಾತೂರು, ಶಾಲೆಗಳಲ್ಲದೆ ಕಿರುಗೂರು ಮತ್ತು ಬೇಟೋಳಿ ಗ್ರಾಂಟ್ ಇನ್ ಏಯಿಡ ಶಾಲೆಗಳನ್ನೂ, ತಾ. 28-5-39ರಲ್ಲಿ ಹಾಲುಗುಂದ, ದೇವಣಗೇರಿ, ಚೆಂಬೆಬೆಳ್ಳೂರು, ಅಮ್ಮತ್ತಿ, ಪೊಳ್ಳಬೆಟ್ಟ, ಸಿದ್ದಾಪುರ, ಚೇರಳ ಶ್ರೀಮಂಗಲ ಮತ್ತು ಅರಮೇರಿ ಹರಿಜನ ಶಾಲೆ (ಗ್ರಾಂಟ್ ಇನ್ ಏಯಿಡ್) ಗಳನ್ನೂ, ತಾ. 30-5-39ರಲ್ಲಿ ಫ್ರೇಜರ್‌ಪೇಟೆ, ಕಣಿವೆ, ಹೆಬ್ಬಾಲೆ, ಶಿರಂಗಾಲ ತೊರೆನೂರು, ಆಲೂರು ಮತ್ತು ನಿಡ್ತ ಶಾಲೆಗಳನ್ನೂ, ತಾ. 31-5-39ರಲ್ಲಿ ಶನಿವಾರಸಂತೆ, ಮಾಂಗಲೆ, ಚಿಕ್ಕಭಂಡಾರ, ಚಿಕ್ಕಕುಂದ (ಸ್ವಂತ ಶಾಲೆ) ಕೊಡ್ಲಿಪೇಟೆ, ಬೆಂಬಳೂರು, ಮತ್ತು ಗೌಡಳ್ಳಿ ಶಾಲೆಗಳನ್ನೂ ತಾ. 2-6-39ರಲ್ಲಿ ಐಗೂರು, ಶಾಂತಳ್ಳಿ, ಮತ್ತು ಟಿ. ಶೆಟ್ಟಳ್ಳಿ ಶಾಲೆಗಳನ್ನೂ, ತಾ. 3-6-39ರಲ್ಲು ಶಾಕೇರಿ, ಕಿರಗಂದೂರು ಮತ್ತು ಗರ್ವಾಲೆ ಶಾಲೆಗಳನ್ನೂ, ತಾ. 5-6-39ರಲ್ಲು ಹಾಕತ್ತೂರು, ಮೂರ್ನಾಡು, ಕಾಕೋಟು ಪರಂಬು, ಬೆಳ್ಳುಮಾಡು, ನಾಪೋಕ್ಲು, ಕರಡ, ಚೆಯ್ಯಂಡಾಣೆ, ಮತ್ತು ಕಕ್ಕಬೆ ಶಾಲೆಗಳನ್ನೂ, ತಾ. 7-6-39ರಲ್ಲು ಚೆಟ್ಟಿಕೇರಿ, ಪಾಲೂರು, ಕೊಟ್ಟೂರು, ಚೆಟ್ಟಿಮಾನಿ, ಭಾಗಮಂಡಲ ಮತ್ತು ಕೋರಂಗಾಲ, (ಗ್ರಾಂಟ್ ಇನ್ ಏಯಿಡ್) ಶಾಲೆಗಳನ್ನೂ, ತಾ. 6-7-39ರಲ್ಲು ಬೋಯಿಕೇರಿ ಮತ್ತು ಸುಂಟಿಕೊಪ್ಪ ಶಾಲೆಗಳನ್ನೂ ಸಂದರ್ಶಿಸಿತು.

ಜನರಲ್.

ಪ್ರತಿಯೊಂದು ಶಾಲೆಯ ಸ್ಥಳೀಯ ಸ್ಥಿತಿಗತಿಗಳನ್ನು ಕೂಲಂಕುಷವಾಗಿ ವಿಚಾರಿಸಿ ಸಾಧ್ಯವಾದಷ್ಟು ಮಟ್ಟಿಗೆ ಖರ್ಚನ್ನು ಕಮ್ಮಿ ಮಾಡಬೇಕೆಂಬ ಆ ನಿರ್ದಿಷ್ಟ ಯೋಚನೆಯಿಂದಲೇ ಈ ಸಮಸ್ಯೆಯನ್ನು ಕೈಕೊಂಡೆವು. ಆ ದೃಷ್ಟಿಯಿಂದಲೇ ಪ್ರತಿ ಶಾಲೆಯ ಪಂಚಾಯಿತದಾರರ, ಉಪಾಧ್ಯಾಯರ ಮತ್ತು ಶಾಲಾ ಹಿತಚಿಂತಕರೊಡನೆ ಈ ವಿಚಾರವನ್ನು ವಿವರವಾಗಿ ವಿವೇಚಿಸಲಾಯಿತು. ಶಾಲೆಯನ್ನು ತೆಗೆದುಹಾಕುವ ಯಾ ಗ್ರಾಂಟ್ ಇನ್ ಏಯಿಡ್ ಶಾಲೆಯಾಗಿ ಮಾಡುವ ಅಥವಾ ಉಪಾಧ್ಯಾಯರನ್ನು ಕಮ್ಮಿ ಮಾಡುವ ನಮ್ಮ ತೀರ್ಮಾನದ ಸಂದರ್ಭದಲ್ಲಿ ಶಾಲೆಯ ಮಕ್ಕಳ ಸಂಖ್ಯೆ, ಶಾಲೆಯಲ್ಲಿ ಮಕ್ಕಳ ಸರಾಸರಿ ಹಾಜರಿ, ಹೊಳೆ, ತೊರೆಗಳ ದೂರ, ಬಡತನ ಹಾಗೂ ಅವಿದ್ಯೆಯ ಕಾರಣ, ಶಾಲೆಗೆ ಹುಡುಗರು ಬಾರದ ಇನ್ನೂ ಅನೇಕ ವಿಶೇಷ ಕಾರಣಗಳು ನಮ್ಮ ಅವಗಾಹನೆಗೆ ಬಾರದಿರಲಿಲ್ಲ. ನಮ್ಮ ಪ್ರಧಾನ ಧ್ಯೇಯವು ಖರ್ಚನ್ನು ಆದಷ್ಟು ಕಡಿಮೆ ಮಾಡುವದೆಂದಿದ್ದರೂ, ಹುಡುಗಿಯರ ಶಾಲೆಗಳ ಮುಚ್ಚುವಿಕೆಯಿಂದಲೂ, ತನ್ನ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಗ್ರಾಮಸ್ಥರ ಉತ್ಕಟೇಚ್ಛೆಯಿಂದಲೂ ಕೆಲವು ಶಾಲೆಗಳಲ್ಲಿ ಮಕ್ಕಳ ಹಾಜರು ಹೆಚ್ಚಾಗಿರುವದರಿಂದ ಕೆಲವು ಶಾಲೆಗಳಿಗೆ ಹೆಚ್ಚಿಗೆ ಉಪಾಧ್ಯಾಯರನ್ನು ಕೊಡುವ, ಕೆಲವು ಶಾಲೆಗಳಿಗೆ ಕೊಡುತ್ತಿರುವ ಗ್ರಾಂಟನ್ನು ಹೆಚ್ಚಿಸುವ ಬಗ್ಗೆ ನಾವು ಶಿಫಾರಸು ಮಾಡಬೇಕಾಗಿ ಬಂತು.

ಇದೀ ಭಾರತ ಭೂಮಿಯಲ್ಲಿ ಗ್ರಾಮಸ್ಥರ ನಿರಕ್ಷರತೆಯನ್ನು ತೆತ್ತೊಗೆಯಲು ಅನೇಕ ಕಾರ್ಯಕ್ರಮಗಳು ನಡೆಯುತ್ತಿರುವಂಥಾ ಈ ಸಮಯದಲ್ಲಿ ಕಾಲದ ಕರೆಗೆ ವ್ಯತಿರಿಕ್ತ ಹೋಗುವದು ದುಸ್ತರವೆಂದು ಕಮಿಟಿಗೆ ತಿಳಿದಿದೆ. ಅದ್ದರಿಂದ ಖರ್ಚನ್ನು ಕಮ್ಮಿ ಮಾಡಲು ನೇಮಕವಾದ ಈ ಕಮಿಟಿಯು ಶೋಧನೆಯು ಹೊಸ ಖರ್ಚಿಗೆ ಮಾರ್ಗ ತೋರಿಸಿರುವದು ಆಶ್ಚರ್ಯವೆನಿಸದು.

ಈ ಕೆಳಗಿನವು ಸಮಿತಿಯ ವಿವರವಾದ ಸೂಚನೆಗಳಾಗಿವೆ:—

ಬಿರುನಾಣಿ.

ಶಾಲಾ ರಿಜಿಸ್ಟರಿನಲ್ಲಿ 72 ವಿದ್ಯಾರ್ಥಿಗಳಿದ್ದರೂ ಹಾಜರಾತಿಯು ಪೂರಾ ಕಡಿಮೆ ಇದೆ. ಒಂದು ತಿಂಗಳಿಗಿಂಥಾ ಹೆಚ್ಚು ದಿನಗಳಿಂದ ಗೈರುಹಾಜರಾದರೂ ಸಹ ಕೆಲವು ವಿದ್ಯಾರ್ಥಿಗಳ ಹೆಸರನ್ನು ರಿಜಿಸ್ಟರಿನಲ್ಲಿಟ್ಟುಕೊಂಡಿರುವರು. ಎರಡೇ ಉಪಾಧ್ಯಾಯರು ಈ ಶಾಲೆಯನ್ನು ನಡಿಸಬಹುದಾಗಿದೆ. ಅದ್ದರಿಂದ ಈಗ ಇರುವ ಮೂರು ಉಪಾಧ್ಯಾಯರಿಂದ ಒಬ್ಬರನ್ನು ತೆಗೆದುಹಾಕಬಹುದು.

ಚೇರಳಶ್ರೀಮಂಗಲ.

ವರ್ಷೇ ವರ್ಷೇ ಈ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ಕಮ್ಮಿಯಾಗುತ್ತಾ ಬಂದು ಈ ವರ್ಷ ಬರೇ 30 ವಿದ್ಯಾರ್ಥಿಗಳಿರುವರು. 50 ವಿದ್ಯಾರ್ಥಿಗಳಿರುವ ಕೆಲವು ಡಿ. ಬೋರ್ಡು ಶಾಲೆಗಳು ಒಬ್ಬ ಉಪಾಧ್ಯಾಯರಿಂದ ನಡಿಸಲ್ಪಡುತ್ತಿರುವಾಗ ಈ ಶಾಲೆಯಲ್ಲಿ ಎರಡು ಉಪಾಧ್ಯಾಯರನ್ನು ಇಟ್ಟುಕೊಳ್ಳುವದರಲ್ಲಿ ನ್ಯಾಯವಿಲ್ಲ. ಅದ್ದರಿಂದ ಒಬ್ಬ ಉಪಾಧ್ಯಾಯರನ್ನು ಕಮ್ಮಿಮಾಡಬಹುದು.

ಹೆಬ್ಬಾಲೆ.

ಕೊಡಗಿನ ದೊಡ್ಡ ಗ್ರಾಮದಲ್ಲಿ ಈ ಶಾಲೆಯು ಇದೆ. ಇಲ್ಲಿಯ ಗ್ರಾಮಸ್ಥರು ವಿದ್ಯೆಯಲ್ಲಿ ಪೂರಾ ಹಿಂದಿದ್ದಾರೆ. ಗ್ರಾಮಸ್ಥರ ವಿದ್ಯೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಇಲ್ಲಿಯ ಪ್ರಾಥಮಿಕ ಶಾಲೆಯನ್ನು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮಾಡಲಾಯಿತು. ದುರಾದೃಷ್ಟವಶಾತ್ ಗ್ರಾಮಸ್ಥರು ಈ ಸಹಾಯದ ಪೂರ್ಣ ಲಾಭವನ್ನು ಹೊಂದಿಕೊಳ್ಳಲಿಲ್ಲ. ವಿದ್ಯಾರ್ಥಿಗಳ ಸಂಖ್ಯೆಯು ವರ್ಷ ವರ್ಷ ಕಮ್ಮಿಯಾಗುತ್ತಿದೆ. ಕಳೆದ ವರ್ಷ 135 ಇದ್ದ ಸಂಖ್ಯೆಯು ಈ ವರ್ಷ 115 ಕ್ಕೆ ಇಳಿದಿರುವದಲ್ಲದೆ ಸರಾಸರಿ ಹಾಜರಾತಿಯು ಪೂರಾ ಕಮ್ಮಿ ಇದೆ. 115 ವಿದ್ಯಾರ್ಥಿಗಳಿರುವದರಿಂದ ಈ ಶಾಲೆಗೆ ಮೂರು ಉಪಾಧ್ಯಾಯರು ಬಾಸೂನು ಮೇರೆ ಬೇಕಾದರೂ ದಿನದಿನ ಹಾಜರಾತಿಯು ಪೂರಾ ಕಮ್ಮಿ ಇರುವದರಿಂದ ತತ್ಕಾಲಕ್ಕೆ ಈ ಶಾಲೆಗೆ ಎರಡೇ ಉಪಾಧ್ಯಾಯರು ಸಾಕೆಂದು ಸಮಗನಿಸುತ್ತದೆ. ಅದ್ದರಿಂದ ಉಪಾಧ್ಯಾಯರ ಸಂಖ್ಯೆಯಲ್ಲಿ 3 ನ್ನು ಕಮ್ಮಿ ಮಾಡಿ 6 ನೇ ತರಗತಿಯನ್ನು ಮುಚ್ಚುವಂತೆ ಸೂಚಿಸಲಾಗಿದೆ. ಆದರೆ ಗ್ರಾಮಸ್ಥರು ಇನ್ನಾದರೂ ಕಣ್ತೆರೆದು ಕೊಂಡು ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಿದರೆ ಉಪಾಧ್ಯಾಯರ ಸಂಖ್ಯೆಯನ್ನು 5 ಕ್ಕೆ ಹೆಚ್ಚಿಸುವ ವಿಚಾರವನ್ನು ಆ ಪರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಚಿಸಲಾದೀತು.

ಕರಡ ಶಾಲೆ.

ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು 124 ಇದೆ. ಕಳೆದ ಕೆಲವು ವರ್ಷಗಳಿಂದ ಯಾವ ಅಭಿವೃದ್ಧಿಯೂ ಕಾಣುವದಿಲ್ಲ. ಅಲ್ಲಿ 5 ಉಪಾಧ್ಯಾಯರಿರುವರು. ಇದು ವಿದ್ಯಾರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ಸಮಂಜಸವಲ್ಲದ್ದರಿಂದ ಒಬ್ಬ ಉಪಾಧ್ಯಾಯರನ್ನು ತೆಗೆಯ ಬಹುದು.

ಪಾಲೂರು ಶಾಲೆ.

ಈ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯು ಅಭಿವೃದ್ಧಿಗೊಳ್ಳುವದರ ಬದಲು ವರ್ಷ ಕಳೆದಂತೆ ಕಮ್ಮಿಯಾಗುತ್ತಾ ಬರುತ್ತಿದೆ. ಈಗ ವಿದ್ಯಾರ್ಥಿಗಳ ಸಂಖ್ಯೆಯು 23 ಇದರಲ್ಲಿ ಅನೇಕರು ಕಿಂಡರ್‌ಗಾರ್ಟನ್ ಕ್ಲಾಸಿನಲ್ಲಿದೆ. ಅಲ್ಲದೆ ಚೆಟ್ಟಿಕೇರಿ ಶಾಲೆಯು ಬರೇ ಎರಡು ಮೈಲು ದೂರವಿರುವ ಪ್ರಯುಕ್ತವಾಗಿ ಒಂದನೇ ಕ್ಲಾಸಿನ ಮೇಲಿನ ವಿದ್ಯಾರ್ಥಿಗಳು ಹೋಗಲು ಯಾವ ತೊಡಕ್ಕಾಗಲೀ ಇಲ್ಲದ್ದರಿಂದ ಸುಲಭವಾಗಿ ಚೆಟ್ಟಿಕೇರಿ ಶಾಲೆಗೆ ಹೋಗಬಹುದು. ಅದ್ದರಿಂದ ಈ ಶಾಲೆಯನ್ನು ಗ್ರಾಂಟ್-ಇನ್-ಏಯಿಡ್ ಶಾಲೆಯಾಗಿ ಮಾರ್ಪಡಿಸಬಹುದು.

ಆಲೂರು ಶಾಲೆ.

ಈ ಶಾಲೆಯು ಪೂರಾ ಬರಿದಾಗಿದೆ. ರೀಜನರೇಶನ್ ಏರಿಯಾದ ಮಧ್ಯದಲ್ಲಿ ಇದೆ. ವಿದ್ಯಾರ್ಥಿಗಳ ಅಭಾವಕ್ಕೆ ಉಪಾಧ್ಯಾಯರ ಅನಾದರಣೆಯೇ ಕಾರಣವೆಂದು ಗ್ರಾಮಸ್ಥರು ಹೇಳುವದಲ್ಲದೆ ಈಗಿನ ಉಪಾಧ್ಯಾಯರನ್ನು ಬದಲಾಯಿಸಿದರೆ ಶಾಲೆಯಲ್ಲಿ ವಿದ್ಯಾರ್ಥಿಗಳು ಹೆಚ್ಚುವದರಲ್ಲಿ ಸಂಶಯವಿಲ್ಲವೆಂದೂ ಹೇಳುವರು. ಈ ಕಾರಣಗಳಿಂದ ಬೋರ್ಡು ಈ ಶಾಲೆಯನ್ನು ತನ್ನ ಅಂಕೆಯಲ್ಲಿಟ್ಟುಕೊಳ್ಳಲು ಆಗದು. ಆದರೆ 5 ಮೈಲುಗಳ ಆ ಸುವಾಸಿನಲ್ಲಿ ಬೇರೆ ಶಾಲೆಗಳಿಲ್ಲದಿರುವದರಿಂದ ಅಲ್ಲಿಯ ನಿವಾಸಿಗಳ ವಿದ್ಯಾದೃಷ್ಟಿಯಿಂದ ಈ ಶಾಲೆಯನ್ನು ತೆಗೆದುಹಾಕುವದು ನ್ಯಾಯಬದ್ಧವಲ್ಲದ್ದರಿಂದ ಇದನ್ನು ಗ್ರಾಂಟ್-ಇನ್-ಎಯಿಡ್ ಶಾಲೆಯಾಗಿಡಬಹುದು.

ಹಾತೂರು ಶಾಲೆ.

ವಿದ್ಯಾರ್ಥಿಗಳ ಸಂಖ್ಯೆ 209 ಇದೆ. ಈಗ ಅಲ್ಲಿ ಬರೇ 4 ಉಪಾಧ್ಯಾಯರಿರುವರು. ಒಂದನೇ ಕ್ಲಾಸಿನಲ್ಲಿ 60 ವಿದ್ಯಾರ್ಥಿಗಳಿಗಿಂಥ ಹೆಚ್ಚಿರುವದರಿಂದ ಅದನ್ನು ಎರಡು ಭಾಗಮಾಡಬೇಕಿದೆ. ಅದ್ದರಿಂದ ಅಲ್ಲಿ ಒಬ್ಬ ಹೆಚ್ಚಿನ ಉಪಾಧ್ಯಾಯರ ಅವಶ್ಯಕತೆಯಿದೆ.

ಅಮ್ಮತ್ತಿ ಶಾಲೆ.

ಕಳೆದ ವರ್ಷ ಈ ಶಾಲೆಯಲ್ಲಿ 312 ವಿದ್ಯಾರ್ಥಿಗಳಿದ್ದರು. ಅಲ್ಲಿಯ ಹುಡುಗಿಯರ ಶಾಲೆ ಮುಚ್ಚಿದ್ದರಿಂದ ಅನಿರೀಕ್ಷಿತವಾಗಿ ವಿದ್ಯಾರ್ಥಿಗಳ ಸಂಖ್ಯೆಯು 463 ಕ್ಕೆ ಏರಿದೆ. ಅಲ್ಲಿ ಬರೇ 9 ಉಪಾಧ್ಯಾಯರಿರುವರು. 4, 5 ಮತ್ತು 6 ನೇ ತರಗತಿಗಳಲ್ಲಿ 60 ಕ್ಕಿಂತ ಹೆಚ್ಚು ಮಕ್ಕಳಿರುವದರಿಂದ ಅವುಗಳನ್ನು ವಿಂಗಡಿಸಬೇಕಾಗಿದೆ. ಆಗ ಅಲ್ಲಿ 11 ತರಗತಿಗಳಾಗುವವು. 11 ತರಗತಿಗಳನ್ನು 9 ಉಪಾಧ್ಯಾಯರು ನಡೆಸುವದು ಕಷ್ಟವಲ್ಲದೆ ಅದು ಹೈಯರ್ ಎಲಿಮೆಂಟರಿ ಶಾಲೆಯಾದ್ದರಿಂದ ಹೆಡ್ ಮಾಸ್ತರಿಗೆ ಆಫೀಸು ವಗೈರ ಕೆಲಸವಿರುವದರಿಂದ ಒಬ್ಬ ಉಪಾಧ್ಯಾಯರು ಹೆಚ್ಚಿರಬೇಕಾಗಿದೆ. ಆದರೆ ಬೋ

ರ್ಡಿನ ಆರ್ಥಿಕ ತೊಡಕಿನ ಕಾರಣದಿಂದ ಶಾಲೆಗೆ 3 ಉಪಾಧ್ಯಾಯರು ಬೇಕಿದ್ದರೂ 2 ಜನರನ್ನು ಕೊಡುವಂತೆ ಸೂಚಿಸಲಾಗಿದೆ.

ಫ್ರೇಜರ್‌ಪೇಟೆ.

ಕಳೆದ ವರ್ಷ 116 ಇದ್ದ ವಿದ್ಯಾರ್ಥಿಗಳ ಸಂಖ್ಯೆಯು ಈ ವರ್ಷ 160 ಕ್ಕೆ ಏರಿದೆ. 1 ನೇ ತರಗತಿಯಲ್ಲಿ 60 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವದರಿಂದ ವಿಭಾಗಿಸಲ್ಪಡಬೇಕಾಗಿದೆ. ಪ್ರತಿ ತರಗತಿಗೆ ಒಬ್ಬ ಉಪಾಧ್ಯಾಯರು ಅಗತ್ಯವಾದ್ದರಿಂದ 5 ಇರುವ ಉಪಾಧ್ಯಾಯರ ಸಂಖ್ಯೆಯನ್ನು 6 ಕ್ಕೆ ಏರಿಸಬಹುದು.

ಪಾರಾಣೆ ಶಾಲೆ.

ಇಲ್ಲಿಯ ಹುಡುಗಿಯರ ಶಾಲೆಯನ್ನು ಮುಚ್ಚಿದ ಪರಿಣಾಮವಾಗಿ ವಿದ್ಯಾರ್ಥಿಗಳ ಸಂಖ್ಯೆಯು 235 ಕ್ಕೆ ಏರಿದೆ. 1 ನೇ ತರಗತಿಯನ್ನು ವಿಭಾಗಿಸಬೇಕಾಗಿದೆ. ಈಗ ಬರೇ 4 ಉಪಾಧ್ಯಾಯರಿರುವದರಿಂದ ತರಗತಿಗೊಂದರಂತೆ ಎರಡು ಉಪಾಧ್ಯಾಯರನ್ನು ಹೆಚ್ಚಿಸಬೇಕಾಗಿದೆ.

ಚೆಯ್ಯಂಡಾಣೆ ಶಾಲೆ.

ಇದು ಅಪೂರ್ಣವಾದ ಹೈಯರ್ ಎಲಿಮೆಂಟರಿ ಶಾಲೆ. ಈ ವರ್ಷ 7 ನೇ ತರಗತಿಯನ್ನು ತೆರೆಯಲಾಯಿತು. ಇಲ್ಲಿಯ ಜನರು ಇದನ್ನು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮಾಡಬೇಕೆಂದು ಪೂರಾ ಕುತೂಹಲಶಾಲಿಗಳಾಗಿರುವರು. ಆದ್ದರಿಂದಲೇ ಸೊಗಸಾದ ಒಂದು ಕಟ್ಟಡವನ್ನು ತಮ್ಮ ಖರ್ಚಿನಿಂದಲೇ ಕಟ್ಟಿರುವರು. ಅವರ ಈ ಉತ್ಸಾಹವನ್ನು ಕುಗ್ಗಿಸುವದು ಹಿತವಲ್ಲ. 7 ತರಗತಿಗಳಿಗೆ ಅಲ್ಲಿ 6 ಉಪಾಧ್ಯಾಯರು ಮಾತ್ರ ಇರುವರು. ಆದ್ದರಿಂದ ಒಬ್ಬ ಹೆಚ್ಚಿನ ಉಪಾಧ್ಯಾಯರನ್ನು ಕೊಡಬೇಕು.

ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವದರಿಂದ ಮತ್ತು ಈಗಿರುವ ಕೆಲವೇ ಉಪಾಧ್ಯಾಯರಿಂದ ಮಕ್ಕಳ ಉಸ್ತುವಾರಿ ಸರಿಯಾಗಿ ನಡೆಸಲಾಗದ್ದರಿಂದ ಚೆಂಬೆಬೆಳಿಯೂರು, ಪೊಳ್ಳಿಬೆಟ್ಟ, ಸಿದ್ಧಾಪುರ, ಭಾಗಮಂಡ್ಲ, ಗೋಣಿಕೊಪ್ಪ, ಮಾಯಮುಡಿ, ಮರಗೋಡು, ತೂಚನುಕೇರಿ, ಕಂಡಂಗಾಲ, ಟಿ. ಶೆಟ್ಟಿಗೇರಿ, ಬೆಕ್ಕೆಸೊಡ್ಲೂರು, ಹರಿಹರ, ನಿಡ್ತ, ಬಾಡಗ, ಜಂಬೂರು, ಕಡಗದಾಳು, ನೆರಾಜೆ ಮತ್ತು ತೊರೆನೂರು ಶಾಲೆಗಳಿಗೆ ಒಂದೊಂದರಂತೆ ಹೆಚ್ಚಿನ ಉಪಾಧ್ಯಾಯರನ್ನು ಕೊಡಬಹುದೆಂದು ಸೂಚಿಸಲಾಗಿದೆ.

ಈ ಕೆಳಗಿನ ಗ್ರಾಂಟ್-ಇನ್-ಎಯಿಡ್ ಶಾಲೆಗಳಿಗೆ ಹೆಚ್ಚಿನ ಗ್ರಾಂಟು ಕೊಡಬಹುದೆಂದು ಶಿಫಾರಸ್ಸು ಮಾಡಲಾಗಿದೆ.

ಬೇಟೋಳಿ.

ಈ ಶಾಲೆಯು ಪ್ರಾಮುಖ್ಯವಾಗಿ ಅಲ್ಲಿಯ ಜಮ್ಮ ಮಾಪಿಳ್ಳೆಯರಿಗೇ ಆಗಿದೆ. ಶಾಲೆಯಲ್ಲಿ 25, ಹುಡುಗರೂ ಅವರಿಂದಲೇ ಇಡಲ್ಪಟ್ಟಿರುವ ಒಬ್ಬ ಕನ್ನಡ ಮತ್ತೊಬ್ಬ ಉರ್ದು ಕಲಿಸಲು ಹೀಗೆ ಎರಡು ಉಪಾಧ್ಯಾಯರೂ ಇರುವರು. ಕಮಿಟಿಯವರ ಭರವಸೆಯಂತೆ ಶಾಲಾ ಹುಡುಗರ ಸಂಖ್ಯೆಯನ್ನು 40ಕ್ಕೆ ತರುವದು ಸುಲಭ ಸಾಧ್ಯ. ಇಲ್ಲಿಯ ನಿವಾಸಿಗಳು ವಿದ್ಯೆಯಲ್ಲಿ ಪೂರಾ ಹಿಂದುಳಿದಿರುವದಲ್ಲದೆ ಅವರಲ್ಲಿ ಕೆಲವರಿಗೆ ಮಾತ್ರ ಕನ್ನಡ ಬರುತ್ತೆ. ಒಬ್ಬನೇ ಉಪಾಧ್ಯಾಯನಿಗೆ ಕನ್ನಡ ಮತ್ತು ಉರ್ದು ಕಲಿಸಲು ಕಷ್ಟವಾದ್ದರಿಂದ ಈಗ ಕೊಡುತ್ತಿರುವ 10 ರೂ. ಗ್ರಾಂಟನ್ನು ರೂ. 15ಕ್ಕೆ ಏರಿಸಬೇಕೆಂದು ಸೂಚಿಸಿದೆ.

ಅರಮೇರಿ ಹರಿಜನ ಶಾಲೆ.

ಆ ಸ್ಥಳದ ಹರಿಜನರಿಗಾಗಿ ಈ ಶಾಲೆಯು ಏರ್ಪಟ್ಟಿದೆ. ಈಗ ಅಲ್ಲಿ 45 ವಿದ್ಯಾರ್ಥಿಗಳಿರುವರು. ಇವರಲ್ಲಿ 40 ಮಂದಿ ಹರಿಜನರು. ಶಾಲೆಗೆ ಹೋಗುವ ವಯಸ್ಸಿನ 60 ಜನ ಹರಿಜನ ಬಾಲಕರು ಆ ಸುತ್ತು ಮುತ್ತು ಇರಬಹುದು. ಶಾಲೆಯಲ್ಲಿ ಸ್ಥಳ ಇಲ್ಲದ ಪ್ರಯುಕ್ತ ಅವರನ್ನು ಶಾಲೆಗೆ ಬರುವಂತೆ ಶ್ರದ್ಧೆ ವಹಿಸಿರುವದಿಲ್ಲ. ಈಗ ಒಂದು ಹೊಸ ಕಟ್ಟಡವಾಗಿರುವದರಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವ ಸಂಭವ ಉಂಟು. ಹರಿಜನಾಭಿವೃದ್ಧಿಯ ವಿಚಾರ ಹೆಚ್ಚಿನ ಗಮನ ಯಾಕೆ ಕೊಡಬೇಕೆಂಬ ಬಗ್ಗೆ ವಿವರಣೆ ಬೇಕಿಲ್ಲ. ಆದ್ದರಿಂದ ಈ ಶಾಲೆಯಲ್ಲಿ ಎರಡು ಉಪಾಧ್ಯಾಯರು ಕೆಲಸ ಮಾಡಲು ಅನುಕೂಲವಾಗಿ ಈಗಿರುವ ರೂ. 10 ಗ್ರಾಂಟನ್ನು ರೂ. 20ಕ್ಕೆ ಏರಿಸಲು ಸೂಚಿಸಲಾಗಿದೆ.

ಕೋರಂಗಾಲ.

ವಿದ್ಯಾರ್ಥಿಗಳ ಸಂಖ್ಯೆ 64 ಇದೆ. ಎರಡು ಉಪಾಧ್ಯಾಯರಿದ್ದರೂ ಬರೇ ರೂ. 10 ಗ್ರಾಂಟು ಕೊಡಲಾಗುತ್ತಿದೆ. ಆದ್ದರಿಂದ ಈ ಗ್ರಾಂಟನ್ನು ರೂ. 20 ಕ್ಕೆ ಏರಿಸಲು ಸೂಚಿಸಲಾಗಿದೆ.

ಚಿಕ್ಕಕುಂದ.

ಈ ಸ್ವಂತ ಶಾಲೆಯು ಹತ್ತಿರದ ಬೋರ್ಡು ಶಾಲೆಗೆ ಮೂರು ಮೈಲು ದೂರದಲ್ಲಿದೆ. ಈ ಸ್ಥಳದ ಜನರು ಪೂರಾ ಹಿಂದುಳಿದವರಿದ್ದಾರೆ. ಅವರ ಆರ್ಥಿಕ ತೊಡಕಿನಲ್ಲಿಯೂ ಕೂಡ ಕೆಲವು ಸಮಯದ ವರೆಗೆ ಸ್ವಂತ ಶಾಲೆಯನ್ನು ನಡಿಸುತ್ತಿದ್ದರು. ಸುಮಾರು ರೂ. 450 ಬಾಳುವ ಒಂದು ಕಟ್ಟಡವನ್ನೂ ಅವರೇ ಕಟ್ಟಿರುವರು. ಶಾಲೆಯಲ್ಲಿ 30 ವಿದ್ಯಾರ್ಥಿಗಳಿರುವರು. ರೂ. 10 ಗ್ರಾಂಟು ಕೊಡಬೇಕೆಂಬ ಅವರ ಕೇಳಿಕೆಯು ಸಮಂಜಸವಾಗಿದೆ.

ಕೊಂಡಂಗೇರಿ.

ಕಳೆದ 5 ವರ್ಷಗಳಿಂದ ಮಾಪಿಳ್ಳೆಯವರಿಗೆ ಉರ್ದು ಕಲಿಸುತ್ತಿರುವ ಇದೊಂದು ಸ್ವಂತ ಶಾಲೆ. ಕನ್ನಡ ಕಲಿಯಲು ಅವರು ಪೂರಾ ಉತ್ಸಾಹದಿಂದಿರುವುದರಿಂದ ಅದನ್ನು ಪ್ರೋತ್ಸಾಹಿಸಬೇಕು. ಅದ್ದರಿಂದ ರೂ. 10 ಗ್ರಾಂಟು ಕೊಡಬಹುದೆಂದು ಸೂಚಿಸಿದೆ.

ಐಯ್ಯಂಗೇರಿ.

ಈ ಸ್ವಂತ ಶಾಲೆಯು ಕೋರಂಗಾಲದಿಂದ 1½ ಮೈಲು ದೂರದಲ್ಲಿದೆ. ಆದರೆ ಸಣ್ಣ ಪುಲಿಕೋಟು ಮತ್ತು ಐಯ್ಯಂಗೇರಿ ಗ್ರಾಮಗಳು ಸುತ್ತು ಹೊಳೆಯಿಂದ ಸುತ್ತಲ್ಪಟ್ಟಿರುವದರಿಂದ ಆ ಗ್ರಾಮಸ್ಥರಿಗೆ ಇದು ಅಗತ್ಯವಿರುವದು. ಈ ಭಾಗದ ಅನೇಕ ಜನರು ಅವಿದ್ಯಾವಂತರು. ಆದರಿಂದ ಅವರ ಶಾಲೆಗೆ ಅವರು ಕೇಳುವ ರೂ. 10ರ ಗ್ರಾಂಟು ನ್ಯಾಯವಾಗಿದೆ. ಸರಿಯಾದ ಸಂಬಳದಿಂದ ಒಬ್ಬ ಉಪಾಧ್ಯಾಯನನ್ನು ಅಲ್ಲಿ ನೇಮಿಸಿದರೆ ವಿದ್ಯಾರ್ಥಿಗಳ ಸಂಖ್ಯೆಯು 45ಕ್ಕಿಂತ ಹೆಚ್ಚಾಗುವದು.

ಕೂಡಿಗೆ ನೈಟ್ ಸ್ಕೂಲ್.

ಕೊಡಗಿನ ಅತೀ ಹಿಂದುಳಿದಿರುವ ಪ್ರಾಂತದಲ್ಲಿ ಕೂಡಿಗೆ ಗ್ರಾಮವಿದೆ. ಇಲ್ಲಿ ಅಕ್ಷರ ಜ್ಞಾನವಿರುವವರೇ ವಿರಳ. ಇತ್ತಲಾಗಿ ಸಹಕಾರಿ ಇಲಾಖೆಯವರು ಈ ಜನರಾಭಿವೃದ್ಧಿಗಾಗಿ ಒಂದು ಉತ್ತಮ ಜೀವನ ಸಂಘವನ್ನು ಸ್ಥಾಪಿಸಿದ್ದಾರೆ. ಈ ಸಂಘದ ಆಶ್ರಯದಲ್ಲಿ ಅಲ್ಲಿ ರಾತ್ರಿ ಶಾಲೆಯು ಇಡಲ್ಪಡುತ್ತಿದೆ. 50 ಯುವಕರಿಗಿಂತ ಹೆಚ್ಚಾಗಿ ಜನರು ಬರುತ್ತಿರುವರು. ಸಂಘದವರು ಒಬ್ಬ ಉಪಾಧ್ಯಾಯನನ್ನಿಟ್ಟು ಈ ವರೆಗೆ ಶಾಲೆಯನ್ನು ಬಹಳ ಕಷ್ಟದಿಂದ ನಡೆಸುತ್ತಾ ಬಂದಿದ್ದಾರೆ. ಇನ್ನು ಮುಂದೆ ಆ ಸಂಘಕ್ಕೆ ಶಾಲೆಯನ್ನು ನಡಸುವದು ಕಷ್ಟವಾಗಿದೆ. ಆದ್ದರಿಂದ ರೂ. 5ರ ಒಂದು ಸಣ್ಣ ಗ್ರಾಂಟು ಅವರಿಗೆ ತುಂಬಾ ಉಪಕಾರ ಮಾಡೀತು.

ಕಿರುಗೂರು.

ಈಗ 98 ವಿದ್ಯಾರ್ಥಿಗಳಿರುವರು. ಐದು ತರಗತಿಗಳೂ ತೆರೆಯಲ್ಪಟ್ಟಿವೆ. ಬೋರ್ಡು ರೂ. 20 ಗ್ರಾಂಟು ಕೊಡುತ್ತಿದೆ. ಗ್ರಾಮಸ್ಥರು ರೂ. 1500ಕ್ಕಿಂತ ಹೆಚ್ಚಿಗೆ ಖರ್ಚು ಮಾಡಿ ಒಂದು ಒಳ್ಳೆಯ ಕಟ್ಟಡವನ್ನು (ಇದಕ್ಕೆ ಬೋರ್ಡು ಮತ್ತು ಸರಕಾರ ರೂ 100ರಂತೆ ಕೊಟ್ಟಿವೆ) ಕಟ್ಟಿ ತಮ್ಮ ಉತ್ಸಾಹವನ್ನು ಪ್ರದರ್ಶಿಸಿರುವರು. ಈ ಶಾಲೆಯನ್ನು ಬೋರ್ಡಿನ ಅಧೀನಕ್ಕೆ ತೆಗೆದುಕೊಳ್ಳಬೇಕೆಂದು ಶಾಲಾ ಪಂಚಾಯಿತದಾರರು ಕೇಳಿಕೊಂಡಿರುವರು. ಶಾಲೆಯ ವಿದ್ಯಾರ್ಥಿಗಳ ಸಂಖ್ಯೆಯ ದೃಷ್ಟಿಯಿಂದ ಬೋರ್ಡಿಗೆ ಅದನ್ನು ತೆಗೆದುಕೊಳ್ಳಬೇಕು. ಅಲ್ಲದೆ ಈಗ ಅಲ್ಲಿರುವ 3 ಉಪಾಧ್ಯಾಯರನ್ನು ಡಿ. ಬೋರ್ಡು ಸರ್ವಿಸಿಗೆ ತೆಗೆದುಕೊಳ್ಳಬೇಕಾಗಿಯೂ ಪಂಚಾಯಿತದಾರರು ಕೇಳಿಕೊಂಡಿರುವರು. ಆದರೆ ಈ ಮೂರು ಉಪಾಧ್ಯಾಯರೂ ಡಿ. ಬೋರ್ಡು ಉದ್ಯೋಗಕ್ಕೆ ಬೇಕಾದ ಕನಿಷ್ಠ ಅರ್ಹತೆಯನ್ನು ಪಡೆಯದಿರುವ ಕಾರಣ ಕಮಿಟಿಯು ಅವರಿಗೆ ಯಾವ ಭರವಸೆಯನ್ನೂ ಕೊಟ್ಟಿರುವದಿಲ್ಲ. ಬೋರ್ಡಿಗೆ ಈ ಶಾಲೆಯ ಆಡಳಿತೆಯನು ತೆಗೆದುಕೊಳ್ಳುವದೆಂದರೆ 3 ಉಪಾಧ್ಯಾಯರನ್ನು ಬೋರ್ಡು ನೇಮಿಸಬೇಕು.

ಸಮಾಪ್ತಿ.

ಮೇಲಿನ ನಮ್ಮ ಶಿಫಾರಸ್ಸಿನ ಪರಿಣಾಮವೆಂದರೆ ಖರ್ಚಿನಲ್ಲಿ ರೂ. 5,760 ಹೆಚ್ಚು. ಖರ್ಚು ಕಮ್ಮಿ ಮಾಡಲು ನೇಮಿಸಲ್ಪಟ್ಟ ಕಮಿಟಿಯು ಈ ರೀತಿ ಹೆಚ್ಚಿನ ಖರ್ಚಿಯ ದಾರಿ ತೋರಿಸಿದ್ದು ವಿರೋಧಾಭಾಸವಾಗಿ ತೋರಬಹುದು. ಪ್ರಾಂತದ ಪ್ರಾಥಮಿಕ ವಿದ್ಯಾಭ್ಯಾಸವು ಪೂರ್ಣ ಬೋರ್ಡಿನ ಕೈಯಲ್ಲಿರುವದೂ ಮತ್ತು ನೆರೆಹೊರೆಯ ಪ್ರಾಂತಗಳು ಹದ್ದುಮೀರಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುತ್ತಿರುವದೂ ಈ ಕಮಿಟಿಯವರ ಅವಗಾಹನೆಯಲ್ಲಿರುವದರಿಂದ ಕೇವಲ ಖರ್ಚು ಯೋಚನೆಯ ನೆವದಿಂದ ಕಣ್ಣು ಮುಚ್ಚಿ ಖಡಿತದ ಸೂಚನೆಗಳನ್ನು ಸೂಚಿಸಿ ಪ್ರಾಂತವನ್ನು ಅಧೋಗತಿಗೆ ತಳ್ಳುವ ಕಾರ್ಯ ಮಾಡಲು ಕಮಿಟಿಗೆ ಸಾಧ್ಯವಾಗಲಿಲ್ಲ. ಈ ವರೆಗೆ ಆಗಿರುವ ಅಭಿವೃದ್ಧಿಯು ಮುಂದಕ್ಕೂ ಸಾಗಬೇಕೆಂದೇ ನಮಗನಿಸುತ್ತದೆ. ಈ ಕಾರಣಗಳಿಂದಾಗಿ ಹೆಚ್ಚು ಖರ್ಚನ್ನು ಸೂಚಿಸುವ ವರದಿಯನ್ನು ಒಪ್ಪಿಸದೆ ಗತ್ಯಂತರವಿಲ್ಲದಾಯಿತು. ಇದರ ಮಧ್ಯೆ ಬೋರ್ಡು ತನ್ನ ಆರ್ಥಿಕ ಅಧಃಪತನದ ಪರಿಣಾಮದಿಂದ ಈ ಬಗ್ಗೆ ಹೆಚ್ಚು ಹಣ ಖರ್ಚು ಮಾಡಲಾರದೆಂಬುದೂ ನಮಗೆ ತಿಳಿಯದ್ದಲ್ಲ. ಈಗಿನ ಆರ್ಥಿಕ ಸ್ಥಿತಿಯಿಂದ ಜನತೆಯ ಮೇಲೆ ಹೊಸ ತೆರಿಗೆಯನ್ನು ಹಾಕುವದಾದರೂ ಅಸಾಧ್ಯ. ಆದ್ದರಿಂದ ಈ ಪ್ರಾಂತದ ನಿರಕ್ಷರತೆಯನ್ನು ನಿವಾರಿಸಲು ನಾವು ಶಿಫಾರಸ್ಸು ಮಾಡಿರುವ ಮೇಲ್ಕಂಡ ಅತ್ಯಾವಶ್ಯದ ಸೂಚನೆಗಳನ್ನು ಜಾರಿಗೆ ತರಲು ಬೋರ್ಡಿಗೆ ಉಳಿದಿರುವ ಒಂದೇ ದಾರಿಯಾದರೂ ಬೋರ್ಡಿಗೆ ಕೊಡುತ್ತಿದ್ದ ಗ್ರಾಂಟಿನಲ್ಲಿಯ ಖೋತೆಯನ್ನು ಕೂಡಬೇಕೆಂದೂ, ಮತ್ತು ಹೆಚ್ಚಿನ ಖರ್ಚಿಗೆ ತಕ್ಕ ಸಹಾಯಮಾಡಬೇಕೆಂದೂ ಸ್ಥಳೀಯ ಸರಕಾರವನ್ನು ಕೇಳಿಕೊಳ್ಳುವದೇ ಆಗಿದೆ.

ಉಪಾಧ್ಯಾಯರ ಸಂಬಳದ ಸ್ಕೇಲು.

ಉಪಾಧ್ಯಾಯರ ಸಂಬದ ಸ್ಕೇಲನ್ನು ಟೈಮ್‌ಸ್ಕೇಲಿನಲ್ಲಿ ನಿಶ್ಚಯಿಸುವದೋ ಯಾ ಗ್ರೇಡ್ ಸ್ಕೇಲಿನಲ್ಲಿ ನಿಶ್ಚಯಿಸುವದೋ ಎಂಬ ವಿಚಾರವನ್ನು ವಿಮರ್ಶಿಸಿದೆವು. ಡಿ. ಬೋರ್ಡಿನ 223 ಉಪಾಧ್ಯಾಯರಲ್ಲಿ ಬರೇ 38 ಜನರು ಮಾತ್ರ ಟೈಮ್ ಸ್ಕೇಲಿನಲ್ಲಿರುವರು. ಬಾಕಿ ಇರುವವರೆಲ್ಲರೂ ಗ್ರೇಡೆಡ್ ಸ್ಕೇಲಿನಲ್ಲಿರುವರು. ಸರಕಾರಿ ಸರ್ವಿಸಿನಲ್ಲಿರುವವರನ್ನು ಡಿ. ಬೋರ್ಡು ಸರ್ವಿಸಿಗೂ, ಡಿ. ಬೋರ್ಡು ಸರ್ವಿಸಿನಲ್ಲಿರುವವರನ್ನು ಗವರ್ನಮೆಂಟು ಸರ್ವಿಸಿಗೂ ವರ್ಗಾಯಿಸುವ ಸಂದರ್ಭಗಳು ಬರುವವು. ಡಿ. ಬೋರ್ಡಿನ ಎಲ್ಲಾ ಉಪಾಧ್ಯಾಯರಿಗೂ ಗ್ರೇಡೆಡ್ ಸ್ಕೇಲನ್ನೇ ತಂದರೆ ಈ ಪರಸ್ಪರ ವರ್ಗಾವರ್ಗಿಗಳನ್ನು ಮಾಡುವದು ಕಷ್ಟವಾಗುವದು. ಆದ್ದರಿಂದ ಈಗಿರುವ ವಿಧಾನವನ್ನೇ ಅನುಸರಿಸುವದು ಅನುಕೂಲವಲ್ಲದೆ ಆರ್ಥಿಕ ದೃಷ್ಟಿಯಿಂದಲೂ ಯೋಗ್ಯವಿದೆ.

ಪಿ. ಐ. ಬೆಳ್ಯಪ್ಪ, ಅಧ್ಯಕ್ಷರು.

ಎಂ. ಎಸ್. ಮಂದಣ್ಣ
ಸಿ. ಎಂ. ರಾಮರಾವ್
ಎಸ್. ರಾಮಶೆಟ್ಟಿ
ಎ. ಎಸ್. ಪೊನ್ನಪ್ಪ.
} ಮೆಂಬರರು.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

15 **Ludhiana.**

---

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ!

ಕರ್ಕೀ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೀ.
ಮತ್ತು ಕಂಪೆನಿ,
(52-34) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹಾಶಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ಸರಿ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ.

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಳ್ಳಾಟರ ಜೋಯಪ್ಪನವರು.
ಚಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮುಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂದ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ. ಪಿ. ಟಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ. ಈ ಮಾಚಮ್ಮಯ್ಯನವರು.
ಕುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು.
ನಾಪೋಕ್ಲು—ಮೆ. ಬಲ್ಯಮಂಡ ಯಂ. ಪೂಣ್ಣಚ್ಚನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟುಆದ ರಶೀತಿ ತೆಗೊಂಡಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ ರೂ. 1000ಕ್ಕೆ ವರ್ಷಕ್ಕೆ 21 ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ _ ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-21

ಕೇರಳ ಆಯುರ್ವೇದಿಕ್

ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಸೂತ್ರಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
52-25 **ಮೆಡಿಕಲ್ ಪ್ರಾಕ್ಟೀಶನರ್, ವೀರಾಜಪೇಟೆ.**

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಇರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, ಮೆಂಬರು ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಸಾಲ ಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಬಿರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ, ಮಡಿಕೇರಿ.
(ಕೋ-ಅಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)'

(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ತ್ರಿಫ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3¾ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:–ಪಂದ್ಯಂಡ ಐ. ಬೆಳ್ಯಪ್ಪನವರು ಎಂ ಎಲ್ ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು.
ಸೆಕ್ರೆಟರಿ:—ಮ. ಎಸ್. ಎನ್ ರಾಮಶೆಟ್ಟಿಯವರು.

ತಾ. 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ಣಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು

ಕಾಲ.	1 ಪುಟಕ್ಕೆ.	1 ಕಲಮಿಗೆ	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ 55.	ರೂ. 35.	ರೂ 22
6 ತಿಂಗಳಿಗೆ—	,, 100	,, 35	,, 22	,, 13
3 ತಿಂಗಳಿಗೆ—	,, 60	,, 20	,, 13	,, 8
1 ತಿಂಗಳಿಗೆ—	,, 25	,, 10.	,, 6.	,, 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೋಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(82-30)

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1550

ನಿಮ್ಮ
ಮುದ್ರಣ ಕೆಲಸಗಳನ್ನು
" ಕೊಡಗು "
ಪ್ರೆಸ್ಸಿನಲ್ಲೇ
ಮುದ್ರಿಸಿರಿ.

ಕೊಡಗು

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩-೮-೦

ತಾ. ೧೧—೮—೧೯೪೯.

ಸಂಪುಟ ೧೯] [ಸಂಚಿಕೆ ೧೧

IN MATTERS OF LOVE

Man does not attract Man.

Woman does not attract Woman.

By nature like things do not attract.

BUT

REMEMBER

MONEY DOES ATTRACT MONEY.

The Canara Banking Corporation, Limited.

(Incorporated In British India)

Estd. 1906.

52-34

1876ನೇ ಇಸವಿಯಿಂದಲೂ ಪ್ರಸಿದ್ಧಿಯಾದ ಔಷಧಿಗಳು.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. **1—8—0.**

ಸ್ಪ್ಲೀನ್ ಮಿಕ್ಸ್ಚರ್

ದೀರ್ಘಕಾಲದ ಜ್ವರದಿಂದಾಗಲಿ ಯಾ ಇನ್ನಿತರ ಕಾರಣದಿಂದಾಗಲಿ ಉಂಟಾಗುವ ಜ್ವರಗಡ್ಡೆ, ಆಗಾಗ್ಯೆ ಜ್ವರಬರುವಿಕೆ, ಹೊಟ್ಟೆಹಸಿವು ಇಲ್ಲದಿರುವಿಕೆ, ಅಗ್ನಿಮಾಂದ್ಯ, ಪಿತ್ಥವಿಕಾರ, ಅಶಕ್ತತೆ, ಮಲಬದ್ಧತೆ, ಮುಂತಾದವುಗಳನ್ನು ಹೋಗಲಾಡಿಸಿ, ಶಕ್ತಿಯನ್ನುಂಟು ಮಾಡುವುದು. **ಬಾಟ್ಲಿ 1ರ ರೂ. 1—2—0.**

ಬಾಲಗ್ರಹ ಗುಟಿಕೆ

ಮಕ್ಕಳ ಟೀಸ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು. ಬಾಟ್ಲಿ 1ರ ರೂ. 0-10-0

ಮಲೇರಿಯಾ ನಿವಾರಣೆ

ಚಳಿಜ್ವರ, ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಇನ್‌ಫ್ಲುಯೆಂಜಾ, ಕಫಜ್ವರ, ಜ್ವರಗೆಡ್ಡೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸುವುದು.

ಬಾಟ್ಲಿ 1ರ ರೂ. 1—8—0, ಸಣ್ಣ ಬಾಟ್ಲಿ 1ರ ಆಣೆ 13.

☞ ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕ ವಾದ ಔಷಧಿ ರವಾನಿಸಬಹುದು. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಸಿಯನ್ಸ್,
ನಂಬ್ರ 4, ರಥಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ

ಗಣೇಶ ಸುಂದರ ಪ್ರಭು, ಸುಳ್ಯ. ಮಂಗಳೂರು ಸ್ಟೋರ್ಸ್, ಮಡಿಕೇರಿ. ಯಂ. ಎಸ್. ಮಾಚಯ್ಯ ಮರ್ಚೆಂಟ್, ಸುಂಟಿಕೊಪ್ಪ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ದಿ ಕೂರ್ಗ್ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರಾಜಪೇಟೆ. ಎ. ಎಸ್. ಸುಬ್ಬಯ್ಯ ಮರ್ಚೆಂಟ್, ಗೋಣಿಕೊಪ್ಪಲು.

3

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರ ಕ ಟ ಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80, 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ವೈಯುಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖಗಳಿಂದ ತಿಳಿದುಕೊಳ್ಳಬಹುದು

52–14

The Agricultural & Industrial Bank Ltd

"ZANDU"

ಝಂಡೂರವರ

ದ್ರಾಕ್ಷಾಸವ

ಮತ್ತು

ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ.

ಝಂಡೂ ಅಯೋಡೈಸ್ಡ್

ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ ವಿಕಾರಗಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಬೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟಾಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್ ಎ ಎಂ. ಎಸ್

(52–45) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀವಾರ, ಬನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡೆಕ್ಕ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂಡೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೊ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

52–31

ಸಾಮಾಜಿಕ ಕಾದಂಬರಿ.

ದೇವದತ್ತ.

೩೦ ಅಧ್ಯಾಯ.

ಇಬ್ಬರೂ ಕುಳಿತರು. ವಿಚಾರಕ್ಕೆ ಪ್ರಾರಂಭವಾಯಿತು. ಚಾರುದತ್ತನು ಕೇಸರಿಪಾಣಿಯನ್ನು ಒಂದು ಕಡೆ ಕರೆದು ಏನನ್ನೋ ಗುಪ್ತವಾಗಿ ವಿಚಾರಿಸಿದನು. ಫಿರಿಯಾದಿದಾರರ ವಿಚಾರವಾದೊಡನೆ, ದೇವದತ್ತನು ಕೇಸರಿ ಪಾಣಿಯನ್ನು ಕುರಿತು, 'ಏನಯ್ಯ! ನಿನಗೆ ನಾಚಿಕೆಯಾಗುವುದಿಲ್ಲವೇ? ದೇವರು ನಿನಗೆ ಇಂತಹ ಶಾರೀರ ಧಾರ್ಢ್ಯವನ್ನು ಕೊಟ್ಟಿರುವದು ಇಂತಹ ಹೇಯವಾದ ನೀಚ ಕೃತ್ಯಗಳನ್ನು ನಡೆಸಲಿಕ್ಕಾಗಿಯೋ? ಇದರಿಂದ ನೀನು ನಿನಗೂ, ನಿನ್ನ ಮಕ್ಕಳಿಗೂ ಸಹ ಎಂದೂ ಅಳಿಸದ ಕಳಂಕವನ್ನು ಸಂಪಾದಿಸಿಯನ್ನೆ. ನಿನ್ನ ಆ ಮುಖವನ್ನು ಬಯಲಿಗೆ ಬಿಟ್ಟು ಇನ್ನು ಮುಂದೆ ನೀನು ಹೊರಗೆ ಬರುವದು ಹೇಗೆ? ಕದ್ದು ತಿನ್ನುವುದಕ್ಕಿಂತ ಕೂಲಿ ಮಾಡಿಯಾಗಲೀ, ಬೇಡಿಯಾಗಲೀ ತಿನ್ನುವುದು ಮೇಲಲ್ಲವೇ? ಏ ಷೋಮಾರಿ! ನಿನ್ನನ್ನು ಹೀಗೆ ಬಿಟ್ಟರೆ ಅದರಿಂದ ಪ್ರಯೋಜನವಾಗಲಾರದು. ಒಂದು ಮುಳ್ಳು ಕಾಲಿಗೆ ತಗಲಿತೆಂದರೆ, ಅದನ್ನಾಕ್ಷಣವೇ ದಾರಿಯಿಂದ ತೆಗೆದು ದೂರಕ್ಕೆ ಬಿಸಾಡಬೇಕು. ಈಗ ನಿನ್ನನ್ನು ಬಿಟ್ಟರೆ ನೀನು ಒಳ್ಳೆಯವನಾಗುವ ಸಂಭವವಿಲ್ಲ. ಆದುದರಿಂದ ನಿನ್ನನ್ನು ಖಂಡಿತವಾಗಿಯೂ ಪೋಲೀಸ್ ಅಧಿಕಾರಿಗಳ ವಶಕ್ಕೆ ಒಪ್ಪಿಸಿಯೇ ತೀರಬೇಕು.' ಎಂದು ಕಠಿಣವಾಗಿ ಹೇಳಿದನು.

ಗ್ರಾಮಸ್ಥರನೇಕರು 'ಸರಿ ಸ್ವಾಮಿ ಹಾಗೆಯೇ ಮಾಡಬೇಕು. ಇವನ ಕಾಟದಿಂದ ನಮಗೆ ಬದುಕುವುದಕ್ಕೇ ಆಗುವುದಿಲ್ಲ. ಏನು ಬೆಳೆಸಿದರೂ ಅದರಲ್ಲಿ ಒಂದು ಪಾಲು ಇವನಿಗೆ' ಎಂದರು.

ಚಾರುದತ್ತ–ಇದೇನು ದೇವದತ್ತ ಹೀಗೆನ್ನುವೆ? ಅಪರಾಧಿಯನ್ನು ವಿಚಾರಿಸದೆ ಒತ್ತಡವೆಯೇ ಹೀಗೆ ಶಿಕ್ಷಿಸುವುದು ಯಾವ ತರಹದ ನ್ಯಾಯ? ಅವನ ಹಾಲು ಹವಾಲುಗಳನ್ನು ಕೇಳಬಾರದೇ?

ದೇವದತ್ತ–ವಿಚಾರಿಸುವುದೇನು? ಎಲ್ಲವೂ ಪ್ರತ್ಯಕ್ಷವಾಗಿಯೇ ಇದೆ. ಅವನ ಮುಖಚ್ಛಾಯೆಯನ್ನೂ, ಇರಸ್ಥಿತಿಯನ್ನೂ ನೋಡಿದರೆ ಎಲ್ಲಾ ನಿವೇದ್ಯವಾಗುವುದಿಲ್ಲವೇ?

ಚಾರುದತ್ತ–ಯಾವನೇ ಆಗಲೀ, ಒಬ್ಬನಿಗೆ ಯಾರೂ ಸಹಾಯಕರಿಲ್ಲದೆ ಎಲ್ಲರೂ ಒಬ್ಬನನ್ನು ತಪ್ಪಿತಸ್ಥನೆಂದು ಹೇಳತೊಡಗಿದರೆ ಎಂತಹ ಸಜ್ಜನನಿಗೂ ತನ್ನ ನಿಜತ್ವವನ್ನು ಸ್ಥಾಪಿಸಲು ಆಗುವುದಿಲ್ಲ. ಆದುದರಿಂದ ವಿಚಾರಿಸಿಯೇ ತೀರಬೇಕು.

ದೇವದತ್ತ–ಆಗಲಿ! ಕೇಸರಿಪಾಣಿ! ನೀಮಾಡಿದ ಕೆಲಸವೇನು?

ಕೇಸರಿಪಾಣಿ ಸ್ವಲ್ಪ ಹೊತ್ತು ಬಗ್ಗಿಸಿದ ತಲೆಯನ್ನು ಮೇಲಕ್ಕೆತ್ತಲೇ ಇಲ್ಲ. ದೇವದತ್ತನು ಮರಳಿ ಪ್ರಶ್ನೆ ಮಾಡಲು, ಅವನು ತಲೆಯೆತ್ತಿ ಚಾರುದತ್ತನ ಮುಖವನ್ನೊಮ್ಮೆ ನೋಡಿದನು. ಆ ದೃಷ್ಟಿ ಬದಲಾಯಿಸುವಿಕೆಯ ಚಮತ್ಕಾರದಲ್ಲಿ ಅದ್ಯಾವ ಅಬ್ಧುತ ಸಂಗತಿಯು ನಡೆಯಿತೋ, ಕೇಸರಿಪಾಣಿಯು ಧೈರ್ಯದಿಂದ ತಲೆಯೆತ್ತಿ, 'ಸ್ವಾಮಿ! ನಾನೇನೂ ಕೋಳಿಕಳ್ಳನಲ್ಲ. ನಿನ್ನೆ ರಾತ್ರಿ ಖಾವಂದರವರು ನನ್ನನ್ನು ಕಂಡಿರಷ್ಟೇ. ಅಲ್ಲಿಂದ ಹೊರಟು ಮನೆಗೆ ಬರುವಾಗ್ಯೆ ಬಹು ಕತ್ತಲೆಯಾಗಿ ದಾರಿ ಕಾಣದ್ದರಿಂದ ಏನಾದರೂ ಸ್ವಲ್ಪ ಬೆಳಕು ಕೇಳಲು ನಾನಿವರ ಮನೆಗೆ ಹೋದೆನು. ಹೋಗಿ ಅಂಗಳಕ್ಕಿಳಿಯುವಾಗ್ಯೆ ಒಳಗೆ ಮಾತಾಡುವ ಶಬ್ದ ಕೇಳಿಸಿತು. ಆದರೆ ನಾನವರನ್ನೆಷ್ಟು ಕೂಗಿದರೂ ಅವರು ಅದಕ್ಕೆ ಜವಾಬು ಕೊಡಲಿಲ್ಲ. ಆದುದರಿಂದ ಅವರನ್ನು ಎಚ್ಚರಿಸುವ ನಿಮಿತ್ತ ನಾನೊಂದು ಉಪಾಯವನ್ನು ಯೋಚಿಸಿ, ಅವರ ಕೊಟ್ಟಿಗೆಯ ಒಳಹೊಕ್ಕು ಅಡಗಿದ್ದ ಕೋಳಿಗಳನ್ನು ಚದರಿಸಿದೆನು. ಅವರ ಶಬ್ದ ಕೇಳಲು ಇವರೆಲ್ಲಾ ಹೊರಟು ಬಂದರು. ಅವರ ನಿದ್ದೆಗೆಡಿಸಿದೆನೆಂಬ ಸಿಟ್ಟಿನಿಂದ ನನ್ನನ್ನು ಹಿಡಿದು ಕಟ್ಟಿಹಾಕಿರುವರಲ್ಲದೆ, ನಾನೇನು ನಿಜವಾಗಿಯೂ ಕೋಳಿಕದಿಯಲು ಹೋದವನಲ್ಲ. ಇವರು ನನ್ನ ಮೇಲಿರತಕ್ಕ ದ್ವೇಷದಿಂದ ಹೀಗನ್ನುವರಾಗಿದೆ. ಇದು ಸತ್ಯವಾಗಿಯೂ ನಡೆದ ಸಂಗತಿ.'

ಎಲ್ಲರೂ ಗಟ್ಟಿಯಾಗಿ ನಕ್ಕರು. ದೇವದತ್ತನಿಗೂ ನಗೆ ಬಂದು. ಚಾರುದತ್ತನು ಹಸನ್ಮುಖನಾಗಿ ಇರಬಹುದು! ಅಲ್ಲವೆಂದು ಹೇಳುವುದು ಹೇಗೆ? ಎಂದನು. ಅದಕ್ಕೆ ಗ್ರಾಮಸ್ಥರಲ್ಲಿ ಒಬ್ಬನು–'ಹಾಗಾದರೆ ಅವನು ಓಡಿದ್ದೇತಕ್ಕೆ? ಕೊಟ್ಟಿಗೆಯಿಂದ ಒಂದು ಫರ್ಲಾಂಗ್ ದೂರದಲ್ಲಿ ಅಲ್ಲವೇ ಅವನು ಬಿದ್ದದ್ದು? ಕೋಳಿಯನ್ನೇಕೆ ತೆಗೆದುಕೊಂಡು ಓಡಿದ'? ಎಂದು ದಾಗಿ ನಾನಾ ಪ್ರಶ್ನೆಗಳನ್ನು ಹಾಕಿದನು.

ದೇವದತ್ತ–'ಅದೆಲ್ಲಾ ಸಾಕು. ನಿನ್ನ ಈ ಚಾತುರ್ಯಗಳೇನೂ ನನಗೆ ತೋರಿಸಬೇಡ. ನಿನ್ನ ಮುಖ ನೋಡುವಾಗಲೇ ಕಳ್ಳನೆಂಬುದು ಉದ್ಯುಕ್ತವಾಗುತ್ತೆ. ಅದರಲಿ' ಗ್ರಾಮಸ್ಥರ ಕಡೆಗೆ ತಿರುಗಿ–'ಈಗ ಇವನಿಗೆ ವಿಧಿಸಬೇಕಾದ ಶಿಕ್ಷೆ ಏನು? ಪೋಲೀಸಿಗೆ ಕಳುಹಿಸುವುದೇ ಒಳ್ಳೆಯದೆಂದು ನನಗೆ ತೋರುತ್ತೆ.'

ಚಾರುದತ್ತನು ಈ ಸಂದರ್ಭವನ್ನು ಕಳಕೊಳ್ಳಬಾರದೆಂದು 'ದೇವದತ್ತ! ನೀನು ಹೇಳುವುದೇನು? ತಪ್ಪು ಮಾಡುವುದು ಮನುಷ್ಯನ ಸ್ವಭಾವಕ್ಕೇನೂ ಅಸಂಭವವಲ್ಲ. ನಾವು ಎಷ್ಟೆಷ್ಟೋ ತಪ್ಪು ಮಾಡುತ್ತೇವೆ. ಆದರೆ ದೈವವಶದಿಂದ ಕೆಲವು ಬೈಲಿಗೆ ಬರುವುದಿಲ್ಲ. ಆ ಮಾತ್ರಕ್ಕೆ ನಾವೆಲ್ಲಾ ಸಜ್ಜನರೆಂದೂ, ದುರಾದೃಷ್ಟದಿಂದ ಕೈಗೆ ಸಿಕ್ಕಿದ ಇವನೊಬ್ಬನನ್ನು ದುಷ್ಟನೆಂದು ಇಷ್ಟು ಜನರ ಮುಂದೆ ಹೀಯಾಳಿಸಿದ್ದು ಸಾಲದುದಕ್ಕೆ ಪೋಲೀಸಿನವರ ವಶಕೊಪ್ಪಿಸುವದು ಇದಾವ ನ್ಯಾಯ? ಏನೋ ತಪ್ಪಾಗಿರಬಹುದು. ಆದರೆ ಇದೊಂದು ಸಲಕ್ಕೆ ಮಾಫು ಕೊಡಬಹುದು. ಗರೀಬ, ಅದರಲ್ಲೂ ಮನೆಯಲ್ಲಿ ದೊಡ್ಡ ಸಂಸಾರ. ಜೈಲಿಗೆ ಕಳುಹಿಸಿ ಬಿಟ್ಟರೆ ಅವರ ಪಾಡೇನಾದೀತು' ಎಂದು ಹೇಳಿ ಕೇಸರಿಪಾಣಿಯ ಮುಖವನ್ನೊಮ್ಮೆ ನೋಡಿದನು. ಕೇಸರಿಪಾಣಿಗೆ ತನ್ನ ಪ್ರಾಣವನ್ನೇ ಚಾರುದತ್ತನ ಪಾದದಲ್ಲಿ ಅರ್ಪಿಸುವಷ್ಟು ಭಕ್ತಿಯು ತಲೆದೋರಿತು.

ಚಾರುದತ್ತನ ಕಪಟನಾಟ್ಯದ ಒಳಗುಟ್ಟನ್ನು ಅರಿಯದೆ, ಉದಾರ ಗುಣಿಯಾದ ದೇವದತ್ತನು ಕೇಸರಿಪಾಣಿಯನ್ನು ಮತ್ತಷ್ಟು ಹೆದರಿಸಿ ಅವನ ನಡತೆಯನ್ನು ತಿದ್ದುಪಡಿಮಾಡಬೇಕೆಂಬ ಅಭಿಪ್ರಾಯದಿಂದ, "ಆಗದಾಗದು, ಇಂತಹ ತಪ್ಪಿಗೆ ಮಾಫಿಯೇ? ಇವನನ್ನು ಈಗ ಬಿಟ್ಟರೆ ಮುಂದಕ್ಕಾದರೂ ಇವನು ಒಳ್ಳೆಯ ದಾರಿಯಲ್ಲಿ ನಡೆಯುವನೆಂಬುವದಕ್ಕೆ ಆಧಾರವೇನು? ಆದುದರಿಂದ ಇವನನ್ನು ಪೋಲೀಸರ ವಶಕೊಪ್ಪಿಸಿಯೇ ತೀರಬೇಕು' ಎಂದನು.

ಚಾರುದತ್ತನು ತನ್ನ ದೈವವನ್ನು ಮನಸ್ಸಿನಲ್ಲೇ ಕೊಂಡಾಡಿ, 'ಏನು ದೇವದತ್ತ! ಒಂದು ತಪ್ಪಿತಕ್ಕೆ ಎರಡು ಶಿಕ್ಷೆಯೇ? ಈ ಅಲ್ಪ ತಪ್ಪಿತಕ್ಕೆ ಅದರಲ್ಲೂ ಸರಿಯಾಗಿ ವಿಚಾರಿಸಿದುದಾದರೆ ತಪ್ಪೇ ಇಲ್ಲ. ಇಂಥವರಲ್ಲಿ ಇಷ್ಟು ಜನರ ಮುಂದೆ ಇಷ್ಟು ವಯಸ್ಕನಾದ ಇವನನ್ನು ಇಷೆಲ್ಲಾ ಹಿಯ್ಯಾಳಿಸಿ ಜರೆದುದು ಸಾಲದೆ ಅವನನ್ನು ಜೈಲಿಗೂ ಕಳುಹಿಸುವ ಅಭಿಪ್ರಾಯ ಪಡುವಿಯಷ್ಟೆ? ಇದೆಂಥ ಕೆಲಸ? ಸಾಕು. ಇದೊಮ್ಮೆ ಮಾಫು. ಇನ್ನು ಮುಂದಕ್ಕೆ ಅವನೇನಾದರೂ ತಪ್ಪು ಮಾಡಿದನೆಂದರೆ ಅದಕ್ಕೆ ನಾನು ಜವಾಬು' ಎಂದನು.

ದೇವದತ್ತ–ಹಾಗಾದರೆ ಸರಿ! ನೀನು ಹೊಣೆ ನಿಲ್ಲುವೆಯಾದರೆ ಅವನನ್ನು ಕ್ಷಮಿಸುವೆವು. 'ನೀವು ನಿಮ್ಮ ಕೋಳಿಗಳನ್ನು ತೆಗೆದುಕೊಳ್ಳಿ' ಕೇಸರಿಯ ಕಡೆಗೆ ತಿರುಗಿ, 'ಮಹಾಶಯರೇ, ಇನ್ನಾದರೂ ಈ ನಾಚಿಕೆಗೇಡಿನ ಕೆಲಸವನ್ನು ಬಿಡಿ. ಇದರಿಂದ ನಿಮಗಲ್ಲ, ನಿಮ್ಮ ಗ್ರಾಮಕ್ಕೇ ಅವಮರ್ಯಾದೆ ಬರುತ್ತೆ.'

ದೇವದತ್ತನ ಪ್ರತಿಯೊಂದು ಬುದ್ಧಿವಾದದ ಮಾತು ಕೇಸರಿಪಾಣಿಯ ಹೃದಯಕ್ಕೆ ಒಂದೊಂದು ಶೂಲದಂತೆ ನಾಟಿದವು. ಆದರೆ ಅವು ಅವನಲ್ಲಿ ದುರ್ಗುಣವನ್ನು ಹೊರತಳ್ಳಿ ಸದ್ಗುಣಗಳನ್ನು ಸ್ಥಾಪಿಸುವದರ ಬದಲು ಸಂದರ್ಭ ಸಿಕ್ಕಿದಾಗ ಈಗ ಮಾಡಿದ ಅಪಹಾಸ್ಯಕ್ಕೆ ತಕ್ಕ ಪ್ರತಿಕಾರವನ್ನು ಮಾಡಿಯೇ ತೀರಿಸಬೇಕೆಂಬ ದೃಢ ಸಂಕಲ್ಪವನ್ನು ಅಂಕುರಿಸಿತು. ಅವನ ಪ್ರತಿಯೊಂದು ಮಾತು ತನ್ನ ದ್ವೇಷವನ್ನು ಹೆಚ್ಚಿಸಿತು. ಅಷ್ಟೇ ಅಲ್ಲ, ಚಾರುದತ್ತನ ಮೇಲೆ ತನಗಿದ್ದ ಭಕ್ತಿಯನ್ನು ಮೇರೆ ಮೀರಿಸಿತು.

ದೇವದತ್ತನು ಇನ್ನೂ ಅನೇಕ ಬುದ್ಧಿವಾದದ ಮಾತುಗಳನ್ನು ಹೇಳಿ ಊರವರನ್ನು ಬೀಳ್ಕೊಂಡು ಚಾರುದತ್ತನೊಡನೆ ಮನೆಗೆ ಹೊರಟನು. ಚಾರುದತ್ತನು ಹೊರಡುವಾಗ್ಯೆ ಕೇಸರಿಪಾಣಿಯ ದೃಷ್ಟಿಯನ್ನೊಮ್ಮೆ ಆಕರ್ಷಿಸಿ ಏನೋ ಸಾಂಜ್ಞೆ ಮಾಡಿದನು.

ದಾರಿಯುದ್ದಕ್ಕೂ ಚಾರುದತ್ತನು ತಾವಿಬ್ಬರೂ ಒಂದೊಂದು ಪಂಗಡವನ್ನು ವಹಿಸಿ ನ್ಯಾಯ ತೀರ್ಪು ಕೊಟ್ಟದ್ದನ್ನು ಶ್ಲಾಘಿಸುತ್ತಾ ಅದರ ರೀತಿಯು ಬಹು ಯೋಗ್ಯವಾದದ್ದು. ಇದರಿಂದ ಇಕ್ಕಡೆಯವರಿಗೂ ಸಮಾಧಾನವಾಯಿತು. ಒಬ್ಬರನ್ನೊಬ್ಬರು ಹಿಯ್ಯಾಳಿಸುವಂತಿಲ್ಲ ಎಂಬದಾಗಿ ವಿವರಿಸುತ್ತಾ ನಡೆದನು.

೩೧ ಅಧ್ಯಾಯ.

ರಾತ್ರಿ ಸುಮಾರು ಒಂಬತ್ತು ಗಂಟೆಯಾಗಿತ್ತು. ಶರತ್ಕಾಲದ ಪೂರ್ಣ ಚಂದ್ರನು ಥಳ ಥಳಿಸುತ್ತಾ ನಭೋಮಂಡಲವನ್ನೇರುತ್ತಿದ್ದನು. ಹಸುರೆಲೆಗಳಿಂದ ನಿಬಿಡವಾಗಿ ತುಂಬಿದ್ದ ಮರಗಳ ಬುಡಗಳಲ್ಲಿ ಮಾತ್ರ ಕತ್ತಲೆಯು ತನ್ನ ಬೀಡನ್ನು ಹೂಡಿ, ಚಂದ್ರ ಕಿರಣಗಳ ಸಂಚಾರವನ್ನು ಇಣಿಕಿ ನೋಡುವಂತಿತ್ತು. ಹಗಲೆಲ್ಲಾ ನಾನಾ ತರಹದ ಕಲಕಲ ಧ್ವನಿಯಿಂದ ತುಂಬಿದ್ದ ಪ್ರಕೃತಿಯು ಈಗ ನಿದ್ರೆ ಹೋದಂತೆ ನಿಶಬ್ದವಾಗಿತ್ತು.

ತನ್ನ ಮನೆಯ ಅಂಗಳದಲ್ಲಿ ಚಾರುದತ್ತನು ಮಾತ್ರ ಓಣಿಯ ಕಡೆ ಆಗಾಗ ನೋಡುತ್ತಾ ಆ ಕಡೆ ಈ ಕಡೆ ತಿರುಗಾಡುತ್ತಿದ್ದನು. ಅವನು ಯಾರೋ ಒಬ್ಬರ ಆಗಮನವನ್ನು ಬಹು ಕುತೂಹಲದಿಂದ ಎದುರು ನೋಡುವವನಂತೆ ಭಾಸವಾಗುತ್ತಿತ್ತು. ಅಷ್ಟರಲ್ಲಿ ಕೈಯಲ್ಲಿ ಒಂದು ಗಂಟನ್ನು ಹಿಡಿದು ದೃಢಾಂಗನಾದ ಮನುಷ್ಯನೊಬ್ಬನು ಸಿದ್ಧವಾದ ದಾರಿಯನ್ನು ಬಿಟ್ಟು ಮನೆಯ ಹಿಂಭಾಗದ ತೋಟದೊಳಗಿನಿಂದ ಹಾರಿ ಅಂಗಳಕ್ಕಿಳಿದನು. ಚಾರುದತ್ತನು ಅವನನ್ನೆದುರುಗೊಂಡು ಒಳಹೋದನು. ಆಗಂತುಕನ ಗಂಟಿನಲ್ಲಿ ಕೆಲವು ಹಸಿ ಮೀನುಗಳಿದ್ದವು. ಚಾರುದತ್ತನು ಅವುಗಳನ್ನು ಅಡಿಗೆ ಮನೆಗೆ ಕಳುಹಿಸಿ, ಆಗಂತುಕನನ್ನು ಒಂದು ಏಕಾಂತ ಸ್ಥಾನಕ್ಕೆ ಕರೆದೊಯಿದು ಇಬ್ಬರೂ ಒಂದೊಂದು ಕುರ್ಚಿಯಲ್ಲಿ ಕುಳಿತರು.

ಚಾರು–ಎಂತಹ ಹೆಡ್ಡರು ನೀವು. ಹೇಳಿಕೊಟ್ಟದ್ದನ್ನು ಧೈರ್ಯದಿಂದ ಹೇಳಲು ಆಗದಿದ್ದರೆ ನೀವೆಲ್ಲಾ ಲೋಕದಲ್ಲಿ ಹೇಗೆ ಜೀವಿಸುತ್ತೀರೋ ನನಗೇನೂ ತಿಳಿಯದು. ಅಷ್ಟನ್ನೇ ಧೈರ್ಯದಿಂದ ಹೇಳಿದ್ದರೆ ಆ ರೀತಿಯಲ್ಲಿ ಹಿಯ್ಯಾಳಿಸಲು ಅವನಿಗೆ ಧೈರ್ಯವಿರುತ್ತಿತ್ತೇ?

ಕೇಸರಿಪಾಣಿ–ಹೇಗೆ ಹೇಳುವುದು. ಅವರ ಮುಂದೆ ನನಗೆ ಬಾಯಿ ತೆರೆಯಲಿಕ್ಕೆ ಆಗಲಿಲ್ಲ.

ಚಾರು–ಆದುದರಿಂದಲೇ ಅವರು ನಿಮ್ಮ ಹುಟ್ಟು ಬೇರನ್ನೆಲ್ಲಾ ಎಳೆದುಬಿಟ್ಟದ್ದು.

ಕೇಸರಿಪಾಣಿ–ಮಾಡುವುದೇನು? ಅವರು ದೊಡ್ಡವರು. ....

[ಅಪೂರ್ಣ.

—o—

ದುಡ್ಡೇ ದೊಡ್ಡಪ್ಪನಣ್ಣಾ.

ಒಂದು ಕಾಲಕ್ಕೆ ವ್ಯವಹಾರದಲ್ಲಿ ದುಡ್ಡಿನ ಅವಶ್ಯಕತೆ ಇರಲಿಲ್ಲ. ಆಗ ಸಂಪತ್ತಿಗಿಂತ ನೀತಿಗೆ ಮಾನವಿತ್ತು. ವಿದ್ಯೆಗೇ ಗದ್ದುಗೆ ಸಿಗುತ್ತಿತ್ತು. ನೀತಿ ಮತ್ತು ವಿದ್ಯೆಯ ಹಿಂದೆ ದುಡ್ಡು ಇರುತ್ತಿತ್ತು. ಆದರೆ ಇಂದು ದುಡ್ಡೇ ಬಲ, ದುಡ್ಡೇ ಯಶ, ದುಡ್ಡೇ ಸರ್ವಸ್ವ. ದುಡ್ಡೇ ಎಲ್ಲಾ ಕಾರ್ಯಕಲಾಪಗಳಿಗೂ ಮೂಲಾಧಾರವಾಗಿದೆ.

●

ಇಂದು ಜಗತ್ತಿನ ಯಾವ ಕಡೆಗೆ ಕಿವಿಗೊಟ್ಟು ಆಲಿಸಿದರೂ ಆರ್ಥಿಕ ಮುಗ್ಗಟ್ಟು, ದುಡ್ಡಿನ ಅಡಚಣೆ ಎಂಬ ಮಾತು ಕೇಳಿಬರುತ್ತಿರುವದು. ಒಂದು ಕಾಲಕ್ಕೆ ದುಡ್ಡಿಲ್ಲದೆ ವ್ಯವಹಾರಗಳು ಸುಸೂತ್ರವಾಗಿ ನಡೆಯುತ್ತಿತ್ತು. ಆದರೆ ಇಂದು ವ್ಯವಹಾರಕ್ಕನುಕೂಲವಾಗಿ ದುಡ್ಡು ಮಧ್ಯಸ್ಥಿಕೆ ವಹಿಸಿದ್ದರೂ ವ್ಯವಹಾರವು ಸುಗಮವಾಗಿ ನಡೆಯದೆ ಇರಲು ಕಾರಣವೇನಿರಬಹುದು? ಅಂದು ಜನತೆಯಲ್ಲಿ ಪರಸ್ಪರ ನಂಬಿಕೆಯಿತ್ತು. ಆದರೆ ಈಗ ಮಾತ್ರ ಪರಿಸ್ಥಿತಿ ಭಿನ್ನವಾಗಿದೆ. ಮಾತಿನಲ್ಲಿ ಒಂದಕ್ಕೆ ಮಾನ; ಕೃತಿಯಲ್ಲಿ ಅದಕ್ಕೆ ತೀರಾ ವಿರುದ್ಧವಾದ ಇನ್ನೊಂದಕ್ಕೆ ಬಹುಮಾನ; ಮಾತಿನಿಂದ ಜಾತಿಯನ್ನು ಪುರಸ್ಕರಿಸುವದು; ಮನದಲ್ಲಿ ಅದನ್ನು ತಿರಸ್ಕರಿಸುವದು; ಕೃತಿಯಲ್ಲಿ ಅದನ್ನೇ ನಿರ್ನಾಮಗೊಳಿಸುವದು. ಪ್ರಾಮಾಣಿಕತನದ ಬೇರು ಕಿತ್ತು ದುಡ್ಡಿಗಾಗಿ ಎಸೆಯುತ್ತಿರುವದು. ದುಡ್ಡಿನ ಒಂದು ಸೆಳೆತಕ್ಕಾಗಿ ಅಭಿಪ್ರಾಯಗಳಿಗೆ ಕಾಲಕ್ಕನುಕೂಲವಾದ ಬಣ್ಣ ಬಳಿಯುವ ನೈಪುಣ್ಯವನ್ನು ಇಂದು ಜನತೆಯು ಅಭ್ಯಸಿಸಿದೆ. ಜನತೆಯು ನೀತಿಯನ್ನು ಕಡೆಗಣಿಸಿ, ಸಂಪತ್ತಿಗೇ ಸನ್ಮಾನವೆಂಬ ನಿರ್ಣಯಕ್ಕೆ ಬಂದುದೇ ಇಂದಿನ ಅವ್ಯವಸ್ಥೆಗೆ ಕಾರಣ. ನಂಬಿಕೆಗೆ ನಕಾರ ಹಾಕಿ, ಸತ್ಯವನ್ನು ಪದಬಡೆದು ಜನತೆಯು ಸ್ವೇಚ್ಛಾಚಾರಿಯಾಗಿರುವದರಿಂದ ದುಡ್ಡಿಗೆ ವರ್ಚಸ್ಸು ಬಂದಿದೆ. ದುಡ್ಡು ಜಗತ್ತಿನ ಪ್ರಭುವಾಗಿದೆ. ದುಡ್ಡೇ ಅಧಿಕಾರ ಆರೋಗ್ಯಗಳ ರಕ್ಷರಿ, ದುಡ್ಡೇ ವ್ಯಾಪಾರ ವ್ಯವಹಾರಗಳ ಗುರಿ, ದುಡ್ಡೇ ದೇಶದ ಅಭಿವೃದ್ಧಿಯನ್ನು ನಿರ್ಣಯಿಸುವ ಸಿರಿ. ಅಂಥಾ ಇಂದು ದೇಶದ ಪ್ರಾಕೃತಿಕ ವೃಭವಕ್ಕೆ ಮನ್ನಣೆಯಿಲ್ಲ. ಸಾಂಸ್ಕೃತಿಕ ಸಂಪತ್ತಿಗೆ ಸತ್ಕಾರವಿಲ್ಲ; ರೂಪಾಯಿ, ಆಣೆ, ಪೈಗಳೇ ಎಲ್ಲಾ ಸಂಸ್ಕೃತಿಯ ಉಚ್ಚ ಧ್ಯೇಯಗಳಾಗಿ ಕೂಡಿವೆ. ಆದ್ದರಿಂದಲೇ ದಿಗಂತವೆಲ್ಲಾ ಇಂದು ದುಡ್ಡಿನಿಂದಲೇ ಪ್ರತಿಧ್ವನಿಸುತ್ತಿದೆ.

ಹೀಗೆ ದುಡ್ಡಿನ ಕೋಲಾಹಲವು ನಡೆದರೂ ದುಡ್ಡೆಲ್ಲಿದ? ದುಡ್ಡಿನ ಉತ್ಪಾದನೆ ನೋಡಿದರೆ ಅದೇನೂ ಕಡಿಮೆಯಿಲ್ಲ. 1828 ರಲ್ಲಿ ಮೊದಲು ರೂಪಾಯಿಗಳು ಮುದ್ರಿಸಲ್ಪಟ್ಟವು. ಅಂದಿನಿಂದ 1934 ರ ವರೆಗೆ ಸಿದ್ಧವಾದ ರೂಪಾಯಿಗಳ ಸರಪಣಿಯು ನಮ್ಮ ಪೃಥ್ವಿಯ ಪರಿಘ (Circumference) ದ ಮೂರರಷ್ಟು ಆಗುವದಂತೆ. ಅಬ್ಬಾ! ಇದೆಂತಹ ಹಣದ ರಾಶಿ! ಆದರೆ ಅವೆಲ್ಲಾ ಎಲ್ಲಿ ಮರೆಯಾಗಿವೆ? ಹನ್ನೆರಡು ತಿಂಗಳೂ ಎಡೆಬಿಡದೆ ಬಸವೆಲ್ಲಾ ದುಡಿದರೂ ರೂಪಾಯಿಯ ಬಿಳಿ ಮೊಗದ ದರ್ಶನವು ಕಠಿಣವಾಗಿದೆಯಲ್ಲಾ. ನೈಪುಣ್ಯವಿರಿದು ದುಡಿದರಿಲ್ಲ; ಡಿಗ್ರಿ ಪಡೆದರಿಲ್ಲ; ವಿಜ್ಞಾನಿಗಳಿಗಿಲ್ಲ, ಕಲಾ ಕೋವಿದರಿಗಿಲ್ಲ. ಇದೀಗ ಮಾನವೀ ಪ್ರಪಂಚದಲ್ಲಿ. ಹಿಂದೆಂದೂ ಕಾಣದ ದುಡ್ಡಿನ ಯಕ್ಷಿಣೀ ಮಾಯೆ. ನಾನು, ನೀನು ಎನ್ನುವ ಅರ್ಥಶಾಸ್ತ್ರ ಕೋವಿದರಿದ್ದರೂ ದುಡ್ಡಿನ ಮುಗ್ಗಟ್ಟಿನಲ್ಲಿ ಮುಗ್ಗರಿಸುತ್ತಿದ್ದಾರೆ. ಹೀಗೆ ದುಡ್ಡೂ, ದುಡ್ಡು ಎಂದು ಪ್ರಪಂಚವೇ ಬಾಯಿಬಿಡುತ್ತಿರುವಾಗ ದುಡ್ಡು ತನ್ನ ಮಾಯಾಜಾಲವನ್ನು ಜಗತ್ತಿಗೆ ಬೀರಿ ಎಲ್ಲಿ ಅಡಗಿದೆಯೆಂಬುದೊಂದು ಗಹನ ವಿಚಾರ.

'ಬರಗಾಲದಲ್ಲಿ ಅಧಿಕ-ಮಾಸ' ಎಂಬಂತೆ ಹೀಗೆ ದುಡ್ಡಿಲ್ಲದೆ ಬಾಯ್ಬಿಡುತ್ತಿರುವಾಗ ಜನಸಂಖ್ಯೆಯು ಹದ್ದು ಮೀರಿ ಬೆಳೆಯುತ್ತಿರುವದೊಂದು ಸ್ವಾರಸ್ಯದ ವಿಷಯ. ಅದರಲ್ಲೂ ಉಣಾಸಿಗದ ಬಡವನ ಬಳಗವೇ ಹೆಚ್ಚುತ್ತಿರುವದು ಮತ್ತೊಂದು ವಿಶೇಷ. ಆದ್ದರಿಂದ ಒಂದು ಕಾಲಕ್ಕೆ ಉಬ್ಬಿ ಮೆರೆದ ದೇಶಗಳೂ, ಕುಟುಂಬಗಳೂ ಸಾಲದ ಜ್ವಾಲೆಯಲ್ಲಿ ಬಲಿಯಾಗುತ್ತಿರುವವು. ಸಾಲಕ್ಕೆ ಕಾರಣಗಳೆರಡು. ಜನಸಂಖ್ಯೆ ಬೆಳೆಯುತ್ತಿರುವದೊಂದು. ಜೀವನದ ಆವಶ್ಯಕಗಳು ಹೆಚ್ಚುತ್ತಿರುವದಿನ್ನೊಂದು. ಇಂದಿಗೆ ನೂರು ವರ್ಷಗಳ ಹಿಂದೆ ಒಬ್ಬನಿಗೆ ಅತ್ಯಾವಶ್ಯಕವಾದ ವಸ್ತುಗಳ ಪರಿಮಾಣವು ಈಗ ನೂರುಮಡಿ ಬೆಳೆದಿದ. ಅವುಗಳ ಬೆಲೆಯೂ ಅಷ್ಟೇ ಬೆಳೆದಿದೆ. ದೇಶದೇಶಗಳ ಸಮ್ಮಿಲನದ ಸಂಬಂಧವಾಗಿ ಜೀವನಕ್ಕೆ ತೀರಾ ಅನಗತ್ಯವಾದ ವಸ್ತುಗಳು ಕೂಡಾ ಕೇವಲ ಅವುಗಳ ಆಕರ್ಷಣ ಬಲದಿಂದಲೇ ಕೊಳ್ಳಲ್ಪಡುತ್ತಿವೆ. ತತ್ಪರಿಣಾಮವಾಗಿಯೇ ಭಾರತದ ದುಡ್ಡು ವಿದೇಶಗಳಿಗೆ ಕೊಚ್ಚಿಕೊಂಡು ಹೋಗಿ ಭಾರತೀಯರು ನಿರ್ಗತಿಕರಾಗುತ್ತಿರುವರು. ಹಿಂದೂ ದೇಶದ ಒಬ್ಬ ಹೆಲ್ತ್ ಕಮಿಷನರಾಗಿದ್ದ ಕರ್ನಲ್ ರಸೆಲ್ ಎಂಬವರು ಬರೆದ ವಾಕ್ಯಗಳು ನೆನಪಿಗೆ ಬರುತ್ತವೆ 'ಭಾರತೀಯರಲ್ಲಿ ಶೇಕಡ ನೂರರಲ್ಲಿ 21 ಜನರಿಗೆ ಕಾಲು ಹೊಟ್ಟೆ ಊಟವೂ ಸಿಗದು. 40 ಜನರಿಗೆ ಅರೆಹೊಟ್ಟೆ ಸಿಗುತ್ತಿರಬಹುದು. 29 ಜನರಿಗೆ ಹಸಿವು ಹಿಂಗುವಷ್ಟು; 10 ಜನರಿಗೆ ಮಾತ್ರ ಹೊಟ್ಟೆ ತುಂಬ ಊಟಸಿಗುತ್ತಿರುವದು' ಎಂದಿರುವರು. ಅಂದರೆ ಭಾರತೀಯರಲ್ಲಿ ಅರ್ಧ ಜನರು ಅರೆಹೊಟ್ಟೆ ಸಹ ತುಂಬಿಕೊಳ್ಳುತ್ತಿಲ್ಲವೆಂದು ಅರ್ಥವಾಗುವದು. ಇಂಥಾ ಭಿಕ್ಷೆಬೇಡುವ ದೇಶವು ಕೇವಲ ಕಣ್ಮನರಂಜಕ ಕಾಜಿನ ವಸ್ತುಗಳಿಗಾಗಿ, ಆಟದ ಹಾಗೂ ಇತರ ವಾಹನ ಸಾಮಗ್ರಿಗಳಿಗಾಗಿಯೇ 50 ಕೋಟಿ ರೂಪಾಯಿಗಳನ್ನು ವಿದೇಶಗಳಿಗೆ ಹರಿಯಬಿಡುತ್ತಿದೆಯೆಂದರೆ ಇದೇನು ವಿಚಿತ್ರವೋ? ವಿಲಕ್ಷಣವೋ? ಯಾ ಚಿತ್ತಭ್ರಮೆಯೊ? ಹೀಗೆ ಹೊನ್ನಿನ ಹೊಳೆ ಹರಿದು ಹೋಗಲು ಭಾರತದಲ್ಲಿ ದುಡ್ಡು ಹೇಗೆ ಕಾಣಬೇಕು?

ಅಂ! ಬೆದರಬೇಕಿಲ್ಲ. ನಡುವೆ ನಮ್ಮ ಸೌಭಾಗ್ಯದಿಂದ ಮಹಾತ್ಮರಂತಹ ಮಹಾವಿಭೂತಿಗಳ ತೇಜಸ್ಸಿನಿಂದ 'ಸ್ವದೇಶಿ'ಯ ಆಂದೋಲನವೆದ್ದು ಈ ಪ್ರವಾಹವು ಸ್ವಲ್ಪ ಕುಸಿ ಬೀಳುತ್ತಿರುವದು ಶುಭಲಕ್ಷಣವೇ? ಎಲ್ಲೋ ಒಂದೆರಡು 'ಗೂಗೆ'ಗಳು ವಿರುದ್ಧವಾಗಿ ಘೂಕರಿಸಿದರೂ ಸ್ವದೇಶಿಯು ನಮ್ಮ ಆರ್ಥಿಕ ಪ್ರಪಂಚಕ್ಕೆ ಸುಪ್ರಭಾತವನ್ನು ತಂದೆದಿಯೆನ್ನುವದರಲ್ಲಿ ಸಂದೇಹವಿಲ್ಲ. ಇರಲಿ, ಮನುಷ್ಯನ ಆವಶ್ಯಕಗಳು ಬೆಳೆದಂತೆ ಅವರ ಪೂರೈಕೆಯೂ ಅವರೂ ಸ್ವತಂತ್ರವಾಗಿ ನಡೆದರೆ ಅಲ್ಲಿ ಭಯದ ಸಂಗತಿಯೇನೂ ಇಲ್ಲ. ಆದರೆ ಎಲ್ಲಾ ದೇಶಗಳಲ್ಲಿಯೂ ಈ ಡೌಲಿನ, ಆ ಶೋಕಿನ ವಡವೆಗಳನ್ನು ತಯಾರಿಸಲು ಸಮಾನ ಸೌಕರ್ಯ. ಸಾಮರ್ಥ್ಯ ಇಲ್ಲ. ಇಂಥಾ ಸಾಮರ್ಥ್ಯ ಬರದಿರಲು ಆಯಾ ದೇಶದ ಅಸ್ತವ್ಯಸ್ತ ರಾಜ್ಯಭಾರ ಕ್ರಮವೇ ಪ್ರಧಾನ ಕಾರಣವಾಗಿರುತ್ತದೆ. ಆದ ಕಾರಣ ಇಂದು ವಿಶೇಷ ದುಡ್ಡು, ಸೌಕರ್ಯಗಳುಳ್ಳ ವಿಶಿಷ್ಟ ದೇಶಗಳಲ್ಲೇ ಸಂಗ್ರಹವಾಗುವದು.

ಇನ್ನು ದುಡ್ಡುಳ್ಳ ದೇಶಗಳಾದರೂ ನೆಮ್ಮದಿಯಲ್ಲಿರುವವೇ? ಖಂಡಿತಾ ಇಲ್ಲ. ಧನದ ವ್ಯಸ್ತವಿಭಜನ (Unequal Distribution) ದಿಂದ ಉಪ್ಪರಿಗೆಯ ಮನೆಗಳೇ ಒಂದೊಂದು ಅಂತಸ್ತನ್ನು ನೇಲೇರಿಸುತ್ತಿರಲು ಅಲ್ಲಿಯ ಜೀವನವು ಕೂಲಿ—ಕುಬೇರರ ರಣರಂಗವಾಗಿದೆಯೆಂದು ಬೇರೆ ಹೇಳಬೇಕಿಲ್ಲ. ಜೊಳ್ಳು ಸೊಬಗಿನ ಚಟದಿಂದ ದುಡ್ಡನ್ನು ವಿದೇಶಗಳಿಗೆ ಹರಿಯಬಿಟ್ಟು ಹೊಟ್ಟೆಗೇ ಅನ್ನಕ್ಕೆ ಸೊನ್ನೆ ಮಾಡಿಕೊಂಡಿರುವ ಬಡ ಭಾರತೀಯರಾದ ನಮ್ಮ ಈ ದಾರುಣ ಪರಿಸ್ಥಿತಿಗೆ ಪ್ರಾಮುಖ್ಯವಾಗಿ ಸರಕಾರವು ಕಾರಣವಾಗಿದೆ. ಜನತೆಯ ಕೈಗಾರಿಕೆ, ವ್ಯವಸಾಯ ಇವುಗಳಿಗೆ ಯಾವ ಉತ್ಸಾಹ ಪ್ರೋತ್ಸಾಹಗಳನ್ನೂ ಕೊಡದೆ ರಾಜ—ಪ್ರಜೆಗಳಲ್ಲಿ ಒಂದು ವಿದಥ ಬೇಗೆ ಹುಟ್ಟಿ ಜೀವನವು ಅಗ್ನಿಕುಂಡದಂತಾಗಿರುವದಾದರೂ ಸರಕಾರದ ವರ್ತನೆಯ ಪ್ರತಿಧ್ವನಿಯೇ. ಸಾಮ್ಯವಾದಿಗಳು ಜನತೆಯ ಅವ್ಯವಸ್ಥೆಗೆ ಕಾರಣವು ಜನವೃದ್ಧಿಯಲ್ಲಿಲ್ಲ, ಧನತ್ವದ ಬುದ್ಧಿಯಲ್ಲಿ (Capitalistic tendency) ಇದೆಯೆಂದೆನ್ನಬಹುದು. ಧನದ ವಿತರಣಾನ್ಯೂನತೆಯೇ ಎಲ್ಲಾ ಆರ್ಥಿಕ ರೋಗಗಳ ಮೂಲಯೆಂದೆನ್ನಬಹುದು. ಆದರೆ ಇದೀ ಜಗತ್ತಿನ ರಾಜ್ಯಭಾರವನ್ನು ಸಾಮ್ಯವಾದಿಗಳ ಕೈಗೆ ಕೊಟ್ಟರೂ ಇಂದಿಲ್ಲ, ನಾಳೆಯಾದರೂ ಬೆಳೆದ ಬಳಗಕ್ಕೆ ಅನ್ನವಿಲ್ಲವೆಂದು ಗ್ರಹನಕ್ಷತ್ರಗಳ ಕಡೆಗೆ ಹಾರುವ ಪ್ರಸಂಗವೂ ಬರಬಹುದು. ಜನಸಂಖ್ಯೆ, ಜೀವನಾವಶ್ಯಕತೆಗಳು ಹಿಡಿತಡೆಯಿಲ್ಲದೆ ಬೆಳೆದರೆ ಜಗತ್ತು ಮಾಂದ್ಯದ (Depression) ಮಡುವಿನಲ್ಲಿ ಸಿಕ್ಕುವದು ನಿಶ್ಚಿತ. ಅಂದ ಮೇಲೆ ಈ ಮಾಂದ್ಯದ ಕೊನೆಯೆಲ್ಲಿ? ಅದರ ನಿವಾರಣೆ ಹೇಗೆ? ಇಂದಿನ ಅಗತ್ಯಗಳೆಂದೆನಿಸಿಕೊಂಡಿರುವ ಅಪಾಯಕರ ಸೊಬಗು, ಬೆಡಗು (fashions) ಚಟಗಳನ್ನು ಬಿಡುವದು ಅಸಾಧ್ಯ. ಬೆಡಗು ಇಂದವನು ಅಸಂಸ್ಕೃತನು. ಜನಸಂಖ್ಯೆಯ ಬೆಳವಣಿಗೆಯನ್ನು ತಡೆಯಬೇಕೆಂದರೆ ಬ್ರಹ್ಮಚರ್ಯವು ಅಸಾಧ್ಯ. ಕೃತಕ ಸಂತಾನ ನಿರೋಧವು ಪಾಪಕರ. ಹೀಗೆ ನಮ್ಮಲ್ಲಿ ರೂಢಿಯಾಗಿರುವ ಅಜ್ಞಾನ, ಹಾಗೂ ಭಾವಿಕತನಗಳ ಸೂಪರ ಜಾಲದಲ್ಲಿ ಉಸಿರುಕಟ್ಟಿ ಸಾಯಲೆಳಸುವ ಈ ಮಾನವ ಪ್ರಾಣಿಗೆ ಮೋಕ್ಷವೆಂತು?

ಈ ಅತೀ ಜಟಿಲವಾದ ಸಮಸ್ಯೆಯನ್ನು ಬಿಡಿಸುವ ಬಗ್ಗೆ ವಿದೇಶಗಳ ದೃಷ್ಟಿಯನ್ನೊಮ್ಮೆ ಬೀರಿದರೆ ಉಪಯೋಗವಾದೀತು. ಬಡ ದೇಶಗಳೆಲ್ಲ ಸಂತಾನವೃದ್ಧಿಯಲ್ಲಿ ಮುಂದಾಳಾಗಿವೆಯೆಂದು ಮೇಲೆ ಬರೆದಿರುವನಷ್ಟೆ. ಹೀಗೆ ಹೊಟ್ಟೆಗೆ ಕೂಳಿಲ್ಲದ ಜನಸಮುದಾಯವು ಹೆಚ್ಚಿ, ನಿರುದ್ಯೋಗಿಗಳಾಗಿ ಅಲೆಯುತ್ತಿದ್ದರೆ ಆ ಜನತೆಯ ಮನದ ಮರ್ಕಟಕ್ಕೆ ಒಂದು ರಂಗಸ್ಥಳ ಬೇಕಷ್ಟೆ? ನರಿ, ಧ್ಯೇಯ ಜೀವನದಲ್ಲಿ ನಿರಾಶೆಯ ಮುಸುಕು ಕವಿದಿರಲು ಕಾಮವೃತ್ತಿಯ ಸುಳಿದಾಟಕ್ಕೆ ಸ್ವಾಗತವೇ ಅಲ್ಲವೇ? ಇದೆಲ್ಲಾ ಐಶ್ವರ್ಯವಂತ ರಾಷ್ಟ್ರಗಳಲ್ಲಿ ಕಡಿಮೆ ಪರಿಮಾಣದಲ್ಲಿರುವದು. ಅಲ್ಲದ ಅಲ್ಲಿ ತಮ್ಮ ಆವಶ್ಯಕಗಳು ಹೆಚ್ಚಿದಂತೆಯೇ ಪೂರೈಸಿಕೊಳ್ಳುವ ಉದ್ಯೋಗಗಳೂ ಹುಟ್ಟಿವೆ. ಸಾಲದಕ್ಕೆ ಅಹಿಂಸಾ, ಪರೋಪಕಾರಗಳೆಂಬ ಧಾರ್ಮಿಕ ಮೋಹನಾಸ್ತ್ರಗಳ ಸಹಾಯದಿಂದ ಇಟಲಿ, ಜರ್ಮನಿ, ಜಪಾನದಂಥಾ ದೇಶಗಳು ತಮ್ಮವರ ಹೊಟ್ಟೆಗಾಗಿ, ಹೆರವರ ಹೊಟ್ಟೆಯ ಮೇಲೆ ಕಾಲಿಡುತ್ತಿವೆ. ಇವುಗಳೆಲ್ಲ ಅನುಕರಣೀಯವಾದವುಗಳೆಂದು ಸಮರ್ಥಿಸುವದಿಲ್ಲ. ಆದರೂ ಕಷ್ಟದ ಪರಂಪರೆಗೆ ಶಿಲುಕಿ ಅದರ ಫಲವನ್ನುಂಡು ಈ ದೇಶಗಳು ಹೊಸ ದಾರಿಯನ್ನು ಹುಡುಕಿವೆ.

ಆದರೆ ನಮ್ಮೀ ಭಾರತ ಭೂಮಿಯಲ್ಲೇನು ನಡೆದಿದ. ಒಂದು ಕಡೆ ಜನಸಂಖ್ಯೆಯು ಹದ್ದು ಮೀರಿ ಬೆಳೆಯುತ್ತಿದ. ಅತ್ತ ಜೀವನದ ಅಗತ್ಯಗಳೂ ಹೆಚ್ಚುತ್ತಿವೆ. ಆದರೆ ತಕ್ಕ ಉದ್ಯೋಗಗಳು ಮಾತ್ರ ಬೆಳೆಯಲಿಲ್ಲ. ಆದ್ದರಿಂದ ಬಡತನ, ಸಾಲ, ಇವು ಹೆಚ್ಚಿ ಪ್ರಜೆಗಳ ಸುಖ—ದುಃಖಗಳನ್ನರಿಯದ ಪರಕೀಯರ ಅಧೀನದಲ್ಲಿ ಕಷ್ಟಪಡುತ್ತಿರುವ ಸ್ಥಿತಿಯು ಭಾರತಕ್ಕೆ ಬಂದಿದೆ. ಇಂಥಾ ಸಂದರ್ಭದಲ್ಲಿ ಸ್ವಲ್ಪ ಆಳವಾಗಿ ಯೋಚಿಸಿ ನೋಡಿದರೆ ಇದಕ್ಕೆ ಉಪಾಯವು ಜನತೆಯ ಕೈಯಲ್ಲಿಯೇ ಇದೆಯೆಂಬುದು ತಿಳಿದು ಬರುವದು. 'ಏ

ನ್ನಿ, ಸ್ವರಾಜ್ಯವಿದ್ದರೆ ಇದೆಲ್ಲಾ ಸಾಧಿಸುವದು, ಇಲ್ಲದಿದ್ದರೆ ನಮ್ಮ ಸ್ಥಿತಿಯು ಅಧೋಗತಿ'ಯೆಂದು ಕೆಲ ಕೆಲವು ದೇಶಾಭಿಮಾನಿಗಳು ಎಚ್ಚರಿಸುತ್ತಿರುವರು. ಆದ್ದರಿಂದ ಸ್ವರಾಜ್ಯ ಬಂದರೆ ಅದಕ್ಕೆ ನಾವು ವಿರೋಧವಿಲ್ಲವೆಂದು ಗೊರಕೆ ಹೊಡೆಯುವದನ್ನು ಬಿಟ್ಟು ಜನತೆಯು ಎದ್ದೇಳಬೇಕು. 'ಸ್ವದೇಶಿ'ಯನ್ನು ಜೀವನ ವ್ರತವನ್ನಾಗಿ ಮಾಡಿಕೊಂಡು ಸತತ ಪ್ರಯತ್ನಿಸಬೇಕು. ತನ್ನ ಕಾಲಮೇಲೆ ನಿಂತ ಪ್ರತಿಯೊಬ್ಬನಿಗೂ ಸ್ವಾತಂತ್ರ್ಯದ ಬಯಕೆಯು ಬರುವದು ತೀರಾ ಸಹಜ. ಆದ್ದರಿಂದ ಹಿರಿಗುರಿಗಳಿಲ್ಲದೆ ಕುರಿಗಳಂತೆ ನಮ್ಮ ತರುಣರು ತಮ್ಮ ಬಿಸಿ ರಕ್ತವನ್ನು ನಿರರ್ಥಕ ವಿದ್ಯಾಭ್ಯಾಸಕ್ಕಾಗಿ ಬನಿಸಿದು ಸಾವಿಗೆ ಸುಗ್ಗಿ ಮಾಡಿಸುವದನ್ನು ನಿಲ್ಲಿಸಬೇಕು. ಸ್ವದೇಶಿಯನ್ನು ಪ್ರೋತ್ಸಾಹಿಸಬೇಕು. ಆಗ ಇಂದು ಮಾಯವಾಗಿ ಅವಿತಿರುವ ದುಡ್ಡು ಸೆಲೆಯೊಡೆದು ಹೊಳೆಯಾಗಿ ಹರಿಯುವದು. ಶಾಲೆ ಕಾಲೇಜುಗಳ ಶಿಕ್ಷಣವನ್ನು ತೊರೆದು, ಸೊಬಗು ಬೆಡಗುಗಳನ್ನು ಬಿಟ್ಟು, ಯಾವ ಉದ್ಯೋಗದಿಂದ ದುಡ್ಡಿನ ದರ್ಶನವಾಗುವದೆಂದು ಕೇಳುವವರಿಗೆ ಮಹಾತ್ಮ ಗಾಂಧಿಜೀಯವರ ಗ್ರಾಮೋದ್ಯೋಗ ಸಂಘದ ಕಡೆಗೆ ಬೆರಳು ತೋರಿಸುವೆವು.

ತಾಲೋಕು ಕಾಂಗ್ರೆಸ್ ಕಮಿಟಿಯ ಪ್ರಕಟಣೆ.

ಮಡಿಕೇರಿ ತಾಲೋಕಿನ ಕಾಂಗ್ರೆಸ್ ಸದಸ್ಯನಾಗಲು ಇಚ್ಛಿಸುವ ಪ್ರತಿಯೊಬ್ಬನೂ ತಮ್ಮ ಸದಸ್ಯತನದ ನಾಲ್ಕಾಣೆಯನ್ನು ಇನ್ನು ಒದೇ ಒಂದು ತಿಂಗಳೊಳಗಾಗಿ ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಪಾವತಿ ಮಾಡಿ ಕರ್ನಾಟಕ ಕಾಂಗ್ರೆಸ್ಸು ಕಮಿಟಿಯ ಸೀಲು ಇರತಕ್ಕ ರಶೀತಿಯನ್ನು ಪಡಕೊಳ್ಳಬೇಕಾಗಿ ವಿನಯದಿಂದ ಸೂಚಿಸುತ್ತೇನೆ. ಈ ಒಂದು ತಿಂಗಳ ಅವಧಿ ಮುಗಿದ ನಂತರ ಸದಸ್ಯನಾಗ ತಕ್ಕವರಿಗೆ ಈ ವರ್ಷದ ಯಾವದೇ ಕಾಂಗ್ರೆಸ್ಸು ಚುನಾವಣೆಯಲ್ಲಿ ಭಾಗವಹಿಸಲಾಗುವದಿಲ್ಲವಾದ್ದರಿಂದ ಜಾಗ್ರತೆಯಿಂದ ಪ್ರತಿಯೊಬ್ಬ 18 ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನ ತಕ್ಕವನೂ ತನ್ನ ಹೆಸರನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕಾಗಿ ಸೂಚಿಸತಕ್ಕದ್ದಿರುತ್ತೆ.

ಹಣ ಪಾವತಿ ಮಾಡುವ ಸ್ಥಳ.

1. ಡಾಕ್ಟರ್ ಬಿ. ಕೆ. ಸಂಜುಂಡೇಶ್ವರರು, ಆಯುರ್ವೇದ ವೈದ್ಯ ಶಾಲಾ, ಚೌಕ್, ಮಡಿಕೇರಿ.
2. ಬಿ. ಡಿ. ಗಣಪತಿಯವರು, "ಕೊಡಗು" ಪ್ರೆಸ್, ಮಡಿಕೇರಿ.
3. ಶ್ರೀಮತಿ ಪಂದ್ಯಂಡ ಸೀತಮ್ಮನವರು, ಮಡಿಕೇರಿ.
4. ಚಿಪ್ಪುಡೀರ ಯಂ. ಪೂಣಚ್ಚನವರು, "ಅಂಬಿಕಾ" ಪ್ರೆಸ್, ಮಡಿಕೇರಿ.
5. ಎ. ಎಸ್. ನಾಚಯ್ಯನವರು, ಡಿ. ಬಿ. ಮೆಂಬರು, ಸುಂಟಿಕೊಪ್ಪ.
6. ಕೆ. ಯಂ. ದೇವಯ್ಯನವರು, ಯಂ ಎಲ್.ಸಿ, ಮೂರ್ನಾಡು.

ಪಿ. ಎಸ್. ರಾಮಪ್ಪ,
7-8-1939. ಸೆಕ್ರೆಟರಿ,
ಮಡಿಕೇರಿ, ತಾ. ಕಾಂ. ಕಮಿಟಿ.

ಬಂಗಾಳ ರಾಜಕೀಯ ಕೈದಿಗಳು.

ಬಂಗಾಳ ರಾಜಕೀಯ ಕೈದಿಗಳು ತಮ್ಮ ಕೋರಿಕೆಗಳು ಸಲ್ಲಿಸಲ್ಪಡಲಿಲ್ಲವೆಂಬ ಕಾರಣದಿಂದ ನಿರಶನ ವ್ರತವನ್ನು ಕೈಕೊಂಡಿದ್ದದ್ದು ವಾಚಕರಿಗೆ ತಿಳಿದಿದೆ. ಮಹಾತ್ಮ ಗಾಂಧಿಜೀಯವರು ನಿರಶನ ವ್ರತ ಕೈಕೊಳ್ಳುವದು ತಪ್ಪೆಂದೂ, ಅವರ ಇಚ್ಛೆಯನ್ನು ಪೂರೈಸಲು ತಾನು ಮನಃಪೂರ್ವಕ ಪ್ರಯತ್ನಿಸುವೆನೆಂದೂ, ತಿಳಿಸಿದರೂ, ಅಲ್ಲದೆ ಕಾಂಗ್ರೆಸ್ ಅಧ್ಯಕ್ಷರು ಖುದ್ದಾಗಿ ಕೈದಿಗಳ ಭೇಟಿ ಮಾಡಿ ಹೇಳಿಕೊಂಡರೂ ಕೈದಿಗಳು ತಮ್ಮ ನಿರಶನ ವ್ರತವನ್ನು ನಿಲ್ಲಿಸಲಿಲ್ಲ. ಆದರೆ ಸುಭಾಷಚಂದ್ರಬೋಸರೂ, ಅವರ ಸಹೋದರರೂ ಕೈದಿಗಳನ್ನು ಬಿಡುಗಡೆ ಮಾಡಿಸುವ ಬಗ್ಗೆ ಭರವಸೆ ಕೊಟ್ಟ ಮೇರೆ ಅವರು ಎರಡು ತಿಂಗಳ ವರೆಗೆ ಅನ್ನಸತ್ಯಾಗ್ರಹವನ್ನು ನಿಲ್ಲಿಸಿರುವರು. ಈ ಮಧ್ಯೆ ಬಂಗಾಳದ ಮಂತ್ರಿಗಳಾದ ಶ್ರೀ ನಾಝಿಮುದ್ದೀನರಿಗೆ ಬೋಸರು ಕಠಿಣವಾದ ಒಂದು ಬೆದರಿಕೆ ಹಾಕಿರುವರು. ನಾಝಿಮುದ್ದೀನರು ರಾಜಕೀಯ ಕೈದಿಗಳ ಸಿಕ್ಷಾರ ಯಥೋಚಿತ ವರ್ತಿಸದಿದ್ದರೆ ಶ್ರೀ ಬೋಸರು ಕಾಯಿದೆ ಭಂಗ ಚಳವಳ ಕೈಕೊಳ್ಳಲು ನಿರ್ಧರಿಸಿರುವರು. ಆದ್ದರಿಂದ ಬಂಗಾಳದಲ್ಲಿ ಈಗಲೇ ಈ ಕಾರ್ಯಕ್ಕೆ ಸ್ವಯಂ ಸೇವಕರನ್ನು ಸೇರಿಸುವ ಕಾರ್ಯ ಭರದಿಂದ ನಡೆಯುತ್ತಿದೆ. ಮಹಾತ್ಮ ಗಾಂಧಿಯವರಿಗೆ ನಾಝಿಮುದ್ದೀನರ ಮನವನ್ನು ಬದಲಾಯಿಸಲು ಅಸಾಧ್ಯವಾಗಿರುವಾಗ ಬೋಸರಿಗೆ ಸಾಧ್ಯವಾದೀತೋ ಎಂಬುದು ನಿರೀಕ್ಷಣೀಯ. ಈ ಎರಡು ತಿಂಗಳೊಳಗೆ ಕೈದಿಗಳನ್ನು ಬಿಡುವ ಏರ್ಪಾಡು ಆಗದಿದ್ದರೆ ಬಂಗಾಳದಲ್ಲಿ ತೀವ್ರ ಚಳವಳ ಉಂಟಾಗದಿರದು. ಆದರೆ ಬೋಸರು ಬೆದರಿಕೆಯನ್ನು ಹಾಕಿದ ನಂತರ ಕೆಲವು ಕೈದಿಗಳನ್ನು ಬಿಟ್ಟಿರುವರು. ಮುಂದೆ ನೋಡಬೇಕಾಗಿದೆ.

WANTED.

Applications are invited for the post of a branch manager of theCoorg Honey & Wax Producers' Co-operative Society Ltd, in Bombay on a salary of Rs. 40 per mensum with a commission on the sales effected and with free quarters.

A cash security of Rs. 250 and two personal sureties for Rs. 1000 are required. Appointment will commence on the 1st of September 1939.

A knowledge of accounts and typing is preferred. Apply witc particulars of age, qualifications, business experience, if any, to the undersigned.

No Application received after the 18th instant will be considered.

P. M. Utapa,
President.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೀಟಿಂಗು.

ತಾರೀಕು 9ರಲ್ಲಿ ವಾರ್ಧಾದಲ್ಲಿ ಸೇರಿತು. ಮೌಲನಾ ಅಬ್ದುಲ್ ಕಲಾಂ ಅಝಾದರೂ, ಜಯರಾಮ್‌ದಾಸ್ ದೌಲತ್‌ರಾಮರೂ ಅನಾನುಕೂಲದಿಂದ ಮೀಟಿಂಗಿಗೆ ಬಂದಿರಲಿಲ್ಲ. ಈ ಬಾರಿಯ ಮೀಟಿಂಗು ಬಹಳ ಮಹತ್ವದಿದ್ದು ಕಾರ್ಯಕ್ರಮ ಪಟ್ಟಿಯು ಬಹಳ ಉದ್ದವಿತ್ತು. ಸುಭಾಷರ ಹಾಗೂ ಜುಲೈ ತಾರೀಕು 9ರಲ್ಲಿ ಎ. ಐ. ಸಿ. ಸಿ. ಠರಾವಿಗೆ ವಿರೋಧ ಪ್ರದರ್ಶನ ಮಾಡಿದವರ ಮೇಲಿನ ಶಿಸ್ತು ಜಾರಿ, ಸಿಲೋನಿನ ಭಾರತೀಯರ ವಿಚಾರ, ರಾಜಕೀಯ ಕೈದಿಗಳ ಬಿಡುಗಡೆ ಮೊದಲಾದ ವಿಚಾರಗಳು ತರ್ಕಿಸಲ್ಪಟ್ಟವು. ವಿವರ ಮುಂದಿನವಾರ ಕೊಡುವೆವು.

ಪರಾರಿಯಾಗಿದೆ.

ಈ ಕೆಳಗೆ ನಮೂದಿಸಿರುವ ಗುರ್ತಿನ ದನ್ನ ಎಮ್ಮೆಯೊಂದು ಪರಾರಿಯಾಗಿದೆ.

ದೊಡ್ಡ ರಾಸು.

ಬಿಳಿ ವರ್ಣ.

ಎರಡಡಿ ಉದ್ದದ ಹಿಂದಕ್ಕೆ ಬಾಗಿರುವ ಕೋಡುಗಳು.

ಸಾಧಾರಣ ಒಂದು ತಿಂಗಳೊಳಗೆ ಕರ ಹಾಕುವ ಅಂದಾಜು ಇರುವ ರಾಸು. ಇದನ್ನು ಪತ್ತೆಹಚ್ಚಿ ಕೊಟ್ಟವರಿಗೆ, ಎರಡು ರೂಪಾಯಿ ಇನಾಮು ಕೊಡಲಾಗುತ್ತೆ.

ಹೆಚ್. ಕೃಷ್ಣಕುಮಾರ್,
ಅಗ್ರಿಕಲ್ಚರಲ್ ಡಿಮಾನ್‌ಸ್ಟ್ರೇಟರ್,
ಗೋಣಿಕೊಪ್ಪ.

ಮಾರಾಟಕ್ಕಿದೆ.

ಮಡಿಕೇರಿ ಸೆಂಟ್ರಲ್ ಹೈ ಸ್ಕೂಲ್ ಬೋರ್ಡಿಂಗಿನಲ್ಲಿರುವ ಎಮ್ಮೆ ಮತ್ತು ಕರ ಮಾರಾಟ ಮಾಡಲ್ಪಡುತ್ತದೆ. ಎಳೇ ಪ್ರಾಯ, ವೈಕಟ್ಟು ಮತ್ತು ತಳಿ ಚೆನ್ನಾಗಿದೆ.

ಹೆಡ್ ಮಾಸ್ಟರು,
ಸೆಂಟ್ರಲ್ ಹೈ ಸ್ಕೂಲ್.
ಮಡಿಕೇರಿ.

ಸಾರ್ವಜನಿಕ ಸಭೆ.

ಈ ತಾರೀಕು 9 ರಲ್ಲಿ ಜಮೀನ್ದಾರರ ಸಂಘದ ಆಶ್ರಯದಲ್ಲಿ ವೀರಾಜಪೇಟೆ ರೀಡಿಂಗ್ ರೂಮಿನ ಎದುರುಗಡೆ ನಡದ ಸಾರ್ವಜನಿಕ ಮೀಟಿಂಗು.

ಶ್ರೀ ಐ. ಪಿ. ಕಾರ್ಯಪ್ಪನವರಿಂದ ಸೂಚಿಸಲ್ಪಟ್ಟ ಮೇರೆ ಶ್ರೀ ಅಬ್ದುಲ್ ಗಫೂರ್ ಖಾನ್‌ರವರು ಅಧ್ಯಕ್ಷತೆ ವಹಿಸಿದ್ದರು.

ಅಧ್ಯಕ್ಷರೂ ಮತ್ತು ಮ. ಪಿ. ಐ. ಬೆಳ್ಯಪ್ಪನವರೂ ವ್ಯವಸಾಯಗಾರರ ಈಗಿನ ಆರ್ಥಿಕ ಹೀನಸ್ಥಿತಿ, ಕಂದಾಯ ಮತ್ತು ಸರ್ಕಾರಿ ಇತರ ಬಾಕಿಗಳ ವಸೂಲಾತಿ ಬಗ್ಗೆ ಸರ್ಕಾರದವರು ಕೈಕೊಳ್ಳುತ್ತಿರುವ ಕಠಿಣ ರೀತಿಗಳು, ಸಿಕ್ಕಾಬಟ್ಟೆ ಭೂಮಿಗಳು ಹರಾಜಾಗಿ, ಅವು ಮಂಜೂರು ಮಾಡಲ್ಪಡುತ್ತಿರುವದು, ಮತ್ತು ಫಾರೆಸ್ಟ್ ಉತ್ಪತ್ತಿಗಳ ಸಾಗಿಸುವ ವಿಚಾರದಲ್ಲಿ ಮಾಡಬೇಕೆಂದಿರುವ ನಿಬಂಧನೆಗಳ ತಿದ್ದುಪಡಿಗಳಿಂದ ಜನರಿಗುಂಟಾಗುವ ಕಷ್ಟ ಮೊದಲಾದವುಗಳನ್ನು ಕುರಿತು ಭಾಷಣ ಮಾಡಿದರು. ನಂತರ ಈ ಕೆಳಗಿನ ಠರಾವುಗಳು ಸರ್ವಸಮ್ಮತದಿಂದ ಮಂಜೂರು ಮಾಡಲಾದವು.

1. ವ್ಯವಸಾಯಗಾರರು ಕೊಡಲಿಕ್ಕಿರುವ ಕಂದಾಯಕ್ಕಾಗಿಯೂ, ಸರ್ಕಾರದ ಇತರ ಬಾಕಿಗಾಗಿಯೂ ಹಿಡುವಳಿದಾರರ ಹಾಲು ಹವಾಲುಗಳನ್ನು ಗಣನೆಗೆ ತಾರದೆ ಭೂಮಿಯನ್ನು ಹರಾಜು ಮಾಡಿ ಭೂಮಾಲೀಕರನ್ನು ನಿರ್ಗತಿಕರನ್ನಾಗಿ ಮಾಡುತ್ತಿರುವ ಸರ್ಕಾರದ ವರ್ತನೆಯನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ.

2. ಫಾರೆಸ್ಟು ಉತ್ಪತ್ತಿಗಳನ್ನು ಸಾಗಿಸುವುದನ್ನು ಕುರಿತು ಸರ್ಕಾರದವರು ಮಾಡುತ್ತಿರುವ ನಿಬಂಧನೆಗಳು ಬದಲಾವಣೆಯೂ ಜನರ ಹಿತಕ್ಕೆ ಹಾನಿಕರವಾಗಿರುವುದರಿಂದ ಅವುಗಳನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ.

ಏಲಕ್ಕಿ ದಾಸ್ತಾನು ಮತ್ತು ಮಾರಾಟದ ಸಹಕಾರಿ ಸಂಘ, ಲಿಮಿಟೆಡ್, ಮಡಿಕೇರಿ.

ಏಲಕ್ಕಿ ಪ್ಲಾಂಟರುಗಳಿಗೆ ಸರಿಯಾದ ಧಾರಣೆ, ಒಳ್ಳೇ ತೂಕ, ಅಳತೆ ಮತ್ತು ಹಣದ ತೊಂದರೆಯನ್ನು ನಿವಾರಿಸಲು ಏಲಕ್ಕಿಯ ದಾಸ್ತಾನಿನ ಆಧಾರದ ಮೇಲೆ ಕೊಡಲ್ಪಡುವ ಅಡ್ವಾನ್ಸು, ಈ ಸಹಾಯವನ್ನು ಒದಗಿಸಿಕೊಡಲು ಈಗಾಗಲೇ ಮೇಲಿನ ಸಹಕಾರಿ ಸಂಘ ಒಂದನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಗಿದೆ. ಏಲಕ್ಕಿ ಇರುವವರು ಈ ಸಂಘದಲ್ಲಿ ತಮ್ಮ ಏಲಕ್ಕಿಯನ್ನು ದಾಸ್ತಾನು ಇಟ್ಟು ಅಡ್ವಾನ್ಸನ್ನು ಹೊಂದಿಕೊಳ್ಳಬಹುದು. ಒಳ್ಳೇ ಧಾರಣೆ ಬರುವ ಸಮಯದಲ್ಲಿ ದಾಸ್ತಾನುದಾರರ ಇರಾದೆಯಂತೆ ಏಲಕ್ಕಿಯನ್ನು ಮಾರಾಟ ಮಾಡಲಾಗುವದು.

ಖಾಯಿಸ್‌ದಾರರು ಫಾರಂಗಳನ್ನು ಪಡಕೊಳ್ಳಬಹುದು.

ಗುಡ್ಡಾಂಡ ಸುಬ್ಬಯ್ಯ, ಗೌ. ಕಾರ್ಯದರ್ಶಿ. 1 **ಚೂರಿಯಂಗೆಟ್ಟಿರ ಪಿ. ಅಪ್ಪಯ್ಯ,** ಪ್ರೆಸಿಡೆಂಟ್.

ಕೊಡಗು

ಆಗೊಸ್ಟು ತಾರೀಕು ೧೧ನೇ ಶುಕ್ರವಾರ ೧೯೩೩.

ಮಳೆಯ ಅಭಾವದಿಂದ ದೇಶದಲ್ಲಿ ಹಾಹಾಕಾರವೆದ್ದಿದೆ.

ಈಗ ಕೆಲವು ವರ್ಷಗಳಿಂದ ಕೊಡಗಿನಲ್ಲಿ ಮಳೆಗಾಲವು ಸರಿಯಾಗಿ ನಡೆಯುತ್ತಲೇ ಇಲ್ಲ. ಮಳೆಯ ಪರಿಮಾಣವೇ ಕಡಿಮೆಯಾಗಿ ನೀರಿನ ಅಭಾವವುಂಟಾಗುವುದು; ಇಲ್ಲವೆ, ಮಳೆಯು ಕಾಲಕ್ಕೆ ಸರಿಯಾಗಿ ಬೀಳದೆ ಹಿಂದು ಮುಂದಾಗುವುದು, ಅಥವಾ ಮಳೆಯು ಬೇಡದೆ ಇರುವ ಕಾಲದಲ್ಲಿ ಬೀಳುವುದು—ಈ ಮೊದಲಾದ ಕಾರಣಗಳಿಂದ ವ್ಯವಸಾಯಕ್ಕೆ ದೊಡ್ಡ ಹಾನಿತಟ್ಟುತ್ತಾ ಬರುತ್ತಿದೆ. ಮಳೆಯು ಸಮೃದ್ಧಿಯಾಗಿ ಬಿದ್ದು, ಬೆಳೆ ಫಸಲುಗಳು ಯಥೇಚ್ಛವಾಗಿ ಆಗುತ್ತಿದ್ದ ಈ ದೇಶದಲ್ಲಿ ಈಗ ಮಳೆ ಬೆಳೆಗಳ ಅಭಾವವುಂಟಾಗಲು ಕಾರಣವೇನೆಂಬುದು ತಿಳಿಯದ್ದಾಗಿದೆ. ಮೊದಲು ಬಹು ದಟ್ಟವಾದ ಕಾಡುಗಳಿಂದ ಕೂಡಿದ್ದ ಈ ಪ್ರಾಂತ್ಯವು ಕಾಫಿ, ರಬ್ಬರ್ ಮತ್ತು ಚಾ ತೋಟಗಳಿಗಾಗಿಯೂ ಮತ್ತು ಫಾರೆಸ್ಟ್ ಇಲಾಖೆಯವರಿಂದಲೂ ಮರಕಾಡುಗಳು ಕಡಿಯಲ್ಪಟ್ಟ ದೆಸೆಯಿಂದ ಬಯಲು ಪ್ರದೇಶವಾಗುತ್ತಿದೆ. ಈ ಕಾರಣದಿಂದಲೇ ದೇಶದಲ್ಲಿ ತಂಪು ಕಡಿಮೆಯಾಗುತ್ತಲೂ, ಮಳೆಯ ಅಭಾವವುಂಟಾಗುತ್ತಲೂ ಇರುವದೆಂದು ಹಲವರ ಅಭಿಪ್ರಾಯವಾಗಿದೆ. ಹೇಗೂ ವ್ಯವಸಾಯಕ್ಕೆ ಮಳೆಯ ನೀರನ್ನೇ ನಂಬಿಕೊಂಡಿರುವ ಈ ದೇಶದ ಜನರ ಹಿತದ ದೃಷ್ಟಿಯಿಂದ ಸರ್ಕಾರದವರು ಇದರ ಕಾರಣವನ್ನು ಕಂಡು ಹಿಡಿದು, ಅದನ್ನು ನಿವಾರಿಸಬೇಕಾದದ್ದು ಅತ್ಯಗತ್ಯವಾಗಿದೆ.

ಕಳೆದ ವರ್ಷ ಜೂನ್ 1ರಿಂದ ಈ ಸಮಯದ ವರೆಗೆ 87.49 ಇಂಚು ಮಳೆಯಾಗಿತ್ತು. ಈ ವರ್ಷ ಅದೇ ಸಮಯದಲ್ಲಿ ಬರೇ 52-7 ಇಂಚು ಮಾತ್ರವಾಗಿದೆ. ಈ ಮಳೆಯಾದರೂ ಮಧ್ಯದಲ್ಲಿ ಒಂದು ವಾರ ಬಹು ಜೋರಾಗಿ ಬಿದ್ದುದಾಗಿದೆ. ಈ ವರ್ಷ ಮಳೆಗಾಲವು ಪ್ರಾರಂಭವಾದದ್ದೇ ತಡವಾಗಿ. ಆದರೂ ಕೊಡ ರೈತರು ಮಳೆ ಬಿದ್ದ ಕೂಡಲೇ ವ್ಯವಸಾಯದ ಕೆಲಸವನ್ನು ಮಾಡತೊಡಗಿದರು. ಸರಿಯಾಗಿ ಮಳೆಯು ಒಂದು ವಾರ ಬಿದ್ದು ಈಗ ಸುಮಾರು ಒಂದು ತಿಂಗಳಿಂದ ಮಳೆಯೇ ಇಲ್ಲದಾಗಿದೆ. ಮಳೆ ಗಾಳಿಯು ವಿಪರೀತವಾಗಿ ಕೆರೆ ಕುಂಟೆಗಳು ತುಂಬಿ, ಜಲದ ಬುಗ್ಗೆಗಳು ಎದ್ದು, ಭತ್ತದ ವ್ಯವಸಾಯವು ಬಹು ಬರದಿಂದ ನಡೆಯಬೇಕಾಗಿದ್ದ ಈ ಸಮಯದಲ್ಲಿ ಈ ವರ್ಷ ಮಳೆಯೇ ಇಲ್ಲದೆ ದೇಶದ ಎಲ್ಲಾ ಭಾಗಗಳಲ್ಲೂ ಹಾಹಾಕಾರವೆದ್ದಿದೆ. ನೀರು ಸೇರಿಸಿ ಉತ್ತ ಗದ್ದೆಗಳೆಲ್ಲಾ ಒಣಗುತ್ತಿವೆ. ನಾಟಿ ಹಾಕಲು ನೀರಿಲ್ಲದೆ ಜನರು ಕಷ್ಟಪಡುತ್ತಿರುವರು. ಒಂದೇ ಗದ್ದೆಯಲ್ಲಿ ನೀರಿರುವ ಭಾಗಗಳನ್ನು ನೆಟ್ಟು, ನೀರಿಲ್ಲದ ಸ್ವಲ್ಪ ಮೊಟ್ಟೆಯಾದ ಭಾಗಗಳನ್ನು ಅಲ್ಲಲ್ಲಿ ಬಿಡುತ್ತಿರುವರು. ಸ್ವಲ್ಪ ನೀರಿರುವ ಗದ್ದೆಗಳನ್ನು ಉತ್ತ ಕೂಡಲೆ ನೀರು ಆರಿ ಹೋಗುವುದರಿಂದ ಉಳಲು ಹಿಂಜರಿಯುತ್ತಿರುವರು. ಹಲವು ನೆಟ್ಟ ಗದ್ದೆಗಳೂ ಒಣಗಿ, ನೆಲ ಒಡೆದು ಹೋಗಿದೆ. ನೆಟ್ಟ ಮೇಲೆ ಒಣಗಿ ಹೋದರೆ ಹಿಂದಳಿಂದ ಮಳೆ ಬಂದರೂ ಪ್ರಯೋಜನವಾಗಲಿಕ್ಕಿಲ್ಲವೆಂಬ ಭಾವನೆಯಿಂದ ಕೆಲವರು ನೆಡುವುದನ್ನು ಬಾಕಿ ಮಾಡಿ ಮಳೆಯನ್ನು ಎದುರು ನೋಡುತ್ತಿರುವರು. ಇನ್ನು ಕೆಲವರು ಬೇಗನೆ ಮಳೆ ಬರುವ ಭರವಸೆ ಇಲ್ಲದ್ದರಿಂದ ಇರುವ ನೀರಿನಲ್ಲೇ ಉತ್ತು ನೆಡುವುದು ಉತ್ತಮವೆಂದೂ, ಒಂದು ವೇಳೆ ಹಿಂದಳಿಂದ ಮಳೆ ಬಂದರೂ ಉತ್ತು ಒಣಗಿ ಹೋಗಿರುವ ಗದ್ದೆಗಳನ್ನು ಪುನಹ ಉತ್ತು ನೆಡುವುದರಿಂದ ಪ್ರಯೋಜನವಾಗಲಾರದೆಂದೂ, ಅಷ್ಟರ ವರೆಗೆ ಪೈರು ಹೆಚ್ಚಾಗಿ ಬೆಳೆದು ಕೆಟ್ಟು ಹೋಗುವದೆಂದೂ, ಸಾಧ್ಯವಾದಷ್ಟು ಮಟ್ಟಿಗೆ ನೆಡುವ ಆತುರತೆಯಲ್ಲಿರುವರು. ಮತ್ತೆ ಕೆಲವರು ಈ ಬಿಕ್ಕಟ್ಟಿನಾವಸ್ಥೆಯಲ್ಲಿ ಯಾವ ರೀತಿ ವರ್ತಿಸಬೇಕೆಂದು ತಿಳಿಯದೆ ಬೇಸರಿಕೆಯಲ್ಲಿ ಬಿದ್ದಿರುವರು. ಎಲ್ಲಿ ನೋಡಿದರೂ ನಿರಾಶೆಯೇ ಹಬ್ಬಿಕೊಂಡಿದೆ.

ವ್ಯವಸಾಯದ ಪಾಡಂತೂ ಹೀಗಾಯಿತು. ಕುಡಿಯುವ ನೀರಿನ ಸ್ಥಿತಿಯೂ ಆಶಾಜನಕವಾಗಿಲ್ಲ. ಕಳೆದ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವವು ಬಹಳವಾಗಿತ್ತು. ಹಲವು ವರ್ಷಗಳಿಂದ ನೀರು ಬತ್ತದೆ ಇದ್ದ ಭಾವಿಗಳಲ್ಲಿ ಆ ವರ್ಷ ಬತ್ತಿ ಹೋಗಿತ್ತು. ಮಳೆ ಸರಿಯಾಗಿ ಬೀಳದೆ ಜಲದ ಬುಗ್ಗೆಗಳು ಇನ್ನೂ ಏಳದಿರುವ ಕಾರಣ ಭಾವಿಗಳಲ್ಲಿ ನೀರು ಮೇಲಕ್ಕೆ ಬಂದಿರುವುದಿಲ್ಲ. ಕೆಲವು ಭಾವಿಗಳಲ್ಲಿ ಇನ್ನೂ ಉಪಯೋಗಕ್ಕೆ ಸಾಕಷ್ಟು ನೀರು ಆಗಿರುವದಿಲ್ಲವೆಂದರೆ ಅತಿಶಯೋಕ್ತಿಯಾಗಲಾರದು. ವರ್ಷದ ಈ ಭಾಗದಲ್ಲಿಯೇ ಕುಡಿಯುವ ನೀರಿನ ಅಭಾವವಾದದ್ದರಿಂದ ಬರುವ ಬೇಸಿಗೆಯಲ್ಲಿ ನೀರಿನ ಕ್ಷಾಮ ಉಂಟಾಗುವುದೆಂಬುದರಲ್ಲಿ ಸಂದೇಹವಿಲ್ಲ.

ದೇಶದ ಜನರ ಸ್ಥಿತಿಗತಿಗಳು ಇಷ್ಟು ಭಯಾನಕವಾಗಿದ್ದರೂ ಸರ್ಕಾರದ ಅಧಿಕಾರಿಗಳ ಮನಸು ಕದಲಿರುವಂತೆ ಕಾಣುವುದಿಲ್ಲ. ಗ್ರಾಮಸ್ಥರ ನಿಜವಾದ ಕಷ್ಟವನ್ನು ತಿಳಿಯಬೇಕಾದರೆ ಇದೀಗ ತಕ್ಕ ಸಮಯ. ಕಮಿಶನರಿಂದ ಮೊದಲ್ಗೊಂಡು ರೆವಿನ್ಯೂ ಇಲಾಖೆಯವರೂ, ವ್ಯವಸಾಯ, ಸಹಕಾರಿ ಮತ್ತು ಇಂಜಿನಿಯರಿಂಗ್ ಮೊದಲಾದ ಇಲಾಖೆಯವರೂ ಗ್ರಾಮಾಂತರಗಳನ್ನು ಸಂದರ್ಶಿಸಿ, ಈಗಿನ ಕಷ್ಟದ ಪರಿಸ್ಥಿತಿಯಲ್ಲಿ ರೈತರು ಹೇಗೆ ವರ್ತಿಸಬೇಕೆಂದು ಅವರಿಗೆ ಸಲಹೆಗಳನ್ನು ಕೊಟ್ಟು ಅವರಲ್ಲಿ ಸಮಾಧಾನವನ್ನುಂಟುಮಾಡಬೇಕಾಗಿದೆ. ಏಕೆಂದರೆ, ರೈತರು ಸರಿಯಾಗಿ ಉತ್ತು ಬಿತ್ತಿ ಬೆಳೆದರೇನೇ ಅವರಿಂದ ಕಂದಾಯ ಕಾಣಿಕೆಗಳನ್ನು ವಸೂಲಿ ಮಾಡಲು ಸಾಧ್ಯವಾಗುವುದು. ಆದರೆ ಅಧಿಕಾರಿಗಳ ದೃಷ್ಟಿಯು ಗ್ರಾಮದ ಕಡೆ ಬೀಳುವಂತೆಯೇ ಕಾಣುವುದಿಲ್ಲ. ಅದರ ಬದಲು ಕಳೆದ ವರ್ಷದ ಕಂದಾಯ ಬಾಕಿ, ಸರಕಾರದ ಇತರ ಬಾಕಿಗಳ ವಸೂಲಾತಿಗಾಗಿ ರೈತರ ಹಾಲು ಹವಾಲುಗಳನ್ನು ಗಮನಿಸದೆ ಭೂಮಿಗಳು ಹರಾಜು ಮಾಡಲ್ಪಡುತ್ತಿವೆ. ಹರಾಜಾದ ಮೇಲೆ ಬಾಕಿ ಮೊಬಲಗನ್ನು ಪಾವತಿ ಮಾಡಲು ಸ್ವಲ್ಪವಾದರೂ ಸಮಯ ಕೊಡದೆ ಹರಾಜು ಖಾಯಂ ಮಾಡಲ್ಪಡುತ್ತಿದೆ. ಫಾರೆಸ್ಟ್, ಪೈಸಾರಿ ಜಾಗಗಳ ಉತ್ಪತ್ತಿಯನ್ನು ಸಾಗಿಸುವುದರ ಕುರಿತು ಜನರಿಗೆ ಕಷ್ಟತರವಾದ ನಿಬಂಧನೆಗಳು ಮಾಡಲ್ಪಡುತ್ತಿವೆ. ಎಲ್ಲವೂ ರೈತರ ಅಧೋಗತಿಗೆ ಅಣಿ ಮಾಡುವಂತೆ ತೋರುತ್ತದೆ. ರೈತರು ಕೆಟ್ಟರೆ ಸರಕಾರವು ನಿಲ್ಲಲಾರದು. ಇದನ್ನು ಮರೆಯದೆ ಅಧಿಕಾರಿಗಳು ನಿರ್ಲಕ್ಷ್ಯತೆಯನ್ನು ಬಿಟ್ಟು ವ್ಯವಸಾಯಗಾರರ ಉದ್ಧಾರದ ಕಡೆಗೆ ಗಮನ ನೀಡುವರಾಗಿ ನಂಬುತ್ತೇವೆ.

ಕೊಡಗು ಸರಕಾರಿ ಉದ್ಯೋಗಗಳ ನೇಮಕದ ಹೊಸ ನಿಬಂಧನೆಗಳು.

ಕೊಡಗು ಸರಕಾರದ ಕೆಳತರಗತಿಯ ನೌಕರರ ನೇಮಕದ ವಿಚಾರವಾಗಿ ಚೀಫ್ ಕಮಿಷನರವರು ಕಳೆದ ಜುಲೈ ತಿಂಗಳ ಗಜಟಿನಲ್ಲಿ ಕೆಲವು ಹೊಸ ನಿಬಂಧನೆಗಳನ್ನು ಪ್ರಕಟಿಸಿರುವರು. ಇವುಗಳ ಮುಖ್ಯಾಂಶವನ್ನು ಮಾತ್ರ ಇಲ್ಲಿ ಕೊಡಲಾಗಿದೆ.

ಈ ನಿಬಂಧನೆಗಳು ಹೊಸ ನೇಮಕಕ್ಕೆ ಮಾತ್ರ ಅನ್ವಯಿಸುವವು, ಬಡ್ತಿಗೆ ಅನ್ವಯಿಸುವದಿಲ್ಲ. ಬಡ್ತಿಯು ಈ ಮೊದಲಿನಂತೆ ಸರ್ವಿಸು ಮತ್ತು ಕಾರ್ಯದಕ್ಷತೆಯ ಮೇಲೆ ಕೊಡಲಾಗುವುದು.

ಕೊಡಗಿನ ಹೊರಗಿನವರಿಗೆ ವಿಶೇಷ ಸಂದರ್ಭಗಳಲ್ಲಿ ಮಾತ್ರ ಚೀಫ್ ಕಮಿಷನರರ ಅನುಮತಿಯಿಂದ ಉದ್ಯೋಗ ಕೊಡಲಾಗುವುದು.

ಕೊಡಗಿನಲ್ಲಿ ಖಾಯಂ ಇರುವ ಉದ್ದೇಶದಿಂದ ಸಂಸಾರ ಸಮೇತ ಕೊಡಗಿನಲ್ಲಿ ಮನೆಮಾಡುಗಳನ್ನು ಮಾಡಿಕೊಳ್ಳುವವನು ಐದು ವರ್ಷಗಳ ನಂತರ ಕೊಡಗಿನವನೆಂದೆನಿಸಿಕೊಳ್ಳುವನು.

ಇಪ್ಪತ್ತೈದು ವರ್ಷ ಪ್ರಾಯ ಮೀರಿದವರನ್ನು ಪೆನ್ಶನ್ ಇರುವ ಉದ್ಯೋಗಗಳಿಗೆ ಖಾಯಿಕೆಯಾಗಿ ನೇಮಿಸಲಾಗುವದಿಲ್ಲ. ಆದರೆ ವಿಶೇಷ ಸಂದರ್ಭಗಳಲ್ಲಿ ಕಮಿಷನರ ಮಂಜೂರಾತಿಯಿಂದ ನೇಮಿಸಲ್ಪಡಬಹುದು.

ಮದ್ರಾಸು ಯಾ ಮೈಸೂರಿನ ಸ್ಕೂಲ್ ಫೈನಲ್ ಪರೀಕ್ಷೆಯನ್ನು ಪೂರ್ತಿಗೊಳಿಸದ ವಿನಹ ಪೆನ್ಶನ್ ಇರುವ ಉದ್ಯೋಗಗಳಿಗೆ ನೇಮಿಸಲಾಗುವದಿಲ್ಲ. ಆದರೆ ಈ ಶರತ್ತು ಕ್ಷತ್ರಿಯಸಭಾಗರಿಗೆ ಅನ್ವಯಿಸುವದಿಲ್ಲ.

ಮೇಲಿನ ಶರತ್ತಿಗೆ ಒಳಪಟ್ಟು ಮಿಲಿಟರಿ ಸರಬೇಕಾದವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಲಾಗುವುದು.

ವಿಶೇಷ ಸಂದರ್ಭಗಳಲ್ಲಿ ಸ್ಕೂಲ್ ಫೈನಲ್ ಪೂರ್ತಿಗೊಳಿಸದವರನ್ನೂ, ಚೀಫ್ ಕಮಿಷನರ ಮಂಜೂರಾತಿಯಿಂದ ನೇಮಿಸಬಹುದು.

ಸರಕಾರಿ ಇಲಾಖೆಗಳ ಮೇಲಧಿಕಾರಿಗಳು ಆಯಾಯ ಇಲಾಖೆಯ ಉದ್ಯೋಗಕ್ಕೆ ಹಾಕುವ ಉಮೇದುವಾರರ ಹೆಸರುಗಳನ್ನು (1) ಜನರಲ್ (2) ಸ್ಪೆಶ್ಯಲ್ ಎಂದು ಎರಡು ಪಟ್ಟಿಯಾಗಿ ಇಟ್ಟುಕೊಳ್ಳತಕ್ಕದ್ದು.

ಜನರಲ್ ಪಟ್ಟಿಯಲ್ಲಿ ಜಾತಿ ಮತ ವೆನಿಸದ ಅರ್ಹತೆ ಪಡೆದ ಉಮೇದುವಾರರ ಹೆಸರುಗಳೆಲ್ಲವೂ ಇರತಕ್ಕದ್ದು. ಅರ್ಜಿಗಳು ಕೈಸೇರಿದ ಕ್ರಮದಂತೆಯೇ ಪಟ್ಟಿಯಲ್ಲಿ ದಾಖಲ್ಮಾಡಲ್ಪಡತಕ್ಕದ್ದು.

ಉದ್ಯೋಗಗಳು ಖಾಲಿ ಬಿದ್ದ ಹಾಗೆ ಕೊಡಗರು ಮತ್ತು ಬ್ರಾಹ್ಮಣರನ್ನು ಬಿಟ್ಟು ಉಳಿದ ಕೋಮಿನವರ ಸರಕಾರಿ ಉದ್ಯೋಗಸ್ಥರ ಸಂಖ್ಯೆಯು ಶೇಕಡ 40 ಕ್ಕೆ ತಲಪುವ ವರೆಗೆ ಮೇಲಿನ ಜನರಲ್ ಪಟ್ಟಿಯಿಂದ ಒಬ್ಬರನ್ನೂ ಮತ್ತು ಸ್ಪೆಷ್ಯಲ್ ಪಟ್ಟಿಯಿಂದ ಇಬ್ಬರನ್ನೂ ಆಯ್ದು ನೇಮಿಸತಕ್ಕದ್ದು. ಇದರೆ ಈ ಪಟ್ಟಿಗಳಲ್ಲಿ ಯಾವದಾದರೊಂದರಲ್ಲಿ ಅರ್ಹತೆ ಪಡೆದ ಉಮೇದುವಾರರು ಸಿಗದಿದ್ದರೆ ಇನ್ನೊಂದು ಪಟ್ಟಿಯಿಂದ ಆಯ್ದುಕೊಳ್ಳಬಹುದು.

ಬ್ರಾಹ್ಮಣರ ಉದ್ಯೋಗಸ್ಥರ ಸಂಖ್ಯೆಯು ಶೇಕಡ ಹತ್ತಕ್ಕೆ ಮೀರಿರುವಷ್ಟರವರೆಗೆ ಜನರಲ್ ಪಟ್ಟಿಯಿಂದ ನೇಮಿಸಲ್ಪಡುವ ಪ್ರತಿಯೊಬ್ಬ ಬ್ರಾಹ್ಮಣನಿಗೆ ಸಾಧ್ಯವಾದಷ್ಟು ಮಟ್ಟಿಗೆ ಐದು ಜನ ಕೊಡಗರಂತೆ ಆರಿಸಲ್ಪಡಬೇಕು.

ಎಲಿತ ವರ್ಗದ ಯಾ ಬಹು ಹಿಂದೆ ಬಿದ್ದ ಕೋಮಿನ ಅರ್ಹತೆ ಪಡೆದ ಉಮೇದುವಾರನಿಗೆ ಕಮಿಶನರವರು ಇತರ ಕೋಮಿನ ಉಮೇದುವಾರರಿಗಿಂತ ಹೆಚ್ಚಿನ ಅವಕಾಶ ಕೊಡಬಹುದು.

ಸ್ಪೆಶಲ್ ಪಟ್ಟಿಯಿಂದ ಉಮೇದುವಾರರನ್ನು ಆರಿಸುವಾಗ್ಯೆ ವಿವಿಧ ಕೋಮುಗಳ ಒಟ್ಟು ಜನಸಂಖ್ಯೆಗೂ ಆಯಾಯ ಕೋಮಿನವರ ಸರಕಾರಿ ಉದ್ಯೋಗಸ್ಥರ ಸಂಖ್ಯೆಗೂ ಇರುವ ದಾಮಾಶಾಯಿ ಲೆಕ್ಕವನ್ನು ಗಮನದಲ್ಲಿಟ್ಟುಕೊಳ್ಳಬೇಕು.

ಜನರಲ್ ಮತ್ತು ಸ್ಪೆಶಲ್ ಪಟ್ಟಿಗಳು ವರ್ಷಕ್ಕೊಂದು ಸಾರಿ ಪರೀಕ್ಷಿಸಿ ತಿದ್ದಲ್ಪಡುವುದು.

ಕೊಡವರು, ಬ್ರಾಹ್ಮಣರು ಮತ್ತು ಇತರ ಕೋಮಿನವರಿಗೆ ನಿಷ್ಕರ್ಷಿಸಲ್ಪಟ್ಟಿರುವ ಮೇಲ್ಕಾಣಿಸಿದ ಉದ್ಯೋಗಗಳ ದಾಮಾಶಾಯಿ ಭಾಗಗಳು ಆಗಿಂದಾಗ್ಯೆ ಬದಲಾಯಿಸಲ್ಪಡಬಹುದಾಗಿದೆ.

ಮೇಲ್ಕಾಣಿಸಿದ ದಾಮಾಶಾಯಿ ಭಾಗದ ಮೇರೆ ನೇಮಿಸಲ್ಪಟ್ಟ ಉದ್ಯೋಗಸ್ಥರು ಎರಡು ವರ್ಷಗಳವರೆಗೆ (ಪ್ರೊಬೇಶನರ್ಸ್) ಪರೀಕ್ಷಾದಶೆಗಳಾಗಿರತಕ್ಕದ್ದು.

ಈ ನಿಬಂಧನೆಗಳಿಗೆ ವಿರುದ್ಧವಾಗಿ ನೇಮಿಸಲ್ಪಡುವ ಉದ್ಯೋಗಗಳು ಚೀಫ್ ಕಮಿಶನರವರಿಂದ ತಿರಸ್ಕರಿಸಲ್ಪಡಬಹುದು.

ಆಡಳಿತೆಯ ಕಾರಣಗಳಿಂದ ಚೀಫ್ ಕಮಿಶನರು ಈ ನಿಬಂಧನೆಗಳನ್ನು ಪ್ರತ್ಯೇಕ ಸಂದರ್ಭಗಳಲ್ಲಿ ಸಡಿಲಿಸಬಹುದು.

ವರ್ತಮಾನ ಸಂಗ್ರಹ.

ಒಳದೇಶ.

ಮಡಿಕೇರಿ.

ತಾರೀಕು 5ರಿಂದ ಇಂದಿನ ವರೆಗೆ 4 ಇಂಚು 1 ಸೆಂಟು ಮಳೆಯಾಗಿದೆ. ಹೆಚ್ಚಾಗಿ ಮಳೆ ಹೊಡೆದ ತಾರೀಕು 10 ರಲ್ಲಿ 1 ಇಂಚು 90 ಸೆಂಟು ಆಗಿತ್ತು. ಇಲ್ಲಿ ಮಳೆಗಾಲದ ಚಿಹ್ನೆಯೇ ಇಲ್ಲ. ಅಡ್ಡ ಮಳೆಯಂತೆ ಬೀಳುತ್ತಿದೆ. ಮೋಡ ಕವಿದು ಹೊಗೆ ತುಂಬಿಕೊಂಡು ವಿಪರೀತ ಇಲ್ಲದೆ ಮಳೆ ಬೀಳುತ್ತಿದ್ದ ಇಲ್ಲಿ ಅದರ ಕುರುಹೇ ಇಲ್ಲ. ಬೇಸಿಗೆಯೋಪಾದಿ ಭಾಸವಾಗುತ್ತಿದೆ.

ಕೊಡಗು ಪ್ಲಾಂಟೇಶನ್ ಫಂಡಿನ ಸ್ಕಾಲರ್ ಶಿಪ್ ಕಳೆದ ವಾರ ಪ್ರಕಟಿಸಿದ್ದ ಪರಿಗಲ್ಲದ ಮಿಸ್ ನಂದಿನೆರವಂಡ ಜಿ. ಕಾವುಸ್ಸನವರಿಗೂ, ಕಾಲೇಜ್ ಸ್ಕಾಲರ್ ಶಿಪ್ಪುಗಳನ್ನು ಶ್ರೀಮತಿ ಎ. ಎನ್. ಮೊಣ್ಣನವರಿಗೂ ಮತ್ತು ಶ್ರೀಗಳಾದ ಯಂ. ಎ. ಉತ್ತಪ್ಪ, ಪಿ. ಪಿ. ದೇವಯ್ಯ, ಯಂ. ಪಿ. ಕಾರ್ಯಪ್ಪ ಮತ್ತು ಸಿ. ಯಂ. ಕಾರ್ಯಪ್ಪನವರುಗಳಿಗೂ, ಸೆಕೆಂಡರಿ ಸ್ಕಾಲರ್ ಶಿಪ್ಪನ್ನು ಶ್ರೀಗಳಾದ ಬಿ. ಕೆ. ಮುತ್ತಣ್ಣ, ಯಂ. ಸಿ. ಮುತ್ತಪ್ಪ, ಬಿ. ಯಂ. ಪೂಣ್ಣಪ್ಪ ಮತ್ತು ಶ್ರೀಮತಿಯರಾದ ಬಿ. ಕೆ. ಮುತ್ತಮ್ಮ ಮತ್ತು ಸಿ. ಕೆ. ಪಾರ್ವತಿ ಇವರುಗಳಿಗೆ ಕೊಡಲಾಗಿದೆ.

ವೀರರಾಜಪೇಟೆ.

ಇಲ್ಲಿ ಭತ್ತ ಗಾಡಿಗೆ ರೂ 47 ಕ್ರಯವಿದೆ.

ಇಲ್ಲಿ ಫೆಬ್ರವರಿ 9 ರಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಇದರ ವಿವರ ಬೋರ್ಡ್‌ಗೆ ಕೊಡಲಾಗಿದೆ.

ಅನಾವೃಷ್ಟಿಯ ದೆಸೆಯಿಂದ ಆರಂಭ ಪರಿಯೂಗಿ ನಪಯುಕ್ತಿಲ್ಲ. ನಟ್ಟಿ ಗದ್ದೆಗಳು ಒಣಗಿ ಹೋಗಿ ರೈತರ ಸ್ಥಿತಿಯು ಶೋಚನೀಯವಾಗಿ ಬಂದಿದೆ.

ಸೋಮವಾರಪೇಟೆ

ಮಳೆಯ ಅಭಾವದಿಂದ ರೈತರಲ್ಲಿ ಕ್ಷೋಭೆಯಿದ್ದಿದೆ. ಈ ಸಮಯದಲ್ಲಿ ದಪ್ಪುರು ಲಂಬಳಿಯಂತೆ ಕಣ್ಮನರಂಜಕವಾಗಿ ಬೆಳೆದಿದ್ದ ಭೂಮಿಯು ನೋಡಲು ಬೇಸರವನ್ನುಂಟುಮಾಡುತ್ತಿದೆ. ಹೋಗಿನ ಈ ಸಲೇ ಕುಡಿಯುವುದಕ್ಕೆ ನೀರಿನ ತೊಂದರೆ ನೂಗಿರುವಾಗ ಮುಂದೆ ಹೇಗಾದೀತೆಂಬುದು ಊಹನೆಗೆ ನಿಲುಕದು.

ನಿಧನ ವಾರ್ತೆ.

ಪೊನ್ನಂಪೇಟೆ, ಮೇಕೂರು ತೋಟದ ಶ್ರೀ. ಕೊಂಗಂಡ ಕುಶಾಲಪ್ಪನವರು ಕಳೆದ ತಾ. 7ನೇ ಸೋಮವಾರವೂ, ಬಿಳುಗುಂದ ಗ್ರಾಮದ ಶ್ರೀಮಂಡೇಪಂಡ ಚಂಗಪ್ಪನವರು ಕಳೆದ ತಿಂಗಳು 20 ರಲ್ಲೂ ಸ್ವರ್ಗಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಪೊನ್ನಂಪೇಟೆ.

ವ್ಯವಸಾಯದ ಬಗ್ಗೆ ರೈತರಲ್ಲಿ ನಿರಾಶೆಯುಂಟಾಗಿದೆ. ನೀರು ಹಾಯಿಸುವ ಯೋಗ್ಯ ಯೋಜನೆಯೂ ಇಲ್ಲದ್ದರಿಂದ ರೈತರು ನಿರುತ್ತರರಾಗಿರುವರು. 'ಕೊಡಗಿನ ಕಣಜ'ವೆಂದು ಹೆಸರುಗೊಂಡ ಈ ನಾಡಿನ ಪರಿಸ್ಥಿತಿ ಇಂಥಾದರೆ ಬರಗಾಲವಲ್ಲದೆ ಮತ್ತೇನು?

ಗಜೆಟ್.

ಕೊಡಗಿನಲ್ಲಿ ಮರ ಮತ್ತು ಫಾರೆಸ್ಟಿನ ಇತರ ಉತ್ಪತ್ತಿಗಳಾದ ಅಳಲೆಕಾಯಿ, ಹುಣಸೆ ಹುಳಿ, ಪಾಚಿ ಚಕ್ಕೆ, ಅಂಟುವಾಳದ ಕಾಯಿ, ಸೀಗೆ ಕಾಯಿ, ಗೋಂದು, ಮರದ ಚಕ್ಕೆ, ಮರದ ಎಣ್ಣೆ, ಮರತುಂಜಾಲ್, ಜೇನು ತುಪ್ಪ, ಮೇಣ, ಹೊಂಗೆ ಬೀಜ, ಅರಸಿನ, ಮೃಗಗಳ ಕೊಂಬು, ಮಣ್ಣು, ಕಲ್ಲು, ಮರಳು, ಮೊದಲಾದುವುಗಳನ್ನು ಕೊಡಗಿನಿಂದ ಹೊರಗೂ ಒಳಗೂ, ಗ್ರಾಮದಿಂದ ಗ್ರಾಮಕ್ಕೂ ಒಯ್ಯುವದನ್ನು ಕುರಿತ ಹೊಸ ನಿಬಂಧನೆಗಳ ಕರಡು ಈ ತಿಂಗಳ ಗಜೆಟಿನಲ್ಲಿ ಪ್ರಕಟವಾಗಿದೆ. ಆಕ್ಷೇಪಣೆ ಯಾ ತಿದ್ದುಪಡಿಗಳನ್ನು ಎರಡು ತಿಂಗಳೊಳಗೆ ಚೀಫ್ ಕಮಿಶನರಿಗೆ ಕಳುಹಿಸಬಹುದೆಂದು ಪ್ರಕಟವಾಗಿದೆ.

ಹಿಂದೂದೇಶ.

ಜಯಪುರದ ಸೆರೆಮನೆಯಲ್ಲಿದ್ದ ಸೇಟ್ ಜಮ್ನಾಲಾಲ್ ಬಜಾಜರನ್ನು ತಾರೀಕು 9ರಲ್ಲಿ ಬಿಟ್ಟಿದ್ದಾರೆ.

ಮಿರ್ಜಾಪುರದಲ್ಲಿ ಒಬ್ಬ ರೈತನು ತನ್ನ ಹೊಲವನ್ನು ಉಳುತ್ತಿದ್ದಾಗ ಎತ್ತು ಆತನನ್ನು ಮೂರ್ಛೆಗೊಳಿಸಿತೆಂದೂ ಆ ತರುವಾಯ ಆದು ಭಾವಿಯಲ್ಲಿ ಬಿದ್ದು ಮರಣ ಹೊಂದಿತೆಂದೂ ತಿಳಿದು ಬಂದಿದೆ.

ಹಿಂದೂಸ್ಥಾನಕ್ಕೆ ಬಂದಿದ್ದ ನಾಜಿ ಮುಖಂಡರಾದ ಡಾ ಸಾಚೆಟ್‌ರವರು ಇಂಡಿಯಾದ ವಿಚಾರದ ತನ್ನ ವರದಿಯನ್ನು ಹಿಟ್ಲರನಿಗೆ ಕೊಟ್ಟಿರುವರೆಂದು ತಿಳಿಯಬರುತ್ತದೆ.

ಪಂಡಿತ ಜವಾಹರ್‌ಲಾಲ್ ನೆಹರೂರವರು, ಯೂರೋಪಿನ ಪ್ರಾಮುಖ್ಯ ಮನುಷ್ಯರುಗಳು ಅವರನ್ನು ಇಲ್ಲಿ ತಡೆಗಟ್ಟಿದ್ದರೆ ಈ ತಿಂಗಳ ಅಂತ್ಯದಲ್ಲಿ ಚೈನಾಕ್ಕೆ ಹೋಗುವರೆಂದು ತಿಳಿದುಬಂದಿದೆ.

ಭಾಗಲ್ಪುರದಲ್ಲಿ ಕಾಂಗ್ರೆಸ್ ಉಮೇದುವಾರರ ವಿರುದ್ಧವಾಗಿ ಜಿಲ್ಲಾ ಬೋರ್ಡ್ ಚುನಾವಣೆಗಳಲ್ಲಿ ಕೆಲಸ ಮಾಡಿದರೆಂದು ಅಲ್ಲಿನ ಕಾಂಗ್ರೆಸ್ ಕಮಿಟಿಯಿಂದ 14 ಮಂದಿಯನ್ನು ಹೊರತಳ್ಳಲಾಗಿದೆ.

ಹೈದರಾಬಾದಿನ ಸಂಸ್ಕರಣಗಳು ಅತ್ತಿಯ ಹಣ್ಣಿನಂತೆ, ಆಡಂಬರ ಪ್ರಾಯವಾಗಿಯೂ, ಶುಷ್ಕ ಪಾಂಡಿತ್ಯ ಪ್ರಕರಣವಾಗಿಯೂ ಮಾತ್ರ ಇರುವುದೆಂದು ಡಾ. ಪಟ್ಟಾಭಿಯವರು ಅಭಿಪ್ರಾಯ ಪಟ್ಟಿರುವರು.

ಪಂಜಾಬಿನ ಮಾಜಿ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿದ್ದ ಡಾ. ಸತ್ಯಪಾಲರು ರಾಜಕೀಯ ರಂಗದಿಂದ ನಿವೃತ್ತರಾಗಲಿರುವರೆಂದು ಪ್ರಕಟಿಸಿದುದು ಅಲ್ಲಿನ ಕಾಂಗ್ರೆಸ್ ಮಂದಿಗೆ ಆಶ್ಚರ್ಯವನ್ನುಂಟುಮಾಡಿದೆ.

ಮಧುರೆಯ ದೇವಸ್ಥಾನ ಪ್ರವೇಶದ ವಿಷಯದಲ್ಲಿ ತಮ್ಮನ್ನು ಕಾಣಬೇಕೆಂದಿದ್ದ ಮಧುರೆಯ ಸನಾತನ ಪಕ್ಷದ ಒಂದು ಶಿಷ್ಟಮಂಡಲದ ಭೇಟಿಗೆ ಮದ್ರಾಸ್ ಗವರ್ನರರು ಅವಕಾಶ ಕೊಡಲಿಲ್ಲವೆಂದು ಪ್ರಕಟವಾಗಿದೆ.

ಮೈಸೂರು ಕಾಂಗ್ರೆಸ್ ಕೆಲಸಗಾರರಾದ ಶ್ರೀ. ಎಚ್. ಸಿ. ಸಿದ್ದಯ್ಯನವರಿಂದ ಜುಲ್ಮಾನೆ ಹಣ ವಸೂಲ್ಮಾಡಲಿಕ್ಕಾಗಿ ಆತನ ಕಾರನ್ನು ಸರಕಾರದವರು ಜಪ್ತಿ ಮಾಡಿರುವರು. ಅವರು ಸೆರೆಮನೆ ವಾಸವನ್ನನುಭವಿಸುತ್ತಿರುವರು.

ಸೇಲಂನಲ್ಲಿ ತಾ. 6 ರಲ್ಲಿ ಮೂರು ಗಂಟೆಗಳಲ್ಲಿ ಏಳು ಇಂಚು ಮಳೆಯಾಯಿತೆಂದೂ, ಇದರಿಂದ ಬಸ್ಸು ಟ್ರೈನ್‌ಗಳ ವಹಿವಾಟಕ್ಕೆ ತೊಂದರೆಯಾದುದಲ್ಲದೆ ಅನೇಕ ಮನೆ ಮಾರುಗಳು ನಷ್ಟವಾದವೆಂದೂ ತಿಳಿಯಬರುತ್ತದೆ.

ಮದ್ರಾಸಿನ ಪ್ರಧಾನರು ಮಧುರೆಯಲ್ಲಿ ವಿದ್ಯಾರ್ಥಿಗಳದೊಂದು ಸಭೆಯಲ್ಲಿ ಭಾಷಣ ಮಾಡುತ್ತಾ, ವಿದ್ಯಾರ್ಥಿಗಳು ತಮ್ಮ ವಿರಾಮ ಕಾಲದಲ್ಲಿ ನಿರಕ್ಷರಿಗೆ ವಿದ್ಯೆ ಕಲಿಸಬೇಕೆಂದೂ, ಎರಡೇ ತಿಂಗಳಲ್ಲಿ ನಿರಕ್ಷರಿಗೆ ಓದುಬರಹ ಹಿಡಿಯುವಂಥ ಪುಸ್ತಕವೊಂದನ್ನು ತಾವು ಬರೆದಿರುವೆವೆಂದೂ ತಿಳಿಸಿದರು.

ಬೊಂಬಾಯಿಯಲ್ಲಿ ಪಾನನಿರೋಧವು ಜಾರಿಗೆ ಬಂದಿರುವಷ್ಟೆ. ಆದರೆ ಮೇಕ್ ಹೇವ್ಯುಡ್ ಮತ್ತು ಆರ್ಥರ್ ಮುಲ್ಲರ್ ಎಂಬ ಅಮೇರಿಕಾ ಪ್ರಯಾಣಿಕರು ತಮ್ಮೊಡನೆ ವಿದೇಶಿ ಬೀರ್ ಬಾಟ್ಲಿಗಳನ್ನು ಕೊಂಡು ಬೊಂಬಾಯಿಯಲ್ಲಿಳಿದುದಕ್ಕಾಗಿ ಅಲ್ಲಿಯ ಮೇಜಿಸ್ಟ್ರೇಟರು ಅವರಿಗೆ ರೂ. 25 ಮತ್ತು ರೂ 40 ರಂತೆ ಜುಲ್ಮಾನೆ ಮಾಡಿರುವರು.

ರಾಜಕೋಟೆಯಲ್ಲಿ ಮಹಾತ್ಮರ 71 ನೇ ವರ್ಷ ವರ್ಧಂತಿಯ ಸಂಬಂಧ 70 ದಿನಗಳ ನೂಲಿನ ಯಜ್ಞವೊಂದು ಆರಂಭವಾಗಿದೆ.



ಈ ಯಜ್ಞ ಅಲ್ಲಿನ ರಾಷ್ಟ್ರೀಯ ಶಾಲೆಯಲ್ಲಿ ನಡೆಯುತ್ತಿದೆ. ಪಂಡಿತ ಜವಾಹರಲಾಲರೇ ಆಯೋಗಿ ಇವಕ್ಕೆ ನೂಲಿನೆಯ ಪಂಕ್ತಿಗೆ ಕಳುಹಿಸಲಿದ್ದಾರೆ.

ತಿರುಪತಿ ಬೆಟ್ಟವನ್ನು ಹತ್ತಿ ಅಲ್ಲಿರುವ ದೇವಾಲಯಗಳಲ್ಲಿ ಹರಿಜನರು ಪೂಜಿಸಲು ಅವಕಾಶ ಕೊಡಬೇಕೆಂದು ಹರಿಜನ ಸೋದ್ಧಾರಕರೊಬ್ಬರು ಆ ದೇವಸ್ಥಾನದ ಆಡಳಿತಾಧಿಕಾರಿಯನ್ನು ಪ್ರಾರ್ಥಿಸಿದ್ದರು. ಆ ದೇವಸ್ಥಾನದ ಕಮೀಷನರು, ಹರಿಜನರು ತಿರುಪತಿ ಬೆಟ್ಟವನ್ನು ಹತ್ತಿ ಬಂದು ದೇವರ ದರ್ಶನ ಮಾಡುವುದು ಪೂರ್ವಪದ್ಧತಿಗೆ ವಿರೋಧವಾಗಿರುವದರಿಂದ ತಾವು ಅನುಮತಿ ಕೊಡಲಾರೆವೆಂದು ಹೇಳಿರುವರು.

ಹಿಂದೂಸ್ಥಾನದ ಆದ್ಯಂತದಲ್ಲೂ ಇರುವ ದೇಶೀಯ ಸಂಸ್ಥಾನಗಳ ವಿಷಯದಲ್ಲಿ ನೈಸರಾಯರಿಗಿರುವ ಜವಾಬುದಾರಿಯನ್ನು ಅವರು ನಿರ್ವಹಿಸುವುದಕ್ಕಾಗಿ ಮಧ್ಯಹಿಂದೂಸ್ಥಾನದ ನೀಮಚ್ ಎಂಬಲ್ಲಿ ಇಂಡಿಯಾ ಸರಕಾರದವರು ಸಾರ್ವಭೌಮ ಪೋಲೀಸು ದಳವೆಂಬ ಹೆಸರಿನಿಂದ ಒಂದು ಪೋಲೀಸು ದಳವನ್ನು ಏರ್ಪಡಿಸುವರೆಂದೂ ಅದರ ಖರ್ಚು ವೆಚ್ಚಗಳನ್ನು ವೈಸರಾಯರವರ ಬಜೆಟ್ಟಿನಿಂದ ಒದಗಿಸಲಾಗುವುದೆಂದೂ ಹೇಳಲಾಗಿದೆ.

ಬಂಗಾಳ ಪ್ರಾಂತದಲ್ಲಿ ಹಲವು ಕಡೆ ಅತಿವೃಷ್ಟಿ. ಸೆರೆ ನದಿಗಳಲ್ಲಿ. ಹೂಗ್ಲಿ ನದಿಯಲ್ಲಿ ದೋಣಿ ದಾಟುತ್ತಿದ್ದಾಗ 5 ಮಂದಿ ಮುಳುಗಿ ಸತ್ತರು. ಬರ್ದವಾನ್‌ನಲ್ಲಿ ಬೆಳೆಗಳೆಲ್ಲ ನೀರು ನಿಂತು ಹಾಳಾಗಿವೆ. ದಾಮೋದರ ನದಿಯಲ್ಲಿ ವಿಶೇಷವಾದ ನೆರೆ ಉಕ್ಕುತ್ತಿದೆ. ರಾಜಶಾಹಿಯಲ್ಲಿ ಕಳೆದ 2 ವಾರಗಳಿಂದ ಎಡೆಬಿಡದೆ ಜಡಿ ಮಳೆ. ಟ್ರೈನುಗಳ ಓಡಾಟ ಕೆಲವು ಕಡೆ ವಿಳಂಬವಾಗುತ್ತಿದೆ. ಒಂದೆರಡು ಸೇತುವೆಗಳು ಈ ಪ್ರವಾಹದ ಮಳೆಯ ಗಲಾಟೆಯಲ್ಲಿ ಕುಸಿದುಬಿದ್ದಿವೆ.

ಸಿಂಧೂ ಅಧಿಪತ್ಯದಲ್ಲಿ ಅನಾವೃಷ್ಟಿಯ ದೆಸೆಯಿಂದ ಪ್ರಜೆಗಳಿಗೆ ಅನೇಕ ಕಷ್ಟನಷ್ಟಗಳಾಗಿವೆ. ಪೈರುಪಚ್ಚೆಗಳೊಂದೂ ಬೆಳೆಯದೆ ಹೋಗಿರುವುದರಿಂದ ಕ್ಷಾಮವು ಕಾಲೂರಿದೆಯೆಂದು ಹೇಳಲಾಗಿದೆ. ನೀರಿನ ಅಭಾವದಿಂದ ಜನರ ಕಷ್ಟ ಸಹಿಸಲಸಾಧ್ಯವಾಗಿದೆ. ಅದಕ್ಕಾಗಿ ಅಲ್ಲಿನ ಸರಕಾರದವರು ಅಪೂರ್ವವಾದ ಒಂದು ವಿರ್ಧಾನವನ್ನು ಮಾಡಿರುತ್ತಾರೆ. ಆಗಸ್ಟು ತಾರೀಕು 9ನೇ ಬುಧವಾರ ಆ ಅಧಿಪತ್ಯದ ಅಗ್ರಾಂತರಗಳಲ್ಲೂ ಸಮಸ್ತ ಪ್ರಜೆಗಳೂ ದೇವರನ್ನು ಪ್ರಾರ್ಥಿಸಬೇಕೆಂದು ಅಪ್ಪಣೆ ಹೊರಡಿಸಿ ಆ ದಿನ ಸಮಸ್ತ ಸರಕಾರಿ ಇಲಾಖೆಗಳಿಗೂ ರಜವನ್ನು ಕೊಟ್ಟಿರುತ್ತಾರೆ.

ಬೊಂಬಾಯಿ ಪಾನ ನಿರೋಧ.

ಮುಂಬಾಯಿ ನಗರ ಹಾಗೂ ಅದರ ಸುತ್ತುಮುತ್ತಲಿನ ಜಿಲ್ಲೆಗಳಲ್ಲಿ ಪಾನ ನಿಷೇಧ ಶಾಸನವು ಜಾರಿಯಲ್ಲಿ ಬಂದುದರಿಂದಾಗಿ 400 ಲಕ್ಷ ರೂಪಾಯಿ ಉಳಿತಾಯವನ್ನಬಹುದು. ಈ ಹಣದಲ್ಲಿ ಅಬ್ಕಾರಿ ತೀರ್ವೆ 120 ಲಕ್ಷ ಮಾತ್ರ. ನಗರ ಹಾಗೂ ಸುತ್ತುಮುತ್ತಲಿನ ಸುಮಾರು 150 ಸಾವಿರ ಮಂದಿ ವರ್ಷದಲ್ಲಿ 3,18,800 ಗೆಲನ್ (ಒಂದು ಗೆಲನ್ ಅಂದರೆ ಆರು ಬಾಟ್ಲಿ) ಊರ ಹೆಂಡ (ಕಳ್ಳು), 7,44,962 ಗೆಲನ್ ಬೀರ್, 86,977 ಗೆಲನ್ ಪರದೇಶೀ ಸಾರಾಯಿ, 24,648 ಗೆಲನ್ ವೈನ್ ಇಷ್ಟನ್ನೂ ಉಪಯೋಗಿಸುತ್ತಿದ್ದರು. ಇಷ್ಟಲ್ಲದೆ ಸುಮಾರು 852 ಅಂಗಡಿಗಳ ಲೈಸೆಲ್ಲಿಯಿಂದ ಸರಕಾರಕ್ಕೆ 122 ಲಕ್ಷ ರೂಪಾಯಿ ದೊರೆಯುತ್ತಿತ್ತು. ಇನ್ನು ಲೈಸನ್ಸಿನ ರೀತಿಯಿಂದ ಸರ್ಕಾರಕ್ಕೆ ದೊರೆಯಬಹುದಾದ ಹಣ ಬರೀ 2 ಲಕ್ಷ! ಉಳಿದ ಹಣಕ್ಕಾಗಿ ಸರಕಾರ ವಿವಿಧ ತೆರಿಗೆಗಳನ್ನು ಹೊಂಸುವುದಲ್ಲದೆ ತೀರ್ವೆಯಲ್ಲಿನ ಲಾಗಣಿತ ಹಣವನ್ನೂ ಇದಕ್ಕೆ ವಿನಿಯೋಗಿಸುವುದು.

ಪರರಾಷ್ಟ್ರಗಳ ಪರಿಸ್ಥಿತಿ.

ಸರ್ವಾಧಿಕಾರಿಗಳ ಹಿಂಬಾಲನೆ.

ಇಂದಿನ ಅಂತರ ರಾಷ್ಟ್ರೀಯ ಪರಿಸ್ಥಿತಿ, ಅದರಲ್ಲೂ ರೋಮ್-ಬರ್ಲಿನ್ ಸಖ್ಯದ ಪ್ರತಾಪ, ಜಪಾನ್ ರಷ್ಯಾಗಳ ವ್ಯಕ್ತಿತ್ವ ಇವುಗಳು ಪತ್ರಿಕೆಗಳ ಪುಟಪುಟಗಳನ್ನೇ ಗುತ್ತಿಗೆ ಕೊಂಡಿರುವಾಗ ಪಾಪ, ಫ್ರಾನ್ಸಿನಂತಹ ರಾಷ್ಟ್ರಕ್ಕೆ ಮೂಲೆಯೇ ಗತಿಯಾಗಿದೆ. ಆದರೆ ಪತ್ರಿಕಾ ಪ್ರಪಂಚದಲ್ಲಾಗಲೀ, ಅಂತರರಾಷ್ಟ್ರೀಯ ಆಂದೋಲನದಲ್ಲಾಗಲೀ ಫ್ರಾನ್ಸು ತನ್ನ ವ್ಯಕ್ತಿತ್ವವನ್ನು ಪಡಿಸದಿದ್ದರೂ ಅದು ತನ್ನೊಳಗೆ ತಾನೇ ಸರ್ವಾಧಿಕಾರಿಯಾಗಲೆತ್ನಿಸುತ್ತಿದೆ.

ಫ್ರಾನ್ಸಿನ ಪ್ರಧಾನ ಮಂತ್ರಿ ಡಲಾಡಿಯರ ನೇತೃತ್ವದಲ್ಲಿ ಫ್ರಾನ್ಸು ಪ್ರಜಾಸತ್ತಾತ್ಮಕ ತತ್ವವನ್ನು ಕಡೆಗಣಿಸಿ ಏಕನಾಯಕತ್ವಕ್ಕೆ ಕಾಲಿಕ್ಕುತ್ತಿದೆ. ಇಂದು ಡಲಾಡಿಯರು ತಾನು ಸರ್ವಾಧಿಕಾರಿಯಾಗಿ ಮೆರೆಯಬೇಕೆಂದು ಬಯಸುತ್ತಿರುವಂತೆ ಕಾಣುತ್ತಿದೆ. ಕ್ರಮಪ್ರಕಾರ ಫ್ರೆಂಚ್ ಪಾರ್ಲಿಮೆಂಟಿನ ಚುನಾವಣೆ 1940 ರಲ್ಲಿ ನಡೆಯಬೇಕಿತ್ತು. ಆದರೆ ಚುನಾವಣೆ ನಡೆದರೆ ತನ್ನ ಅಧಿಕಾರದ ಅಡಿಪಾಯ ಮುರಿದು ಬೀಳಬಹುದೆಂಬ ಸಂದೇಹದಿಂದ ಡಲಾಡಿಯರು ಮುಸಲತ್ತು ಮಾಡಿ ಸದ್ಯದ ಏರ್ಪಾಡೇ ಮುನ್ನಡೆಯುವಂತೆ ಮಾಡಿರುವರು. ಡಲಾಡಿಯರರು ತಮ್ಮ ಅಧಿಕಾರವನ್ನು ಉಳಿಸಲು ಈ ಫ್ಯಾಸಿಸ್ಟ್ ನೀತಿಯನ್ನನುಸರಿಸಿರುವದು ಸರ್ವಾಧಿಕಾರತ್ವದ ಪೂರ್ವ ಪೀಠಿಕೆಯೆಂದೆನ್ನಬಹುದು. ಅಲ್ಲದೆ ದೇಶದಲ್ಲಿ ಸಂತಾನವೃದ್ಧಿಯಾಗಬೇಕೆಂದು ಪ್ರೋತ್ಸಾಹಿಸುತ್ತಿರುವ ಹಿಟ್ಲರ ಮುಸಲೋನಿಗಳ ಸೋಂಕುರೋಗವು ಇವರಿಗೂ ತಗಲಿದೆ. ಆದ್ದರಿಂದಲೇ 'ಫ್ರೆಂಚ್ ಫೇಮಿಲೀ ಕೋಡ್' ಎಂಬ ಕಾನೂನನ್ನು ತಯಾರಿಸಿರುವರು. ಅದರಂತೆ ಅವಿವಾಹಿತರಿಗೆ ಬ್ರಹ್ಮಚಾರಿಗಳಿಗೆ ತೆರಿಗೆ ಹಾಕಲ್ಪಡುವದು. ಹೆಚ್ಚು ಮಕ್ಕಳನ್ನು ಪಡೆದವರಿಗೆ ಸಮಾಜದಲ್ಲಿ ಒಂದು ಸ್ಥಾನ, ಮತ್ತು ಸರಕಾರದಿಂದ ಒಂದು ಮಾನ. ಹೀಗೆ ಫ್ರಾನ್ಸಿನ ಪ್ರಜಾಸತ್ತಾತ್ಮಕ ರಾಜ್ಯ ಕಾರ್ಯಭಾರವು ಒಂದೊಂದಾಗಿ ಮಾರ್ಪಾಡಾಗಿ ಸರ್ವಾಧಿಕಾರಿಗಳ ಪಥವನ್ನು ಹಿಡಿಯುತ್ತಿದೆ. ಪತ್ರಿಕೆಗಳಲ್ಲಿ ದೊಡ್ಡಕ್ಷರಗಳಿಂದ ಫ್ರಾನ್ಸಿನ ಹೆಸರು ಬರುವ ಕಾಲ ಬರಬಹುದೋ ಎಂಬುದು ನಿರೀಕ್ಷಣೀಯ.

ಡೇನ್ಸಿಗ್.

ಕೆಲವಾರು ವಾರಗಳಿಂದ ಡೇನ್ಸಿಗ್ ಬಂದರವು ಅನೇಕ ರಾಷ್ಟ್ರಗಳ ದೃಷ್ಟಿಯನ್ನು ತನ್ನೆಡೆಗೆ ಸೆಳೆದುಕೊಂಡಿದೆ. ಡೇನ್ಸಿಗ್ ಮತ್ತು ಪೋಲೆಂಡುಗಳೊಳಗೆ ಮನಸ್ತಾಪವು ಹೆಚ್ಚಾಗಹತ್ತಿದೆ. ಪೋಲೆಂಡಿನವರು ಯಾವ ತರದ ತೊಂದರೆಯನ್ನೂ ಎದುರಿಸಲು ಜೀವನದ ಹಂಗು ದೊರೆದು ಸಿದ್ಧರಾಗಿರುವರು. ಕಳೆದ ತಾ. 6 ರಲ್ಲಿ ಪೋಲೆಂಡಿನ ಸೈನ್ಯಾಧಿಕಾರಿಯಾದ ಮಾರ್ಷಲ್ ಸ್ಮಿಗ್ಲಿ ರಿಡ್ಜ್ ಎಂಬವರು ತಮ್ಮ ಭಾಷಣದಲ್ಲಿ ಉಲ್ಲೇಖಿಸಿದ ವಿಚಾರಗಳು ಪೋಲೆಂಡಿನ ಮನವನ್ನು ಬಿಚ್ಚಿ ತೋರಿಸುವದು. 'ನಮಗೆ ಯಾರ ಸ್ವಾತಂತ್ರ್ಯವನ್ನೂ ಹಾಳುಮಾಡುವ ಇಚ್ಛೆಯಿಲ್ಲ. ಆದರೆ ನಮ್ಮ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಯಾವದೇ ರಾಷ್ಟ್ರವನ್ನು ಎದುರಿಸದೆ ಬಿಡಲು ಸಾಧ್ಯವಿಲ್ಲ. ಇಡೀ ಜಗತ್ತಿನಲ್ಲಿ ಇಂದು ಶಾಂತಿ, ಶಾಂತಿ ಎಂಬ ಶಬ್ದವು ದಿಗಂತವನ್ನು ವ್ಯಾಪಿಸಿರಲು ನಾವಾದರೂ ಅಂಥಾ ಶಾಂತಿಯನ್ನು ಮುರಿಯಲೆತ್ನಿಸುವದಲ್ಲ. ಆದರೆ ಅದೇ ಶಾಂತಿಗಾಗಿ ಪೋಲೆಂಡು ತನ್ನ ವ್ಯಕ್ತಿತ್ವವನ್ನು ಕಳಕೊಂಡು ಯಾವ ಪ್ರಬಲರಾಷ್ಟ್ರಕ್ಕೂ ಶರಣು ಹೋಗದು. ಶತಮಾನಗಳಿಂದಲೂ ಪೋಲೆಂಡಿನ ಅಂಕಿತದಲ್ಲಿ ಬಂದು ಇಂದು ಪೋಲೆಂಡು ರಾಷ್ಟ್ರದ ಹೃದಯದಂತಿರುವ ಈ ಡೇನ್ಸಿಗ್ ಬಂದರಿನ ಮೇಲೆ ಕಣ್ಣಿಟ್ಟು ವರ್ತಿಸುವ ಯಾವ ರಾಷ್ಟ್ರವನ್ನೂ ಅದೇ ದೃಷ್ಟಿಯಿಂದ ಎದುರಿಸದಿರೆವು. ಡೇನ್ಸಿಗ್ ಪೋಲೆಂಡಿನದಾಗಿದೆ. ಅದು ಪೋಲೆಂಡಿನದಾಗಿಯೇ ಉಳಿಯಬೇಕು" ಎಂದು ಭಾಷಣ ಮಾಡಿದರು. ಈ ಹುರುಪಿನ ಭಾಷಣದಿಂದ ಅನೇಕ ಚಿಕ್ಕ ರಾಷ್ಟ್ರಗಳಿಗೆ ಒಂದು ಹೊಸ ಕಳೆ ಬಂದಿದೆ. ಪೋಲೆಂಡು ಯಾರನ್ನಾದರೂ ತನ್ನ ಸ್ವಾತಂತ್ರ್ಯಕ್ಕಾಗಿ ಎದುರಿಸಲು ತಯಾರಿದೆ. ಆದರೂ ಶಾಂತಿಯ ದೃಷ್ಟಿಯಿಂದ ಪೋಲೆಂಡಿನ ಸ್ವಾತಂತ್ರ್ಯಕ್ಕೆ ಧಕ್ಕೆ ಬಾರದ ಯಾವ ಸಂಧಾನಕ್ಕೂ ಪೋಲೆಂಡ್ ಒಪ್ಪುವಂತಿದೆ. ಡೇನ್ಸಿಗ್‌ನಲ್ಲಿಯೂ ಈ ಭಾಷಣವು ಪರಿಣಾಮವನ್ನುಂಟುಮಾಡಿದೆ. ಅನೇಕರು ಇದನ್ನು ಖಂಡಿಸಿರುವರು. ಇಲ್ಲಿ ಜರ್ಮನಿ ನಾಝಿಗಳ ಪ್ರಚಾರ ಕಾರ್ಯವು ಭರದಿಂದ ಸಾಗುತ್ತಿದೆ. ನಾಝಿ ಪ್ರಧಾನರಾದ ಹರ್ ಫೇರೆಸ್ಟರ್ ಮತ್ತು ಜಾಸ್ಕಿ ಇವರು ಮುಂದಿನ ವಿಚಾರದ ಬಗ್ಗೆ ಹಿಟ್ಲರನ ಅಭಿಪ್ರಾಯ ತೆಗೆಯಲು ಜರ್ಮನಿಗೆ ಬಂದಿರುವರು. ಈ ಮಧ್ಯೆ ಜರ್ಮನಿಯು ಪೋಲೆಂಡಿಗೆ ಒಂದು ಎಚ್ಚರಿಕೆಯನ್ನಿತ್ತಿದೆ. ಡೇನ್ಸಿಗಿನಲ್ಲಿ ತನ್ನ ಪ್ರತಾಪವನ್ನು ನಡೆಸಿ ಅದನ್ನು ಅಧೋಗತಿಗೆ ಪೋಲೆಂಡಿನ ಸೈನ್ಯವು ತಂದರೆ ಜರ್ಮನರು ತಮ್ಮ ಭದ್ರತೆಯ ದೃಷ್ಟಿಯಿಂದ ಕಾದಾಡಬೇಕಾದೀತು ಎಂದು ಎಚ್ಚರಿಸಿದೆ. ಅಂತು ಪರಿಸ್ಥಿತಿ ವಿಷಮಾವಸ್ಥೆಯಲ್ಲಿದೆ. ಮುಂದೇನಾಗುವದೋ ನೋಡೋಣ.

ಸ್ಪೆಯಿನ್.

ಇಲ್ಲಿಯ ಯಾದವೀ ಕಲಹವು ಕೊನೆಗೊಂಡು ಜನರಲ್ ಫ್ರಾಂಕೋವು ವಿಜಯಿಯಾಗಿ ಬ್ರಿಟನ್ ಹಾಗೂ ಫ್ರಾನ್ಸು ಮೊದಲಾದ ಪ್ರಜಾಸತ್ತಾತ್ಮಕ ರಾಷ್ಟ್ರಗಳಿಂದ ಹೊಗಳಿಸಿಕೊಂಡು ತನ್ನ ರಾಜ್ಯಭಾರ ಕ್ರಮವನ್ನು ಅಲ್ಲಿ ನಿರ್ವಹಿಸಿರುವನು. ಈ ಮಧ್ಯೆ ಸ್ಪೆಯಿನಿನ ಮುಂದಿನ ಅರಸನನ್ನು ಸಿಂಹಾಸನದಲ್ಲಿ ಕುಂದಿರಿಸುವ ಏರ್ಪಾಡುಗಳು ನಡೆದಿವೆ. ಇಟೆಲಿಯಲ್ಲಿ ಹೆಸರಿಗೆ ಅರಸನನ್ನಿಟ್ಟುಕೊಂಡು ಮುಸಲೋನಿಯು ಹೇಗೆ ಸರ್ವಾಧಿಕಾರ ನಡೆಸುತ್ತಿರುವನೋ ತದ್ವತ್ತಾದಿಯಲ್ಲಿ ಜನರಲ್ ಫ್ರಾಂಕೋವು ಇಚ್ಛಿಸಿರುವಂತೆ ತಿಳಿದುಬರುತ್ತಿದೆ. ಈ ಸಂಬಂಧವಾಗಿಯೇ ಫ್ರಾಂಕೋವು ಶೀಘ್ರದಲ್ಲಿಯೇ ಇಟೆಲಿಗೆ ಹೋಗಲಿರುವನು. ಆದರೆ ಇನ್ನೊಂದು ಕಡೆ ಕಳೆದ ಸ್ಪೆಯಿನ್ ಯುದ್ಧದಲ್ಲಿ ತನ್ನ ಕಣ್ಣಿಗೆ ಬಿದ್ದಿರುವ ವ್ಯಕ್ತಿಗಳ ಬಗ್ಗೆ ತನ್ನ ಮುಯ್ಯನ್ನು ತೀರಿಸಿಕೊಳ್ಳುವ ಕಾರ್ಯವನ್ನೂ ಭರದಿಂದ ನಡೆಸುತ್ತಿರುವನು. ಈವರೆಗೆ 59 ಜನರನ್ನು ಕೊಂದು ಹಾಕಲಾಯಿತು. 7 ಜನರ ವಿಚಾರಣೆ ನಡೆಯುತ್ತಿದೆ. ಜನರಲ್ ಫ್ರಾಂಕೋವಿನ ನೇತೃತ್ವದಲ್ಲಿ ಹಾಗೂ ಜರ್ಮನಿ ಇಟೆಲಿಗಳ ಸಹಾಯದಿಂದ ಸ್ಪೆಯಿನೂ ಒಂದು ಸರ್ವಾಧಿಕಾರಿ ರಾಷ್ಟ್ರವಾಗಿದೆ.

ಬ್ರಿಟನ್-ಜಪಾನ್.

ಟಿಯೆನ್‌ಸ್ಟೀನಿನಲ್ಲಿ ನಡೆಯುತ್ತಿರುವ ಘರ್ಷಣೆಯು ಇನ್ನೂ ನಡೆಯುತ್ತಿರುವದು. 'ಇಡೀ ಮುಳುಗಿದವನಿಗೆ ಚಳಿಯಿಲ್ಲ' ಎಂಬ ಗಾದೆಯಂತೆ ಜಪಾನು ಯಾರನ್ನೂ ಲೆಕ್ಕಿಸದೆ ವರ್ತಿಸುತ್ತಿದೆ. ಈ ಮಧ್ಯೆ ಜರ್ಮನ್ ಇಟೆಲಿಗಳೊಡನೆ ತನಗಾದ ಸಖ್ಯದಿಂದ ಅದು ಹದ್ದು ಮೀರಿ ವರ್ತಿಸುತ್ತಿದೆ. ಬ್ರಿಟಿಷರು 'ಮರ್ಜನರ ಸಂಘ, ಅಭಿಮಾನ ಭಂಗ' ಎಂಬಂತೆಯೋ ಎನ್ನುವ ಹಾಗೆ ಜಪಾನರು ಕೊಡುವ ಕಷ್ಟ ಪರಂಪರೆಗಳನ್ನು ಸಹಿಸಿ ದೂರ ಸರಿಯುತ್ತಿದ್ದರೂ ಜಪಾನು ಅದನ್ನು ಬೆನ್ನಟ್ಟುತ್ತಿರುವಂತೆ ಕಾಣುತ್ತದೆ. ತಾ. 6 ರಲ್ಲಿ ಜಪಾನ ವಿಮಾನಿಕರು ಬಂದು ಬ್ರಿಟಿಷರ ನಿವಾಸಸ್ಥಾನಕ್ಕೆ ಬಾಂಬೆಸದರೆಂದೂ ಇದರಿಂದಾಗಿ ಎರಡು ಬ್ರಿಟಿಷರ ಹಡಗುಗಳು ಬೆಂದು ಭಸ್ಮವಾದವೆಂದೂ ತಿಳಿದುಬರುತ್ತದೆ. ಆದರೆ 'ತಾಳಿದವ ಬಾಳ್ಯಾನು' ಎಂಬ ಮಂತ್ರವನ್ನು ಸಿದ್ಧಮಾಡಿಕೊಂಡಿರುವ ಬ್ರಿಟನು ಬರೀ ಬಾಯಿಮಾತಿನಿಂದಲೇ ಜಪಾನಿಗೆ ಹೆದರಿಕೆ ಹಾಕಿದೆ. ಜಪಾನಾದರೂ ಯುದ್ಧಾರಂಭದಂದಲೂ ಇದಕ್ಕೆ ತನ್ನ ಪಶ್ಚಾತ್ತಾಪವನ್ನು ತೋರಿಸುತ್ತಾ ಬಂದಿದೆ. ಬ್ರಿಟನು ಅದರಿಂದ ತೃಪ್ತಿಗೊಂಡಿದೆ. ಬ್ರಿಟನು ಟಿಯೆನ್‌ಸ್ಟೀನಿನ ಪ್ರಕರಣದಿಂದ ಇತ್ತ ಚೈನಾದ ಅತ್ತ ಜಪಾನಿನ ಹೀಗೆ ಇಕ್ಕಡೆಯ ನಂಬಿಕೆಯನ್ನೂ ಕಳಕೊಂಡಿದೆ. ಚೈನಾಕ್ಕೆ ಸಹಾಯ ಮಾಡಕೂಡದೆಂಬ ಜಪಾನರ ಶರತಿಗೆ ಒಪ್ಪಿ ಚೈನೀಯರಿಗೆ ಉಪದ್ರ ಮಾಡಿತು. ಆದರೆ ಈ ಕಾರ್ಯಕ್ರಮದ ಬದಲು ಜಪಾನಿನ ಸಹಾನುಭೂತಿಯನ್ನು ಪಡೆಯುವದರ ಬದಲು ಬಾಂಬಿನ ಹೊಡೆತವನ್ನು ಸ್ವೀಕರಿಸುತ್ತಿದೆ. ಇನ್ನೆಷ್ಟು ದಿನ ಬ್ರಿಟನು ಹೀಗೆ ತನ್ನ ವ್ಯಕ್ತಿತ್ವವನ್ನು ಕಳಕೊಂಡು ಜೀವ ಉಳಿಸಿಕೊಳ್ಳಲು ಪ್ರಯತ್ನಿಸುವದೋ ತಿಳಿಯದು.

ಅಮೇರಿಕಾ.

ಜಪಾನು ಅಮೇರಿಕಾವನ್ನು ಕೆಣಕಿದುದರ ಫಲವಾಗಿ, ಅಮೇರಿಕವು ಇವುಗಳೊಳಗಿನ ವ್ಯಾಪಾರದ ಕರಾರನ್ನೆ ಹರಿದು ಹಾಕಿದೆಯೆಂಬುದು ವಾಚಕರಿಗೆ ತಿಳಿದಿದೆ, ಜಪಾನಾದರೂ ಇದರಿಂದ ಬಹಳ ವ್ಯಸನಕ್ಕೀಡಾಗಿದೆ. ಅಮೇರಿಕವು ಯಾರ ಹಂಗನ್ನು ತೊರೆದು ವರ್ತಿಸುವ ರಾಷ್ಟ್ರ. ಯಾವಾಗಲೂ ಮಾನವಂತರ ಹಾಗೂ ಧೀರರ ಕೆಲಸವೆಂದರೆ ಹಾಗೆ. ಜಗತ್ತಿನಲ್ಲಿ ಮುಖವೆತ್ತಿ ನಡೆಯಬೇಕೆನ್ನುವವರ ನೀತಿ ಹೀಗೆ. ಇದರಿಂದ ಚೀನಾಕ್ಕೆ ವಿಪರೀತ ಸಂತೋಷವಾಗಿದೆ. ಅಮೇರಿಕವು ಮಾಡಿದಂತೆ ಬ್ರಿಟನು ಏಕೆ ವರ್ತಿಸಬಾರದೆಂದು ಕೆಲವು ಬ್ರಿಟನರೇ ಅನ್ನುತ್ತಿರುವರು. ಆದರೆ ಬ್ರಿಟಿಷರು ದುಡುಕುವವರಲ್ಲ. ಅತ್ತ ಜಪಾನಿಗೂ ಸಲಾಂ ಹೊಡೆಯಬೇಕು. ಇತ್ತ ಜರ್ಮನಿ ಇಟೆಲಿಗಳಿಗೂ ದೊಗ್ಗುಗಾಲೂರಿ ಮನ್ನಣೆ ಕೊಡಬೇಕು. ಯಾವ ರಾಷ್ಟ್ರವು ಏನು ಅಪಮಾನ ಮಾಡಿದರೂ ಬ್ರಿಟನಿನ ಒಂದು ಕೂದಲಾದರೂ ಅಲ್ಲಾಡದೆಂಬ ಪ್ರಬಲವಾದ ಆತ್ಮ ವಿಶ್ವಾಸ ಚೇಂಬರ್ಲೇನರಿಗಿರುವದು. ಅಂದ ಮೇಲೆ ಭಯವೆಲ್ಲಿ?

For Immediate SALE.

1. One 12½ H. P. Ruston Crude oil Engine in perfect order.

2. One Flour Mill 10″ plate.

3. One No. 7 Engle barg Rice Huller.

4. One Coffee Mill Complete with accessories.

Price Rs. 2250/-or near offer.

For particulars apply to:-

C. S. Deviaha,
Manager,
Allicutty Estate,
Somwarpet P. O.
4-2 N. Coorg.

ಸುಸಮಯ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ.

ಅಮ್ಮತ್ತಿನಾಡು ಬೈರಂಬಾಡ ಗ್ರಾಮದಲ್ಲಿ ಅಮ್ಮತ್ತಿ-ಮೂರ್ನಾಡು ರಸ್ತೆಯ ಬಳಿ 5ನೇ ಮೈಲಿನಲ್ಲಿ ಇರುವ ಕಾವೇರಿ ಕಾಫಿ ತೋಟ. ಒಟ್ಟು ವಿಸ್ತೀರ್ಣ 225 ಎಕರೆ.

ಸಾಗಿನ ಗದ್ದೆ	17.61	ಎಕರೆ.
ರಬಸ್ಟ ಕಾಫಿ	11	,,
ಅರಾಬಿಕಾ ಕಾಫಿ	10	,,
ಫಸಲಿಗೆ ಬಂದ ಕಿತ್ತಳೆ	5	,,
3 ವರ್ಷ ಪ್ರಾಯದ ಕಿತ್ತಳೆ	3	,,
ಟೀ ತೋಟ	7	,,

ಬಾಕಿ ಜಾಗ ಕಿತ್ತಳೆ, ಕಾಫಿಗೆ ಉಪಯುಕ್ತವಾದದ್ದು. ಹಂಚಿನ ಬಂಗ್ಲೆ, ಲೈನ್, ದನವಿನ ಕೊಟ್ಟಿಗೆ, ಇತ್ಯಾದಿ ಒಳ್ಳೆಯ ಉನ್ನತವಾದ ಆರೋಗ್ಯ ಸ್ಥಳದಲ್ಲಿದೆ. ಹೆಚ್ಚಿನ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿ. ಗೋಪಾಲಸ್ವಾಮಿ ನಾಯುಡು,
ಹೊಸಹಳ್ಳಿ, ಪೊಳ್ಳಿಬೆಟ್ಟ ಪೋಸ್ಟು.
4-2 ಕೊಡಗು.

ಸೆಂಟ್ರಲ್ ಬ್ಯಾಂಕು ಮೀಟಿಂಗು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕಿನ ಡೈರೆಕ್ಟರುಗಳ ಮೀಟಿಂಗು ತಾರೀಕು 29-7-39 ರಲ್ಲು ಬೆಳಿಗೆ 11 ಗಂಟೆಗೆ ಮಡಿಕೇರಿ ಸೆಂಟ್ರಲ್ ಬ್ಯಾಂಕು ಆಫೀಸಿನಲ್ಲಿ ಮ. ರಾ. ಶ್ರೀ. ಪಂದ್ಯಂಡ ಐ. ಬೆಳ್ಯಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಕೆಳಗಿನ ಡೈರೆಕ್ಟರುಗಳು ಹಾಜರಿದ್ದರು. ಮೆ. ಗಳಾದ 1. ಪಿ. ಐ. ಬೆಳ್ಯಪ್ಪನವರು (ಪ್ರೆಸಿಡೆಂಟ್) 2. ರಾ. ಬ. ಪಿ. ದೇವಯ್ಯನವರು (ಟ್ರೆಜರರ್) 3. ಯಂ. ಸಿ. ದೇವಯ್ಯನವರು, 4. ಕೆ. ಕೆ. ಗಣಪತಿಯವರು, 5. ಕೆ. ಯಂ. ಕುರಾಲಪ್ಪನವರು, 6. ಐ. ಪಿ. ಕಾರ್ಯಪ್ಪನವರು, 7. ಕೆ. ಸಿ. ಕರುಂಬೈಯ್ಯನವರು, 8. ಪಿ. ಸಿ. ಕರುಂಬೈಯ್ಯನವರು, 9. ಹೆಚ್. ಯಂ. ಪುಪ್ಪಣ್ಣನವರು, 10. ಎನ್. ಶಂಕರಯ್ಯನವರು, 11. ಎನ್. ಬಿ. ಸೋಮಯ್ಯನವರು ಮತ್ತು (12) ಎಸ್. ಎನ್. ರಾಮಶೆಟ್ಟಿಯವರು (ಗೌರವ ಕಾರ್ಯದರ್ಶಿ.)

ಸಹಕಾರ ಸಂಘಗಳ ರಿಜಿಸ್ಟ್ರಾರವರೂ ಸೀನಿಯರ್ ನಾನ್ ಕ್ರೆಡಿಟ್ ಇನ್ಸ್‌ಪೆಕ್ಟರರೂ ಸಹ ಹಾಜರಿದ್ದರು.

ಈ ಕೆಳಗಿನ ಡೈರೆಕ್ಟರುಗಳು ಗೈರಾಜರಾಗಿದ್ದರು. ಮೆ. ಗಳಾದ 1. ಪಿ. ಜಿ. ಐಯ್ಯಪ್ಪನವರು, 2. ಬಿ. ಪಿ. ಮಾಚೈಯ್ಯನವರು ಮತ್ತು 3. ಯಂ. ಎಸ್. ಸೋಮಯ್ಯನವರು.

1. ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ಒಪ್ಪಲಾಯಿತು.

2. ಸುಪರ್‌ವಿಜನ್ ಬೋರ್ಡಿನ ಕಳೆದ ಮೀಟಿಂಗು ಪ್ರೊಸೀಡಿಂಗ್ಸ್ ಓದಿ ರಿಕಾರ್ಡು ಮಾಡಲಾಯಿತು.

3. ಕಳೆದ ಜೂನ್ ತಿಂಗಳ ಜಮಾ ಮತ್ತು ಖರ್ಚಿನ ಪಟ್ಟಿ ಓದಿ ಮಂಜೂರ್ಮಾಡಲಾಯಿತು.

ಹಿಂದಣ ಶಿಲ್ಕು	19,214	1	4
ಸದರಿ ತಿಂಗಳ ವಸೂಲಿ	32,183	7	8
ಜುಮ್ಲ	51,397	9	0
ಆ ತಿಂಗಳಲ್ಲಿ ಖರ್ಚು	28,870	15	0
ಬಾಕಿ ಶಿಲ್ಕು	22,526	10	0

4 ಒಬ್ಬ ಮಹನೀಯನು ಬ್ಯಾಂಕಿನಲ್ಲಿರುವ ವಾಯಿದೆ ಮುಗಿದ ತನ್ನ ಡಿಪಾಜಿಟ್ಟು ಮೊಬಲಗಿನ ಮತ್ತು ಅದರ ಬಡ್ಡಿಯ ವೈಕಿ ಕೆಲವನ್ನು ಹೊಂದಿಕೊಂಡು ಉಳಿದುದನ್ನು ಪುನಃ ಹೊಸದಾಗಿ ಠೇವಣಾತಿ ಇಡುತ್ತೇನೆಂದು ಬರಕೊಂಡ ಪತ್ರವನ್ನು ಅಂಗೀಕರಿಸಲಾಯಿತು.

5. ಬ್ಯಾಂಕಿನ ಎರಡನೇ ಗುಮಾಸ್ತರ ಬಡ್ತಿಯನ್ನು ತಾ. 1-7-1939 ರಿಂದ ೩ ಡಿಸೆಂಬರ್ ತಿಂಗಳ ಅಂತ್ಯದ ವರೆಗೆ ಕೊಡಬಹುದೆಂತಲೂ, ತದನಂತರ ಅವರಿಗೆ ಬಡ್ತಿ ಕೊಡುವುದು ಮುಂದರಿಸಬೇಕಾದ ಪಕ್ಷ ಸದರಿಯವರು ಡಿಸೆಂಬರ್ ತಿಂಗಳಲ್ಲಿ ನಡೆಗುವ ಮದ್ರಾಸು ಸರ್ಕಾರಿ ಟೆಕ್ನಿಕಲ್ ಪರೀಕ್ಷೆಯಲ್ಲಿ ಈ ಮೊದಲೇ ತೀರ್ಮಾನವಾದ ಮೇರೆ ಲೋವರ್ ಗ್ರೇಡ್ ಬುಕ್ ಕೀಪಿಂಗ್ ಪರೀಕ್ಷೆಯಲ್ಲಿ ಪಾಸಾಗಬೇಕೆಂತಲೂ, ಹಾಗೆ ಸದರಿ ಪರೀಕ್ಷೆಯಲ್ಲಿ ಪಾಸಾಗದಿದ್ದ ಪಕ್ಷ ಈಗ ಕೊಡಲು ತೀರ್ಮಾನವಾದ ಬಡ್ತಿಯನ್ನು ಅವರು ಪಾಸಾಗುವ ವರೆಗೆ ತಾ. 1-1-1940 ರಿಂದ ನಿಲ್ಲಿಸಬೇಕೆಂತಲೂ ತೀರ್ಮಾನವಾಯಿತು.

6. ಸುಪರ್‌ವಿಜನ್ ಬೋರ್ಡಿನ 1939-1940 ನೇ ವರ್ಷದ ಬಜೆಟ್ ಮಂಜೂರ್ಮಾಡಲಾಯಿತು.

7. ತಾರೀಕು 1-12-38 ರಿಂದ 30-6-39 ರ ವರೆಗೆ ಈಗ ಹೊಸದಾಗಿ ಕಟ್ಟಿಸಿ ಕೊಟ್ಟ ರೂಮಿನ ಬಾಬ್ತು ಬ್ಯಾಂಕಿನಿಂದ ಸಲ್ಲಬೇಕಾದ ಬಾಕಿ ಬಾಡಿಗೆ ಮೊಬಲಗು ರೂ. 7-0-0 ನ್ನು ಪಾವತಿ ಮಾಡಬೇಕೆಂದು ಕೊಡಗು ಎಗ್ರಿಕಲ್ಚರಲ್ ಕೋಆಪರೇಟಿವ್ ಇಂಜಿನೀಯರಿಂದ ತಾ. 27-6-39 ರಲ್ಲು ಬಂದ ಪತ್ರವನ್ನು ಓದಲಾಯಿತು.

ಸದರಿ ಮೊಬಲಗನ್ನು ಪಾವತಿ ಮಾಡಿ ಪ್ಲಾಂಟರ್ಸ್ ಸೊಸೈಟಿಯಿಂದ ಅದನ್ನು ವಸೂಲ್ಮಾಡಿಕೊಳ್ಳುವಂತೆ ತೀರ್ಮಾನಿಸಲಾಯಿತು.

8. ಬಾಳಾಜಿ ಸೊಸೈಟಿಯವರು ಬ್ಯಾಂಕಿಗೆ ಕೊಡಬೇಕಾಗ ಪೂರ್ತಿ ಸಾಲಗಳಿಗೆ 8 ಕಂತುಗಳನ್ನು ಕೊಡಬೇಕೆಂದು ಪೊನ್ನಂಪೇಟೆನಾಡು ಯೂನಿಯನ್ ಪ್ರೆಸಿಡೆಂಟರ ಶಿಫಾರಸಿನೊಡನೆ ಕಳುಹಿಸಿದ ಅರ್ಜಿಯನ್ನು ಇನ್ನೂ ಕೆಲವು ದಾಖ್ಲೆಗಳಿಗಾಗಿ ಇನ್ನೊಂದು ಮೀಟಿಂಗಿಗೆ ಮುಂದರಿಸಿದಲಾಯಿತು.

9. ಸಹಕಾರಿ ಇನ್ಸ್‌ಪೆಕ್ಟರ್ ಮೆ. ಕೆ. ಎ. ಸೋಮಯ್ಯನವರು ಬ್ಯಾಂಕಿನ ಅಧೀನದಲ್ಲಿ ಹಲವು ವರ್ಷಗಳ ವರೆಗೆ ಸುಪರ್‌ವೈಜರಾಗಿದ್ದು ಬ್ಯಾಂಕಿನಿಂದ ಪೂರ್ತಿ ಪ್ರತಿಫಲ ಹೊಂದದ್ದರಿಂದಲೂ, ತನಗೆ ಹಕ್ಕಿರುವ ರಜವನ್ನು ಪೂರ್ತಿ ಉಪಯೋಗಿಸದ್ದರಿಂದ ತನಗೆ ಸಿಕ್ಕದ 6 ತಿಂಗಳ ರಜದ ಪೂರ್ತಿ ಸಂಬಳವನ್ನು ಕೊಡಿಸಿಕೊಡಬೇಕೆಂದು ರಿಜಿಸ್ಟ್ರಾರರ ಶಿಫಾರಸಿನೊಡನೆ ಬರಕೊಂಡ ಅರ್ಜಿಯನ್ನು ಓದಲಾಯಿತು.

ಸದರಿಯವರು ಬಹಳ ವರ್ಷಗಳವರೆಗೆ ಸುಪರ್‌ವೈಜರಾಗಿ ತನಗೆ ಸಿಕ್ಕದ್ದ ಪೂರ್ತಿ ಪ್ರಿವಿಲೇಜ್ ರಜವನ್ನು ಉಪಯೋಗಿಸದೆ ಬ್ಯಾಂಕಿನಲ್ಲಿ ಕೆಲಸ ಮಾಡಿರುವುದರಿಂದ ಅವರಿಗೆ ಬೋನಸ್ಸಾಗಿ 125 ರೂಪಾಯಿಗಳನ್ನು ಜನರಲ್ ಬಾಡಿಯವರ ಮಂಜೂರಾತಿ ಮೇರೆ ಕೊಡಬಹುದಾಗಿ ತೀರ್ಮಾನಿಸಲಾಯಿತು.

10. ಕೂಡಿಗೆ ಉತ್ತಮ ಜೀವನ ಸಂಘದಲ್ಲಿ ಮೆಂಬರುಗಳ ಪ್ರಯೋಜನಾರ್ಥವಾಗಿ ರಾತ್ರಿ ಶಾಲೆಗಳನ್ನು ನಡಿಸಲು ಬ್ಯಾಂಕಿನ ಕಾಮನ್ ಗುಡ್ ಫಂಡಿನಿಂದ 30 ರೂಪಾಯಿ ಧನ ಸಹಾಯ ಕೊಡಿಸಬೇಕೆಂದು ಉತ್ತರ ಕೊಡಗು ಸ್ಟೋರ್ಸ್ ಸುಪರ್‌ವೈಜರ್ ಬರಕೊಂಡ ರಿಪೋರ್ಟನ್ನು ಓದಲಾಗಿ, ಸದರಿ ಕಾರ್ಯಕ್ಕೆ ಜನರಲ್ ಬಾಡಿಯವರ ಮಂಜೂರಾತಿ ನಿರೀಕ್ಷಣೆ ಮೇರೆ 15 ರೂಪಾಯಿ ಕೊಡುವಂತೆ ತೀರ್ಮಾನಿಸಲಾಯಿತು.

11. ಸರಕಾರಿ ಉದ್ಯೋಗಸ್ತರುಗಳು ಸಹಕಾರಿ ಸಂಸ್ಥೆಗಳ ಕೆಲಸ ಕಾರ್ಯದಲ್ಲಿ ಭಾಗವಹಿಸುವ ವಿಷಯ ಬ್ಯಾಂಕಿನಿಂದ ಈ ಮೊದಲೇ ಬರೆದುಕೊಂಡ ಮೇರೆ ಕೆಲವು ಬದಲಾವಣೆಗಳಿಂದ ಕೊಡಗು ಚೀಫ್ ಕಮಿಷನರವರ ಸೆಕ್ರೆಟರಿಯವರಿಂದ ಬಂದ ಪತ್ರವನ್ನು ಓದಿ ರಿಕಾರ್ಡು ಮಾಡಲಾಯಿತು.

12. 1938-1939 ನೇ ಸಂವತ್ಸರದಲ್ಲಿ ಬ್ಯಾಂಕಿನ ಪ್ರಕಟಣೆಗಳನ್ನು ಪ್ರಕಟಿಸಿದ್ದಕ್ಕಾಗಿ, 'ಕೊಡಗು' ಪತ್ರಿಕೆಗೆ 75 ರೂಪಾಯಿಯೂ 'ಜನ್ಮಭೂಮಿ' ಪತ್ರಿಕೆಗೆ 60 ರೂಪಾಯಿಯೂ ಕೊಡುವಂತೆ ತೀರ್ಮಾನಿಸಲಾಯಿತು.

13. ಶ್ರೀ. ನಡಿಕೇರಿಯಂಡ ಬಿ. ನಂಜಪ್ಪನವರು ಬ್ಯಾಂಕಿನಲ್ಲಿರುವ ಮಲೆದೇವರ ಡಿಪಾಜಿಟು ಮೊಬಲಗನ್ನು ಕೆಲವು ಗ್ರಾಮಸ್ಥರ ತೀರ್ಮಾನದ ಮೇರೆ ಶ್ರೀ. ರಾ. ಸಾ. ನಡಿಕೇರಿಯಂಡ ಕಾಳಪ್ಪನವರ ಮತ್ತು ಚೊಟ್ಟೆಯಂಡಮ್ಮನ ಅಪ್ಪಚ್ಚಯ್ಯನವರ ಹೆಸರಿನಿಂದ ತನ್ನ ಒಬ್ಬನ ಹೆಸರಿಗೇ ವರ್ಗಾಯಿಸಬೇಕೆಂತ ಬರಕೊಂಡ ಅರ್ಜಿಯನ್ನೂ, ಚೊಟ್ಟೆಯಂಡಮ್ಮನ ಅಪ್ಪಚ್ಚಯ್ಯನವರೂ, ಕೆಲವು ಗ್ರಾಮಸ್ಥರೂ ಮತ್ತು ನಾಡಿನ ಕೆಲವರೂ ಸದರಿ ನಂಜಪ್ಪನವರ ಹೆಸರಿಗೆ ವರ್ಗಾಯಿಸಕೂಡದೆಂತ ಬರಕೊಂಡ ಅರ್ಜಿಯನ್ನು ಆಲೋಚಿಸಲಾಯಿತು.

ಈ ಸಂದರ್ಭ ಡೈರೆಕ್ಟರುಗಳು ತಾ. 25-2-39 ರಲ್ಲು ರೆಸಲ್ಯೂಷನ್ ನಂಬ್ರ 4847 ರ ಮೇರೆ ಮಾಡಿದ ತೀರ್ಮಾನವನ್ನು ಕಾರಣ ಕಂಡು ಬಾರದ್ದರಿಂದ ಪುನರಾಲೋಚಿಸಲಿಕ್ಕಾಗುವುದಿಲ್ಲವೆಂದು ತೀರ್ಮಾನಿಸಲಾಯಿತು.

14 ಔತ್ತಾವ ತನ್ನ ತಂದೆ ಶ್ರೀ. ಕೆ. ಎನ್. ಸುಬ್ರಾಯನವರ ಹೆಸರಿನಲ್ಲಿ ಬ್ಯಾಂಕಿನಲ್ಲಿರುವ ಶೇರು ಮೊಬಲಗನ್ನು ತನ್ನ ಹೆಸರಿಗೆ ವರ್ಗಾಯಿಸಬೇಕೆಂದು ಶ್ರೀ. ಸಿ. ಎಸ್. ನಾರಾಯಣನವರು ಬರಕೊಂಡ ಅರ್ಜಿ ಮೇರೆ ವರ್ಗಾಯಿಸಬಹುದೆಂತ ತೀರ್ಮಾನವಾಯಿತು.

15. ಬ್ಯಾಂಕಿಗೆ ಹಲವು ಸೊಸೈಟಿಗಳಿಂದ ಬರಬೇಕಾದ ವಾಯಿದೆ ಮೀರಿದ ಸಾಲಗಳ ವಿಷಯವಾಗಿಯೂ ಮತ್ತು ಅವರ ವಿಷಯ ಸುಪರ್‌ವೈಜರುಗಳು ಕಳುಹಿಸಿದ ರಿಪೋರ್ಟುಗಳ ವಿಷಯವಾಗಿಯೂ ಆಲೋಚಿಸಲಾಯಿತು.

ಬ್ಯಾಂಕಿಗೆ ಕೊಡಬೇಕಾದ ವಾಯಿದೆ ಮೀರಿದ ಸಾಲಗಳು 500 ರೂಪಾಯಿಗಳಿಗೆ ಮೇಲ್ಪಟ್ಟು 28 ಸಂಘಗಳಿಂದ ಬರಬೇಕಾಗಿರುವುದರಿಂದ ಸದರಿ ಸಂಘಗಳ ಕೆಲಸ ಕಾರ್ಯಗಳು ಅತೃಪ್ತಿಕರವಿದ್ದು ಬ್ಯಾಂಕಿಗೆ ಕೊಡಲಿಕ್ಕಿರುವ ದೊಡ್ಡ ವಾಯಿದೆ ಮೀರಿದ ಸಾಲ ಈ ತಾಹಲ್ ಪಾವತಿ ಮಾಡದ್ದರಿಂದಲೂ ಯಾಕೆ ಅಂಥ ಸಂಘಗಳನ್ನು ಲಿಕ್ವಿಡೇಟ್ ಮಾಡಲು ಶಿಫಾರಸು ಮಾಡಬಾರದೆಂಬದ್ದಕ್ಕೆ ತಕ್ಕ ಸಬಬು ಕೇಳಬೇಕೆಂತ ತೀರ್ಮಾನವಾಯಿತು.

16. ಬ್ಯಾಂಕಿನ ಸಾಲನಿವಾರಣೆ ಬೋರ್ಡಿಗೆ ಒಬ್ಬ ಮಹನೀಯನು ಈ ಮೊದಲೇ ಬರಕೊಂಡ ಅರ್ಜಿಯ ನಕಲನ್ನು ಕೊಡಿಸಬೇಕೆಂದು ಮೆ. ಅಮ್ಮಾಟಂಡ ಕುಟ್ಟಪ್ಪನವರು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

17. ಕ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತ. 29-7-39 ರಿಂದ ತಾತ್ಕಾಲಿಕ ನಿಲ್ಲಿಸಲಾಯಿತು.

18. ಕೆದಮುಳ್ಳೂರು ನಾಡು ಸೊಸೈಟಿಯ ಪ್ರೆಸಿಡೆಂಟರು ಬ್ಯಾಂಕಿಗೆ ಪಾವತಿ ಮಾಡಬೇಕಾದ ವಾಯಿದೆ ಮೀರಿದ ಸಾಲಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ಇನ್ನೊಂದು ಮೀಟಿಂಗಿಗೆ ಇಡಲಾಯಿತು.

19. ಬ್ಯಾಂಕಿನ ಮೆಂಬರುಗಳಾಗಲು ಅರ್ಜಿ ಬರೆದುಕೊಂಡ ಶ್ರೀಮತಿ ಅಪ್ಪಂಗಳದ ಗೌರಮ್ಮನವರನ್ನೂ ಮತ್ತು ಹುದಿಕೇರಿ ಮುಗುಟಗೇರಿ ಸಂಘವನ್ನೂ ಮೆಂಬರುಗಳಾಗಿ ಆರಿಸಿಕೊಳ್ಳಲಾಯಿತು.

20. ವೀರಾಜಪೇಟೆ ಟೌನ್ ಬ್ಯಾಂಕಿನವರು ವಾಯಿದ ಮೀರಿದ ಸುಪರ್‌ವಿಜನ್ ಫೀಜನ್ನು ಇನ್ನೂ ಪಾವತಿ ಮಾಡದ್ದರಿಂದ ಅದನ್ನು ವಸೂಲ್ಮಾಡಲು ತಕ್ಕ ಕ್ರಮ ತೆಗೆದುಕೊಳ್ಳುವಂತೆ ತೀರ್ಮಾನವಾಯಿತು.

21. ಈ ಕೆಳಗಿನ ಸೊಸೈಟಿಗಳಿಗೆ ಅವುಗಳ ಅರ್ಜಿ ಪ್ರಕಾರ ಸಾಲ ಮಂಜೂರಾಯಿತು.

1. ಪಾಲಸೂರು ತ್ಯಾಗತ್ತೂರು ಸೊಸೈಟಿಗೆ ರೂ. 400 2. ಕಿರುಂದಾಡು ಸೊಸೈಟಿಗೆ ರೂ. 500 3. ಹೈಸೊಡ್ಲೂರು ಸೊಸೈಟಿಗೆ ರೂ. 2500 4. ಹೇರ್ಮಾಡು ಸೊಸೈಟಿಗೆ ರೂ. 2000 5. ಕಡಿಯತ್ತೂರು ಸೊಸೈಟಿಗೆ ರೂ. 500 6. ಮತ್ತೂರು ಸೊಸೈಟಿಗೆ ರೂ. 200 7. ಬೆಸಗೂರು ಸೊಸೈಟಿಗೆ ರೂ. 2000 8. ಮತ್ತು ಗೋಣಿಕೊಪ್ಪಲು ಟೌನ್ ಸೊಸೈಟಿಗೆ ರೂ. 1000.

22. ಈ ಕೆಳಗಿನ ಸೊಸೈಟಿಗಳ ಸಾಲದ ಅರ್ಜಿಗಳನ್ನು ಸಂಘದ ವಸೂಲಾತಿಯು ತೃಪ್ತಿಕರವಲ್ಲದ್ದರಿಂದ ತಿರಸ್ಕರಿಸಲಾಯಿತು. 1. ಶ್ರೀಮಂಗಲ ಸೊಸೈಟಿ 2 ಮುಗುಟಗೇರಿ ಸೊಸೈಟಿ ಮತ್ತು 3. ಕೋಣಗೇರಿ ಸೊಸೈಟಿ.

23. ಶಿಟ್ಟೂರು ಸೊಸೈಟಿಯವರು ಬ್ಯಾಂಕಿಗೆ ಮರುಪಾವತಿ ಮಾಡಲಿಕ್ಕಿರುವ ವಾಯಿದೆ ಮೀರಿದ ಸಾಲಕ್ಕೆ ಹೆಚ್ಚಿನ ಸಮಯ ಕೊಡಬೇಕೆಂದು ಬರಕೊಂಡ ಅರ್ಜಿಯನ್ನು ತಿರಸ್ಕರಿಸಲಾಯಿತು.

24. ಬಾವಲಿ ಸಂಘಕ್ಕೆ ತಾರೀಕು 20-5-39 ರಲ್ಲು ಮಂಜೂರಾದ 850 ರೂಪಾಯಿ ಸಾಲದ ಪೈಕಿ ತಾ. 24-6-39 ರಲ್ಲು ಆದ ತೀರ್ಮಾನದ ಮೇರೆ 550 ರೂಪಾಯಿ ಸಾಲ ಮಾತ್ರ ಕೊಟ್ಟದ್ದರಿಂದ ಬಾಕಿರುವ ಮುನ್ನೂರು ರೂಪಾಯಿ ಸಾಲ ಕೊಡಿಸಿಕೊಡಬೇಕೆಂದು ಬರಕೊಂಡ ಅರ್ಜಿ ಮೇರೆ ಬಾಕಿಯಾದ 300 ರೂಪಾಯಿ ಕೊಡಬಹುದೆಂತ ತೀರ್ಮಾನವಾಯಿತು.

ಪಿ. ಐ. ಬೆಳ್ಯಪ್ಪ,
(ಅಧ್ಯಕ್ಷರು.)

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦೦—

ಕೊಡಗಿನ ಭವಿಷ್ಯ.

ಅಯ್ಯಾ,

ಕೊಡಗಿನ ಭವಿಷ್ಯದ ವಿಷಯವಾಗಿ ಅನೇಕಾನೇಕ ರೀತಿಗಳು ಕೊಡಗಿನ ಎರಡು ಪತ್ರಿಕೆಗಳಲ್ಲಿ ಬಂದಿದ್ದನ್ನು ಕೊಡಗಿನ ಸರ್ವರೂ ನೋಡಿರಬಹುದೆಂದು ನನ್ನ ಭಾವನೆ. ಈ ವಿಷಯ ಹೆಚ್ಚು ಪ್ರಾಮುಖ್ಯತೆಗೆ ಬರಲು ನಮ್ಮಲ್ಲಿರುವ ಪರಸ್ಪರ ಮತ್ಸರವೇ ಕಾರಣವಲ್ಲದೆ, ದೇಶೀಯರ ಇರಾದೆಯ ಮೇಲಿಂದಾಗಲೀ, ಯಾ ಸರಕಾರದ ಅಭಿಪ್ರಾಯದ ಮೇಲಿಂದಾಗಲೀ ಅಲ್ಲವೆಂದು ನನಗೆ ಕಾಣುತ್ತೆ. ಕೊಡಗಿನ ಕಾಂಗ್ರೆಸ್ ಪಕ್ಷದ ಮತ್ತು ಅದರಲ್ಲೂ ಕೆಲವು ವ್ಯಕ್ತಿಗಳ ಮೇಲಿರುವ ಅಸೂಯೆಯೇ ಇದಕ್ಕೆ ಮುಖ್ಯ ಕಾರಣವೆಂದು ನನಗೆ ಕಂಡುಬರುತ್ತೆ. ಕೆಲವು ದಿವಸಗಳಿಗೆ ಹಿಂದೆ 'ಜನ್ಮ ಭೂಮಿ' ಪತ್ರಿಕೆಯಲ್ಲಿ ಒಬ್ಬ ಬಾತ್ಮಿದಾರರು 'ಕೊಡಗು' ಪತ್ರಿಕೆಯ ಸಂಪಾದಕರಿಗೆ ಆ ಪತ್ರಿಕೆಯಿಂದ ಪ್ರಾಮುಖ್ಯತೆ ಬಂತೆಂದೂ ಬರೆದಿದ್ದರು. ಅದೇ ತರಹದ ಪ್ರಾಮುಖ್ಯತೆ 'ಲೋಕಪಾವನ' ದ ಸಂಪಾದಕರಾಗಿದ್ದ ಮತ್ತು ಈಗ 'ಜನ್ಮ ಭೂಮಿ' ಪತ್ರಿಕೆಯ ಸಂಪಾದಕರಾಗಿರುವವರಿಗೆ ಆ ಪತ್ರಿಕೆಗಳಿಂದ ಯಾಕೆ ಬಂದಿರುವದಿಲ್ಲ? ಕೊಡಗು ಕಾಂಗ್ರೆಸ್ ಸಂಸ್ಥೆಯಲ್ಲಿ ಕುಂದು ಕೊರತೆಗಳಿದ್ದರೆ, ಸರಿಪಡಿಸುವುದು ದೇಶೀಯರ ಕರ್ತವ್ಯ. ಲೋಕದಲ್ಲಿ ಕುಂದುಕೊರತೆಗಳಿಲ್ಲದ ಸಂಸ್ಥೆಗಳೇ ಇಲ್ಲ. ಮದ್ರಾಸಿನ ಕಾಂಗ್ರೆಸ್ ಮಂತ್ರಿಮಂಡಲದ ಮೇಲೆ ಆರೋಪಣೆಗಳಿಲ್ಲವೆ? ಇಲ್ಲದಿದ್ದರೆ ವಿದ್ಯಾವಂತರೆನಿಸಿಕೊಂಡಿರುವ ಯುವಕರು ದೇಶ ಸೇವೆಯನ್ನು ಕೈಕೊಂಡು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಅದರ ತತ್ವಕ್ಕೆ ಒಪ್ಪಿ, ಈಗಿರುವ ಕೊರತೆಗಳನ್ನು ಹೋಗಲಾಡಿಸಿ ದೇಶದ ಕಲ್ಯಾಣಕ್ಕೆ ಹೋರಾಡಬೇಕು. ಇದರ ಬದಲು ಮನಸ್ತಾಪದ ರೀತಿಗಳಿಂದ ಯಾವ ಪ್ರಯೋಜನವಿಲ್ಲ.

ಪೂರ್ವದಲ್ಲಿ ಕೊಡಗು ನಮ್ಮ ಪೂರ್ವಿಕರ ಪರಸ್ಪರ ಮತ್ಸರದಿಂದ ಮತ್ತು ಪ್ರಾಮುಖ್ಯತೆನಿಸಿಕೊಂಡ ಕೆಲವು ಕುಟುಂಬಸ್ಥರ ತಪ್ಪು ವರ್ತನೆಯಿಂದ ಅರಸರ ಅಪ್ಪಣೆಯಿಂದ ಪರದೇಶೀಯರಾದ ಇಂಗ್ಲೀಷರ ವಶವಾಯಿತು. ಇಂಗ್ಲಿಷ್ ಸರ್ಕಾರದಿಂದ ಅದ ಸೌಕರ್ಯಗಳಿಗೆ ಈಗಿನವರಾದ ನಾವೇ ಸಾಕ್ಷಿಗಳಾಗಿದ್ದೇವೆ. ಈಗಲೂ ಸಹ ಕಾಂಗ್ರೆಸ್ ಕೆಲಸಗಾರರಿಗೆ ಪ್ರಾಮುಖ್ಯತೆ ಬರಬಹುದೆಂಬ ಮತ್ಸರದಿಂದ ದೇಶವನ್ನು ಬೇರೆ ಪ್ರಾಂತ್ಯಕ್ಕೆ ಧಾರೆ ಎರೆಯಬೇಕೆಂಬ ಅಭಿಪ್ರಾಯವು ಕೆಲವರಲ್ಲಿ ಮೂಡಿದೆ. ನಮ್ಮ ಈ ವರ್ತನೆಯನ್ನು ಛತ್ರಪತಿ ಮತ್ತು ಕೇರಳ ದೇಶಪ್ರೇಮಿಗಳ ವರ್ತನೆಗೆ ಹೋಲಿಸಿದರೆ ಬಹಳ ಹಾಸ್ಯಾಸ್ಪದವಾಗಿ ಕಾಣದೆ ಇರಲಿಕ್ಕಿಲ್ಲ. ಈ ಚಳವಳವನ್ನು ನೋಡಿದರೆ ನಮ್ಮ ಮನೆ ಕಾರಬಾರವನ್ನು ಸರಾಗವಾಗಿ ನಡೆಸಿಕೊಂಡು ಹೋಗುವ ಯೋಗ್ಯತೆ ನಮ್ಮಲ್ಲಿಲ್ಲವೆಂದು ನೆರೆಯಲ್ಲಿರುವ ಇನ್ನೊಬ್ಬನ ವಶಕ್ಕೆ ಕೊಟ್ಟಂತಾಗುತ್ತೆ. ಹೀಗೆ ಮಾಡಿದರೆ ನಮ್ಮ ದೇಶದ ಆಡಳಿತ ಕಾರುಬಾರು ಹೇಗೆ ನಡೆದೀತು? ಕೊಟ್ಟವನ ಇಚ್ಛೆಯಂತೆ ನಡೆದೀತೆ? ಅಥವಾ ವಹಿಸಿಕೊಂಡವನ ಹೇಳಿಕೆಯಂತೆ ಇದ್ದೀತೆ? ಬೆಂಗಳೂರಿನ ದಂಡಿನ ಜನರು (ಬೆಂಗಳೂರು ಕಂಟೋನ್‌ಮೆಂಟಿನವರು) ಮೈಸೂರಿಗೆ ಸೇರಿಸುವ ಏರ್ಪಾಡಿಗೆ ಎಷ್ಟರ ಮಟ್ಟಿಗೆ ವಿರೋಧಿಸಿದ್ದಾರೆಂಬುದು ಸರ್ವರಿಗೂ ತಿಳಿದ ಸಂಗತಿ. ಆದುದರಿಂದ ಪ್ರತ್ಯೇಕ ಇರುವಂಥಾ ಅನುಕೂಲತೆ ಇರುವ ನಮ್ಮ ಈ ಪ್ರಾಂತವನ್ನು ಸುಮ್ಮನೆ ಪಲಕೆಲವರ ಮಾತಿಗೆ ಮರುಳಾಗಿ ಕಳಕೊಳ್ಳುವುದು ಬಹಳ ನಾಚಿಕೆಗೇಡಿನ ಸಂಗತಿ.

ಈಗ ಕೊಡಗನ್ನು ಪರರಾಜ್ಯಕ್ಕೆ ಧಾರೆ ಎರೆಯಬೇಕೆಂಬವರ ಕೀರ್ತಿಗೆ ನಮ್ಮ ದೇಶದಲ್ಲಿ ಯಾವ ಒಳ್ಳೇ ಕೆಲಸಗಳು ಮತ್ತು ಸಂಸ್ಥೆಗಳಿವೆ? ಇವರು ಕೈಹಾಕಿದ ಪ್ರತಿ ಸಂಸ್ಥೆಯ ಸ್ಥಿತಿಗತಿಗಳು ಆ ಸಂಸ್ಥೆಗಳಲ್ಲಿರುವ ಜನರಿಗೆ ಗೊತ್ತೇ ವಿನಹ ಬೇರೆಯವರಿಗಿಲ್ಲ. ದೇಶೀಯ ಜವಾಬ್ದಾರಿಕೆಯ ಸಂಸ್ಥೆಗಳನ್ನು ನಿರ್ಭಯವಾಗಿ ನಡಸಲಿಕ್ಕಾಗದವರ ಸಂಖ್ಯೆಯೇ ಇವರಲ್ಲಿ ಹೆಚ್ಚಾಗಿ ಕಂಡುಬರುತ್ತೆ. ಆದುದರಿಂದ ಈ ಮಾದರೀ ಜನರಿಂದ ದೇಶಕ್ಕೆ ಯಾವ ಕಲ್ಯಾಣವಾಗಬಹುದು ? ಸರಿಯಾದ ಯೋಚಿಸಿ ನಡೆಸಿ, ಪರಸ್ಪರ ಅಸೂಯೆಯನ್ನು ಬಿಟ್ಟು ಕೆಲಸ ಮಾಡುವವರಿಗೆ ಜವಾಬ್ದಾರಿಕೆ ಕೊಟ್ಟರೆ ಏಕೆ ನಮ್ಮ ಪ್ರಾಂತವ ಸರಕಾರವನ್ನು ನಡೆಸಿಕೊಂಡು ಹೋಗಲಿಕ್ಕಾಗುವುದಿಲ್ಲ? ನಮ್ಮ ಪೂರ್ವಿಕರು ಮಾಡಿದ ತಪ್ಪಿಗೆ ಈಗಿನವರು ಹೇಗೆ ವ್ಯಸನಪಡುತ್ತೇವೋ ಹಾಗೆಯೇ ಈಗ ನಾವು ತಪ್ಪು ಮಾಡಿದರೆ ನಮ್ಮ ಮುಂದಿನವರು ನಿಮ್ಮನ್ನು ಶಪಿಸದಿರರು. ಆದುದರಿಂದ ಮನಸಿಟ್ಟು ಕೆಲಸ ಮಾಡುವ ಸಂಸ್ಥೆಗೆ ಒತ್ತಾಸೆ ಕೊಡುವುದು ದೇಶೀಯರ ಕರ್ತವ್ಯ. ಸ್ವಾರ್ಥದ ಗುರಿಯನ್ನಿಟ್ಟು ಕೆಲಸ ಮಾಡುವ ಯಾವ ಪಕ್ಷವಾದರೂ ಅದಕ್ಕೆ ನಾವು ಎಡೆಕೊಡಬಾರದು. ಈ ಲೇಖನವನ್ನು ಮುಗಿಸುವ ಮೊದಲು ಕೊನೆಗೊಂದು ಮಾತು ಬರೆಯಬೇಕಾಗಿದೆ. ಏನೆಂದರೆ—ಕಾಂಗ್ರೆಸಿನ ಅಧಿಕಾರ ನಡೆಸುವ ಸಂಸ್ಥೆಯು ಯಾವ ಅಪ್ಪಣೆ ಕೊಡುತ್ತದೋ ಅದನ್ನು ನಾವು ಒಮ್ಮತದಿಂದ ಒಪ್ಪಿಕೊಳ್ಳಬೇಕು. ಆದುದರಿಂದ ದೇಶದವರು ಹಿಂದು ಮುಂದು ನೋಡಿ ಸರಿಯಾಗಿ ವಿಚಾರಿಸುವರಾಗಿ ನಂಬುತ್ತೇನೆ.

ಸಿ. ಯಂ. ಮೇದಯ್ಯ.

ಕೊಡಗು ಮುಜ್ರಾಯಿ ಇಲಾಖೆಯಿಂದ.

ಇಸ್ತಿಹಾರು ನಾಮೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಸನ್ 1892 ನೇ ಇಸವಿ 4 ನೇ ನಂಬರು ರೆಗ್ಯುಲೇಷನ್ ಅನುಸರಿಸಿ ಹಜರತ್ ಚೀಫ್ ಕಮಿಷನರ್ ಸಾಹೇಬರವರು ಮಂಜೂರು ಮಾಡಿದ ಸನ್ 1892 ನೇ ಇಸವಿ ಡಿಸೆಂಬರ್ ತಾರೀಕು 19 ನೇ ನಂಬರು 67 ನೇ ನೋಟಿಫಿಕೇಷನಿನಲ್ಲಿ ನಮೂದಿಸಿರುವ ರೂಲ್ಸ್ ಮೇರೆ ಈ ಕೆಳಗೆ ನಮೂದಿಸಿರುವ ಮೆಂಬರುಗಳ ಕೆಲಸವು ಖಾಲಿಬಿದ್ದಿರುವದರಿಂದ ಬದಲಿಗೆ ಬೇರೆ ಮೆಂಬರುಗಳನ್ನು ಚುನಾಯಿಸಲ್ಪಡುತ್ತೆ:-

ನಂ.	ಯಾರ ಬದಲಿಗೆ	ಮೆಂಬರುಗಳ ಅವಧಿ ಪೂರೈಸಿದ ಯಾ ಪೂರೈಸುವ ತಾರೀಕು	ಮೆಂಬರುಗಳನ್ನು ಚುನಾಯಿಸುವುದಕ್ಕೆ ನಿಷ್ಕರ್ಷೆಯಾಗಿರುವ ಸ್ಥಳ	ತಾರೀಕ	ಘಂಟೆ.
1	ಮ. ಕೆ ವಿ. ವೆಂಕಟಗಿರಿ ರಾವ್ B. A. LL. B.	11—7—39	ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್	6-10-39	ಹ 12ರಿಂದ 5ರ ವರೆಗೆ
2.	ಮ ಪಿ ಜಿ ಮುದ್ದಮ್ಮಯ್ಯನವರು	7—11 19 6	ವೀರಾಜಪೇಟೆ ಮ ಅ ಕೆ ನಂಜಪ್ಪನವರ ಛತ್ರ.	11-11-39	do.

ಪ್ರಸಿದ್ಧ ಪತ್ರಿಕೆ.

ಕೊಡಗು ದೇವಸ್ಥಾನಗಳ ಆಡಳಿತ ಬಗ್ಗೆ ಚೀಫ್ ಕಮಿಷನರ್ ಸಾಹೇಬರವರ ರೆಗ್ಯುಲೇಶನ್ ಮೇರೆ ಮಡಿಕೇರಿ ನಂಜರಾಯಪಟ್ಣ ತಾಲೋಕುಗಳಿಗೆ ನೇಮಕವಾದ ಮೆಂಬರು ಮ. ಕೆ. ವಿ ವೆಂಕಟಗಿರಿರಾವ್, ಬಿ ಎ. ಎಲ್ ಎಲ್. ಬಿ. ಯವರು ಮೆಂಬರುತನದಿಂದ ಬಿಡುಗಡೆಯಾಗಿ ಇವರ ಮೆಂಬರುತನವು ಖಾಲಿ ಬಿದ್ದಿರುವದರಿಂದ ಮತ್ತು ಎಡೆನಾಲ್ಕುನಾಡು ಕಿಗ್ಗಟ್ಟುನಾಡು ತಾಲೋಕುಗಳಿಗೆ ನೇಮಕವಾದ ಮೆಂಬರು ಮ. ಪಿ ಜಿ. ಮುದ್ದಮ್ಮಯ್ಯನವರ ಮೆಂಬರುತನವು ಖಾಲಿ ಬಿದ್ದದ್ದರಿಂದಲೂ ಮೇಲೆ ನಮೂದುಳ್ಳ ಸ್ಥಳದಲ್ಲು ಮೇಲ್ಗಡೆ ನಮೂದಿಸಿರುವ ತಾರೀಕು ಮತ್ತು ಘಂಟೆಗೆ ಸರಿಯಾಗಿ ಅರ್ಜದಾರರ ಪರವಾರಿ ಓಟ್ನು ರಿಕಾರ್ಡು ಮಾಡಿಕೊಳ್ಳತಕ್ಕ ಬಗ್ಗೆ ನೇಮಕಮಾಡಿಕೊಂಡಿರತಕ್ಕ ಟೆಲ್ಲರುಗಳು ಟೆಂಪಲ್ ಕಮಿಟಿ ಮೆಂಬರು ಮ. ಬಿ ಎ. ಕರುಂಬಯ್ಯನವರು ಮತ್ತು ಟೆಂಪಲ್ ಮೇನೇಜರು ಮಡಿಕೇರಿಯಲ್ಲಿಯೂ ಮತ್ತು ಟೆಂಪಲ್ ಕಮಿಟಿ ಮೆಂಬರು ಮ. ಕೆ ಕೆ. ಬೆಳ್ಯಪ್ಪನವರು ಮತ್ತು ಟೆಂಪಲ್ ಮೇನೇಜರು ವೀರರಾಜೇಂದ್ರಪೇಟೆಯಲ್ಲಿಯೂ ಓಟ್ನು ರಿಕಾರ್ಡು ಮಾಡುತ್ತಾರೆ. ಮೆಂಬರಾಗಲು ಖಾಯಿಸ್ ಇರತಕ್ಕವರು ಓಟ್ನು ತೆಗೆಯಲು ನೊಮಿನೇಷನ್ ಮಾಡಿಕೊಂಡಿರುವ ತಾರೀಕಿಗೆ ಮೂರು ದಿನಗಳ ಮುಂಚಾಗಿ ಅವರವರ ಅರ್ಜಿಯನ್ನು ಈ ಕೆಳಗೆ ದಸ್ಕತ್ತು ಮಾಡಿರತಕ್ಕವರಿಗೆ ತಲಪುವಂತೆ ಕಳುಹಿಸತಕ್ಕದ್ದು. ವಾಯಿದೆಯ ನಂತರ ಬರತಕ್ಕ ಅರ್ಜಿಗಳನ್ನು ಅಂಗೀಕರಿಸುವದಿಲ್ಲವಾದ ವಿವರ ಸೂಚಿಸಿದೆ.

ಮಡಿಕೇರಿ, ರಾ. ಬ. ಪಿ. ದೇವಯ್ಯ,

ತಾ 8-8-'39. (ಪ್ರೆಸಿಡೆಂಟ್)

Shorthand, Typing etc.

ಶೊರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ **ಕಡಿಮೆ ಫೀಸಿನಲ್ಲಿ** ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ **ಆಡಿಯಲ್ ಟ್ಯುಟೋರಿಯಲ್ ಸ್ಕೂಲ್** ಇವರಲ್ಲಿ ವಿಚಾರಿಸಿರಿ.

The Manager,
Tutorial School,
Mercara.

52—8

ಕೊಡಂದೇರ ಡಿ. ಮಾಚಯ್ಯ,

L. D. Sc. (COLLEGE OF DENTISTRY)
EX-SUPERVISOR LAXMIBAI PATEL DENTAL HOSPITAL KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ

ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ. 10

ಸುಲಭ ದರ. ನವೀನ ರೀತಿಯ ಚಿಕಿತ್ಸೆ.

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

16 **Ludhiana.**

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ. 2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ. 2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ 2..ಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪೆರೇಡ್, ಬೆಂಗಳೂರು.

52-22

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ!

ಕರ್ಕೀ ಕಂಪನಿಯವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೀ.
ಮತ್ತು ಕಂಪನಿ,
(52-35) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರ ಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿದೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ ಜಿ. ಮುದ್ದಮ್ಮಯ್ಯನವರು.
ಹುದಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ.
ಕೆ ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಬೋಗಪ್ಪನವರು.
ಶಾಪೋಕ್ಲು—ಮೆ. ಚೆಕ್ಕೆಪಂಡ ಯಂ. ಪೂಣಚ್ಚನವರು.
(ಶಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ತೆಗೆದುಕೊಳ್ಳತಕ್ಕದ್ದೆಂದು ಚಂದಾದಾರರಿಗೆ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಕೇರಳ ಆಯುರ್ವೇದಿಕ್
ವೈದ್ಯಶಾಲಾ, ವೀರರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
52-26 ಮೆಡಿಕಲ್ ಪ್ರಾಕ್ಟಿಶನರ್, ವೀರರಾಜಪೇಟೆ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, **ಶೇರು** ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಖಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಚೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಪಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಬಿರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಬಾತ್ಮಿ.

ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾಕರ್ತರು ಜವಾಬ್ದಾರರಲ್ಲ. [ಕೊ. ಸಂ.

—೦೦—

ಕೊಡಗಿನ ಭವಿಷ್ಯ.

ಅಯ್ಯಾ,

ಕೊಡಗಿನ ಭವಿಷ್ಯದ ವಿಷಯವಾಗಿ ಅನೇಕಾನೇಕ ಟೀಕೆಗಳು ಕೊಡಗಿನ ಎರಡು ಪತ್ರಿಕೆಗಳಲ್ಲಿ ಬಂದಿದ್ದನ್ನು ಕೊಡಗಿನ ಸರ್ವರೂ ನೋಡಿರಬಹುದೆಂದು ನನ್ನ ಭಾವನೆ. ಈ ವಿಷಯ ಹೆಚ್ಚು ಪ್ರಾಮುಖ್ಯತೆಗೆ ಬರಲು ನಮ್ಮಲ್ಲಿರುವ ಪರಸ್ಪರ ಮತ್ಸರವೇ ಕಾರಣವಲ್ಲದೆ, ದೇಶೀಯರ ಇರಾದೆಯ ಮೇಲಿಂದಾಗಲೀ, ಯಾ ಸರಕಾರದ ಅಭಿಪ್ರಾಯದ ಮೇಲಿಂದಾಗಲೀ ಅಲ್ಲವೆಂದು ನನಗೆ ಕಾಣುತ್ತೆ. ಕೊಡಗಿನ ಕಾಂಗ್ರೆಸ್ ಪಕ್ಷದ ಮತ್ತು ಅದರಲ್ಲೂ ಕೆಲವು ವ್ಯಕ್ತಿಗಳ ಮೇಲಿರುವ ಅಸೂಯೆಯೇ ಇದಕ್ಕೆ ಮುಖ್ಯ ಕಾರಣವೆಂದು ನನಗೆ ಕಂಡುಬರುತ್ತೆ. ಕೆಲವು ದಿವಸಗಳಿಗೆ ಹಿಂದೆ 'ಜನ್ಮ ಭೂಮಿ' ಪತ್ರಿಕೆಯಲ್ಲಿ ಒಬ್ಬ ಬಾತ್ಮಿದಾರರು 'ಕೊಡಗು' ಪತ್ರಿಕೆಯ ಸಂಪಾದಕರಿಗೆ ಆ ಪತ್ರಿಕೆಯಿಂದ ಪ್ರಾಮುಖ್ಯತೆ ಬಂತೆಂದೂ ಬರೆದಿದ್ದರು. ಅದೇ ತರಹದ ಪ್ರಾಮುಖ್ಯತೆ 'ಲೋಕಪಾವನ'ದ ಸಂಪಾದಕರಾಗಿದ್ದ ಮತ್ತು ಈಗ 'ಜನ್ಮ ಭೂಮಿ' ಪತ್ರಿಕೆಯ ಸಂಪಾದಕರಾಗಿರುವವರಿಗೆ ಆ ಪತ್ರಿಕೆಗಳಿಂದ ಯಾಕೆ ಬಂದಿರುವದಿಲ್ಲ? ಕೊಡಗು ಕಾಂಗ್ರೆಸ್ ಸಂಸ್ಥೆಯಲ್ಲಿ ಕುಂದು ಕೊರತೆಗಳಿದ್ದರೆ, ಸರಿಪಡಿಸುವುದು ದೇಶೀಯರ ಕರ್ತವ್ಯ. ಲೋಕದಲ್ಲಿ ಕುಂದುಕೊರತೆಗಳಿಲ್ಲದ ಸಂಸ್ಥೆಗಳೇ ಇಲ್ಲ. ಮದ್ರಾಸಿನ ಕಾಂಗ್ರೆಸ್ ಮಂತ್ರಿಮಂಡಲದ ಮೇಲೆ ಆರೋಪಣೆಗಳೆಷ್ಟಿಲ್ಲ? ಇಲ್ಲದಿದ್ದರೆ ವಿದ್ಯಾವಂತರೆನಿಸಿಕೊಂಡಿರುವ ಯುವಕರು ದೇಶ ಸೇವೆಯನ್ನು ಕೈಕೊಂಡು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಅದರ ತತ್ವಕ್ಕೆ ಒಪ್ಪಿ, ಈಗಿರುವ ತೊಡಕುಗಳನ್ನು ಹೋಗಲಾಡಿಸಿ ದೇಶದ ಕಲ್ಯಾಣಕ್ಕೆ ಹೋರಾಡಬೇಕು. ಇದರ ಬದಲು ಮನಸ್ತಾಪದ ಟೀಕೆಗಳಿಂದ ಯಾವ ಪ್ರಯೋಜನವಿಲ್ಲ.

ಪೂರ್ವದಲ್ಲಿ ಕೊಡಗು ನಮ್ಮ ಪೂರ್ವಿಕರ ಪರಸ್ಪರ ಮತ್ಸರದಿಂದ ಮತ್ತು ಪ್ರಾಮುಖ್ಯರೆನಿಸಿಕೊಂಡ ಕೆಲವು ಕುಟುಂಬಸ್ಥರ ತಪ್ಪು ವರ್ತನೆಯಿಂದ ಅರಸರ ಆಳ್ವಿಕೆಯಿಂದ ಪರದೇಶೀಯರಾದ ಆಂಗ್ಲೇಯರ ವಶವಾಯಿತು. ಆಂಗ್ಲಾ ಸರ್ಕಾರದಿಂದ ಆದ ಸೌಕರ್ಯಗಳಿಗೆ ಈಗಿನವರಾದ ನಾವೇ ಸಾಕ್ಷಿಗಳಾಗಿದ್ದೇವೆ. ಈಗಲೂ ಸಹ ಕಾಂಗ್ರೆಸ್ ಕೆಲಸಗಾರರಿಗೆ ಪ್ರಾಮುಖ್ಯತೆ ಬರಬಹುದೆಂಬ ಮತ್ಸರದಿಂದ ದೇಶವನ್ನು ಬೇರೆ ಪ್ರಾಂತ್ಯಕ್ಕೆ ಧಾರೆಎರೆಯಬೇಕೆಂಬ ಅಭಿಪ್ರಾಯವು ಕೆಲವರಲ್ಲಿ ಮೂಡಿದೆ. ನಮ್ಮ ಈ ವರ್ತನೆ ಪ್ರೇಮಿಗಳ ವರ್ತನೆಗೆ ಹೋಲಿಸಿದರೆ ಬಹಳ ಹಾಸ್ಯಾಸ್ಪದವಾಗಿ ಕಾಣದೆ ಇರಲಿಕ್ಕಿಲ್ಲ. ಈ ಚಳವಳವನ್ನು ನೋಡಿದರೆ ನಮ್ಮ ಮನೆ ಕಾರಬಾರವನ್ನು ಸರಾಗವಾಗಿ ನಡೆಸಿಕೊಂಡು ಹೋಗುವ ಯೋಗ್ಯತೆ ನಮ್ಮಲ್ಲಿಲ್ಲವೆಂದು ನೆರೆಯಲ್ಲಿರುವ ಇನ್ನೊಬ್ಬನ ವಶಕ್ಕೆ ಕೊಟ್ಟಂತಾಗುತ್ತೆ. ಹೀಗೆ ಮಾಡಿದರೆ ನಮ್ಮ ದೇಶದ ಆಡಳಿತ ಕಾರುಬಾರು ಹೇಗೆ ನಡೆದೀತು? ಕೊಟ್ಟವನ ಇಚ್ಛೆಯಂತೆ ನಡೆದೀತೆ? ಅಥವಾ ವಹಿಸಿಕೊಂಡವನ ಹೇಳಿಕೆಯಂತೆ ಇದ್ದೀತೆ? ಬೆಂಗಳೂರಿನ ದಂಡಿನ ಜನರು (ಬೆಂಗಳೂರು ಕಂಟೋನ್‌ಮೆಂಟಿನವರು) ಮೈಸೂರಿಗೆ ಸೇರಿಸುವ ಏರ್ಪಾಡಿಗೆ ಎಷ್ಟರ ಮಟ್ಟಿಗೆ ವಿರೋಧಿಸಿದ್ದಾರೆಂಬುದು ಸರ್ವರಿಗೂ ತಿಳಿದ ಸಂಗತಿ. ಆದುದರಿಂದ ಪ್ರತ್ಯೇಕ ಇರುವಂಥಾ ಅನುಕೂಲತೆ ಇರುವ ನಮ್ಮ ಈ ಪ್ರಾಂತವನ್ನು ಸುಮ್ಮನೆ ಹಲಕೆಲವರ ಮಾತಿಗೆ ಮರುಳಾಗಿ ಕಳಕೊಳ್ಳುವುದು ಬಹಳ ನಾಚಿಕೆಗೇಡಿನ ಸಂಗತಿ.

ಈಗ ಕೊಡಗನ್ನು ಪರರಾಜ್ಯಕ್ಕೆ ಧಾರೆ ಎರೆಯಬೇಕೆಂಬವರ ಕೀರ್ತಿಗೆ ನಮ್ಮ ದೇಶದಲ್ಲಿ ಯಾವ ಒಳ್ಳೇ ಕೆಲಸಗಳು ಮತ್ತು ಸಂಸ್ಥೆಗಳಿವೆ? ಇವರು ಕೈಹಾಕಿದ ಪ್ರತಿ ಸಂಸ್ಥೆಯ ಸ್ಥಿತಿಗತಿಗಳು ಆ ಸಂಸ್ಥೆಗಳಲ್ಲಿರುವ ಜನರಿಗೆ ಗೊತ್ತೇ ವಿನಹ ಬೇರೆಯವರಿಗಿಲ್ಲ. ದೇಶೀಯ ಜವಾಬ್ದಾರಿಕೆಯ ಸಂಸ್ಥೆಗಳನ್ನು ನಿರ್ಭಯವಾಗಿ ನಡೆಸಲಿಕ್ಕಾಗದವರ ಸಂಖ್ಯೆಯೇ ಇವರಲ್ಲಿ ಹೆಚ್ಚಾಗಿ ಕಂಡುಬರುತ್ತೆ. ಆದುದರಿಂದ ಈ ಮೂವರೇ ಜನರಿಂದ ದೇಶಕ್ಕೆ ಯಾವ ಕಲ್ಯಾಣವಾಗಬಹುದು ? ಸರಿಯಾದ ಮೋತೆ ನಡೆಸಿ, ಪರಸ್ಪರ ಅಸೂಯೆಯನ್ನು ಬಿಟ್ಟು ಕೆಲಸ ಮಾಡುವವರಿಗೆ ಜವಾಬ್ದಾರಿಕೆ ಕೊಟ್ಟರೆ ಏಕೆ ನಮ್ಮ ಪ್ರಾಂತದ ಸರಕಾರವನ್ನು ನಡೆಸಿಕೊಂಡು ಹೋಗಲಿಕ್ಕಾಗುವುದಿಲ್ಲ? ನಮ್ಮ ಪೂರ್ವಿಕರು ಮಾಡಿದ ತಪ್ಪಿಗೆ ಈಗಿನವರು ಹೇಗೆ ವ್ಯಸನಪಡುತ್ತೇವೋ ಹಾಗೆಯೇ ಈಗ ನಾವು ತಪ್ಪು ಮಾಡಿದರೆ ನಮ್ಮ ಮುಂದಿನವರು ನಿಮ್ಮನ್ನು ಶಪಿಸದಿರರು. ಆದುದರಿಂದ ಮನಸಿಟ್ಟು ಕೆಲಸ ಮಾಡುವ ಸಂಸ್ಥೆಗೆ ಒತ್ತಾಸೆ ಕೊಡುವುದು ದೇಶೀಯರ ಕರ್ತವ್ಯ. ಸ್ವಾರ್ಥದ ಗುರಿಯನ್ನಿಟ್ಟು ಕೆಲಸ ಮಾಡುವ ಯಾವ ಪಕ್ಷವಾದರೂ ಅದಕ್ಕೆ ನಾವು ಎಡೆಕೊಡಬಾರದು. ಈ ಲೇಖನವನ್ನು ಮುಗಿಸುವ ಮೊದಲು ಕೊನೆಗೊಂದು ಮಾತು ಬರೆಯಬೇಕಾಗಿದೆ. ಏನೆಂದರೆ–ಕಾಂಗ್ರೆಸಿನ ಅಧಿಕಾರ ನಡೆಸುವ ಸಂಸ್ಥೆಯು ಯಾವ ಅಪ್ಪಣೆ ಕೊಡುತ್ತದೋ ಅದನ್ನು ನಾವು ಒಮ್ಮತದಿಂದ ಒಪ್ಪಿಕೊಳ್ಳಬೇಕು. ಆದುದರಿಂದ ದೇಶದವರು ಹಿಂದು ಮುಂದು ನೋಡಿ ಸರಿಯಾಗಿ ವರ್ತಿಸುವರಾಗಿ ನಂಬುತ್ತೇನೆ.

ಸಿ. ಯಂ. ಮೇದಯ್ಯ.

ಕೊಡಗು ಮುಜ್ರಾಯಿ ಇಲಾಖೆಯಿಂದ.

ಇಸ್ತಿಹಾರುನಾಮೆ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಸನ್ 1892 ನೇ ಇಸವಿ 4 ನೇ ನಂಬರು ರೆಗ್ಯುಲೇಷನ್ ಅನುಸರಿಸಿ ಹಜರತ್ ಚೀಫ್ ಕಮಿಷನರ್ ಸಾಹೇಬರವರು ಮಂಜೂರು ಮಾಡಿದ ಸನ್ 1892 ನೇ ಇಸವಿ ಡಿಸೆಂಬರ್ ತಾರೀಕು 19 ನೇ ನಂಬರು 67 ನೇ ನೋಟಿಫಿಕೇಷನಿನಲ್ಲಿ ನಮೂದಿಸಿರುವ ರೂಲ್ಸ್ ಮೇರೆ ಈ ಕೆಳಗೆ ನಮೂದಿಸಿರುವ ಮೆಂಬರುಗಳ ಕೆಲಸವು ಖಾಲಿಬಿದ್ದಿರುವದರಿಂದ ಬದಲಿಗೆ ಬೇರೆ ಮೆಂಬರುಗಳನ್ನು ಚುನಾಯಿಸಲ್ಪಡುತ್ತೆ:–

ನಂ.	ಯಾರ ಬದಲಿಗೆ	ಮೆಂಬರುಗಳ ಅವಧಿ ಪೂರೈಸಿದ ಯಾ ಪೂರೈಸುವ ತಾರೀಕು.	ಮೆಂಬರುಗಳನ್ನು ಚುನಾಯಿಸುವುದಕ್ಕೆ ನಿಘಂಟು ಮಾಡಿರುವ ಸ್ಥಳ.	ತಾರೀಕ	ಘಂಟೆ.
1	ಮಿ. ಕೆ. ವಿ. ವೆಂಕಟಗಿರಿರಾವ್ B. A. LL. B.	19–7–'39	ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಹಾಲ್	6–10–'39	ಹ. 12ರಿಂದ 5ರ ವರೆಗೆ
2	ಮಿ. ಪಿ. ಜಿ. ಮುದ್ದಮ್ಮಯ್ಯನವರು	7–11–'39	ವೀರಾಜಪೇಟೆ ಮು. ಅ. ಕೆ. ನಂಜಪ್ಪನವರ ಛತ್ರ.	11–11–'39	do.

ಪ್ರಸಿದ್ಧ ಪತ್ರಿಕೆ.

ಕೊಡಗು ದೇವಸ್ಥಾನಗಳ ಆಡಳಿತ ಬಗ್ಗೆ ಚೀಫ್ ಕಮಿಷನರ್ ಸಾಹೇಬರವರ ರೆಗ್ಯುಲೇಶನ್ ಮೇರೆ ಮಡಿಕೇರಿ ನಂಜರಾಯಪಟ್ಣ ತಾಲೋಕುಗಳಿಗೆ ನೇಮಕವಾದ ಮೆಂಬರು ಮಿ. ಕೆ. ವಿ. ವೆಂಕಟಗಿರಿರಾವ್, ಬಿ. ಎ. ಎಲ್. ಎಲ್. ಬಿ. ಯವರು ಮೆಂಬರುತನದಿಂದ ಬಿಡುಗಡೆಯಾಗಿ ಇವರ ಮೆಂಬರುತನವು ಖಾಲಿ ಬಿದ್ದಿರುವದರಿಂದ ಮತ್ತು ಎಡೆನಾಲ್ಕುನಾಡು ಕಿಗ್ಗಟ್ಟುನಾಡು ತಾಲೋಕುಗಳಿಗೆ ನೇಮಕವಾದ ಮೆಂಬರು ಮಿ. ಪಿ. ಜಿ. ಮುದ್ದಮ್ಮಯ್ಯನವರ ಮೆಂಬರುತನವು ಖಾಲಿ ಬಿದ್ದದ್ದರಿಂದಲೂ ಮೇಲೆ ನಮೂದುಳ್ಳ ಸ್ಥಳದಲ್ಲು ಮೇಲ್ಗಡೆ ನಮೂದಿಸಿರುವ ತಾರೀಕು ಮತ್ತು ಘಂಟೆಗೆ ಸರಿಯಾಗಿ ಅರ್ಜಿದಾರರ ಪರವಾರಿ ಓಟ್ಸು ರಿಕಾರ್ಡು ಮಾಡಿಕೊಳ್ಳತಕ್ಕ ಬಗ್ಗೆ ನೇಮಕಮಾಡಿಕೊಂಡಿರತಕ್ಕ ಟೆಲ್ಲರುಗಳು ಟೆಂಪಲ್ ಕಮಿಟಿ ಮೆಂಬರು ಮಿ. ಬಿ. ಐ. ಕರುಂಬಯ್ಯನವರು ಮತ್ತು ಟೆಂಪಲ್ ಮೇನೇಜರು ಮಡಿಕೇರಿಯಲ್ಲಿಯೂ ಮತ್ತು ಟೆಂಪಲ್ ಕಮಿಟಿ ಮೆಂಬರು ಮಿ. ಕೆ. ಕೆ. ಬೆಳ್ಯಪ್ಪನವರು ಮತ್ತು ಟೆಂಪಲ್ ಮೇನೇಜರು ವೀರರಾಜೇಂದ್ರಪೇಟೆಯಲ್ಲಿಯೂ ಓಟ್ಸು ರಿಕಾರ್ಡು ಮಾಡುತ್ತಾರೆ. ಮೆಂಬರಾಗಲು ಖಾಯಿಸ್ ಇರತಕ್ಕವರು ಓಟ್ಸು ತೆಗೆಯಲು ಮೊಖರೂರು ಮಾಡಿಕೊಂಡಿರುವ ತಾರೀಕಿಗೆ ಮೂರು ದಿನಗಳ ಮುಂದಾಗಿ ಅವರವರ ಅರ್ಜಿಯನ್ನು ಈ ಕೆಳಗೆ ದಸ್ಕತ್ತು ಮಾಡಿರತಕ್ಕವರಿಗೆ ತಲಪುವಂತೆ ಕಳುಹಿಸತಕ್ಕದ್ದು. ವಾಯಿದೆಯ ನಂತರ ಬರತಕ್ಕ ಅರ್ಜಿಗಳನ್ನು ಅಂಗೀಕರಿಸುವದಿಲ್ಲವಾದ ವಿವರ ಸೂಚಿಸಿದೆ.

ಮಡಿಕೇರಿ,
ತಾ. 8–8–'39.

ರಾ. ಬ. ಪಿ. ದೇವಯ್ಯ,
(ಪ್ರೆಸಿಡೆಂಟ್.)

Shorthand, Typing etc.

ಶೊರ್ಟ್‌ಹೆಂಡ್, ಟ್ಯಾಪ್‌ರ್ಯಾಟಿಂಗ್ ಮೊದಲಾದ ವಿಷಯಗಳಲ್ಲಿ **ಕಡಿಮೆ ಫೀಸಿನಲ್ಲಿ** ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸು ಸ್ಟೇಂಡಿನ ಬಳಿಯಲ್ಲಿರುವ **ಆೃಡಿಯಲ್ ಟ್ಯುಟೋರಿಯಲ್ ಸ್ಕೂಲ್** ಇವರಲ್ಲಿ ವಿಚಾರಿಸಿರಿ.

The Manager,
Tutorial School,
52—8 **Mercara.**

ಕೊಡಂದೇರ ಡಿ. ಮಾಚಯ್ಯ,
L. D. Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI.
ದಂತ ವೈದ್ಯರು
ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸು ಸ್ಟ್ಯಾಂಡಿನ ಎದುರುಗಡೆ ಇರುವ
DENTAL CLINIC
ನಲ್ಲಿ ವಿಚಾರಿಸಿರಿ. 10
ಸುಲಭ ದರ. **ನವೀನ ರೀತಿಯ ಚಿಕಿತ್ಸೆ.**

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,
Ludhiana.

16

ಬೊಂಬೇ ಮ್ಯೂಚುವಲ್.

1871ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರ... ರೂ. 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಖರಾರುಗಳಿಗೆ ...ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್
ಸೊಸೈಟಿ ಲಿಮಿಟೆಡ್,
12, ಸೌತ್ ಪರೇಡ್, ಬೆಂಗಳೂರು.

52-22

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ್ದ

ಕರ್ಕೆ ಕಂಪನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ, ರಾಮಚಂದ್ರ ಕರ್ಕೆ.
ಮತ್ತು ಕಂಪನಿ,
(52-35) ಗಿರಗಾಂವ, ಮುಂಬಯಿ ೪,

ನೋಟೀಸು.

ಈ ಕೆಳಗಿನ ಮಹನೀಯರು 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಾಗುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ,

ಕೊಡಗಿನ ಎಲ್ಲಾ ಭಾಗಗಳಿಗೆ.
ಮೆ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮೆ. ಮಂಡೇಪಂಡ ಸೋಮಯ್ಯನವರು,
ಮೆ. ಕೆ. ಬಿ. ಸುಬ್ರಾಯನವರು
ಅಮ್ಮತ್ತಿ—ಸಿದ್ದಾಪುರ— ಮೆ. ಐನಂಡ ಮಾದಪ್ಪನವರು.
ಪೊನ್ನಂಪೇಟೆನಾಡು—ಮೆ ಪಿ. ಜಿ ಮುದ್ದಮ್ಮಯ್ಯನವರು.
ಮಡಿಕೇರಿ—ಮೆ. ಅಜ್ಜಮಾಡ ಮಾದಪ್ಪನವರು ಮತ್ತು ಮೆ.
ಜಿ ಮಾದಮ್ಮಯ್ಯನವರು
ಸುಂಟಿಕೊಪ್ಪ—ಮೆ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮೆ ಕೆ ಮೊಗಪ್ಪನವರು.
ನಾಪೋಕ್ಲು—ಮೆ. ಬೆಳ್ಳಿಪಂಡ ಎಂ. ಪೂವಣ್ಣನವರು.
(ನಾಪೋಕ್ಲು ಸ್ಟೋರ್ಸ್)
ಶನಿವಾರಸಂತೆ—ಮೆ. ಎಚ್. ಎಂ. ಪುಟ್ಟಣ್ಣನವರು.

ಸೂಚನೆ.— ಪ್ರಿಂಟಾದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಕೇರಳ ಆಯುರ್ವೇದಿಕ್
ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್ ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇವೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಸಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್)
52-26 ಮೆಡಿಕಲ್ ಪ್ರಾಕ್ಟಿಶನರ್, ವೀರಾಜಪೇಟೆ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿರಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು, ಸಾಲ ಮೂಲದ** ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದ ಸಂಘದ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ಬೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮಾಖರ್ಚು ಸಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್-ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ)
(ಸ್ಥಾಪಿತವಾದದ್ದು 1921ರಲ್ಲಿ)

		ರೂ	ಆ	ಪೈ
ಶೇರ್ ಬಂಡವಾಳ	–	50,000	0	0
ವಸೂಲಾದ ಶೇರ್ ಮೊಬಲಗು	–	46510	0	0
ಜಮೂಬಂದ ಠೇವಣಾತಿ	–	23,4205	8	4
ವಸೂಲಾದ ಕ್ಷೇಮನಿಧಿ	–	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	–	26,719	0	4
ತ್ರಿಪ್ಟ್ ಡಿಪಾಜಿಟ್ಟು	–	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೆ ಹೆಚ್ಚಾಗಿ ಸಾಲ ಕೊಡತಕ್ಕದ್ದು

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರದಲ್ಲಿಯೂ ತಾ 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್‌ಬ್ಯಾಂಕ್ ಲೆಕ್ಕವೂ ಮತ್ತು ತ್ರಿಪ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲಿ ವಿವರವಾಗಿ ಬರೆದು ತಿಳಿಸಲಾಗುವುದು ತ್ರಿಪ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಆಜಮಾಯಿಸಿಕೆ ಮಾಡುತ್ತಾರೆ

ಪ್ರೆಸಿಡೆಂಟ್–ಪಂದ್ಯಂಡ ಐ ಬೆಳ್ಯಪ್ಪನವರು ಎಂ. ಎಲ್ ಸಿ
ಟ್ರೆಜರರ್:—ರಾವ್ ಬಹದ್ದೂರ್ ಪಿ ದೇವಯ್ಯನವರು
ಸೆಕ್ರೆಟರಿ:—ಮೆ ಎಸ್ ಎನ್ ರಾಮಶೆಟ್ಟಿಯವರು

ತಾ 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ	1 ಪುಟಕ್ಕೆ	1 ಕಲಮಿಗೆ	½ ಕಲಮಿಗೆ	¼ ಕಲಮಿಗೆ
1 ವರ್ಷಕ್ಕೆ—	ರೂ 180	ರೂ 55	ರೂ 35.	ರೂ 22
6 ತಿಂಗಳಿಗೆ—	„ 100	„ 35	„ 22	„ 13
3 ತಿಂಗಳಿಗೆ—	„ 60	„ 20	„ 13.	„ 8
1 ತಿಂಗಳಿಗೆ—	„ 25.	„ 10	„ 6.	„ 4

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—
ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವ ವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಹಾವತಿಯಿಂದ ದೃಢಪಡಿಸುವ ಒಂದೇ ದಾರಿ

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ



(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪನಿ.

ಸ್ಥಾಪಿತವಾದ್ದು 1874.] **ಹೆಡ್ ಆಫೀಸು—ಬೊಂಬಾಯಿ.**

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್‌ಸ್ಪೆಕ್ಟರ್.
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರ್ಯಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪರೇಡ್, ಬೆಂಗಳೂರು.

(62-31)

Printed & Published by P. I. Belliappa, at 'Kodagu' Press Mercara for 'Kodagu' Ltd.

Reg No. M. 1590

ನಿಮ್ಮ

ಮುದ್ರಣ ಕೆಲಸಗಳನ್ನು

"ಕೊಡಗು"

ಪ್ರೆಸ್ಸಿನಲ್ಲೇ

ಮುದ್ರಿಸಿರಿ.

ಕೊಡಗು

ಪ್ರತಿಶುಕ್ರವಾರ ಪ್ರಕಟಿಸಲ್ಪಡುವುದು.

ಸಂಪಾದಕ:—ಪಿ. ಐ. ಬೆಳ್ಯಪ್ಪ.

ವಾರ್ಷಿಕ ಚಂದಾ ರೂ. ೩—೮—೦

ತಾ. ೧೮—೮—೧೯೩೯.

ಸಂಪುಟ ೧೯] [ಸಂಚಿಕೆ ೧೨

IN MATTERS OF LOVE

Man does not attract Man.

Woman does not attract Woman.

By nature like things do not attract.

BUT

REMEMBER

MONEY DOES ATTRACT MONEY.

The Canara Banking Corporation, Limited.

(Incorporated In British India)

Estd. 1906.

52-35

1876ನೇ ಇಸವಿಯಿಂದಲೂ ಪ್ರಸಿದ್ಧಿಯಾದ ಔಷಧಿಗಳು.

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. **ಬಾಟ್ಲಿ 1ರ ರೂ. 1—8—0.**

ಸ್ಪ್ಲೀನ್ ಮಿಕ್ಸ್ಚರ್

ದೀರ್ಘಕಾಲದ ಜ್ವರದಿಂದಾಗಲಿ ಯಾ ಇನ್ನಿತರ ಕಾರಣದಿಂದಾಗಲಿ ಉಂಟಾಗುವ ಜ್ವರಗಡ್ಡೆ, ಪಿಲಿಗಾಗ್ಯೆ ಜ್ವರಬರುವಿಕೆ, ಹೊಟ್ಟೆಹಸಿವು ಇಲ್ಲದಿರುವಿಕೆ, ಅಗ್ನಿಮಾಂದ್ಯ, ಪಿತ್ತವಿಕಾರ, ಅಶಕ್ತತೆ, ಮಲಬದ್ಧತೆ, ಮುಂತಾದವುಗಳನ್ನು ಹೋಗಲಾಡಿಸಿ, ಶಕ್ತಿಯನ್ನುಂಟು ಮಾಡುವುದು. **ಬಾಟ್ಲಿ 1ರ ರೂ. 1—[illegible]—0.**

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ, ಎದೆಯಲ್ಲಿ ಗುರುಗುರು ಶಬ್ದ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುವುದು. **ಬಾಟ್ಲಿ 1ರ ರೂ. 0-10-0**

ಮಲೇರಿಯಾ ನಿವಾರಣೆ

ಚಳಿಜ್ವರ, ದಿನ ಬಿಟ್ಟು ಬರುವ ಜ್ವರ, ಚಾತುರ್ಥಿಕ ಜ್ವರ, ಇನ್‌ಫ್ಲುಯೆಂಜಾ, ಕಫಜ್ವರ, ಜ್ವರಗೆಡ್ಡೆ, ಮಲಬದ್ಧತೆ ಇವುಗಳನ್ನೆಲ್ಲ ಹೋಗಲಾಡಿಸುವುದು.

ಬಾಟ್ಲಿ 1ರ ರೂ. 1—8 -0, ಸಣ್ಣ ಬಾಟ್ಲಿ 1ರ ಆಣೆ 13.

☞ ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ಬರೆದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಬಹುದು. ಕೆಟಲಾಗಿಗೆ ಬರೆಯಿರಿ.

ಎಮ್. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಜಿಶಿಯನ್ಸ್, ನಂಬ್ರ 4, ರಥಬೀದಿ, ಮಂಗಳೂರು.

ಔಷಧಿ ಸಿಕ್ಕುವ ಸ್ಥಳ

ಗಣೇಶ ಸುಂದರ ಪ್ರಭು, ಸುಳ್ಯ ಮಂಗಳೂರು ಸ್ಟೋರ್ಸ್, ಮಡಿಕೇರಿ. ಯಂ. ಎಸ್. ಮಾಚಯ್ಯ ಮರ್ಚೆಂಟ್, ಸುಂಟಿಕೊಪ್ಪ. ಬಿ. ಪುಟ್ಟಯ್ಯ ಶೆಟ್ಟಿ ಎಂಡ್ ಸನ್ಸ್, ಸೋಮವಾರಪೇಟೆ. ದಿ ಕೂರ್ಗ ಟೀಚರ್ಸ್ ಕೋ-ಆಪರೇಟಿವ್ ಸ್ಟೋರ್ಸ್, ವೀರಾಜಪೇಟೆ. ಎ. ಎನ್. ಹುಚ್ಚಯ್ಯ ಮರ್ಚೆಂಟ್, ಗೋಣಿಕೊಪ್ಪಲು.

4

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—'ಲಕ್ಷ್ಮೀನಿವಾಸ್' ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚೆನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ನೈಯಕ್ತಿಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು

52-15 The Agricultural & Industrial Bank Ltd

"ZANDU"

ಝಂಡೂರವರ	ಝಂಡೂರವರ
ದ್ರಾಕ್ಷಾಸವ ಮತ್ತು **ಚ್ಯವನಪ್ರಾಶ** ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು. ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.	**ಕೇಸರಿ ಜೀವನ್** ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ. **ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ** ಇದು ರಕ್ತಶೋಧಕ ಮತ್ತು ಸ್ತ್ರೀಸಂಬಂಧದ ಮೇಹ-ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಪ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಥ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು.

ಕೆಟಲಾಗಿಗೆ ಬರೆಯಿರಿ, ಮುಫ್ತತ್ತಾಗಿ ಕಳುಹಿಸಲಾಗುತ್ತೆ.

ಮಡಿಕೇರಿ ಸ್ಟೋಕಿಸ್ಟ್—
ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ. ಎಸ್
(52-46) ಮತ್ತು ಆಯುರ್ವೇದ ವಿದ್ವಾನ್

ವೀರಾಜಪೇಟೆಯ ಏಜೆಂಟರು—ಕೆ ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3⅓ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತಿಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ
ಅಥವಾ
ಎ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ.

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ್ದೆ ಶಾಖೆಗಾದರೂ ಬರೆಯಿರಿ:—

ಆಗ್ರ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀರಾರ್, ಬನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಢಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ನೆಲ್ಲೂರು.

52-32

ಸಾಮಾಜಿಕ ಕಾದಂಬರಿ.

ದೇವದತ್ತ.

೩೧ ಅಧ್ಯಾಯ.

ಚಾರು-(ಬಾಯಿಂದ ಎಳೆದು) ದೊಡ್ಡವರು! ಇನ್ನೂ ನಿಮಗೆ ನಾಚಿಕೆಯಿಲ್ಲವೇ? ನಾನಾಗಿದ್ದರೆ ಅವನ ಸೊಲ್ಲಿಲ್ಲದಂತೆ ಮಾಡಿಬಿಡುತ್ತಿದ್ದೆ. ಮನುಷ್ಯನು ಬದುಕುವುದೇ ಮಾನಕ್ಕಾಗಿ. ಮಾನ ಹೋದ ಮೇಲೆ ಪ್ರಾಣದಿಂದ ತಾನೇ ಪ್ರಯೋಜನವೇನು? ನೀವೇನು ಸಣ್ಣ ಮಕ್ಕಳೇ? ಸಣ್ಣ ಮಕ್ಕಳೂ ಸಹ ಆ ತರಹದ ಮಾತನ್ನು ಸಹಿಸಿ ಸುಮ್ಮನಿರಲಿಕ್ಕಿಲ್ಲ. ಹಿಯ್ಯಾಳಿಸುವುದೆಂದರೆ ಅದಕ್ಕೂ ಒಂದು ಮಿತಿ ಬೇಡವೇ? ಅಷ್ಟು ಜನರ ಎದುರಿನಲ್ಲಿ ಆ ರೀತಿಯಲ್ಲಿ ಅವಮರ್ಯಾದೆ ಮಾಡಿಯೂ ಇನ್ನೂ ದೊಡ್ಡವರೇ? ದೇವರು ಶರೀರವನ್ನು ಕೊಟ್ಟಿರುವುದೇಕೆ? ಅಂತಹ ಅಯೋಗ್ಯರಿಂದ ಹಿಯ್ಯಾಳಿಸಿಕೊಳ್ಳಲಿಕ್ಕೋಸ್ಕರವೇ?

ಕೇಸರಿಪಾಣಿಯ ಮುಖವು ಕೆಂಪೇರಿತು. 'ನೀವು ಹೇಳುವುದೆಲ್ಲ ಸಹಜ. ನನಗೂ ತಡೆಯಲಾರದ ಕೋಪವೂ, ವ್ಯಸನವೂ ಉಂಟಾಗಿದೆ. ಆದರೆ ಮಾಡುವುದೇನು? ಬಡವನೂ, ಸಹಾಯ ಶೂನ್ಯನೂ ಆದ ನನ್ನಿಂದ ಏನು ಮಾಡಲಾಗುವುದು? ಸಿಟ್ಟನ್ನೆಲ್ಲಾ ಅಡಗಿಸಿಕೊಳ್ಳಬೇಕು' ಎಂದನು.

ಚಾರು-ಅದೆಲ್ಲಾ ಬರಿ ಬಾಯಿ ಮಾತು. ನಾಚಿಕೆಯಿಲ್ಲದ ನಿಮಗೆ ಸಿಟ್ಟು! ನಿಜವಾಗಿಯೂ ನಿಮಗೆ ನಾಚಿಕೆಯುಂಟಾಗಿದ್ದಲ್ಲಿ ಆ ನಾಯಿಯನ್ನು ಅಡಗಿಸುವದೊಂದು ಗಹನವೇ? ಪ್ರಾಣ ಹೋದರೂ ಮಾನಗಾರನು ಅಂಥಾ ಸಂಗತಿಗಳನ್ನು ಸಹಿಸಿಕೊಂಡಿರುವನೇ? ನೀವೆಲ್ಲಾ ಮಿಗಿಲು ಬಂಡರು. ನಿಮಗೆಲ್ಲಿಂದ ಬಂದೀತು ನಾಚಿಕೆ?

ಕೇಸರಿಪಾಣಿ-ಖಾವಂದರೇ, ನೀವು ಹಾಗೆ ತಿಳಿಯಬೇಡಿ. ಅವನ ರಕ್ತವನ್ನು ಕುಡಿಯುವಷ್ಟು ಸಿಟ್ಟು ನನಗಿದೆ. ಆದರೇನು? ನಾಳೆ ಏನಾದರೂ ಆದರೆ ನಾನಿದ್ದೇನೆಂದು ಧೈರ್ಯ ಕೊಡುವವರು ಯಾರಾದರೂ ಬೇಡವೇ? ಅಂತಹ ಸಹಾಯಕರಿಲ್ಲದ ಮೇಲೆ ನಮ್ಮ ಸಿಟ್ಟಿನಿಂದ ಪ್ರಯೋಜನವೇನು? ನೀವೇ ಯೋಚಿಸಿ! ಅಷ್ಟು ಜನರ ಪೈಕಿ ಅವರ ಮಾತಿಗೆ ಎದುರಾಗಿ ಮಾತಾಡತಕ್ಕವರು ತಾವೊಬ್ಬರಲ್ಲದೆ ಇನ್ನಾರಾದರೂ ಇದ್ದರೇ? ತಾವೇನೋ ನನ್ನ ಮಾನ ಕಾಪಾಡಿದಿರಿ. ಆದರೆ ತಾವು ಅವರ ಪ್ರಾಣಸಖರು.

ಚಾರು-ಸಖರೋ, ಅಲ್ಲ ಅವರ ಪ್ರಾಣಕ್ಕೆ ಯಮರೋ? ಅದಿರಲಿ, ಆದರೆ ನೀವೆಲ್ಲ ಹೇಡಿಗಳು. ಅಷ್ಟು ಜನರ ಮುಂದೆ ನಿಮ್ಮ ಮರ್ಯಾದೆಯನ್ನುಳಿಸಲು ವಾದ ಮಾಡಿದವರು, ನೀವು ಮತ್ತೊಂದು ಕಾರ್ಯಕ್ಕೆ ಇಳಿದರೆ ಸಹಾಯಕರಾಗಲು ಹಿಂಜರಿಯುವರೇ? ಮುಖ್ಯವಾಗಿ ನಿಮಗೆ ಮನಸ್ಸಿಲ್ಲ.

ಕೇಸರಿಪಾಣಿಯ ಕಣ್ಣುಗಳು ವಿಶಾಲವಾದವು. ಅವನು ಆಶ್ಚರ್ಯಚಕಿತ ಸ್ವರದಿಂದ ಏನು! ಈ ಕಾರ್ಯದಲ್ಲಿ ತಮ್ಮ ಒತ್ತಾಸೆ ಇರುವುದೇ? ತಮಗೂ ಈ ದೇವದತ್ತರಲ್ಲಿ ದ್ವೇಷವಿದೆಯೋ? ನಿರ್ಭಯವಾಗಿ ಸತ್ಯವಾಗಿ ಹೇಳುತ್ತೇನೆ. ನಿಮಗೆ ದೇವದತ್ತನಲ್ಲಿ ದ್ವೇಷವಿಯೆಂಬ ಸಂಗತಿ ನಿಜವಾದರೆ, ಗುಲಾಮನಾದ ನನಗೀಕ್ಷಣ ಅಪ್ಪಣೆ ಕೊಡಿ. ಅವನಲ್ಲದಿದ್ದರೆ ಅವನ ವಂಶವನ್ನೇ ನಿರ್ಮೂಲ ಮಾಡಿಬಿಡುತ್ತೇನೆ. ಏನು ನನ್ನು ಸಾಮಾನ್ಯನೆಂದು ಭಾವಿಸಿರುವಿರಾ! ನನ್ನ ಮಾನಮರ್ಯಾದೆ ಅಲ್ಲಿ ಬಿದ್ದಿರಲಿ. ತಮಗೇನಾದರೂ ಆತನ ಮೇಲೆ ದ್ವೇಷವಿರುವದಾದರೆ ಈಗ ಅಪ್ಪಣೆ ಕೊ[ಡಿ]. ಅಂತಹ ದುರ್ಘಟನೆ ಸಂಭವಿಸಿದಾಗ ನನ್ನ ಮರ್ಯಾದೆಯನ್ನು ಕಾಪಾಡಿದ ನಿಮಗೆ ತಾನೇನು ಮಾಡಿದರೂ ಸಾಲದು. ಅದಕ್ಕೋಸ್ಕರ ನನ್ನ ಪ್ರಾಣವನ್ನು ಕೊಡಲಿಕ್ಕೂ ಸಿದ್ಧನಿದ್ದೇನೆ' ಎಂದು ಗಂಭೀರವಾಗಿ ಹೇಳಿದನು.

ಚಾರು-(ನಕ್ಕು) ನಾಕು ನನಗೇನು ಹೆಚ್ಚಿನ ದ್ವೇಷವಿಲ್ಲ. ಆದರೆ ಈ ಹೊತ್ತು ನಿಮಗೆ ಮಾಡಿದ್ದೇ ನಾಳೆ ನಮಗೆ. ಮಾನವೆಂದರೆ ಎಲ್ಲರಿಗೂ ಒಂದೇ ಅಲ್ಲವೇ? ಸಹಾಯ ಹೀನನಾದ ಒಬ್ಬನನ್ನು ಅಷ್ಟರ ಮಟ್ಟಿಗೆ ಹಿಯ್ಯಾಳಿಸಿದರೆ ಯಾರಿಗೆ ತಾನೇ ಸಿಟ್ಟೂ, ವ್ಯಸನವೂ ಉಂಟಾಗದಿರುವುದು. ಅದರ ಮೇಲೂ ಈಗೀಗ ಆತನ ಅಹಂಕಾರವನ್ನೂ, ದೊಡ್ಡಸ್ತಿಕೆಯನ್ನೂ ತಡೆಯಲಿಕ್ಕೇ ಆಗುವದಿಲ್ಲ. ಅದಕ್ಕೆ ಸರಿಯಾದ ಈ ಕಂಬಳಿ ಗ್ರಾಮಸ್ಥರು. ನನಗೇನೋ ಆತನ ಮುಖವನ್ನೇ ಕಂಡರಾಗುವುದಿಲ್ಲ. ಅಲ್ಲದಿದ್ದರೆ ಅವನದೊಂದು ಜಂಬವೇನು! ಅಲ್ಲ, ಅವನ ತಂದೆ ತಾಯಿಗಳ ಸ್ಥಿತಿಯು ನಮಗೆ ಗೊತ್ತಿಲ್ಲವೇ? ಇವನ ಸ್ಥಿತಿಯು ನಮಗೆ ಗೊತ್ತಿಲ್ಲವೇ? ಅದಾರೋ ಒಬ್ಬರು ಸ್ವಲ್ಪ ಹಣ ಕೊಟ್ಟು ವಿಲಾಯಿತಿಗೆ ಹೋಗಿ ಬಂದುಬಿಟ್ಟನೆಂದರೆ ಇವನ ಅಹಂಕಾರವನ್ನು ತಡೆಯುವವರೇ ಇಲ್ಲ. ನಿಜವಾಗಿಯೂ ಹೇಳುತ್ತೇನೆ-ನನ್ನನೇನಾದರೂ ಅವನು ಹಾಗೆ ಹಿಯ್ಯಾಳಿಸಿದುದಾದರೆ ಅವನ ಸೊಲ್ಲಿಲ್ಲದಂತೆ ಮಾಡಿಬಿಡುತ್ತೇನೆ.

ಕೇಸರಿಪಾಣಿ-ಅದೆಲ್ಲಾ ಮತ್ತಿರಲಿ. ನಿಮಗೆ ಅದು ಸಮ್ಮತವಾದರೆ ನಾಳೆ ಅಲ್ಲ ಇದೇ ರಾತ್ರಿ ಅವನನ್ನು ಪೂರೈಸಿಬಿಡುತ್ತೇನೆ.

ಚಾರು-ಈಗಲ್ಲ, ಹಾಗಲ್ಲ. ಹಾಗೆಲ್ಲಾ ದುಡ್ಡುಕಿ ಕೆಲಸ ಮಾಡುವುದರಿಂದ ಪರಿಣಾಮವು ವಿಪರೀತವಾದೀತು. ಅದಕ್ಕೆಲ್ಲಾ ಸಮಯವಿದೆ. ನೀವು ಮಾತ್ರ ರಹಸ್ಯವನ್ನು ಮನಸ್ಸಿನಲ್ಲೇ ಅತಿ ಗುಪ್ತವಾಗಿ ಇಟ್ಟಿರಿ. ನಾನು ಸಮಯವನ್ನು ಕಾದಿದ್ದು ನಿಮಗೆ ತಿಳಿಸುತ್ತೇನೆ. ಆಗ ಕೆಲಸವನ್ನು ಜರುಗಿಸಬಹುದು. ಅಷ್ಟರೊಳಗೆ ಸಮಾಧಾನದಿಂದ ಕಾದಿರಿ. ಇಷ್ಟೇ ಅಲ್ಲ, ಯಾರಾದರೂ ನಮ್ಮನ್ನು ಸಂಶಯಪಡದ ಹಾಗೆ ನಾವು ನಮ್ಮ ಸ್ನೇಹವನ್ನೂ ಇತರರಿಗೆ ತೋರ್ಪಡಿಸಿಕೊಳ್ಳಬಾರದು. ಮತ್ತು ದೇವದತ್ತನಲ್ಲಿ ನಿಮಗಿರತಕ್ಕ ದ್ವೇಷವನ್ನು ಯಾವ ರೀತಿಯಲ್ಲಿಯೂ, ಕಾಣಿಸಬಾರದು, ನಮ್ಮ ನಡೆನುಡಿಗಳು ಆತನಲ್ಲಿ ನಮಗೆ ಅತ್ಯಂತ ಪ್ರೀತಿಯಿದೆ ಎಂಬ ಭಾವವನ್ನು ಹುಟ್ಟಿಸುವಂತಿರಬೇಕು.

ಕೇಸರಿಪಾಣಿಯು ತಲೆಯಲ್ಲಾಡಿಸಿದನು. ಕಾಲವು ಬಹಳ ಮೀರಿತ್ತು. ಇಬ್ಬರೂ ಎದ್ದು ಊಟಕ್ಕೆ ಕುಳಿತರು. ಊಟವಾದ ಮೇಲೆ ಕೇಸರಿಪಾಣಿಯು ಹೊರಟು ಹೋದನು.

೩೨ ಅಧ್ಯಾಯ.

ಅಪರಾಹ್ನ ಎರಡು ಪ್ರಹರಗಳು ದಾಟಿದ್ದವು. ಬಾಡಿದ ಮುಖದಿಂದ ವ್ಯಸನದ ಚಿನ್ಹೆಗಳನ್ನು ಸೂಚಿಸುತ್ತ ಓರ್ವ ಗೃಹಸ್ಥನು ದೇವದತ್ತನ ಮನೆಗೆ ಬಂದನು. ಇವನ ಉಡುಪುಗಳು ಮಲಿನವಾಗಿದ್ದವು. ಬಿಸಲಿನ ಝಳದಲ್ಲಿ ಬಹು ವೇಗವಾಗಿ ನಡೆದು ಬಂದಿದ್ದನಾದ ಕಾರಣ ಇವನ ಮೈಯೆಲ್ಲಾ ಬೆವರಿನಿಂದ ತೊಯಿದು ಹೋಗಿತ್ತು.

ಗುಣವತಿಯು ಆಗಂತುಕನನ್ನು ಇದಿರುಗೊಂಡು ಸಮೀಪದ ಆಸನದ ಮೇಲೆ ಕುಳ್ಳಿರಲು ಅಪ್ಪಣೆ ಇತ್ತಳು. ಆ ವ್ಯಕ್ತಿಯು 'ಅಮ್ಮಾ! ವೈದ್ಯರು ಮನೆಯಲ್ಲಿರುವರೇ?' ಎಂದು ಬಹು ಧೀನ ಸ್ವರದಿಂದ ಕೇಳಿದನು.

ದೇವದತ್ತನು ಕೆಲಸವಿಲ್ಲದ ಸಮಯಗಳಲ್ಲಿ ಕೆಲವೇಳೆ ಮಲಗಿ ನಿದ್ರಿಸುತ್ತಿದ್ದನು. ಈ ಸಮಯದಲ್ಲೂ ಸುಖನಿದ್ರೆಯಲ್ಲಿದ್ದನು. ಆದರೆ ತಾನು ಮಲಗುವ ಸಮಯದಲ್ಲಿ ಯಾರಾದರೂ ತನ್ನನ್ನು ಕಾಣಲು ಬಂದರೆ ಒಡನೆ ತನ್ನನ್ನು ಎಬ್ಬಿಸಬೇಕೆಂದು ಮೊದಲೇ ಅವನು ಮನೆಯವರಿಗೆ ತಿಳಿಸಿದ್ದನು. ಆದುದರಿಂದ ಗುಣವತಿಯು ಆಗಂತುಕನ ಪ್ರಶ್ನೆಗೆ 'ಇದ್ದಾರೆ ಕರೆಯುತ್ತೇನೆಂ'ದು ಹೇಳಿ ಒಳಗೆ ಹೋಗಿ ಮಗನನ್ನು ಎಬ್ಬಿಸಿದಳು. ದೇವದತ್ತನು ಹೊರಗೆ ಬಂದು ಆಗಂತುಕನನ್ನು ಎದುರುಗೊಂಡನು.

ಆ ವ್ಯಕ್ತಿಯು ಥಟ್ಟನೆ ಎದ್ದು ನಿಂತು ದೇವದತ್ತನನ್ನು ವಂದಿಸಿ ದೀನ ಸ್ವರದಿಂದ 'ಅಯ್ಯಾ ಡಾಕ್ಟರರೇ, ನನ್ನ ಪತ್ನಿಯು ಎರಡು ದಿವಸಗಳಿಂದ ಪ್ರಸವ ವೇದನೆಯಿಂದ ನರಳುತ್ತಿರುವರು. ಅನೇಕ ತರಹದ ನಾಡು ಚಿಕಿತ್ಸೆಗಳಾಯಿತು. ಏನೊಂದು ಪ್ರಯೋಜನವೂ ಆಗಲಿಲ್ಲ. ನಾನು ಬಡವ. ದಯವಿಟ್ಟು ಕಾಪಾಡಬೇಕು. ಅವಳ ಸಂಕಟವನ್ನು ನೋಡಿ ಸಹಿಸಲಾಗುವುದಿಲ್ಲ' ಎಂದು ಕೈಮುಗಿದನು.

'ನಿಮಗೆ ಅವಳ ಕಷ್ಟದಲ್ಲಿ ನಿಜವಾಗಿಯೂ ವ್ಯಸನವಿದ್ದಿದ್ದರೆ ನೀವು ಎರಡು ದಿವಸಗಳ ವರೆಗೆ ಸುಮ್ಮನಿರುತ್ತಿದ್ದೀರೇ? ನರಳುವವರು ಅವರು; ನೋಡುವವರು ನೀವು. ಸುಮ್ಮನೆ ಹೇಳುವುದಕ್ಕೇನು? ನಿಮ್ಮ ಈ ತರಹದ ನಾಡು ಅಜಾಗರೂಕತೆಯನ್ನು ಕಂಡರೇನೇ ನನಗೆ ಕೋಪಬರುವುದು. ಒಡನೆ ಬಂದಿದ್ದಾರಾಗುತ್ತಿರಲಿಲ್ಲವೇ? ಸುಮ್ಮನೆ ಇಲ್ಲದ ಸಲ್ಲದ ರೀತಿಯಲ್ಲಿ ಒಳ್ಳೇ ಸಮಯವನ್ನೆಲ್ಲಾ ಕಳೆದು ಇನ್ನೇನು ಸಾಧ್ಯವಿಲ್ಲವೆಂದು ತೋರಿದ ನಂತರ ವೈದ್ಯರ ಹತ್ತಿರ ಓಡುವುದು. ಆ ಮೇಲೆ ಏನಾದರೂ ಹೆಚ್ಚು ಕಡಿಮೆಯಾದರೆ ಡಾಕ್ಟರನ್ನು ದೂರುವುದು. ಇವರಲ್ಲವೇ ಹಣಬರಹವನ್ನು ಬಯ್ಯುವುದು. ಇನ್ನೆಷ್ಟು ಶತಮಾನಗಳು ಬೇಕೋ ನಿಮ್ಮಂಥವರೆಲ್ಲ ನಿದ್ರೆಯಿಂದ ಎಚ್ಚರವಾಗಲಿಕ್ಕೆ!' ಎಂದು ಹೇಳಿ ಬಟ್ಟೆ ಧರಿಸಲು ಒಳಗೆ ಹೋದರು.

ಆಗಂತುಕನು ಗುಣವತಿಯನ್ನು ಕುರಿತು 'ಮೊದಲೇ ಬರುತ್ತಿದ್ದೆನು. ಆದರೆ ಮಾಡುವುದೇನು? ಬಡವ, ಇಲ್ಲಿಂದ ನನ್ನ ಮನೆಗೆ ಹೆಚ್ಚು ಕಡಿಮೆ ನಾಲ್ಕು ಮೈಲಿ ದೂರವಿದೆ. ವಾಹನಗಳ ಓಡಾಟಕ್ಕೆ ರಸ್ತೆಗಳೇ ಇಲ್ಲ. ವೈದ್ಯರನ್ನು ನನ್ನ ಕಷ್ಟಕೋಸ್ಕರ ಬರಿದೆ ದಣಿಸಬೇಕಲ್ಲ ಎಂದು ಬೇರೆ ಚಿಕಿತ್ಸೆಗಳನ್ನು ಮಾಡಿನೋಡಿದೆನು.' ಎನ್ನುವಷ್ಟರಲ್ಲಿ ದೇವದತ್ತನು ಉಟ್ಟು ಹೊರಗೆ ಬಂದನು. 'ಈಗಲಾದರೂ ಅದು ತಪ್ಪಿತೇ? ಆದುದರಿಂದ ಮೊದಲೇ ಬಂದಿದ್ದರೆ ಗರ್ಭಿಣಿಯ ನರಳುವಿಕೆಯಾದರೂ ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತಿತ್ತು' ಎಂದನು.

ಅಷ್ಟರಲ್ಲಿ ಕಮಲೆಯು ಶಸ್ತ್ರ ವೈದ್ಯದ ಉಪಕರಣಗಳ ಚೀಲವನ್ನು ತಂದು ವೈದ್ಯರ ಕೈಗೆ ಕೊಟ್ಟಳು. ನಾರಾಯಣನು (ಆಗಂತುಕನ ಹೆಸರು) ಆ ಪೆಟ್ಟಿಗೆಯನ್ನು ವೈದ್ಯರ ಕೈಯಿಂದ ತೆಗೆದುಕೊಂಡು ತಾನೇ ಹೊತ್ತುಕೊಂಡನು. ದೇವದತ್ತನು ಆ ರಾತ್ರಿಯೇ ಹಿಂದಿರುಗುವುದಾಗಿ ತಾಯಿಗೂ, ಕಮಲೆಗೂ ಹೇಳಿ ಹೊರಟನು. ಗುಣವತಿಯು ನಾರಾಯಣನನ್ನು ಕುರಿತು, 'ಅಯ್ಯಾ, ಅವರೊಬ್ಬರನ್ನೇ ಬಿಟ್ಟು ಬಿಡಬೇಡ. ಇಲ್ಲಿ ವರೆಗೆ ಅವರನ್ನು ತಂದು ಬಿಟ್ಟು ಬಿಡಬೇಕೆ'ಂದಳು.

ನಾರಾಯಣನು 'ಖಂಡಿತವಾಗಿ ಅವರನ್ನು ಮುಟ್ಟಿಸಿಯೇ ಹೋಗುತ್ತೇನೆ'ಂದು ವಾಗ್ದಾನವಿತ್ತ[ನು].

ದೇವದತ್ತನ ಚಾಕಿಯು ತನಗೆ ದೊರಕಿದ ಸಮಯ ಆನಂದವನ್ನು ನಾನಾ ರೀತಿಯಲ್ಲಿ ತೋರ್ಪಡಿಸುತ್ತಾ ಮುಂದೆ ನಡೆಯಿತು.

ಸ್ವಲ್ಪ ದೂರ ಹೋಗುವುದರೊಳಗಾಗಿ ಚಾರುವು ಎದುರಾದನು.

ಚಾರು-ಸವಾರಿ ಬಹುದೂರವೇನು?

ದೇವದತ್ತ-ನಾಲ್ಕೈದು ಮೈಲಿ ಇದೆಯಂತೆ. [ರಸ್ತೆ ಇ]ಲ್ಲದಿರುವದ ಕಾರಣ ನಡಕೊಂಡೇ ಹೋಗಬೇಕು.

ಚಾರು-ವಾಪಸು ಯಾವಾಗ?

ದೇವ-ಈ ದಿವಸವೆ, ರಾತ್ರಿ ಎಷ್ಟು ಹೊತ್ತಾದರೂ ಸರಿಯೆ.

ಚಾರು-ಒಬ್ಬನೇ ಹಿಂದಿರುಗುವುದೇನು?

[ಅಪೂರ್ಣ.

—೦—

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕ್ ಲಿಮಿಟೆಡ್.

(ಬ್ರಿಟಿಷ್ ಹಿಂದುಸ್ಥಾನದಲ್ಲಿ ಸ್ಥಾಪಿತವಾದದ್ದು)

ಹೆಡ್ ಆಫೀಸು:—ಲಕ್ಷ್ಮೀನಿವಾಸ್ ಬಿಲ್ಡಿಂಗ್ಸ್, ಕುಂದಾಪುರ, ದ. ಕ.

ಪ್ರಕಟಣೆ.

ಕಡುಕಷ್ಟದಲ್ಲಿ ಸಂಪಾದಿಸಿದ ಹಣವನ್ನು ಠೇವಣಾತಿ ಇಟ್ಟು ಈ ಚಿನ್ನದಂತ ಸುಸಂದರ್ಭವನ್ನು ಉಪಯೋಗಿಸಿಕೊಳ್ಳಿರಿ.

ಅತ್ಯಧಿಕ ಲಾಭ! **ಇಚ್ಛಿಸಿದಾಗ ಹಣ ಹಿಂದಕ್ಕೆ!**

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ

ಶೇಕಡ 5ರ 5 ವರ್ಷಗಳ "ಕೊರೊನೇಶನ್ ಕ್ಯಾಶ್ ಸರ್ಟಿಫಿಕೇಟುಗಳು" ರೂಪಾಯಿ 8, 20, 40, 80; 200, 400 ಮತ್ತು 800 ಗಳ ನಾನಾವರ್ಗದ ಠೇವಣಾತಿಗಳಿಗೆ ಪ್ರತ್ಯೇಕವಾದ ರೂ. 10, 25, 50, 100, 250, 500 ಮತ್ತು 1000 ಗಳು.

ದಯಮಾಡಿ ಕೊಡುವ ತಾರೀಕನ್ನು ಗಮನಿಸಿರಿ. ಹೆಚ್ಚಿನ ಮಾಹಿತಿಯನ್ನು ನಮ್ಮ ಯಾವದಾದರೊಂದು, ಕುಂದಾಪುರ, ಕುಮಟಾ, ಗೋಕರ್ಣ, ಬೈಂದೂರು, ವೀರರಾಜೇಂದ್ರಪೇಟೆ, ಸೋಮವಾರಪೇಟೆ, ಕೋಟೇಶ್ವರ, ಶಿವಮೊಗ್ಗ, ತರೀಕೆರೆ ಮತ್ತು ಕಡೂರು ಶಾಖೆಗಳಿಂದ ತಿಳಿದುಕೊಳ್ಳಬಹುದು

52-15

The Agricultural &
Industrial Bank Ltd

ಝಂಡೂರವರ

ದ್ರಾಕ್ಷಾಸವ
ಮತ್ತು
ಚ್ಯವನಪ್ರಾಶ

ಇದು ಶಕ್ತಿವರ್ಧಕ ಮತ್ತು ಶ್ವಾಸಕೋಶಗಳ ಕಾಯಿಲೆಗಳಿಗೆ ಅತ್ಯುತ್ತಮವಾದದ್ದು ಕ್ಷಯದ ಪ್ರಾರಂಭಾವಸ್ಥೆಯಲ್ಲಿ ದಿವ್ಯವಾದ ಔಷಧ.

"ZANDU"
ಝಂಡೂರವರ

ಕೇಸರಿ ಜೀವನ್

ಇದು ಎಲ್ಲಾ ತರದ ಅಶಕ್ತತೆಗೆ ದಿವ್ಯವಾದ ಔಷಧ

ಝಂಡೂ ಅಯೋಡೈಸ್ಡ್ ಸೇರಸಪರಿಲ್ಲಾ

ಇದು ರಕ್ತಶೋಧಕ ಮತ್ತು ಸ್ತ್ರೀ ಸಂಬಂಧದ ಮೇಹ ವಿಕಾರಗಳಲ್ಲಿ ದಿವ್ಯ ಔಷಧ.

ಝಂಡೂ ಫ್ಲೋಜಿಸ್ಟೈನ್.

ಇದು ನ್ಯುಮೋನಿಯಾ, ಶೋಧ, ಬೆಂಕಿಯಿಂದ ಉಂಟಾದ ಗಾಯ, ವಿದ್ರಧಿ (Boils) ಗಳಲ್ಲಿ ಅತ್ಯುಪಯುಕ್ತವಾದದ್ದು

ಕೆಟಲಾಗಿಗೆ ಬರೆಯಿರಿ, ಮುಫ್ತಾಗಿ ಕಳುಹಿಸಲಾಗುತ್ತೆ

ಮಡಿಕೇರಿ ಸ್ಟೋಕಿಸ್ಟ್—

ಡಾ. ಬಿ. ಕೆ. ನಂಜುಂಡೇಶ್ವರ, ಎಲ್. ಎ ಎಂ ಎಸ್
ಮತ್ತು ಆಯುರ್ವೇದ ವಿದ್ವಾನ್

(52-46)

ವೀರರಾಜಪೇಟೆಯ ಏಜೆಂಟರು—ಕೆ ಕೃಷ್ಣರಾವ್, ವೀರಾಜಪೇಟೆ. (ದ. ಕೊಡಗು.)

'ಕೊಡಗು' ಪತ್ರಿಕೆಗೆ ಚಂದಾದಾರರಾಗಿರಿ!

ದಿ ಜನರಲ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

ಹೆಡ್ ಆಫೀಸು—ಅಜ್ಮೀರ್. ಸ್ಥಾಪಿತವಾದ್ದು 1907.

ಸೇವೆಗೆ, ಸುರಕ್ಷಿತೆಗೆ, ಭದ್ರತೆಗೆ ವಜ್ರಪಂಜರವೆಂದು ಪ್ರತೀತಿಗೊಂಡಿದೆ.

ಹೆಚ್ಚಾದ ಬೋನಸು—ಹೋಲ್ ಲೈಫ್ ವರ್ಷಕ್ಕೆ 22½%. ಎಂಡೋಮೆಂಟ್ ವರ್ಷಕ್ಕೆ 18%.

ನಡೆಯುತ್ತಿರುವ ವಿಮಾ ಉದ್ಯೋಗ 3½ ಕೋಟಿಗೆ ಮಿಕ್ಕಿದೆ.

ಪಾವತಿಯಾದ ವಿಮಾ ಹಣ 52 ಲಕ್ಷಕ್ಕೆ ಮೀರಿದೆ.

ಕಂಪೆನಿಯ ಮೂಲ 92 ಲಕ್ಷಕ್ಕೆ ಮೀರಿದೆ.

ಹೆಚ್ಚಿನ ಮಾಹಿತಿಗೂ, ಏಜೆಂಟರ ಶರತುಗೂ ಕೆಳಗಿನ ವಿಳಾಸಕ್ಕೆ ಬರೆಯಿರಿ—

ಎ. ಎನ್. ಎಸ್. ಅಯ್ಯಂಗಾರ್,
ಬ್ರಾಂಚ್ ಮ್ಯಾನೇಜರ್,
ಚಾಮರಾಜಪೇಟೆ, ಬೆಂಗಳೂರು ಸಿಟಿ.
ಅಥವಾ
ಎಂ. ಸಿ. ನಂಜಪ್ಪ,
ಸ್ಪೆಷಲ್ ಏಜೆಂಟ್, ವೀರರಾಜೇಂದ್ರಪೇಟೆ

ಬ್ರಹ್ಮದತ್ತ, ಬಿ.ಎಸ್‌ಸಿ., ಎಲ್‌ಎಲ್.ಬಿ.ಎಫ್.ಎಸ್.ಎಸ್.(ಲಂಡನ್).
ಜನರಲ್ ಮ್ಯಾನೇಜರ್,
ಅಜ್ಮೀರ್.

ಅಥವಾ ಕೆಳಗಿನ ಯಾವ ಶಾಖೆಗಾದರೂ ಬರೆಯಿರಿ.—

ಆಗ್ರಾ, ಅಲ್ಲಹಾಬಾದ್, ಅಹಮ್ಮದಾಬಾದ್, ಔರಂಗಾಬಾದ್, ಬೊಂಬಾಯಿ, ಬರೈಲಿ, ಬೀಹಾರ್, ಬೆನಾರೀಸ್, ಬಳ್ಳಾರಿ, ಬೆಜವಾಡ, ಕಲ್ಕತ್ತಾ, ಕಾನ್‌ಪುರ, ಡಕ್ಕಾ, ಡೆಲ್ಲಿ, ಹುಬ್ಬಳ್ಳಿ, ಹೈದರಾಬಾದ್, ಇಂದೋರ್, ಜಯಪುರ, ಜಬ್ಬಲ್‌ಪುರ, ಲಾಹೋರ್, ಲಕ್ನೋ, ಮದ್ರಾಸ್, ಮಧುರ, ಪಾಟ್ನಾ, ರಾವಲ್‌ಪಿಂಡಿ, ರಾಜಮಹೇಂದ್ರಿ, ಶಿಲ್ಲಾಂಗ್, ಸಿಕಂದರಾಬಾದ್, ತ್ರಿಚಿನಾಪಳ್ಳಿ ಮತ್ತು ವೆಲ್ಲೂರು.

52-32

ಸಾಮಾಜಿಕ ಕಾದಂಬರಿ.

ದೇವದತ್ತ.

೩೧ ಅಧ್ಯಾಯ.

ಚಾರು-(ಬಾಯಿಂದ ಎಳೆದು) ದೊಡ್ಡವರು! ಇನ್ನೂ ನಿಮಗೆ ನಾಚಿಕೆಯಿಲ್ಲವೇ? ನಾನಾಗಿದ್ದರೆ ಅವನ ಸೊಲ್ಲಿಲ್ಲದಂತೆ ಮಾಡಿಬಿಡುತ್ತಿದ್ದೆ. ಮನುಷ್ಯನು ಬದಕುವುದೇ ಮಾನಕ್ಕಾಗಿ. ಮಾನ ಹೋದ ಮೇಲೆ ಪ್ರಾಣದಿಂದ ತಾನೇ ಪ್ರಯೋಜನವೇನು? ನೀವೇನು ಸಣ್ಣ ಮಕ್ಕಳೇ? ಸಣ್ಣ ಮಕ್ಕಳೂ ಸಹ ಆ ತರಹದ ಮಾತನ್ನು ಸಹಿಸಿ ಸುಮ್ಮನಿರಲಿಕ್ಕಿಲ್ಲ. ಹಿಯ್ಯಾಳಿಸುವುದೆಂದರೆ ಅದಕ್ಕೂ ಒಂದು ಮಿತಿ ಬೇಡವೇ? ಅಷ್ಟು ಜನರ ಎದುರಿನಲ್ಲಿ ಆ ರೀತಿಯಲ್ಲಿ ಅಪಮರ್ಯಾದೆ ಮಾಡಿಯೂ ಇನ್ನೂ ದೊಡ್ಡವರೇ? ದೇವರು ಶರೀರವನ್ನು ಕೊಟ್ಟಿರುವುದೇಕೆ? ಅಂತಹ ಅಯೋಗ್ಯನಿಂದ ಹಿಯ್ಯಾಳಿಸಿಕೊಳ್ಳಲಿಕ್ಕೋಸ್ಕರವೇ?

ಕೇಸರಿಪಾಣಿಯ ಮುಖವು ಕೆಂಪೇರಿತು. 'ನೀವು ಹೇಳುವುದೆಲ್ಲ ಸಹಜ. ನನಗೂ ತಡೆಯಲಾರದ ಕೋಪವೂ, ವ್ಯಸನವೂ ಉಂಟಾಗಿದೆ. ಆದರೆ ಮಾಡುವುದೇನು? ಬಡವನೂ, ಸಹಾಯ ಶೂನ್ಯನೂ ಆದ ನನ್ನಿಂದ ಏನು ಮಾಡಲಾಗುವುದು? ಸಿಟ್ಟನ್ನೆಲ್ಲಾ ಅಡಗಿಸಿಕೊಳ್ಳಬೇಕು' ಎಂದನು.

ಚಾರು-ಅದೆಲ್ಲಾ ಬರಿ ಬಾಯಿ ಮಾತು. ನಾಚಿಕೆಯಿಲ್ಲದ ನಿಮಗೆ ಸಿಟ್ಟು! ನಿಜವಾಗಿಯೂ ನಿಮಗೆ ನಾಚಿಕೆಯುಂಟಾಗಿದಲ್ಲ ಆ ನಾಯಿಯನ್ನು ಅಡಗಿಸುವದೊಂದು ಗಹನವೇ? ಪ್ರಾಣ ಹೋದರೂ ಮಾನಗಾರನು ಅಂಥಾ ಸಂಗತಿಗಳನ್ನು ಸಹಿಸಿಕೊಂಡಿರುವನೇ? ನೀವೆಲ್ಲಾ ಮಿಗಿಲು ಬಂಡರು. ನಿಮಗೆಲ್ಲಿಂದ ಬಂದೀತು ನಾಚಿಕೆ?

ಕೇಸರಿಪಾಣಿ-ಖಾವಂದರೇ, ನೀವು ಹಾಗೆ ತಿಳಿಯಬೇಡಿ. ಅವನ ರಕ್ತವನ್ನು ಕುಡಿಯುವಷ್ಟು ಸಿಟ್ಟು ನನಗಿದೆ. ಆದರೇನು? ನಾಳೆ ಏನಾದರೂ ಆದರೆ ನಾನಿದ್ದೇನೆಂದು ಧೈರ್ಯ ಕೊಡುವವರು ಯಾರಾದರೂ ಬೇಡವೇ? ಅಂತಹ ಸಹಾಯಕರಿಲ್ಲದ ಮೇಲೆ ನಮ್ಮ ಸಿಟ್ಟಿನಿಂದ ಪ್ರಯೋಜನವೇನು? ನೀವೇ ಯೋಚಿಸಿ! ಅಷ್ಟು ಜನರ ಪೈಕಿ ಅವರ ಮಾತಿಗೆ ಎದುರಾಗಿ ಮಾತಾಡತಕ್ಕವರು ತಾವೊಬ್ಬರಲ್ಲದೆ ಇನ್ನಾರಾದರೂ ಇದ್ದರೇ? ತಾವೇನೋ ನನ್ನ ಮಾನ ಕಾಪಾಡಿದಿರಿ. ಆದರೆ ತಾವು ಅವರ ಪ್ರಾಣಸಖರು.

ಚಾರು-ಸಖರೋ, ಅಲ್ಲ ಅವರ ಪ್ರಾಣಕ್ಕೆ ಯಮರೋ? ಅದಿರಲಿ, ಆದರೆ ನೀವೆಲ್ಲ ಹೇಡಿಗಳು. ಅಷ್ಟು ಜನರ ಮುಂದೆ ನಿಮ್ಮ ಮರ್ಯಾದೆಯನ್ನುಳಿಸಲು ವಾದ ಮಾಡಿದವರು, ನೀವು ಮತ್ತೊಂದು ಕಾರ್ಯಕ್ಕೆ ಇಳಿದರೆ ಸಹಾಯಕರಾಗಲು ಹಿಂಜರಿಯುವರೇ? ಮುಖ್ಯವಾಗಿ ನಿಮಗೆ ಮನಸ್ಸಿಲ್ಲ.

ಕೇಸರಿಪಾಣಿಯ ಕಣ್ಣುಗಳು ವಿಶಾಲವಾದವು. ಆವನು ಆಶ್ಚರ್ಯಚಕಿತ ಸ್ವರದಿಂದ ಏನು! ಈ ಕಾರ್ಯದಲ್ಲಿ ತಮ್ಮ ಒತ್ತಾಸೆ ಇರುವುದೇ? ತಮಗೂ ಈ ದೇವದತ್ತರಲ್ಲಿ ದ್ವೇಷವಿದೆಯೋ? ನಿರ್ಭಯವಾಗಿ ಸತ್ಯವಾದಿ ಹೇಳುತ್ತೇನೆ. ನಿಮಗೆ ದೇವದತ್ತನಲ್ಲಿ ದ್ವೇಷವಿದೆಯೆಂಬ ಸಂಗತಿ ನಿಜವಾದರೆ, ಗುಲಾಮನಾದ ನನಗೆ ಈಕ್ಷಣ ಅಪ್ಪಣೆ ಕೊಡಿ. ಅವನಲ್ಲದಿದ್ದರೆ ಅವನ ವಂಶವನ್ನೇ ನಿರ್ಮೂಲ ಮಾಡಿಬಿಡುತ್ತೇನೆ. ಏನು ನನ್ನನ್ನು ಸಾಮಾನ್ಯನೆಂದು ಭಾವಿಸಿರುವಿರಾ! ನನ್ನ ಮಾನ ಮರ್ಯಾದೆ ಅಲ್ಲಿ ಬಿದ್ದಿರಲಿ. ತಮಗೇನಾದರೂ ಆ ನೀಚನ ಮೇಲೆ ದ್ವೇಷವಿರುವದಾದರೆ ಈಗ ಅಪ್ಪಣೆ ಕೊಡಿ. ಅಂತಹ ದುರ್ಘಟನೆ ಸಂಭವಿಸಿದಾಗ ನನ್ನ ಮರ್ಯಾದೆಯನ್ನು ಕಾಪಾಡಿದ ನಿಮಗೆ ನಾನೇನು ಮಾಡಿದರೂ ಸಾಲದು. ಅದಕ್ಕೋಸ್ಕರ ನನ್ನ ಪ್ರಾಣವನ್ನು ಕೊಡಲಿಕ್ಕೂ ಸಿದ್ಧನಿದ್ದೇನೆ' ಎಂದು ಗಂಭೀರವಾಗಿ ಹೇಳಿದನು.

ಚಾರು-(ನಕ್ಕು) ನಾಳು ನನಗೇನು ಹೆಚ್ಚಿನ ದ್ವೇಷವಿಲ್ಲ. ಆದರೆ ಈ ಹೊತ್ತು ನಿಮಗೆ ಮಾಡಿದ್ದೇ ನಾಳೆ ನಮಗೆ. ಮಾನವೆಂದರೆ ಎಲ್ಲರಿಗೂ ಒಂದೇ ಅಲ್ಲವೇ? ಸಹಾಯ ಹೀನನಾದ ಒಬ್ಬನನ್ನು ಆಸ್ಪರ ಮಟ್ಟಿಗೆ ಹಿಯ್ಯಾಳಿಸಿದರೆ ಯಾರಿಗೆ ತಾನೇ ಸಿಟ್ಟೂ, ವ್ಯಸನವೂ ಉಂಟಾಗದಿರುವುದು. ಅದರ ಮೇಲೂ ಈಗೀಗ ಆತನ ಅಹಂಕಾರವನ್ನೂ, ದೊಡ್ಡಸ್ತಿಕೆಯನ್ನೂ ತಡೆಯಲಿಕ್ಕೇ ಆಗುವದಿಲ್ಲ. ಅದಕ್ಕೆ ಸರಿಯಾದ ಈ ಕಂಬಳಿ ಗ್ರಾಮಸ್ಥರು. ನನಗೇನೋ ಆತನ ಮುಖವನ್ನೇ ಕಂಡರಾಗುವುದಿಲ್ಲ. ಅಲ್ಲದಿದ್ದರೆ ಅವನದೊಂದು ಜಂಬವೇನು! ಅಲ್ಲ, ಅವನ ತಂದೆ ತಾಯಿಗಳ ಸ್ಥಿತಿಯು ನಮಗೆ ಗೊತ್ತಿಲ್ಲವೇ? ಇವನ ಸ್ಥಿತಿಯು ನಮಗೆ ಗೊತ್ತಿಲ್ಲವೇ? ಅದಾರೋ ಒಬ್ಬರು ಸ್ವಲ್ಪ ಹಣ ಕೊಟ್ಟು ವಿಲಾಯಿತಿಗೆ ಹೋಗಿ ಬಂದುಬಿಟ್ಟನೆಂದರೆ ಇವನ ಅಹಂಕಾರವನ್ನು ತಡೆಯುವವರೇ ಇಲ್ಲ. ನಿಜವಾಗಿಯೂ ಹೇಳುತ್ತೇನೆ-ನನ್ನನ್ನೇನಾದರೂ ಅವನು ಹಾಗೆ ಹಿಯ್ಯಾಳಿಸಿದುದಾದರೆ ಅವನ ಸೊಲ್ಲಿಲ್ಲದಂತೆ ಮಾಡಿಬಿಡುತ್ತೇನೆ.

ಕೇಸರಿಪಾಣಿ-ಅದೆಲ್ಲಾ ಮತ್ತಿರಲಿ. ನಿಮಗೆ ಅದು ಸಮ್ಮತವಾದರೆ ನಾಳೆ ಅಲ್ಲ ಇದೇ ರಾತ್ರಿ ಅವನನ್ನು ಪೂರೈಸಿಬಿಡುತ್ತೇನೆ.

ಚಾರು-ಹಾಗಲ್ಲ, ಹಾಗಲ್ಲ. ಹಾಗೆಲ್ಲಾ ದುಡ್ಡುಕಿ ಕೆಲಸ ಮಾಡುವುದರಿಂದ ಪರಿಣಾಮವು ವಿಪರೀತವಾದೀತು. ಅದಕ್ಕೆಲ್ಲಾ ಸಮಯವಿದೆ. ನೀವು ಮಾತ್ರ ರಹಸ್ಯವನ್ನು ಮನಸ್ಸಿನಲ್ಲೇ ಅತಿ ಗುಪ್ತವಾಗಿ ಇಟ್ಟಿರಿ. ನಾನು ಸಮಯವನ್ನು ಕಾದಿದ್ದು ನಿಮಗೆ ತಿಳಿಸುತ್ತೇನೆ. ಆಗ ಕೆಲಸವನ್ನು ಜರುಗಿಸಬಹುದು. ಅಷ್ಟರೊಳಗೆ ಸಮಾಧಾನದಿಂದ ಕಾದಿರಿ. ಇಷ್ಟೇ ಅಲ್ಲ, ಯಾರಾದರೂ ನಮ್ಮನ್ನು ಸಂಶಯಪಡದ ಹಾಗೆ ನಾವು ನಮ್ಮ ಸ್ನೇಹವನ್ನೂ ಇತರರಿಗೆ ತೋರ್ಪಡಿಸಿಕೊಳ್ಳಬಾರದು. ಮತ್ತು ದೇವದತ್ತನಲ್ಲಿ ನಿಮಗಿರತಕ್ಕ ದ್ವೇಷವನ್ನು ಯಾವ ರೀತಿಯಲ್ಲಿಯೂ, ಕಾಣಿಸಬಾರದು, ನಿಮ್ಮ ನಡೆ ನುಡಿಗಳು ಆತನಲ್ಲಿ ನಮಗೆ ಅತ್ಯಂತ ಪ್ರೀತಿಯಿದೆ ಎಂಬ ಭಾವವನ್ನು ಹುಟ್ಟಿಸುವಂತಿರಬೇಕು.

ಕೇಸರಿಪಾಣಿಯು ತಲೆಯಲ್ಲಾಡಿಸಿದನು. ಕಾಲವು ಬಹಳ ಮೀರಿತ್ತು. ಇಬ್ಬರೂ ಎದ್ದು ಊಟಕ್ಕೆ ಕುಳಿತರು. ಊಟವಾದ ಮೇಲೆ ಕೇಸರಿಪಾಣಿಯು ಹೊರಟು ಹೋದನು.

೩೨ ಅಧ್ಯಾಯ.

ಅಪರಾಹ್ನ ಎರಡು ಪ್ರಹರಗಳು ದಾಟಿದ್ದವು. ಬಾಡಿದ ಮುಖದಿಂದ ವ್ಯಸನದ ಚಿನ್ಹೆಗಳನ್ನು ಸೂಚಿಸುತ್ತ ಓರ್ವ ಗೃಹಸ್ಥನು ದೇವದತ್ತನ ಮನೆಗೆ ಬಂದನು. ಇವನ ಉಡುಪುಗಳು ಮಲಿನವಾಗಿದ್ದವು. ಬಿಸಲಿನ ಝಳದಲ್ಲಿ ಬಹು ವೇಗವಾಗಿ ನಡೆದು ಬಂದಿದ್ದನಾದ ಕಾರಣ ಇವನ ಮೈಯೆಲ್ಲಾ ಬೆವರಿನಿಂದ ತೊಯಿದು ಹೋಗಿತ್ತು.

ಗುಣವತಿಯು ಆಗಂತುಕನನ್ನು ಇದಿರುಗೊಂಡು ಸಮೀಪದ ಆಸನದ ಮೇಲೆ ಕುಳ್ಳಿರಲು ಅಪ್ಪಣೆ ಇತ್ತಳು. ಆ ವ್ಯಕ್ತಿಯು 'ಅಮ್ಮಾ! ವೈದ್ಯರು ಮನೆಯಲ್ಲಿರುವರೇ?' ಎಂದು ಬಹು ಧೀನ ಸ್ವರದಿಂದ ಕೇಳಿದನು.

ದೇವದತ್ತನು ಕೆಲಸವಿಲ್ಲದ ಸಮಯಗಳಲ್ಲಿ ಕಲವೇಳೆ ಮಲಗಿ ನಿದ್ರಿಸುತ್ತಿದ್ದನು. ಈ ಸಮಯದಲ್ಲೂ ಸುಖನಿದ್ರೆಯಲ್ಲಿದ್ದನು. ಆದರೆ ತಾನು ಮಲಗುವ ಸಮಯದಲ್ಲಿ ಯಾರಾದರೂ ತನ್ನನ್ನು ಕಾಣಲು ಬಂದರೆ ಒಡನೆ ತನ್ನನ್ನು ಎಚ್ಚರಿಸಬೇಕೆಂದು ಮೊದಲೇ ಅವನು ಮನೆಯವರಿಗೆ ತಿಳಿಸಿದ್ದನು. ಆದುದರಿಂದ ಗುಣವತಿಯು ಆಗಂತುಕನ ಪ್ರಶ್ನೆಗೆ 'ಇದ್ದಾರೆ ಕರೆಯುತ್ತೇನೆ'ಂದು ಹೇಳಿ ಒಳಗೆ ಹೋಗಿ ಮಗನನ್ನು ಎಬ್ಬಿಸಿದಳು

ದೇವದತ್ತನು ಹೊರಗೆ ಬಂದು ಆಗಂತುಕನನ್ನು ಎದುರುಗೊಂಡನು.

ಆ ವ್ಯಕ್ತಿಯು ಥಟ್ಟನೆ ಎದ್ದು ನಿಂತು ದೇವದತ್ತನನ್ನು ವಂದಿಸಿ ದೀನ ಸ್ವರದಿಂದ 'ಅಯ್ಯಾ ಡಾಕ್ಟರರೇ, ನನ್ನ ಪತ್ನಿಯು ಎರಡು ದಿವಸಗಳಿಂದ ಪ್ರಸವ ವೇದನೆಯಿಂದ ನರಳುತ್ತಿರುವರು. ಅನೇಕ ತರಹದ ನಾಡು ಚಿಕಿತ್ಸೆಗಳಾಯಿತು. ಏನೊಂದು ಪ್ರಯೋಜನವೂ ಆಗಲಿಲ್ಲ. ನಾನು ಬಡವ. ದಯವಿಟ್ಟು ಕಾಪಾಡಬೇಕು. ಅವಳ ಸಂಕಟವನ್ನು ನೋಡಿ ಸಹಿಸಲಾಗುವುದಿಲ್ಲ' ಎಂದು ಕೈಮುಗಿದನು.

'ನಿಮಗೆ ಅವಳ ಕಷ್ಟದಲ್ಲಿ ನಿಜವಾಗಿಯೂ ವ್ಯಸನವಿದ್ದಿದ್ದರೆ ನೀವು ಎರಡು ದಿವಸಗಳ ವರೆಗೆ ಸುಮ್ಮನಿರುತ್ತಿದ್ದೀರೇ? ನರಳುವವರು ಅವರು; ನೋಡುವವರು ನೀವು. ಸುಮ್ಮನೆ ಹೇಳುವುದಕ್ಕೇನು? ನಿಮ್ಮ ಈ ತರಹದ ನಾಡು ಅಜಾಗರೂಕತೆಯನ್ನು ಕಂಡರೇನೇ ನನಗೆ ಕೋಪಬರುವುದು. ಒಡನೆ ಬಂದಿದ್ದಾರಾಗುತ್ತಿರಲಿಲ್ಲವೇ? ಸುಮ್ಮನೆ ಇಲ್ಲದ ಸಲ್ಲದ ರೀತಿಯಲ್ಲಿ ಒಳ್ಳೇ ಸಮಯವನ್ನೆಲ್ಲಾ ಕಳೆದು ಇನ್ನೇನು ಸಾಧ್ಯವಿಲ್ಲವೆಂದು ತೋರಿದ ನಂತರ ವೈದ್ಯರ ಹತ್ತಿರ ಓಡುವುದು. ಆ ಮೇಲೆ ಏನಾದರೂ ಹೆಚ್ಚು ಕಡಮೆಯಾದರೆ ಡಾಕ್ಟರನ್ನು ದೂರುವುದು. ಇವಲ್ಲನೇ ಹಣೆಬರಹವನ್ನು ಬಯ್ಯುವುದು. ಇನ್ನೆಷ್ಟು ಶತಮಾನಗಳು ಬೇಕೋ ನಿಮ್ಮಂಥವರೆಲ್ಲ ನಿದ್ರೆಯಿಂದ ಎಚ್ಚರವಾಗಲಿಕ್ಕೆ!' ಎಂದು ಹೇಳಿ ಬಟ್ಟೆ ಧರಿಸಲು ಒಳಗೆ ಹೋದರು.

ಆಗಂತುಕನು ಗುಣವತಿಯನ್ನು ಕುರಿತು 'ಮೊದಲೇ ಬರುತ್ತಿದ್ದೆನು. ಆದರೆ ಮಾಡುವುದೇನು? ಬಡವ, ಇಲ್ಲಿಂದ ನನ್ನ ಮನೆಗೆ ಹೆಚ್ಚು ಕಡಿಮೆ ನಾಲ್ಕು ಮೈಲಿ ದೂರವಿದೆ. ವಾಹನಗಳ ಓಡಾಟಕ್ಕೆ ರಸ್ತೆಗಳೇ ಇಲ್ಲ. ವೈದ್ಯರನ್ನು ನನ್ನ ಕಷ್ಟಕೋಸ್ಕರ ಬರಿದೆ ದಣಿಸಬೇಕಲ್ಲ ಎಂದು ಬೇರೆ ಚಿಕಿತ್ಸೆಗಳನ್ನು ಮಾಡಿನೋಡಿದೆನು.' ಎನ್ನುವಷ್ಟರಲ್ಲಿ ದೇವದತ್ತನು ಉಟ್ಟು ಹೊರಗೆ ಬಂದನು. 'ಈಗಲಾದರೂ ಅದು ತಪ್ಪಿತೇ? ಆದುದರಿಂದ ಮೊದಲೇ ಬಂದಿದ್ದರೆ ಗರ್ಭಿಣಿಯ ನರಳುವಿಕೆಯಾದರೂ ಸ್ವಲ್ಪ ಮಟ್ಟಿಗೆ ಕಡಮೆಯಾಗುತ್ತಿತ್ತು' ಎಂದನು.

ಅಷ್ಟರಲ್ಲಿ ಕಮಲೆಯು ಶಸ್ತ್ರ ವಿದ್ಯೆಯ ಉಪಕರಣಗಳ ಚೀಲವನ್ನು ತಂದು ವೈದ್ಯರ ಕೈಗೆ ಕೊಟ್ಟಳು. ನಾರಾಯಣನು (ಆಗಂತುಕನ ಹೆಸರು) ಆ ಪೆಟ್ಟಿಗೆಯನ್ನು ವೈದ್ಯರ ಕೈಯಿಂದ ತೆಗೆದುಕೊಂಡು ತಾನೇ ಹೊತ್ತುಕೊಂಡನು. ದೇವದತ್ತನು ಆ ರಾತ್ರಿಯೇ ಹಿಂದಿರುಗುವುದಾಗಿ ತಾಯಿಗೂ, ಕಮಲೆಗೂ ಹೇಳಿ ಹೊರಟನು. ಗುಣವತಿಯು ನಾರಾಯಣನನ್ನು ಕುರಿತು, 'ಅಯ್ಯಾ, ಅವರೊಬ್ಬರನ್ನೇ ಬಿಟ್ಟು ಬಿಡಬೇಡ. ಇಲ್ಲಿವರೆಗೆ ಅವರನ್ನು ತಂದು ಬಿಟ್ಟು ಬಿಡಬೇಕೆ'ಂದಳು.

ನಾರಾಯಣನು 'ಖಂಡಿತವಾಗಿ ಅವರನ್ನು ಮನೆಗೆ ಮುಟ್ಟಿಸಿಯೇ ಹೋಗುತ್ತೇನೆ'ಂದು ವಾಗ್ದಾನವಿತ್ತನು.

ದೇವದತ್ತನ ಜಾಕಿಯು ತನಗೆ ದೊರಕಿದ ಸವಾರಿಯ ಆನಂದವನ್ನು ನಾನಾ ರೀತಿಯಲ್ಲಿ ತೋರ್ಪಡಿಸುತ್ತಾ ಮುಂದೆ ನಡೆಯಿತು.

ಸ್ವಲ್ಪ ದೂರ ಹೋಗುವುದರೊಳಗಾಗಿ ಚಾರುದತ್ತನು ಎದುರಾದನು.

ಚಾರು-ಸವಾರಿ ಬಹುದೂರವೇನು?

ದೇವದತ್ತ-ನಾಲ್ಕೈದು ಮೈಲಿ ಇದೆಯಂತೆ. ಕಾಲ್ದಾರಿಯಾದ್ದ ಕಾರಣ ನಡಕೊಂಡೇ ಹೋಗಬೇಕು.

ಚಾರು-ವಾಪಸು ಯಾವಾಗ?

ದೇವ-ಈ ದಿವಸವೆ, ರಾತ್ರಿ ಎಷ್ಟು ಹೊತ್ತಾದರೂ ಸರಿಯೆ.

ಚಾರು-ಒಬ್ಬನೇ ಹಿಂದಿರುಗುವುದೇನು?

[ಅಪೂರ್ಣ.

—o0o—

ಮಹಾ ವಿಭೂತಿ ಮಹಾತ್ಮಗಾಂಧಿ.

ಪೂಜ್ಯ ಗಾಂಧೀಯವರ ದಿವ್ಯ ನಾಮವು ಇಂದು ಭಾರತ ದೇಶದಲ್ಲಿ ಪೂಜಾ ಮಂತ್ರವಾಗಿ ಜಪಿಸಲ್ಪಡುತ್ತಿದೆ. ಪ್ರತಿಯೊಬ್ಬ ಮಾನವನ ಮನಸಿನ ಮೇಲೆ ಈ ದಿವ್ಯನಾಮವು ಒಂದಲ್ಲೊಂದು ವಿಧದ ಪರಿಣಾಮವನ್ನುಂಟುಮಾಡದೆ ಇಲ್ಲ. ಆ ಹೆಸರಿನ ಹಿಂದೆ ಇಡೀ ವಿಶ್ವದ ಚರಿತ್ರೆಯೇ ಚಿತ್ರಿಸಲ್ಪಡುತ್ತಿದೆಯೆಂದರೆ ಅತಿಶಯೋಕ್ತಿಯಲ್ಲ. ಮೂರು ತಿಂಗಳ ಹಿಂದೆ ಮರಣಪರಿಯಂತರ ಉಪವಾಸವೆಂಬ ಅವರ ಒಂದೇ ತೀರ್ಮಾನದಿಂದ ಇಡೀ ಜಗತ್ತೇ ಬಾಯ್ತೆರೆದು ಆತಾದೃಷ್ಟಿಯಿಂದ ಆ ಕಡೆಗೆ ನೋಡುವಂತಾಯಿತು. ಇಡೀ ವಿಶ್ವವೇ ನಿಶ್ಶಬ್ದವಾಗಿ ಮಹಾತ್ಮರ ಕಾರ್ಯಕ್ರಮವನ್ನು ಎವೆಯಿಕ್ಕದೆ ಈಕ್ಷಿಸುವಂತಾಯಿತು. ಆ ಮಹಾ ವಿಭೂತಿಯ ಕಾಲ ಬುಡದಲ್ಲಿ ಇಂದು ಶತಮಾನಗಳ ಹಿಂದಿನ ಪದ್ಧತಿ, ಮನುವೇ ಮೊದಲಾದ ಪೂರ್ವಿಕರ ಸಮಾಜ ನಿಯಮಗಳು ಚೂರು ಚೂರಾಗಿ ಬಿದ್ದಿರುವವು. ಒಂದೇ ಒಂದು ಕ್ಷಣದ ತನ್ನ ವರ್ತನೆಯಿಂದ ಇಡೀ ಜಗತ್ತಿನ ಪ್ರೀತಿಯನ್ನು ಸಂಪಾದಿಸಿ, ಕ್ರಾಂತಿಕಾರರನ್ನು ಸಮಾಧಾನಗೊಳಿಸಿ, ವಿರೋಧಿಗಳನ್ನೂ ಒಲಿಸಿಕೊಳ್ಳಲು ಶಕ್ತಿಯಿರುವಂಥಾ ವ್ಯಕ್ತಿ ಪೂಜ್ಯ ಗಾಂಧಿಜೀಯವರು.

ಕಷ್ಟಾನುಭವ.

ಗಾಂಧಿಜೀಯವರು ಹೊರಗಿರುವಾಗ ಮಾಡುವದಕ್ಕಿಂಥ ಜೈಲಿನೊಳಗಿರುವಾಗ ಅದ್ಭುತ ಕಾರ್ಯಗಳು ನಡೆಯುತ್ತವೆಂಬುದು ಅನುಭವದ ಮಾತು. ತನ್ನ ಕಷ್ಟಗಳಿಗಾಗಿ ದುಃಖಿಸುವ ವಿಚಾರ ಗಾಂಧೀಯವರಲ್ಲಿಲ್ಲ. ಇತರರ ಕಷ್ಟಕ್ಕಾಗಿ ಪ್ರಾಣ ನೀಗಲು ತಯಾರಿರುವ ಮಹಾ ವ್ಯಕ್ತಿ ಅವರು. ಅವರ ಈ ಒಂದು ತತ್ವವೇ ಅನೇಕ ಪಾರ್ಟಿ ಪಂಗಡಗಳ ಹಾಗೂ ವಿರೋಧಿ ವ್ಯಕ್ತಿಗಳ ಮನಸ್ಸನ್ನು ತನ್ನೆಡೆಗೆ ಒಲಿಸಿದ. ಅವರ ತತ್ವಗಳಿಗೆ ಜನರು ಒಪ್ಪದಿರಬಹುದು. ಅವರ ಅಭಿಪ್ರಾಯಗಳನ್ನು ವಿರೋಧಿಸಬೇಕಾಗಬಹುದು. ಆದರೆ ಪ್ರತಿಯೊಂದು ವ್ಯಕ್ತಿಯೂ ಅವರನ್ನು ಪರಿಶುದ್ಧ ಮಾನಸರೆಂದೂ, ಸ್ವಾರ್ಥತ್ಯಾಗಿಯೆಂದೂ, ಇಡೀ ಜನತೆಯ ಹಿತಕ್ಕಾಗಿ ತಮ್ಮ ಶರೀರವನ್ನು ಅರ್ಪಿಸಿರುವರೆಂದೂ ಒಪ್ಪಬೇಕಾಗಿದೆ. ವರ್ಧಾದ ಈ ಋಷಿಯು ಕೇವಲ ಒಂದು ಜನಾಂಗದ ವ್ಯಕ್ತಿಯಲ್ಲ; ಇಡೀ ಜಗತ್ತಿನ ಮೂರ್ತಿ. ಅವರ ಹೇಳಿಕೆಗಳು ತಾತ್ಕಾಲಿಕವಾದುವೂ ಅಲ್ಲ; ಭಾರತಕ್ಕೆ ಮಾತ್ರ ಅನ್ವಯಿಸುವಂಥವೂ ಅಲ್ಲ. ಇಡೀ ಮಾನವ ಜನಾಂಗವೇ ಯಾವಾಗಲಾದರೂ ಆ ಹೇಳಿಕೆಯನ್ನು ಮನ್ನಿಸಲೇಬೇಕು. ಇತರರಿಗಾಗಿ ಕಷ್ಟಗಳನ್ನು ಅನುಭವಿಸುವ ಅವರ ಶೀಘ್ರ ತೀರ್ಮಾನವು ಇಡೀ ಜನತೆಯ ಮನವನ್ನಾಕರ್ಷಿಸಿದೆ. ಗುಲಾಮಗಿರಿಯಲ್ಲಿರುವ ಭಾರತೀಯ ಪುತ್ರರಲ್ಲಿ ಅವರು ವೀರ ಯೋಧರನ್ನು ತಯಾರಿಸಿರುವರು. ರಸವಿಹೀನವಾದ ಅರ್ಥಾತ್ ವಿದೇಶೀಯರ ಅನುಕರಣೆಗೆ ಸಿಕ್ಕಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡಿರುವ ಭಾರತ ಭೂಮಿಯಲ್ಲಿ ಸ್ವಾರ್ಥತ್ಯಾಗಿಗಳನ್ನೂ, ವೀರ ಮೂರ್ತಿಗಳನ್ನೂ ತಯಾರಿಸಬಲ್ಲ ವ್ಯಕ್ತಿ ಮಹಾತ್ಮ ಗಾಂಧಿ. ಈ ಕಳೆದ ಹನ್ನೆರಡು ವರ್ಷಗಳ ಅವಧಿಯಲ್ಲಿ ಎರಡು ಸಾರಿ ಭಾರತೀಯರು ಸ್ವರಾಜ್ಯ ವೇದಿಕೆಗೆ ಕಾಲಿಡಲು ಯತ್ನಿಸಿರುವರು. ಇದಾದರೂ ಮಹಾತ್ಮ ಗಾಂಧಿಯವರ ಮಂತ್ರಶಕ್ತಿಯ ಕರೆಯ ಫಲಿತಾಂಶವೇ. ಮಹಾತ್ಮರು ತಮ್ಮ ಒಂದು ಸಂದೇಶದಿಂದ ವಯೋವೃದ್ಧರ ರಕ್ತ ಧಮನಿಯಲ್ಲಿಯೂ ಬಿಸಿ ರಕ್ತವನ್ನು ಹರಿಸಬಲ್ಲರು. ಲಕ್ಷೋಪಲಕ್ಷ ಜನರು ಅವರ ಕರೆಯಂತೆ ತಮ್ಮ ತನುವನ್ನರ್ಪಿಸಲು ಸಿದ್ಧರಿರುವರು. ಭಾರತ ಭೂಮಿಯ ಶಿಷ್ಟ ಸಂಪ್ರದಾಯದಂತೆ ಮನೆಯ ವ್ಯವಸ್ಥೆಯಲ್ಲಿ ನಿರತರಾಗಿದ್ದ ಭಾರತ ವೀರ ಮಹಿಳೆಯರು ಗಾಂಧಿಜೀಯವರ ಕರೆಯಂತೆ ಗುಂಡಿನ ಬಾಯಿಗೆ ಎದುರು ನಿಲ್ಲಲು ತಯಾರಿರುವರು. ಮಹಾತ್ಮರಲ್ಲಿ ಜನತೆಗಿರುವ ಆ ವಿಶ್ವಾಸ, ಪ್ರೀತಿಗಳೆರಡೇ ಜನತೆಗೆ ರಕ್ಷಾ ಕವಚಗಳಾಗಿ ಎಂಥಾ ಗಂಡಾಂತರವನ್ನೆದುರಿಸಲೂ ಹುರುಪನ್ನೀಯುತ್ತಿರುವವು. ಜಗತ್ತಿನ ಇಂದಿನ ವರೆಗಿನ ಚರಿತ್ರೆಯಲ್ಲಿ ಯಾವನೊಬ್ಬ ಮಹಾ ವ್ಯಕ್ತಿಯು ಜನತೆಯ ನಂಬಿಗೆಯನ್ನು ಸಂಪಾದಿಸಿ ತನ್ನ ಕರೆಯಂತೆ ಯಾವ ಕಾರ್ಯಕ್ಕೂ ಕೈಹಾಕುವಂತೆ ಪ್ರೇರೇಪಿಸಲು ಮಹಾತ್ಮರಂತೆ ಸಮರ್ಥರಾಗಿಲ್ಲ. ಏಸು ಕ್ರಿಸ್ತನಾಗಲೀ, ಇತರ ಯಾವ ಧರ್ಮ ಗುರುವೇ ಆಗಲೀ ಗಾಂಧಿಜೀಯವರಷ್ಟು ಬೇಗನೆ ಜನತೆಯ ನಂಬಿಗೆಯನ್ನು ಗಳಿಸಲಿಲ್ಲ.

ಉತ್ತಮ ಅಪಜಯ.

ಬಡಪಾಯಿಯಂತಿರುವ ಗಾಂಧಿಜೀಯವರಿಗೆ ಸಿಗುತ್ತಿರುವ ಮರ್ಯಾದೆಯು ಒಂದು ವಿಧದಲ್ಲಿ ಆಶ್ಚರ್ಯವನ್ನುಂಟುಮಾಡುತ್ತದೆ. ಪುರಾತನ ಮಹಾ ಮಹಾ ವ್ಯಕ್ತಿಗಳಂತೆ ಗಾಂಧಿಜೀಯವರು ಜಯಶ್ರೀಯ ಕಡೆಗೇ ಜನತೆಯನ್ನು ಒಯ್ಯಲಿಲ್ಲ. ಬದಲು ಅವರು ಆಗಿಂದಾಗ್ಯೆ ಉತ್ತಮ ವಿಧದ ಅಪಜಯವನ್ನೇ ಹೊಂದಿರುವರು. ದಕ್ಷಿಣ ಆಫ್ರಿಕಾದಲ್ಲಿಯ ಅವರ ಪ್ರಚಂಡ ಚಳವಳವು ಪೂರ್ತಿ ಜಯಶಾಲಿಯಾಗಲಿಲ್ಲ. ಅಸಹಕಾರ ಚಳವಳವು ಯಶಸ್ವಿಯಾಗಲಿಲ್ಲ. ಅವರು ಡೆಲ್ಲಿಯಲ್ಲಿ ಕೈಕೊಂಡ 21 ದಿನಗಳ ಉಪವಾಸವು ವ್ಯರ್ಥವಾಯಿತು. ಒಟ್ಟಾರೆ ಎಲ್ಲೆಲ್ಲಿಯೂ ಅಪಜಯವೇ. ಆದರೆ ಕೂಲಂಕುಷವಾಗಿ ವಿವೇಚಿಸಿದರೆ ಅದರ ಅಮರವಾದ ಯಾ ಎಂದೂ ಅಚ್ಚಳಿಯದ ಮಹತ್ವವು ಕಂಡುಬರುವುದು. ಗಾಂಧಿಜೀಯವರು ಅಸಮಾನ ಸೈನ್ಯಾಧಿಕಾರಿ ಇದ್ದಾರೆ. ಅವರು ಸ್ವರಾಜ್ಯವನ್ನು ಗಳಿಸದಿದ್ದರೂ ಜನತೆಯಲ್ಲಿರುವ ಹೆದರಿಕೆ, ಕಂಪನಗಳನ್ನು ದೂರ ಮಾಡಿರುವರು. ಪ್ರತಿಯೊಂದು ಸೋಲಿನಿಂದಲೂ ಅವರು ಅಖಂಡ ವ್ಯಕ್ತಿಯಾಗಿ ಬೆಳೆದಿದ್ದಾರೆ. ಈ ಸೋಲುಗಳ ಪರಂಪರೆಯಲ್ಲಿ ತನ್ನ ಕೊರತೆಗಳನ್ನು ತಿದ್ದಿ ಅವರು ರಾಜಕೀಯದಲ್ಲೇ ಅಲ್ಲ; ಧಾರ್ಮಿಕ ವಿಚಾರದಲ್ಲೂ ಅಗ್ರಸ್ಥಾನಕ್ಕೇರಿರುವರು.

ಮಹಾತ್ಮ ಗಾಂಧಿಯವರು ಕರ್ಮಗತಿಯ ಮನುಷ್ಯರಿರುವರು. ಒಬ್ಬ ಸರಕಾರಿ ಉದ್ಯೋಗಿಯ ಮಗನಾಗಿ ಜನಿಸಿ, ಇಂದು ಸರಕಾರ ಆಡಳಿತದ ವಿರೋಧಿಯೇ ಆಗಿರುವರು. ವಕೀಲರಾಗಿ ಹೆಸರುಗೊಂಡ ಅವರು ಇಂದು ಖಾಯಿದೆ ಮುರಿಯುವವರ ಸಾಲಿನಲ್ಲಿರುವರು. ಸೊಗಸಿನ ಪೋಷಾಕುಗಳ ಮುಂದಾಳಾಗಿದ್ದ ಅವರು ಇಂದು ರಾಜಾಧಿರಾಜರನ್ನೂ ತನ್ನ ಅರೆ ಬತ್ತಲೆಯ ಸ್ಥಿತಿಯಲ್ಲಿಯೇ ಕಾಣುವರು. ಅಂದೊಮ್ಮೆ ಬ್ರಿಟಿಷರಿಗೆ ವೈದ್ಯ ಸಹಾಯ ಪಥಕದಲ್ಲಿ ಸಹಾಯ ಮಾಡಿದ ಮಹಾ ವ್ಯಕ್ತಿಯು ಇಂದು ಸಾಮ್ರಾಜ್ಯಶಾಹಿಯ ಬದ್ಧ ವಿರೋಧಿಯಾಗಿರುವರು. ಅದೃಷ್ಟವಂತರಾಗಿ ಜನಿಸಿ, ಹೇರಳ ಧನವನ್ನು ಸಂಗ್ರಹಿಸಿದ ಪ್ರಚಂಡ ವ್ಯಕ್ತಿಯು ಇಂದು ಮಾತೃಭೂಮಿಗಾಗಿ ತನ್ನ ಸರ್ವಸ್ವವನ್ನೂ ಧಾರೆಯೆರೆದಿರುವರು. ನಿಜವಾಗಿಯೂ ಗಾಂಧೀಯವರ ಜೀವನದ ಮಾರ್ಪಾಟು ತಿಳಿಯಲಸದಳವಾದ್ದು.

ಗಾಂಧಿಜೀಯವರನ್ನು ಇಂಥಾ ಒಂದು ಧೋರಣೆಯ ನಿರ್ದಿಷ್ಟ ವ್ಯಕ್ತಿಯೆಂದೆನ್ನಲಾಗುವದಿಲ್ಲ. ಅವರು ರಾಜಕೀಯ ಗುರು ಮಾತ್ರವಲ್ಲ; ಅವರು ಧಾರ್ಮಿಕ ಗುರುಗಳೂ ಹೌದು. ಅವರು ಆಗುಹೋಗುಗಳಿಲ್ಲದ ಅಂತ್ಯ (ಮೋಕ್ಷ) ವನ್ನು ಪಡೆಯಲು ಸಂಚರಿಸುವ ಯಾತ್ರಿಕರಿರುವರು. ಅವರು ಸತ್ಯ ಶೋಧಕರಿರುವರು. ಸತ್ಯವೇ ದೇವರೆಂದು ಸಿದ್ಧಾಂತ ಮಾಡಿದ ಪೂಜ್ಯರಿರುವರು. ಅವರಿಗೆ ಚರಕಾದ ಶಬ್ದವೇ ಓಂಕಾರವಾಗಿರುವುದು. ಅವರು ತಮ್ಮ ಆತ್ಮ ಚಕ್ಷುವಿನಿಂದ ವಿಷಯಗಳನ್ನು ಅರಿಯುವವರಿರುವರು. ಅವರು ರಾಜಕೀಯದ ಕಾಲಜ್ಞಾನಿಯಾಗಿರುವರು. ಅವರು ಋಷಿಯಂತೆ ಜೀವಿಸಿ, ಉಗ್ರಶಿಕ್ಷಕರಂತೆ ಕೆಲಸ ಮಾಡುತ್ತಿರುವರು.

ಅವರಿಗೆ ಕಲಾವಿದನ ಆತ್ಮವಿದೆ. ಪ್ರತಿಯೊಂದು ಅನುಭವವನ್ನೂ ಅವರು ವಿನಯ ಪೂರ್ವಕ ಅಂಗೀಕರಿಸುವರು. ಅವರ ಮೇರೆ ಮೀರಿದ ನಯಭಾವವನ್ನು ಅನೇಕರಿಗೆ ಅರಿಯಲು ಅಸಾಧ್ಯವಾಗಿದೆ. ಮಕ್ಕಳನ್ನು ಅವರು ತುಂಬಾ ಪ್ರೀತಿಸುವರು. ಮಕ್ಕಳಾದರೂ ಅವರನ್ನು ಹಾಗೆಯೇ. ಅವರು ಏನೂ ಸ್ವಾರಸ್ಯವಿಲ್ಲದಲ್ಲಿಯೂ ಆಶ್ಚರ್ಯಕರವಾದ ಸ್ವಾರಸ್ಯವನ್ನು ತಂದೂಡ್ಡಬಲ್ಲರು. ಬೇಸರದಿಂದ ತುಂಬಿದವರಲ್ಲಿ ಹೊಸ ಕಳೆಯನ್ನು ತುಂಬಬಲ್ಲರು. ಗಾಂಧಿಜೀಯವರ ಈ ವ್ಯಕ್ತಿತ್ವದಿಂದಾಗಿ ಅನೇಕ ಬ್ರಿಟಿಷರಿಗೆ ದಂಗು ಬಡಿದಂತಾಗಿದೆ. ಗಾಂಧಿಯವರ ಕಾರ್ಯಕಲಾಪಗಳನ್ನೇ ಅರಿತುಕೊಳ್ಳಲಾರದೆ ತಲೆ ಕರಡು ಮಾಡಿಕೊಂಡು ಇದೊಂದು ವಿಚಿತ್ರ ವ್ಯಕ್ತಿಯೆಂದೆನ್ನುವ ಪಾಶ್ಚಿಮಾತ್ಯರಿಗೆ ಕಡಿಮೆ ಇಲ್ಲ. ಅವರೆ ಅಮೇರಿಕದ ಜೆ. ಎಚ್. ಹೋಮ್ಸರಂಥಾ ತತ್ವ ಜ್ಞಾನಿಗಳು ಮಹಾತ್ಮರನ್ನು ಮಹಾ ವಿಭೂತಿಯೆಂದು ಅಂಗೀಕರಿಸಿದ್ದು ಪಾಶ್ಚಿಮಾತ್ಯರಿಗೆ ಆಶ್ಚರ್ಯವನ್ನುಂಟುಮಾಡಿದೆ.

ಗಾಂಧಿಜೀಯವರು ಹೊಸ ತತ್ವಗಳನ್ನಾಗಲೀ, ಇತರ ಸಿದ್ಧಾಂತಗಳನ್ನಾಗಲೀ ಕಂಡು ಹಿಡಿದವರಲ್ಲ. ಅವರು ಹಳೆಯ ತತ್ವಗಳನ್ನೇ ಇಂದಿನ ಸ್ಥಿತಿಗನುಸಾರ ಕಾರ್ಯರೂಪಕ್ಕೆ ತಂದರು. ಮಹಾತ್ಮರು ಅಹಿಂಸೆಯ ಸೆಪೋಲಿನಿಯರಿದ್ದಾರೆ. ಸೋಕ್ರೆಟಿಸರಂತೆ ಸತ್ಯಸಂಶೋಧಕರಿದ್ದಾರೆ. ಶಾಂತಿ ಮತ್ತು ಸುಖಕ್ಕೆ ದಾರಿಯನ್ನು ಮಹಾತ್ಮರು ಎತ್ತಿ ತೋರಿಸಿರುವರು. ಬಡವ ಬಲ್ಲಿದನೂ ಸಮಾನ ರೀತಿಯಿಂದ ಸ್ನೇಹಿತರಂತೆ ಇರಬಹುದಾದ ದಾರಿಯನ್ನು ಗಾಂಧಿಯವರು ತೋರಿಸಿರುವರು. ಗಾಂಧಿಯವರು ತಮ್ಮ ಚೈತನ್ಯವನ್ನು ಪುರಾತನ ತತ್ವ ವಿಮರ್ಶೆಯಿಂದ ಸಂಪಾದಿಸುತ್ತಾರೆ. ಅವರ ಯಾವ ಕಾರ್ಯಕ್ಕೂ ವೇದಗಳ ಆಧಾರ ವಿಲ್ಲದೆ ಇಲ್ಲ. ಅವರು ಗೀತೆಯ ಪರಮ ಭಕ್ತರು. ಗೀತೆಯೇ ಅವರ ಮಾರ್ಗದರ್ಶಿಯಾಗಿದೆ. ಇಂದಿನ ಎಚ್ಚೆತ್ತ ಭಾರತ ಜನಾಂಗವು ಗಾಂಧಿಯವರಿಗೆ ಚಿರಋಣಿಯಾಗಿದೆ. ಅವರು ಹಿಂದೂಮತ ಪ್ರವಾದಿಗಳಿದ್ದು ಅವರ ಅಸ್ಪೃಶ್ಯತಾ ನಿವಾರಣಾ ಯೋಜನೆಯು ಈ ದೃಷ್ಟಿಯಿಂದಲೇ ಸಾಗಿದೆ.

ಗಾಂಧಿಜೀಯವರ ಉತ್ಕ್ರಾಂತಿಯು ಸ್ವಾವಲಂಬನದ ತತ್ವವನ್ನು ಉಪದೇಶಿಸುತ್ತಿದ ಅವರು ತಮ್ಮ ಕಾರ್ಯವನ್ನು ಅನೇಕ ವಿರೋಧಿಗಳ ಮಧ್ಯದಲ್ಲಿಯೇ ಸಾಗಿಸಿದರು. ದಕ್ಷಿಣ ಆಫ್ರಿಕಾದ ಸತ್ಯಾಗ್ರಹದ ನಂತರ ಅವರು ಭಾರತಕ್ಕೆ ಬಂದು ಸತ್ಯಾಗ್ರಹವು ಸ್ವಾತಂತ್ರ್ಯ ಸಂಪಾದನೆಯ ಪ್ರಥಮ ದಾರಿಯೆಂದು ಹೇಳುವಾಗ ಪಾರ್ಶಿ ಸಿಂಹವೆಂದನಿಸಿದ ಸರ್ ಫೆರೋಜಷಹಾ ಮೆಹತಾರವರು 'ಭಾರತವು ಕೂಲಿಗಾರರ ರಾಜ್ಯವಲ್ಲ. ಸತ್ಯಾಗ್ರಹವು ಭಾರತಕ್ಕೆ ಸಲ್ಲದು' ಎಂದುತ್ತರ ಕೊಟ್ಟರು. ಅವರೂ ಗಾಂಧಿಯವರು ಕಂಗೆಡದೆ ಇಂಥಾ ಪ್ರಚಂಡ ವ್ಯಕ್ತಿಗಳ ದ್ವೇಷ ಕಟ್ಟಿಕೊಂಡು ಮುಂದೆ ಸಾಗಿದರು. ಕಾಶೀ ಹಿಂದೂ ವಿಶ್ವವಿದ್ಯಾಲಯದಲ್ಲಿ ಅವರು ಅನಾಯಕತ್ವದ ವಿಚಾರ ಮಾಡಿದ ಪ್ರಚಂಡ ಭಾಷಣದಿಂದಾಗಿ ಮಿಸೆಸ್ ಬೇಸಂಟರವರು ಅವರಿಗೆ 'ಮಹಾತ್ಮ' ಎಂಬ ಬಿರುದು ಕೊಟ್ಟರು. ಅನೇಕ ಮುಖಂಡರು ವಿರೋಧವಿದ್ದರೂ ಅವರು ಸತ್ಯಾಗ್ರಹ ಫಲವನ್ನು ಬೋಧಿಸಿದರು. ಸತತ ಪ್ರಯತ್ನದ ಫಲವಾಗಿ ಇಂದು ಇಡೀ ಭಾರತವು ಸತ್ಯಾಗ್ರಹವನ್ನಾಲಿಂಗಿಸಿದೆ.

ಗಾಂಧಿಯವರ ಮಾತಿನಲ್ಲಿ ಧರ್ಮುರಿಇಲ್ಲ. ಅವರು ನಿಷ್ಪಕ್ಷವಾದಿಗಳು. ಆದರೆ ಇಂದು ಅವರ ಒಂದು ಮಾತಿಗಾಗಿ ಲಕ್ಷೋಪಲಕ್ಷ ಜನರು ಯಾವ ಕಾರ್ಯವನ್ನೂ ಮಾಡಲು ತಯಾರಿರುವರು. ಅವರ ಒಂದು ಮಾತಿಗಾಗಿ ಅಸಂಖ್ಯಾತ ಜನರು ಹಾತೊರೆಯುವರು. ಚೈತನ್ಯ ಸಂಶೋಧನೆಯಿಂದ ಅವರು ತನ್ನ ಶರೀರವನ್ನು ಬಿಟ್ಟು ಎಲ್ಲವನ್ನೂ ಅಭಿವೃದ್ಧಿಗೊಳಿಸಿಕೊಂಡಿರುವರು. ಮಹಾತ್ಮರ ಅರೆ ನಗ್ನ ಹಾಗೂ ಶಿಥಿಲವಾದ ದೇಹ ಪ್ರಕೃತಿಯಾದರೂ, ಅದರಲ್ಲಿ ಒಂದು ವಿಧದ ಆಕರ್ಷಕ ಶಕ್ತಿಯಿದೆ. ಅವರ ನಗುಮೊಗವು ಅವರ ಅಂತರಾಳದಲ್ಲಿರುವ ದಿವ್ಯ ತೇಜಸ್ಸನ್ನು ಹೊರ ಚಿಮ್ಮುತ್ತಿದೆ. ಅವರ ಕಣ್ಣಿನ ಪ್ರಭೆಯು

ಪರರಾಷ್ಟ್ರಗಳ ಪರಿಸ್ಥಿತಿ.

ಡೇನ್ಸಿಗ್.

ಪೋಲೆಂಡಿನವರು ಯುದ್ಧದ ಬೆದರಿಕೆಯನ್ನು ಡೇನ್ಸಿಗ್ಗಿಗೆ ಹಾಕಿದರಷ್ಟೆ. ಈ ಡೇನ್ಸಿಗ್ಗಿನವರು ಅದಕ್ಕೆ ಉತ್ತರವೀಯುತ್ತಾ 'ಪೋಲೇಂಡು ತನ್ನ ವರ್ತನೆಯಿಂದ ಜರ್ಮನಿಯ ದ್ವೇಷದ ಉರಿಯನ್ನು ಹೆಚ್ಚಿಸುತ್ತಿರುವರು. ಇದರಿಂದ ನಾಝಿಗಳು ಕಂಗೆಡುವಂತಿಲ್ಲ. ಡೇನ್ಸಿಗು, ಬ್ರಿಟನ್, ಫ್ರಾನ್ಸ್ ಯಾ ಪೋಲೆಂಡಿನದಲ್ಲ. ಅದು ಡೇನ್ಸಿಗ್ಗಿನದೇ ಇರುವದು. ಅದು ಜರ್ಮನಿಗೆ ಸೇರಬೇಕೆಂದು ಇಲ್ಲಿಯ ನಿವಾಸಿಗಳು ಆಶಿಸುತ್ತಾರೆ. ಜರ್ಮನಿಯಲ್ಲಿ ನಮಗೆ ಪೂರ್ಣ ವಿಶ್ವಾಸವಿದೆ. ಆದ್ದರಿಂದ ಇತರ ರಾಷ್ಟ್ರಗಳು ನಮ್ಮ ಇಚ್ಛೆಯನ್ನು ಬದಲಾಯಿಸಲು ಬಂದರೆ ನಾವು ಕೈಕಟ್ಟಿ ಕೂರಲಾರೆವು' ಎಂದು ಹೇಳಿರುವರು. ಇದರಿಂದ ಜರ್ಮನಿಯ ಕೈವಾಡವು ಡೇನ್ಸಿಗ್ಗಿನಲ್ಲಿ ಪೂರಾ ನಡೆದಿದೆಯೆಂಬುವುದರಲ್ಲಿ ಸಂಶಯವಿಲ್ಲ. ಜರ್ಮನಿಯ ನಾಝಿಗಳು ತಮ್ಮ ಪ್ರಚಂಡ ಪ್ರಚಾರ ಕಾರ್ಯಕ್ರಮದಿಂದ ಡೇನ್ಸಿಗ್‌ನ ಜನತೆಯನ್ನು ಮಾರ್ಪಾಡು ಮಾಡಿರುವರು. ಆದರೆ ಪೋಲೇಂಡಿನವರಾದರೂ ತಮ್ಮ ಸ್ವಾತಂತ್ರ್ಯಕ್ಕಾಗಿ ಜೀವದಾನ ಮಾಡಲು ತಯಾರಾಗಿ ನಿಂತಿರುವ ಪ್ರಯುಕ್ತ ಅಲ್ಲಿ ಡೇನ್ಸಿಗ್ ಮತ್ತು ಪೋಲೇಂಡಿನೊಡನೆ ಒಪ್ಪಂದ ಮಾಡಿಕೊಳ್ಳುವ ಏರ್ಪಾಡು ನಡೆಯುತ್ತಿದೆ. ಅವರ ಶರತ್ತುಗಳು ಹೀಗಿವೆ-(1) ಡೇನ್ಸಿಗ್ಗಿನ ಪಶ್ಚಿಮದಲ್ಲಿರುವ ಕೆಲವು ಭಾಗವನ್ನು ಪೋಲೇಂಡಿಗೆ ಬಿಟ್ಟು ಕೊಡುವದು. (2) ಪೂರ್ವಭಾಗವನ್ನೂ ಮತ್ತು ವೆಸ್ಟರ್ ಪ್ಲೇಟ್ ಎಂಬ ದ್ವೀಪವನ್ನೂ ಜರ್ಮನರಿಗೆ ಕೊಡುವದು. (3) ಡೇನ್ಸಿಗ್ ನಗರ ಮತ್ತು ಬಂದರು ಇವು ಪೋಲೀಷ್—ಜರ್ಮನ್ ಹೀಗೆ ಇಕ್ಕಡೆಯವರ ಹಕ್ಕಾಗಿ ಉಳಿಯತಕ್ಕದ್ದು. (4) ಅಲ್ಲಿಯ ವಂಶಸ್ಥರ ವಿಭಾಗ ಮೇರೆ ದಕ್ಷಿಣಭಾಗವು ವಿಭಾಗಿಸಲ್ಪಡಬೇಕು. ಈ ಸೂಚನೆಗಳಾಗಿದ್ದರೂ ತತ್ಕಾಲ ಅಲ್ಲಿಯ ವಾತಾವರಣವು ಬಿಕ್ಕಟ್ಟಿನಲ್ಲಿರುವ ಪ್ರಯುಕ್ತ ಈ ವಿಚಾರದ ಚರ್ಚೆ ನಡೆದಿರುವದಿಲ್ಲ. ಆದರೆ ಈ ಮಧ್ಯೆ ಇನ್ನೊಂದು ಸಂಧಾನ ಶರತ್ತು ಸೂಚಿಸಲ್ಪಟ್ಟಿದೆ. ಇದರ ಮೇರೆ ಡೇನ್ಸಿಗ್ಗಿನಲ್ಲಿರುವ (1) ಲೀಗ್ ಹೈ ಕಮಿಷನರ ಸ್ಥಾನವು ಹೋಗಬೇಕು. (2) ಡೇನ್ಸಿಗ್ಗಿಗ್ ನಗರದಲ್ಲಿರುವ ಪೋಲೇಂಡಿನ ಪ್ರತಿನಿಧಿಯನ್ನು ತೆಗೆದುಹಾಕಿ ಅದರ ಬದಲು ಪೋಲೇಂಡಿನ ಹಿತದ ಬಗ್ಗೆ ಒಂದು ಪರರಾಷ್ಟ್ರ ಕಾರ್ಯ ಸಂಬಂಧದ ಒಂದು ಮಂಡಲಿಯನ್ನಿಡುವದು. (3) ಡೇನ್ಸಿಗ್ಗನ್ನು ಸ್ವತಂತ್ರ ರಾಷ್ಟ್ರವನ್ನಾಗಿ ಮಾಡಿ ಅಲ್ಲಿಯ ಆಡಳಿತವನ್ನು ಜರ್ಮನ್‌ಮಯವನ್ನಾಗಿ ಮಾಡುವದು. (4) ಡೇನ್ಸಿಗ್‌ನ ಮಿಲಿಟರಿ ತರಬೇತಿನ ಬಗ್ಗೆ ಜರ್ಮನಿಯು ಒತ್ತಾಸೆ ಕೊಡುವದು ಮತ್ತು ವೆಸ್ಟರ್ ಪ್ಲೇಟ್ ದ್ವೀಪದಲ್ಲಿರುವ ಪೋಲೇಂಡಿನ ಯುದ್ಧಸಾಮಾನು ತಯಾರಿ ಸಂಸ್ಥೆಯನ್ನು ತೆಗೆದು ಹಾಕುವದು. (5) ಡೇನ್ಸಿಗ್ ಬಂದರವು ಡೇನ್ಸಿಗ್, ಪೋಲೇಂಡ್ ಮತ್ತು ಜರ್ಮನ್ ಪ್ರತಿನಿಧಿಗಳಿಂದ ಕೂಡಿದ ಒಂದು ಬೋರ್ಡಿನವರ ಅಧೀನದಲ್ಲಿರುವದು. ಈ ವಿಚಾರವೂ ಇನ್ನೂ ಕಾರ್ಯ ರೂಪದಲ್ಲಿ ಬಂದಿಲ್ಲ. ಇಷ್ಟೆಲ್ಲಾ ಸೂಚನೆಗಳಾಗುತ್ತಿದ್ದರೂ ಡೇನ್ಸಿಗ್‌ನ ಪರಿಸ್ಥಿತಿಯು ವಿಷಮಾವಸ್ಥೆಗೆ ತಿರುಗುತ್ತಿದೆ. ಇಂಥಾ ಸಂದರ್ಭದಲ್ಲಿ ಪೋಲೆಂಡಿಗೆ ಬ್ರಿಟನ್ ಯಾ ಫ್ರಾನ್ಸಿನಿಂದ ಯಾವ ಸಹಾಯ ಭರವಸೆಯು ಸಿಗುವಂತೆ ಕಾಣುವುದಿಲ್ಲ. ತಾ. 14ರಲ್ಲಿ ಪೋಲೆಂಡ್ ಸರ್ಕಾರವನ್ನು ದೂಷಿಸಿದರೆಂದೂ, ಪೋಲೆಂಡು ಗಡಿಯನ್ನು ದಾಟಿದರೆಂದೂ ಎರಡು ಜನ ಜರ್ಮನರನ್ನು ಪೋಲೇಂಡಿನವರು ದಸ್ತಗಿರಿ ಮಾಡಿದರು. ಅತ್ತ ಜರ್ಮನರಾದರೋ ನಾಝಿ ತತ್ವಕ್ಕೆ ವಿರೋಧದ ಹಸ್ತಪತ್ರಿಕೆಗಳನ್ನು ಹಂಚಿದರೆಂಬ ನೆವನದಿಂದ ಇಬ್ಬರು ಪೋಲೇಂಡಿನವರನ್ನು ದಸ್ತಗಿರಿ ಮಾಡಿರುವರು. ಅಂತೂ ಡೇನ್ಸಿಗ್‌ನ ಪರಿಸ್ಥಿತಿಯು ದಿನದಿನಕ್ಕೆ ಪ್ರಬಲವಾಗುತ್ತಿದೆ. ಪೋಲೆಂಡಿಗೆ ಯಾರ ಬೆಂಬಲವೂ ಇರುವಂತೆ ಕಾಣುವುದಿಲ್ಲ. ಪರಿಸ್ಥಿತಿಯು ನೋಡಬೇಕಾಗಿದೆ.

ಇಟಲಿ.

ಇಟಲಿಯು ರಾಜ್ಯ ವಿಸ್ತರಣಾ ತೃಷೆಯಿಂದ ಹೊಸ ಹೊಸ ರಾಷ್ಟ್ರಗಳನ್ನು ಹಿಡಿಯಲು ಮುಂದೆ ಸಾಗುತ್ತಿದೆಯೇ ವಿನಹ ಹಿಡಿದ ರಾಷ್ಟ್ರಗಳ ಆಡಳಿತ ಸುಧಾರಿಸಲು ಪ್ರಯತ್ನಿಸುತ್ತಿಲ್ಲ. ಇಟಲಿಯು ಇದೀಗ ಡೊಡಿಕನೀಸ್ ಎಂಬ ದ್ವೀಪದ ನಿವಾಸಿಗಳನ್ನು ಓಡಿಸಿ ಅಲ್ಲಿ ತನ್ನ ಸೈನ್ಯವನ್ನಿಡುವ ಏರ್ಪಾಡು ಮಾಡಿದೆ. ಲೀರೋಸ್ ಮತ್ತು ಪಟ್‌ರೋಸ್ ಎಂಬ ದ್ವೀಪಗಳ ನಿವಾಸಿಗಳನ್ನು ಬಲಾತ್ಕಾರದಿಂದ ಹೊರ ಹಾಕಿದೆ. ಹೀಗೆ ಇಟಲಿಯು ತನ್ನ ಸೈನ್ಯವನ್ನು ಟರ್ಕಿಗೆ ಸಮೀಪವಿರುವ ಡೊಡೆಕನೀಸ್ ದ್ವೀಪದಲ್ಲಿಡಲು ಯತ್ನಿಸಿರುವದರಿಂದ ಟರ್ಕಿಗೆ ಎಚ್ಚರವಾಗಿ ಅದು ತನ್ನ ಗಡಿಗಳನ್ನು ಭದ್ರಪಡಿಸುತ್ತಿದೆ. ಇತ್ತ ಡೇನ್ಸಿಗ್ ಪ್ರಕರಣದಲ್ಲಿ ಇಟಲಿಯು ಜರ್ಮನಿಗೆ ಪೂರಾ ಒತ್ತಾಸೆಯನ್ನಿತ್ತಿವೆ. ಆ ವಿಚಾರದಲ್ಲಿ ಅದು ತುಂಬಾ ಶ್ರದ್ಧೆವಹಿಸಿರುವದನ್ನು ನೋಡಿದರೆ ಸರ್ವಾಧಿಕಾರಿಗಳು ಮುಂದಿನ ಯುದ್ಧಕ್ಕೆ ಪೀಠಿಕೆ ಹಾ

ಜಪಾನ್.

ದೊಡ್ಡ ವಿಚಾರವನ್ನು ಅತ್ಯಲ್ಪವೆಂದು ಮಾಡಿ, ಆನೆಯನ್ನು ನುಸಿ ಎಂದು ಪರಿಗಣಿಸಿ ಅತ್ಯಲ್ಪ ದಿನಗಳಲ್ಲಿ ಚೀನವನ್ನು ತನ್ನ ಬಗಲಲ್ಲಿ ಹಾಕಬಹುದೆಂಬ ಜಂಭದಿಂದ ಹಾರುತ್ತಿದ್ದ ಜಪಾನು ವರ್ಷಗಳೇ ಉರುಳಿದರೂ ನಿರಾಶವಾಗಿ ಕೂತಿದೆ. ಇತ್ತೀಚೆಗೆ ಯುದ್ಧದಿಂದ ಬೇಸತ್ತು ಜಪಾನು ಅಮಾನುಷ ಅತ್ಯಾಚಾರಗಳಿಗೆ ತೊಡಗಿದೆ. ಈ ಅತ್ಯಾಚಾರಕ್ಕೆ ಚೀನೀಯರು ಮಾತ್ರ ಗುರಿಯಲ್ಲ. ಜಪಾನವು ಮನ ಬಂದವರನ್ನು ಹಿಂಸಿಸಿ, ಅವಮಾನಿಸಿ ಹಾಗೆ ಮಾಡುವದೇ ತನ್ನ ಗೈಮೆಯೆಂದು ಭಾವಿಸಿ, ಅಕೃತ್ಯಗಳನ್ನು ಮಾಡುತ್ತಿರುವರು. ಇವರ ಅಕೃತ್ಯಕ್ಕೆ ಭಾರತ, ಬ್ರಿಟನ್, ಫ್ರಾನ್ಸ್, ರಷ್ಯಾ, ಅಮೇರಿಕಾ ಅಲ್ಲದೆ ಕೆಲವು ಸಾರಿ ಆಪ್ತ ತಪ್ಪಿ ಜರ್ಮನಿ, ಇಟಲಿಗಳೇ ಗುರಿಯಾಗುತ್ತಿದ್ದಾರೆ. 'ನಿಮ್ಮ ಜೀವಗಳಿಗೆ ನಾವು ಜವಾಬ್ದಾರರಲ್ಲವೆಂಬ ಘೋಷಣೆಯನ್ನು ಮಾಡಿ ಸಿಕ್ಕಿ ಸಿಕ್ಕಿದ ಹಾಗೆ ವರ್ತಿಸುತ್ತಿರುವ ಜಪಾನಿನ ಅತ್ಯಾಚಾರವನ್ನು ನೋಡಿದರೆ ಅದು ಅವರ ಹುಟ್ಟುಗುಣವೇ ಎಂದು ಭಾಸವಾಗುತ್ತದೆ.

ಯೂರೋಪಿನ

ವಿವಿಧ ರಾಷ್ಟ್ರಗಳ ಬಲಾಬಲ.

ಎಲ್ಲಾ ರಾಷ್ಟ್ರಗಳೂ ಶಾಂತಿ, ಶಾಂತಿಯೆಂದು ಬಾಯಿಬಡಿಯುತ್ತಿದ್ದರೂ ಒಳಗೊಳಗೇ ಶಕ್ತಿಮೀರಿ ಸೈನ್ಯ ಸಂಗ್ರಹ ಮಾಡುತ್ತಿರುವದೆಂಬುದು ಎಲ್ಲರಿಗೂ ತಿಳಿದ ವಿಚಾರ. ಆದರೆ ಅವುಗಳ ಬಲಾಬಲ ಹೇಗಿದೆ ಎಂಬುದನ್ನು ಇಲ್ಲಿ ಕೊಟ್ಟಿರುವೆವು. ಮುಂದೆ ಸಂಭವಿಸಬಹುದಾದ ಘೋರ ಸಂಗ್ರಾಮದಲ್ಲಿ ಪ್ರಜಾಪ್ರಭುತ್ವ ರಾಷ್ಟ್ರಗಳು ಒಂದು ಕಡೆ ನಿಂತರೆ ಅವುಗಳ ಬಲವೆಷ್ಟು? ಸರ್ವಾಧಿಕಾರಿಗಳ ಬಲವೆಷ್ಟು ಎಂಬುದು ಇದರಿಂದ ವಿಶದವಾಗುವದು.

ಪ್ರಜಾಪ್ರಭುತ್ವ ರಾಷ್ಟ್ರಗಳು.

ಒಟ್ಟಾಗಿ ಈ ಕಡೆಯಲ್ಲಿ 2,875,000 ಸೈನ್ಯವಿದೆ. ಇವು ಹೀಗೆ ಹಂಚಲ್ಪಟ್ಟಿವೆ. ಫ್ರಾನ್ಸು 1,000,000, ಬ್ರಿಟನ್ 600,000, ಪೋಲೆಂಡ್ 500,000 ಟರ್ಕಿ 300,000, ರೂಮೇನಿಯಾ 275,000, ಮತ್ತು ಗ್ರೀಸ್ 200,000.

ಸರ್ವಾಧಿಕಾರಿಗಳು.

ಇವರ ಒಟ್ಟು ಸಂಖ್ಯೆಯು 2,700,000 ಇದೆ. ಹಂಗೇರಿಯನ್ನು ಇದಕ್ಕೆ ಸೇರಿಸಿದರೆ 2,900,000 ಆಗುವದು. ಇದರಲ್ಲಿ ಜರ್ಮನಿ 1,750,000, ಇಟಲಿ 950,000 , ಹಂಗೇರಿ 200,000. ಇತ್ತಲಾಗಿ ಸ್ಪೈಯಿನ್ ದೇಶವು ಇವರ ಪಂಗಡಕ್ಕೆ ಬಂದಿರುವದರಿಂದ ಇವರ ಸಂಖ್ಯೆಯು 150,000 ರಿಂದ ಹೆಚ್ಚುವದು. ಅಂತೂ ಇನ್ನೂ ತಟಸ್ಥವಾಗಿ ಉಳಿದಿರುವ ಕೆಲವು ರಾಷ್ಟ್ರಗಳನ್ನು ವಿಭಾಗಿಸಿದರೆ ಪ್ರಜಾಪ್ರಭುತ್ವವೂ, ಸರ್ವಾಧಿಕಾರತ್ವವೂ ಸೈನ್ಯಸಂಗ್ರಹದಲ್ಲಿ ಸರಿಯಾಗಿವೆ. ಹೀಗಿರುವಾಗ ಅವುಗಳ ಜಯಾಪಜಯವು ಬೇಗದ ಕೈಯು ರಷ್ಯಾದಲ್ಲಿ ಉಳಿದಿವೆ. ಪರಿಸ್ಥಿತಿಗಳಿಗನುಸಾರ ಯುದ್ಧದಲ್ಲಿ ರಷ್ಯಾವು ಯಾವ ಪಂಗಡವನ್ನು ಸೇರುವದೊ ಅದೇ ಬಲಶಾಲಿಯಾಗುವದು. ಇಂದು ಯೂರೋಪಿನಲ್ಲಿ ರಷ್ಯಾವನ್ನುಳಿದು ಜರ್ಮನಿಯು ಶಕ್ತಿ ಮೀರಿ ಸೈನ್ಯ ಸಂಗ್ರಹಿಸಿ ಪ್ರಥಮ ಸಾಲಿನಲ್ಲಿ ನಿಂತಿದೆ. ಎರಡೇ ಸರ್ವಾಧಿಕಾರಿ ರಾಷ್ಟ್ರಗಳು ಪ್ರಜಾಪ್ರಭುತ್ವ ರಾಷ್ಟ್ರಗಳನ್ನೆಲ್ಲಾ ಎದುರಿಸುವಷ್ಟು ಶಕ್ತಿಯುತವಾಗಿರುವದು ಮೇಲಿನ ಅಂಕೆ ಸಂಖ್ಯೆಯಿಂದ ತಿಳಿದು ಬರುವದು. ಆದ್ದರಿಂದ ಮುಂದೆ ಒಂದು ಘೋರ ಯುದ್ಧವು ಸಂಭವಿಸಿದರೆ ಅದು ದೀರ್ಘಕಾಲ ಉಳಿಯದಿರದೆಂಬುದು ಇದರಿಂದ ವ್ಯಕ್ತವಾಗುವದು.

ಜನರ ಅಂತರ್ಯದಲ್ಲಿರುವ ಕಷ್ಟಗಳನ್ನು ಅರಿಯಬಲ್ಲುದು. ಗಾಂಧಿಜೀಯವರ ತಮಾಷೆಯಿಂದರೆ ಅವರನ್ನು ಅವರಿಗೇ ಹೋಲಿಸಬೇಕು. ರೋಂ ಪಟ್ಟಣವು ಬೆಂಕಿಯಲ್ಲಿ ಭಸ್ಮವಾಗುತ್ತಿರುವಾಗ ನಿರೋ ಎಂಬ ಪಟ್ಟಣ ನಿವಾಸಿಯು ಪಿಟೀಲು ಬಾರಿಸಿದನಂತೆ. ಹಾಗೆ ಗಾಂಧಿಜೀಯವರು ಎಂಥಾ ಬಿಕ್ಕಟ್ಟಿನಲ್ಲಿಯೂ ತಮ್ಮ ತಮಾಷೆಯಿಂದೊಡಗೂಡಿಯೇ ಇರುವರು. ಅವರು ಸಭ್ಯ, ಧಾರ್ಮಿಕ ಮತ್ತು ಸುಲಕ್ಷಣ ವರ್ತನೆಯೇ ಅವರನ್ನು ಅಜಾತ ಶತ್ರುವನ್ನಾಗಿ ಮಾಡಿದೆ. ಮಧ್ಯಪ್ರಾಂತ್ಯದ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ಸಿ. ಎನ್ ರಂಗ ಐಯ್ಯರವರು 'ಮಹಾತ್ಮರು ಸತ್ತರೆ ಯಾರು ಜೀವಂತವಿರುವರು; ಮಹಾತ್ಮರು ಜೀವಂತವಿದ್ದರೆ ಯಾರು ಸಾಯುವರು?' ಎಂದು ಹೇಳಿರುವದು ಪೂರಾ ಸಮಂಜಸವಿದೆ. ಇಂದು ಭಾರತದ ಪ್ರಾಣವಾಗಿರುವ ಮಹಾತ್ಮರು ಚಿರಾಯುಗಳಾಗಿ ಭಾರತವನ್ನು ಸುಗಮವಾದ ಹಾದಿಯಲ್ಲಿ ಮುನ್ನಡೆಸಲಿ ಎಂದು ಭಗವಂತನನ್ನು ಬೇಡುವ.

ಕೊಡಂದೇರ ಡಿ. ಮಾಚಯ್ಯ,
L. D. Sc. (COLLEGE OF DENTISTRY)
EX-SUPERVISOR, LAXMIBAI PATEL DENTAL HOSPITAL, KARACHI.

ದಂತ ವೈದ್ಯರು

ಎಲ್ಲಾ ರೀತಿಯ ದಂತಚಿಕಿತ್ಸೆಗೆ
ಇವರ ಮಡಿಕೇರಿ ಬಸ್ಸ್ ಸ್ಟ್ಯಾಂಡಿನ ಎದುರುಗಡೆ ಇರುವ

DENTAL CLINIC

ನಲ್ಲಿ ವಿಚಾರಿಸಿರಿ.

ಸುಲಭ ದರ. (9) ನವೀನ ರೀತಿಯ ಚಿಕಿತ್ಸೆ.

Shorthand, Typing etc.

ಶಾರ್ಟ್‌ಹೆಂಡ್, ಟೈಪ್‌ರೈಟಿಂಗ್ ಮೊದಲಾದ ವಿಷಯಗಳಲ್ಲಿ ಕಡಿಮೆ ಫೀಸಿನಲ್ಲಿ ಅತ್ಯುತ್ತಮ ಶಿಕ್ಷಣವು ಬೇಕಾದರೆ, ಮಡಿಕೇರಿ ಬಸ್ಸ್ ಸ್ಟೇಂಡಿನ ಬಳಿಯಲ್ಲಿರುವ ಆೃಡಿಷ್ನಲ್ ಟ್ಯುಟೋರಿಯಲ್ ಸ್ಕೂಲ್ ಇವರಲ್ಲಿ ವಿಚಾರಿಸಿರಿ.

The Manager,
Tutoroial School,

ಕೊಡಗು

ಆಗೊಸ್ತು ತಾರೀಕು ೧೮ನೇ ಶುಕ್ರವಾರ ೧೯೩೯.

ಕಾಂಗ್ರೆಸು ವರ್ಕಿಂಗ್ ಕಮಿಟಿಯ ತೀರ್ಮಾನಗಳು.

ಈ ತಿಂಗಳ 9 ರಲ್ಲಿ ವಾರ್ಧಾದಲ್ಲಿ ನಡೆದ ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ವರ್ಕಿಂಗ್ ಕಮಿಟಿಯ ತೀರ್ಮಾನಗಳಲ್ಲಿ ಎರಡು ಮಹತ್ವದ್ದಾಗಿವೆ. ಒಂದನೇದು—ಸುಭಾಷಚಂದ್ರ ಬೋಸರ ಮೇಲೆ ಶಿಸ್ತಿನ ಕ್ರಮ ಜರಗಿಸಿದ್ದಾಗಿದೆ. ರಾಷ್ಟ್ರಪತಿಗಳಾದ ಬಾಬುರಾಜೇಂದ್ರ ಪ್ರಸಾದರವರ ಕೋರಿಕೆಯನ್ನು ನಿರಾಕರಿಸಿ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ತೀರ್ಮಾನಗಳನ್ನು ನಿಷೇಧಿಸಲಿಕ್ಕಾಗಿ ಜುಲೈ ತಾರೀಕು 9 ರಲ್ಲಿ ಸಭೆಗಳನ್ನು ನಡೆಸಿ ಶಿಸ್ತನ್ನು ಮುರಿದುದಕ್ಕಾಗಿ ಸುಭಾಷ ಚಂದ್ರ ಬೋಸರವರು ಮೂರು ವರ್ಷಗಳ ವರೆಗೆ ಬಂಗಾಳ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರಾಗಿಯಾಗಲೀ ಅಥವಾ ಯಾವದೇ ಕಾಂಗ್ರೆಸ್ ಸಂಸ್ಥೆಯ ಕಮಿಟಿ ಮೆಂಬರಾಗಿಯಾಗಲೀ ಇರಕೂಡದೆಂದು ವರ್ಕಿಂಗ್ ಕಮಿಟಿಯವರು ತೀರ್ಮಾನಿಸಿರುವರು. ಸುಭಾಷ ಚಂದ್ರಬೋಸರಂತಹ ಮುಂದಾಳುಗಳ ಮೇಲೆ ಈ ತರದ ತೀರ್ಮಾನವನ್ನು ಮಾಡಿದ್ದು ಬಹು ಕಠಿಣತರವೆಂದು ಹಲವರಿಗೆ ತೋರಬಹುದು; ಮತ್ತು ಈ ವಿಚಾರವು ದುಃಖದಾಯಕವೂ ಆಗಿರುವದು. ಆದರೆ ವರ್ಕಿಂಗ್ ಕಮಿಟಿಗೆ ಬೇರೆ ದಾರಿಯೇ ಇತ್ತಿಲ್ಲವೆಂದು ಕಂಡು ಬರುತ್ತದೆ. ಶಿಸ್ತನ್ನು ಸರಿಯಾಗಿ ಪಾಲಿಸದಿದ್ದರೆ ಯಾವ ಸಂಸ್ಥೆಯ ಕಾರ್ಯಕಲಾಪಗಳೂ ಸುಸೂತ್ರವಾಗಿ ನಡೆಯಲಾರವು. ಅದರಲ್ಲಿಯೂ ಒಮ್ಮೆ ಕಾಂಗ್ರೆಸಿನ ಅಧ್ಯಕ್ಷರಾಗಿದ್ದ ಸುಭಾಷ ಬೋಸರವರೇ ಈಗಿನ ರಾಷ್ಟ್ರಪತಿಗಳ ಹುಕುಮನ್ನು ಉಲ್ಲಂಘನೆ ಮಾಡುವದಾದರೆ ಕಾಂಗ್ರೆಸಿನ ಶಕ್ತಿಯು ಉಳಿಯುವದು ತಾನೇ ಹೇಗೆ? ಒಂದು ವೇಳೆ ಕಾಂಗ್ರೆಸ್ ಕಮಿಟಿಯ ತೀರ್ಮಾನಗಳು ತನಗೊಪ್ಪಿಗೆಯಾಗದಿದ್ದರೆ ಅವುಗಳನ್ನು ಬದಲಾಯಿಸುವಂತೆ ಅದೇ ಸಮಿತಿಗೆ ಅದವಾ ಕಾಂಗ್ರೆಸ್ ಮಹಾಸಭೆಗೆ ಬೋಸರು ಕ್ರಮಪ್ರಕಾರ ಅಪ್ಪೀಲು ಮಾಡಿಕೊಳ್ಳಬಹುದಿತ್ತು. ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಕೆಳಗಿನ ಕಾಂಗ್ರೆಸ್ ಸಂಸ್ಥೆಗಳ ಅಧಿಕಾರಿಗಳೇ ಕೇಂದ್ರ ಸಂಸ್ಥೆಯ ಗೊತ್ತುವಳಿಗಳನ್ನು ನಿಷೇಧಿಸುತ್ತಾ ಬಂದರೆ ಆ ತೀರ್ಮಾನಗಳನ್ನು ಜಾರಿಗೆ ತರುವವರಾದರೂ ಯಾರು? ಆದ್ದರಿಂದ ಕಾಂಗ್ರೆಸ್ ಸಂಸ್ಥೆಯ ತೀರ್ಮಾನಗಳನ್ನು ದೇಶದಲ್ಲೆಲ್ಲಾ ಜಾರಿಗೆ ತಂದು ಕಾಂಗ್ರೆಸಿನ ಶಕ್ತಿಯನ್ನೂ, ವರ್ಚಸ್ಸನ್ನೂ ಹೆಚ್ಚಿಸುವ ದೃಷ್ಟಿಯಿಂದ ಶಿಸ್ತನ್ನು ಕಾಪಾಡಲು ಮಾಡಿದ ವರ್ಕಿಂಗ್ ಕಮಿಟಿಯವರ ಈ ತೀರ್ಮಾನವು ಯುಕ್ತವಾದದ್ದಾಗಿದೆ. ಈ [illegible]

ವೆನೆಂದು ಸುಭಾಷ ಬೋಸರು ಕೊಟ್ಟಿರುವ ಹೇಳಿಕೆಯು ಆಶಾಜನಕವಾಗಿದೆ. ಇನ್ನಾದರೂ ಅವರು ಕಾಂಗ್ರೆಸ್ ಮಹಾಸಂಸ್ಥೆಯ ಕೀರ್ತಿಯನ್ನೂ ಬಲವನ್ನೂ ಕಡಿಮೆ ಮಾಡುವಂಥಾ ಕಾರ್ಯಗಳಿಗೆ ಉತ್ತೇಜನ ಕೊಡಲಿಕ್ಕಿಲ್ಲವಾಗಿ ನಂಬುತ್ತೇನೆ.

ಬ್ರಿಟಿಷ್ ಸಾಮ್ರಾಜ್ಯದ ಹಿತದ ದೃಷ್ಟಿಯಿಂದ ನಡೆಸಬಹುದಾದ ಯುದ್ಧದಲ್ಲಿ ಹಿಂದೀಯರು ಭಾಗವಹಿಸಬಾರದೆಂದು ಕಾಂಗ್ರೆಸ್ ಸಭೆಯು ತೀರ್ಮಾನಿಸಿದೆ. ಇಂಡಿಯಾ ಸೈನ್ಯವನ್ನು ಹೊರಗೆ ಕಳುಹಿಸಬೇಕಾದರೆ ಕೇಂದ್ರ ಎಸೆಂಬ್ಲಿಯ ಅನುಮತಿ ಪಡೆಯಬೇಕೆಂಬ ಅಭಿಪ್ರಾಯವನ್ನು ಸದರಿ ಸಂಸ್ಥೆಯು ವಿಶದಪಡಿಸಿದೆ. ಈ ಸೂಚನೆಗಳನ್ನೆಲ್ಲಾ ಗಮನಕ್ಕೆ ತಾರದ ಇಂಡಿಯಾ ಸರಕಾರದವರು ಹಿಂದೀ ಸೈನಿಕರನ್ನು ಈಗ ಸಿಂಗಾಪುರಕ್ಕೂ ಮತ್ತು ಈಜಿಪ್ಟಿಗೂ ರವಾನಿಸಿರುವರು. ಇದು ಹಿಂದೂಸ್ಥಾನದ ಭದ್ರತೆಗಾಗಿಯೋ ಅಥವಾ ಬ್ರಿಟಿಷ್ ಸಾಮ್ರಾಜ್ಯದ ಹಿತವನ್ನು ಕಾಯಲಿಕ್ಕಾಗಿಯೋ ಎಂಬುದು ಗೊತ್ತಾಗುವದಿಲ್ಲ. ಹಿಂದೂಸ್ಥಾನದ ಭದ್ರತೆಗಾಗಿದ್ದರೆ ಕೇಂದ್ರ ಎಸೆಂಬ್ಲಿಯ ಆಲೋಚನೆಯನ್ನಾಗಲೀ ಯಾ ಹಿಂದೀಯ ಮುಖಂಡರ ಅಭಿಪ್ರಾಯವನ್ನಾಗಲೀ ಕೇಳಬಹುದಿತ್ತು. ಭಾರತ ಭೂಮಿಯ ಹಿತ ದೃಷ್ಟಿಯಿಂದಾಗಿದ್ದರೆ ಇವರು ಯಾರೂ ಇದಕ್ಕೆ ವಿರೋಧಿಸುತ್ತಿರಲಿಲ್ಲ. ಆದರೆ ಸರ್ಕಾರದವರು ಯಾರ ಅಭಿಪ್ರಾಯವನ್ನೂ ಕೇಳದೆ ಸೈನ್ಯವನ್ನು ಹೊರಗೆ ಕಳುಹಿಸಿದ್ದು ಸಂಶಯಕ್ಕೆ ತುಂಬಾ ಎಡೆಕೊಟ್ಟಿದೆ. ಪ್ರಾಂತೀಕ ಸರಕಾರಗಳ ಸಹಕಾರವಿಲ್ಲದೆ ಇಂಡಿಯಾ ಸರ್ಕಾರದವರು ಮುಂದೆ ಉಂಟಾಗಬಹುದಾದ ಯುದ್ಧಕ್ಕೆ ಇಂಡಿಯಾದಿಂದ ಹೆಚ್ಚಿನ ಸಹಾಯವನ್ನೀಡಲು ಸಾಧ್ಯವಾಗಲಾರದು. ಅಂದ ಮೇಲೆ ಎಂಟು ಪ್ರಾಂತೀಕ ಸರ್ಕಾರಗಳನ್ನು ನಡೆಸುತ್ತಿರುವ ಕಾಂಗ್ರೆಸ್ ಸಂಸ್ಥೆಯ ಆಲೋಚನೆಯನ್ನಾಗಲೀ, ಕೇಂದ್ರ ಎಸೆಂಬ್ಲಿಯ ಸಲಹೆಯನ್ನಾಗಲೀ ಇಂಡಿಯಾ ಸರ್ಕಾರದವರು ಕೇಳದೆ ವರ್ತಿಸಿದ್ದು ಎಂದೂ ಯುಕ್ತವಲ್ಲ. ಇದಕ್ಕಾಗಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ನಿಷೇಧವನ್ನು ಸೂಚಿಸಿದ್ದು ಯೋಗ್ಯವಾಗಿದೆ. ಅಲ್ಲದೆ ಇಂಡಿಯಾ ಸರ್ಕಾರದವರು ಕೇಂದ್ರ ಎಸೆಂಬ್ಲಿಯ ಅವಧಿಯನ್ನು ಮತ್ತೊಂದು ವರ್ಷ ಮುಂದರಿಸಿರುವರು. ಸಂಯುಕ್ತ ರಾಜ್ಯ ಘಟನೆಗೆ ಸಂಸ್ಥಾನಾಧಿಪತಿಗಳ ಒಪ್ಪಿಗೆಯನ್ನು ಪಡೆಯಲು ಅವಕಾಶವ [illegible]

ಎಸೆಂಬ್ಲಿಯ ಚುನಾವಣೆಯನ್ನು ಮುಂದರಿಸುತ್ತಿರುವದಾಗಿಡೆಯೆಂದು ತೋರುತ್ತದೆ. ಕೆಲವು ಸಮಯದ ಹಿಂದೆ ಆಶ್ರಿತ ರಾಜರುಗಳು ಸಂಯುಕ್ತ ರಾಜ್ಯಘಟನೆಗೆ ವಿರುದ್ಧ ಅಭಿಪ್ರಾಯವನ್ನು ಸೂಚಿಸಿದ್ದರು. ಇತ್ತೀಚೆಗೆ ಅವರಲ್ಲಿ ಕೆಲವರು ತಮ್ಮ ಅಭಿಪ್ರಾಯವನ್ನು ಬದಲಾಯಿಸುತ್ತಾ ಬರುತ್ತಿರುವರು. ಆದ್ದರಿಂದ ಸಂಯುಕ್ತ ರಾಜ್ಯಘಟನೆಯನ್ನು ಜಾರಿಗೆ ತರಲು ಸ್ವಲ್ಪ ಕಾಲವಿಳಂಬ ಮಾಡಿದರೆ ಸಂಸ್ಥಾನಾಧಿಪತಿಗಳು ಸಾಕಷ್ಟು ಒಪ್ಪಿಗೆಯನ್ನು ಕೊಡುವರೆಂದು ಇಂಡಿಯಾ ಸರ್ಕಾರದ ನಿರೀಕ್ಷಣೆಯಾಗಿರಬಹುದು. ಆದರೆ ಬ್ರಿಟಿಷ್ ಪ್ರಾಂತದ ಜನರು ಕಾದು ಸೋತಿರುವರು. ಕೇಂದ್ರ ಸರ್ಕಾರದಲ್ಲಿ ಜನರ ಪ್ರತಿನಿಧಿಗಳಿಗೆ ಅಧಿಕಾರವೇನೂ ಇಲ್ಲದೆ ಪ್ರಾಂತೀಕ ಸರ್ಕಾರಗಳ ಅಧಿಕಾರದಿಂದ ದೇಶಕ್ಕೆ ಹೆಚ್ಚಿನ ಪ್ರಯೋಜನಕಾರಿಗಳಾದ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಕೇಂದ್ರದಲ್ಲಿ ಪ್ರಜಾಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಸಂಯುಕ್ತ ರಾಜ್ಯಘಟನೆಯನ್ನು ಒಡನೆ ಜಾರಿಗೆ ತರಬೇಕೆಂದೂ, ಸಾಕಷ್ಟು ಅಧಿಕಾರವಿಲ್ಲದ ಈಗಿನ ಎಸೆಂಬ್ಲಿಯ ಅವಧಿಯನ್ನು ಪುನಃ ಮುಂದುವರಿಸಬಾರದೆಂದೂ ಕಾಂಗ್ರೆಸಿನ ಅಭಿಪ್ರಾಯವಾಗಿದೆ. ಜನರಿಗೆ ಒಪ್ಪಿಗೆಯಾಗದ 1935 ನೇ ಇಂಡಿಯಾ ಸರ್ಕಾರದ ಆಕ್ಟಿನಲ್ಲಿ ಸೂಚಿಸಿರುವ ಫೆಡರಲ್ ಸರ್ಕಾರವನ್ನು ಭಾರತೀಯರು ಎಂದಿಗೂ ಒಪ್ಪಿಕೊಳ್ಳಲಾರರು. ಅದನ್ನು ಬಲಾತ್ಕಾರದಿಂದ ಭಾರತದ ಮೇಲೆ ಹೊರಿಸಿದರೆ ಕಾಂಗ್ರೆಸಿನವರು ಪ್ರತಿಭಟಿಸದೆ ಇರಲಾರರು. ಆದಕಾರಣ ಹಿಂದೀಯರಿಗೆ ಒಪ್ಪಿಗೆಯಾಗುವಂಥ ಸಂಯುಕ್ತ ರಾಜ್ಯಘಟನೆಯನ್ನು ಕೊಡಲು ಹಿಂಜರಿಯುವಂಥಾ ಬ್ರಿಟಿಷರು ಈ ರೀತಿ ಕಾಲವಿಳಂಬದ ವರ್ತನೆಯನ್ನು ಕೈಕೊಂಡಿರುವದಾಗಿರಬಹುದು. ಇವೆರಡು ಕಾರಣಗಳಿಗಾಗಿ ಕಾಂಗ್ರೆಸ್ ಪಕ್ಷದವರ ಕೇಂದ್ರ ಎಸೆಂಬ್ಲಿ ಮೆಂಬರುಗಳು ಆ ಸಂಸ್ಥೆಯ ಬರುವ ಮೀಟಿಂಗಿಗೆ ಬಹಿಷ್ಕಾರ ಹಾಕಬೇಕೆಂದು ವರ್ಕಿಂಗ್ ಕಮಿಟಿಯು ನಿಶ್ಚಯಿಸಿದೆ. ಈ ತೀರ್ಮಾನದಂತೆ ಕಾಂಗ್ರೆಸ್ ಪಕ್ಷದ ಮೆಂಬರುಗಳು ಎಸೆಂಬ್ಲಿಯ ಕಮಿಟಿ ಮೆಂಬರುತನಗಳಿಗೆ ರಾಜೀನಾಮೆ ಕೊಟ್ಟಿರುವರು. ಎಸೆಂಬ್ಲಿಯ ಮುಂದಿನ ಮೀಟಿಂಗಿನಲ್ಲಿ ಗೈರ್‌ಹಾಜರಾಗುವರು. ಪರಿಸ್ಥಿತಿಯು ಬಿಕ್ಕಟ್ಟಾದ ವಸ್ಥೆಯನ್ನು ಹೊಂದಿದರೆ ಪ್ರಾಂತೀಕ ಸರಕಾರದ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆಯನ್ನು ಕೊಡಲು ಸಿದ್ಧರಿರುವರು. ಆದಕಾರಣ ಬ್ರಿಟಿಷ್ ಸರ್ಕಾರದವರು ಭಾರತೀಯರ ಮನೋಭಿಪ್ರಾಯದ ಈ ಸೂಚನೆಗಳಿಗೆ ಗಮನಕೊಟ್ಟು ಉಚಿತ ರೀತಿಯಿಂದ ವರ್ತಿಸುವರಾಗಿ ಆಶಿಸುತ್ತೇವೆ.

ಕೊಡಗು ವಿದ್ಯಾಭಿವೃದ್ಧಿ

ಫಂಡಿನ ವಾರ್ಷಿಕ ಮಹಾಸಭೆ.

ತಾರೀಕು 2-8-39 ರಲ್ಲಿ ಈ ಸಭೆಯು ಕೊಡಗಿನ ಅಸಿಸ್ಟೆಂಟ್ ಕಮಿಷನರಾದ ರಾ. ಸಾ. ಯಂ. ಎಸ್. ಮುಂದಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು.

153 ಸದಸ್ಯರಲ್ಲಿ 80 ಜನರು ಹಾಜರಿದ್ದರು.

ಕಳೆದ ಮಹಾ ಸಭೆಯ ನಡವಳಿಕೆಯನ್ನೂ, 1938-39 ನೇ ವರ್ಷದ ವಾರ್ಷಿಕ ವರದಿ ಮತ್ತು ಆಡಿಟ್ ವರದಿಗಳನ್ನೂ, ಓದಿ ಅಂಗೀಕರಿಸಲಾಯಿತು.

ಬಾಕಿದಾರರಿಂದ ವಸೂಲಿ ಬರಬೇಕಿರುವ ಹಣದ ಬಗ್ಗೆ ತಕ್ಕ ಕ್ರಮ ಕೈಗೊಳ್ಳಬೇಕೆಂದೂ, ಫಂಡನ್ನು ಅಭಿವೃದ್ಧಿಗೊಳಿಸಲು ಯಥೋಚಿತ ಕಾರ್ಯಕ್ರಮ ಕೈಕೊಳ್ಳಬೇಕೆಂದೂ, ಶ್ರೀ ಬಿ. ಎ. ಬೆಳ್ಯಪ್ಪನವರೂ ಸೂಚಿಸಿದ ಠರಾವು ಶ್ರೀ ಐ. ಸಿ. ಸುಬ್ಬಯ್ಯನವರಿಂದ ಅನುಮೋದಿಸಲ್ಪಟ್ಟು, ರಾ. ಸಾ. ಸಿ. ಬಿ. ಐಯ್ಯಣ್ಣನವರಿಂದ ಮತ್ತು ಶ್ರೀ ಕೆ. ಜೆ. ಚಂಗಪ್ಪನವರಿಂದ ಟೀಕಿಸಲ್ಪಟ್ಟ ನಂತರ, ಬಾಕಿಯನ್ನು ವಸೂಲ್ಮಾಡಲು ತಕ್ಕ ಕ್ರಮ ಜರಗಿಸಲು ಸೆಂಟ್ರಲ್ ಕಮಿಟಿಗೆ ಅಧಿಕಾರ ಕೊಟ್ಟದ್ದಲ್ಲದೆ ದೇಶದಲ್ಲೆಲ್ಲಾ ಪ್ರಚಾರಮಾಡಿ ಚಂದಾ ಎತ್ತಲು ಪ್ರಚಾರ ಕಮಿಟಿಯೊಂದನ್ನು ನೇಮಿಸಲು ತೀರ್ಮಾನವಾಯಿತು.

ಶ್ರೀ ಬಿ. ಎ. ಬೆಳ್ಯಪ್ಪನವರು ಸಂಘಕ್ಕೆ ತನ್ನ ಸಹಕಾರವನ್ನೀಯುವೆನೆಂದೂ, ಅದಕ್ಕೆ ಸಂಬಂಧಿಸಿದ ಎಲ್ಲಾ ಪ್ರಕಟಣೆಗಳನ್ನೂ, ವ್ಯವಹಾರಗಳನ್ನೂ ತನ್ನ ವಾರ ಪತ್ರಿಕೆಯಲ್ಲಿ ಮುಫತ್ತಾಗಿ ಪ್ರಕಟಿಸುತ್ತೇನೆಂದೂ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ಲೆ. ಕರ್ನಲ್. ಸಿ. ಎಸ್. ಸುಬ್ಬಯ್ಯನವರು ತನ್ನ ಆಸ್ತಿಯನ್ನೆಲ್ಲಾ ಸಂಘದ ಮೇಲ್ವಿಚಾರಣೆಗೆ ಒಪ್ಪಿಸಲೂ ನಂತ್ರ ವಾರ್ಷಿಕ ಉತ್ಪತ್ತಿಯಲ್ಲಿ ಶೇಕಡ 25 ರಷ್ಟನ್ನು ಸಂಘಕ್ಕೆ ಬಿಡಲೂ ತಯಾರಿರುವರೆಂಬ ಸೂಚನೆಯನ್ನು ಶ್ರೀ ಪಿ. ಯಂ. ನಾಣಯ್ಯನವರು ಸಭೆಯ ಮುಂದಿಟ್ಟರು. ಚರ್ಚೆಯ ನಂತರ ಈ ವಿಚಾರ ಪರಿಶೀಲಿಸಲು ಸೆಂಟ್ರಲ್ ಕಮಿಟಿಗೆ ಅಧಿಕಾರ ಕೊಡಲು ತೀರ್ಮಾನವಾಯಿತು.

ವಿಶ್ವವಿದ್ಯಾಲಯಗಳ ಪರೀಕ್ಷೆಯಲ್ಲಿ ಉತ್ತಮ ರೀತಿಯಿಂದ ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಸೆಂಟ್ರಲ್ ಕಮಿಟಿಯು ನಿರ್ಣಯಿಸುವಂತೆ ಬಹುಮಾನವಾಗಿ ಕೊಡಲು ಈ ಸಂಘದಿಂದ ರೂ. 30 ಪ್ರತಿ ವರ್ಷ ತೆಗೆದಿಡಬೇಕೆಂಬ ಶ್ರೀ ಐ. ಸಿ. ಸುಬ್ಬಯ್ಯನವರ ಸೂಚನೆಯು ಬಹುಮತದಿಂದ ಅಂಗೀಕೃತವಾಯಿತು.

ಮಡಿಕೇರಿಯಲ್ಲಿ ಚಂದಾ ಹಣ ವಸೂಲ್ಮಾಡಲು ರಾ. ಸಾ. ಸಿ. ಬಿ. ಐಯ್ಯಣ್ಣನವರನ್ನೂ ಮತ್ತು ಶ್ರೀ ಬಿ. ಎ. ಬೆಳ್ಯಪ್ಪನವರನ್ನೂ ಚುನಾಯಿಸಲಾಯಿತು.

1939-40 ನೇ ವರ್ಷದ ಲೆಕ್ಕ ಪರಿಶೋಧಕರಾಗಿ ಶ್ರೀಗಳಾದ ಪಿ. ಯಂ. ಚಂಗಪ್ಪ ಮತ್ತು ಜಿ. ಸುಬ್ಬಯ್ಯನವರುಗಳನ್ನು ನೇಮಿಸಲಾಯಿತು.

ಅಧ್ಯಕ್ಷರಿಗೆ ವಂದನೆಯಿಂದ ಸಭೆಯು ಮುಕ್ತಾಯಗೊಂಡಿತು.

ಯಂ. ಎಸ್. ಮುಂದಣ್ಣ,
ಪ್ರೆಸಿಡೆಂಟ್.

ವರ್ತಮಾನ ಸಂಗ್ರಹ.

ಒಳದೇಶ.

ಒಂದು ವಾರದಿಂದ ದೇಶದ ಎಲ್ಲಾ ಕಡೆಗೂ ಮಳೆ ಬೀಳುತ್ತಿರುವದರಿಂದ ನಾಟಿ ಕೆಲಸವು ಭರದಿಂದ ನಡೆಯುತ್ತಿದೆ. ಒಣಗಿ ಹೋಗಿದ್ದ ಗದ್ದೆಗಳಲ್ಲೆಲ್ಲಾ ನೀರಾಗಿ ವ್ಯವಸಾಯಕ್ಕೆ ಅನುಕೂಲವಾಗಿದೆ.

ಮಳೆಯಿಲ್ಲದೆ ದೇಶದಲ್ಲೆಲ್ಲಾ ಕ್ಷೋಭೆಯೆದ್ದಿದ್ದ ಪ್ರಯುಕ್ತ ಕಾವೇರಿ ದೇವಸ್ಥಾನದಲ್ಲೂ, ಓಂಕಾರ ದೇವಸ್ಥಾನದಲ್ಲೂ ಮಳೆ ಹೊಡೆಯಲೆಂದು ಪೂಜೆ ಮಾಡಿದರೆಂದೂ, ಮುಗ್ಗುಲ ಮಲೆಮಹದೇವರ ದೇವಸ್ಥಾನದಲ್ಲಿ ತಾ. 10-8-39 ರಿಂದ 5 ದಿನಗಳ ವರೆಗೆ ರುದ್ರಾಭಿಷೇಕ ಮಾಡಿಸಿದರೆಂದೂ ತಿಳಿಯುತ್ತೇವೆ.

ಮಡಿಕೇರಿ.

ಕೊಡಗು ಸರ್ಕಾರದ ಜನರಲ್ ಪರ್ಪಸಸ್ ಸ್ಟೇಂಡಿಂಗ್ ಕಮಿಟಿಯ ಮೀಟಿಂಗು ಬರುವ ನವಂಬರ್ ತಾ. 1 ರಲ್ಲಿ ಇಲ್ಲಿ ನಡೆಯುವುದಾಗಿ ತಿಳಿಯುತ್ತೇವೆ.

ಇಲ್ಲಿ ತಾ. 12 ರಿಂದ ಇಂದಿನ ವರೆಗೆ 9 ಇಂಚು 39 ಸೆಂಟು ಮಳೆಯಾಗಿದೆ. ಹೆಚ್ಚಾಗಿ ಮಳೆಯಾದ ತಾ. 12 ರಲ್ಲಿ 2 ಇಂಚು 85 ಸೆಂಟು ಆಗಿತ್ತು.

ಇಲ್ಲಿಯ ಸ್ಪೋರ್ಟ್ಸ್ ಕ್ಲಬ್ಬಿನವರು ಕೆಲಸದಿಂದ ನಿವೃತ್ತರಾಗಿರುವ ಶ್ರೀ ಕರವಂಡ ಚೆಂಗಪ್ಪನವರಿಗೆ ಒಂದು ವಿನೋದ ಕೂಟವನ್ನು ತಾರೀಕು 15 ರಲ್ಲಿ ಸೇರಿಸಿ ಸತ್ಕರಿಸಿದರಾಗಿ ತಿಳಿಯುತ್ತೇವೆ.

ಈ ತಾ. 17 ರಲ್ಲಿ ಇಲ್ಲಿಂದ ಫ್ರೇಜರ್‌ಪೇಟೆಗೆ ಹೋಗಿರುವ ಕಮಿಷನರವರು ಅಲ್ಲಿ ತಾ. 22 ರ ವರೆಗೆ ಇದ್ದು, ತಾರೀಕು 23 ರಿಂದ 29 ರ ವರೆಗೆ ಪೊಳ್ಳೆಬೆಟ್ಟದಲ್ಲಿ ಕ್ಯಾಂಪು ಮಾಡಿ, ತಾ. 30 ರಲ್ಲಿ ವಾಪಸು ಬರುವರಾಗಿ ತಿಳಿಯಬರುತ್ತದೆ.

ವೀರಾಜಪೇಟೆ.

ಈ ವಾರ ಇಲ್ಲಿ ಭತ್ತ ಗಡಗೆ ರೂ. 47 ರ ವರೆಗೆ ಕ್ರಯವಿತ್ತು.

ತಾ. 12 ರಲ್ಲಿ ಜಿಲ್ಲಾ ಕಾಂಗ್ರೆಸು ಕಮಿಟಿಯ ಮೀಟಿಂಗು ಇಲ್ಲಿ ನಡೆದು, ಕೊಡಗಿನ ಪೂರ್ಣ ಜವಾಬ್ದಾರಿ ಸರ್ಕಾರ ಪಡೆಯಲಿಕ್ಕೂ, ಮಧ್ಯವರ್ತಿ ಸರ್ಕಾರದಿಂದ ವಾರ್ಷಿಕ ವಂತಿಗೆ ಪಡೆಯಲಿಕ್ಕೂ ಪ್ರಚಾರ ಕೆಲಸ ನಡೆಸುವಂತೆ ತೀರ್ಮಾನಿಸಲಾಯಿತೆಂದು ತಿಳಿಯ ಬರುತ್ತದೆ.

ಈ ತಾ. 10 ರಲ್ಲಿ ಕಾವೇರಿ ನದಿಯಲ್ಲಿ ಬೇತರಿ ಕಡುವಿನ ಬಳಿ ಒಬ್ಬ ಪುರುಷನ ಶವವು ತೇಲಿಕೊಂಡಿದ್ದದ್ದು ಕಂಡು ಬಂದು ತೆಗೆಯಲಾಯಿತೆಂದೂ ಅದರ ಕುತ್ತಿಗೆಗೆ ಕಲ್ಲು ಕಟ್ಟಲಾಗಿತ್ತೆಂದೂ, ಪೋಲೀಸಿನವರು ವಿಚಾರ ನಡಿಸುತ್ತಿರುವರೆಂದೂ ತಿಳಿಯ ಬರುತ್ತದೆ.

ಗೋಣಿಕೊಪ್ಪಲು.

ಈ ತಾ. 13 ರಲ್ಲಿ ಇಲ್ಲಿಯ ಟೌನ್ ಹಾಲ್‌ನಲ್ಲಿ ಶ್ರೀ ಚೆಪ್ಪುಡೀರ ದೇವಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ನಡೆಯಿತು. ಸರ್ಕಾರಿ ಬಾಕಿಗಾಗಿ ಭೂಮಿ ಹರಾಜಿನ ರೀತಿಗಳನ್ನು ಖಂಡಿಸಿಯೂ, ಮರ ಮತ್ತು ಫಾರೆಸ್ಟು ಇತರ ಉತ್ಪತ್ತಿಗಳ ಒಯ್ಯುವಿಕೆಯನ್ನು ಕುರಿತ ಹೊಸ ನಿಬಂಧನೆಗಳನ್ನು ವಿರೋಧಿಸಿಯೂ ಠರಾವುಗಳು ಪಾಸು ಮಾಡಲಾದವು.

ಹುದಿಕೇರಿ.

ಜಮೀನ್ದಾರರ ಸಂಘದ ಆಶ್ರಯದಲ್ಲಿ ತಾ. 14 ರಲ್ಲಿ ಇಲ್ಲಿಯ ಭಜನ ಮಂದಿರದಲ್ಲಿ ಒಂದು ಪಬ್ಲಿಕ್ ಸಭೆ ಕೂಡಿತು. ಮಿ. ಬಯನಂಡ ಪೊನ್ನಪ್ಪನವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಕಂದಾಯ ವಗೈರೆ ಬಾಕಿಗಾಗಿ ಭೂಮಿ ಹರಾಜಿನ ನಿಷೇಧ ಮತ್ತು ಫಾರೆಸ್ಟು ಉತ್ಪತ್ತಿಗಳ ಸಾಗಿಸುವಿಕೆಯನ್ನು ಕುರಿತ ಹೊಸ ನಿಬಂಧನೆಗಳ ವಿರೋಧ—ಇವುಗಳ ಸಂಬಂಧ ಕಳೆದ ವಾರ ವೀರಾಜಪೇಟೆ ಮೀಟಿಂಗಿನಲ್ಲಿ ಪಾಸಾದ ರೀತಿ ಠರಾವುಗಳು ಪಾಸಾದವು. ನಂತರ ಕಾಂಗ್ರೆಸಿಗೆ ಮೆಂಬರಾಗಿ ಸೇರಲು ಮಿ. ಕೆ. ಸಿ. ಕರುಂಬಯ್ಯನವರು ಜನರಲ್ಲಿ ಅಪ್ಪೀಲು ಮಾಡಿದರು.

ಮೂರ್ನಾಡು

ಈ ತಾ. 15 ರಲ್ಲಿ ಇಲ್ಲಿಯ ಬಾಡಗ ಗ್ರಾಮದ ಮಿ. ಕೆಂಬಡಕಂಡ ಪೊಣ್ಣಪ್ಪನವರ ಮನೆಯಲ್ಲಿದ್ದ ತೀಯರ ರಾಮನೆಂಬವನು ಗುಂಡು ಹೊಡೆದುಕೊಂಡು ಆತ್ಮಹತ್ಯಮಾಡಿಕೊಂಡನೆಂದೂ, ಪೋಲೀಸು ತನಿಖೆ ನಡಿಸುತ್ತಿದೆಯೆಂದೂ ವರ್ತಮಾನ.

ತಿದ್ದುಪಡಿ.

ಕಳೆದ ವಾರ ಪ್ರಕಟವಾಗಿದ್ದ ಕೊಡಗು ಮುಜರಾಯಿ ಇಲಾಖೆಯ ಇಸ್ತಿಹಾರು ನಾಮೆಯಲ್ಲಿ ವೀರಾಜಪೇಟೆಯಲ್ಲಿ ಓಟು ರಿಕಾರ್ಡ್ ಮಾಡುವ ತಾರೀಕು 11-11-39 ಎಂದು ತಪ್ಪಾಗಿ ಪ್ರಕಟವಾಗಿತ್ತು. ವಾಚಕರು ಅದನ್ನು 11-10-39 ಎಂದು ಓದಿಕೊಳ್ಳುವದು.

[ಸಂ.

ಹಿಂದೂ ದೇಶ.

ಹಿಂದೂ ಮಹಾಸಭೆಯ ಅಧಿವೇಶನವು ಬರುವ ಡಿಸೆಂಬರಿನಲ್ಲಿ ಕಲ್ಕತ್ತೆಯ ದೇಶಬಂಧು ಪಾರ್ಕಿನಲ್ಲಿ ಜರುಗುವುದಾಗಿದೆ.

ಜನಾಂಗ ಸಂಘಕ್ಕೆ ಹಿಂದೂ ದೇಶವು ತೆರುವ ವಾರ್ಷಿಕ ವಂತಿಗೆಯಲ್ಲಿ 20 ಸಾವಿರ ರೂಪಾಯಿಗಳು ಕಡಿಮೆಯಾಗಿದೆ.

ಇದೇ ಸೆಪ್ಟೆಂಬರ್ ತಾ. 21 ಕ್ಕೆ ಸಮ್ಮ ವೈಸರಾಯರು ಕೇಂದ್ರ ಶಾಸನ ಸಭೆಯ ಸಂಯುಕ್ತ ಅಧಿವೇಶನದಲ್ಲಿ ಭಾಷಣ ಕೊಡುವರು.

ಹೈದರಾಬಾದಿನಲ್ಲಿನ ಬ್ರಿಟಿಷ್ ರೆಸಿಡೆಂಟರು, ಆಂಗ್ಲ ಪತ್ರಿಕೆಯಾದ 'ಡೆಕ್ಕಾನ್ ಕ್ರಾನಿಕಲ್'ಗೆ ಕೊಟ್ಟ ಮುದ್ರಣದ ಅವಕಾಶವನ್ನು ರದ್ದು ಮಾಡಿರುವರು.

ಸದ್ಯದಲ್ಲಿಯೇ ಮಲಬಾರಿನ ಗುರುವಾಯೂರ್ ದೇವಸ್ಥಾನದೊಳಗೆ ಹರಿಜನರಿಗೆ ಪ್ರವೇಶ ದೊರಕಿಸಿ ಕೊಡಲಿಕ್ಕಾಗಿ ಅಲ್ಲಿ ಈಗಲೇ ಶೀಘ್ರ ಏರ್ಪಾಡುಗಳು ಜರುಗುತ್ತಿವೆ.

ಪಂಜಾಬು ಸರಕಾರವು, ತನ್ನಲ್ಲಿನ ನೀರಾವರಿ ಕಾರ್ಯಗಳ ಬಡಾವಣೆಗಾಗಿ, ಇದೀಗಲೇ 250 ಲಕ್ಷ ರೂಪಾಯಿಗಳ ಸಾಲವೆತ್ತಲು ನಿರ್ಧರಿಸಿದೆ. ಅದು ಈ ವಾರದಲ್ಲಿ ಸಂಗ್ರಹವಾಗುವುದು.

ಬೊಂಬಾಯಿ ನಗರದ ಪೋಲೀಸ್ ಆಸ್ಪತ್ರೆಯಲ್ಲಿ ಕಳೆದ ವಾರ ಒಬ್ಬ ಉನ್ಮತ್ತನು ಮೃತಿಹೊಂದಿದನು. ವೈದ್ಯರು ಆವನ ಶವದ ಪರೀಕ್ಷೆ ನಡಿಸಿದಾಗ ಆವನ ಹೊಟ್ಟೆಯೊಳಗೆ ಒಟ್ಟು 4-8-0 ರೂಪಾಯಿನ 173 ನಾಣ್ಯಗಳಿದ್ದವು.

ಮದರಾಸು ಸರಕಾರವು ಈ ಆಧಿಪತ್ಯದ ಎಲ್ಲ ಜಿಲ್ಲಾ ಬೋರ್ಡುಗಳಿಗೂ ಗ್ರಾಮೋದ್ಧಾರ ಕಾರ್ಯಕ್ಕಾಗಿ ಒಟ್ಟಿಗೆ 1,17,626 ರೂಪಾಯಿಗಳನ್ನು ಹಂಚಲು ನಿರ್ಧರಿಸಿದೆ. ಪ್ರತಿಯೊಂದು ಜಿಲ್ಲೆಗೂ ಅವರವರ ಆವಶ್ಯಕತೆಗೆ ತಕ್ಕಂತೆ ಹಂಚೋಣವೆಂದು ಹೇಳಲಾಗಿದೆ.

ಪಂಜಾಬಿನಲ್ಲಿ ವಿದ್ಯಾ ಪ್ರಚಾರಕ್ಕಾಗಿ ಚಳವಳಿ ಆರಂಭವಾಗಿದೆ. ಅಲ್ಲಿನ ವಿದ್ಯಾ ಮಂತ್ರಿಗಳಾದ ಮಾನ್ಯ ಶ್ರೀ. ಮಿಯಾನ್ ಅಬ್ದುಲ್ ಹೈಯವರು, 'ಪ್ರತಿಯೊಬ್ಬನೂ ಪ್ರತಿಯೊಬ್ಬನಿಗೆ ಕಲಿಸಬೇಕು' ಎನ್ನುತ್ತಾ, ನಿರಕ್ಷರತೆಯನ್ನು ಹೋಗಲಾಡಿಸಲು ಬಹಳವಾಗಿ ಪ್ರಯತ್ನಿಸುತ್ತಿದ್ದಾರೆ.

ಆಯುಧಗಳನ್ನೂ ಮದ್ದು ಗುಂಡುಗಳನ್ನೂ ಇಂಡಿಯದಲ್ಲಿಯೇ ತಯಾರಿಸುವಂತೆ, ಇಂಡಿಯಾ ಸರಕಾರವು ನಿರ್ಧರಿಸಿದೆ. ಆಗಲೇ ಮೆಷಿನ್ ಗನ್ ಬೆಲ್ಟ್ ಮೊದಲಾದುಗಳ ನಿರ್ಮಾಣ ಇಲ್ಲಿ ಪ್ರಾರಂಭವಾಗಿದೆ. ಇನ್ನು ಬಂಗಾಳ ಪ್ರಾಂತದಲ್ಲಿ 100 ಎಕರೆ ಭೂಮಿಯನ್ನು ಕೊಂಡು, ಅಲ್ಲಿ ವಿಮಾನಗಳನ್ನೂ, ಬಾಂಬುಗಳನ್ನೂ ನಿರ್ಮಿಸಲಾಗುವುದೆಂದೂ ತಿಳಿಯಬರುತ್ತದೆ.

ಗುಜರಾತಿನ ಕೆಲವು ಪ್ರದೇಶಗಳಲ್ಲೂ ಕಾಠಿಯವಾಡ್ ಸಂಸ್ಥಾನದಲ್ಲೂ ಕ್ಷಾಮದ ಬಾಧೆಯು ಪ್ರಬಲವಾಗುತ್ತಿರುವುದೆಂದು ವರದಿ ಬಂದಿದೆ. ದನಗಳಿಗೆ ಮೇವಿಲ್ಲದೆ ಅವುಗಳ ಮರಣ ಸಂಖ್ಯೆಯು ಹೆಚ್ಚುತ್ತಲಿದೆ. ಆ ಸುತ್ತುಮುತ್ತಲಿನ ಗ್ರಾಮಾಂತರ ಪ್ರದೇಶಗಳಿಂದ ಜನರು ತಮ್ಮ ಜಾನುವಾರುಗಳೊಡನೆ ಅಹಮದಾಬಾದಿಗೆ ಹೋಗಿ ಸೇರಿಕೊಳ್ಳುತ್ತಲಿದ್ದಾರೆ. ಹಸಿವಿನ ಬಾಧೆಯನ್ನು ಸಹಿಸಲಾರದೆ ಒಬ್ಬನ ಮರಣವಾಗಿದೆ. ಸರ್ಕಾರದವರೂ ಕಾಂಗ್ರೆಸ್ ಸಂಸ್ಥೆಯವರೂ ಕ್ಷಾಮಪೀಡಿತರಿಗೆ ಅನ್ನ ಆಹಾರಾದಿಗಳನ್ನು ಒದಗಿಸಿಕೊಡುವ ಮತ್ತು ಆಹಾರ ಸಾಮಗ್ರಿಗಳನ್ನು ಸುಲಭವಾದ ಬೆಲೆಗೆ ಮಾರಾಟಮಾಡುವ ಏರ್ಪಾಡುಗಳನ್ನು ಕೈಕೊಳ್ಳಬೇಕೆಂದು ನಿಶ್ಚೈಸಿರುವುದಾಗಿ ತಿಳಿಯುವುದು

ಬೊಂಬಾಯಿನಲ್ಲಿ ಸುಮಾರು ನಾಲ್ಕು ತಿಂಗಳುಗಳ ಹಿಂದೆ ಫೀನಿಕ್ಸ್ ಗಿರಣಿ ಎಂಬುದು ಮುಚ್ಚಿ ಹೋಯಿತು. ಅದರಿಂದ ಸುಮಾರು 3,000 ಕೂಲಿಕಾರರಿಗೆ ಕೆಲಸ ತಪ್ಪಿಹೋಯಿತು. ಕಳೆದ ವಾರ ಸುಮಾರು 70 ಮಂದಿ ಆ ಗಿರಣಿಯ ಕೂಲಿ ಹೆಂಗಸರು [illegible] ವಿ. ಕೆ. ಯಂ. [illegible] ಕಛೇರಿಯ ಬಾಗಿಲಿಗೆ ಅಡ್ಡಲಾಗಿ ಹೋಗಿ ಕುಳಿತರು. ಸಚಿವರು ಆ ಗಿರಣಿಯ ಮಾಲೀಕರುಗಳು ಮತ್ತೆ ಅದರ ಬಾಗಿಲು ತೆರೆಯುವಂತೆ ಅವರನ್ನು ಪ್ರೇರೇಪಿಸಬೇಕೆಂಬುದು ಆ ಹೆಂಗಸರ ಅಭಿಪ್ರಾಯವಾಗಿತ್ತು. ಆದರೆ ಪೋಲೀಸಿನವರು ಆ ಮುಷ್ಕರಗಾರರನ್ನು ಅಲ್ಲಿಂದ ಐದು ನಿಮಿಷಗಳೊಳಗೆ ಓಡಿಸಿಬಿಟ್ಟರು.

ಕಾವೇರಿ ಹೊಳೆಯಲ್ಲಿ ಶವ!

F. I. R. No. 51/39 dated 10-8-39 of Virajpet station.

ತಾ. 10-8-39 ರಲ್ಲಿ ಕಾವೇರಿ ಹೊಳೆಯ ಬೇತರಿ ಕಡುವಿನಿಂದ ಸಾಧಾರಣ 1 ಫರ್ಲಾಂಗ್ ಕೆಳಗೆ ಒಬ್ಬ ಮೃತಪಟ್ಟ ಮನುಷ್ಯನ ಶವವು ಹೊಳೆಯ ಮಧ್ಯದಲ್ಲಿ ಎರ್‌ಪಾಳಿ ಪೊದರಿನಲ್ಲಿ ಸಿಕ್ಕಿಕೊಂಡದ್ದು ಕಂಡು ಬಂದಿದೆ. ಸದರಿ ಮೃತಪಟ್ಟ ಮನುಷ್ಯನ ಎತ್ತರ 4¾ ಅಡಿ, ಸಾಧಾರಣ ಕಪ್ಪು ವರ್ಣ, ಉರುಟು ಮುಖ, ಚಹರೆಗಳೇನೂ ಕಾಣುವುದಿಲ್ಲ. ಮೀನು ವಗೈರೆ ತಿಂದು ವಿರೂಪವಾಗಿದೆ. ತಲೆಯಲ್ಲಿ ಕೂದಲು ಸ್ವಲ್ಪ ಸ್ವಲ್ಪ ಕಾಣುತ್ತದೆ. ಕ್ರಾಪ್ ಮಾಡಿಸಿದ್ದಾನೆ, ಶವದ ಮೈ ಮೇಲೆ ಒಂದು ಕೆಂಪು ಹಸುರು ಗೀರಿನ ಡ್ರಾಸ್ ಮತ್ತು ನೀಲಗೀರಿನ ಬಿಳೀ ಸುರಾಲು, ಕರೀ ಚುಕ್ಕಿಗಳಿರುವ ಚಿಕ್ಕ ಕೋಟು, ಕರೀ ಬಿಳೀ ಗೀರಿನ ಚಿಕ್ಕ ದರಟು ಇವೆ. ಮೃತನು ಯಾರೆಂದು ಪತ್ತೆಯಾದಲ್ಲಿ ದಯವಿಟ್ಟು ವೀರಾಜಪೇಟೆ ಪೋಲೀಸ್ ಸ್ಟೇಷನಿಗೆ ತಿಳಿಸುವದು.

For Immediate SALE.

1. One 12½ H. P. Ruston Crude oil Engine in perfect order.
2. One Flour Mill 10" plate.
3. One No. 7 Engle burg Rice Huller.
4. One Coffee Mill Complete with accessories.

Price Rs. 2250 -or near offer.

For particulars apply to:—
C. S. Deviaha,
Manager,
Allicutty Estate,
Somwarpet P. O.
N. Coorg.
4-3

ಸುಸಮಯ! ತ್ವರೆಮಾಡಿರಿ!!

ಮಾರಾಟಕ್ಕೆ ಸಿದ್ಧವಾಗಿದೆ.

ಅಮ್ಮತ್ತಿನಾಡು ಬೈರಂಬಾಡ ಗ್ರಾಮದಲ್ಲಿ ಅಮ್ಮತ್ತಿ-ಮೂರ್ನಾಡು ರಸ್ತೆಯ ಬಳಿ 5ನೇ ಮೈಲಿನಲ್ಲಿ ಇರುವ ಕಾವೇರಿ ಕಾಫಿ ತೋಟ. ಒಟ್ಟು ವಿಸ್ತೀರ್ಣ 225 ಎಕರೆ.

ಸಾಗಿನ ಗದ್ದೆ	17.64	ಎಕರೆ.
ರಬಸ್ಟ ಕಾಫಿ	11	,,
ಅರಾಬಿಕಾ ಕಾಫಿ	10	,,
ಫಸಲಿಗೆ ಬಂದ ಕಿತ್ತಳೆ	5	,,
3 ವರ್ಷ ಪ್ರಾಯದ ಕಿತ್ತಳೆ	3	,,
ಟೀತೋಟ	7	,,

ಬಾಕಿ ಜಾಗ ಕಿತ್ತಳೆ, ಕಾಫಿಗೆ ಉತ್ತಮವಾದದ್ದು. ಹಂಚಿನ ಬಂಗ್ಲೆ, ಲೈನು, ದನವಿನ ಕೊಟ್ಟಿಗೆ, ಇತ್ಯಾದಿ ಒಳ್ಳೆಯ ಉನ್ನತವಾದ ಆರೋಗ್ಯ ಸ್ಥಳದಲ್ಲಿದೆ. ಹೆಚ್ಚಿನ ಸಂಗತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ವಿ. ಗೋಪಾಲಸ್ವಾಮಿ ನಾಯಡು,
ಹೊಸಹಳ್ಳಿ, ಪೊಳ್ಳಿಬೆಟ್ಟ ಪೋಸ್ಟು,
4-3 ಕೊಡಗು.

ಕಾಂಗ್ರೆಸ್ ಕಾರ್ಯಕ್ಷೇತ್ರ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ.

- ಬೋಸರು ಮೂರು ವರ್ಷಗಳ ವರೆಗೆ ಕಾಂಗ್ರೆಸ್ಸಿನಿಂದ ಪದಚ್ಯುತಿ ಮಾಡಲ್ಪಟ್ಟರು.
- ಬ್ರಿಟಿಷರ ಯುದ್ಧ ಸಿದ್ಧತೆಯನ್ನು ಕಾಂಗ್ರೆಸು ನಿಶೇಧಿಸಿತು.
- ಪ್ರಾಂತೀಕ ಕಾಂಗ್ರೆಸ್ ಮಂತ್ರಿ ಮಂಡಲಗಳು ಈ ಬಗ್ಗೆ ರಾಜಿನಾಮೆ ಕೊಡಬೇಕೆಂದು ನಿರ್ಣಯಿಸಿತು.
- ಸೆಂಟ್ರಲ್ ಎಸೆಂಬ್ಲಿಯ ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸಿನವರ ಅಸಹಕಾರ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮೀಟಿಂಗು ತಾ. 9 ರಿಂದ 3 ದಿನಗಳ ವರೆಗೆ ವರ್ಧಾದಲ್ಲಿ ನಡೆಯಿತು. ಅಲ್ಲಿ ಪಾಸಾದ ಕೆಲವು ಪ್ರಾಮುಖ್ಯ ಗೊತ್ತುವಳಿಗಳನ್ನು ಇಲ್ಲಿ ಕೊಡಲಾಗಿದೆ.

ಸಿಲೋನಿನ ಧೋರಣೆ.

ಸಿಂಹಳ ದ್ವೀಪದ ಪ್ರಭುತ್ವವು ಹಿಂದೀಯ ಕೆಲಸಗಾರರನ್ನು ಕೆಲಸದಲ್ಲಿ ತೆಗೆದುಕೊಳ್ಳದೆ ಅವರನ್ನು ಧಿಕ್ಕಾರ ಮಾಡಿರುವ ಧೋರಣವನ್ನು ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಬಲವಾಗಿ ನಿಶೇಧಿಸಿದೆ. ಜವಾಹರಲಾಲರ ಸೂಚನೆಗಳನ್ನು ವರ್ಕಿಂಗ್ ಕಮಿಟಿಯು ಅಂಗೀಕರಿಸಿರುವದಲ್ಲದೆ ಇನ್ನು ಮುಂದೆ ಹಿಂದೀಯರು ಸಿಂಹಳಕ್ಕೆ ಹೋಗಬಾರದೆಂದು ವರ್ಕಿಂಗ್ ಕಮಿಟಿಯು ಸ್ಪಷ್ಟ ಅಭಿಪ್ರಾಯಪಟ್ಟಿದೆ.

ಮಧ್ಯ ಸರಕಾರದ ನ್ಯಾಯವಿಧಾಯಕ ಸಭೆಯಲ್ಲಿ ಅಸಹಕಾರ.

ಬ್ರಿಟಿಷ್ ಸರಕಾರವು ಕಾಂಗ್ರೆಸಿನವರ ಧೋರಣೆಯನ್ನು ನಿರಾಕರಿಸಿ ಭಾರತದ ಸೈನ್ಯವನ್ನು ವಿದೇಶಗಳಿಗೆ ಕಳುಹಿಸುವ ವರ್ತನೆಯನ್ನು ವರ್ಕಿಂಗ್ ಕಮಿಟಿಯು ಖಂಡಿಸಿ, ಇದು ಮುಂದಿನ ಘೋರ ಸಂಗ್ರಾಮದಲ್ಲಿ ಭಾರತವನ್ನೂ ಸಿಲುಕಿಸುವ ದಾರಿಯೆಂದು ಅಭಿಪ್ರಾಯ ಪಟ್ಟಿರುವರಲ್ಲದೆ ಸೆಂಟ್ರಲ್ ಎಸೆಂಬ್ಲಿಗೆ ಒಂದು ವರ್ಷದ ಜೀವದಾನ ಮಾಡಿರುವದನ್ನೂ ಕುರಿತು ಈ ಠರಾವನ್ನು ನಿರ್ಣಯಿಸಿರುವರು.

“ ಬ್ರಿಟಿಷ್ ಸರಕಾರದ ಮೇಲ್ಕಂಡ ಕುಟಿಲ ನೀತಿಗಳನ್ನು ಕಾಂಗ್ರೆಸ್ ಅಂಗೀಕರಿಸದು. ಕಾಂಗ್ರೆಸು ಬ್ರಿಟಿಷ್ ಸರಕಾರದೊಡನೆ ಅಸಹಕರಿಸುವದಲ್ಲದೆ ಕಾಂಗ್ರೆಸಿನ ಧ್ಯೇಯಸಾಧನೆಯ ಬಗ್ಗೆ ಬೇಕಾದ ಕ್ರಮ ತೆಗೆದುಕೊಳ್ಳುವುದು. ಪ್ರಥಮ ಹಜ್ಜೆಯಾಗಿ, ಸೆಂಟ್ರಲ್ ಎಸೆಂಬ್ಲಿಯ ಕಾಂಗ್ರೆಸ್ ಸದಸ್ಯರು ಅದರ ಮುಂದಿನ ಅಧಿವೇಶನದಲ್ಲಿ ಸಹಕರಿಸಬಾರದೆಂದು ಕಾಂಗ್ರೆಸ್ ಮೆಂಬರುಗಳನ್ನು ಈ ಸಭೆಯು ಎಚ್ಚರಿಸುತ್ತದೆ ”

ಪ್ರಾಂತೀಕ ಸರಕಾರಗಳಿಗೆ ಎಚ್ಚರಿಕೆ.

ಕಾಂಗ್ರೆಸಿನ ಧ್ಯೇಯಗಳನ್ನು ಮನದಲ್ಲಿಟ್ಟು ಅವನ್ನು ಹಿಂಬಾಲಿಸಬೇಕಲ್ಲದೆ ಬ್ರಿಟಿಷ್ ಸಾರ್ವಭೌಮತ್ವದ ಯಾವ ರೀತಿಯ ಯುದ್ಧ ತಯಾರಿಯಲ್ಲಿಯೂ ಪ್ರಾಂತೀಕ ಸರಕಾರಗಳು ಭಾಗವಹಿಸಬಾರದೆಂದೂ, ಇಂಥಾ ಸಂದರ್ಭದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲದವರಿಗೂ, ಸರಕಾರಕ್ಕೂ ಘರ್ಷಣೆ ಬಂದರೆ ಕಾಂಗ್ರೆಸ್ ಮಂತ್ರಿ ಮಂಡಲವು ರಾಜಿನಾಮೆಯನ್ನೀಯಲು ತಯಾರಿರಬೇಕೆಂದೂ ವರ್ಕಿಂಗ್ ಕಮಿಟಿಯು ಸೂಚಿಸುತ್ತದೆ. ಅಲ್ಲದೆ ಮುಂದೆ ಸಂಭವಿಸಬಹುದಾದ ಯುದ್ಧದ ಬಿಕ್ಕಟ್ಟಿನಲ್ಲಿ ಭಾರತದ ಯಾವ ಭಾಗವಾದರೂ ವಿರೋಧಿಗಳಿಂದ ಮುತ್ತಲ್ಪಡುವ ಸಂದರ್ಭದಲ್ಲಿ ರಕ್ಷಿಸಿ ಕೊಳ್ಳಲು ತಕ್ಕ ಏರ್ಪಾಡುಗಳಾಗಬೇಕು. ಈ ದೃಷ್ಟಿಯಿಂದ ಪ್ರಾಂತೀಕ ಸರಕಾರಗಳು ಮಾಡುವ ಕಾರ್ಯ ಕಲಾಪಗಳಲ್ಲಿ ವರ್ಕಿಂಗ್ ಕಮಿಟಿಯ ಸಹಾನುಭೂತಿ ಇದೆ. ಆದರೆ ರಕ್ಷಣೋಪಾಯಕ್ಕೆಂಬ ಸೋಗಿನಲ್ಲಿ ಬ್ರಿಟಿಷ್ ಸಾರ್ವಭೌಮತ್ವದ ಹಿಡಿತದಲ್ಲಿ ನಡೆಯುವ ಯಾವ ಯುದ್ಧ ತಯಾರಿಕೆಗೂ ವರ್ಕಿಂಗ್ ಕಮಿಟಿಯು ಒಪ್ಪದು.

ಬೋಸರ ಮೇಲೆ ಶಿಸ್ತು

ಶ್ರೀ ಸುಭಾಷ ಚಂದ್ರಬೋಸರು ಮಾಡಿದ ಅಮೋಘ ಅಪರಾಧಗಳಿಗಾಗಿ ಅವರು ಬಂಗಾಳ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷಪದವಿಗೆ ಯೋಗ್ಯರಿಲ್ಲವೆಂತಲೂ, 1939 ನೇ ಆಗಸ್ಟಿನಿಂದ ಮೂರು ವರ್ಷಗಳ ವರೆಗೆ ಅವರು ಕಾಂಗ್ರೆಸಿನ ಯಾವ ಕಮಿಟಿಯಲ್ಲೂ ಇರಕೂಡದಂತಲೂ ವರ್ಕಿಂಗ್ ಕಮಿಟಿಯು ತೀರ್ಮಾನಿಸಿದೆ. ವರ್ಕಿಂಗ್ ಕಮಿಟಿಯು ಜುಲೈ 9 ರಲ್ಲಿ ನಡೆದ ಎ. ಐ. ಸಿ. ಸಿ. ಸಭೆಯ ಠರಾವುಗಳ ನಿಶೇಧ ಪ್ರದರ್ಶನದಲ್ಲಿ ಭಾಗವಹಿಸಿದ ಯಾವ ಕಾಂಗ್ರೆಸಿನವರ ಮೇಲೂ ಕ್ರಮ ಕೈಕೊಂಡಿಲ್ಲ. ಅದನ್ನು ಆಯಾಯ ಪ್ರಾಂತೀಕ ಕಾಂಗ್ರೆಸ್ ಕಮಿಟಿಗೆ ಬಿಟ್ಟಿದ.

ವರ್ಕಿಂಗ್ ಕಮಿಟಿಯ ತೀರ್ಮಾನದ ಬಗ್ಗೆ ಬೋಸರ ಪ್ರಕಟಣೆ.

“ಅನಾಯಕತ್ವದ ತತ್ವಗಳನ್ನು ಆಲಿಂಗಿಸಲೆತ್ನಿಸುವವರಿಗೆ ಎಚ್ಚರಿಕೆಯನ್ನುನ್ನು ಕೊಡುವ, ಕಾಂಗ್ರೆಸಿನ ಕ್ರಾಂತಿಕಾರಕ ಚೈತನ್ಯವನ್ನು ಕುಗ್ಗಿಸುವ, ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಠರಾವಿಗೆ ನಿಷೇಧ ವ್ಯಕ್ತಪಡಿಸುವ, ಎಡ ಪಕ್ಷೀಯರ ಏಕೀಕರಣಕ್ಕೆ ಶ್ರಮಿಸುವ, ಮುಂದಿನ ಘೋರ ಸಂಗ್ರಾಮಕ್ಕೆ ದೇಶವೇ ತಯಾರಾಗಬೇಕೆಂದು ಹುರುಪುಗೊಳಿಸುವ ನನ್ನ ಕಾರ್ಯಕ್ರಮಗಳು ತಪ್ಪೆಂದು ಭಾವಿಸಲ್ಪಟ್ಟದ್ದರೆ ಅದಕ್ಕೆ ಸರಿಯಾದ ಪ್ರಾಯಚ್ಚಿತವನ್ನು ನಾನು ಹೊಂದಲೇ ಬೇಕು” ಎಂದು ಸುಭಾಷರು ವರ್ಕಿಂಗ್ ಕಮಿಟಿಯು ತನ್ನ ಮೇಲೆ ಮಾಡಿದ ಶಿಸ್ತಿನ ಕಾರ್ಯಕ್ರಮದ ಬಗ್ಗೆಯ ತನ್ನದೊಂದು ಹೇಳಿಕೆಯಲ್ಲಿ ಹೇಳಿರುವರು. ಮುಂದುವರಿಸುತ್ತಾ– ಕಾಂಗ್ರೆಸ್ ಅಧಿಕಾರಿ ವರ್ಗವು ತನ್ನ ಮೇಲೆ ಶಿಸ್ತಿನ ಗದೆಯನ್ನು ಪ್ರಯೋಗಿಸಿದರೂ ತಾನು ಕಾಂಗ್ರೆಸಿನ ನಿಸ್ಸೀಮ ಭಕ್ತನಾಗಿಯೂ, ಜನಾಂಗದ ಸೇವಕನಾಗಿಯೂ ತನ್ನ ಕಾರ್ಯವನ್ನು ಮುಂದರಿಸದಿರೆನೆಂದಿರುವರು ‘ಕಾಂಗ್ರೆಸ್ ಕಾರ್ಯಕರ್ತರ ಮೇಲ್ಕಂಡ ತೀರ್ಮಾನವನ್ನು ನಾನು ಸ್ವಾಗತಿಸುವೆನು. ಕಾಂಗ್ರೆಸ್ ಬಹು ಪಕ್ಷಿಯರು ಯಾವ ರೀತಿಯಿಂದ ವರ್ತಿಸುತ್ತಾ ಬಂದಿರುವರೆಂಬುದು ಈ ಶಿಸ್ತು ಜಾರಿಯಿಂದ ಗೊತ್ತಾಗುವದು. ಕಾಂಗ್ರೆಸಿನ ಈ ಕಾರ್ಯಕ್ರಮವು ನನ್ನ ದೇಶೀಯರಿಗೆ ಸಖೇದಾಶ್ಚರ್ಯವನ್ನುಂಟುಮಾಡಬಹುದು. ಆದರೆ ನನಗೆ ಇದರಲ್ಲಿ ಆಶ್ಚರ್ಯವೇನೂ ಕಾಣದು. ಅನಾಯಕತ್ವದ ಹಾಗೂ ಪ್ರಜಾ ಪ್ರಭುತ್ವದ ಚಳವಳದಲ್ಲಿ ಇಂಥಾ ಕಾರ್ಯಕ್ರಮವು ವಾಸ್ತವ. ಆದ್ದರಿಂದ ನನಗೆ ಕಾಂಗ್ರೆಸ್ ಅಧಿಕಾರಿ ವರ್ಗದಲ್ಲಿ ದ್ವೇಷಾಸೂಯೆಗಳಿಲ್ಲ.’ ಎಂದು ಹೇಳಿ
ವರು.

ತೀವ್ರಗಾಮಿ ಪಕ್ಷದ ಮುಂದಿನ ಕಾರ್ಯಕ್ರಮ.

‘ಮೇಲ್ಕಂಡ ಕಾಂಗ್ರೆಸ್ ಕಾರ್ಯ
ರ್ತರ ತೀರ್ಮಾನದಿಂದ ತೀವ್ರಗಾಮಿ
ಕ್ಷವು ಉದ್ರೇಕಗೊಳ್ಳದೆ ಸಮಾಧಾನ
ಹಿಸಬೇಕು. ನನ್ನ ಮೇಲೆ ಶಿಸ್ತಿನ ಕ
ರ್ಯಕ್ರಮ ಕೈಕೊಂಡರೇನಾಯಿತು!
ನ್ನಷ್ಟೂ ಭಕ್ತಿಯಿಂದ ನಾನು ಕಾಂಗ್ರೆಸ
ಸೇವಕನಾಗುವೆನು. ಆದ್ದರಿಂದ ದೇಶಿ
ಯರೆಲ್ಲರೂ ಲಕ್ಷೋಪಲಕ್ಷವಾಗಿ ಬಂದ
ತೀವ್ರಗಾಮಿ ಪಕ್ಷವನ್ನು ಸೇರಿ ದೇಶ
ಹಿತವನ್ನು ಬಯಸಬೇಕೆಂದು ಆಶಿಸುತ್ತೆ
ನೆ. ಹೀಗೆ ತೀವ್ರಗಾಮಿ ಪಕ್ಷವನ್ನು
ಲಪಡಿಸುವುದರಿಂದಲೇ ಕಾಂಗ್ರೆಸ್ ಕ
ರ್ಯಕರ್ತರ ಕಣ್ಣು ತೆರೆಸಲು ಸಾಧ್ಯ
ಇಂದಿನ ಕಾಂಗ್ರೆಸ್ ಕಾರ್ಯಕರ್ತರ
ರ್ತನೆಯು ಹಿಂದಿನ ಚರಿತ್ರೆಯ ಪುನರಾ
ರ್ತನೆಯೇ ಆಗಿದೆ ಹಿಂದೊಮ್ಮೆ ಎಡ
ಕ್ಷೀಯರನ್ನು ಕಾಂಗ್ರೆಸಿನಿಂದ ತಳ್ಳಿ ಹಾ
ದ್ದರು ಆದರೆ ಅವರು ಅಸಂಖ್ಯಾತವ
ಗಿ ಬೆಳೆದು ಬಂದಿರುವದರಿಂದ ಇಂದ
ಕಾಂಗ್ರೆಸಿನಲ್ಲಿ ಸ್ಥಾನವಿದೆ. ಕಾಂಗ್ರೆಸಿ
ಇಂಥಾ ವರ್ತನೆಯಿಂದ ಎಡ ಪಕ್ಷವು
ಲಗೊಳ್ಳುವದೇ ವಿನಹ ಅನ್ಯಥಾ ಇಲ್ಲ.

ಕಾಂಗ್ರೆಸಿನ ವಿಶೇಷಾಧಿವೇಶನ.

ವರ್ಕಿಂಗ್ ಕಮಿಟಿಯು ಕೈಕೊಂ
ಬೋಸರ ಮೇಲಿನ ಶಿಸ್ತು ಜಾರಿಯು ಪ
ರಾ ಅಸಮಂಜಸವಿರುವುದರಿಂದ ಕಾಂಗ್ರೆ
ಸಿನಲ್ಲಿ ಒಡಕು ಬಂದು ಕಾಂಗ್ರೆಸಿನ ಧ್ಯೇ
ಯವಾದ ಪೂರ್ಣ ಸ್ವರಾಜ್ಯವು ಸಾಧಿ
ಲ್ಪಡುವದು ಕಷ್ಟವಾದ್ದರಿಂದ ಒಡನೆ
ಕಾಂಗ್ರೆಸಿನ ವಿಶೇಷಾಧಿವೇಶನ ಒಂದನ್ನು
ಕರೆದು ಕಾಂಗ್ರೆಸಿನಲ್ಲಿ ಐಕ್ಯವನ್ನು ಸ್ಥಾ
ಸಬೇಕೆಂದು ಶ್ರೀ ಎಸ್. ಜಿ ರಂಗಾರ
ರು ಒಂದು ಹೇಳಿಕೆಯನ್ನು ಕೊಟ್ಟಿರುವರು.

ಶಿಸ್ತು ಜಾರಿಯ ಪ್ರತಿಧ್ವನಿ.

ಬಂಗಾಳಾ ಕಾಂಗ್ರೆಸ್ ಕಮಿಟಿಯ
ಈ ಶಿಸ್ತಿನ ಕ್ರಮದಿಂದಾಗಿ ಉದ್ರೇಕಗೊ
ಡಿದೆ. ಕಾಂಗ್ರೆಸ್ಸಿನ ಅಹಿಂಸಾತತ್ವವು
ರ್ಕಿಂಗ್ ಕಮಿಟಿಯ ಈ ತೀರ್ಮಾನದಿಂ
ಬುಡ ಮೇಲಾಯಿತೆಂದೂ, ಶಿಸ್ತು ಜಾ
ಯು ಕೇವಲ ಎಡ ಪಕ್ಷೀಯರನ್ನು ಕಾ
ಗ್ರೆಸ್ಸಿನಿಂದ ಹೊರಮಾಡುವ ಯೋಜನ
ಯೆಂದೂ, ಬ್ರಿಟಿಷ್ ಸಾಮ್ರಾಜ್ಯ ಶಾಯಿ
ಯ ಅನುಯಾಯಿಯಂತಿರುವ ವರ್ಕಿಂಗ
ಕಮಿಟಿಯ ಅಸ್ತಿತ್ವವು ಶೀಘ್ರವೇ ಅಳಿ
ಹೋಗುವದೆಂದೂ, ಸ್ವಾತಂತ್ರ್ಯ ಸಂಗ್ರಾ
ಮದ ವೀರಭಟರೂ, ರಾಷ್ಟ್ರ ಸಂಘಟ
ಯ ಮಾರ್ಗದರ್ಶಕರೂ ಆದ ಸುಭಾಸ
ಚಂದ್ರಬೋಸರನ್ನು ಹೀಗೆ ಶಿಸ್ತಿಗೆ ಗು
ಮಾಡಿದ್ದರಲ್ಲಿ ಅರ್ಥವಿಲ್ಲವೆಂದೂ ಬಂಗ
ಳದಲ್ಲೆಲ್ಲಾ ಗಲಭೆ ಎದ್ದಿದೆ. ಬಂಗಾ
ಕಾಂಗ್ರೆಸ್ ಕಮಿಟಿಯು ತನ್ನ ಮೀಟಿ
ಗೊಂದನ್ನು ಕರೆದು ಈ ವಿಚಾರ ವಿಮರ್ಶಿ
ಸಲು ನಿಶ್ಚೈಸಿರುವದು.

ಏಲಕ್ಕಿ ದಾಸ್ತಾನು ಮತ್ತು ಮಾರಾಟದ ಸಹಕಾರಿ ಸಂಘ, ಲಿಮಿಟೆಡ್, ಮಡಿಕೇರಿ.

ಏಲಕ್ಕಿ ಪ್ಲಾಂಟರುಗಳಿಗೆ ಸರಿಯಾದ ಧಾರಣೆ, ಒಳ್ಳೇ ತೂಕ, ಅಳತೆ ಮತ್ತು ಹಣದ ತೊಂದರೆಯನ್ನು ಸರಿಪಡಿಸಲು ಏಲಕ್ಕಿಯ ದಾಸ್ತಾನಿನ ಆಧಾರದ ಮೇಲೆ ಕೊಡಲ್ಪಡುವ ಅಡ್ವಾನ್ಸು, ಈ ಸಹಾಯವನ್ನು ಒದಗಿಸಿಕೊಡಲು ಈಗಾಗಲೇ ಮೇಲಿನ ಸಹಕಾರಿ ಸಂಘ ಒಂದನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಗಿದೆ. ಏಲಕ್ಕಿ ಇರುವವರು ಈ ಸಂಘದಲ್ಲಿ ತಮ್ಮ ಏಲಕ್ಕಿಯನ್ನು ದಾಸ್ತಾನು ಇಟ್ಟು ಅಡ್ವಾನ್ಸನ್ನು ಹೊಂದಿಕೊಳ್ಳಬಹುದು. ಒಳ್ಳೇ ಧಾರಣೆ ಬರುವ ಸಮಯದಲ್ಲಿ ದಾಸ್ತಾನುದಾರರ ಇರಾದೆಯಂತೆ ಏಲಕ್ಕಿಯನ್ನು ಮಾರಾಟ ಮಾಡಲಾಗುವದು.

ಖಾಯಿಸ್‌ದಾರರು ಪಾಲುಗಳನ್ನು ಪಡಕೊಳ್ಳಬಹುದು.

ಗುಡ್ಡಾಂಡ ಸುಬ್ಬಯ್ಯ, ಗೌ. ಕಾರ್ಯದರ್ಶಿ.   2   ಕೊಂಗೆಟ್ಟಿರ ಪಿ. ಅಪ್ಪಯ್ಯ, ಪ್ರೆಸಿಡೆಂಟ್.

ನಾನು ಸರ್ವಶಕ್ತನೇನು?

(ಲೇಖಕ:—ಮಹಾತ್ಮಗಾಂಧಿ)

ಕಾಂಗ್ರೆಸು ನನ್ನ ಕೈವಾಡದಂತೆ ವರ್ತಿಸುವದೆಂಬುವುದು ತಪ್ಪು. ಕಾಂಗ್ರೆಸು ಅಧಿಕಾರ ವಹಿಸಿದರೂ ಜನತೆಯ ಸುಖವನ್ನು ಲಕ್ಷ್ಯದಲ್ಲಿಡಲಿಲ್ಲವೆಂಬುದು ಪೂರಾ ತಪ್ಪು. ಕಾಂಗ್ರೆಸು ಶೀಘ್ರವಾಗಿಯೇ ತನ್ನ ಕೊಳೆಯನ್ನು ನಿವಾರಿಸಿಕೊಂಡು ಪರಿಶುದ್ಧವಾಗುವದೆಂಬುದು ನಿಶ್ಚಯ. ನಾನು ಯಾವ ರೀತಿಯಿಂದಲೂ ಸರ್ವಶಕ್ತನಲ್ಲವೇ ಅಲ್ಲ.

ಕಳೆದ ವಾರ ಎರಡು ಕಾಂಗ್ರೆಸ್ ಜನರು ನನ್ನಲ್ಲಿಗೆ ಬಂದಿದ್ದು ಅವರಲ್ಲಿ ಒಬ್ಬರು–ನಿಮಗೆ ಬೇಕಾದ ಯಾವ ಕಾರ್ಯವನ್ನೂ ನೀವು ಮಾಡಲು ಸಮರ್ಥರು. ನೀವು ಮನಸ್ಸು ಮಾಡಿದರೆ ಕಾಂಗ್ರೆಸ್ ಮಂತ್ರಿಮಂಡಲವನ್ನು ತೆಗೆದು ಹಾಕಲೂ, ಯಾ ನೀವು ಹೇಳಿದಂತೆ ಕೆಲಸ ಮಾಡಿಸಲು ಶಕ್ತರೂ ಇರುವಿರೆಂದೂ, ಮಧ್ಯ ಪ್ರಾಂತದಲ್ಲಿರುವ ನಾವುಗಳು ಯೋಚಿಸುವೆವು-ಎಂದು ಹೇಳಿದರು. ಮತ್ತೊಬ್ಬರು–ನೀವೇ ಕಾಂಗ್ರೆಸ್ ವರ್ಕಿಂಗ್ ಕಮಿಟಿಯಾಗಿರುವಿರಿ. ಆದ್ದರಿಂದಲೇ ಕಾಂಗ್ರೆಸಿನಲ್ಲಿರುವ ಕೊಳೆಯ ಬಗ್ಗೆ ಪ್ರತಿಯೊಬ್ಬನೂ ನಿಮ್ಮನ್ನು ದೂಷಿಸುತ್ತಿರುವನು. ಆತ್ಮ ತೇಜಸ್ಸೇ ಸರ್ವಸ್ವವೆಂದು ನಮಗೆ ನೀವು ಕಲಿಸಿರುವಿರಿ. ಈಗ ನಡೆಯುತ್ತಿರುವ ಕಾಂಗ್ರೆಸಿನ ಕಾರ್ಯಕಲಾಪಗಳು ಪೈಶಾಚಿಕವೆಂದು ಭಾಸವಾಗುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದು ರಾಜ್ಯಸೂತ್ರವನ್ನು ಕೈಯಲ್ಲಿ ಹಿಡಿವದ್ದೇ ಆದರೆ ಆ ಪೈಶಾಚಿಕ ವೃತ್ತಿಯು ಇರುವದಿಲ್ಲ; ಜೀವನದ ಹೆಜ್ಜೆ ಹೆಜ್ಜೆಯಲ್ಲಿಯೂ ಸತ್ಯ ಸದಾಚಾರಗಳು ಕಂಡು ಬರುವದೆಂದು ನೀವೇ ಹೇಳಿರುವಿರಿ. ಆದರೆ ಇಂದು ನಾವು ಅದರ ಪೂರ್ಣ ವಿರೋಧಭಾಗವನ್ನೇ ಕಾಣುತ್ತಿರುವೆವು. ಕಾಂಗ್ರೆಸು ಅನೇಕ ಪ್ರಾಂತಗಳಲ್ಲಿ ರಾಜ್ಯಭಾರ ಮಾಡುತ್ತಿದ್ದರೂ ಕಾಂಗ್ರೆಸಿನ ಅಂತರ್ಗತ ಕೊಳೆಯು ಅಚ್ಚಳಿಯದೆ ನಿಂತಿದೆ. ಕಾಂಗ್ರೆಸಿನವರು ತಮ್ಮ ತಮ್ಮೊಳಗೇ ಕಲಹಮಾಡಿಕೊಳ್ಳುತ್ತಿರುವರು. ಕಾಂಗ್ರೆಸಿನ ಸ್ಥಿತಿಯು ಅವ್ಯವಸ್ಥೆಯ ಬೀಡಾಗುತ್ತಿದೆ. ಕಾಂಗ್ರೆಸಿನವರ ಸಂಖ್ಯೆಯ ಮೇಲೆ ನಿಮಗೆ ಭರವಸೆಯಿಲ್ಲ. ಕೆಲವೊಂದು ನಿಜವಾದ ಮತ್ತು ಒಳ್ಳೆಯ ಕಾಂಗ್ರೆಸಿನವರು ಅವರ ಮಾನಸಿಕ ಶಕ್ತಿಯಿಂದ ಇಡೀ ಜನಾಂಗದ ಕಾರ್ಯವನ್ನು ಸಾಗಿಸುವದು ಸಾಧ್ಯವೆಂದೂ, ಪ್ರಜಾಪ್ರಭುತ್ವವೂ ಸಹ ಕೆಲವೊಂದು ಕಾಂಗ್ರೆಸ್ ಭಕ್ತರಿಂದಲೇ ಸಾಧಿಸಲ್ಪಡಬಹುದೆಂದೂ ಹೇಳಿರುವಿರಿ ಆದರೆ ಇಂದು ಶೀಲದ ಅಥವ ಗುಣದ ಬಗ್ಗೆ ಯಾರ ಮನವೂ ಇಲ್ಲ. ಎಲ್ಲರೂ ಪರಿಮಾಣದ ಬಗ್ಗೆ ಶ್ರಮಿಸುತ್ತಿರುವರು. ಕಾಂಗ್ರೆಸ್ ಘಟನೆಯಲ್ಲಿ ಈಗ ಮಾಡಿರುವ ತಿದ್ದುಪಡಿಗಳು ನಿಷ್ಪ್ರಯೋಜಕಗಳಾಗಿರುವವು. ಈ ತಿದ್ದುಪಡಿಗಳು ಕಾಂಗ್ರೆಸಿನ ಅಂತರ್ಗತ ಕೊಳೆಯನ್ನಾಗಲೀ, ಇಲ್ಲವೇ ಹದ್ದು ಮೀರಿ ಬೆಳೆಯುತ್ತಿರುವ ಕಾಂಗ್ರೆಸಿಗರ ಪರಿಮಾಣವನ್ನಾಗಲೀ ಎಂದೂ ಕಡಿಮೆ ಮಾಡವು. ನಿಮ್ಮ ಪ್ರೇರಣೆಯಂತೆ ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಡೆಯುವದಿಲ್ಲವೆಂದು ನೀವು ಹೇಳಿದರೆ ನಾವು ಅದನ್ನು ತಿಳಿಯಲಿಚ್ಛಿಸುತ್ತೇವೆ. ಆದರೆ ಪ್ರಕೃತ ನಾವು ನಿಮ್ಮನ್ನು ಸರ್ವಶಕ್ತನೆಂದು ನಂಬಿರುವೆವು. ಆದ ಪ್ರಯುಕ್ತ ಇಂದು ಕಾಂಗ್ರೆಸು ಅವ್ಯವಸ್ಥೆಯ ಬೀಡಾಗುತ್ತಿರುವವನ್ನು ಕಂಡು ನಮಗೆ ಆಶ್ಚರ್ಯವಾಗುತ್ತಿದೆ. **ನಿಮ್ಮ ಖಾದಿ ಧೋರಣೆಯ ವಿಚಾರ ನೋಡಿ. ಕಾಂಗ್ರೆಸಿನಲ್ಲಿ ಬೆಳೆದಿರುವ ಮಿಥ್ಯಾಚರ್ಯೆಗೆ ಇದೇ ಪ್ರಥಮ ಕಾರಣ. ಕೆಲವೇ ಜನರು ಖಾದಿಯ ಮಹತ್ವವನ್ನರಿತಿರುವರು. ಅನೇಕರು ಕಣ್ಣು ಕಟ್ಟಲು ಉಪಯೋಗಿಸುತ್ತಿರುವರು. ಕೆಲವರ** ಕಣ್ಣು ಕಟ್ಟಲು ಒಂದು ಸಾಧನವಾಗಿ ಖಾದಿಯು ಉಪಯೋಗಿಸಲ್ಪಡುತ್ತಿದೆ. ದೇಶವನ್ನು ಮಾನಸಿಕ ಪ್ರಗತಿಯ ಅತ್ಯುಚ್ಚ ಶಿಖರಕ್ಕೇರಿಸಿರುವ ನೀವು ಈಗ ಅದನ್ನು ಕೆಳಗೆ ತರುತ್ತಿರುವಿರಿ. ಈಗಿನ ಪರಿಸ್ಥಿತಿಯಂತೆ ಕಾಂಗ್ರೆಸಿನ ಕಾರ್ಯಕಲಾಪಗಳು ಮುಂದರಿದರೆ ಕಾಂಗ್ರೆಸು ದೇಶದ ನಗುವಿನ ಭಂಡಾರವಾಗಿ ಪರಿಣಮಿಸಬಹುದು. ನಿಮಗೆ ಕಾಂಗ್ರೆಸನ್ನು ತಿದ್ದಲು ಅಸಾಧ್ಯವಾದರೆ ಅದನ್ನು ತನ್ನಷ್ಟಕ್ಕೆ ಬಿಟ್ಟು ಬಿಡಬಾರದೇಕೆ?–ಈ ಎರಡನೇ ಪ್ರಶ್ನಾಕರ್ತರು ಒಬ್ಬ ಪ್ರಖ್ಯಾತ ಕಾಂಗ್ರೆಸ್ ಧುರೀಣರು. ಅವರು ಸಂತಾಪದಿಂದ ಈ ಮಾತುಗಳನ್ನು ಆಡಿದರು. ಅವರ ಸಂತಾಪವು ಸಮಂಜಸವಾದ್ದೇ.

ಮಧ್ಯ ಪ್ರಾಂತದ ಕಾಂಗ್ರೆಸ್ ಮಂತ್ರಿ ಮಂಡಳದಲ್ಲಾಗಲೀ, ಯಾ ವರ್ಕಿಂಗ್ ಕಮಿಟಿಯಲ್ಲಾಗಲೀ ನಾನು ಸರ್ವಶಕ್ತನಲ್ಲ. ಮಂತ್ರಿಗಳ ಕಾರ್ಯಕ್ರಮದ ಪೂರ್ಣ ಮಾಹಿತಿಯು ನನಗೆ ಇಲ್ಲವೇ ಇಲ್ಲ. ಅವರ ಕಾರ್ಯಕಲಾಪಗಳ ವಿಚಾರದಲ್ಲಿ ನಾನು ಕೈಹಾಕುವದೇ ಇಲ್ಲ. ಅದು ನನ್ನ ಕರ್ತವ್ಯವೆಂದು ನಾನು ಪರಿಗಣಿಸಿರುವದೂ ಇಲ್ಲ. ಅನುರೂಪವಾಗಿ ಗ್ರಾಮ ಕೈಗಾರಿಕೆ, ವಿದ್ಯಾಭ್ಯಾಸ ಈ ವಿಚಾರದ ಪತ್ರವ್ಯವಹಾರ ಮಾಡಬೇಕಾಗಿ ಬರುವದು. ಅವರ ಕಾರ್ಯಕಲಾಪದಲ್ಲಿ ಕೈಹಾಕಲು ನಾನು ತಿರಸ್ಕರಿಸಿರುವೆನು. ನಾನು ಆ ಕಾರ್ಯಕ್ಕೆ ಕೈಹಾಕಲು ಯತ್ನಿಸಿದರೂ ಸಹ ನನಗೆ ಅದಕ್ಕೆ ಬೇಕಾದ ಸಮಯ ಸಿಗಲಿಕ್ಕಿಲ್ಲ. ಅಲ್ಲದೆ ವರ್ಕಿಂಗ್ ಕಮಿಟಿಯ ಪಾರ್ಲಿಮೆಂಟರಿ ಉಪಸಮಿತಿಯ ಕಾರ್ಯರಂಗಕ್ಕೆ ಅತಿಕ್ರಮಪ್ರವೇಶ ಮಾಡಿದಂತೆಯೂ ಇದಾಗುವದು.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಮಟ್ಟಿಗೆ ನನ್ನ ಹಾಜರಾತಿಯು ಅವಶ್ಯವೆನಿಸಿದ ಮೀಟಿಂಗಿಗೆ ಮಾತ್ರ ನಾನು ಹೋಗುವೆನು. ನನ್ನ ಆಲೋಚನೆ ಬಗ್ಗೆ ನನಗೊಪ್ಪಿಸಿದ ಠರಾವುಗಳ ವಿಚಾರ ಮಾತ್ರ ವರ್ಕಿಂಗ್ ಕಮಿಟಿಯಲ್ಲಿ ನನ್ನ ತೀರ್ಮಾನವನ್ನು ಮುಂದಿಡುವೆನು. ವರ್ಕಿಂಗ್ ಕಮಿಟಿಯ ಅನೇಕ ಮೀಟಿಂಗುಗಳಿಗೆ ನಾನು ಹೋಗುವದೇ ಇಲ್ಲ. ಅಲ್ಲಿ ಮಾನಿಸಲ್ಪಟ್ಟ ಕೆಲವು ಠರಾವುಗಳ ಅರಿವೇ ನನಗಿರುವದಿಲ್ಲ. **ಪತ್ರಿಕೆಗಳಲ್ಲಿ ಓದಿದ ಮೇಲೆಯೇ ಅವು ನನಗೆ ತಿಳಿಯುವವು. ನಾನು ಕಾಂಗ್ರೆಸಿನಿಂದ ಹೊರಗೆ ನಿಂತಂದಿನಿಂದ ನಡೆದು ಬರುತ್ತಿರುವ ಕಾರ್ಯಕ್ರ**

ಮವಿದು. ಕಮಿಟಿಯ ಮೇಲೆ ನನಗಿರುವ ಹಿಡಿತವಾದರೂ ಬರೇ ಮಾನಸಿಕವಾದ್ದು. ಗುಟ್ಟನ್ನು ಒಡೆದು ಹೇಳುವದಾದರೆ ಅನೇಕ ವೇಳೆ ನನ್ನ ಬೋಧನೆಗಳು ಸದಸ್ಯರ ಮೇಲೆ ತನ್ನ ಶಕ್ತಿಯನ್ನು ಬೀರುವದೇ ಇಲ್ಲ. ಉದಾಹರಣೆಗೆ ಕಾಂಗ್ರೆಸಿನಲ್ಲಿ ನನ್ನ ಇಚ್ಛೆಯು ಮನ್ನಿಸಲ್ಪಡುತ್ತಿದ್ದರೆ ಇಂದು ಕಾಂಗ್ರೆಸು ತನ್ನ ಅತ್ಯಂತ ಸಣ್ಣ ರೂಪಿನಲ್ಲಿರುತಿತ್ತು. ದೇಶದ ಜನತೆಯ ಹತೋಟಿಯಲ್ಲಿರುವ ಕೆಲವೊಂದು ಚುನಾಯಿತ ಕೆಲಸಗಾರರಿಂದ ಅದು ನಡೆಯುತಿತ್ತು. ಅದು ತಾನು ಮುಂದರಿಸಿದ ಯಾವದೇ ಕಾರ್ಯಕ್ರಮಕ್ಕೆ ಮಿಲಿಯಾಂತರ ದೇಶೀಯರ ಬೆಂಬಲವನ್ನು ಪಡೆಯುವಷ್ಟು ಶಕ್ತಿಯುತವಾಗಿರುತಿತ್ತು. ಆದರೆ ಕಾಂಗ್ರೆಸಿನವರಿಗೆ ಇದು ತೀರಾ ಕಠೋರ ಮತ್ತು ಪ್ರಜಾಪ್ರಭುತ್ವಕ್ಕೆ ವಿರೋಧ ಕಾರ್ಯಕ್ರಮವಾಗಿದೆ.

ಖಾದಿ ಧೋರಣೆಯು ಅನೇಕ ತಪ್ಪು ನಡತೆಗೆ ಸಹಕಾರಿಯಾಗಿದೆಯೆಂಬುದನ್ನು ನಾನು ಒಪ್ಪುವೆನು. ನನ್ನ ಪೂರ್ಣ ಕೈವಾಡವು ನಡೆಯುವಂತಿದ್ದರೆ ಈ ದುಷ್ಕೃತ್ಯವು ಎಂದೋ ಅಳಿದು ಹೋಗುತಿತ್ತು. ಖಾದಿ ಧೋರಣೆಯ ನಮ್ಮ ತತ್ವವನ್ನು ತೆಗೆದು ಹಾಕಬೇಕೆಂದು ಕಾಂಗ್ರೆಸಿನಿಂದ ನಾನು ಹೊರನಿಂತಾಗ ಸಹ ಹೇಳಿಕೊಂಡಿನು. ಈ ನನ್ನ ಪ್ರಯತ್ನವನ್ನು ಒಂದಕ್ಕಿಂಥಾ ಹೆಚ್ಚು ನಾರಿ ಸಾಧಿಸಿ ನೋಡಿರುವೆನು. ಆದರೆ ಅದು ಅಪಜಯವನ್ನು ಹೊಂದಿತು. ಖಾದಿ ಧೋರಣೆಯ ಶರತನ್ನು ತೆಗೆಯಕೂಡದೆಂಬ ಬಹು ಸಂಖ್ಯಾಕ ಕಾಂಗ್ರೆಸಿಗರ ಕೂಗೆ ಇವಕ್ಕೆ ಕಾರಣ.

ಹಾಗೆಯೇ ಕಾಂಗ್ರೆಸಿನ ಘಟನೆಯಲ್ಲಿರುವ 'ಶಾಂತ ಮತ್ತು ಯೋಗ್ಯ' ಎಂಬ ಶಬ್ದಗಳನ್ನು ತೆಗೆದು ಹಾಕಬೇಕೆಂಬ ನನ್ನ ಸೂಚನೆಯೂ ಅಪಜಯವನ್ನು ಹೊಂದಿತು. ವರ್ಕಿಂಗ್ ಕಮಿಟಿಯನ್ನು ನನ್ನ ಅಭಿಪ್ರಾಯದಂತೆ ವರ್ತಿಸುವಂತೆ ಪ್ರೇರೇಪಿಸಲು ಅಸಾಧ್ಯವಾದ ಇನ್ನೂ ಅನೇಕಾನೇಕ ಉದಾಹರಣೆಗಳಿರುವವು. ಇವನ್ನೆಲ್ಲಾ ವರ್ಕಿಂಗ್ ಕಮಿಟಿ ಮೇಲೆ ಪುಕಾರಿನೋವಾದಿ ಹೇಳುವವನಲ್ಲ. ನನ್ನ ನಿಶ್ಚಯಕ್ಕೆ ಒಪ್ಪದಿರಲು ಮೆಂಬರುಗಳಿಗೆ ಸಮಂಜಸ ಕಾರಣಗಳಿರದೆ ಇರಲಿಲ್ಲ. ಇದರಿಂದ ನನ್ನ ಸ್ನೇಹಿತರೊಂದಿಗಿನ ಬಾಂಧವ್ಯಕ್ಕೇಯಾಗಲೀ ಯಾ ಇನ್ಯಾವ ವಿಚಾರಕ್ಕೇ ಆಗಲೀ ತೊಂದರೆ ಇಲ್ಲ. ಅವರ ಮೇಲೆ ನನ್ನ ಮೇಲ್ಮೆಯ ಕೈವಾಡವನ್ನು ನಡಿಸಲೂ ನಾನು ಸಿದ್ಧನಿಲ್ಲ. ಅವರೊಡನೆ ಕಾರ್ಯ ಮಾಡುವದೇ ಒಂದು ಸಂತೋಷ. ನಾನು ದೇಶದ ಸೇವಕನೆಂದು ಎಷ್ಟು ಮಟ್ಟಿಗೆ ಹೇಳಿಕೊಳ್ಳಲು ಶಕ್ತನೋ ಅಷ್ಟೇ ಅವರಾದರೂ ಶಕ್ತರಿರುವರು. ಒಂದಲ್ಲ, ಒಂದು ದಿನ ಅವರು ನನ್ನ ಧೋರಣೆಯನ್ನಂಗೀಕರಿಸಬಹುದು ಯಾ ನಾನು ಅವರ ಮಾರ್ಗವನ್ನು ಅನುಸರಿಸಲೂಬಹುದು ಎಂಬ ನನ್ನ ಪ್ರಬಲ ಆಶೆಯೇ ನಮ್ಮೊಳಗಿನ ಐಕ್ಯವನ್ನು ಹೆಚ್ಚುಗೊಳಿಸಿದೆ.

ಈಗಿನ ಕಾಂಗ್ರೆಸ್ ರಾಜ್ಯಭಾರಕ್ಕಿಂಥಾ ಮುಂದಿನ ರಾಜ್ಯಭಾರ ಕ್ರಮವು ಪರಿಶುದ್ಧವಾಗಿತ್ತು ಎಂಬವಕ್ಕೂ ನಾನೊಪ್ಪುವವನಲ್ಲ. ಕಾಂಗ್ರೆಸ್ ಸಂಸ್ಥೆಯೊಳಗ ಕೊಳೆಯು ಹೆಚ್ಚಾಗಿದೆಯೆಂದೂ, ಅಲ್ಲಿ ಅನೇಕ ಸ್ವಾರ್ಥಸಾಧಕರೂ ಇರುವರೆಂದೂ ನಾನು ಒಪ್ಪುವೆನಾದರೂ ಇಂದಿನ ಕಾಂಗ್ರೆಸ್ ಆಡಳಿತೆಯು ಅಂದಿನ ಆಡಳಿತಕ್ಕಿಂಥಾ ಎಲ್ಲಾ ವಿಧದಿಂದಲೂ ಪರಿಶುದ್ಧವಾಗಿದೆಯೆಂಬುದು ನನ್ನ ನಿರ್ಧಿಷ್ಟ ಅಭಿಪ್ರಾಯ. ಜನತೆಯ ಸ್ಥಿತಿಗತಿಗಳನ್ನು ಸುಧಾರಿಸುವ ಅನೇಕ ಕಾರ್ಯಕ್ರಮಗಳಿಗೂ ಕಾಂಗ್ರೆಸ್ ಆಡಳಿತವು ಜವಾಬ್ದಾರವಾಗಿದೆಯೆಂಬುದೂ ನನ್ನ ಖಂಡಿತ ವಾದ. ಇವುಗಳಲ್ಲಿ ಪಾಸಿವಿರೋಧವು ಪ್ರಾಮುಖ್ಯವಾದದ್ದೆಂದು ನಾನು ಊಹಿಸಿದ್ದೇನೆ. ಆದರೆ ಇನ್ನೂ ಮಾಡಲು ಅನೇಕ ಕಾರ್ಯಕ್ರಮಗಳು ಹಾಗೆಯೇ ಉಳಿದಿದೆಯೆಂಬುದನ್ನಾದರೂ ನಾನು ಒಪ್ಪುವೆನು. ಆದರೆ ಕಾಂಗ್ರೆಸಿನೊಳಗಿರುವ ಈ ಅವ್ಯವಸ್ಥೆಯು ಮಾಯವಾಗಿ ಕಾಂಗ್ರೆಸು ಪರಿಶುದ್ಧ ಸಂಸ್ಥೆಯಾಗಿ ಎರಡನೇ ಪ್ರಶ್ನಾಕರ್ತರ ಮನದಲ್ಲಿರುವ ಹೆದರಿಕೆಗಳು ಮಾಯವಾಗುವದರಲ್ಲಿ ಸಂದೇಹವಿಲ್ಲವೆಂಬ ನಂಬಿಕೆ ನನಗಿದೆ. ಅವರ ಈ ಹೆದರಿಕೆಗೆ ಧಾರಾಳ ಕಾರಣಗಳಿವೆ. ಕುಗ್ಗಿಸಲಸದಳವಾದ ಆಶಾವಾದಿಯಾಗಿರುವದರಿಂದ ಈ ವಿಚಾರಗಳು ನನ್ನನ್ನು ಅವರಷ್ಟು ಗಾಬರಿಗೆ **ಈಡುಮಾಡುವದಿಲ್ಲ. ಪ್ರತಿಯೊಬ್ಬ** ಕಾಂಗ್ರೆಸ್ ಕೆಲಸಗಾರನನ್ನೂ ತನ್ನ ಕಾರ್ಯದ ಮಟ್ಟಿಗೆ ಬಡಿದೆಬ್ಬಿಸುವಷ್ಟು ಅವು ಪ್ರಾಮುಖ್ಯತೆಯನ್ನು **ತಾಳಿವೆ. ಕಾಂಗ್ರೆಸು ತನ್ನ ಮಾನಸಿಕ ಬೆಲೆ ಯಾ ಆತ್ಮಶಕ್ತಿಯೆಂಬ ಕಲ್ಲಿನ ಅಡಿಪಾಯದ ಮೇಲೆ ನಿಲ್ಲದಿದ್ದರೆ ಕಾಂಗ್ರೆಸು ನಿಶ್ಚಿತವಾಗಿಯೂ ವಿನಾಶಪಥವನ್ನು ಹಿಡಿಯಬೇಕಾಗುವದು.**

ಕೊಡಗಿನ ಕಾಂಗ್ರೆಸು ಸಂಸ್ಥೆ.

(ಲೇಖಕ:-ಕೆ. ಜೆ. ಮಾಚೈಯ್ಯ.)

ಭರತ ಖಂಡವು ತನ್ನ ನಿದ್ರೆಯಿಂದ ಎಚ್ಚೆತ್ತು ಮೈಕೊಡವಿ ತನ್ನ ದಾಸ್ಯವನ್ನು ಹರಿದು ಹಾಕಲು ಯಾವ ಸಂಸ್ಥೆಯನ್ನು ಸ್ಥಾಪಿಸಿ ಇಂದು ಭಾರತದಲ್ಲಿ ಆದಾವುದೇ ಒಂದು ಸಂಸ್ಥೆಯಾಗಿ ವಿರಾಜಿಸಲು ಅನುಮಾಡಿಕೊಟ್ಟಿತೋ; ಅದೇ ನಮ್ಮ ಪೂಜ್ಯ ಕಾಂಗ್ರೆಸ್ ಸಂಸ್ಥೆ. ಚಿಕ್ಕದಾಗಿ ಹುಟ್ಟಿ 53 ವರ್ಷಗಳ ದುಡಿತದಿಂದ, ಹಲವು ತ್ಯಾಗಮೂರ್ತಿಗಳ ಬಲಿದಾನದಿಂದ ಲೋಕಾಭಿರಾಮವಾಗಿ ಬೆಳೆದು ಇಂದು ಭಾರತದ ರಾಜ್ಯಸೂತ್ರಗಳನ್ನು ಕೈಯಲ್ಲಿ ಹಿಡಿದು ಭಾರತೀಯರಿಗೆ ಸೌಖ್ಯ ಸೌಭಾಗ್ಯಗಳನ್ನು ಒದಗಿಸುವ ಸಂಸ್ಥೆ ಎಂದರೆ ಅದು ಕಾಂಗ್ರೆಸ್ಸೊಂದೇ.

ಈ ಲೋಕಾಭಿರಾಮವಾದ ಕಾಂಗ್ರೆಸ್ಸಿನ ಶಾಖೆಯು ನಮ್ಮ ಮಾತೃಭೂಮಿಯಾದ ಕೊಡಗಿನಲ್ಲಿ ಹುಟ್ಟಿ ಹಲ ಕೆಲವು ವೀರರ ಅವಿಚಲ ಶ್ರಮದಿಂದ ಬೆಳೆದು ದೇಶೀಯರ ಬೆಂಬಲವನ್ನು ಪಡೆದು ರೈತರ ಕೂಗನ್ನು ಆಲಿಸುವ ಒಂದು ಸಂಸ್ಥೆಯಾಯಿತು. ಸತ್ಯಾಗ್ರಹ ಸಮರದಲ್ಲಿ ನಮ್ಮ ನಾಡೂ ತನ್ನ ಪಾಲಿನ ಬಲಿದಾನವನ್ನು ಮಾಡಿ ಹೆಸರುವಾಸಿಯನ್ನು ಪಡೆಯಿತು. ಕಳೆದ ಚುನಾವಣೆಯಲ್ಲಿ ನಮ್ಮ ಕಾಂಗ್ರೆಸ್ ಧುರೀಣರು ತಮ್ಮ ಇದಿರಾಳುಗಳನ್ನು ಸೋಲಿಸಿ ಕೌನ್ಸಿಲನ್ನೂ, ಡಿಸ್ಟ್ರಿಕ್ಟ್ ಬೋರ್ಡನ್ನೂ ಹೊಕ್ಕು ದೇಶೀಯರ ಸಂಪೂರ್ಣ ಬೆಂಬಲವು ಕಾಂಗ್ರೆಸ್ಸಿಗಿದೆ ಎಂಬುದನ್ನು ಸರಕಾರಕ್ಕೆ ಬಹಿರಂಗಪಡಿಸಿದರು.

ದೋಷಾರೋಪಣೆಗಳು.

ಕಾಂಗ್ರೆಸ್ಸಿನವರು ಎಂದು ಅಧಿಕಾರವನ್ನು ಚಲಾಯಿಸಲು ತೊಡಗಿದರೋ ಅಂದಿನಿಂದಲೇ ಅವರ ಮೇಲೆ ಹಲವು ತರದ ಆರೋಪಣೆಗಳು ಹೇರಲ್ಪಟ್ಟವು. ಕೆಲವರು ಇಲ್ಲಿನ ಕಾಂಗ್ರೆಸ್ ಕಾರ್ಯಕರ್ತರನ್ನು ಸರ್ವಾಧಿಕಾರಿಗಳೆಂದು ಕರೆಯಲು ತೊಡಗಿದರು. ಇವರೆಲ್ಲರೂ ಅಧಿಕಾರ ಲಾಲಸೆಯಿಂದ ಕೂಡಿದ ಸ್ವಾರ್ಥಿಗಳೆಂದೂ, ಕಾಂಗ್ರೆಸ್ಸಿನ ಹೆಸರಿನಿಂದ ಹಣಗಳಿಸಲು ಸೊಂಟಕಟ್ಟಿದ ಮಹಾಶಿಯರೆಂದೂ ಚಿತ್ರಿಸಲ್ಪಟ್ಟರು. ಈ ರೀತಿಯ ಆರೋಪಣೆಗಳನ್ನು ನಾವು ಪರಿಶೀಲಿಸಿದಲ್ಲಿ ಇವೆಲ್ಲವೂ ಬರಿಯ ಸುಳ್ಳೆಂದು ವ್ಯಕ್ತವಾಗುವುದು. ಜೈಲಿಗೆ ಹೋಗಿ ಸೆರೆಮನೆವಾಸವನ್ನು ಅನುಭವಿಸಿ, ದೊರಗು ಖಾದಿಯನ್ನು ಹೊತ್ತು ಮನೆ ಮನೆ ಬಿಸಿಲಿನಲ್ಲಿ ತಿರುಗಿ ದೇಶದ ಹಲವು ಭಾಗಗಳಲ್ಲಿ ಹೊಟ್ಟೆಗೆ ಸರಿಯಾಗಿ ಅನ್ನವಿಲ್ಲದೆ ಸಭೆಗಳನ್ನು ಸೇರಿಸಿ ಸರಕಾರದ ವರ್ತನೆಯನ್ನು ಖಂಡಿಸಿದ ನಮ್ಮ ಕಾಂಗ್ರೆಸ್ ಧುರೀಣರ ವರ್ತನೆಯು ಸರ್ವಾಧಿಕಾರಿಗಳ ಚಿನ್ಹೆಯೇ? ಧನವಂತರೂ, ವಿದ್ಯಾವಂತರೂ ನಾಡಿನ ಕಲ್ಯಾಣವನ್ನು ಮರೆತು ಸರಕಾರದ ವರ್ತನೆಯನ್ನು ಸಮರ್ಥಿಸಿ ಹೌದೆಂದು ತಲೆದೂಗಿ ಸುಮ್ಮನಿರಲು ರೈತರ ಕೂಗನ್ನು ಕೇಳಲು ಮುಂದೆ ಬಂದು, ಸರಕಾರವನ್ನು ಖಂಡಿಸಿದ ಜನರು ಸರ್ವಾಧಿಕಾರಿಗಳೇ? ಇವರು ಅಧಿಕಾರ ಪ್ರಿಯರೇ? ಚುನಾವಣೆಗಳಲ್ಲಿ ಜಯಪ್ರದರಾಗಿ ತಮ್ಮ ಪಂಗಡಿಗರೇ ಅಧ್ಯಕ್ಷರನ್ನಾಗಿ ಚುನಾಯಿಸಿದರೆ, ಅಧ್ಯಕ್ಷರಾದದ್ದು ಸರ್ವಾಧಿಕಾರಿಗಳ ಸೋಗೇ? ಇವೆಲ್ಲವೂ ಕಾಂಗ್ರೆಸ್ಸಿನ ವಿರೋಧಿಗಳ ಆರೋಪಣೆಗಳೆಂದೂ, ಇವಕ್ಕೆ ಆಧಾರವೇ ಇಲ್ಲವೆಂದೂ ಈ ಆರೋಪಣೆಗಳನ್ನು ಪರಿಶೀಲಿಸಿದರೆ ಮನಗಾಣಬಹುದು.

ಒಂದು ವಿಚಿತ್ರ ಆರೋಪಣೆ.

ಕೊಡಗಿನ ಕಾಂಗ್ರೆಸ್ಸು ಬರಿಯ ಕಿಸಾನರ ತಂಡವೆಂದೂ, ಅವರಲ್ಲಿ ಒಬ್ಬನೇ ಒಬ್ಬ ವಿದ್ಯಾವಂತ ಯಾ ಧನಿಕನಿಲ್ಲವೆಂದೂ, ಇದು ಇಂದಿನ ಮುಖಂಡರ ಸರ್ವಾಧಿಕಾರಿ ವರ್ತನೆಯ ದೆಸೆಯಿಂದಲೇ ಎಂದೂ, ವಿಚಿತ್ರ ಆರೋಪಣೆ ಒಂದು ನಮ್ಮ ಕಾಂಗ್ರೆಸ್ಸಿನ ಮುಖಂಡರ ಮೇಲೆ ಹೊರಿಸಲ್ಪಟ್ಟಿದೆ. ಇವನ್ನು ಚೆನ್ನಾಗಿ ಪರಿಶೀಲಿಸಿ ನೋಡಿದರೆ ಇವರಲ್ಲಿ ನಿಜಾಂಶವು ಸ್ವಲ್ಪವೂ ಇಲ್ಲ. ಏತಕ್ಕೆಂದರೆ ಕಾಂಗ್ರೆಸ್ಸಿನ ನಾಲ್ಕಾಣೆ ಮೆಂಬರನಾಗಲು ಪ್ರತಿ ಒಬ್ಬನೂ ಅರ್ಹನು. ಯಾರೂ ಭಾರತೀಯರ ಈ ಹಕ್ಕನ್ನು ಅಲ್ಲಗಳೆಯಲು ಸಮರ್ಥನಲ್ಲ. ಹೀಗಿರುವಲ್ಲಿ ನಮ್ಮ ಮುಖಂಡರ ವರ್ತನೆಯು ಎಂದಿಗೂ ಯಾರನ್ನೂ ತಡೆಗಟ್ಟಲಾರದು. ಅಲ್ಲದೆ ಯಾವನೊಬ್ಬನಿಗಾದರೂ ಈ ಮುಖಂಡರು ಈ ರಿಯಾಯಿತಿಯನ್ನು ಈ ವರೆಗೆ ಅಲ್ಲಗಳೆದ ಪ್ರಕರಣವೇ ಬಂದಿಲ್ಲ. ಮನಸ್ಸಿದ್ದರೆ ಏನೂ ಮಾಡಬಹುದು. ಮನಸ್ಸಿಲ್ಲದವರನ್ನು ನಮ್ಮ ಮುಖಂಡರು ಒತ್ತಾಯದಿಂದ ಕಾಂಗ್ರೆಸಿಗೆ ಯಾವ ರೀತಿ ಸೇರಿಸಬೇಕು? ಆದುದರಿಂದಲೇ ಬರದವರನ್ನು ಹಿಂದಕ್ಕೆ ಇಟ್ಟು ಮುಂಬರುವವರನ್ನು ಕೂಡಿ ನಾಡಿನ ದಾಸ್ಯವನ್ನು ಓಡಿಸಲು ನಮ್ಮ ಮುಖಂಡರು ಪ್ರಯತ್ನಿಸಿದರೇ ಹೊರತು ಇವು ಸರ್ವಾಧಿಕಾರಿಗಳ ಆಡಳಿತವಲ್ಲ. ಕಾಂಗ್ರೆಸ್ಸು ಬಡವರ ಸಂಸ್ಥೆ; ಅದು ಧನಿಕರದಲ್ಲ. ಆದರೆ ಅದರಲ್ಲಿ ಧನಿಕರಿಗೆ ಸ್ಥಾನವಿದೆ. ಅವರು ಸ್ವಾರ್ಥತ್ಯಾಗ ಮಾಡಿದರೆ! ಆದರೆ ನಮ್ಮ ಧನಿಕರು ಅದನ್ನು ಮಾಡಲು ಸಿದ್ಧರಿಲ್ಲ. ಆದರಿಂತೆ ಅವರು ಕಾಂಗ್ರೆಸ್ಸಿಗೆ ಸೇರಲಿಲ್ಲ. ಅವರನ್ನೆಲ್ಲಾ ಹಿಡಿದು ಸೇರಿಸಲು ನಮ್ಮ ಮುಖಂಡರು ಹಿಂಸಾವಾದಿಗಳಲ್ಲ; ಅವರೆಲ್ಲರೂ ಅಹಿಂಸಾವಾದಿಗಳು!

ಒಂದು ಪ್ರಬಲ ವ್ಯತ್ಯಾಸ.

ಭಾರತದ ಪ್ರತಿ ಒಂದು ಮೂಲೆಯಲ್ಲಿಯೂ ಕಾಂಗ್ರೆಸ್ಸಿನ ಅಧಿಕಾರಿ ವರ್ಗದವರು ಹೆಚ್ಚಾಗಿ ವಕೀಲರು. ಆದರೆ ನಮ್ಮ ನಾಡಿನಲ್ಲಿ ಹಲವು ಯುವಕ ವಕೀಲರಿದ್ದರೂ ಇವರಲ್ಲಿ ಒಬ್ಬರಾದರೂ ಕಾಂಗ್ರೆಸ್ಸಿನಲ್ಲಿಲ್ಲ (ಬಹುಶಃ ಮೆಂಬರರಿರಬಹುದು) ಇದೊಂದು ಪ್ರಬಲ ವ್ಯತ್ಯಾಸವು ಇಲ್ಲಿನ ಕಾಂಗ್ರೆಸ್ಸಿಗೂ ಹೊರಗಿನ ಕಾಂಗ್ರೆಸ್ಸು ಸಂಸ್ಥೆಗಳಿಗೂ ಕಂಡು ಬರುತ್ತದೆ. ಇದು ತೀರಾ ವ್ಯಸನಕರವಾದ ಒಂದು ವಿಷಯ. ರಾಜಕೀಯ ರಂಗದಲ್ಲಿ ನುರಿತವರಾದ ವಕೀಲರ ತಂಡವು ಈ ರೀತಿ ನಾಡಿನ ಸಲ್ವಿಗೆ ದುಡಿಯುತ್ತಿರುವ ಕಾಂಗ್ರೆಸ್ ಸಂಸ್ಥೆಗೆ ಸೇರದೆ ಬೇರೆಯಾಗಿ ನಿಂತಿರುವುದು ದೇಶೀಯರಲ್ಲಿ ಪ್ರಬಲ ನಿರಾಶೆಯನ್ನೂ, ದುಃಖವನ್ನೂ ಉಂಟು ಮಾಡಿದೆ. ನಮ್ಮ ನಾಡಿನಲ್ಲಿ ಕಾಂಗ್ರೆಸಿಗಲ್ಲದೆ ಇತರ ಯಾವ ಸಂಘಕ್ಕೂ ದೇಶೀಯರ ಬೆಂಬಲವಿಲ್ಲೆಂದು ನಮ್ಮ ಲಾಯರ್ ಬಂಧುಗಳು ಅರಿತು ದೇಶದ ಸ್ವಾತಂತ್ರ್ಯಕ್ಕೆ ಹೋರಾಡುವ ಲೋಕಾಭಿರಾಮ ಸಂಸ್ಥೆಗೆ ಅವರು ತಂಡತಂಡವಾಗಿ ಸೇರತಕ್ಕದ್ದು ಅವರ ಆದ್ಯ ಕರ್ತವ್ಯ.

ಮುಸ್ಲಿಮರು.

ಭಾರತದ ಇನ್ನಾವ ಕಡೆಯಲ್ಲಿಯೂ ಇಲ್ಲದ ಒಗ್ಗಟ್ಟು ಮತ್ತು ಪ್ರೇಮವು ಇಲ್ಲಿನ ಹಿಂದೂ ಮುಸ್ಲಿಮರಿಗಿದೆ ಎಂಬುದು ಜಗತ್ತಿಗೇ ತಿಳಿದ ಒಂದು ಹೆಮ್ಮೆಯ ವಿಷಯ. ಕಳೆದ ಶಾಂತಿ ಯುದ್ಧದಲ್ಲಿ ಇಲ್ಲಿನ ಮುಸ್ಲಿಮರು ತಮ್ಮ ಅಳಿಲು ಸೇವೆಯನ್ನು ನಮ್ಮ ಕಾಂಗ್ರೆಸ್ಸಿಗೆ ಅರ್ಪಿಸಿದ್ದಾರೆ ಮತ್ತು ಇನ್ನು ಮುಂದಕ್ಕೂ ಅವರು ಅರ್ಪಿಸಲು ತಯಾರಿರುವರೆಂದು ನಾವು ನಂಬಬಹುದು. ಇತ್ತಲಾಗಿ ಮುಸ್ಲಿಮರು ಮುಸ್ಲಿಂ ಲೀಗಿನ ಒಂದು ಶಾಖೆಯನ್ನು ಇಲ್ಲಿ ತೆರೆದಿರುತ್ತಾರೆ. ಇದು ಇನ್ನೂ ಶೈಶವದ ತೊಟ್ಟಿಲಿನಲ್ಲಿಯೇ ಇದೆ. ಮುಂದಕ್ಕೆ ಇದು ತಾರುಣ್ಯದ ಉಯ್ಯಾಲೆಯನ್ನು ಏರುವಾಗ್ಯೆಲೀಗೂ ಇಲ್ಲಿನ ಕಾಂಗ್ರೆಸ್ಸೂ ಪರಸ್ಪರ ಪ್ರೀತಿ ವಿಶ್ವಾಸದಿಂದ ನಡೆದು ಹಿಂದು ಮುಸ್ಲಿಂ ಜಟಿಲ ಪ್ರಶ್ನೆಯನ್ನು ಬಗೆಹರಿಸಲು ಒಂದು ರಂಗಸ್ಥಳವಾಗಲೆಂಬುದೇ ನಮ್ಮೆಲ್ಲರ ಹಾರೈಕೆ.

ಕ್ರಿಸ್ತಿಯನರು.

ಕ್ರೈಸ್ತರ ಸಂಖ್ಯೆಯು ನಮ್ಮ ನಾಡಿನಲ್ಲಿ ಹೆಚ್ಚಾಗಿದ್ದರೂ ಇವರ್‍ಯಾರೂ ಕಾಂಗ್ರೆಸ್ಸಿಗೆ ಸೇರುರುವುದಿಲ್ಲ. ಇವರಿಗೆ ರಾಜಕೀಯದಲ್ಲಿ ಅಭಿರುಚಿ ಇರುವಂತೆ ಕಾಣುವುದೇ ಇಲ್ಲ. ಆದರೂ ಇವರು ದೇಶೀಯ ಸಂಸ್ಥೆಯನ್ನು ಎದುರಿಸದೆ ಅದಕ್ಕೆ ಬೇಕಾದ ಸಹಾಯವನ್ನು ಯಾವತ್ತೂ ನಡೆಸಿರುತ್ತಾರೆ. ಅಲ್ಲದೆ ಇನ್ನು ಮುಂದಕ್ಕೆ ಕಾಂಗ್ರೆಸ್ಸಿಗೆ ಇವರು ಸಹಾಯ ಮಾಡುವವರಲ್ಲದೆ ಕೇಡು ಬಗೆಯುವವರಲ್ಲ. ನಮ್ಮ ಕ್ರೈಸ್ತ ಸಹೋದರರು ಕ್ರೈಸ್ತ ಮಂತ್ರಿಗಳಾದ ಮೆ ವಾರ್ಕಿಯವರಂತೆ ರಾಷ್ಟ್ರ ಸಭೆಯನ್ನು ಹೊಕ್ಕಿದರೆ ಮಾತ್ರ ಅವರ ಉದ್ಧಾರವಾಗುವುದೇ ಹೊರತು ಬೇರೆ ಇಲ್ಲ. ಆದುದರಿಂದ ಅವರು ಹೆಚ್ಚೆಚ್ಚಾಗಿ ರಾಷ್ಟ್ರ ಸಭೆಯನ್ನು ಸೇರುವರೆಂದೇ ನಮ್ಮ ಆಶೆ.

ರಾಜಕೀಯ ಪಂಗಡಗಳು.

ನಮ್ಮ ದೇಶದಲ್ಲಿ ಇತರ ಭಾಗಗಳಲ್ಲಿರುವಂತೆ ರಾಜಕೀಯ ಪಂಗಡಗಳಿಲ್ಲವೆಂಬುದು ಬಹು ದೊಡ್ಡ ಹೆಮ್ಮೆಯ ವಿಷಯ. ಚುನಾವಣೆಯ ಕಾಲದಲ್ಲಿ ಹಲವು ಅಣಬೆ ಪಕ್ಷಗಳು ಹುಟ್ಟಿದರೂ, ಚುನಾವಣೆಗಳು ತೀರಿದೊಡನೇ ಅವು ಹುಟ್ಟಿದಷ್ಟೇ ಶೀಘ್ರವಾಗಿ ಸಾಯುವವು. ಇಂದು ಕೊಡಗಿನಲ್ಲಿ ಇರುವುದು ಒಂದೇ ಒಂದು ಪಕ್ಷ. ಆ ಪಕ್ಷವು ಕಾಂಗ್ರೆಸ್. ಇದನ್ನು ಎದುರಿಸಲು ಇತರ ಯಾವ ಪಕ್ಷಕ್ಕೂ ಶಕ್ತಿ ಸಾಲದು ಎಂದರೆ ಅತಿಶಯೋಕ್ತಿಯಾಗಲಾರದು.

ವಿದ್ಯಾರ್ಥಿಗಳು.

ನಮ್ಮ ದೇಶದ ವಿದ್ಯಾರ್ಥಿಗಳ ಸಂಪೂರ್ಣ ಬೆಂಬಲವು ನಮ್ಮ ಕಾಂಗ್ರೆಸಿಗಿದೆ. ಕಳೆದ ಚುನಾವಣೆಗಳಲ್ಲಿ ವಿದ್ಯಾರ್ಥಿಗಳು ಕಾಂಗ್ರೆಸಿನ ಪ್ರಬಲ ಜಯಕ್ಕೆ ಮೂಲ ಕಾರಣರು. ಇವರಲ್ಲಿ ದಿನೇ ದಿನೆ ಖಾದಿ ಪ್ರೇಮವು ಹೆಚ್ಚುತ್ತಿರುವ ಶುಭಚಿನ್ಹೆಗಳು ಕಂಡು ಬರುವುದು ಸಂತೋಷದ ವಿಷಯ. ಈ ರೀತಿ ಇಂದಿನ ಮಕ್ಕಳಾದ ಮುಂದಿನ ಜನಾಂಗದ ಬೆಂಬಲವನ್ನು ಪಡೆದ ನಮ್ಮ ಇಂದಿನ ಧುರೀಣರನ್ನು ನಾವು ಎಷ್ಟು ಶ್ಲಾಘಿಸಿದರೂ ಅದು ಸ್ವಲ್ಪವೇ.

ಕಾಂಗ್ರೆಸು ಮಾಡಿದ ಕಾರ್ಯ.

ರಾಜಭಕ್ತರೆಂದು ಕರೆಯಲ್ಪಟ್ಟ ಕೊಡಗರು ಬ್ರಿಟಿಷರನ್ನು ಪರಮಾತ್ಮನು ನಮ್ಮನಾಳಲಿಕ್ಕೆಂದೇ ಸೃಷ್ಟಿಸಿದನೆಂದು ನಂಬಿ ನಮ್ಮ ದಾಸ್ಯವನ್ನೇ ಮರೆತು ಸರಕಾರದ ಬಿರುದು ಬಾವಲಿಗಳಿಗೆ ಬಾಯೊಡ್ಡಿ ಕುಳಿತಿದ್ದವರನ್ನು ನಮ್ಮ ನಾಡಿನ ಕಾಂಗ್ರೆಸು ಸಂಸ್ಥೆಯು ಗಾಢ ನಿದ್ರೆಯಿಂದೆಬ್ಬಿಸಿ ತನ್ನ ಸ್ವಾತಂತ್ರ್ಯವನ್ನು ಹುಡುಕಲು ಅನುಮಾಡಿಕೊಟ್ಟಿತು. ಬ್ರಿಟಿಷ್ ಪರಬಾರದಲ್ಲಿ ಆಳುವ ಮಗುವಿಗೇ ಹಾಲೆಂಬುದನ್ನು ದೇಶೀಯರಿಗೆ ಮನನ ಮಾಡಿತು. ಸ್ವಾತಂತ್ರ್ಯ ದಾಹವನ್ನು ದೇಶವೆಲ್ಲ ಬಿತ್ತಿ ದೇಶೀಯರಲ್ಲಿ ನವಕಳೆಯನ್ನು ತಂದೊಡ್ಡಿ ಸರಕಾರವನ್ನು ದಂಗು ಬಡಿಸಿದ್ದೇ ನಮ್ಮ ನಾಡಿಗೆ ಕಾಂಗ್ರೆಸ್ ಸಂಸ್ಥೆಯು ಮಾಡಿದ ಸೇವೆ.

ನಮ್ಮ ಕರ್ತವ್ಯ.

ಇಂದು ನಮ್ಮ ನಾಡು ನಿರುದ್ಯೋಗದ ಬೇನೆಯಿಂದ ನರಳುತ್ತಿದೆ. ನಗರಗಳಿಂದ ಗ್ರಾಮಗಳಿಗೆ ಬರುವ ಪ್ರತಿಯೊಂದು ಬಸ್ಸಿನಲ್ಲಿಯೂ ನಿಬ್ಬಂದಿ ಯೋತೆಗೆ ಬಲಿಬಿದ್ದಿರುವ ಯುವಕರು ತಂಡ ತಂಡವಾಗಿ ಬರುತ್ತಿರುವ ದೃಶ್ಯವನ್ನು ಕಾಣಬಹುದು. ಆರ್ಥಿಕ ಮುಗ್ಗಟ್ಟನಿಂದ ಮುಂಗಾಣದ ರೈತರ ತಂಡವು ಕಂದಾಯ ಮಾಫಿಗಾಗಿ ರೆವಿನ್ಯೂ ಅಧಿಕಾರಿಗಳನ್ನು ಮುತ್ತುತ್ತಿರುವುದನ್ನು ಪ್ರತಿಯೊಂದು ನಾಡು ಕಚ್ಚೇರಿಗಳಲ್ಲಿಯೂ ನೋಡಬಹುದು. ಸಿಗುತಿದ್ದ ಸ್ವಲ್ಪ ವಿದ್ಯೆಯೂ ನಿಬ್ಬಂದಯೋತೆಗೆ ಬಲಿಬಿದ್ದು ಹಣವಂತರಿಗೇ ವಿದ್ಯೆಕಲಿಯಲು ಅನುವಾಗಿ ನಮ್ಮ ಮಕ್ಕಳು ಮೂಲೆ ಗುಂಪಾಗಿ ಕುಳಿತ್ತಿರುವಂಥಾ ಸಮಯವು ಉದಯಿಸಿದೆ. ರೈತರ ಬೆಳೆ ಫಸಲು ಪೂರಾ ಕಮ್ಮಿಯಾಗಿ ಇರುವದಲ್ಲದೆ ಅದಕ್ಕೂ ಸರಿಯಾದ ಖರೀದಿ ಇಲ್ಲದೆ ಮರ್ಯಾದೆಯಿಂದ ಜೀವನ ನಡೆಸಲು ಹಲವರಿಗೆ ತೀರಾ ಅಸಾಧ್ಯವಾಗಿದೆ. ಇಂಥಾ ವಾತಾವರಣದಲ್ಲಿ ಬಿದ್ದಿರುವ ನಮ್ಮ ನಾಡನ್ನು ಕಾಪಾಡಲು ಯಾವದಾದರೊಂದು ದಾರಿ ಇರುವದಾದರೆ ಅದು ಕಾಂಗ್ರೆಸ್ಸೊಂದೇ. ಈ ರೀತಿ ಕಾಮಧೇನುವಿನಂತಿರುವ ಸಂಸ್ಥೆಯನ್ನು ಬಲಪಡಿಸಿ ಅದರ ಮೂಲಕ ನಾಡಿನ ಮೇಲ್ಮೆಯನ್ನು ಪ್ರತಿಯೊಬ್ಬನೂ ಸಾಧಿಸಬೇಕು. ನಮ್ಮ ನಾಡಿನ ನಾಯಕರಿಗೆ ದೇಶೀಯರ ಬೆಂಬಲವು ದಿನೇ ದಿನೇ ದೊರಕಿ ಕಾಂಗ್ರೆಸ್ಸಿನ ಬಲವು ಯಾವತ್ತು ಹೆಚ್ಚುವುದೋ ಅಂದೇ ನಮ್ಮ ನಾಡಿನ ಕಲ್ಯಾಣ. ಇದನ್ನು ದೇಶೀಯರು ಅರಿತು ನಮ್ಮ ಮುಂದಾಳುಗಳಿಗೆ ಆಗುವಷ್ಟು ಬೆಂಬಲವನ್ನು ದೇಶೀಯರು ಇತ್ತು ನಾಡಿನ ಕಷ್ಟವನ್ನು ಪರಿಹರಿಸಲು ದಾರಿ ಮಾಡಲು ಭಗವಂತನು ಕೊಡಗು ದೇಶದ ನಿವಾಸಿಗಳಿಗೆ ಮನಸ್ಸು ಕೊಡಲೆಂದು ನಾವೆಲ್ಲರೂ ಅವನನ್ನು ಬೇಡುವ!

WANTED.

Agents to sell Sarees and Chadars, Shirtings and Suitings etc. on Rs. 50 to 150 p. m.

Annual Bonus Rs. 500.

No Cash deposit required for Samples.

For terms apply:—

Majestic House,

17 **Ludhiana.**

ಬೊಂಬೇ ಮ್ಯೂಚುವಲ್.

1871 ರಿಂದಲೂ ಪ್ರತಿ ವರ್ಷ ಬಲಗೊಳ್ಳುತ್ತಿದೆ.

ಈ ವರ್ಷ ಇದು ಅಮೋಘವಾದ ಕೆಲಸ ಕಾರ್ಯಗಳನ್ನು ಮಾಡಿದೆ. ಜನಾದರಣೆಯನ್ನೂ, ನಂಬಿಕೆಯನ್ನೂ ಗಳಿಸಿಕೊಂಡಿದೆ. ಕಳೆದ 66 ವರ್ಷಗಳಿಂದಲೂ ಮುಂದುವರಿದು ಈಗಿನ ನವೀನ ತರದ ಸುಧಾರಣೆಗಳನ್ನೊಳಗೊಂಡಿರುತ್ತದೆ.

1937ರಲ್ಲಿ ಮಾಡಿದ ಉದ್ಯೋಗ	ರೂ.	2,53,15,500.
1937ರಲ್ಲಿ ಪೂರ್ತಿಯಾದ ಉದ್ಯೋಗ	ರೂ.	2,02,02,000.

ಎಂಡೋಮೆಂಟ್ ವಿಮಾ ಪತ್ರಗಳಿಗೆ 1000ಕ್ಕೆ ವರ್ಷಕ್ಕೆ 21ರಂತೆಯೂ, ಹೋಲ್ ಲೈಫ್ ವಿಮಾ ಐದಾರುಗಳಿಗೆ 2 ರಂತೆಯೂ ಬೋನಸು ಹಂಚಲಾಗಿದೆ.

ದಿ ಬೊಂಬೇ ಮ್ಯೂಚುವಲ್ ಲೈಫ್ ಅಶ್ಯೂರೆನ್ಸ್ ಸೊಸೈಟಿ ಲಿಮಿಟೆಡ್,

12, ಸೌತ್ ಪರೇಡ್, ಬೆಂಗಳೂರು.

52–23

೪೩ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕೆ ಕಂಪೆನಿ ಇವರ

ಜ್ವರದ ಗುಳಿಗೆ

ಎಲ್ಲಾ ಪ್ರಕಾರದ ಜ್ವರಗಳ ಮೇಲೆ ದಿವ್ಯ ಔಷಧಿ. ಬಾಟ್ಲಿಗೆ 1 ರೂ. ವಿ. ಪಿ. ಖರ್ಚು ಬೇರೆ.

ಜ್ವರಗಡ್ಡೆ (ಅಡ್ಡಗೈ) ಗುಳಿಗೆ.

ಎಷ್ಟು ವರ್ಷದ ಜ್ವರಗಡ್ಡೆ (ಅಡ್ಡಗೈ) ಆದರೂ ಇದರ ಸೇವನೆಯಿಂದ ಪೂರ್ಣ ಗುಣವಾಗಿ ಚೆನ್ನಾಗಿ ಶಕ್ತಿ ಉಂಟಾಗುವದು. ಬಾಟ್ಲಿಗೆ 1 ರೂ.

ಗಣೇಶ. ರಾಮಚಂದ್ರ ಕರ್ಕೆ.
ಮತ್ತು ಕಂಪೆನಿ,

(52-36) ಗಿರಗಾಂವ, ಮುಂಬಯಿ ೪,

ನೋಟೀಸು.

ಕೆಳಗಿನ ಮಹನೀಯರ 'ಕೊಡಗು' ಪತ್ರಿಕೆಯ ಚಂದಾ ಹಣವನ್ನು ವಸೂಲು ಮಾಡಲು ಒಪ್ಪಿಕೊಂಡದ್ದರಿಂದ ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಲಾಗಿದೆ,

ಕೊಡಗಿನ ಎಲ್ಲಾ ಭಾಗಗಳಿಗೆ.

ಮ. ಮುಕ್ಕಾಟಿರ ಜೋಯಪ್ಪನವರು.
ಬಾಚಮ್ಮನ ಕರ್ಣಮ್ಮನವರು.

ಸಬ್ ಏಜೆಂಟರುಗಳು.

ವೀರಾಜಪೇಟೆ—ಮ. ಮಂಡೇಪಂಡ ಸೋಮಯ್ಯನವರು,
ಮ. ಕೆ. ಯಂ. ಸುಬ್ರಾಯನವರು.
ಅಮ್ಮತ್ತಿ—ಸಿದ್ದಾಪುರ— ಮ. ಐನಂಡ ಮೊಡಪ್ಪನವರು.
ಪೊನ್ನಂಪೇಟೆನಾಡು—ಮ. ಪಿ. ಜಿ. ಮುದ್ದಮ್ಮಯ್ಯನವರು.
ಮಡಿಕೇರಿ—ಮ. ಅಜ್ಜಮಾಡ ಮಾದಪ್ಪನವರು ಮತ್ತು ಮ. ಕೆ. ಜಿ. ಮಾದಮ್ಮಯ್ಯನವರು.
ಸುಂಟಿಕೊಪ್ಪ—ಮ. ಅಪ್ಪಚೆಟ್ಟೋಳಂಡ ಮಾಚಯ್ಯನವರು.
ಸೋಮವಾರಪೇಟೆ—ಮ ಕೆ. ಮೊಗಪ್ಪನವರು.
ಶನಿವಾರಸಂತೆ—ಮ. ಎಚ್. ಎಸ್. ಪುಟ್ಟಣ್ಣನವರು.
ನಾಪೋಕ್ಲು—ಮ. ಬೆಳ್ಯಪಂಡ ಯಂ. ಪೂಣಚ್ಚನವರು.
(ನಾಪೋಕ್ಲು ಸ್ಟೋರ್ಸ್)

ಸೂಚನೆ:— ಕ್ರಮವಿಲ್ಲದ ರಶೀತಿ ತೋರಿಸಿಕೊಳ್ಳುವ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ

ಮೇನೇಜರ್,
'ಕೊಡಗು' ಲಿಮಿಟೆಡ್, ಮಡಿಕೇರಿ

ಕೇರಳ ಆಯುರ್ವೇದಿಕ್ ವೈದ್ಯಶಾಲಾ, ವೀರಾಜಪೇಟೆ.

ಈ ವೈದ್ಯ ಶಾಲೆಯಲ್ಲಿ ಆಯುರ್ವೇದ ವಿಧಿ ಪ್ರಕಾರ ಇರುವ ಸಕಲ ಔಷಧಗಳು ತಯಾರಿರುತ್ತವೆ:—ಆಸವಗಳು, ಅರಿಷ್ಟಗಳು, ದ್ರಾವಕಗಳು, ಕಷಾಯಗಳು, ಎಣ್ಣೆಗಳು, ಕೊಯಂಬುಗಳು, ತೈಲಗಳು, ಲೇಹಗಳು, ರಸಾಯನಗಳು, ಚೂರ್ಣಗಳು, ಮಾತ್ರೆಗಳು, ಭಸ್ಮಗಳು ಅಲ್ಲದೆ ಮಲೇರಿಯ ಮತ್ತು ಸ್ಪ್ಲೀನ್‌ಗಳಿಗೆ ಪ್ರತ್ಯೇಕ ಔಷಧಗಳು ಬಿಕರಿಗೆ ಸಿದ್ಧವಾಗಿವೆ.

ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಗಳ ವರೆಗೆ ಔಷಧಾಲಯದಲ್ಲಿ ರೋಗಿಗಳಿಗೆ ಪರೀಕ್ಷಿಸಿ ವ್ಯಾಧಿಗಳಿಗೆ ತಕ್ಕಂತೆ ಚಿಕಿತ್ಸೆ ಮಾಡಲ್ಪಡುವುದು.

ಜಾತಕ, ಪ್ರಶ್ನೆ, ಆರೂಢ ಪ್ರಶ್ನೆ, ದೇವ ಪ್ರಶ್ನೆ ಮೊದಲಾದುವುಗಳನ್ನು ಬರೆದು ಕೊಡುವುದಲ್ಲದೆ, ಹೇಳಿಯೂ ಸಹ ಕೊಡುತ್ತೇನೆ. ಜಾತಕ ಗಣಿತ ಪ್ರಶ್ನೆ, ವೈದ್ಯಶಾಸ್ತ್ರ, ಮೊದಲಾದುವುಗಳನ್ನು, ಫೀಜು ಇಲ್ಲದೆ ಕಲಿಸಲ್ಪಡುತ್ತೆ. ಹೆಚ್ಚಿನ ವಿಷಯಗಳಿಗೆ 1 ಆಣೆ ಸ್ಟಾಂಪು ಕಳುಹಿಸಿದರೆ ಕೆಟಲಾಗು ಕಳುಹಿಸಲ್ಪಡುತ್ತೆ.

ಆಯುರ್ವೇದ ಭೂಷಣ
ಕೆ. ಪಿ. ಕೆ. ಪಣಿಕರ್,
ವೈದ್ಯ & ಅಸ್ಟ್ರಲಜರ್,(ರಿಜಿಸ್ಟರ್ಡ್.)
52-27 ಮೆಡಿಕಲ್ ಪ್ರಾಕ್ಟಿಷನರ್, ವೀರಾಜಪೇಟೆ.

ಮಾರಾಟಕ್ಕೆ ತಯಾರಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳಲ್ಲಿ ಬೇಕಾದ ರಿಜಿಸ್ಟರುಗಳು ಅಂದರೆ—**ಜಮಾ, ಖರ್ಚು,** ಸಾಲ ಮೂಲದ ರಿಜಿಸ್ಟರು, **ಸಾಲದ** ರಿಜಿಸ್ಟರು, **ಮೆಂಬರು** ರಿಜಿಸ್ಟರು, ಶೇರು ರಿಜಿಸ್ಟರು, **ಡಿಪಾಜಿಟ್ಟು** ರಿಜಿಸ್ಟರು, **ಕೋರ್ಟು ಖರ್ಚು, ಆರ್ಬಿಟ್ರೇಶನ್** ರಿಜಿಸ್ಟರುಗಳೂ ಅಲ್ಲದೆ ಸಂಘದ **ಪ್ರತಿ**ಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಸಂಘಗಳ ಕಾನೂನು ಪ್ರಕಾರ ತಯಾರಿಸಲ್ಪಟ್ಟಿರುವ ಪಾಸು ಪುಸ್ತಕಗಳೂ, ನೈಲಾ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಓಚರ್ ಪುಸ್ತಕಗಳೂ ಅಲ್ಲದೆ ಜಮ್ಮಮಂಜೂರಾತಿ, ಕುಟುಂಬದ ಒಪ್ಪಿಗೆ, ಸಾಲದ ಅರ್ಜಿ, ದವಸಭಂಡಾರದ ಖರಾರು, ಸ್ಟೋರ್ ಕೀಪರ್ ಬಾಂಡು ಮತ್ತು ದಾವಾ ಫಾರಮುಗಳೂ, ಅಮಲ್ದಾರಿ ಫಾರಮುಗಳೂ ಸುಲಭ ದರದಲ್ಲಿ ದೊರೆಯುತ್ತವೆ. ಖುದ್ದು ಬರಲಿಕ್ಕೆ ಸಾಧ್ಯವಿಲ್ಲದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು. ಹೆಚ್ಚಿನ ವಿಷಯಗಳಿಗೆ ಕೆಳಗಿನ ಅಡ್ರೆಸಿಗೆ ಬರೆಯಿರಿ.

ಮೇನೇಜರ್,
'ಕೊಡಗು' ಲಿಮಿಟೆಡ್,
ಮಡಿಕೇರಿ.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.
(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.)
(ಸ್ಥಾಪಿತವಾದದ್ದು 1921ರಲ್ಲಿ)

		ರೂ.	ಆ.	ಪೈ.
ಶೇರ್ ಬಂಡವಾಳ	-	50,000	0	0
ವಸೂಲಾದ ಶೇರ್ ಮೊಬಲಗು	-	46510	0	0
ಜಮೂಬಂದ ಠೇವಣಾತಿ	-	23,4205	8	4
ವಸೂಲಾದ ಕ್ಷೇಮನಿಧಿ	-	14,8257	4	0
ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು	-	26,719	0	4
ತ್ರಿಫ್ಟ್ ಡಿಪಾಜಿಟ್ಟು	-	21,994	10	0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡತಕ್ಕದ್ದು.

ಒಂದು ಮತ್ತು ಎರಡು ವರ್ಷಗಳ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 3½ ದರದಲ್ಲಿಯೂ, ಮೂರು ಅಥವ ಹೆಚ್ಚಿನ ಅವಧಿಯ ಠೇವಣಾತಿಗಳಿಗೆ ಶೇಕಡ ಶಾಲಿಯಾನ 4ರ ದರವಲ್ಲಿಯೂ ತಾ. 1-9-1937ರಿಂದ ಬಡ್ಡಿ ದೊರೆಯುತ್ತೆ.

ತಾ. 1-10-1936ರಿಂದ ಬ್ಯಾಂಕಿನಲ್ಲಿ ಕರೆಂಟ್ ಸೇವಿಂಗ್ಸ್ ಬ್ಯಾಂಕ್ ಲೆಕ್ಕವೂ ಮತ್ತು ತ್ರಿಫ್ಟ್ ಡಿಪಾಜಿಟ್ ಲೆಕ್ಕವೂ ತೆರೆಯಲ್ಪಟ್ಟವೆ. ಇದರ ವಿಷಯ ಹೆಚ್ಚಿನ ವಿವರಗಳಿಗೆ ಬ್ಯಾಂಕು ಆಫೀಸಿಗೆ ಬರೆದುಕೊಂಡಲ್ಲು ವಿವರವಾಗಿ ಬರೆದು ತಿಳಿಸಲಾಗುವುದು. ತ್ರಿಫ್ಟ್ ಡಿಪಾಜಿಟ್ಟು ಹೊಂದಿಕೊಳ್ಳುವುದನ್ನು ತಾ. 1-4-1937ರಲ್ಲಿ ನಿಲ್ಲಿಸಿದ್ದನ್ನು ಪುನಹ ತಾ. 1-8-1938ರಿಂದ ಹೊಂದಿಕೊಳ್ಳುವಂತೆ ತೀರ್ಮಾನಿಸಲಾಗಿದೆ.

ವರ್ಷಕ್ಕೊಂದಾವರ್ತಿ ಕೋ-ಆಪರೇಟಿವ್ ಸಂಘಗಳ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟ್:-ಪಂದ್ಯಂಡ ಐ. ಬೆಳ್ಯಪ್ಪನವರು ಎಂ. ಎಲ್. ಸಿ.
ಟ್ರೆಜರರ್:—ರಾವ್ ಬಹದ್ದೂರ್ ಪಿ. ದೇವಯ್ಯವರು.
ಸೆಕ್ರೆಟರಿ:—ಮೆ. ಎಸ್. ಎನ್. ರಾಮುಶೆಟ್ಟಿಯವರು.

ತಾ. 1-6-1939

ಉತ್ತಮ ಪ್ರಚಾರ! ಜ್ಞಾನಭಂಡಾರ!

ವ್ಯಾಪಾರಸ್ಥರೇ

ನಿಮ್ಮ ಮಾಲುಗಳಿಗೆ ಗಿರಾಕಿ ಬೇಕೇ?

ಹಾಗಾದರೆ

ಕೊಡಗು ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿಯೂ ಮತ್ತು ಕರ್ನಾಟಕದ ಪ್ರಾಂತ್ಯಗಳಲ್ಲಿಯೂ ಪ್ರಚಾರವಿರುವ

"ಕೊಡಗು"

ವಾರ ಪತ್ರಿಕೆಯಲ್ಲಿ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ.

ಜಾಹಿರಾತಿನ ದರಗಳು.

ಕಾಲ.	1 ಪುಟಕ್ಕೆ.	1 ಕಲಮಿಗೆ.	½ ಕಲಮಿಗೆ.	¼ ಕಲಮಿಗೆ
1 ವರ್ಷಕ್ಕೆ—	ರೂ. 180.	ರೂ. 55.	ರೂ. 35.	ರೂ. 22.
6 ತಿಂಗಳಿಗೆ—	,, 100.	,, 35.	,, 22.	,, 13.
3 ತಿಂಗಳಿಗೆ—	,, 60.	,, 20.	,, 13.	,, 8.
1 ತಿಂಗಳಿಗೆ—	,, 25.	,, 10.	,, 6.	,, 4.

ನಿರ್ಭಯವಾದ ಟೀಕೆ ಟಿಪ್ಪಣಿಗಳು—ಉದಾತ್ತವಾದ ಲೇಖನಗಳು—ವಿವಿಧ ಸಮಾಚಾರ ಸಂಗ್ರಹಗಳು ಇರುವ

'ಕೊಡಗು' ವಾರ ಪತ್ರಿಕೆಗೆ

ನೀವೇಕೆ ಚಂದಾದಾರರಾಗಬಾರದು?

ಜೀವವಿಮೆಯು.

ಒಬ್ಬನ ವೃದ್ಧಾಪ್ಯದಲ್ಲಿ, ಅಥವಾ ಒಬ್ಬನ ಆಶ್ರಯಿಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಕೇವಲ ನಿಯತಕಾಲಿಕ ಸುಲಭ ದರದ ಪಾವತಿಯಿಂದ ದೃಢಪಡಿಸುವ ಒಂದೇ ದಾರಿ.

ಪ್ರತಿ ವರ್ಷವೂ ಸಾವಿರಾರು ವಿವೇಚನಾಚತುರ ಜನತೆಯು ತಮಗಾಗಿ, ತಮ್ಮ ವೃದ್ಧಾಪ್ಯದ ಇಲ್ಲವೆ ತಮ್ಮ ನಂತರ ತಮ್ಮ ಆಶ್ರಯಿಗಳ ಹಿತಚಿಂತನೆಯಿಂದ ಅನೋಘವಾದ ಮತ್ತು ಜನಾದರಣೀಯ ಜೀವ ವಿಮೆ ಕಂಪೆನಿಯಾದ

(ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು)

"ಓರಿಯಂಟಲ್"

ನಲ್ಲಿ ವಿಮೆ ಇಳಿಸಿ ಆರ್ಥಿಕ ಸ್ವಾತಂತ್ರ್ಯದ ತಳಹದಿಯನ್ನು ಕಟ್ಟುತ್ತಿರುವರು.

ತಡಮಾಡದಿರಿ!

ಇಂದೇ 'ಓರಿಯಂಟಲ್'ನ ಒಂದು ಪೊಲಿಸಿಯನ್ನು ಪಡೆಯಿರಿ.

ಓರಿಯಂಟಲ್

ಸರಕಾರದ ಭದ್ರತೆಯುಳ್ಳ ಜೀವ ವಿಮೆ ಕಂಪೆನಿ.

ಸ್ಥಾಪಿತವಾದ್ದು 1874.] ಹೆಡ್ ಆಫೀಸು—ಬೊಂಬಾಯಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ಅಡ್ರೆಸ್ಸಿಗೆ ಬರೆಯಿರಿ—

ಇನ್ಸ್‌ಪೆಕ್ಟರ್,
ಓರಿಯಂಟಲ್ ಲೈಫ್ ಆಫೀಸ್,
ಮೆಯಿನ್ ರೋಡ್, ಮಡಿಕೇರಿ.

ಅಥವಾ

ಬ್ರ್ಯಾಂಚ್ ಸೆಕ್ರೆಟರಿ,
ಓರಿಯಂಟಲ್ ಲೈಫ್ ಆಫೀಸ್, ಓರಿಯಂಟಲ್ ಬಿಲ್ಡಿಂಗ್,
ಸೌತ್ ಪೆರೇಡ್, ಬೆಂಗಳೂರು.

(82-32)

Printed & Published by P. I. Belliappa, at 'Kodagu' Press Mercara for 'Kodagu' Ltd.